ಶ್ರೀ ವೇದಾಂತದೇಶಿಕ ವಿರಚಿತ

ಯಾದವಾಭ್ಯುದಯ

ಮಹಾಕಾವ್ಯ

ಪ್ರಥಮ ಸಂಪುಟ



ಕನ್ನಡದಲ್ಲಿ ಅರ್ಥ-ವಿವರಣೆ

ಶ್ರೀವತ್ಸ ಕಲ್‌ಬಾಗಲ್



ಶ್ರೀ ವೇದಾಂತದೇಶಿಕರ

ಯಾದವಾಭ್ಯುದಯ

ಮಹಾಕಾವ್ಯ

(ಪ್ರಥಮ ಸಂಪುಟ)

(ಶ್ರೀಕೃಷ್ಣನ ಜನ್ಮದಿಂದ ರುಕ್ಮಿಣೀ ಪರಿಣಯದವರೆಗೆ)

ಲೇಖಕರು ಮತ್ತು ಪ್ರಕಾಶಕರು:

ಶ್ರೀವತ್ಸ ಕಲ್‌ಬಾಗಲ್, ಬಿ.ಇ.,

ನಂ. 1082, 5ನೇ 'ಎ' ಮೈನ್, ಗೋಕುಲ 1ನೇ ಹಂತ,

ಮತ್ತಿಕೆರೆ, ಬೆಂಗಳೂರು–560 054.

ದೂರವಾಣಿ : 2337 3535

YADAVABHYUDAYA - (Maha Kavya) First Volume
Written & Published by Sri Srivatsa Kalbagal,
No. 1082, 5th 'A' Main, Gokula I Stage, Mathikere,
Bangalore - 560 054 Ph : 2337 3535

No. Pages : 500+xii = 512

1st Edition : 2009

ಈ ಪುಸ್ತಕ ಪ್ರಕಟಣೆಗೆ ಧನ ಸಹಾಯ ಮಾಡಿರುವವರು :

1) ಶ್ರೀಮತಿ ಲಿಲ್ಲಿ ನರಸಿಂಹಾಚಾರ್	....	5,000/-
2) ನದೀಪುರ ಮಹಾಲಕ್ಷ್ಮನವರ ಮಕ್ಕಳು ಸುಕನ್ಯಾ ಗೋಪಾಲ್, ಮೋಹನ್ ಮತ್ತು ಮುಕುಂದ	....	10,000/-
3) ಶ್ರೀ ಎಂ. ಆರ್. ವೆಂಕಟಾಚಾರ್	....	7,500/-
4) ಶ್ರೀಮತಿ ಸುಧಾ ರಂಗೈಯ್ಯಂಗಾರ್	....	10,000/-

ಪ್ರಥಮ ಮುದ್ರಣ : 2009

ಬೆಲೆ : ರೂ. 200-00

ಡಿ.ಟಿ.ಪಿ. : **ಡಿ. ಗೋಪಿನಾಥ್**
ಜ್ಞಾನ ವಿಕಾಸ ಕೇಂದ್ರ,
ಗಾಯತ್ರಿನಗರ, ಬೆಂಗಳೂರು- 560 021.

ಮುದ್ರಕರು :
ಶ್ರೀ ಶ್ರೀನಿಧಿ ಪ್ರಿಂಟರ್
ನಂ. 3732, 1ನೇ ಮುಖ್ಯ ರಸ್ತೆ,
ಗಾಯತ್ರಿನಗರ, ಬೆಂಗಳೂರು- 560 021
ದೂರವಾಣಿ: 98447 57752



ಶ್ರೀ ವೇದಾಂತ ದೇಶಿಕರು

ಸಮರ್ಪಣೆ

ತಮಿಳುನಾಡಿನ ಮನ್ನಾರ್‌ಗುಡಿಯಲ್ಲಿ ವಿರಾಜಮಾನನಾಗಿರುವ
ಶ್ರೀ ರಾಜಗೋಪಾಲ ಸ್ವಾಮಿಯ ದಿವ್ಯ ಚರಣಾರವಿಂದಗಳಲ್ಲಿಯೂ
ಹಾಗೂ
ಸ್ವಾಮಿ ವೇದಾಂತ ದೇಶಿಕರ ಪಾದ ಕಮಲಗಳಲ್ಲಿಯೂ
ಈ ಕೃತಿಯನ್ನು ಸಮರ್ಪಿಸಲಾಗಿದೆ.

ಭೂಮಿಕೆ

''ಶ್ರೀ ಯಾದವಾಭ್ಯುದಯ''ವೆಂಬುದು ಶ್ರೀ ವೈಷ್ಣವ ಆಚಾರ್ಯರುಗಳಲ್ಲಿ ಒಬ್ಬರಾದ ಶ್ರೀ ವೇದಾಂತ ದೇಶಿಕರು ರಚಿಸಿರುವ ಮಹಾಕಾವ್ಯ. ಇದು ಭಗವಾನ್ ಶ್ರೀಕೃಷ್ಣನ ಚರಿತ್ರೆ. ಶ್ರೀಕೃಷ್ಣನ ಜನನದಾರಭ್ಯ ಸ್ವಾಮಿಯು ಭೂಲೋಕದಲ್ಲಿ ನಡೆಸಿದ ಅನೇಕ ಲೀಲೆಗಳನ್ನು ಅತ್ಯಂತ ಹೃದಯಂಗಮವಾಗಿ ಕಾವ್ಯಮಯವಾಗಿ ಅದ್ಭುತವಾದ ಶೈಲಿಯಲ್ಲಿ ಆಚಾರ್ಯರು ನಿರೂಪಿಸಿದ್ದಾರೆ. ಕೆಲವು ಕಡೆ ಸರಳವಾದ ಶ್ಲೋಕಗಳಲ್ಲೂ ಮತ್ತೆ ಕೆಲವು ಕಡೆ ಕ್ಲಿಷ್ಟವಾದ ಶ್ಲೋಕಗಳಲ್ಲೂ ಕಾವ್ಯದ ಲಹರಿ ಹರಿದು ಬಂದಿದೆ.

ಶ್ರೀ ಸರಸ್ವತಿ ದೇವಿಯ ಕರ ಕಮಲದಿಂದ ಹೊರಡುವ ಮಹಾ ಸ್ವರಗಳಂತೆ, ಆಚಾರ್ಯರ ವರಾನನದಿಂದ ಅಮೃತ ಧಾರೆಯೋಪಾದಿಯಲ್ಲಿ ಶ್ಲೋಕಗಳು ಹೊರಸೂಸಿವೆ. ವಿವಿಧ ಛಂದಸ್ಸುಗಳಲ್ಲಿ ಶ್ಲೋಕಗಳು ರಚಿತವಾಗಿವೆ. ಅಭಿನವ ಭಾಗವತವೆಂದು ಕರೆಯಲ್ಪಡುವ ಈ ಕಾವ್ಯವನ್ನು ಸುಲಭ, ಮಧ್ಯಮ, ಕಠಿಣವೆಂಬ ಮೂರು ಬಗೆಯ ಕಾವ್ಯ ಶೈಲಿಯೂ ಕರತಲಾಮಲಕವಾಗಿದ್ದ ಆಚಾರ್ಯರು ಬಹುತೇಕ ಭಾಗವನ್ನು ಸುಲಭ ಶೈಲಿಯಲ್ಲೇ ಬರೆದು, ಸಾಮಾನ್ಯ ಸಂಸ್ಕೃತ ಜ್ಞಾನವಿರುವವರೂ ಸಹ ಭಗವಾನ್ ಶ್ರೀಕೃಷ್ಣನ ದಿವ್ಯ ಚರಿತಾಮೃತವನ್ನು ಪಾನ ಮಾಡಲೆಂದು ಈ ಕಾವ್ಯವನ್ನು ರಚಿಸಿದ್ದಾರೆ.

ಈ ಕಾವ್ಯದಲ್ಲಿ ಶ್ರೀ ವೇದಾಂತ ದೇಶಿಕರು ಅನುಷ್ಟುಪ್, ಆರ್ಯಾ, ಚಿತ್ರ, ಚಂದ್ರಲೇಖಾ, ಉಪಜಾತಿ, ಪುಟ, ಮಂದಾಕ್ರಾಂತಾ, ಚಂಪಕಮಾಲಿನೀ, ದ್ರುತವಿಲಂಬಿತ, ಪುಷ್ಪಿತಾಗ್ರ, ಶಾರ್ದೂಲ ವಿಕ್ರೀಡಿತ, ಸ್ರಗ್ಧರಾ ಮೊದಲಾದ ಪ್ರಸಿದ್ಧ ಹಾಗೂ ಸುಂದರವಾದ ವೃತ್ತಗಳಲ್ಲಿ ಮಾಧುರ್ಯದಿಂದ ಕೂಡಿದ ಶ್ಲೋಕಗಳನ್ನು ರಚಿಸಿ, ಸಾಹಿತ್ಯ ರಸಾಸ್ವಾದಕರಾದ ವಿದ್ವಾಂಸರು ತಲೆದೂಗುವಂತೆ ಮಾಡಿದ್ದಾರೆ.

ವ್ಯಾಕರಣ ಬದ್ಧವಾಗಿಯೂ, ಛಂದೋಬದ್ಧವಾಗಿಯೂ ಸಂಸ್ಕೃತದಲ್ಲಿ ಕವನ ಮಾಡುವುದು ಕಷ್ಟಕರವಾದದ್ದು ಅದರಲ್ಲೂ ಚಿತ್ರ ಸರ್ಗದಲ್ಲಿ ಅಳವಡಿಸಿರುವ ಏಕಾಕ್ಷರ, ದ್ವಯಕ್ಷರ, ಏಕಪದ, ದ್ವಿಪದ, ಯಮಕ ಮುಂತಾದ ವಿಶೇಷ ಬಂಧಗಳನ್ನು ಅಳವಡಿಸಿ, ಅರ್ಥವತ್ತಾಗಿಯೂ, ಛಂದೋಬದ್ಧವಾಗಿಯೂ ಕವನವನ್ನು ಮಾಡುವುದು ಕವಿ ಪುಂಗವರಿಗೆ ಮಾತ್ರ ಸಾಧ್ಯ. ಅದನ್ನು ಕವಿಸಿಂಹರಾದ ಸ್ವಾಮಿ ದೇಶಿಕರು ಈ ಕಾವ್ಯದಲ್ಲಿ ಸಾಧಿಸಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿ ಕೆಲವೇ ಕವಿಗಳು ಮಾತ್ರ ಈ ರೀತಿಯ ಕಾವ್ಯ ರಚನೆ ಮಾಡಿದ್ದಾರೆ. ಶ್ರೀ ದೇಶಿಕರನ್ನು ''ಯಮಕಾದಿ ಕವಿತಾ ಸಾರ್ವಭೌಮ''ರೆನ್ನಬಹುದು. ಶ್ರೀ ವೇದಾಂತಾಚಾರ್ಯರನ್ನು ಸರ್ವತಂತ್ರ ಸ್ವತಂತ್ರರೆಂದು ಕರೆಯಲಾಗುತ್ತಿತ್ತು. ಅವರಿಗೆ ತಿಳಿಯದ ವಿಷಯವೇ

ಇರಲಿಲ್ಲ. ನಿಜ ಜೀವನದಲ್ಲಿ ಪರಮ ವೈರಾಗ್ಯಶಾಲಿಗಳಾಗಿದ್ದು ಕಾವ್ಯದಲ್ಲಿ ಅವರು ತೋರ್ಪಡಿಸಿರುವ ಶೃಂಗಾರ ರಸಗಳು ಎಂಥಹವರನ್ನೂ ಅಚ್ಚರಿಗೊಳಿಸುತ್ತವೆ. ಹಾಗೆಯೇ ಜಟ್ಟಿ ಕಾಳಗ, ಅಸ್ತ್ರವಿದ್ಯೆ ಇತ್ಯಾದಿಗಳ ವರ್ಣನೆಯೂ ಅಸಾಧಾರಣವಾಗಿದ್ದು, ಅವರ ಅಪಾರ ವೈದುಷ್ಯದ ದ್ಯೋತಕವಾಗಿದೆ. 19ನೆಯ ಸರ್ಗದಲ್ಲಿ ಪ್ರಾತಃಕಾಲ, ಅರುಣೋದಯದ ನಂತರ ಸೂರ್ಯೋದಯದ ವರ್ಣನೆಯು ಅತ್ಯದ್ಭುತವಾಗಿದ್ದು, 22ನೇಯ ಸರ್ಗದ ದಿಗ್ವಿಜಯ ಯಾತ್ರೆಯಲ್ಲಿ ಭಾರತ ದೇಶದ ಭೂಗೋಳದ ಸಂಪೂರ್ಣ ಪರಿಚಯ ಅವರಿಗಿತ್ತೆಂಬುದನ್ನು ತೋರಿಸುತ್ತದೆ. ಯುದ್ಧನೀತಿ, ರಾಜನೀತಿ, ಪ್ರಕೃತಿಯ ವೈವಿಧ್ಯಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿದ್ದ ಆಚಾರ್ಯರು ತಮ್ಮ ಈ ಮಹಾ ಕಾವ್ಯದಲ್ಲಿ ಅವೆಲ್ಲವನ್ನೂ ಮೇಳೈಸಿ, ಅದ್ಭುತವಾಗಿ ಮೆರೆದಿದ್ದಾರೆ. ಆಚಾರ್ಯರು ತಾವು ಕಾಳಿದಾಸನೇ ಮೊದಲಾದ ಮಹಾಕವಿಗಳಿಗಿಂತ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲವೆಂಬುದನ್ನು ನಿರೂಪಿಸಿದ್ದಾರೆ. ಈ ಕಾವ್ಯದಲ್ಲಿ ಕೆಲವು ಶ್ಲೋಕಗಳನ್ನು ಕಠಿಣ ಶೈಲಿಯಲ್ಲಿ ಬರೆದಿರುವುದು, ತಮ್ಮ ವಿರೋಧಿಗಳಿಗೆ ತಮ್ಮ ಕವಿತಾ ಸಾಮರ್ಥ್ಯವನ್ನು ತೋರಿಸುವುದಕ್ಕಲ್ಲದೆ, ಬೇರಾವ ಉದ್ದೇಶವೂ ಇಲ್ಲ.

ಈ ಮಹಾ ಕಾವ್ಯಕ್ಕೆ ಸುಪ್ರಸಿದ್ಧ ಅದ್ವೈತ ಸಿದ್ಧಾಂತಿಗಳಾಗಿದ್ದ ಶ್ರೀ ಅಪ್ಪಯ್ಯ ದೀಕ್ಷಿತರು ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಅನುಗ್ರಹಿಸಿರುವುದು ಒಂದು ವಿಶೇಷ. ಇದು ಅವರ ನಿರ್ಮತ್ಸರವಾದ ವಿದ್ವತ್ ಪಕ್ಷಪಾತವನ್ನು ತೋರಿಸುತ್ತದೆ. ''ಇತ್ಥಂ ವಿಚಿಂತ್ಯಾಃ ಸರ್ವತ್ರ ಭಾವಾಃ ಸಂತಿ ಪದೇ ಪದೇ ಕವಿತಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ'' ಎಂಬುದು ಇವರ ಉದ್ಗಾರ. (ಶ್ರೀ ಅಪ್ಪಯ್ಯ ದೀಕ್ಷಿತರ ಸಂಕ್ಷಿಪ್ತ ಪರಿಚಯವನ್ನು ಪ್ರತ್ಯೇಕವಾಗಿ ಕೊಡಲಾಗಿದೆ).

ಈ ಕಾವ್ಯದಲ್ಲಿ ಒಟ್ಟು 2641 ಶ್ಲೋಕಗಳಿದ್ದು ಅವುಗಳನ್ನು 24 ಸರ್ಗಗಳಲ್ಲಿ ಅಡಕ ಮಾಡಲಾಗಿದೆ. ಗಾಯತ್ರೀ ಮಂತ್ರದಲ್ಲಿಯೂ ಸಹ 24 ಅಕ್ಷರಗಳಿದ್ದು ಈ ಕಾವ್ಯವೂ ಸಹ ಗಾಯತ್ರೀ ಮಂತ್ರದ ಪ್ರತಿಪಾದನೆ ಎನ್ನಬಹುದು.

ಶ್ರೀಕೃಷ್ಣನು ಯದುವಂಶದಲ್ಲಿ ಜನಿಸಿದವನಾಗಿದ್ದು, ಈ ಕಾವ್ಯವು ಅವನ ಮಹಿಮೆಯನ್ನು ವರ್ಣಿಸುವುದಾದ್ದರಿಂದ ಇದಕ್ಕೆ 'ಯಾದವಾಭ್ಯುದಯ'ವೆಂಬ ಹೆಸರು ಅನ್ವರ್ಥವಾಗಿದೆ. ಕಡೆಯಲ್ಲಿ ಬಹಳ ವಿನಯಪೂರ್ವಕವಾಗಿ ಒಂದು ಸಣ್ಣ ಶ್ಲೋಕದ ಮೂಲಕ ಪರಿಸಮಾಪ್ತಿ ಮಂಗಳವನ್ನಾಚರಿಸಿದ್ದಾರೆ. ''ಗುರುಗಳ ಅನುಗ್ರಹ ಬಲದಿಂದ ಸೌರಭ್ಯಪೂರಿತವಾದ ಲೋಕಕ್ಕೆ ಕ್ಷೇಮಕರವಾದ ಪರಮಾತ್ಮನ ಈ ಪಾವನ ಚರಿತ್ರೆಯನ್ನು ಶ್ರೀ ವೇದಾಂತಾಚಾರ್ಯರು ಭಗವಾನ್ ಶ್ರೀಕೃಷ್ಣ ಸ್ವಾಮಿಯ ಪ್ರೀತ್ಯರ್ಥವಾಗಿ ರಚಿಸಿದ್ದಾರೆ''.

ನಮ್ರ ನಿವೇದನೆ

ಈ ಅದ್ಭುತ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಬೇಕೆಂಬ ಆಸೆ ನನ್ನ ಮನಸ್ಸಿನಲ್ಲಿ ಜನಿಸಿದ್ದು ನನ್ನ ಪೂರ್ವಜನ್ಮದ ಸುಕೃತ ಫಲ. ಇದಕ್ಕೆ ನನಗೆ ಸ್ವಲ್ಪವೂ ಸಾಮರ್ಥ್ಯವಿಲ್ಲದಿದ್ದರೂ ಶ್ರೀಕೃಷ್ಣ ಪರಮಾತ್ಮನ ಹಾಗೂ ಸ್ವಾಮಿ ದೇಶಿಕರಿಗೆ ಸಲ್ಲಿಸುವ ಕೈಂಕರ್ಯವೆಂಬ ಏಕೈಕ ಗುರಿಯಿಂದ ಈ ಸಾಹಸಕ್ಕೆ ಕೈ ಹಾಕಿದ್ದೇನೆ.

ಶ್ರೀ ವೇದಾಂತ ದೇಶಿಕರು ಅತ್ಯಂತ ಪ್ರೌಢ ಶೈಲಿ, ಕ್ಲಿಷ್ಟ ರಚನೆಗೆ ಹೆಸರುವಾಸಿಯಾದವರು. ಅವರ ಸುಲಭವೆಂದೆನಿಸುವ ಶೈಲಿಯೂ ಕಷ್ಟಕರವೇ. ಆದರೂ ಕನ್ನಡದಲ್ಲಿ ಸಮಗ್ರವಾಗಿ ಶ್ರೀ ಯಾದವಾಭ್ಯುದಯ ಮಹಾಕಾವ್ಯದ ಭಾಷಾಂತರವು ಪ್ರಕೃತ ಲಭ್ಯವಿಲ್ಲದುದರಿಂದ ಆಚಾರ್ಯರ ಈ ಕಾವ್ಯ ಸೌರಭವನ್ನು ಕನ್ನಡಿಗರಿಗೆ ಪರಿಚಯಿಸಬೇಕೆಂಬ ಆಸೆಯಿಂದ ಈ ಕಾರ್ಯವನ್ನು ಮಾಡಿದ್ದೇನೆ. ಈ ಬೃಹತ್ ಕೃತಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದ್ದು, ಪ್ರಥಮ ಸಂಪುಟವನ್ನು ಈಗ ಹೊರತರಲಾಗುತ್ತಿದೆ.

ಪ್ರಥಮ ಸಂಪುಟದಲ್ಲಿ 1ರಿಂದ 13ನೇ ಸರ್ಗ ಪರ್ಯಂತ (ಶ್ರೀಕೃಷ್ಣನ ಜನ್ಮದಿಂದ ರುಕ್ಮಿಣೀ ಪರಿಣಯದವರೆಗೆ)ವಿಷಯಗಳನ್ನು ವಿವರಿಸಲಾಗಿದೆ. ಸಂಸ್ಕೃತ ಮೂಲ ಶ್ಲೋಕ, ಕನ್ನಡದಲ್ಲಿ ಶ್ಲೋಕದ ತಾತ್ಪರ್ಯ ಮತ್ತು ಸಂಕ್ಷಿಪ್ತ ವಿವರಣೆಗಳನ್ನು ಶ್ರೀ ಅಪ್ಪಯ್ಯ ದೀಕ್ಷಿತರ ವ್ಯಾಖ್ಯಾನವನ್ನು ಅನುಸರಿಸಿ ಪ್ರತಿ ಶ್ಲೋಕಕ್ಕೂ ನೀಡಲಾಗಿದೆ.

ಕನ್ನಡ ಭಾಷಾಂತರಕ್ಕಾಗಿ ಪ್ರಸಿದ್ಧ ವಿದ್ವಾಂಸರಾಗಿ, ಶ್ರೀ ಅಭಿನವ ದೇಶಿಕರೆಂದು ಮಾನ್ಯ ಮಾಡಲ್ಪಟ್ಟಿದ್ದ ದಿವಂಗತ ಶ್ರೀ ಉತ್ತಮೂರ್ ವೀರರಾಘವಾಚಾರ್ಯರ ತಮಿಳು ಭಾಷಾಂತರದ ಸಹಾಯವನ್ನು ಪಡೆದಿದ್ದೇನೆ. ಅವರಿಗೆ ನಾನು ಚಿರಋಣಿ. ಸಾಧ್ಯವಾದ ಮಟ್ಟಿಗೂ ಶ್ಲೋಕದ ಭಾವಾರ್ಥ ಹೊರ ತರಲು ಪ್ರಯತ್ನಿಸಿದ್ದೇನೆ. ಅನೇಕ ತಪ್ಪುಗಳಿರಬಹುದು. ಸಹೃದಯ ಓದುಗರು ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸಬೇಕೆಂದು ಕೋರುತ್ತೇನೆ. ಸಂದರ್ಭಾನುಸಾರ ಶ್ರೀಮದ್ಭಾಗವತದ ಹಾಗೂ ಶ್ರೀಮನ್ನಾರಾಯಣೀಯದ ಕೆಲವು ಶ್ಲೋಕಗಳನ್ನು ಅಲ್ಲಲ್ಲಿ ಉದಾಹರಿಸಲಾಗಿದೆ.

ಈ ಕೃತಿಗೆ ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಶ್ರೀ ರಾಮಾನುಜ ಸೇವಾ ಟ್ರಸ್ಟ್‌ನ ನಿರ್ದೇಶಕರಾದ, ಜ್ಞಾನಿಗಳಾದ 'ಶ್ರೀ ತಿರು' ಅವರಿಗೆ ನನ್ನ ಕೃತಜ್ಞತಾಪೂರ್ವಕ ನಮಸ್ಕಾರಗಳು. ಈ ಕೃತಿಯ ಪ್ರಕಟಣೆಗೆ ಧನ ಸಹಾಯ ಮಾಡಿದವರೆಲ್ಲರಿಗೂ ಭಗವಂತನ ಕೃಪೆಯಿರಲಿ.

ಎರಡನೆಯ ಸಂಪುಟವನ್ನು ಶೀಘ್ರದಲ್ಲಿಯೇ ಹೊರತರಲಾಗುತ್ತದೆ. ಈ ಕೃತಿ ರಚನೆಯಲ್ಲಿ ಕೆಲವು ಸರ್ಗಗಳ ಸಂಸ್ಕೃತ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಬರೆದುಕೊಟ್ಟು ಶ್ರೀಮತಿ ಶೀಲಾ ಅವರು ಉಪಕರಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

ಪುಸ್ತಕವನ್ನು ಸಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ಶ್ರೀ ಶ್ರೀನಿಧಿ ಪ್ರಿಂಟರ್‌ನ ಶ್ರೀ ಡಿ. ಗೋಪಿನಾಥ್ ಮತ್ತು ಶ್ರೀ ಡಿ. ರವೀಂದ್ರ ನಾಥ್‌ರವರಿಗೆ ನನ್ನ ಕೃತಜ್ಞತೆಗಳು. ಶ್ರೀ ಕೃಷ್ಣನ ಮತ್ತು ಆಚಾರ್ಯರ ಕೃಪೆ ಇವರೆಲ್ಲರ ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ.

ದಿನಾಂಕ 29-4-2009
ವಿರೋಧಿ ನಾಮ ಸಂವತ್ಸರ
ಭಗವದ್ರಾಮಾನುಜಾಚಾರ್ಯರ
ತಿರುನಕ್ಷತ್ರ ಮಹೋತ್ಸವ

ಇತೀ ಸಜ್ಜನ ವಿಧೇಯ
ಶ್ರೀವತ್ಸ ಕಲ್‌ಬಾಗಲ್

ಶ್ರೀಮತೇ ರಾಮಾನುಜಾಯ ನಮಃ ॥

ಮುನ್ನುಡಿ

ಅಧರಂ ಮಧುರಂ ವದನಂ ಮಧುರಂ
ನಯನಂ ಮಧುರಂ ಹಸಿತಂ ಮಧುರಂ
ಹೃದಯಾ ಮಧುರಂ ಗಮನಂ ಮಧುರಂ
ಮಧುರಾಧಿಪತೇ ಅಖಿಲಂ ಮಧುರಂ ॥

ಇಡೀ ಜಗತ್ತಿನ ಎಲ್ಲ ಮಧುರಗಳ ಗಣಿ ನಮ್ಮ ಕೃಷ್ಣ ರುಕ್ಮಿಣೀ ಸತ್ಯಭಾಮಾ ಸಮೇತನಾದ ಕೃಷ್ಣನ ಅದ್ಭುತ ಹಾಗೂ ಅಮರ ಕಾವ್ಯ ಯಾದವಾಭ್ಯುದಯ ಕಾವ್ಯಕ್ಕೆ ವಂದಿಸುತ್ತಾ ಈ ಬರಹ ಪ್ರಾರಂಭಿಸುತ್ತಿದ್ದೇನೆ.

ಸುಮಾರು 5000 ವರ್ಷಗಳ ಹಿಂದೆ ಇದೇ ಪವಿತ್ರ ನೆಲದಲ್ಲಿ ಅವತರಿಸಿದ ಶ್ರೀ ಕೃಷ್ಣ ಸಾಕ್ಷಾತ್ ಭಗವಂತನ ಪೂರ್ಣಾವತಾರ. ಕೃಷ್ಣ ಎಂದರೆ ಆಕರ್ಷಣೆ. ಎಲ್ಲರನ್ನೂ ಯಾವಾಗಲೂ ಆಕರ್ಷಿಸುತ್ತಿರುವ ವಿಶೇಷ ದಿವ್ಯ ರೂಪವೇ ಶ್ರೀಕೃಷ್ಣ.

ಕೃಷ್ಣ- ಈ ದಿವ್ಯನಾಮ ಕಿವಿಗಳಿಗೆ ಬಿದ್ದರೆ ಎಲ್ಲರ ಹೃದಯಗಳಲ್ಲಿ ಪ್ರೇಮದ ಭಾವನೆ ಉಕ್ಕಿ ಹರಿಯುತ್ತದೆ.

ಶ್ರೀ ಕೃಷ್ಣಾವತಾರ ಪರಿಪೂರ್ಣಾವತಾರ. ಶ್ರೀಕೃಷ್ಣ ನಮ್ಮ ನಿಮ್ಮಂತೆ ಬದುಕಿ ಬಾಳಿ ಅವನ ದಿವ್ಯ ಲೀಲೆಗಳಿಂದ ಸದಾ ಪ್ರಸ್ತುತನಾಗುತ್ತಾನೆ. ಕೃಷ್ಣ ಲೀಲೆಗಳು ಅತ್ಯಂತ ಸೋಜಿಗ ಹಾಗೂ ಅದ್ಭುತ. ಶ್ರೀಕೃಷ್ಣ ದೇವೋತ್ತಮ ಪರಮಪುರುಷ. ಸರ್ವಾಕರ್ಷಕ ದಿವ್ಯ ಶಕ್ತಿ ಆತ. ಶ್ರೀಮಂತಿಕೆಯಿಂದ, ಅಧಿಕಾರದಿಂದ, ಕೀರ್ತಿ ಶಿಖರವಾಗಿ, ಸೌಂದರ್ಯದ ಗಣಿಯಾಗಿ, ವಿವೇಕ ತ್ಯಾಗದ ಪ್ರತಿರೂಪವೇ ನಮ್ಮ ಶ್ರೀಕೃಷ್ಣ. ಆದ್ದರಿಂದಲೇ ಆತ ಭಗವಂತ.

ಕಲಿಯುಗದ ಜನರ ಸಾಧನಾ ಸಿದ್ಧಿಗಾಗಿಯೇ ಕೃಷ್ಣಾವತಾರವಾಯಿತು. ಈ ಯುಗದಲ್ಲಿ ಯಾವುದೇ ಸತ್ಕರ್ಮ ಕೃಷ್ಣಾರ್ಪಿತವಾದಾಗಲೇ ಅದು ಪೂರ್ಣವಾಗುವುದು. ಆದ್ದರಿಂದಲೇ ಎಲ್ಲ ಕೆಲಸಗಳ ನಂತರ ಕೃಷ್ಣಾರ್ಪಣಮಸ್ತು ಎನ್ನುವುದು ನಾವು ನಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಲು ಕೃಷ್ಣ ಉಪಾಸನೆಯೇ ಶ್ರೇಷ್ಠಮಾರ್ಗ. ಇಂತಹ ಉಪಾಸನೆಗೆ ಅತ್ಯಂತ ಶ್ರೇಷ್ಠ ಹಾಗೂ ಪವಿತ್ರ ಕೃತಿ 'ಯಾದವಾಭ್ಯುದಯ' ಕನ್ನಡದಲ್ಲಿ ಇದೀಗ ಅವತಾರವಾಗುತ್ತಿದೆ.

ಕೃಷ್ಣ ಕಥೆ ಎಲ್ಲರ ಜೀವನವನ್ನು ಪವಿತ್ರಗೊಳಿಸುತ್ತದೆ. ಕೃಷ್ಣ ಕಥೆಯನ್ನು ಓದುವುದರಿಂದ, ಬರೆಯುವುದರಿಂದ ಕೃಷ್ಣ ನಮಗೆ ಹತ್ತಿರವಾಗುತ್ತಾನೆ. ಕೃಷ್ಣನನ್ನು ಹತ್ತಿರ ತಂದಿರುವ ನಮ್ಮ ಮೆಚ್ಚಿನ ಆಧ್ಯಾತ್ಮಿಕ ಲೇಖಕ ಶ್ರೀವತ್ಸ ಕಲ್‌ಬಾಗಲ್ ಅಭಿನಂದನೀಯರು.

ಭಗವದ್ ರಾಮಾನುಜರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬಹುಮುಖ ವಾಗಿ, ವ್ಯಾಪಕವಾಗಿ ಮತ್ತು ಸಮರ್ಪಕವಾಗಿ ಪ್ರಚಾರಗೊಳಿಸಿದ ಆಚಾರ್ಯರು ಶ್ರೀಮನ್ ನಿಗಮಾಂತ ಮಹಾದೇಶಿಕರು. ಶ್ರೀ ವೆಂಕಟನಾಥರು ದಿವ್ಯ ಕ್ಷೇತ್ರವಾದ ಕಾಂಚೀಪುರದ ತೊಪ್ಪಿಲ್ ಅಗ್ರಹಾರದಲ್ಲಿ ಅವತರಿಸಿ ತಿರುಪತಿಯ ಶ್ರೀನಿವಾಸನ ಘಂಟಾವತಾರವೆಂದು ಪ್ರಸಿದ್ಧಿ ಪಡೆದವರು. ನಾಸ್ತಿಕ ಮತಗಳನ್ನು ತಮ್ಮ ವಿದ್ಯೆ ಮತ್ತು ಪ್ರಭಾವಗಳಿಂದ ನಿರಸನ ಮಾಡಿ, ರಾಮಾನುಜ ಸಿದ್ಧಾಂತವನ್ನು ಘಂಟಾಘೋಷವಾಗಿ ಪ್ರಚಾರಗೊಳಿಸಿದ ಆಚಾರ್ಯ ಶ್ರೇಷ್ಠರು.

ಶ್ರೀ ವೇದಾಂತ ದೇಶಿಕರ ಸಾಹಿತ್ಯ ಪ್ರಪಂಚ ಅತ್ಯಂತ ಶ್ರೇಷ್ಠ. ಇಡೀ ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಆಚಾರ್ಯರ ಸಾಹಿತ್ಯವು ಪ್ರಧಾನ ಸ್ಥಾನವನ್ನು ಅಲಂಕರಿಸಿದೆ. ಹಾಗೆಯೇ ಎಲ್ಲರಿಂದಲೂ ಪರಮ ಆದರಕ್ಕೆ ಪಾತ್ರವಾಗಿದೆ. ಇಂತಹ ಸಾಹಿತ್ಯ ಸಾಗರದಲ್ಲಿ ಯಾದವಾಭ್ಯುದಯ ಒಂದು ನಂದಾದೀಪ. ಇದು ಒಂದು ಮಹಾಕಾವ್ಯ.

ಇದರ 24 ಸರ್ಗಗಳಲ್ಲಿ ಶ್ರೀ ವೇದಾಂತ ದೇಶಿಕರು ಶ್ರೀ ಕೃಷ್ಣಾವತಾರದಿಂದ ಹಿಡಿದು ಭಾರತ ಯುದ್ಧ ಮುಗಿಯುವವರೆಗಿನ ಕಥೆಯನ್ನು ವರ್ಣಿಸಿದ್ದಾರೆ. ಇದು ಕಾಳಿದಾಸನ ರಘುವಂಶದ ಮಾದರಿಯ ಕಾವ್ಯ.

ಇದಕ್ಕೆ ಯದುವಂಶ ಅಥವಾ ಕೃಷ್ಣಾಭ್ಯುದಯ ಎಂಬ ಇತರ ಹೆಸರುಗಳೂ ಉಂಟು. ವಿಜಯನಗರದ ಆಸ್ಥಾನ ಕವಿ ಡಿಂಡಿಮ ತನ್ನ ರಾಮಾಭ್ಯುದಯ ಕಾವ್ಯವನ್ನು ತೋರಿಸಿ ಶ್ರೀ ವೇದಾಂತ ದೇಶಿಕರನ್ನು ಸ್ಪರ್ಧೆಗೆ ಕರೆದನೆಂದೂ, ಅದಕ್ಕೆ ಪ್ರತಿಯಾಗಿ ಶ್ರೀ ದೇಶಿಕರು ಒಂದೇ ರಾತ್ರಿಯಲ್ಲಿ ತಮ್ಮ ಯಾದವಾಭ್ಯುದಯವನ್ನು ರಚಿಸಿ ತೋರಿಸಿದರೆಂಬ ಪ್ರತೀತಿಯಿದೆ.

ಶ್ರೀ ಭಾಗವತದ ಪುನರಾವತಾರ ಯಾದವಾಭ್ಯುದಯವೆಂದರೆ ವಿಶೇಷವಿಲ್ಲ. ವಿವಿಧ ವೃತ್ತಗಳಲ್ಲಿ ರಚಿತವಾದ ಈ ಮಹಾಕಾವ್ಯ ವರ್ಣನಾ ರಮಣೀಯತೆಯಿಂದಲೂ, ಸರಳ ಪದವಿನ್ಯಾಸದಿಂದ ವಿಜೃಂಭಿಸುತ್ತಿದೆ. ಶ್ರೀಮದ್ಭಾಗವತದಂತೆಯೇ ಇಡೀ ಕೃಷ್ಣಕಥೆ ಇಲ್ಲಿದೆ. ಈ ಕಾವ್ಯದ ಪ್ರೌಢಿಮೆಯಿಂದ ಆಕರ್ಷಿತರಾದ ವಿಜಯನಗರದ ಅರಸರು ಇದಕ್ಕೆ ಮಹಾಕಾವ್ಯ ವೆಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಸಂಸ್ಕೃತದ ಈ ಮಹಾಕಾವ್ಯವನ್ನು ಕನ್ನಡಕ್ಕೆ ತಂದ ಕೀರ್ತಿ ಶ್ರೀ ಶ್ರೀವತ್ಸ ಕಲ್‌ಬಾಗಲ್ ಅವರದು. ವೃತ್ತಿಯಲ್ಲಿ ಇಂಜಿನೀಯರರಾಗಿ, ಪ್ರವೃತ್ತಿಯಲ್ಲಿ ಸಾಹಿತ್ಯಾಸಕ್ತರಾಗಿ ಇದುವರೆಗೆ ಹತ್ತಾರು ಕೃತಿಗಳನ್ನು ಕನ್ನಡಕ್ಕೆ ತಂದು ಖ್ಯಾತರಾಗಿದ್ದಾರೆ. ಶ್ರೀಯುತರ ಹಲವು ಕೃತಿಗಳು ಈಗಾಗಲೇ 2-3 ಮುದ್ರಣ ಕಂಡಿರುವುದು, ಇವರ ಸಾರ್ಥಕ ಸಾಹಿತ್ಯ ಸೇವೆಗೆ ಸಾಕ್ಷಿ.

ಯಾದವಾಭ್ಯುದಯ ಮಹಾಕಾವ್ಯದ ಕನ್ನಡಾನುವಾದ ಅತ್ಯಂತ ರಮಣೀಯ ವಾಗಿ ಹರಿದಿದೆ. ಸುಂದರ ಮುದ್ರಣದಿಂದ ಸರಳ ಭಾಷೆಯಿಂದ ಕಂಗೊಳಿಸುತ್ತಿರುವ ಯಾದವಾಭ್ಯುದಯ ಮಹಾಕಾವ್ಯ ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆ. ಇದಕ್ಕಾಗಿ ಲೇಖಕ ಶ್ರೀವತ್ಸ ಕಲ್‌ಬಾಗಲ್ ಅವರನ್ನು ಅಭಿನಂದಿಸುತ್ತಾ ಶ್ರೀಯುತರ ಸಾಹಿತ್ಯ ಸೇವೆ ಹೀಗೆಯೇ ಮುಂದುವರಿಯಲೆಂದು ಆಚಾರ್ಯ ರಾಮಾನುಜರಲ್ಲಿ ಪ್ರಾರ್ಥಿಸುತ್ತೇನೆ.

ನನಗೆ ಈ ಭಾಗ್ಯ ದೊರಕಿದ್ದು ಕೃಷ್ಣಾನುಗ್ರಹವೇ ಸರಿ. ಬಾಲ್ಯದಿಂದ ಕೃಷ್ಣ ಕಥೆಯಿಂದ ಮಿಂದು ಕೃಷ್ಣ ಸೇವೆಯಲ್ಲಿ ನಿರತನಾಗಿರುವ ನನಗೆ ಈ ಮಹಾಕಾವ್ಯಕ್ಕೆ ಮುನ್ನುಡಿ ಬರೆಸಿದ್ದು ನನ್ನ ಆರಾಧ್ಯ ಮೂರ್ತಿ ಕೃಷ್ಣನೇ. ಯಾದವಾಭ್ಯುದಯದಲ್ಲೇ ಹೇಳಿರುವಂತೆ ಭಗವಂತ ಒಬ್ಬನೇ ಕೃಪೆಯಾಗಿರುವ ಬಣ್ಣದಲ್ಲಿ ಚೆನ್ನಾಗಿ ಅದ್ದಲ್ಪಟ್ಟ ಲೀಲೆ ಎಂಬ ಕುಂಚದಿಂದ ಈ ಮೂರೂ ಜಗತ್ತಿನ ಚಿತ್ರವನ್ನು ಚಿತ್ರಿಸಿ ತನ್ನ ಸ್ಥಳದಲ್ಲಿಯೇ ತಾನೇ ಬರೆಯುತ್ತಿದ್ದಾನೆ. ಈ ಕೈಂಕರ್ಯವು ಅವನ ಲೀಲೆಗೆ ಸಾಕ್ಷಿ. ಕೃಷ್ಣಕೃಪೆಯಿಂದ ಜಗತ್ತು ಸದಾ ಸುಂದರವಾಗಿ ಬೆಳಗುತ್ತಾ ಪ್ರತಿಯೊಬ್ಬರ ಹೃದಯ ಕಮಲದಲ್ಲಿ ಆ ಪ್ರಭು ನೆಲೆಸಿ, ಸಕಲ ಸನ್ಮಂಗಳಗಳನ್ನೂ ಉಂಟುಮಾಡಲೆಂದು ಆಶಿಸುತ್ತೇನೆ.

॥ ಕೃಷ್ಣಾರ್ಪಣಮಸ್ತು ॥

ಇತಿ ರಾಮಾನುಜದಾಸ ದಾಸಃ

ತಿರು

ಶ್ರೀಭಾಷ್ಯಕಾರ ತಿರುನಕ್ಷತ್ರ ಮಹೋತ್ಸವ
'ಶ್ರೀ ಚರಣ'
ಶ್ರೀ ವಿರೋಧಿ ಸಂವತ್ಸರ
ಚೈತ್ರ ಕೃಷ್ಣದಶಮಿ
20-04-2009.

ಶ್ರೀ ಅಪ್ಪಯ್ಯ ದೀಕ್ಷಿತರ ಸಂಕ್ಷಿಪ್ತ ಪರಿಚಯ

ಶ್ರೀ ಯಾದವಾಭ್ಯುದಯ ಮಹಾ ಕಾವ್ಯಕ್ಕೆ ಯಾದವಾಭ್ಯುದಯ ವ್ಯಾಖ್ಯಾ ಎಂಬ ಹೆಸರಿನಿಂದ ಶ್ರೀಮಾನ್ ಅಪ್ಪಯ್ಯ ದೀಕ್ಷಿತರು ವಿದ್ವತ್ಪೂರ್ಣವಾದ ಸಂಸ್ಕೃತ ವ್ಯಾಖ್ಯಾನವನ್ನು ಬರೆದಿದ್ದಾರೆ. ಇವರ ಪೂರ್ವಜರು ಶ್ರೀ ವೈಷ್ಣವರಾಗಿದ್ದರೆಂದು ಹೇಳುತ್ತಾರೆ. ಇವರು ರಂಗರಾಜಾಧ್ವರಿ ಎಂಬುವರ ಪುತ್ರರು. ಪ್ರಸಿದ್ಧ ಸಂಸ್ಕೃತ ಕವಿಗಳಾಗಿದ್ದ 'ವಿಶ್ವ ಗುಣಾದರ್ಶ ಚಂಪೂ', 'ಲಕ್ಷ್ಮೀ ಸಹಸ್ರ' ಮುಂತಾದ ಅದ್ಭುತ ಕೃತಿಗಳ ಕರ್ತೃವಾಗಿದ್ದ ಶ್ರೀ ವೆಂಕಟಾಧ್ವರಿಗಳು ಇವರ ವಂಶಸ್ಥರು.

ಶ್ರೀ ಅಪ್ಪಯ್ಯ ದೀಕ್ಷಿತರು ಶೈವರಾಗಿದ್ದು, ಅದ್ವೈತ ಸಿದ್ಧಾಂತದ ಪ್ರತಿಪಾದಕರು. ವೇದ ಶಾಸ್ತ್ರಗಳಲ್ಲಿ ಬಹಳ ಆಸಕ್ತಿ ಇದ್ದು ಎಲ್ಲವನ್ನೂ ಶಾಸ್ತ್ರೋಕ್ತವಾಗಿ ಆಚರಿಸಿದವರು. ಕಾಂಚೀಪುರದಲ್ಲಿ ಅನೇಕ ಯಜ್ಞ-ಯಾಗಾದಿಗಳನ್ನು ನಡೆಸಿ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದವರು. ತಂಜಾವೂರಿನ ರಾಜ ಶ್ರೀ ನೃಸಿಂಹ ಭೂಪಾಲವರ್ಮರು ಅವರು ನಡೆಸಿದ ಒಂದು ಯಾಗ ಸಂದರ್ಭದಲ್ಲಿ ಶ್ರೀ ಅಪ್ಪಯ್ಯ ದೀಕ್ಷಿತರಿಗೆ ಶ್ವೇತಚ್ಛತ್ರ ಸೇವೆಯನ್ನು ತಾವೇ ನಡೆಸಿದ್ದರು ಎಂಬ ಪ್ರತೀತಿಯೂ ಉಂಟು. ತಾವು ಶೈವ ಪಂಥದವರಾಗಿ, ಅದ್ವೈತ ವೇದಾಂತಿಗಳಾಗಿದ್ದ ಶ್ರೀ ಅಪ್ಪಯ್ಯ ದೀಕ್ಷಿತರು ಶ್ರೀ ವೈಷ್ಣವ ಪಂಥದ ಬಗ್ಗೆ ಅಪಾರ ಗೌರವ ಹೊಂದಿದ್ದು ಸರ್ವರ ಗೌರವಾದರಗಳಿಗೆ ಪಾತ್ರರಾಗಿದ್ದರು. ಶೈವ ವೈಷ್ಣವ ಎರಡೂ ಪಂಥ ಗಳಲ್ಲೂ ಉಪಯುಕ್ತವಾದ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ಒಟ್ಟು 105 ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಮುಖ್ಯವಾದುದು 1) ಸಿದ್ಧಾಂತ ಲೇಶ ಸಂಗ್ರಹ - ಅದ್ವೈತ ಸಿದ್ಧಾಂತದ ತಾತ್ವಿಕ ಅಭಿಪ್ರಾಯಗಳಿಗೆ ಸಮರ್ಪಕವಾದ ಉತ್ತಮ ನೀಡುವ ಗ್ರಂಥ. 2) ಶಂಕರರ ಬ್ರಹ್ಮಸೂತ್ರ ಭಾಷ್ಯಕ್ಕೆ ಅಮಲಾನಂದರ ಕಲ್ಪತರು ವ್ಯಾಖ್ಯಾನಕ್ಕೆ ಸರಳ ಸುಂದರವಾದ ಹಾಗೂ ಅರ್ಥ ವೈಭವ ಸಂಪನ್ನವಾದ ಪರಿಮಳ ಎಂಬ ಗ್ರಂಥ. ವೇದಾಂತದ ಮೂರು ಮತಗಳು ಒಂದಕ್ಕೊಂದು ಪೂರಕ ಎಂಬುವುದು ಇವರ ಅಭಿಮತ ವಾಗಿತ್ತು.

ಹರಿಹರರಲ್ಲಿ ಸಾಮರಸ್ಯವನ್ನು ಕಂಡುಕೊಂಡು ಏಕನೂ, ಅದ್ವಿತೀಯನೂ ಆದ ಪರಬ್ರಹ್ಮನ ವಿವಿಧ ಸ್ವರೂಪ ಪ್ರಕಟಣೆಯೇ ಬೇರೆ ಬೇರೆ ರೂಪಗಳೆಂದು ಅಪ್ಪಯ್ಯ ದೀಕ್ಷಿತರು ತಮ್ಮ ಜೀವನದುದ್ದಕ್ಕೂ ನಂಬಿದ್ದವರು.

ಅನೇಕ ಸುಂದರ ಸರಳ ಸ್ತೋತ್ರಗಳನ್ನು ರಚಿಸಿದ್ದಾರೆ. 'ನಿಗ್ರಹಾಷ್ಟಕ', 'ಪಂಚರತ್ನ ಸ್ತುತಿ' 'ಮಾರ್ಗ ಬಂಧು', 'ವರದರಾಜಸ್ತವ', 'ಹರಿಹರಾ ಭೇದ ಸ್ತುತಿ', 'ಆತ್ಮಾರ್ಪಣ ಸ್ತುತಿ' ಇತ್ಯಾದಿಗಳು ಅವುಗಳಲ್ಲಿ ಕೆಲವು.

73 ನೇಯ ವಯಸ್ಸಿನಲ್ಲಿ ಚಿದಂಬರಂನಲ್ಲಿ ಪರಬ್ರಹ್ಮನಲ್ಲಿ ಲೀನವಾದರು. ಪ್ರಸಿದ್ಧ ವಿದ್ವಾಂಸರೂ ಕವಿಗಳೂ ಆಗಿದ್ದ ನೀಲಕಂಠ ದೀಕ್ಷಿತರು ಇವರ ತಮ್ಮನ ಮಗ.

ಶ್ರೀ ವೇದಾಂತ ದೇಶಿಕರ ಕಾವ್ಯ ಪ್ರತಿಭೆಗೆ ಮನ ಸೋತು, ಯಾದವಾಭ್ಯುದಯಕ್ಕೆ ವ್ಯಾಖ್ಯಾನ ರಚಿಸಿ ತಾವು ವಿದ್ವತ್ ಪಕ್ಷಪಾತಿಯೇ ವಿನಃ ಕೇವಲ ಸಂಪ್ರದಾಯಬದ್ಧ ಶರಣರಲ್ಲ ಎಂಬುದನ್ನು ನಿರೂಪಿಸಿದ್ದಾರೆ. ಇದು ಎಲ್ಲರೂ ಅನುಸರಿಸಬೇಕಾದ ವಿಷಯವಾಗಿದೆ. ಯಾದವಾಭ್ಯುದಯ ವ್ಯಾಖ್ಯಾನದಲ್ಲಿ ವೈಜಯಂತಿ, ರತ್ನಮಾಲಾ ಎಂಬ ಅನೇಕ ಅಪರೂಪ ವ್ಯಾಕರಣ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ.

"**ಇತ್ಥಂ ವಿಚಿಂತ್ಯಾಃ ಸರ್ವತ್ರ ಭಾವಾಃ ಸಂತಿ ಪದೇ ಪದೇ ಕವಿತಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ**" ಎಂಬುದು ಇವರ ಉದ್ಗಾರ.

ಶ್ರೀ ಅಪ್ಪಯ್ಯ ದೀಕ್ಷಿತರು ಸನಾತನ ಧರ್ಮ ಪರಂಪರೆಯ ಪ್ರತಿಪಾದಕರಾಗಿ ಇಂದಿಗೂ ನಿತ್ಯ ಸ್ಮರಣೀಯರಾಗಿರುತ್ತಾರೆ.

(ಸಂಗ್ರಹ – ಧರ್ಮ ಭಾರತಿ – ಮಾರ್ಚ್ 2009 ರ ಸಂಚಿಕೆ).

ಪರಿವಿಡಿ

ಪ್ರಥಮ ಸಂಪುಟದಲ್ಲಿ 1ರಿಂದ 13ನೇ ಸರ್ಗದವರೆಗೆ ವಿವರಿಸಲಾಗಿದೆ.

ಶ್ರೀಕೃಷ್ಣಾಷ್ಟಕಮ್

ವಸುದೇವಸುತಂ ದೇವಂ ಕಂಸ ಚಾಣೂರ ಮರ್ದನಂ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥೧॥

ವಸುದೇವನ ಮಗನಾದ ದೇವನನ್ನು, ಕಂಸಚಾಣೂರರನ್ನು ಮರ್ದನ ಮಾಡಿದವನನ್ನು, ದೇವಕಿಗೆ ಪರಮಾನಂದ ಉಂಟು ಮಾಡಿದವನನ್ನು - ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಅತಸೀ ಪುಷ್ಪ ಸಂಕಾಶಂ ಹಾರನೂಪುರ ಶೋಭಿತಂ ।
ರತ್ನ - ಕಂಕಣ ಕೇಯೂರಂ ಕೃಷ್ಣಂ ವಂದೇ ಜಗದ್ಗುರುಂ ॥೨॥

ಕರಿಯಗಸೆಯ ಹೂವಿನ ಕಾಂತಿಯುಳ್ಳವನನ್ನು, ಕೊರಳ ಹಾರದಿಂದಲೂ ಕಾಲು ಗೆಜ್ಜೆಗಳಿಂದಲೂ ಕಂಗೊಳಿಸುವವನನ್ನು, ರತ್ನದ ಕೈ ಬಳೆಗಳು ಭುಜ ಕೀರ್ತಿಗಳು ಉಳ್ಳವನನ್ನು - ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಕುಟಿಲಾಲಕಸಂಯುಕ್ತಂ ಪೂರ್ಣಚಂದ್ರ-ನಿಭಾನನಂ ।
ವಿಲಸತ್ ಕುಂಡಲಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ ॥೩॥

ಗುಂಗುರು ಗುಂಗುರಾದ ಮುಂಗುರುಳುಗಳಿಂದ ಕೂಡಿದವನನ್ನು, ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳವನನ್ನು, ಹೊಳೆಯುವ ಕಿವಿಯೊಡವೆಗಳನ್ನು ಧರಿಸಿದವನನ್ನು - ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಮಂದಾರಗಂಧಸಂಯುಕ್ತಂ ಚಾರುಹಾಸಂ ಚತುರ್ಭುಜಂ ।
ಬರ್ಹಿಪಿಂಛಾವಚೂಡಾಂಗಂ ಕೃಷ್ಣಂ ವಂದೇ ಜಗದ್ಗುರುಂ ॥೪॥

ಮಂದಾರಪುಷ್ಪದ ಗಂಧದಿಂದ ಕೂಡಿದವನನ್ನು ಮನೋಹರವಾದ ನಗುವುಳ್ಳವನನ್ನು, ನಾಲ್ಕು ಭುಜಗಳು ಪಡೆದವನನ್ನು, ತಲೆಯ ಕೂದಲಿನಲ್ಲಿ ನವಿಲುಗರಿ ಸಿಕ್ಕಿಸಿದವನನ್ನು - ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಉತ್ಫುಲ್ಲಪದ್ಮಪತ್ರಾಕ್ಷಂ ನೀಲಜೀಮೂತಸನ್ನಿಭಂ ।
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಂ ॥೫॥

ಚೆನ್ನಾಗಿ ಅರಳಿದ ಪದ್ಮದ ದಳದಂತೆ ಕಣ್ಣುಗಳುಳ್ಳವನನ್ನು, ನೀಲಿಯ ಮೇಘಕ್ಕೆ ಸಮಾನವಾದ ಮೈಯುಳ್ಳವನನ್ನು, ಯಾದವರ ಕುಲಕ್ಕೆ ತಲೆಯೊಡವೆಯಾದವನನ್ನು - ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ರುಕ್ಮಿಣೀಕೇಳಿ ಸಂಯುಕ್ತಂ ಪೀತಾಂಬರ ಸುಶೋಭಿತಂ ।
ಅವಾಪ್ತ ತುಲಸೀಗಂಧಂ ಕೃಷ್ಣಂ ವಂದೇ ಜಗದ್ಗುರುಂ ॥೬॥

ರುಕ್ಮಿಣಿಯೊಡನೆ ಕೂಡಿ ಆಡುತ್ತಿರುವವನನ್ನು, ಪೀತಾಂಬರದಿಂದ ಕಂಗೊಳಿಸುವವನನ್ನು ತುಲಸಿಯ ಗಂಧವನ್ನು ಹೊಂದಿದವನನ್ನು – ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಗೋಪಿಕಾನಾಂ ಕುಚದ್ವಂದ್ವ ಕುಂಕುಮಾಂಕಿತ ವಕ್ಷಸಂ।
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಂ ॥೭॥

ಗೋಪಿಕೆಯರ ಕುಚದ್ವಂದ್ವಗಳ ಕುಂಕುಮದಿಂದ ಅಲಂಕರಿಸಲ್ಪಟ್ಟ ವಕ್ಷಃಸ್ಥಲವುಳ್ಳವನನ್ನು ಲಕ್ಷ್ಮಿಗೆ (ತನ್ನ ವಕ್ಷಃಸ್ಥಲವೇ) ಮನೆಯದಾವನನ್ನು, ಮಹಾಧನುರ್ಧರನನ್ನು – ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಂ।
ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ ॥೮॥

ಶ್ರೀವತ್ಸದ ಗುರುತು ಉಳ್ಳವನನ್ನು ವಿಶಾಲವಾದ ವಕ್ಷವುಳ್ಳವನನ್ನು, ವನಮಾಲೆಯಿಂದ ವಿರಾಜಿತನಾದವನನ್ನು, ಶಂಖಚಕ್ರಗಳನ್ನು ಧರಿಸಿದವನನ್ನು – ಜಗದ್ಗುರು ವಾದ ಕೃಷ್ಣನನ್ನು ವಂದಿಸುತ್ತೇನೆ.

ಕೃಷ್ಣಾಷ್ಟಕಮಿದಂ ಪುಣ್ಯಂ ಪ್ರಾತರುತ್ಥಾಯ ಯಃ ಪಠೇತ್।
ಕೋಟಿ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥ ॥೯॥

ಶ್ರೀಕೃಷ್ಣಾಷ್ಟಕಂ ಸಮಾಪ್ತಮ್

ನ ವಿದ್ಯಾ ಯೇಷಾಂ ಶ್ರೀರ್ನ ಶರಣಮಪೀಷನ್ನ ಚ ಗುಣಾಃ
ಪರಿತ್ಯಕ್ತಾ ಲೋಕೈರಪಿ ವೃಜಿನಯುಕ್ತಾಃ ಶ್ರುತಿಜಡಾಃ।
ಶರಣ್ಯಂ ಯಂ ತೇಽಪಿ ಪ್ರಸೃತಗುಣಮಾಶ್ರಿತ್ಯ ಸುಜನಾ
ವಿಮುಕ್ತಾಸ್ತಂ ವಂದೇ ಯದುಪತಿಮಹಂ ಕೃಷ್ಣಮಮಲಮ್ ॥

ಯಾರ ಬಳಿಯಲ್ಲಿ ವಿದ್ಯೆಯಿಲ್ಲವೋ, ಧನವಿಲ್ಲವೋ, ಯಾವುದೇ ಆಸರೆ ಇಲ್ಲವೋ, ಯಾರಲ್ಲಿ ಯಾವುದೇ ಗುಣಗಳಿಲ್ಲವೋ, ವೇದ ಶಾಸ್ತ್ರಗಳ ಜ್ಞಾನವಿಲ್ಲವೋ ; ಯಾರನ್ನು ಜಗತ್ತಿನ ಜನರು ಪಾಪಿಯೆಂದು ತಿಳಿದು ತ್ಯಾಗ ಮಾಡಿದ್ದಾರೋ, ಅಂತಹ ಮನುಷ್ಯನೂ ಕೂಡ ಯಾವ ಶರಣಾಗತಪಾಲಕ ಪ್ರಭುವಿಗೆ ಶರಣಾಗಿ ಸಂತನಾಗುತ್ತಾನೋ ಮುಕ್ತನಾಗುತ್ತಾನೋ ಆ ವಿಶ್ವವಿಖ್ಯಾತ ಗುಣವುಳ್ಳ ಅಮಲಾತ್ಮಾ ಯದುನಾಥ ಭಗವಾನ್ ಶ್ರೀಕೃಷ್ಣನಿಗೆ ನಾನು ನಮಸ್ಕಾರ ಮಾಡುತ್ತೇನೆ.

ಪ್ರಥಮ ಸರ್ಗ - ೧

ದೇವಕೀ ಗರ್ಭ ಪ್ರವೇಶ



ಈ ಪ್ರಥಮ ಸರ್ಗದಲ್ಲಿ 100 ಶ್ಲೋಕಗಳಿವೆ. ಇದರಲ್ಲಿ ಇಂದ್ರಾದಿ ದೇವತೆಗಳು. ಭೂಭಾರ ಹರಣಾರ್ಥವಾಗಿ (ಕಂಸನೇ ಮೊದಲಾದ ದುಷ್ಟಕ್ಷತ್ರಿಯರನ್ನು ನಿಗ್ರಹಿಸಲು) ಚತುರ್ಮುಖ ಬ್ರಹ್ಮನಲ್ಲಿ ಭೂದೇವಿಯೊಡಗೂಡಿ ಪ್ರಾರ್ಥನೆ ಮಾಡುವುದು. ನಂತರ ಚತುರ್ಮುಖ ಬ್ರಹ್ಮನ ಸಮೇತ ಎಲ್ಲರೂ ಕ್ಷೀರ ಸಮುದ್ರಕ್ಕೆ ತೆರಳಿ ಅಲ್ಲಿ ಕ್ಷೀರಾಬ್ಧಿಶಾಯಿ ಯಾದ ನಾರಾಯಣನಲ್ಲಿ ಮೊರೆಯಿಡುವುದು. ಅವರ ಪ್ರಾರ್ಥನೆ, ದೇವತೆಗಳಿಗೆ ಭಗವಂತನ ಅಭಯ ನೀಡಿಕೆ. ಭೂಭಾರವಿಳಿಸಲು ಶ್ರೀಕೃಷ್ಣಾವತಾರ ಮಾಡಲು ನಿರ್ಧಾರ. ದೇವಕಿ-ವಸುದೇವರನ್ನು ಮಾತಾಪಿತೃಗಳನ್ನಾಗಿ ಆರಿಸಿಕೊಂಡು, ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸುವುದೇ ಮುಂತಾದ ಪ್ರಸಂಗಗಳ ಕಥಾಭಾಗವಿದೆ.

ಪ್ರಾರಂಭದಲ್ಲಿ ವಸುದೇವನವರೆಗಿನ ಚಂದ್ರವಂಶದ ವರ್ಣನೆಯಿದೆ. ವಸುದೇವನ ಗುಣಗಳು ಇತ್ಯಾದಿಗಳೂ ಸಹ ವಿವರಿಸಲ್ಪಟ್ಟಿವೆ. ಶ್ಲೋಕಗಳ ವಿಷಯಾನುಕ್ರಮಣಿಕೆ ಈ ಕೆಳಕಂಡಂತಿದೆ.

ಶ್ಲೋಕ 1 – 8	ಕಾವ್ಯಾರಂಭ ಉಪೋದ್ಘಾತ.
ಶ್ಲೋಕ 9 – 36	ಯದುವಂಶ ರಾಜರ ರಾಜ್ಯ ವರ್ಣನೆ
ಶ್ಲೋಕ 37–41	ದೇವತೆಗಳಲ್ಲಿ ಭೂದೇವಿಯ ಪ್ರಾರ್ಥನೆ
ಶ್ಲೋಕ 42–64	ದೇವತೆಗಳು ಮಾಡಿದ ಕ್ಷೀರ ಸಾಗರ ಶಯನನ ಸ್ತುತಿ.
ಶ್ಲೋಕ 65–75	ಭಗವಂತನ ದರ್ಶನ
ಶ್ಲೋಕ 76–90	ಭಗವಂತನಲ್ಲಿ ವಿಜ್ಞಾಪನೆ
ಶ್ಲೋಕ 90–100	ಭಗವಂತನ ಅಭಯ ಪ್ರದಾನ ಮತ್ತು ದೇವಕಿ ಗರ್ಭ ಪ್ರವೇಶ.

|| ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ||

ಪ್ರಥಮಃ ಸರ್ಗಃ - ೧

ದೇವಕೀ ಗರ್ಭ ಪ್ರವೇಶ

ವಂದೇ ವೃಂದಾವನ ಚರಂ ವಲ್ಲವೀ ಜನವಲ್ಲಭಂ ।
ಜಯಂತೀ ಸಂಭವಂ ಧಾಮ ವೈಜಯಂತೀ ವಿಭೂಷಣಂ ॥ ॥೧॥

ಬೃಂದಾವನದಲ್ಲಿ ಸಂಚಾರ ಮಾಡುವ, ಜಯಂತಿಯ ದಿನದಂದು ತೋರಿದ, ಗೋಪಾಲಕರಿಗೆಲ್ಲಾ ಪ್ರಿಯನಾಗಿದ್ದ, 'ವೈಜಯಂತೀ' ಎಂಬ ವನಮಾಲೆಯನ್ನು ಧರಿಸಿರುವ ಪರಂಜ್ಯೋತಿಯನ್ನು ನಮಸ್ಕರಿಸುತ್ತೇನೆ.

ಆಚಾರ್ಯರ ಪ್ರಸಿದ್ಧ ಸ್ತೋತ್ರಗಳಲ್ಲಿ ಒಂದಾದ, ಅವರ ಕವಿತಾ ಸಾಮರ್ಥ್ಯಕ್ಕೆ ಹೆಸರಾದ 'ಗೋಪಾಲ ವಿಂಶತಿ'ಯ ಸ್ತೋತ್ರವನ್ನೂ ಸಹ ಇದೇ ಶ್ಲೋಕದಿಂದ ಆರಂಭಿಸಿದ್ದಾರೆ.

'ವಂದೇ' ಎಂಬುದು ಅಂಜಲೀ ಸೂಚಕ. ಪ್ರಾರಂಭದಲ್ಲಿಯೇ ಅಂಜಲಿ ಮಾಡಿ ಶರಣಾಗತಿಯನ್ನು ಮಾಡಿದ್ದಾರೆ. ಬೃಂದಾವನ ಚರಂ ಎಂಬುದರಿಂದ ಶ್ರೀಕೃಷ್ಣನ ಚರಿತ್ರೆಯಲ್ಲಿ ಅವನ ಬಾಲಲೀಲೆಗಳು ಅತ್ಯಂತ ಅಮೋಘವಾಗಿದ್ದು ಅವುಗಳ ಸ್ಮರಣೆಯೇ ಅತ್ಯಂತ ಹರ್ಷದಾಯಕವಾದುದು ಎಂಬುದನ್ನು ಸೂಚಿಸಿದ್ದಾರೆ.

ಶ್ರೀಕೃಷ್ಣನ ಅವತಾರ ದಿನವನ್ನು ''ಜಯಂತೀ'' ಎಂದು ಕರೆಯುತ್ತಾರೆ. ಶ್ರೀಕೃಷ್ಣನು ಹುಟ್ಟಿದ್ದು ಶ್ರಾವಣ ಮಾಸದ ಅಷ್ಟಮೀ ತಿಥಿ ಮತ್ತು ಆ ದಿನದ ನಕ್ಷತ್ರ ರೋಹಿಣಿ. ಆದ್ದರಿಂದ ಅಷ್ಟಮೀ ತಿಥಿ ಮತ್ತು ರೋಹಿಣಿ. ನಕ್ಷತ್ರ ಸೇರಿದ ದಿನವನ್ನು ''ಜಯಂತೀ'' ಎನ್ನಲಾಗುತ್ತಿದೆ.

''ವಲ್ಲವೀ ಜನ ವಲ್ಲಭಂ'' ಎಂಬ ಪದದಿಂದ ಶ್ರೀಕೃಷ್ಣನ ವಾತ್ಸಲ್ಯ, ಸೌಶೀಲ್ಯ, ಸೌಲಭ್ಯ, ಸ್ವಾಮಿತ್ವ ಎಂಬ ನಾಲ್ಕು ಗುಣಗಳನ್ನು ಹೇಳಿದೆ. ಕರುಗಳ ಮೇಲಿನ ಪ್ರೀತಿಯಲ್ಲಿ ವಾತ್ಸಲ್ಯ, ಹಸುಗಳ ಮಂದೆಯ ಹಿಂದೆ ಹೋಗಿ ಸೌಶೀಲ್ಯ, ಗೋಪಿಯರ ನಡುವಿನ ಒಡನಾಟದಿಂದ ಸೌಲಭ್ಯ ಮತ್ತು ಎಲ್ಲರನ್ನೂ ವಶೀಕರಿಸುವ ಸ್ವಭಾವದಿಂದ ಸ್ವಾಮಿತ್ವ - ಹೀಗೆ ಕಲ್ಯಾಣಗುಣ ನಿಧಿಯಾದ ಸ್ವಾಮಿಯ ಗುಣಗಳನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ಶ್ರೀಕೃಷ್ಣನ ಸೌಂದರ್ಯ ಮನಮೋಹಕವಾದದ್ದು.

ತ್ರಿಭುವನ ಸುಂದರ ಆ ಗೋಪಾಲ. ಅಂತಹ ಸಹಜ ಸುಂದರನಾದ ಯದುಪತಿಯು ಮತ್ತೊಂದು ಸುಂದರವಾದ ವನಮಾಲೆಯನ್ನು ಧರಿಸಿದರೆ, ಅವನ ಸೌಂದರ್ಯ ವರ್ಣಿಸಲು ಸಾಧ್ಯವೇ? ಅವನು ಜಗತ್ತಿಗೆ ಜ್ಯೋತಿ ಸ್ವರೂಪನಾದವನು. ಉಪನಿಷತ್ತಿನಲ್ಲಿ ಪರಬ್ರಹ್ಮನನ್ನು 'ಪರಂಜ್ಯೋತಿ' ಎಂದು ಕರೆಯಲಾಗಿದೆ. ಆ ಪರಂಜ್ಯೋತಿಯೇ ಕೃಷ್ಣನಾಗಿ ಗೋಕುಲದಲ್ಲಿ ಅವತರಿಸಿದ್ದಾನೆ.

ಯದೇಕೈಕ ಗುಣಪ್ರಾಂತೇ ಶ್ರಾಂತಾ ನಿಗಮವಂದಿನಃ ।
ಯಥಾವತ್ ವರ್ಣನೆ ತಸ್ಯ ಕಿಮುತಾನ್ಯೈ ಮಿತಂ ಪಚಾಃ ॥ ॥೧॥

ವೇದವೇದಾಂಗಗಳೆಲ್ಲಾ, ಸ್ತುತಿಪಾಠಕರೆಲ್ಲಾ ಆ ಭಗವಂತನ ಯಾವ ಒಂದು ಗುಣವನ್ನೂ ಪೂರ್ಣವಾಗಿ ವರ್ಣಿಸಲು ಸಾಧ್ಯವಾಗದೇ ಹಿಂತಿರುಗಿರುವಾಗ, ಕ್ಷುದ್ರರಾದಂತಹ ಸಾಮಾನ್ಯ ಜನರು, ಅವನನ್ನು ಕೊಂಡಾಡಲು ಹೇಗೆ ಸಾಧ್ಯ?

ತೈತ್ತಿರಿಯೋಪನಿಷತ್ತಿನಲ್ಲಿ ''ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ'' ಎಂದು ಪರಬ್ರಹ್ಮನ ಬಗ್ಗೆ ಹೇಳುವಾಗ ವೇದವೂ ಹಿಂತಿರುಗುತ್ತದೆ. ಅಂದರೆ ವೇದಕ್ಕೂ ಭಗವಂತನನ್ನು ಕುರಿತು ಪೂರ್ಣವಾಗಿ ಹೇಳಲು ಸಾಧ್ಯವಿಲ್ಲ. ಮತ್ತು ಮನಸ್ಸಿನಿಂದಲೂ ಸಹ ಭಗವಂತನನ್ನು ಪೂರ್ತಿಯಾಗಿ ಅರಿಯಲು ಸಾಧ್ಯವಿಲ್ಲ ಎಂದು ಹೇಳಿದೆ. ಹೀಗಿರುವಾಗ ಸಾಧಾರಣ ಮನುಷ್ಯರು ಅವನ ಗುಣಗಳನ್ನು ಚೆನ್ನಾಗಿ ಕೊಂಡಾಡಲು ಸಾಧ್ಯವೇ? ತಮ್ಮಂತಹವರಿಗೆ ಅದು ಖಂಡಿತಾ ಸಾಧ್ಯವಿಲ್ಲವೆಂದು ತಮ್ಮ ವಿನಯವಾದ ನೈಚ್ಯಾನುಸಂಧಾನವನ್ನು ಪ್ರಕಟಪಡಿಸಿದ್ದಾರೆ.

ಕಾಳಿದಾಸ ಮಹಾಕವಿಯು ರಘುವಂಶ ಕಾವ್ಯದ ಪ್ರಾರಂಭದಲ್ಲಿ **''ಕ್ವಸೂರ್ಯ ಪ್ರಭವೋ ವಂಶಃ ಕ್ವಚಾಲ್ಪ ವಿಷಯಮತಿಃ''** ಎಂದು ಅತ್ಯಂತ ಪ್ರಭಾವಶಾಲಿಯಾದ ಶ್ರೀರಾಮನ ವಂಶ (ಸೂರ್ಯವಂಶ)ವೆಲ್ಲಿ ? ನನ್ನ ಅಲ್ಪಮತಿ ಎಲ್ಲಿ?'' ಎಂದು ಪ್ರಶ್ನಿಸಿಕೊಂಡು, ಶ್ರೀರಾಮನ ಚರಿತ್ರೆಯನ್ನು ತಾನು ಬರೆಯುವುದು ನಗೆಪಾಟಲಿನ ಸಂಗತಿಯೆಂದು ಹೇಳಿಕೊಂಡಿದ್ದಾನೆ. ಅದೇ ರೀತಿ ಸ್ವಾಮಿ ದೇಶಿಕರೂ ಸಹ, ವೇದ ವೇದಾಂಗಗಳು, ಸ್ತುತಿಪಾಠಕರು ಇತ್ಯಾದಿಗಳಿಗೆಲ್ಲಾ ಭಗವಂತನನ್ನು ಕೊಂಡಾಡುವುದು ಕಷ್ಟಸಾಧ್ಯವಾಗಿರುವಾಗ ಅಲ್ಪಮತಿಗಳಾದ ತಮಗೆ ಸಾಧ್ಯವೇ? ಆದರೂ ಪ್ರಯತ್ನಪಡುತ್ತೇನೆ ಎಂಬರ್ಥವನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ.

ಶಕ್ಯಾ ಶೌರಿ ಕಥಾ ಸ್ವಾದಃ ಸ್ಥಾನೇ ಮಂದಧಿಯಾಮಪಿ ।
ಅಮೃತಂ ಯದಿ ಲಭ್ಯೇತ ಕಿಂ ನ ಗೃಹ್ಯೇತ ಮಾನವೈಃ ॥ ॥೨॥

ಮಂದಮತಿಗಳೂ ಸಹ ಶ್ರೀಕೃಷ್ಣನ ಕಥೆಯ ರಸಾಸ್ವಾದವನ್ನು ಮಾಡಲು ಅರ್ಹರಾಗಿರುತ್ತಾರೆ. (ಭಗವಂತನ ದಯೆಯು ಹಾಗಿದೆ). ಸಾಮಾನ್ಯ ಮನುಷ್ಯರ್‍ಯಾರೂ ಸಹ ಅಮೃತವು ಸಿಕ್ಕಿದರೆ ಅದನ್ನು ಆಸ್ವಾದಿಸದೆ ಬಿಡುವುದಿಲ್ಲ. ಶ್ರೀಕೃಷ್ಣನ ಚರಿತ್ರೆಯೆಂಬುದು ಎಲ್ಲರನ್ನೂ ಆಕರ್ಷಿಸುತ್ತದೆ.

''ಶ್ರೀಕೃಷ್ಣ'' ಎಂಬ ಶಬ್ದಕ್ಕೆ ಎಲ್ಲರನ್ನೂ ಆಕರ್ಷಿಸುವವನು ಎಂದರ್ಥ. ಹಾಗಿರುವಲ್ಲಿ ಅವನ ಲೀಲೆಗಳನ್ನೊಳಗೊಂಡ ಕಥಾಮೃತವನ್ನು ಎಲ್ಲರೂ ಆಸ್ವಾದಿಸಲು ಬಯಸುತ್ತಾರೆ. ಮಂದಮತಿಗಳೂ ಸಹ ಅವನ ಕಥಾ ರಸ ಅಮೃತವನ್ನು ಪಾನ ಮಾಡಲು ಇಚ್ಛೆಪಡುವಾಗ

ಇನ್ನು ಜ್ಞಾನಿಗಳಾದವರ ಬಗೆಗೆ ಹೇಳಬೇಕಾದುದೇ ಇಲ್ಲ. ಅಮೃತವು ಸಿಕ್ಕಿದರೆ ಮಾನವರು ಯಾರೂ ಅದನ್ನು ಸೇವಿಸದೆ ಇರಲು ಇಚ್ಛಿಸುವುದಿಲ್ಲ. ಮಂದಮತಿಗಳಾಗಲೀ, ಜ್ಞಾನಿಗಳಾಗಲೀ ಎಲ್ಲರೂ ಭಗವಂತನ ಕಥಾ ರಸ ಸ್ವಾದವನ್ನು ಮಾಡಲು ಇಚ್ಛಿಸಿಯೇ ಇಚ್ಛಿಸುತ್ತಾರೆ. ಆದ್ದರಿಂದ ನಾನೂ ಸಹ ಯಥಾಮತಿ ಆ ಶ್ರೀಕೃಷ್ಣನ ಕಥಾ ಸಾರ ಎಂಬ ಅಮೃತವನ್ನು ಕಾವ್ಯದಲ್ಲಿ ಬರೆಯಲು ಬಯಸುತ್ತೇನೆ. ಭಗವಂತನನ್ನು ವರ್ಣಿಸಲು ಇಂತಿಷ್ಟೇ ಶಕ್ತಿ ಇರಬೇಕೆಂಬ ನಿಯಮವೇನೂ ಇಲ್ಲ. ಅವನು ಕರುಣಾಮಯಿ. ಆದ್ದರಿಂದ, ಯಾರೇ ಮಾಡುವ ಗುಣಗಾನವನ್ನು ಸ್ವೀಕರಿಸಿಯೇ ಸ್ವೀಕರಿಸುತ್ತಾನೆ. ಆ ದೃಢ ನಂಬಿಕೆಯಿಂದಲೇ ಆಚಾರ್ಯರು ಈ ಕಾವ್ಯವನ್ನು ಆರಂಭಿಸಿದ್ದಾರೆ.

ವಸುಧಾ ಶ್ರೋತ್ರಜೇ ತಸ್ಮಿನ್ ವ್ಯಾಸೇ ಚ ಹೃದಯಸ್ಥಿತೆ।
ಅನ್ಯೇಪಿ ಕವಯಃ ಕಾಮಂ ಬಭೂವುರನ ಪತ್ರಪಾಃ। ॥೪॥

ಆದ್ದರಿಂದಲೇ ವಾಲ್ಮೀಕಿ, ವ್ಯಾಸ ಮೊದಲಾದ ಮುನಿವರ್ಯರುಗಳು ದೊಡ್ಡ ದೊಡ್ಡ ಕಾವ್ಯಗಳನ್ನು ಸಂಕೋಚವಿಲ್ಲದೆ ರಚಿಸಿದ್ದರು. ಅದೇ ರೀತಿ ನಾನೂ ಸಹ ನನಗೆ ತಿಳಿದ ಮಟ್ಟಿಗೆ ಈ ಕಾವ್ಯವನ್ನು ರಚಿಸುತ್ತೇನೆ.

''**ವಸುಧಾ ಶ್ರೋತ್ರಜಃ**'' ಎಂದರೆ ವಾಲ್ಮೀಕಿ ಮಹರ್ಷಿಗಳು ಭಗವಂತನು ಅಷ್ಟು ದಯಾಮಯನಾಗಿರುವುದರಿಂದಲೇ ವಾಲ್ಮೀಕಿ ಮತ್ತು ವ್ಯಾಸ ಮಹರ್ಷಿಗಳು ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳನ್ನು ಎಲ್ಲರ ಶ್ರವಣಕ್ಕಾಗಿ, ಯಾವ ಮನಕ್ಲೇಶವನ್ನೂ ಇಟ್ಟುಕೊಳ್ಳದೆ, ಇತರರು ಅದನ್ನು ಸ್ವೀಕರಿಸುತ್ತಾರೋ ಇಲ್ಲವೋ ಎಂಬ ಕೀಳರಿಮೆಯನ್ನು ಹೊಂದದೆ, ಭಗವಂತನು ಖಂಡಿತವಾಗಿಯೂ ಅದರಿಂದ ಪ್ರೀತನಾಗುತ್ತಾನೆ ಎಂಬ ಭಾವದಿಂದ ರಚಿಸಿ ಧನ್ಯರಾದರು. ಆದ್ದರಿಂದಲೇ ಭಗವಂತನ ಬಗ್ಗೆ ಕಾವ್ಯ ರಚಿಸಲು ನಾಚಿಕೆ ಏಕೆ ಪಡಬೇಕು ಎಂಬ ಮನೋಧೈರ್ಯದಿಂದ ಈ ಕಾವ್ಯ ರಚನೆಗೆ ಕೈ ಹಾಕಿದ್ದೇನೆ.

ಸ್ವಾಮಿ ಯಾಮುನಾಚಾರ್ಯರು ತಮ್ಮ ಸ್ತೋತ್ರರತ್ನದಲ್ಲಿ ''**ಕೋಮಜ್ಜತೋ ರಣಕುಲಾ ಅಚಲಯೊರ್ ವಿಶೇಷಃ**'' ಸಮುದ್ರಕ್ಕೆ ಒಂದು ದೊಡ್ಡ ಬಂಡೆಯನ್ನು ಎಸೆದರೂ ಅಥವಾ ಒಂದು ಸಣ್ಣ ಕಲ್ಲನ್ನು ಎಸೆದರೂ ಸಮುದ್ರಕ್ಕೆ ಯಾವ ಆಘಾತವೂ ಉಂಟಾಗುವುದಿಲ್ಲ'' ಎಂಬುದಾಗಿ ಹೇಳಿದ್ದಾರೆ. ಅದರಂತೆ ಭಗವಂತನನ್ನು ಕುರಿತಾದ ದೊಡ್ಡ ದೊಡ್ಡ ಕಾವ್ಯಗಳೂ ಮತ್ತು ನನ್ನ ಅಲ್ಪಮತಿಯಿಂದ ಬರೆಯುವ ಈ ಕಾವ್ಯವು ಭಗವಂತನಿಗೆ ಪ್ರೀತಿ ಉಂಟು ಮಾಡೇ ಮಾಡುತ್ತದೆ ಎಂಬ ನಂಬಿಕೆಯನ್ನು ಆಚಾರ್ಯರು ಈ ಶ್ಲೋಕದಲ್ಲಿ ವ್ಯಕ್ತಪಡಿಸಿದ್ದಾರೆ.

ಸ ಕವಿಃ ಕಥ್ಯತೇ ಸೃಷ್ಟಾ ರಮತೇ ಯತ್ರ ಭಾರತಿ ।
ರಸಭಾವ ಗುಣೀಭೂತೈರಲಂ ಕಾರೈರ್ಗುಣೋದಯೈಃ॥ ॥೫॥

ಸರಸ್ವತಿಯಾದವಳು ಶೃಂಗಾರ ರಸಗಳು. ಅವುಗಳಿಗೆ ತಕ್ಕ ವಿಷಯಗಳು, ಅಪ್ರಧಾನವಾದ ವ್ಯಂಗಾರ್ಥಗಳು. ಅಲಂಕಾರಗಳು ಗುಣಗಳು, ವಿಲಾಸಗಳು ಇವೆಲ್ಲವನ್ನೂ ಯಾವನಲ್ಲಿ ಪ್ರೀತಿಯಿಟ್ಟು ಕೊಡುವಳೋ ಅವನೇ ಸಕಲ ಪರಿಪೂರ್ಣನಾದ ಕವಿಯಾಗುವನು. (ಬ್ರಹ್ಮನಲ್ಲಿ ಸರಸ್ವತಿಯು ರಮಿಸುವಂತೆ, ಕವಿಯ ಹೃದಯದಲ್ಲೂ, ವಾಕ್ಕಿನಲ್ಲೂ ಸರಸ್ವತಿಯು ರಮಿಸಿದರೆ ಅಂಥವನು ಸತ್ಕವಿಯ ಲಕ್ಷಣಗಳನ್ನು ಹೊಂದುತ್ತಾನೆ.

ಈ ಶ್ಲೋಕದಲ್ಲಿ ಕವಿಯ ಲಕ್ಷಣಗಳನ್ನು ತಿಳಿಸುತ್ತಾರೆ. ಒಬ್ಬ ಸತ್ಕವಿಯ ಕಾವ್ಯದಲ್ಲಿ ಶೃಂಗಾರ ರಸವಿರಬೇಕು. ಆ ರಸದ ಪ್ರತಿಪಾದನೆಗೆ ತಕ್ಕ ವಿಷಯಗಳಿರಬೇಕು. ವ್ಯಂಗ್ಯಾರ್ಥ ವನ್ನು ಬಳಸಿದರೂ ಅವು ಪ್ರಧಾನವಾಗಿರಬಾರದು. ಸಂದರ್ಭಕ್ಕೆ ತಕ್ಕ ಅಲಂಕಾರಗಳು, ಎಲ್ಲವೂ ಇರಬೇಕು, ನಾಯಿಕಾ ಗುಣಾಲಂಕಾರ, ನಾಯಕನ ರತಿ ಭಾವನೆ ಇತ್ಯಾದಿಗಳಿಂದ ಕೂಡಿ ಕಾವ್ಯವು ರಂಜನೀಯವಾಗಿರಬೇಕು. ಬ್ರಹ್ಮನ ಮಡದಿಯಾದ ಸರಸ್ವತಿಯು ಕವಿಗೆ ಒಲಿದಿರಬೇಕು. ವಾಲ್ಮೀಕಿಗಳಿಗೆ ಬ್ರಹ್ಮನು "**ಮಚ್ಛಂದಾ ದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತಿಃ**"ಎಂದು ಹೇಳಿದ್ದರಿಂದಲೇ ಅವರು ರಾಮಾಯಣದಂತಹ ಮಹಾಕಾವ್ಯ ರಚಿಸಲು ಸಾಧ್ಯವಾಯಿತು. ಅದೇ ರೀತಿ ಭಾಗವತದ ಆರಂಭದಲ್ಲೂ "**ತೇನೇ ಬ್ರಹ್ಮ ಹೃದಾ ಚ ಆದಿಕವಯೆ**" ಎಂದು ವ್ಯಾಸರ ಹೃದಯದಲ್ಲಿ ಸರಸ್ವತಿಯು ಕುಳಿತಿದ್ದಳು ಎಂದು ಹೇಳಿದೆ. ಸರಸ್ವತಿ ಕೃಪೆ ಇದ್ದವನಿಂದ ಮಾತ್ರ ಉತ್ತಮ ಕಾವ್ಯ ರಚನೆ ಸಾಧ್ಯ.

ತದಾತ್ವೆ ನೂತನಂ ಸರ್ವ ಮಾಯತ್ಯಾಂ ಚ ಪುರಾತನಂ।
ನ ದೋಷಾಯೈ ತದುಭಯಂ ನಗುಣಾಯ ಚ ಕಲ್ಪತೇ॥ ॥೬॥

ಹುಟ್ಟುವಾಗ ಎಲ್ಲವೂ ಹೊಸದಾಗಿರುತ್ತದೆ. ಸ್ವಲ್ಪ ಕಾಲವಾದ ಮೇಲೆ ಹಳೆಯದಾಗು ತ್ತದೆ. ಹೊಸದಾಗಲೀ ಹಳೆಯದಾಗಲೀ, ಗುಣದೋಷಗಳಿಗೆ ಕಾರಣವಾಗುವುದಿಲ್ಲ.

ಯಾವುದೇ ಕಾವ್ಯವು ಹುಟ್ಟುವಾಗ ನೂತನವಾಗಿರುತ್ತದೆ. ಕಾಲಕ್ರಮೇಣ ಅದು ಹಳೆಯ ದಾಗುತ್ತದೆ. ಹಾಗೆಂದ ಮಾತ್ರಕ್ಕೆ ಹೊಸ ಕಾವ್ಯಗಳು ಮಾತ್ರ ಗುಣವುಳ್ಳದ್ದು, ಹಳೆಯವು ಗುಣರಹಿತವಾದದ್ದು ಎಂಬ ನಿರ್ಣಯ ಸರಿಯಲ್ಲ. ಹೊಸತಾಗಲೀ, ಹಳೆಯದಾಗಲೀ, ಅದರಲ್ಲಿರುವ ಸಾರ ಮುಖ್ಯವೇ ವಿನಃ ಕಾವ್ಯದ ಕಾಲವಲ್ಲ. ಕಾಳಿದಾಸ ಮಹಾಕವಿಯು ಒಂದೆಡೆ ಹೀಗೆ ಹೇಳಿದ್ದಾನೆ.

"ಪುರಾಣ ಮಿತ್ಯೇವ ನ ಸಾಧು ಸರ್ವಂ, ನ ಚಾಪಿ ಕಾವ್ಯಂ ನವ ಇತ್ಯವದ್ಯಂ" ಹಳೆಯ ದಾದ ಮಾತ್ರಕ್ಕೆ ಎಲ್ಲವೂ ಶ್ರೇಷ್ಠವೆಂದೂ, ಹೊಸದಾದದ್ದು ಗುಣಮಟ್ಟದಲ್ಲಿ ಕಡಿಮೆ ಎಂದು ಭಾವಿಸಬಾರದು. ಕಾವ್ಯದಲ್ಲಿರುವ ಒಳ್ಳೆಯ ಅಂಶಗಳು ಪ್ರಧಾನವೇ ವಿನಃ ಕಾವ್ಯವನ್ನು ಯಾರು

ರಚಿಸಿದರು, ಯಾವಾಗ ರಚಿಸಿದರು ಎಂಬುದು ಕಾವ್ಯದ ಗುಣಮಟ್ಟವನ್ನು ನಿರ್ಣಯಿಸುವ ಮಾನದಂಡವಾಗಬಾರದು. ಆ ದೃಷ್ಟಿಯಲ್ಲಿ ತಮ್ಮ ಕಾವ್ಯವನ್ನು ರಸಿಕರು ವಿಮರ್ಶಿಸಬೇಕೆಂಬುದು ಆಚಾರ್ಯರ ಅಭಿಮತ.

ಪ್ರವೃತ್ತಾ ಮನಘೇ ಮಾರ್ಗೇ ಪ್ರಮಾದ್ಯಂತೀ ಮಪಿ ಕ್ವಚಿತ್ ।
ನ ವಾಚಮವಮನ್ಯಂತೆ ನರ್ತಕೀಮಿವ ಭಾವುಕಾಃ ॥ ॥೭॥

ದುರ್ಗಮವಾದ ಮಾರ್ಗದಲ್ಲಿ ನಡೆದು ಬರುವ ವಾಕ್ಕು ಎಲ್ಲಾದರೂ ಒಂದು ಕಡೆ ಎಡವಿದರೂ, ರಸಿಕರುಗಳು ಅದನ್ನು ಅವಹೇಳನ ಮಾಡುತ್ತಾರೆ. ಆದರೆ 'ಮಾರ್ಗ'ವೆನ್ನುವ ನಾಟ್ಯದಲ್ಲಿ ನಟನ ಮಾಡುವವರು ಹೆಜ್ಜೆ ತಪ್ಪಿದರೂ ಯಾರೂ ಅವಮತಿಸುವುದಿಲ್ಲ. ಅದೇ ರೀತಿ ಕಾವ್ಯದ ಬಗೆಯೂ ಸಹ.

ನಡೆದು ಬರುವಾಗ ಎಡವುವುದು ಸಹಜ. ಅದರಲ್ಲೂ ದುರ್ಗಮವಾದ ಮಾರ್ಗದಲ್ಲಿ ಬರುವಾಗಲಂತೂ ಎಡವಿಯೇ ಎಡವುತ್ತಾರೆ. ಅದೇ ರೀತಿ ಕ್ಲಿಷ್ಟವಾದ ಕಾವ್ಯವವನ್ನು ಬರೆಯುವಾಗ ತಪ್ಪುಗಳು ತೋರಬಹುದು. ಅದನ್ನೇ ದೊಡ್ಡದಾಗಿ ಮಾಡಿ ಪರಿಹಾಸ ಮಾಡುವುದು ಸಜ್ಜನರ ಲಕ್ಷಣವಲ್ಲ. ಭಗವದ್ಭಕ್ತರಾದವರು ಭಗವಂತನ ಚರಿತ್ರೆಯನ್ನು ಓದುವಾಗ ಅಂತಹ ಸಣ್ಣ ದೋಷಗಳನ್ನು ಪರಿಗಣಿಸುವುದಿಲ್ಲ. ನರ್ತನ ಮಾಡುವಾಗ ನಟಿಯಾದವಳು ಒಂದೊಂದು ವೇಳೆ ತಪ್ಪು ಹೆಜ್ಜೆಯನ್ನು ಹಾಕಿದರೂ ಅದು ಯಾರ ಗಮನಕ್ಕೂ ಬರುವುದಿಲ್ಲ. ಕಾರಣ ನರ್ತನದ ವೇಗದಲ್ಲಿ ಅವೆಲ್ಲಾ ಮರೆಯಾಗುತ್ತವೆ. ಶ್ರೀಮದ್ಭಾಗವತದಲ್ಲಿ 'ಸವಾಗ್ವಿಸರ್ಗೋ ಜನತಾಘ ವಿಪ್ಲವೋ ಯಾಸ್ಮಿನ್ ಪ್ರತಿಶ್ಲೋಕ ಮಬದ್ಧವತ್ಯಪಿ ನಾಮಾನ್ಯನಂತಶ್ಚ ಯಶೋಕಿತಾನಿ ಶ್ರುಣ್ವಂತಿ ಗಾಯಂತಿ ಗೃಣ್ವಂತಿ ಸಾಧವಃ॥ "ಭಗವಂತನ ಅನಂತ ಗುಣಗಳ ಗಾನ ಸುಧೆಯನ್ನು ಆಸ್ವಾದಿಸುವಾಗ ಭಕ್ತರಾದವರು ಕಾವ್ಯದ ದೋಷಗಳನ್ನು ಗಮನಿಸುವುದಿಲ್ಲ" ಎಂದು ಹೇಳಿದೆ. ಅದೇ ರೀತಿ ಇಲ್ಲಿಯೂ ತಮ್ಮ ಕಾವ್ಯದಲ್ಲಿನ (ದೋಷಗಳಿದ್ದಲ್ಲಿ) ದೋಷಗಳನ್ನು ಗಮನಿಸಕೂಡದೆಂದು ವಿನಂತಿಸಿದ್ದಾರೆ.

ವಿಹಾಯ ತದಹಂ ವ್ರೀಳಾಂ ವ್ಯಾಸವೇದಾರ್ಣವಾಮೃತಂ ।
ವಕ್ಷ್ಯೇ ವಿಭುದ ಜೀವಾತುಂ ವಸುದೇವ ಸುತೋದಯಂ ॥ ॥೮॥

ಆದ್ದರಿಂದ ನಾನು ನಾಚಿಕೆಯನ್ನು ಬಿಟ್ಟು ವ್ಯಾಸರು ರಚಿಸಿದ ಪಂಚಮ ವೇದವೆನಿಸಿಕೊಂಡಿರುವ ಮಹಾಭಾರತವೆಂಬ ಸಮುದ್ರದಿಂದ ತೆಗೆಯಲ್ಪಟ್ಟ ವಿದ್ವಾಂಸರುಗಳಿಗೂ, ದೇವತೆಗಳಿಗೂ ಅಮೃತ ಸ್ವರೂಪನಾದ ವಸುದೇವ ಪುತ್ರನಾದ ಶ್ರೀಕೃಷ್ಣನ ಚರಿತ್ರವನ್ನು ಹೇಳುತ್ತೇನೆ.

ಭಗವಂತನ ಬಗ್ಗೆ ಬರೆಯುವ ಕಾವ್ಯಗಳಲ್ಲಿ ಚಿಕ್ಕ ಚಿಕ್ಕ ದೋಷಗಳಿದ್ದರೂ, ಸತ್ಪುರುಷರು ಅದನ್ನು ದೊಡ್ಡದಾಗಿ ಪರಿಗಣಿಸುವುದಿಲ್ಲ ಎಂಬ ಧೈರ್ಯದಿಂದ ನಾನು ನಾಚಿಕೆಯನ್ನೇ ಬಿಟ್ಟು ಶ್ರೀಕೃಷ್ಣ ಚರಿತ್ರೆಯಾದ ಈ ಕಾವ್ಯವನ್ನು ಬರೆಯಲು ಧೈರ್ಯ ವಹಿಸಿದ್ದೇನೆ.

ಇದು ಎಂತಹ ಕಥೆ ಎಂದರೆ ಭಗವಂತನ ಅವತಾರವೇ ಎನಿಸಿಕೊಂಡಿರುವ ಶ್ರೀ ವೇದವ್ಯಾಸರು ಬರೆದಿರುವ 'ಪಂಚಮ ವೇದ'ವೆನಿಸಿಕೊಂಡಿರುವ 'ಮಹಾಭಾರತ'ದ ಸಾರವಾಗಿದೆ. 'ಮಹಾಭಾರತದಲ್ಲಿ ಇಲ್ಲದಿರುವುದು ಜಗತ್ತಿನ ಬೇರೆಲ್ಲಿಯೂ ಇಲ್ಲ ; ಜಗತ್ತಿನಲ್ಲಿ ಇರುವುದೆಲ್ಲಾ ಮಹಾಭಾರತದಲ್ಲಿದೆ' ಎಂಬ ನಾಣ್ಣುಡಿ ಉಂಟು. ಇಂತಹ ದಿವ್ಯ ಕತೆಯು ವಿಭುದರಾದ ಜ್ಞಾನಿಗಳೆಲ್ಲರಿಗೂ ಆಪ್ಯಾಯಮಾನದ್ದಾಗಿರುತ್ತದೆ. ಭಕ್ತರಾದವರಿಗೆ ಜೀವನದ ಔಷಧಿಯಾಗಿರುತ್ತದೆ. ದೇವತೆಗಳೂ ಕೂಡ ಶ್ರೀಕೃಷ್ಣನ ಚರಿತ್ರೆಯನ್ನು ಆಸ್ವಾದಿಸುತ್ತಾರೆ. ಅಂತಹ ಅಮೃತ ಪ್ರಾಯವಾದ ಶ್ರೀಕೃಷ್ಣನ ಚರಿತಾಮೃತವನ್ನು ನಾನು ನನಗೆ ತಿಳಿದ ರೀತಿಯಲ್ಲಿ ರಚಿಸಲು ಕೈಹಾಕಿದ್ದೇನೆ.

ಕ್ರೀಡಾ ತೂಲಿಕಯಾ ಸ್ವಸ್ಮಿನ್ ಕೃಪಾರೂಷಿತಯಾ ಸ್ವಯಂ ।
ಏಕೋ ವಿಶ್ವಮಿದಂ ಚಿತ್ರಂ ವಿಭುಃ ಶ್ರೀಮಾನಜೀ ಜನತ್ ॥ ॥೬॥

ಭಗವಂತ ಒಬ್ಬನೇ ಕೃಪೆಯಾಗಿರುವ ಬಣ್ಣದಲ್ಲಿ ಚೆನ್ನಾಗಿ ಅದ್ದಲ್ಪಟ್ಟ ಲೀಲೆಯೆಂಬ ಕುಂಚದಿಂದ ಈ ಮೂರು ಜಗತ್ತೆಂಬ ಚಿತ್ರವನ್ನು ಸರ್ವಶಕ್ತನಾದ್ದರಿಂದ, ತನ್ನ ಸ್ಥಳದಲ್ಲಿಯೇ ತಾನೇ ಬರೆಯುತ್ತಿದ್ದಾನೆ.

ಈ ಶ್ಲೋಕವು ಸ್ವಾಮಿ ದೇಶಿಕರ ಕವಿತಾ ಕೌಶಲ್ಯವನ್ನು ಪ್ರತಿಬಿಂಬಿಸುತ್ತದೆ.

''ಯದೋರ್ವಂಶ ನರಃ ಶ್ರುತ್ವಾ ಸರ್ವಪಾಪೈ ಪ್ರಮುಚ್ಯತೆ
ಯತ್ರಾವತೀರ್ಣಂ ಕೃಷ್ಣಾಖ್ಯಂ ಪೂರ್ಣಂ ಬ್ರಹ್ಮ ನರಾಕೃತಿ''

ಪರಿಪೂರ್ಣ ಪರಬ್ರಹ್ಮವೇ ನರಾಕೃತಿಯನ್ನು ಹೊಂದಿ ಕೃಷ್ಣನಾಗಿ ಅವತರಿಸಿದೆ.

ಆ ಭಗವಂತನ ಕೀರ್ತನೆಯೇ ಸರ್ವ ಪಾಪವನ್ನು ನಿವಾರಿಸುತ್ತದೆ'' ಹೀಗೆ ಅಪ್ಪಯ್ಯ ದೀಕ್ಷಿತರು ಉದ್ಗರಿಸಿದ್ದಾರೆ.

ಈ ಶ್ಲೋಕದಲ್ಲಿ ಭಗವಂತನ ಕೃಪೆಯೇ ಬಣ್ಣ ಎಂದು ಹೇಳಿ ಆ ಬಣ್ಣದಲ್ಲಿ ಆ ಪರಮಾತ್ಮನೇ ತನ್ನ ಲೀಲೆ ಎಂಬ ಕುಂಚವನ್ನು ಅದ್ದಿ ಈ ಮೂರು ಜಗತ್ತೆಂಬ ಚಿತ್ರವನ್ನು ಅತಿ ಸುಂದರವಾಗಿ ಸ್ವಯಂ ತಾನೇ ಬರೆದಿದ್ದಾನೆ. ಅಲ್ಲದೆ ಈ ಜಗತ್ತಿನಲ್ಲಿ ತಾನೇ ಅವತರಿಸಿ ತನ್ನ ಅದ್ಭುತವಾದ ಲೀಲೆಗಳನ್ನು ಜಗತ್ತಿಗೆ ತೋರಿದ್ದಾನೆ. ಕೇವಲ ಲೀಲೆಗಾಗಿ ಜಗತ್ತನ್ನು ಸೃಷ್ಟಿಸಿದರೂ ಅದರಲ್ಲಿ ತನ್ನ ಕೃಪೆಯನ್ನು ಬೆರೆಸಿ, ಜಗತ್ತು ಸುಂದರವಾದ ಚಿತ್ರದ ಹಾಗೆ ಕಾಣುವ ಹಾಗೆ ಮಾಡಿದ್ದಾನೆ. ಜಗತ್ತಿನ ನಿರ್ಮಾತೃವೇ ಪುರುಷೋತ್ತಮನಾದ, ನಿತ್ಯವೂ ಅವಾಪ್ತ ಸಮಸ್ತ ಕಾಮನಾದ ಭಗವಂತನಾದ ನಾರಾಯಣ. ಶ್ರಿಯಃಪತಿಯಾದ ನಾರಾಯಣನೇ ಈ ಜಗತ್ತಿನ ಸೃಷ್ಟಿಕರ್ತ ಮತ್ತು ಪಾಲಕ.

ಶ್ರೀ ಅಪ್ಪಯ್ಯ ದೀಕ್ಷಿತರು ಈ ಶ್ಲೋಕ ವ್ಯಾಖ್ಯಾನದಲ್ಲಿ ಹೀಗೆ ಉದ್ಧರಿಸಿದ್ದಾರೆ.

''ಇತ್ಥಂ ವಿಚಿಂತ್ಯಾಃ ಸರ್ವತ್ರ ಭಾವಾಃ ಸಂತಿ ಪದೇ ಪದೇ ಕವಿತಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ'' ಆಗಿಂದಾಗ್ಯೆ ಇಂಥಾ ಅದ್ಭುತವಾದ ಶ್ಲೋಕಗಳು ಕವಿತಾರ್ಕಿಕ ಸಿಂಹರಿಂದ ಕಾವ್ಯದುದ್ದಕ್ಕೂ ರಚಿಸಲ್ಪಟ್ಟಿವೆ.

ಜಗದಾಹ್ಲಾದನೋ ಜಜ್ಞೆ ಮನಸಸ್ತಸ್ಯ ಚಂದ್ರಮಾಃ।
ಪರಿಪಾಲಯಿತವ್ಯೇಷು ಪ್ರಸಾದ ಇವ ಮೂರ್ತಿಮಾನ್॥ ॥೧೦॥

ಜಗತ್ತಿಗೆ ಆನಂದವನ್ನು ಉಂಟು ಮಾಡುವ ಚಂದ್ರನೆಂಬುವನು ಆ ಭಗವಂತನ ಮನಸ್ಸಿನಿಂದ ಉದ್ಭವಿಸಿದನು. ತನ್ನಿಂದ ರಕ್ಷಿಸಲ್ಪಟ್ಟ ಆಶ್ರಿತರಲ್ಲಿ ಭಗವಂತನಿಗೆ ಇರುವ ಅನುಗ್ರಹವೇ ಅವನು ಅಷ್ಟು ಸಂತೋಷಕಾರಕನಾಗಿರಲು ಸಾಧ್ಯವಾಗಿದೆ.

''ಚಂದ್ರಮಾ ಮನಸೋ ಜಾತಃ'' ಎಂಬುದಾಗಿ ಪುರುಷ ಸೂಕ್ತದಲ್ಲಿ ಚಂದ್ರನು ಭಗವಂತನ ಮನಸ್ಸಿನಿಂದ ಜನಿಸಿದನೆಂದು ಹೇಳಿದೆ. ಚಂದ್ರನನ್ನು ನೋಡಿದರೆ ಎಲ್ಲರೂ ಆನಂದ ಪಡುತ್ತಾರೆ.

ಭಗವಂತನನ್ನು ಯಾರು ಶರಣು ಹೊಂದುತ್ತಾರೆಯೋ, ಅವರಲ್ಲಿ ಅವನ ಅನುಗ್ರಹವು ಅಪಾರವಾದದ್ದು. ಚಂದ್ರನು ಅಷ್ಟು ಆಹ್ಲಾಕರನಾಗಿ ಇರಲು ಕಾರಣ ಅವನಲ್ಲಿ ಭಗವಂತನಲ್ಲಿರುವ ಅಪಾರ ವಾತ್ಸಲ್ಯವೇ ಸರಿ. ಉತ್ತಮ ಪುರುಷರಿಗೆ, ಉತ್ತಮ ಸ್ತ್ರೀಯರಿಗೆ ಚಂದ್ರನ ಉಪಮಾನವನ್ನು ಕೊಡದಿರುವ ಕವಿಯೇ ಇಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಸಕಲ ಮನುಜರ ಮನಸ್ಸಿಗೆ ಸಂತೋಷಕರವಾಗಿರುವ ಚಂದ್ರವಂಶದ ಕತೆಯನ್ನು ಹೇಳಲು ಉಪಕ್ರಮಿಸಿರುವ ಕವಿಯು ಚಂದ್ರನನ್ನು ಭಗವಂತನ ಪೂರ್ಣ ಕೃಪೆಗೆ ಪಾತ್ರನಾಗಿದ್ದಾನೆಂದು ಹೇಳಿರುವುದು ಸಮಯೋಚಿತವೇ ಆಗಿದೆ. ಅಂತಹ ಚಂದ್ರನ ವಂಶದಲ್ಲಿ ಜನಿಸಿದ ಚಂದ್ರನಂತೆಯೇ ಇರುವ ಶ್ರೀಕೃಷ್ಣನ ವೈಭವವನ್ನು ಈ ಕಾವ್ಯದಲ್ಲಿ ಆಚಾರ್ಯರು ಅದ್ಭುತವಾಗಿ ವರ್ಣಿಸಿದ್ದಾರೆ.

ಯದಪತ್ಯ ಸಮುದ್ಭೂತಃ ಪುಣ್ಯಕೀರ್ತಿಃ ಪುರೂರವಾಃ।
ಸತಾಮಾಹಿತ ವಹ್ನಿನಾಂ ವಿಹಾರಸ್ಥೆಯತಾಂ ಯಯೌ॥ ॥೧೧॥

ಈ ಚಂದ್ರನ ಮಗನಾದ ಬುಧನಲ್ಲಿ ಹುಟ್ಟಿದವನೂ, ಅಪಾರವಾದ ಕೀರ್ತಿಯನ್ನು ಹೊಂದಿದವನೂ ಆದ ಪುರೂರವಸ್ ಎಂಬ ರಾಜನು ಆಹಿತಾಗ್ನಿಯಾಗಿ ಉತ್ತಮರಲ್ಲಿ ಉತ್ತಮಳಾದ ಊರ್ವಶಿಯೊಡನೆ ವಿಹರಿಸುತ್ತಿದ್ದನು.

ಚಂದ್ರನ ಮಗನು ಬುಧನು. ತಾರೆಯೆಂಬುವಳಲ್ಲಿ ಚಂದ್ರನಿಗೆ ಬುಧನು ಜನಿಸಿದನು. ಬುಧನು ಮಹಾ ಮೇಧಾವಿ. ಇವನಿಗೆ ಪುರೂರವಸ್ ಎಂಬ ಸುಪುತ್ರನು ಹುಟ್ಟಿದನು.

ಇವನು ಭೂಲೋಕದಲ್ಲಿ ಅಪಾರವಾದ ಕೀರ್ತಿಯನ್ನು ಹೊಂದಿ ಸ್ವರ್ಗಲೋಕದಲ್ಲೂ ವಿಹರಿಸಿದನು. ಇವನಿಗಾಗಿ ಊರ್ವಶಿಯು ಭೂಲೋಕಕ್ಕೆ ಬಂದು ಅವನೊಡನೆ ಯಥೇಚ್ಛವಾಗಿ ವಿಹರಿಸಿದಳು. ಯಾವುದೋ ಒಂದು ವ್ಯಾಜದಿಂದ ಅನಂತರ ಅವನನ್ನು ತ್ಯಜಿಸಿ ಮತ್ತೆ ಸ್ವರ್ಗಲೋಕಕ್ಕೆ ಹಿಂತಿರುಗುದಳು. ವಿಷ್ಣುಪುರಾಣ, ಮಹಾಭಾರತಗಳಲ್ಲಿ ಇವರ ಚರಿತ್ರೆ ವಿಸ್ತಾರವಾಗಿದೆ.

ಪುಣ್ಯ ಶಬ್ದವನ್ನು ಪ್ರಯೋಗಿಸಿರುವುದರಿಂದ, ಪುರೂರವನು ಬಹುಶ್ರೇಷ್ಠನೆಂಬುದು ವ್ಯಕ್ತವಾಗುತ್ತದೆ. ಇವನಿಗೆ 'ಅಹಿತಾಗ್ನಿ' ಎಂದೂ ಹೆಸರು. ಅನೇಕ ಯಾಗಗಳನ್ನು ಮಾಡಿ ಪುಣ್ಯ ಸಂಪಾದಿಸಿದವನು ಪುರೂರವಸ್.

ಸಮವರ್ಧತ ತದ್ವಂಶಃ ಉಪರ್ಯುಪರಿ ಪರ್ವಭಿಃ।
ಯಶೋ ಮುಕ್ತಾಫಲೈರ್ಯಸ್ಯ ದಿಶೋ ದಶ ವಿಭೂಷಿತಾಃ॥ ॥೧೨॥

ಅವನ ವಂಶವು ಬಹು ಶಾಖೆಗಳಾಗಿ ಬೆಳೆಯಿತು. ಚಿಪ್ಪುಗಳಲ್ಲಿ ಮುತ್ತುಗಳು ಹುಟ್ಟುವ ಹಾಗೆ ಇವನ ವಂಶದಲ್ಲಿ ಹುಟ್ಟಿದ ಅನೇಕ ಪುಣ್ಯ ಪುರುಷರು ದಶ ದಿಕ್ಕುಗಳಲ್ಲೂ ಕೀರ್ತಿಯನ್ನು ಪಡೆದರು.

ಈ ಪುರೂರವನ ವಂಶವು ಬಹುಶಾಖೆಗಳಾಗಿ ಬೆಳೆಯಿತು. ಈ ಸಮುದ್ರದಲ್ಲಿ ದೊರಕುವ ಚಿಪ್ಪುಗಳಲ್ಲಿ ಯಾವ ರೀತಿ ಉತ್ತಮವಾದ ಮುತ್ತುಗಳು ಲಭಿಸುತ್ತವೆಯೋ ಅದೇ ರೀತಿ ಪುರೂರವನ ವಂಶದಲ್ಲೂ ಎಲ್ಲಾ ಕಡೆಯಲ್ಲೂ ಕೀರ್ತಿಯನ್ನು ಯಶಸ್ಸನ್ನು ಸಂಪಾದಿಸಿದ ಅನೇಕ ರಾಜರು ಜನಿಸಿ ಈ ಭೂಮಂಡಲವನ್ನು ಆಳಿದರು. ನಹುಷನೇ ಮುಂತಾದ ಅನೇಕ ಪ್ರಸಿದ್ಧ ಪುರುಷರು ಈ ವಂಶವನ್ನು ಬೆಳಗಿದ್ದಾರೆ. ಮುತ್ತಿನ ಸಾಮ್ಯವನ್ನು ಕೊಟ್ಟಿರುವುದು ಕವಿಯ ಪ್ರತಿಭೆಯನ್ನು ತೋರಿಸುತ್ತದೆ. ಸಾಮಾನ್ಯವಾಗಿ ಮುತ್ತುಗಳು ಎಲ್ಲವೂ ಚೆನ್ನಾಗಿಯೇ ಇರುತ್ತವೆ. ಮುತ್ತುಗಳನ್ನು ಎಲ್ಲರೂ ಇಷ್ಟಪಡುತ್ತಾರೆ. ಮುತ್ತಿನ ಹಾರವನ್ನು ಸ್ತ್ರೀ ಪುರುಷರಾದಿಯಾಗಿ ಎಲ್ಲರೂ ಧರಿಸುತ್ತಾರೆ. ಅದೇ ರೀತಿ ಪುರೂರವಸ್‌ನ ವಂಶದಲ್ಲಿ ಜನಿಸಿದ ಎಲ್ಲಾ ರಾಜರೂ ಜನಾನುರಾಗಿಗಳಾಗಿ ಕೀರ್ತಿಯನ್ನು ಸಂಪಾದಿಸಿ ಎಲ್ಲರಿಗೂ ಬೇಕಾದವರಾಗಿದ್ದರು.

ಬಭೂವ ನಹುಷಸ್ತಸ್ಮಿನ್ ಐರಾವತ ಇವಾಂಬುದೌ।
ಯಮಿಂದ್ರ ವಿಗಮೇ ದೇವಾಃ ಪದೇ ತಸ್ಯ ನ್ಯವೀವಿಶನ್ ॥೧೩॥

ಈ ವಂಶದಲ್ಲಿ ಸಮುದ್ರದಲ್ಲಿ ಐರಾವತ ಹುಟ್ಟಿದಂತೆ ನಹುಷನೆಂಬ ಚಕ್ರವರ್ತಿಯು ಹುಟ್ಟಿದನು. ಇಂದ್ರನು ಒಂದು ಕಾಲದಲ್ಲಿ ಮರೆಯಾಗಿದ್ದಾಗ, ದೇವತೆಗಳು ಈ ನಹುಷನನ್ನು ಇಂದ್ರ ಸ್ಥಾನದಲ್ಲಿ ಕುಳ್ಳಿರಿಸಿದ್ದರು.

ಚಂದ್ರ ವಂಶದಲ್ಲಿ ಬಂದ ಅನೇಕ ರಾಜರಲ್ಲಿ ನಹುಷನೆಂಬುವನು ಪ್ರಸಿದ್ಧನು. ಯಾವ ರೀತಿ ಸಮುದ್ರ ಮಥನ ಕಾಲದಲ್ಲಿ ಕ್ಷೀರ ಸಮುದ್ರದಲ್ಲಿ ಐರಾವತವೆಂಬ ಬಿಳಿಯ ಆನೆಯು

ಜನಿಸಿತೋ ಅದೇರೀತಿ ಪುರೂರವನ ವಂಶದಲ್ಲಿ ನಹುಷನು ಜನಿಸಿದನು. ಐರಾವತವು ಆನೆಗಳಲ್ಲೆಲ್ಲಾ ಶ್ರೇಷ್ಠವಾದವು. ''ಐರಾವತಂ ಗಜೇಂದ್ರಾಣಾಂ'' ಎಂದು ಭಗವದ್ಗೀತೆಯ ಹತ್ತನೆಯ ಅಧ್ಯಾಯವಾದ ವಿಭೂತಿ ಯೋಗದಲ್ಲಿ ಭಗವಂತನ ಹೇಳಿದ್ದಾನೆ. ಅಂತಹ ಐರಾವತದಂತೆ ಪ್ರಸಿದ್ಧಿ ಹೊಂದಿದ್ದ ನಹುಷ ಚಕ್ರವರ್ತಿಯು ಮಾನವನಾಗಿದ್ದರೂ ಇಂದ್ರ ಪದವಿಯನ್ನು ಅನುಭವಿಸಿದವನು. ಒಮ್ಮೆ ಇಂದ್ರನು ತನ್ನ ಪದವಿಯನ್ನು ಕಳೆದುಕೊಂಡಾಗ ದೇವತೆಗಳೆಲ್ಲರೂ ಸೇರಿ. ದೇವಲೋಕವು ಅರಾಜಕವಾಗಕೂಡದೆಂದು, ಇಂದ್ರನಿಗೆ ಸಮಾನ ನಾಗಿದ್ದ ನಹುಷನನ್ನು ಇಂದ್ರನ ಸ್ಥಾನದಲ್ಲಿ ಕುಳ್ಳಿರಿಸಿ ಗೌರವಿಸಿದ್ದರು. ಆದರೆ ಅವನ ಗರ್ವದಿಂದ ಶೀಘ್ರದಲ್ಲಿಯೇ ಆ ಸ್ಥಾನವನ್ನು ಕಳೆದುಕೊಂಡು ಅಗಸ್ತ್ಯಶಾಪದಿಂದ ಭೂಮಿಗೆ ಮತ್ತೆ ಮರಳಿದನು.

ನರೇಂದ್ರಾಃ ಪೃಥಿವೀ ಚಕ್ರೆ ನಾಮಚಿಹ್ನೈರಲಂಕೃತಾಃ ।
ಜಂಗಮಾಸ್ಥಸ್ಯ ವೀರಸ್ಯ ಜಯಸ್ತಂಭಾ ಇವಾಭವನ್ ॥ ॥೧೪॥

ಭೂಮಂಡಲದಲ್ಲಿರುವ ಅರಸರೆಲ್ಲರೂ, ಆ ನಹುಷನ ಹೆಸರಿನ ಬಲದಿಂದಲೇ ತಾವೂ ಅಲಂಕೃತಗೊಂಡು ಸ್ಥಾವರ ಜಂಗಮಗಳಿಗೆ ನಿಯಾಮಕರಾದರು. (ಜಯಸ್ತಂಭಗಳಾದರು)

ಮನುಷ್ಯನಾದ ನಹುಷನು, ಇಂದ್ರ ಪದವಿಯನ್ನು ಅಲಂಕರಿಸಿದ ನಂತರ, ಭೂಮಂಡಲದ ಇತರ ರಾಜರೆಲ್ಲರೂ, ತಾವೆಲ್ಲರೂ ನಹುಷನಿಗೆ ಸಮಾನರೆಂದು ಭಾವಿಸಿ ಹೆಮ್ಮೆಯಿಂದ ಬೀಗುತ್ತಿದ್ದರು. ಈ ಜಗತ್ತೆಲ್ಲವೂ ಸ್ಥಾವರ ಜಂಗಮಗಳಿಂದ ಕೂಡಿದೆ. ''ಚಕ್ರೆ ಸೈನ್ಯೆ ಜಲಾವರ್ತೆ, ರಥಾಂಗೇ ಚಯ ರಾಷ್ಟ್ರಯೋಃ। ಸಂಸಾರೇ ಮಂಡಲೇ ವೃತೇ ಛಿದ್ರ ಭೇದಾಸ್ತ್ರ ಭೇದಯೋ'' ಎಂಬುದಾಗಿ 'ವೈಜಯಂತೀ' ಎಂಬ ಗ್ರಂಥದಲ್ಲಿ ಈ ಭೂಮಂಡಲದ ಬಗ್ಗೆ ಹೇಳಿದೆ. ನಹುಷನಿಂದ ಉತ್ತೇಜಿತರಾಗಿ ಎಲ್ಲಾ ರಾಜರೂ ತಾವೂ ಸಹ ಇಂದ್ರನಂತೆಯೇ ಎಂದು ಭಾವಿಸತೊಡಗಿದರು. ಎಲ್ಲಾ ರಾಜರು ಇಂದ್ರ ಪದವಿಯನ್ನು ಅಪೇಕ್ಷಿಸುತ್ತಾರೆ. ಆದರೆ ಬಹು ಪುಣ್ಯಶಾಲಿಗಳಿಗೆ ಮಾತ್ರ ಅದು ದೊರಕುತ್ತದೆ.

ಶಕ್ತಿರಪ್ರತಿಘಾ ತಸ್ಯ ಶಾತ್ರವೈರಪಿ ತುಷ್ಟುವೆ ।
ಯಥಾವತ್ ಸಾಧಕಸ್ಯೇವ ಯಾವದರ್ಥಾ ಸರಸ್ವತಿ ॥ ॥೧೫॥

ಯಾವ ರೀತಿ ವಾದ ಮಾಡುವುದರಿಂದ ವಾಕ್ಕು ಅವನಿಗೆ ಅಧೀನವಾಗಿ ಯಾವ ಅಡೆತಡೆಯೂ ಇಲ್ಲದೆ ಹೇಳಬೇಕಾದುದೆಲ್ಲವನ್ನೂ ಹೇಳುವುದೋ, ಹಾಗೆ ಹೇಳಿದಾಗ ಯಾವ ರೀತಿ ಇತರರು ಅವನನ್ನು ಕೊಂಡಾಡುವರೋ ಅದೇ ರೀತಿ ನಹುಷನ ಪರಾಕ್ರಮವನ್ನು ಶತ್ರುಗಳು ಕೊಂಡಾಡುತ್ತಿದ್ದರು.

ಈ ಶ್ಲೋಕದಲ್ಲಿ ಅಂತಹ ನಹುಷನ ಪರಾಕ್ರಮವನ್ನು ಜ್ಞಾನಿಗಳ, ಉತ್ತಮ ಕವಿಗಳ ವಾಗ್ವೈಖರಿಗೆ ಹೋಲಿಸಿದ್ದಾರೆ. ಯಾವ ರೀತಿ ಉತ್ತಮ ವಾಗ್ಮಿಗಳ ವಾಕ್ಕು ಅವರ ಅಧೀನ

ದಲ್ಲಿದ್ದು ಯಾವ ಅಡೆತಡೆಯೂ ಇಲ್ಲದೆ ಗಂಗಾ ಪ್ರವಾಹದಂತೆ ಹರಿದು, ಎದುರಾಳಿಗಳ ವಾಗ್ಬಾಣಗಳನ್ನು ನಿವಾರಿಸಿ, ಜಯಶಾಲಿಯಾಗುವುದೋ, ಮತ್ತು ಹೇಗೆ ಎದುರಾಳಿಗಳೂ ಸಹ ಅಂತಹ ವಾಕ್ಪಟುತ್ವವನ್ನು ಕೊಂಡಾಡುವರೋ ಅದೇ ರೀತಿ ನಹುಷನ ಪರಾಕ್ರಮವು ಅದ್ಭುತವಾಗಿದ್ದು, ಎಲ್ಲಾ ಶತ್ರುಗಳನ್ನು ಧ್ವಂಸ ಮಾಡುತ್ತಾ ವಿಜಯವನ್ನು ಸಾಧಿಸುತ್ತಿತ್ತು. ಅವನ ಶತ್ರುಗಳೂ ಅವನ ಪರಾಕ್ರಮವನ್ನು ಕೊಂಡಾಡುತ್ತಿದ್ದರು. ಶ್ರೀಮದ್ ರಾಮಾಯಣದಲ್ಲಿ ಶ್ರೀರಾಮನ ಪರಾಕ್ರಮವನ್ನು ರಾವಣನೇ ಕೊಂಡಾಡಿದ್ದಾನೆ.

''**ಶತ್ರೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಶ್ಚ ವಿಕ್ರಮೈಃ**'' ಶ್ರೀ ರಾಮನ ಧನುರ್ಬಾಣ ಪ್ರಯೋಗವು ನೋಡಲು ಹಾಗೂ ಸಂತೋಷಪಡಲು ಅತ್ಯಂತ ರಂಜನೀಯವಾಗಿದೆಯೆಂದು. ಅದೇ ರೀತಿ ನಹುಷನ ಪರಾಕ್ರಮವು ಇತ್ತು.

ವೀರೋ ರಸ ಇವೋತ್ಸಾಹಾನ್ನಹುಷಾ ದಭ್ಯಜಾಯತ ।
ಯಯಾತಿರ್ ನಾಮಯೇನೈಂದ್ರ ಅರ್ಧಾಸನ ಮಧಿಷ್ಠಿತಂ ॥ ॥೧೬॥

ಉತ್ಸಾಹವೆಂಬ ಗುಣದಿಂದ ವೀರರಸವು ತೋರುವ ಹಾಗೆ ನಹುಷನಿಂದ ಯಯಾತಿ ಎಂಬ ಮಹಾಪುರುಷನು ಜನಿಸಿದನು. ಅವನು ಇಂದ್ರನ ಜೊತೆ ಏಕಾಸನದಲ್ಲಿ ಕುಳಿತಿದ್ದನು.

ನಹುಷನಿಗೆ ಯಯಾತಿಯು ಪುತ್ರನು. ಇವನು ತಂದೆಯಂತೆಯೇ ಮಹಾ ಕೀರ್ತಿಯುಳ್ಳವನು. ಉತ್ಸಾಹವೆಂಬ ಗುಣವಿದ್ದಲ್ಲಿ ಮನುಷ್ಯರಲ್ಲಿ ವೀರ್ಯ ರಸ ಉತ್ಪತ್ತಿಯಾಗುತ್ತದೆ. ಶ್ರೀರಾಮಾಯಣದಲ್ಲಿ ''**ಉತ್ಸಾಹವಂತ ಪುರುಷಾಃ ನಾವಸೀದಂತು ಕರ್ಮಸು**'' ಎಂಬ ವಾಕ್ಯವಿದೆ. ಉತ್ಸಾಹವಿದ್ದಲ್ಲಿ ಯಾವ ದುಸ್ತರ ಕಾರ್ಯವನ್ನು ಬೇಕಾದರೂ ಸಾಧಿಸಬಹುದು.

ಉತ್ಸಾಹವು ವೀರ್ಯ ರಸಕ್ಕೆ ಪ್ರೇರಕ. ಇಲ್ಲಿ ನಹುಷನಿಗೆ ಯಯಾತಿಯು ಪುತ್ರನಾದದ್ದನ್ನು ಕವಿಯು ವೀರ್ಯರಸಕ್ಕೆ ಹೋಲಿಸಿದ್ದಾನೆ. ಉತ್ಸಾಹಿಗಳಲ್ಲಿ ವೀರ್ಯ ರಸವು ಹುಟ್ಟುವಂತೆ ನಹುಷನಲ್ಲಿ ಯಯಾತಿಯ ಜನನವಾಯಿತು. ನಹುಷನನ್ನು ದೇವತೆಗಳು ಇಂದ್ರನ ಸಿಂಹಾಸನದಲ್ಲಿ ಇಂದ್ರನು ಇಲ್ಲದಿದ್ದಾಗ ಕುಳ್ಳಿರಿಸಿದ್ದರು. ಆದರೆ ಯಯಾತಿಯು ಇಂದ್ರನು ದೇವೇಂದ್ರಾಧಿಪತಿಯಾಗಿದ್ದಾಲೇ ಅವನ ಜೊತೆ ಏಕಾಸನದಲ್ಲಿ ಕುಳಿತು ಆ ಸೌಭಾಗ್ಯವನ್ನು ಪಡೆದ ಮೊದಲ ಭೂಲೋಕದ ರಾಜನಾಗಿದ್ದನು. ಅವನ ಕೀರ್ತಿ ನಹುಷನ ಕೀರ್ತಿಗಿಂತ ದೊಡ್ಡದು.

ವಿಶಾಲ ವಿಪುಲೋತ್ತುಂಗೇ ಯದ್ಬಾಹು ಶಿಖರಾಂತರೆ।
ಆಸೀದ್ವೀರಾಶ್ರಿಯಾ ಸಾರ್ಧಂ ಭೂಮಿರರ್ಧಾಸನೇ ಸ್ಥಿತಾ ॥ ॥೧೭॥

ವಿಶಾಲವಾದ, ಉನ್ನತವಾದ ಬಾಹುಗಳನ್ನು ಹೊಂದಿದ್ದ ಅವನಲ್ಲಿ ಭೂದೇವಿಯು ವೀರ್ಯಲಕ್ಷ್ಮಿಯೊಡಗೂಡಿ ವಾಸ ಮಾಡುತ್ತಿದ್ದಳು.

ಶ್ರೀರಾಮನಂತೆ ಆಜಾನುಬಾಹುವಾಗಿದ್ದ ಯಯಾತಿಯು ಭೂಮಂಡಲಕ್ಕೆ ಒಡೆಯನಾಗಿದ್ದರಿಂದ, ಭೂದೇವಿಯು ಅವನಿಗೆ ಸಂಪೂರ್ಣವಾಗಿ ಒಲಿದಿದ್ದಳು. ಅಷ್ಟೇ ಅಲ್ಲ,

ಅಷ್ಟಲಕ್ಷ್ಮಿಯರೂ ಅವನಲ್ಲಿ ಪ್ರಸನ್ನರಾಗಿದ್ದರು. ವೀರ್ಯಲಕ್ಷ್ಮಿ ಧೈರ್ಯ ಲಕ್ಷ್ಮಿ ಶೌರ್ಯ ಲಕ್ಷ್ಮಿ ಇತ್ಯಾದಿ. ಎಲ್ಲರೂ ಅವನ ಪತ್ನಿಯರಾಗಿದ್ದರು. ಎಲ್ಲರೂ ಭೂಮಿಯ ಜೊತೆ ಅವನ ಪತ್ನಿಯರಾಗಿದ್ದರು. ಅಂದರೆ ಯಯಾತಿಯು ಅಷ್ಟೈಶ್ವರ್ಯದಿಂದ ಕೂಡಿ ಭೂಮಂಡಲವನ್ನು ಧರ್ಮದಿಂದ ಪಾಲಿಸುತ್ತಿದ್ದನು.

ನಿದೇಶಂ ತಸ್ಯ ರಾಜಾನೋ ನಶೇಕುರತಿವರ್ತಿತುಂ।
ಪ್ರಾಪ್ತಸ್ವಪರ ನಿರ್ವಾಹಂ ಪ್ರಮಾಣಮಿವ ವಾದಿನಃ॥ ॥೧೮॥

ವಾದಿ ಪ್ರತಿವಾದಿಗಳು ಇಬ್ಬರೂ ನಿರ್ವಹಿಸುವ ವೇದವೆಂಬ ಪ್ರಮಾಣವನ್ನು ವೈದಿಕರುಗಳಾದ ವಾದಿಗಳು ಹೇಗೇ ಎತ್ತಿ ಹಿಡಿಯುವರೋ ಅದೇ ರೀತಿ ಆ ರಾಜನ ಆಜ್ಞೆಯನ್ನು ಅರಸರುಗಳು ಅನುಸರಿಸುತ್ತಿದ್ದರು. (ಯಯಾತಿ ಹಾಕಿದ ಮಾರ್ಗವನ್ನೇ ಇತರರೆಲ್ಲರೂ ಅನುಸರಿಸುತ್ತಿದ್ದರು).

ಯಯಾತಿಯ ಆದೇಶವನ್ನು ಎಲ್ಲಾ ಸಾಮಂತರ ರಾಜರೂ ಅಕ್ಷರಶಃ ಪಾಲಿಸುತ್ತಿದ್ದರು. ಎಲ್ಲರಿಗೂ ಅವನನ್ನು ಕಂಡರೆ ಗೌರವವಿದ್ದುದರಿಂದ, ಅವನು ಹಾಕಿದ ಶಾಸನವನ್ನು ಯಾರೂ ಮೀರುತ್ತಿರಲಿಲ್ಲ. ಇದಕ್ಕೆ ಒಂದು ಉಪಮಾನವನ್ನು ನೀಡಿದ್ದಾರೆ. ವೇದದ ಪ್ರಮಾಣವನ್ನು ಒಪ್ಪುವ ವಿಷಯದಲ್ಲಿ ವಾದಿ ಪ್ರತಿವಾದಿಗಳಿಬ್ಬರ ವಾದವನ್ನು ಕೇಳಿದ ನಂತರ ಯಾವ ರೀತಿ ಜ್ಞಾನಿಗಳಾದವರು ವೇದದ ಪ್ರಾಮಾಣ್ಯವನ್ನು ಎತ್ತಿ ಹಿಡಿಯುವ ವಾದಿಗಳ ಮತವನ್ನು ಮಾನ್ಯ ಮಾಡುವರೋ ಅದೇ ರೀತಿ ಭೂಮಂಡಲದ ರಾಜರು. ಯಯಾತಿಯು ಅನುಸರಿಸುವ ಸನ್ಮಾರ್ಗವನ್ನೇ ಅನುಸರಿಸುತ್ತಿದ್ದರು.

ತಟಾಕಮಿವ ತಾಪಾರ್ತಾ ಸ್ತಮಿಂದ್ರಮಿವ ನಿರ್ಜರಾಃ।
ಭಾವಾ ಇವ ರಸಂ ಭವ್ಯಾಃ ಪಾರ್ಥಿವಾಃ ಪರ್ಯುಪಾಸತ॥ ॥೧೯॥

ತಾಪಾರ್ತರಾದವರು ತಟಾಕದಲ್ಲಿ ನೆಮ್ಮದಿ ಪಡೆಯುವಂತೆ ದೇವತೆಗಳು ಇಂದ್ರನಲ್ಲಿ ಗೌರವವನ್ನು ತೋರುವಂತೆ, ಭಾವುಕರೆಲ್ಲರೂ ಕಾವ್ಯದ ರಸವನ್ನು ಆಸ್ವಾದಿಸುವಂತೆ, ಈ ಭೂಮಿಯ ರಾಜರೆಲ್ಲರೂ ಯಯಾತಿಯನ್ನು ಸೇವಿಸುತ್ತಿದ್ದರು.

ಈ ಶ್ಲೋಕದಲ್ಲಿಯೂ ಸಹ ಯಯಾತಿಯ ಹಿರಿಮೆಯನ್ನು ಹೇಳಿದ್ದಾರೆ. ನೀರಡಿಕೆಯಾದವರು ಹೇಗೆ ನದಿಯ ತೀರಗಳಲ್ಲಿ ತಮ್ಮ ಬಾಯಾರಿಕೆಯನ್ನು ತೀರಿಸಿಕೊಳ್ಳುತ್ತಾರೋ, ಹೇಗೆ ದೇವತೆಗಳೆಲ್ಲರೂ ಇಂದ್ರನಲ್ಲಿ ವಿಶೇಷ ಗೌರವವನ್ನು ತೋರುತ್ತಾರೋ ಮತ್ತು ಒಂದು ಉತ್ತಮ ಕಾವ್ಯದ ರಸ ವಿಶೇಷವನ್ನು ಭಾವುಕರೆಲ್ಲರೂ ಆಸ್ವಾದಿಸುವರೋ ಅದೇ ರೀತಿ ಭೂಮಂಡಲದ ಇತರ ರಾಜರೆಲ್ಲರೂ, ಯಯಾತಿಯನ್ನು ಗೌರವಿಸಿ ಸೇವಿಸುತ್ತಿದ್ದರು.

ಈ ಶ್ಲೋಕಕ್ಕೆ ಸ್ವಾಮಿ ಅಪ್ಪಯ್ಯ ದೀಕ್ಷಿತರು ದೀರ್ಘವಾದ ವ್ಯಾಖ್ಯಾನವನ್ನು ಬರೆದು ಕಾವ್ಯದ ಗುಣಗಳನ್ನು ಆಸ್ವಾದಿಸುವ ಭಾವುಕರನ್ನು ಸತಿಪತಿಗಳಂತೆ ಹೋಲಿಸಿ, ಯಾವ ರೀತಿ

ರತಿಸುಖದಲ್ಲಿ ಅವರು ತಮ್ಮನ್ನು ತಾವು ಮರೆಯುವರೋ, ಅದೇ ರೀತಿ ಸಹೃದಯರಾದವರು ಉತ್ತಮ ಕಾವ್ಯ ರಸಾಸ್ವಾದನೆಯಲ್ಲಿ ಇಹ ಸುಖವನ್ನು ಮರೆಯುತ್ತಾರೆ. ಕಾವ್ಯದ ಗುಣ ಅಂತಹುದು.

ಯದುರ್ನಾಮ ತತೋ ಜಜ್ಞೆ ಯತ್ಸಂತತಿ ಸಮುದ್ಭವೈಃ ।
ಸಮಾನ ಗಣನಾಲೇಖ್ಯೇ ನಿಸ್ಸಮಾನ್ಯೈರ್ನಿಷದ್ಯತೆ। ॥೨೦॥

ಅವನಲ್ಲಿ 'ಯದು' ಎಂಬ ಪ್ರಸಿದ್ಧ ಪುರುಷನು ಹುಟ್ಟಿದನು. ಅವನ ಸಂತತಿಯಲ್ಲಿ ಹುಟ್ಟಿದ್ದವರೆಲ್ಲರಿಗೂ ಈ ಭೂಮಿಯ ಒಡೆತನ ಇರಲಿಲ್ಲ. ಎಲ್ಲರೂ ಸಮಾನ ಗುಣರಾಗಿದ್ದು ಅವರಿಗೆಲ್ಲಾ ರಾಜ ಮಾನ್ಯತೆಯು ದೊರೆತಿತ್ತು.

ಯಾಯಾತಿಯ ನಾಲ್ಕು ಮಕ್ಕಳಲ್ಲಿ ಯದುವು ಒಬ್ಬನು. ಅವನೂ ಸಹ ಪ್ರಸಿದ್ಧ ಪುರುಷನೇ. ಪುರಾಣಗಳ ಪ್ರಕಾರ, ಯದುವು ತಂದೆಯಾದ ಯಯಾತಿಯ ಜರೆಯನ್ನು ತೆಗೆದುಕೊಳ್ಳಲು ನಿರಾಕರಿಸಿದ ಕಾರಣ, ಅವನಿಗೆ ರಾಜ್ಯಾಧಿಪತ್ಯದಲ್ಲಿ ಅಧಿಕಾರವಿಲ್ಲವೆಂಬ ತಂದೆಯ ಶಾಪದಿಂದ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಅವಕಾಶ ತಪ್ಪಿಹೋಯಿತು.

ಅವನ ವಂಶದಲ್ಲಿ ಹುಟ್ಟಿದವರೆಲ್ಲರೂ 'ಯಾದವ'ರೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಸಿಂಹಾಸನದಲ್ಲಿ ಕುಳಿತುಕೊಳ್ಳುವ ಅಧಿಕಾರವಿಲ್ಲದಿದ್ದರೂ ಎಲ್ಲರೂ ಮಹಾ ಶೂರರಾಗಿ ಕರ್ಮ ಪರಾಯಣರಾದ್ದರಿಂದ, ರಾಜ್ಯಮಾನ್ಯತೆ ದೊರೆತಿತ್ತು. ರಾಜ ಸಭೆಗಳಲ್ಲಿ ಉತ್ತಮೋತ್ತಮವಾದ ಆಸ[illegible]ಳಲ್ಲಿ ಆಸೀನರಾಗಿರುತ್ತಿದ್ದರು. ಜಗತ್ತೆಲ್ಲವನ್ನು ಪಾವನ ಮಾಡಿದ ಭಗವಾನ್ ಶ್ರೀಕೃಷ್ಣನು ಈ ಯದುವಿನ ವಂಶದಲ್ಲಿಯೇ ಅವತಾರ ಮಾಡಿದನು.

ದೇಹೀತಿ ವದತಾಂ ಪ್ರಾಯಃ ಪ್ರಸೀದನ್ ಪ್ರತ್ಯುವಾಚ ಸಃ।
ಲಲಿತ ಧ್ವನಿರ್ಭಿಲಕ್ಷ್ಮೀ ಲೀಲಾ ಕಮಲಷಟ್ಪದೈಃ ॥ ॥೨೧॥

ಧ್ವಂಸ ಮಾಡಬೇಕು ಎನ್ನುವವರಲ್ಲಿ ಉದಾರವಾಗಿ ವರ್ತಿಸಿ ಲಕ್ಷ್ಮೀದೇವಿಯ ಕೈಯ್ಯಲ್ಲಿರುವ ಕಮಲದ ಹೂವಿನಲ್ಲಿರುವ ದುಂಬಿಗಳ ಧ್ವನಿಯಂತೆ (ಇಂಪಾದ ಧ್ವನಿಯಂತೆ) ಯದು ಮಹಾರಾಜನು ವರ್ತಿಸುತ್ತಿದ್ದನು.

ಯದು ಮಹಾರಾಜನು ಬಹಳ ದಯಾಳು ಮತ್ತು ಹೃದಯವಂತನಾಗಿದ್ದನು. ದುಷ್ಟರ ವಿಷಯದಲ್ಲೂ ಸಹ ಸಹನೆಯಿಂದ ವರ್ತಿಸುತ್ತಿದ್ದನು. ಶ್ರೀರಾಮನನ್ನು ''ರಿಪುಣಾಮಪಿ ವತ್ಸಲಃ'' ಎಂದು ವಾಲ್ಮೀಕಿಗಳು ಕರೆದಿದ್ದಾರೆ. ಲಕ್ಷ್ಮೀದೇವಿಯ ಕೈಯ್ಯಲ್ಲಿ ಯಾವಾಗಲೂ ಕಮಲವಿರುತ್ತದೆ. ಅದರ ಸುವಾಸನೆಗೆ ದುಂಬಿಗಳು ಮುತ್ತಿಕೊಂಡು ತಮ್ಮ ಝೇಂಕಾರ ಧ್ವನಿಯನ್ನು ಮಾಡುತ್ತಿರುತ್ತವೆ. ಅದು ಕೇಳಲು ಬಹು ಇಂಪಾಗಿರುತ್ತದೆ. ಅದೇ ರೀತಿ ಯದುವಿನ ವರ್ತನೆಯೂ ದುಷ್ಟರ ವಿಷಯದಲ್ಲೂ ಸಹ ಬಹಳ ಶಾಂತಿಯುತವಾಗಿದ್ದು ದುಷ್ಟರು ಬಹು ಬೇಗ ಸಜ್ಜನರಾಗುತ್ತಿದ್ದರು ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಸ ಚ ವೃತ್ತ ವಿಹೀನಸ್ಯ ನ ವಿದ್ಯಾಂ ಬಹ್ವ ಮನ್ಯತ ।
ನ ಶುದ್ಧೇತಿ ಗುಹ್ಯೇತ್ತ ಚತುರ್ಥೀ ಚಂದ್ರ ಚಂದ್ರಿಕಾ ॥ ॥೨೨॥

ಆ ಯದು ಮಹಾರಾಜನು ಒಳ್ಳೆಯ ನಡತೆಯಿಲ್ಲದವರನ್ನು ಅವರು ವಿದ್ಯಾವಂತ ರಾಗಿದ್ದರೂ ಆದರಿಸುತ್ತಿರಲಿಲ್ಲ. ಭಾದ್ರಪದ ಮಾಸದ ಚತುರ್ಥಿಯ ದಿನದಂದು ಎಷ್ಟೇ ಚೆನ್ನಾಗಿ ಬೆಳದಿಂಗಳಿದ್ದರೂ, ಚಂದ್ರನನ್ನು ಯಾರೂ ನೋಡುವುದಿಲ್ಲವಲ್ಲ.

ಆ ಯದು ಮಹಾರಾಜನು ಬಹಳ ಕರುಣೆಯುಳ್ಳವನಾಗಿದ್ದರೂ, ಒಳ್ಳೆಯ ನಡತೆಯಿಲ್ಲದ ಪ್ರಜೆಗಳನ್ನು ಗೌರವಿಸುತ್ತಿರಲಿಲ್ಲ. ''ವಿದ್ಯಾ ದದಾತಿ ವಿನಯಂ'' ಎಂಬುದಾಗಿ ವಿದ್ಯೆಯು ಮನುಷ್ಯನಿಗೆ ವಿನಯವನ್ನು ನೀಡಬೇಕು. ''ದುರ್ಜನಃ ಪರಿಹರ್ತವ್ಯಂ ವಿದ್ಯೆಯಾ ಅಲಂಕೃತೋಪಿ ಸನ್। ಮಣಿನಾ ಭೂಷಿತಂ ಸರ್ಪಃ ಕಿಮಸೌ ನ ಭಯಂಕರಃ'' ಎಂಬ ಸುಭಾಷಿತ ವಾಣಿಯಿದೆ. ವಿದ್ಯಾವಂತರಾಗಿದ್ದರೂ, ಒಳ್ಳೆಯ ನಡತೆಯಿಲ್ಲದವರು ತಿರಸ್ಕೃತರೇ ಸರಿ. ಇದಕ್ಕೆ ಒಂದು ಸುಂದರ ಉಪಮಾನ ನೀಡಿದ್ದಾರೆ. ಚೌತಿಯ ಚಂದ್ರನು ನೋಡಲು ಬಲು ಸುಂದರ ನಾಗಿದ್ದಾನೆ. ಆದರೆ ಗಣೇಶ ಚೌತಿಯಂದು (ಭಾದ್ರಪದ ಚತುರ್ಥಿ) ಯಾರೂ, ಚಂದ್ರನು ಸುಂದರನಾಗಿದ್ದಾನೆಂದು ಅವನನ್ನು ನೋಡುವುದಿಲ್ಲ. ಪುರಾಣ ಕತೆಯ ಪ್ರಕಾರ ಚಂದ್ರನಿಗೆ ಶಾಪವಿದ್ದು ಅಂದು ಅವನನ್ನು ನೋಡಿದವರು ವೃಥಾ ಅಪವಾದಕ್ಕೆ ಒಳಗಾಗು ತ್ತಾರೆ. ಅದೇ ರೀತಿ ಯದು ಮಹಾರಾಜನು ಸನ್ನಡತೆಯಿಲ್ಲದ ವಿದ್ಯಾವಂತರನ್ನು ಮಾನ್ಯ ಮಾಡುತ್ತಿರಲಿಲ್ಲ.

ಅಪುನಃ ಪ್ರಾರ್ಥನೀಯಸ್ಯ ಪ್ರಾರ್ಥಿತಾಧಿಕದಾಯಿನಃ ।
ಅರ್ಥಿನಃ ಪ್ರಥಮೇ ತಸ್ಯ ಚರಮಾನ್ ಪರ್ಯ ಪೂರಯನ್ ॥ ॥೨೩॥

ಯಾಚಕರಾದವರು ಯದು ಮಹಾರಾಜನ ಬಳಿ ಪ್ರಾರ್ಥನೆ ಮಾಡಿಕೊಂಡು ಮೊದಲು ಅವನಿಂದ ಉಪಕೃತರಾದವರು ಆಮೇಲೆ ಬರುವ ಯಾಚಕರಿಗೆಲ್ಲರಿಗೂ ತಾವೇ ಸಹಾಯ ಮಾಡುತ್ತಿದ್ದರು. (ಅಂದರೆ ಎಲ್ಲರಿಗೂ ಧಾರಾಳವಾಗಿ ದಾನ ಮಾಡುತ್ತಿದ್ದ ಯದು ಮಹಾರಾಜ).

ಯದು ಮಹಾರಾಜನು ಮತ್ತೊಬ್ಬ ದಾನಶೂರ ಕರ್ಣನಂತೆ. ಅವನ ಬಳಿಗೆ ಬಂದವರಿಗೆಲ್ಲಾ ಯಥೇಚ್ಛವಾಗಿ ದಾನವನ್ನು ಮಾಡುತ್ತಿದ್ದನು. ಅವನ ಬಳಿಯಿಂದ ದಾನಗಳನ್ನು ಪಡೆದ ಅನೇಕರು ತಾವೂ ಸಹ ಇತರರಿಗೆ ದಾನ ಮಾಡುವ ಸ್ಥಿತಿಯನ್ನು ಹೊಂದುತ್ತಿದ್ದರೆಂದರೆ, ಯದುವಿನ ದಾನದ ಪ್ರಮಾಣವನ್ನು ತಿಳಿಯಬಹುದು.

ಬಲಿ ಚಕ್ರವರ್ತಿಯು ವಾಮನನಿಗೆ ಕೇವಲ ಮೂರಡಿ ನೆಲವನ್ನು ದಾನವಾಗಿ ನೀಡುವಾಗ ಹೇಳುತ್ತಾನೆ. 'ನನ್ನಿಂದ ದಾನ ಪಡೆದವರು ಮತ್ತೊಬ್ಬರಿಂದ ಮತ್ತೆ ದಾನ ಪಡೆಯಬಾರದು ಎನ್ನುವುದು ನನ್ನ ನಿಯಮ' ಎಂಬುದಾಗಿ. ಅದೇ ರೀತಿ ಯದು ಮಹಾರಾಜನಿಂದ ದಾನ ಪಡೆದವರು ತಾವೂ ಶ್ರೀಮಂತರಾಗಿ, ಅವರುಗಳೇ ದಾನ ಮಾಡುವ ಸ್ಥಿತಿಗೆ ಬರುತ್ತಿದ್ದರು.

ಶರಾಣಾಂ ಶಾತ್ರವಾಣಾಂ ಚ ಸಂಧಾನೇನ ಮಹೌಜಸಃ।
ತಸ್ಯ ನಿರ್ಧೂತ ಲಕ್ಷೇಣ ದ್ವಿಃ ಕ್ವಚಿನ್ನಾಪ್ಯಭೂಯತ॥ ॥೧೪॥

ಅತ್ಯಂತ ಶೂರನಾದ ಅವನ ಬಾಣಗಳ ಹೊಡೆತವು ಒಡನೆಯೇ ಗುರಿಯನ್ನು ತಲುಪುವುವಾದುದರಿಂದ ಮತ್ತೆ ಅವನು ಶರಸಂಧಾನ ಮಾಡುವ ಅಗತ್ಯ ಇರಲಿಲ್ಲ. ಅವನ ವೈರಿಗಳು ಬಹುಬೇಗ ನಿಗ್ರಹಿಸಲ್ಪಡುತ್ತಿದ್ದರು.

ಈ ಶ್ಲೋಕದಲ್ಲಿ ಯದುವಿನ ಪರಾಕ್ರಮವನ್ನು ವರ್ಣಿಸಿದ್ದಾರೆ. ಯದುವು ಮಹಾ ಶೂರನಾಗಿದ್ದನು.

ಯುಕ್ತ ದಂಡ ಮಮಿತ್ರಾಣಾಂ ಕೃತಾಂತಂ ಸಮವರ್ತಿನಂ।
ದಕ್ಷಿಣಂ ಲೋಕಪಾಲಂ ತಮಮನ್ಯಂತ ದಿವೌಕಸಃ ॥ ॥೧೫॥

ಯಾವಾಗಲೂ ದೇವತೆಗಳು ಯುಕ್ತದಂಡನೂ, ಕೃತಾಂತನೂ, ಸಮವರ್ತಿಯೂ ದಕ್ಷಿಣ ಲೋಕಪಾಲನೂ ಆದವನನ್ನು ನೋಡಿಕೊಂಡೇ ಇರುವುದರಿಂದ, ಈ ಅರಸನನ್ನು ಅದೇ ರೀತಿ ಭಾವಿಸಿದರು. ಇದರಿಂದ ನೀತಿಯೂ, ಧರ್ಮವೂ ನೆಲೆಗೊಂಡಿತ್ತು. ದಕ್ಷಿಣ ದಿಕ್ಪಾಲಕನು ಉತ್ತರ ದಿಕ್ಪಾಲಕನಾದನು. ಶಾಸ್ತ್ರವಿರೋಧಿಗಳಿಗೆ ದಂಡವನ್ನು ಪ್ರಯೋಗಿಸುತ್ತಿದ್ದನು.

ಈ ಶ್ಲೋಕದಲ್ಲಿ ಯದುವಿನ ಸಾಮರ್ಥ್ಯದ ಬಗ್ಗೆ ಹೇಳಿದೆ. ಯದುವು ದಂಡಿಸುವವರನ್ನು ದಂಡಿಸದೆ ಇರುತ್ತಿರಲಿಲ್ಲ. ವಿನಾ ಕಾರಣ ಯಾರನ್ನೂ ದಂಡಿಸುತ್ತಿರಲಿಲ್ಲ. ದಂಡವೆಂಬುದು ಕ್ಷತ್ರಿಯರಿಗೆ ಅವಶ್ಯ ಇರಲೇಬೇಕಾದ ಗುಣ. ದಯಾಳುವಾಗಿದ್ದರೂ ಯುಕ್ತ ಕಾಲದಲ್ಲಿ ತಪ್ಪಿತಸ್ಥರನ್ನು ದಂಡಿಸದಿದ್ದರೆ ಲೋಕದಲ್ಲಿ ಅರಾಜಕತೆ ಉಂಟಾಗುತ್ತದೆ.

ಇದೇ ಗುಣಗಳನ್ನು ವಾಲ್ಮೀಕಿಗಳು ಶ್ರೀ ರಾಮನಲ್ಲಿ ಕಂಡಿದ್ದಾರೆ. ಶತ್ರುಗಳಲ್ಲಿ ಕಾಠಿಣ್ಯವೂ, ಮಿತ್ರರುಗಳಲ್ಲಿ ವಾತ್ಸಲ್ಯವೂ ರಾಜರುಗಳಲ್ಲಿ ಇರಬೇಕಾದ ಮುಖ್ಯ ಗುಣಗಳು. ಯದುರಾಜನು ಅದೆಲ್ಲವನ್ನೂ ಹೊಂದಿದ್ದರಿಂದ ಪ್ರಜಾನುರಾಗಿಯಾಗಿದ್ದನು. ರಾಜ ಶಾಸನದಲ್ಲಿ ಪ್ರವೀಣನಾಗಿ ಎಲ್ಲ ಲೋಕಗಳಿಗೂ ದಿಕ್ಪಾಲಕನಾದನು ಎಂದರ್ಥ.

ಯಶಃ ಪ್ರಸೂನ ಸುರಭಿರ್ಯದು ಸಂತಾನ ಪಾದಪಃ।
ಬಭೂವ ವಿಭುದಪ್ರೀತ್ಯೈ ಬಹುಶಾಖಃ ಕ್ಷಮಾತಲೇ॥ ॥೧೬॥

ಹಿಂದೆ ಹೇಳಿದ ಯದು ಎಂಬ ಸಂತಾನ ಕಲ್ಪವೃಕ್ಷವಾದುದು ಪ್ರಸಿದ್ಧವಾದ ಪುಷ್ಪಗಳಿಂದ ಸೂಸುವ ಪರಿಮಳಗಳ ಕವಲುಗಳಾಗಿ ಪ್ರಸರಿಸಿ ಬಹುಶಾಖೆಗಳಾಗಿ ಬೆಳೆದವು. ಯದುವಿನ ವಂಶವು ಒಂದು ದೊಡ್ಡ ಕಲ್ಪವೃಕ್ಷದ ಶಾಖೆಗಳು ಅನೇಕ ವಿಧವಾಗಿ ಬೆಳೆಯುವಂತೆ ಭೂಲೋಕದಲ್ಲಿ ಬೆಳೆಯಿತು. ಕಲ್ಪವೃಕ್ಷಕ್ಕೆ ಹೋಲಿಸಿರುವುದರಿಂದ, ಆ ವಂಶದಲ್ಲಿ ಹುಟ್ಟಿದ ಎಲ್ಲರೂ

ಧಾರ್ಮಿಕರಿಗೆ ಜನಾನುರಾಗಿಗಳಾಗಿ ಲೋಕೋಪಕಾರಿಗಳಾಗಿದ್ದರು ಎಂಬುದು ಸೂಚಿತವಾಗುತ್ತದೆ. ಅಂತೆಯೇ ಪುಷ್ಪಗಳು ಎಲ್ಲೆಡೆ ತಮ್ಮ ಪರಿಮಳವನ್ನು ಬೀರುವಂತೆ ಯದುವಿನ ವಂಶದಲ್ಲಿ ಹುಟ್ಟಿದವರೆಲ್ಲರೂ ಸದ್ಗುಣಗಳಿಂದ ಕಂಗೊಳಿಸುತ್ತಿದ್ದರು.

ವಂಶೇ ಸಮಭವತ್ ತಸ್ಯ ವಸುದೇವಃ ಕ್ಷಿತೀಶ್ವರಃ।
ಜನಕಃ ಪ್ರಾಗ್ಭವೇ ಯೋऽಭೂತ್ ದೇವ ದಾನವ ಯೂಥಯೋಃ॥ ॥೧೭॥

ಆ ಯದುವಿನ ವಂಶದಲ್ಲಿ ವಸುದೇವನೆಂಬ ಅರಸನು ಉದಯಿಸಿದನು. ಇವನು ಹಿಂದಿನ ಜನ್ಮದಲ್ಲಿ ದೇವಾಸುರರಿಗೆಲ್ಲಾ ತಂದೆಯಾದ ಕಶ್ಯಪ ಪ್ರಜಾಪತಿಯಾಗಿದ್ದನು.

ಈ ಶ್ಲೋಕದಿಂದ ಆರಂಭಿಸಿ, ಶ್ರೀಕೃಷ್ಣನ ವಂಶಾವಳಿಯನ್ನು ಆರಂಭಿಸುತ್ತಾರೆ. ಯದುವಿನ ವಂಶದಲ್ಲಿ ಅನೇಕ ಶೂರರು, ಜ್ಞಾನಿಗಳೂ, ರಾಜ ಪುರುಷರು ಜನಿಸಿದರೆಂದು ಹಿಂದೆ ಹೇಳಿದೆಯಷ್ಟೆ. ಅದರಂತೆ ಈ ವಂಶದಲ್ಲಿ ವಸುದೇವನೆಂಬ ಅರಸನು ಜನ್ಮತಾಳಿದನು. ಈತನು ಮಹಾ ಕೀರ್ತಿಶಾಲಿ. ಇವನೇ ಈ ಮಹಾಕಾವ್ಯದ ಕಥಾ ನಾಯಕನಾದ ಭಗವಾನ್ ಶ್ರೀಕೃಷ್ಣನ ಪಿತನು. ಇವನು ಹಿಂದಿನ ಜನ್ಮದಲ್ಲಿ ಕಶ್ಯಪ ಪ್ರಜಾಪತಿಯಾಗಿದ್ದು ದೇವಾಸುರರಿಗೆಲ್ಲಾ ತಂದೆಯಾಗಿದ್ದನು. ಯಾವುದೋ ಒಂದು ಶಾಪದ ಕಾರಣದಿಂದ ಭೂಮಿಯಲ್ಲಿ ವಸುದೇವನಾಗಿ ಜನಿಸಿ ರೋಹಿಣಿ, ದೇವಕಿ ಎಂಬ ಪತ್ನಿಯರನ್ನು ಹೊಂದಿದ್ದನು ಎಂದು ಹರಿವಂಶದಲ್ಲಿ ಹೇಳಿದೆ.

ಆನಕಾನಾಂಚ ದಿವ್ಯಾನಾಂ ದುಂದುಭಿನಾಂಚ ನಿಸ್ವನೈಃ।
ಸಹ ಜಾತಂ ಯಮಾಚಖ್ಯುರಾಖ್ಯಾಯಯಾ ಆನಕದುಂದುಭಿಂ॥ ॥೧೮॥

ಅವನು ಹುಟ್ಟಿದ ಸಮಯದಲ್ಲಿ ಶ್ರೀಕೃಷ್ಣನಿಗೆ ತಂದೆಯಾಗುತ್ತಾನೆಂಬ ಕಾರಣದಿಂದ 'ದುಂದುಭಿ ಆನಕ'ವೆಂಬ ದೇವಲೋಕದ ನಗಾರಿಯನ್ನು ಬಾರಿಸಲಾಯಿತು. ಆದ್ದರಿಂದ ಇವನಿಗೆ 'ಆನಕ ದುಂದುಭಿ' ಎಂದು ಹೆಸರಾಯಿತು.

ಇವನು ಜಗದ್ಗುರುವಾದ ಶ್ರೀಕೃಷ್ಣನಿಗೆ ತಂದೆಯಾಗುತ್ತಾನೆಂಬುದನ್ನು ಸೂಚಿಸಲು, ಇವನು ಹುಟ್ಟುವ ಕಾಲಕ್ಕೆ ದೇವಲೋಕದಲ್ಲಿ 'ದುಂದುಭಿ' ಎಂಬ ನಗಾರಿಯನ್ನು ಭಾರಿಸಿ ''ಪುಷ್ಪವೃಷ್ಟಿ''ಯನ್ನು ದೇವತೆಗಳು ಸುರಿಸಿದರು. ಇದರಿಂದ ವಸುದೇವನಿಗೆ 'ಆನಕ ದುಂದುಭಿ' ಎಂಬ ಹೆಸರೂ ಬಂದಿತು.

ಇವನಿಗೆ ಇಬ್ಬರು ಕುಮಾರರೆಂದೂ, ಶ್ರೀಕೃಷ್ಣ, ಬಲರಾಮರೆಂಬ ಶ್ರೀ ವಿಷ್ಣುವಿನ ಅವತಾರ ರೂಪವೆಂದೂ, ರಜಸ್ಸು, ತಮಸ್ಸು ಗುಣಗಳನ್ನು ನಾಶ ಮಾಡುವ 'ದುಂದುಭಿ' ಎಂಬ ವಾದ್ಯಘೋಷವನ್ನು ಮಾಡಲಾಯಿತು.

ತೇನ ನಿರ್ಮಲ ಸತ್ವೇನ ವಿನಿವೃತ್ತ ರಜಸ್ತಮಾಃ।
ಜಗತೀ ಶಾಂತ ಮೋಹೇವ ಧರ್ಮೋತ್ ಶ್ವಾಸವತೀ ಬಭೌ॥ ॥೧೯॥

ರಜೋಗುಣ, ತಮೋಗುಣವೆಂಬವುಗಳನ್ನು ಮೀರಿ ಕೇವಲ ಸತ್ವಗುಣ ಪ್ರಧಾನರಾದ ಅವನಿಂದ ಭೂಮಿಯು ಯಾವಾಗಲೂ ಧರ್ಮದ ಉಸಿರನ್ನೇ ಆಡುತ್ತಾ ಶಾಂತವಾಗಿತ್ತು.

ವಸುದೇವನ ಗುಣಗಳನ್ನು ಇಲ್ಲಿ ಹೇಳಲಾಗಿದೆ. ಒಬ್ಬ ಮನುಷ್ಯನಲ್ಲಿ ಯಾವಾಗಲೂ ನಿಗದಿತ ಪ್ರಮಾಣದಲ್ಲಿ ಸತ್ವ, ರಜಸ್ಸು, ತಮೋಗುಣಗಳು ಇದ್ದೇ ಇರುತ್ತವೆ. ಆದರೆ ಯಾರಲ್ಲಿ ಸತ್ವಗುಣವು ಹೆಚ್ಚಾಗಿದ್ದು, ರಜೋಗುಣ ಮತ್ತು ತಮೋಗುಣಗಳು ಕಡಿಮೆ ಪ್ರಮಾಣದಲ್ಲಿ ಇರುವುದೋ, ಅಂಥವನನ್ನು 'ಪರಮ ಸಾತ್ವಿಕ'ನೆನ್ನುತ್ತಾರೆ. ಭಗವದ್ಗೀತೆಯಲ್ಲಿ ಈ ಮೂರು ಗುಣದ ಬಗ್ಗೆ ವಿವರವಾದ ನಿರೂಪಣೆಯಿದ್ದು ಗುಣಾತೀತನ ಲಕ್ಷಣಗಳನ್ನು ವರ್ಣಿಸ ಲಾಗಿದೆ. ವಸುದೇವನು ರಜೋಗುಣ, ತಮೋಗುಣಗಳನ್ನು ಮೀರಿ ಕೇವಲ ಸಾತ್ವಿಕ ಗುಣದಲ್ಲಿಯೇ ಯಾವಾಗಲೂ ಇರುತ್ತಾ ಧರ್ಮವನ್ನೇ ತನ್ನ ಉಸಿರನ್ನಾಗಿ ಮಾಡಿಕೊಂಡು ಸರ್ವದಾ ಶಾಂತನಾಗಿದ್ದನು. ಗುಣಾತೀತನ ಲಕ್ಷಣಗಳನ್ನೆಲ್ಲಾ ವಸುದೇವನಲ್ಲಿ ಕಾಣ ಬಹುದಿತ್ತು.

ಸ ವಿಷ್ಣುರಿವ ಲೋಕಾನಾಂ ತಪನಸ್ತೇಜಸಾಮಿವ ।
ಸಮುದ್ರ ಇವ ರತ್ನಾನಾಂ ಸತಾಮೇಕಾಶ್ರಯೋ ಭವತ್ ॥೨೦॥

ಅವನು ಜಗತ್ತಿಗೆಲ್ಲಾ ವಿಷ್ಣುವಿನಂತೆಯೂ, ತೇಜಸ್ಸುಗಳಿಗೆ ಸೂರ್ಯನಂತೆಯೂ, ರತ್ನಗಳಿಗೆಲ್ಲಾ ಸಮುದ್ರದಂತೆಯೂ ಸತ್ಪುರುಷರಿಗೆ ಆಶ್ರಯದಾತನೂ ಆಗಿದ್ದನು.

ಈ ಶ್ಲೋಕದಲ್ಲಿಯೂ ವಸುದೇವನ ಗುಣಗಳನ್ನೇ ಇನ್ನಷ್ಟು ವಿಸ್ತಾರವಾಗಿ ಹೇಳಲಾಗಿದೆ. ಶ್ರೀರಾಮನ ಗುಣಗಳನ್ನು ಶ್ರೀರಾಮಾಯಣದ ಮೊದಲ ಶ್ಲೋಕದಲ್ಲಿಯೇ ವಿಸ್ತಾರವಾಗಿ ವಾಲ್ಮೀಕಿಗಳು ವಿಶದೀಕರಿಸಿದ್ದಾರೆ. ಅದೇ ರೀತಿ ಇಲ್ಲಿಯೂ ಸಹ ವಸುದೇವನ ಗುಣಗಳನ್ನು ಶ್ರೀ ವೇದಾಂತ ದೇಶಿಕರು ಹೇಳಿದ್ದಾರೆ.

ವಿಷ್ಣುವನ್ನೂ, ಸೂರ್ಯನನ್ನೂ, ಸಮುದ್ರವನ್ನೂ ಅವನಿಗೆ ಹೋಲಿಸಿ, ಸತ್ಪುರುಷರೆಲ್ಲರೂ ಅವನನ್ನೇ ತಮ್ಮ ಇಷ್ಟಾರ್ಥಗಳ ಪೂರ್ತಿಗಾಗಿ ಆಶ್ರಯಿಸುತ್ತಿದ್ದರು ಎಂದಿದ್ದಾರೆ. ಪ್ರತಿಯೊಬ್ಬ ರಾಜನಲ್ಲಿಯೂ ಇರಲೇಬೇಕಾದ ಗುಣಗಳಿವು.

ಪ್ರಖ್ಯಾತ ವಿಭವೇ ಪತ್ನ್ಯೌ ತಸ್ಯ ಪೂರ್ವಮ್ ಪ್ರಜಾಪತೇಃ।
ರೋಹಿಣಿ ದೇವಕೀ ರೂಪೇ ಮನುಷ್ಯತ್ವೇ ಬಭೂವತುಃ॥ ॥೨೧॥

ಹಿಂದಿನ ಜನ್ಮದಲ್ಲಿ ಪ್ರಜಾಪತಿಯಾಗಿದ್ದ ವಸುದೇವನಿಗೆ ಹಿರಿಮೆಯನ್ನು ಹೊಂದಿದ್ದ ಇಬ್ಬರು ಮಹಿಳೆಯರು ಈ ಜನ್ಮದಲ್ಲಿ ರೋಹಿಣಿ, ದೇವಕಿ ಎಂಬ ಪತ್ನಿಯರಾಗಿ ಜನಿಸಿದರು.

ಕಶ್ಯಪ ಪ್ರಜಾಪತಿಗೆ ಸುರಭಿ, ಅದಿತಿ ಎಂಬ ಇಬ್ಬರು ಪತ್ನಿಯರಿದ್ದರು. ಕಶ್ಯಪ ಪ್ರಜಾಪತಿಯು ವಸುದೇವನಾಗಿ ಜನ್ಮತಾಳಿದಾಗ, ಈ ಈರ್ವರೂ ದೇವಕಿ, ರೋಹಿಣಿಯರಾಗಿ ಜನ್ಮ ತಾಳಿ ವಸುದೇವನಿಗೆ ಪತ್ನಿಯರಾದರು. ಈ ಇಬ್ಬರೂ ಭಗವಂತನ ಅವತಾರಗಳಾದ ಶ್ರೀಕೃಷ್ಣ- ಬಲರಾಮರಿಗೆ ಜನನಿಯರಾದರು.

ಅಕ್ಷುದ್ರ ಗತಿಶಾಲಿನ್ಯೋಃ ಸ್ತಯೋರನ್ಯೋನ್ಯ ಸಕ್ತಯೋಃ।
ಏಕರಸ್ಯಮಭೂತ್ ಪತ್ಯಾ ಗಂಗಾ ಯಮುನಯೋರಿವ ॥ ॥೨೧॥

ಸಮುದ್ರದಂತೆ ಇದ್ದ ವಸುದೇವನಿಗೆ ಈ ಇಬ್ಬರು ಪತ್ನಿಯರೂ ಗಂಗೆ, ಯಮುನೆಯಂತೆ ಇದ್ದರು. ಗಂಗೆ ಮತ್ತು ಯಮುನಾ ನದಿಗಳು ಹೇಗೆ ಬಹಳ ಅನ್ಯೋನ್ಯವಾಗಿ ಒಂದಾಗಿವೆಯೋ ಅದೇ ರೀತಿ ಈ ಇಬ್ಬರು ಪತ್ನಿಯರೂ ಸಹ. ಯಾವ ರೀತಿ ಎರಡು ನದಿಗಳು ಪ್ರಯಾಣದಲ್ಲಿ ಒಟ್ಟಿಗೇ ಸೇರಿ, ಸಮುದ್ರವನ್ನು ತಲುಪಿ, ಅಲ್ಲಿ ಸಮುದ್ರ ರಾಜನ ಉಪ್ಪಿನ ನೀರಿನ ಗುಣವನ್ನು ಹೊಂದುತ್ತವೆಯೋ ಅದೇ ರೀತಿ ಇವರಿಬ್ಬರೂ ಬಹಳ ಅನ್ಯೋನ್ಯತೆಯಿಂದ ವಸುದೇವನನ್ನು ಸೇವಿಸಿಕೊಂಡಿದ್ದರು.

ಈ ಇಬ್ಬರು ಪತ್ನಿಯರಲ್ಲಿ ಯಾವ ರೀತಿಯಾದ ಸವತಿ ಮಾತ್ಸರ್ಯವಿರಲಿಲ್ಲ. ಇವರಿಬ್ಬರೂ ಏಕಮನಸ್ಸಿನಿಂದ ವಸುದೇವನ ಸುಖ-ದುಃಖಗಳಲ್ಲಿ ಭಾಗಿಯಾಗಿ ಆದರ್ಶ ಪತ್ನಿಯರೆಂದು ಎನಿಸಿಕೊಂಡಿದ್ದರು. ಅದಕ್ಕೆ ನದಿಗಳಾದ ಗಂಗೆ-ಯಮುನೆಗಳ ಸಾದೃಶ್ಯವನ್ನು ನೀಡಿದ್ದಾರೆ. ಗಂಗೆ-ಯಮುನೆಯರು ಬೇರೆ ಬೇರೆ ಕಡೆಯಿಂದ ಹರಿದು ಬಂದರೂ ಪ್ರಯಾಗದಲ್ಲಿ ಒಂದಾಗಿ ಸೇರಿ ಸಮುದ್ರ ರಾಜನನ್ನು ಸೇವಿಸುತ್ತಾ, ಸಮುದ್ರದ ನೀರಿನ ಲವಣ ಸ್ವಭಾವವನ್ನು ಹೊಂದುತ್ತವೆ.

ಸ ತಾಭ್ಯಾಮನುರೂಪಾಭ್ಯಾಂ ಸಮತುಷ್ಯತ್ ಸಮೇಯಿವಾನ್।
ವ್ಯಕ್ತಿಹೇತುರಭೂತ್ ಯೇನ ಸಪರ್ಯಂಕಸ್ಯ ಶಾಂರ್ಙ್ಗಿಣಃ॥ ॥೨೨॥

ಆ ವಸುದೇವನು ಈ ಇಬ್ಬರು ಮಹಿಷಿಯರೊಡನೆ ಸುಖವಾಗಿ ಬಾಳುತ್ತಿದ್ದನು. ಅದರಿಂದ ಅವನಲ್ಲಿಯೇ ಶೇಷನೊಡಗೂಡಿ ಶ್ರೀಮನ್ನಾರಾಯಣನು ಆವಿರ್ಭವಿಸಿದನು.

ಭಗವಂತನು ಕೃಷ್ಣಾವತಾರ ಮಾಡಲು, ತನಗೆ ಯೋಗ್ಯನಾದ ಪಿತಾ ಯಾರೆಂದು ಚಿಂತಿಸುತ್ತಿರುವಾಗ ಇಬ್ಬರು ಮಹಿಷಿಯರೊಡಗೂಡಿದ ಏಕ ಪರ್ಯಂಕದಲ್ಲಿ ಸಂತೋಷದಿಂದ ಬಾಳುತ್ತಿದ್ದ ವಸುದೇವನನ್ನು ಕಂಡು ಅವನೇ ತನಗೆ ಪಿತನಾಗಲು ಯೋಗ್ಯನೆಂದು ಭಾವಿಸಿದನು. ತಾನೂ ಸಹ ತನ್ನ ಪರ್ಯಂಕವಾದ ಶೇಷನೊಡನೆ ಅವತಾರ ಮಾಡಲು ಸರಿಯಾದ ವ್ಯಕ್ತಿಯೆಂದು ವಸುದೇವನನ್ನೇ ಆರಿಸಿಕೊಂಡನು.

ಅಲಿಪ್ಸತ ನ ಸಾಮ್ರಾಜ್ಯಂ ಸೋಽರ್ಥ ಕಾಮ ಪರಾಙ್ಮುಖಃ।
ಯದೃಚ್ಛಾಗತಮೈಶ್ವರ್ಯ ಮಾನೃಣ್ಯ ರುಚಿರನ್ವಭೂತ್॥ ॥೨೪॥

ವಸುದೇವನಿಗೆ ಅರ್ಥ ಕಾಮಗಳಲ್ಲಿ ಹೆಚ್ಚಾಗಿ ಆಸಕ್ತಿ ಇಲ್ಲದಿದ್ದ ಕಾರಣ, ಅವನು ರಾಜ್ಯವನ್ನು ಆಳಲು ಇಚ್ಛಿಸಲಿಲ್ಲ. ತಮಗೆ ದೊರೆತ ಐಶ್ವರ್ಯದಲ್ಲೇ ಸಂತೋಷದಿಂದ "**ಯದೃಚ್ಛಯಾ ಲಾಭ ಸಂತುಷ್ಟಃ**" ಎಂಬಂತಿದ್ದನು.

ವಸುದೇವನು ದುರಾಶೆ ಉಳ್ಳವನಾಗದೆ, ಭಗವಂತನು ದಯಪಾಲಿಸಿದ ಐಶ್ವರ್ಯದಲ್ಲಿ ತೃಪ್ತನಾಗಿ ಸಂತುಷ್ಟಿಯಿಂದ ಇದ್ದನು. ಯಾವ ಪ್ರಲೋಭನೆಗೂ ಒಳಗಾಗದೆ ದೈವಲಬ್ಧ ವಾದುದರಲ್ಲಿ ಜೀವನ ನಿರ್ವಹಿಸುತ್ತಿದ್ದ ಅವನಿಗೆ ಯಾವ ಚಿಂತೆಯೂ ಇರಲಿಲ್ಲ.

ಕಯಾಚಿದ ಶರೀರಿಣ್ಯ ವಾಚಾ ವ್ಯವಸಿತಾಯತಿಃ।
ದೇವಕೀ ವಸುದೇವಂ ಚ ಕಂಸಃ ಕಾರಾಮ ಯೋಜಯತ್॥ ॥೨೫॥

ಕಂಸನು ದೇವಕಿಯಲ್ಲಿ ಹುಟ್ಟುವ ಮಗನು ತನಗೆ ಮೃತ್ಯುವಾಗುವನೆಂಬ ಅಶರೀರ ವಾಣಿಯನ್ನು ನಂಬಿ ದೇವಕಿ-ವಸುದೇವರನ್ನು ಸೆರೆಯಲ್ಲಿಟ್ಟ ಬಂಧಿಸಿಟ್ಟನು.

ದೇವಕಿ ವಸುದೇವರ ವಿವಾಹ ಸಂದರ್ಭದಲ್ಲಿ, ಕಂಸನು ಮದುವೆ ಮಕ್ಕಳ ಮೆರವಣಿಗೆ ಯಲ್ಲಿ ರಥವನ್ನು ತಾನೇ ನಡೆಸುತ್ತಿದ್ದಾಗ, ಒಂದು ಅಶರೀರ ವಾಕ್ಕು "ಎಲವೋ ಕಂಸ, ದೇವಕಿಯಲ್ಲಿ ಹುಟ್ಟುವ ಎಂಟನೇ ಮಗುವೇ ನಿನ್ನ ಮೃತ್ಯು"ವೆಂಬುದಾಗಿ ನುಡಿದು ಮಾಯವಾಯಿತು. ಅದನ್ನು ನಂಬಿದ ಕಂಸನು ಹೆದರಿಕೊಂಡು ಅವರಿಬ್ಬರನ್ನೂ ಸೆರೆಯಲ್ಲಿ ಬಂಧಿಸಿಟ್ಟನೆಂದು ಶ್ರೀಮದ್ಭಾಗವತದ ದಶಮ ಸ್ಕಂಧದ ಮೊದಲನೆಯ ಅಧ್ಯಾಯದಲ್ಲಿ ಹೇಳಲಾಗಿದೆ.

ಸ ಕಾಲಾತಿ ಬಲಃ ಕಂಸಃ ಕಾಲನೇಮಿರನೇಹಸಾ।
ಸರ್ವ ದೈತೇಯ ಸತ್ವಾನಾಂ ಸಮಾಹಾರ ಇವೋದಿತಃ॥ ॥೨೬॥

ಮುಂದೆ ಬರುವ ಕಾಲವನ್ನು ನೆನೆದು, ಹೆದರಿದ ಆ ಕಂಸನು ಯಮನಿಗೂ ಮೇಲಾದವ ನಾಗಿದ್ದನು. ಅವನು ಯಾರೆಂದರೆ ಹಿಂದಿನ ಜನ್ಮದಲ್ಲಿ ಮಹಾ ಬಲಶಾಲಿಯಾದ 'ಕಾಲನೇಮಿ' ಎಂಬ ಅಸುರನಾಗಿದ್ದು, ಈ ಜನ್ಮದಲ್ಲಿ ಕಂಸನಾಗಿ ಜನಿಸಿದ್ದಾನೆ.

ಹಿಂದಿನ ಜನ್ಮದಲ್ಲಿ ಕಾಲನೇಮಿ ಎಂಬ ಹೆಸರಿನಿಂದಿದ್ದ ರಾಕ್ಷಸನೇ ವಿಷ್ಣುವಿನಿಂದ ಸಂಹರಿಸಲ್ಪಟ್ಟಿದ್ದನು. ಅವನು ಮತ್ತೆ ಕಂಸನಾಗಿ ಜನ್ಮ ತಾಳಿ, ಪೂರ್ವ ಜನ್ಮದ ದ್ವೇಷ ಬಿಡದೆ ಈ ಜನ್ಮದಲ್ಲೂ ವಿಷ್ಣುವನ್ನೂ ಅವನ ಭಕ್ತರುಗಳನ್ನೂ ವಿಶೇಷವಾಗಿ ದ್ವೇಷಿಸುತ್ತಿದ್ದನು.

ಏತಸ್ಮಿನ್ನಂತರೇ ದೇವಿ ಮೇರುಮಧ್ಯಮುಪೇಯುಷಃ।
ಪ್ರಜಾಪತಿಮುಖಾನ್ ದೇವಾನ್ ಪ್ರಾಹ ಸಾಗರ ಮೇಖಲಾ॥ ॥೩೭॥

ಈ ರೀತಿ ಕಂಸನು ಎಲ್ಲರನ್ನೂ ದ್ವೇಷಿಸುತ್ತಿದ್ದರಿಂದಲೇ ಸಾಗರಗಳಿಂದ ಆವರಿಸಲ್ಪಟ್ಟಿದ್ದ ಭೂದೇವಿಯು ಮೇರು ಪರ್ವತದಲ್ಲಿದ್ದ ಬ್ರಹ್ಮಾದಿ ದೇವತೆಗಳ ಸಮೀಪ ಬಂದು ಪ್ರಾರ್ಥಿಸಿದಳು.

ಕೃಷ್ಣಾವತಾರದ ಕಾರಣವನ್ನು ಈ ಶ್ಲೋಕಗಳಲ್ಲಿ ಹೇಳಿದ್ದಾರೆ. ಭೂದೇವಿಯು ಕಂಸನ ಕಾಟವನ್ನು ತಡೆಯಲಾರದೆ, ಅವನು ಮತ್ತು ಅವನ ಕಡೆಯವರಿಂದ ತನ್ನಲ್ಲಿ ದುಷ್ಟರ ಭಾರವು ಹೆಚ್ಚಾಗಿದ್ದಕ್ಕಾಗಿ, ಅವರುಗಳ ಸಂಹಾರಕ್ಕಾಗಿ ಪ್ರಜಾಪತಿಯಾದ ಚತುರ್ಮುಖ ಬ್ರಹ್ಮ ಮತ್ತಿತರ ದೇವತೆಗಳ ಬಳಿ ಬಂದು ಮೊರೆಯಿಟ್ಟಳು.

ಭಾಗವತದಲ್ಲಿ ಹೀಗೆ ಹೇಳಲಾಗಿದೆ ''ಹಿಂದೊಮ್ಮೆ ರಾಜರ ರೂಪದಲ್ಲಿ ದರ್ಪಿಷ್ಠರಾಗಿದ್ದ, ಅಧರ್ಮನಿಷ್ಠರಾಗಿದ್ದ ಸಾವಿರಾರು ಲಕ್ಷ-ಲಕ್ಷ ದೈತ್ಯರು ಭೂಮಂಡಲವನ್ನು ಆಕ್ರಮಿಸಿಕೊಂಡುಬಿಟ್ಟಿದ್ದರು. ಭೂಭಾರದಿಂದ ತತ್ತರಿಸಿದ ಭೂದೇವಿಯು ರಕ್ಷಣೆಗಾಗಿ ಬ್ರಹ್ಮದೇವರನ್ನು ಮೊರೆ ಹೊಕ್ಕಳು. ಆಗ ಭೂದೇವಿಯು ಗೋವಿನ ರೂಪವನ್ನು ಧರಿಸಿ ಬ್ರಹ್ಮನ ಬಳಿಗೆ ಬಂದಿದ್ದಳು. ಕಣ್ಣೀರನ್ನು ಸುರಿಸುತ್ತಾ ರೋದಿಸಿದಳು. ಆಕೆಯ ಕಣ್ಣೀರು ಮುಖದ ಮೇಲೆಲ್ಲ ಹರಿಯುತ್ತಿತ್ತು. ಶರೀರವು ಕೃಶವಾಗಿದ್ದು ಅವಳು ಅತ್ಯಂತ ಖಿನ್ನಳಾಗಿ ಕರುಣಾಜನಕ ರೀತಿಯಲ್ಲಿ ಹಂಬಲಿಸುತ್ತಿದ್ದಳು. ಬ್ರಹ್ಮನ ಬಳಿಗೆ ಬಂದು ಆಕೆಯು ತನ್ನೆಲ್ಲ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಂಡಳು.

ವಿದಿತಂ ಭವತಾಂ ದೇವಾಃ ವಿಶ್ವರೂಪೇಣ ವಿಷ್ಣುನಾ।
ಮಹೀಯಾನ್ ಧರ್ಮಶೀಲೇಷು ಭಾರೋ ಯತ್ತನ್ನಿವೇಶಿತಃ॥ ॥೩೮॥

ಜಗತ್ತನ್ನು ಶರೀರವನ್ನಾಗಿ ಹೊಂದಿರುವ ವಿಷ್ಣುವಿನಿಂದಲೇ ಈ ಲೋಕ ರಕ್ಷಣ ಭಾರವೆಂಬುದು ಧಾರ್ಮಿಕ ಕರ್ಮಗಳಲ್ಲಿಯೇ ಶ್ರೇಷ್ಠವಾಗಿ ನಡೆಯಲ್ಪಡತಕ್ಕದ್ದೆಂದು ನಿಮಗೆ ತಿಳಿದೇ ಇದೆ.

ಭೂದೇವಿಯು ಹೀಗೆ ಪ್ರಾರ್ಥಿಸುತ್ತಾಳೆ ''ಹೇ ದೇವತೆಗಳಿರಾ, ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಕರ್ಮಗಳಲ್ಲಿ, ಲೋಕ ರಕ್ಷಣ ಭಾರವನ್ನು ವಿಷ್ಣುವು ಹೊತ್ತಿದ್ದಾನಷ್ಟೆ. ಯಾವ ರೀತಿ ಧಾರ್ಮಿಕಾಗ್ರೇಸರು ಧರ್ಮ ರಕ್ಷಣ ಕಾರ್ಯವನ್ನು ಹೊತ್ತಿದ್ದಾರೋ ಅದೇ ಜಗತ್ತಿನ ಸಂಪೂರ್ಣ ರಕ್ಷಣ ಕಾರ್ಯವನ್ನು ವಿಷ್ಣುವು ಹೊತ್ತಿದ್ದಾನೆ.

ಅಧರ್ಮನಿಘ್ನೈರಧುನಾ ಧರ್ಮಸೇತು ವಿಭೇದಕೈಃ।
ಅಸಂಘ್ಯೈರದ್ಯುತ್ತ್ವೈಸ್ತುಂಗೈಃ ಕ್ರಮ್ಯೈ ರಾಕ್ಷಸ ಪರ್ವತೈಃ॥ ॥೨೯॥

ಅಧರ್ಮವನ್ನೇ ಧರ್ಮವೆಂದು ತಿಳಿದು, ಧರ್ಮ ಮಾರ್ಗವನ್ನು ಭೇದಿಸುತ್ತಿರುವ ದುಷ್ಟರು ಪರ್ವತಗಳಂತೆ ನನ್ನ ಮೇಲಿದ್ದು, ಅವರುಗಳ ಭಾರವನ್ನು ತಾಳಲಾರದವಳಾಗಿದ್ದೇನೆ.

ದುಷ್ಟರು ಅಧರ್ಮವನ್ನೇ ಧರ್ಮವೆಂದು ತಿಳಿದಿದ್ದಾರೆ. ಅಧರ್ಮವನ್ನು ಪೋಷಿಸುವುದೇ ಅವರ ಕರ್ತವ್ಯವಾಗಿದೆ. ಎಲ್ಲೆಲ್ಲಿಯೂ ಅಧರ್ಮವು ತಾಂಡವವಾಡುತ್ತಿದೆ. ಧರ್ಮಮಾರ್ಗವನ್ನು ಭೇದಿಸುತ್ತಾ, ಅವರುಗಳು ರಾರಾಜಿಸುತ್ತಿದ್ದಾರೆ. ನನಗೆ ಅವರ ಭಾರವನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ದೊಡ್ಡ ದೊಡ್ಡ ಬೆಟ್ಟಗಳಂತೆ ನನ್ನನ್ನು ಅವರು ಆಕ್ರಮಿಸಿಕೊಂಡಿದ್ದಾರೆ.

ಅತ ಆಲೋಚಿತ ಜಗದ್ವಿತ್ತೈಃ ಸುರಗಣೈಃ ಸ್ವಯಂ।
ನ ಪತಾಮಿ ನಭಿದ್ಯೈ ಚ ಯಥಾಹಂ ಕ್ರಿಯತಾಂ ತಥಾ॥ ॥೪೦॥

ಈ ರೀತಿ ಭೂದೇವಿಯಿಂದ ಪ್ರಾರ್ಥಿಸಲ್ಪಟ್ಟ ಚತುರ್ಮುಖಾದಿ ದೇವತೆಗಳು, ಅವಳ ಈ ಕಷ್ಟವನ್ನು ಹೋಗಲಾಡಿಸಲು ಅವಳ ಪತಿಯಾದ ವಿಷ್ಣುವಿನಿಂದ ಮಾತ್ರ ಸಾಧ್ಯ ಎಂದರಿತು, ಅವನಲ್ಲಿ ಅವಳ ಕಷ್ಟವನ್ನು ಅರಿಕೆ ಮಾಡಿಕೊಂಡರು.

ಭೂಭಾರ ಹರಣವನ್ನು ಮಾಡಲು ನಾರಾಯಣನಲ್ಲದೇ ಬೇರೆ ಯಾರೂ ಸಮರ್ಥರಲ್ಲ ಎಂದು ಭಾವಿಸಿ, ಎಲ್ಲಾ ದೇವತೆಗಳೂ ವಿಷ್ಣುವನ್ನೇ ಪ್ರಾರ್ಥಿಸಲು ನಿರ್ಧರಿಸಿ, ಭೂದೇವಿಯೊಡಗೂಡಿ ನಾರಾಯಣನಿರುವ ಜಾಗಕ್ಕೆ ಬಂದರು.

ಇತಿ ತೇ ಭೂತಧಾರಿಣ್ಯಾ ನಿಸೃಷ್ಟಾರ್ಥಾ ದಿವೌಕಸಃ।
ಅವಿದುಸ್ತ ಪ್ರಿಯಸ್ಯೈವ ತದ್ಭಾರಹರಣಂ ಕ್ಷಮಂ॥ ॥೪೧॥

ಈ ರೀತಿ ಪ್ರಾಣಿಗಳನ್ನೆಲ್ಲಾ ಧರಿಸುವ ಭೂದೇವಿಯಿಂದ ಪ್ರಾರ್ಥಿಸಲ್ಪಟ್ಟ ದೇವತೆಗಳೆಲ್ಲರೂ, ಶ್ರೀ ವಿಷ್ಣುವಿನಲ್ಲಿ ಆ ಭಾರವನ್ನು ಒಪ್ಪಿಸಲು ನಿಶ್ಚಯಿಸಿದರು.

ವಿಷ್ಣುವೊಬ್ಬನೇ, ಈ ರೀತಿಯಾದ ದುಷ್ಟರ ಸಂಹಾರ ಮಾಡಲು ಶಕ್ತನೇ ವಿನಃ ಮತ್ಯಾರೂ ಅಲ್ಲ ಎಂಬುದನ್ನು ಮನಗಂಡ ಎಲ್ಲಾ ದೇವತೆಗಳು ಭೂಮಿ ತಾಯಿಯ ಈ ಒಂದು ಪ್ರಾರ್ಥನೆಯನ್ನು ಅವನಲ್ಲಿ ನಿವೇದಿಸಿ, ಅವನೇ ಇದಕ್ಕೆ ಸೂಕ್ತ ಪರಿಹಾರ ಕಂಡುಹಿಡಿಯಬೇಕೆಂದು ಪ್ರಾರ್ಥಿಸಲು ನಿಶ್ಚಯಿಸಿದರು. ಈ ರಕ್ಷಣೆಯ ಭಾರವನ್ನು ಅವನಿಂದ ಮಾತ್ರವೇ ನಿರ್ವಹಿಸಲು ಸಾಧ್ಯ ಎಂದು ಅರಿತುಕೊಂಡರು.

ಪುರಸ್ಕೃತ್ಯ ಜಗದ್ಧಾತ್ರಿಂ ಮನಸೋಪಿ ಪುರಸ್ಸರಾಃ।
ದುಗ್ಧೋದಧಿಶಯಂ ದೇವಂ ದೂರಮೇತ್ಯಾಭಿತುಷ್ಟುವುಃ॥ ॥೪೨॥

ಅನಂತರ ಭೂದೇವಿಯನ್ನು ಮುಂದಿಟ್ಟುಕೊಂಡು, ಮನೋ ವೇಗದಲ್ಲಿ ಕ್ಷೀರ ಸಮುದ್ರದ ಸಮೀಪ ಬಂದು ಸಕಲ ಜಗದ ಲೋಕ ನಾಯಕನಾದ ನಾರಾಯಣನಲ್ಲಿ ಮೊರೆಯಿಟ್ಟರು.

ಎಲ್ಲಿ ದೇವತೆಗಳೂ (ಚತುರ್ಮುಖ ಬ್ರಹ್ಮ ರುದ್ರರಾದಿಯಾಗಿ) ತಮ್ಮ ಕಷ್ಟಕಾಲದಲ್ಲಿ ಶ್ರೀಮನ್ನಾರಾಯಣನನ್ನೇ ಆಶ್ರಯಿಸಿ ತಮ್ಮ ಸಂಕಟಗಳನ್ನು ಪರಿಪರಿಸಿಕೊಂಡಿದ್ದಾರೆ. ಅದೇ ರೀತಿ ದ್ವಾಪರ ಯುಗದಲ್ಲಿಯೂ ಸಹ, ದೇವತೆಗಳೆಲ್ಲರೂ ಕ್ಷೀರಸಾಗರಶಯನನಾದ ವಿಷ್ಣುವಿನಲ್ಲೇ ಕಂಸ ವದಾರ್ಥವಾಗಿ ಅವತಾರ ಮಾಡಬೇಕೆಂದು ಪ್ರಾರ್ಥಿಸಿದರು.

ತ್ರಿವೇದೀ ಮಧ್ಯ ದೀಪ್ತಾಯ ತ್ರಿಧಾಮ್ನೇ ಪಂಚಹೇತವೆ।
ವರದಾಯ ನಮಸ್ತುಭ್ಯಂ ಬಾಹ್ಯಾಂತರ ಹವಿರ್ಭುಜೆ ॥ ॥೪೩॥

ಮೂರು ವೇದಗಳ ಮಧ್ಯೆ ನಾಯಕನಾಗಿ ಪ್ರಕಾಶಿಸುತ್ತಿರುವವನೂ, ಕ್ಷೀರಸಾಗರ, ಸೂರ್ಯಮಂಡಲ, ವೈಕುಂಠ ಎಂಬ ಮೂರು ಸ್ಥಳಗಳಲ್ಲಿ ನಿತ್ಯ ವಾಸಮಾಡುವವನೂ, ಐದು ಆಯುಧಗಳನ್ನು ಹೊಂದಿರುವವನೂ, ಒಳಗೂ, ಹೊರಗೂ ಹವಿಸ್ಸುಗಳನ್ನು ಕೊಳ್ಳುವವನೂ, ಕೇಳಿದುದನ್ನೆಲ್ಲಾ ನೀಡುವ ನಿನಗೆ ನಮಸ್ಕರಿಸುತ್ತೇವೆ.

ನಿನಗೂ ಅಗ್ನಿಗೂ ತ್ರಿಧಾಮಾ ಎಂದು ಹೆಸರು. ಅಗ್ನಿಯು ದೇವತೆಗಳಲ್ಲಿ ಶ್ರೇಷ್ಠನು. ಆದರೆ ನೀನು ಅಗ್ನಿಗಿಂತಲೂ ಹಿರಿಯನು. ಅವನು ವೇದಿ ಎನಿಸಿಕೊಂಡರೆ ನೀನು ತ್ರಿವೇಧಿ ಎನಿಸಿಕೊಂಡಿದ್ದೀಯೆ. ಅಗ್ನಿಗೆ ಹೇತಿಗಳು ಏಳು. ನಿನಗೆ ಮೂರು (ಅಗ್ನಿಹೇತಿ ಎಂದರೆ ಜ್ವಾಲೆ) ಅಗ್ನಿಯು ಸಂಬಂಧಪಟ್ಟದ್ದನ್ನು ಮಾತ್ರ ಸುಡಬಲ್ಲನು. ನೀನು ನೀನು ಎಲ್ಲವನ್ನೂ ಸುಡಬಲ್ಲೆ. ಅಗ್ನಿ ಹೊರಗಿನ ಹವಿಸ್ಸನ್ನು ಮಾತ್ರ ಭುಜಿಸುತ್ತಾನೆ. ನೀನು ಎಲ್ಲವನ್ನೂ ಭುಜಿಸುತ್ತೀಯೆ. (ಒಳಗೂ, ಹೊರಗೂ) ಹೊರಗಿನ ಹವಿಸ್ಸನ್ನು ಸಮರ್ಪಿಸಿ ಆರಾಧಿಸಿದರೆ, ಐಹಿಕ ಫಲಗಳನ್ನು ಪಡೆಯಬಹುದು. ಒಳಗಿನ ಹವಿಸ್ಸನ್ನು ಸಮರ್ಪಿಸಿದರೆ, ಸರ್ವಾಂತರ್ಯಾಮಿಯಾದ ನಿನ್ನನ್ನೇ ಪಡೆಯಬಹುದು. ಈ ರೀತಿ ಇರುವುದರಿಂದಲೇ ಎಲ್ಲರೂ ನಿನ್ನನ್ನೇ ಆರಾಧಿಸಿ ಪ್ರಾರ್ಥಿಸುತ್ತಾರೆ.

ಅನನ್ಯಾಧೀನ ಮಹಿಮಾ ಸ್ವಾಧೀನ ಪರ ವೈಭವಃ।
ದಯಾದೀನ ವಿಹಾರಸ್ತ್ವಂ ಪ್ರಣತಾನ್ ಪರಿಪಾಹಿನಃ॥ ॥೪೪॥

ನಿನಗೆ ಮಹಿಮೆಯೆಂಬುದು ಸ್ವತಃ ಸಿದ್ಧವಾದುದು. ಯಾರ ಅಧೀನವೂ ಅಲ್ಲ. ಇತರರ ಮಹಿಮೆಯೆಲ್ಲವೂ ನಿನಗೆ ಅಧೀನ. ಪ್ರಾಣಿಗಳು ಮೆಟ್ಟಿಲು ಮೆಟ್ಟಿಲಾಗಿ ಏರಬೇಕೆಂದು ದಯೆಯಿಂದ ಕೂಡಿ ನೀನು ಸೃಷ್ಟಿ ಕಾರ್ಯಗಳನ್ನು ನಡೆಸುತ್ತೀಯೆ. ಇಂತಹ ಲೀಲಾ ಸ್ವಾಮಿಯಾದ ನೀನು ನಿನಗೆ ನಮಸ್ಕರಿಸಿದ ನಮ್ಮನ್ನು ಕಾಪಾಡಬೇಕು.

"**ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**" ಎನ್ನುತ್ತದೆ. ತೈತ್ತಿರಿಯೋಪನಿಷತ್ತು ಭಗವಂತನ ಬಗೆಗೆ. ಭಗವಂತನ ಮಹಿಮೆಯನ್ನು ಅರಿಯಲು ಯಾರಿಂದಲೂ ಸಾಧ್ಯವಿಲ್ಲ. ಮನಸ್ಸಿಗೂ, ವಾಕ್ಕಿಗೂ ಅಗೋಚರನಾದವನು ಶ್ರೀಮನ್ನಾರಾಯಣ. ಆದರೂ ಎಲ್ಲರೂ ಅವನನ್ನೇ ಸಾಕ್ಷಾತ್ಕರಿಸಲು ಆಶಿಸುತ್ತಾರೆ. ತನ್ನ ಭಕ್ತರ ಇಚ್ಛೆಯನ್ನು ಈಡೇರಿಸಲು, ಭಗವಂತನೇ ಮೆಟ್ಟಿಲು ಮೆಟ್ಟಿಲಾಗಿ ಕೆಳಗೆ ಇಳಿದು ಬಂದು ಅವರುಗಳಿಗೆ

ದರ್ಶನ ನೀಡುತ್ತಾನೆ. ಇದು ಭಗವಂತನ ದಯಾಗುಣದ ಪ್ರಭಾವ. ದಯಾಶತಕದಲ್ಲಿ ಸ್ವಾಮಿ ದೇಶಿಕರು ಈ ಗುಣಗಳನ್ನು ಅಮೋಘವಾಗಿ ವರ್ಣಿಸಿದ್ದಾರೆ. ಅಂತಹ ನೀನು ನಮ್ಮನ್ನು ಕಾಪಾಡಬೇಕು ಎಂದು ಪ್ರಾರ್ಥಿಸಿದ್ದಾರೆ.

ಸ ಭವಾನ್ ಗುಣರತ್ನೌಘೈರ್ದೀಪ್ಯಮಾನೋ ದಯಾಂಬುಧಿಃ।
ತನೋತಿ ವ್ಯೂಹ ನಿವಹೈಸ್ತರಂಗೈರಿವ ತಾಂಡವಂ॥ ॥೪೫॥

ನೀನು ದಯಾ ಸಮುದ್ರನು. ಜ್ಞಾನ ಐಶ್ವರ್ಯಗಳೆಂಬ ನದಿಗಳಿಗೆ ನೀನೇ ನಾಥನಾಗಿದ್ದೀಯೆ. ವ್ಯೂಹಗಳು, ವಿಭವಗಳು ಎಂಬ ವಿವಿಧ ರೂಪಗಳನ್ನೆತ್ತಿ, ಲೋಕವನ್ನೆಲ್ಲಾ ಕಾಪಾಡುತ್ತೀಯೆ.

ಭಗವಂತನ ವಿವಿಧ ಗುಣಗಳನ್ನು ಸ್ವಾಮಿ ದೇಶಿಕರು ಈ ಶ್ಲೋಕದಲ್ಲಿ ಹೇಳಿದ್ದಾರೆ. ಭಗವಂತನು ಕಲ್ಯಾಣ ಗುಣ ಸಾಗರ. ಯಾವ ಹೇಯ ಗುಣವೂ ಇಲ್ಲದ ಗುಣಗಳ ಗಣಿ ಭಗವಂತ. ಷಾಡ್ಗುಣ್ಯ ಪರಿಪೂರ್ಣನಾದ ಅವನನ್ನು ಶ್ರೀ ರಾಮಾನುಜರು 'ಶರಣಾಗತಿ ಗದ್ಯ'ದಲ್ಲಿ ಅದ್ಭುತವಾಗಿ ವರ್ಣಿಸಿದ್ದಾರೆ. ಅವೆಲ್ಲವೂ ಇಲ್ಲಿ ಅನುಸಂಧೇಯ. ಆತ ಅವತಾರಗಳನ್ನೆತ್ತುವುದೂ ಲೋಕ ಕಲ್ಯಾಣಕ್ಕಾಗಿಯೇ.

ತ್ವದೇಕ ವ್ಯಂಜಿತೈರಾದೌ ತ್ವದನ್ಯೇಷ್ವನಿದಂ ಪರೈಃ।
ನಿಗಮೈರನಿಗಮ್ಯಂ ತ್ವಾಂ ಕಃ ಪರಿಚ್ಛೇತ್ತು ಮರ್ಹತಿ॥ ॥೪೬॥

ಪೂರ್ವದಲ್ಲಿ ನಿನ್ನಿಂದಲೇ ತೋರ್ಪಟ್ಟುದೂ, ನಿನ್ನನ್ನು ಬಿಟ್ಟು ಬೇರೆ ಯಾವುದನ್ನೂ ಹೇಳದ ವೇದಗಳಿಂದಲೂ ಪೂರ್ಣವಾಗಿ ವರ್ಣಿಸಲಸಾಧ್ಯನಾದ ನಿನ್ನನ್ನು ಯಾರಿಂದಲೂ ಅಳೆಯಲು ಸಾಧ್ಯವಿಲ್ಲ.

ವೇದಗಳೆಲ್ಲವೂ ಭಗವಂತನಿಂದಲೇ ಹೇಳಲ್ಪಟ್ಟವು. ಅವನೇ ಅವುಗಳ ಕರ್ತೃ. ವೇದಗಳು ಭಗವಂತನನ್ನು ಬಿಟ್ಟು ಬೇರೆನನ್ನೂ ಹೇಳುವುದಿಲ್ಲ. ಕರ್ಮಕಾಂಡವಾಗಲೀ, ಜ್ಞಾನಕಾಂಡ ವಾಗಲೀ, ಅಂತ್ಯದಲ್ಲಿ ಹೇಳುವುದು ಭಗವಂತನ ವೈಭವವನ್ನೇ. ಆದರೆ ಅಂತಹ ಅಪೌರುಷೇಯವಾದ ವೇದಕ್ಕೂ ನಿಲುಕದವನು ಸರ್ವೇಶ್ವರನಾದ ಪರಮಾತ್ಮ. ನಿಗಮಕ್ಕೂ ಅವನನ್ನು ಪೂರ್ಣವಾಗಿ ಅರಿಯಲು ಸಾಧ್ಯವಿಲ್ಲ. ಅಂದ ಮೇಲೆ ಮನುಷ್ಯ ಮಾತ್ರದವರಿಗೆ ಸಾಧ್ಯವೇ ?

ಅಮಿತಸ್ಯ ಮಹಿಮ್ನಸ್ತೇ ಪ್ರಯಾತುಂ ಪಾರಮಿಚ್ಛತಾಂ।
ವಿತಥಾ ವೇದ ಪಾಂಥಾನಾಂ ಯತ್ರ ಸಾಯಂ ಗೃಹಾಗತಿಃ ॥ ॥೪೭॥

ವೇದಗಳಿಂದ ಹೇಳಲಾಗದ ನಿನ್ನ ಮಹಿಮೆಯ ಎತ್ತರವನ್ನು ಕಾಣಲು ಸಾಯಂ ಸಂಧ್ಯೆಯು ಬಂದು ಎಷ್ಟು ನಡೆದಾಡಿದರೂ ಕಾಣಲು ಸಾಧ್ಯವಾಗದೆ ಹಿಂದಿರುಗಿತು.

ಅವಾಙ್ಮಾನಸಗೋಚರನಾದ ಭಗವಂತನ ಮಹಿಮೆಯು ಯಾರಿಂದಲೂ ತಿಳಿಯಲು ಸಾಧ್ಯವಿಲ್ಲ. ಅದನ್ನು ತಿಳಿಯಲು ಕೆಲವರು ವೃಥಾ ಪ್ರಯತ್ನಪಡುತ್ತಾರೆ.

ಸಂಜೆಯ ಹೊತ್ತಿನಲ್ಲಿ ತಂಪಾಗಿರುವುದರಿಂದ, ಎಷ್ಟು ನಡೆದಾಡಿದರೂ ಆಯಾಸ ವಾಗುವುದಿಲ್ಲ. ಹಾಗಿದ್ದಾಗ್ಯೂ ಸಾಯಂ ಸಂಧ್ಯೆಯು ಎಷ್ಟು ಪ್ರಯತ್ನಪಟ್ಟರೂ ಭಗವಂತನ ವಿಭೂತಿಯ ಅರಿವು ಅದಕ್ಕಾಗುವುದಿಲ್ಲ. ಕತ್ತಲಾಗಿಯೇ ಹೋಗುತ್ತದೆ. ರೂಪಕಾಲಂಕಾರವನ್ನು ಈ ಶ್ಲೋಕದಲ್ಲಿ ಬಳಸಿದ್ದಾರೆ.

ನಮ್ಯಸ್ಯ ನಮತಃ ಕ್ಷುದ್ರಾನ್ ವರದಸ್ಯ ವರಾರ್ಥಿನಃ।
ಪುತ್ರೈಃ ಪಿತೃಮತಃ ಕ್ರೀಡಾ ಕಥಂ ತೇ ಕೇನ ವರ್ಣ್ಯತೇ॥ ॥೪೮॥

ಅವತಾರಗಳಲ್ಲಿ ನೀನು ಮಾಡುವ ಮಹಿಮೆ(ಲೀಲೆ)ಗಳನ್ನು ನೋಡಿ ನಿನ್ನನ್ನು ವರ್ಣಿಸಲಾಗದು. ಎಲ್ಲರಿಂದಲೂ ನಮಸ್ಕರಿಸಲ್ಪಡಲು ಯೋಗ್ಯನಾಗಿದ್ದರೂ, ಕ್ಷುದ್ರರು ಗಳಿಗೂ ನಮಸ್ಕರಿಸಿ ಅವರನ್ನೂ ಬಗ್ಗಿಸಿ, ಎಲ್ಲರಿಗೂ ತಂದೆಯಾಗಿದ್ದು ರಕ್ಷಿಸುವ ನಿನ್ನ ಮಹಿಮೆ ಯನ್ನು ಯಾರು ತಾನೇ ಬಣ್ಣಿಸಲು ಸಾಧ್ಯ?

ನಿನ್ನ ಲೀಲೆಗಳನ್ನೂ ಸಹ ಯಾರೂ ಸಹ ಸರಿಯಾಗಿ ಅರಿಯರು. ನೀನು ಎಲ್ಲರಿಂದಲೂ ನಮಸ್ಕರಿಸಲ್ಪಡಲು ಯೋಗ್ಯನಾದವನು. ನೀನು ಯಾರಿಗೂ ನಮಸ್ಕರಿಸಬೇಕಿಲ್ಲ. ಹಾಗಿದ್ದರೂ ಲೀಲಾರ್ಥವಾಗಿ ನೀನೇ ಇತರ ಕ್ಷುದ್ರ ದೇವತೆ(ಇಂದ್ರಾದಿ)ಗಳಿಗೆ ನಿನ್ನ ಅವತಾರ ಕಾಲಗಳಲ್ಲಿ ನಮಸ್ಕರಿಸಿ, ಅವರಿಂದ ಲೋಕ ಕಲ್ಯಾಣ ಕಾರ್ಯಗಳನ್ನು ನಡೆಸುತ್ತೀಯೇ. ಇದೇನಾಶ್ಚರ್ಯ! ನಿನ್ನ ಲೀಲೆಗಳನ್ನು ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ.

ನಟವತ್ ಭೂಮಿಕಾಭೇದೈರ್ನಾಥ ದಿವ್ಯನ್ ಪೃಥಗ್ವಿಧೈಃ।
ಪುಂಸಾಮನನ್ಯ ಭಾವಾನಾಂ ಪುಷ್ಣಾಸಿ ರಸಮದ್ಭುತಂ॥ ॥೪೯॥

ಆಟವಾಡುವವನು ಸರಿಯಾದುದದನ್ನು ಬಿಟ್ಟು, ಮಾರು ವೇಷವನ್ನು ಹಾಕಿಕೊಂಡು ನೋಡುವವರ ಕಣ್ಣಿಗೆ ಮಣ್ಣೆರಚುತ್ತಾ ಆಶ್ಚರ್ಯವನ್ನು ಉಂಟುಮಾಡುವ ಹಾಗೆ ಎಲೈ ಸರ್ವೇಶ್ವರನೇ! ನೀನೂ ಸಹ ನಿನ್ನ ಪರತ್ವವನ್ನು ಬಿಟ್ಟು, ಮತ್ಸ್ಯ ಕೂರ್ಮಾದಿ ರೂಪಗಳನ್ನೆತ್ತಿ ಅದನ್ನು ನೋಡುವ ಜ್ಞಾನಿಗಳಿಗೆ 'ಇದೇನಾಶ್ಚರ್ಯ!' ಎಂಬ ರೀತಿ ವರ್ತಿಸುತ್ತೀಯೆ! ಅದಲ್ಲದೆ ಅವತಾರ ರಹಸ್ಯ ಗಳನ್ನು ಚಿಂತಿಸುವ ಮಹನೀಯರಿಗೆಲ್ಲಾ ''ದೂರೇ ವಾಚಃ ತತಃ ಪರಂ ಅದ್ಭುತಂ'' ಎಂಬ ರೀತಿಯಲ್ಲಿ ಆಶ್ಚರ್ಯವಾದ, ಅದ್ಭುತವಾದ ಮೋಕ್ಷಾನಂದವನ್ನೂ ಸ್ಥಿರವಾಗಿ ಅನುಗ್ರಹಿಸುತ್ತೀಯೆ.

ಭಗವಂತನ ಪರತ್ವವನ್ನು ಯಾರೂ ಗ್ರಹಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅವನು 'ಸೌಲಭ್ಯ' ಎಂಬ ಗುಣವನ್ನು ಅವಲಂಬಿಸಿ ಎಲ್ಲರಿಗೂ ಕಣ್ಣಿಗೆ ಗೋಚರಿಸುವಂತೆ ವಿವಿಧ

ಅವತಾರಗಳನ್ನೆತ್ತುತ್ತಾನೆ. ಕೆಲವು ಆಟ ಆಡುವವರು ತಮ್ಮ ನಿಜ ವೇಷವನ್ನು ಬಿಟ್ಟು ಮಾರು ವೇಷ ವನ್ನು ಹಾಕಿಕೊಂಡು, ಪ್ರೇಕ್ಷಕರನ್ನು ಮೋಹಗೊಳಿಸುತ್ತಾ ರಂಜಿಸುತ್ತಾರೆ. ಅದೇ ರೀತಿ ಭಗವಂತನು ತನ್ನ ವಿವಿಧ ಅವತಾರಗಳಿಂದ (ಪ್ರಾಣಿಗಳ ಸ್ವರೂಪವನ್ನೂ ಸಹ ಹೊಂದಿ) ಆಯಾ ಕಾಲದ ಜನಗಳನ್ನು ತನ್ನ ಮಾಯೆಯಿಂದ ಮೋಹಗೊಳಿಸಿ, ಎಲ್ಲರೂ ಆಶ್ಚರ್ಯಪಡುವಂತೆ ವರ್ತಿಸುತ್ತಾನೆ. ಅಷ್ಟೇ ಅಲ್ಲ. ತನ್ನನ್ನು ಕಂಡು ಸರ್ವದಾ ಚಿಂತಿಸುವವರಿಗೆ ತನ್ನ ಪರ ಸ್ವರೂಪ ದರ್ಶನ ನೀಡುವ ವೈಕುಂಠ ಪ್ರಾಪ್ತಿಯನ್ನೂ ಕರುಣಿಸಿ ಅವರಿಗೆ ಪರಮ ಭೋಗ್ಯವಾದ ಮೋಕ್ಷಾನಂದ ವನ್ನೂ ನೀಡುತ್ತಾನೆ. ಪರತ್ವ ಮತ್ತು ಸೌಲಭ್ಯ ಏಕ ಕಾಲದಲ್ಲಿ ವ್ಯಕ್ತವಾಗುವುದು. ಶ್ರೀಮನ್ನಾರಾಯಣನೊಬ್ಬನಲ್ಲಿಯೇ.

ಬ್ರಹ್ಮಾದಿ ಸ್ತಂಭ ಪರ್ಯಂತ ವಿಚಿತ್ರಾಂಕುರ ಶಾಲಿನಾಂ।
ಸಲೀಲಂ ಕರ್ಮ ಕಂದಾನಾಂ ಕ್ರೀಡೈವ ತವ ಕೇವಲಂ॥ ॥೫೦॥

ನಾಲ್ಕು ಮುಖದವನಾದ ಬ್ರಹ್ಮನಿಂದ ಹಿಡಿದು ಹುಲ್ಲು, ಕಲ್ಲು ಮುಂತಾದ ಸ್ಥಾವರದ ವರೆಗೂ ನಾನಾ ವಿಧವಾದ ಸೃಷ್ಟಿಗಳುಂಟು. ಪ್ರತಿಯೊಂದು ಸೃಷ್ಟಿಗೂ ಒಂದೊಂದು ಕಾರಣ ವುಂಟು. ನೀರು ಎಲ್ಲಕ್ಕೂ ಮುಖ್ಯ ಕಾರಣ. ನೀರಿಲ್ಲದೆ ಬೆಳೆ ಬೆಳೆಯುವುದಿಲ್ಲ. ಆದರೆ ಬೇರಿಗೆ ಅದು ಕಾರಣವಲ್ಲ. ಅದೇ ರೀತಿ ಜಗತ್ಕಾರಣವೆಂಬ ನಿನ್ನ ಲೀಲೆಗೆ ನೀರಿನಂತೆ ಕಾರಣವು. ನೀನು ಅವರವರ ಕರ್ಮಾನುಗುಣವಾಗಿ ಸೃಷ್ಟಿ ಕಾರ್ಯವನ್ನು ನಡೆಸುತ್ತೀಯೆ. ನಿನಗೆ ಯಾವ ರೀತಿಯ ವೈಷಮ್ಯ ನೈರ್ಘುಣ್ಯ ದೋಷವೂ ತಗಲುವುದಿಲ್ಲ.

ಬ್ರಹ್ಮಸೂತ್ರದಲ್ಲಿ "ಪರಮಾತ್ಮನು ಜೀವಾತ್ಮರ ಪೂರ್ವ ಕರ್ಮಾನುಸಾರವಾಗಿ ಫಲಗಳನ್ನು ನೀಡುವುದರಿಂದ, ಅವನಿಗೆ ವೈಷಮ್ಯ ನೈರ್ಘುಣ್ಯ ದೋಷವಾಗಲೀ, ಪಕ್ಷಪಾತ ದೋಷ ವಾಗಲಿ ತಗಲುವುದಿಲ್ಲ" ಎಂದು ಹೇಳಿದೆ. "**ಸಮೋಹಂ ಸರ್ವ ಭೂತೇಷು ನಮೇ ದ್ವೇಷೋಸ್ತಿ ನ ಪ್ರಿಯಃ**" ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ. ಎಲ್ಲ ಒಳಿತು–ಕೆಡುಕುಗಳಿಗೂ ಅವರವರ ಪೂರ್ವ ಜನ್ಮಕೃತ ಪುಣ್ಯಪಾಪಗಳೇ ಕಾರಣ. ಜಗತ್ತೆಲ್ಲವೂ ಅವನಿಗೆ ಕ್ರೀಡೆಯಿದ್ದಂತೆ. "**ಲೋಕವತ್ತು ಲೀಲಾ ಕೈವಲ್ಯಂ**" ಎನ್ನುತ್ತದೆ ಬ್ರಹ್ಮಸೂತ್ರ. ಈ ಜಗತ್ತು ಅವನ ಕ್ರೀಡಾಲೋಕ. ಆದರೂ ಅವನೂ ಸಹ ಕೆಲವು ನಿಯಮಗಳನ್ನು ಅನುಸರಿಸಿಯೇ ಆ ಕ್ರೀಡೆಯನ್ನು ಆಡುತ್ತಾನೆ. ಬ್ರಹ್ಮನೇ ಈ ಜಗತ್ತಿಗೆ ಸರ್ವ ವಿಧ ಕಾರಣನೂ ಆಗಿದ್ದಾನೆ. ಅವನಿಗೆ ಯಾವ ಪಕ್ಷಪಾತದೋಷವು ಅಂಟುವುದಿಲ್ಲ.

ನಿರಾಧಾರ ನಿಜಸ್ಥೇಮ್ನೋ ನಿರೂಪಾಧಿಕ ಶೇಷಿಣಃ।
ನಿರಪೇಕ್ಷ ನಿಯಂತುಸ್ತೇ ನಿಸ್ಸಮಾಭ್ಯಧಿಕಾ ಗುಣಾಃ ॥ ॥೫೧॥

ತನ್ನ ಇರುಪಿಕೆಗೆ ಯಾವ ಆಧಾರವು ಬೇಡದವನಾದ್ದರಿಂದ, ಇತರ ಎಲ್ಲಾ ಜೀವಿಗಳಿಗೂ ಅವನೇ ಆಧಾರನು. ಎಲ್ಲಕ್ಕೂ ಕಾರಣನಾಗಿ ಶೇಷಿಯು. ಯಾರೊಬ್ಬರ ಪ್ರೇರಣೆಯನ್ನು

ಎದುರುನೋಡದೇ ಎಲ್ಲವನ್ನೂ ನಿಯಮಿಸುವವನು. ಅವನ ಗುಣಗಳನ್ನು ಯಾರೊಬ್ಬರು ಹೊಂದಲು ಸಾಧ್ಯವಿಲ್ಲವಾಗಿ, ಅವನೇ ಎಲ್ಲರಿಗಿಂತಲೂ ಅಧಿಕ. ಇದರಿಂದ ನಮಗೂ ಅವನಿಗೂ ಶರೀರಾತ್ಮಭಾವ ಇದೆ.

ಈ ಜಗತ್ತಿನಲ್ಲಿರುವ ಎಲ್ಲಾ ಜೀವಿಗಳು ಭಗವಂತನನ್ನು ಆಧಾರವಾಗಿ ಹೊಂದಿವೆ. ಆದರೆ ಭಗವಂತನು ನಿರಾಧಾರನು. ಅವನು ತನ್ನ ಇರುವಿಕೆಗೆ ಯಾರನ್ನೂ ಅವಲಂಬಿಸಿಲ್ಲ. ಭಗವಂತನಿಗೂ ಜೀವಾತ್ಮನಿಗೂ ಇರುವ ನವ ವಿಧ ಸಂಬಂಧಗಳಲ್ಲಿ "ಆಧಾರ ಆಧೇಯ" ಭಾವವೂ ಒಂದು. ಎಲ್ಲರಲ್ಲೂ ಅಂತರ್ಯಾಮಿಯಾಗಿದ್ದು ಎಲ್ಲರನ್ನೂ ನಿಯಂತ್ರಿಸುತ್ತಾನೆ. ಪರಮಾತ್ಮನು ಸರ್ವಶೇಷಿ. "**ನತತ್ಸಮಃ ನಿಸ್ಸಮಾಭ್ಯಧಿಕ**" ಎನ್ನುತ್ತದೆ ಶ್ರುತಿ. ಅವನಿಗೆ ಸಮರೂ ಇಲ್ಲ, ಅಧಿಕರೂ ಇಲ್ಲ.

ಅನಾವಿಲಧಿಯಾಮಂತ ಶ್ಚಿಂತಾಮಣಿರಿವ ಸ್ಫುರನ್।
ದಿಶಸ್ಯಾಭಿಮತಂ ಸರ್ವಮತಿರಸ್ಕಾರ್ಯದಿಧೀತಿಃ॥ ॥೫೧॥

ಮನಕ್ಲೇಶವುಳ್ಳವರಿಗೆ ಕೆಲವು ಫಲಗಳನ್ನು ಮಾತ್ರ ತಿಳಿಸುವ ದೇವಲೋಕದ ಚಿಂತಾಮಣಿಯಂತಲ್ಲದೆ, ನೀನು ಸಂಸಾರ ಚಿಂತೆಯಿಂದ ಬಾಧಿಸಲ್ಪಟ್ಟವರಿಗೆ ಎಲ್ಲಾ ದುಃಖಗಳನ್ನು ನಾಶ ಮಾಡುವ ಚಿಂತಾಮಣಿಯಂತಿದ್ದೀಯೆ.

'ಚಿಂತಾಮಣಿ' ಎನ್ನುವ ಒಂದು ಮಣಿಯು ಔಷಧೀಯ ಗುಣಗಳನ್ನು ಹೊಂದಿದ್ದು ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಇಲ್ಲಿ ಭಗವಂತನನ್ನು ಅಂತಹ ಚಿಂತಾಮಣಿಗೆ ಹೋಲಿಸಲಾಗಿದೆ. ಕೇವಲ ದೇಹದ ರೋಗಗಳು ಮಾತ್ರವಲ್ಲ, ಭಗವಂತನು ಮಾನಸಿಕ ರೋಗಗಳನ್ನೂ ಗುಣಪಡಿಸುತ್ತಾನೆ. ಸಂಸಾರವೆಂಬ ವ್ಯಾಧಿಯಲ್ಲಿ ಸಿಕ್ಕಿ ಮನಶ್ಶಾಂತಿಯನ್ನು ಕಳೆದು ಕೊಳ್ಳುವ ನಮ್ಮೆಲ್ಲರಿಗೂ, ಭಗವಂತನೇ ಚಿಂತಾಮಣಿ. ಅವನ ಧ್ಯಾನ, ಸ್ತುತಿ, ನಮಸ್ಕಾರ ಮತ್ತು ಅವನ ಸ್ವರೂಪ ಗುಣಗಳ ಚಿಂತನೆಯೇ ಸಂಸಾರ ದುಃಖವೆಂಬ ವ್ಯಾಧಿಗೆ ಔಷಧಿ.

ಸಂಸಾರ ಮರುಕಾಂತಾರೆ ಪರಿಶ್ರಾಂತಸ್ಯ ದೇಹಿನಃ।
ತ್ವದ್ಭಕ್ತ್ಯಮೃತವಾಹಿನ್ಯಾ ಮಾದಿಷ್ಟಮವಗಾಹನಂ॥ ॥೫೨॥

'ಸಂಸಾರ'ವೆಂಬ ನಿರ್ಜೀವವಾದ ಮರುಭೂಮಿಯಲ್ಲಿ ನಡೆದು ದೇಹಾಯಾಸ ಗೊಂಡವನಿಗೆ ನಿನ್ನಲ್ಲಿ ಭಕ್ತಿ ಎಂಬ ಅಮೃತ ಪ್ರವಾಹದಲ್ಲಿ ಮೀಯುವವನಿಗೆ ಅದು ಔಷಧಿಯಂತಾಗುವುದು.

ಶ್ರೀ ರಾಮಾಯಣದಲ್ಲಿ ಶ್ರೀರಾಮನನ್ನು ಕುರಿತು ತಾರೆಯು "**ನಿವಾಸ ವೃಕ್ಷ ಸಾಧೂನಾಂ ಆಪನ್ನಾನಾಂ ಪರಾಗತಿಃ। ಆರ್ತಾನಾಂ ಸಂಶ್ರಯಶ್ಚೈವ ಯಶಸಶ್ಚೈಕಭಾಜನಂ**" ಎಂಬುದರಲ್ಲಿ ಸಂಸಾರವೆಂಬ ತಾಪದಲ್ಲಿ ಬಂದು ಬಸವಳಿದವರಿಗೆ, ಭಗವಂತನೇ ವಿಶ್ರಮ ಸ್ಥಾನ ಎಂದು ಹೇಳಿದ್ದಾಳೆ. ಅದನ್ನೇ ಇಲ್ಲಿ ಆಚಾರ್ಯರು ಪ್ರತಿಧ್ವನಿಸಿದ್ದಾರೆ. ಭಗವಂತನಲ್ಲಿ ಭಕ್ತಿ ಎಂಬುದು

ಔಷಧವಿದ್ದಂತೆ. ಪಿಳ್ಳೈ ಲೋಕಾಚಾರ್ಯರು ಶ್ರೀವಚನಭೂಷಣದಲ್ಲಿ "**ಯಂಗಳುಡೈಯ ಭೋಗ ರೋಗ ಮಹಿಳ್‌ಚ್ಚಿಕ್ಕು ಮರುಂದೋ ಭಗವಾನ್**" ಎಂದಿದ್ದಾರೆ. ಸಂಸಾರದಲ್ಲಿ ದಿಕ್ಕುಗೆಟ್ಟು ಅಲೆದು ದೇಹಾಯಾಸಗೊಂಡು ಪರಿತಾಪ ಪಡುವವನಿಗೆ ಭಗವಂತನ ನಾಮವೇ ಪರಮೌಷಧವಾಗಿದೆ.

ದುರಿತೋ ದನ್ವದಾವರ್ತೆ ಘೂರ್ಣಮಾನಸ್ಯ ದುಃಖ್ಯತಃ।
ಸಮಗ್ರ ಗುಣ ಸಂಪನ್ನಃ ತಾರಕಸ್ತ್ವಂ ಪ್ಲವೋ ಮಹಾನ್॥ ॥೫೪॥

ಕಷ್ಟಗಳೆಂಬ ಸಾಗರದಲ್ಲಿ ಮುಳುಗಿ ಕಷ್ಟ ಪಡುವ ಜೀವ ವರ್ಗಕ್ಕೆ ಸಮಸ್ತ ಕಲ್ಯಾಣ ಗುಣಾಕರನಾದ ನೀನು ಆ ದುಃಖ ಸಾಗರವನ್ನು ದಾಟುವ ದೋಣಿಯಂತಿದ್ದೀಯೆ.

ಭಗವಂತನನ್ನು ಸಂಸಾರ ಸಾಗರ ದಾಟುವ ದೋಣಿ ಎಂದು ಅನೇಕ ಆಚಾರ್ಯರುಗಳು ಉಲ್ಲೇಖಿಸಿದ್ದಾರೆ. ಸ್ವಾಮಿ ವೇದಾಂತ ದೇಶಿಕರೇ ಅನೇಕ ಸ್ತೋತ್ರಗಳಲ್ಲಿ ಇದನ್ನು ವ್ಯಕ್ತಪಡಿಸಿದ್ದಾರೆ. ಶ್ರೀಕುಲಶೇಖರಾಳ್ವಾರ್ ಸಹ 'ಮುಕುಂದ ಮಾಲೆ' ಸ್ತೋತ್ರದಲ್ಲಿ

"ಭವಜಲಧಿಗತಾನಾಂ ದ್ವಂದ್ವ-ವಾತಾಹತಾನಾಂ,
ಸುತ-ದುಹಿತೃ-ಕಳತ್ರ ತ್ರಾಣ- ಭಾರಾರ್ದಿತಾನಾಂ।
ವಿಷಮ ವಿಷಯ ತೋಯೋ ಮಜ್ಜತಾಮಪ್ಲವಾನಾಂ ।
ಭವತು ಶರಣಮೇಕೋ ವಿಷ್ಣುಪೋತೋ ನರಾಣಾಂ॥

ಭಗವಂತನು ಕರುಣಾ ಸಮುದ್ರನಾದ್ದರಿಂದ, ಸಂಸಾರ ಸಮುದ್ರವನ್ನು ದಾಟಿಸಲು ಅವನೇ ಸಮರ್ಥನಾಗಿದ್ದಾನೆ.

ಅಪರಿಚ್ಛಿದ್ಯಮಾನಸ್ಯ ದೇಶಕಾಲಾದಿಭಿಸ್ತವ ।
ನಿದರ್ಶನಂ ತ್ವಮೇವೈಕ ಸ್ತ್ವದನ್ಯದ್ವ್ಯತಿರೇಕತಃ॥ ॥೫೫॥

ದೇಶ, ಕಾಲ, ವಸ್ತು ತತ್ವಗಳಿಗೆ ಅತೀತನಾಗಿರುವ ನಿನಗೆ ಸಮಾನನು ನೀನೇ. ಮಿಕ್ಕ ಎಲ್ಲಾ ಚೇತನಾ ಚೇತನಗಳು ವೈಧರ್ಮ್ಯ ದೃಷ್ಟಾಂತಗಳಾಗುತ್ತವೆ. ಅವೆಲ್ಲವೂ ನಿನಗೆ ನಿನ್ನ ಪ್ರಯೋಜನಕ್ಕಾಗಿ ಉಪಯೋಗಪಡುತ್ತವೆ.

ಅನೇಕ ವೇದಾಂತ ತತ್ವಗಳನ್ನು ಈ ಶ್ಲೋಕಗಳಲ್ಲಿ ಆಚಾರ್ಯರು ಹೇಳಿದ್ದಾರೆ. ಭಗವಂತನು ದೇಶ ಕಾಲ ಪರಿಚ್ಛೇದವಾಗಲೀ ಕಾಲ ಪರಿಚ್ಛೇದವಾಗಲಿ, ವಸ್ತು ಪರಿಚ್ಛೇದ ವಾಗಲೀ ಇಲ್ಲದವನು. ಅವನಿಗೆ ಅವನೇ ಸಮಾನನು. ಅವನಿಗೆ ಯಾರೂ ಸಮರಿಲ್ಲ. "ಏಕಮೇ ವಾ ಅದ್ವಿತೀಯ"ನು ಎನ್ನುತ್ತದೆ ಶೃತಿ. ಈ ಜಗತ್ತೆಲ್ಲವೂ ಅವನ ಪ್ರಯೋಜನಕ್ಕಾಗಿಯೇ ಇದೆ. ಅವನಿಗೆ ಯಾವ ಪ್ರಯೋಜನ ಇಲ್ಲದಿದ್ದರೂ ಲೀಲೆಗಾಗಿ ಈ ಜಗತ್ತಿನ ಸೃಷ್ಟಿ, ಸ್ಥಿತಿ ಲಯ ಎಂಬ ನಾಟಕ ವಾಡುತ್ತಾನೆ. "**ಲೋಕವತ್ತು ಲೀಲಾ ಕೈವಲ್ಯಂ**" ಎನ್ನುತ್ತದೆ ಬ್ರಹ್ಮಸೂತ್ರ.

ಅಕರ್ತುಮಖಿಲಂಕರ್ತುಮನ್ಯಥಾ ಕರ್ತುಮಪ್ಯಲಂ।
ಸಂಕಲ್ಪ ಸಚಿವಃ ಕಾಲೇ(ಲ) ಶಕ್ತಿಲೇಶಃ ಸತಾವಕಃ ॥ ॥೫೬॥

ಕಾಲವೆಂಬುವ ವಸ್ತುವು ಸಹ ನಿನ್ನ ಶಕ್ತಿಯ ಒಂದು ಭಾಗವೇ. ನಿನ್ನ ಸಂಕಲ್ಪವನ್ನು ಜೊತೆಯಾಗಿಟ್ಟೆ, ಆಗುವುದಕ್ಕೂ ಆಗಿ ಹೋದುದಕ್ಕೂ, ಎಲ್ಲಕ್ಕೂ ಕಾರಣವಾಗಿದೆ.

ಯಾರೂ ಕಾಲವನ್ನು ಮೀರಿದವರಿಲ್ಲ. ಆದರೆ ಭಗವಂತನು ಕಾಲಕ್ಕೆ ಅಧೀನನಲ್ಲ. ಕಾಲವು ಎಲ್ಲವನ್ನೂ ನುಂಗಿ ಹಾಕುತ್ತದೆ. '**ಕಾಲೋ ಜಗದ್ಭಕ್ಷಕಃ**' ಎನ್ನುತ್ತಾರೆ. ಆ ಕಾಲವೂ ಭಗವಂತನ ಶಕ್ತಿಯ ಒಂದು ಭಾಗವೇ. ಶ್ರೀ ರಾಮಾಯಣದಲ್ಲಿ ಈ ಬಗ್ಗೆ ಅನೇಕ ಶ್ಲೋಕಗಳಿವೆ. ಶ್ರೀ ರಾಮನು ವಾಲಿ ವಧೆಯ ನಂತರ ತಾರೆಯನ್ನು ಸಮಾಧಾನ ಪಡಿಸುವಾಗ, ಕಾಲದ ಪ್ರಭಾವವನ್ನು ಹೇಳುತ್ತಾ, ಕಾಲವು ಎಲ್ಲಾ ದುಃಖವನ್ನು ಮರೆಸಿ ಎಲ್ಲದರ ಮೇಲೆ ತನ್ನ ನಿಯಂತ್ರಣವನ್ನಿಟ್ಟುಕೊಂಡಿದೆ ಎಂದಿದ್ದಾನೆ.

ಯನ್ಮೂಲಮಖಿಲಂ ಕಾರ್ಯಂ ಯದಮೂಲ ಮಧೀಮಹೇ।
ಲಕ್ಷ್ಯಂ ತದಸಿ ಯೋಗಾನಾಂ ಲಕ್ಷ್ಮೀ ಕೌಸ್ತುಭ ಲಕ್ಷಣಂ॥ ॥೫೭॥

ಎಲ್ಲಾ ಕೆಲಸಗಳಿಗೂ ಯಾವುದು ಮೂಲವೋ, ಆದರೆ ಯಾವುದಕ್ಕೆ ಮೂಲವೆಂಬುದು ಇಲ್ಲ ಎಂದು ವೇದವು ಹೇಳುತ್ತದೋ, ಅಂತಹ ಕಾರಣ ವಸ್ತುವಾಗಿ ಲಕ್ಷ್ಮಿಯನ್ನೂ ಜೀವಾಭಿಮಾನಿಯಾದ ಕೌಸ್ತುಭವನ್ನೂ ಎದೆಯಲ್ಲಿ ಧರಿಸಿರುವ ನೀನೇ ಭಕ್ತಿಯೋಗಗಳಿಗೆಲ್ಲಾ ಧ್ಯೇಯ ವಸ್ತುವಾಗಿದ್ದೀಯೆ.

ಭಗವಂತನನ್ನು ವೇದವು ಸರ್ವಕಾರಣ ಕಾರಣನೆನ್ನುತ್ತದೆ. ಎಲ್ಲಕ್ಕೂ ಮೂಲ ಕಾರಣನಾದವನು ಪರಮಾತ್ಮನು. ಆದರೆ ಅವನಿಗೆ ಯಾವುದು ಮೂಲವಿಲ್ಲ. ಇತರರಿಗೆ ಅವನೇ ಮೂಲನಾದರೂ, ಅವನಿಗೇ ಅವನೇ ಮೂಲ. ನಿತ್ಯಾನಪಾಯಿನಿಯಾದ ಲಕ್ಷ್ಮಿಯನ್ನೂ, ಜೀವಾತ್ಮ ಸ್ವರೂಪನಾದ ಕೌಸ್ತುಭವನ್ನೂ ತನ್ನ ಎದೆಯಲ್ಲಿ ಧರಿಸಿ, ಅವು ತನಗೆ ಅಪೃಥಕ್‌ಸಿದ್ಧ ವಿಶೇಷಣಗಳೆಂದು ತೋರಿಸಿದ್ದಾನೆ. ಭಕ್ತಿಯೋಗಕ್ಕೆ ಅವನೇ ಧ್ಯೇಯ ವಸ್ತು. ಭಕ್ತಿಯ ಅಂತ್ಯವೇ ಪರಮಾತ್ಮ ಸಾಯುಜ್ಯ.

ತ್ರಿವರ್ಗಃ ಅಪವರ್ಗಂ ವಾ ಪ್ರತಿಲಬ್ಧಂ ಪ್ರಯಸ್ಯತಾಂ।
ಪ್ರಲಯೇಷ್ವಪಿ ದೀರ್ಘಾಯುಃ ಪ್ರತಿಭೂಸ್ತ್ವದನುಗ್ರಹಃ॥ ॥೫೮॥

ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳನ್ನೂ, ಮೋಕ್ಷವನ್ನೂ ಹೊಂದಲಿಚ್ಛಿಸುವವರಿಗೆ ಅವುಗಳು ಪ್ರಳಯ ಕಾಲದಲ್ಲೂ ಸಹ ಯಾವ ಆಯುಧದಿಂದಲೂ ಸಹ ನಾಶವಾಗದ ಹಾಗೆ ಅನುಗ್ರಹಿಸುವವನು ನೀನು.

ಚತುರ್ವಿಧ ಪುರುಷಾರ್ಥಗಳು ನಾಲ್ಕು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ನಾಲ್ಕೂ ಉತ್ತಮವಾದವುಗಳೇ. ಆದರೆ ಅವುಗಳಲ್ಲಿ ಮೋಕ್ಷವು ಅತ್ಯಂತ ಶ್ರೇಷ್ಠವಾದದ್ದು. ಮೋಕ್ಷವನ್ನು ಬಯಸುವವನಿಗೆ ಇತರ ಮೂರು ತಾನಾಗಿಯೇ ಸಿದ್ಧಿಸುವುವು. ದಯಾಶತಕ ದಲ್ಲಿ ಆಚಾರ್ಯರೇ ''**ಅತಿವರ್ಗ ತ್ರಿವರ್ಗಯೋ**'' ಎಂದು ಶ್ರೀನಿವಾಸನ ದಯೆಯಿದ್ದಲ್ಲಿ ಎಲ್ಲಾ ಪುರುಷಾರ್ಥಗಳೂ ಲಭಿಸುವುವು ಎಂದಿದ್ದಾರೆ. ಭಗವಂತನ ಅನುಗ್ರಹವಿದ್ದಲ್ಲಿ ಯಾವ ಸಂದರ್ಭದಲ್ಲಿಯೂ ಅವುಗಳಿಗೆ ನಾಶವಿರುವುದಿಲ್ಲ.

ಯದೇಕಮಕ್ಷರಂ ಬ್ರಹ್ಮ ಸರ್ವಾಮ್ನಾಯ ಸಮನ್ವಿತಂ।
ತಾರಕಂ ಸರ್ವ ಜಂತೂನಾಂ ತತ್ ತ್ವಂ ತವ ಚ ವಾಚಕಂ॥ ॥೫೯॥

ಎಲ್ಲಾ ವೇದಗಳಲ್ಲೂ ಪ್ರಧಾನವಾಗಿ ಹೇಳಲ್ಪಟ್ಟಿರುವ ಬ್ರಹ್ಮವೆಂಬ ಅಕ್ಷರವಾದ ಪ್ರಣವವು ಎಲ್ಲಾ ಜಂತುಗಳಿಗೂ ಕ್ಷೇಮವನ್ನುಂಟು ಮಾಡುವವನೂ ನೀನೇ. ಪ್ರಣವದ ಅಭಿಮಾನಿ ದೇವತೆಯೂ ನೀನೇ. ಪ್ರಣವವು ಮುಖ್ಯವಾಗಿ ನಿನ್ನನ್ನೇ ಹೇಳುತ್ತದೆ.

''ಓಂ ಇತ್ಯೇಕಾಕ್ಷರಂ ಬ್ರಹ್ಮ'' ಎಂದು ಪ್ರಸಿದ್ಧ ವಾಕ್ಯವುಂಟು. ಪ್ರಣವವೇ ಬ್ರಹ್ಮ. ಪ್ರಣವವನ್ನು ಅರಿತಲ್ಲಿ ಬ್ರಹ್ಮವನ್ನು ಅರಿತಂತೆ. ಶ್ರೀರಾಮಾಯಣದಲ್ಲಿ ''ಅಗ್ರತಃ ಪ್ರಯಯೌ ರಾಮಃ ಸೀತಾ ಮಧ್ಯೇ ಸಮಧ್ಯಮಾ । ಪೃಷ್ಠತಸ್ತು ಧನುಷ್ಪಾಣಿ ಲಕ್ಷ್ಮಣೋ ಅನುಜಗಾಮಹ'' ಎಂಬ ಶ್ಲೋಕವು ಪ್ರಣವಾರ್ಥವನ್ನು ತಿಳಿಸುತ್ತದೆ ಎಂದಿದ್ದಾರೆ ವ್ಯಾಖ್ಯಾನಕಾರರು. ಪ್ರಣವದ ಸ್ವರೂಪಿಯಾದ ಭಗವಂತನೇ ಸರ್ವರಿಗೂ ಕ್ಷೇಮವನ್ನುಂಟು ಮಾಡುವವನು. ತೈತ್ತಿರಿಯೋಪನಿಷತ್ತಿನಲ್ಲಿಯೂ, ಭಗವದ್ಗೀತೆಯಲ್ಲಿಯೂ ಓಂಕಾರದ ಮಹಿಮೆಯನ್ನು ಹೇಳಿದೆ. ವೇದಗಳ ಸಾರವೇ ಪ್ರಣವಃ ಅದರ ಮಹಿಮೆಯನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ.

ತ್ವದಾಲಂಬಿತ ಹಸ್ತಾನಾಂ ಭವಾದುನ್ಮಜ್ಜತಾಂ ಸತಾಂ।
ಮಜ್ಜತಃ ಪಾಪ ಜಾತಸ್ಯ ನಾಸ್ತಿ ಹಸ್ತಾವಲಂಬನಂ ॥ ॥೬೦॥

ಸಂಸಾರ ಸಾಗರದಲ್ಲಿ ಮುಳುಗಿ ಹೋಗುತ್ತಿರುವ ಜಂತುಗಳಿಗೆ ಹಸ್ತಾವಲಂಬನ ಕೊಟ್ಟು ಕಾಪಾಡುವವನೂ ನೀನೇ. ಬೇರೆ ಯಾರೂ ಅವರನ್ನು ಕಾಪಾಡಲು ಸಾಧ್ಯವಿಲ್ಲ. ಅವರಿಗೆ ಬೇರೆ ಯಾವ ಆಸರೆಯೂ ಇಲ್ಲ.

''ಸಂಸಾರ ಸಾಗರ ತರಣೈಕ ಸೇತುಃ'' ಎಂಬುದಾಗಿ ಭಗವಂತನೇ ನಮ್ಮನ್ನು ಈ ಸಂಸಾರ ವೆಂಬ ಗಹನವಾದ, ಆಳವಾದ ಸಮುದ್ರದಿಂದ ಪಾರು ಮಾಡಬಲ್ಲನು. ಅವನ ನಾಮ ಸ್ಮರಣೆಯೇ ನಮಗೆ ದೊಡ್ಡ ದೋಣಿ ಇದ್ದ ಹಾಗೆ. ಅವನನ್ನು ಬಿಟ್ಟು ಬೇರೆ ಯಾರೂ ಗತಿ ಇಲ್ಲ. ಮುಳುಗಿಹೋಗುತ್ತಿರುವ ನಮಗೆ ಕೈ ನೀಡಿ, ಮೇಲಕ್ಕೆತ್ತುವ ಮಹಾಮಹಿಮನೂ ಅವನೇ. ಎಲ್ಲಾ ಆಚಾರ್ಯರೂ ಈ ಉಪಮಾನವನ್ನು ಅವರ ಸ್ತೋತ್ರಗಳಲ್ಲಿ ನೀಡಿದ್ದಾರೆ. ಅವನನ್ನು ಆಶ್ರಯಿಸಿದರೆ ಮಾತ್ರ ಈ ಭವ ಸಾಗರವನ್ನು ದಾಟಲು ಸಾಧ್ಯ.

ಅನನ್ಯ ರಕ್ಷಾವ್ರತಿನಂ ಚಾತಕ ವ್ರತಚಾರಿಣಃ।
ಭವಂತಮವಲಂಭಂತೆ ನಿರಾಲಂಬನ ಭಾವನಂ ॥ ॥೬೧॥

ಅನಿದಂ ಪೂರ್ವ ನಿದ್ರಾಣಾಂ ಮನಸ್ತಮಯ ಭಾನುಮಾನ್।
ಆಪಾದಯಸಿ ಪುಂಸಾಂ ತ್ವಮ್ ಮಪುನಸ್ವಾಪ ಜಾಗರಂ॥ ॥೬೨॥

ತ್ವದೇಕ ಶರಣಾನಾಂ ತ್ವಂ ಶರಣಾಗತ ಜೀವನಃ।
ವಿದದಂ ನಃ ಕ್ಷಿಪ ಕ್ಷಿಪ್ರಂ ತಮಿಸ್ರಾಮಿವ ಭಾಸ್ಕರಃ॥ ॥೬೩॥

ಸತಿ ಸೂರ್ಯೇ ಸಮುದ್ಯಂತಃ ಪ್ರತಿಸೂರ್ಯಾ ಇವಾಸುರಾಃ।
ಜಗದ್ಧಾಥಾಯ ಜಾಯಂತೆ ಜಹಿ ತಾನ್ ಸ್ವೇನ ತೇಜಸಾಃ॥ ॥೬೪॥

ಸ ದೈತ್ಯಹಸ್ತಾಮಿಚ್ಛದ್ಭಿಃ ಸುರೈರೇವಮಭಿಷ್ಟುತಃ।
ಅನನ್ಯ ದೃಶ್ಯಃ ಸಹಸಾ ದಯಯಾ ದರ್ಶನಂ ದದೌ ॥ ॥೬೫॥

ಇತರರನ್ನು ರಕ್ಷಿಸುವುದರಲ್ಲಿ ದೃಢ ಸಂಕಲ್ಪವುಳ್ಳವನೂ, ಆದ್ದರಿಂದ ಕೇವಲ ಮಳೆಯ ನೀರನ್ನೇ ಆಧಾರವಾಗಿ ಕಾಯುವ ಚಾತಕ ಪಕ್ಷಿಗಳಂತೆ ಇರುವ ಪ್ರಪನ್ನರುಗಳು ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ಆಶ್ರಯಿಸುವುದಿಲ್ಲ. ಅನಾದಿ ಕಾಲದಿಂದ ಸಂಸಾರದಲ್ಲಿ ತೊಳಲುತ್ತಿರುವ ಜೀವರುಗಳಿಗೆ ಅಸ್ತಮಿಸದೆ ಇರುವ ಸೂರ್ಯನಂತಿರುವ ನೀನು ಮತ್ತೆ ಮತ್ತೆ ಈ ಸಂಸಾರಕ್ಕೆ ಬರುವಂತೆ ಮಾಡುವುದಿಲ್ಲ.

ಶರಣಾಗತರಾದವರಿಗೆ ಅವರ ಅಳಿವು ಉಳಿವುಗಳನ್ನು ನೋಡಿಕೊಳ್ಳುವ ನೀನು ನಮಗೆಲ್ಲಾ ಸೂರ್ಯನು ಕತ್ತಲನ್ನು ಹೋಗಲಾಡಿಸುವಂತೆ ನಮ್ಮನ್ನು ಕಾಪಾಡಬೇಕು. ಸೂರ್ಯನು ಒಬ್ಬನಿದ್ದಲ್ಲಿ ಜಗತ್ತಿಗೆಲ್ಲಾ ಕ್ಷೇಮವು. ಅನೇಕ ಪ್ರತಿ ಸೂರ್ಯರುಗಳಿದ್ದರೆ ಅದು ಜಗತ್ತಿಗೆ ನಾಶವೇ. ನಿನಗೆ ಎದುರಾಗಿ ಅಸುರರುಗಳು ಪ್ರತಿಸೂರ್ಯರುಗಳಂತೆ ಇರುವುದರಿಂದ ಅವರನ್ನು ನಿಗ್ರಹಿಸಬೇಕು. ಅಸುರರುಗಳನ್ನು ನಿಗ್ರಹಿಸಲು ದೇವತೆಗಳು ಶರಣಾಗತಿ ಮಾಡಿದರು. ಆದಿಶೇಷನೂ ಮಲಗಿರುವವನನ್ನು ಶರತ್ಕಾಲದಲ್ಲಿ ಬೆಳಗುವ ವಿಚಿತ್ರವಾದ ಮೇಘದಂತೆ ತಿಳಿದನು. ದೇವತೆಗಳೆಲ್ಲರೂ ಸ್ವಾಮಿಗೆ ನಮಸ್ಕರಿಸಿ, ಸ್ತೋತ್ರ ಮಾಡಿದರು.

ತತಸ್ತಂ ದದೃಶುರ್ದೇವಾಃ ಶೇಷ ಪರ್ಯಂಕಮಾಸ್ಥಿತಂ।
ಅಧಿರೂಢ ಶರನ್‌ಮೇಘ ಮನ್ಯಾದೃಶ ಮಿವಾಂಬುಧಂ॥ ॥೬೬॥

ಪತ್ನ್ಯಾ ಸಹ ನಿಷೇದುಷ್ಯಾ ಪದ್ಮಲಕ್ಷಣ ಲಕ್ಷ್ಯಯಾ।
ಸ್ವೇಚ್ಛಯೈವ ಶರೀರಿಣ್ಯಾ ಸೂಚಿತೈಶ್ವರ್ಯ ಸಂಪದಂ ॥ ॥೬೭॥

ಸುಕುಮಾರ ಸುಖಸ್ಪರ್ಶ ಸುಗಂಧಿಭಿರಲಂಕೃತಂ।
ಸ್ವವಿಗ್ರಹ ಗುಣಾರಾಮ ಪ್ರಸೂನೈರಿವ ಭೂಷಣೈಃ॥ ॥೬೮॥

ಆರಂಜಿತ ಜಗನ್ನೈತ್ರೈರನ್ಯೋನ್ಯ ಪರಿಕರ್ಮಿತೈಃ।
ಅಂಗೈರಮಿತ ಸೌಂದರ್ಯೈರನುಕಲ್ಪಿತ ಭೂಷಣಂ॥ ॥೬೯॥
ಉತ್ತೇಜಿತ ಜಯೋತ್ಸಾಹಮಾಯುಧೈರನಘೋದ್ಯಮೈಃ।
ಶೌರ್ಯ ವಿಕ್ರಮ ಶಕ್ತ್ಯಾದ್ಯೈ ಸಹಜೈಃ ಸ್ವಗುಣೈರಿವ॥ ॥೭೦॥

ಆವಾಗ ಅವನನ್ನು ದೇವತೆಗಳು ದರ್ಶನ ಮಾಡಿದರು. ಆದಿಶೇಷನ ಮೇಲೆ ಮಲಗಿರುವವನನ್ನು ಕಂಡು ಸ್ತೋತ್ರ ಮಾಡಿದರು. ತಾವರೆಹೂವಿನ ಮೇಲೆ ಜನಿಸಿದ ತನ್ನ ಮಡದಿಯಾದ ಶ್ರೀದೇವಿಯೊಡನೆ ತನ್ನ ಐಶ್ವರ್ಯವನ್ನು ತೋರುತ್ತಾ ಇರುವವನಾದ, ಸ್ಪರ್ಶದಿಂದಲೇ ಸುಖವನ್ನು ಕೊಡುವವನಾದ, ಸುಗಂಧವಾದ ಪರಿಮಳವನ್ನು ಸೂಸುವನೂ ಆದ ಅದರಿಂದಲೇ ಸೌಂದರ್ಯಾದಿ ಗುಣಗಳಿಗೆ ಉದ್ಯಾನದಂತಿರುವವನೂ, ತನ್ನ ದಿವ್ಯ ಮಂಗಳರೂಪದಿಂದ ಅರಳಿದ ಅನೇಕ ಪುಷ್ಪಗಳಂತೆ ತೋರುವ ಆಭರಣಗಳಿಂದ ಭೂಷಿತನಾದವನೂ, ಸರ್ವಾಲಂಕಾರ ಭೂಷಿತನಾಗಿರುವ ನೋಡುವವರ ಕಣ್ಣುಗಳಿಗೆ ಅನುರಾಗ ಉಂಟು ಮಾಡುವವನೂ, ಅಪರಿಮಿತ ಸೌಂದರ್ಯ ಉಳ್ಳವನೂ, ಎಲ್ಲಾ ಸದ್ಗುಣಗಳು ಒಂದಕ್ಕೊಂದು ಪೂರಕವಾಗಿರುವವನೂ, ತನಗೆ ಸಹಜವಾಗಿರುವ ಶೌರ್ಯ, ಪರಾಕ್ರಮ, ಶಕ್ತಿ ಎಂಬ ಗುಣಗಳಿಂದ ಶೋಭಿಸುವವನೂ, ದಿವ್ಯಾಯುಧಗಳಿಂದ ಉತ್ತೇಜಿಸಲ್ಪಟ್ಟ ಜಯೋತ್ಸಾಹವುಳ್ಳವನೂ,

ಸ್ವಕಾಂತಿ ಜಲಧೇರಂತ ಸಿದ್ಧ ಸಂಹನನಂ ಸ್ವತಃ।
ಮಹಿಮ್ನಾ ಜ[illegible]ವೈಚಿತ್ರ್ಯಂ ಮಹಾನೀಲಮಿವೋದಿತಂ॥ ॥೭೧॥
ಶ್ರುತಿರೂಪೇಣ ವಾಹೇನ ಶೇಷ ಕಂಕಣ ಶೋಭಿನಾ।
ಸ್ವಾಂಘ್ರಿ ಸೌರಭದಿಗ್ಧೇನ ದತ್ತ ಸಂಗ್ರಾಮದೋಹಲಂ॥ ॥೭೨॥
ಸ್ವವೇತ್ರ ಸ್ಪಂದ ನಿಃಸ್ಪಂಧ ನೇತವ್ಯೇನ ನಿವೇದಿತಂ।
ಭಕ್ತಿನಮ್ರೇಣ ಸೇನಾನ್ಯಾ ಪ್ರತಿಶೃಣ್ವಂತ ಮಿಂಘಿತೈಃ॥ ॥೭೩॥
ಅನಪಾಯಂ ತಮಾದಿತ್ಯ ಮಕ್ಷಯಂ ತಾರಕಾಧಿಪಂ।
ಅಪಾರಮಮೃತಾಂಭೋದಿ ಮಮನ್ಯತ ದಿವೌಕಸಃ॥ ॥೭೪॥
ಅಭಯೋದಾರ ಹಸ್ತಾಗ್ರ ಮನಘ ಸ್ವಾಗತಸ್ಮಿತಂ।
ಅವೇಕ್ಷ್ಯ ವಿಭುದಾ ದೇವಂ ಅಲಭಂತ ದೃಶೋಃ ಫಲಂ॥ ॥೭೫॥

ತನ್ನ ಕಾಂತಿಯಾಗಿರುವ ಸಮುದ್ರದಲ್ಲಿ ತಾನೇ ತೋರಿರುವ ದಿವ್ಯ ದೇಹವುಳ್ಳವನಾಗಿ, ತನ್ನ ಮೇಲ್ಮೈಯಿಂದ ಅನೇಕ ವಿಚಿತ್ರ ರೂಪಗಳನ್ನು ಪಡೆಯುವ ಶಕ್ತಿ ಉಳ್ಳವನಾಗಿರುವ ಆದಿಶೇಷನ ಮೇಲೆ ಮಲಗಿ ಶೋಭಿಸುವವನಾಗಿ, ತನ್ನ ದಿವ್ಯ ಚಕ್ರದ ಪರಿಮಳದಿಂದ ಸುಖಾಂತ್ಯವಾದ ವೇದರೂಪವಾದ ವಾಹನದಿಂದ ಶೋಭಿಸುವವನೂ, ತನ್ನ ಕೈಯ್ಯಲ್ಲುಳ್ಳ ದಂಡ ಹಸ್ತದಿಂದ ಆಶ್ರಿತರನ್ನು ಕಾಪಾಡುವ ವಿಷ್ವಕ್ಸೇನರಿಂದ ಭಕ್ತಿಯಿಂದ ನಮಸ್ಕರಿಸಲ್ಪಡು

ವವನೂ, ಎಲ್ಲವನ್ನೂ ಇಂಗಿತಗಳಿಂದಲೇ ತಿಳಿಯುವವನೂ ಆದ ಶ್ರೀಮನ್ನಾರಾಯಣವ ಹಿರಿಮೆಯನ್ನು ತೇಜಸ್ಸನ್ನು ನೋಡಿ ಸೂರ್ಯ ಚಂದ್ರನೂ, ಅಮೃತವೆಂದು ತಿಳಿದು ಮತ್ತೆ ಮತ್ತೆ ಅಸ್ತಮಯರಾದರು.

ಅಭಯವನ್ನು ಸೂಸುವ ದಿವ್ಯ ಹಸ್ತಗಳಿಂದ ಶೋಭಿತನಾಗಿ, ದುಃಖಗಳನ್ನು ನಿವಾರಿಸುವ ದಿವ್ಯ ವದನಾರವಿಂದವನ್ನು ನೋಡಿ ದೇವತೆಗಳು, ಅವನ ಸ್ವಾಗತ ನೇತ್ರಗಳನ್ನು ಕಂಡು, ತಮ್ಮ ಉದ್ದೇಶ ಫಲ ಹೊಂದುವುದಾಗಿ ಭಾವಿಸಿದರು.

ತಸ್ಮೈ ವಿಜ್ಞಾಪಯಾಮಾಸುರ್ವಿದಿತಾರ್ಥಾಯ ನಾಕಿನಃ।
ನಿಹತಾ ಶೇಷ ದೈತ್ಯಾಯ ನಿದಾನಂ ಸ್ವಾಗತೇಃ ಪುನಃ॥ ॥೭೬॥

ತ ಇಮೇ ಕ್ಷತ್ರಿಯಾ ಭೂತ್ವಾಕ್ಷೋಭಯಂತಿ ಕ್ಷಮಾಮಿಮಾಂ।
ತವ ತೇಜಸಿ ಯೈರ್ನಾಥ ದನುಜೈ ಶ್ಶಲಭಾಯಿತಂ॥ ॥೭೭॥

ಚತುರ್ಣಾಂ ಪುರುಷಾರ್ಥಾಣಾಂ ಪ್ರಸವೋ ಯತ್ಸಮಾಶ್ರಯಾತ್।
ಹವ್ಯಕವ್ಯ ಪ್ರಸೂರೇಷಾ ದೀರ್ಯತೇ ದೈತ್ಯಭಾರತಃ॥ ॥೭೮॥

ಜಾತಾಃ ನಿಖಿಲ ವೇದಾನಾಂ ಮುತ್ತಮಾಂಗೋಪಧಾನತಃ।
ತ್ವತ್ಪಾದ ಕಮಲಾದೇಷಾ ತ್ವದೇಕಾಧೀನಧಾರಣಾ॥ ॥೭೯॥

ಯದಿನ ತ್ವರತೇ ನಾಥ ಭಾರವ್ಯಪನಯೀ ಭವಾನ್।
ಪ್ಲಾವಯಿಷ್ಯನ್ ತ್ಯುದನ್ವಂತಃ ಪೃಥಿವೀಂ ಪೃಥಿವೀ ಚಯಃ॥ ॥೮೦॥

ಸ್ವರ್ಗವಾಸಿಗಳಾದ ದೇವತೆಗಳು, ಎಲ್ಲಾ ಮೊದಲೇ ತಿಳಿದವನೂ, ಎಲ್ಲಾ ಅಸುರರುಗಳನ್ನು ನಾಶಪಡಿಸುವವನಾದ ಅವನಲ್ಲಿ ಮತ್ತೆ ತಮ್ಮ ಬರುವಿಕೆಯ ಕಾರಣವನ್ನು ತಾವೇ ವಿಜ್ಞಾಪನೆ ಮಾಡಿಕೊಂಡರು.

ನಾಥಾ! ಮಹಾಮಹಿಮನಾದ ನಿನ್ನಲ್ಲಿ, ಜಂತುಗಳಂತೆ ಯಾವ ಅಸುರರೂ ಹಿಂದೆ ನಿನ್ನನ್ನು ಎದುರಿಸಿ, ನಾಶವಾದರೋ ಅವರೇ ಕ್ಷತ್ರಿಯರುಗಳಾಗಿ ಆ ಭೂಮಿಯನ್ನು ಕಲಕಿ ಬಿಟ್ಟಿದ್ದಾರೆ. ಯಾವ ಭೂಮಿಯಲ್ಲಿ ತಂಗಿ ನಾಲ್ಕು ವಿಧ ಪುರುಷಾರ್ಥಗಳನ್ನು ಹೊಂದಬೇಕೋ ದೇವತೆಗಳಿಗೆ ಪಿತೃಗಳಿಗೆ ಆಹಾರವಾದ ಹವ್ಯಕವ್ಯಗಳನ್ನು ಒದಗಿಸುವ ಭೂಮಿಯಾದುದು ಅಸುರ ಭಾರದಿಂದ ಅಲ್ಲಾಡುತ್ತಿದೆ.

ವೇದಗಳಿಗೆಲ್ಲಾ ಮುಖ್ಯಸ್ಥನಾದ ನಿನ್ನ ದಿವ್ಯ ಪಾದಾರವಿಂದಗಳಲ್ಲಿ ತೋರಿರುವ ಈ ಭೂಮಿಯನ್ನು ಕಾಪಾಡುವುದೆಂಬುದು ನಿನ್ನೊಬ್ಬನಿಗೆ ಅಧೀನವಾದುದು.

ನಾಥಾ! ನೀನು ಈ ಭಾರವನ್ನು ಹೋಗಿಸಲು ಭೂಮಿಯಲ್ಲೇ ಜನಿಸಿ, ಅವಳನ್ನು ಉದ್ಧರಿಸಬೇಕು.

ಕರುಣಾಧೀನ ಚಿತ್ತೇನ ಕರ್ಣಧಾರವತೀ ತ್ವಯಾ।
ಮಾಽವಸೀದತು ಪೃಥ್ವೀಯಂ ಮಹತಿ ನೌರಿವಾಂಭಸಿ॥ ॥೮೧॥

ಕರುಣೆಗೆ ವಶನಾದ ನೀನು ಪೃಥಿವಿಯನ್ನು ನಿನ್ನ ಕಿವಿಗೇ ಕಟ್ಟಿಕೊಂಡು ಈ ಹಿಂದೆ ನಾವಿಕನಂತೆ ಕಾಪಾಡಿದ್ದೀಯೆ. ಈಗ ಸುಮ್ಮನಿರುವುದು ತರವಲ್ಲ.

ಈ ಹಿಂದೆ ಮತ್ಸ್ಯಾವತಾರದಲ್ಲಿ ಭಗವಂತನು ಭೂಮಿಯನ್ನು ಕಾಪಾಡಿರುವ ವೃತ್ತಾಂತವನ್ನು ಸ್ಮರಿಸುತ್ತಾರೆ. ಮತ್ಸ್ಯಾವತಾರವನ್ನು ಪ್ರಳಯ ಕಾಲದಲ್ಲಿ ಭೂಮಿಯನ್ನು ಅದರ ಔಷಧಿಗಳು, ವೇದಗಳು ಋಷಿಗಳ ಸಮೇತ ಕಾಪಾಡಲು ಭಗವಂತನು ಎತ್ತಿದ್ದಾನೆ. ಸತ್ಯವ್ರತನೆಂಬ ರಾಜನು ಸಮುದ್ರದಲ್ಲಿ ತೋರಿದ ಒಂದಾನೊಂದು ಮತ್ಸ್ಯದ ಮೂಗಿಗೆ ಒಂದು ನಾವಿಕೆಯನ್ನು ಕಟ್ಟಿ ಅದರಲ್ಲಿ ಭೂಮಿಯಲ್ಲಿದ್ದ ಎಲ್ಲಾ ಉತ್ತಮ ವಸ್ತುಗಳನ್ನು ತುಂಬಿಸಿ ಆ ಮೂಲಕ ಭೂಮಿಯನ್ನು ಕಾಪಾಡಿದ. ಭಗವಂತನು ಆ ನಾವೆಯನ್ನು ಪ್ರಳಯ ಜಲವು ಅಡಗುವುದರ ತನಕ ತಾನೇ ಮೂಗಿಗೆ ಕಟ್ಟಿಕೊಂಡು ಜಗತ್ತನ್ನು ಕಾಪಾಡಿದನೆಂದು ಮತ್ಸ್ಯಾವತಾರದ ಕತೆಯಲ್ಲಿ ಬರುತ್ತದೆ. ಈಗ ಅದೇ ಭೂಮಿಯನ್ನು ಉಪೇಕ್ಷಿಸುವುದು ತರವೇ? ಎಂದು ದೇವತೆಗಳು ಪ್ರಶ್ನಿಸುತ್ತಾರೆ.

ರಶನಾ ರತ್ನರೂಪೇಣ ಪಯೋಧಿರಶನಾ ತ್ವಯಾ।
ಪ್ರಶಾಂತ ದನುಜ ಕ್ಲೇಶಾ ಪರಿಷ್ಕರಣ ಮರ್ಹತಿ॥ ॥೮೨॥

ಭೂಮಿಗೆ ಆಶ್ರಯವಾಗಿರುವ ಸಮುದ್ರದಲ್ಲಿ ಮಲಗಿಕೊಂಡಿರುವ ನೀನು, ನೀಲರತ್ನದಂತೆ ಶೋಭಿಸುತ್ತಿದ್ದೀಯೆ. ಹಾಗಿರುವಲ್ಲಿ ಭೂಮಿಗೆ ಒದಗಿರುವ ದನುಜರಿಂದ ಉಂಟಾದ ಕ್ಲೇಶವನ್ನು ನೀನು ಬಗೆಹರಿಸಬೇಕು.

ಸಮುದ್ರವು ಭೂಮಿಗೆ ಆಶ್ರಯವನ್ನು ನೀಡಿದೆ. ಭೂಮಿಯ ಸುತ್ತಲೂ ಸಮುದ್ರವಿದೆ. ಸಮುದ್ರದ ಮಧ್ಯದಲ್ಲಿರುವ ಭೂಮಿಯನ್ನು ಸಮುದ್ರದಲ್ಲಿಯೇ ಮಲಗಿರುವ ಕ್ಷೀರಾಬ್ಧಿಶಾಯಿಯಾದ ಶ್ರೀಮನ್ನಾರಾಯಣನೇ ಕಾಪಾಡಬೇಕು.

ಭೂಮಿಗೆ ದುಷ್ಟಕ್ಷತ್ರಿಯರಿಂದ ಒದಗಿರುವ ಈ ಕ್ಲೇಶವನ್ನು ಪರಮಾತ್ಮನೇ ಪರಿಹರಿಸಿ ಕಾಪಾಡಬೇಕು ಎಂದು ಪ್ರಾರ್ಥಿಸುತ್ತಿದ್ದಾರೆ. ಭಗವಂತನು ಸಮುದ್ರ ಮಧ್ಯದಲ್ಲಿ ಮಲಗಿ ನೀಲರತ್ನದಂತೆ ಶೋಭಿಸುತ್ತಾ, ಸಮುದ್ರಕ್ಕೂ ಕಾಂತಿಯನ್ನು ತಂದುಕೊಟ್ಟಿದ್ದಾನೆ.

ಕಂಸ ಪ್ರಭೃತಿಭಿಃ ಸೇಯಂ ಶಲ್ಯೈರಿವ ಸಮುದ್ಧೃತೈಃ।
ಚಿರಂ ಭವತು ತೇ ಪೃಥ್ವಿ ಶೇಷ ಮೂರ್ತೇಃ ಶಿಖಂಡಕಃ ॥ ॥೮೩॥

ದೇಹದಲ್ಲಿ ಹೊಕ್ಕಿರುವ ಬಾಣಗಳಂತೆ ಇರುವ ಕಂಸಾದಿ ಪ್ರಭೃತಿಗಳನ್ನು ನೀನು ನಿಗ್ರಹಿಸಿದಲ್ಲಿ ಮಾತ್ರ ಶೇಷನಾಗಿರುವ ನಿನ್ನ ದಿವ್ಯ ಮಂಗಳ ವಿಗ್ರಹವು ಶೋಭಿಸುತ್ತದೆ. ತಲೆಯ ಕೂದಲು ತಲೆಗೆ ಭಾರವಲ್ಲವಷ್ಟೆ! ಅದೇ ರೀತಿ ಭೂಮಿಯ ರಕ್ಷಣೆ ನಿನಗೆ ಭಾರವಲ್ಲ.

"ಜಗತ್ಸರ್ವಂ ಶರೀರಂತೇ ಸ್ಥೈರ್ಯಂತೇ ವಸುಧಾಚಲಂ" ಈ ಜಗತ್ತೆಲ್ಲವೂ ಭಗವಂತನಿಗೆ ಶರೀರ. ಆದ್ದರಿಂದ ಈ ಜಗತ್ತಿನಲ್ಲಿರುವ ದುಷ್ಟ ಶಕ್ತಿಗಳು ಭಗವಂತನ ಮೈಯ್ಯಲ್ಲಿರುವ ಬಾಣಗಳಂತೆ. ಆ ಬಾಣಗಳನ್ನು ಕಿತ್ತು ಹಾಕಿದರೆ ಮಾತ್ರ, ಅವನ ದಿವ್ಯ ಮಂಗಳ ವಿಗ್ರಹವು ಅದ್ಭುತವಾಗಿ ಶೋಭಿಸುತ್ತದೆ. ಆದ್ದರಿಂದ ಕಂಸಾದಿಗಳನ್ನು ನಿಗ್ರಹಿಸುವುದು ಅತ್ಯವಶ್ಯಕ ವಾಗಿದೆ. ತನ್ನ ಪ್ರೀತಿಯ ಮಡದಿಯಾದ ಭೂದೇವಿಯ ರಕ್ಷಣವು ಅವನಿಗೆ ಭಾರವಲ್ಲ. ತಲೆಯ ಮೇಲೆ ಕೂದಲು ಎಷ್ಟೇ ದಷ್ಟವಾಗಿದ್ದರೂ ತಲೆಗೇನೂ ಅದು ಭಾರವಲ್ಲ, ಅದರಂತೆ ಭೂಮಿಯು ಅವನಿಗೆ ಭಾರವಿಲ್ಲ.

ಪ್ರಭೋದ ಸುಭಗೈಃ ಸ್ಥೈರೈಃ ಪ್ರಸನ್ನೈ ಶೀತಲೈಶ್ಚನಃ।
ಕಟಾಕ್ಷೈಃ ಪ್ಲಾವಯ ಕ್ಷಿಪ್ರಂ ಕೃಪೈಕೋದನ್ವದೂರ್ಮಿಭಿಃ॥ ॥೮೪॥

ನಿನ್ನ ಕಣ್ಣುಗಳಿಂದ ಹೊರಸೂಸುವ ಶೀತಲವಾದ, ಪ್ರಸನ್ನವಾದ ಕಟಾಕ್ಷಗಳಿಂದ ನಮ್ಮನ್ನು ಶೀಘ್ರವೇ ವೀಕ್ಷಿಸಿ, ನಮ್ಮನ್ನು ಕ್ಲೇಶದಿಂದ ಪಾರು ಮಾಡಬೇಕು.

ಭಗವಂತನ ದಿವ್ಯವಾದ, ಅಮೃತ ಸೇಚನವನ್ನು ಉಂಟು ಮಾಡುವ ಕೃಪಾ ಕಟಾಕ್ಷವನ್ನು ಪ್ರಾರ್ಥಿಸಿದ್ದಾರೆ. ಭಗವಂತನ ಪ್ರೇಮ ಸೂಚಕವಾದ ಕಟಾಕ್ಷ ನಮ್ಮ ಮೇಲೆ ಬಿದ್ದಿದ್ದೇ ಆದಲ್ಲಿ ನಮ್ಮ ಎಲ್ಲಾ ದುರಿತಗಳೆಲ್ಲವೂ ನೀಗಿ, ಶುಭವೇ ಉಂಟಾಗುವುದು. ಆ ಭಗವಂತನ ದಿವ್ಯ ಕಟಾಕ್ಷದ ಬಗ್ಗೆ ಅನೇಕ ಕಡೆಗಳಲ್ಲಿ ಆಚಾರ್ಯರುಗಳೂ, ಕವಿಗಳೂ, ಆಳ್ವಾರರುಗಳೂ ಅಮೋಘ ವಾಗಿ ಸ್ತುತಿಸಿದ್ದಾರೆ. ಆ ಪರಮಾತ್ಮನ ಕುಡಿಗಣ್ಣಿನ ನೋಟವು ಅಮೃತ ಧಾರೆಯಿದ್ದಂತೆ. ಅಮೃತ ಸೇವನೆಯಿಂದ ಯಾವ ರೀತಿ ಮನುಷ್ಯನು ಅಮರನಾಗುವನೋ, ಅದೇ ರೀತಿ ಭಗವಂತನ ದಿವ್ಯ ಕಟಾಕ್ಷವು ನಮ್ಮನ್ನು ಸಮಸ್ತ ಕ್ಲೇಶಗಳಿಂದ ಪಾರು ಮಾಡುತ್ತದೆ.

ತ್ವಯಿ ನ್ಯಸ್ತ ಭರಾಣಾಂ ನಸ್ತ್ವಮೇ ತಾಂ ಕ್ಷಂತು ಮರ್ಹಸಿ।
ವಿದಿತಾ ಶೇಷ ವೇದ್ಯಸ್ಯ ವಿಜ್ಞಾಪನ ವಿಡಂಬನಾಂ॥ ॥೮೫॥

ನಿನ್ನಲ್ಲಿ ಶರಣಾಗತಿ (ಭರನ್ಯಾಸ) ಮಾಡುವುದರ ಮೂಲಕ, ನಾವು ಮಾಡುವ ಈ ಪ್ರಾರ್ಥನೆಯು ವಿಡಂಬನವಾಗಿದ್ದರೂ, ಅದನ್ನು ಸ್ವೀಕರಿಸಿ ಕಾಪಾಡಬೇಕು.

ನಮ್ಮಲ್ಲಿ ನಿಜವಾದ ಭಕ್ತಿಯಿಲ್ಲ, ಕೇವಲ ತೋರಿಕೆಗೆ ಮಾತ್ರ ಭಕ್ತರಂತೆ ನಟಿಸುತ್ತಿದ್ದೇವೆ. ನಿನ್ನಲ್ಲಿ ಶರಣಾಗತಿಯನ್ನೂ, ಸಹ ಮನಃಪೂರ್ವಕವಾಗಿ ಆಚರಿಸುತ್ತಿಲ್ಲ. ಹಾಗಿದ್ದರೂ ನೀನು ನಮ್ಮನ್ನು ರಕ್ಷಿಸಬೇಕು. ಶ್ರೀ ರಾಮಾಯಣದಲ್ಲಿ 'ವಿಭೀಷಣ ಶರಣಾಗತಿ' ಪ್ರಸಂಗದಲ್ಲಿ ಶ್ರೀರಾಮನು ಹೀಗೆ ಹೇಳಿದ್ದಾನೆ. "**ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ ದೋಷೋಯದ್ಯಪಿ ತಸ್ಯಾಸ್ಯಾತ್ ಸತಾಮೇತ ದಗರ್ಹಿತಂ**" ಯಾರೇ ಆಗಲಿ, ಮಿತ್ರ ಭಾವದಿಂದ (ಮಿತ್ರನಾಗಿ ನಟಿಸುತ್ತಾ) ಬಂದರೂ ಸರಿ, ದೋಷದಿಂದ ಕೂಡಿದ್ದರೂ ಸರಿ, ಒಂದು ಬಾರಿ ಶರಣಾಗತಿಯನ್ನು ಅನುಷ್ಠಿಸಿದರೆ, ಅವನನ್ನು ಕಾಪಾಡಿಯೇ ಕಾಪಾಡುತ್ತೇನೆ. ಆದ್ದರಿಂದ ಆ ವಾಕ್ಯವನ್ನು ಸ್ಮರಿಸಿಕೊಂಡು ನಮ್ಮ ಈ ತೋರಿಕೆಯ ಭಕ್ತಿಯನ್ನು ಸ್ವೀಕರಿಸಿ ರಕ್ಷಿಸಬೇಕು.

ಇತ್ಥಂ ವದತಿ ದೇವಾನಾಂ ಸಮಾಜೇ ವೇಧಸಾ ಸಹ।
ವವಂದೆ ಪೃಥಿವೀ ದೇವಂ ವಿನತ ತ್ರಾಣ ದೀಕ್ಷಿತಂ॥ ॥೮೬॥

ಈ ರೀತಿ ಭಗವಂತನಲ್ಲಿ ದೇವತೆಗಳೆಲ್ಲರೂ ಪ್ರಾರ್ಥಿಸುತ್ತಿದ್ದಾಗ, ಭೂದೇವಿಯೂ ಸಹ ಕೈಜೋಡಿಸಿ ಪ್ರಾರ್ಥನೆಯನ್ನು ಸಲ್ಲಿಸಿದಳು.

ದೇವತೆಗಳೆಲ್ಲರ ಜೊತೆಗೆ ಭೂದೇವಿಯೂ ಸಹ ಕ್ಷೀರ ಸಮುದ್ರಕ್ಕೆ ಆಗಮಿಸಿದ್ದಳು. ದೇವತೆಗಳೆಲ್ಲರೂ ಪ್ರಾರ್ಥಿಸುತ್ತಿದ್ದಾಗ ತಾನೂ ಸಹ ತನ್ನ ಕಷ್ಟವನ್ನು ಅವನಲ್ಲಿ ಅರಿಕೆ ಮಾಡಿಕೊಳ್ಳಲು ನಿಶ್ಚಯಿಸಿ ಭಗವಂತನು ತನಗೆ ಸ್ವಾಮಿಯೂ, ಪತಿಯೂ ಆಗಿರುವುದರಿಂದ, ಅವನ ಮುಂದೆ ಕೈಜೋಡಿಸಿ, ಅಂಜಲೀಬದ್ಧಳಾಗಿ ಪ್ರಾರ್ಥಿಸುತ್ತಾಳೆ. ಅಂಜಲಿಯೂ ಶರಣಾಗತಿಗೆ ಸಮಾನವಾದದ್ದು. '**ಅಂಜಲಿಯತೀತಿ ಅಂಜಲಿ**' ಎಂದು ಕೈಜೋಡಿಸಿ ನಮಸ್ಕರಿಸಿದರೆ, ಭಗವಂತನು ಕರಗಿ ಹೋಗುತ್ತಾನೆ ಎಂದು ಹೇಳಿದೆ. ಅದೇ ರೀತಿ ಅಂಜಲಿಪೂರ್ವಕ ಶರಣಾಗತಿಯನ್ನು ಭೂದೇವಿಯು ಅನುಷ್ಠಿಸಿ, ತನ್ನನ್ನು ಕಾಪಾಡಲು ಪ್ರಾರ್ಥಿಸುತ್ತಾಳೆ.

ತನುಮಧ್ಯಾ ವಿಶಾಲಾಕ್ಷಿ ತನ್ವೀ ಪೀನ ಪಯೋಧರಾ।
ಮಾಯೇವ ಮಹತೀ ತಸ್ಯ ವನಿತಾ ರತ್ನರೂಪಿಣೆ॥ ॥೮೭॥

ತೆಳುವಾದ ನಡುವುಳ್ಳವಳೂ, ವಿಶಾಲವಾದ ಕಣ್ಣುಳ್ಳವಳೂ, ಯೌವನ ಮಧ್ಯಸ್ಥೆಯೂ, ಉನ್ನತವಾದ ವಕ್ಷಸ್ಥಳವುಳ್ಳವಳೂ ಆದ, ತನ್ನ ರೂಪದಿಂದ ಎಲ್ಲರನ್ನು ಮೋಹಗೊಳಿಸುವಳಾದ ಸುಂದರ ಸ್ತ್ರೀಯಾದ, ಭೂದೇವಿಯು ನಮಸ್ಕರಿಸಿದಳು.

ಈ ಶ್ಲೋಕದಲ್ಲಿ ಭೂದೇವಿಯ ರೂಪದ ವರ್ಣನೆಯಿದೆ. ಸುಂದರ ಸ್ತ್ರೀಯರಿಗೆ ಈ ರೀತಿಯ ಸೌಂದರ್ಯವಿರಬೇಕು. ತೆಳುವಾದ ನಡುವಿರಬೇಕು. (ಸೀತಾ ಮಧ್ಯೇ ಸಮಧ್ಯಮಾ) ಕಣ್ಣುಗಳು ವಿಶಾಲವಾಗಿ ಆಕರ್ಷಕವಾಗಿರಬೇಕು. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎಂಬಂತೆ ಕಣ್ಣೋಟದಲ್ಲಿಯೇ ಎಲ್ಲರನ್ನೂ ಸೆಳೆಯುವಂತಿರಬೇಕು. ಕಾಳಿದಾಸ ಮಹಾಕವಿಯು ಸುಂದರ ಸ್ತ್ರೀಯನ್ನು ವರ್ಣಿಸುತ್ತಾ "ತನ್ವೀಶ್ಯಾಮಾ" ಎಂದಿದ್ದಾನೆ. 'ಶ್ಯಾಮಾ' ಎಂದರೆ ಯೌವನ ಮಧ್ಯದಲ್ಲಿ ಇರುವವಳು ಎಂದರ್ಥ. ಉಬ್ಬಿದ ವಕ್ಷಸ್ಥಲಗಳಿರಬೇಕು.

ಶ್ರೀಮದ್ ರಾಮಾಯಣದಲ್ಲಿ ಸೀತೆಯನ್ನು ವರ್ಣಿಸುವಾಗ ಇದೇ ಪದಗಳನ್ನು ವಾಲ್ಮೀಕಿಯು ಪ್ರಯೋಗಿಸಿದ್ದಾನೆ. ಅಂತಹ ಉತ್ತಮ ಸೌಂದರ್ಯವತಿಯಾದ ಭೂದೇವಿಯು ಭಗವಂತನಿಗೆ ನಮಸ್ಕರಿಸಿದಳು.

ಆಬದ್ಧ ಮಂಡಲೈರ್ಮೃಂಗೈರಲಕಾಮೋದ ಮೋಹಿತೈಃ।
ಅಯತ್ನ ಲಬ್ಧಾಂಭಿಭ್ರಾಣ ಮಾಯೂರ ಛತ್ರಸಂಪದಂ॥ ॥೮೮॥

ತನ್ನ ಕೂದಲಿಂದ ಸೂಸುವ ಸುವಾಸನೆಗಾಗಿ, ಯಥೇಚ್ಛವಾಗಿ ಬಂದು ಸೇರುವ ಭ್ರಮರಗಳಿಂದಲೇ ಛತ್ರಿಯಾಕಾರದ ಸೌಂದರ್ಯವನ್ನು ಹೊಂದಿರುವ,

ಮುಂದೆಯೂ ಭೂದೇವಿಯ ಸೌಂದರ್ಯ ವರ್ಣನೆಯಿದೆ. ಭೂದೇವಿಯ ನೀಳವಾದ ಕೇಶರಾಶಿ ಸುಗಂಧದಿಂದ ಕೂಡಿದ್ದು ಆ ಸುಗಂಧದ ಆಸ್ವಾದನೆಗಾಗಿ, ದುಂಬಿಗಳು ಬಂದು ಮುತ್ತಿಕೊಳ್ಳುತ್ತಿದ್ದವು. ಆ ಭ್ರಮರಗಳು ಅವಳ ಶಿರದ ಮೇಲೆ ಛತ್ರಿಯಾಕಾರದಲ್ಲಿ ಸುತ್ತುತ್ತಾ, ಅವಳ ಸಹಜ ಸೌಂದರ್ಯಕ್ಕೆ ಮತ್ತಷ್ಟು ಶೋಭೆಯನ್ನು ತರುತ್ತಿತ್ತು. ಅದೇ ರೀತಿ ಆ ಭ್ರಮರಗಳ ಮಂಜುಳ ನಿನಾದವೂ ಕೂಡ ಕೇಳುವವರ ಕಿವಿಗೆ ಆಪ್ಯಾಯಮಾನವಾಗಿತ್ತು.

ಪ್ರಿಯ ಸಂದರ್ಶನಾನಂದ ಜನಿತೈರಶ್ರುಬಿಂದುಭಿಃ।
ನ್ಯಸ್ತ ಮೌಕ್ತಿಕನೇಪಥ್ಯೈಃ ಪರಿಷ್ಕೃತ ಪಯೋಧರಾ ॥ ॥೮೯॥

ಭೂಭಾರವನ್ನು ಹೊರಲಾರದೆ ಆಯಾಸಗೊಂಡಿರುವ ಭೂದೇವಿಯು ತನ್ನ ಇನಿಯನಾದ ಭಗವಂತನನ್ನು ಕಂಡು, ಆನಂದಭಾಷ್ಪಗಳನ್ನು ಸುರಿಸುತ್ತಾ, ಪುಳಕಿತ ದೇಹ ಗಾತ್ರಳಾಗಿ, ತನ್ನ ಸ್ತನಗಳನ್ನು ಅಶ್ರುಧಾರೆಯಿಂದ ತೋಯಿಸಿದಳು.

ಬಹು ಕಾಲದ ಮೇಲೆ ಪ್ರೀತಿ ಪಾತ್ರನಾದ ಇನಿಯನನ್ನು ಕಂಡ ಸ್ತ್ರೀಯು ಯಾವ ರೀತಿ ಆನಂದ ಭಾಷ್ಪವನ್ನು ಸುರಿಸುವಳೋ ಅದೇ ರೀತಿ ಭೂದೇವಿಯು ಶ್ರೀಮನ್ನಾರಾಯಣನನ್ನು ಕಂಡು ಅತ್ಯಂತ ಪುಳಕಿತ ಗಾತ್ರಳಾಗಿ ತನ್ನ ಕಣ್ಣುಗಳಿಂದ ಧಾರೆ ಧಾರೆಯಾಗಿ ಆನಂದದ ಕಣ್ಣೀರನ್ನು ಸುರಿಸಿದಳು. ಅವಳ ಕಣ್ಣಿನಿಂದ ಹೊರ ಬಂದ ಆ ಅಶ್ರುಧಾರೆಯು ಅವಳ ಉನ್ನತವಾದ ಸ್ತನಗಳ ಮೇಲೆ ಬಿದ್ದು ಅವುಗಳಿಗೆ ಅಭಿಷೇಕ ಮಾಡಿತು. ಇದು ಅಲಂಕಾರ ದಿಂದ ಕೂಡಿದ ಶ್ಲೋಕ.

ಪ್ರಸ್ಫುರಂತಂ ಪ್ರಿಯಸ್ಯೇವ ಪರಿರಂಭಾಭಿಲಾಷಿಣಂ।
ದಕ್ಷಿಣಾದಿತರಂ ಬಾಹುಂ ದಕ್ಷಿಣಾ ಬಹ್ವಮನ್ಯತ ॥ ॥೯೦॥

ತನ್ನ ಎಡದ ಭುಜವು ಅದುರುವುದನ್ನು ಗಮನಿಸಿದ ಆ ದೇವಿಯು, ತನ್ನ ಪ್ರಿಯನಾದ ಶ್ರೀಹರಿಯ ಬಲಭುಜದೊಡನೆ ಸೇರಿ ಅದುರುತ್ತಿರುವುದಾಗಿ ಭಾವಿಸಿದಳು.

(ಎಡ ಭುಜವು ಸ್ತ್ರೀಯರಿಗೂ, ಬಲ ಭುಜವು ಪುರುಷರಿಗೆ ಅದುರುವುದು ಶುಭ ಸೂಚನೆ) ಶಕುನ ಶಾಸ್ತ್ರವನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ತನ್ನ ಪ್ರಿಯಕನ ದರ್ಶನದಿಂದ ಭೂದೇವಿಯ ಎಡಭುಜವು ಅದುರಿತು. ರಾಮಾಯಣದಲ್ಲಿ ಸುಗ್ರೀವ, ರಾಮ ಇವರ ಸಖ್ಯ ಸಂದರ್ಭದಲ್ಲಿ ಸೀತೆ, ರಾವಣ ಮತ್ತು ವಾಲಿ ಇವರ ಮೂವರ ಎಡಗಣ್ಣು ಒಟ್ಟಿಗೆ ಅದುರಿತು ಎಂದು ಹೇಳಿದೆ. ''ಸೀತಾ ಕಪೀಂದ್ರ **ಕ್ಷಣದಾಚರಾಣಂ ರಾಜೀವ ಹೇಮ ಜ್ವಲನೋಪಮಾನಿ, ಸುಗ್ರೀವ ರಾಮ ಪ್ರಣಯ ಪ್ರಸಂಗೇ ವಾಮಾನಿ ನೇತ್ರಾಣಿ ಸಮಂ ಸ್ಫುರಂತಿ**'' ಪುರುಷರಿಗೆ ಬಲದ ಕಣ್ಣೂ, ಸ್ತ್ರೀಯರಿಗೆ ಎಡದ ಕಣ್ಣೂ ಅದುರುವುದು ಶುಭ ಸೂಚಕವಾದದ್ದು. ತನ್ನ ಎಡದ ಕಣ್ಣಿನ ಜೊತೆಯಲ್ಲೇ ನಾರಾಯಣನ ಬಲಗಣ್ಣೂ ಸಹ ಅದುರಿದಂತೆ ಭೂದೇವಿಯು ಭಾವಿಸಿದಳು.

ವಿಪದಶ್ಚ ಜಗಾದೈಷಾ ವಿಪಂಚೀ ಮಧುರ ಸ್ವನಾ।
ವಿಲಕ್ಷಸ್ಮಿತ ಸಂಭಿನ್ನ ಮೌಕ್ತಿಕಾಧರ ವಿದ್ರುಮಾ॥ ॥೯೦॥

ತನ್ನ ಮಧುರವಾದ ಸುಶ್ರಾವ್ಯವಾದ ವೀಣಾ ನಾದದಂತೆ ಇರುವ ವಾಣಿಯಿಂದ, ತನ್ನ ಸುಂದರವಾದ ಹವಳದಂತೆ ಇರುವ ತುಟಿಯಿಂದ ಬಂದ ಪ್ರಾರ್ಥನೆಯನ್ನು ಕೇಳಿಯೇ ಆ ಭೂದೇವಿಯ ವಾಣಿಯು ವೀಣಾ ಧ್ವನಿಯಂತೆ ಬಹಳ ಇಂಪಾಗಿದ್ದು ಶ್ರೀಮನ್ನಾರಾಯಣ ನಿಗೆ ಅದನ್ನು ಕೇಳಿದ ಒಡನೆಯೇ ಅತ್ಯಂತ ಸಂತೋಷವಾಯಿತು. ಅವಳ ಸುಂದರವಾದ ತುಟಿಗಳಿಂದ ಹೊರ ಹೊಮ್ಮಿದ ವಾಕ್ಯಗಳನ್ನು ಕೇಳಿಯೇ ಅವಳ ಪ್ರಾರ್ಥನೆಯನ್ನು ಈಡೇರಿಸಬೇಕೆಂದು ಸಂಕಲ್ಪ ಮಾಡಿದನು.

ಅಥ ತಾನ್ ಭವ್ಯಯಾ ವಾಚಾ ಭಗವಾನ್ ಪ್ರತ್ಯಭಾಷತ ।
ಪ್ರತಿಶ್ರು ಪ್ರಾಪ್ತನಿರ್ಹಾದ ಪಾಂಚಜನ್ಯಾಭಿನಂದ್ಯಯಾ॥ ॥೯೧॥

ಎಲ್ಲವನ್ನೂ ಕೇಳಿದ ಬಳಿಕ ಭಗವಂತನು ತನ್ನ ಶುಭವಾದ ವಾಕ್ಕಿನಿಂದ ಮಾರುತ್ತರ ನೀಡಿದನು. ಆ ಧ್ವನಿಯು ಅವನ ಶಂಖ ಧ್ವನಿಯಂತೆ (ಪಾಂಚಜನ್ಯದ) ಕೇಳುವವರಿಗೆ ಆಪ್ಯಾಯಮಾನವಾಗಿತ್ತು.

ಎಲ್ಲರ ಪ್ರಾರ್ಥನೆಯನ್ನು ಕೇಳಿದ ಬಳಿಕ, ಭಗವಂತನು ತನ್ನಮಾರುತ್ತರ ನೀಡಿದನು. ಅವನ ಆ ಉತ್ತರವು ಕೇಳುವವರಿಗೆ ಅತ್ಯಂತ ಆಪ್ಯಾಯಮಾನವಾಗಿತ್ತು. ಅಲ್ಲದೆ ಅದು ಅವನ ಪಾಂಚಜನ್ಯದ ಧ್ವನಿಯಂತೆ ಗಂಭೀರವಾಗಿದ್ದು. ಆ ಧ್ವನಿಯನ್ನು ಕೇಳಿದೊಡನೆ, ಅವರ ಸಂಕಟಗಳೆಲ್ಲವೂ ನೀಗುವಂತಿತ್ತು.

ಮಾಭೈಷು ರಸುರಾನೀಕಾತ್ ಭವಂತೋ ಮಧುಪಾಶ್ರಯಾಃ।
ಮದಾಜ್ಞಾ ಮನವಜ್ಞಾತುಃ ಪರಿಭೂತ್ಯಾ ನ ಭೂಯತೇ॥ ॥೯೨॥

ನನ್ನನ್ನು ಆಶ್ರಯಿಸಿದ ನೀವು ಹೆದರಬೇಕಿಲ್ಲ. ನನ್ನ ಆಜ್ಞೆಯನ್ನು ಪಾಲಿಸುವವನಿಗೆ ಎಂದಿಗೂ ಪರಿಭವವಿಲ್ಲ.

ಶ್ರೀಮದ್ ರಾಮಾಯಣದಲ್ಲಿ "**ಭಯಂ ತ್ಯಜತ ಭದ್ರಂ ತೇ ಹಿತಾರ್ಥ ಯದಿ ರಾವಣಃ**" ಎಂದು ನಾರಾಯಣನು ಹೇಳಿದಂತೆ (ಭಯ ಪಡಬೇಡಿ. ನಿಮ್ಮ ಹಿತಕ್ಕಾಗಿ ರಾವಣನನ್ನು ಯುದ್ಧದಲ್ಲಿ ಕೊಲ್ಲುತ್ತೇನೆ). ಇಲ್ಲಿಯೂ ಸಹ ಕ್ಷೀರಾಬ್ಧಿನಾಥನಾದ ಶ್ರೀಮನ್ನಾರಾಯಣನು ಎಲ್ಲರಿಗೂ ಅಭಯವನ್ನು ನೀಡುತ್ತಾನೆ. ನೀವೆಲ್ಲರೂ ನನ್ನನ್ನು ಆಶ್ರಯಿಸಿದ್ದೀರಿ. ನನ್ನನ್ನು ಆಶ್ರಯಿಸುವವರು ಎಂದಿಗೂ ಯಾರಿಗೂ ಭಯಪಡಬೇಕಿಲ್ಲ. ಅವರುಗಳಿಗೆ ಎಂದೆಂದಿಗೂ ಪರಿಭವವಿರುವುದಿಲ್ಲ. "**ನ ಹಿ ಕಲ್ಯಾಣ ಕೃತ್ ಕಶ್ಚಿತ್ ದುರ್ಗತಿಂ ತಾತಗಚ್ಛತಿ**" 'ಯಾರು ನನ್ನಆಜ್ಞೆಯನ್ನು ಪಾಲಿಸುತ್ತಾರೋ ಅವರಿಗೆ ಎಂದೆಂದಿಗೂ ದುರ್ಗತಿಯಿರುವುದಿಲ್ಲ' ಎಂದು ಗೀತೆಯಲ್ಲೂ ಭಗವಂತನು ಹೇಳಿದ್ದಾನೆ.

ಅವತಾರ್ಯ ಭುವೋ ಭಾರಮವತಾರೋ ಮಮಾಮರಾಃ।
ಅನಾದಿ ನಿಧನಂ ಧರ್ಮಮಕ್ಷತಂ ಸ್ಥಾಪಯಿಷ್ಯತಿ॥ ॥೯೪॥

ದೇವತೆಗಳಿರಾ ! ನನ್ನ ಅವತಾರವು ಭೂಮಿಯ ಭಾರವನ್ನು ಇಳಿಸಿ ಆದಿಯೂ ಅಂತ್ಯವೂ ಇಲ್ಲದ ಸನಾತನ ಧರ್ಮವನ್ನು ಸ್ಥಾಪಿಸುವುದಕ್ಕಾಗಿ ಆಗುತ್ತದೆ.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।

ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥" ಎಂದು ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿದ್ದಾನೆ.

ಅದೇ ರೀತಿ ತನ್ನನ್ನು ಆಶ್ರಯಿಸಿದ ಭೂದೇವಿಗೂ ಹಾಗೂ ಇತರ ದೇವತೆಗಳಿಗೂ ಸಮಾಧಾನ ಹೇಳುತ್ತಾ, ಧರ್ಮಸಂಸ್ಥಾಪನೆಗಾಗಿ ಹಾಗೂ ದುಷ್ಟನಿಗ್ರಹಕ್ಕಾಗಿ ಭೂಮಿಯಲ್ಲಿ ಅವತರಿಸಿ, ಈ ಭಾರತ ಭೂಮಿಯಲ್ಲಿ ಸನಾತನ ಧರ್ಮ ಸ್ಥಾಪನೆ ಮಾಡುತ್ತೇನೆ ಎಂದು ಆಶ್ವಾಸನೆ ನೀಡುತ್ತಾನೆ ಭಗವಂತ.

ಯಾವದಿಷ್ಟ ಭುಜೋ ಯಾವದಧಿಕಾರಮವಸ್ಥಿತಾಃ।
ಪರಿಪಾಲಯತ ಸ್ವಾನಿ ಪದಾನಿ ವಿಗತಾಪದಃ॥ ॥೯೫॥

ಆಪತ್ತುಗಳನ್ನೆಲ್ಲಾ ನೀಗಲು ನೀವೆಲ್ಲರೂ ಯಜ್ಞ ಯಾಗಾದಿಗಳಲ್ಲಿ ಸಮರ್ಪಿಸುವ ಹವಿಸ್ಸನ್ನು ಭುಜಿಸಿಕೊಂಡು ನಿಮಗೆ ನಿಯಮಿತವಾದ ಕಾರ್ಯಗಳನ್ನು ನಿರ್ವಹಿಸುತ್ತೀರಿ.

ಭಗವಂತನೇ ಎಲ್ಲ ಯಜ್ಞಗಳ ಭೋಕ್ತಾ ಆದರೂ (ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಂ) ಆಯಾ ದೇವತೆಗಳಿಗೆ ಸಲ್ಲಬೇಕಾದ ಹವಿರ್ಭಾಗವನ್ನು ಅವರುಗಳು ಕ್ರಮವಾಗಿ ಪಡೆಯಲು ಅವಕಾಶ ಮಾಡಿಕೊಡುತ್ತಾನೆ. ಅದರಿಂದಾಗಿ ಆಯಾಯಾ ದೇವತೆಗಳು ತಮಗೆ ಭಗವಂತನು ಸೃಷ್ಠಿ, ಸ್ಥಿತಿ, ಸಂಹಾರ ಕಾರ್ಯದಲ್ಲಿ ನಿರ್ವಹಿಸಿರುವ ಕರ್ತವ್ಯಗಳನ್ನು ನಿರ್ವಹಿಸಲು ಸಹಕಾರಿಯಾಗುತ್ತದೆ.

ದಮನಾದ್ದನುಜೇಂದ್ರಾಣಾಂ ದ್ರಕ್ಷ್ಯಥ ತ್ರಿದಶಾಧಿಪಾಃ।
ಭೂಯೋಽಪಿ ಲಘುತಾಂ ಪ್ರಾಪ್ತಾಂ ಭುವಮುಲ್ಲಾಘಿತಾಮಿವ॥ ॥೯೬॥

ದೇವಶ್ರೇಷ್ಠರಿರಾ! ಅಸುರ ಶ್ರೇಷ್ಠರೆಲ್ಲರೂ ನಾಶವಾಗುವುದರಿಂದ ರೋಗದಿಂದ ಬಿಡಲ್ಪಟ್ಟ ಮನುಷ್ಯರಂತೆ ಭೂಮಿಯನ್ನು ಕಾಣುವಿರಿ.

ದೇವತೆಗಳಿಗೆ ಭಗವಂತನು ಅಭಯ ನೀಡುತ್ತಾನೆ. ನಾನು ಕೃಷ್ಣಾವತಾರ ಮಾಡಿ ಅಸುರರೆಲ್ಲರನ್ನೂ ನಾಶ ಮಾಡುವುದರಿಂದ, ನೀವೆಲ್ಲರೂ ದುಷ್ಟರು ಎಂಬ ರೋಗದಿಂದ ಬಿಡಲ್ಪಡುವ, ಪವಿತ್ರಳಾದ, ಶುದ್ಧಳಾದ ಭೂಮಿಯನ್ನು ಕಂಡು ಆನಂದಿಸುವಿರಿ. ಇದರ ಬಗ್ಗೆ ಯಾವ ಚಿಂತೆಯು ಬೇಕಿಲ್ಲ.

ದೈತೇಯಮೃಗಸಂಘಾತೆ ಮೃಗಯಾರ ಸಭಾಂಗಿಭಿಃ।
ಭವದ್ಭಿರಪಿ ಮೇದಿನ್ಯಾಂ ಭವಿತವ್ಯಂ ನರಾಧಿಪೈಃ॥ ॥೯೭॥

ಅಸುರ ಮೃಗಗಳ ಬೇಟೆಯಲ್ಲಿ ನೀವೂ ಸಹ ಪಾಲು ಪಡೆಯಲು, ಭೂಮಿಯಲ್ಲಿ ಸದಾಚಾರರಾದ ರಾಜರುಗಳಾಗಿ ಜನ್ಮ ಪಡೆಯಿರಿ.

ನಾನು ಕೃಷ್ಣನಾಗಿ ಅವತಾರ ಮಾಡಿದಾಗ, ನೀವುಗಳೂ ಸಹ ಭೂಮಿಯಲ್ಲಿ ಸದಾಚಾರ ಸಂಪನ್ನರಾದ ರಾಜರುಗಳಾಗಿ ಜನ್ಮತಾಳಿ, ನನಗೆ ಸಹಾಯಕರಾಗಿ, ಅಸುರರೆಂಬ ಮೃಗಗಳ ಬೇಟೆಯಲ್ಲಿ ಒತ್ತಾಸೆ ನೀಡಿ ರಾಜರಿಗೆ ಬೇಟೆಯು ಧರ್ಮ, ಆದ್ದರಿಂದ ಅದನ್ನು ನೀವೂ ಮಾಡಿ, ನನ್ನ ಅವತಾರ ಉದ್ದೇಶವನ್ನು ಪೂರ್ತಿಗೊಳಿಸಿ.

ಇತಿ ತಾನನಘಾದೇಶಃ ಸಮಾದಿಶ್ಯ ಜನಾರ್ದನಃ।
ಅವಧೀರಿತ ದುಗ್ಧಾಬ್ಧಿರ್ಮಥುರಾಯಾಂ ಮನೋದಧೇಃ॥ ॥೯೮॥

ಈ ರೀತಿ ದೇವತೆಗಳಿಗೆ ಪ್ರತಿಜ್ಞೆಮಾಡಿದ ಜನಾರ್ದನನು ತಾನು ಶಯನಿಸಿದ್ದ ಕ್ಷೀರಾಬ್ಧಿಯನ್ನು ಬಿಟ್ಟು ಮಥುರಾ ಪುರಿಯಲ್ಲಿ ತನ್ನ ಮನಸ್ಸನ್ನಿಟ್ಟನು.

"ಏಷ ನಾರಾಯಣ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ।

ನಾಗಪರ್ಯಂಕಂ ಉತ್ಸೃಜ ಹ್ಯಾಗತೋ ಮಧುರಾ ಪುರಿಂ॥" ಎಂಬಂತೆ, ಭಗವಂತನು ತಾನು ಮಲಗಿದ್ದ ಕ್ಷೀರಾಬ್ಧಿಯಿಂದ ಎದ್ದು ಕೃಷ್ಣನಾಗಿ ಭೂಮಿಯಲ್ಲಿ ಅವತರಿಸಲು ದೃಢ ಸಂಕಲ್ಪ ಮಾಡಿ, ಮಥುರಾ ಪಟ್ಟಣದಲ್ಲಿ ತನ್ನ ಮನಸ್ಸನ್ನಿಟ್ಟು ಸಕಲ ಸಿದ್ಧತೆಗಳನ್ನೂ ಯೋಚಿಸ ತೊಡಗಿದನು. "ಮಥುರಾ ಭಾಗ್ಯ ಅನನ್ಯಮೀಡೆ" ಎಂಬಂತೆ ಮಥುರಾ ಪುರಿಯು ಭಗವಂತನ ಈ ನಿರ್ಧಾರದಿಂದ ಅತ್ಯಂತ ಪಾವಿತ್ರ್ಯವನ್ನು ಹೊಂದಿತು.

ಆಶ್ವಾಸ್ಯ ವಾಗಮೃತ ವೃಷ್ಟಿಭಿರಾದಿತೆಯಾನ್
ದೈತೇಯ ಭಾರನಮಿತಾಂ ಪೃಥಿವಿಂ ಚ ದೇವಿಂ।
ಪ್ರಾದುರ್ ಬಭೂಷುರನಘೋ ವಸುದೇವ ಪತ್ನ್ಯಾಂ
ಪದ್ಮಾಪತಿಃ ಪ್ರಣೀದಧೇ ಸಮಯಂ ದಯಾಯಾಃ॥ ॥೯೯॥

ವಾಕ್ಕಿನ ಅಮೃತವು ಸುರಿದು ದೇವತೆಗಳನ್ನು, ಅಸುರ ಭಾರದಿಂದ ನೊಂದು ಹೋಗಿದ್ದ ತನ್ನ ಭಾರ್ಯೆಯಾದ ಭೂದೇವಿಯನ್ನೂ ಸಮಾಧಾನ ಮಾಡಿದ ಆ ಸರ್ವೇಶ್ವರನು, ದೋಷರಹಿತನಾದ ವಸುದೇವನ ಮಡದಿಯಾದ ದೇವಕಿಯರಲ್ಲಿ ಅವತಾರ ಮಾಡುವುದಾಗಿ ನಿಶ್ಚಯಿಸಿ, ತನ್ನ ದಯಾ ಸ್ವರೂಪವನ್ನು ತೋರಿದನು.

ಭಗವಂತನ ಆಶ್ವಾಸನವು ದೇವತೆಗಳಿಗೂ, ಭೂದೇವಿಗೂ ಅಮೃತ ಸೇಚನದಂತಿತ್ತು. ಅವನ ವಾಕ್ಕಿನಿಂದ ಅವರೆಲ್ಲರೂ ನಿರಾಳವಾಗಿ ಉಸಿರಾಡುವಂತಾಯಿತು. ಸರ್ವರೂ ಸಮಾಧಾನಗೊಂಡರು. ದಯಾ ಸಮುದ್ರನಾದ ಆ ಲೋಕನಾಥನು, ವಸುದೇವ ದೇವಕಿಯರನ್ನು

ತನ್ನ ಮಾತಾಪಿತೃಗಳನ್ನಾಗಿ ಆರಿಸಿಕೊಂಡು, ತನ್ನ ದಯಾಗುಣದ ವೈಶಾಲ್ಯವನ್ನು ಲೋಕಕ್ಕೆ ತೋರಿಸಿ ಕೊಟ್ಟನು. '**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ ಭವತಿ ಭಾರತ, ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮನಂ ಸೃಜಾಮ್ಯಹಂ**'' ಎಂಬ ಮಾತನ್ನು ನಿಜಗೊಳಿಸುವಂತೆ ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸಿದನು.

ಸಾಧೂನಾಂ ಸ್ವಪದ ಸರೋಜ ಷಟ್ಪದಾನಾಂ ಧರ್ಮಸ್ಯ ಸ್ಥಿತಿ ಮನಘಾಂ ವಿಧಾತು ಕಾಮಃ।
ಯದ್ಗರ್ಭೇ ಜಗದಖಿಲಂ ಸ ಏವ ಗರ್ಭೋ
ದೇವಕ್ಯಾಃ ಸಮಜನಿ ದೇವ ದೇವ ವಂದ್ಯಃ॥೧೦೦॥

ದೇವ ಶ್ರೇಷ್ಠರುಗಳಿಂದ ಸ್ತುತಿಸಲ್ಪಟ್ಟ ಆ ದೇವದೇವನು, ತನ್ನ ದಿವ್ಯ ಚರಣಾರವಿಂದ ಗಳಿಂದ, ದುಂಬಿಗಳಂತೆ ಇರುವ ಸತ್ಪುರುಷರ ಧರ್ಮಗಳಿಗೆ ಹಾನಿ ಬಾರದಂತೆ ಮಾಡಲು, ಎಲ್ಲಾ ಲೋಕಗಳನ್ನು ಕಾಪಾಡುವ ಸಲುವಾಗಿ, ತಾನೇ ಸ್ವತಃ ದೇವಕಿಯ ಗರ್ಭದಲ್ಲಿ ಆವಿರ್ಭವಿಸಿದನು.

ಯಾವ ರೀತಿ ದುಂಬಿಗಳು ಕಮಲ ಪುಷ್ಪದಲ್ಲಿ ಆಸಕ್ತಿ ಹೊಂದಿರುತ್ತವೋ, ಅದೇ ರೀತಿ ಸತ್ಪುರುಷರು, ಭಗವಂತನ ಚರಣಾರವಿಂದವೆಂಬ ಕಮಲದಲ್ಲಿ ಆಸಕ್ತರು. ಅವರ ಧರ್ಮಗಳನ್ನು ಕಾಪಾಡಿ, ಜೊತೆಗೆ ಏಳು ಲೋಕಗಳನ್ನು ದುಷ್ಟರ ಬಾಧೆಯಿಂದ ಕಾಪಾಡರು. ಬೇರೆ ಯಾರನ್ನೂ ಆ ಕಾರ್ಯಕ್ಕಾಗಿ ಭೂಲೋಕಕ್ಕೆ ಕಳುಹಿಸದೆ, ತಾನೇ ಸ್ವತಃ ಅವತರಿಸಲು ಇಚ್ಛಿಸಿ, ದೇವಕಿಯ ಗರ್ಭದಲ್ಲಿ ತೋರಿಕೊಂಡನು. ''ಪರಿತ್ರಾಣಾಯ ಸಾಧೂನಾಂ'' ಎಂಬಂತೆ ಸಾಧುಗಳ ರಕ್ಷಣೆ, ತನ್ನ ದಿವ್ಯ ಮಂಗಳ ವಿಗ್ರಹದ ದರ್ಶನವನ್ನು ಅವರಿಗೆ ನೀಡುವುದೇ ಅವತಾರದ ಮುಖ್ಯ ಪ್ರಯೋಜನ. ಅದೇ ರೀತಿ ಗೋಪಿಕೆಯರಾಗಿ ಅವತರಿಸಿರುವ ಋಷಿಗಳೆಲ್ಲರ ಮನಸ್ಸಂತೋಷಪಡಿಸಲು ಆ ಪರಮ ಪುರುಷನು, ಕೃಷ್ಣನಾಗಿ ದೇವಕಿಯ ಗರ್ಭಾಂಬುಧಿ ಯಲ್ಲಿ ಪ್ರಕಾಶಗೊಂಡನು. ''**ದೇವಕೀ ಪೂರ್ವ ಸಂಧ್ಯಾಯ ಆವಿರ್ಭೂತಂ ಮಹಾತ್ಮನಃ**'' ಎಂದು ವಿಷ್ಣುಪುರಾಣ ವಾಕ್ಯವಿದೆ.

'ದೇವಕೀ ಗರ್ಭ ಪ್ರವೇಶ' ವೆಂಬ ಪ್ರಥಮ ಸರ್ಗ ಮುಗಿದುದು

ದ್ವಿತೀಯಃ ಸರ್ಗಃ - ೨

ಶ್ರೀಕೃಷ್ಣ ಪ್ರಾದುರ್ಭಾವ



ಈ ಸರ್ಗದಲ್ಲಿ 97 ಶ್ಲೋಕಗಳಿವೆ. ಇದರಲ್ಲಿ ದೇವಕಿ ಗರ್ಭ ಧರಿಸಿದ ನಂತರ ಅವಳ ಬೆಳವಣಿಗೆ, ದೇಹದ ಚಿಹ್ನೆಗಳು ಅವಳ ನಡೆನುಡಿಗಳು, ಪಶ್ಚಿಮದಲ್ಲಿ ಮುಳುಗುವ ಸೂರ್ಯನ ವರ್ಣನೆ ಇದೆ. ಶ್ರೀಕೃಷ್ಣನು ಜನಿಸಿದ್ದು ರಾತ್ರಿಯಾದುದರಿಂದ ಅದ್ಭುತವಾದ ಚಂದ್ರೋದಯ ವರ್ಣನೆ, ಆ ರಾತ್ರಿಯ ವರ್ಣನೆ ಮತ್ತು ಕಡೆಯಲ್ಲಿ ಶ್ರೀಕೃಷ್ಣನ ಪ್ರಾದುರ್ಭಾವ - ಈ ಪ್ರಸಂಗಗಳನ್ನು ಅನೇಕ ಉಪಮಾನ ಉಪಮೇಯಗಳಿಂದ ಕವಿಯು ಬಹು ಚೆನ್ನಾಗಿ ವರ್ಣಿಸಿದ್ದಾರೆ.

ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1-37 ದೇವಕಿಯ ಗರ್ಭ ಚಿಹ್ನೆಗಳು, ಅವಳ ನಡೆ ನುಡಿಗಳು.

38-47 ಸೂರ್ಯಾಸ್ತ ವರ್ಣನೆ

48-92 ಚಂದ್ರೋದಯದ ವರ್ಣನೆ

93-97 ಶ್ರೀಕೃಷ್ಣನ ಪ್ರಾದುರ್ಭಾವ.

ದ್ವಿತೀಯಃ ಸರ್ಗಃ - ೨

ಶ್ರೀಕೃಷ್ಣ ಪ್ರಾದುರ್ಭಾವ

ಅಥಾಗಮಾನಾಂ ಅನಘೇನ ಭೂಮ್ನಾಧರ್ಮಸ್ಯ ಪೂರ್ಣೇನ ಧನಾಗಮೇನ।
ದಿವೌಕಸಾಂ ದರ್ಶಯತಾ ವಿಭೂತಿಂ ದೇವೀ ಬಭೌ ದೌಹೃದ ಲಕ್ಷಣೇನ ॥೧॥

ದೇವಕಿಯಾದವಳು ತಾನು ಗರ್ಭಿಣಿ ಎಂಬುದನ್ನು ಅರಿತು, ಸಂತೋಷಿಸಿದಳು. ಧರ್ಮಕ್ಕೆ ಮೂಲ ವೇದ. ಧರ್ಮವು ಅಭಿವೃದ್ಧಿಹೊಂದಬೇಕಾದರೆ, ವೇದ ಪ್ರಚಾರವು ಧನದಿಂದ ಆಗಬೇಕು. ಇವೆರಡೂ ಅವಳ ಗರ್ಭ ಲಕ್ಷಣದಿಂದ ವೃದ್ಧಿ ಹೊಂದಿತು. ಅದು ದೇವತೆಗಳಿಗೂ ಆಪ್ಯಾಯಮಾನವಾದ ವಿಷಯವಾಗಿತ್ತು. ಅವರೂ ಸಹ ವಿಭವಾವತಾರವನ್ನು ಸ್ವಾಗತಿಸಲು ಸಿದ್ಧರಾದರು.

ದೇವಕಿಯು ಶ್ರೀಕೃಷ್ಣನನ್ನು ಗರ್ಭದಲ್ಲಿ ಧರಿಸಿದ ಮೇಲೆ ಅಪೂರ್ವವಾದ ಕಾಂತಿಯಿಂದ ಶೋಭಿಸಿದಳು. ಧರ್ಮಕ್ಕೆ ಮೂಲವಾದ ವೇದ ಪ್ರತಿಪಾದ್ಯನಾದ ಸರ್ವಸ್ವಾತ್ಮರನನ್ನು ಅವಳು ಗರ್ಭದಲ್ಲಿ ಹೊತ್ತ ಮೇಲೆ ಸಕಲ ದೇವತೆಗಳಿಗೂ ಆನಂದ ತುಂದಿಲರಾಗಿ, ಆ ಭಗವಂತನ ಮತ್ತೊಂದು ವಿಭವಾವತಾರವನ್ನು ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡರು.

ಶೃಂಗಾರ ವೀರಾದ್ಭುತ ಚಿತ್ರರೂಪಂ ಗರ್ಭೇ ತ್ರಿಲೋಕೈಕ ನಿಧಿಂ ವಹಂತ್ಯಾಃ।
ಪರಾವರ ಕ್ರೀಡಿತ ಕರ್ಬೂರಾಣಿ ದ್ವೇಧಾಽಭವನ್ ದೌಹೃದ ಲಕ್ಷಣಾನಿ ॥೨॥

ಮೂರು ಲೋಕಗಳಿಗೂ ಮುಖ್ಯವಾದ ನಿಧಿಯಾಗಿ, ಶೃಂಗಾರ ರಸ, ವೀರ ರಸ, ಅದ್ಭುತ ರಸ - ಎಂಬ ಮೂರು ಸೇರಿದ ದಿವ್ಯ ಮಂಗಳ ವಿಗ್ರಹಯುಕ್ತನಾದ ಸ್ವಾಮಿಯನ್ನು ಆ ದೇವಕಿಯು ಗರ್ಭದಲ್ಲಿ ಧರಿಸಿ, ಪರತ್ವ ಸ್ವರೂಪನಾದ ಸ್ವಾಮಿಯ ಲೀಲೆಗಳನ್ನು ನೋಡಲು ಸಿದ್ಧಳಾದಳು.

ದೇವಕಿಯೂ ಸಹ ಆ ಸರ್ವರಸ, ಸರ್ವ ಗಂಧನಾದ ಶ್ರೀಕೃಷ್ಣ ಪರಮಾತ್ಮನನ್ನು ಗರ್ಭದಲ್ಲಿ ಧರಿಸಿ, ವರ್ಣನಾತೀತವಾದ ಆನಂದವನ್ನು ಹೊಂದಿ ಆ ಸ್ವಾಮಿಯೂ ಈ ಲೋಕದಲ್ಲಿ ತೋರಿಸುವ ಲೀಲೆಗಳನ್ನು ಯಾವಾಗ ಅನುಭವಿಸುತ್ತೇವೆಯೋ ಎಂದು ಅತ್ಯಂತ ಕಾತುರಳಾಗಿ ಸಮಯ ಪ್ರತೀಕ್ಷೆ ಮಾಡತೊಡಗಿದಳು.

ಅಶೇಷ ವೇದೈ ರಧಿಗಮ್ಯ ಭೂಮ್ನಾ ಸಿದ್ಧೇನ ಸಿದ್ಧೈಶ್ಚ ನಿಷೇವಿತೇನ।
ಅಮಾನುಷೀ ನೂನಮಭೂದಯತ್ನಾತ್ ಕೃಷ್ಣೇನ ಕೇನಾಪಿ ರಸಾಯನೇನ ॥೩॥

ಮಾನವ ಸ್ತ್ರೀಯಾದ ದೇವಕಿಯು ಸಕಲ ವೇದಗಳಿಂದ ಅರಿಯಲ್ಪಟ್ಟ ಮೇಲ್ಮೆಯನ್ನು ಹೊಂದಿದ, ಸಿದ್ಧವಾದ, ಸಿದ್ಧರುಗಳಿಂದ, ಸೇವಿಸಲ್ಪಟ್ಟ ಶ್ರೀಕೃಷ್ಣ ರಸಾಯನವೆಂಬ ದಿವ್ಯ ವಸ್ತುವನ್ನು ಗರ್ಭದಲ್ಲಿ ಧರಿಸಿ, ಅಮಾನುಷಿ (ದೇವತೆ) ಎನಿಸಿಕೊಂಡಳು.

ಸಕಲ ರೋಗಗಳಿಗೂ 'ರಸಾಯನ' ಎಂಬುದು ಸಿದ್ಧೌಷಧವಿದ್ದಂತೆ. "**ರಸಾಯನಂ ವಿಹಂಗೋಪಿ ಜರಾವ್ಯಾಧಿ ಹರೌಷಧೇ**" ಎಂಬಂತೆ ವೇದ ಪ್ರತಿಪಾದ್ಯನಾದ ಆ ಪರಮಾತ್ಮನು ಸಕಲ ಆದಿವ್ಯಾಧಿಗಳಿಗೆಲ್ಲಾ ಸಿದ್ಧೌಷಧನು. ಆ ಶ್ರೀಕೃಷ್ಣ ರಸಾಯನವೆಂಬ ದಿವ್ಯೌಷಧವನ್ನು ಗರ್ಭದಲ್ಲಿ ಧರಿಸಿ, ಮನುಷ್ಯಮಾತ್ರದವಳಾದ ದೇವಕಿಯು, ಸಾಧಾರಣ ಗರ್ಭಿಣಿಯರಿಗಿಂತ ವಿಭಿನ್ನವೆನಿಸಿ "ಅಮಾನುಷೀ" (ದೇವತೆ) ಎಂದು ಕೊಂಡಾಡಲ್ಪಟ್ಟಳು.

ಶತ ಹೃದಾ ಬಂಧುರಯಾ ಸ್ವಕಾಂತ್ಯಾ ಸಂಚಾರಿಜಾಂಬೂನದ ಬಿಂಬ ಕಲ್ಪಾ।
ತ್ರಯ್ಯಂತ ಸಿದ್ಧೇನ ರಸಾಯನೇನ ಕಾಲೇನ ಭೇಜೇ ಕಲಧೌತ ಲಕ್ಷ್ಮೀಂ ॥೪॥

ಅದ್ಭುತವಾದ ತೇಜಸ್ಸಿನಿಂದ ಕೂಡಿ ಸ್ವರ್ಣ ಬಿಂಬದಿಂದ ಇದ್ದ ದೇವತೆಯು, ವೇದಾಂಗ ಗಳಲ್ಲಿ ಪ್ರಸಿದ್ಧವಾದ ರಸಾಯನವನ್ನು ಧರಿಸಿ ಕಾಂತಿಯಿಂದ ಶೋಭಿಸಿದಳು. ಚಿನ್ನವು ಬೆಳ್ಳಿಯಾಗುವ ಈ ರಸಾಯನಕ್ಕೆ 'ಕಾಲೇನ' ಎಂಬುದರಿಂದ ಕಪ್ಪು ಎಂಬ ಅರ್ಥವೂ ಉಂಟು. ಗರ್ಭಿಣಿಯರ ಮೈಬಣ್ಣ ಬದಲಾಗುವ ಸೂಚನೆ ಇದು.

ಸ್ತ್ರೀಯರು ಗರ್ಭ ಧರಿಸಿದ ಮೇಲೆ ಅವರ ಮೈಬಣ್ಣ ಬದಲಾಗುವುದು ಸಹಜ. ಅದರಂತೆಯೇ ದೇವಕಿಯ ಮೈಬಣ್ಣವೂ ಬದಲಾಯಿತು. ಆದರೆ ಸಾಮಾನ್ಯವಾಗಿ ಎಲ್ಲರ ಮೈಯೂ ಬಿಳುಪಾಗುತ್ತದೆ. ಆದರೆ ದೇವಕಿಯ ಕಪ್ಪಾದ ಮೈಬಣ್ಣವನ್ನು ಹೊಂದಿದ್ದ ಕೃಷ್ಣನನ್ನು ಗರ್ಭದಲ್ಲಿ ಹೊತ್ತ ಮೇಲೆ (ರಸಾಯನದಂತಿದ್ದ) ಅವಳ ಮೈಬಣ್ಣವೂ ಕಪ್ಪಾಯಿತು.

ಮಯೂರ ಪಿಂಛ ದ್ಯುತಿರ್ಭಿ ಮಯೂಖೈ ಸ್ತತ್ಕಾಂತಿರಂತರ್ವಸತಾ ಸ್ತ್ರಿಧಾಮ್ನಃ।
ಶ್ಯಾಮಾ ಬಹಿಃ ಮೂಲಸಿತಾ ಭಭಾಸೇ ಮಂಗಲ್ಯರತ್ನಾಂಕುರಪಾಲಿಕೇವ ॥೫॥

ಗರ್ಭದಲ್ಲಿ ಬೆಳಗುವ ಭಗವಂತನ ಕೇಶರಾಶಿಯು, ಮೇಲೆ ಶ್ಯಾಮ ವರ್ಣದಲ್ಲೂ, ಕೆಳ ಭಾಗದಲ್ಲಿ ಶುಭ್ರ ವರ್ಣವಾಗಿಯೂ ಇದ್ದು ಅವನನ್ನು ಧರಿಸಿದ್ದ ದೇವಕಿಯ ಕಾಂತಿಯು ಅದ್ಭುತವಾಗಿ ಪ್ರಜ್ವಲಿಸಿತು.

ಈ ಶ್ಲೋಕದಲ್ಲಿಯೂ ದೇವಕಿಯ ಮೈ ಬಣ್ಣದ ವರ್ಣನೆಯಿದೆ. ಗರ್ಭದಲ್ಲಿ ಬೆಳೆಯುತ್ತಿದ್ದ ಕೃಷ್ಣನ ಕೇಶರಾಶಿಗೆ ತಕ್ಕಂತೆ ದೇವಕಿಯ ಮೈ ಬಣ್ಣವೂ ಬದಲಾಗಿ ಅದ್ಭುತ ಕಾಂತಿಯಿಂದ ಪ್ರಕಾಶಿಸಿತು. ಆ ಭಗವಂತನ ಕೇಶರಾಶಿಯು ಮೇಲೆ ಶ್ಯಾಮಲ ವರ್ಣವಾಗಿಯೂ,

ಕೆಳ ಭಾಗದಲ್ಲಿ ಶುಭ್ರ ವರ್ಣವಾಗಿ ಇದ್ದದ್ದರಿಂದ, ಅದೇ ರೀತಿ ದೇವಕಿಯು ಮೈ ಬಣ್ಣವೂ ಬದಲಾವಣೆ ಹೊಂದಿತು. (ಉತ್ಪ್ರೇಕ್ಷಾಲಂಕಾರ).

ಕಾಲೇ ಬಭಾಸೇ ವಸುದೇವ ಪತ್ನ್ಯಾಃ ಕರ್ಪೂರ ಲಿಪ್ತೇವ ಕಪೋಲ ಶೋಭಾ।
ಶಶಿಪ್ರಭಾ ಸಪ್ತಮ ಗರ್ಭಕಾಂತಿಃ ಚ್ಯುತಾ ವಶಿಷ್ಟೇವ ಶನೈರುದೀರ್ಣ ॥೬॥

ಗರ್ಭವು ಬೆಳೆಯುವ ತರುಣದಲ್ಲಿ ದೇವಕಿಯ ಕೆನ್ನೆಗಳಲ್ಲಿ ಕರ್ಪೂರ ಹಚ್ಚಿದ ಸುವಾಸನೆಯು ಬರುತ್ತಿತ್ತು. ಅವಳ ಏಳನೆಯ ಗರ್ಭದಲ್ಲಿ ಇದ್ದಂತಹ (ಅಂದರೆ ಬಲರಾಮನ ಆವಿರ್ಭಾವವಾದಾಗ) ಕಾಂತಿಯೂ ಸೇರಿ ಅವರ್ಣನೀಯ ತೇಜಸ್ಸು ಉಂಟಾಯಿತು.

ದೇವಕಿಯ ಏಳನೆಯ ಗರ್ಭದಲ್ಲಿ ಬಲರಾಮನು ವಾಸವಾಗಿದ್ದು ಅನಂತರ ಅವನು ಭಗವಂತನ ಮಾಯೆಯಿಂದ ರೋಹಿಣಿಯ ಗರ್ಭಕ್ಕೆ ಸ್ಥಳಾಂತರಿಸಲ್ಪಟ್ಟನು. ಆದರೂ ಆ ಬಲರಾಮನ ತೇಜಸ್ಸು ಸಹ ಸೇರಿ, ದೇವಕಿಯ ಎಂಟನೇ ಗರ್ಭವು ಬೆಳೆಯುತ್ತಾ ಬಂದ ಹಾಗೆಲ್ಲಾ ದೇವಕಿಯ ಕಪೋಲ (ಕೆನ್ನೆ)ಗಳು ತೇಜೋಮಯವಾಗಿ ಪ್ರಕಾಶಿಸುತ್ತಾ ಅತ್ಯಂತ ಆಕರ್ಷಕವಾಗಿದ್ದವು.

ನವೇಂದು ನಿಷ್ಯಂದ ನಿಭಶ್ಚಕಾಶೇ ವರ್ಣಃ ಪ್ರತೀಕೇಷು ಮಧು ದ್ರವಾಂಢ್ಯಾಃ।
ಅಂತಃಸ್ಥಿತೇನ ಪ್ರಥಮೇನ ಪುಂಸಾ ಪ್ರವರ್ತಿತಂ ಸತ್ವಮಿವಾ ವದಾತಂ ॥೭॥

ಜೇನು ತುಪ್ಪದ ರೀತಿ ಸ್ವಾದುವಾಗಿರುವ ಆ ದೇವಕಿಯ ಅಂಗಗಳಲ್ಲಿ ಅಮೃತವು ಸೂಸುತ್ತಿದ್ದಿತು. ಒಳಗಿರುವ ಪುರುಷೋತ್ತಮನಿಂದ ಬೆಳಗಲ್ಪಟ್ಟ ಶುದ್ಧ ಸತ್ವ ಗುಣಗಳೋ ಎಂಬಂತಿತ್ತು.

"**ಮಹಾನ್ ಪ್ರಭುರ್ವೈ ಪುರುಷಃ ಸತ್ವಸ್ಯೇವ ಪ್ರವರ್ತಕ**" ಎಂಬ ವಾಕ್ಯ ಇದಕ್ಕೆ ಪ್ರಮಾಣ. ಗರ್ಭಿಣಿಯಾಗಿ, ಪುರುಷೋತ್ತಮನನ್ನು ಹೊತ್ತಿದ್ದ ಆ ದೇವಕಿಯ ಅಂಗಾಂಗ ಗಳೆಲ್ಲವೂ ಅವರ್ಣನೀಯ ಕಾಂತಿಯಿಂದ ಕೂಡಿ, ಅಮೃತವನ್ನು ಸೂಸುವಂತೆ ನೋಡುವವರ ಕಣ್ಣಿಗೆ ಆಪ್ಯಾಯಮಾನವಾಗಿತ್ತು. ಆ ಶುದ್ಧ ಸತ್ವ ಸ್ವರೂಪನಾದ ಶ್ರೀ ಮಹಾವಿಷ್ಣುವಿನ ಗುಣಗಳು ಅವಳಲ್ಲಿ ಪ್ರತಿಫಲಿಸುತ್ತಿತ್ತು. ಎಲ್ಲಕ್ಕೂ ಪ್ರವರ್ತಕನಾದ ಪರಬ್ರಹ್ಮನ ರೂಪವು ಅವಳಲ್ಲಿ ಪ್ರತಿಬಿಂಬಿಸುತ್ತಿತ್ತು.

ಕರಂಬಿತಾ ಕಿಂಚಿದಿವ ಪ್ರಸೃಪ್ತೈ ಸ್ತೇಜೋಭಿರಂತರ್ವಸತ ಸ್ತ್ರಿಧಾಮ್ನಃ।
ಮರೀಚಿಭಿಃ ಸ್ವೈರ ಭವತ್ ಪ್ರಜಾನಾಂ ಮಂಗಲ್ಯರತ್ನಾಂಕುರ ಪಾಲಿಕೇವ ॥೮॥

ಚೆನ್ನಾಗಿ ಬೆಳೆದ ಗರ್ಭದಲ್ಲಿದ್ದ ಭಗವಂತನ ತೇಜಸ್ಸಿನಿಂದ ಬೆಳಗುತ್ತಿದ್ದ ದೇವಕಿಯು, ಜನಹಿತಕ್ಕಾಗಿ ಅವತಾರ ಮಾಡುವ ಆ ಬಾಲಕನ ಪಾಲಕಿಯಾಗಿ ತೋರುತ್ತಿದ್ದಳು.

ಭಗವಂತನು "**ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ**" ಎಂದು ಅವನೇ ಹೇಳಿರುವ ಹಾಗೆ ಲೋಕೋದ್ಧಾರಕ್ಕಾಗಿ ಅವತಾರಗಳನ್ನು ಎತ್ತುತ್ತಾನೆ.

ರಾಮ-ಕೃಷ್ಣಾದ್ಯವತಾರಕ್ಕಾಗಿ, ಅದಕ್ಕಾಗಿ ಪೂರ್ಣ ಗರ್ಭವಾಸವನ್ನು ಅನುಭವಿಸಿದ್ದಾನೆ. ಪೂರ್ಣ ಗರ್ಭಿಣಿಯಾದ ದೇವಕಿಯು, ಆ ಕೃಷ್ಣನ ಗರ್ಭವನ್ನು ಬಹು ಜತನದಿಂದ ಕಾಪಾಡುತ್ತಾ, ಅವನು ಅವತಾರ ಮಾಡುವ ದಿನವನ್ನು ಎದುರುನೋಡುತ್ತಿದ್ದಳು.

ತಸ್ಯಾಃ ಸುಘೋಲ್ಲಾಸ ಜುಷಃ ಕಟಾಕ್ಷಾಃ ಸಂಕ್ಷುಬ್ಧ ದುಗ್ಧೋದಧಿ ಸೌಮ್ಯಭಾಸಃ।
ಜಗತ್ರಯೀ ಸೌಧವಿಲೇಪನಾರ್ಹಾಂ ವಿತೇನಿರೇ ವರ್ಣ ಸುಧಾಮಪೂರ್ವಾಂ ॥೯॥

ಮಂಥರ ಬೆಟ್ಟದಿಂದ ಮಥಿಸಲ್ಪಟ್ಟ ಕ್ಷೀರ ಸಮುದ್ರದಲ್ಲಿ ದೊರಕಿದ ಬಿಳುಪಾದ ನೊರೆಯ ಬಣ್ಣ ಹೊಂದಿದ ದೇವಕಿಯ ಅಮೃತ ಸಮಾನವಾದ ಕಟಾಕ್ಷವು ಮೂರು ಲೋಕಗಳಿಗೂ ಸುಣ್ಣವನ್ನು ಹಚ್ಚುವಂತೆ ಇದ್ದಿತು.

ಈ ಶ್ಲೋಕದಲ್ಲಿ ಆ ದೇವಕಿಯು ದೇಹದ ಬಿಳುಪನ್ನು ವರ್ಣಿಸಲಾಗಿದೆ. ಅಂತೆಯೇ ಅವಳ ಆಗಿನ ಕಟಾಕ್ಷ ದೃಷ್ಟಿಯನ್ನು ವಿವರಿಸಲಾಗಿದೆ. "**ಸೌಮ್ಯಾ ವಿಪ್ರೇ ಸೋಮ ಜೋಚ್ಚೆ ಸುಂದರ ಸೌಮ ದೈವತೇ**" ಎಂಬಂತೆ, ಅವಳ ಕಟಾಕ್ಷಗಳು ಚಂದ್ರನ ಕಿರಣಗಳಂತೆ ತಂಪು ಸೂಸುತ್ತಿದ್ದು, ಇಡೀ ಜಗತ್ತಿಗೆ ಸುಣ್ಣ ಹಚ್ಚುವ್ರೋಪಾದಿಯಲ್ಲಿ ಬಿಳುಪಾಗಿದ್ದು ಅಮೃತವನ್ನು ಸೂಸುತ್ತಿತ್ತು. (ಉತ್ಪ್ರೇಕ್ಷಾಲಂಕಾರ) (ಇದು ಕವಿ ಸಮಯವನ್ನು ತೋರಿಸುತ್ತದೆ).

ರಕ್ಷಾವಿಧೌ ರಾಕ್ಷಸ ದಾನವಾನಾಂ ಕಾರಾಗೃಹೇ ಕಂಸ ನಿಯೋಗ ಭಾಜಾಂ।
ಸಂಪಶ್ಯಮಾನಾ ಸಕೃದೀಕ್ಷಿತಾ ವಾ ಸಂಕ್ಷೋಭಯಾಮಾಸ ಮನಾಂಸಿ ಸೈಷಾ ॥೧೦॥

ಸೆರೆಯಲ್ಲಿ ಅವರುಗಳನ್ನು ಕಾಯುತ್ತಿರುವ ಕಂಸನಿಂದ ನಿಯಮಿಸಲ್ಪಟ್ಟ ರಾಕ್ಷಸರುಗಳಿಂದ, ಅಸುರರಿಂದ ಇವಳು ನೋಡಲ್ಪಟ್ಟ ಸಮಯದಲ್ಲಿ ಅವರುಗಳ ಮನಸ್ಸನ್ನು ಇವಳು ಕಲಕಿದಳು.

ವಸುದೇವ ದೇವಕಿಯನ್ನು ಕಂಸನು ಕೃಷ್ಣನ ಭಯದಿಂದ ಬಂಧಿಸಿಟ್ಟಿದ್ದ. ಹಾಗೂ ಕಾವಲಿಗಾಗಿ ಅಸುರರನ್ನೂ, ರಾಕ್ಷಸರನ್ನೂ ನಿಯಮಿಸಿದ್ದ. ಆ ರಾಕ್ಷಸರು ದೇವಕಿಯನ್ನು ಆಗಾಗ ನೋಡುತ್ತಿದ್ದರು. ಇವಳಲ್ಲಿ ಅಪೂರ್ವವಾದ ತೇಜಸ್ಸನ್ನು ಕಾಂತಿಯನ್ನು ಕಂಡ ಅವರುಗಳ ಮನಸ್ಸು ಕಲಕಿ ಹೋಯಿತು. ಆ ವೈಷ್ಣವ ತೇಜಸ್ಸನ್ನು ಅವರು ನೋಡಲಾರದಾದರು.

ಭುಕ್ತಾ ಪುರಾ ಯೇನ ವಸುಂಧರಾ ಸಾ ಸ ವಿಶ್ವಭೋಕ್ತಾ ಮಮ ಗರ್ಭಭೂತಃ।
ಇತಿ ಧ್ರುವಂ ಸೂಚನ ಮಾಚರಂತಿ ತತ್ತಾದೃಶಂ ನಾಟಿತಕಂ ತತಾನ ॥೧೧॥

ಗರ್ಭಿಣಿ ಸ್ತ್ರೀಯರು ಬಯಕೆಗಾಗಿ ಮಣ್ಣನ್ನು ತಿನ್ನುವುದುಂಟು. ಅದನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ಈ ಭೂಮಿಯನ್ನು ಯಾರು ಹಿಂದೆ ಭುಜಿಸಿದರೋ, ಜಗತ್ತನ್ನೆಲ್ಲಾ ಉಣ್ಣುವ ಆ ಸರ್ವೇಶ್ವರನು ತನ್ನ ಗರ್ಭದಲ್ಲಿದ್ದಾನೆಂದು ತಿಳಿದಿದ್ದ ಆ ದೇವಕಿಯು ಮಾಡುತ್ತಿದ್ದ ಕೃತಿಯಿಂದ ಭಗವಂತನು ಮಣ್ಣನ್ನು (ಭೂಮಿಯನ್ನು) ವರಾಹಾವತಾರದಲ್ಲಿ ಆಸ್ವಾದಿಸಿದ ಪ್ರಸಂಗವನ್ನು ನೆನಪು ತರುವಂತಿತ್ತು.

ಗರ್ಭಿಣಿಯರು ಮಣ್ಣನ್ನು ತಿನ್ನುವುದು ಸಹಜ. ಅದೇ ರೀತಿ ಮಣ್ಣನ್ನು ತಿನ್ನುವುದನ್ನು ಈ ಶ್ಲೋಕದಲ್ಲಿ ವರ್ಣಿಸಿದ್ದಾರೆ. ಮಣ್ಣು ಭೂದೇವಿಯ ಸ್ವರೂಪ. ದೇವಕಿಯ ಗರ್ಭದಲ್ಲಿ ಸರ್ವೇಶ್ವರನಾದ ಕೃಷ್ಣನಿದ್ದಾನೆ. ಅವನು ಹಿಂದೆ ವರಾಹಾವತಾರ ಮಾಡಿದಾಗ ಭೂದೇವಿಯನ್ನು ರಕ್ಷಿಸಿದ್ದನು. ಆ ಕಾಲದಲ್ಲಿ ಭೂದೇವಿಯ ಸೌಂದರ್ಯವನ್ನು ಅವನು ಆಸ್ವಾದಿಸಿ ಆನಂದಿಸಿದ್ದನು. **''ಉದ್ಧೃತಾಸಿ ವರಾಹೇಣ ಕೃಷ್ಣೇನ ಶತ ಬಾಹುನಾ''** ಎಂದು ಭೂ ಸೂಕ್ತಯಲ್ಲಿ ಹೇಳಿದೆ. ದೇವಕಿ ಮಣ್ಣನ್ನು ತಿನ್ನುವುದು ವರಾಹಾವತಾರವನ್ನು ನೆನಪಿಸುವಂತಿತ್ತು.

ಸಮಾಧಿ ಸುಕ್ಷೇತ್ರ ಕೃಷೀವಲಾನಾಂ ಸಂತೋಷ ಸಸ್ಯೋದಯ ಮೇಘಕಾಂತ್ಯಾ
ಚಕಾಸ ತಸ್ಯಾಃ ಸ್ತನ ಚುಚುಕಾಬಾ ಗರ್ಭತ್ವಿಷಾ ಗಾಢಮಿವಾನುಲಿಪ್ತಾ ॥೧೨॥

ಗರ್ಭಿಣಿ ಸ್ತ್ರೀಯರ ಸ್ತನಗಳ ತುದಿಯು ಕಪ್ಪಗಿರುತ್ತದೆ. ಅದನ್ನು ಈ ಶ್ಲೋಕದಲ್ಲಿ ವರ್ಣಿಸಿದ್ದಾರೆ. ಯೋಗದಲ್ಲಿ ಸಂಭವಿಸುವ ಸಮಾಧಿ ಎಂಬ ಸ್ಥಿತಿಯು ಅವರ್ಣನೀಯವಾದುದು. ಅದನ್ನು ಅನುಭವಿಸುವ ಮಹಾನುಭಾವರು ಹೊಂದುವ ಸಂತೋಷವನ್ನು ಒಳ್ಳೆಯ ಬೆಳೆಗೆ ಸಮಾನವಾದದ್ದು. ಅದು ಅಭಿವೃದ್ಧಿ ಹೊಂದಲೋಸುಗ, ಮೇಘಗಳಿಂದ ಸುರಿಸಲ್ಪಟ್ಟ ಮಳೆಯಿಂದ ತೋಯಿಸಲ್ಪಟ್ಟಂತೆ ಅವಳ ಸ್ತನಾಗ್ರಗಳು ಶೋಭಿಸುತ್ತಿದ್ದವು.

ದೇವಕಿಯ ಸ್ತನಾಗ್ರಗಳ ತುದಿಯನ್ನು ಕಪ್ಪಾದ ಮೋಡಗಳಿಗೆ ಹೋಲಿಸಿದ್ದಾರೆ. ಮೋಡಗಳಿಂದ ಸುರಿಯುವ ಮಳೆಯು ಯಾವ ರೀತಿ ಪೈರನ್ನು ವೃದ್ಧಿಗೊಳಿಸುವುದೋ ಅದೇ ರೀತಿ ಅವಳ ಸ್ತನಾಗ್ರಗಳು ಅವಳ ಮೈಕಾಂತಿಯನ್ನು ಹೆಚ್ಚಿಸಿತ್ತು.

ಕಸ್ತೂರಿಕಾ ಕಾಮ್ಯ ರುಚಿಸ್ತದೀಯಾ ರಮ್ಯಾ ಬಭೌ ಚುಚೂಕ ರತ್ನ ಕಾಂತಿಃ।
ತದ್ಗರ್ಭ ಸಂದರ್ಶನ ಲೋಲುಪಾನಾಕಮಂತರ್‌ದೃಶಾ ಮಂಜನ ಕಲ್ಪನೇವ ॥೧೩॥

ಕಸ್ತೂರಿಯಿಂದಲೂ ಆಸೆ ಹೊಂದುವಂತಹ ಸುಂದರವಾದ ಅವಳ ಸ್ತನಾಗ್ರಗಳು ರುಚಿಕರವಾದ ಕಾಂತಿಯು, ಅವಳ ಗರ್ಭವನ್ನು ನೋಡಲು ಆಶಿಸುವ ಯೋಗಿಗಳ ಕಣ್ಣುಗಳಿಗೆ ಕಪ್ಪನ್ನು ಇಡುವಂತೆ ತೋರುತ್ತಿತ್ತು. (ಅವಳ ಗರ್ಭವನ್ನು ನೋಡುವಾಗ ಕಣ್ಣಿನ ಕಪ್ಪು ಸ್ತನಾಗ್ರಗಳಿಗೆ ಹಚ್ಚಿದಂತಿತ್ತು.)

ಶ್ರೀಕೃಷ್ಣನನ್ನು ಹೊತ್ತಿರುವ ಅವಳನ್ನು ನೋಡಲು ಅನೇಕ ಯೋಗಿಗಳು ಆಶಿಸುತ್ತಿದ್ದರು. ಆಗ ಅವಳ ಸ್ತನಾಗ್ರಗಳ ಕಪ್ಪಾದ ಕಾಂತಿಯು ಅವರುಗಳ ಕಣ್ಣುಗಳಿಗೆ ಕಾಡಿಗೆಯನ್ನು ಇಡುವಂತೆ ಶೋಭಿಸುತ್ತಿತ್ತು. ಉತ್ಪ್ರೇಕ್ಷಾಲಂಕಾರವನ್ನು ಈ ಕೆಲ ಶ್ಲೋಕಗಳಲ್ಲಿ ಆಚಾರ್ಯರು ಬಳಸಿದ್ದಾರೆ. ಪರಮ ಪುರುಷನಾದ ಶ್ರೀಕೃಷ್ಣನನ್ನು ಗರ್ಭದಲ್ಲಿ ಧರಿಸಿರುವ ಆ ಪುಣ್ಯವತಿಯಾದ ದೇವಕಿಯ ಸೌಂದರ್ಯವನ್ನು ಎಷ್ಟು ಕೊಂಡಾಡಿದರೂ ಕವಿಗೆ ತೃಪ್ತಿಯಿಲ್ಲ.

ಪರಾವರಾಣಾಂ ಪ್ರಭವಸ್ಯ ಪುಂಸಃ ಪ್ರಕಾಶಕತ್ವಂ ಪ್ರತಿಪದ್ಯಮಾನಾಂ।
ಅಭಾವಯನ್ ಭಾವಿತ ಚೇತಸಸ್ತಾಂ ವಿದ್ಯಾಮಯೀಂ ವಿಶ್ವಪಿತಾಮಹೀಂ ಚ ॥೧೪॥

ಸಂಸ್ಕರಿಸಲ್ಪಟ್ಟ ಮನಸ್ಸುಳ್ಳವರೂ, ಉಚ್ಚ ನೀಚ ಸಂಗತಿಗಳಿಗೆಲ್ಲಾ ಕಾರಣನಾದ (ತಂದೆಯಾದ) ಪರಮ ಪುರುಷನನ್ನು ಗರ್ಭದಲ್ಲಿ ಹೊತ್ತಿರುವ ದೇವಕಿಯು ನಮ್ಮ ಸ್ವಾಮಿಗೆ ತಾಯಿಯಾದ್ದರಿಂದ ಎಲ್ಲರಿಗೂ ಪಿತಾಮಹಿಯಾಗಿ ಆಗಿ ವಿದ್ಯೆಗಳಿಗೆಲ್ಲಾ ಅಧಿದೇವತೆ ಯಾದಳು.

ದಶಾವತಾರ ಸ್ತೋತ್ರದಲ್ಲಿ ಶ್ರೀ ದೇಶಿಕರು ನರಸಿಂಹಾವತಾರವನ್ನು ಬಣ್ಣಿಸುವಾಗ, ನರಸಿಂಹನು ಅಡಗಿದ್ದ ಕಂಬವನ್ನು ಚತುರ್ಮುಖ ಬ್ರಹ್ಮನಿಗೆ ಪಿತಾಮಹಿ (ಅಜ್ಜಿ) ಆಯಿತು ಎಂದು ಹೇಳಿದ್ದಾರೆ. ಅದೇ ರೀತಿ, ಪರಮ ಪುರುಷನು ವಿದ್ಯೆಗಳಿಗೆಲ್ಲಾ ತಂದೆ, ವೇದಗಳಿಗೆಲ್ಲಾ ಪಿತಾ ಇದ್ದಂತೆ. ಆದ್ದರಿಂದ ದೇವಕಿಯು ಅವನನ್ನು ತನ್ನ ಗರ್ಭದಲ್ಲಿ ಹೊತ್ತಿದ್ದರಿಂದ, ದೇವಕಿಯು ವೇದಗಳಿಗೆ ಪಿತಾಮಹಿ (ಅಜ್ಜಿ) ಅವಳು ಎಂದಿದ್ದಾರೆ. (ಉತ್ಪ್ರೇಕ್ಷಾಲಂಕಾರ).

ಲಿಲೇಖ ವಿಶ್ವಾನಿ ಜಗಂತ್ಯಭಿಜ್ಞಾ ಲೀಲಾಹೃತೆ ಚಿತ್ರಪಟೇ ಯಥಾರ್ಹಂ।
ಪ್ರಾಯಃ ಪ್ರಜಾನಾಂ ಪತಯಃ ಪ್ರತೀತಾಃ ಯನ್ಮಾತೃಕಾಃ ಸ್ವೇಷು ವಿಧಿಷ್ವಭೂವನ್ ॥೧೫॥

ವಿನೋದವಾಗಿ ಚಿತ್ರ ಬರೆಯುವಾಗ, ಎಲ್ಲವನ್ನೂ ತಿಳಿದ ದೇವಕಿಯ ಚಿತ್ರ ಪಟದಲ್ಲಿ ಎಲ್ಲಾ ಲೋಕಗಳನ್ನು ಸೇರಿಸಿದರು. ಆದಿಯಲ್ಲಿ ಪರಮ ಪುರುಷನು ಸೃಷ್ಟಿಮಾಡುವಾಗ ಎಲ್ಲಾ ಪ್ರಜಾಪತಿಗಳಿಗೂ ಸೃಷ್ಟಿಕ್ರಮವನ್ನು ತೋರಿಸುವಂತಿತ್ತು ಆ ಚಿತ್ರ.

ದೇವಕಿಯ ಸಖಿಯರು, ಆಟವಾಡುವ ಸಂದರ್ಭದಲ್ಲಿ ಅವಳ ಚಿತ್ರ ಪಟವನ್ನು ಬಿಡಿಸಿದರು. ಅದರಲ್ಲಿ ಎಲ್ಲಾ ಲೋಕಗಳನ್ನೂ ಚಿತ್ರಿಸಿ, ಮಧ್ಯೆ ಅವಳ ರೂಪವನ್ನು ಬರೆದರು. ಅದೇ ಹೇಗಿತ್ತೆಂದರೆ, ಆದಿಯಲ್ಲಿ ಪರಮ ಪುರುಷನು ಸೃಷ್ಟಿ ಮಾಡುವಾಗ, ಎಲ್ಲಾ ಪ್ರಜಾಪತಿಗಳಿಗೂ ಸೃಷ್ಟಿ ಕ್ರಮವನ್ನು ತಿಳಿಸಿ, ಅದರಂತೆ ಸೃಷ್ಟಿ ಮಾಡಬೇಕೆಂದು ತಿಳಿಸುವಂತಿತ್ತು ದೇವಕಿಯ ಚಿತ್ರಪಟ.

ನಿರಾಶಿಷಾಂ ಪದ್ಧತಿ ಮಾದಧಾನಾ ನೈಶ್ರೇಯಸೀಂ ನೀತಿ ಮುಪಘ್ನಯಂತೀ।
ಪುಣ್ಯಾಶಯಾ ಪೂರ್ವಯುಗ ಪ್ರರೋಹಮಿಯೇಷ ದೇವಿ ಭುವನೇ ವಿಧಾತುಂ॥೧೬॥

ದೇವಕಿಯು ವಿರಕ್ತಿಯಿಂದ ನಿವೃತ್ತಿ ಕರ್ಮದಲ್ಲಿ ಇಳಿದು ಮೋಕ್ಷವನ್ನು ಹೊಂದುವವರ ಚರ್ಯೆಯನ್ನು ಹೊಂದಿ ಪುನೀತವಾದ ಚಿತ್ರವನ್ನು ಹೊಂದಿ ಆ ಭಾವದಿಂದ ಕೂಡಿ ಪುಣ್ಯವಾದ ಕೃತಯುಗದಲ್ಲಿ ಇದ್ದಂತೆ ಇದ್ದಳು.

ಗರ್ಭಿಣಿ ಸ್ತ್ರೀಯರಿಗೆ ಕೆಲ ತಿಂಗಳು, ಅನ್ನ ಸೇರುವುದಿಲ್ಲ. ಇದು ಸ್ವಾಭಾವಿಕವಾದದ್ದು. ಇದನ್ನು ವರ್ಣಿಸುತ್ತಾ ಆಚಾರ್ಯರು, ಯಾವ ರೀತಿ ನಿವೃತ್ತಿ ಮಾರ್ಗವನ್ನು ಹಿಡಿಯುವ

ಯೋಗಿಗಳು ಬೇರೆ ಇತರ ಐಹಿಕ ವಿಷಯಗಳಲ್ಲಿ ಆಸಕ್ತಿ ಕಳೆದುಕೊಳ್ಳುವರೋ ಅದೇ ರೀತಿ ದೇವಕಿಯು ಐಹಿಕ ಸುಖ ಭೋಜನದಲ್ಲಿ ನಿರಾಸಕ್ತಿ ತಳೆದಳು. (ಪರಮಾತ್ಮಾ ಯೋನಿರಕ್ತಾ, ವಿರಕ್ತೋ ಅಪರಮಾತ್ಮನಿ ಎಂಬಂತೆ). ಅವಳ ಮನಸ್ಸು ಯೋಗಿಗಳ ಮನಸ್ಸಿನಂತೆ ಪರಿಶುದ್ಧವಾಗಿ ಯಾವಾಗಲೂ ಭಗವಂತನನ್ನೇ ಧ್ಯಾನಿಸುವಂತಿತ್ತು.

ಅನಾಪ್ತ ಪೂರ್ವಂ ಕಿಮಪೇಕ್ಷಿತಂ ತೇ ಕಿಂ ವೋಪಪದದ್ಯಾ ಮಥವಾऽಧುನೇತಿ।
ವಯಸ್ಯಯಾ ಭಾವವಿಧಾऽನುಯುಕ್ತಾ ನ ಕಿಂಚಿದಿತ್ಯೇವ ಜಗಾದ ನಾಥಾ ॥೧೭॥

ಯಾವಾಗಲೂ ಇವಳ ಹೃದಯವನ್ನು ತಿಳಿಯಬಲ್ಲ ಸ್ನೇಹಿತೆಯು ಇವಳಿಗೆ ಯಾವುದರಲ್ಲೂ ಅಪೇಕ್ಷೆ ಇಲ್ಲವಲ್ಲ ಎಂದು ನೊಂದು "ಇದುವರೆಗೂ ಹೊಂದದ ವಸ್ತು ಏನು ಬೇಕು ಅದನ್ನು ತಿಳಿದು ಅವಳಿಗೆ ಕೊಡಬೇಕು" ಎಂದುಕೊಳ್ಳುವಾಗಲೇ, ದೇವಕಿಯು ನನಗೆ ಏನೂ ಅಪೇಕ್ಷೆಯಿಲ್ಲ ಎಂದು ತಿಳಿಸಿದಳು.

ದೇವಕಿಯ ಸಖಿಯು ಇವಳ ನೈರಪೇಕ್ಷ್ಯವನ್ನು ಕಂಡು ಅವಳಿಗೆ ಯಾವುದಾದರೂ ಅಪೂರ್ವ ವಸ್ತುವನ್ನು ಕೊಡಬೇಕೆಂದು ಇಚ್ಛಿಸಿ, ಅವಳ ಮನದಿಂಗಿತವನ್ನು ತಿಳಿಯಲಪೇಕ್ಷಿಸಿ, ಏಕಾಂತದಲ್ಲಿ ಅವಳನ್ನು ಪ್ರಶ್ನಿಸಿದಾಗ್ಯೂ ಸಹ, ದೇವಕಿಯು ಭಗವಂತನು ತನ್ನ ಉದರದಲ್ಲಿ ಇದ್ದುದರಿಂದ, ತಾನು ಪರಿಪೂರ್ಣಳು ಎಂದು ಭಾವಿಸಿ, ತನಗೆ ಮತ್ತ್ಯಾವುದರ ಅಪೇಕ್ಷೆಯೂ ಇಲ್ಲವೆಂದು ತಿಳಿಸಿದಳು.

ಅನಾದರೇ ದೇವಿ ಸಖೀ ಜನಾನಾಂ ಕಥಂ ನ ದೂಯೇತ ದಯಾ ತವೇತಿ।
ಉಪಹ್ವರೇ ಸಂಲಪಿತಾ ಮನೋಜ್ಞೈರಾಲೋಕನೈರುತ್ತರಮಾಚಚಕ್ಷೇ ॥೧೮॥

ಸ್ನೇಹಿತೆಯನ್ನು ಆದರಿಸದ ನಿನ್ನ ದಯೆಯು ದೂಷಿಸಲು ಸಲ್ಲದು. ನೀನು ಹೀಗೆ ಇದ್ದಲ್ಲಿ ಹ್ಯಾಗೆ ಆಗುತ್ತದೆ ಎಂದುಕೊಳ್ಳುವ ಕಾಲಕ್ಕೆ ಅವಳ ದಿವ್ಯ ಕಟಾಕ್ಷಗಳಿಂದಲೇ ಅವರೆಲ್ಲರನ್ನೂ ಸಂತೋಷಗೊಳಿಸಿದಳು.

ಅವಳ ಮನೋಸ್ಥಿತಿಯನ್ನು ಅರಿತ ಸಖಿಯರೆಲ್ಲರೂ ಚಿಂತಾಕ್ರಾಂತರಾಗಿ, ಇವಳು ಹೀಗೆ ಇದ್ದಲ್ಲಿ ಅನಾಹುತವಾಗಬಹುದೆಂಬ ಎಣಿಕೆಯಲ್ಲಿದ್ದಾಗ, ದೇವಕಿಯು ತನ್ನ ಚರ್ಯೆಗಳಿಂದಲೂ, ತನ್ನ ದಿವ್ಯ ಕಟಾಕ್ಷಗಳಿಂದಲೂ ಅವರನ್ನೆಲ್ಲಾ ಸಂತೋಷಗೊಳಿಸಿ, ತನಗೇನೂ ಆಗಿಲ್ಲವೆಂಬುದನ್ನು ಸಾದರಪಡಿಸಿದಳು. ಇವೆಲ್ಲವೂ ಗರ್ಭಿಣಿಯರ ದೌರ್ಬಲ್ಯದ ಲಕ್ಷಣಗಳು. ಕೆಲವು ದಿನ ಉಲ್ಲಸಿತರಾಗಿರುತ್ತಾರೆ. ಕೆಲವೊಮ್ಮೆ ನಿರಾಸಕ್ತರಾಗಿರುತ್ತಾರೆ.

ಅಶೇತ ಸಾ ಕಮಮಜಾತ ನಿದ್ರಾ ಮಾತುಂ ಪ್ರವೃತ್ತೇವ ಪದಾನಿ ಚಕ್ರೆ।
ಅಧ್ಯಾಸ್ತ ಲೋಕಾನವಧೀರಯಂತಿ ಭದ್ರಾಸನಂ ಭಾವಿತ ಪಾರಮೇಷ್ಟ್ಯ ॥೧೯॥

ದೇವಕಿಯು ನಿದ್ರೆಯಿಲ್ಲದೆಯೇ ಮಲಗಿರುತ್ತಿದ್ದಳು. ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಕಷ್ಟದಿಂದ ನಡೆಯುತ್ತಿದ್ದಳು. ಯಾವಾಗಲೂ ಉನ್ನತಾಸನದಲ್ಲಿ ಕುಳಿತಿರುತ್ತಿದ್ದಳು. ಪರಮ ಪುರುಷನು ತನ್ನಲ್ಲಿ ಇರುವವರ ಅನುಭವವನ್ನು ಅನುಭವಿಸುತ್ತಿದ್ದಳು.

ದೇವಕಿಯು ತನ್ನ ಗರ್ಭಿಣಿಯ ಅವಧಿಯ ಅಂತ್ಯದಲ್ಲಿ ಅನುಭವಿಸುತ್ತಿದ್ದ ಕಷ್ಟಗಳನ್ನು ಆಚಾರ್ಯರು ವರ್ಣಿಸಿದ್ದಾರೆ. ಗರ್ಭದ ಭಾರದಿಂದ ನಡೆಯುವುದು ನಿಧಾನವಾಗಿರುತ್ತಿತ್ತು. ನೆಲದಲ್ಲಿ ಕುಳಿತಿರುವುದು ಕಷ್ಟವೆನಿಸಿ, ಉನ್ನತಾಸನದಲ್ಲಿ ಸುಖವೆನಿಸಿ ಕುಳಿತಿರುತ್ತಿದ್ದಳು. ಪರಮ ಪುರುಷನು ತನ್ನ ಗರ್ಭದಲ್ಲಿ ಇರುವುದನ್ನು ನೆನೆದು ನೆನೆದು ಅತ್ಯಂತ ಆಹ್ಲಾದವನ್ನು ಅನುಭವಿಸುತ್ತಿದ್ದಳು.

ಪರಿಕ್ರಮಪ್ರೇಕ್ಷಿತ ಭಾಷಿತಾದ್ಯೈ ರನ್ಯಾದೃಶೈರಾಪ್ತ ವಿಭಾವನೀಯೈಃ।
ಮದೋಪಪನ್ನಾ ಮದಲಾಲಸಾವಾ ಜಿತಶ್ರಮಾ ವೇತಿ ಜನೈಃ ಶಶಂಕೆ ॥೨೦॥

ಕೆಲಕಾಲ ದೇವಕಿಯ ನಡೆ, ನೋಟ, ಮಾತು, ಇವುಗಳನ್ನು ನೋಡುತ್ತಿರುವ ಕಾಲದಲ್ಲಿ ನಿಜವಾಗಿಯೂ ಅವಳಲ್ಲಿ ವಿಶೇಷವಾದ ಅನುರಾಗ ಇತರರಿಗೆ ಉಂಟಾಗುತ್ತಿತ್ತು.

ಶ್ರೀಕೃಷ್ಣನು ದೇವಕಿಯ ಗರ್ಭದಲ್ಲಿ ಬೆಳೆಯುತ್ತಿದ್ದುದರಿಂದ ಅವಳ ಮೈಕಾಂತಿಯು ಅದ್ಭುತವಾಗಿದ್ದು, ಅವಳ ನಡೆ ನುಡಿ ನೋಟಗಳಲ್ಲೆಲ್ಲಾ ಪ್ರತಿಬಿಂಬಿಸುತ್ತಿತ್ತು. ಅವಳನ್ನು ನೋಡುವವರೆಲ್ಲರೂ ವಿಶೇಷ ಅನುರಾಗಗಳಿಂದ ಅವಳನ್ನು ವೀಕ್ಷಿಸಿ ಅನಂದಪಡುತ್ತಿದ್ದರು.

ಶೇಷೇ ಶಯಾನಾಂ ಗರುಡೇನ ಯಾಂತಿ ಪದ್ಮೇ ನಿಷಣ್ಣಾ ಮಧಿರತ್ನ ಪೀಠಂ।
ಹಯಾನನೈರಾಶ್ರಿತ ವಂದಿಕೃತ್ಯಾಂ ಸ್ವಾಮಾಕೃತಿಂ ಸ್ವಪ್ನದೃಶಾ ದದರ್ಶ ॥೨೧॥

ದೇವಕಿಯಾದವಳು ತಾನು ಆದಿಶೇಷನ ಮೇಲೆ ಮಲಗಿರುವುದಾಗಿಯೂ ಗರುಡನ ಮೇಲೆ ಸವಾರಿ ಮಾಡುವುದಾಗಿಯೂ, ರತ್ನ ಸಿಂಹಾಸನದಲ್ಲಿ ತಾವರೆ ಹೂವಿನ ಮೇಲೆ ಕುಳಿತಿರುವುದಾಗಿಯೂ, ಕಿನ್ನರರುಗಳಿಂದ ಹೊಗಳಲ್ಪಡುವುದಾಗಿಯೂ ಕನಸನ್ನ ಕಂಡಳು. ತನ್ನ ಗರ್ಭದಲ್ಲಿ ಭಗವಂತನು ಇರುವುದಕ್ಕೆ ಇದು ಸಾಕ್ಷಿಯಾಯಿತು.

'ಸಂಧ್ಯೆ ಸೃಷ್ಟಿರಾಹ' ಎಂಬ ಬ್ರಹ್ಮಸೂತ್ರದಲ್ಲಿ, ಬ್ರಹ್ಮಜ್ಞಾನಿಗಳಿಗೆ ಬೀಳುವ ಸ್ವಪ್ನಗಳು ಕೆಲವು ಬಾರಿ ಮುಂದೆ ನಡೆಯಬಹುದಾದ ಒಳ್ಳೆಯ ಅಥವಾ ಕೆಟ್ಟ ಕೆಟ್ಟ ಘಟನೆಗಳಿಗೆ ಸೂಚಕವಾಗಿರುತ್ತದೆ ಎಂದು ಹೇಳಿದೆ. ಅದೇ ರೀತಿ ದೇವಕಿಯು ಮಹಾ ಪತಿವ್ರತೆಯಾಗಿ, ಜ್ಞಾನಿಯಾದ್ದರಿಂದ, ಭಗವಂತನಾದ ಶ್ರೀಮನ್ನಾರಾಯಣನು ತನ್ನ ಗರ್ಭದಲ್ಲಿ ಬೆಳೆಯುತ್ತಿರುವುದನ್ನು ಸೂಚಿಸುವ ಅನೇಕ ಶುಭ ಸೂಚನೆಗಳನ್ನು ತನ್ನ ಕನಸಿನಲ್ಲಿ ಕಂಡಳು.

ಅಂತಃಸ್ಥಿತಂ ಯಸ್ಯ ವಿಭೋರಶೇಷಂ ಜಗನ್ನಿವಾಸಂ ದಧತಿ ತಮಂತಃ।
ತದಾತ್ಮನೋ ವಿಶ್ವಮಪಶ್ಯದಂತ ಸ್ತರ್ಕಾತಿಗಂ ತಾದೃಶಮದ್ಭುತಂ ನಃ ॥೨೨॥

ಎಲ್ಲ ಕಡೆಯೂ ವ್ಯಾಪಿಸಿರುವ ಯಾವನಲ್ಲಿ ಎಲ್ಲವೂ ಇದೆಯೋ, ಅವನನ್ನು ತನ್ನಲ್ಲಿ ಇಟ್ಟುಕೊಂಡಿರುವುದರಿಂದ ತನ್ನಲ್ಲಿಯೇ ಎಲ್ಲವನ್ನೂ ಅವಳು ಕಂಡಳು. ಅವನನ್ನು ಸಾಕ್ಷಾತ್ತಾಗಿ ಕಾಣದಿದ್ದರೂ, ಅವನು ತನ್ನಲ್ಲಿರುವುದರಿಂದ, ಎಲ್ಲವೂ ತನ್ನಲ್ಲಿಯೇ ಇದೆ ಎಂಬ ತಾದೃಷ ಭಾವವನ್ನು ಹೊಂದಿ ಅದ್ಭುತ ಆನಂದವನ್ನು ಅನುಭವಿಸಿದಳು.

"ಯತೋ ವಾ ಇಮಾನಿ ಭೂತಾನಿ ಜಾಯಂತೆ, ಯೇನ ಜಾತಾನಿ ಜೀವಂತಿ ಯತ್ಪ್ರಯಂತ್ಯಭಿ ಸಂವಿಶಂತೀತಿ" ಎಂಬುದಾಗಿ ತೈತ್ತಿರಿಯೋಪನಿಷತ್ತಿನಲ್ಲಿ ಆ ಪರಮಾತ್ಮನಲ್ಲಿಯೇ ಎಲ್ಲವೂ ಹುಟ್ಟುತ್ತದೆ, ಎಲ್ಲವೂ ಅವನಲ್ಲಿಯೇ ಅಡಕವಾಗುತ್ತದೆ. ಎಲ್ಲವೂ ಅವನಲ್ಲಿಯೇ ಇರುತ್ತದೆ' ಎಂದು ಹೇಳಿದೆ.

ಭಗವಂತನೂ, ಪರಬ್ರಹ್ಮವೂ ಆದ ವಿಷ್ಣುವು ತನ್ನಲಿರುವುದರಿಂದ, ದೇವಕಿಯು ತಾನೇ "ಸರ್ವಸ್ವ" ಎಂಬ ಬ್ರಹ್ಮ ತಾದಾತ್ಮ್ಯ ಭಾವವನ್ನು ಹೊಂದಿ ಅತ್ಯಂತ ಪುಲಕಿತಳಾಗಿ, ಅನಿರ್ವಚನೀಯ ಆನಂದವನ್ನು ಅನುಭವಿಸಿದಳು. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಉಪನಿಷದ್ವಾಕ್ಯಕ್ಕನುಸಾರವಾಗಿ ಪರಿಪೂರ್ಣ ಪರಬ್ರಹ್ಮವನ್ನೇ ತಾನು ಧರಿಸಿರುವುದಾಗಿ ಅದ್ವೈತಾನುಭವವನ್ನು ಪಡೆದಳು.

ಸುರಾಸುರಾಧೀಶ್ವರ ಮೌಳಿಘಾತಾತ್ ವಿಶೀರ್ಣ ಜಾಂಬೂನದವೇತ್ರ ಶೃಂಗಂ।
ಆಲಕ್ಷ್ಯ ಸಂತೋಷಮಲಕ್ಷ್ಯ ಮನ್ಯೇ ರನೀಕ ನೇತಾರ ಮವೈಕ್ಷ್ಯತಾಽರಾತ್ ॥೨೩॥

ಅವನನ್ನು ಸೇವಿಸಿಕೊಂಡು ಬರುತ್ತಿರುವ ದೇವಾಸುರಾಧಿಪತಿಗಳು ತಮ್ಮ ತಮ್ಮ ಕಿರೀಟಗಳನ್ನು ಅವನ ಪಾದಗಳಿಗೆ ಸೋಕಿಸುವಂತೆ ವಿಷ್ವಕ್ಸೇನನು ನಿಯಮಿಸಿದನು. ಆಗಾಗ್ಗೆಮಾಡುವುದರಿಂದ ಆ ಕಿರೀಟಗಳ ತುದಿಗಳು ಸವೆಯಲ್ಪಟ್ಟಿವೆ. ಇದು ಒಂದು ಆನಂದದ ಅನುಭವ.

ವೈಕುಂಠದಲ್ಲಿರುವ ಶ್ರೀಮನ್ನಾರಾಯಣನ ಸೇವೆಗೆ ಬರುವ ದೇವಾದಿ ದೇವತೆಗಳೆಲ್ಲರೂ ಅವನ ಸೇನಾಧಿಪತಿಯಾದ ವಿಷ್ವಕ್ಸೇನನ ನಿಯಮಕ್ಕೆ ಒಳಪಟ್ಟವರು. ವಿಷ್ವಕ್ಸೇನನು ದಂಡಧರನು. ಎಲ್ಲ ದೇವತೆಗಳು ಭಗವಂತನ ಪಾದಕ್ಕೆ ತಮ್ಮ ಶಿರಸ್ಸನ್ನು ಸೋಕಿಸಿ ನಮಸ್ಕರಿಸುತ್ತಾರೆ. ಅವರನ್ನು ,ಸರದಿಯ ಮೇರೆಗೆ ಶ್ರೀ ವಿಷ್ವಕ್ಸೇನನು ಬಿಡುತ್ತಾ ವೈಕುಂಠದಲ್ಲಿ ಗಲಭೆಯು ಉಂಟಾಗದ ಹಾಗೆ ನೋಡಿಕೊಳ್ಳುವನು. ಪ್ರಸ್ತುತ ದೇವಕಿಯ ಗರ್ಭದಲ್ಲೇ ವೈಕುಂಠಾಧಿಪತಿಯು ಇರುವುದರಿಂದ ಎಲ್ಲರೂ ದೇವಕಿಗೆ ನಮಸ್ಕರಿಸಲು ಬರುತ್ತಾರೆಂಬ ಭಾವ.

ತ್ರಿಲೋಕ ಮಾಂಗಲ್ಯ ನಿಧೇ ಸ್ತ್ರಿವೇದ್ಯಾಃ ಸಂಜೀವನೀಂ ವಾಚ ಮುದೀರಯಂತಿ।
ನಿಯೋಗ ಯೋಗ್ಯಾನ್ ಅನಘ ಪ್ರಸಾದಾ ನಾಕೌಕಸಾಂ ನಾಮಭಿರಾಜುಹಾವ॥೨೪॥

ಮೂರು ಲೋಕಕ್ಕೂ ಮಂಗಳ ತರುವ ಹಿತವಾಗಿರುವ ಮೂರು ವೇದಗಳಿಗೂ ಮಿಗಿಲಾದ ಅಭಿವೃದ್ಧಿಗೆ ಸ್ಥಳವಾದ ಮಾತನ್ನು ಹೇಳುವ ಇವಳು ತನ್ನ ಪರಿಜನರನ್ನು ಇಂದ್ರ, ಚಂದ್ರ ಮುಂತಾದ ದೇವತೆಗಳ ಹೆಸರಿನಿಂದ ಕರೆಯುತ್ತಿದ್ದಳು.

ಶ್ರೀಕೃಷ್ಣನು ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಆನಂದವನ್ನು ಅನುಭವಿಸುತ್ತಿರುವ ದೇವಕಿಯು, ಯಾವಾಗಲೂ ಒಳ್ಳೆಯ ಮಾತನ್ನೇ ಆಡುತ್ತಾ, ವೇದಪ್ರತಿಪಾದ್ಯನಾದ ಶ್ರೀಕೃಷ್ಣನ

ಧ್ಯಾನದಲ್ಲೇ ಸಂಪೂರ್ಣ ಮಗ್ನಳಾಗಿ ದೇವಕಿಯು, ಭಗವಂತನ ಪರಿವಾರಗಳಾದ ಇತರ ದೇವತೆಗಳಾದ, ದಿಕ್ಪಾಲಕರಾದ ಇಂದ್ರ, ಚಂದ್ರ, ಮಹೇಂದ್ರ ಮುಂತಾದವರುಗಳ ಹೆಸರಿನಿಂದಲೇ ತನ್ನಸಖೀ ಜನರನ್ನೂ ಕರೆಯುತ್ತಾ, ಆ ಭಗವಂತನ ಸಾನ್ನಿಧ್ಯವನ್ನು ನಿರಂತರ ವಾಗಿ ಅನುಭವಿಸುತ್ತಾ , ಅವನ ಆವಿರ್ಭಾವವನ್ನೇ ಎದುರು ನೋಡುತ್ತಾ ದಿನ ಕಳೆಯು ತ್ತಿದ್ದಳು.

ಯದೃಚ್ಛಯಾ ಯಾದವ ಧರ್ಮಪತ್ನಿ ಯಾಮಾಹ ಧರ್ಮೇಷು ಪರಾವರೇಷು ।
ಅದೃಷ್ಟ ಪೂರ್ವಾಪರಯಾಪಿ ವಾಚಾ ಪ್ರತಿಶ್ರುತಾ ನೂನಮಭಾವಿ ತಸ್ಯಾಃ ॥೨೫॥

ವಸುದೇವನ ಧರ್ಮಪತ್ನಿಯಾದ ದೇವಕಿಯು ಪ್ರವೃತ್ತಿ ಧರ್ಮ, ನಿವೃತ್ತಿ ಧರ್ಮ ಎಂಬ ಅನೇಕ ಬಗೆಯಾದ ಧರ್ಮಗಳ ಬಗ್ಗೆ ನಿರ್ಣಯವಾಗಿ ಮಾತನಾಡಿದರೂ, ಅದೆಲ್ಲವೂ ಆದಿ ಅಂತ್ಯಗಳಿರುವ ವೇದಗಳೇ ವಿನಃ, ಅನಾದಿಯಾದ ಭಗವಂತನ ಬಗ್ಗೆ ಅಲ್ಲ ಎಂದು ನಿರ್ಣಯಿಸಿದ್ದಳು.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂದು ವೇದವೂ ಸಹ ಭಗವಂತನನ್ನು ವಾಕ್ಕಿನಿಂದಾಗಲೀ, ಮನಸ್ಸಿನಿಂದಾಗಲೀ ಅರಿಯಲು ಸಾಧ್ಯವಿಲ್ಲ ಎಂದು ಹೇಳಿದೆ. ಶಾಸ್ತ್ರಗಳಲ್ಲಿ ನಿವೃತ್ತಿ ಧರ್ಮ, ಪ್ರವೃತ್ತಿ ಧರ್ಮ ಎಂಬ ಎರಡು ಬಗೆಯಾದ ಮಾರ್ಗಗಳನ್ನು ಹೇಳಿದೆ. ನಿವೃತ್ತಿ ಧರ್ಮ ಎಂದರೆ ಸರ್ವ ಸಂಗ ಪರಿತ್ಯಾಗಿಯಾಗಿ ಸಂನ್ಯಾಸಿ ಯಂತೆ ಏಕಾಂಗಿಯಾಗಿ ಭಗವಂತನನ್ನು ಧ್ಯಾನಿಸುವುದು. ಪ್ರವೃತ್ತಿ ಧರ್ಮವೆಂದರೆ ಕರ್ಮಯೋಗಿಯಾಗಿರುವುದು. ಭಗವಂತನು ಇವೆಲ್ಲಕ್ಕೂ ಅತೀತನಾದವನು. ಅವನು ತನ್ನ ಗರ್ಭದಲ್ಲಿರುವುದನ್ನು ದೇವಕಿಯು ಅರಿತಿದ್ದಳು.

ಕ್ರಿಯಾಮುಪಾದಿತ್ಸತ ವಿಶ್ವಗುಪ್ತ್ಯಾ ಕೃತಾಪರಾಧೇಽಪಿ ಕೃಪಾಮಕಾರ್ಷೀತ್।
ಮುನೀಂದ್ರ ವೃತ್ತ್ಯಾ ಮುಖರೀ ಭವಂತಿ ಮುಕ್ತಿಕ್ಷಮಾಂ ವಕ್ತುಮಿಯೇಷ ವಿದ್ಯಾಂ॥೨೬॥

ಇವಳು ಮಾಡುವುದೆಲ್ಲವೂ, ಜಗತ್ತನ್ನು ರಕ್ಷಿಸುವ ಉದ್ದೇಶವನ್ನೇ ಹೊಂದಿತ್ತು. ಮುನಿವರರುಗಳು ಹೇಗೆ ಲೋಕಕ್ಷೇಮವನ್ನೇ ಬಯಸುತ್ತಾರೋ ಅದೇ ರೀತಿ ಇವಳು ಸಹ ಕೇವಲ ಲೋಕಕ್ಷೇಮಾರ್ಥವಾಗಿಯೇ ತನ್ನಗರ್ಭದಲ್ಲಿ ಬೆಳೆಯುತ್ತಿದ್ದ ಸರ್ವೇಶ್ವರನನ್ನು ಧ್ಯಾನಿಸುತ್ತಿದ್ದಳು.

ದೇವಕಿಯ ಸಮಸ್ತ ಕ್ರಿಯೆಗಳೂ ಲೋಕ ರಕ್ಷಣಾರ್ಥವಾಗಿಯೇ ಇರುತ್ತಿತ್ತು. ಮಹರ್ಷಿಗಳೆಲ್ಲರೂ ಸ್ವಾರ್ಥವನ್ನು ಬಿಟ್ಟು ಕೇವಲ ಲೋಕೋಪಕ್ಕಾರಕ್ಕಾಗಿಯೇ ಯಜ್ಞಾದಿ ಗಳನ್ನು ನಡೆಸುತ್ತಾರೆ. ಅದೇ ರೀತಿ ದೇವಕಿಯು ತಾನು ಮಾಡುವ ಕರ್ಮಗಳೆಲ್ಲವನ್ನೂ ತನ್ನ ಗರ್ಭದಲ್ಲಿ ಬೆಳೆಯುತ್ತಿದ್ದ ಶ್ರೀಕೃಷ್ಣನಿಗೆ ಸಮರ್ಪಿಸುತ್ತಾ ಮುಂದೆ ಆ ಜಗದ್ಗುರುವಾದ

ಅವನೇ ಉಪದೇಶಿಸಿದಂತೆ "ಯತ್ಕರೋಷಿ ಯದಶ್ನಾಸಿ ಯಜ್ಜುಹೋಸಿ ದದಾಸಿ ಯತ್, ಯತ್ತ ಪಶ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ" ಎಂಬಂತೆ ನಡೆಯುತ್ತಿದ್ದಳು.

ಸತಾಂ ಚತುರ್ವರ್ಗ ಫಲಪ್ರಸೂತೌ ನಾರಾಯಣೇ ಗರ್ಭಗತೇ ನತಾಂಗಿ।
ಅಂಭಂಗುರಾ ಮುನ್ನತಿಮಾಶ್ರಯಂತೀ ಸರ್ವಸ್ಯ ಸಾಽದಿತ್ಸತ ಸರ್ವಮೇಕಾ ॥೨೭॥

ಸತ್ಪುರುಷರಿಗೆ ನಾಲ್ಕು ವಿಧ (ಧರ್ಮ, ಅರ್ಥ, ಕಾಮ, ಮೋಕ್ಷ) ಪುರುಷಾರ್ಥಗಳನ್ನು ಕೊಡುವ ನಾರಾಯಣನು ತನ್ನ ಗರ್ಭದಲ್ಲಿ ಬೆಳೆಯುವ ಸಮಯದಲ್ಲಿ ನಾಶವಾಗದ ಐಶ್ವರ್ಯ ಹೊಂದಿದವಳಾದ ಆ ದೇವಕಿಯು ಎಲ್ಲಾ ವರ್ಗದ ಜನರಿಗೂ ನೆರವಾಗಲು ಬಯಸಿದಳು.

ದೇವಕಿಯು ಗರ್ಭಿಣಿಯಾಗಿದ್ದ ಸಮಯದಲ್ಲಿ ಯಥೇಚ್ಛವಾಗಿ ದಾನ ಧರ್ಮಗಳನ್ನು ಮಾಡುತ್ತಾ ಸರ್ವರಿಗೂ ಅವರವರ ಕಷ್ಟಗಳಲ್ಲಿ ನೆರವಾಗಿ ತಾನೂ ಸಹ ಮನಶ್ಶಾಂತಿಯನ್ನು ಪಡೆಯುತ್ತಿದ್ದಳು. "**ಆಕಿಂಚನ ನಿಧಿಸೂತಂ ಅಪವರ್ಗ ತ್ರಿವರ್ಗಯೋ**" ಎಂಬುದಾಗಿ ಚತುರ್ವಿಧ ಪುರುಷಾರ್ಥಗಳನ್ನು ಆ ಶ್ರೀನಿವಾಸನೇ ನೀಡುತ್ತಾನೆಂದು ದಯಾಶತಕದಲ್ಲಿ ಶ್ರೀ ದೇಶಿಕರು ಹೇಳಿದ್ದಾರೆ. ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ನಾರಾಯಣನಂತೆ ತಾನೂ ಸಹ ಎಲ್ಲರಿಗೂ ಉಪಕಾರವನ್ನು ಮಾಡಲು ದೇವಕಿ ಇಚ್ಛಿಸಿದಳು.

ಕೃಶೋದರೀ ಕಾಶ್ಯಮತೀತ್ಯಕಾಲೇ ಕೇನಾಪಿ ಧಾಮ್ನಾ ಕೃತವೃದ್ಧಿಯೋಗಾ ।
ಪರಾಮಭಿಖ್ಯಾಂ ಕ್ರಮಶಃ ಪ್ರಪೇದೇ ತಾರಾಭಿನಂದ್ಯಾ ತನುರೈಂದವೀವ ॥೨೮॥

ತೆಳುವಾದ ಉದರ ಹೊಂದಿದ್ದ ದೇವಕಿಯ ಗರ್ಭವು ಬೆಳೆಯುತ್ತಾ ಬೆಳೆಯುತ್ತಾ, ಚಂದ್ರನ ಬಿಂಬದಂತೆ ದಿನೇ ದಿನೇ ದೊಡ್ಡದಾಗುತ್ತಾ ತಾರಾ ಸಮೂಹದಿಂದ ಪ್ರಶಂಸಿಸಲ್ಪಡುವ ಶಶಿಯಂತೆ ದಿವ್ಯವಾದ ತೇಜಸ್ಸಿನಿಂದ ಬೆಳಗುತ್ತಿತ್ತು.

ಸಹಜವಾಗಿಯೇ ಕೃಶಳಾಗಿ ಸುಂದರಿಯಾಗಿದ್ದ ದೇವಕಿಯ ಉದರವು ಶ್ರೀಕೃಷ್ಣನು ಗರ್ಭದಲ್ಲಿ ಬೆಳೆಯುತ್ತಿದ್ದಂತೆಲ್ಲಾ ದೊಡ್ಡದಾಗಲು ಆರಂಭಿಸಿತು. ಚಂದ್ರನು ಯಾವ ರೀತಿ ಪಾಡ್ಯದಿಂದ ಹಿಡಿದು ಹುಣ್ಣಿಮೆಯವರೆಗೆ ದಿನೇ ದಿನೇ ವೃದ್ಧಿಯಾಗುತ್ತಾ ಅಪೂರ್ವವಾದ ಶೋಭೆಯನ್ನು ಹೊಂದುತ್ತಾನೋ, ಅದೇ ರೀತಿ ದೇವಕಿಯು ಚಂದ್ರನಂತೆ ಕಾಂತಿಯುಕ್ತಳಾಗಿ ಶೋಭಿಸುತ್ತಿದ್ದಳು. ಗರ್ಭಿಣಿ ಸ್ತ್ರೀಯರ ಸೌಂದರ್ಯ ಸಾಮಾನ್ಯವಾಗಿ ಇಮ್ಮಡಿಸುತ್ತದೆ.

ನಿಗೂಢಮಂತರ್‌ದಧತಾಂ ನಿವಿಷ್ಟಂ ಪದ್ಮಾಪರಿಷ್ಕಾರ ಮಣಿಂ ಪ್ರಭೂತಂ।
ಮಧ್ಯೇನ ತಸ್ಯಾಃ ಪ್ರಚಿತೇನ ಕಾಲೇ ಮಂಜೂಷಯಾ ರೂಪ್ಯಭುವಾ ಬಭೂವೇ॥೨೯॥

ಕಮಲದ ಮೇಲೆ ಇರುವ ಲಕ್ಷ್ಮಿಗೆ ಅಲಂಕಾರವಾಗಿರುವ ಶ್ರೇಷ್ಠವಾದ ಮಣಿಯೊಂದು ತನ್ನಲ್ಲಿದ್ದು, ಅದನ್ನು ಜೋಪಾನದಿಂದ ಬೆಳ್ಳಿಯ ಪೆಟ್ಟಿಗೆಯಲ್ಲಿ ಕಾಪಾಡುವಂತೆ, ತನ್ನ ಗರ್ಭದಲ್ಲಿ ಅಡಗಿದ್ದ ಆ ಕೃಷ್ಣನನ್ನು ದೇವಕಿಯು ಕಾಪಾಡುತ್ತಿದ್ದಳು.

ಲಕ್ಷ್ಮಿಗೆ ಅಲಂಕಾರ ಪ್ರಾಯನಾದವನು ಶ್ರೀಮನ್ನಾರಾಯಣ. ಆ ನಾರಾಯಣನೆಂಬ ದಿವ್ಯವಾದ ಮಣಿಯನ್ನೇ ತನ್ನ ಉದರದಲ್ಲಿಟ್ಟು ಕಾಪಾಡುತ್ತಿದ್ದಾಳೆ ಆ ದೇವಕಿ. ಆಚಾರ್ಯರು ಒಂದು ಸುಂದರ ಉಪಮಾನವನ್ನು ಕೊಟ್ಟಿದ್ದಾರೆ. ಒಂದು ಅತ್ಯುತ್ತಮವಾದ ಆಭರಣವನ್ನು ಹೇಗೆ ಬೆಳ್ಳಿಯ ಪೆಟ್ಟಿಗೆಯಲ್ಲಿ ಜೋಪಾನವಾಗಿಟ್ಟು, ಅದರ ಅಂದ ಕೆಡದಂತೆ ಕಾಪಾಡುತ್ತಾರೋ, ಅದರಂತೆ ತನ್ನ ಗರ್ಭವೆಂಬ ಶ್ರೇಷ್ಠವಾದ ಪೆಟ್ಟಿಗೆಯಲ್ಲಿ ಶ್ರೀಕೃಷ್ಣನೆಂಬ ದಿವ್ಯಮಣಿಯನ್ನಿಟ್ಟು ಕಾಪಾಡುತ್ತಿರುವುದಾಗಿ ಭಾವಿಸಿ ದೇವಕಿ ಆನಂದಪಟ್ಟಳು.

ಶನೈ ಶನೈ ಸ್ತಾಮುಪಚೀಯಮಾನಾಂ ದರ್ಶಾಂತ ದೀಪ್ತಾಮಿವ ಚಂದ್ರಲೇಖಾಂ।
ಅಂತಸ್ಥ ಕೃಷ್ಣಾ೦ಕಮವಲೋಕಯಂತಃ ಚಕ್ಷುಶ್ಚಕೋರಾಯಿತಮಾತ್ರ ನೇತ್ರೈಃ ॥೨೦॥

ಮೆಲ್ಲಮೆಲ್ಲನೆ ವೃದ್ಧಿಯನ್ನು ಹೊಂದುತ್ತಿರುವ, ಆ ಕೃಷ್ಣ ತತ್ವವನ್ನು ತನ್ನೊಳಗೆ ಇಟ್ಟುಕೊಂಡಿರುವವಳೂ ಆದ ದೇವಕಿಯು ಕೃಷ್ಣ ಪಕ್ಷದಲ್ಲಿ ಆರಂಭವಾಗುವ ಚಂದ್ರನ ಕಲೆಗಳನ್ನು ಕಂಡು ಆನಂದಗೊಳ್ಳುವ ಚಕೋರ ಪಕ್ಷಿಗಳಂತೆ ಕಣ್ಣುಳ್ಳವಳಾಗಿದ್ದಳು.

ಚಕೋರ ಪಕ್ಷಿಗಳು ಚಂದ್ರನನ್ನು ಕಂಡು ಆನಂದಪಟ್ಟು ನಲಿದಾಡುತ್ತವೆ. ಚಂದ್ರನು ಅಮಾವಾಸ್ಯೆ ಕಳೆದ ಕೂಡಲೇ, ಮೆಲ್ಲಮೆಲ್ಲನೆ ವೃದ್ಧಿ ಹೊಂದುತ್ತಾ ಹುಣ್ಣಿಮೆಯ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಬೆಳೆದು ಅತ್ಯಂತ ಸುಂದರನಾಗಿ ಕಾಣುತ್ತಾನೆ. ಚಂದ್ರನ 16 ಕಲೆಗಳು ಅದೇ ರೀತಿ ವೃದ್ಧಿ ಹೊಂದುತ್ತವೆ. ಶ್ರೀಕೃಷ್ಣನನ್ನು ಉದರದಲ್ಲಿ ಹೊತ್ತ ದೇವಕಿಯು ಅದೇ ರೀತಿ ದಿನ ದಿನಕ್ಕೆ ವಿಕಾಸ ಹೊಂದಿ, ಅವಳ ಮುಖಾರವಿಂದದ ಶೋಭೆಯೇ ಅಪೂರ್ವವಾಗಿ ಕಂಗೊಳಿಸುತ್ತಿತ್ತು.

ಮಯಿ ಸ್ಥಿತೇ ವಿಶ್ವಗುರೌ ಮಹೀಯಾನ್ ಮಾಭೂತ್ ಭುವೋ ಭಾರ ಇತೀವ ಮತ್ವಾ।
ಸಖೀ ಜನಾನಾಂ ಅವಲಂಬ್ಯ ಹಸ್ತಾನ್ ಸಂಚಾರ ಲೀಲಾಂ ಶನಕೈಶ್ಚಕಾರ ॥೨೧॥

ಸ್ನೇಹಿತೆಯರ ಕೈಗಳನ್ನು ಜತೆಯಲ್ಲಿಟ್ಟುಕೊಂಡು ಅವಳು ನಿಧಾನವಾಗಿ ವಿನೋದದಿಂದ ನಡೆದು ಬರುತ್ತಿದ್ದಳು. ವಿಶ್ವಗುರುವಾದ ಕೃಷ್ಣನು ತನ್ನಲ್ಲಿ ಇರುವುದರಿಂದ, ತಾನು ವೇಗವಾಗಿ ನಡೆದರೆ, ಭೂದೇವಿಗೆ ಭಾರವಾಗಬಹುದೇನೋ ಎಂಬ ಆತಂಕ ಅವಳಿಗೆ.

ಗರ್ಭಿಣಿಯರ ನಡಿಗೆ ದೇಹಭಾರದಿಂದ ನಿಧಾನವಾಗುವುದು ಸಹಜ. ಇಲ್ಲಿಯೂ ಸಹ ಅದೇ ಭಾವವನ್ನು ವ್ಯಕ್ತಪಡಿಸಿದ್ದಾರೆ. ದೇವಕಿಯು ತನ್ನ ಸಖಿಯರ ಕೈಹಿಡಿದು ನಿಧಾನವಾಗಿ ನಡೆದು ಬರುತ್ತಿದ್ದಳು. ಅವಳ ನಡಿಗೆ ನಿಧಾನವಾಗಲು ಮತ್ತೊಂದು ಕಾರಣ, ಜಗತ್ತಿಗೆ ಆಧಾರನಾಗಿರುವ ಕೃಷ್ಣನು ತನ್ನ ಉದರದಲ್ಲಿರುವುದರಿಂದ ಎಲ್ಲಿ ತಾನು ವೇಗವಾಗಿ ನಡೆದರೆ ಭೂದೇವಿಗೆ ಭಾರವಾಗಿ ಅವಳು ಅಲುಗಾಡಿ ಭೂಕಂಪ ಸಂಭವಿಸಬಹುದೇನೋ ಎಂಬ ಭಯ. ಅದರಿಂದ ಅವಳ ನಡಿಗೆ ನಿಧಾನವಾಗಿ ತುಂಬು ಗರ್ಭಿಣಿಯರ ನಡಿಗೆಯಂತೆಯೇ ಇತ್ತು.

ಮುಕುಂದ ಗರ್ಭಾ ಮುಕುರೇಷು ದೇವಿ ನಾಪಶ್ಯದಾತ್ಮಾನ ಮವಾಪ್ತ ಭೂಷಾ।
ನಾಥತ್ವಿಷಾ ನಂದಕ ದರ್ಪಣೇನಾದಿ ದೃಕ್ಷತಾ ಆತ್ಮಾನಮದೃಶ್ಯಮನ್ಯೈಃ ॥೨೨॥

ಮುಕುಂದನನ್ನು ಗರ್ಭದಲ್ಲಿ ಹೊಂದಿರುವ ದೇವಕಿಯಾದವಳು ಆಭರಣಗಳನ್ನು ತೊಟ್ಟಿರುವ ತನ್ನ ದೇಹದ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಲು ಇಚ್ಛಿಸಲಿಲ್ಲ. ನಂದಕ ವೆಂಬ ಭಗವಂತನ ಖಡ್ಗದಲ್ಲಿ ಬೇರೆಯವರು ಕಾಣದ ಹಾಗೆ ಅವನನ್ನು ಕಾಣಲಿಚ್ಛಿಸಿದಳು.

ಗರ್ಭಿಣಿಯರ ದೇಹ ಬಿಳುಪಾಗಿ, ಅವರು ಮೊದಲಿಗಿಂತ ದುಂಡಾಗಿಯೂ, ಸುಂದರಿಯ ರಾಗಿಯೂ ಕಾಣುತ್ತಾರೆ. ತನ್ನ ಇಮ್ಮಡಿಸಿದ ಸೌಂದರ್ಯವನ್ನು ದೊಡ್ಡ ಕನ್ನಡಿಯಲ್ಲಿ ನೋಡಲು ದೇವಕಿ ಇಚ್ಛಿಸಲಿಲ್ಲ. ಕಾರಣ ಶ್ರೀಕೃಷ್ಣನು ತನ್ನ ಗರ್ಭದಲ್ಲಿರುವುದರಿಂದ ಅವನ ಒಂದು ಆಯುಧವಾದ ನಂದಕವೆಂಬ ಖಡ್ಗವು ಕನ್ನಡಿಗಿಂತ ಹೆಚ್ಚು ಸ್ಫುಟವಾಗಿ ಹೊಳೆಯುತ್ತಿರುತ್ತದೆ. ಆ ನಂದಕದ ಹೊಳಪಿನಲ್ಲೇ ತನ್ನ ದೇಹ ಸೌಂದರ್ಯವನ್ನು ನೋಡಲಿಚ್ಛಿಸಿದಳೇ ವಿನಃ ಪ್ರಾಕೃತ ಕನ್ನಡಿಯಲ್ಲಲ್ಲ. ಉತ್ತಮ ಅಲಂಕಾರದ ಒಂದು ಶ್ಲೋಕ. ಭಗವಂತನ ಸೌಂದರ್ಯವನ್ನು ಅವನ ಆಭರಣಗಳಲ್ಲೇ ಕಾಣಬೇಕು ಎಂಬುದು ಅಭಿಪ್ರಾಯ.

ಸ್ರಜಃ ಪ್ರಭೂತಾ ನಶಶಾಕ ವೊಢುಂ ದೂರೇ ಕಥಾರತ್ನ ವಿಭೂಷಣಾನಾಂ।
ಭವಿಷ್ಯತಿ ಕ್ಷೋಣಿ ಭರಾಪನೋದೇ ಪ್ರತ್ಯಾಯನಂ ಪ್ರಾಥಮಿಕಂ ತದಾಸೀತ್ ॥೨೩॥

ಇವಳಿಂದ ದೊಡ್ಡ ಮಾಲೆಗಳನ್ನು ಧರಿಸಲು ಸಾಧ್ಯವಾಗಲಿಲ್ಲ. ರತ್ನಮಯವಾದ ಆಭರಣಗಳನ್ನು ಹಾಕಿಕೊಳ್ಳಲು ಹೇಗೆ ಸಾಧ್ಯ? ಈ ರೀತಿ ಭಾರವನ್ನು ಹೊರುವುದರಿಂದ, ಭೂಮಿಯ ಭಾರವನ್ನು ಕಡಿಮೆ ಮಾಡುವುದಕ್ಕೋಸ್ಕರ ಮುಂದೆ ಹುಟ್ಟಲಿರುವ ಅವಳ ಶಿಶುವಿನಲ್ಲಿ ನಂಬಿಕೆ ಹೊರಟು ಹೋಗುವುದೆಂಬ ಶಂಕೆಯಿಂದ, ಅವಳು ಆಭರಣಗಳ ಭಾರವನ್ನು ಹೊರಲು ಇಚ್ಛಿಸಲಿಲ್ಲ.

ಪೂರ್ಣ ಗರ್ಭಿಣಿಯಾದ ದೇವಕಿಯು ಸಾಧಾರಣವಾಗಿ ರಾಜಕುಮಾರಿಯರು ಧರಿಸುವ ಭಾರವಾದ ಆಭರಣಗಳನ್ನು ಧರಿಸಲು ಬಯಸಲಿಲ್ಲ. ಏಕೆಂದರೆ ತನ್ನ ಗರ್ಭದಲ್ಲಿ ಜಗತ್ತಿನ ರಕ್ಷಣೆಯ ಭಾರವನ್ನು ಹೊತ್ತಿರುವ ಸರ್ವೇಶ್ವರನು ಇರುವಾಗ, ಆಭರಣಗಳ ಭಾರವು ಸೇರಿ, ಇನ್ನೂ ಹೆಚ್ಚಿನ ಭಾರ ವುಂಟಾಗಿ, ಭೂ ದೇವಿಗೆ ಭೂ ಭಾರವನ್ನು ಇಳಿಸಲು ಹುಟ್ಟಲಿರುವ ಶಿಶುವು, ಈಗಲೇ ಇಷ್ಟು ಭಾರದಿಂದ ಇದ್ದರೆ, ಮುಂದೆ ಹೇಗೆ ಅವನಿಂದ ತನ್ನ ಭಾರವನ್ನು ಇಳಿಸಲು ಸಾಧ್ಯ! ಎಂಬ ಶಂಕೆ ಉಂಟಾಗಬಾರದೆಂಬ ಕಾರಣದಿಂದ ಎಂಬುದು ತಾತ್ಪರ್ಯ.

ದಿವೌಕಸೋ ದೇವಕ ವಂಶಲಕ್ಷ್ಮೀಂ ವಿಲೋಕ್ಯತಾಂ ಲೋಕ ನಿಧಾನ ಗರ್ಭಾಂ।
ವಿಭೂತಿಮಗ್ರೇಸರ ವೇದವಾದಾಃ ವ್ಯಾಚಖ್ಯುರಸ್ಯಾ ವಿವಿಧ ಪ್ರಕಾರಾಂ ॥೨೪॥

ಜಗತ್ತಿಗೆ ನಿಧಿಯಾದ ಭಗವಂತನನ್ನು ಗರ್ಭದಲ್ಲಿ ಹೊಂದಿರುವ ದೇವಕರಾಜನ ಕುಲಲಕ್ಷ್ಮಿಯಾದ ಇವಳನ್ನು ಕಂಡು ದೇವತೆಗಳೆಲ್ಲರೂ (ಬ್ರಹ್ಮ ರುದ್ರಾದಿಗಳು) ವೇದವಾಕ್ಯ

ಗಳನ್ನು ಮುಂದೆ ಇಟ್ಟುಕೊಂಡು ಇವರ ವೈಭವವವನ್ನು ಬಗೆ ಬಗೆಯಾಗಿ ಪ್ರಶಂಸೆ ಮಾಡುತ್ತಿದ್ದರು.

ವೇದವಾಕ್ಯಗಳೆಲ್ಲವೂ ಭಗವಂತನಾದ ನಾರಾಯಣನನ್ನೇ ಕುರಿತು ಹೇಳುತ್ತವೆ. ಅವನು ವೇದವೇದ್ಯನು. ವೇದಗಳಿಂದ ಮಾತ್ರ ಅವನನ್ನು ತಿಳಿಯಲು ಸಾಧ್ಯ. ವೇದಗಳೆಲ್ಲವೂ ಅವನಿಂದಲೇ ಹುಟ್ಟಿದವು. ದೇವಕನೆಂಬ ರಾಜನ ಮಗಳು ದೇವಕಿ. ಅವಳ ಗರ್ಭದಲ್ಲಿ ವೇದವೇದ್ಯ ಪ್ರತಿಪಾದ್ಯನಾದ ನಾರಾಯಣನು ಬೆಳೆಯುತ್ತಿದ್ದಾನೆಂದರೆ, ಅವಳನ್ನೂ ಸಹ ಭಗವಂತನನ್ನು ಕೊಂಡಾಡುವಂತೆಯೇ ವೇದ ವಾಕ್ಯಗಳಿಂದ ಕೊಂಡಾಡುತ್ತಿದ್ದರು.

ಪತಿಃ ಸಸತ್ವಾಮಪಿ ತತ್ಪ್ರಭಾವಾದ ದುಃಖಶೀಲಾಂ ಸಮಯೇ ಭವಿತ್ರಿಂ।
ಸುಖೈಕತಾನಾಂ ಅವಲೋಕ್ಯ ದೇವಿಂ ಸ್ವಸಂಪದಂ ಸೂಚಯತೀತಿಮೇನೆ ॥೨೫॥

ಪೂರ್ಣ ಗರ್ಭಿಣಿಯಾಗಿರುವುದರಿಂದ ಆ ಭಾರದಲ್ಲಿ ಸೋತಿದ್ದ ದೇವಕಿಯು ಸುಸ್ತಾದಂತೆ ತೋರುತ್ತಿದ್ದಳು. ಅವಳನ್ನು ಆ ರೀತಿ ಕಂಡ ಪತಿಯಾದ ವಸುದೇವನು ಅವಳು ಸುಖವಾಗಿ ಪ್ರಸವಿಸಬೇಕೆಂದು ಆಶಿಸುತ್ತಾ ತನ್ನ ಸಂಪತ್ತನ್ನು ನೆನೆದು ಶುಭದ ಮನ್ಸೂಚನೆಯಂತೆ ಭಾವಿಸಿದನು.

ಪ್ರಸವದ ದಿನವು ಸಮೀಪಿಸುತ್ತಿದ್ದಂತೆಲ್ಲಾ ದೇವಕಿಯು ದೇಹ ಭಾರದಿಂದ ಸುಸ್ತಾಗುತ್ತಿದ್ದಳು. ಅವಳ ಪತಿಯಾದ ವಸುದೇವನು ಆ ದಿನಗಳಲ್ಲಿ ಅವಳು ಯಾವ ಚಿಂತೆಯೂ ಇಲ್ಲದೆ ಸುಖವಾಗಿರಬೇಕೆಂದು ಬಯಸಿ ಅವಳಿಗೆ ಯಾವ ವಿಧವಾದ ನೋವನ್ನೂ ಉಂಟು ಮಾಡುತ್ತಿರಲಿಲ್ಲ. ಅಲ್ಲದೆ, ಸಾಕ್ಷಾತ್ ಭಗವಂತನೇ ತನಗೆ ಪುತ್ರನಾಗಿ ಜನಿಸುವುದನ್ನು ಹಿರಿಯರಿಂದ ಕೇಳಿ ತಿಳಿದಿದ್ದ ಅವನು ಬೇರಾರಿಗೂ ಇರದ ತನ್ನ ಭಾಗ್ಯವನ್ನು ನೆನೆದು ನೆನೆದು ಸಂತೋಷಿಸುತ್ತಾ ಭಗವಂತನ ಅವತಾರವನ್ನು ಎದುರು ನೋಡುತ್ತಿದ್ದನು.

ಪಿತೃತ್ವ ಮಾಸಾದ್ಯ ಸುರಾಸುರಾಣಾಂ ಪಿತಾಮಹತ್ವಂ ಪ್ರತಿಪತ್ಸ್ಯಮಾನಃ।
ಅನಂತ ಗರ್ಭಾಮವಲೋಕ್ಯ ದೇವಿ ಮತುಷ್ಯದನ್ಯೇಷು ಗತಾಭಿಲಾಷಃ ॥೨೬॥

ವಸುದೇವನು ಹಿಂದೆ ಕಶ್ಯಪನಾಗಿದ್ದ ಸಮಯದಲ್ಲಿ ದೇವತೆಗಳಿಗೂ ಅಸುರರಿಗೂ ಪಿತಾವಾಗಿದ್ದವನು. ಈಗ ಅವರುಗಳಿಗೆ ಪಿತಾಮಹನಾಗಿ ಅನಂತನೆಂಬ ಭಗವಂತನನ್ನು ತನ್ನ ಗರ್ಭದಲ್ಲಿ ಧರಿಸಿರುವ ತನ್ನ ಮಡದಿಯನ್ನು ನೋಡಿ ಬೇರೆ ವಿಷಯಗಳನ್ನು ಚಿಂತಿಸದೆ ತೃಪ್ತಿಯಿಂದಿದ್ದನು.

ಹಿಂದಿನ ಜನ್ಮದಲ್ಲಿ ವಸುದೇವನು ಕಶ್ಯಪನೆಂಬ ಋಷಿಯಾಗಿದ್ದನು. ಅವನಿಗೆ ದಿತಿ, ಅದಿತಿ ಎಂಬ ಇಬ್ಬರು ಮಡದಿಯರಿದ್ದರು. ದಿತಿಯಲ್ಲಿ ದೈತ್ಯರೂ, ಅದಿತಿಯಲ್ಲಿ ದೇವತೆಗಳೂ ಜನಿಸಿದರು. ಆದರೆ ಈ ಜನ್ಮದಲ್ಲಿ ಸರ್ವಲೋಕಕ್ಕೂ ಪಿತಾವಾದ, ಸರ್ವೇಶ್ವರನು ತನ್ನ ಪತ್ನಿಯ

ಗರ್ಭದಲ್ಲಿ ಹುಟ್ಟುವುದರಿಂದ, ವಸುದೇವನು ಎಲ್ಲರಿಗೂ ಪಿತಾಮಹನೆನಿಸಿಕೊಂಡನು. ತನ್ನ ಆ ಸೌಭಾಗ್ಯವನ್ನು ಸಹ ನೆನೆದು ವಸುದೇವನು ಪರಮ ಸಂತೋಷದಿಂದ ತಾನು ಕಾರಾಗೃಹ ವಾಸದಲ್ಲಿರುವುದನ್ನೂ ಸಹ ಮರೆತು, ಆನಂದದಿಂದ ಭಗವದ್ಧ್ಯಾನದಲ್ಲಿ ಕಾಲ ಕಳೆಯುತ್ತಿದ್ದನು.

ತಾಪೋಪ ಶಾಂತಿ ಜಗತಾಂ ದಿಶಂತಿ ಸಂಧ್ಯಾ ಪರಾ ಸಾಧುಜನ ಪ್ರತೀಕ್ಷ್ಯಾ ।
ತಾಮೀದೃಶೀಂ ವಿಶ್ವಪಿತುಃ ಪ್ರಸೂತಿನ್ ಸಂವೇದಯಂತೀವ ಸಮಾಜಗಾಮ ॥೩೭॥

ಸಾಯಂ ಸಂಧ್ಯೆ ಪ್ರಾಪ್ತವಾಯಿತು. ಸಾಧು ಜನಗಳು ಅದರ ಆಗಮನವನ್ನೇ ಎದುರು ನೋಡುತ್ತಾ ಇದ್ದು ಅದು ತಾಪವನ್ನು ಹೋಗಲಾಡಿಸುವಂತಿತ್ತು. ಜಗತ್ತಿಗೆಲ್ಲಾ ನಾಥನಾದ ಭಗವಂತನಲ್ಲೂ ಇವೆರಡು ಗುಣಗಳೂ ಉಂಟು. ಅವನನ್ನು ಉಪಾಸನೆಯನ್ನೂ, ಉಪಚಾರ ಗಳನ್ನೂ ಮಾಡುವ ಸಾಧು ಜನಗಳು ಕಾಯುತ್ತಿರುವರಷ್ಟೆ. ಸಂಸಾರ ತಾಪವನ್ನು ಅದು ನೀಗುತ್ತದೆ. ತನ್ನ ಅದ್ಭುತ ಚೇಷ್ಟೆಗಳನ್ನು ತೋರುವ ಭಗವಂತನ ಆಗಮನವನ್ನು ನಿರೀಕ್ಷಿಸು ತ್ತಿದ್ದಂತಿತ್ತು.

ಈ ಶ್ಲೋಕದಲ್ಲಿ ಸಂಧ್ಯಾ ಕಾಲದ ವರ್ಣನೆ ಇದೆ. ಸಂಧ್ಯಾ ಕಾಲದಲ್ಲಿ ವಾತಾವರಣ ತಣ್ಣಗಿರುತ್ತದೆ. ಬಿಸಿಲಿನ ತಾಪಕ್ಕೆ ಬೆಳಗಿನ ಹೊತ್ತು ಸುಸ್ತಾಗುವ ಜನರು ಈ ಸಂಧ್ಯೆಯ ಆಗಮನವನ್ನು ಎದುರು ನೋಡುತ್ತಿರುತ್ತಾರೆ. ಭಗವಂತನನ್ನು ''ಸೂರ್ಯ ಚಂದ್ರೌ ಚ ನೇತ್ರೈ'' ಎನ್ನುತ್ತಾರೆ. ಸೂರ್ಯನಂತೆ ತಾಪವನ್ನೂ, ಚಂದ್ರನಂತೆ ತಂಪನ್ನೂ ಉಂಟು ಮಾಡುತ್ತಾನೆ ಅವನು. ಆಂಡಾಳ್ ತಿರುಪ್ಪಾವೈನಲ್ಲಿ ''ಕದಿರ್ ಮದಿಯಂ ಪೊಲ್ ಮುಹತ್ತಾನ್'' ಎಂದಿದ್ದಾಳೆ. ಯಾವ ರೀತಿ ಸಂಧ್ಯಾ ಕಾಲವನ್ನು ಸಾಧುಗಳು ಎದುರು ನೋಡುತ್ತಾರೋ ಅದೇ ರೀತಿ ದೇವಕಿಯ ಗರ್ಭದಿಂದ ಭಗವಂತನ ಆಗಮನವನ್ನು ಎಲ್ಲರೂ ನಿರೀಕ್ಷಿಸುತ್ತಿದ್ದರು.

ಸುವರ್ಣ ಪೀತಾಂಬರ ವಾಸಿನೀ ಸಾ ಸ್ವಧಾಮ ಸಂಛಾದಿತ ಸೂರ್ಯದೀಪ್ತಿಃ ।
ಉಪಾಸನೀಯಾ ಜಗತಾಂ ಬಭಾಸೇ ಮುರದ್ವಿಷೋ ಮೂರ್ತಿರಿವ ದ್ವಿತೀಯಾ ॥೩೮॥

ತಾನೇ ಅವನ ಮತ್ತೊಂದು ಮೂರ್ತಿಯಾಗಿ, ಆ ಸಂಧ್ಯೆಯು ಬೆಳಗುತ್ತಿತ್ತು. ಅವನ ಮೂರ್ತಿಗೆ ಇರುವ ಗುಣಗಳೆಲ್ಲಾ ಇದಕ್ಕೂ ಇತ್ತು. ಅದು ಸುವರ್ಣ ಪೀತಾಂಬರ ವಾಸಿನಿ ಯಾಗಿ, ಸೂರ್ಯನನ್ನು ಉಪಾಸಿಸುವಂತೆ ತನ್ನನ್ನು ಎಲ್ಲರೂ ಉಪಾಸಿಸುವಂತೆ ಸಿಂಗರಿಸಿ ಕೊಂಡಿತ್ತು.

(ಈ ಶ್ಲೋಕಗಳಲ್ಲಿ ಸಾಯಂ ಸಂಧ್ಯೆಯ ವರ್ಣನೆ ಇದೆ). ಸಾಯಂ ಸಂಧ್ಯೆಯನ್ನು ಭಗವಂತನಿಗೆ ಹೋಲಿಸಿದ್ದಾರೆ. ಭಗವಂತನಿಗೆ ಪೀತಾಂಬರಧಾರಿಯಾಗಿ ಹೇಗೆ ಸುಂದರ ನಾಗಿ ತೋರುತ್ತಾನೆಯೋ ಅದೇ ರೀತಿ ಸಾಯಂ ಸಂಧ್ಯೆಯು ಕೆಂಪು ಹಳದಿ ಮಿಶ್ರಿತ ಬಣ್ಣದಿಂದ ಆ ಸೂರ್ಯನ ಕಿರಣಗಳಿಂದ ಪ್ರತಿಫಲಿತಗೊಂಡು ಒಬ್ಬ ಸುಂದರ ಸ್ತ್ರೀಯಂತೆ ಕಾಣುತ್ತಿತ್ತು.

ಹೇಗೆ ಎಲ್ಲರೂ ಭಗವಂತನನ್ನು ಉಪಾಸಿಸುತ್ತಾರೋ, ಅದೇ ರೀತಿ ರಸಿಕರು ಸಾಯಂ ಸಂಧ್ಯೆ ಎಂಬ ಸುಂದರ ಸ್ತ್ರೀಯನ್ನು ನೋಡಲು ಇಚ್ಛಿಸುವಂತಿತ್ತು ಆ ಸಾಯಂ ಸಂಧ್ಯೆಯ ದೃಶ್ಯ ವೈಭವ.

ಪ್ರಸಕ್ತಪಾತಶ್ಚರಮಾಂಬುರಾಶೌ ರಕ್ತೋರು ಬಿಂಬೋ ರವಿರಸ್ತಶೈಲಾತ್।
ದಿನಾಂತ ನಾಗೇನ ದೃಢ ಪ್ರಣುನ್ನಂ ಮನಃಶಿಲಾ ಶೃಂಗ ಮಿವಾಬಭಾಸೇ ॥೩೯॥

ಸಮುದ್ರದಲ್ಲಿ ತೋರುವ ಸೂರ್ಯ ಬಿಂಬದಂತೆ, ಸಾಯಂಕಾಲದಲ್ಲಿ ಆನೆಯಂತೆ ಸೂರ್ಯಾಸ್ತವೆಂಬ ಬೆಟ್ಟದಲ್ಲಿ ತೋರುವ ಹಣ್ಣಿನಂತೆ ಆ ಸೂರ್ಯನು ಚಂದ್ರೋದಯಕ್ಕೆ ಅಣಿಮಾಡಿ ಕೊಡುತ್ತಿದ್ದನು.

ಈ ಶ್ಲೋಕದಲ್ಲಿ ಸೂರ್ಯಾಸ್ತವನ್ನು ವರ್ಣಿಸಿದ್ದಾರೆ. ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಾನೆ. ಸೂರ್ಯಾಸ್ತವನ್ನು ನೋಡುವುದೇ ಒಂದು ಆನಂದಮಯವಾದ ದೃಶ್ಯ. ಪಶ್ಚಿಮ ಬೆಟ್ಟಗಳಲ್ಲಿ ಮುಳುಗುವ ಸೂರ್ಯನು ಆ ಬೆಟ್ಟಗಳಲ್ಲಿ ಸ್ವೇಚ್ಛೆಯಾಗಿ ಓಡಿಯಾಡುವ ಆನೆಯಂತೆ ತೋರುತ್ತಾ, ಹಣ್ಣಿನಾಕಾರದಲ್ಲಿ ಬಗೆ ಬಗೆಯಾದ ಬಣ್ಣಗಳನ್ನು ಪ್ರಸರಿಸುತ್ತಾ ಮುಂದೆ ಬರಲಿರುವ ಚಂದ್ರನ ಉದಯಕ್ಕೆ ಅಣಿ ಮಾಡಿಕೊಡುವ ರೀತಿಯಲ್ಲಿ ನೋಡಲು ಮನೋಹರವಾಗಿ ಪ್ರಕಾಶಿಸುತ್ತಾನೆ.

ನಿಮಂಜತಾ ವಾರಿನಿಧೌ ಸವಿತ್ರ ಕೋನಾಮ ಜಾಯೇತ ಕರಗ್ರಹೀತಾ
ತದೇತಿ ಸಂಭಾವನಯೈವ ನೂನಂ ಇತೀವ ಸಂಭಾವನಯಾऽಂತರಿಕ್ಷೇ ॥೪೦॥

ಸಮುದ್ರದಲ್ಲಿ ಮುಳುಗುವ ಸೂರ್ಯನ ಕಿರಣಗಳ ಪ್ರಕಾಶವು ಆಕಾಶದಲ್ಲಿ ಬಹು ದೂರದ ವರೆಗೆ ಪ್ರಕಾಶಿಸುತ್ತಿತ್ತು. ತನಗೆ ಬೇಕಾದುದು ಸಿಗುತ್ತದೆಯೇ ಎಂಬಂತೆ ಬಹು ದೂರದವರೆಗೆ ತನ್ನ ಕೈಗಳನ್ನು ಸೂರ್ಯನು ಚಾಚಿದಂತಿತ್ತು.

(ಈ ಶ್ಲೋಕದಲ್ಲಿಯೂ ಸೂರ್ಯಾಸ್ತದ ವರ್ಣನೆ ಮುಂದುವರೆದಿದೆ). ಸೂರ್ಯನ ಸಂಧ್ಯಾ ಕಿರಣಗಳು ಬಹು ದೂರದವರೆಗೆ ಆಕಾಶವನ್ನು ಪ್ರಸರಿಸಿದೆ. ಅದು ಯಾವ ರೀತಿ ತೋರುತ್ತದೆ ಯೆಂದರೆ, ದೂರದಲ್ಲಿ ಇಟ್ಟಿರುವ ಒಂದು ವಸ್ತುವನ್ನು ಎತ್ತಿಕೊಳ್ಳಲು ತನ್ನ ನೀಳವಾದ ಕೈಗಳನ್ನು ಒಬ್ಬ ಆಜಾನುಬಾಹುವಾದವನು ಚಾಚುವಂತೆ ಸೂರ್ಯನ ಹಿತವಾದ ಕಿರಣಗಳು ಬಹು ದೂರದವರೆಗೆ ಚಾಚಿ ಆಕಾಶವನ್ನು ಸುಂದರಗೊಳಿಸಿತ್ತು.

ಸ್ಫುರತ್ ಪ್ರಭಾ ಕೇಸರ ಮರ್ಕ ಬಿಂಬಂ ಮಮಂ ಜ ಸಿಂಧೌ ಮಕರಂದ ತಾಮ್ರಂ।
ಸಂಧ್ಯಾಕುಮಾರ್ಯಾ ಗಗನಾಂಬುರಾಶೇಃ ಕ್ರಿಡಾಹೃತಂ ಕ್ಷಿಪ್ತಮಿವಾರವಿಂದಂ ॥೪೧॥

ಸೂರ್ಯ ಬಿಂಬದಲ್ಲಿ ಪ್ರಭೆಗಳು ಅರಳಿದ ಹೂಗಳಂತೆ ವಿಕಸಿಸುತ್ತವೆ. ಜೇನು ತುಂಬಿ ತುಳುಕುತ್ತಿರುವ ಒಂದಾನೊಂದು ತಾವರೆ ಹೂವು ಒಂದು ಸುಂದರಿಯಾದ ಹೆಣ್ಣಿನಿಂದ

ಆಕಾಶವೆಂಬ ದಡದಲ್ಲಿಂದ ಆಟವಾಡಲಿಚ್ಛಿಸಿ ಸಮುದ್ರದಲ್ಲಿ ಬಿದ್ದವಳಂತೆ ಆ ಸೂರ್ಯ ಬಿಂಬವು ತೋರುತ್ತಿತ್ತು.

(ಸಂಜೆಯ ಹೊತ್ತಿನ ಸೂರ್ಯ ಬಿಂಬದ ವರ್ಣನೆ ಇದೆ). ಕವಿಗಳಿಗೆ ಸೂರ್ಯಾಸ್ತವನ್ನು ವರ್ಣಿಸುವುದು ಒಂದು ಆನಂದದಾಯಕವಾದ ವಿಷಯ. ಸುಂದರಿಯರಾದ ಸ್ತ್ರೀಯರನ್ನು ಪುಷ್ಪಗಳಿಗೆ ಹೋಲಿಸುವುದೂ, ಉತ್ತಮ ಹೂಗಳನ್ನು ಸ್ತ್ರೀಯರಿಗೆ ಹೋಲಿಸುವುದು ಕವಿಗಳ ಒಂದು ಕವಿ ಸಮಯಕ್ಕೆ ಸಾಕ್ಷಿ. ಶ್ರೀ ದೇಶಿಕರೂ ಅದನ್ನೇ ಇಲ್ಲಿ ಅಳವಡಿಸಿದ್ದಾರೆ.

ಫಣಾಮಣಿ ಪ್ರೇಕ್ಷ್ಯ ಖರಾಂಶುಬಿಂಬಃ ಸಂಧ್ಯಾ ಸುಪರ್ಣೀಮವಲೋಕ್ಯಭೀತಃ।
ತಾಪಾಧಿಕೋ ವಾಸರ ಪನ್ನಗೇಂದ್ರಃ ಪ್ರಾಯೇಣ ಪಾತಾಲ ಬಿಲಂ ವಿವೇಶಃ ॥೪೨॥

ಸೂರ್ಯ ಬಿಂಬವು ಹಾವಿನ ಹೆಡೆಯಲ್ಲಿರುವ ಮಣಿಯಂತೆ ಹೊಳೆಯುತ್ತಿದ್ದು ಸೂರ್ಯನನ್ನು ಮರೆ ಮಾಚುತ್ತಿತ್ತು. ಹಗಲೆಂಬ ಹಾವು ಸಂಜೆಯೆಂಬ ಗರುಡ ಪಕ್ಷಿಯನ್ನು ಕಂಡು ಅಂಜಿ ಹೆಡೆಯನ್ನು ಮುದುಡಿಕೊಂಡು ಪಾತಾಳ ಲೋಕದಲ್ಲಿ ಅಡಗಿಕೊಂಡಿತೇನೋ ಎಂಬಂತಿತ್ತು.

(ಸೂರ್ಯ ಬಿಂಬದ ವರ್ಣನೆ ಮುಂದುವರೆದಿದೆ). ವಿಧವಿಧವಾದ ಉಪಮೆಗಳನ್ನು ನೀಡುವುದು ಕವಿಗಳಿಗೆ ಪ್ರಿಯವಾದದ್ದು. ಇಲ್ಲಿ ಹಾವಿನ ಹೋಲಿಕೆ ಇದೆ. ಗರುಡ ಪಕ್ಷಿಯನ್ನು ಕಂಡು ಹಾವು ಹೆದರುತ್ತದೆ. ಗರುಡ ಪಂಚಾಶತ್ ಸ್ತೋತ್ರದಲ್ಲಿ ಶ್ರೀ ದೇಶಿಕರು ಹಾವುಗಳ ವಿವಿಧ ಆಟಗಳನ್ನು ವರ್ಣಿಸಿದ್ದಾರೆ.

ಪ್ರದೋಷರಾಗಾರುಣ ಸೂರ್ಯಲಕ್ಷ್ಯಾತ್ ದಿಶಾಗಜೋ ದೃಪ್ತ ಇವಾತಿ ಘೋರಃ।
ಕಾಲೋಪನೀತಂ ಮಧುನಾ ಸಮೇತಂ ಅಭುಂಕ್ತಮನ್ಯೇ ಕಬಲಂ ಪಯೋಧಿಃ ॥೪೩॥

ಅಂತ್ಯ ಕಾಲದಲ್ಲಿ ಸುತ್ತುವರೆಯುವ ಸೂರ್ಯ ಮಂಡಲವನ್ನು ಜೇನು ಸುರಿದ ಒಂದು ಹಲಸಿನ ಹಣ್ಣಿನಂತೆ ಭಾವಿಸಿಕೊಳ್ಳಬಹುದು. ಮದವೇರಿದ ಒಂದು ದಿಗ್ಗಜವು ಕಾಲವೆಂಬ ಮತ್ತೊಂದು ಆನೆಯನ್ನು ಭಕ್ಷಿಸುವಂತೆ ತೋರುತ್ತಿತ್ತು.

ಕವಿಗಳ ಉತ್ಪ್ರೇಕ್ಷೆಗೆ ಸಂಜೆ ಎಂಬ ವಸ್ತುವು ಚೆನ್ನಾಗಿ ಒದಗುತ್ತದೆ. ಸಂಧ್ಯಾ ಕಾಲವನ್ನು ನೋಡುವುದೇ ಒಂದು ಹಿತಕರವಾದ ಅನುಭವ. 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತನ್ನು ಇಲ್ಲಿ ಆಚಾರ್ಯರು ಸತ್ಯಗೊಳಿಸಿದ್ದಾರೆ.

ತದಾ ತಮಃ ಪ್ರೋಷಿತ ಚಂದ್ರ ಸೂರ್ಯೇ ದೋಷಾಮುಖೇ ದೂಷಿತ ಸರ್ವನೇತ್ರಂ।
ವಿಯೋಗಿನಾಂ ಶೋಕಮಯಸ್ಯ ವಹ್ನೇರಾಶಾಗತೋ ಧೂಮ ಇವಾನ್ವಭಾವಿ ॥೪೪॥

ಚಂದ್ರನೂ-ಸೂರ್ಯನೂ, ಪೈಪೋಟಿಯಿಂದ ಇರುವ ಆ ರಾತ್ರಿಯ ಪ್ರಾರಂಭದಲ್ಲಿ ಎಲ್ಲರ ಕಣ್ಣುಗಳನ್ನು ಮರೆ ಮಾಚುವ ರಾತ್ರಿ ಎಲ್ಲೆಲ್ಲಿಯೂ ಪ್ರಸರಿಸಿತು. ಅದು ಒಬ್ಬರನ್ನೊಬ್ಬರು ಬಿಟ್ಟು ಅಗಲುವ ಗಂಡು ಹೆಣ್ಣುಗಳಲ್ಲಿ ಬೇಸರವೆಂಬ ಬೆಂಕಿಯಿಂದ ದಿಕ್ಕುಗಳನ್ನೆಲ್ಲಾ ಆವರಿಸುವ ಹೊಗೆಯಂತೆ ಕಾಣುತ್ತಿತ್ತು.

ಶ್ರೀಕೃಷ್ಣನು ಅವತರಿಸಿದ ಆ ರಾತ್ರಿಯ ವರ್ಣನೆ. ಸಂಧ್ಯಾಕಾಲದಿಂದ ಪ್ರಾರಂಭವಾಗುತ್ತದೆ. ಸಂಧ್ಯಾಕಾಲದಲ್ಲಿ ಸೂರ್ಯನೂ, ಚಂದ್ರನೂ ಸ್ವಲ್ಪ ಕಾಲ ಒಟ್ಟಿಗೆ ಆಕಾಶದಲ್ಲಿ ತೋರುತ್ತಾರೆ. ಆನಂತರ ಒಬ್ಬರನ್ನೊಬ್ಬರು ಬಿಟ್ಟು ಬೇರೆಯಾಗುತ್ತಾರೆ. ಅದನ್ನು ಪ್ರೇಮಿಗಳಾದ ಗಂಡು ಹೆಣ್ಣುಗಳ ಅಗಲುವಿಕೆಗೆ ಹೋಲಿಸಿ, ಅದರಿಂದ ಅವರಲ್ಲಿ ಉದ್ಭವಿಸುವ ವಿರಹ ತಾಪಾಗ್ನಿಯ ಹೊಗೆಗೆ ಹೋಲಿಸುತ್ತಾರೆ.

ಸತಾರ ಪುಷ್ಪಾ ಧೃತ ಪಲ್ಲವಶ್ರೀಃ ಪ್ರಚಾಯ ನೀರಂಧ್ರತಮಃ ಪ್ರತಾನಾ।
ವಿಶ್ವಾಭಿನಂಧ್ಯಾ ವವೃಧೇ ತದಾನೀಂ ವೈಹಾಯಸೀ ಕಾಪಿ ವಸಂತವನ್ಯಾಃ ॥೪೫॥

ಆವಾಗ ಆಕಾಶದಲ್ಲಿ ಒಂದು ಬಗೆಯಾಗಿ ವಸಂತ ಕಾಲ ಪ್ರಾಪ್ತವಾಯಿತೆನ್ನಬಹುದು. ವಸಂತ ವನದಲ್ಲಿ ಪುಷ್ಪಗಳು, ತಳಿರುಗಳು ನಳನಳಿಸುತ್ತಿದ್ದು ಎಲ್ಲರೂ ಕೊಂಡಾಡುವಂತಿತ್ತು. ಆ ಸಮಯದಲ್ಲಿ ಆಕಾಶದಲ್ಲಿ ಪುಷ್ಪಗಳಂತೆ ಚೆದುರಿದ ನಕ್ಷತ್ರಗಳೂ ಎಲ್ಲರ ಕಣ್ಣಿಗೂ ಆನಂದ ಉಂಟುಮಾಡುತ್ತಿತ್ತು.

ಚಂದ್ರನು ಉದಯಿಸುವ ಸಮಯವನ್ನು ವಸಂತ ಕಾಲಕ್ಕೆ ಹೋಲಿಸಲಾಗಿದೆ. ವಸಂತ ಕಾಲದ ಆರಂಭದಲ್ಲಿ ಪುಷ್ಪಗಳೆಲ್ಲವೂ ಅರಳಲು ಆರಂಭಿಸಿ, ವನಗಳೆಲ್ಲವೂ ಸುಂದರವಾಗಿ ಶೋಭಿಸುತ್ತವೆ.

ಇಲ್ಲಿ ನಕ್ಷತ್ರಗಳನ್ನು ಹೂವುಗಳಿಗೆ ಹೋಲಿಸಿ, ಆಕಾಶವು ವಸಂತ ಕಾಲದ ವನದಂತೆ ರಾರಾಜಿಸುತ್ತಿತ್ತು ಎಂದಿದ್ದಾರೆ. ಶ್ರೀ ದೇಶಿಕರು ತಾವು ಮೂಲತಃ ಕವಿಗಳು ಎಂಬುದನ್ನು ದೃಢಪಡಿಸಿದ್ದಾರೆ.

ಅಲಕ್ಷ್ಯತ ಶ್ಯಾಮಲಮಂತರಿಕ್ಷಂ ತಾರಾಭಿರಾದರ್ಶಿತ ಮೌಕ್ತಿಕೌಘಂ।
ನಿವತ್ಸ್ಯತೋ ವಿಶ್ವಪತೇರವನ್ಯಾಂ ಕಾಲೇನ ಭೃತ್ಯೇನ ಕೃತಂ ವಿತಾನಂ ॥೪೬॥

ನಕ್ಷತ್ರಗಳು ತುಂಬಿ ತುಳುಕುವ ಕಪ್ಪಾದ ಆಕಾಶವು ಭೂಮಿಯಲ್ಲಿ ವಾಸ ಮಾಡುವ ಸರ್ವೇಶ್ವರನಿಗೆ ಕಾಲವೆಂಬ ಭೃತ್ಯನು ಮುತ್ತುಗಳಿಂದ ಹಾರವನ್ನು ಪೋಣಿಸಿ ಮುಡಿಸಿ ದಂತಿತ್ತು.

ಸಂಜೆಯಾಯಿತೆಂದರೆ, ಆಕಾಶದಲ್ಲಿ ನಕ್ಷತ್ರಗಳು ಮಿನುಗಲು ಆರಂಭಿಸಿ, ಆಕಾಶಕ್ಕೆ ಶೋಭೆಯನ್ನು ತರುತ್ತವೆ. ಭೂಮಿಯಲ್ಲಿ ಅವತಾರ ಮಾಡಲು ಇಚ್ಛಿಸಿರುವ ಭಗವಂತನಿಗೆ, ಜಗತ್ತಿನ ಎಲ್ಲಾ ಭೂತಗಳೂ ಭೃತ್ಯರೇ. ಕಾಲವೆಂಬುದು ಆ ಭಗವಂತನ ನಿಯಮನದಿಂದಲೇ ಸುತ್ತುತ್ತದೆ. ರಾತ್ರಿ ಕಾಲದಲ್ಲಿ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು ಆ ಜಗದೊಡೆಯನಿಗೆ ಮುತ್ತಿನ ದಾರವನ್ನು ಪೋಣಿಸಿ ತೊಡಿಸಿದಂತೆ ಭಾಸವಾಗುತ್ತಿತ್ತು. (ಸುಂದರವಾದ ಕವಿಯ ಕಲ್ಪನೆ).

ಅಭ್ಯಂಗನಾದ ಪ್ರತಿಪನ್ನಮೌನಾ ನಿಮೇಷಭಾಜೋ ನಿಯತಂ ವನಸ್ಥಾಃ।
ದೂರಂಗತೇ ಸ್ವಾಮಿನಿ ಪುಷ್ಕರಿಣ್ಯ ಸ್ತತ್ ಪ್ರಾಪ್ತಿ ಲಾಭಾಯ ತಪೋವಿತೇನುಃ ॥೪೭॥

ನೀರಿನಲ್ಲಿ ತಾವರೆಗಳ ಸಮೇತ ದುಂಬಿಗಳು ಅಲುಗಾಡದೆ ಇರುವುದರಿಂದ ಅವುಗಳು ನಾಶವಾಗದ ತಾವರೆಗಳಾಗಿವೆ. ತನ್ನಪ್ರೇಮಿಯಾದ ಸೂರ್ಯನು ಪ್ರಕಾಶಿಸಿದಾಗ, ಅವನನ್ನು ಕಂಡು ಅನುಭವಿಸಲು ಕಣ್ಣುಗಳನ್ನು ತೆರೆದು ತಪಸ್ಸನ್ನು ಮಾಡುವಂತೆ ಅವನಲ್ಲಿದ್ದ ತಾವರೆಗಳು ಶೋಭಿಸುತ್ತಿದ್ದವು.

ನೀರಿನ ಕೊಳದಲ್ಲಿರುವ ತಾವರೆಗಳ ವರ್ಣನೆ. ತಾವರೆಗಳು ಸೂರ್ಯನ ಕಿರಣಗಳಿಗೆ ಅರಳುತ್ತವೆ. ಅವುಗಳಲ್ಲಿರುವ ಜೇನಿಗಾಗಿ ದುಂಬಿಗಳು ತುಂಬಿಕೊಂಡು ಅವುಗಳ ನಿನಾದ ಕಿವಿಗಳಿಗೆ ಕರ್ಣಾನಂದವಾಗಿದೆ. ಅವು ಎಷ್ಟರಮಟ್ಟಿಗೆ ತಮ್ಮ ಕಾರ್ಯದಲ್ಲಿ ಅಂದರೆ ಜೇನನ್ನು ಸವಿಯುವುದರಲ್ಲಿ ನಿರತವಾಗಿದೆಯೆಂದರೆ, ತಪಸ್ಸಿಗೆ ಕುಳಿತಿರುವ ಯೋಗಿಗಳು ತದೇಕಚಿತ್ತರಾಗಿ, ಆ ಭಗವಂತನನ್ನು ಧ್ಯಾನಿಸುತ್ತಾ ಹೊರ ಜಗತ್ತನ್ನು ಮರೆತಿರುವಂತಿದೆ.

ನಿಮೀಲಿತಾನಾಂ ಕಮಲೋತ್ಪಲಾನಾಂ ನಿಷ್ಪನ್ನ ಸಖ್ಯೈರಿವ ಚಕ್ರವಾಕೈಃ।
ವಿಮುಕ್ತ ಭೋಗೈರ್ವಿದಧೇ ವಿಷಣ್ಣೈರ್ವಿಬೋಧ ವೇಲಾವಧಿಕೋ ವಿಲಾಪಃ ॥೪೮॥

ಚಕ್ರವಾಕ ಪಕ್ಷಿಗಳು ಹಗಲಲ್ಲಿ ಮಲಗಿ, ರಾತ್ರಿಯಲ್ಲಿ ಜೋರಾಗಿ ಕೂಗುತ್ತವೆ. ಆವಾಗ ಅವುಗಳನ್ನು ನೋಡುವಾಗ, ತಾವರೆ ಹೂವುಗಳು ತಮ್ಮ ಪ್ರಿಯತಮನ ಅಗಲಿಕೆಯಿಂದ, ತಾವೂ ಭೋಗಗಳನ್ನು ತ್ಯಜಿಸಿ, ವ್ಯಸನ ಪೀಡಿತರಾಗಿ ಕೂಗುವಂತೆ ತೋರುತ್ತಿತ್ತು.

ಶ್ಲೋಕದ ಅರ್ಥ ಸ್ಪಷ್ಟವಾಗಿದೆ. ತಾವರೆ ಹೂಗಳಿಗೆ ಸೂರ್ಯ ಪ್ರಿಯಕರ. ಚಂದ್ರೋದಯ ವಾಗುವಾಗ, ಸೂರ್ಯನ ಅಗಲಿಕೆಯಿಂದ ತಾವರೆ ಹೂಗಳು ದುಃಖಿಸುವಂತೆ ತೋರುತ್ತವೆ. ರಾತ್ರಿಯ ಹೊತ್ತು ಚಕ್ರವಾಕ ಪಕ್ಷಿಗಳು ಜೋರಾಗಿ ಕೂಗುತ್ತವೆ. ಆ ಕೂಗುವಿಕೆಯು ತಾವರೆ ಹೂವುಗಳ ವಿಲಾಪ ಧ್ವನಿಯಂತೆ ಕೇಳಿಸುತ್ತದೆ.

ತಮಿಸ್ರ ನೀಲಾಂಬರ ಸಂವೃತಾಂಗೀ ಶ್ಯಾಮಾ ಬಭೌ ಕಿಂಚಿದತೀತ್ಯ ಸಂಧ್ಯಾಂ।
ಪ್ರಾಚೀನ ಶೈಲೇ ಸಮಯಾನ್ನಿಗೂಢಂ ಸಮುದ್ಯತಾ ಚಂದ್ರಮಿವಾಭಿ ಸರ್ತುಂ ॥೪೯॥

ಹೊತ್ತು ಮುಳುಗಿದಂತೆಲ್ಲಾ ಚಂದ್ರವದನೆಯಾದ ಸುಂದರ ಹೆಣ್ಣಾದವಳು ರಾತ್ರಿಯಾಗುವ ನೀಲ ಬಟ್ಟೆಯನ್ನು ತೊಟ್ಟು ಕೆಳಗಿನ ಬೆಟ್ಟದಲ್ಲಿ ಒಬ್ಬರಿಗೊಬ್ಬರು ತಿಳಿಯದ ಹಾಗೆ ಸಂಕೇತ ಮಾಡಿಕೊಂಡು ಮರೆಯಾಗಿರುವ ಚಂದ್ರನಂತಿರುವ ತನ್ನಪ್ರೇಮಿಯನ್ನು ಹುಡುಕಲು ಪ್ರಯತ್ನ ಪಡುವ ಹಾಗೆ ತೋರುತ್ತಿತ್ತು.

ರಾತ್ರಿಯಾದಂತೆಲ್ಲಾ ಪ್ರೇಮಿಗಳ ಸಲ್ಲಾಪ ಆರಂಭವಾಗುವುದು ಸಹಜ. ಚಂದ್ರನಂತೆ ಮುಖವುಳ್ಳ ಸುಂದರಿಯರು, ತಮ್ಮ ಪ್ರೇಮಿಗಳೊಡನೆ ಸಂಕೇತ ಮಾಡಿಕೊಂಡು ಮರೆಯಲ್ಲಿ

ಭೇಟಿಯಾಗುತ್ತಾರೆ. ಇಲ್ಲಿ ಚಂದ್ರನು ಬೆಟ್ಟಗಳ ನಡುವೆ ಉದಯಿಸುತ್ತಾ ಕೆಲ ಕಾಲ ಮರೆಯಾಗುವುದು, ಕೆಲ ಕಾಲ ತೋರುವುದು ಈ ರೀತಿಯ ಕಣ್ಣು ಮುಚ್ಚಾಲೆ ಆಟವು, ಪ್ರೇಮಿಗಳು ಮರೆಯಲ್ಲಿ ತಮ್ಮ ಪ್ರಿಯಕರರನ್ನು ಭೇಟಿ ಆಗುವಂತೆ ಇತ್ತು.

ನಿಶಾಕರೇಣ ಪ್ರತಿಪನ್ನ ಸತ್ವಾ ನಿಕ್ಷಿಪ್ತ ದೇಹೇವಂ ಪಯೋಧಿತಲ್ಪೆ ।
ಜಗತ್ಸಮಿಕ್ಷ್ಯಾ ಜಹತೀ ಚ ಕಾರ್ಶ್ಯಂ ಪ್ರಾಚೇಧಿಶಾ ಪಾಂಡರ ತಾಮಯಾಸೀತ್॥೫೦॥

ಚಂದ್ರನನ್ನು ಗರ್ಭದಲ್ಲಿ ಇಟ್ಟುಕೊಂಡು ಸಮುದ್ರವೆಂಬ ಹಾಸಿಗೆಯಲ್ಲಿ ತನ್ನ ಬಿಂಬವನ್ನು ಇಟ್ಟು ಸುಖ ಪ್ರಸವಕ್ಕೆ ತಡೆಯಾದ ದೇಹದ ಅನೇಕ ತೊಂದರೆಗಳನ್ನು ಎದುರಿಸಿ, ಚಂದ್ರ ಬಿಂಬವು ಜಗತ್ತೆಲ್ಲವೂ ನೋಡುವ ಹಾಗೆ ಸ್ಪಷ್ಟವಾಗಿ ತೋರುತ್ತಿತ್ತು.

ಪುನಃ ಚಂದ್ರೋದಯದ ವರ್ಣನೆ. ಸಮುದ್ರದ ನಡುವೆ ಬಾಲ ಚಂದ್ರನು ಉದಯಿಸಿದಾಗ ಸುಖ ಪ್ರಸವವಾಗಿ ಹುಟ್ಟುವ ಶಿಶುವು ಜಗತ್ತೆಲ್ಲವನ್ನು ತನ್ನ ಪುಟ್ಟ ಕಣ್ಣುಗಳಿಂದ ಆಶ್ಚರ್ಯದಿಂದ ನೋಡುವಂತಿತ್ತು.

ತಮಃ ಪ್ರಸಂಗೇನ ವಿಮುಚ್ಯಮಾನಾ ಗೌರ ಪ್ರಭಾ ಗೋತ್ರಭಿದಾಭಿನಂದ್ಯಾ ।
ವಿಧೂದಯಾರಂಭವಿಶೇಷ ದೃಶ್ಯಾ ಪ್ರಾಚೀ ದಿಶಾಽಭಾಸತ ದೇವಕೀವ ॥೫೧॥

ಆವಾಗ ದೇವಕಿಗೂ, ಪಶ್ಚಿಮ ದಿಕ್ಕಿಗೂ ಅನೇಕ ಸಾಮ್ಯಗಳಿತ್ತು. ರಾತ್ರಿಯಲ್ಲಿ ಬಿಡಲ್ಪಟ್ಟ ದಿಕ್ಕಿನಂತೆ ಅವಳೂ ಬಿಳುಪಾಗಿದ್ದಳು. ಇಂದ್ರನಿಂದ ಕೊಂಡಾಡಲ್ಪಟ್ಟಿದ್ದಳು. ಏಕೆಂದರೆ ಪಶ್ಚಿಮ ದಿಕ್ಕು ಅವನಿಗೆ ಸ್ಥಾನ. ಅವನಿಗೆ ಅದರಲ್ಲಿ ಪ್ರೀತಿ. ಅಷ್ಟಲ್ಲದೆ ತಮಗೆ ಕಾರ್ಯ ಸಿದ್ಧಿಯನ್ನುಂಟು ಮಾಡುವ ಭಗವಂತನು ಅವಳಲ್ಲಿ ಅವತಾರ ಮಾಡುತ್ತಿರುವುದರಿಂದ, ಅವಳಲ್ಲಿ ಅವನಿಗೆ ವಿಶೇಷ ಗೌರವ. ಗೋವುಗಳನ್ನು ಕಾಯುವ ಗೋಪಾಲಕರಲ್ಲಿಯೂ ಪ್ರೀತಿ. ನಂದಾದಿ ಗೋಪರ ವಂಶವೇ ಶ್ರೇಷ್ಠವಾಗುವುದರಿಂದ ಅದರಲ್ಲೂ ಇಂದ್ರನಿಗೆ ವಿಶೇಷ ಆದರ.

ಚಂದ್ರೋದಯವಾಗುವಾಗ, ಪಶ್ಚಿಮ ದಿಕ್ಕು ವಿಶೇಷ ಶೋಭೆಯಿಂದ ಕೂಡಿರುತ್ತದೆ. ಅದನ್ನು ಇಲ್ಲಿ ಕೃಷ್ಣನನ್ನು ತನ್ನ ಉದರದಲ್ಲಿ ಹೊತ್ತಿರುವ ದೇವಕಿಗೆ ಹೋಲಿಸಲಾಗಿದೆ. ಇಂದ್ರನಿಂದ ಪಶ್ಚಿಮ ದಿಕ್ಕು ಕೊಂಡಾಡಲ್ಪಡುತ್ತದೆ. ಅದೇ ರೀತಿ ತಮ್ಮ ಕಾರ್ಯ ಸಿದ್ಧಿಗಾಗಿ ಅವತರಿಸಲು ದೇವಕಿಯ ಉದರವನ್ನು ಹೊತ್ತಿರುವ ಶ್ರೀಕೃಷ್ಣನನ್ನು ಸ್ತುತಿಸಲು, ಹಾಗೂ ಗೋಪಾಲಕರ ವಂಶದಲ್ಲಿ ಹುಟ್ಟುವುದರಿಂದ ಅವರೆಲ್ಲರನ್ನೂ ಸ್ತುತಿಸಲು ಇಂದ್ರನು ಆಸೆ ಪಟ್ಟನು.

ಅಪತ್ಯ ಲಾಭಂ ಯದುವೀರ ಪತ್ನ್ಯಾ ಮಹೋದದೌ ಮಗ್ನ ಸಮುತ್ಥಿತೇನ।
ತದ್ವಂಶಮಾನ್ಯೇನ ಸಮೀಕ್ಷ್ಯ ಪೂರ್ವಂ ಪ್ರಾಪ್ತಂ ಪ್ರತೀತೇನ ಪುರೋಧಸೇವ ॥೫೨॥

ಯದು ವಂಶಕ್ಕೆ ಮೂಲ ಪುರುಷನಾದ ಚಂದ್ರನು ಸಮುದ್ರದಲ್ಲಿ ಮುಳುಗಿ ಏಳುವಾಗ, ಆ ವಂಶಕ್ಕೆ ಮುಖ್ಯರಾದ ವೀರ ಪತ್ನಿಯಲ್ಲಿ ಮುಂದೆ ಹುಟ್ಟುವ ಭಗವಂತನಿಗೆ ಜಾತಕರ್ಮಗಳನ್ನು ನಡೆಸಲು ಪುರೋಹಿತರು ಸಿದ್ಧರಾಗುವಂತೆ, ಚಂದ್ರನು ಸಮುದ್ರದಲ್ಲಿ ಸ್ನಾನ ಮಾಡಿ ಎದ್ದನು.

ವಂಶಕ್ಕೆ ಕುಲ ಪುತ್ರನು ಹುಟ್ಟುವಾಗ, ಅವನಿಗೆ ಜಾತಕರ್ಮಗಳನ್ನು ನಡೆಸುವ ಪುರೋಹಿತರು ಬಹಳ ಶುಭ್ರರಾಗಿ, ಆಚಾರವಂತರಾಗಿರಬೇಕು. ಇಲ್ಲಿ ಚಂದ್ರ ವಂಶದಲ್ಲಿ ಹುಟ್ಟುವ ಶ್ರೀಕೃಷ್ಣನಿಗೆ, ಚಂದ್ರನೇ ಕುಲ ಪುರೋಹಿತ. ಅವನು ಶ್ರೀಕೃಷ್ಣನಿಗೆ ಜಾತಕರ್ಮಗಳನ್ನು ನಡೆಸಲು ಶುಭ್ರನಾಗಿರಬೇಕು. ಅದಕ್ಕಾಗಿ ಸಮುದ್ರ ಸ್ನಾನ ಮಾಡಬೇಕು. ಇಲ್ಲಿ ಚಂದ್ರನು ಪಶ್ಚಿಮ ಸಮುದ್ರದಲ್ಲಿ ಉದಯಿಸಿದಾಗ, ಅವನು ಸಮುದ್ರದಲ್ಲಿ ಸ್ನಾನ ಮಾಡಿ ಶುಭ್ರನಾಗಿ, ಕರ್ಮಗಳನ್ನು ಮಾಡಿಸಲು ತಯಾರಾದಂತಿತ್ತು. ಉತ್ತಮವಾದ ಕಲ್ಪನೆ.

ಕ್ಷ್ವೇಲೋಪಮೇ ಸಂತಮಸೇ ನಿರಸ್ತೇ ಸೋಮಂಸುಧಾ ಸ್ತೋಮ ಮಿವೋದ್ಧಮಂತಿ।
ದುಗ್ಧೋದವಲೇವ ದುದೋಹ ಲಕ್ಷ್ಮೀ ಮಾತಾ ಮನೋಜ್ಞಾ ಮಮರೇಂದ್ರಮಾನ್ಯಾ॥೫೩॥

ರಾತ್ರಿಯಲ್ಲಿ ಚಂದ್ರನನ್ನು ಸೋಲಿಸಿ, ಎಲ್ಲೆಲ್ಲೂ ಮಧುರವಾಗಿ ಬೀಸುವ ಗಾಳಿಯು ಹಾಲಾಹಲವೆಂಬ ವಿಷವೆಲ್ಲವೂ, ಅಮೃತವನ್ನು ಕೊಟ್ಟ ಕ್ಷೀರ ಸಮುದ್ರ ಹಾಗೂ ಲಕ್ಷ್ಮಿಯು ಅವತರಿಸಿದ ಸಮುದ್ರವನ್ನು ಕಡೆದಂತಿತ್ತು.

ಚಂದ್ರೋದಯದಲ್ಲಿ ತೋರುವ ಅನೇಕ ಅದ್ಭುತಗಳನ್ನು ವರ್ಣಿಸಲಾಗಿದೆ.

(ಶ್ಲೋಕ 53ರಿಂದ - 60ನೇ ಶ್ಲೋಕದವರೆಗೆ ಚಂದ್ರೋದಯದ ವರ್ಣನೆ ಇದೆ).

ಶ್ರೀಮದ್ರಾಮಾಯಣದಲ್ಲಿಯೂ ಸುಂದರ ಕಾಂಡದ ಐದನೇಯ ಸರ್ಗದಲ್ಲಿ ಇದೇ ರೀತಿ ಚಂದ್ರೋದಯದ ವರ್ಣನೆ ಇದೆ. ಚಂದ್ರೋದಯದ ವರ್ಣನೆ ಕವಿಗಳಿಗೆ ಆಪ್ಯಾಯಮಾನವಾದದ್ದು.

ತಮಃ ಸಮಾಕ್ರಾಂತಿವಶೇನ ಪೂರ್ವಂ ಜಜ್ಞೆ ನಿಮಗ್ನೈರಿವ ಭೂತಧಾತ್ರ್ಯಾಂ।
ತತಸ್ತುಷಾರಾಂಶುಕರಾವಗೂಢೈರುತ್ತಮ್ಯಮಾನೈರಿವ ಶೈಲಶೃಂಗೈಃ॥ ॥೫೪॥

ರಾತ್ರಿಯಿಂದ ಆವರಿಸಲ್ಪಟ್ಟ ಹೊತ್ತಿನಲ್ಲಿ ಬೆಟ್ಟಗುಡ್ಡಗಳೆಲ್ಲವೂ ಭೂಮಿಯಲ್ಲಿ ಮುಳ್ಳು ಗಿಡಗಳಂತೆ ತೋರುತ್ತಿತ್ತು. ಚಂದ್ರನ ಕಿರಣಗಳು ಮೊದಲು ಶಿಖರಗಳಲ್ಲಿ ಹರಡಿದ ಹೊತ್ತು ಎಲ್ಲಾ ಮೇಲೆಯೇ ತೋರುತ್ತಿತ್ತು. ಆನಂತರ ಚಂದ್ರನು ಮೇಲೇರುತ್ತಾ ತನ್ನ ಕೈಗಳಿಂದ ತಬ್ಬಿಕೊಂಡಂತಿತ್ತು. (ಚಂದ್ರೋದಯದ ವರ್ಣನೆ ಮುಂದುವರೆದಿದೆ).

ದಿಶ ಸ್ತದಾನೀ ಮವನೀ ಧರಾಣಾಂ ಸಗೈರಿಕೈಃ ಪಾರದ ಪಂಕಲೇಪೈಃ।
ಚಕಾಶಿರೇ ಚಂದ್ರಮಸೋ ಮಾಯೂಖೈಃ ಪಂಚಾಯುಧಸ್ಯೇವ ಶರೈಃ ಪ್ರದೀಪ್ತೈಃ ॥೫೫॥

ಮನ್ಮಥನ ಬಾಣಗಳಂತೆ ಬೆಳಗುವ ಚಂದ್ರಕಿರಣಗಳು ಎಲ್ಲಾ ಕಡೆಗೂ ಪ್ರಸರಿಸಿ ದಿಕ್ಕುಗಳು ಪಾದರಸದ ಲೇಪ ಮೂಡಿದಂತೆ ಹೊಳೆಯುತ್ತಿದ್ದವು.

ಸಮುನ್ನಮಂತೀ ಕುಟಲಾಯತಾತ್ಮಾ ಶಶಾಂಕ ಲೇಖೋದಯ ದೃಶ್ಯಕೋಟಿಃ।
ವಿಯೋಗಿ ಚೇತೋಲವನೇ ಪ್ರವೀಣಾ ಕಾಮೋದ್ಯತಾ ಕಾಂಚನ ಶಂಖಲೇವ ॥೫೬॥

ಉದಯ ಕಾಲದಲ್ಲಿ ದೂರ ಸರಿವ ಚಂದ್ರನ ಕಲೆಗಳು, ಪ್ರೇಮಿಗಳು ರಾತ್ರಿಯಾದ ಮೇಲೆ ಬಿಟ್ಟು ಅಗಲುವಂತೆ ತೋರುತ್ತಿತ್ತು.

ತಮಾಂಸಿ ದುರ್ವಾರ ಬಲಃ ಸ ಕಾಲಃ ಪ್ರಾಯೋವಿಲೋಪ್ತುಂ ಸಹಸಾ ದಿಶಾಂಚ ।
ಮನಾಂಸಿ ಕಾಮಶ್ಚ ಮನಸ್ವಿನೀನಾಂ ಪ್ರಾಯುಂಕ್ತ ಶೈತ್ಯಾಧಿಕಮರ್ಧಚಂದ್ರಂ ॥೫೭॥

ತಡೆಯಲು ಸಾಧ್ಯವಿಲ್ಲದ ಕಾಲವೀರನು ದಿಕ್ಕುಗಳಲ್ಲಿ ಕತ್ತಲೆಯನ್ನು ಅತಿ ವೇಗದಲ್ಲಿ ನೀಗಲು ಪ್ರಯೋಗಿಸಿದ ಅರ್ಧ ಚಂದ್ರನೋ ಅಥವಾ ಮನ್ಮಥನು ಮನಸ್ಸಿನಲ್ಲಿ ದುಃಖಿಸುವ ಸ್ತ್ರೀಯರ ಮನಸ್ಸನ್ನು ಹೋಗಲಾಡಿಸುವ ಅರ್ಧ ಚಂದ್ರನೋ ಎಂಬಂತಿತ್ತು.

ಅರ್ಧ ಚಂದ್ರನು ನೋಡಲು ಬಹು ಆಕರ್ಷಕನಾಗಿರುತ್ತಾನೆ. ಅವನನ್ನು ಮನ್ಮಥನಿಗೆ ಹೋಲಿಸಿ, ಸ್ತ್ರೀಯರ ಮನಸ್ಸನ್ನು ವರ್ಣಿಸಿದ್ದಾರೆ. ಸ್ತ್ರೀಯರು ಆ ಅರ್ಧ ಚಂದ್ರನನ್ನು ನೋಡಿ ಕಾಮ ಕಲಕಿ ಮನಸ್ಸುಳ್ಳವರಾಗಿರುತ್ತಾರೆ.

ಕರೇಣ ಸಂಕೋಚಿತ ಪುಷ್ಕರೇಣ ಮದ ಪ್ರತಿಚ್ಛಂದ ಕಲಂಕ ಭೂಮಾ।
ಕ್ಷಿಪ್ತ್ವಾ ತಮಶ್ಶೈವಲ ಮುನ್ಮಮಂಜಮಗ್ನೋ ದಿಶಾನಾಗ ಇವೇಂದು ರಬ್ದೇಃ ॥೫೮॥

ತಾವರೆ ಹೂಗಳು ಶೀಘ್ರವಾಗಿ ಮುದುಡುವಂತೆ ಮಾಡುವ ಕಿರಣಗಳನ್ನು ಉಳ್ಳವನೂ, ಕಳಂಕ ಹೊಂದಿರುವ ರಾತ್ರಿಯನ್ನು ಭೇದಿಸಿಕೊಂಡು ಸಮುದ್ರದಿಂದ ಏಳುವ ಚಂದ್ರನು, ಮದ ಜಲದಿಂದ ಕೂಡಿದ ಆನೆಯಂತೆ ಶೋಭಿಸುತ್ತಾ ಸ್ತ್ರೀಯರ ಮನಸ್ಸನ್ನು ಅಪಹರಿಸುತ್ತಿದ್ದನು.

ಚಂದ್ರನು ಮೇಲೇರುತ್ತಾ ಏರುತ್ತಾ, ಹೆಚ್ಚು ಹೆಚ್ಚು ಸುಂದರನಾಗಿ ತೋರುತ್ತಿದ್ದಂತೆ, ಸ್ತ್ರೀಯರು ಅವನೆಡೆಗೆ ಹೆಚ್ಚು ಆಕರ್ಷಿತರಾಗಿ, ತಮ್ಮ ಪ್ರೇಮಿಗಳನ್ನು ಸ್ಮರಿಸಿ ಪುಲಕಿತರಾಗುತ್ತಿದ್ದರು.

ಮದೋದಯಾ ತಾಮ್ರ ಕಪೋಲ ಭಾಸಾ ಶಕ್ರಸ್ಯಕಾಷ್ಠಾ ಶಶಿನಾ ಚ ಕಾಶೇ।
ಉದಯುಷಾ ವ್ಯಂಜಯಿತುಂ ತ್ರಿಲೋಕಿಂ ನಾಥಸ್ಯ ಸಾ ನಾಭಿರಿವಾಂಬು ಜೇನ ॥೫೯॥

ಇಂದ್ರ ದಿಕ್ಕೆಂಬುದು ಉತ್ತಮನಾದ ಚಂದ್ರನ ಸೇರುವಿಕೆಯಿಂದ ಮದದಿಂದ ತುಂಬಿರುವ ಗಂಡಸ್ಥಲವನ್ನು ಹೊಂದಿರುವ ಹೆಣ್ಣಾನೆಯಂತೆ. ಮೂರು ಲೋಕಗಳನ್ನು ತನ್ನ ಸೌಂದರ್ಯದಿಂದ ಆಕರ್ಷಿಸುವ ತಾವರೆ ಹೂವು, ಪದ್ಮನಾಭನ ನಾಭಿಯಲ್ಲಿ ಬೆಳಗುವ ಕಮಲದಂತೆ ಇದೆ.

(ಚಂದ್ರೋದಯವನ್ನು ವಿಧ ವಿಧವಾಗಿ ವರ್ಣಿಸಿ ಅನೇಕ ಉಪಮೆಗಳನ್ನು ನೀಡಿದ್ದಾರೆ).

ಸಮೀಪತಃ ಸಂತಮಸಾಂಬುರಾಶೇಃ ಬಭಾರ ಶಂಖಾಕೃತಿರಿಂದುಬಿಂಬಃ।
ಪಿತ್ತೋಪರಾಗಾದಿವ ಪೀತಿಮಾನಂ ದೋಷಾವಿಲಪ್ರೋಷಿತ ದೃಷ್ಟಿದತ್ತಾಂ ॥೬೦॥

ಚಂದ್ರ ಬಿಂಬವಾದುದು ರಾತ್ರಿಯ ಸಮುದ್ರದಂತೆ ತೋರುತ್ತದೆ. ಅದು ಒಂದು ಬಿಳುಪಾದ ಶಂಖದಂತೆ, ರಾತ್ರಿಯಲ್ಲಿ ಅಗಲಿ ವಿರಹ ತಾಪದಿಂದ ಬಳಲುವ ದಂಪತಿಗಳಿಂದ, ಕಲಕಿದ ಕಣ್ಣುಗಳುಳ್ಳವರಾಗಿ, ಪಿತ್ತದಿಂದ ಪೀಡಿತರಾದವರ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವಂತೆ ಇತ್ತು.

ಕೃಶೋದರೀ ಲೋಚನ ಕೃಷ್ಣ ಲಕ್ಷ್ಮಾ ರಾತ್ರ್ಯಾಃ ಸಮಿದ್ಧೋದಯರಾಗ ಇಂದುಃ।
ಕಸ್ತೂರಿಕಾ ಕುಂಕುಮ ಚಿತ್ರಿತಾತ್ಮಾ ಕರ್ಪೂರ ವಿನ್ಯಾಸ ಇವಾನ್ವಭಾವಿ ॥೬೧॥

ಸ್ತ್ರೀಯರ ಕಣ್ಣುಗಳನ್ನು ಹೋಲುವ, ಕಳಂಕದಿಂದ ಕೂಡಿದ ಉದಯ ಕಾಲದಲ್ಲಿ ಕೆಂಪಾಗಿ ತೋರುವ ಚಂದ್ರ ಬಿಂಬದಂತೆ, ರಾತ್ರಿ ಎಂಬ ಹೆಣ್ಣಿಗೆ ಕಸ್ತೂರಿಯನ್ನೂ, ಕುಂಕುಮವನ್ನು ಹಚ್ಚಿ ಮಧ್ಯದಲ್ಲಿ ಇಡುವ ಕಪ್ಪು ತಿಲಕದಂತೆ ಶೋಭಿಸುತ್ತಿತ್ತು.

(ಚಂದ್ರ ಬಿಂಬವನ್ನು ಸ್ತ್ರೀಯರ ಸುಂದರವಾದ ಮುಖಕ್ಕೆ ವರ್ಣಿಸಿದ್ದಾರೆ).

ಪ್ರಸಾದ ಮಂತ ಕರಣಸ್ಯ ದಾತಾ ಪ್ರತ್ಯಕ್ಷಯನ್ ವಿಶ್ವಮಿದಂ ಪ್ರಕಾಶೈಃ।
ತಮಶ್ಚ ರಾಗಂ ಚ ವಿಧೂಯ ಚಂದ್ರಃ ಸಂಮೋದನಂ ಸತ್ವಮಿವೋಲ್ಲಲಾಸ ॥೬೨॥

ಬುದ್ಧಿಯಾದುದು ಮನಸ್ಸಿಗೆ ಸಂತೋಷವನ್ನುಂಟು ಮಾಡುವುದು. ತನ್ನ ಶಕ್ತಿಯಿಂದ ಎಲ್ಲಾ ಲೋಕಗಳನ್ನು ನೋಡುವ ಹಾಗೆ ರಾತ್ರಿಯನ್ನೂ, ತನ್ನಲ್ಲಿ ತೋರುವ ಚಂದ್ರನು ನಕ್ಷತ್ರಗಳಿಗೆ ಭೋಗ್ಯವನ್ನುಂಟು ಮಾಡುತ್ತದೆ. ಸತ್ವವೆಂಬುವ ಗುಣದಂತೆ ಇದು ಪ್ರಕಾಶಿಸುತ್ತದೆ. ಸತ್ವಗುಣಕ್ಕೆ ಇವೆಲ್ಲವೂ ಇದೆ. ಜ್ಞಾನವನ್ನು ಕೊಡುವ, ರಾಗಾದಿಗಳನ್ನು ಹೋಗಿಸುವ ಸುಖವನ್ನು ನೀಡುವ, ಸತ್ಪುರುಷರಿಗೆ ಇಷ್ಟವಾದುದು ಸತ್ವಗುಣ.

ನಕ್ಷತ್ರಗಳಿಗೆ ರಾಜ ಚಂದ್ರ. ಚಂದ್ರನನ್ನು ಸತ್ವಗುಣಕ್ಕೆ ಹೋಲಿಸಿದ್ದಾರೆ.

ನಿಶಾಕರೋ ವಾರಿಧಿ ನಿಃಸ್ವನಾನಾಂ ನಿಷ್ಪಾದಕಃ ಕುಂದ ರುಚಿಶ್ಚಕಾಶೇ।
ಉದೇಷ್ಯತ ಶ್ಚಕ್ರಭೃತೋ ನಿಯೋಗಾತ್ ಪ್ರಾದುರ್ಭವನ್ ಪ್ರಾಗೀವ ಪಾಂಚಜನ್ಯಃ॥೬೩॥

ಸಮುದ್ರವನ್ನು ಉಕ್ಕಿಸುವ ಸ್ವಭಾವವುಳ್ಳ ಚಂದ್ರನು, ಅವತರಿಸುವ ಸಮಯದಲ್ಲಿ ಅವನಿಗಿಂತ ಮುಂದೆ ಜನಿಸಿದ ಪಾಂಚಜನ್ಯದಂತೆ ಬಿಳುಪಾಗಿ ಹೊಳೆಯುತ್ತಿದ್ದನು.

ಮೃಗೇಣ ನಿಷನ್ನ ಮೃಗಾಜಿನಶ್ರೀಃ ಸ್ವಪಾದ ವಿಕ್ಷೇಪ ಮಿವಾಂತರಿಕ್ಷೇ।
ಮುರದ್ವಿಷೋ ವಾಮನ ಮೂರ್ತಿ ಭಾಜಃ ಪರ್ಯಾಯತಾ ಮನ್ವಗಮತ್ ಶಶಾಂಕಃ ॥೬೪॥

ಚಂದ್ರನು ಮುಂದೆ ಹುಟ್ಟಲಿರುವ ಭಗವಂತನ ಮೂರ್ತಿಗೆ ಸಮನಾನಾಗಿದ್ದನು. ಹೇಗೆಂದರೆ, ತನ್ನಲ್ಲಿ ಕೃಷ್ಣ ಮೃಗವು ಹೊಂದಿರುವುದರಿಂದ, ಕೃಷ್ಣಾಜಿನವೆಂಬ ಜಿಂಕೆಯ ಚರ್ಮವನ್ನು

ಹೊದೆಯುವುದರಿಂದ ಏರ್ಪಡುವ ಸೌಂದರ್ಯವು ಅವನಿಗೆ ಬಂದಿತು. ಅದನ್ನು ಅವನು ಆಕಾಶದಲ್ಲಿ ತೋರಿಸಿದನು.

ಜಗಾಯ ಶಂಕ್ವಾಶ್ರಿತ ಶೈವಲಾಭ ಶ್ಚಾರುದ್ಯುತೇ ಶ್ಚಂದ್ರಮಸಃ ಕಲಂಕಃ ।
ಉದೀಯಮಾನಸ್ಯ ಮಹೋರ್ಮಿ ಯೋಗಾತ್ ಸಾಮಿಚ್ಯುತಂ ಸಾಗರಮೂಲಪಂಕಂ ॥೬೫॥

ಸುಂದರನಾದ ಚಂದ್ರನಿಗೆ, ಮದ್ಯದಲ್ಲಿ ತೋರುವ ಕಳಂಕವು. ಅವನು ಸಮುದ್ರದ ಕೆಳಗೆ ಅಡಗಿದ್ದಾಗ, ಶೇಖರವಾದ ಪಾಚಿಯ (ಕೆಸರಿನ) ರಾಶಿಯಂತೆ ತೋರಿ ಬರುತ್ತಿತ್ತು.

ಉದೇತ್ಯ ತುಂಗಾದುದಯಾದ್ರಿ ಶೃಂಗಾತ್ ತಮೋ ಗಜಾನ್ ಅಗ್ರಕರೇಣ ನಿಘ್ನನ್ ।
ನಿಶಾಕರಸ್ತನ್ ಮದಲೇಪ ಲಕ್ಷ್ಮ್ಯಾ ಸಿತಾಭಿಶುಃ ಸಿಂಹಾದಶಾ ಮಯಾಸೀತ್ ॥೬೬॥

ಶ್ರೇಷ್ಠವಾದ ಉದಯಾದ್ರಿಯಲ್ಲಿ ಉದಯಿಸುವ ಬಿಳುಪಾಗಿಯೂ, ಸುಂದರನಾಗಿಯೂ ಇರುವ ಚಂದ್ರನು, ಬೆಟ್ಟದ ಮೇಲೆ ಇರುವ ಮದದಾನೆಗಳನ್ನು ಕೊಂದು, ಅವುಗಳ ಮದ ಜಲವನ್ನು ಪೂಸಿಕೊಂಡ ಸಿಂಹದಂತೆ ತೋರುತ್ತಿದ್ದನು.

ನಿಷೀಧ ಲಕ್ಷ್ಮ್ಯಾ ಇವ ಪುಂಡರೀಕಂ ನಿರ್ವೇಶ ಸಿಂಧೋರಿವ ಫೇನ ಚಕ್ರಂ ।
ತಮನ್ವಪೈಕ್ಷಂತ ವಿಲಾಸ ತಂತ್ರಾಃ ತಾರಾಮಣೀನಾಮಿವ ಸೂತಿ ಶಕ್ತಿಂ ॥೬೭॥

ಉಲ್ಲಾಸವೇ ಪ್ರಧಾನವಾಗಿರುವವರು ಆ ಚಂದ್ರನನ್ನು ಬಹು ಬಗೆಯಾಗಿ ಉಲ್ಲೇಖ ಮಾಡುವರು. ಲಕ್ಷ್ಮಿಗೆ ಇಷ್ಟವಾದ ಬಿಳಿ ತಾವರೆಯೆಂದೂ, ಆನಂದ ಸಮುದ್ರದಲ್ಲಿ ಹೊರ ಬರುವ ನೊರೆಯೆಂದೂ, ನಕ್ಷತ್ರಗಳಿಂದ ಸುತ್ತುವರೆದ ದಿವ್ಯವಾದ ಮುತ್ತಿನ ಚಿಪ್ಪೆಂದೂ ವರ್ಣಿಸುತ್ತಾರೆ.

ಉದಾರ ತಾರಾಗಣ ಬುದ್ಬುದೌಘ ಚಂದ್ರೇಣ ಸಂಪನ್ನ ಸುಧಾ ಪ್ರಸೂತಿಃ ।
ಅಶೇಷ ದೃಶ್ಯಾ ಮಧಿಗಮ್ಯ ಲಕ್ಷ್ಮೀ ಮಾಲೋಕ ದುಗ್ಧೋ ದಧಿರಾವಭಾಸೇ ॥೬೮॥

ಎಲ್ಲರಿಗೂ, ಕಣ್ಣುಗಳಿಗೂ ಆಪ್ಯಾಯಮಾನವಾಗಿ, ಸಂಪತ್ತನ್ನು ಕೊಡುವ ಚಂದ್ರನ ಬೆಳದಿಂಗಳು ಕ್ಷೀರ ಸಮುದ್ರದಂತೆಯೂ, ಸುಂದರವಾದ ನಕ್ಷತ್ರಗಳ ಕೂಟದಂತೆಯೂ, ಪ್ರಕಾಶಿಸುತ್ತಾ ತಂಪನ್ನು ಮೂರು ಜಗತ್ತಿಗೂ ನೀಡುವಂತಿದೆ.

ಪ್ರಕಾಶಯನ್ ವಿಶ್ವಮಿದಂ ಯಥಾವತ್ ಚಂದ್ರೋದಯೋದ್ದೀಪಿತ ಸೌಮ್ಯತಾರಃ ।
ಆಸೀನ್ನಿಶೀಥೋ ಜಗತಃ ಪ್ರಭೂತಾದಂಧಸ್ಯ ದೈವಾದಿವ ದೃಷ್ಟಿಲಾಭಃ ॥೬೯॥

ಚಂದ್ರೋದಯದಿಂದ ಉಂಟಾದ ಪ್ರಕಾಶವು ಅರ್ಧರಾತ್ರಿಯಲ್ಲಿಯೂ ಸಹ ಅಂಧರಿಗೂ ದೃಷ್ಟಿ ಲಾಭವನ್ನು ತರುವಂತೆ ಹೊಳೆಯುತ್ತಿತ್ತು.

ವಿಶೋಧಿತಾದ್ವಿಷ್ಣು ಪದಾತ್ ಕ್ಷರಂತಿ ವಿಷ್ವಂನ್ಮುಖೀ ಸಾಗರ ವೃದ್ಧಿ ಹೇತೋಃ।
ತಮೋಮಯಿಂ ಸೂರ್ಯಸುತಾಂ ನಿಗೀರ್ಯ ಜ್ಯೋತ್ಸ್ನಾನದೀ
ಶೋಣಮಪಿ ವ್ಯಮುಂಚತ್ ॥೭೦॥

ನಾಲ್ಕು ಕಡೆಗಳಲ್ಲಿಯೂ ಪ್ರಸರಿಸಿದ್ದ ಆ ಬೆಳದಿಂಗಳು ಬ್ರಹ್ಮನಿಂದ ಆ ಮಹಾವಿಷ್ಣುವಿನ ಅಡಿದಾವರೆಗಳನ್ನು ತೊಳೆದ ಗಂಗಾ ನದಿಯಂತೆಯೂ, ಗಂಗೆಯನ್ನು ಸೇರುವ ಯಮುನೆಯಂತೆಯೂ, ಮತ್ತು ಪವಿತ್ರವಾದ ಶೋಣಾ ನದಿಯಂತೆಯೂ ಶುಭ್ರವಾಗಿ ಪವಿತ್ರವಾಗಿತ್ತು.

ಚಂದ್ರೋದಯದ ವರ್ಣನೆ ಮುಂದುವರೆದಿದೆ 60ರಿಂದ - 70ನೇ ಶ್ಲೋಕದವರೆಗೆ ಚಂದ್ರನ ಚಂದ್ರೋದಯದ ವರ್ಣನೆ, ಚಂದ್ರನ ಬೆಳದಿಂಗಳು, ಅವುಗಳಿಂದ ಜಗತ್ತಿಗೆ ಆಗುವ ಉಪಯೋಗ, ಪ್ರೇಮಿಗಳಿಗೆ ಆಗುವ ಸಂತೋಷ ಇತ್ಯಾದಿಯಾಗಿ ತಮ್ಮ ಅದ್ಭುತವಾದ ಕವಿತಾ ಶೈಲಿಯಲ್ಲಿ ಶ್ರೀ ದೇಶಿಕರು ವಿವರಿಸಿದ್ದಾರೆ.

ಪ್ರಿಯಾಮುಖೈ ಸ್ತೋಯ ಮಧು ಪ್ರದಿಷ್ಟಂ ಪೀತ್ವಾನವಂ ಪ್ರೀತ ಇವಾಂಬುರಾಶಿಃ।
ಸಮೇತ್ಯ ಚಂದ್ರದ್ಯುತಿ ನರ್ತಕೀಭಿ ಸ್ತರಂಗಿತಂ ತಾಂಡವ ಮಾತತಾನಃ ॥೭೧॥

ಬೆಳದಿಂಗಳು ಎಲ್ಲ ಕಡೆಯೂ ಪ್ರಸರಿಸುತ್ತಿದ್ದಂತೆ, ಸಮುದಭ್ರದ ಅಲೆಗಳು ದಡಗಳನ್ನು ಮುಚ್ಚಿದವು. ಅದರಿಂದ ಕಡಲೆಂಬ ಒಬ್ಬನು ತನಗೆ ಪ್ರಿಯೆಯರಾದ ಸುಂದರಿಯರಾದ ಪ್ರೇಮಿಗಳ ಬಾಯಿಯಲ್ಲಿ ಹೊಸದಾದ ಸುರೆಯನ್ನು ಕುಡಿದು, ನರ್ತನ ಮಾಡುವ ನಾಟ್ಯ ಸುಂದರಿಯರೊಡನೆ ಸೇರಿ ಆಟವಾಡುತ್ತಾ ಇದ್ದಂತಿತ್ತು.

ಕಲಂಕ ಚಿತ್ರೀಕೃತ ಬಿಂದು ಖಂಡಂ ತಮಃ ಸಮಧ್ಯಾಸಿತ ಸತ್ವಕಲ್ಪಂ।
ಅಶುಷ್ಕ ಶೈವಾಲ ಮಿವಾಭಭಾಸೇ ಸಿದ್ಧಾಪಗಾ ಸೈಕತಮರ್ಧ ದೃಶ್ಯಂ ॥೭೨॥

ಆ ಅರ್ಧ ಚಂದ್ರನು ತನ್ನ ಮಧ್ಯದಲ್ಲಿ ಇರುವ ಕಳಂಕದಿಂದ ಬೇರೊಂದು ರೂಪದಿಂದ ತಮೋಗುಣವುಳ್ಳವ್ನು ಹೊಂದಿರುವ ಬೇರೊಂದು ವಸ್ತುವಿನಂತೆ, ಹಸಿರು ಪಾಚಿಯ ಬಣ್ಣದಂತೆ ಕಾಣುತ್ತಿದ್ದನು.

ಸ್ವಮಧ್ಯ ಸಂಪನ್ನ ವಿಶುದ್ಧ ಧಾಮಾ ಶ್ಯಾಮಾ ಚ ಸಾ ದೇವಕ ನಂದನೀ ಚ।
ತಮಃ ಕ್ಷಿಪಂತ್ಯಾ ಜಗತಾಂ ತ್ರಯಾಣಂ
ಅನ್ಯೋನ್ಯ ಸಂವಾದ ಮಿವಾನ್ವಭೂತಾಂ ॥೭೩॥

ರಾತ್ರಿಯು ಮತ್ತು ದೇವಕಿಯು ಪರಸ್ಪರ ಸೇರಿರುವುದಾಗಿ ಭಾವಿಸಬಹುದು. ಏಕೆಂದರೆ, ತನ್ನಲ್ಲಿ ಶುದ್ಧವಾದ ಭಗವಂತನನ್ನು ಧರಿಸಿದ್ದಳು. ರಾತ್ರಿಯು ಶುಭ್ರವಾದ ಚಂದ್ರನನ್ನು ಧರಿಸಿತ್ತು.

ಶಾಖಾವಕಾಶೇಷು ಕೃತ ಪ್ರವೇಶೈ ಚಂದ್ರಾತಪೈರಾಶ್ರಿತ ಚಾರಕೃತ್ಯೈಃ।
ಹತಾವಶಿಷ್ಟಾನಿ ತಮೂಂಸಿ ಹಂತು ಸ್ಥಾನಂ ತದಾಕ್ರಾಂತ ಮಮೃಗ್ಯತೇವ ॥೭೪॥

ಚಂದ್ರನ ಬೆಳದಿಂಗಳು ಮೋಡಗಳ ಮಧ್ಯೆ ಅಲ್ಲಲ್ಲಿ ತಂಗುತ್ತಾ ಪ್ರಸರಿಸುವುದನ್ನು ನೋಡಿದರೆ, ಕಳ್ಳತನದಲ್ಲಿ ಪ್ರೇಮಿಗಳು ಪರಸ್ಪರ ಸಂದರ್ಶಿಸುವಂತೆ ಇತ್ತು.

ಪರಾಕೃತ ಧ್ವಾಂತ ನಿಕಾಯಪಂಕೈಃ ಪರ್ಯಾಪ್ತ ತಾರಾಗಣ ಫೇನಪೂಜ್ಜೈಃ।
ಅಶೋಭತ ದ್ಯೌರ ಸಮಾಯುಧಸ್ಯ ಯಶಃ ಪ್ರವಾಹೈರಿವ ಚಂದ್ರಪಾದೈಃ ॥೭೫॥

ಆಕಾಶದಲ್ಲಿ ಚಂದ್ರನ ಬೆಳದಿಂಗಳು ಅಲೆಗಳಿಂದ ಪ್ರತಿಫಲಿಸಲ್ಪಡುತ್ತವೆ. ಈ ಅಲೆಗಳು ಮನ್ಮಥನ ಕೀರ್ತಿಯ ಅಲೆಗಳಂತಿವೆ. ಆ ರಾತ್ರಿಯಲ್ಲಿ ನಕ್ಷತ್ರಗಳ ಸಮೂಹದ ನಡುವೆ ನೋಡುವ ಆ ಬೆಳದಿಂಗಳು ಸಮುದ್ರದ ಅಲೆಗಳ ನೊರೆಗಳನ್ನು ಹೋಲುತ್ತಿತ್ತು.

ದದಾನಯಾ ದಿಕ್ಸರಿತಾಂ ಪ್ರಸಾದಂ ಪ್ರಸಕ್ತ ಹಂಸಾಗಮಯಾ ಸ್ವಕಾಂತ್ಯಾ।
ಅಪಾಕೃತ ಧ್ವಾಂತ ಘನ ಪ್ರವೃತ್ತ್ಯಾ ಶರತ್ವಿಷಾ ಚಂದ್ರಿಕಯಾ ಚಕಾಶೇ ॥೭೬॥

ಆ ಚಂದ್ರನ ಬೆಳದಿಂಗಳು ಶರತ್ಕಾಲದ ಆಗಮನವನ್ನು ಸೂಚಿಸುತ್ತಿತ್ತು. ಶರತ್ಕಾಲವು ನದಿಗಳಿಗೆ ಸಂತೋಷವನ್ನುಂಟು ಮಾಡುತ್ತದೆ. ವರ್ಷಾ ಕಾಲದಲ್ಲಿ ಹೆಣ್ಣು ಹಂಸ ಪಕ್ಷಿಗಳು ಮತ್ತೆ ಸಂಚಾರ ಆರಂಭಿಸುವ ಕಾಲ. ಆ ಬೆಳದಿಂಗಳೂ ಸಹ ಹಂಸವೆಂಬ ಭಗವಂತನ ಅವತಾರವನ್ನು ಸೂಚಿಸುವ ಕಾಲವಾಗಿತ್ತು.

ಕಲಾವತಾ ಕಾಮ ವಿಹಾರ ನಾಟ್ಯೆ ಕಾಲೋಚಿತಂ ಕಲ್ಪಯತೇವ ನರ್ಮ।
ಅಮೋಘ ಮಾಯಾಫಲಿತಂ ಕರಣ್ಯಃ ಪ್ರಾಯೋದಿಶಾಂ ದೀ ದೀತಿಯ ಪ್ರಯುಕ್ತಾಃ॥೭೭॥

ಕಲೆಗಳನ್ನು ಹೊಂದಿರುವ ಚಂದ್ರನು ನಾಟ್ಯ ಕಲೆಯನ್ನು ತಿಳಿದವನೆನ್ನಬಹುದು. ಅವನು ಮನ್ಮಥನ ಆಟವಾದ ನಾಟ್ಯದಲ್ಲಿ ಹಾಸ್ಯರಸವನ್ನು ಉಂಟುಮಾಡುವ ನಾಶವಾಗದ ಮಾಯೆಯಿಂದ ದಿಕ್ಕುಗಳಾಗಿರುವ ಸ್ತ್ರೀಗಳ ಮೇಲೆ ಕಿರಣಗಳನ್ನು ಬೀಸುವಂತಿತ್ತು.

ಕದಂಬ ಮಾಲಾಭಿರಧೀತಲಾಸ್ಯಃ ಕಲ್ಯಾಣ ಸಂಭೂತಿರಭೂತ್ ಪ್ರಜಾನಾಂ।
ಪ್ರಿಯೋದಯ ಸ್ಫೀತರುಜೋ ರಜನ್ಯಾಃ ಸಂತೋಷ ನಿಶ್ವಾಸನಿಭಃ ಸಮೀರಃ ॥೭೮॥

ಕದಂಬ ಹೂವುಗಳ ಸಾಲುಗಳಿಗೆ ತನ್ನ ಪ್ರಿಯನಾದ ಚಂದ್ರನ ಉದಯದಿಂದ, ರಾತ್ರಿ ಯೆಂಬ ಸುಂದರ ಸ್ತ್ರೀಯು ತನ್ನ ಶೀತಲವಾದ ಕಿರಣಗಳಿಂದ, ಮನಸ್ಸಿಗೆ ಸಂತೋಷವಾಗುವ ಗಾಳಿಯ ಬೀಸುವಿಕೆಯಿಂದ ಪ್ರಜೆಗಳಿಗೆ ಸಂತೋಷವನ್ನುಂಟುಮಾಡಿತು.

ಪ್ರಾಯೇಣ ಹಂಸೈರವಧೂತ ಸಂಗಾ ಚಾರುಸ್ಮಿತಾ ಸಂಭೃತ ಭೃಂಗನಾದಾಃ।
ಸರ್ವೋಪಭೋಗ್ಯೆ ಸಮಯೇ ಪ್ರಸುಪ್ತಂ ಕುಮುಧ್ವತೀ ಕೋಕನಥಂ ಜಹಾಸ ॥೭೯॥

ಹಂಸ ಪಕ್ಷಿಗಳೊಡನೆ ಸೇರುವಿಕೆಯನ್ನು ಬಿಟ್ಟು ದುಂಬಿಗಳ ಸಹವಾಸವನ್ನು ಹೆಚ್ಚು ಆಶಿಸಿ ಸುಂದರವಾಗಿ ಅರಳುವ ಎಲ್ಲರಿಗೂ ಸಂತೋಷವನ್ನು ಉಂಟು ಮಾಡುವ ತಾವರೆ ಹೂಗಳು ವಿಕಸಿಸುವಂತೆ ಆ ಚಂದ್ರೋದಯವಿದ್ದಿತು.

ಕಲಂಕ ಲಕ್ಷ್ಮೇಣ ಸಮೈಕ್ಷಿ ಕಾಚಿತ್ ಕಸ್ತೂರಿಕಾ ಪತ್ರ ವಿಶೇಷಕಾಂತಿಃ।
ಸುಧಾಂಶು ಬಿಂಬವ್ಯಪದೇಶ ದೃಶ್ಯೇ ಮುಗ್ಧೇ ರಜನ್ಯಾಮುಖ ಪುಂಡರೀಕೆ ॥೮೦॥

ಉದಯವಾಗಿರುವ ಚಂದ್ರನು ಬಿಳಿಯ ತಾವರೆಯಂತೆ ಸುಂದರವಾಗಿ ಕಾಣುತ್ತಿದ್ದನು. ಆ ಚಂದ್ರನಲ್ಲಿದ್ದ ಕಳಂಕವು ಆ ರಾತ್ರಿ ಎಂಬ ಹೆಣ್ಣಿನ ಹಣೆಯಲ್ಲಿ ಒಂದು ರೀತಿಯಾಗಿ ಇಟ್ಟ ಕಸ್ತೂರಿ ತಿಲಕದಂತಿತ್ತು.

ತಲೇಷ್ವವೇಪಂತ ಮಹೀರುಹಾಣಾಂ ಛಾಯಾಸ್ತದಾಮಾರುತ ಕಂಪಿತಾನಾಂ।
ಶಶಾಂಕ ಸಿಂಹೇನ ತಮೋರುಗಜಾನಾಂ ಲೂನಾಕೃತೀನಾಮಿವ ಗಾತ್ರ ಖಂಡಾಃ॥೮೧॥

ಗಾಳಿಯಿಂದ ಅಲ್ಲಾಡಿಸಲ್ಪಟ್ಟ ಮರಗಳಿಂದ ಭೂಮಿಯು ಅಲ್ಲಾಡಿದಂತಾಯಿತು. ಆನೆಯನ್ನು ಸೀಳುವ ಸಿಂಹದಂತೆ ಚಂದ್ರನು ರಾತ್ರಿಯನ್ನು ಸೀಳಿಕೊಂಡು ಆಕಾಶದಲ್ಲೆಲ್ಲಾ ತನ್ನ ಕಾಂತಿಯನ್ನು ಪ್ರಸರಿಸಿದನು.

ತಮಸ್ತರಂಗಾನವಸಾದ ಯಂತ್ಯಾ ಸಮೇಯುಷೀ ಚಂದ್ರಿಕಯಾ ಮಹತ್ಯಾ।
ಶ್ಯಾಮಾ ಬಭೌ ಸಾಂದ್ರ ನವೋತ್ಪಲಶ್ರೀಃ ಸುರಸ್ರವಂತ್ಯೈವ ಕಲಿಂದ ಕನ್ಯಾಃ ॥೮೨॥

ಕನ್ನೈದಿಲೆಯಂತೆ ಕಪ್ಪಾದ ಹೂಗಳನ್ನು ಹೊಂದಿರುವ ರಾತ್ರಿಯಾದುದು ಕತ್ತಲೆಯನ್ನು ನೀಗುವ ಬೆಳದಿಂಗಳು ಹರಡಿದ್ದರಿಂದ, ಗಂಗೆಯೊಡನೆ ಸೇರಿ ಅಲೆಗಳನ್ನು ದಡಕ್ಕೆ ಹೊಡೆಯುವ ಯಮುನೆಯಂತೆ ಕಾಣಿಸುತ್ತಿತ್ತು.

ಸ್ವವಿಪ್ರಯೋಗ ವ್ಯಸನಾನ್ನಿಪೀತಂ ಭೃಂಗಾಪದೇಶೇನ ಕುಮುದ್ವತೀಭಿಃ।
ಸುಧಾಭಿರಾಪ್ಲಾವ್ಯ ಕರಸ್ಥಿತಾಭಿಃ ಪ್ರಚ್ಯಾವಯಾಮಾಸ ವಿಷಂ ಸುಧಾಂಶುಃ ॥೮೩॥

ಚಂದ್ರನ ಬೆಳದಿಂಗಳ ಪ್ರಕಾಶವು ಕನ್ನೈದಿಲೆಗಳನ್ನು ಬೆಳ್ಳಗೆ ಮಾಡಿದವು. ಅಂಬರ ಹೂವುಗಳು ಅರಳಿದ ಸಮಯದಲ್ಲಿ ದುಂಬಿಗಳು ಹೊರಗೆ ಬಂದವು. ಅದನ್ನು ನೋಡುವಾಗ ಕನ್ನೈದಿಲೆ ಹೂವುಗಳು ತಮ್ಮ ಪ್ರಿಯಕರನಾದ ಚಂದ್ರನನ್ನು ಬಿಟ್ಟು ಹೋಗಲು ಇಷ್ಟಪಡದೆ ವಿಷವನ್ನು ಕುಡಿದಾಗ, ಒಡನೇ ಪ್ರಿಯಕರನು ಬಂದು ತನ್ನ ಕೈಯ್ಯಲ್ಲಿರುವ ಅಮೃತ ಪ್ರವಾಹವನ್ನು ಅವುಗಳಿಗೆ ನೀಡಿ ಆ ವಿಷವನ್ನು ಹೋಗಲಾಡಿಸಿದಂತಿತ್ತು.

ಚಕಾಶಿರೇ ಪತ್ರಕಲಾ ಸಮೃದ್ಧ್ಯಾ ವ್ಯೋಮೋಪಮೇ ವಾರಿಣಿ ಕೈರವಾಣಿ।
ಕಲಂಕ ದೃಶ್ಯ ಭ್ರಮರಾಣಿ ಕಾಲೇ ಸ್ವನಾಥ ಸಾಧರ್ಮ್ಯ ಮುಪಾಗತಾನಿ ॥೮೪॥

ಸರೋವರವು ಆಕಾಶದಂತೆ ತಿಳಿಯಾಗಿ ಅದರಲ್ಲಿರುವ ಕಮುದಿನಿ ಪುಷ್ಪಗಳ ದಳಗಳು ಚಂದ್ರನ ಕಲೆಗಳಂತೆಯೂ ದುಂಬಿಗಳು ಕಣ್ಣುಗಳಂತೆಯೂ ಶೋಭಿಸಿದ್ದರಿಂದ, ಹೂವುಗಳು ತಮ್ಮ ನಾಥನಾದ ಚಂದ್ರನೊಡನೆ ಏಕತೆ(ಸಾದೃಶ್ಯ)ಯನ್ನು ಅನುಭವಿಸಿದಂತೆ ಬೆಳಗಿದವು.

ಸರೀನ್‌ಮುಖೈ ಸ್ತೋಯ ಮಧು ಪ್ರದಿಷ್ಟಂ ಪೀತ್ವಾ ನವಂ ಪ್ರೀತ ಇವಾಂಬುರಾಶಿಃ।
ಚಕಾರ ಚಂದ್ರ ಪ್ರತಿಬಿಂಬಿತಾನಾಂ ಕರಗ್ರಹೈಃ ಕಾಮಪಿ ರಾಸಲೀಲಾಂ ॥೮೫॥

ಸಮುದ್ರವೆಂಬ ಪ್ರಿಯಕರನು ನದಿಗಳೆಂಬ ಪ್ರೇಯಸಿಗಳ ಬಾಯಿಗಳಿಂದ ಸುರಿದ ತಣ್ಣೀರನ್ನು ಕುಡಿದಂತೆ ತನ್ನಲ್ಲಿ ಸೇರಿದ ಚಂದ್ರ ಪ್ರತಿಬಿಂಬಗಳಾಗಿರುವ ಹೆಣ್ಣುಗಳ ಕೈಹಿಡಿದುಕೊಂಡು ಒಂದು ಬಗೆಯಾದ ರಾಸಕ್ರೀಡೆಯಾಡಿದನು.

(ರಾಸಕ್ರೀಡೆಯಲ್ಲಿ ಅನೇಕ ಕೃಷ್ಣನ ಮೂರ್ತಿಗಳಂತೆ ಇಲ್ಲಿ ಸಮುದ್ರದ ಅನೇಕ ಮೂರ್ತಿಗಳು ಇಲ್ಲ ಎನ್ನುವುದು ಒಂದು ವಿಶೇಷ ಮುಂದೆ ಅವತರಿಸುವ ಕೃಷ್ಣನು ರಾಸಕ್ರೀಡೆ ಆಡಿದುದನ್ನು ಇಲ್ಲಿ ಸೂಚ್ಯವಾಗಿ ಹೇಳಿದ್ದಾರೆ).

ಪ್ರಸಾದ ಭಾಜೋರುಭಯೋಗ ಭೂತಾ ಮುಭಾವನಿರ್ಧಾರ್ಯ ಮಿಥೋ ವಿಶೇಷೌ।
ನಭಃ ಸ್ಥಲೇ ಶೀತರುಚಿಃ ಸತಾರೆ ಸಕೈರವೇ ತತ್ಪ್ರತಿಮಾ ಚ ತೋಯೆ ॥೮೬॥

ಆಕಾಶದಲ್ಲಿ ನಕ್ಷತ್ರಗಳು, ಚಂದ್ರನೂ ಚೆನ್ನಾಗಿ ಬೆಳಗಿದವು. ಸರಸ್ಸುಗಳಲ್ಲಿ ಕಾಣುವ ತಿಳಿಯು ಆಕಾಶದ ತಿಳಿಗೆ ಸಮನಾಗಿತ್ತು. ಅದರಿಂದ ಇವೆರಡರಲ್ಲಿ ಒಂದಕ್ಕೆ ಮೇಲ್ಮೆ, ಮತ್ತೊಂದಕ್ಕೆ ಅದಿಲ್ಲ ಎಂದು ಹೇಳಲು ಅವಕಾಶವಿರಲಿಲ್ಲ. ಎರಡೂ ಸಹ ಸುಂದರವಾಗಿ ತೋರುತ್ತಿತ್ತು.

ನಭ ಸ್ತುಷಾರಾಂಶು ಮಯೂಖ ಯೋಗಾತ್ ತಮಿಸ್ರಯಾ ಮೋಕ್ಷಮವಿಂದತೇವ।
ಅತೃಷ್ಯತಃ ತತ್ವವಿದೋ ನಿಶಾಯಾಮಂತರ್ಮುಖಂ ಚಿತ್ತ ಮಿವಾತ್ಮಯೋಗಾತ್ ॥೮೭॥

ಆಕಾಶವಾದುದು ರಾತ್ರಿಯಿಂದ ಮುಚ್ಚಿಹೋಗಿದ್ದು, ಚಂದ್ರನ ಪ್ರಕಾಶ ಸೇರಿದುದರಿಂದ, ಅದರಿಂದ ಬಿಡುಗಡೆ ಹೊಂದಿತು. ಅದು ವೈರಾಗ್ಯ ಹೊಂದಿರುವ ತತ್ವಜ್ಞಾನಿಯ ಮನಸ್ಸೆಂಬುದು ಅಂತರ್ಮುಖಿಯಾಗಿ ಆತ್ಮ ವಿಷಯವಾದ ಯೋಗದಿಂದ ಅಜ್ಞಾನದಿಂದ ಬಿಡುಗಡೆ ಹೊಂದುವಂತಿತ್ತು.

ಚಂದ್ರನ ಪ್ರಕಾಶದಿಂದ ಕತ್ತಲೆ ನೀಗುವಂತೆ, ಜ್ಞಾನಿಗೆ ಜ್ಞಾನ ಪ್ರಾಪ್ತಿಯಾದರೆ ಅವನ ಅಜ್ಞಾನ ನೀಗುತ್ತದೆ.

ಸಹೋದಿತಾ ಚಂದ್ರಮಸಾ ಬಭಾಸೇ ಜ್ಯೋತ್ಸ್ನಾ ಪಯೋಧೇ ರುಪಜಾತರಾಗಾ।
ತದಾತನೆ ಸಂಜನನೇಽಪಿ ಶೌರೇಃ ಸಹಾಯಿನೀ ಸಾಗರ ಸಂಭವೇವ ॥೮೮॥

ಚಂದ್ರನೊಡನೆ ಜೊತೆಯಲ್ಲಿ ಸಮುದ್ರವು ತೋರುವಾಗ, ಅಲ್ಲಿ ಪ್ರಕಾಶಿಸುವ ಬೆಳದಿಂಗಳು, ಹಿಂದೆ ಲಕ್ಷ್ಮಿಯು ಸಮುದ್ರದಲ್ಲಿ ಚಂದ್ರನೊಡನೆ ತೋರಿದ ಬಣ್ಣವನ್ನು ಮತ್ತೇ ಅವತರಿಸಿದ ಭಗವಂತನಿಗೆ ಸಹಧರ್ಮಿಣಿಯಾಗುವುದಕ್ಕಾಗಿ ತೋರಿದಳೋ ಎನ್ನುವಂತಿತ್ತು.

ಪ್ರಬುದ್ಧತಾರಾ ಕುಮುದಾಬ್ಧಿ ಚಂದ್ರೇ ನಿದ್ರಾಣ ನಿಃ ಶೇಷ ಜನೇ ನಿಶೀಥೇ।
ಸತಾದೃಶೋ ದೇವಪತೇಃ ಪ್ರಸೂತಿಂ ಪುಣ್ಯನ್ ಬಭೌ
ಪುಣ್ಯತಮೋ ಮುಹೂರ್ತಃ ॥೮೯॥

ಅರ್ಧ ರಾತ್ರಿಯಲ್ಲಿ ನಕ್ಷತ್ರಗಳು, ಕುಮುದಿನಿ ಪುಷ್ಪಗಳು, ಸಮುದ್ರದ ಚಂದ್ರನು ಇವೆಲ್ಲವೂ ಬೆಳ್ಳಗಿರುವುದನ್ನು ಜನಗಳು ನೋಡಲು ಅಪೇಕ್ಷಿಸುವುದು ನೋಡಲು ಸಹಜ ವಾದುದು. ಇದು ಸತ್ಪುರುಷರ ಸಹಜ ನಡತೆಯಂತಿತ್ತು. ಅವತಾರ ಕಾಲವು ಆಗ ಒದಗಿತ್ತು. ಕಂಸನಿಗೆ ಸೇರಿದವರು ದೇವಕೀ ಮೊದಲಾದವರು ಇರುವ ಜಾಗದಲ್ಲಿ ಚೆನ್ನಾಗಿ ಮಲಗಿದ್ದ ಕಾಲವಾಗಿತ್ತು. ಅವತರಿಸುವ ಭಗವಂತನು ಅತ್ಯಂತ ಮಹಿಮೆಯುಳ್ಳವನಾದ್ದರಿಂದ ನಿಜವಾಗಿಯೂ ಯೋಗನಿದ್ರೆ ಮಾಡುವ ಸ್ವಾಮಿಯು ಕ್ಷೀರ ಸಮುದ್ರದಿಂದ ಎದ್ದು ಅವತರಿಸುವ ಕಾಲವಾಗಿತ್ತು. ಅದು ಅತ್ಯಂತ ಪುಣ್ಯತಮವಾದ ಕಾಲವಾಗಿತ್ತು. (ಏಷನಾರಾಯಣ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ ನಾಗಪರ್ಯಂಕ ಮುತ್ಸೃಜ್ಯಹ್ಯಾಗತೋ ಮಧುರಾಂಪುರೀಂ ಎಂಬ ಶ್ಲೋಕ ಇಲ್ಲಿ ಅನುಸಂಧೇಯ).

ಭಾಗೇನ ಪೂರ್ವೇಣ ತಮೋಮಯೇನ ಪ್ರಕಾಶ ಪೂರ್ಣೇನ ಚ ಪಶ್ಚಿಮೇನ।
ತದಾನಿಶೀಥಃ ಸ ಸತಾಂ ಪ್ರಸತ್ತ್ಯೈ ಸಂಸಾರ ಮುಖ್ಯೋರಿವ ಸಂಧಿರಾಸೀತ್ ॥೯೦॥

ರಾತ್ರಿಯು ಕಳೆದ ಮೊದಲ ಅರ್ಧ ಭಾಗಕ್ಕೆ ಸಂಧಿಕಾಲವಾದ ನಡು ರಾತ್ರಿಯಲ್ಲಿ ಅವತಾರ ಮುಹೂರ್ತವಾದುದರಿಂದ ಸತ್ಪುರುಷರ ಮನಸ್ಸಿನಲ್ಲಿರುವ ತಿಳಿಯು ಪ್ರಕಾಶ ಮಾಡಲ್ಪಡುವುದಾಗಿ, ಆ ಕಾಲವು ಸಂಸಾರವಾಗಿರುವ ದುರ್ದಶೆ, ಮೋಕ್ಷವಾಗಿರುವ ಉತ್ತಮ ದಶೆಗೂ ಸಂಧಿಯಾದ ತತ್ವಜ್ಞಾನಿಗಳ ಜೀವನ ಕಾಲದಂತೆ ಆಗಿತ್ತು. (ಕೃಷ್ಣನ ಅವತಾರ ಕಾಲ ವನ್ನು ಸೂಚಿಸಿದ್ದಾರೆ).

ಪ್ರಾಗೇವ ಜಾತೇನ ಸಿತೇನ ಧಾಮ್ನಾ ಮಧ್ಯೋಪಲಕ್ಷ್ಯೇಣ ಚ ಮಾಧವೇನ।
ಪ್ರಕಾಮ ಪುಣ್ಯಾ ವಸುದೇವ ಪತ್ನ್ಯಾ ಸಂಪನ್ನ ಸಾಮ್ಯೇವ ನಿಶಾ ಬಭಾಸೆ ॥೯೧॥

ರಾತ್ರಿಯಲ್ಲಿ ಮೊದಲು ಸುಂದರನಾದ ಚಂದ್ರನು ತೋರಿಬಿಟ್ಟನು. ಅದರ ನಡುಕಾಲದಲ್ಲಿ ಶ್ರೀಕೃಷ್ಣನು ಅವತರಿಸಲು ಇಚ್ಛಿಸಿದನು. ಈ ಸ್ಥಿತಿಯಲ್ಲಿ ಆ ರಾತ್ರಿಯು ದೇವಕಿಗೆ ಸಂತೋಷ ವಾಗಿದ್ದಿತು. ಅವಳು ಮೊದಲು ಸುಂದರವಾಗಿ ಕಾಣುತ್ತಾ ಕೃಷ್ಣನ ಆಗಮನವನ್ನೇ ನಿರೀಕ್ಷಿಸು ತ್ತಿದ್ದಳು. ಆ ರಾತ್ರಿಯು ಎಲ್ಲಾ ದಿನಗಳಿಗಿಂತಲೂ ಅತ್ಯಂತ ಪುಣ್ಯಕರವಾದ ರಾತ್ರಿಯಾಗಿತ್ತು.

ಸಹ ಪ್ರತಿಚ್ಛಂದ ಶಶಾಂಕ ಭೇದೈಃ ಸರಸ್ವತಾಂ ತಾಂಡವಿನಸ್ತರಂಗಾಃ।
ಅವೇಕ್ಷ್ಯ ಶೌರೇರವತಾರ ವೇಲಾಂ ಸಂತೋಷ ನಿಘ್ನಾ ಇವ ಸಂಪ್ರಣೇದುಃ ॥೬೧॥

ಸಮುದ್ರದಲ್ಲಿ ಅಲೆಗಳು ಚಂದ್ರನ ಪ್ರತಿಫಲನವನ್ನು ತೋರುತ್ತಾ ಕೃಷ್ಣನ ಆಗಮನವನ್ನು ಸೂಚಿಸುವಂತೆ ಮಧುರವಾದ ಶಬ್ದವನ್ನು ಮಾಡುತ್ತಿದ್ದವು. ಆ ಶಬ್ದಗಳು ಶ್ರೀಕೃಷ್ಣನ ಆಗಮನಕ್ಕೆ ಸ್ವಾಗತವನ್ನು ಕೋರುವಂತಿತ್ತು.

ಅವಾದಿತೋದೀರಿತ ವಾದ್ಯಘೋಷಂ ದಿಶಾಭಿರಾಮ್ರೇಡಿತ ದಿವ್ಯಗೀತಂ।
ಸತಾಮುಪಸ್ಥಾಪಿತ ಸತ್ವಲಾಸ್ಯಂ ಸಂಗೀತ ಮಂಗಲ್ಯಮಭೂತ್ ತದಾನಿಂ ॥೬೨॥

ವಾದ್ಯಗಳೂ, ಅವುಗಳ ಘೋಷವೂ ಸೇರಿ ಸಂಗೀತವನ್ನು ಕೊಡುತ್ತವೆ. ಕೃಷ್ಣಾವತಾರ ಮುಹೂರ್ತದಲ್ಲಿ ವಾದ್ಯಗಳು ಬಾರಿಸಲ್ಪಡದೆಯೇ ದಿಕ್ಕುಗಳಲ್ಲಿ ಎಲ್ಲ ಕಡೆಯೂ ತಾವು ತಾವಾಗಿಯೇ ಅನೇಕ ಮಧುರ ಸ್ವರಗಳ, ವಾದ್ಯಗಳ ಘೋಷವು ಕೇಳಿಬಂದು ಮಂಗಳಕರ ವಾದ ವಾತಾವರಣ ಉಂಟಾಯಿತು.

ಪ್ರದೀಪಿತೈಃ ಕಂಸ ಗೃಹೇಷು ದೀಪೈಸ್ತಾಪೈಶ್ಚ ಭಾವೇಷು ತಪೋಧನಾನಾಂ।
ಅಲಭ್ಯತ ಕ್ಷಿಪ್ರಮಲಬ್ಧಭಂಗೈಃ ರಹೇತು ನಿರ್ವಾಣ ದಶಾನುಭೂತಿಃ ॥೬೪॥

ಕಂಸನ ಅರಮನೆಯಲ್ಲಿ ಹೊತ್ತಿಸಲ್ಪಟ್ಟಿದ್ದ ದೀಪಗಳು, ತಪಸ್ಸನ್ನು ಧನವಾಗಿ ಉಳ್ಳ ಮಹಾತ್ಮರ ಮನಸ್ಸಿನಲ್ಲಿದ್ದ ತಾಪಗಳೆಲ್ಲವನ್ನೂ ನಿವಾರಿಸಿದಂತಾಗಿ, ಶ್ರೀಕೃಷ್ಣಾವತಾರದಿಂದ ಅವರೆಲ್ಲರಿಗೂ ಶುಭ ಉಂಟಾಗುವ ಸೂಚನೆಯಂತೆ ತೋರಿದವು.

ಅಜಃ ಸ್ವಜನ್ಮಾರ್ಹತ ಯಾಽನುಮೇನೇ ಯಾಮಷ್ಟಮೀಂ ಯಾದವ ಭಾವಮಿಚ್ಛನ್।
ದ್ವಿತೀಯಯಾ ಭಾವಿತ ಯೋಗ ನಿದ್ರಾ ಸಾಽಭೂತ್ ತದಾನಿಂ ಪ್ರಥಮಾ ತಿಥಿನಾಂ ॥೬೫॥

ಜನ್ಮವೇ ಇಲ್ಲದ ಭಗವಂತನು ಯದು ವಂಶದಲ್ಲಿ ತೋರಲು ನಿಶ್ಚಯಿಸಿ, ತನ್ನ ಜನ್ಮಕ್ಕೆ ಒಂದು ಅಷ್ಟಮಿ ತಿಥಿಯನ್ನು ಆರಿಸಿಕೊಂಡನು. ಎಂಟನೇ ಮಗುವಾದ ತನಗೆ ಅಷ್ಟಮಿ ತಿಥಿಯೇ ಸರಿಯಾದದ್ದೆಂದು ಭಾವಿಸಿದನು. ಅದಕ್ಕೆ ಮುಂದಿನದಾದ ನವಮಿ ತಿಥಿಯು ಯಶೋದೆಯ ಮನೆಯಲ್ಲಿ ಯೋಗಮಾಯೆಯು ಹೆಣ್ಣಾಗಿ ಜನ್ಮವೆತ್ತಿದ ತಿಥಿಯಾಯಿತು. ಕೃಷ್ಣನು ತೋರಿದ ಮೊದಲ ತಿಥಿಯಲ್ಲಿ, ಮಾಯೆಯು ತೋರಿದ ಎರಡನೇ ತಿಥಿಯು ಅಷ್ಟಮಿ, ನವಮಿಗಳಾಗಿದ್ದವು. ಹೀಗೆ ಅಷ್ಟಮಿಯು ತಾನು ಮೊದಲನೇಯದಾಗಿ ಆಗಿ ನಂತರದ ನವಮಿಯನ್ನು ಎರಡನೇಯದಾಗಿಸಿದ್ದುದು ಆಶ್ಚರ್ಯವಾಗಿದ್ದಿತು.

ಇದರಿಂದ ಭಗವಂತನು 'ತಾನು ಅಘಟಿತ ಘಟನಾ ಸಮರ್ಥ'ನೆಂಬುದನ್ನು ತೋರಿಸಿದನು.

ಅಥ ಸಿತರುಚಿ ಲಗ್ನೆ ಸಿದ್ಧ ಪಂಚಾಗ್ರಹೋಚ್ಛೈ ್ರವ್ಯಜನಯಧನಘಾನಾಂ
ವೈಜಯಂತ್ಯಾಂ ಜಯಂತ್ಯಾಂ।
ನಿಖಿಲ ಭುವನ ಪದ್ಮ ಕ್ಲೇಶ ನಿದ್ರಾಪನುತ್ಯೈ ್ರ ದಿನಕರ ಮನಪಾಯಂ
ದೇವಕೀ ಪೂರ್ವಸಂಧ್ಯಾ ॥೯೭॥

ಪಾಪಗಳನ್ನು ನಿವಾರಿಸುವ ದೇಶಗಳಲ್ಲಿ ಪುಣ್ಯಶ್ಲೋಕರಾದ ಮಹಾನುಭಾವರ ಜನ್ಮ ದಿನಗಳನ್ನು ಜಯಂತಿ ಎಂದು ಆಚರಿಸುತ್ತಾರೆ. ಶ್ರೀಕೃಷ್ಣನು ಜನಿಸಿದ ಶ್ರೇಷ್ಠ ದಿನದಲ್ಲಿ ಚಂದ್ರ, ಅಂಗಾರಕ, ಬುಧ, ಗುರು, ಶನಿ ಎಂಬ ಐದು ಗ್ರಹಗಳು ಉಚ್ಛವಾಗಿದ್ದು ಚಂದ್ರೋದಯದ ಸಾತ್ವಿಕ ವೇಳೆಯಲ್ಲಿ ವೃಷಭ ಲಗ್ನದಲ್ಲಿ ದೇವಕೀ ದೇವಿಯ ಪುಣ್ಯ ಗರ್ಭದಲ್ಲಿ ಅಚ್ಯುತನೆಂಬ ಸೂರ್ಯನು ಜಗತ್ತಿನ ಕಷ್ಟಗಳನ್ನೆಲ್ಲಾ ಹೋಗಲಾಡಿಸಲು ಪೂರ್ವ ದಲ್ಲಿ ಉದಯಿಸುವಂತೆ ಸಹಸ್ರ ತಾವರೆಗಳು ಒಟ್ಟಿಗೆ ಅರಳುವಂತೆ ಆವಿರ್ಭವಿಸಿದನು. ಆ ಕೃಷ್ಣನ ಜನ್ಮಕಾಲವು ಅಷ್ಟು ಪುಣ್ಯಕರವಾಗಿತ್ತು. ಕೃಷ್ಣನ ಉದಯದಿಂದ ಜಗತ್ತಿನ ಕಷ್ಟಗಳೆಲ್ಲವೂ ನಿವಾರಣೆಯಾದವು. (ದೇವಕೀ ಪೂರ್ವ ಸಂಧ್ಯಾಯಾಂ ಆವಿರ್ಭೂತಂ ಮಹಾತ್ಮನಃ ಎಂಬುದಾಗಿ ವಿಷ್ಣುಪುರಾಣ ಶ್ಲೋಕವಿದೆ.)

ಶ್ರೀರಾಮಾವತಾರ ಸಂದರ್ಭದಲ್ಲಿಯೂ ಸಹ ಐದು ಗ್ರಹಗಳು ಉಚ್ಛಸ್ಥಿತಿಯಲ್ಲಿದ್ದವೆಂದು ರಾಮಾಯಣದಲ್ಲಿಯೂ ಹೇಳಿದೆ. ಇಂತಹ ಲಗ್ನದಲ್ಲಿ ಜನಿಸುವವರು ಅವತಾರ ಪುರುಷ ರಾಗಿರುತ್ತಾರೆ.

ಅವತರತಿ ಮುಕುಂದೇ ಸಂಪದಾಂ ಮೇಕ ಕಂದೇ
ಸುರಭಿತ ಹರಿದಂತಾ ಸ್ವಾದು ಮಾಧ್ವಿಕದಿಗ್ಧಾಂ।
ಅಭಜತ ವಸುದೇವಾ ಸ್ಥಾನಮಾನಂದ ನಿಘ್ನೆ ರಮರ
ಮಿಥುನ ಹಸ್ತೈ ರಾಹಿತಾಂ ಪುಷ್ಪವೃಷ್ಟಿಂ ॥೯೮॥

ಎಲ್ಲಾ ಸಂಪತ್ತುಗಳಿಗೂ ಮೂಲ ಕಾರಣನಾಗಿ ಮೋಕ್ಷವನ್ನು ಅನುಗ್ರಹಿಸುವಂಥವನಾದ ಭಗವಂತನು ಶ್ರೀಕೃಷ್ಣನಾಗಿ ಅವತರಿಸುವ ಕಾಲದಲ್ಲಿ ಆಕಾಶದಲ್ಲಿ ದೇವ ದಂಪತಿಗಳೆಲ್ಲರೂ ಎಲ್ಲಾ ದಿಕ್ಕುಗಳಲ್ಲೂ ನರ್ತನ ಮಾಡಿ ಹರ್ಷೋದ್ಗಾರ ಮಾಡಿ ವಸುದೇವನ ಗೃಹದ ಮೇಲೆ ಪುಷ್ಪವರ್ಷವನ್ನು ಸುರಿಸಿದರು. ಶ್ರೀ ಕೃಷ್ಣಾವತಾರವನ್ನು ತ್ರೈಲೋಕ್ಯವೇ ಕೊಂಡಾಡಿತು.

ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಪರಿಪೂರ್ಣ ಅವತಾರವೆಂದು ಪರಿಗಣಿಸಲ್ಪಡುವುದು ಶ್ರೀಕೃಷ್ಣಾವತಾರವೇ. ಈ ಅವತಾರದಲ್ಲಿ ಅವನು ಮಾಡಿದ ಲೀಲೆಗಳು ಅತ್ಯದ್ಭುತವಾಗಿದ್ದು, ಎಲ್ಲರ ಮನಸ್ಸನ್ನೂ ಸಂತೋಷಪಡಿಸುವಂತಿದೆ. ಅಂತಹ ಅವತಾರ ಪುರುಷನು ಈಗ ದೇವಕಿಯ ಗರ್ಭದಲ್ಲಿ ಕಂಸನ ಸೆರೆಮನೆಯಲ್ಲಿ ಹುಟ್ಟಿದ್ದಾನೆ. ಲೋಕಕ್ಕೆ ಸಂತೋಷವನ್ನು ತನ್ನ ಅವತಾರದಿಂದ ನೀಡಿದ್ದಾನೆ.

'ಶ್ರೀಕೃಷ್ಣ ಪ್ರಾದುರ್ಭಾವ'ವೆಂಬ ದ್ವಿತೀಯ ಸರ್ಗ ಮುಗಿದುದು

ತೃತೀಯಃ ಸರ್ಗಃ -೩

ಶ್ರೀಕೃಷ್ಣನ ನಂದಗೃಹ ಪ್ರಾಪ್ತಿ



ಈ ಸರ್ಗದಲ್ಲಿ 68 ಶ್ಲೋಕಗಳಿವೆ. ಮುಖ್ಯವಾಗಿ ಇದರಲ್ಲಿ ಶ್ರೀಕೃಷ್ಣನು ಜನಿಸಿದ ನಂತರ ಮಥುರೆಯನ್ನು ಬಿಟ್ಟು ಗೋಕುಲಕ್ಕೆ ಬಂದು ನಂದಗೃಹ ಸೇರುವವರೆಗೆ ಇರುವ ಕಥಾ ಪ್ರಸಂಗಗಳನ್ನು ವಿವರಿಸಲಾಗಿದೆ. ಶ್ರೀಕೃಷ್ಣಾವತಾರದಲ್ಲಿ ಲೋಕದಲ್ಲಿ ನಡೆದ ಸಂಭ್ರಮ, ವಸುದೇವನು ಮಾಡಿದ ಶ್ರೀಕೃಷ್ಣನ ಸ್ತುತಿ, ಭಗವಂತನ ಆಣತಿಯಂತೆ ವಸುದೇವನು ಶ್ರೀಕೃಷ್ಣನನ್ನು ಎತ್ತಿಕೊಂಡು ಯಮುನೆಯ ದಡಕ್ಕೆ ಬಂದುದು, ಯಮುನೆಯು ದಾರಿ ಬಿಡುವುದು, ವಸುದೇವನು ಕೃಷ್ಣನನ್ನು ಗೋಕುಲದಲ್ಲಿ ಯಶೋದೆಯ ಮಡಿಲಲ್ಲಿ ಮಲಗಿಸಿ, ಅಲ್ಲಿ ಆಗತಾನೇ ಜನಿಸಿದ್ದ ಯೋಗಮಾಯೆಯನ್ನು ಎತ್ತಿಕೊಂಡು ಮತ್ತೆ ಕಾರಾಗೃಹವನ್ನು ಸೇರಿದುದು, ಕಂಸನ ರೋಷ, ಯೋಗಮಾಯೆಯನ್ನು ಕೊಲ್ಲಲು ಪ್ರಯತ್ನಿಸಿದುದು, ಕಂಸನಿಗೆ ಅವಳ ಶಾಪ, ಯಶೋದೆಯ ಆನಂದ ಇತ್ಯಾದಿ ಘಟನೆಗಳ ವಿವರಣೆ ಇದೆ. ಶ್ಲೋಕಗಳ ವಿಷಯಾನುಕ್ರಮಣಿಕೆ ಈ ಕೆಳಕಂಡಂತಿದೆ.

1-14 ಶ್ರೀಕೃಷ್ಣನ ಜನನಕ್ಕೆ ಸರ್ವಲೋಕ ಸಂತೋಷ
15-22 ವಸುದೇವ ಕೃತ ಶ್ರೀಕೃಷ್ಣ ಸ್ತುತಿ,
23-28 ಭಗವಂತನ ಆದೇಶ
29-34 ನಂದಗೋಕುಲ ಪ್ರಸ್ಥಾನ
35-39 ಯಮುನಾ ನದಿಯ ವರ್ಣನೆ
40-44 ವಸುದೇವನು ಯಮುನೆಯನ್ನು ದಾಟಿ ಗೋಕುಲವನ್ನು ಪ್ರವೇಶಿಸಿದುದು
45-47 ಯಶೋದೆಯ ಮಡಿಲಲ್ಲಿ ಶ್ರೀಕೃಷ್ಣನನ್ನು ಮಲಗಿಸಿ, ಅಲ್ಲಿದ್ದ ಹೆಣ್ಣು ಶಿಶುವನ್ನು ತೆಗೆದುಕೊಂಡು ವಾಪಸ್ ಕಾರಾಗೃಹ ಸೇರುವುದು.
48-54 ಯೋಗಮಾಯೆಯಿಂದ ಕಂಸನ ತಿರಸ್ಕಾರ ಮತ್ತು ಕಂಸನ ಕೋಪ
55-56 ವಸುದೇವ-ದೇವಕಿಯರ ಸೆರೆಮನೆ ವಾಸ ಬಿಡುಗಡೆ
57-59 ಕಂಸನ ದುರಾಲೋಚನೆಗಳು
60-68 ಯಶೋದೆ-ನಂದಗೋಪರ ಆನಂದ ಮತ್ತು ಗೋಕುಲದಲ್ಲಿ ಶ್ರೀಕೃಷ್ಣ-ಬಲರಾಮರ ಲೀಲೆಗಳು.

ತೃತೀಯಃ ಸರ್ಗಃ - ೩

ಶ್ರೀಕೃಷ್ಣನ ನಂದಗೃಹ ಪ್ರಾಪ್ತಿ

ಅಥ ಜಗಂತಿ ಬಭೂವು ರನಾವಿಲಾನ್ಯ ತಿಮಿರಾ ಹರಿತಃ ಪ್ರಚಕಾಶಿರೇ।
ಅಭಜದೇವ ನಿಶಾ ದಿವಸಶ್ರಿಯಂ ಜನನ ಭಾಜಿನಿ ದೇವ ದಿವಾಕರೇ ॥೧॥

ಸರ್ವೇಶ್ವರನಾದ ಸೂರ್ಯನು ಉದಯಿಸಿದ ಸಮಯದಲ್ಲಿ ಜಗತ್ತೆಲ್ಲವೂ ಕಾಂತಿಯಿಂದ ಬೆಳಗುತ್ತದೆ. ದಿಕ್ಕುಗಳು ಕತ್ತಲೆಯನ್ನು ಕಳೆದುಕೊಂಡು ಪ್ರಕಾಶಿಸುತ್ತವೆ. ರಾತ್ರಿಯೇ ಬೆಳಗಾಗುತ್ತದೆ. ಅದೇ ರೀತಿ ಭಗವಂತನು ಅವತಾರ ಮಾಡಿದಾಗ ಅಜ್ಞಾನವೆಂಬ ಕತ್ತಲು ಕಳೆದು ಜ್ಞಾನವೆಂಬ ಬೆಳಕು ಜ್ಞಾನಿಗಳ ಹೃದಯದಲ್ಲಿ ಮೂಡುತ್ತದೆ.

ಭಗವದವತಾರವಾದಾಗ ಆಗುವ ಒಳ್ಳೆಯ ಸೂಚನೆಗಳನ್ನು ತಿಳಿಸಲಾಗಿದೆ. ಭಗವಂತನನ್ನು ಸೂರ್ಯನಿಗೆ ಹೋಲಿಸಿದ್ದಾರೆ. ಸೂರ್ಯನು ಉದಯಿಸಿದಾಗ ಯಾವ ರೀತಿ ಕತ್ತಲೆಯು ನೀಗುವುದೋ ಅದೇ ರೀತಿ ಶ್ರೀಕೃಷ್ಣನು ಉದಯಿಸಿದಾಗ, ಈ ಲೋಕದ ಮನುಜರೆಲ್ಲರ ಅಜ್ಞಾನವೆಂಬ ಕತ್ತಲೆಯು ನೀಗಿ ಜ್ಞಾನಪ್ರಾಪ್ತಿಯಾಗುತ್ತದೆ. ಭಗವಂತನ ಮುಂದೆ ಸಮಸ್ತ ಅಜ್ಞಾನವನ್ನೂ ನೀಗುವ ಭಗವದ್ಗೀತೆಯನ್ನು ಉಪದೇಶಿಸುವನೆಂಬ ಸೂಚನೆಯನ್ನು ಕವಿಗಳು ಈಗಲೇ ನೀಡಿದ್ದಾರೆ.

ನನೃತು ರಪ್ಸರಸೋ ದಿವಿ ನಂದಿತಾಃ ಕಿಮಪಿ ಗೀತಮಗೀಯತ ಕಿನ್ನರೈಃ।
ಶ್ರುತಿ ಸುಖೈಃ ಸಮತೋಷಯತ ಸ್ವನೈಃ ರಮರದುಂಧುಭಿಃರಾನಕದುಂಧುಭಿಂ॥೨॥

ಸ್ವರ್ಗದಲ್ಲಿ ಅಪ್ಸರೆಯನ್ನು ಆಟವನ್ನು ಆಡಿದರು. ಗಾನವನ್ನು ಮಾಡುವ ಕಿನ್ನರರು ಅದ್ಭುತವಾದ ಗೀತಗಳನ್ನು ಹೇಳಿದರು. ಆಕಾಶದಲ್ಲಿ ಮೊಳಗಿದ ವಾದ್ಯ ವಿಶೇಷಗಳು ಆನಕದುಂದುಭಿ ಎಂದು ಹೆಸರು ಪಡೆದ ವಸುದೇವನಿಗೆ ಸಂತೋಷವನ್ನು ಉಂಟುಮಾಡಿದವು.

ಶ್ರೀಕೃಷ್ಣ ಜನ್ಮೋತ್ಸವದ ಸಂಭ್ರಮವನ್ನು ವರ್ಣಿಸಿದ್ದಾರೆ. ಭಾಗವತದಲ್ಲಿ ಇದನ್ನು ವಿಸ್ತಾರವಾಗಿ ವರ್ಣಿಸಿದ್ದಾರೆ.

ದಶಸು ತತ್ರ ದಿಶಾಸ್ವ ಶರೀರಿಣೆ ಜಯಜಯೇತಿ ಬಭೂವ ಸರಸ್ವತಿ।
ಅಜಿತಮೇಕ ಮಗೋಚರಯತ್ ಸ್ವಯಂ ಸ್ವರಸ ವೃತ್ತಿ ರಸಾವಸುರಾಂತಕಂ ॥೩॥

ಹತ್ತು ದಿಕ್ಕುಗಳಲ್ಲಿ 'ಜಯ ಜಯ' ಎಂಬ ಅಶರೀರ ವಾಕ್ಕು ಉಂಟಾಯಿತು. ಇದು ಯಾರ ಬಗ್ಗೆ ಎಂದರೆ, ಅವತಾರ ಮಾಡುವ ಭಗವಂತನನ್ನು ಬರಮಾಡಿಕೊಂಡು, ಅವನು

ಮುಂದೆ ಕೊಲ್ಲುವ ಅಸುರರ ನಾಶವನ್ನು ಸೂಚಿಸುವ ಜಯಘೋಷವಾಗಿತ್ತು. ಅವನನ್ನು ಬೇರಾರೂ ಜಯಿಸಲು ಸಾಧ್ಯವಿಲ್ಲದ ಕಾರಣ ಅವನಿಗೆ 'ಅಜಿತ'ನೆಂಬ ಹೆಸರಾಯಿತು. ಎಲ್ಲಾ ಜಯವು ಇವನಿಗೆ ಪುಷ್ಕಳವಾಗಿ ಲಭಿಸುವುದು ಎಂಬುದರ ಸೂಚಕವಾಗಿತ್ತು.

ಈ ಶ್ಲೋಕದಲ್ಲಿಯೂ ಅದನ್ನೇ ಮುಂದುವರೆಸವಾಗಿದೆ. ಶ್ರೀವಿಷ್ಣುಸಹಸ್ರ ನಾಮದಲ್ಲಿ 'ಅಜಿತ' ಎಂಬ ನಾಮವಿದೆ. ಶ್ರೀ ಶಂಕರಾಚಾರ್ಯರು ವ್ಯಾಖ್ಯಾನದಲ್ಲಿ 'ನಕೇನ್ಯಾವತಾರೇಷು ಜಿತ ಅಜಿತಃ' ಎಂದು ಹೇಳಿದ್ದಾರೆ. ಯಾವ ಅವತಾರದಲ್ಲೂ ಯಾರಿಂದಲೂ ಪರಾಜಿತನಾಗದವನು ಎಂದರ್ಥ.

''ಯತೋ ಕೃಷ್ಣಃ ಜಯಸ್ತತೋ ಜಯಃ'' ಎಂಬಂತೆ ಎಲ್ಲಿ ಶ್ರೀಕೃಷ್ಣನ ನಾಮ ಸ್ಮರಣೆ ಇರುತ್ತದೋ, ಎಲ್ಲಿ ಶ್ರೀಕೃಷ್ಣನ ಕಥಾ ಶ್ರವಣ ಇರುತ್ತದೋ ಅಲ್ಲೆಲ್ಲಾ ಜಯವು ಶತಸ್ಸಿದ್ಧ. ಅದನ್ನೇ ಗೀತೆಯ ಕೊನೆಯ ಶ್ಲೋಕದಲ್ಲೂ ಇದನ್ನೇ ಹೇಳಲಾಗಿದೆ. ಅಂತಹ ಶ್ರೀಕೃಷ್ಣನ ಜನ್ಮವು ಎಲ್ಲರಿಗೂ ಆನಂದದಾಯಕವಾಗಿತ್ತು.

ಅನತಿ ವೇಲ ಸಮೀರಣ ಚೋದಿತೈಃ ಶಿಶಿರಶೀಕರಶೀಭರಿತಾಂಬರೈಃ।
ಜಲಧರೈರಭಿತೋ ದಿವಿ ದಧ್ವನೆ ಸುರಗಜೈರಿವ ಸೂಚಿತ ಮಂಗಲೈಃ ॥೪॥

ಮಂದ ಮಾರುತದಿಂದ ಕಲಕಲ್ಪಟ್ಟ ಮೇಘಗಳು ನೀರನ್ನು ಸುರಿಸಿ ಗಾಳಿಯು ಬೀಸುವಾಗ, ಕೋಲಾಹಲ ಮಾಡುತ್ತಾ ಘೀಂಕಾರ ಶಬ್ದವನ್ನು ಮಾಡುವ ದಿಗ್ಗಜಗಳು ಮಂಗಳಕರವಾದ ಧ್ವನಿಯನ್ನು ಮಾಡುವಂತಿತ್ತು.

ಶ್ರೀಕೃಷ್ಣನ ಜನನ ಕಾಲದಲ್ಲಿ ಧಾರಾಕಾರವಾಗಿ ಮಳೆಯು ಸುರಿಯುತ್ತಿತ್ತು. ಮಳೆಯು ಬರುವುದು ಶುಭ ಸೂಚಕ. ಆ ಮಳೆಯ ಸುರಿಯುವಿಕೆಯನ್ನು ನೋಡುತ್ತಾ ದಿಗ್ಗಜಗಳು ಆನಂದದಿಂದ ನರ್ತನ ಮಾಡುತ್ತಾ ಘೀಕಾರ ಮಾಡುವಾಗ ಅವುಗಳ ಧ್ವನಿಯು ಸ್ವಾಮಿಗೆ ಮಂಗಳವನ್ನು ಹಾಡುವಂತಿತ್ತು.

ವವುರಥೋ ಮರುತ ಸ್ತ್ರಿದಶಾಂಗ ನಾವದನ ಸೌರಭ ಸಾರಭೃತಃ ಶುಭಾಃ।
ಮುದಿತ ನಿರ್ಜರ ಮುಕ್ತಸುರ ದ್ರುಮ ಪ್ರಸವ ವೃಷ್ಠಿ ಮಧುದ್ರವ ಮೇಧುರಾಃ ॥೫॥

ಆನಂದ ಹೊಂದಿದ ಅಮರರುಗಳು, ವೃಕ್ಷಗಳಲ್ಲಿ ಸುರಿಯುವ ಜೇನನ್ನು ಸವಿಯಲು ತುಂಬುವ ದುಂಬಿಗಳಂತೆ ದೇವತಾಸ್ತ್ರೀಯರೊಡನೆ ಆನಂದದಿಂದ ಕಾಲ ಕಳೆಯುವಾಗ, ಹಿತವಾದ ಗಾಳಿಯು ಬೀಸಿ ಎಲ್ಲರೂ ಸಂತೋಷದಿಂದಿದ್ದರು.

ಶ್ರೀಕೃಷ್ಣನ ಅವತಾರದ ಸಂದರ್ಭವು ದೇವತೆಗಳಾದಿಯಾಗಿ ಎಲ್ಲರಿಗೂ ಸಂತೋಷವನ್ನು ತಂದಿತ್ತು. ಎಲ್ಲ ದೇವತೆಗಳು ದೇವತಾ ಸ್ತ್ರೀಯರೊಡನೆ ಇನ್ನು ಮುಂದೆ ತಮ್ಮ ಇಚ್ಛೆಗಳು (ಭೂ ಭಾರ ಹರಣದ ಕಾರ್ಯ) ಸುಗಮವಾಗಿ ನೆರವೇರುವುದೆಂದು ತಿಳಿದು ಆನಂದದಿಂದ ವಿಹರಿಸಿದರು.

ಮಧುರಿಪುರವತಾರ ಮಹೋತ್ಸವೇ ಮುಮುದಿರೆ ಮಧುರಾಪುರ ದೇವತಾಃ।
ಯದಭಿಗಂತರಿ ಭಕ್ತಜನೇವರಂ ದಧುರ ಶೇಷ ಮತಂದ್ರಿತ ಚೇತಸಃ ॥೬॥

ಭಗವಂತನ ಅವತಾರದಲ್ಲಿ ಮಧುರೆಯಲ್ಲಿದ್ದ ದೇವತಾ ಮೂರ್ತಿಗಳೆಲ್ಲವೂ ಅತ್ಯಂತ ಆನಂದವನ್ನು ಹೊಂದಿದವು. ತಮ್ಮನ್ನು ಆರಾಧಿಸುವ ಭಕ್ತರುಗಳಿಗೆಲ್ಲಾ ಅವರುಗಳು ಬಯಸುವ ಎಲ್ಲಾ ಅಪೇಕ್ಷೆಗಳನ್ನು ಆ ದೇವತೆಗಳು ಈಡೇರಿಸಿದವು.

ಶ್ರೀ ಕೃಷ್ಣನ ಜನ್ಮವು ಮಧುರೆಯಲ್ಲಿದ್ದ ಜನರಿಗೆ ಅಪಾರ ಸಂತೋಷವನ್ನು ತಂದಿತು. ಅವರ ಆಶೋತ್ತರಗಳೆಲ್ಲವನ್ನೂ ಅವರುಗಳು ಪೂಜಿಸುತ್ತಿದ್ದ ದೇವತೆಗಳು ಈಡೇರಿಸಿದ್ದರಿಂದ ಸಹಜವಾಗಿಯೇ ಪ್ರಜೆಗಳು ಆನಂದ ತುಂದಿಲರಾದರು. ಶ್ರೀ ಕೃಷ್ಣಾವತಾರವೆಂಬುದು ಲೋಕವೆಲ್ಲವೂ ಕೊಂಡಾಡುವ ಉತ್ಸವವಾಯಿತು.

ಅವದಧಾನಧಿಯೋ ಮುನಯಸ್ತದಾ ಯದನಧೀತ ಮಧೀತವದಂಜಸಾ।
ನಿಗಮ ಜಾತಮಶೇಷಮವೇಕ್ಷ್ಯ ತನ್ನಿರವಿಶನ್ನಿವ ಮುಕ್ತಿಮಯಿಂ ದಶಾಂ ॥೭॥

ಭಗವಂತನು ಅವತರಿಸಿದ ಸಮಯ ಮುನಿವರರುಗಳು ತಮ್ಮ ಮುಂದೆ ತಾವು ತಿಳಿಯದ ವೇದಾರ್ಥಗಳನ್ನೆಲ್ಲಾ ತಿಳಿದವರಾಗಿ, ಬುದ್ಧಿಗೆ ಮಿಗಿಲಾದ ಶಕ್ತಿಯನ್ನು ಪಡೆದು ವೇದವನ್ನೆಲ್ಲಾ ಅರಿತು ಮೋಕ್ಷಾನಂದವನ್ನು ಹೊಂದಿದಂತೆ ಆದರು.

ಮುನಿವರರುಗಳು ಅನೇಕ ಬಾರಿ ಪಠನ ಮಾಡಿಯೂ ಅರಿಯದಿದ್ದ ವೇದಾರ್ಥಗಳನ್ನೆಲ್ಲಾ ಕೃಷ್ಣಾವತಾರ ಸಮಯದಲ್ಲಿ ಅರಿತರು ಎಂದ ಮೇಲೆ, ಆ ಸರ್ವೇಶ್ವರನ ಅವತಾರ ಕಾಲವು ಎಂತಹ ಮಹತ್ವದ್ದೆಂಬುದು ತಿಳಿಯುತ್ತದೆ. ಜ್ಞಾನಿಗಳಿಗೂ ಗೋಚರನಾಗದ ಆ ಭಗವಂತನು ಆ ದಿನ ಎಲ್ಲರ ಹೃದಯದಲ್ಲೂ ಸ್ಫುರಿಸಿ ಆನಂದವನ್ನುಂಟುಮಾಡಿದನು.

ಪ್ರಸಧನಂ ಶರದಾಗಮ ಸಂಭವಂ ನಭಸಿ ಮಾಸಿ ನದೀಭಿರುಪಾದಧೆ।
ಮಹಿತ ಯೋಗವಿದಾಂ ಮತಿಭಿಃ ಸಮಂ ಶ್ರುತಿಭಿರಗ್ಯನು ಪಪ್ಲವನೀತಿಭಿಃ ॥೮॥

ಅವಾಗ ವರ್ಷಾಕಾಲದಲ್ಲಿ ಮೊದಲ ಮಾಸವಾದ ಶ್ರಾವಣ ಮಾಸದಲ್ಲೂ ಶರತ್ಕಾಲದಲ್ಲಿ ಹೊಂದುವ ಮೇಲ್ಮೈಯನ್ನು ಪ್ರಕೃತಿಯು ಹೊಂದಿತು. ಉತ್ತಮ ಜ್ಞಾನವನ್ನು ಹೊಂದುವ ಬುದ್ಧಿಯು ನ್ಯಾಯ ಮಿಮಾಂಸ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದು ವೇದಗಳೆಲ್ಲವೂ ಸ್ಫುಟವಾಗಿ ಗೋಚರಿಸಿದವು.

ಪ್ರಕೃತಿಯು ಸುಂದರ ಸ್ತ್ರೀಯಂತೆ ಕಂಗೊಳಿಸಿ, ಎಲ್ಲರಿಗೂ ಮನಹ್ಲಾದವನ್ನುಂಟುಮಾಡಿತು. ವರ್ಷಾಕಾಲದ (ಮಳೆಗಾಲದ) ಮೊದಲ ಮಾಸ ಶ್ರಾವಣ ಮಾಸ. ಶ್ರೀಕೃಷ್ಣನು ಅವತರಿಸಿದ್ದು ಶ್ರಾವಣ ಮಾಸದಲ್ಲಿ. ಹೀಗಾಗಿ ಶ್ರಾವಣವು ಮಾಸವು ಸರ್ವಶ್ರೇಷ್ಠ ಮಾಸವಾಯಿತು ಎಂದು ಆಚಾರ್ಯರು ವರ್ಣಿಸಿದ್ದಾರೆ.

ನಿಖಿಲ ಚೇತನ ಮಾನಸ ನಿಃ ಸೃತಾಃ ಕಲುಷತಾಃ ಸಮುದೇತ್ಯ ಕಿಲಕ್ಷಣಾತ್ ।
ವಿವಿಶುರಂಭ ಇವ ಸ್ವಯಮಾಪಗಾಃ ಜಲನಿಧೇರಿವ ಭೋಜಪತೇರ್ ಮನಃ ॥೯॥

ಎಲ್ಲಾ ಜೀವರುಗಳ ಮನಸ್ಸಿನಲ್ಲೂ ಇದ್ದ ಕಲ್ಮಷಗಳು ಸಮುದ್ರವನ್ನು ಸೇರುವ ಎಲ್ಲಾ ನದಿಗಳ ಕಶ್ಮಲದಂತೆ, ಭೋಜಪತಿಯಾದ ಕಂಸನ ಮನಸ್ಸನ್ನು ಹೊಕ್ಕವು. (ಕಂಸನ ಮತ್ತು ಅವನ ಅನುಚರರ ಮನಸ್ಸೆಲ್ಲವೂ ಕಲಕಿ ಹೋದವು).

ಶ್ರೀಕೃಷ್ಣನ ಜನನವಾದಾಗ, ಕಂಸನ ಮನಸ್ಸಿನಲ್ಲಿ ಮಹತ್ತಾದ ಭಯ ಉಂಟಾಯಿತು. ಅಶರೀರ ವಾಣಿಯು ಎಲ್ಲಿ ತನ್ನ ವಿಷಯದಲ್ಲಿ ಸತ್ಯ ಉಂಟಾಗುವುದೋ ಎಂಬ ಭಯ ಆವರಿಸಿ, ಯಾವ ರೀತಿ ನದಿಗಳೆಲ್ಲವೂ ಸಮುದ್ರವನ್ನು ಕೊನೆಯಲ್ಲಿ ಹೋಗಿ ಸೇರುವುವೋ ಅದೇ ರೀತಿ ದುಷ್ಟರ ಮನಸ್ಸಿನಲ್ಲಿ ಇರುವ ಕಲ್ಮಷವೆಲ್ಲವೂ ಕಂಸನ ಮನಸ್ಸನ್ನು ಹೊಕ್ಕಂತಾಗಿ ಅವನನ್ನು ಸಂಪೂರ್ಣವಾಗಿ ಅಲುಗಾಡಿಸಿ ಬಿಟ್ಟಿತು.

ಅಸುರ ವೀರ ಗೃಹಾಣಿ ಪೃಥಗ್ವಿಧೈಃ ರಶುಭ ಶಂಶಿಭಿರಾನಶಿರೆ ಮುಹುಃ।
ಅಮರರಾಜ ಪುರೇಷು ಜಜೃಂಭಿರೆ ಶುಭ ನಿಮಿತ್ತ ಶತಾನಿ ಪುನಃ ಪುನಃ ॥೧೦॥

ಅಸುರ ವೀರರುಗಳ ಮನೆಗಳಲ್ಲಿ ಅಶುಭ ಸೂಚನೆಗಳು, ದುರ್ನಿಮಿತ್ತಗಳುಂಟಾದವು. ದಿಕ್ಪಾಲಕರೂ, ಇಂದ್ರಾದಿ ದೇವತೆಗಳೆಲ್ಲರೂ ತಮ್ಮತಮ್ಮ ನಗರಗಳಲ್ಲಿ ಶುಭ ಶಕುನಗಳನ್ನು ಕಂಡರು.

ಶ್ರೀಕೃಷ್ಣ ಜನನವು ರಾಕ್ಷಸರು, ಅಸುರರೆಲ್ಲರಿಗೂ ಅಶುಭ ಸೂಚನೆಗಳನ್ನುಂಟು ಮಾಡಿತು. ಇದನ್ನು 'ನಾರಾಯಣೀಯಂ'ನಲ್ಲಿ ಹೀಗೆ ವರ್ಣಿಸಿದ್ದಾರೆ.

ಆಕಾಶು ಶೀತಲತರಾಸು ಪಯೋದ ತೋಯೈ ರಾಶಾ ಸಿತಾಪ್ತಿ ವಿವರ್ಶೇಷು ಚ ಸಜ್ಜನೇಷು।
ನೈಶಾಕಾರೋದಯ ವಿಧೌ ನಿಶಿ ಮಧ್ಯಮಾಯಾಂ ಕ್ಲೇಶಾಪಹ ಸ್ತ್ರಿಜಗತಾಂ ತ್ವಮಿಹಾವಿರಾಸಿ॥

ಮೇಘ-ಜಲದಿಂದಾಗಿ ಪೃಥ್ವಿಯ ಸಮಸ್ತ ದಿಕ್ಕುಗಳೂ ಶೀತಲವಾಗುತ್ತಿರಲು ಸಜ್ಜನರು ತಮ್ಮ ಅಭೀಷ್ಟಗಳು ಪೂರ್ತಿಯಾಗಲು ಆನಂದತುಂದಿಲರಾಗಿರಲು ಮಧ್ಯರಾತ್ರಿಯಲ್ಲಿ ಚಂದ್ರನು ಉದಯಿಸುವ ಸಮಯದಲ್ಲಿ ತ್ರಿಲೋಕಗಳ ಕ್ಲೇಶವನ್ನೂ ದೂರ ಮಾಡುವ ನೀನು ಈ ಭೂಮಿಯ ಮೇಲೆ ಅವತರಿಸಿದೆ.

ಕೃಷ್ಣೋತ್ಸವದ ಸಂದರ್ಭದಲ್ಲಿ ಸಜ್ಜನರು ತಮ್ಮ ಅಭೀಷ್ಟಗಳು ಪೂರ್ತಿಯಾಗುವ ಸೂಚನೆ ಕಂಡು ಆನಂದ ತುಂದಿಲರಾದರು.

ಚರಮ ತತ್ವ ಋಣಾದಿವ ದೇವಕಿ ಪತಿರಮುಚ್ಯತ ಶೃಂಖಲತಃ ಸ್ಥಿರಾತ್।
ನಿಖಿಲ ಬಂಧ ನಿವರ್ತಕ ಸಂನಿಧೌ ವಿಗಲನಂ ನಿಗಲಸ್ಯ ಕಿಮದ್ಭುತಂ ॥೧೧॥

ಈ ಭುವಿಯಲ್ಲಿ ಹುಟ್ಟುವ ಪ್ರತಿ ಮಾನವನೂ ಮಾಡಲೇಬೇಕಾದ ಅಗತ್ಯ ಕರ್ತವ್ಯಗಳು ಮೂರು (1) ದೇವ ಋಣ (2) ಋಷಿ ಋಣ (3) ಪಿತೃ ಋಣ. ಮೂರನೆಯ ಋಣವು

ಮಕ್ಕಳು ಹುಟ್ಟುವಾಗ ತಂದೆಗೆ ತೀರುತ್ತದೆ. ವಸುದೇವನಿಗೆ ಈ ಋಣವು ಈಗ ಶ್ರೀಕೃಷ್ಣನು ಹುಟ್ಟಿದುದರಿಂದ ತೀರಿತು. ಈ ಋಣವು ತೀರಿದುದಲ್ಲದೆ ತನ್ನನ್ನು ಬಂಧಿಸಿದ್ದ ಶೃಂಖಲೆಗಳಿಂದಲೂ ಬಿಡುಗಡೆ ಹೊಂದಿದನು.

ಎಲ್ಲ ಬಂಧನಗಳನ್ನೂ ನೀಗಿಸುವ ಭಗವಂತನು ಅವರನ್ನು ಬಂಧಿಸಿರುವ ಕಬ್ಬಿಣದ ಸಂಕೋಲೆಗಳಿಂದ ಬಿಡಿಸದೆ ಇರುವನೆ ? **'ಜಾಯಮಾನೋ ಹಿ ಪುರುಷಃ ತ್ರಿಭಿರ್ ಋಣವಜಾಯತೆ'** ಎಂಬ ಶ್ರುತಿ ವಾಕ್ಯವುಂಟು. ಅದರಲ್ಲಿ ಪಿತೃ ಋಣವು ಸತ್ಸಂತಾನವನ್ನು ಪಡೆಯುವುದರಿಂದ ತೀರುತ್ತದೆ. ವಸುದೇವನಿಗೆ ಶ್ರೀಕೃಷ್ಣನು ಜನಿಸಿದುದರಿಂದ ಈ ಪಿತೃ ಋಣವು ತೀರಿತು. ಅಷ್ಟೇ ಅಲ್ಲದೆ ಅವನ ವಸುದೇವನ ಕೈಗೆ ಹಾಕಿದ್ದ ಕಬ್ಬಿಣದ ಬೇಡಿಗಳೂ ಕಳಚಿಕೊಂಡವು. ಕಂಸನು ಆ ದಿವ್ಯ ದಂಪತಿಗಳನ್ನು ಸೆರೆಯಿಂದ ಬಿಡಿಸಿದನು.

ಉದಿತಮಾತ್ರನಿ ದೇವಕ ಸಂಭವಾ ದನುಜ ಭೇದನ ಮಂಖಗತೌ ದಧೌ।
ಕಮಪಿ ಕಾಂಚನ ಭೂಭೃದ ದಧಿತ್ಯಕಾ ಹರಿಹಯೋಪಲ ಶೃಂಗಮಿವಾದ್ಭುತಂ ॥೧೨॥

ತನ್ನಲ್ಲಿ ತೋರುವ ದೈವವನ್ನು ದೇವಕಿ ದೇವಿಯು ತನ್ನ ಮಡಿಲಿನಲ್ಲಿ ಇಟ್ಟುಕೊಂಡು ಬೆಳಗುವವಳಾಗಿ ಇಂದ್ರನೀಲ ಕಲ್ಲಿನಿಂದ ಶೋಭಿಸುವ ಮೇರು ಪರ್ವತದಂತೆ ಪ್ರಕಾಶಿಸುತ್ತಿದ್ದಳು.

ಶ್ರೀಕೃಷ್ಣನನ್ನು ಹೆತ್ತ ದೇವಕಿಯು ಅತ್ಯಂತ ಶೋಭೆಯಿಂದ ಪ್ರಕಾಶಿಸುತ್ತಿದ್ದಳು. ಎಷ್ಟಾದರೂ ಸಾಕ್ಷಾತ್ ಪರಮ ಪುರುಷನಲ್ಲವೇ ಅವತರಿಸಿರುವುದು ! ಭಗವಂತನು ಯಾವ ರೀತಿ ದಿವ್ಯ ತೇಜಸ್ಸಿನಿಂದ ಬೆಳಗುತ್ತಾನೋ ಅದೇ ರೀತಿ ಅವನಿಗೆ ಜನ್ಮ ನೀಡಿದ ತಾಯಿಯೂ ತೇಜಸ್ಸಿನಿಂದ ಕಂಗೊಳಿಸುತ್ತಿದ್ದಳು. ಪ್ರಸವದ ಆಯಾಸವನ್ನು ಮೀರಿ ಆ ಅದ್ಭುತ ಶಿಶುವನ್ನು ನೋಡಿ ನೋಡಿ ದೇವಕಿಯು ಆನಂದಪಡುತ್ತಿದ್ದಳು.

ವಿಧೃತ ಶಂಖು ಸ್ವರಥಾಂಗ ಗದಾಂಭುಜಃ ಶಬಲಿತಃ ಶುಭಯಾ ವನಮಾಲಯಾ।
ಪಿತುರಸೂತ ಮುದಂ ಪೃಥಕಸ್ತದಾ ಜಲಧಿ ಡಿಂಭನಿಭೋ ಜನನೀ ಧೃತಃ ॥೧೩॥

ತಾಯಿಯಾದ ಯಶೋದೆಯಿಂದ ಮಡಿಲಿನಲ್ಲಿ ಧರಿಸಲ್ಪಟ್ಟ ಸಮುದ್ರದ ಕಣ್ಮಣಿ ಎನಿಸಿದ ಮಗುವಾದುದು ತಂದೆಗೆ ಭಾರೀ ಸಮುದ್ರದಂತೆ ಕಂಡು ಅತ್ಯಂತ ಹರ್ಷವನ್ನುಂಟು ಮಾಡಿತು.

ಸಮುದ್ರಕ್ಕೂ ಶಿಶುವಿಗೂ ಅನೇಕ ಸಾಮ್ಯಗಳುಂಟು. ಶಂಖ, ರಥಾಂಗ, ಗದಾಂಭುಜಗಳನ್ನು ಧರಿಸಿರುವುದು ವನಮಾಲೆಯಿಂದ ಶೋಭಿಸುವುದು ಎರಡಕ್ಕೂ ಸಮಾನವಾಗಿದೆ. ಭಗವಂತನಾದ ಶ್ರೀಕೃಷ್ಣನನ್ನು ಸಮುದ್ರಕ್ಕೆ ಹೋಲಿಸಿದ್ದಾರೆ. ಸಮುದ್ರದಲ್ಲಿಯೇ ಶಂಖ ಹುಟ್ಟುತ್ತದೆ. ವನಮಾಲೆಯೂ ಸಹ ಸಮುದ್ರದಿಂದಲೇ ಬಂದಿತು. ಈ ಚಿಹ್ನೆಗಳನ್ನೆಲ್ಲಾ ಧರಿಸಿಯೇ ಶ್ರೀಕೃಷ್ಣನು ಅವತರಿಸಿದ್ದಾನೆ. ಆ ದೇವಕಿಯ ಮಡಿಲನ್ನು ತುಂಬಿರುವ ಶ್ರೀಕೃಷ್ಣನು ಸಮುದ್ರಕ್ಕೆ ಸಮಾನವಾಗಿದ್ದಾನೆ.

ಪಿತರಮಬ್ಜಭುವಾಮನಪಾಯಿನಂ ಪ್ರಿಯತಮಾಂಕಗತಂ ಪರಿಪಶ್ಯತಾ।
ಸ ವಿಭುರಾನಕದುಂದುಭಿನಾ ಮಹಾನ್ ಅವಿತಥೈಃ ಸ್ವಗುಣೈರಭಿತುಷ್ಟುವೇ ॥೧೪॥

ಹಲವು ಬ್ರಹ್ಮರುಗಳಿಗೆ ಪಿತಾವಾದ ಸರ್ವೇಶ್ವರನನ್ನು ತನ್ನ ಮಡದಿಯ ಮಡಿಲಲ್ಲಿ ಕಂಡು ವಸುದೇವನು ಸರ್ವ ವೈಭವವನ್ನು ಹೊಂದಿದ ಹೆಮ್ಮೆಯೊಡನೆ ಇದ್ದ ಆ ಭಗವಂತನನ್ನು ಅವನಿಗೆ ಸೀಮಿತವಾದ ಅನೇಕ ಗುಣವಿಶೇಷಗಳನ್ನು ಕಂಡು ಅತ್ಯಂತ ಹರ್ಷಚಿತ್ತನಾಗಿ, ಭಗವಂತನಿಗೆ ಅಸಾದಾರಣ ಗುಣ ವಿಶೇಷಗಳಾದ ಜ್ಞಾನ, ವೀರ್ಯ, ಬಲ, ಐಶ್ವರ್ಯ, ತೇಜಸ್ಸು, ಶಕ್ತಿ (ಷಡ್ಗುಣಗಳು) ಇವುಗಳನ್ನು ಶ್ರೀಕೃಷ್ಣನಲ್ಲಿ ಕಂಡು ಅತೀ ಸಂತೋಷ ದಿಂದಿದ್ದನು.

ಪ್ರಣಿಪತಾಮಿ ಭವಂತ ಅನನ್ಯಧೀರಖಿಲಕಾರಣಮಾಶ್ರಿತ ತಾರಣಂ।
ಅನುಗಮಾದ ನಿದಂ ಪ್ರಥಮಾಗಿರಃ ಕಿಮಪಿ ಯತ್ತ್ವದಮೇಕಮಧೀಯತೇ ॥೧೫॥

ಬೇರೆ ಯಾವುದರಲ್ಲಿಯೂ ಆಸಕ್ತಿಯಿಲ್ಲದೆ, ನಮಸ್ಕಾರವೇ ಪುರುಷಾರ್ಥವೆಂದು ಕೊಂಡು, ಎಲ್ಲಾ ವಿಧವಾದ, ಎಲ್ಲಕ್ಕೂ ಕಾರಣನಾದ, ಆಶ್ರಿತರಿಗೆ ಮೋಕ್ಷವನ್ನು ಕೊಡುವ ನಿನಗೆ ನಮಸ್ಕರಿಸುತ್ತೇನೆ. 'ಈಗ ಹುಟ್ಟಿದನು' ಎಂಬುದಾಗಿ ಕಾಲವನ್ನು ನಿಗದಿ ಮಾಡಲಾಗದ, ಅನಾದಿಯಾದ ವೇದಗಳೆಲ್ಲವೂ ಸಾಂಗೋಪಾಂಗವಾಗಿ ಒಂದಾಗಿ ಸೇರಿ ಎಷ್ಟು ಸ್ತುತಿಸಿದರೂ ಸ್ತುತಿಸಲಾಗದ ಪರಮ ಪುರುಷನು ನೀನೆ. (ದಿವ್ಯ ಸ್ವರೂಪನೂ ನೀನೇ) ಎಂದು ವಸುದೇವನು ಸ್ತೋತ್ರ ಮಾ[illegible]ರಂಭಿಸುತ್ತಾನೆ.

ಭಗವಂತ[illegible] ಎಲ್ಲಕ್ಕೂ ಕಾರಣ. ಅಖಿಲ ಕಾರಣನೂ, ಸರ್ವ ಕಾರಣನೂ ಅವನೇ. ನಮಸ್ಕಾರ ಮಾಡಿದರೆ ಅದಕ್ಕೆ ಒಲಿಯುವ ಆ ದೇವನು ಕಾಲಾತೀತನಾದವನು. ಎಲ್ಲಾ ವೇದಗಳು ಒಟ್ಟಿಗೆ ಸೇರಿಯೂ ಸಹ ಅವನನ್ನು ಸಂಪೂರ್ಣವಾಗಿ ಸ್ತುತಿಸಲಾರವು. **'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ'** ಎಂದು ವೇದದಲ್ಲೇ ಹೇಳಿದೆ. (ಈ ಶ್ಲೋಕದಿಂದ ಮೊದಲ್ಗೊಂಡು ಕೆಲ ಶ್ಲೋಕಗಳಲ್ಲಿ ವಸುದೇವ ಕೃತ ಶ್ರೀಕೃಷ್ಣಸ್ತೋತ್ರವಿದೆ).

ವಿಷಮ ಕರ್ಮವಿಪಾಕ ಪರಂಪರಾ ವಿವಶ ವೃತ್ತಿಷು ದೇಹಿಷು ದುಸ್ತರಂ।
ಕರುಣಯಾ ತವ ದೇವ ಕಟಾಕ್ಷಿತಾಃ ಕತಿಚಿದೇವ ತರಂತಿ ಭವಾರ್ಣವಂ ॥೧೬॥

ಮೇಲೆ ಕೆಳಗೆ ಆಗ ಬಗೆಬಗೆಯಾದ ಲೋಕಗಳಲ್ಲಿ ಸುತ್ತಿ ಸುತ್ತಿ ಅನೇಕ ಜನ್ಮಗಳನ್ನು ಪಡೆಯುತ್ತಾರೆ ಜೀವಾತ್ಮರುಗಳು. ಅವರುಗಳಲ್ಲಿ ಕೆಲವರು ಮಾತ್ರ ನಿನ್ನ ಕಟಾಕ್ಷಕ್ಕೆ ಪಾತ್ರರಾಗಿ ಸಂಸಾರ ಸಮುದ್ರವನ್ನು ದಾಟುತ್ತಾರೆ.

'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂದು ಗೀತೆಯಲ್ಲಿ ಹೇಳಿರುವ ಹಾಗೆ ಸಾಮಾನ್ಯ ಜನರೂ ಅನೇಕ ಜನ್ಮಗಳನ್ನೆತ್ತುತ್ತಲೇ ಇರುತ್ತಾರೆ. ಆದರೆ ಯಾರು ನಿನ್ನನ್ನು ಆಶ್ರಯಿಸುತ್ತಾರೋ ಅವರು ನಿನ್ನ ಕೃಪಾ ಕಟಾಕ್ಷಕ್ಕೆ ಪಾತ್ರರಾಗಿ, ಮೋಕ್ಷ ಸಾಮ್ರಾಜ್ಯವನ್ನು ಹೊಂದುತ್ತಾರೆ.

ತ್ವದನುಭಾವ ಮಹೋದಧಿ ಶೀಕರೈ ರವಶಪಾತಿಭಿರಾಹಿತಶಕ್ತಯಃ।
ಅವಧಿ ಭೇಧವತೀಮುಪಭುಂಜತೆ ಸ್ವಪದ ಸಂಪದ ಮಬ್ಜಭವಾದಯಃ ॥೧೭॥

ಬ್ರಹ್ಮನೇ ಮೊದಲಾದವರು ತಮಗೆ ಏರ್ಪಟ್ಟ ತಮ್ಮ ತಮ್ಮ ಪದವಿಗಳಲ್ಲಿ ಸುಖವನ್ನು ಅನುಭವಿಸುತ್ತಾರೆ. ಆ ಉನ್ನತ ಪದವಿಗಳೆಲ್ಲವೂ ನಿನ್ನ ಪ್ರಭಾವದಿಂದಲೇ, ಸಮುದ್ರದ ಅಲೆಗಳು ಹೊಂದುವಂತೆ ಶಕ್ತಿಯನ್ನು ಹೊಂದುತ್ತಾರೆ. ಅವೆಲ್ಲವೂ ನಿನ್ನ ಪರಮ ಪದದಲ್ಲಿ ಹೊಂದುವ ಆನಂದದ ತುಣುಕುಗಳು ಮಾತ್ರ.

ಚತುರ್ಮುಖ ಬ್ರಹ್ಮ ಪಟ್ಟವೂ ಕೂಡ, ಮೋಕ್ಷಾನಂದದ ಎದುರು ತೃಣ ಸಮಾನ. ಇಂದ್ರಾದಿ ದೇವತೆಗಳೆಲ್ಲರೂ ತಮ್ಮ ತಮ್ಮ ಪದವಿಗಳನ್ನು ಅನುಭವಿಸುವುದು ಆ ಭಗವಂತನ ಕೃಪೆಯಿಂದಲೇ. ಅವನ ಕೃಪೆಯಿಲ್ಲದಿದ್ದರೆ ತಮ್ಮ ಸ್ವಶಕ್ತಿಯಿಂದ ಯಾರೂ ಯಾವುದನ್ನೂ ಹೊಂದಲು ಸಾಧ್ಯವಿಲ್ಲ. ಕೇನೋಪನಿಷತ್ತಿನ ಒಂದು ಕಥೆಯು ಇದನ್ನು ಚೆನ್ನಾಗಿ ನಿರೂಪಿಸುತ್ತದೆ. **'ತೇನ ವಿನಾ ತೃಣಮಪಿ ನ ಚಲತಿ'** ಎಂಬುದಾಗಿಯೂ ವಾಕ್ಯವಿದೆ.

ಶ್ರುತಿ ಕಿರೀಟ ಶುಭಾಶ್ರಯ ವಿಗ್ರಹಃ ಪರಮಸತ್ವನಿಧಿಃ ಪ್ರತಿಪದ್ಯಸೆ।
ಜಗದನುಗ್ರಹ ಮಾರುತ ಚೋದಿತೋ ವಿವಿಧ ರೂಪ ತರಂಗ ವಿಕಲ್ಪನಾಂ ॥೧೮॥

ನಿನ್ನ ದಿವ್ಯ ಮಂಗಳ ವಿಗ್ರಹವು ವೇದಾಂತದಲ್ಲಿ ಹೇಳಲ್ಪಟ್ಟಿದೆ. ಪಾಪಗಳೆಲ್ಲವನ್ನೂ ಹೋಗಲಾಡಿಸುತ್ತದೆ. ಧ್ಯಾನಕ್ಕೆ ಯೋಗ್ಯವಾದುದಾಗಿದೆ. ಶುದ್ಧವಾದ ಸತ್ವವನ್ನು ದೇಹವನ್ನಾಗಿ ಉಳ್ಳ ನೀನು ಸಮುದ್ರದ ತಳದ ಅಲೆಗಳು ಹೊಂದುವಂತೆ ನೀನು ಜಗತ್ತನ್ನು ರಕ್ಷಿಸಲು ಅನೇಕ ಅವತಾರಗಳನ್ನು ಎತ್ತುತ್ತೀಯೆ.

ಲೋಕೋದ್ಧಾರಕ್ಕಾಗಿಯೇ ಭಗವಂತನ ಅವತಾರಗಳೆಲ್ಲವೂ ಕೂಡ. ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನೇ **'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥'** ಎಂಬುದಾಗಿ ಹೇಳಿದ್ದಾನೆ. ಭಗವಂತನ ದಿವ್ಯ ಮಂಗಳ ವಿಗ್ರಹವು ಅತ್ಯಂತ ಪವಿತ್ರವೆನಿಸಿಕೊಂಡಿದೆ.

ತ್ವಯಿ ನ ದೇವ ಯದಾ ಯತತೆ ನ ತಜ್ಜಗತಿ ಜಂಗಮ ಮನ್ಯದಥಾಪಿ ವಾ।
ಇತಿ ಮಹಿಮ್ನಿ ತವ ಪ್ರಮಿತೆ ಪರಂ ವಿಭಜನೇ ವಿವಿಧೈಃ ಸ್ಥಿತಮಾಗಮೈಃ ॥೧೯॥

ಜಗತ್ತಿನಲ್ಲಿ ಜಂಗಮವೋ, ಸ್ಥಾವರವೋ ಮತ್ತು ಸಮಷ್ಟಿ ವಸ್ತುಗಳೋ ಎಲ್ಲವೂ. ಎಲ್ಲಕ್ಕೂ ಕಾರಣಭೂತನಾಗಿರುವ ನಿನಗೆ ಅಧೀನವಾದವು. ಈ ರೀತಿಯಾದ ನಿನ್ನ ಸ್ವರೂಪವನ್ನು ಚೆನ್ನಾಗಿ ಅರಿತ, ಬಹು ಬಗೆಯಾದ ಶಾಸ್ತ್ರಗಳನ್ನು ತಿಳಿದವರು ಹೇಳುವುದೆಲ್ಲಾ ನಿನ್ನ ಮಹಿಮೆಯೇ ಆಗಿದೆ.

ಸಮಸ್ತ ಚರಾಚರ ವಸ್ತುಗಳ ಉತ್ಪತ್ತಿ, ಸ್ಥಿತಿ, ಲಯಕ್ಕೆ ಕಾರಣಭೂತನಾದವನು ಸರ್ವೇಶ್ವರ ನಾದ ಶ್ರೀಮನ್ನಾರಾಯಣ. ಶಾಸ್ತ್ರವನ್ನರಿತವರು ಹಾಗೂ ಸಮಸ್ತ ವೇದಗಳೂ ಇದನ್ನೇ

ಹೇಳುತ್ತವೆ. ಯಾರು ಈ ತತ್ತ್ವವನ್ನು ಅರಿಯುತ್ತಾರೋ ಅವರೇ ನಿಜವಾಗಿ ಭಗವಂತನನ್ನು ಅರಿತವರು. ಭಗವಂತನು ಸರ್ವ ಶಬ್ದವಾಚ್ಯನು. ಎಲ್ಲವೂ ಅವನ ಮಹಿಮೆಯೇ ಆಗಿದೆ.

ಅಖಿಲ ಲೋಕ ಪಿತುಸ್ತವ ಪುತ್ರತಾ ಮಹಮಯಾಚ ಮನನ್ಯಮನೋರಥಃ।
ವರದ ವಾಂಛಿತ ದಾನ ಧೃತ ವ್ರತೆ ತ್ವಯಿ ತದೇವ ಮಯತ್ನಮುಪಚ್ಯತ ॥೨೦॥

ವರಗಳನ್ನು ನೀಡುವವನೇ! ಕೇಳುವುದನ್ನು ನೀಡುವ ನೀನು ಮುಂಚೆಯೇ ಸಂಕಲ್ಪಿಸಿದ್ದಲ್ಲಿ ನಾನು ಲೋಕಕ್ಕೆಲ್ಲಾ ಪಿತಾವಾದ ನಿನ್ನನ್ನು ಪುತ್ರನಾಗಿ ಬೇಡಿರುತ್ತಿದ್ದೆ. ಆದರೆ ಆ ಆಸೆಯು ಈಗ ಬೇಡದೆಯೇ ನೆರವೇರಿದೆ.

ನಾನಾಗಿಯೇ ನಿನ್ನನ್ನು ಮಗನನ್ನಾಗಿ ಬೇಡುವುದಕ್ಕೆ ಮುಂಚೆಯೇ, ನೀನು ನನ್ನ ಉದರ ದಲ್ಲಿ ಜನಿಸಿ, ನನ್ನ ಆಸೆಯನ್ನು ಈಡೇರಿಸಿದ್ದೀಯೆ. ಭಕ್ತರ ಮನಸ್ಸಿನಲ್ಲಿ ಇರುವುದನ್ನು ಅರಿಯುವ ನೀನು ಭಕ್ತ ಪರಾಧೀನನಲ್ಲವೇ? ನಿನಗೆ ಅನಂತ ನಮಸ್ಕಾರಗಳು.

ಅವನೀ ಭಾರ ನಿರಾಕರಣಾರ್ಥಿನಾಂ ಋತು ಭುಜಾಮಭಿಲಾಷ ಮವಂಧ್ಯಯನ್।
ಜಿತರಿಪೂಣಿ ಬಹೂನಿ ದಯಾನಿಧೇ ವಿಹರಣಾನಿ ವಿಧಾತು ಮಿಹಾರ್ಹಸಿ ॥೨೧॥

ಭೂಮಿಯ ಭಾರವನ್ನು ಹೋಗಲಾಡಿಸಲು ಇಚ್ಛಿಸಿದ ದೇವತೆಗಳ ಬೇಡಿಕೆಗಳನ್ನು ಸಫಲ ಗೊಳಿಸಲು ಕರುಣೆಯ ಸಮುದ್ರವಾದ ನೀನು ಹಗೆಗಳನ್ನು ಗೆಲ್ಲಲು ಅನೇಕ ಲೀಲೆಗಳನ್ನು ನಿನ್ನ ಅವತಾರಗಳಲ್ಲಿ ನಡೆಸುತ್ತೀಯೆ.

'ಜಾತಃ ಕಂಸ ವಧಾರ್ಥಾಯ ಭೂಭಾರ ಹರಣಾಯ ಚ' ಎಂಬುದಾಗಿ ಶ್ರೀ ಕೃಷ್ಣಾವತಾರದ ಬಗ್ಗೆ ಹೇಳುವುದುಂಟು. ದುಷ್ಟನಾದ ಕಂಸನನ್ನು ಕೊಂದು, ಇತರ ಸಹಸ್ರಾರು ದುಷ್ಟ ಕ್ಷತ್ರಿಯರೆಲ್ಲರನ್ನೂ ಸಂಹರಿಸಿದ, ಅಷ್ಟೇ ಅಲ್ಲ ತನ್ನ ಸ್ವಜನರು ದುಷ್ಟರಾದಾಗ ಅವರನ್ನೂ ನಿಗ್ರಹಿಸಿ, ಲೋಕಕ್ಷೇಮ ಉಂಟುಮಾಡಿದ ಕೀರ್ತಿ ಶ್ರೀಕೃಷ್ಣನದು. ಅದನ್ನೇ ಈ ಶ್ಲೋಕದಲ್ಲಿ ಹೇಳಿದ್ದಾರೆ.

ದನುಜ ಮೋಹನ ದೊಹಲಿನಾ ತ್ವಯಾ ಸಹಜ ಲಾಂಛನ ಸಂವರಣಂ ಕ್ಷಮಂ।
ತದಧುನಾ ಶಮಯನ್ ಮಮ ಸಾಧ್ವಸಂ ಯವನಿಕಾ ಮಧಿಗಚ್ಛ ಯಥೇಪ್ಸಿತಂ ॥೨೨॥

ಅಸುರ ಜಾತಿಯವರಾದ ದುಷ್ಟರುಗಳು ನಿನ್ನನ್ನು ಸಾಮಾನ್ಯ ಮನುಷ್ಯನಂತೆ ತಿಳಿದು ನಿನ್ನನ್ನು ಎದುರಿಸಬೇಕೆಂದು ಭಾವಿಸಿರಲು, ನೀನು ಸರ್ವೇಶ್ವರನೆಂಬುದನ್ನು ತೋರಿಸಲು ಇಷ್ಟಪಡದೆ ನಿನ್ನ ರೂಪವನ್ನು ಮರೆಸಿಕೊಂಡು ಇಲ್ಲಿ ಅವತರಿಸಿದ್ದೀಯೇ!

ಶ್ರೀಕೃಷ್ಣನು ಸರ್ವೇಶ್ವರನಾಗಿದ್ದರೂ ಲೀಲಾ ಮಾನುಷನಾಗಿ ಅವತರಿಸಿ, ತನ್ನವಿಭುತ್ವವನ್ನು ಮರೆ ಮಾಚಿಕೊಂಡು ಎಲ್ಲರಂತೆ ಸಾಮಾನ್ಯ ಶಿಶುವಾಗಿ ನಟಿಸಿ, ಅಸುರರನ್ನೆಲ್ಲಾ ಸಂಹರಿಸಿ ದ್ದಾನೆ. ಇದು ಕೂಡ ಅವನ ಮಾಯೆಯೆ. ರಾಕ್ಷಸರನ್ನು ಮೋಹಗೊಳಿಸಲು ಈ ವಿಡಂಬನೆ.

ಇತಿ ಸಭೀತ ಮವೇಕ್ಷ್ಯ ದಯಾನಿಧಿಃ ಸ್ಮಿತಮುಖೋ ವಸುದೇವ ಮಭಾಷತ।
ತ್ವಮಸಿ ಮೇ ಜನಕಃ ಕಿಮಿಹಾನ್ಯಥಾ ಕಿಮಪಿ ತಾತ ಮುಧಾ ಕಥಿತಂ ತ್ವಯಾ ॥೨೨॥

ಈ ರೀತಿ ಅಂಜಿ ಪ್ರಾರ್ಥಿಸುತ್ತಿದ್ದ ವಸುದೇವನನ್ನು ಕೃಪಾದೃಷ್ಟಿಯಿಂದ ನೋಡಿ ಕರುಣೆಯ ಸಮುದ್ರವಾದ ಶಿಶುರೂಪದಲ್ಲಿರುವ ಭಗವಂತನು ಹೀಗೆ ಹೇಳಿದನು - ನೀವು ನನ್ನನ್ನು ಹೊಂದಿ ತಂದೆಯಾಗಿದ್ದೀರಿ. ಇದರಲ್ಲಿ ನನ್ನ ಪಾತ್ರವೇನಿದೆ ? ತಂದೆಯೇ! ನೀವು ಏನನ್ನೋ ಹೇಳುತ್ತಿದ್ದೀರಿ. ನನ್ನ ಬಗ್ಗೆ ಬೇರೇನನ್ನೋ ಹೇಳುತ್ತಿದ್ದೀರಲ್ಲಾ!

ವಸುದೇವನು ಚತುರ್ಭುಜವನ್ನು ಹೊಂದಿದ್ದ ಶ್ರೀಕೃಷ್ಣನನ್ನು ಸರ್ವೇಶ್ವರನೆಂದು ಭಾವಿಸಿ, ಸ್ತೋತ್ರ ಮಾಡುತ್ತಿದ್ದನು. ಆಗ ಸಾಕ್ಷಾತ್ ಭಗವಂತನು, ತಂದೆಯನ್ನು ನೋಡಿ "ಯಾತಕ್ಕಾಗಿ ನನ್ನಲ್ಲಿ ಏನೇನನ್ನೋ ಆರೋಪಿಸುತ್ತಿದ್ದೀರಿ? ನಾನು ಕೇವಲ ಪ್ರಾಕೃತ ಶಿಶುವಷ್ಟೆ ನನ್ನ ಬಗ್ಗೆ ದೊಡ್ಡದೊಡ್ಡ ಮಾತುಗಳನ್ನೆಲ್ಲಾ ಹೇಳುತ್ತಿದ್ದೀರಲ್ಲಾ ನನಗೆ ಏನೊಂದು ಅರ್ಥವಾಗುತ್ತಿಲ್ಲ" ಎಂದು ನಟನೆ ಮಾಡಿದನು. ಭಗವಂತನ ಲೀಲೆಗಳನ್ನು ಅರ್ಥ ಮಾಡಿಕೊಳ್ಳುವುದು ಸಾಹಸವೇ ಸರಿ.

ಇಯಮಮರ್ತ್ಯ ಪಿತುಸ್ತವ ಗೇಹಿನೀ ದಿವಿಷದಾಂ ಜನನೀ ಮಮ ಚಾನಘಾ।
ಅಭಿಮತಂ ಯುವಯೋರನವಗ್ರಹಂ ಸಮಯಭಾವಿ ಮಯ್ಯೈವ ಸಮರ್ಥ್ಯತೇ ॥೨೪॥

ನೀವು ದೇವತೆಗಳಿಗೆ ತಂದೆಯಾಗಿ ಹಿಂದೆ ಇದ್ದ ಕಾಲದಲ್ಲಿ ನಿಮ್ಮ ಪತ್ನಿಯಾಗಿದ್ದ ಈ ತಾಯಿಯು ದೇವತೆಗಳಿಗೂ, ನನಗೂ ತಾಯಿಯಾಗಿದ್ದಳು. ನಿಮ್ಮ ಇಷ್ಟವನ್ನು ಪೂರೈಸಲು ಸರಿಯಾದ ಸಮಯದಲ್ಲಿ ಮಗನಾದ ನಾನೇ ನಡೆಸಬೇಕಾಗಿದೆ.

ಬಾಲಕ ಶ್ರೀಕೃಷ್ಣನು ವಸುದೇವನಿಗೆ ಅವನ ಪೂರ್ವ ಜನ್ಮದ ಸ್ಮರಣೆಯನ್ನು ಉಂಟು ಮಾಡುತ್ತಾನೆ. ಹಿಂದಿನ ಜನ್ಮದಲ್ಲಿ ವಸುದೇವನು ದೇವತೆಗಳಿಗೆ ತಂದೆಯಾಗಿದ್ದು, ದೇವಕಿಯು ತಾಯಿಯಾಗಿದ್ದಳು. ಆಗ ದೇವತೆಗಳಲ್ಲಿ ಒಬ್ಬನಾದ ನಾರಾಯಣನಿಗೂ ತಾಯಿಯಾಗಿದ್ದಳು. ನಿಮ್ಮ ಇಷ್ಟಾರ್ಥಗಳನ್ನು ಪೂರೈಸಲು ಈಗ ನಾನು ನಿಮ್ಮ ಮಗನಾಗಿ ಅವತರಿಸಿದ್ದೇನೆ. ಇದರಲ್ಲಿ ವಿಶೇಷವೇನಿಲ್ಲ.

ಯದಿ ಬಿಭೇಷಿ ಭಜಾಮಿ ಮನುಷ್ಯತಾಮಥ ಚ ಮಾಂ ನಯ ನಂದಗೃಹಂ ಕ್ಷಣಾತ್।
ದುಹಿತರಂ ಚ ಸಮಾನಯ ತಸ್ಯ ತಾಂ ಗತ ಭಯೋ ಭವ ದೂರಗತೇ ಮಯಿ ॥೨೫॥

ನೀವು ಅಂಜುವಿರಾದರೆ ನಾನು ಮನುಷ್ಯನಾಗಿ ಮಾರ್ಪಾಡಾಗುತ್ತೇನೆ. ಕೂಡಲೇ ನನ್ನನ್ನು ನಂದನ ಗೃಹಕ್ಕೆ ಕೊಂಡೊಯ್ದು ಸೇರಿಸಬೇಕು. ಅವರಿಗೆ ಅಲ್ಲಿ ಹುಟ್ಟಿರುವ ಹೆಣ್ಣು ಮಗುವನ್ನು ಇಲ್ಲಿಗೆ ತಂದು ಬಿಡಿ. ನಾನು ದೂರದಲ್ಲಿರುವುದರಿಂದ ನೀವು ಅಂಜದೆ ಇರಬಹುದು.

ವಸುದೇವ ದೇವಕಿಯರ ಅಂಜಿಕೆಯನ್ನು ನೋಡಿ ಸ್ವಾಮಿಯು ಹೇಳುತ್ತಾನೆ "ನನ್ನನ್ನು ನಂದಗೋಪನ ಗೃಹಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಬಿಟ್ಟು, ಅಲ್ಲಿ ಹುಟ್ಟಿರುವ ಹೆಣ್ಣು

ಮಗುವನ್ನು ಇಲ್ಲಿಗೆ ತಂದುಬಿಡಿ. ನಿಮ್ಮ ಅಂಜಿಕೆಯು ನೀಗುವುದು. ಕಂಸನು ನಿಮ್ಮನ್ನೇನೂ ಮಾಡಲಾರ.

ಅಥ ವಿಶಮ್ಯ ನಿಯೋಗ ಮಭಂಗುರಂ ಮಧುಜಿತೋ ಮಧುರಾಕ್ಷರ ಮಂಥರಂ।
ಹಿತಮಿದಂ ಪ್ರತಿಪದ್ಯ ತಮಾದಧೇ ಗುರುತರಂ ಕೃಪಯಾ ಲಘುತಾಂ ಗತಂ ॥೨೬॥

ಅತ್ಯಂತ ಮೃದುವಾಗಿಯೂ, ಇಂಪಾಗಿಯೂ ಇದ್ದ ಭಗವಂತನ ಆಜ್ಞೆಯನ್ನು ಕೇಳಿ ನಂದನ ಮನೆಗೆ ಹೋಗುವುದೇ ಒಳ್ಳೆಯದೆಂದು ನಂಬಿ, ಸರ್ವಶಕ್ತನಾಗಿದ್ದೂ ಪ್ರಾಕೃತ ಶಿಶುವಿನಂತೆ ಮಾರ್ಪಾಡಾದ ಭಗವಂತನನ್ನು ವಸುದೇವನು ಎತ್ತಿಕೊಂಡನು.

ಆ ಭಗವಂತನ ಮಧುರವಾದ ವಾಕ್ಕನ್ನು ಕೇಳಿ, ಮಗುವಿನ ಸುರಕ್ಷತೆಯ ದೃಷ್ಟಿಯಿಂದಲೂ, ತಮ್ಮ ಸುರಕ್ಷತೆಯ ದೃಷ್ಟಿಯಿಂದಲೂ, ನಂದಗೋಕುಲಕ್ಕೆ ಶ್ರೀಕೃಷ್ಣನನ್ನು ಕೊಂಡೊಯ್ಯುವುದೇ ಸರ್ವ ವಿಧದಲ್ಲೂ ಶ್ರೇಯಸ್ಕರವೆಂದು ಭಾವಿಸಿ, ವಸುದೇವನು ಶ್ರೀಕೃಷ್ಣನನ್ನು ಎತ್ತಿಕೊಂಡು ಹೊರಡಲು ಅನುವಾದನು.

ತುಹಿನ ಭಾನು ದಿವಾಕರ ಲೋಚನಂ ನಿಗಮ ನಿಃ ಶ್ವಸಿತಂ ಸ್ವಸುತಸ್ಯ ತತ್।
ಅನುಬಭೂವ ಮುಹು ರ್ಮುಹುರಾದರಾದನಘ ಮಾನನ ಮಾನಕದುಂದುಭಿಃ ॥೨೭॥

ಚಂದ್ರನನ್ನೂ ಸೂರ್ಯನನ್ನೂ ಕಣ್ಣುಗಳಾಗಿ ಉಳ್ಳ, ವೇದಗಳನ್ನೆಲ್ಲಾ ತನ್ನ ಉಸಿರಾಗಿ ಉಳ್ಳ ತನ್ನ ಮಗನ ಸುಂದರವಾದ ಮುಖವನ್ನು ಆದರದಿಂದ ವಸುದೇವನು ಬಾರಿಬಾರಿಗೂ ನೋಡಿ ಆನಂದಪಟ್ಟನು.

ಶ್ರೀಕೃಷ್ಣನ ಮುಖಾರವಿಂದವನ್ನು ಬಾರಿ ಬಾರಿಗೂ ನೋಡಿ, ತ್ರೈಲೋಕ್ಯ ಮೋಹನನಾದ ಆ ದಿವ್ಯವಾದ ಮುಖ ಕಮಲವನ್ನು ಆಸ್ವಾದಿಸುತ್ತಾ ವಸುದೇವನು ಪರವಶನಾದನು. "ಭೂಃ ಪಾದೌ ಯಸ್ಯ ನಾಭಿರ್ವಿಯದಸುರನಿಲಶ್ಚಂದ್ರಸೂರ್ಯೌ ಚ ನೇತ್ರೇ" ಎಂಬುದಾಗಿ ಶ್ರೀ ವಿಷ್ಣು ಸಹಸ್ರನಾಮದಲ್ಲಿ ಭಗವಂತನನ್ನು ವರ್ಣಿಸಿದೆ. ಸೂರ್ಯನಂತೆ ದುಷ್ಟರಿಗೆ ತಾಪವನ್ನೂ, ಭಕ್ತರಿಗೆ ಚಂದ್ರನಂತೆ ತಂಪನ್ನೂ ಉಂಟು ಮಾಡುತ್ತಾನೆ ಆ ಸರ್ವೇಶ್ವರ.

ಶ್ರುತಿ ಸುಗಂಧಿತ ದಾನನ ಚಂದ್ರಿಕಾ ಮುಷಿತ ಮೋಹತಮಾ ಮುನಿ ಸಂನಿಭಃ।
ಅಧಿ ಜಗಾಮ ಸ ತನ್ಮಯತಾಂ ಕ್ಷಣಾದನಿ ಮಿಷತ್ವಮುತ ಪ್ರತಿಸಂದಧೇ ॥೨೮॥

ವೇದಗಳ ಸುವಾಸನೆಯನ್ನು ಬೀರುವ ಮಗನ ಮುಖದ ಪ್ರತಿಭೆಯಿಂದ ಅಜ್ಞಾನ, ಕತ್ತಲೆಯನ್ನು ನೀಗುವ ಧ್ಯಾನದಿಂದ ವಸುದೇವನು ತನ್ಮಯತೆಯನ್ನು ಹೊಂದಿ ಕ್ಷಣಕಾಲ ತನ್ನನ್ನು ತಾನೇ ಮರೆತನು.

ಈ ಶ್ಲೋಕದಲ್ಲೂ ವಸುದೇವನ ಪರವಶತೆಯನ್ನು ಮತ್ತೂ ಹೇಳಿದ್ದಾರೆ. ವೇದಗಳ ಸಾರವೇ ಭಗವಂತ. ಅವನ ಉಸಿರಾಟವೇ ನಾಲ್ಕು ವೇದಗಳು. ಅವನ ದಿವ್ಯ ಪ್ರತಿಭೆಯು

ಸಮಸ್ತ ಅಜ್ಞಾನ, ಅಂಧಕಾರ ಎಲ್ಲವನ್ನೂ ನಿವಾರಿಸಿ, ಜ್ಞಾನವನ್ನು ನೀಡುತ್ತದೆ. ಈ ದಿವ್ಯ ಪ್ರತಿಭೆಯನ್ನು ನೋಡಿದ ದೇವಕಿ ವಸುದೇವರು ಎಂಥಾ ಧನ್ಯರು. ಶ್ರೀ ಹರಿಯನ್ನು ನೋಡಿದಂತೆಲ್ಲಾ ಇತರ ಸಮಸ್ತ ಜಗತ್ತನ್ನು ಮರೆಯುವುದು ಸಹಜವೇ ತಾನೇ!

ಜಿಗಮಿಷುಃ ಸ ದಿಶೋ ದಶ ಯಾದವಃ ಸಕೃದವೈಕ್ಷತ ಸಾಧ್ವಸ ವಿಹ್ವಲಃ।
ಅನಘ ವೈಭವ ಮರ್ಭಕ ಮುದ್ವಹನ್ ಅಮಿತ ಗುಪ್ತಿ ನಿರುಧ್ವಗತೌ ಗೃಹೇ ॥೧೯॥

ಅನೇಕ ವಿಧವಾದ ರಕ್ಷೆಗಳನ್ನು ಮಾಡಿ ರಕ್ಷಿಸಿದ ಮನೆಯಲ್ಲಿ ಸರ್ವೇಶ್ವರನಾದ ಮಗನನ್ನು ಕೈಯ್ಯಲ್ಲಿ ಎತ್ತಿಕೊಂಡು ಯದುವಂಶದವನಾದ ಆ ವಸುದೇವನು ಅಲ್ಲಿಂದ ಹೊರಟು ಹೊರಕ್ಕೆ ಹೋಗಬೇಕೆಂಬ ಉದ್ದೇಶದಿಂದ ಎಲ್ಲಾ ದಿಕ್ಕುಗಳನ್ನು ಒಂದು ಬಾರಿ ವೀಕ್ಷಿಸಿದನು.

ಶ್ರೀಕೃಷ್ಣನ ಆಜ್ಞೆಯಂತೆ ನಂದಗೋಕುಲಕ್ಕೆ ಹೊರಡಲು ಸಿದ್ಧನಾಗಿ ವಸುದೇವನು, ಯಾವ ರೀತಿ ಹೊರಕ್ಕೆ ಹೋಗಬೇಕೆಂದು ತಿಳಿಯುವುದಕ್ಕೋಸ್ಕರ ಒಂದು ಬಾರಿ ತಾನಿದ್ದ ಸೆರೆಮನೆಯನ್ನು ಸಂಪೂರ್ಣವಾಗಿ ವೀಕ್ಷಿಸಿದನು. ಆ ಸೆರೆಮನೆಗೆ ದೇವಕಿಯು ಎಲ್ಲಾ ವಿಧವಾದ ರಕ್ಷಾ ಬಂಧನಗಳನ್ನೂ ಮಾಡಿದ್ದಳು. ದಶ ದಿಕ್ಕುಗಳಲ್ಲಿರುವ ದೇವತೆಗಳನ್ನೆಲ್ಲಾ ಪ್ರಾರ್ಥಿಸಿ ಮಗನ ಕ್ಷೇಮವನ್ನು ಕೋರಿದ್ದಳು.

ವಿಜಘಟೇ ಸಹಸೈವ ಕವಾಟಿಕಾ ವ್ರಜಮಥ ವ್ರಜತೋ ಯದು ಭೂಭೃತಃ।
ಉಪಲ ಕಲ್ಪಮಶೇರತ ರಕ್ಷಕಾಃ ಸರಣಿಮಾದಿ ದಿಶುರ್‌ಗೃಹ ದೇವತಾಃ ॥೨೦॥

ನಂದಗೋಕುಲವನ್ನು ಸೇರಲು ಹೊರಟ ವಸುದೇವರಿಗಾಗಿ ಒಡನೆಯೇ ಸೆರೆಮನೆಯ ಎಲ್ಲಾ ಬಾಗಿಲುಗಳೂ ತೆರೆದುಕೊಂಡವು. ಕಾಯಲು ನಿಯಮಿಸಲ್ಪಟ್ಟ ಎಲ್ಲರೂ ಕಲ್ಲಿನಂತೆ ಅಲ್ಲಾಡದೆ ಅಚೇತನದಂತೆ ಇದ್ದರು. ಗೃಹ ದೇವತೆಗಳೆಲ್ಲರೂ ದಾರಿಯನ್ನು ತೋರಿಸಿದರು.

ಆಗ ಒಂದು ಅಚ್ಚುತ ನಡೆಯಿತು. ಸೆರೆಮನೆಯ ಬಾಗಿಲುಗಳೆಲ್ಲಾ ಬೀಗ ಹಾಕಿದ್ದರೂ ಸಹ ವಸುದೇವನು ಶ್ರೀಕೃಷ್ಣನನ್ನು ಎತ್ತಿಕೊಂಡು ಹೊರಟ ತಕ್ಷಣ ಎಲ್ಲಾ ಬಾಗಿಲುಗಳೂ ತಾವಾಗಿಯೇ ತೆರೆದುಕೊಂಡವು. ಅಷ್ಟೇ ಅಲ್ಲ, ಬಲವಾಗಿ ನಿಯಮಿಸಿದ್ದ ಕಾವಲುಗಾರರೆಲ್ಲರೂ ಸಹ ಗಾಢ ನಿದ್ರೆಗೊಳಗಾಗಿ ನಿಶ್ಚೇಷ್ಟರಂತೆ ಮಲಗಿ ಇಹದ ಪರಿವೆಯೇ ಇಲ್ಲದೆ ಇದ್ದರು. ಆ ಕತ್ತಲಿನಲ್ಲೂ ದೇವತೆಗಳೆಲ್ಲರೂ ವಸುದೇವರಿಗೆ ದಾರಿ ತೋರಿದರು.

ಕ್ಷರದ ಸೂನಿವ ಯಾಮಿಕ ರಕ್ಷಕಾನ್ ಮುಷಿತ ಮಂಜುಗಿರಃ ಶುಕಶಾರಿಕಾಃ।
ಯದುಕುಲೇಂದು ರಪಶ್ಯ ದಮೀಲಿತಾನ್ ಪರಿಜನಾನಪಿ ಚಿತ್ರಗತಾನಿವ ॥೨೧॥

ವಸುದೇವನು ಅಲ್ಲಿ ಕಾರಾಗೃಹವನ್ನು ರಕ್ಷಿಸಲು ನಿಯಮಿಸಲ್ಪಟ್ಟ ಕಾವಲುಗಾರರೆಲ್ಲರೂ ಚಿತ್ರಗಳಲ್ಲಿರುವ ಬೊಂಬೆಗಳಂತೆ, ಪಶು ಪಕ್ಷಿಗಳಂತೆ ನಿದ್ರಿಸುತ್ತಿದ್ದುದನ್ನು ಕಂಡನು. ಕಾವಲುಗಾರ ರೆಲ್ಲರೂ ಮೈಮರೆತು ಮಲಗಿದ್ದರು. ವಸುದೇವನ ಕಾರಾಗೃಹದಲ್ಲಿ ಏನು ನಡೆಯುತ್ತಿದೆ

ಎಂಬುದನ್ನು ಅರಿಯುವ ಸ್ಥಿತಿಯಲ್ಲಿ ಅವರಿರಲಿಲ್ಲ. ನಾರಾಯಣೀಯಂನಲ್ಲಿ ಇದನ್ನು ಹೀಗೆ ವರ್ಣಿಸಲಾಗಿದೆ.

ಜಾತಾ ತದಾ ಪಶುವ ಸದ್ಮನಿ ಯೋಗ ನಿದ್ರಾ ।
ನಿದ್ರಾ ವಿಮುದ್ರಿತ ಮಥಾಕೃತ ಪೌರಲೋಕಂ
ತ್ವತ್ಪ್ರೇರಣಾತ್ ಕಿಮಿವ ಚಿತ್ರಮಚೇತನೈರ್ಯದ್
ದ್ವಾರೈಃ ಸ್ವಯಂ ವ್ಯಘಟಿ ಸಂಘಟಿತೈ ಸುಗಾಹಂ ॥

ಪೌರರೆಲ್ಲಾ ನಿದ್ರೆಯಿಂದ ನಿಶ್ಚೇಷ್ಟಿತರಾಗಿ ಬಿದ್ದಿರಲು, ಜಡವಾದ ಬಾಗಿಲುಗಳು ಮುಚ್ಚಿದ್ದೂ ಸಹ ತಾವೇ ತಾವಾಗಿ ತೆಗೆದುಕೊಳ್ಳಲು ನಿನ್ನ ಪ್ರೇರಣೆಯಲ್ಲದೇ ಬೇರೇನು ಕಾರಣ ? ಇದೆಂತಹ ಆಶ್ಚರ್ಯ ?

ಉಪಯತೋ ವಿಶಿಖಾಂ ಸದನಾಂತರಾತ್ ಕುವಲಯಾಭ ಕುಮಾರ ತನುತ್ವಿಷಾ ।
ಶತಮಖೋಪಲ ಮೇಚಕಯಾ ದ್ರುತಂ ಶಮಿತ ಸಂತಮಸಾ ಹರಿತೋ ಬಭುಃ॥೩೨॥

ಮನೆಯಿಂದ ಬೀದಿಗೆ ಬರುತ್ತಿದ್ದ ವಸುದೇವನಿಗೆ ಇಂದ್ರನೀಲ ಮಣಿಯಂತೆ ಪ್ರಕಾಶಿಸುತ್ತಿದ್ದ ಭಗವಂತನ ಪ್ರಕಾಶವು, ಕತ್ತಲಿನಲ್ಲಿ ದಾರಿ ದೀಪಗಳಂತೆ ಹೊಳೆದು ದಾರಿಯನ್ನು ತೋರಿತು.

ಕಗ್ಗತ್ತಲಿನಲ್ಲಿ ಹೊರಕ್ಕೆ ಬಂದ ವಸುದೇವನಿಗೆ, ದಾರಿ ಸರಿಯಾಗಿ ಕಾಣುತ್ತಿರಲಿಲ್ಲ. ಆಗ ಆ ಭಗವಂತನೇ ದಿವ್ಯ ಮಣಿಯಂತೆ ಪ್ರಕಾಶಿಸಿ, ದಾರಿಯನ್ನು ತೋರಿಸಿದನು. ಭಗವಂತನು ಇಚ್ಛೆಪಟ್ಟರೆ ಯಾವುದು ತಾನೇ ಅಸಾಧ್ಯ ? ಅವನ ಭಕ್ತರಿಗೆ ಅವನೇ ದಾರಿದೀಪ. ಸಂಸಾರದ ಕತ್ತಲಿನಲ್ಲಿ ತಡಕಾಡುತ್ತಾ ನಡೆಯುವ ನಮಗೆ ಅವನಲ್ಲವೇ ದೀಪ ಪ್ರಕಾಶನು.

ಶ್ರುತಿ ಮಯೋ ವಿಹಗಃ ಪರಿತಃ ಪ್ರಭುಂ ವ್ಯಚರದಾಶು ವಿಧೂತನಿಶಾಚರಃ ।
ಅನುಜಗಾಮ ಚ ಭೂದರ ಪನ್ನಗಃ ಸ್ಫುಟ ಫಣಾಮಣಿ ದೀಪಗಣೋದ್ವಹಃ ॥೩೩॥

ರಾಕ್ಷಸರನ್ನು ಸಂಹರಿಸುವವನೂ ಹಾಗೂ ವೇದ ಮೂರ್ತಿಯಾದ ಗರುಡನು ಭಗವಂತನನ್ನು ಸುತ್ತಿ ಸುತ್ತಿ ಬಂದನು. ಭೂಮಿಯನ್ನು ತಲೆಯಲ್ಲಿ ಹೊರುವ ನಾಗನಾದ ಆದಿಶೇಷನು ತನ್ನ ಅಗಲವಾದ ಫಣೆಯನ್ನು ಇಟ್ಟುಕೊಂಡು ಮುಂದೆ ನಡೆದನು.

ಆ ಸರ್ವೇಶ್ವರನನ್ನು ವಸುದೇವನು ಬುಟ್ಟಿಯಲ್ಲಿ ಇಟ್ಟುಕೊಂಡು ತಲೆಯ ಮೇಲೆ ಎತ್ತಿಕೊಂಡು ನಡೆಯುವಾಗ, ಆ ಮಹಾಮಹಿಮನ ನಿತ್ಯ ಕಿಂಕರರಾದ, ನಿತ್ಯ ಸೂರಿಗಳಾದ ಶೇಷಾದಿಗಳು ತಮ್ಮ ಸೇವೆಯನ್ನು ನಡೆಸಿದರು. ಗರುಡನು ಶ್ರೀಕೃಷ್ಣನನ್ನು ಸುತ್ತಿ ಸುತ್ತಿ ಬರುತ್ತಾ ಕಾವಲಿನಂತೆ ಇದ್ದನು. ಅನಂತನು ಸಹಸ್ರ ಹೆಡೆಯನ್ನು ಬಿಚ್ಚಿ ಛತ್ರಿಯ ರೂಪದಲ್ಲಿ ಆ ನಟನಾ ಶಿಶುವಿಗೆ ರಕ್ಷಣೆಯಂತೆ ಹಿಡಿದುದಲ್ಲದೆ, ತನ್ನ ಹೆಡೆಗಳಲ್ಲಿರುವ ದಿವ್ಯಮಣಿಗಳಿಂದ

ದೀಪವನ್ನು ತೋರುತ್ತಾ ವಸುದೇವನಿಗೆ ದಾರಿಯನ್ನು ತೋರಿಸಿದನು. ಭಗವಂತನು ಯಾವ ಯಾವ ರೂಪವನ್ನು ಎತ್ತಿದರೂ ಆಯಾ ರೂಪಕ್ಕೆ ತಕ್ಕಂತೆ ಕೈಂಕರ್ಯವನ್ನು ಮಾಡುವವರಾದ ಗರುಡ ಅನಂತಾದಿಗಳೇ ಧನ್ಯರು.

ದಿನಕರೋಪಮಧೀತಿಭಿ ಸ್ತದಾ ದನುಜದೇಹ ವಿದಾರಣದಾರುಣೈಃ।
ಪರಿಗತಃ ಕಿಲ ಪಂಚಭಿರಾಯುಧೈರ್ ಯದುಪತಿಃ ಪ್ರಜಹಾವ ಸಹಾಯ ತಾಂ ॥೨೪॥

ಗರುಡನೂ, ಆದಿಶೇಷನೂ, ಇತರ ಆಯುಧಗಳೂ, ಅಸುರರ ದೇಹಗಳನ್ನು ಸೀಳುವಾಗ ತೋರುವ ಭಯಂಕರವಾದ ರೂಪವನ್ನು ಧರಿಸಿ, ಸೂರ್ಯ ಪ್ರಕಾಶದಂತೆ ಬೆಳಕನ್ನು ಬೀರುತ್ತಾ, ವಸುದೇವನ ಜೊತೆಯಲ್ಲಿದ್ದರು.

ಆ ಭಗವಂತನ ಅನುಚರರರಾದ ನಿತ್ಯಸೂರಿಗಳೆಲ್ಲರೂ ತಾವೂ ವಿಧ ವಿಧ ರೂಪ ಧರಿಸಿ, ಶ್ರೀಕೃಷ್ಣನಿಗೆ ಬೆಂಗಾವಲಾಗಿ ಬರುತ್ತಾ, ವಸುದೇವನಿಗೆ ತಿಳಿಯದಂತೆಯೇ ಅವನ ಸಂಗಡ ಇದ್ದರು. ಇದಲ್ಲವೇ ಮಹಾ ವಿಶೇಷ. ಈ ರೀತಿ ಯಾವ ಅವತಾರದಲ್ಲಿಯೂ ಅವರ ಸೇವೆ ನಡೆದಿಲ್ಲ. ಇದೇ ಶ್ರೀಕೃಷ್ಣಾವತಾರದ ವೈಶಿಷ್ಟ್ಯ.

ಪ್ರಗುಣಮಿಂದು ನಿವೇದಿತ ಪದ್ಧತಿರ್ಯದುಕುಲೇಂದು ರಥೋ ಯಮುನಾ ನದೀಂ।
ಪರಮಪುರುಷ ಮಕ್ಷತ ಪೌರುಷಃ ಪತಗರಾಜ ಇವಾಶು ವಹನ್ ಯಯೌ ॥೨೫॥

ಕುಂದದ ಶಕ್ತಿಯಾಲಿಯಾದ ಯದುವಂಶದ ಚಂದ್ರನಾದ ವಸುದೇವನು ಪಕ್ಷಿರಾಜನಾದ ಗರುಡನಂತೆ ತಲೆಯಲ್ಲಿ ಭಗವಂತನನ್ನು ಎತ್ತಿಕೊಂಡು ಚಂದ್ರನ ಬೆಳದಿಂಗಳಿನಲ್ಲಿ ದಾರಿಯನ್ನು ತಿಳಿಯುತ್ತಾ ಯಮುನೆಯ ತೀರಕ್ಕೆ ಬಂದನು.

ವಸುದೇವನು ಶ್ರೀಕೃಷ್ಣಸ್ವಾಮಿಯನ್ನು ತಲೆಯ ಮೇಲೆ ಎತ್ತಿಕೊಂಡು, ಗರುಡನು ಯಾವ ರೀತಿ ಸಾಕ್ಷಾತ್ ನಾರಾಯಣನನ್ನು, ಹೊತ್ತುಕೊಂಡು ಬರುವನೋ ಅದೇ ರೀತಿ ಚಂದ್ರನ ಬೆಳದಿಂಗಳಿನಲ್ಲಿ ದಾರಿಯನ್ನು ಕಾಣುತ್ತಾ ಯಮುನೆಯ ದಡಕ್ಕೆ ಬಂದನು.

ತನುತರಂಗ ಪೃಷತ್ಕಣ ಶೀತಲಃ ಸುರಭಿ ಕೈರವ ಸೌಹೃದ ವಾಸಿತಃ।
ಅಭಿಸಮೇತ ಸೇವತ ಮಾರುತೋ ಯಮುನ ಯಾ
ಪ್ರಹಿತೋ ಯದು ಪುಂಗವಂ ॥೨೬॥

ಮೃದುವಾದ, ಶೀತಲವಾದ ಅಲೆಗಳಿಂದ ಕೂಡಿದ ಯಮುನೆಯ ಮೇಲೆ ಬೀಸುವ ಸುಮಧುರವಾದ ಮಂದ ಮಾರುತವು, ಆ ಯಮುನೆಯ ಹತ್ತಿರ ಬರುವ ವಸುದೇವನಿಗೆ ಸೇವೆ ಮಾಡಲು ಯಮುನೆಯಿಂದ ಕಳಿಸಲ್ಪಟ್ಟು ಅವನಿಗೆ ಶ್ರಮ ತೋರದಂತೆ ಬೀಸುತ್ತಿತ್ತು.

ಯಮುನೆಯ ತೀರದಲ್ಲಿ ಮಂದ ಮಾರುತವು ಬೀಸುತ್ತಿತ್ತು. ಅದು ವಸುದೇವನಿಗೆ ಮಾರ್ಗಾಯಾಸವನ್ನು ಪರಿಹರಿಸುತ್ತಿತ್ತು. ಆ ಗಾಳಿಯು ಯಮುನೆಯಿಂದಲೇ ಶ್ರೀಕೃಷ್ಣನಿಗೆ

ಸೇವೆ ಮಾಡಲು ಕಳಿಸಲ್ಪಟ್ಟಂತಿತ್ತು. ಯಮುನೆಯು ಶ್ರೀಕೃಷ್ಣನ ಸೇವೆಗೆ ಸರ್ವದಾ ಸಿದ್ಧಳು. ಆದ್ದರಿಂದಲೇ ಆಂಡಾಳ್ ತಿರುಪ್ಪಾವೈನಲ್ಲಿ ಯಮುನೆಯನ್ನು "ತೂಯ ಪೆರುನೀರ್ ಯಮುನೈ" ಎಂದಿದ್ದಾಳೆ. (ಶ್ರೇಷ್ಠವಾದ ತೀರ್ಥವನ್ನು ಹೊಂದಿರುವವಳು).

ಪವನ ಕಂಪಿತ ಪಲ್ಲವ ಪಾಣಿಕಾ ಪ್ರಹಿತ ಪುಷ್ಪಭರಾ ಪದವೀ ಮುಖೇ।
ಉಪಜುಹಾವ ಕಿಲ ಭ್ರಮರ ಸ್ವನೈರ್ಯದುಪತಿಂ ಯಮುನೋಪವನಸ್ಥಲೀ ॥೨೭॥

ಆ ಸುಖವಾಗಿ ಬೀಸುವ ಗಾಳಿಗೆ ಉದುರಿಹೋದ ಅನೇಕ ದಿವ್ಯ ಪುಷ್ಪಗಳು ವಸುದೇವನ ಮೇಲೆ ಬಿದ್ದು, ಅನೇಕ ದುಂಬಿಗಳು ಝೇಂಕಾರವನ್ನು ಮಾಡುತ್ತಾ ಇದ್ದುದನ್ನು ನೋಡು ವಾಗ ಯಮುನೆಯ ತೀರದಲ್ಲಿ ಇದ್ದ ಹೂತೋಟದಲ್ಲಿದ್ದ ಹೂವುಗಳು ವಸುದೇವನಿಗೆ ಸ್ವಾಗತವನ್ನು ಬಯಸುವಂತಿತ್ತು.

ಆ ಸುಖವಾಗಿ ಬೀಸುವ ಗಾಳಿಗೆ ಯಮುನೆಯ ತೀರದಲ್ಲಿದ್ದ ಹೂವಿನ ಮರಗಳೆಲ್ಲವೂ ದಿವ್ಯವಾದ ಸುವಾಸನೆಯುಳ್ಳ ಪುಷ್ಪಗಳನ್ನು ವಸುದೇವನ ಮೇಲೆ ಸುರಿಸಿ ಪುಷ್ಪವೃಷ್ಟಿಯನ್ನು ಕರೆದವು. ಸ್ವಾಮಿಗೆ ಸೇವೆ ಮಾಡುವುದೆಂದರೆ ಜಡ ವಸ್ತುಗಳಿಗೂ ಉತ್ಸಾಹ, ಆನಂದ.

ನಿಮಿಷಿತಾ ಸಿತ ನೀರಜ ಲೋಚನಾ ಮುಕುಲಿತಾಬ್ಜ ಮುಖೀ ಸವಿತುಃ ಸುತಾ।
ಲಲಿತದೀನ ರಂಥಾಂಗ ಯುಗಸ್ವನಾ ಕುಹಕ ದೈನ್ಯ ಮಶೋಚದಿವ ಪ್ರಭೋಃ ॥೨೮॥

ಅನೇಕ ಪುಷ್ಪಗಳು ಚೆನ್ನಾಗಿ ಅರಳಿ, ತಾವರೆಗಳೂ ದೊಡ್ಡದಾಗಿ ಅರಳಿ, ವಿರಹದಿಂದ ಬಳಲಿ ಮತ್ತೆ ಸೇರಿರುವ ಚಕ್ರವಾಕ ಪಕ್ಷಿಗಳ ಮಧುರಗಾನ ಕೇಳುವ ಹರಿಯು ಸರ್ವಶಕ್ತನಾಗಿದ್ದೂ ತನ್ನ ಅಶಕ್ತಿಯನ್ನು ಯಮುನೆಯ ಮುಂದೆ ತೋರುವ ವಿಡಂಬನೆ ಮಾಡಿದಂತಿತ್ತು.

ಸರ್ವಶಕ್ತನಾಗಿದ್ದರೂ ಭಗವಂತನು ಶಿಶುವಾಗಿದ್ದಾಗ, ತನ್ನ ಅಶಕ್ತಿಯನ್ನು ತೋರ್ಪಡಿಸಿ ದ್ದಾನೆ. ತನ್ನಿಂದ ಏನೂ ಸಾಧ್ಯವಿಲ್ಲವೆಂಬಂತೆ ನಟಿಸಿದ್ದಾನೆ. ವಸುದೇವನು ಯಮುನೆಯ ತೀರಕ್ಕೆ ಬಂದ ಕಾಲದಲ್ಲಿ ಎಲ್ಲಾ ಪುಷ್ಪಗಳು ಚೆನ್ನಾಗಿ ಅರಳಿ, ಭಗವಂತನಿಗೆ ಉಲ್ಲಾಸವನ್ನುಂಟು ಮಾಡುವ ಹಾಗೆ ಕಂಡವು. ಚಕ್ರವಾಕ ಪಕ್ಷಿಗಳು ಆನಂದದಿಂದ ಗಾನ ಮಾಡಿದವು.

ವಿಕಚ ಕೈರವತಾರ ಕಿತಾಕೃತಿಂ ತನುಮತೀಮಿವ ಶಾರದಯಾಮಿನೀಂ।
ತ್ವರಿತ ಮಂಬುನಿಧೇರಭಿಸಾರಿಕಾಂ ತರಿತುಮೈಹತ ಸತ್ಯ ಸಮೀಹಿತಃ ॥೨೯॥

ವಸುದೇವನು ಯಮುನೆಯನ್ನು ದಾಟಲು ಇಚ್ಛಿಸಿದನು. ನಕ್ಷತ್ರಗಳಿಂದ ಅಲಂಕರಿಸಲ್ಪಟ್ಟ ಶರತ್ಕಾಲದ ರಾತ್ರಿ ಎಂಬ ಪ್ರೇಮಿಯು ಸಮುದ್ರವೆಂಬ ಪ್ರೇಮಿಯೊಡನೆ ಸೇರಿ, ತನ್ನ ನಕ್ಷತ್ರ ಗಳನ್ನು ಅದರಲ್ಲಿ ಪ್ರತಿಫಲಿಸಿ, ಯಮುನೆಯೆಂಬ ಅಭಿಸಾರಿಕೆಯು ಅಲಂಕರಿಸಿಕೊಂಡು ಬರುವಂತಿತ್ತು.

ಶೃಂಗಾರ ರಸದಿಂದ ಕೂಡಿರುವ ಶ್ಲೋಕ. ರಾತ್ರಿಯ ಕಾಲದಲ್ಲಿ ತಿಳಿಯಾದ ಯಮುನೆಯ

ನದಿಯ ನೀರಿನಲ್ಲಿ ನಕ್ಷತ್ರಗಳು ಕಾಂತಿಯು ಪ್ರತಿಫಲಿಸುತ್ತಿತ್ತು. ತನ್ನ ಇನಿಯನಾದ ಸಮುದ್ರವನ್ನು ಸೇರುವ ಯಮುನೆಯು ಸರ್ವಾಲಂಕಾರಭೂಷಿತೆಯಾಗಿ, ಪ್ರೇಮಿಯನ್ನು ಸೇರುವ ಅಭಿಸಾರಿಕೆಯಂತೆ ತೋರಿ ನೋಡುವವರಿಗೆ ಆನಂದವನ್ನು ಉಂಟುಮಾಡುತ್ತಿದ್ದಳು.

ಭವತಿ ಕಿಂನು ಭವಿಷ್ಯತಿ ವಾ ಕಿಮಿತ್ಯನವಧಾರಿತ ಶೌರಿ ವಿಹಾರಯಾ।
ಚಕಿತಯೇವ ವಿರೋಚನ ಕನ್ಯಯಾ ವಿಧುತ ವೀಚಿಕರಂ ಕಿಲವಿವ್ಯಥೇ ॥೪೦॥

ಸೂರ್ಯನ ಮಗಳಾದ ಯಮುನೆಯು ತನ್ನ ಅಲೆಗಳನ್ನು ಕುಗ್ಗಿಸಿಕೊಂಡು ಹರಿಯುವಾಗ, ಅದು ಭಗವಂತನ ಲೀಲೆಯೆಂದು ಅರಿಯದೆ, ಕಂಸನ ಭಯದಿಂದ ಸಣ್ಣದಾಗಿ ಹರಿಯುತ್ತಿದ್ದಾಳೆಂದು ವಸುದೇವನು ಭಾವಿಸಿದನು.

ಶ್ರೀಕೃಷ್ಣನಲ್ಲಿ ವಿಶೇಷ ಗೌರವವನ್ನೂ, ಭಕ್ತಿಯನ್ನೂ ಹೊಂದಿದ್ದ ಯಮುನೆಯು, ವಸುದೇವನು ತನ್ನನ್ನು ಸುಲಭವಾಗಿ ದಾಟುವುದಕ್ಕಾಗಿ ತನ್ನ ವೇಗವನ್ನೂ, ಆಳವನ್ನೂ ಕಡಿಮೆ ಮಾಡಿಕೊಂಡಳು. ಅದನ್ನು ನೋಡಿ ಆಶ್ಚರ್ಯಪಟ್ಟು ಕಂಸನಿಗೆ ಭಯಪಟ್ಟು ತನ್ನ ವೇಗವನ್ನೂ, ಆಳವನ್ನೂ ಕಡಿಮೆ ಮಾಡಿಕೊಂಡಳೇನೋ ಎಂದು ವಸುದೇವನು ಭಾವಿಸಿದನು.

ಘನತಮಃ ಪರಿಪಾಕ ಮಲಿಮಸ್ಯೈರ್ಗುರುಭಿರೂರ್ಮಿ ಗುಣ್ಯೈರನುಪಪ್ಲುತಃ।
ಅತಿತ ತಾರ ದಿನಾದಿಪತೇಃ ಸುತಾಮನಘ ಯೋಗ ಮನಾ ಇವ ಸಂಸೃತಿಂ ॥೪೧॥

ಪಾಪಗಳಿಗೆ ವಿರೋಧಿಯಾದ ಯೋಗಸಿದ್ಧಿಯ ಮನವನ್ನು ಹೊಂದಿದ ಮಹಾತ್ಮರು, ತಮೋಗುಣವು ಉಂಟು ಮಾಡುವ ಆಭಾಸಗಳಾದ ಹಸಿವು, ದಾಹ, ದುಃಖ, ಮೋಹ, ಜರೆ, ಮುಂತಾದ ಅಲೆಗಳಿಗೆ ಒಳಪಡದೆ, ಸಂಸಾರವನ್ನು ದಾಟುವ ಹಾಗೆ, ವಸುದೇವನು ನದಿಯ ಅಲೆಯಿಂದ ಬಾಧಿಸಲ್ಪಡದೆ ಸುಲಭವಾಗಿ ಯಮುನೆಯನ್ನು ದಾಟಿದನು.

ಮಹಾತ್ಮರು ಯಾವ ರೀತಿ ತಮ್ಮ ಮನಸ್ಸನ್ನು ಜಯಿಸಿ, ತಮೋಗುಣದಿಂದ ಉಂಟಾಗುವ ದುಷ್ಕೃತಿಗಳ ಪ್ರಭಾವವನ್ನು ದಾಟುವರೋ ಅದನ್ನು ವಸುದೇವನು ಲೀಲಾಜಾಲವಾಗಿ ಯಮುನೆಯನ್ನು ದಾಟಿದುದಕ್ಕೆ ಹೋಲಿಸಿದ್ದಾರೆ. ಜ್ಞಾನಿಗಳಾದವರಿಗೆ ಸಂಸಾರ ಸಮುದ್ರವನ್ನು ದಾಟುವುದು ಸುಲಭ. ಅದೇ ರೀತಿ ಯಾವ ತೊಂದರೆ, ಅಡಚಣೆಗಳಿಲ್ಲದೆ, ವಸುದೇವನು ಯಮುನೆಯ ಆಚೆ ದಡವನ್ನು ತಲುಪಿದನು.

ಯದುಪತೇರ್ಯಮುನಾ ತ್ವರಿತಂ ಯತಃ ಪ್ರತಿಯತಶ್ಚ ಸಮರ್ಪಿತ ಪದ್ಧತಿಃ।
ಸ್ವಯಮಮರ್ತ್ಯ ಮದಾವಲ ಮಜ್ಜನೀ ಚರಣಲಂಘ್ಯ ಜಲಾ ಸಮಜಾಯತ ॥೪೨॥

ಯಮುನೆಯು ತಾನು ದೇವ ಗಜಗಳಿಗೆ ಮಾರ್ಗ ಬಿಡುವ ಹಾಗೆ ವಸುದೇವರು ಮತ್ತೆ ಹಿಂತಿರುಗಿ ಬರೆವವರೆಗೂ, ಕಾಲಿನಲ್ಲಿ ನಡೆದುಹೋಗುವ ರೀತಿ ತನ್ನ ಆಳವನ್ನು ಕಡಿಮೆ ಮಾಡಿಕೊಂಡು ಮಾರ್ಗವನ್ನು ತೋರಿದಳು.

ಗಜಗಳು ನದಿಗಳನ್ನು ದಾಟುವಾಗ ಅವುಗಳ ಕಾಲುಗಳು ಪೂರ್ತಿಯಾಗಿ ನೀರಿನಲ್ಲಿ ಮುಳುಗುವುದಿಲ್ಲ. ಐರಾವತವೇ ಮುಂತಾದ ದೇವ ಗಜಗಳಿಗೆ ಯಮುನೆಯು ಗೌರವ ತೋರಿಸಿ ತನ್ನ ಆಳವನ್ನು ಇನ್ನೂ ಕಡಿಮೆ ಮಾಡಿಕೊಳ್ಳುತ್ತಾಳೆ.

ಅದೇ ರೀತಿ ಯಮುನೆಯು ಈ ಸಂದರ್ಭದಲ್ಲಿ ವಸುದೇವನು ನಂದಗೋಕುಲಕ್ಕೆ ಹೋಗಿ ಹಿಂತಿರುಗಿ ಬರುವವರೆಗೂ ಧಾರಾಕಾರವಾದ ಮಳೆಯಿದ್ದರೂ ತನ್ನ ವೇಗವನ್ನೂ ಆಳವನ್ನೂ ನಿಯಂತ್ರಿಸಿಕೊಂಡಿದ್ದಳು.

ಅಜನಿ ಪಶ್ಚಿಮತೋ ಧೃಶಮುನ್ನತಾ ರವಿಸುತಾ ಪುರತಃ ಸ್ಥಲಶೇಷಿತಾ।
ಅಧಿರುರೋಹ ಪದಂ ಕಿಮಸೌ ಹರೇಃ ಪ್ರತಿಯಯೌ ಯದಿ ವಾ ಪಿತರಂ ಗಿರಿಂ॥೪೩॥

ವಸುದೇವನಿಗೆ ಜಾಗ ಬಿಡಲು ಯಮುನೆಯು ತನ್ನ ಪ್ರವಾಹವನ್ನು ತಗ್ಗಿಸಿಕೊಂಡಳು. ಅದರಿಂದ ಮೇಲಿನ ದಿಕ್ಕಿನಲ್ಲಿ ರಭಸ ಜಾಸ್ತಿಯಾಗಿ ಕೆಳಗೆ ರಭಸ ಕಡಿಮೆಯಾಯಿತು. ಇದೇನು ವಿಷ್ಣುವಿನ ಪದ ಸ್ಥಾನಕ್ಕೋ ಅಥವಾ ತನ್ನ ತಂಗಿಯಾದ ಕಲಿಂದ ಪರ್ವತದ ಕಡೆಗೆ ಹರಿಯುತ್ತಿದೆಯೋ ಎಂಬಂತಿತ್ತು. (ತನ್ನ ಸಖಿಯಾದ ಗಂಗೆಗೆ ವಿಷ್ಣುಪಾದ ಸಂಬಂಧ ವಿರುವಂತೆಯೇ ತನಗೂ ಇದೆ ಎಂಬುದನ್ನು ತೋರುವಂತಿತ್ತು).

ಗಂಗೆಗಿಂತ ತಾನೇನು ಕಡಿಮೆಯಿಲ್ಲ ಎನ್ನುವುದನ್ನು ತೋರುವುದಕ್ಕಾಗಿ, ಅಂದರೆ ತನಗೂ ಭಗವಂತನ ತಿರುವಡಿಯ ಸಂಬಂಧವಿದೆ ಎಂಬುದನ್ನು ವಿಶದಪಡಿಸಲು, ಯಮುನೆಯು ಆ ಶ್ರೀಕೃಷ್ಣನು ಪಾದಗಳು ಇದ್ದ ದಿಕ್ಕಿನಲ್ಲಿ ತನ್ನ ರಭಸವನ್ನು ತಗ್ಗಿಸಿಕೊಂಡು ಮೃದುವಾಗಿ ಹರಿಯುತ್ತಾ, ವಸುದೇವನಿಗೆ ಯಾವ ಆಯಾಸವೂ ತೋರದಂತೆ ಇದ್ದಳು. ಭಗವಂತನ ದಿವ್ಯ ಪಾದಾರವಿಂದದ ಸ್ಪರ್ಶವನ್ನು ಎಲ್ಲರೂ ಬಯಸುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನ. ಕಲಿಂದ ಪರ್ವತದಲ್ಲಿ ಹುಟ್ಟುವುದರಿಂದ ಯಮುನೆಗೆ ಕಾಲಿಂದೀ ಎಂದು ಮತ್ತೊಂದು ಹೆಸರು.

ಅಕೃತ ಸೇತು ಮನಾಕಲಿತ ಪ್ಲವಾಂ ಜನನ ಸಿಂಧು ದೃಢಪ್ಲವ ಮುದ್ವಹನ್।
ರವಿಸುತಾಮತಿಲಂಘ್ಯ ರಮಾಪತಿಂ ಸಪದಿ ಘೋಷ ಸಮೀಪ ಮುಪಾನಯತ್॥೪೪॥

ಸಂಸಾರ ಸಮುದ್ರಕ್ಕೆ ದೋಣಿಯಿಂದ ಭಗವಂತನನ್ನು ತಾನು ಹೊತ್ತು ಕೊಂಡು, ಅಣೆಕಟ್ಟು ಇಲ್ಲದೆಯೇ, ಯಾವ ಸಹಾಯವೂ ಇಲ್ಲದೆಯೇ ವಸುದೇವನು ಆಚೆ ದಡವನ್ನು ಸೇರಿ, ಗೊಲ್ಲರ ಕೇರಿಗೆ ಬಂದು ಸೇರಿದನು.

ನಮ್ಮನ್ನೆಲ್ಲಾ ಸಂಸಾರ ಸಮುದ್ರದಿಂದ ದಾಟಿಸುವವನು ಆ ಭಗವಂತನೇ. ಅದಕ್ಕಾಗಿ ನಾವು ಬಹಳ ಶ್ರಮಪಡಬೇಕು. ಆದರೆ ಸಾಕ್ಷಾತ್ ಆ ಭಗವಂತನನ್ನೇ ತಲೆಯಲ್ಲಿ ಹೊತ್ತು ಕೊಂಡಿದ್ದ ವಸುದೇವನು ಬೇರೆ ಯಾರ ಸಹಾಯವೂ ಇಲ್ಲದೆ, ಯಾವ ಸೇತುವೆಯಾಗಲೀ ಇಲ್ಲದೆಯೇ ಆ ಯಮುನಾ ನದಿಯನ್ನು ಸುಲಭವಾಗಿ ದಾಟಿ (ಭಗವಂತನ ಅನುಗ್ರಹ ಇದ್ದುದರಿಂದ) ಗೋಕುಲಕ್ಕೆ ಬಂದನು.

ಅಥ ಕಯಾಚನ ಕಾರಣ ನಿದ್ರಯಾ ವಿವಿಶ ಸುಪ್ತಜನಂ ವ್ರಜಮಾವಿಶತ್।
ಧನದ ಪತ್ತನ ಸಂಪದಿ ಯತ್ರ ಸಾ ಸ್ವಸುತ ಮಗ್ರ್ಯ ಮಸೂಯತ ರೋಹಿಣಿ ॥೪೫॥

ಆಶ್ಚರ್ಯದಿಂದ ಎಲ್ಲರಿಗೂ ಸಂಸಾರದಲ್ಲಿ ಕಷ್ಟವನ್ನು ಉಂಟು ಮಾಡಲು ಕಾರಣವಾದ ಮಾಯೆಯೆಂಬ ನಿದ್ರೆಯಿಂದ, ಪರವಶವಾಗಿ ಮಲಗಿದ್ದ ಆ ಗೊಲ್ಲರ ಕೇರಿಗೆ ವಸುದೇವನು ಪ್ರವೇಶಿಸಿದನು. ಅಲ್ಲಿಯೇ ಅಲ್ಲವೆ ಅವನ ಹಿರಿಯ ಹೆಂಡತಿಯಾದ ರೋಹಿಣಿಯು ಇದ್ದದ್ದು ಅವಳೇ ಇವನ ಹಿರಿಯ ಮಗ (ಬಲರಾಮನನ್ನು) ಹೆತ್ತವಳು.

ಬಲರಾಮನು ವಸುದೇವನ ಹಿರಿಯ ಮಗ ರೋಹಿಣಿಯ ಹೊಟ್ಟೆಯಲ್ಲಿ ಶೇಷಾಂಶದಿಂದ ಹುಟ್ಟಿದವನು. ರೋಹಿಣಿಯು ನಂದಗೋಕುಲದಲ್ಲೇ ಇದ್ದಳು. ವಸುದೇವನು ಶ್ರೀಕೃಷ್ಣನನ್ನು ಎತ್ತಿಕೊಂಡು ಬಂದು ಗೊಲ್ಲರ ಕೇರಿಯನ್ನು ತಲುಪಿದನು. ಅಲ್ಲಿಯೂ ಸಹ ಎಲ್ಲರೂ ಮೈಮೇಲೆ ಎಚ್ಚರ ತಪ್ಪಿದವರಂತೆ ಮಲಗಿದ್ದರು. ಭಗವಂತನೇ ಮಾಯೆಯನ್ನು ಉಂಟು ಮಾಡುವವನು. ಅವನೇ ಅದನ್ನು ನೀಗಿಸುವವನೂ ಕೂಡ. ಆ ಭಗವಂತನ ಮಾಯೆಯ ಪ್ರಭಾವದಿಂದ ಎಲ್ಲರೂ ನಿದ್ರಿಸುತ್ತಿದ್ದರು.

ಉಪಗತೆ ವಸುದೇವಸುತೇಽಂತಿಕಂ ನರಕವೈರಿಣಿ ನಂದ ಕುಟುಂಬಿನಿ।
ಅರಣಿ ಸಂಭವ ಪಾವಕ ಸಂಗಮಾದಭಜತಾಧ್ವರವೇದಿರಿವ ಶ್ರಿಯಂ ॥೪೬॥

ನರಕ ವಿರೋಧಿಯಾದ (ನರಕಾಸುರನನ್ನು ವಧಿಸಿದ) ವಸುದೇವ ಕುಮಾರನು ತನ್ನ ನೆಲೆಯನ್ನು ಸೇರಿದ ತಕ್ಷಣ (ನಂದನ ಹೆಂಡತಿಯಾದ ಯಶೋದೆ) ಅರಣಿ ಕಾಷ್ಟದಲ್ಲಿ ತೋರುವ ಅಗ್ನಿಯು ಯಜ್ಞಕುಂಡದಲ್ಲಿ ಪ್ರಜ್ವಲಿಸುವಂತೆ ಬೆಳಗಿದನು. ಯಶೋದೆಯ ಸ್ಥಳವನ್ನು ಸೇರಿದುದು ಹೇಳಲ್ಪಟ್ಟಿತು.

ಶ್ರೀಕೃಷ್ಣನಿಗೆ ಮಥುರೆಗಿಂತ ನಂದಗೋಕುಲವೇ ಹೆಚ್ಚು ಪ್ರಿಯವಾದ ಸ್ಥಳ. ಅವನ ಅದ್ಭುತ ಲೀಲೆಯ ಬಹುಭಾಗವೆಲ್ಲಾ ಅಲ್ಲಿಯೇ ಕಳೆದುದು. ಅವನು ತೋರಿದ ಮಹಾ ಮಹಿಮೆಗಳೆಲ್ಲವೂ ಅಲ್ಲಿಯೇ. ಹೀಗಾಗಿ, ನಂದಗೋಕುಲವನ್ನು ಸೇರಿದ ತಕ್ಷಣ ಆ ಶಿಶುವಿನ ಮುಖದಲ್ಲಿ ಮಹತ್ತಾದ ಕಾಂತಿ ಉಂಟಾಯಿತು. ಅಗ್ನಿಯು ವೇದಿಯ ಮಧ್ಯದಲ್ಲಿ ಪ್ರಜ್ವಲಿಸುವಂತೆ ಶಿಶುವು ನಂದಗೋಕುಲದಲ್ಲಿ ಪ್ರಕಾಶಮಾನವಾಗಿ ತೋರಿತು.

ನ್ಯಧಿತ ನಂದ ವಧೂ ಸವಿಧೆ ಸುತಂ ದ್ರುತ ಮುಪಾದಿತ ಗೋಪಕುಮಾರಿಕಾಂ।
ಅಥ ನಿನಾಯ ಚ ದೇವಕ ನಂದನಿ ಶಯನಮಾನಕದುಂಧುಭಿರಾಶು ತಾಂ ॥೪೭॥

ಮತ್ತೆ ವಸುದೇವನು ನಂದನ ಹೆಂಡತಿಯೊಡನೆ ತನ್ನ ಮಗುವನ್ನು ಇಟ್ಟು, ನಂತರ ಅಲ್ಲಿ ಹುಟ್ಟಿದ್ದ ಹೆಣ್ಣು ಮಗುವನ್ನು ತೆಗೆದುಕೊಂಡು ಮಥುರೆಗೆ ಹಿಂತಿರುಗಿ ದೇವಕಿಯ ಮಡಿಲಲ್ಲಿ ಮಲಗಿಸಿದಾಗ, ಎಲ್ಲಾ ಒಂದು ಘಟ್ಟಕ್ಕೆ ಬಂದು ಮುಟ್ಟಿತು.

ವಸುದೇವನು ಯಶೋದೆಯು ಪ್ರಸವಿಸಿದ್ದ ಹೆಣ್ಣು ಮಗುವನ್ನು ತೆಗೆದುಕೊಂಡು, ಶ್ರೀಕೃಷ್ಣನನ್ನು ಅವಳ ಪಕ್ಕದಲ್ಲಿ ಮಲಗಿಸಿ, ವಾಪಸ್ ಯಮುನೆಯನ್ನು ದಾಟಿ, ಮಥುರೆಯ ಸೆರೆಮನೆಗೆ ಬಂದು ಆ ಹೆಣ್ಣು ಮಗುವನ್ನು ದೇವಕಿಯ ಮಡಿಲಿನಲ್ಲಿ ಮಲಗಿಸಿದಾಗ, ಶ್ರೀಕೃಷ್ಣಾವತಾರದ ಮೊದಲ ಘಟ್ಟ ಮುಗಿಯಿತು.

ಅನವ ಬದ್ಧ ಜನಾರ್ದನ ಕನ್ಯಕಾ ವಿನಿಮಯ ಸ್ತ್ವಥ ಭೋಜ ಗಣೇಶ್ವರಃ ।
ದೃಷದಿ ತಾಮಭಿಹಂತು ಮಪಾತಯತ್ ಪ್ರತಿಜಘಾನ ಚ ಸಾ ಚರಣೇನತಂ ॥೪೮॥

ಕಂಸನು ಭೋಜಾದಿಗಳಿಗೆ ಒಡೆಯನಾಗಿದ್ದು, ಗಂಡು ಹೆಣ್ಣು ಮಕ್ಕಳುಗಳು ಅದಲು ಬದಲಾಗಿರುವುದನ್ನು ತಿಳಿಯದೆಯೇ ಆ ಹೆಣ್ಣು ಶಿಶುವನ್ನೇ ಹಾರೆಯಿಂದ ಬಡಿದು ಕೊಲ್ಲಲು ಪ್ರಯತ್ನಿಸಿದನು. ಆ ಶಿಶುವು ಇವನನ್ನು ತನ್ನ ಕಾಲಿನಿಂದ ಪ್ರತಿಯಾಗಿ ಒದೆಯಿತು.

ಕಂಸನು ಯಶೋದೆಯ ಎಂಟನೇಯ ಮಗುವನ್ನು ಪ್ರಸವಿಸಿದಳೆಂದು ತಿಳಿದು ಸೆರೆಮನೆಗೆ ಓಡಿ ಬಂದು ಆ ಹೆಣ್ಣು ಮಗುವನ್ನು ಅದು ಹೆಣ್ಣು ಶಿಶು ಎಂಬುದನ್ನೂ ಕನಿಕರಿಸಿದೆ ಅದನ್ನು ಹಾರೆಯಿಂದ ಬಡಿದು ಕೊಲ್ಲಲು ಪ್ರಯತ್ನಿಸಿದನು. ಆದರೆ ಆ ಶಿಶುವು ಅವನ ಕೈಯಿಂದ ತಪ್ಪಿಸಿಕೊಂಡು, ಪ್ರತಿಯಾಗಿ ಮೇಲಕ್ಕೆ ಹಾರಿ ಅವನನ್ನೇ ತನ್ನ ಕಾಲಿನಿಂದ ಒದೆಯಿತು.

ನೃಪತಿರಾಶು ಪದಾನಿಹತಸ್ತಯಾ ನಿಪತಿತೋದಿತ ಕಂದುಕವದ್ಭವನ್।
ದವಸ ಮಾಧೃತ ಶೈಲನಿಭಃ ಕ್ರುಧಾ ದರನಿಮೀಲಿತ ದೃಷ್ಟಿರದೂಯತ ॥೪೯॥

ಆ ಶಿಶುವು ಕಾಲಿನಿಂದ ಒದೆಯಲ್ಪಟ್ಟು ಕೆಳಗೆ ಚಂಡಿನಂತೆ ಬಿದ್ದ ಆ ಕಂಸನು ಅತ್ಯಂತ ಕೋಪಾವಿಷ್ಟನಾಗಿ ಆ ಶಿಶುವನ್ನು ಕೆಂಗಣ್ಣುಗಳಿಂದ ನೋಡಿದನು.

ಕಂಸನು ಆ ಶಿಶುವಿನ ಆ ಕೃತ್ಯವನ್ನು ನೋಡಿ ಕೋಪೋದ್ರಿಕ್ತನಾಗಿ ಅದನ್ನು ಸುಟ್ಟುಬಿಡು ವಂತೆ ನೋಡಿದನು. ನಾರಾಯಣೀಯಂನ ಶ್ಲೋಕ ಹೀಗಿದೆ

ಧ್ರುವಂ ಕಪಟ ಶಾಲಿನೋ ಮಧುಹರಸ್ಯ ಮಾಯಾಭವೇ
ದಸಾವಿತಿ ಕಿಶೋರಿಕಾಂ ಭಗಿನಿಕಾ ಕರಾಲಿಂಗಿತಾಂ।
ದ್ವಿಪೋನಲಿನಿ ಕಾಂತರಾದಿವ ಮೃಣಾಲಿ ಕಾಮಾಕ್ಷಿಪ
ನ್ನಯಂ ತ್ವದನುಜಾಮ ಜಾಮುಪಲ ಪಟ್ಟಕೇ ವಿಷ್ಪರಾನ್ ॥

"ಇದು ನಿಶ್ಚಯವಾಗಿಯೂ ಕಪಟಶಾಲಿಯಾದ ಮಧುಹರನಾದ ವಿಷ್ಣುವಿನ ಮಾಯೆಯೇ ಎಂದುಕೊಂಡು ಕಂಸನು ಆನೆಯು ಕಮಲದಿಂದ ತುಂಬಿರುವ ಸರೋವರಕ್ಕೆ ನುಗ್ಗಿ ಎಳೆಯ ಕಮಲ ಕಾಂಡವನ್ನು ಕೀಳುವಂತೆ ತಂಗಿಯ ಕೈಯ್ಯಲ್ಲಿದ್ದ ಹೆಣ್ಣು ಶಿಶುವನ್ನು ಕೈಯ್ಯಿಂದ ಕಿತ್ತುಕೊಂಡು ನಿನ್ನ ತಂಗಿಯಾದ ಮಾಯೆಯನ್ನು ಪುಡಿ ಪುಡಿ ಮಾಡಲೋ ಎಂಬಂತೆ ಕಲ್ಲುಬಂಡೆಯ ಮೇಲೆ ಒಗೆದನು".



ಉದಪತತ್ ದಿವಮುಗ್ರ ಘನ ಸ್ವನಾ ಯುವತಿ ರೂಪ ಯುಗಾತ್ಯಯ ಶರ್ವರಿ।
ಅಸುರ ಘಾತಿಭಿರಷ್ಟ ಭಿ ರಾಯುಧೈರಲಘುಭಿಶ್ಚಪಲಾಭಿ ರಿವಾಶ್ರಿತಾ ॥೫೦॥

ಕೆಳಗೆ ಬಿದ್ದ ಆ ಶಿಶುವೂ ಸಹ ತನ್ನ ಮಾಯೆಯಿಂದ ಅನೇಕ ಶಸ್ತ್ರಗಳನ್ನು ಹೊಂದಿರುವ ಯುವತಿಯ ರೂಪ ತಾಳಿ, ಅಸುರರುಗಳನ್ನು ನಾಶ ಮಾಡಲು ದೊಡ್ಡ ಗರ್ಜನೆ ಮಾಡಿ, ಪ್ರಳಯ ಕಾಲದಲ್ಲಿ ಮೇಘಗಳು ಗರ್ಜಿಸುವ ಹಾಗೆ ಮಿಂಚಿ ಭಯವನ್ನುಂಟುಮಾಡಿತು.

ಆ ಶಿಶುವು ಒಬ್ಬ ಯುವತಿಯ ರೂಪ ತಾಳಿ, ಅನೇಕ ಶಸ್ತ್ರಗಳನ್ನು ಹೊಂದಿ, ಅಸುರರ ಸಂಹಾರಕ್ಕೆ ತಾನು ಜನಿಸಿರುವಳೆಂಬುದನ್ನು ಸಾಬೀತುಪಡಿಸುವಂತೆ ಗರ್ಜಿಸಿತು. ಆಗ ದಶ ದಿಕ್ಕುಗಳಲ್ಲಿಯೂ ಪ್ರಳಯ ಕಾಲದಂತೆ ಭಯ ಪ್ರಾಪ್ತಿಯಾಯಿತು.

ಅಥ ಚ ಭೋಜ ನಿಯಂತುರ ಯಂತ್ರಿತಾ ದನುಜಹಂತು ರುದಂತಮುದೈರಿರತ್।
ಪಟು ಗಭೀರ ಮುದಾರ ಮನಾಕುಲಂ ಹಿತಮವಿಸ್ತರ ಮರ್ತ್ಯ ಮವಿಪ್ಲವಂ ॥೫೧॥

ಮೇಲಕ್ಕೆ ಹಾರಿ ಕಂಸನಿಗೆ ಹೆದರದೆ ಗರ್ಜನೆಯನ್ನು ಮಾಡಿ, ಕಂಸನನ್ನು ಅನುಸರಿಸುವ ರಾಕ್ಷಸರರೆಲ್ಲರನ್ನೂ ಸಂಹರಿಸುವ ಭಗವಂತನ ಬಗ್ಗೆಯೂ ಹೇಳಿತು. ಆ ಮಾತುಗಳು, ದೃಢವಾಗಿಯೂ, ಸತ್ಯವಾಗಿಯೂ ಸರ್ವರಿಗೂ ಹಿತವನ್ನುಂಟು ಮಾಡುವ ಹಾಗಿತ್ತು.

ಆ ಯೋಗಮಾಯೆಯು ಕಂಸನ ಕೈಯ್ಯಿಂದ ತಪ್ಪಿಸಿಕೊಂಡು ಮೇಲಕ್ಕೆ ಹಾರಿ "ಎಲವೋ ದುಷ್ಟ ಕಂಸಾ, ನನ್ನನ್ನು ಕೊಂದು ನಿನಗೇನು ಪ್ರಯೋಜನ ? ನಿನ್ನ ಹಂತಕನು ಬೇರೆಲ್ಲಿಯೋ ಬೆಳೆಯುತ್ತಿದ್ದಾನೆ. ಅವನ ಬಗ್ಗೆ ಜಾಗ್ರತೆಯಾಗಿರು" ಎಂದು ಹೇಳಿ ಮಾಯ ವಾಯಿತು. (ಶ್ರೀ ನಾರಾಯಣೀಯಂನಲ್ಲಿ 401 ನೇ ಶ್ಲೋಕ ಹೀಗಿದೆ).

ನೃಶಂಗಿತರ ಕಂಸ ತೇ ಕಿಮು ಮಯಾ ವಿನಿಷ್ಪಿಷ್ಟಯಾ
ಬಭೂವ ಭವದಂತಕ, ಕ್ವಚನ ಚಿಂತತ್ಯಾಂ ತೇ ಹಿತಂ।
ಇತಿ ತ್ವದನುಜಾ ವಿಭೋ ಖಲು ಮುದೀರ್ಯಂ ತಂ ಜನ್ಮಷೀ
ಮರುದ್ಗಣ ಪಣಾಯಿತಾ ಭುವಿಚಮಂದಿರಾಣ್ಯೇಯುಷೀ ॥

"ಹೇ ಕಂಸನೇ ! ನೀನು ನನ್ನನ್ನು ಹೀಗೆ ಪುಡಿ ಪುಡಿ ಮಾಡುವುದರಿಂದ ಯಾವ ಪ್ರಯೋಜನ ವಾದೀತು ? ನಿನ್ನ ಅಂತಕನು ಇನ್ನೆಲ್ಲೋ ಹುಟ್ಟಿದ್ದಾನೆ. ನಿನ್ನ ಹಿತದ ಬಗ್ಗೆ ಚಿಂತಿಸು" ಎಂದು ಆ ಖಳನನ್ನು ಉದ್ದೇಶಿಸಿ" ಯೋಗ ಮಾಯೆಯು ಹೇಳಿದಳು.

ಅಹಮಶೇಷ ಸುರಾಸುರ ಮೋಹನಿ ಯವನಿಕಾ ಮಧುಕೈಟಭ ಮರ್ಧಿನಃ।
ಪ್ರಬಲ ಶುಂಬ ನಿಶಂಭ ನಿಷೂದನೆ ಪ್ರಣಿಹಿತಾ ಹತಯಾ ತವಕಿಂ ಮಯಾ ॥೫೨॥
ವಸತಿ ನಂದಗೃಹೇ ವಿಭುದ ದ್ವಿಷಾಂ ದಮಯಿತಾ ವಸುದೇವ ಸಮುದ್ಭವಃ।
ಅಯಮಸೌ ತವ ನಾಶಯಿತೇತಿ ಸಾ ದರಮುದೀರ್ಯ ಜಗಾಮ ಯಥೇಪ್ಸಿತಂ ॥೫೩॥

"ನಾನು, ದೇವತೆಗಳು, ಅಸುರರು ಎಲ್ಲರನ್ನೂ ಮೋಹದಿಂದ ನಾಶ ಮಾಡುವವಳು. ಮಧುಕೈಟಭರನ್ನು ನಿಗ್ರಹಿಸಿ ಭಗವಂತನಿಗೆ ಸಹಾಯ ಮಾಡಿದವಳು. ಅವನು ನನ್ನನ್ನು ಕಂಡು ತಾನು ಹುಟ್ಟಿದುದು ತಿಳಿಯದ ಹಾಗೆ ಬೇರೆಡೆ ಇದ್ದಾನೆ. ನಿನಗಿಂತಲೂ ಅಧಿಕ ಬಲಶಾಲಿಗಳಾಗಿದ್ದ ಶುಂಭ - ನಿಶುಂಭರನ್ನು ಕೊಲ್ಲಲು ಅವನಿಂದ ನಿಯಮಿಸಲ್ಪಟ್ಟವಳು. ನನ್ನನ್ನು ನೀನು ಹಾರೆಯಿಂದ ಹೊಡೆದರೆ ಏನಾಗುತ್ತದೆ?

ದೇವತೆಗಳಿಗೆ ವಿರೋಧಿಗಳಾದವರನ್ನು ನಿಗ್ರಹಿಸಲು ವಸುದೇವ ಕುಮಾರನಾಗಿ ಅವತರಿಸಿರುವ ಭಗವಂತನು,ನಂದಗೋಪನ ಗೃಹದಲ್ಲಿ ಇದ್ದಾನೆ. ಆ ಸ್ವಾಮಿಯೇ ನಿನ್ನನ್ನು ಕೊಲ್ಲುವನು" ಈ ರೀತಿ ಆ ಯೋಗಮಾಯೆಯು ಸೂಕ್ಷ್ಮವಾಗಿ ಹೇಳಿ ತಾನು ಸೇರಬೇಕಾಗಿದ್ದ ಸ್ಥಳವನ್ನು ಸೇರಿದಳು.

ಮಧು ಹಿರಣ್ಯ ನಿಭೋ ಮಧುರಾಪತಿರ್ದಿನ ಹುತಾಶನ ದೀನದಶಾಂಗತಃ।
ಶ್ವಸಿತ ಜಲ್ಪಿತ ವೇಪಿತ ಹುಂಕೃತೈರರತಿ ಮಾಯತ ಭೀತಿರ ಸೂಚಯತ್ ॥೫೪॥

ಮಧು ಎಂದೂ, ಹಿರಣ್ಯನೆಂದೂ ಪ್ರಸಿದ್ಧರಾದ ಅಸುರರುಗಳಿಗೆ ಸಮನಾದ ಮಧುರಾ ಪಟ್ಟಣದ ಅರಸನಾದ ಕಂಸನು ಆ ಯೋಗಮಾಯೆಯ ಮಾತುಗಳನ್ನು ಕೇಳಿ, ಅತ್ಯಂತ ಕೋಪಾವಿಷ್ಟನಾಗಿ, ತನ್ನಲ್ಲಿ ತಾನೇ ಚಿಂತಿಸುತ್ತಾ, ಭಯಪಡುತ್ತಾ, ಹುಂಕರಿಸುತ್ತಾ ಜೋರಾಗಿ ಉಸಿರು ಬಿಡುತ್ತಿದ್ದನು.

ಯೋಗ ಮಾಯೆಯ ಮಾತುಗಳನ್ನು ಕೇಳಿ ಕಂಸನು ಚಿಂತಾಕ್ರಾಂತನಾಗಿ ಮುಂದೇನು ಮಾಡಬೇಕೆಂದು ಯೋಚಿಸತೊಡಗಿದನು. ಅವನ ಆಗಿನ ಪರಿಸ್ಥಿತಿಯು ಶೋಚನೀಯ ವಾಗಿತ್ತು. ತನ್ನಲ್ಲಿ ತಾನೇ ಭಯಪಡುತ್ತಾ, ತನ್ನ ಮೃತ್ಯು ಎಲ್ಲಿ ಬೆಳೆಯುತ್ತಿದೆಯೋ, ಅದನ್ನು ಹೇಗೆ ನಿಗ್ರಹಿಸಬೇಕು ಎಂಬುದಾಗೆಲ್ಲಾ ಲೆಕ್ಕಾಚಾರ ಹಾಕುತ್ತಾ, ಮನಸ್ಸು ಸ್ಥಿಮಿತದಲ್ಲಿಲ್ಲದೆ ತಳಮಳಗೊಂಡನು.

ಜಡಮತಿಃ ಸ ಜನಾರ್ದನ ಮಾಯಯಾ ವಿಹಸಿತ ಸ್ನಪಯಾ ಜನಿತ ವ್ಯಥಃ ।
ಅಪಕೃತಂ ವಸುದೇವ ಮಮೋಚಯತ್ ದಯಿತಯಾ ಸಹದೀನ ವಿಲಾಪಯಾ ॥೫೫॥

ಮೂಢನಾದ ಕಂಸನು ಭಗವಂತನ ಮಾಯೆಯಿಂದ ಪರಿಹಾಸ್ಯ ಮಾಡಲ್ಪಟ್ಟವನಾಗಿ, ಮುಂದೇನು ಮಾಡಬೇಕೆಂದು ಯೋಚಿಸುತ್ತಾ, ಮನಕ್ಲೇಶ ಹೊಂದಿ ತಮಗೆ ಅನಾವಶ್ಯಕವಾಗಿ ಸೆರೆ ವಾಸ ವಿಧಿಸಿದನೆಂದು ದುಃಖಿಸುತ್ತಿದ್ದ. ದೇವಕಿ ವಸುದೇವರನ್ನು ಸೆರೆಯಿಂದ ಬಿಡಿಸಿದನು.

ಅವನಿಗೆ ಆಗ ಸ್ವಲ್ಪ ಜ್ಞಾನೋದಯವಾಯಿತು. ತಾನು ಅನಾವಶ್ಯಕವಾಗಿ ದೇವಕಿ ವಸುದೇವರನ್ನು ಸೆರೆಯಲ್ಲಿ ಇಟ್ಟನೆಂದು ಪಶ್ಚಾತ್ತಾಪಪಟ್ಟು, ಅವರನ್ನು ಮೊದಲು ಸೆರೆಯಿಂದ ಬಿಡಿಸಬೇಕೆಂದು ನಿಶ್ಚಯಿಸಿದನು.

ಕಿಮಪಿ ಚಿಂತಿತ ಮಾಗತ ಮನ್ಯಥಾ ಕಿಮಿದ ಮಿತ್ಯವಶಾದುಪ ಜಾತಯಾ।
ವಿಷ ವಿದೂಷಿತಯೇವ ಮನೀಷಯಾ ಮುಹುರದೂಯತ ಮೋಹ ವಿಚೇಷ್ಟಿತಃ॥೫೬॥

ಮೋಹದಿಂದ ಕಲಕಿದ ಮನಸ್ಸುಳ್ಳವನಾಗಿ, 'ತಾನು ನೆನಸಿದ್ದೇ ಒಂದು, ಆದದ್ದು ಮತ್ತೊಂದು' ಎಂದು ತನ್ನನ್ನು ತಾನೇ ಹಳಿದುಕೊಂಡು, ವಿಷವನ್ನು ಸೇವಿಸಿ, ನಂತರ ಪಶ್ಚಾತ್ತಾಪ ಪಡುವವರಂತೆ ಚಿಂತೆಯಿಂದ ದುಃಖಿತನಾದನು.

'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎಂಬಂತೆ ತನ್ನ ಯೋಜನೆಗಳೆಲ್ಲವೂ ತಲೆಕೆಳಗಾಗಿದ್ದಕ್ಕೆ ದುಃಖಿಸುತ್ತಾ ಕಂಸನು ಬಹುವಾಗಿ ಪಶ್ಚಾತ್ತಾಪ ಪಟ್ಟನು. ಆದರೂ ಶ್ರೀಕೃಷ್ಣ ದ್ವೇಷವನ್ನು ಬಿಡಲಿಲ್ಲ. ಹೇಗಾದರೂ ಮಾಡಿ, ಕೃಷ್ಣನನ್ನು ಪತ್ತೆ ಮಾಡಿ, ಅವನನ್ನು ಕೊಂದು ಹಾಕಲು ಮುಂದಿನ ಚಿಂತನೆಗಳನ್ನು ಮಾಡತೊಡಗಿ, ತನ್ನ ಅನುಚರರಾದ ಅನೇಕ ಅಸುರ ರೊಡನೆ ಸಮಾಲೋಚನೆ ಮಾಡಲಾರಂಭಿಸಿದನು.

ಅವಿಷಯೇ ವಿಪದಾಮಸುರಾಂತಕೇ ಪುನರಿ ಯೇಷ ನಿಕಾರ ಪರಂಪರಾಂ।
ನಿಯತಿರೇಕ ಮುಖೀ ದುರಿತ ಕ್ರಮಾ ಕೃತಧಿಯಾ ಕಿಮುತಾಽಽವಿಲ ಚೇತಸಾ ॥೫೭॥

ಆಪತುಗಳಲ್ಲಿ ಸಿಲುಕಿದ ಭಗವಂತನ ಬಳಿ (ಕೃಷ್ಣನ ವಿಷಯದಲ್ಲಿ) ಮೇಲೆ ಮೇಲೆ ಅಪರಾಧಗಳನ್ನು ಮಾಡಲು ಯೋಚಿಸಿದನು. ಆ ಕಂಸನು ಬದಲಾಗದ ಒಂದೇ ಮನಸ್ಸಿನಿಂದ ಕೆಟ್ಟ ಯೋಚನೆಗಳನ್ನು ಮಾಡುವವನ ವಿಷಯದಲ್ಲಿ ಏನು ಮಾಡಲಾದೀತು?

ಶ್ರೀಕೃಷ್ಣನ ಜನನದಿಂದ 'ವಿನಾಶಕಾಲೇ ವಿಪರೀತ ಬುದ್ಧಿ' ಎನ್ನುವಂತೆ ಕಂಸನ ವಿನಾಶ ಕಾಲ ಪ್ರಾರಂಭವಾಯಿತು. ಕಂಸನ ಮನಸ್ಸು ಕೆಟ್ಟ ಯೋಚನೆಗಳಿಂದ ಮುಕ್ತವಾಗಲೇ ಇಲ್ಲ.

ಪರಿಬಭೂವ ಚುಕೋಪ ವಿಸಿಷ್ಮಿಯೇ ಪರಿಜಹಾಸ ಹರಿಂ ಪ್ರಜಗರ್ಜ ಚ।
ಪರಿಣತೇನ ಭವಾಂತರ ವಾಸನಾಽಽಗ್ರಹ ಗುಣೇನ ಭಜನ್ ಭವಿತವ್ಯತಾಂ ॥೫೮॥

ಹಿಂದಿನ ಜನ್ಮದಲ್ಲಿ ಮಾಡಿದ ಅಪಕಾರ ವಾಸನೆಯು ಪರಿಪಕ್ವವಾಗಿ ಮುಂದೆ ಹೊಂದ ಬೇಕಾದ ವಿಧಿಗೆ ವಶಪಟ್ಟವನಾಗಿ, ಭಗವಂತನ ಬಗ್ಗೆ ತಿರಸ್ಕಾರ ಹೊಂದಿ, ಅವನನ್ನು ನೆನೆದು ನೆನೆದು ಗರ್ಜಿಸುತ್ತಾ ಮೇಲೆ ಮೇಲೆ ಕ್ರೋಧವನ್ನು ಹೊಂದುತ್ತಿದ್ದನು.

ಕಂಸನ ಕ್ರೋಧವು ಭಗವಂತನ ಮೇಲೆ ಹೆಚ್ಚುತ್ತಾ ಹೋಯಿತು. ಹಿಂದಿನ ಜನ್ಮದಲ್ಲಿ ಅವನು ಮಾಡಿದ ದುಷ್ಟಕರ್ಮಗಳ ವಾಸನೆಯು ಅವನನ್ನು ಈ ರೀತಿ ಭಗವದ್ವೇಷಿಯನ್ನಾಗಿ

ಮಾಡಿತು. '**ಭಯಾತ್ ಕಂಸಃ**' ಎಂಬುದಾಗಿ ಶ್ರೀ ನಾರದ ಮುನಿಗಳು ಹೇಳಿದಂತೆ ಶ್ರೀಕೃಷ್ಣನೇ ತನಗೆ ಮೃತ್ಯು ಎಂಬುದನ್ನು ನೆನೆದು ನೆನೆದು ಭಯವಿಹ್ವಲನಾಗಿ ಕನಸಿನಲ್ಲಿಯೂ, ಬೆಚ್ಚಿಬಿದ್ದು ತಾನು ಕಾಣದ ಶ್ರೀಕೃಷ್ಣನನ್ನು ಸ್ಮರಿಸುತ್ತಾ ಇದ್ದನು. ಇದೂ ಒಂದು ರೀತಿಯ ಭಗವದ್ಭಕ್ತಿಯೇ ಸರಿ.

ಕ್ವಚನ ಧಾಮನಿ ಕಂಸ ನಿವೇದಿತೆ ಸ ಭಯಮಾನಕದುಂಧುಭಿ ರಾ ವಸತ್।
ಸ್ಮೃತಿ ಗತೇನ ಸುತೇನ ಸಜೀವಿತಾ ದಿನಶತಾನಿ ನಿನಾಯ ಚ ದೇವಕಿ ॥೫೯॥

ಪುತ್ರನನ್ನು ಬಿಟ್ಟಿರುವ ವಸುದೇವನು, ಕಂಸನು ಒಂದು ಮನೆಯನ್ನು ತೋರಿ, ಅಲ್ಲಿಯೇ ಇರಬೇಕೆಂದು ಹೇಳಿದುದರಿಂದ, ಮನಸ್ಸಿಲ್ಲದಿದ್ದರೂ ಅಲ್ಲಿಯೇ ತಂಗಿದ್ದನು. ದೇವಕಿಯೂ, ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ನೆನೆಯುತ್ತಲೇ ಜೀವ ಧರಿಸಿ ನೂರಾರು ದಿನಗಳನ್ನು ಎಣಿಸುತ್ತಿದ್ದಳು.

ಸೆರೆವಾಸದಿಂದ ಬಿಡುಗಡೆಯಾದ ನಂತರ ವಸುದೇವನು ತನ್ನ ಇಷ್ಟ ಬಂದ ಹಾಗೆ ಓಡಾಡಿಕೊಂಡಿರಲು ಸಾಧ್ಯವಾಗಲಿಲ್ಲ. ಕಂಸನು ಅವನಿಗೆ ಒಂದು ಪ್ರತ್ಯೇಕ ಮನೆಯನ್ನು ಗೊತ್ತುಪಡಿಸಿ, ಅಲ್ಲಿಯೇ ದೇವಕಿ, ವಸುದೇವರಿಬ್ಬರೂ ಇರಬೇಕೆಂದು ತಾಕೀತು ಮಾಡಿದ್ದನು. ಅವರಿಬ್ಬರ ಮನಸ್ಸು ಶ್ರೀಕೃಷ್ಣನ ಒಡನಾಟವನ್ನು ಬಹಳವಾಗಿ ಬಯಸಿದರೂ, ಅದು ಸಾಧ್ಯವಾಗದೆ, ಆ ಗೃಹದಲ್ಲಿಯೇ ಮನಸ್ಸಿಲ್ಲದ ಮನಸ್ಸಿನಿಂದ ಶ್ರೀಕೃಷ್ಣನ ಧ್ಯಾನದಲ್ಲಿಯೇ ದಿನಗಳನ್ನು ನೂಕುತ್ತಿದ್ದರು. ಕಂಸನದು ಭಯದಿಂದ ಕೂಡಿದ ಭಕ್ತಿಯಾದರೆ ಇವರದು ಪ್ರೇಮದಿಂದ ಕೂಡಿದ ಭಕ್ತಿಯಾಗಿತ್ತು.

ವಿಗತ ಕನ್ಯಕಯಾ ಚ ಯಶೋದಯಾ ನಿಯತಿ ಸಂಭೃತ ನಿರ್ಭರ ನಿದ್ರಯಾ।
ಚಿರ ಸಮಾಗತ ಜಾಗರಯಾಂತಿಕೆ ಹರಿರಪತ್ಯ ಮಧೃಶ್ಯತ ಧನ್ಯಯಾ ॥೬೦॥

ಇತ್ತ ಗೋಕುಲದಲ್ಲಿ ಯಶೋದೆಯು ತನಗೆ ಹುಟ್ಟಿದುದು ಹೆಣ್ಣುಮಗುವೆಂದು ತಿಳಿಯದೆ, (ಅದನ್ನು ಬೇರೆಡೆಗೆ ಸಾಗಿಸಿರುವುದನ್ನು ಅರಿಯದೆ) ದೈವ ಮೂಲವಾಗಿ ಕೊಡಲ್ಪಟ್ಟ ಆ ಶ್ರೀಹರಿಯನ್ನೇ ತನ್ನ ಮಗುವೆಂದು ಭಾವಿಸಿ, ಅಮಿತವಾದ ಧನ್ಯತಾಭಾವವನ್ನು ಹೊಂದಿದಳು.

ಈ ಕಡೆ ಯಶೋದೆಯ ಆನಂದಕ್ಕೆ ಪಾರವೇ ಇರಲಿಲ್ಲ. ತನಗೆ ಜನಿಸಿರುವುದು ಗಂಡು ಮಗುವೆಂದೇ ಭಾವಿಸಿ, ಅನಿರ್ವಚನೀಯ ಆನಂದವನ್ನು ಅನುಭವಿಸಿದಳು. "**ಪುತ್ರಂ ಪ್ರಥಮಜಂ ಲಬ್ಧ್ವಾ**" ಎಂಬ ಮಾತಿನಂತೆ ಮೊದಲ ಮಗು ಗಂಡು ಮಗುವಾದರೆ, ತಾಯಿಗೆ ಆಗುವ ಆನಂದ ಅಷ್ಟಿಷ್ಟಲ್ಲ. ಯಶೋದೆ ಆ ಸೌಭಾಗ್ಯವನ್ನು ಮನಸಾರೆ ಹೊಂದಿದಳು.

ಯದವ ಬದ್ಧ ನಿರಾಕುಲ ನೀತಿಭಿರ್ ಮುನಿಗಣೈ ರಧುನಾಪಿ ವಿಮೃಗ್ಯತೆ।
ತದಿದ ಮಾಗಮ ಮೌಲಿ ವಿಭೂಷಣಂ ವಿಧಿವಶಾದಭವತ್ ವ್ರಜಭೂಷಣಂ ॥೬೧॥

ಸೂಕ್ಷ್ಮವಾದ ನ್ಯಾಯಶಾಸ್ತ್ರಗಳನ್ನು ವಿವರಿಸುವ ಮುನಿವರರು, ಗುಂಪು ಗುಂಪಾಗಿ ಕೂಡಿ ಇನ್ನೂ ಯಾವ ತತ್ವವನ್ನು ಹುಡುಕುತ್ತಿರುವರೋ ಯಾವ ವೇದಾಂತಗಳೆಲ್ಲವೂ ಯಾರ ಬಗ್ಗೆ ಚರ್ಚೆಯನ್ನು ಮಾಡುತ್ತಿದೆಯೋ ಆ ತತ್ವವೇ, ಗೋಕುಲದಲ್ಲಿ ಗೋಪಗೋಪಿಯರ ನಡುವೆ ತೋರಿರುವುದು ಎಂಥಾ ಭಾಗ್ಯವಾಗಿದೆ.

ಸ್ವಾಮಿ ದೇಶಿಕರು 'ಗೋಪಾಲ ವಿಂಶತಿ' ಸ್ತೋತ್ರದಲ್ಲಿ - "**ಮಧುರಾಭಾಗ್ಯಂ ಅನನ್ಯ ಭೋಗ್ಯ ಮೀಡೇ। ವಸುದೇವವಧೂ-ಸ್ತನಂಧಯಂ ತತ್ ಕಿಮಪಿ ಬ್ರಹ್ಮಕಿಶೋರಭಾವದೃಶ್ಯಂ॥**" ಎಂದು ಮಧುರಾನಗರಿ ಎಂಥಾ ಭಾಗ್ಯ ಮಾಡಿದೆ. ಸಾಕ್ಷಾತ್ ಪರಿಪೂರ್ಣ ಪರಬ್ರಹ್ಮವೇ ಗೋಕುಲದಲ್ಲಿ ಕಿಶೋರನಾಗಿ ಅವತರಿಸಿದೆಯಲ್ಲಾ" ಎಂದು ಉದ್ಧರಿಸಿದ್ದಾರೆ.

ಸಹಸ್ರಾರು ಮುನಿವರರುಗಳು, ಯೋಗಿಗಳು, ಯಾವ ವೇದಾಂತದ ಪರಬ್ರಹ್ಮವನ್ನು ಅರಿಯಲು ಕಷ್ಟಪಡುತ್ತಿರುವರೋ, ಆ ಬ್ರಹ್ಮವೇ ತಾನಾಗಿಯೇ ಗೋಕುಲದಲ್ಲಿ ತೋರಿ, ಗೊಲ್ಲ ಜಾತಿಯವರೆಲ್ಲರಿಗೂ ಆನಂದವನ್ನು ನೀಡುತ್ತಿದೆಯಲ್ಲಾ. ಇದೆಂತಹ ಆಶ್ಚರ್ಯ! ಗೋಪಗೋಪಿಯರಲ್ಲವೇ ನಿಜವಾದ ಭಾಗ್ಯಶಾಲಿಗಳು.

ಅನಘ ವತ್ಸ ಮನಾಕುಲ ಧೇನುಕಂ ಪ್ರಚುರ ದುಗ್ಧ ಮಚೋರ ಭಯೋದ್ಭವಂ।
ವ್ರಜ ಮನಾಮಯ ವಿಶ್ವಜನಂ ವಿಭುಃ ಕೃತಯುಗಾಸ್ಪದ ಕಲ್ಪ ಮಕಲ್ಪಯತ್ ॥೬೨॥

ಆ ಶ್ರೀಕೃಷ್ಣನು ಗೋಕುಲದಲ್ಲಿ ತೋರಿದ ಸಮಯದಲ್ಲಿ ಗೋಕುಲವೆಲ್ಲವೂ, ಗೋಸಮೃದ್ಧಿಯಿಂದ ಕೂಡಿ ಕೃತಯುಗದಂತೆ ವಿಜಂಭಿಸುತ್ತಿತ್ತು.

'**ಸ ಉ ಶ್ರೇಯಾನ್ ಭವತಿ ಜಾಯಮಾನಃ**' ಭಗವಂತನು ಎಲ್ಲಿ ತೋರುತ್ತಾನೋ, ಅಲ್ಲಿ ಗೋಸಮೃದ್ಧಿ ಹೆಚ್ಚುತ್ತದೆ. ಮೊದಲೇ ಗೋ ಸಂಪತ್ತಿನಿಂದ ಶೋಭಿಸುತ್ತಿದ್ದ ನಂದ ಗೋಕುಲವು ಶ್ರೀಕೃಷ್ಣನು ಅಲ್ಲಿ ತೋರಿದ ಮೇಲೆ ಮತ್ತಷ್ಟು ಸಂಪತ್ತಿನಿಂದ ಶೋಭಿಸುತ್ತಾ ಇದೇನು ಕೃತಯುಗವೋ ಎಂಬಂತೆ ಕಂಗೊಳಿಸುತ್ತಿತ್ತು.

ಅಜನಿ ಗೋಪಗೃಹೇಷು ಮನೋರಮೈ ರಮಿತಕಾಂತಿಭಿ ರಪ್ಸರಸಾಂಗಣೈಃ।
ಯದನುಭೂತಿ ರಸೇನ ಸಮೇಷ್ಯತಃ ಶರಣ ಯಾದವ ಶೈಶವ ಯೌವನೇ ॥೬೩॥

ಗೋಪರ ಮನೆಗಳಲ್ಲಿ ಎಲ್ಲೆ ಮೀರಿದ ಸಂತೋಷವುಂಟಾಗಿ ಎಲ್ಲರೂ ಅಪ್ಸರ ಸ್ತ್ರೀಯರಂತೆ ಕಂಗೊಳಿಸುತ್ತಿದ್ದರು. ಅವರುಗಳಿಗೆ ತಮಗೆ ಶರಣ್ಯನಾದ ಶ್ರೀಕೃಷ್ಣನ ಬಾಲ್ಯ, ಯೌವನದ ಆಟಪಾಟಗಳನ್ನೆಲ್ಲಾ ನೋಡಲು ಉತ್ಸುಕರಾಗಿದ್ದರು.

ಗೋಪಾಲಕರ ಸಂತೋಷವು ಎಲ್ಲೆ ಮೀರಿತು. ಶ್ರೀಕೃಷ್ಣನ ಬಾಲ್ಯದ ಆಟಪಾಟಗಳನ್ನೆಲ್ಲಾ ನೋಡಿ ಆನಂದಿಸಲು ಅವರೆಲ್ಲರೂ ಉತ್ಸಾಹಭರಿತರಾಗಿ ಶ್ರೀಕೃಷ್ಣನ ಬೆಳವಣಿಗೆಯನ್ನೇ

ಕಾಯುತ್ತಿದ್ದರು. ಗೋಪ ಸ್ತ್ರೀಯರು ಅನುಪಮ ಸೌಂದರ್ಯವತಿಯರಂತೆ ಕಂಗೊಳಿಸುತ್ತಾ ಶ್ರೀಕೃಷ್ಣನು ಯಾವಾಗ ತಮ್ಮೊಡನೆ ಒಡನಾಡಲು ಬರುವನೋ ಎಂಬುದನ್ನು ಕಾತುರರಾಗಿ ನಿರೀಕ್ಷಿಸುತ್ತಿದ್ದರು.

ಸುರಮಹೀ ಸುರತೋಷಣ ಮಾದರಾತ್ ನವ ಮುಪಾದಿತ ನಂದ ಉದಾರಧೀಃ।
ತರಲ ಗೋಪ ಗಣಾಗಮ ಸಂಕುಲಂ ತನಯ ಜನ್ಮ ಮಹೋತ್ಸವಮದ್ಭುತಂ ॥೬೪॥

ಉದಾರವಾದ ಮನುಸ್ಸುಳ್ಳ ನಂದಗೋಪನು ತನ್ನ ಮಗನ ಜನನೋತ್ಸವವನ್ನು ದೇವತೆಗಳೂ, ಋಷಿಗಳೂ ಎಲ್ಲರೂ ಆನಂದಿಸುವ ಹಾಗೆ ಆಚರಿಸಿದಾಗ, ಗೋಪ ಗೋಪಿಯರೆಲ್ಲರೂ ಸಮೂಹ ಸಮೂಹವಾಗಿ ಬಂದು ಮಗುವನ್ನು ನೋಡಿ ಸಂತೋಷಿಸಿದರು.

ನಂದಗೋಪನ ಉತ್ಸಾಹವನ್ನೂ, ಸಂತೋಷವನ್ನೂ ವರ್ಣಿಸಲು ಸಾಧ್ಯವಿಲ್ಲ. ತನ್ನ ಮಗನ ಜನ್ಮ ದಿನೋತ್ಸವವನ್ನು "ನ ಭೂತೋ ನ ಭವಿಷ್ಯತಿ" ಎಂಬಂತೆ ಆಚರಿಸಲು ನಿರ್ಧರಿಸಿ, ಎಲ್ಲರೂ ಆನಂದಿಸುವಂತೆ ಏರ್ಪಾಡುಗಳನ್ನು ಮಾಡಿದನು. ಸುತ್ತಮುತ್ತಲಿನ ಹಳ್ಳಿಗಳ ಜನರೆಲ್ಲರೂ ಗುಂಪುಗುಂಪಾಗಿ ನಂದಗೋಕುಲಕ್ಕೆ ಬಂದು ಆ ಯಶೋದಾ ನಂದನನ್ನು ಕಣ್ತುಂಬ ನೋಡಿ ಧನ್ಯರಾದರು. ಆ ಕಿಶೋರ ಕೃಷ್ಣನನ್ನು ನೋಡುವುದು ಭಾಗ್ಯವಲ್ಲದೆ ಮತ್ತೇನು?

ಸಮಸ್ತಗೋಪರು ಬಹುಮೂಲ್ಯ ವಸ್ತ್ರಗಳಿಂದ, ಒಡವೆಗಳಿಂದ ಅಲಂಕರಿಸಿಕೊಂಡು ತಲೆಗೆ ನಾನಾ ವರ್ಣದ ಮುಂಡಾಸನ್ನು ಸುತ್ತಿಕೊಂಡು ನಾನಾ ವಿಧವಾದ ಪಾರಿತೋಷಕಗಳೊಡನೆ ಶ್ರೀಕೃಷ್ಣನನ್ನು ನೋಡಲು ನಂದಗೋಪನ ಮನೆಗೆ ಬಂದರು.

ಅಧಿಚಕಾರ ವದಾನ್ಯಮಣೇಃ ಶ್ರಿಯಂ ವ್ಯಧಿತ ಕಲ್ಪತರೋರನುಕಲ್ಪತಾಂ।
ಅಜನಯಚ್ಚ ಸುತ ಪ್ರಸವೋತ್ಸವೇ ಮಹತಿ ಮೇಘ ವಿಕತ್ಥನ ಮೋಘತಾಂ ॥೬೫॥

ಮಗನ ಜನನೋತ್ಸವ ಸಂದರ್ಭದಲ್ಲಿ ನಂದಗೋಪನೆಂಬ ಕಲ್ಪತರುವಿನ ಅಡಿಯಲ್ಲಿ ಚಿಂತಾಮಣಿಯೆಂಬ ಮಣಿಯು ಪೂರ್ಣ ವಿಕಾಸ ಹೊಂದಿತು. ಎಲ್ಲೆಲ್ಲೂ ಸಂಭ್ರಮ ಆವರಿಸಿತು. ಸ್ವಾಮಿ ದೇಶಿಕರು ಸುಂದರವಾದ ಉಪಮೆಯನ್ನು ನೀಡಿದ್ದಾರೆ.

ನಂದಗೋಪನೇ ಒಂದು ದೊಡ್ಡ ಕಲ್ಪವೃಕ್ಷ. ಆ ಕಲ್ಪವೃಕ್ಷದ ಅಡಿಯಲ್ಲಿ ಶ್ರೀಕೃಷ್ಣನೆಂಬ ಮತ್ತೊಂದು ಚಿಂತಾಮಣಿಯು ಉದ್ಭವವಾಯಿತು. ಕಲ್ಪವೃಕ್ಷ ಹಾಗೂ ಚಿಂತಾಮಣಿ ಇವೆರಡೂ ಕೇಳಿದುದನ್ನು ನೀಡುವ ವಸ್ತುಗಳು. ಈ ರೀತಿಯಾದ ಎರಡು ಶುಭ ವಸ್ತುಗಳೂ ಒಮ್ಮೆಗೇ ನಂದಗೋಕುಲದಲ್ಲಿ ತೋರಿ, ನಂದಗೋಕುಲವೇ ಸಂಭ್ರಮದಲ್ಲಿ ತೇಲಾಡಿತು.

ನಿಧಿಮನಂತಮಿವ ಸ್ವಯುಮುತ್ಥಿತಂ ನಿರವಧಿಂ ನಿಜಭಾಗ ಮಿವೋದಿತಂ।
ವ್ರಜಭುವಃ ಪ್ರತಿಲಭ್ಯರಮಾಪತಿಂ ಜಹ ಸುರೇಂದ್ರ ಮಸಾರತರಂ ಪದಂ ॥೬೬॥

ಗೋಕುಲದಲ್ಲಿ ಇದ್ದವರು ತಾವು ನೋಡದೆ ಇದ್ದ ನಿಧಿಯನ್ನು ಕಂಡು ಎಲ್ಲೆ ಮೀರಿದ ತಮ್ಮ ಭಾಗ್ಯವನ್ನು ತಾವೇ ಕೊಂಡಾಡುತ್ತಾ, ಭಗವಂತನನ್ನು ಹೊಂದಿ ಇಂದ್ರ ಪದವಿಯನ್ನು ಸಹ ಅಸಾರವಾದುದಾಗಿ ಭಾವಿಸಿದರು.

"ಸಂಪನ್ ನಾರಾಯಣಂ ಸ್ಮೃತಿಃ"ಯೆಂಬಂತೆ ನಾರಾಯಣನ ಸಾನ್ನಿಧ್ಯವೇ ಸಕಲ ಸಂಪತ್ತುಗಳನ್ನು ನೀಡುತ್ತವೆ. ಅಂತಹ ಭಗವಂತನ ಸಾನ್ನಿಧ್ಯವನ್ನು ಹೊಂದಿದ್ದ ಗೋಪ ಗೋಪಿಯರೆಲ್ಲರೂ ಶ್ರೀಕೃಷ್ಣನ ಸಹವಾಸದ ಮುಂದೆ, ಇಂದ್ರಾದಿ ದೇವತೆಗಳ ಪದವಿಯನ್ನು ತೃಣಪ್ರಾಯವಾಗಿ ಭಾವಿಸಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಶ್ರೀಕೃಷ್ಣನೇ ಅವರಿಗೆ ಸರ್ವಸ್ವ ವಾಗಿದ್ದನು.

ಪುತ್ರಂ ಪ್ರಸೂಯ ತಪಸಾ ಪುರುಷಂ ಪುರಾಣಂ ಕಾಲಂ ಚಿರಂ
ವಿಧಿವಶಾತ್ ಕೃತವಿಪ್ರಕರ್ಷೌ ।
ಶಂಖಾ ಕಲಂಕಿತ ಧಿಯಾವಪಿ ದಂಪತೀ ತೌ ತದ್ವೈಭವ ಸ್ಮರಣ
ಶಾಂತರುಜಾವಭೂತಾಂ ॥೬೭॥

ದೇವಕಿ, ವಸುದೇವರು ಎಷ್ಟೆಲ್ಲಾ ತಪಸ್ಸು ಮಾಡಿ ಪರಮ ಪುರುಷನನ್ನು ತಮ್ಮ ಮಗನಾಗಿ ಪಡೆದರು. ಬಹಳ ಕಾಲ ಅವನನ್ನು ಬಿಟ್ಟು ಇರಬೇಕಾಯಿತು. ಯಾವಾಗ ಏನಾಗುವುದೋ ಎಂಬ ಮನಃಕ್ಲೇಶದಿಂದ ಇದ್ದರೂ, ಆ ಭಗವಂತನ ಮಹಿಮೆಗಳನ್ನು ನೆನೆದು ನೆನೆದು ಸಮಾಧಾನ ಹೊಂದುತ್ತಿದ್ದರು.

ಸಾಕ್ಷಾತ್ ಪರಮಪುರುಷನೇ ತಮ್ಮ ಉದರದಲ್ಲಿ ಜನಿಸಿದರೂ, ದೇವಕಿ, ವಸುದೇವರು ಶ್ರೀಕೃಷ್ಣನ ಬಾಲಲೀಲೆಗಳನ್ನು ನೋಡಲಾಗಲಿಲ್ಲ. ಇದು ಒಂದು ವಿಧಿಯ ವಿಪರ್ಯಾಸ. ಶ್ರೀಕೃಷ್ಣನನ್ನು ಪುತ್ರನನ್ನಾಗಿ ಪಡೆಯಲು ಅನೇಕ ವರ್ಷಗಳ ಕಾಲ ತಪಸ್ಸು ಮಾಡಿದ್ದಾಗ್ಯೂ ಇವನ ವಿರಹವನ್ನು ಬಹುಕಾಲ ಸಹಿಸಬೇಕಾಯಿತು. ಆದರೆ ಆ ಸೌಭಾಗ್ಯ ನಂದಗೋಪ ಯಶೋದೆಯರಿಗೆ ಲಭಿಸಿತು. ದೇವಕಿ, ವಸುದೇವರು ಕೇವಲ ಶ್ರೀಕೃಷ್ಣನ ಸ್ಮರಣೆಯಲ್ಲೇ ತೃಪ್ತಿಪಡಬೇಕಾಯಿತು.

ನಂದ ಸದ್ಮನಿ ನವೆಂದು ಸಂನ್ನಿಭೌ ವಾಸಮೇತ್ಯ ವಸುದೇವ ನಂದನೌ ।
ವೃದ್ಧಿಮಾಪತುರನೇಹಸಾ ಸ್ವಯಂ ಸ್ವಾಧು ಭೋಗ ಜನನೀ ಸುಪರ್ವಣಾಂ ॥೬೮॥

ವಸುದೇವನ ಕುಮಾರರಿಬ್ಬರೂ ಪೂರ್ಣ ಚಂದ್ರನಂತೆ ಸೌಂದರ್ಯ ಹೊಂದಿ, ನಂದಗೋಪನ ಮನೆಯಲ್ಲಿ ಎಲ್ಲಾ ಸೌಲಭ್ಯಗಳನ್ನೂ ಹೊಂದಿ ಸಂತೋಷದಿಂದ ಕಾಲ ಕಳೆಯುತ್ತಾ ಬೆಳೆಯುತ್ತಿದ್ದನು.

ಇತ್ತ ನಂದಗೋಕುಲದಲ್ಲಿ ಶ್ರೀಕೃಷ್ಣ, ಬಲರಾಮರು ಹುಣ್ಣಿಮೆಯ ಚಂದ್ರನಂತೆ ದಿನೇ ದಿನೇ ಅಭಿವೃದ್ಧಿ ಹೊಂದಿ, ನಂದಗೋಪನ ಅರಮನೆಯಲ್ಲಿ ಸಕಲ ಸೌಭಾಗ್ಯಗಳನ್ನು ಅನುಭವಿಸುತ್ತಾ ಬೆಳೆಯುತ್ತಿದ್ದರು. (ಈ ಸರ್ಗವು ಎಲ್ಲ ಸರ್ಗಗಳಿಗಿಂತ ಅತ್ಯಂತ ಚಿಕ್ಕ ಸರ್ಗ).

'ಕೃಷ್ಣನ ನಂದಗೃಹ ಪ್ರಾಪ್ತಿ'ಯೆಂಬ ತೃತೀಯ ಸರ್ಗ ಮುಗಿಯಿತು

ಚತುರ್ಥಃ ಸರ್ಗಃ - ೪

ನಿರ್ಬಾಧ ಗೋಚಾರಣಂ (ಶ್ರೀಕೃಷ್ಣನ ಅನೇಕ ಬಾಲಲೀಲೆಗಳು)



ಈ ಸರ್ಗದಲ್ಲಿ 127 ಶ್ಲೋಕಗಳಿವೆ. ಶ್ರೀಕೃಷ್ಣನು ಗೋಕುಲ ಸೇರಿ, ಅಲ್ಲಿ ಪೂತನಾ ಸಂಹಾರದಿಂದ ಪ್ರಾರಂಭಿಸಿ, ಕಾಳೀಯ ಸರ್ಪದ ಮರ್ದನದವರೆಗೆ ನಡೆಸಿದ ಅದ್ಭುತ ಲೀಲೆಗಳ ವರ್ಣನೆಗಳಿವೆ. ಕಾವ್ಯಮಯವಾದ ಶ್ಲೋಕಗಳಿಂದ ಕೂಡಿದ್ದು ಈ ಸರ್ಗವು ಘಟನೆಗಳ ಸರಮಾಲೆಯಿಂದ ಶೋಭಿತವಾಗಿದೆ. ಬಾಲ್ಯದಲ್ಲಿಯ ಶ್ರೀಕೃಷ್ಣನ ಅದ್ಭುತ ಪರಾಕ್ರಮ, ಗೋಪಿಕಾ ವಸ್ತ್ರಾಪರಹಣದ ತತ್ವ, ಕಾಳೀಯ ಮರ್ದನ ಮತ್ತು ಯಮುನೆಯ ಶ್ರೇಷ್ಠತೆ ಇತ್ಯಾದಿ ಪ್ರಸಂಗಗಳು ಬಹು ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿವೆ. ಯಶೋದೆಯ ಪುತ್ರ ವಾತ್ಸಲ್ಯ ಆನಂದ ಭಾಷ್ಪ ತರಿಸುವಂತಿದೆ. ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1-10	ಕಂಸನ ದುಷ್ಟ ಚಿಂತನೆ, ಪೂತನಾ ಸಂಹಾರ
10-13	ಶಕಟಾಸುರ ಸಂಹಾರ
14-24	ಬಾಲಕೃಷ್ಣನ ವಿವಿಧ ಚೇಷ್ಟೆಗಳು
25-32	ನವನೀತ ಚೌರ್ಯ
33-38	ದಾಮೋದರ ಪ್ರಸಂಗ
39-43	ಬೃಂದಾವನ ಪ್ರವೇಶ, ಬೃಂದಾವನ ವರ್ಣನೆ
44-45	ಅನೇಕ ಅಸುರರ ವಧೆ
46-50	ಗೋಪಿಕಾ ವಸ್ತ್ರಾಪಹರಣ
51-57	ಶ್ರೀ ಕೃಷ್ಣನ ಅಲಂಕಾರದ ವರ್ಣನೆ, ಯಶೋದೆಯ ಆನಂದ
58-65	ವೇಣುಗಾನ ವೈಭವ - ಶ್ರೀಕೃಷ್ಣನ ಸೌಂದರ್ಯದ ವರ್ಣನೆ
66-80	ಕೃಷ್ಣ-ಬಲರಾಮರ ಪಶುಪಾಲನೆಯ ವರ್ಣನೆ-ಬೃಂದಾವನದ ವರ್ಣನೆ
81-90	ಸ್ವಾಮಿಯ ಹಸುಕರುಗಳ ಮೇಲಿನ ವಾತ್ಸಲ್ಯ ವರ್ಣನೆ
91-97	ಗೋಪಿಕಾ ಸ್ತ್ರೀಯರೊಡನೆ ಒಡನಾಟ, ಅದರ ಅಂತರಾರ್ಥ
98-102	ಶ್ರೀಕೃಷ್ಣನು ನಪ್ಪಿನ್ನೈಯನ್ನು ಪಡೆದ ಪ್ರಸಂಗ
103-107	ಇತರ ಕೆಲವು ಅಸುರರ ಸಂಹಾರ
108-125	ಕಾಳಿಯ ಮರ್ದನದ ಪ್ರಕರಣ-ಕಾಳಿಯನ ಮೇಲೆ ಶ್ರೀಕೃಷ್ಣನು ಮಾಡಿದ ಅದ್ಭುತ ನಾಟ್ಯದ ವರ್ಣನೆ
126-127	ಯಮುನೆಯ ಶ್ರೇಷ್ಠತೆ.

ಚತುರ್ಥಃ ಸರ್ಗಃ - ೪

ನಿರ್ಬಾಧ ಗೋಚಾರಣಂ (ಶ್ರೀಕೃಷ್ಣನ ಅನೇಕ ಬಾಲಲೀಲೆಗಳು)

ಮನೀಷಿತಂ ಕೈತವ ಮಾನುಷಸ್ಯ ಶ್ರುತ್ವಾ ಭಯಕ್ರೋಧ ಪರಿಪ್ಲುತಾತ್ಮಾ।
ಕಂಸಶ್ಚಿರಂ ಪ್ರಾಗ್ಭವ ಕಾಲನೇಮಿಶ್ಚಿಂತಾರ್ಣವೇ ಮಗ್ನ ಇವಾವತಸ್ಥೇ ॥೧॥

ಕಪಟದಿಂದ ಮನುಷ್ಯನಾಗಿ ತೋರಿರುವ ಭಗವಂತನ ಇಚ್ಛೆಯನ್ನು ಕಂಡು ಕಂಸನು ತಾನು ಹಿಂದಿನ ಜನ್ಮದಲ್ಲಿ ಕಾಲನೇಮಿ ಎಂಬ ಅಸುರನಾಗಿದ್ದು ಈಗ ಕೋಪದಿಂದಲೂ, ನಿರಾಶೆಯಿಂದಲೂ ಕಲಕಿದ ಮನಸ್ಸುಳ್ಳವನಾಗಿ ವಿಚಾರ ಸಮುದ್ರದಲ್ಲಿ ಮುಳುಗಿ ಹೋದನು.

ಈ ನಾಲ್ಕನೇ ಸರ್ಗದಲ್ಲಿ ಶ್ರೀಕೃಷ್ಣನು ಗೋಕುಲಕ್ಕೆ ಸೇರಿ ಅಲ್ಲಿ ಅವನು ನಡೆಸಿದ ಅನೇಕ ಅದ್ಭುತ ಪರಾಕ್ರಮಗಳನ್ನು ಆರಂಭದಿಂದ ಹಿಡಿದು ಕಾಳಿಯ ಸರ್ಪದ ನಿಗ್ರಹದವರೆಗೆ ವರ್ಣಿಸಲಾಗಿದೆ. ಈ ಸರ್ಗದಲ್ಲಿ 127 ಶ್ಲೋಕಗಳಿವೆ.

ಮೊದಲಿಗೆ ಮಾಯೆಯ ಮಾತನ್ನು ಕೇಳಿ, ಕಂಸನ ಮನಸ್ಥಿತಿಯನ್ನು ವರ್ಣಿಸುತ್ತಾರೆ. ಶ್ರೀಕೃಷ್ಣನು ಹುಟ್ಟುವಾಗಲೇ ಅವನಿಂದ ತಾನು ಸಾಯುತ್ತೇನೆಂಬುದಾಗಿ ನಿಶ್ಚಯವಾಗಿದ್ದ ಕಂಸನಿಗೆ ಅವನು ಬೇರೆ ಕಡೆ ಬೆಳೆಯುತ್ತಿದ್ದಾನೆಂಬುದು ಅರಗಿಸಿಕೊಳ್ಳಲಾಗದ ವಿಷಯವಾಗಿತ್ತು. ಕೋಪ, ನಿರಾಶೆಯೆಲ್ಲಾ ಒಟ್ಟಿಗೇ ಉಂಟಾಗಿ, ಮನಸ್ಸು ಸಂಪೂರ್ಣವಾಗಿ ಕಲಕಿ ಹೋಯಿತು.

ಸ ದುರ್ದಮಾನ್ ಆಸುರ ಸತ್ವಭೇದಾನ್ ನೇತಾ ಸಮಾಹೂಯ ನೃಶಂಸ ಚೇತಾಃ।
ಪ್ರಸ್ಥಾಪಯಾಮಾಸ ಪರೈರದೃಶ್ಯಂ ನಂದಾಸ್ಪದಂ ನಾಥ ವಿಹಾರಗುಪ್ತಂ ॥೨॥

ಅರಸನಾದ ಅವನು ವಧಿಸುವುದರಲ್ಲಿ ಆಸಕ್ತಿಗೊಂಡು ಅಸುರಾಂಶದಿಂದ ಕೂಡಿದ ಅನೇಕ ಪ್ರಾಣಿಗಳನ್ನು ವಧಿಸುವಂತೆ, ತನ್ನ ನೆಚ್ಚಿನ ಅನೇಕ ಅನುಚರರನ್ನು ನಂದಗೋಕುಲಕ್ಕೆ ಕೃಷ್ಣನನ್ನು ಕಂಡುಹಿಡಿದು ವಧಿಸಲು ಕಳುಹಿಸಿದನು.

ಹೇಗಾದರೂ ಮಾಡಿ ಕೃಷ್ಣನು ಇರುವ ಜಾಗವನ್ನು ಪತ್ತೆ ಹಚ್ಚಿ, ಅವನನ್ನು ನಿಗ್ರಹಿಸದ ಹೊರತು ತನಗೆ ನೆಮ್ಮದಿ ಇಲ್ಲವೆಂದರಿತ ಕಂಸನು ವಧೋಪಾಯಗಳನ್ನು ಹುಡುಕ ತೊಡಗಿದನು. ದುಷ್ಟರಿಗೆ ಮನುಷ್ಯರನ್ನು ವಧಿಸುವುದು ಪ್ರಾಣಿಗಳನ್ನು ಕೊಲ್ಲುವುದಕ್ಕಿಂತ ಸುಲಭ. ಆದ್ದರಿಂದ ಕೃಷ್ಣನ ವಧೆಗಾಗಿ, ನಾನಾ ದಿಕ್ಕುಗಳಿಗೆ ಅನುಚರರಾದ ಅಸುರರನ್ನು ಕಳುಹಿಸಲು ಪ್ರಾರಂಭಿಸಿದನು. ಗೋ-ಬ್ರಾಹ್ಮಣರನ್ನು ಹಿಂಸಿಸಲು ಆರಂಭಿಸಿದನು.



ಕದಾಚಿದಂತರ್ಹಿತ ಪೂತನಾತ್ಮಾ ಕಂಸ ಪ್ರಯುಕ್ತಾ ಕಿಲ ಕಾಪಿ ಮಾಯಾ।
ನಿದ್ರಾ ಪರಾಧೀನ ಜನೇ ನಿಶೀಥೇ ವ್ರಜಂ ಯಶೋದಾಕೃತಿರಾವಿವೇಶ ॥೩॥

ಒಂದು ದಿನ ಕಂಸನಿಂದ ಕಳುಹಿಸಿದವಳಾದ, ಅದ್ಭುತವಾದ ಕೆಲಸಗಳನ್ನು ಮಾಡುವ ಸಾಮರ್ಥ್ಯವಿರುವ ಮಾಯೆಯೆಂದು ಕರೆಯಲ್ಪಡುವ ಒಬ್ಬಳು, ತಾನು ಪೂತನೆಯೆಂಬ ರಾಕ್ಷಸಿ ಎಂಬುದನ್ನು ಮರೆಸಿಕೊಂಡು, ನಡುರಾತ್ರಿಯಲ್ಲಿ ಜನರೆಲ್ಲರೂ ಮಲಗಿರುವಾಗ, ಯಶೋದೆಯ ರೂಪವನ್ನು ಧರಿಸಿ ಗೋಕುಲವನ್ನು ಪ್ರವೇಶಿಸಿದಳು.

ಆಗ ನಡುರಾತ್ರಿ. ಒಬ್ಬ ರಾಕ್ಷಸಿ ಸುಂದರಿಯ ರೂಪ ಧರಿಸಿ ಗೋಕುಲಕ್ಕೆ ಪ್ರವೇಶಿಸಿ, ಶ್ರೀಕೃಷ್ಣನು ಮಲಗಿರುವ ಅರಮನೆಯನ್ನು ಹುಡುಕಿ, ಕಳ್ಳತನದಲ್ಲಿ ಪ್ರವೇಶಿಸಿ, ಶ್ರೀಕೃಷ್ಣನು ಹಾಲಿಗಾಗಿ ಅಳುವ ಸಮಯಕ್ಕಾಗಿ ಕಾಯುತ್ತಿದ್ದು ಮಗು ಅತ್ತಾಗ ತನ್ನ ಸ್ತನ್ಯವನ್ನೇ ಕೊಡಲು ಮುಂದಾದಳು. ಅವಳು ತನ್ನ ದಪ್ಪಗಿದ್ದ ಸ್ತನಗಳಲ್ಲಿ ವಿಷಮಿಶ್ರಿತ ಹಾಲನ್ನು ತುಂಬಿಕೊಂಡು ಬಂದಿರುವುದನ್ನು ಯಾರೂ ಅರಿಯಲಿಲ್ಲ. ಆದರೆ ಸರ್ವಜ್ಞನಾದ ಶ್ರೀಹರಿಯನ್ನು ವಂಚಿಸಲು ಸಾಧ್ಯವೇ ? ಆ ಸಮಯಕ್ಕಾಗಿಯೇ ಕಾಯುತ್ತಿರುವಂತೆ ಶ್ರೀಕೃಷ್ಣನು ಅವಳ ಸ್ತನ್ಯಪಾನ ಮಾಡಲು ಇಚ್ಛಿಸಿ, ಗಟ್ಟಿಯಾಗಿ ಅವಳ ಸ್ತನಗಳನ್ನು ಹಿಡಿದುಕೊಂಡನು.

ಸ್ತನ್ಯೇನ ಕೃಷ್ಣಃ ಸಹ ಪೂತನಾಯಾಃ ಪ್ರಾಣಾನ್ ಪಪೌ ಲುಪ್ತ ಪುನರ್ ಭವಾಯಾಃ।
ಯದದ್‌ಭುತಂ ಭಾವಯತಾಂ ಜನಾನಾಂ ಸ್ತನಂಧಯತ್ವಂ ನ ಪುನರ್ ಬಭೂವ ॥೪॥

ಸ್ತನ್ಯಪಾನವನ್ನು ಮಾಡಿಸಲು ಬಂದ ಪೂತನೆಯ ಸ್ತನ್ಯದ ಹಾಲನ್ನು ಶ್ರೀಕೃಷ್ಣನು ಪಾನ ಮಾಡುವಾಗ, ಅದರೊಡನೆ ಅವಳ ಪ್ರಾಣವನ್ನೂ ಹೀರಿಬಿಟ್ಟನು. ಶ್ರೀಕೃಷ್ಣನನ್ನು ನಿಗ್ರಹಿಸಲು ಬಂದಳು ಅವಳು. ಆದರೆ ಶ್ರೀಕೃಷ್ಣನು ಅವಳು ಮತ್ತೆ ಜನ್ಮವೆತ್ತದ ಹಾಗೆ ಮಾಡಿಬಿಟ್ಟನು.

ಅಂದರೆ ತನ್ನನ್ನು ಸಾಯಿಸಲು ಬಂದವಳಿಗೆ ಮೋಕ್ಷವನ್ನು ಕೊಟ್ಟನು. ಆಶ್ಚರ್ಯವಲ್ಲವೇ ಇದು ! ಅವಳು ಹಾಲು ಉಣಿಸಿದ್ದರಿಂದ ತಾಯಿಯೆನಿಸಿದಳು. ತಾಯಿಗೆ ಮಗನು ಒಳ್ಳೆಯದನ್ನೇ ಮಾಡಿದ್ದಾನೆ. ಪೂತನೆ ಮೊಲೆ ಹಾಲನ್ನು ಕುಡಿದ ಶ್ರೀಕೃಷ್ಣನ ಚಿಂತನೆಯನ್ನು ಮಾಡುವವರಿಗೆ ತತ್ಕ್ರತು ಎಂಬ ವೇದಾಂತ ನ್ಯಾಯದಂತೆ ಮತ್ತೊಮ್ಮೆ ಜನ್ಮವೆತ್ತಿ ತಾಯ ಮೊಲೆ ಹಾಲನ್ನು ಕುಡಿಯುವ ಸಂಭವವಿರುವುದಿಲ್ಲ. ಇದೂ ಸಹ ಆಶ್ಚರ್ಯವೇ ಸರಿ. ಶತ್ರುಗಳಲ್ಲಿಯೂ ದಯಾ ಭಾವವನ್ನು ತೋರಿಸುವ ಭಗವಂತನ ಗುಣವನ್ನು ಎಷ್ಟು ಕೊಂಡಾಡಿದರೂ ಸಾಲದು.

ನಿಶಮ್ಯ ತಸ್ಯಾಃ ಪರುಷಂ ನಿನಾದಂ ರೂಕ್ಷಂ ಯಶೋದಾ ರುದಿತಂ ಚ ಸೂನೋಃ।
ಸ ಸಂಭ್ರಮಾ ವೇಗಮುಪೇತ್ಯ ಭೀತಾ ತಮಗ್ರಹೀದ್ ದುಗ್ರಹ ಮಾಗಮಾನಾಂ ॥೫॥

ಯಶೋದೆಯು ಪೂತನೆಯ ದುಷ್ಟ ಕಾರ್ಯವನ್ನು ಕಂಡು ಮಗನು ಅಳುವುದನ್ನು ನೋಡಿ ಅಂಜಿ ಗಾಭರಿಗೊಂಡು ವೇದಗಳಿಂದ ಅರಿಯಲ್ಪಡದ ಹಸುಳೆಯನ್ನು ಕೈಯಿಂದ ಎತ್ತಿಕೊಂಡಳು.

ಭಗವಂತನನ್ನು ವೇದಗಳಿಂದಲೂ ಅರಿಯಲ್ಪಡಲು ಸಾಧ್ಯವಿಲ್ಲ. ಶ್ರೀಹರಿಯನ್ನು "**ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**" ಎನ್ನುತ್ತದೆ ತೈತ್ತಿರಿಯೋಪನಿಷತ್ತು. ಅಂತಹ ಸರ್ವೇಶ್ವರನು, ಶಿಶುವಾಗಿ ಬಂದು ಪೂತನೆಯ ದೊಡ್ಡ ದೇಹವನ್ನು (ತನ್ನಿಂದಲೇ ಮೃತಳಾದ) ಕಂಡು ದೊಡ್ಡದಾಗಿ ಅಳಲು ಪ್ರಾರಂಭಿಸಿದಾಗ, ಅವನಿಗೆ ಏನಾದರೂ ತೊಂದರೆ ಉಂಟಾಯಿತೇನೋ ಎಂದು ಅಂಜಿ ಮಲಗಿದ್ದ ಯಶೋದೆಯು ಓಡಿ ಬಂದು ಅವನನ್ನು ಎತ್ತಿಕೊಂಡಳು.

ನಂದಶ್ಚ ತೀವ್ರೇಣ ಭಯೇನ ಸದ್ಯಃ ಸಮೇತ್ಯ ಪಶ್ಯನ್ ಅನಘಂ ಕುಮಾರಂ।
ತೇನೈವ ತಸ್ಯ ತ್ರಿಜಗನ್ನಿಯಂತುಃ ಪ್ರಾಯುಂಕ್ತ ರಕ್ಷಾಂ ಪರಮಾರ್ಥವೇದೀ ॥೬॥

ನಂದಗೋಪನು ತೀವ್ರ ಭಯದಿಂದ ಒಡನೆಯೇ ಬಂದು ಮಗುವು ವಿಪತ್ತು ಕಳೆದು ಸುಖವಾಗಿ ಇರುವುದನ್ನು ಕಂಡು ಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವುದರಿಂದ ಮೂಜಗವನ್ನು ಆಳುವವನಿಗೆ ತಾನೇ ರಕ್ಷೆಗಳನ್ನು ಮಾಡಿಸಿದನು.

ಸಹಜವಾಗಿಯೇ ಗಾಭರಿಗೊಂಡ ಯಶೋದಾ ನಂದಗೋಪರು, ಕಂದನ ಕ್ಷೇಮಾರ್ಥವಾಗಿ ಅನೇಕ ರಕ್ಷೆಗಳನ್ನು ಮಾಡಿಸಿದರು. (ಮಕ್ಕಳು ಏನಾದರೂ ರಚ್ಚೆ ಹಿಡಿದರೆ, ಬೆಚ್ಚಿದರೆ ಪುರೋಹಿತರನ್ನು ಕರೆಸಿ ರಕ್ಷೆಗಳನ್ನು ಮಾಡಿಸುವುದು ಸಾಮಾನ್ಯವಾಗಿ ಗ್ರಾಮಗಳಲ್ಲಿರುವ ಒಂದು ಸಂಪ್ರದಾಯ). ಜಗತ್ತನ್ನೇ ರಕ್ಷಿಸುವವನಿಗೆ ರಕ್ಷೆಯನ್ನಿಡುವುದು ನಮ್ಮ ಭಕ್ತಿಯ ಸಂಕೇತ.

ಗೋಪಾಶ್ಚ ಸಂಭೂಯ ಗುಹೋಪ ಮಾಕ್ಷೀಂ ಸ್ವಘೋಷ ನಿರ್ಹ್ರಾದಿತ ವಿಶ್ವಘೋಷಾಂ।
ಗತಾಸುಮೈಕ್ಷಂತ ನಿಶಾಚರೀಂ ತಾಂ ಭೀಮಾಕೃತೀಂ ಭೀಮರಥೀಮಿವಾನ್ಯಾಂ ॥೭॥

ಗೋಪಾಲಕರೆಲ್ಲರೂ ಸೇರಿ ಘೋರವಾಗಿಯೂ, ವಿಕಾರವಾಗಿಯೂ ಮಾಯಾವಿಯಾಗಿಯೂ ಇರುವ ಸತ್ತುಬಿದ್ದಿದ್ದ ರಾಕ್ಷಸಿಯನ್ನು ಕಂಡರು. ಇದೇನು ಭೀಮರಥೀ ಎಂಬ ರಾತ್ರಿಯಲ್ಲಿ ಬರುವ ರಾಕ್ಷಸಿಯೇ ಇವಳು ಎಂದು ಭಯಾಶ್ಚರ್ಯಪಟ್ಟರು. (**ಸಪ್ತಮ್ಯಾ** : ಸಪ್ತಮೇ ವರ್ಷೇ ಸಪ್ತಮೇ ಮಾಸಿ ಸಪ್ತಮೀ ರಾತ್ರಿ ಭೈಮರಥಿ ನಾಮ ಸರ್ವಪ್ರಾಣಿ ಭಯಂಕರೀ) ಪೂತನೆಯ ವರ್ಣನೆ ಈ ಶ್ಲೋಕದಲ್ಲಿಯೂ ಮುಂದುವರೆದಿದೆ.

ಭೀಮರಥಿ ಎಂಬ ರಾಕ್ಷಸಿಯು ಸಪ್ತಮಿಯ ರಾತ್ರಿ ಎಲ್ಲರನ್ನೂ ಹೆದರಿಸುವಂತೆ ಬರುತ್ತಾಳೆಂದು ಪ್ರತೀತಿ ಉಂಟು. ವಿಕೃತ ರೂಪವುಳ್ಳವಳಾದ ಅವಳು ಮಾಯಾವಿಯಾಗಿದ್ದು ಅನೇಕರಿಗೆ ಪ್ರಾಣಾಂತಿಕ ಅಪಾಯವನ್ನುಂಟು ಮಾಡುವವಳು. ಅವಳೇ ಪೂತನೆಯ ರೂಪದಲ್ಲಿ ಬಂದಳೆಂದು ಎಲ್ಲರೂ ತಿಳಿದರು. ಗ್ರಾಮಗಳಲ್ಲಿ ಕೆಲವು ಭೂತಗಳು ದುಷ್ಟ ಚೇಷ್ಟೆಗಳನ್ನು ರಾತ್ರಿಯ ಹೊತ್ತು ಮಾಡುತ್ತವೆ.

ಪರಶ್ವಧೈ ಸ್ತತ್‌ಕ್ಷಣಶಾತಿತೈಸ್ತಾಂ ವಿಚ್ಛಿದ್ಯ ವಿಂಧ್ಯಾಚಲ ಸಾನುಕಲ್ಪಾಂ।
ಅನಃ ಪ್ರವೃತ್ತ್ಯಾ ಬಹಿರಾಶು ನಿನ್ಯುಃ ಕ್ರವ್ಯಾದ್ದಲೀಂ ಪ್ರಾಜ್ಯಮಿವ ಕ್ಷಿಪಂತಃ ॥೮॥

ಆ ಕೂಡಲೇ ಅನೇಕ ಚೂಪಾದ ಕೊಡಲಿಗಳನ್ನು ತೆಗೆದುಕೊಂಡು ಅವಳ ದೊಡ್ಡ ದೇಹವನ್ನು ಚೂರು ಚೂರಾಗಿ ಕತ್ತರಿಸಿ, ಹಲವು ಗಾಡಿಗಳಲ್ಲಿ ತುಂಬಿ, ಊರ ಹೊರಗೆ ಪಕ್ಷಿ ಮುಂತಾದ ಪ್ರಾಣಿಗಳಿಗೆ ಬಲಿಯಾಗಿ ಅರ್ಪಿಸಿ ಎಸೆದು ಬಂದರು.

ಒಂದು ವೇಳೆ ಅವಳ ದೇಹವನ್ನು ಹಾಗೆಯೇ ಬಿಟ್ಟರೆ, ಮತ್ತೆ ಎಲ್ಲಿ ಎದ್ದು ಬರುವಳೋ ಎಂಬ ಭಯದಿಂದ ಗೋಪಾಲಕರೆಲ್ಲರೂ ಸೇರಿ ವಿಂಧ್ಯ ಪರ್ವತಾಕಾರದಲ್ಲಿ ಇದ್ದ ಅವಳ ದೇಹವನ್ನು ಚೂಪಾದ ಕೊಡಲಿಗಳಿಂದ ಛಿದ್ರ ಛಿದ್ರ ಮಾಡಿ, ಪಕ್ಷಿ ಮುಂತಾದ ಪ್ರಾಣಿಗಳಿಗೆ ಆಹಾರವಾಗಲೆಂದು ಊರ ಹೊರಗೆ ಎಸೆದು ಬಂದು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಸ್ವಲ್ಪಮಟ್ಟಿಗೆ ಎಲ್ಲರಿಗೂ ಶಾಂತಿ ದೊರಕಿತು.

ಗ್ರಹಾದಿ ದೋಷಾನ್ ಅಪಹಂತು ಕಾಮಾ ಗೋಪ್ತುಃ ಸತಾಂ ಗೋಪತಯಃ ಸಮೇತಾಃ।
ಸುವರ್ಣ ಸೂತ್ರಗ್ರಥಿತಾಭಿರಾಮಾಂ ಪಂಚಾಯುಧೀ ಮಾಭರಣಂ ಬಬಂಧುಃ ॥೯॥

ಬಾಲಾರಿಷ್ಟಗಳಿಗೆ ಕಾರಣವಾದ ಕೆಲವು ಗ್ರಹಗಳಿಂದ ಏರ್ಪಡುವ ದೋಷಗಳನ್ನು ನೀಗಲು ನಿರ್ಧರಿಸಿ, ಗೋಪರೆಲ್ಲರೂ ಸೇರಿ ಐದು ಆಯುಧಗಳನ್ನು (ಪಾಂಚಜನ್ಯ, ಸುದರ್ಶನ, ಕೌಮೋದಕೀ, ನಂದಕ ಮತ್ತು ಶಾರ್ಙ್ಗ) ಹೋಲುವ ಆಭರಣದ ರಕ್ಷೆ ಕಟ್ಟಿದರು.

ಇನ್ನೂ ಅನೇಕ ವಿಧವಾದ ರಕ್ಷಣಾ ಕಾರ್ಯಗಳನ್ನು ಮುಂದುವರೆಸಿದರು. ಆ ಗೋಪಾಲಕರು ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಕೇಶವಾದಿ ಹನ್ನೆರಡು ನಾಮಗಳಿಂದ ಅಭಿಮಂತ್ರಿಸಿ ರಕ್ಷೆಯನ್ನಿಟ್ಟರು. ಕೇಶವಾದಿ ಹನ್ನೆರಡು ನಾಮಗಳ ನ್ಯಾಸವು ಹೀಗಿದೆ :

ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಮಥೋದರೇ ।
ವಕ್ಷಃಸ್ಥಲೇ ಮಾಧವಂ ತು ಗೋವಿಂದಂ ಕಂಠಕೂಬರೇ ॥
ವಿಷ್ಣುಂ ಚ ದಕ್ಷಿಣೇ ಕುಕ್ಷೌ ಬಾಹೌ ಚ ಮಧುಸೂದನಮ್ ।
ತ್ರಿವಿಕ್ರಮಂ ಕಂದರೇ ತು ವಾಮನಂ ವಾಮಪಾರ್ಶ್ವಕೇ ॥
ಶ್ರೀಧರಂ ವಾಮಬಾಹೌ ತು ಹೃಷೀಕೇಶಂ ತು ಕಂಧರೇ ।
ಪೃಷ್ಠೇ ತು ಪದ್ಮನಾಭಂ ಚ ಕಟ್ಯಾಂ ದಾಮೋದರಂ ನ್ಯಸೇತ್ ॥

ವಿಷ್ಣುಭಕ್ತರು ಪ್ರತಿದಿನವೂ ತಮ್ಮ ಹಣೆ, ಹೊಟ್ಟೆ, ಎದೆ, ಕಂಠದ ಮುಂಭಾಗ, ಬಲಹೊಟ್ಟೆ, ಬಲ ತೋಳು, ಕತ್ತಿನ ಹಿಂಭಾಗ, ಬಲಹೆಗಲು, ಎಡಪಕ್ಕ, ಎಡತೋಳು, ಎಡಹೆಗಲು, ಬೆನ್ನು, ನಡು – ಈ ಅಂಗಗಳಲ್ಲಿ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ – ಎಂಬ ನಾಮಗಳಿಂದ ನ್ಯಾಸ ಮಾಡಬೇಕು.

ರಮ್ಯಾಣಿ ರತ್ನಾನಿ ರಥಾಂಗ ಪಾಣೇ ರಾ ಕಲ್ಪತಾಂ ನೂನ ಮವಾಪ್ನುವಂತಿ।
ತದಂಗ ಸಂಸ್ಪರ್ಶರಸಾತ್ ಪ್ರಕಾಮಂ ರೋಮಾಂಚಿತಾನ್ಯಂತು ಗುಣೈರಭೂವನ್॥೧೦॥

ಸುದರ್ಶನ ಚಕ್ರವನ್ನು ಧರಿಸಿರುವ ಸ್ವಾಮಿಗೆ ಸುಂದರವಾದ ರತ್ನಗಳಿಂದ ಅಲಂಕರಿಸಿದಾಗ ಅವನ ದಿವ್ಯ ಶರೀರದ ಸ್ಪರ್ಶದಿಂದ ಆ ದಿವ್ಯಾಭರಣಗಳು ರೋಮಾಂಚಿತಗೊಂಡು ಹೆಚ್ಚುಪ್ರಕಾಶಿಸಿದವು.

ಭಗವಂತನು ಯಾವ ಆಭರಣಗಳ ಅಲಂಕಾರವೂ ಇಲ್ಲದೆ ಪ್ರಕಾಶಿಸುತ್ತಾನೆ. ಹುಟ್ಟುವಾಗಲೇ ಶಂಖಚಕ್ರಗಳನ್ನು ಧರಿಸಿ ಹುಟ್ಟಿದ್ದಾನೆ. ಆದರೂ ಅವನಿಗೆ ಆಭರಣಗಳಿಂದ ಅಲಂಕರಿಸಿ, ಆನಂದಪಟ್ಟರು ಯಶೋದಾದಿ ಇತರ ಗೋಪಸ್ತ್ರೀಯರು. ಅವನ ಅಂಗಸ್ಪರ್ಶದಿಂದ ರತ್ನಗಳು ಹೆಚ್ಚು ಕಾಂತಿಯುಕ್ತವಾಗಿ ಬೆಳಗಿದವು. ಆಭರಣಗಳೇ ರೋಮಾಂಚನಗೊಂಡವು.

ಸಶಾಯತಃ ಕ್ಷೇಮವಿದಾ ಜನನ್ಯಾ ಪರ್ಯಙ್ಕಿಕಾಯಾಂ ಪ್ರರುದನ್ ಕುಮಾರಃ।
ಚಿಕ್ಷೇಪ ತುಂಗಂ ಶಕಟಂ ಪದಾಭ್ಯಾಂ ಗಾಢಾಭಿಘಾತೇನ ಗಿರೀಂದ್ರ ಸಾರಂ ॥೧೧॥

ಮಗುವಿಗೆ ಕ್ಷೇಮವು ಇಲ್ಲಿಯೇ ಎಂಬುದನ್ನು ತಿಳಿದ ಯಶೋದೆಯಿಂದ ತೊಟ್ಟಿಲಿನಲ್ಲಿ ಮಲಗಿಸಿದ ಮಗುವು ಅಳುತ್ತಲೇ ಪರ್ವತಾಕಾರದಲ್ಲಿ ಇದ್ದ ಒಂದು ಗಾಡಿಯನ್ನು ಕಾಲುಗಳಿಂದ ಜೋರಾಗಿ (ದೂರದಲ್ಲಿ ಬೀಳುವ ಹಾಗೆ) ಒದೆಯಿತು.

ಒಂದು ದಿನ ಯಶೋದೆಯು ಮಗುವನ್ನು ಮಲಗಿಸಿ, ಯಾವುದೋ ಕೆಲಸದ ನಿಮಿತ್ತ ಬೇರೆ ಕಡೆ ಹೋಗಿದ್ದಾಗ, ಎಚ್ಚರಗೊಂಡ ಶ್ರೀಕೃಷ್ಣನು ತನ್ನ ಬಳಿ ನಿಂತಿದ್ದ ದೊಡ್ಡ ಬಂಡಿಯನ್ನು ಕಾಲುಗಳಿಂದ ಒದರುವ ಹಾಗೆ ಜೋರಾಗಿ ಪುಟ್ಟ ಪಾದಗಳಿಂದ ಜೋರಾಗಿ ಒದ್ದನು. (ಮಕ್ಕಳು ಕೈಕಾಲು ಬಡಿಯುವುದು ಸ್ವಾಭಾವಿಕವಷ್ಟೆ. ಮಗುವು ಕ್ಷೇಮವಾಗಿದೆಯೆಂದು ಯಶೋದೆ ಭಾವಿಸಿದ್ದಳು. ಆದರೆ ಮಗುವು ಅಮ್ಮನಿಲ್ಲದ್ದನ್ನು ಕಂಡು ಜೋರಾಗಿ ಪಕ್ಕದಲ್ಲಿ ನಿಂತಿದ್ದ ಬಂಡಿಯನ್ನು ಕಾಲಿನಿಂದ ಜೋರಾಗಿ ಬಡಿಯಿತು. ಆ ಪುಟ್ಟ ಪಾದಕ್ಕೆ ಎಲ್ಲಿಲ್ಲದ ಶಕ್ತಿ ಬಂದಿತೋ ತಿಳಿಯದು. ಸರ್ವಶಕ್ತನಲ್ಲವೇ ಅವನು! ಮಲಗಿದ್ದಲ್ಲಿಂದಲೇ ಎಲ್ಲವೂ ಅರಿಯುವ ಸ್ವಾಮಿಯು, ಆ ಶಕಟವು ಸಾಧಾರಣ ಶಕಟನಲ್ಲವೆಂದೂ, ಒಬ್ಬ ಅಸುರನೇ ಆ ರೂಪದಲ್ಲಿ ಬಂದಿದ್ದಾನೆಂದು ತಿಳಿದುಕೊಂಡಿತು.

ವಿದಾರಿತಸ್ತಸ್ಯ ಪದಾಗ್ರ ಯೋಗಾತ್ ವಿಕೀರ್ಯಮಾಣೋ ಬಹುಧಾ ಪೃಥಿವ್ಯಾಂ।
ಶಬ್ದಾಯಮಾನಃ ಶಕಟಾಖ್ಯ ದೈತ್ಯಃ ಸಂಕ್ಷೋಭಯಾಮಾಸ ಜಗಂತಭೀಕ್ಷ್ಣಂ ॥೧೨॥

ಆ ಶಕಟಾಸುರನೆಂಬ ಅಸುರನು ಮಗುವಿನ ಕಾಲಿನ ತುದಿಯ ಏಟಿನಿಂದ ಛಿದ್ರ ಛಿದ್ರ ಗೊಂಡು ಪುಡಿಪುಡಿಯಾಗಿ ದೊಡ್ಡ ಶಬ್ದದಿಂದ ಜಗತ್ತೆಲ್ಲವನ್ನೂ ತಲ್ಲಣಗೊಳಿಸಿದನು. ಆ ಪಾದಾಘಾತಕ್ಕೆ ಆ ಬಂಡಿ ಪುಡಿಪುಡಿಯಾಗಿ ಹೋಯಿತು.

ನಾರಾಯಣೀಯಂನ ಶ್ಲೋಕ ಹೀಗಿದೆ.

ಕದಾಪಿ ಜನ್ಮರ್ಕ್ಷದಿನೇ ತವ ಪ್ರಭೋ ನಿಮಂತ್ರಿತಜ್ಞಾತಿವಧೂಮಹೀಸುರಾ।
ಮಹಾನಸಸ್ತ್ವಾಂ ಸವಿಧೇ ನಿಧಾಯ ಸಾ ಮಹಾನಸಾದೌ ವವೃತೇ ವ್ರಜೇಶ್ವರೀ।
ತತೋ ಭವತ್‌ತ್ರಾಣ ನಿಯುಕ್ತ ಬಾಲಕ ಪ್ರಭೀತಿ ಸಂಕ್ರಂದನ ಸಂಕುಲಾರವೈ।
ವಿಮಿಶ್ರಮಶ್ರಾವಿ ಭವತ್ಸಮೀಪತಃ ಪರಿಸ್ಫುಟದ್ದಾರುಚಟಚ್ಚಟಾರವಃ ॥

ಒಮ್ಮೆ ನಿನ್ನ ಜನ್ಮ ನಕ್ಷತ್ರದಂದು ತನ್ನ ಬಂಧುಗಳನ್ನೂ, ಬ್ರಾಹ್ಮಣರನ್ನೂ ಆಹ್ವಾನಿಸಿ, ವ್ರಜೇಶ್ವರಿಯಾದ ಯಶೋದೆಯು ನಿನ್ನನ್ನು ಒಂದು ದೊಡ್ಡ ಗಾಡಿಯ ಬದಿಯಲ್ಲಿ ಮಲಗಿಸಿ, ಅಡಿಗೆ ಮನೆಯ ಕೆಲಸ ಕಾರ್ಯಗಳಲ್ಲಿ ಮಗ್ನಳಾಗಿದ್ದಳು. ಆಗ ನಿನ್ನ ಸಮೀಪದಲ್ಲಿ ನಿನ್ನನ್ನು ನೋಡಿಕೊಳ್ಳಲು ನಿಯುಕ್ತರಾದ ಬಾಲಕರ ಭೀಕರವಾದ ಆಕ್ರಂದನದ ಗೊಂದಲ ದೊಂದಿಗೆ ಮಿಶ್ರವಾದ ಚಟಚಟನೆ ಸಿಡಿದ ಮರದ ತುಂಡುಗಳ ಶಬ್ದವು ಎಲ್ಲರಿಗೂ ಕೇಳಿಸಿತು.

ಯದೃಚ್ಛಯೋ ಕ್ಷಿಪ್ತ ಪದೇ ಕುಮಾರೇ ಶೈಲೋಪಲಕ್ಷ್ಮೇ ಶಕಟೇ ನಿರಸ್ತೇ।
ಸರೋಜ ಗರ್ಭೋಪಮ ಸೌಕುಮಾರ್ಯಂ ಪಸ್ಪರ್ಶ ತತ್ಪಾದ ತಲಂ ಯಶೋದಾ ॥೧೩॥

ಯಾದೃಚ್ಛಿಕವಾಗಿ ಮಗುವಿನ ಕಾಲು ತಗುಲಿದ್ದಕ್ಕೆ ಪರ್ವತದಂತಹ ಬಂಡಿಯು ಮುರಿದುಹೋದುದದನ್ನು ನೋಡಿದ ಯಶೋದೆಯು, ತಾವರೆ ಹೂವಿನ ಹಾಗೆ ಮೃದು ವಾಗಿದ್ದ ಕಾಲುಗಳನ್ನು ತಡವಿ (ಕಂದನ ಕೆಂಪಾದ ಕಾಲುಗಳಲ್ಲಿ ರಕ್ತವೇನೂ ಇಲ್ಲವೆಂದು) ಸಮಾಧಾನಗೊಂಡಳು.

ಮತ್ತೊಂದು ಬಾರಿ ಆಶ್ಚರ್ಯಪಡುವ ಸರದಿ ಯಶೋದೆಯದಾಯಿತು. ಮಗುವಿನ ಪುಟ್ಟ ಪಾದಗಳಿಗೆ ಯಾವ ಏಟೂ ಆಗಿಲ್ಲ! ಆದರೆ ಒಂದು ಸಣ್ಣ ಗೀರೂ ಸಹ ಆಗಿಲ್ಲ. ಆದರೆ ಬಂಡಿ ಪುಡಿಪುಡಿಯಾಗಿದೆ. ಇದೇನಾಶ್ಚರ್ಯ? ಇದು ಭಗವಂತನ ಮಾಯೆಯೋ? ರಾಕ್ಷಸನ ಮಾಯೆಯೋ? ತಿಳಿಯದಾಯಿತು.

ಇತರ ಬಾಲಲೀಲೆಗಳು



ಅಥಾಂಗಣೇ ಜಾನುಪದಾಗ್ರ ಹಸ್ತೈ ಶ್ಚಕ್ರಾಯುಧೇ ಚಂಕ್ರಮಣ ಪ್ರವೃತ್ತೇ।
ಪ್ರಾಯೋ ಧರಿತ್ರೀ ಪರಿಷ ಸ್ವಜೇ ತಂ ಸಾಪತ್ರಪಾ ಸಾಂದ್ರರಜಶ್ಛಲೇನ ॥೧೪॥

ಕೆಲ ಸಮಯ ಕಳೆದ ಮೇಲೆ ಶ್ರೀಕೃಷ್ಣನು ತನ್ನ ಮಂಡಿಗಳಿಂದ, ಕೈಗಳಿಂದ ನಡೆಯಲು ಪ್ರಾರಂಭಿಸಿದನು. ಇದೇನು ಭೂದೇವಿಯೇ ಕೃಷ್ಣನನ್ನು ಆಲಿಂಗನ ಮಾಡಿಕೊಂಡಿರುವಳೋ ಎಂಬಂತೆ ಅವನು ನೆಲದ ಮೇಲೆಲ್ಲಾ ಓಡಾಡತೊಡಗಿದನು. (ಇಂದಿಗೂ ಗೋಕುಲಕ್ಕೆ ಹೋದಾಗ ಅನೇಕ ಭಕ್ತರು ವಯಸ್ಸಾದವರೂ ಕೂಡ ಶ್ರೀಕೃಷ್ಣನು ತನ್ನ ಮಂಡಿಗಳಿಂದ ಅಂಬೆಗಾಲಿಕ್ಕಿದ ಸ್ಥಳದಲ್ಲಿ ತಾವೂ ಅಂಬೆಗಾಲಿಟ್ಟು ಅನುಭವಿಸುತ್ತಾರೆ).

ಈ ಪ್ರಸಂಗವನ್ನು ಅನೇಕ ಹರಿದಾಸರುಗಳು ತಮ್ಮ ಕೀರ್ತನೆಗಳಲ್ಲಿ ಹಾಡಿದ್ದಾರೆ.

ಮುಂದಿನ ಶ್ಲೋಕಗಳಲ್ಲಿ ಶ್ರೀಕೃಷ್ಣನ ಬಾಲ್ಯದ ಆಟಪಾಠಗಳ ವರ್ಣನೆ ಇದೆ. ಮಕ್ಕಳು ಅಂಬೆಗಾಲಿಕ್ಕುವುದನ್ನು ನೋಡಲು ಬಲು ಮುದ್ದಾಗಿರುತ್ತದೆ. ಕೆಲಕಡೆ ಕೆಲವು ಅರ್ಚಾ ಮೂರ್ತಿಗಳು "ಅಂಬೆಗಾಲಿನ ಕೃಷ್ಣ"ನೆಂದೇ ಪ್ರಸಿದ್ಧಿ ಪಡೆದಿವೆ.

ಚೆನ್ನಪಟ್ಟಣದ ಸಮೀಪದ ದೊಡ್ಡ ಮಳೂರಿನಲ್ಲಿ ಈ ರೀತಿಯ ಮನಮೋಹಕ "ಅಂಬೆಗಾಲಿನ ಕೃಷ್ಣ"ನ ವಿಗ್ರಹ ಇದೆ.

ಶ್ರೀ ಕೃಷ್ಣನು ಮಂಡಿಯೂರಿ ನಡೆಯುವಾಗ ಅವನ ಪ್ರೇಯಸಿಯಾದ ಭೂದೇವಿಯು ಅವನನ್ನು ಪ್ರೇಮದಿಂದ ಆಲಿಂಗನ ಮಾಡುತ್ತಿರುವಂತಿತ್ತು. ಎಂದು ಸುಂದರವಾಗಿ ವರ್ಣಿಸಿದ್ದಾರೆ. (ಉತ್ಪ್ರೇಕ್ಷಾಲಂಕಾರ).

ನಿರ್ವ್ಯಾಜ ಮಂದಸ್ಮಿತ ದರ್ಶನೀಯಂ ನೀರಾಜಿತಂ ಕುಂಡಲ ರತ್ನಭಾಸಾ।
ನಂದಸ್ತದಾನೀಂ ನ ಜಗಾಮ ತೃಪ್ತಿಂ ಮುಗ್ಧಾಕ್ಷರಂ ಪ್ರೇಕ್ಷ್ಯ ಮುಖಂ ತದೀಯಂ ॥೧೫॥

ನೋಡುವವರಿಗೆ ಆನಂದವನ್ನುಂಟು ಮಾಡುವ ಮಂದಸ್ಮಿತನಾದ ಕುಂಡಲಗಳನ್ನು ಧರಿಸಿದ್ದ ಈ ದಿವ್ಯ ಶಿಶುವನ್ನು ಎಷ್ಟು ನೋಡಿದರೂ ತೃಪ್ತಿ ಪಡೆಯದ ನಂದಗೋಪನು, ಆ ದಿವ್ಯವಾದ ಮುಗ್ಧವಾದ ಮುಖವನ್ನು ಬಾರಿ ಬಾರಿಗೂ ನೋಡಿ ಹಿಗ್ಗುತ್ತಿದ್ದನು.

ಭಗವಂತನಿಗೆ 'ಆರಾವಮುದನ್' ಎಂದು ತಮಿಳಿನಲ್ಲಿ ಕರೆಯುತ್ತಾರೆ. ಎಷ್ಟು ನೋಡಿದರೂ ತೃಪ್ತಿಯಾಗದ ಸ್ವಾಮಿ ಅವನು. ಅದೇ ರೀತಿ ಆ ಬಾಲಕಕೃಷ್ಣ, ಅಂಬೆಗಾಲಿಕ್ಕುವ ಕೃಷ್ಣ, ಆಭರಣಗಳಿಂದಲೂ, ಉತ್ತಮ ಪೋಷಾಕುಗಳಿಂದಲೂ ಅಲಂಕೃತನಾಗಿದ್ದ ಆ ಭುವನಸುಂದರನನ್ನು ಕಂಡು ಎಷ್ಟು ನೋಡಿದರೂ ನಂದಗೋಪನಿಗೆ ತೃಪ್ತಿಯೇ ಇಲ್ಲ.

ರಾಮನನ್ನು ವಾಲ್ಮೀಕಿಗಳು ''ಪುಂಸಾಂ ದೃಷ್ಟಿ ಚಿತ್ತಾಪಹಾರಿಣಂ'' ಎಂದಿದ್ದಾರೆ. ಇನ್ನು ಬಾಲನಾದ ಶ್ರೀಕೃಷ್ಣನನ್ನು ಕೇಳಬೇಕೇ? ಎಷ್ಟು ನೋಡಿದರೂ ಮೇಲೆ ಮೇಲೆ ನೋಡಬೇಕೆಂಬ ಆಸೆ ಹುಟ್ಟಿಸುವವನು. ಭಕ್ತಿರಸದಲ್ಲಿ ಮುಳುಗಿರುವವನಿಗೆ ಆಗುವ ಅನುಭವ ಇದು. ಆಳ್ವಾರುಗಳೆಲ್ಲಾ ಇದನ್ನೇ ಬಯಸಿದ್ದು ಮತ್ತು ಅನುಭವಿಸಿದ್ದು.

ವಿಶ್ವಾನಿ ವಿಶ್ವಾಧಿಕ ಶಕ್ತಿರೇಕೋ ನಾಮಾನಿ ರೂಪಾಣಿ ಚ ನಿರ್ಮಿಮಾಣಃ।
ನಾಮ್ನೈಕ ದೇಶ ಗ್ರಹಣೇಽಪಿ ಮಾತುರ್ ಬಭೂವ ಕೃಷ್ಣೋ ಬಹುಮಾನ ಪಾತ್ರಂ॥೧೬॥

ಜಗತ್ತಿಗೆಲ್ಲಾ ಮೇಲಾದ ಶಕ್ತಿಯುಳ್ಳವನೂ, ಒಬ್ಬನಾಗಿಯೇ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸುವವನ ತಾಯಿಯಾದ ಯಶೋದೆಯ ಹೆಸರನ್ನು ಪೂರ್ತಿಯಾಗಿ ಹೇಳದೆ (ಕೇವಲ ಶೋದಾ ಎಂದು ಹೇಳಿ) ಮಾತಾಡುವಾಗ ಎಲ್ಲರೂ ಅವನನ್ನು ಕೊಂಡಾಡಿದರು.

''ಅಮೃತಂ ಬಾಲಭಿಷಿತಂ'' ಎಂಬುವ ಹಾಗೆ ಮಕ್ಕಳು ಮುದ್ದುಮುದ್ದಾಗಿ ತೊದಲು ಮಾತುಗಳನ್ನು ಆಡುವುದನ್ನು ಕೇಳುವುದೇ ಒಂದು ಆನಂದ. ಅದನ್ನು ಕೇಳಿ ತಾಯಂದಿರು ಸಂತೋಷಿಸುವ ಹಾಗೆ ಬೇರೆ ಯಾರೂ ಸಂತೋಷಪಡುವುದಿಲ್ಲ.

ಅದೇ ರೀತಿ ಸಕಲ ವೇದಗಳನ್ನು ಅರಿತವನಾಗಿ, ಸರ್ವಜ್ಞನಾದ ಆ ಭಗವಂತನು ಶಿಶುವಾಗಿದ್ದಾಗ, ತೊದಲು ನುಡಿಗಳನ್ನು ಹೇಳಿ ಯಶೋದೆಯನ್ನು ರಂಜಿಸುತ್ತಿದ್ದನು. 'ಯಶೋದಾ' ಎನ್ನುವ ಬದಲು 'ಶೋದಾ' ಎನ್ನುತ್ತಿದ್ದನು.

ಭೂಸ್ತುತಿಯಲ್ಲಿ ಸ್ವಾಮಿ ದೇಶಿಕರು ''ಮುಗ್ಧಾಕ್ಷರೈರಖಿಲ ಧಾರಿಣಿ ಮೋದಮಾನಾ ಮಾತಃ ಸ್ತನಂಧಯ ಧಿಯಂ ಮಯಿ ವರ್ತಯೇಥಾಃ'' ತಾಯಿಯೇ! ಅರಿವಿಲ್ಲದ ಮಗುವಿನ ಮಾತುಗಳಂತಿರುವ ಈ ಸ್ತೋತ್ರದ ನುಡಿಗಳಿಂದ ಸಂತೋಷಿಸುವವಳಾಗಿ ಹಾಲೂಡುವ ಶಿಶುವಿನಲ್ಲಿ ತೋರುವ ಭಾವನೆಯನ್ನು ಕೈಗೊಳ್ಳಬೇಕು'' ಎಂದಿದ್ದಾರೆ.

ತರಂಗಿತಾನುಶ್ರವ ಗಂಧಮಾದೌ ತಸ್ಯಾದ್ಭುತಂ ಸಂಲಪಿತಂ ಸಖೀಭಿಃ।
ವರ್ಣಸ್ವರಾದಿ ವ್ಯವಸಾಯಭೂಮ್ನಾ ಶಿಕ್ಷಾವಿದಾಂ ಶಿಕ್ಷಣ ಮಗ್ರ್ಯಮಾಸೀತ್ ॥೧೭॥

ಮೊದಲು ಮೊದಲು ಮಾತಾಡುವುದನ್ನು ಕಲಿಸುವ ಸ್ನೇಹಿತರುಗಳೊಡನೆ ಮಗುವು ಆಶ್ಚರ್ಯದಿಂದ ವೇದದ ಮನಸ್ಸನ್ನು ಅರಿತವನಂತೆ ಉಚ್ಚರಿಸಿದ ಮಾತುಗಳು, ವರ್ಣ, ಸ್ವರ, ಹ್ರಸ್ವ ಮುಂತಾದ ಮಾತ್ರೆಗಳನ್ನು ಬಹು ಸ್ಪಷ್ಟವಾಗಿ ಹೇಳುತ್ತಿದ್ದುದ್ದರಿಂದ ಶಿಕ್ಷಾ ಎಂಬ ವೇದಾಂಗವನ್ನು ತಿಳಿದವರೆಲ್ಲರಿಗೆ (ಸ್ನೇಹಿತರೂ ಸಹ) ಇವನೇ ಹೇಳಿಕೊಡುವಂತಿತ್ತು.

ವೇದದ ಸ್ವರೂಪವೇ ಭಗವಂತನೆಂದು ಹೇಳುತ್ತಾರೆ. ಶ್ರೀಕೃಷ್ಣನ ಆ ಬಾಲಭಾಷೆಯೂ ಕೂಡ ವೇದವನ್ನು ಅರಿತವರು ಮಾತನಾಡುವಂತೆಯೇ ಇತ್ತು. ಎಲ್ಲಾ ವೇದಾಂಗಗಳನ್ನು ಚೆನ್ನಾಗಿ ತಿಳಿದ ವಾಕ್ಪಟುಗಳು ಯಾವ ರೀತಿ ಸ್ಪಷ್ಟವಾಗಿ ಉಚ್ಚಾರಗಳನ್ನು ಮಾಡುವರೋ ಅದೇ ರೀತಿ ಕೃಷ್ಣನ ಮಾತುಗಳು ಬಹಳ ಸ್ಪಷ್ಟವಾಗಿ ಇದ್ದು, ಮಗುವು ಮಾತನಾಡುವಂತೆ ಇಲ್ಲದೆ,ಪ್ರೌಢರು, ಜ್ಞಾನಿಗಳು ಮಾತನಾಡುವಂತಿತ್ತು. ವಿದ್ಯೆಗೂ, ಸರಸ್ವತಿಗೂ, ಅವನೇ ಅಲ್ಲವೇ ಅಧಿದೇವತೆ. ಬಾಲ್ಯದಿಂದಲೂ ತಾನು ಪರಬ್ರಹ್ಮನೆಂದು ತೋರಿಸಿದವನಲ್ಲವೇ ಅವನು !

ತಮೀಷದುತ್ಥಾಯ ನಿಲೀನ ಮಾರಾತ್ ಸಂಪ್ರೇಕ್ಷ್ಯ ದಂತಾಕುರ ಚಾರುಹಾಸಂ।
ಸನಾತನೀಂ ದೃಷ್ಟಿಮನನ್ಯ ದೃಷ್ಟಿಃ ಸಾನಂದ ಮಾಲೋಕತ ನಂದಪತ್ನೀ ॥೧೮॥

ಎದ್ದ ತಕ್ಷಣ ಕೆಳಗೆ ಕುಳಿತು (ತಾನು ಮಾಡುವ ಅಭಿನಯವು ಬೇರೆಯವರಿಗೆ ತಿಳಿಯದೆಂದು ತಿಳಿದು) ಕಣ್ಣಲ್ಲಿ ಕಣ್ಣನ್ನಿಟ್ಟು ಮುದ್ದಾದ ದಂತಪಂಕ್ತಿಗಳನ್ನು ಹೊಂದಿ, ಎಲ್ಲರಿಗೂ ಶಾಶ್ವತವಾಗಿರುವ ಶ್ರೀಕೃಷ್ಣನನ್ನು ನೋಡಿ ಆನಂದಿಸಿದಳು ನಂದ ಪತ್ನಿಯಾದ ಯಶೋದೆ.

ಯಶೋದೆಯ ಸೌಭಾಗ್ಯಕ್ಕೆ ಎಣೆಯೇ ಇಲ್ಲ. ''**ಎನ್ನ ತಪಂ ಶೆಯ್ದಳೋ ಯಶೋದಾ, ಪರಬ್ರಹ್ಮಮೇ ಅಮ್ಮಾ ಎನ್ರದುಕ್ಕು**'' ಎಂದು ಒಂದು ತಮಿಳು ಸಾಲು ಇದೆ. ಬೇರಾರೂ ಅನುಭವಿಸದ ಅಲೌಕಿಕ ಆನಂದವನ್ನು ಯಶೋದೆ ಅನುಭವಿಸಿದಳು. ಶ್ರೀಕೃಷ್ಣನು ತಾನು ಮಾಡುವ ಚೇಷ್ಟೆಗಳೆಲ್ಲವೂ ಬೇರೆಯವರಿಗೆ ತಿಳಿಯದಂತೆ ಚೆನ್ನಾಗಿ ನಟನೆ ಮಾಡುತ್ತಿದ್ದನು. ಅವನು ಎದ್ದು ಕುಳಿತು ನಡೆಯಲು ಪ್ರಯತ್ನಿಸಿ, ಕೆಳಗೆ ಬಿದ್ದು ಮತ್ತೆ ಎದ್ದು ನಡೆಯುವುದು ಇತ್ಯಾದಿಗಳನ್ನೆಲ್ಲಾ ನೋಡಿ ಯಶೋದೆ ಸಂತೋಷಿಸಿದಳು.

ಪದೈಸ್ತ್ರಿಭಿಃ ಕ್ರಾಂತ ಜಗತ್ರಯಂ ತಂ ಭವ್ಯಾಶಯಾ ಭಾವಿತ ಬಾಲಭಾವಂ।
ಕರೇಣ ಸಂಗೃಹ್ಯ ಕರಾಂಬುಜಾಗ್ರಂ ಸಂಚಾರಯಾಮಾಸ ಶನೈರ್ ಯಶೋದಾ॥೧೯॥

ಮೂರು ಅಡಿಗಳಿಂದ ಮೂರು ಲೋಕಗಳನ್ನು ಅಳೆದ ಸ್ವಾಮಿಯೂ, ಲೋಕ ಕ್ಷೇಮಕ್ಕಾಗಿ ಬಾಲಕನಾಗಿ ತೋರಿರುವ ಅವನನ್ನು, ಅವನ ಕೆಂದಾವರೆಯಂತಿರುವ ದಿವ ಹಸ್ತಗಳನ್ನು ತನ್ನ ಕೈಯಿಂದ ಹಿಡಿದುಕೊಂಡು ಯಶೋದೆಯು ಮೆಲ್ಲಮೆಲ್ಲನೆ ನಡೆಸಿದಳು.

ಮಕ್ಕಳು ತಪ್ಪು ಹೆಜ್ಜೆಗಳನ್ನಿಟ್ಟು ನಡೆಯುವುದನ್ನು ನೋಡುವುದೇ ಒಂದು ಚೆಂದ. ಇನ್ನು ಆ ಲೋಕ ಸ್ವಾಮಿಯಾದ ಕೃಷ್ಣನ ಹೆಜ್ಜೆಗಳ ಸೌಂದರ್ಯವನ್ನು ವರ್ಣಿಸಲು ಅಸಾಧ್ಯ. ಮೂರು ಲೋಕಗಳನ್ನು ಅಳೆದವನು ಅವನು. ಅವನ ಕೈಹಿಡಿದು ನಡೆಸುವುದೆಂದರೆ, ಯಶೋದೆಯ ಭಾಗ್ಯವನ್ನು ಏನೆಂದು ಹೇಳಬೇಕು ! ದೇವಕಿಗೆ ಸಿಗದ ಅವರ್ಣನೀಯ ಆನಂದ ಯಶೋದೆಗೆ ಲಭಿಸಿತು. ''**ಅವತಾರ ರಸಂ ಒರುತ್ತಿಕ್ಕು, ಲೀಲಾರಸಂ ಮತ್ತೊರುತ್ತಿಕ್ಕು**'' ಎಂದು ಒಬ್ಬ ಆಚಾರ್ಯರು ಹೇಳಿದ್ದಾರೆ. ಇಲ್ಲಿ ಯಶೋದೆಯು ಕೃಷ್ಣನ ಲೀಲಾ ರಸವನ್ನು ಅನುಭವಿಸಿದಳು.

ಸ್ಖಲದ್ಗತಿಂ ದ್ವಿತ್ರಪದ ಪ್ರಚಾರಾತ್ ಜಾನುಕ್ರಮೆ ಜಾತರುಚಿಂ ಕುಮಾರಂ।
ಭುಗ್ನೇ ಸಮಾವೇಶ್ಯ ವಲಗ್ನಭಾಗೇ ಸ್ತನ್ಯಂ ಮುದಾಪಾಯಯತೇ ಸ್ಮಧನ್ಯಾಃ ॥೨೦॥

ಎರಡು ಮೂರು ಅಡಿಗಳು ಇಟ್ಟೊಡನೇ, ಅಡಿಗಳನ್ನು ಇಡಲು ತಡವುತ್ತಾ ಬೀಳುವ ಹಾಗೆ ಗಾಭರಿಗೊಳ್ಳುತ್ತಿದ್ದ ಮಗುವನ್ನು ತಕ್ಷಣ ಎತ್ತಿಕೊಂಡು ಸೊಂಟದಲ್ಲಿ ಇಟ್ಟುಕೊಂಡು (ನನ್ನನ್ನು ಎತ್ತಿಕೊಂಡೇ ನಡೆಯಮ್ಮಾ) ಎಂದು ಹೇಳುವ ಸ್ವಾಮಿಗೆ ಸ್ತನ್ಯವನ್ನು ಇತ್ತು ಭಾಗ್ಯವತಿಯಾದಳು ಯಶೋದಾ.



ಆಚಾರ್ಯರು ಮತ್ತೆ ಮತ್ತೆ ಯಶೋದೆಯ ಭಾಗ್ಯವನ್ನೇ ಕೊಂಡಾಡುತ್ತಿದ್ದಾರೆ. ತಾಯಿಯನ್ನು ಚೆನ್ನಾಗಿ ಆಟವಾಡಿಸಿ, ಅವಳಿಗೆ ಆಯಾಸವನ್ನುಂಟು ಮಾಡಿ, ತಾನೂ ಆಯಾಸಗೊಂಡು, ನಂತರ ಅವಳಿಂದ ಸ್ತನ್ಯಪಾನ ಪಡೆಯುತ್ತಿದ್ದ. ಯಶೋದೆಯ ಅನುಭವ ಬೇರಾರಿಗೂ ಬರಲು ಸಾಧ್ಯವಿಲ್ಲ. ಅವಳ ಭಾಗ್ಯವೇ ಭಾಗ್ಯವು.

ಕ್ರಮೇಣ ಭೂಯೋಽಪಿ ವಿಹಾರಕಾಂಕ್ಷಿ ಸಂದಸ್ಯ ದಾರೈಃರಭಿನಂದ್ಯಮಾನಃ।
ನಿತ್ಯಾನುಭೂತಂ ನಿಗಮಾಂತ ಭೃಂಗೈರ್ನಿಜಂ ಪದಾಬ್ಜಂ ನಿದಧೇ ಪೃಥಿವ್ಯಾಂ ॥೨೧॥

ಪುನಃ ಮುಂದೆ ಮುಂದೆ ನಡೆಯಲು ಇಚ್ಛಿಸಿ ನಂದನ ಪತ್ನಿಯಿಂದಲೂ ಅನುಮತಿ ಪಡೆದವನಾಗಿ ವೇದಾಂಗಗಳಾಗಿರುವ, ದುಂಬಿಗಳು ಯಾವಾಗಲೂ ಸೇವಿಸುವ ದಿವ್ಯ ಪಾದಾರವಿಂದಗಳನ್ನು ಭೂಮಿಯಲ್ಲಿ ದೃಢವಾಗಿ ಊರಿ ನಿಂತನು.

ಗೋಕುಲದಲ್ಲೆಲ್ಲಾ ತನ್ನ ಪುಟ್ಟ ಪಾದಗಳಿಂದ ನಡೆಯಲು ಇಚ್ಛಿಸಿದನು ಸ್ವಾಮಿ. ಅದಕ್ಕಾಗಿ ತಾಯಿ ತಂದೆಯರ ಅನುಮತಿಯನ್ನೂ ಪಡೆದನು. ಹಿಂದೆ ತ್ರಿವಿಕ್ರಮಾವತಾರದಲ್ಲಿ ತ್ರೈಲೋಕ್ಯವನ್ನು ಅಳೆದ ಪ್ರಭುವಿಗೆ ಈಗ ನೆಲದ ಮೇಲೂರಿ ನಡೆಯಲು ಗಾಭರಿಯೇ? ಎಲ್ಲಾ ಲೋಕ ಮೋಹನಕ್ಕಾಗಿ, ಲೀಲಾ ನಾಟಕ ಸೂತ್ರಧಾರಿಯಾದ ಆ ಬಾಲಕೃಷ್ಣನು ಆಡುವ ನಾಟಕಗಳು ಇವು. ತನ್ನ ಈ ಆಟಗಳಿಂದ ತಾಯಿಯೂ ಉತ್ಸಾಹಿತಳಾಗಿ, ತನ್ನೊಡನೆ ಆಟ ಆಡಲು ಬರುವಳೆಂಬ ಆಸೆಯೂ ಸಹ ಇದ್ದೀತು ಆ ಮಾಯಾ ಕೃಷ್ಣನಿಗೆ.

ಸ ಸಂಚರನ್ ಸಾಧುಜನ ಪ್ರತೀಪೈರ್ಮಾ ಭುಜ್ಯತಾಂ ಸೇಯಮಿತೀವಮತ್ವಾ।
ಚಕ್ರಾದಿಭಿಃ ಪಾದ ಸರೋಜ ಚಿಹ್ನೈ ರಾಮುದ್ರಯಾಮಾಸ ಮಹೀಮನನ್ಯೈಃ ॥೨೨॥

ಸಂಚಾರವನ್ನು ಮಾಡುವವನಾಗಿ, ದಿವ್ಯ ಪಾದಾರವಿಂದಗಳ ರೇಖೆಗಳಿಂದ ಆ ಸಾಧು ಗಳಿಗೆ ಹೆದರಿಕೆಯುಂಟುಮಾಡುವ ಶಂಖ ಚಕ್ರಗಳ ಚಿಹ್ನೆಗಳಿಂದ ಭೂಮಿಯಲ್ಲಿ ಮುದ್ರೆ ಗಳನ್ನು ಒತ್ತಿದನು.

ಅವನು ನೆಲದ ಮೇಲೆ ನಡೆದಾಡುವಾಗ, ಅವನ ಪಾದರೇಖೆಗಳೆಲ್ಲವೂ ಕೂಡ ಭೂಮಿಯಲ್ಲಿ ತನ್ನ ಗುರುತುಗಳನ್ನು ಮಾಡಿತು. ಆದರೆ ಆ ಪಾದರೇಖೆಗಳೆಲ್ಲದರಲ್ಲಿಯೂ

ಶಂಖ ಚಕ್ರಗಳ ಚಿಹ್ನೆಗಳಿದ್ದುದರಿಂದ, ಅವನು ನಡೆದಾಡಿದ ಕಡೆಗಳಲ್ಲೆಲ್ಲಾ ಭಗವಂತನ ಅಸಾಧಾರಣ ಚಿಹ್ನೆಗಳಾದ ಶಂಖ ಚಕ್ರಗಳು ಮುದ್ರಿಸಲ್ಪಟ್ಟವು. ಶ್ರೀವೈಷ್ಣವ ಸಿದ್ಧಾಂತದಲ್ಲಿ ಭಾಗವತರು ತಮ್ಮ ತೋಳುಗಳ ಮೇಲೆ ಶಂಖ ಚಕ್ರಗಳ ಚಿಹ್ನೆಗಳನ್ನು ತಾವು ಭಗವದ್ಭಕ್ತರೆಂದು ತಿಳಿಸಲು, ತಾವು ಭಗವಂತನ ದಾಸರೆಂದು ತಿಳಿಸಲು ಧರಿಸುತ್ತಾರೆ. ಇಲ್ಲಿ ಶ್ರೀಕೃಷ್ಣನು ಭೂಮಿಯಲ್ಲಿ ನಡೆದಾಡುವಾಗ, ಭೂಮಿಯ ಮೇಲೆಲ್ಲಾ ಶಂಖ ಚಕ್ರ ಚಿಹ್ನೆಗಳು ತಾವಾಗಿಯೇ ಉಂಟಾದವು.

ಆಲಂಬ್ಯ ಮಾತುಃ ಕರಪಲ್ಲವಾಗ್ರಂ ಶನೈಃ ಶನೈಃ ಸಂಚರತೋ ಮುರಾರೇಃ।
ಬಭಾರ ಚಿತ್ರಾಮಿವ ಪತ್ರರೇಖಾಂ ಧನ್ಯಾ ಪದನ್ಯಾಸಮಯೀಂ ಧರಿತ್ರಿ ॥೨೩॥

ತಾಯಿಯ ಕೈಯ ತುದಿಯನ್ನು ಹಿಡಿದು ಮೆಲ್ಲಮೆಲ್ಲನೆ ನಡೆಯುವ ಭಗವಂತನ ಹೆಜ್ಜೆಗಳನ್ನು ಭೂದೇವಿಯು ತನಗೆ ತನ್ನ ನಾಥನು ಮಾಡುವ ವಿಚಿತ್ರವಾದ ಪತ್ರರೇಖೆಗಳನ್ನು ಧರಿಸಿ ಕೃತಾರ್ಥಳಾದಳು.

ಈ ಶ್ಲೋಕದಲ್ಲಿ ಭೂದೇವಿಯ ಭಾಗ್ಯವನ್ನು ಕೊಂಡಾಡಿದ್ದಾರೆ. ಶ್ರೀಕೃಷ್ಣನ ಪಾದ ರೇಖೆಗಳು ಭೂಮಿಯಲ್ಲೆಲ್ಲಾ ಏರ್ಪಟ್ಟಿತು. ಭೂದೇವಿಯ ಪತಿ ಶ್ರೀಕೃಷ್ಣ. ತನ್ನ ಪತಿಯ ಪಾದರೇಖೆಗಳನ್ನು ತನ್ನಮೇಲೆಲ್ಲಾ ಧರಿಸಿ, ವಿನೂತನವಾದ ಆನಂದವನ್ನು ಅನುಭವಿಸಿದಳು ಧರಿತ್ರಿ. ಶೃಂಗಾರ ಸೂಚಕವಾದ ಶ್ಲೋಕ. ಶ್ರೀಕೃಷ್ಣನು ತಾಯಿಯ ಕೈಯ್ಯನ್ನು ಹಿಡಿದುಕೊಂಡು ನಡೆಯುತ್ತಿದ್ದಾನೆ ಆ ದೃಶ್ಯವು ಕೂಡ ಅತ್ಯದ್ಭುತವಾದದ್ದು.

ಅಕರ್ಮ ನಿಘ್ನೋ ಭುವನಾನ್ಯಜಸ್ರಂ ಸಂಕಲ್ಪಲೇಶೇನ ನಿಯಮ್ಯದೀಪ್ಯನ್।
ಪ್ರಚಾರಿತಃ ಪ್ರಸ್ನುತಯಾ ಜನನ್ಯಾ ಪದೇ ಪದೇ ವಿಶ್ರಮಮಾಚಕಾಂಕ್ಷ ॥೨೪॥

ಪುಣ್ಯ - ಪಾಪ ಎಂಬ ಸಂಕೋಲೆಗಳಿಗೆ ವಶಪಡದವನಾಗಿ ಎಲ್ಲಾ ಲೋಕಗಳನ್ನು ಯಾವಾಗಲೂ ಸಂಕಲ್ಪಶಕ್ತಿಯಿಂದ ಒಂದು ಅಂಶದಿಂದಲೇ ಆಳುವ ಸಾಮರ್ಥ್ಯವುಳ್ಳವನಾದ ಸ್ವಾಮಿಯು ತಾಯಿಯ ಹಾಲನ್ನು ಕುಡಿಯಲು ಅವಳ ಜೊತೆ ಒಂದೊಂದೇ ಹೆಜ್ಜೆಯಿಡುತ್ತಾ ಮಧ್ಯೆ ಮಧ್ಯೆ ವಿಶ್ರಮಿಸುತ್ತಿದ್ದನು. (ಅವನ ನಡಿಗೆಯನ್ನು ನೋಡುತ್ತಿದ್ದಂತೆಲ್ಲಾ ತಾಯಿಗೆ ಸ್ತನ್ಯದಲ್ಲಿ ಹಾಲು ಉಕ್ಕುತ್ತಿತ್ತು ಎಂಬ ಭಾವ).



ತಾಯಿಯ ಜೊತೆ ಕೈಯ್ಯನ್ನು ಹಿಡಿದುಕೊಂಡು ಕೃಷ್ಣನು ನಡೆಯುತ್ತಿದ್ದಾಗ, ಮಧ್ಯೆ ಮಧ್ಯೆ ಆಯಾಸಗೊಳ್ಳುತ್ತಿದ್ದ. ಆ ಸಂದರ್ಭದಲ್ಲಿ ಸ್ತನ್ಯಪಾನ ಮಾಡಲು ಇಚ್ಛಿಸಿ, ಅವಳಿಗೆ ಸ್ತನ್ಯವನ್ನು ಉಣಿಸುವ ಸೌಭಾಗ್ಯವನ್ನು ನೀಡುತ್ತಿದ್ದ. ಕರ್ಮವಶನಲ್ಲದ ಭಗವಂತನು ಅವತಾರ ಮಾಡಿದಾಗ ತಾನೂ ಕರ್ಮಕ್ಕೆ ವಶನಾದಂತೆ ನಟಿಸುತ್ತಿದ್ದ.

ಸುರ ಪ್ರಸೂನ್ಯೈಃ ಸುರಭಿ ಕೃತಾನಾಂ ಆರೋಹಣಾನ್ಯಂಗಣ ವೇದಿಕಾನಾಂ।
ತಮಾರುರುಕ್ಷುಂ ತರಲಾಂಘ್ರಿ ಪದ್ಮಂ ಧಾತಾರ ಮಾರೋಹಯದಾಶುಧಾತ್ರಿ ॥೨೫॥

ದೇವತೆಗಳು, ಸುರಿದ ಹೂವುಗಳಿಂದ ಅಲಂಕರಿಸಲ್ಪಟ್ಟ ವೇದಿಕೆಗಳನ್ನು ಹತ್ತಲು ಇಚ್ಛಿಸಿ, ಕಷ್ಟಪಡುವ ದಿವ್ಯ ಪಾದಾರವಿಂದಗಳನ್ನು ಹೊಂದಿರುವ ಆ ಜಗನ್ನಾಥನನ್ನು ಶೀಘ್ರವೇ ನಡೆಸಿಕೊಂಡು ಹತ್ತಿದಳು ಯಶೋದೆ.

ಆ ಗೋಕುಲದಲ್ಲಿ ಕೆಲವು ಕಡೆ ವೇದಿಕೆಗಳನ್ನು ನಿರ್ಮಿಸಿ, ಅವನ್ನು ಪುಷ್ಪಗಳಿಂದ ಅಲಂಕರಿಸಿದ್ದರು. ಅವುಗಳನ್ನು ಹತ್ತಲು ಬಾಲಕೃಷ್ಣ ಅಪೇಕ್ಷಿಸಿದ. ಆದರೆ ಅವು ಸ್ವಲ್ಪ ಎತ್ತರದಲ್ಲಿ ಇದ್ದದ್ದರಿಂದ, ಅವನಿಗೆ ತಕ್ಷಣ ಸಾಧ್ಯವಾಗಲಿಲ್ಲ. ಆಗ ಯಶೋದೆಯ ಸಹಾಯದಿಂದ ಅದನ್ನು ಹತ್ತಿ, ಅವುಗಳ ಮೇಲೆಲ್ಲಾ ಕುಣಿದಾಡಿ ನಡೆದನು. ದೇವತೆಗಳು ಆಗಾಗ ಪುಷ್ಪವೃಷ್ಟಿ ಮಾಡಿದ ಹೂವುಗಳಿಂದ ಅಲಂಕರಿಸಿದ್ದ ವೇದಿಕೆಗಳು ಅವು. ಇವೆಲ್ಲವೂ ಆ ಕೃಷ್ಣನ ಬಾಲಲೀಲೆಗಳ ಕೆಲವು ತುಣುಕುಗಳು.

ತಲೇಷು ತಸ್ಯಾಂಗಣ ಪಾದಪಾನಾಂ ತಾಲಾನುಕೂಲೇಷು ಗತಾಗತೇಷು।
ವ್ರಜಸ್ಥಿತಾಃ ಸ್ವರ್ಗಸದಾಮಶ್ರುಣ್ವನ್ ದೂರೋದಿತಾನ್ ದುಂದುಭಿ ತೂರ್ಯನಾದಾನ್॥೨೬॥

ಬಾಗಿಲಿನ ಸಮೀಪವಿರುವ ಮರಗಳ ಬುಡಗಳ ಬಳಿ ಅವನು ನಡೆದಾಡುವಾಗ, ಗೋಪ ಸ್ತ್ರೀಯರು ಸ್ವರ್ಗವಾಸಿಗಳ ಮೂಲಕ ಸ್ವಲ್ಪ ದೂರದಲ್ಲಿ ಉಂಟಾದ ವಾದ್ಯಘೋಷಗಳನ್ನು ಕೇಳಿದರು.

ಅವನ ನಡೆದಾಟವನ್ನೇ ಮತ್ತೂ ವರ್ಣಿಸಿದ್ದಾರೆ. ಮನೆಯ ಹೊರಗೆ ಇರುವ ಮರಗಳ ಬಳಿ ಕೃಷ್ಣನು ನಡೆದಾಡುವಾಗ ದೇವದುಂದುಭಿ ಘೋಷ, ವಾದ್ಯಘೋಷ ನಡೆಯಿತು. ಮಕ್ಕಳು ಹೊಸಿಲು ದಾಟಿದರೆ ಹಬ್ಬ ಆಚರಿಸುವುದುಂಟು. ಅದೇ ರೀತಿ ಶ್ರೀಕೃಷ್ಣನು ಮೊದಲ ಬಾರಿಗೆ ಬೀದಿಗೆ ಬಂದಾಗ ದೇವತೆಗಳು ದುಂದುಭಿ ಬಾರಿಸಿದರು. ಶ್ರೀಕೃಷ್ಣನ ಕ್ರಮವಾದ ಮುನ್ನಡೆಯು ಎಲ್ಲರಿಗೂ ಆನಂದದಾಯಕವಾಗಿತ್ತು.

ಸ ಏಷ ಲೋಕತ್ರಯ ಸೂತ್ರಧಾರಃ ಪರ್ಯಾಯ ಪಾತ್ರಾಣಿ ಚರಾಚರಾಣಿ।
ಅನರ್ಥ ಯತ್ಯದ್ಭುತ ಚೇಷ್ಟಿತೋಽಸೌ ನನರ್ಥ ಖೇಲನ್ ನವನೀತ ಕಾಂಕ್ಷಿ ॥೨೭॥

ಯಾವನು ಮೂರು ಲೋಕಗಳಿಗೂ ಸೂತ್ರಧಾರನಾಗಿ, ನಾಟಕಕಾರಣನಾಗಿ, ಪದೇ ಪದೇ ಹುಟ್ಟುವ ಸ್ಥಾವರಗಳು ಜಂಗಮಗಳು ಎಂಬ ಪಾತ್ರಗಳನ್ನು ಆಡಿಸುತ್ತಾನೋ, ಅವನು ಆಶ್ಚರ್ಯ ಚೇಷ್ಟಿತಗಳನ್ನು ಮಾಡುತ್ತಾ, ಬೆಣ್ಣೆಯನ್ನು ಆಶಿಸಿ, ಚೆನ್ನಾಗಿ ಆಟ ಆಡಿದನು. (ಬೆಣ್ಣೆಗಾಗಿ ನಾಟ್ಯವನ್ನು ಮಾಡಿದನು).

ಭಗವಂತನ ನವನೀತ ನಾಟ್ಯ ಬಹು ಪ್ರಸಿದ್ಧವಾದುದು. ಬೆಣ್ಣೆಗಾಗಿ ಎಲ್ಲರ ಮನೆಗೂ ನುಗ್ಗಿ, ಮಡಕೆಗಳನ್ನು ಕೆಡವಿ, ಮೈಯ್ಯನ್ನೆಲ್ಲಾ ಬೆಣ್ಣೆ ಮಾಡಿಕೊಂಡು ನಂತರ ಗೋಪಿಯರ ಕೈಗೆ ಸಿಕ್ಕಿಹಾಕಿಕೊಂಡು ಅವರು ಯಶೋದೆಯ ಬಳಿ ದೂರು ನೀಡಿದುದು ಭಾಗವತದಲ್ಲಿ ಹಾಗೂ ಹರಿದಾಸರ ಕೃತಿಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ.

ಗೃಹೇಷು ದಧ್ನೋ ಮಥನ ಪ್ರವೃತ್ತೌ ಪೃಷತ್ಕಣೈರುತ್ಪತಿತೈಃ ಪ್ರಕೀರ್ಣಃ।
ನಿದರ್ಶಯಾಮಾಸ ನಿಜಾಮವಸ್ಥಾಂ ಪ್ರಾಚೀಂ ಸುಧಾಶೀಕರ ಯೋಗಚಿತ್ರಾಂ ॥೨೮॥

ಮನೆಗಳಲ್ಲಿ ಮೊಸರನ್ನು ಕಡೆಯುವ ಜಾಗಗಳಿಗೆ ಹೋಗಿ, (ಬೆಣ್ಣೆಗಾಗಿ ಮರೆಯಲ್ಲಿ ನಿಂತು) ಕಡೆಯುವಾಗ, ಹಾರುವ ಮೊಸರಿನ ಕಲೆಗಳನ್ನು ಮೈಯ್ಯಲ್ಲೆಲ್ಲಾ ಹೊಂದಿದವನಾಗಿ, ಹಿಂದೆ ಕ್ಷೀರ ಸಮುದ್ರವನ್ನು ಕಡೆದಾಗ ಅಮೃತವನ್ನು ಪಡೆದ ಸ್ಥಿತಿಯನ್ನು ಈಗ ಪ್ರಕಟಪಡಿಸುವ ಹಾಗೆ ತೋರಿದನು. (ನವನೀತ ನಾಟ್ಯದ ವರ್ಣನೆ ಮುಂದುವರೆದಿದೆ)

ತ್ರಸ್ಯನ್ ಮುಕುಂದೋ ನವನೀತ ಚೌರ್ಯಾತ್ ನಿಭುಗ್ನಗಾತ್ರೋ ನಿಭೃತಂ ಶಯಾನಃ।
ನಿಜಾನಿ ನಿಃಶಬ್ದದಶಾಂ ಯಯಾಚೆ ಬದ್ಧಾಂಜಲೀಂ ಬಾಲವಿಭೂಷಣಾನಿ ॥೨೯॥

ಮೋಕ್ಷ, ಭೋಗ ಎಲ್ಲವನ್ನೂ ಕೊಡುವ ಸರ್ವೇಶ್ವರನು ಬೆಣ್ಣೆಯನ್ನು ಕದ್ದು, ಅವನ್ನು ತಿಳಿದ ಗೋಪಿಯರು ಹೊಡೆಯುತ್ತಾರಲ್ಲ ಎಂದು ಅಂಜಿ ದೇಹವನ್ನು ಅಡಗಿಸಿಕೊಂಡು ಅಲ್ಲಾಡದೆ ಒಂದು ಜಾಗದಲ್ಲಿ ಕೈಗಳನ್ನು ಮುಗಿದುಕೊಂಡು ನಿಂತವನಾದನು. 'ನೀವು ನನ್ನನ್ನು ಶಿಕ್ಷಿಸಬೇಡಿ' ಎಂಬ ರೀತಿ.

ಬೆಣ್ಣೆಯನ್ನು ಕದ್ದು, ನಂತರ ಸಿಕ್ಕಿ ಹಾಕಿಕೊಂಡು ಗೋಪಿಯರ ಕ್ಷಮೆಯನ್ನು ಬೇಡುವ ದೃಶ್ಯವನ್ನು ವರ್ಣಿಸಿದ್ದಾರೆ. ಐಹಿಕ ಆಮುಷ್ಮಿಕ ಫಲವನ್ನು ನೀಡುವ ಭಗವಂತನು ಬೆಣ್ಣೆಗಾಗಿ ಗೋಪಿಯರ ಮುಂದೆ ಕೈ ನೀಡುವುದು ವಿಡಂಬನೆಯೇ ಸರಿ.



ಆರಣ್ಯಕಾನಾಂ ಪ್ರಭವಃ ಫಲಾನಾಂ ಅರಣ್ಯಜಾತಾನಿ ಫಲಾನ್ಯಭೀಪ್ಸನ್।
ವಿಸ್ರಂಸಿ ಧಾನ್ಯಾಂಜಲಿನಾ ಕರೇಣ ವ್ಯಾಧಾತ್ಮಜಾಂ ವಿಶ್ವಪತಿಃ ಸಿಷೇವೇ ॥೨೦॥

ಆರಣ್ಯಕ ಫಲಗಳನ್ನು ತಾನೇ ಉಂಟು ಮಾಡಿ, ಬೇರೆಯವರಿಗೆ ಕೊಡುವನೂ, ಆದ ಸರ್ವ ಸ್ವಾಮಿ ಆರಣ್ಯಕ ಫಲಗಳು ತನಗೆ ಬೇಕೆಂದು ಇಚ್ಛಿಸಿದನು. ಅದನ್ನು ಪಡೆಯಲು ಕೈತುಂಬ ಧಾನ್ಯವನ್ನು ತುಂಬಿಕೊಂಡು ಹೋದನು. ಚಿಕ್ಕ ಮಗುವು ಅದನ್ನು ತೆಗೆದುಕೊಂಡು ಹೋಗುವುದನ್ನು ಯಾರೂ ತಿಳಿಯಲಿಲ್ಲ. ವೇಗದಿಂದ ಓಡಿದ್ದರಿಂದ ಧಾನ್ಯವೆಲ್ಲಾ ದಾರಿಯಲ್ಲಿ ಚೆಲ್ಲಿ ಹೋಯಿತು. ಕೈಯ್ಯಲ್ಲಿ ಇದ್ದಷ್ಟನ್ನೇ ಹಿಡಿದುಕೊಂಡು ಹಣ್ಣು ಮಾರುವವರ ಹತ್ತಿರ ಓಡಿದನು. (ಆರಣ್ಯಕ ಫಲವೆಂದರೆ ಮೋಕ್ಷವೆಂದರ್ಥ. ಇಲ್ಲಿ ಕೃಷ್ಣನು ಅಪೇಕ್ಷೆಪಟ್ಟಿದ್ದು ಕಾಡಿನಲ್ಲಿ ಸಿಗುವ ಹಣ್ಣುಗಳು).

ಹಣ್ಣು ಮಾರುವವನನ್ನು ಕಂಡು ತಾನೂ ಹಣ್ಣು ತಿನ್ನಲು ಇಚ್ಛಿಸಿದನು. ಆದರೆ ಅದಕ್ಕೆ ಏನಾದರೂ ಕ್ರಯವನ್ನು ಕೊಟ್ಟು ಪಡೆಯಬೇಕಿತ್ತು. ಕೃಷ್ಣನು ಮನೆಯಲ್ಲಿರುವ ಧಾನ್ಯವನ್ನು ಮಾರಿ, ಹಣ್ಣನ್ನು ಪಡೆಯಲು ನಿರ್ಧರಿಸಿ, ತನ್ನ ಚಿಕ್ಕ ಕೈ ತುಂಬಾ ಬೊಗಸೆ ಧಾನ್ಯವನ್ನು ಮನೆಯಿಂದ ಕದ್ದು ಹಣ್ಣು ಮಾರುವವನ ಹತ್ತಿರ ಓಡಿದನು. ಓಡಿದಾಗ ಸ್ವಲ್ಪ ಧಾನ್ಯವು ಚೆಲ್ಲಿಹೋದರೂ ಕೈಯ್ಯಲ್ಲಿದ್ದಷ್ಟನ್ನೇ ಹಿಡಿದು ಓಡಿದನು.

ಸುಜಾತ ರೇಖಾತ್ಮಕ ಶಂಖಚಕ್ರಂ ತಾಮ್ರೋದರಂ ತಸ್ಯ ಕರಾರವಿಂದಂ।
ವಿಲೋಕಯನ್ತ್ಯಾಃ ಫಲವಿಕ್ರಯಣ್ಯಾ ವಿಕ್ರೇತುಮಾತ್ಮಾನ ಮಭೂದ್ವಿಮರ್ಶಃ ॥೨೦॥

ಹಣ್ಣುಗಳನ್ನು ಮಾರುವವಳು ಮಗುವಿನ ಕೈರೇಖೆಗಳನ್ನು ನೋಡಿದಳು. ಸುಂದರವಾದ ಶಂಖ ಚಕ್ರ ರೇಖೆಗಳೊಡನೆ ಕೆಂದಾವರೆಯಂತೆ ಇರುವ ಹಸ್ತವನ್ನು ನೋಡಿದಳು. ಧಾನ್ಯವನ್ನು ಕೊಟ್ಟು ಹಣ್ಣನ್ನು ಪಡೆಯಲು ಬಂದ ಆ ಮಗುವಿಗೆ ತನ್ನನ್ನೇ ಮಾರಿಕೊಳ್ಳಲು ಬಯಸಿದಳು. (ತನ್ನನ್ನೇ ಅರ್ಪಿಸಿಕೊಳ್ಳಬಯಸಿದಳು) ಎಂದರ್ಥ.

ಶ್ರೀಕೃಷ್ಣನನ್ನು ನೋಡಿದರೆ ಯಾರಿಗೆ ತಾನೇ ಆಸೆಯಾಗುವುದಿಲ್ಲ! ಹಣ್ಣುಮಾರುವವಳು, ಶಿಶುವಿನ ಕೈರೇಖೆಗಳನ್ನು ನೋಡಿ ಆಶ್ಚರ್ಯಚಕಿತಳಾದಳು. ಯಾರ ಕೈಯ್ಯಲ್ಲೂ ಇರದ ಶಂಖ ಚಕ್ರ ರೇಖೆಗಳಿವೆ. ಅಪ್ರಾಕೃತ ಸೌಂದರ್ಯಶಾಲಿಯಾದ ಆ ಸ್ವಾಮಿಗೆ ಹಣ್ಣನ್ನು ಕೊಡುವುದನ್ನು ಮರೆತು, ಅವನ ದಿವ್ಯ ಅಲೌಕಿಕ ಸೌಂದರ್ಯವನ್ನು ಆಸ್ವಾದಿಸುವುದರಲ್ಲಿಯೇ ಕಾಲ ಕಳೆದು ತನ್ನನ್ನು ತಾನೇ ಅವನಿಗೆ ಸಮರ್ಪಿಸಿಕೊಳ್ಳಲು ಬಯಸಿದಳು. ಶ್ರೀಕೃಷ್ಣನ ವ್ಯಕ್ತಿತ್ವ ಅಂತಹುದು. ಎಲ್ಲರನ್ನೂ ಆಕರ್ಷಿಸುವವನೇ ಕೃಷ್ಣ! 'ಕರ್ಷಯತೀತಿ ಕೃಷ್ಣ!' ಭಗವಂತನಿಗೆ ಶರಣಾಗಿ, ತನ್ನ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಬಯಸಿದಳು.

ಅಪೂರಯತ್ ಸ್ವಾದು ಫಲಾರ್ಪಣೇನ ಕ್ರೀಡಾ ಶಿಶೋರ್ಹಸ್ತಪುಟಂ ಕಿರಾತಿ।
ರತ್ನೈಸ್ತದಾ ಕೌಸ್ತುಭ ನಿರ್ವಿಶೇಷೈರಾಪೂರಿತಂ ತತ್ಫಲ ಭಾಂಡ ಮಾಸೀತ್ ॥೩೨॥

ಆ ಹಣ್ಣು ಮಾರುವವಳು ಸಿಹಿಯಾದ ಹಣ್ಣುಗಳನ್ನು ನೋಡಿ ತೆಗೆದು ಮಗುವಿನ ಬೊಗಸೆ ಕೈಗಳಲ್ಲಿ ಇಟ್ಟು ಕೃತಾರ್ಥಳಾದಳು. ಆ ಮಗುವು ಕೇವಲ ಲೀಲಾರ್ಥವಾಗಿ ಮಗುವಾಗಿರುವ ಕಾರಣ ಆ ಕ್ಷಣದಲ್ಲೇ ಕೌಸ್ತುಭ ರತ್ನಗಳಂತೆ ಅವಳ ಬುಟ್ಟಿಯಲ್ಲಿದ್ದ ಹಣ್ಣುಗಳೆಲ್ಲವೂ ಮಾರ್ಪಾಟಾದವು.

ಶ್ರೀಕೃಷ್ಣನ ಅನುಗ್ರಹ ಪಡೆದ ಆ ಹಣ್ಣು ಮಾರುವವಳ ಬುಟ್ಟಿಯಲ್ಲಿದ್ದ ಹಣ್ಣುಗಳೆಲ್ಲವೂ ಕೌಸ್ತುಭ ರತ್ನಗಳಂತೆ ಮಾರ್ಪಾಡಾಗಿ ಅವಳ ಬಡತನವೆಲ್ಲಾ ನೀಗಿ ಹೋಗುವಂತಾಯಿತು. ಭಗವಂತನ ಅನುಗ್ರಹವಿದ್ದರೆ ಯಾವುದು ತಾನೇ ಅಸಾಧ್ಯ ? ''ತ್ವಯಿ ಪ್ರಯಾಸೇ ಮಮ ಕಿಂ ಅಲಭ್ಯೈಃ'' ಎನ್ನುತ್ತಾರೆ ಸ್ವಾಮಿ ದೇಶಿಕರು ತಮ್ಮ ಒಂದು ಸ್ತೋತ್ರದಲ್ಲಿ. ಆ ಹಣ್ಣು ಮಾರುವವಳು ಶ್ರೀಕೃಷ್ಣನಿಗೆ ಹಣ್ಣುಗಳನ್ನು ನೀಡಿದ್ದರಿಂದ, ಮುಂದೆ ಅವಳು ಹಣ್ಣು ಮಾರಿ ಜೀವಿಸುವ ಅಗತ್ಯವೇ ಬೀಳಲಿಲ್ಲ ಎಂದರ್ಥ.

ದಾಮೋದರ ಪ್ರಸಂಗ

ಮುಹುಃ ಪ್ರವೃತ್ತಂ ನವನೀತ ಚೌರ್ಯೇ ವತ್ಸಾನ್ ವಿಮುಂಚತ ಮದೋಹಕಾಲೇ।
ಊಲೂಖಲೇ ಕುತ್ರ ಚಿದಾತ್ತಪುಣ್ಯೇ ಬಂಧುಂಸತಾಂ ಬಂಧು ಮಿಯೇಷಮಾತಾ॥೩೩॥

ಆಗಿಂದಾಗ್ಗೆ, ಬೆಣ್ಣೆಯನ್ನು ಕದಿಯುವುದನ್ನೇ ರೂಢಿ ಮಾಡಿಕೊಂಡವನೂ, ಹಾಲು ಕರೆಯುವ ಸಮಯದಲ್ಲೂ ಕರುಗಳನ್ನು ಬಿಟ್ಟು ಬಿಡುವವನೂ, ಆದವನನ್ನು ತಾಯಿಯಾದವಳು ಒಂದು ದಾರದಿಂದ ಕಟ್ಟಿಹಾಕಲು ಇಚ್ಛಿಸಿದಳು. ಸತ್ಪುರುಷರಿಗೆ ಬಂಧುವಾದವನು ಸ್ವಾಮಿಯು. (ಅವಳು ಅದನ್ನು ಅರಿಯಳು). ಅವನನ್ನು ಕಟ್ಟುವ ಸೌಭಾಗ್ಯವನ್ನು ಹೊಂದಿದೆ ಆ ದಾರವು. (ಅವನ ದೇಹದ ಸಂಬಂಧವನ್ನು ಅದು ಬಿಡಲು ಇಚ್ಛಿಸಲಿಲ್ಲ)

ಮುಂದೆ ದಾಮೋದರ ಪ್ರಸಂಗವನ್ನು ವರ್ಣಿಸುತ್ತಾರೆ. ಶ್ರೀಕೃಷ್ಣನ ವಿಧ ವಿಧವಾದ ಚೇಷ್ಟೆಗಳಿಂದ ರೋಸಿ ಹೋಗಿದ್ದಳು. ಯಶೋದಾ ಬೆಣ್ಣೆಯನ್ನು ಎಲ್ಲರ ಮನೆಯಿಂದ ಕದಿಯುವುದು. ಹೊತ್ತಿಲ್ಲದ ಹೊತ್ತಿನಲ್ಲಿ ಅಂದರೆ ಮಧ್ಯಾಹ್ನದ ಸಮಯ ಕರುಗಳನ್ನು ತಾಯಿಯ ಹತ್ತಿರ ಬಿಟ್ಟು, ಬೇರೆ ಯಾರಿಗೂ ಹಾಲು ಸಿಗದ ಹಾಗೆ ಮಾಡುವುದು ಇತ್ಯಾದಿ ಕೃತ್ಯಗಳಿಂದ ಅನೇಕ ದೂರುಗಳನ್ನು ಬೇರೆ ಹೊತ್ತಿದ್ದ ಆ ಸರ್ವ ಸ್ವಾಮಿಯನ್ನು (ಯಾರಿಂದಲೂ ಬಂಧಿಸಲಾಗದ ಅವನನ್ನು) ಒಂದು ಹಗ್ಗದಿಂದ ಬಂಧಿಸಿ, ಅವನಿಗೆ ಸ್ವಲ್ಪ ಬುದ್ಧಿಯನ್ನು ಕಲಿಸಲು ಬಯಸಿದಳು ಮಾತೆ ಯಶೋದೆ.



ಆನೀತಮಗ್ರೇ ನಿಜ ಬಂಧನಾರ್ಥಂ ದಾಮಾಖಿಲಂ ಸಂಹಿತ ಮಪ್ಯಪೂರ್ಣಂ।
ನಿರೀಕ್ಷ್ಯ ನಿರ್ವಿಣ್ಣಧಿಯೋ ಜನನ್ಯಾಃ ಸಂಕೋಚ ಶಕ್ತ್ಯಾ ಸ ಬಭೂವ ಬಂಧ್ಯಃ॥೩೪॥

ನಡುವಿನಲ್ಲಿ ಹಗ್ಗವನ್ನು ಸುತ್ತಿ ಕಟ್ಟಿ ಎಲ್ಲಿಯಾದರೂ ಕಟ್ಟಿಹಾಕಬೇಕೆಂದು ಆಶಿಸುತ್ತಿದ್ದ ತಾಯಿಯು ಅನೇಕ ಹಗ್ಗಗಳನ್ನು ಸೇರಿಸಿ ಸುತ್ತಿದರೂ ಸಹ ಸ್ವಲ್ಪ ಸಾಲದೆ ಹೋಗುತ್ತಿದ್ದುದನ್ನು ಕಂಡು, ಚಿಂತೆಗೊಂಡ ತಾಯಿಯ ಕಷ್ಟವನ್ನು ನೋಡಲಾರದೆ, ದೊಡ್ಡದಾಗುತ್ತಿದ್ದ ತನ್ನ ಸೊಂಟವನ್ನು ಕಡಿಮೆ ಮಾಡಿಕೊಂಡು, ತಾಯಿಯ ಬಂಧನಕ್ಕೆ ತಾನಾಗಿಯೇ ಒಳಗಾದನು.

ತಾಯಿಗೆ ಅವನನ್ನು ಕಟ್ಟಿಹಾಕಲು ಸಾಧ್ಯವಾಗಿಲಿಲ್ಲ, ಎಷ್ಟು ದೊಡ್ಡ ಹಗ್ಗವನ್ನು ತಂದರೂ ಅವನ ಸೊಂಟ ದೊಡ್ಡದಾಗುತ್ತಲೇ ಇದ್ದು, ಎರಡೆರಡು ಅಂಗುಲ ಕಡಿಮೆ ಬರುತ್ತಿತ್ತು. ಯಶೋದೆಗೆ ಸುಸ್ತಾಯಿತು.

ತಾಯಿಯ ಕಷ್ಟವನ್ನು ನೋಡಲಾರದೆ, ಆ ಕಪಟ ನಾಟಕ ಸೂತ್ರಧಾರಿಯು ತಾನಾಗಿಯೇ ತನ್ನ ಸೊಂಟವನ್ನು ಕಡಿಮೆ ಮಾಡಿಕೊಂಡು ತಾಯಿಯ ಬಂಧನಕ್ಕೆ ಒಳಗಾದನು. ಅವನು ಭಕ್ತವತ್ಸಲನಲ್ಲವೇ ! ಈ ಸಂದರ್ಭವನ್ನು ಭಾಗವತದಲ್ಲಿಯೂ, ನಾರಾಯಣೀಯದಲ್ಲಿಯೂ ಆಳ್ವಾರುಗಳ ಪಾಶುರಗಳಲ್ಲಿಯೂ ವಿಸ್ತಾರವಾಗಿ ವರ್ಣಿಸಲಾಗಿದೆ.

ಬದ್ಧಂ ತಥಾ ಭಾವಯತಾಂ ಮುಕುಂದಮಯತ್ನ ವಿಚ್ಛೇದಿನಿ ಕರ್ಮಬಂಧೇ।
ತಪಸ್ವಿನೀ ತತ್ಕೃತು ನೀತಿರಾದ್ಯಾ ಸವ್ರೀಡಮಾರಣ್ಯ ಕಥಾಸು ತಸ್ಥೌ ॥೩೫॥

ಮೋಕ್ಷವನ್ನು ಕೊಡುವವನಾಗಿ ಕರ್ಮ ಬಂಧವನ್ನು ನೀಗುವವನಾದ ಅವನೇ ತಾನೇ ಬಂಧನಕ್ಕೆ ಒಳಗಾಗಿರುವುದನ್ನು ಉಪಾಸಿಸುವವರ ಪುಣ್ಯ ಪಾಪಗಳೆಂಬ ಕಟ್ಟುಗಳನ್ನು ಅನಾಯಾಸವಾಗಿ ನೀಗಲ್ಪಡುತ್ತವೆ.

ವೇದಾಂತದಲ್ಲಿ 'ತತ್ಕೃತು ನೀತಿ' ಎಂಬುದೊಂದಿದೆ. ನಾವು ಯಾವ ರೀತಿ ಅವನನ್ನು ಉಪಾಸಿಸುತ್ತೇವೆಯೋ ಅದೇ ರೀತಿ ನಮ್ಮನ್ನು ಅನುಗ್ರಹಿಸುತ್ತಾನೆ. ಅವನ ಕಟ್ಟಿನ ಬಗ್ಗೆ ಚಿಂತಿಸಿದರೆ ನಮ್ಮ ಸಂಸಾರ ಬಂಧಗಳನ್ನು ಬಿಡಿಸುತ್ತಾನೆ. ಇದನ್ನೇ ಉಪನಿಷತ್ತುಗಳಲ್ಲಿ ಹೇಳಿದೆ.

ದಾಮೋದರ ಲೀಲೆಯನ್ನು ಚಿಂತಿಸಿದರೆ, ಮನನ ಮಾಡಿದರೆ ನಮ್ಮ ಸಂಸಾರದ ಬಂಧನ ನೀಗಿ, ನಾವು ಮತ್ತೆ ಮತ್ತೆ ಸಂಸಾರಕ್ಕೆ ಬರುವುದಿಲ್ಲ. ಪುಣ್ಯವೂ ಸಹ ಬಂಧನವೇ. 'ಪುಣ್ಯ ಪಾಪೇವಿಧೂಯ ನಿರಂಜನಂ ಸಾಮ್ಯಮುಪೈತಿ' ಎನ್ನುತ್ತದೆ ಉಪನಿಷತ್ತು. 'ಯದ್ಭಾವಂ ತದ್ಭವತಿ' ಎನ್ನುವಂತೆ ನಮ್ಮ ಚಿಂತನೆಯಂತೆ ನಮಗೆ ಫಲವೂ ದೊರಕುತ್ತದೆ. ಶ್ರೀಕೃಷ್ಣ ದಾಮೋದರ ಪ್ರಸಂಗವು ಅತ್ಯಂತ ಪುಣ್ಯಕರವಾದ ಪ್ರಸಂಗವಾಗಿದ್ದು ಸಕಲ ಬಂಧಗಳನ್ನೂ ನೀಗಿ, ಕ್ಷೇಮವನ್ನುಂಟುಮಾಡುತ್ತದೆ.

ಉಲೂಖಲೇ ಪ್ರಗ್ರಥಿತೇನ ದಾಮ್ನಾ ನಿಬದ್ಧಮಾಸ್ರಾವಿಲ ಲೋಲನೇತ್ರಂ।
ಸಹಾಸಮೈಕ್ಷಂತ ಜನಾಃ ಸಮಂತಾದಾಲಾನಿತಂ ನಾಗಮಿವಾನಭಿಜ್ಞಾಃ ॥೩೬॥

ಒರಳಿನಲ್ಲಿ ಚೆನ್ನಾಗಿ ಹಗ್ಗದಿಂದ ಕಟ್ಟಲ್ಪಟ್ಟವನಾಗಿ, ಕಣ್ಣೀರು ಸುರಿಸುತ್ತಾ ಭಯದಿಂದ ನಡುಗುತ್ತಿದ್ದ ಶ್ರೀಕೃಷ್ಣನನ್ನು, ಅವನ ಮಹಿಮೆಯನ್ನು ಅರಿಯದ ಜನರು ಅವನು ಮೊಸರು ಬೆಣ್ಣೆಯನ್ನು ಕದ್ದವನೆಂದೇ ಭಾವಿಸಿ ಪರಿಹಾಸ್ಯ ಮಾಡುತ್ತಿದ್ದರು.

ಈ ಪ್ರಸಂಗದಲ್ಲಿ ಶ್ರೀಕೃಷ್ಣನನ್ನು ಯಶೋದೆ ಒಂದು ಒರಳಿಗೆ ಕಟ್ಟಿಹಾಕುದಳು. ಒರಳನ್ನು ಎಳೆದುಕೊಂಡು ಹೋಗಬಾರದೆಂದು ಭಾವಿಸಿ, ಅವನ ಮಹಿಮೆಯನ್ನು ಸ್ವತಃ ತಾಯಿಯಾದ ಯಶೋದೆಯಾಗಲಿ, ಅವನನ್ನು ನೋಡಿ ಪರಿಹಾಸ ಮಾಡುತ್ತಿದ್ದ ಅವನ ಗೆಳೆಯರಾಗಲಿ, ಇತರ ಜನರಾಗಲೀ ಅರಿಯಲಿಲ್ಲ. ಶ್ರೀಕೃಷ್ಣನು ತಾಯಿಯ ಕೋಪಕ್ಕೆ ಹೆದರಿದಂತೆ ನಟಿಸುತ್ತಾ ಕಣ್ಣೀರು ಸುರಿಸುತ್ತಿದ್ದನು. "ಕಟ್ಟನ್ನು ಬಿಚ್ಚಿಬಿಡಮ್ಮಾ!" ಎಂದು ದೈನ್ಯದಿಂದ ಕೇಳಿಕೊಳ್ಳುತ್ತಿದ್ದನು. ಇಂತಹ ನಾಟಕ ಶಿರೋಮಣಿ ನಮ್ಮನ್ನು ಕಾಪಾಡಲಿ.

ಅನಾದರಾತ್ಕೃಷ್ಟಮೂಲೂಖಲಂ ತತ್ ಯಾವರ್ಜುನೌ ಶೈಲನಿಭೌ ಬಭಂಜ।
ಬಭೂವತು ಬ್ರಹ್ಮಸುತಸ್ಯ ಶಾಪಾನ್ ಮುಕ್ತೌ ಮುನೇ ಯಕ್ಷವರೌ ತದಾತೌ ॥೩೭॥

ಕ್ರೀಡೆಗಾಗಿ ಅನಾಯಾಸವಾಗಿ ಅವನಿಂದ ಎಳೆಯಲ್ಪಟ್ಟ ಆ ಒರಳು ಪರ್ವತಗಳಂತೆ ಇದ್ದ ಎರಡು ದೊಡ್ಡ ಮರಗಳ ಮಧ್ಯೆ ಹೋದಾಗ, ಆ ಎರಡು ಮರಗಳು ಮುರಿದು ಹೋದವು. ಒಡನೆ ನಾರದ ಮುನಿಯಿಂದ ಶಾಪಗ್ರಸ್ತವಾಗಿದ್ದ ಆ ಮರಗಳು ಬಿಡುಗಡೆ ಹೊಂದಿ ಹಿಂದಿನಂತೆ ಯಕ್ಷಸ್ವರೂಪವನ್ನು ಹೊಂದಿದವು. (ನಳ ಕೂಬರ, ಮಣಿಗ್ರೀವರೆಂಬ ಯಕ್ಷರು)

ತನ್ನನ್ನು ಕಟ್ಟಿಹಾಕಿದ್ದರೂ, ಅದರಿಂದ ಲೋಕಕ್ಷೇಮವನ್ನುಂಟು ಮಾಡಬೇಕೆಂಬುದು ಆ ಕೃಷ್ಣನ ಆಶೆ. ಸರ್ವಜ್ಞನಾದ ಅವನು, ಆ ಒರಳನ್ನು ಎಳೆದುಕೊಂಡು, ಅಡ್ಡಾದಿಡ್ಡಿಯಾಗಿ ನಡೆಯುತ್ತಾ ಎರಡು ದೊಡ್ಡ ಮರಗಳ ನಡುವೆ ಜಾಗವಿದ್ದ ಸ್ಥಳದಲ್ಲಿ ನಡೆದು ಹೋದನು. ಆಗ ಒರಳಿನ ಎಳೆದಾಟಕ್ಕೆ ಆ ಎರಡು ಮರಗಳೂ ಮುರಿದು ಕೆಳಗೆ ಬಿದ್ದವು. ಅವು ಶಾಪಗ್ರಸ್ತ ಮರಗಳು. ನಳ ಕೂಬರ, ಮಣಿಗ್ರೀವನೆಂಬ ಯಕ್ಷರು ಶಾಪದಿಂದ ಆ ರೂಪ ತಳೆದಿದ್ದರು.

ಶ್ರೀಕೃಷ್ಣನ ಅನುಗ್ರಹದಿಂದ ಅವರಿಗೆ ಶಾಪ ವಿಮೋಚನೆಯಾಯಿತು. ಯಮಳಾರ್ಜುನರೆಂಬ ಅವರು ತಮ್ಮ ಪೂರ್ವ ಯಕ್ಷಸ್ವರೂಪವನ್ನು ಹೊಂದಿ ಸ್ವಸ್ಥಾನ ಸೇರಿದರು.

ಶಾಪಾವಧಿಂ ಬ್ರಹ್ಮಸುತೇನ ದತ್ತಂ ಸಂಪ್ರಾಪ್ಯ ತೌ ಶೌರಿ ಸಮಾಗಮೇನ।
ದೇಹೇನ ದಿವ್ಯೇನ ವಿದೀಪ್ಯಮಾನೌ ಸುತ್ವಾಹರಿಂ ಧಾಮ ಸಮೀಯತುಃ ಸ್ವಂ ॥೨೮॥

ಶಾಪ ಕೊಟ್ಟ ನಾರದ ಮಹರ್ಷಿಯ ಮಾತಿನಂತೆ ಅದರ ಅಂತ್ಯವು ಶ್ರೀಕೃಷ್ಣನಿಂದ ನೆರವೇರುವಾಗ, ಅವರು ಶಾಪವಿಮೋಚನಗೊಂಡು ದೇವತೆಗಳ ದೇಹ ಹೊಂದಿ ಆ ದೇವದೇವನಿಗೆ ನಮಸ್ಕರಿಸಿ, ತಮ್ಮ ಸ್ವಸ್ಥಾನವನ್ನು ಸೇರಿದರು.

ನಳಕೂಬರ, ಮಣಿಗ್ರೀವರಿಗೆ ನಾರದರ ಶಾಪವಿದ್ದುದರಿಂದ ಅವರು ಮರಗಳ ರೂಪದಲ್ಲಿ ಇದ್ದರು. ಅವರಿಗೆ ಶ್ರೀಹರಿಯ ಸಂಪರ್ಕವುಂಟಾದೊಡನೆ ಶಾಪ ವಿಮೋಚನೆಯಾಗಿ, ಹಿಂದಿನ ರೂಪ ಪಡೆದು, ಶ್ರೀಕೃಷ್ಣನ ಸ್ಮರಣೆ ಮಾಡುತ್ತಾ ತಮ್ಮ ಯಕ್ಷರ ಲೋಕವನ್ನು ಸೇರಿದರು. ಭಗವಂತನಿಂದ ಶಾಪ ವಿಮೋಚನೆಯಾಯಿತೆಂದರೆ ಅವರ ಭಾಗ್ಯವೇ ಭಾಗ್ಯವು. ಮಹಾ ಮಹಿಮರಾದ ಮಹರ್ಷಿಗಳಿಗೂ ಸಿಗದ ಸೌಭಾಗ್ಯ ಅವರಿಗೆ ದೊರಕಿತು. ಶ್ರೀಕೃಷ್ಣನ ಅದ್ಭುತ ಚೇಷ್ಟಿತಗಳು ಒಂದಕ್ಕಿಂತ ಒಂದು ಅಮೋಘವಾದುವು.

ಅದೃಷ್ಟಪೂರ್ವಂ ಭುವಿ ಪೂತನಾದೆ ರುದಂತ ಮುತ್ಪಾತ ಮುದೀಕ್ಷಮಾಣಾಃ।
ಸಮೇತ್ಯ ಗೋಪಾಃ ಸಹ ಮಾಧವೇನ ಬೃಂದಾವನಂ ಸತ್ವರಮಭ್ಯಗಚ್ಛನ್ ॥೨೯॥

ಇದಕ್ಕೆ ಮುಂಚೆ ಭೂಮಿಯಲ್ಲಿ ನೋಡಿದ ಪೂತನಾ, ಶಕಟಾದಿಗಳ ಅನಿಷ್ಟಕಾರ್ಯಗಳಿಂದ ಗೋಕುಲದಲ್ಲಿ ಏನೋ ಅನಿಷ್ಟವೆಂದು ಭಾವಿಸಿ ಗೋಪರೆಲ್ಲರೂ ಕೂಡಿ ಕೃಷ್ಣ ಜೊತೆ ಯಾವಾಗಲೂ ಇರಲು, ಬೃಂದಾವನಕ್ಕೆ ತೆರಳಲು ಬಯಸಿದರು.

ಬೃಂದಾವನದ ಬಗ್ಗೆ ವಿವರಣೆ -

"ಬೃಂದೇತಿ ಗೋಕರ್ಣಕಸ್ಯನಾಮ, ತತ್ಪ್ರಧಾನಂ ವನಂ ಬೃಂದಾವನಮಿತಿ ಕೇಚಿ ದಾಹುಃ ದಂಡಕಾವನ ಮಿತಿವತ್ ಸಾಮಾನ್ಯ ವಿಶೇಷ ಸಮಾಸೇನ ಬೃಂದಾವನ ಮಿತ್ಯಪರೇ, ವಯಂತು ಶ್ರೀಮದ್ ಬೃಂದಾವನಂ ನಾಮ ವನಂ ತ್ರಿದಳ ಪೂಜಿತಂ, ಬೃಂದಾವನೋತ್ಪನ್ನ ಕದಂಬ ತರುಕೋಟರಃ" ಇತಿ ಹರಿವಂಶ ಪುರಾಣಾದಿ ವಚನೇಷು ವನ ಶಬ್ದಾಂತರ ಸಮಭಿವ್ಯಾಹಾರ ದರ್ಶನಾತ್ ಬೃಂದಾವನ ಮಿತ್ಯೇತಾವಪಿ ವಿಶೇಷ ನಾವೇತ್ಸಾಲೋಚಯಾಮಃ"

ಗೋಕುಲದಲ್ಲಿ ಶ್ರೀಕೃಷ್ಣನ ಜೀವಕ್ಕೆ ಅಡಿಗಡಿಗೆ ಅಪಾಯ ಉಂಟಾಗುವುದನ್ನು ಅರಿತ ಗೋಪಾಲಕರೆಲ್ಲರೂ ಸಮೀಪದಲ್ಲೇ ಇರುವ ಯಮುನಾ ನದಿಯ ದಡದಲ್ಲಿರುವ ಬೃಂದಾವನಕ್ಕೆ ಹೋಗಿ ಅಲ್ಲಿಯೇ ನೆಲೆಸಲು ನಿಶ್ಚಯಿಸಿದರು.

ಯೇನೌಷಧಿನಾಂ ಮಧಿಪಂ ಪುರಸ್ತಾದಾಹ್ಲಾದಹೇತುಂ ಜಗತಾಮಕಾರ್ಷೀತ್।
ತೇನೇವ ದದ್ಯೌ ಮನಸಾ ವನಂತತ್ ಕೃಷ್ಣೋ ಗವಾಂ ಕ್ಷೇಮ ಸಮೃದ್ಧಿಮಿಚ್ಛನ್ ॥೪೦॥

ಭಗವಂತನು ಯಾವ ಮನಸ್ಥಿತಿಯನ್ನು ಹೊಂದಿ, ಔಷಧಿಗಳಿಗೆ ಅಧಿಪತಿಯಾಗಿ, ಲೋಕಕ್ಕೆಲ್ಲಾ ಆನಂದ ನೀಡುವವನಾಗಿ ಚಂದ್ರನನ್ನು ಹೊಂದಿದನೋ, ಆ ಮನಸ್ಸಿನಿಂದಲೇ (ಚಂದ್ರಮಾ ಮನಸೋ ಜಾತಃ) ಶ್ರೀಕೃಷ್ಣನಾಗಿ ಗೋವುಗಳಿಗೆಲ್ಲಾ ಕ್ಷೇಮವನ್ನು ಬಯಸಿ, ಆ ವನವನ್ನು ವೃಂದಾವನವನ್ನಾಗಿ ಮಾಡಲು ಇಚ್ಛಿಸಿದನು. (ಸಸ್ಯ ಸಮೃದ್ಧಿ ಇರುವ)

ಗೋಪಾಲಕರೆಲ್ಲರೂ ಬೃಂದಾವನಕ್ಕೆ ಹೋಗುವದೆಂದು ನಿಶ್ಚಯಿಸಿದ ಮಾತ್ರಕ್ಕೆ ಅವರಿಂದ ಅದು ಸಾಧ್ಯವೇ? ತಮ್ಮ ಹಸು, ಕರುಗಳಿಗೆ ಸಮೃದ್ಧವಾಗಿ ಮೇವು ಸಿಗುವ ಜಾಗ ಅದಾಗಿರ ಬೇಕು. ಹಾಗಿಲ್ಲದಿದ್ದಲ್ಲಿ ಅಲ್ಲಿ ಜೀವಿಸುವುದು ಅಸಾಧ್ಯ. ಚಂದ್ರನು ಸಸ್ಯಗಳು ಹಾಗೂ ಔಷಧಿಗಳಿಗೆ ಅಧಿಪತಿ. ಚಂದ್ರನೇ ಭಗವಂತನ ಮನಸ್ಸಿನಿಂದ ಜನಿಸಿದವನು. ಆದ್ದರಿಂದ ಶ್ರೀಕೃಷ್ಣನು ಬೃಂದಾವನಕ್ಕೆ ಬರುವುದಾದರೆ ಸಸ್ಯ ಸಮೃದ್ಧಿಗೆ ಏನು ಕೊರೆ ಇದ್ದೀತು?

ಅನುಗ್ರಹಾಬ್ಧೇರಿವ ವೀಚಿ ಭೇದೈ ರಾಪ್ಯಾಯಯಾಮಾಸ ಶುಭ್ರೈರಪಾಂಗೈಃ ।
ವನಂ ಪೃಥಿವ್ಯಾ ಇವ ಯೌವನಂ ತತ್ ಗೋಪ್ತಾ ಸತಾಂ ಗೋಧನ ವಂಶ ಚಂದ್ರಃ ॥೪೧॥

ಆ ಸಾಧು ಸಂರಕ್ಷಕನು ಹಸುಗಳನ್ನು ಅನುಗ್ರಹಿಸಲು ಗೋಪಾಲಕರ ವಂಶದಲ್ಲಿ ಚಂದ್ರನಾಗಿ ಕೃಪೆಯೆಂಬ ಸಮುದ್ರದಲ್ಲಿ ಅಲೆಗಳಂತೆ ಶುಭ್ರವಾದ ಕಟಾಕ್ಷಗಳಿಂದ ಭೂಮಿಯ ಯೌವನವೆಂಬಂತೆ ಆ ವೃಂದಾವನವನ್ನು ಪುಷ್ಟಿಗೊಳಿಸಿದನು.

ಕೃಷ್ಣನು ಬೃಂದಾವನಕ್ಕೆ ಕಾಲಿಟ್ಟ ಮೇಲೆ ಅಲ್ಲಿ ಸಕಲ ಸಂಪತ್ಸಮೃದ್ಧಿಗಳು ಇಮ್ಮಡಿ ಗೊಳಿಸಿದವು. ಸಸ್ಯ ಸಮೃದ್ಧಿ ಹೆಚ್ಚಾದರೆ, ಅದು ಭೂಮಿಗೆ ಯೌವನ ಬಂದಂತೆ. ಶ್ರೀಕೃಷ್ಣನು ಯುವತಿಯರನ್ನು ಆಕರ್ಷಿಸುವ ಸೌಂದರ್ಯವುಳ್ಳವನು. ಭೂಮಿಯು ತಾನಾಗಿಯೇ ಕೃಷ್ಣನಿರುವ ಜಾಗದಲ್ಲಿ ಹೆಚ್ಚು ಫಲ, ಸಸ್ಯ ಸಮೃದ್ಧಿಯಿಂದ ಕಂಗೊಳಿಸಲು ಬಯಸಿ, ಬೃಂದಾವನವನ್ನು ನಳನಳಿಸುವಂತೆ ಮಾಡಿ, ಅಲ್ಲಿ ಗೋವುಗಳಿಗಾಗಲೀ, ಗೋಪಾಲಕರಿಗಾಗಲೀ ಯಾವ ತೊಂದರೆಯೂ ಆಗದಂತೆ ಯಾವಾಗಲೂ ಸಂಪದ್ಭರಿತವಾಗಿ ಇದ್ದು, ಅವನ ಅವತಾರ ಕಾರ್ಯದಲ್ಲಿ ಅವನಿಗೆ ಒತ್ತಾಸೆಯಾಗಿ ಇರಲು ಬಯಸಿದಳು.

ಆಸೀನ್ನಿಷೇವ್ಯಾ ಪೃಥಿವೀ ಪಶೂನಾಂ ಪುಂಡ್ರೇಕ್ಷು ರಮ್ಯಾಣಿ ತೃಣಾನ್ಯಭೂವನ್।
ತಸ್ಮಿನ್ನರಣ್ಯೇ ತರುಭಿಃ ಪ್ರಪೇದೇ ಕಲ್ಪದ್ರುಮಾಣಾಮನುಕಲ್ಪಭಾವಃ ॥೪೨॥

ಆ ಬೃಂದಾವನದಲ್ಲಿ ಭೂಮಿಯಾದುದು ಕಲ್ಲುಮುಳ್ಳುಗಳಿಲ್ಲದೆ ಕಾಲಿನಲ್ಲಿ ನಡೆಯುವ ವರಿಗೆ ಸುಲಭವಾಗಿ ಇದ್ದಿತು. ಹುಲ್ಲುಗಳು ಮೃದುವಾಗಿದ್ದು ಕಣ್ಣಿಗೆ ತಂಪನ್ನೀಯುವಂತಿತ್ತು. ಅಲ್ಲಿರುವ ಮರಗಳಿಂದ ಕಲ್ಪವೃಕ್ಷಕ್ಕೆ ಸಮಾನವಾದ ಫಲಗಳು ಲಭಿಸುತ್ತಿದ್ದುವು.

ಬೃಂದಾವನದ ವರ್ಣನೆ -

ಬೃಂದಾವನವು ಮತ್ತೊಂದು ಸ್ವರ್ಗವೇನೋ ಎಂಬಂತಿತ್ತು. ಪ್ರತಿಯೊಂದು ಮರವು ಹಣ್ಣುಗಳಿಂದ ಶೋಭಿಸುತ್ತಿದ್ದು, ಎಲ್ಲವೂ ಕಲ್ಪವೃಕ್ಷಗಳೇನೋ ಎಂಬಂತಿತ್ತು. ಹುಲ್ಲುಹಾಸಿಗೆಗಳು ಬಹಳ ಮೃದುವಾಗಿದ್ದು ಹಾಸಿಗೆಗಳಿಗೆ ಸಮಾನವಾಗಿತ್ತು. ಬೃಂದಾವನದಲ್ಲಿ ಕೃಷ್ಣನ ಜೊತೆಯಲ್ಲಿ ಇದ್ದವರ ಭಾಗ್ಯವೇ ಭಾಗ್ಯವು. ಎಲ್ಲರೂ ಆನಂದದಿಂದ ಶ್ರೀಕೃಷ್ಣನ ಸಾನ್ನಿಧ್ಯದಲ್ಲಿ ಕಾಲವನ್ನು ಕಳೆಯುತ್ತಿದ್ದರು.

ಅದೃಷ್ಟಪೂರ್ವರಥಿಕಾಂ ವಿಶೇಷೇ ರಾಲಕ್ಷ್ಮ್ಯಾ ವನ್ಯಾಮಮರೇಂದ್ರಮಾನ್ಯಾಂ।
ನಂದೋಪನಂದ ಪ್ರಮುಖೈರ್ ನನಂದೇ ನಾಕಾಧಿರೂಢೈರಿವ ನಾಥಭೂಮ್ನಾ ॥೪೨॥

ಶ್ರೀಕೃಷ್ಣನ ಮಹಿಮೆಯಿಂದ ಇದಕ್ಕೆ ಮುಂಚೆ ಕಾಣದೆ ಹೋದ ಸೌಲಭ್ಯಗಳು ಕಂಡು ದೇವತೆಗಳ ನಾಥನಿಗೂ ಲಭಿಸದ ಐಶ್ವರ್ಯಗಳು ಆ ವನದಲ್ಲಿ ಪ್ರಾಪ್ತವಾಗಿ ನಂದ, ಉಪನಂದರೇ ಮೊದಲಾದ ಗೋಪರು, ಸ್ವರ್ಗದ ಸುಖವನ್ನು ಅನುಭವಿಸುವಂತೆ ಆಯಿತು.

ಗೋಕುಲವನ್ನು ಬಿಟ್ಟು ಬೃಂದಾವನಕ್ಕೆ ಬಂದದ್ದು ನಂದ, ಉಪನಂದರಿಗೆ ಅತ್ಯಂತ ಆನಂದವನ್ನು ಉಂಟು ಮಾಡಿತು.

ದೈತ್ಯೈ ತೃಣಾವರ್ತ ಮುಖೈರಯತ್ನಾ ಮುರ್ಹುನಿರಸ್ತೈ ಮುದಿತೋ ಮುಕುಂದಃ।
ಅಭುಂಕ್ತ ರಾಮೇಣ ಸಹಾದ್ಭುತಂ ತತ್ಪುಣ್ಯಂ ವನಂ ಪುಣ್ಯ ಜನೇಂದ್ರಮಾನ್ಯಂ ॥೪೪॥

ತೃಣಾವರ್ತರೇ ಮೊದಲಾದ ಅಸುರರುಗಳನ್ನು ಅನಾಯಾಸವಾಗಿ ನಿಗ್ರಹಿಸಿ ಅಡಿಗಡಿಗೆ ಪರಾಕ್ರಮ ತೋರುತ್ತಿದ್ದ ಶ್ರೀಕೃಷ್ಣನು ಕುಬೇರ ವನವಾದ ಚೈತ್ರಾರತಿಗೂ ಮೇಲಾದ ವನ ವನ್ನಾಗಿ ಬೃಂದಾವನವನ್ನು ಮಾಡಿ ಬಲರಾಮನೊಡಗೂಡಿ ಆನಂದದಿಂದ ವಿಹರಿಸುತ್ತಿದ್ದನು.

ಬೃಂದಾವನದಲ್ಲಿ ಕೃಷ್ಣನು ತನ್ನ ಅದ್ಭುತ ಲೀಲೆಗಳನ್ನು ಮುಂದುವರೆಸಿದನು. ತೃಣಾವರ್ತ ನೆಂಬ ರಾಕ್ಷಸನನ್ನು ಲೀಲಾ ಜಾಲವಾಗಿ ಇಬ್ಬರು ಅಣ್ಣತಮ್ಮಂದಿರಿಬ್ಬರೂ ನಿಗ್ರಹಿಸಿದರು.

ತೃಣಾವರ್ತ ಸಂಹಾರ ಪ್ರಕರಣ ಭಾಗವತದ ದಶಮಸ್ಕಂಧದಲ್ಲಿ ವರ್ಣಿತವಾಗಿದೆ. ತೃಣಾವರ್ತನು ಸುಂಟರಗಾಳಿಯ ರೂಪದಲ್ಲಿ ಬಂದು ಶ್ರೀಕೃಷ್ಣ ಬಲರಾಮರನ್ನು ಅಪಹರಿಸಲು ಪ್ರಯತ್ನಿಸಿ, ಅದರಲ್ಲಿ ಸಫಲನಾಗದೆ ಅವರಿಂದ ಸಂಹೃತನಾದನು.

ಸಪಕ್ಷ ಕೈಲಾಸ ನಿಭಸ್ಯ ಗೋಪಾ ಬಕಸ್ಯ ಪಕ್ಷಾನ್ ಅಭಿತೋ ಬಭಂದುಃ।
ವನೇ ತದನ್ಯಾನಪಿ ಘೋರ ವೃತ್ತೀನ್ ಕ್ಷೇಪ್ತುಂ ಪ್ರವೃತ್ತಾ ಇವ ಕೇತುಮಾಲಾಃ ॥೪೫॥



ಗೋಪಾಲಕರು (ರಾಮಕೃಷ್ಣರು ರೆಕ್ಕೆಗಳಿಂದ ಕೂಡಿ ಕೈಲಾಸ ಪರ್ವತದಂತಿದ್ದ ಬಕಾಸುರನ ರೆಕ್ಕೆಗಳನ್ನು ಮುರಿದು ಹಾಕಿ, ಮತ್ತು ಅವನಂತೆಯೇ ಇದ್ದ, ಇನ್ನೂ ಕೆಲವು ಅಸುರರುಗಳನ್ನೂ ಕಟ್ಟಿಹಾಕಿ ನಿಗ್ರಹಿಸಿದರು.

ವತ್ಸಾಸುರ ವಧೆ : ಕರುವಿನ ರೂಪದಲ್ಲಿ ಬಂದ ವತ್ಸಾಸುರನನ್ನು ಶ್ರೀಕೃಷ್ಣನು, ಅವನು ಅಸುರನೆಂದು ಗುರುತಿಸಿ, ಅವನನ್ನು ಹಿಡಿದು ಗಿರಗಿರನೆ ತಿರುಗಿಸುತ್ತಾ ಬೇಲದ ಮರಕ್ಕೆ ಅಪ್ಪಳಿಸಿದಾಗ, ಅವನು ಸತ್ತುಬಿದ್ದನು.

ಪುರಸ್ಕೃತಂ ಮಂಗಲಗೀತವಾದ್ಯೈಃ ಪುಂಸಃ ಪ್ರಸತ್ಯೈ ಜಗತಾಂ ಪ್ರಸೂತೇ।
ಕಯಾಪಿ ತತ್ರ ಸ್ಪೃಹಯಾನ್ವತಿಷ್ಠನ್ ಕನ್ಯಾವ್ರತಂ ಕಿಂಚನ ಗೋಪಕನ್ಯಾಃ ॥೪೬॥

ಅಲ್ಲಿ ಗೋಪಕನ್ನಿಕೆಯರು ಒಂದು ಬಗೆಯಾದ ವ್ರತವನ್ನು ಮಾಡುತ್ತಾ ಲೋಕಗಳಿಗೆಲ್ಲಾ ಕಾರಣನಾದ ಪುರುಷೋತ್ತಮನನ್ನು ಮುಂದಿಟ್ಟುಕೊಂಡು ಮಂಗಳಕರವಾದ ಹಾಡುಗಳನ್ನು ವಾದ್ಯಗಳನ್ನು ಮುಂದೆ ಮಾಡಿಕೊಂಡು ಕನ್ಯಾವ್ರತವೊಂದನ್ನು ಮಾಡಿದರು.


(ಇದನ್ನು ಕಾತ್ಯಾಯಿನಿ ವ್ರತ ಎಂದು ಕೆಲವರು ಹೇಳುತ್ತಾರೆ. ಇದು ಭಗವಂತನಿಗೆ ಮಾಡುವ ಪೂಜೆ ಎನ್ನುತ್ತಾರೆ).

ಮುಂದೆ ಗೋಪಿಕಾ ಸ್ತ್ರೀಯರು ಮಾಡಿದ ಒಂದು ವ್ರತವನ್ನು ವರ್ಣಿಸಿದ್ದಾರೆ. ಉತ್ತಮ ಪತಿಯು ಸಿಗಬೇಕೆಂದು ಮಾಡುವ ವ್ರತ. ಇದನ್ನು ಕಾತ್ಯಾಯಿನಿ ವ್ರತವೆನ್ನುತ್ತಾರೆ. ಆಂಡಾಳ್ ಸಹ 'ತಿರುಪ್ಪಾವೈ' ಗ್ರಂಥದಲ್ಲಿ ಈ ವ್ರತದ ಬಗ್ಗೆ ಪ್ರಸ್ತಾಪಿಸಿದ್ದಾಳೆ. ಪರಮ ಪುರುಷನನ್ನು ಉದ್ದೇಶಿಸಿ, ಈ ವ್ರತವನ್ನು ಮಾಡಿದುದಾಗಿ ಸಂಪ್ರದಾಯದಲ್ಲಿ ಹೇಳಿದೆ. ಇದು ಕನ್ಯೆಯರು ಮಾಡುವ ವ್ರತ. ತಿರುಪ್ಪಾವೈ ಪಠನದಿಂದಲೂ ಈ ವ್ರತದ ಫಲ ಲಭಿಸುತ್ತವೆ ಎನ್ನುತ್ತಾರೆ.

ಗೋಪಿಕಾ ವಸ್ತ್ರಾಪಹರಣ ಪ್ರಸಂಗ

ನಿಶಾತ್ಯಯ ಸ್ನಾನ ಸಮುದ್ಯತಾನಾಂ ನಿಕ್ಷಿಪ್ಯಮಾಭೀರ ಕಿಶೋರಿ ಕಾಣಾಂ।
ಕೂಲಾದುಪಾದಾಯ ದುಕೂಲ ಜಾಲಂ ಕುಂದಾದಿರೂಢೋ
ಮುಮುದೇ ಮುಕುಂದಃ ॥೪೭॥

ಉಷಃ ಕಾಲದಲ್ಲಿ ಯಮುನೆಯ ತೀರದಲ್ಲಿ ಸ್ನಾನ ಮಾಡಲು ಸೇರಿರುವ ಗೋಪ ಸ್ತ್ರೀಯರಿಂದ, ಮರೆಮಾಡಿ ಇಟ್ಟಿದ್ದ ವಸ್ತ್ರಗಳನ್ನು ದಡದಿಂದ ಎತ್ತಿಕೊಂಡು ಬಂದು ಒಂದು ಮರದ ಮೇಲೇರಿ ಕೂತನು.



ಈ ಪ್ರಸಂಗವನ್ನು ಅನೇಕರು ತಪ್ಪಾಗಿ ಅರ್ಥೈಸುವುದುಂಟು. ಶ್ರೀಕೃಷ್ಣನು ಕಾಮುಕನೆಂತಲೂ, ಸಭ್ಯತೆಯನ್ನು ಮೀರಿ, ಗೋಪಿಕಾ ಸ್ತ್ರೀಯರ ವಸ್ತ್ರಗಳನ್ನು ಅಪಹರಿಸಿದನೆಂದೂ, ಅವನ ಮೇಲೆ ದೋಷಾರೋಪಣೆ ಮಾಡುತ್ತಾರೆ. ಆದರೆ ಅಂತರಾರ್ಥ ಬೇರೆಯೇ ಇದೆ. ಆಂಗ್ಲಭಾಷೆಯಲ್ಲಿ ಈ ಪ್ರಸಂಗದ ಬಗ್ಗೆ ಸುಂದರವಾದ ವ್ಯಾಖ್ಯಾನವೊಂದು ಹೀಗಿದೆ:-

"A cretic may see in this incident nothing but the unbashed act of an eve teaser. But contrary to this estimate the Bhakthi scriptures find in it the measure of purity of Gopis. This can be realised that this incident gives symbolic expression to a great truth of the spiritual realm. This is treated as a Dharma of Paramahamsas who throw away all falls values of the Heart (Such as cloth) for the sake of God.

ಸ ಚೈಕಹಸ್ತಪ್ರಣತಿಂ ವಿಧೂನ್ವನ್ ಕೌಮಾರ್ಥಿನೀನಾಂ ಹರಿರಂಗನಾನಾಂ।
ಅನ್ಯೋನ್ಯ ಹಸ್ತಾರ್ಪಣ ಸಂಪ್ರವೃತ್ತಮಾಸಾಂ ಜಹಾಸಾಂಜಲಿಮಪ್ಯಪೂರ್ವಂ ॥೪೮॥

ಅವನು ಭಗವಂತನಾದ್ದರಿಂದ, ಆ ಕನ್ಯೆಯರು ತಮ್ಮ ಬಟ್ಟೆಗಾಗಿ ಒಂದು ಕೈಯ್ಯಲ್ಲಿ ಮಾಡುವ ನಮಸ್ಕಾರವು ಸಾಲದೆಂದು ಹೇಳಿದಾಗ, ಅನಂತರ ಒಬ್ಬೊಬ್ಬಳು ಒಂದೊಂದು ಹಸ್ತವನ್ನು ಮತ್ತೊಬ್ಬಳ ಹಸ್ತದ ಜತೆ ಜೋಡಿಸಿ, ಮಾನವನ್ನು ಮತ್ತೊಂದು ಹಸ್ತದಿಂದ ಕಾಪಾಡಿಕೊಂಡು, ಆ ಸರ್ವೇಶ್ವರನಿಗೆ ಅಪೂರ್ವವಾದ ಅಂಜಲಿಯನ್ನು ಮಾಡಿದರು. ಅದನ್ನು ಕಂಡು ಕೃಷ್ಣನು ನಕ್ಕನು.

ಗೋಪಕನ್ಯೆಯರು ಮಾಡಿದ ತಪ್ಪಿಗಾಗಿ (ಬಟ್ಟೆಯಿಲ್ಲದೆ ಸ್ನಾನಕ್ಕೆ ಇಳಿದುದು) ಪ್ರಾಯಶ್ಚಿತ್ತ ರೂಪವಾಗಿ ಸ್ವಾಮಿಯು ಅವರ ಅಂಜಲಿಯನ್ನು ಬಯಸಿದ. ಅವರುಗಳು ಬಹಳ ಬುದ್ಧಿವಂತರಾದುದರಿಂದ ತಮ್ಮ ಮಾನವನ್ನೂ ಕಾಪಾಡಿಕೊಂಡು, ಅವನ ಕೋರಿಕೆಯನ್ನೂ ಈಡೇರಿಸುವ ಸಲುವಾಗಿ ವಿನೂತನ ರೀತಿಯಲ್ಲಿ ಅಂಜಲಿಯನ್ನು ಮಾಡಿದರು. ಈ ಪ್ರಸಂಗವನ್ನು ಶ್ರೀವೇದಾಂತ ದೇಶಿಕರು 'ಗೋಪಾಲವಿಂಶತಿ'ಯಲ್ಲಿ ಹೀಗೆ ಅನುಭವಿಸಿದ್ದಾರೆ.

ವಾಸೋ ಹೃತ್ವಾ ದಿನಕರಸುತಾ-ಸನ್ನಿಧೌವಲ್ಲವೀನಾಂ
ಲೀಲಾಸ್ಮೇರೋ ಜಯತಿ ಲಲಿತಾಂ ಆಸ್ಥಿತಃ ಕುಂದಶಾಖಾಂ।
ಸವ್ರೀಡಾಭಿಃ ತದನು ವಸನೇ ತಾಭಿರಭ್ಯರ್ಥ್ಯಮಾನೇ
ಕಾಮಿ ಕಶ್ಚಿತ್ ಕರಕಮಲಯೋಃ ಅಂಜಲಿಂ ಯಾಚಮಾನಃ॥

ಯಮುನೆಯ ತೀರದಲ್ಲಿ ಗೊಲ್ಲತಿಯರ ವಸ್ತ್ರವನ್ನು ಅಪಹರಿಸಿ, ಲೀಲೆಯಿಂದ ಕೂಡಿದ ಮುಗುಳ್ನಗೆಯುಳ್ಳವನೂ, ಸುಂದರವಾದ ಕದಂಬ ವೃಕ್ಷದ ಮೇಲೆ ಕುಳಿತವನೂ, ಅನಂತರ ಸೀರೆಯು ಲಜ್ಜಾವತಿಯರಾದ ಗೋಪಿಯರಿಂದ ಯಾಚಿಸಲ್ಪಡಬೇಕಾದ ಸಮಯದಲ್ಲಿ ಎರಡು ಕೈಗಳಿಂದ ರಚಿಸಿದ ನಮಸ್ಕಾರವನ್ನು ಕೋರಿದವನೂ ಆದ ಅನಿರ್ವಚನೀಯವಾದ ವಿಟನು ಸರ್ವೋತ್ಕೃಷ್ಟನಾಗಿದ್ದಾನೆ.

ಸ ಚಾತ್ಮ ಚಂಡಾತಕ ಮಾತ್ರಭಾಜಾಂ ಕೌಮಾರ್ಥಿನೀನಾಂ ಸ್ವಯಮರ್ಥ್ಯಮಾನ್ಯೈಃ।
ಅನನ್ಯ ಹಸ್ತಾರ್ಪಣ ಸಂಪ್ರವೃತ್ತ್ಯೈ ಸ್ತಾಸಾಂ ಜಹಾಸಾಂಜಲಿಭಿಸ್ತ್ವದೀಯೈಃ ॥೪೯॥

ಮತ್ತೆ ಅವರುಗಳು ಮಡಚಿದ ತೊಡೆಯಿಂದ (ಅರ್ಧ ಉಟ್ಟಿರುವ ಬಟ್ಟೆ) ದೇಹವನ್ನು ಮರೆಸಿಕೊಂಡು ಶ್ರೀಕೃಷ್ಣನು ಕೇಳಿದ ಹಾಗೆ ತಮ್ಮ ಒಂದು ಕೈಗಳಲ್ಲೇ ಇವನಿಗೆ ನಮಸ್ಕಾರ ಮಾಡಿದಾಗ, ಬಟ್ಟೆಯಿಲ್ಲದೆ ಸ್ನಾನ ಮಾಡುವುದು ತಪ್ಪು. ಅದಕ್ಕೆ ಪ್ರಾಯಶ್ಚಿತ್ತವಾಗಿ ನಿಮ್ಮ 'ಅಂಜಲಿ' ಎಂದು ಹೇಳಿ, (ಎಲ್ಲವನ್ನೂ ಕಾಣುವ ಸಾಮರ್ಥ್ಯವಿರುವ ನನ್ನಿಂದ ನೀವು ಏನನ್ನೂ ಮರೆಮಾಚಲು ಸಾಧ್ಯವಿಲ್ಲ ಎಂಬ ಅರ್ಥ) ಮತ್ತೆ ನಕ್ಕನು.

ಅವನು ಅಂಜಲಿಯನ್ನು ಕೇಳಿದ್ದು ಯಾವ ಕಾಮುಕ ಭಾವನೆಯಿಂದಲೂ ಅಲ್ಲ. ಅವರಿಗೆ ಮುಜುಗರ ಉಂಟುಮಾಡಬೇಕೆಂದೂ ಅಲ್ಲ. ಭಗವಂತನಲ್ಲಿ ಸಂಪೂರ್ಣ ಶರಣಾಗತಿಯನ್ನು ಮಾಡುವಾಗ, (ಅಂಜಲಿಯು ಶರಣಾಗತಿಯನ್ನು ಸೂಚಿಸುತ್ತದೆ) ಮನಸ್ಸಿನಲ್ಲಿ ಕಿಂಚಿತ್ತೂ ಅಹಂಕಾರವಿರಬಾರದು. ''ನನ್ನಿಂದ ನಡೆಯುವುದವು ಜಗತ್ತಿನಲ್ಲಿ ಏನೂ ಇಲ್ಲ'' ಎಂಬ ಭಾವನೆ ಪರಿಪೂರ್ಣವಾದಾಗ ಮಾತ್ರ ಪ್ರಪತ್ತಿಯು ಸಫಲವಾಗುತ್ತದೆ. ಇದನ್ನೇ ಗೋಪಿಕಾ ವಸ್ತ್ರಾಪಹರಣ ಪ್ರಸಂಗ ಪ್ರಚುರಪಡಿಸುತ್ತದೆ.

ಪ್ರಸುಪ್ತಮುದ್ಗೋಧಯತಾ ಪರತ್ವಂ ವೀರಶ್ರಿಯೋ ವಿಭ್ರಮ ಮಂಡನೇನ।
ನೀಲಾದಿ ನಿರ್ವೇಶ ನಿದಾನಧಾಮ್ನಾ ನಾಥೋ ಬಭಾಸೇ ನವಯೌವನೇನ ॥೫೦॥

ಅವತಾರಗಳಲ್ಲಿ ಮರೆ ಮಾಚಿರುವ ತನ್ನ ಪರತ್ವವನ್ನು ಪ್ರಕಾಶ ಮಾಡುವವನೂ, ವೀರಲಕ್ಷ್ಮಿಯ ವಿಲಾಸಗಳಿಗೆ ಅಲಂಕಾರಪ್ರಾಯವಾದವನೂ ಆದ ಸ್ವಾಮಿಯು ನಪ್ಪಿನ್ನೈ ಮುಂತಾದ ಗೋಪಿಗಳು ತನ್ನನ್ನು ಇಚ್ಛೆಪಡುವ ಹಾಗೆ ನವಯೌವನದಿಂದ ಶೋಭಿಸಿದನು. (ಕೇವಲ ಐದು ವರ್ಷದ ಬಾಲಕನಾದರೂ ಯುವತಿಯರು ಮೋಹಿಸುವ ಹಾಗೆ ಇದ್ದನು).

ಶ್ರೀಕೃಷ್ಣನು ಗೋಪಸ್ತ್ರೀಯರೊಡನೆ ಆಡಿದ ಲೀಲೆಗಳೆಲ್ಲವೂ ಅವನು ಐದು ವರ್ಷದವನಾಗಿದ್ದಾಗ, ಐದು ವರ್ಷದ ಬಾಲಕನಾದರೂ ತನ್ನ ಭುವನ ಮನೋಹರ ಸೌಂದರ್ಯದಿಂದ ಎಲ್ಲರನ್ನೂ ಆಕರ್ಷಿಸುತ್ತಿದ್ದನು. ಅವನು ವಯಸ್ಸಿನಲ್ಲಿ ಚಿಕ್ಕವನಾದರೂ ಗೋಪಸ್ತ್ರೀಯರು ಅವನಲ್ಲಿ ಮೋಹಗೊಂಡರು. ಇದು ಕೇವಲ ದೇಹ ಕಾಮವಲ್ಲ. ಭಗವಂತನ ಸೌಂದರ್ಯ ಎಲ್ಲರ ಮನಸ್ಸನ್ನು ಸೂರೆಗೊಳ್ಳುವುದರಿಂದ ಎಲ್ಲರೂ ಅವನ ಸಾನ್ನಿಧ್ಯವನ್ನು ಬಯಸಿ, ಅವನ ಬಳಿಗೆ ಓಡೋಡಿ ಬರುತ್ತಿದ್ದರು.

ವಿಹಾರ ಪರ್ವಕ್ರಮ ಚಾರುಶೌರೇಃ ಕಲ್ಯಂ ವಯಃ ಕಾಮಗೃಹೀತಿ ಯೋಗ್ಯಂ।
ಮನೋಭಿರಾಸ್ವಾದ್ಯ ತಮಂ ಪ್ರಪೇದೇ ಮಾಧುರ್ಯಮಿಕ್ಷೋರಿವ ಮಧ್ಯಭಾಗಃ ॥೫೧॥

ಮೆಟ್ಟಿಲು ಮೆಟ್ಟಿಲಾಗಿ ಅದ್ಭುತಗಳನ್ನು ಪ್ರಕಟಗೊಳಿಸುವ ಲೀಲೆಗಳನ್ನು ಮಾಡುವುದರಿಂದ, ಸೌಂದರ್ಯ ಹೆಚ್ಚುತ್ತಾ, ಆ ಕೃಷ್ಣನ ಮಹಿಮೆಯು ಎಲ್ಲರನ್ನೂ ವಶಗೊಳಿಸುತ್ತಾ ಕಬ್ಬಿನ ಜಲ್ಲೆಯ ಮಧ್ಯಭಾಗದಂತೆ ಮಾಧುರ್ಯದಿಂದ ಕೂಡಿತ್ತು.

ಶ್ರೀಕೃಷ್ಣನ ಬಾಲ್ಯದ ಪ್ರತಿಯೊಂದು ಕ್ಷಣಗಳು ಅವಸ್ಮರಣೀವಾಗಿದ್ದು, ಅವನ ಅದ್ಭುತ ಕಾರ್ಯಗಳು ಇಷ್ಟೆಂದು ಹೇಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆ ಗೋಪಾಲಕರೆಲ್ಲರೂ ಸಂಪೂರ್ಣವಾಗಿ ಅವನ ಬಾಲ ಲೀಲೆಗಳನ್ನು ಅನುಭವಿಸುವುದರಲ್ಲೇ ತಲ್ಲೀನರಾಗಿದ್ದರು. ಕಬ್ಬಿನ ಜಲ್ಲೆಯ ಮಧ್ಯಭಾಗವು ಬಹಳ ಸಿಹಿಯಾಗಿರುತ್ತದೆ. ಅದೇ ರೀತಿ ಶ್ರೀಕೃಷ್ಣಪರಮಾತ್ಮನ ಜೀವಿತದ ಕಾಲದ ಎಲ್ಲಾ ಘಟ್ಟಗಳಿಗಿಂತಲೂ ಬಾಲ ಲೀಲೆಗಳು ಅತ್ಯಂತ ಮನೋಹರ ವಾಗಿದ್ದವು.

ಸಮಾಶ್ರಿತಾಂ ವಿಭ್ರಮ ಸೈನ್ಯಭೇದ್ಯೈಃ ಕಾನ್ತ್ಯಾಸ್ತ್ವಯಾ ಕಲ್ಪಿತ ಚಾರುವಪ್ರಾಂ।
ವ್ರಜಸ್ತ್ರಿಯಃ ಕೃಷ್ಣಮಯಿ ವ್ಯಜಾನನ್ ಕ್ರೀಡಾರ್ಗಲಾಂ ಕ್ಷೇಮಪುರೀಮಪೂರ್ವಾಂ॥೫೨॥

ಗೋಪಸ್ತ್ರೀಯರು ಆನಂದದಿಂದ ವಿಹರಿಸುವ ತಮ್ಮ ರಾಜಧಾನಿಯನ್ನಾಗಿಯೇ ಶ್ರೀಕೃಷ್ಣನನ್ನು ಭಾವಿಸಿದರು. ಅವನು ಮಾಡುವ ವಿಲಾಸಗಳೆಲ್ಲವೂ ಆ ನಗರದ ಕಾವಲಿನ ಸೈನ್ಯದವರೆಲ್ಲರೂ ಸೇರಿ ಕ್ರೀಡಾಂಗಣದಲ್ಲಿ ಆಡುವ ಆಟಗಳಂತೆ ಸಂತೋಷದಿಂದ ಇತ್ತು.

ಗೋಪಸ್ತ್ರೀಯರ ಪ್ರಮುಖ ಕೇಂದ್ರ ಶ್ರೀಕೃಷ್ಣನಾಗಿದ್ದನು. ತಮ್ಮ ದಿನದ ಬಹು ಭಾಗವನ್ನು ಅವರು ಅವನ ಸಾನ್ನಿಧ್ಯದಲ್ಲಿ ಕಳೆಯಲು ಇಷ್ಟಪಡುತ್ತಿದ್ದರು. ಆ ಬೃಂದಾವನವನ್ನು ಕಾಯುವ ಸೈನಿಕರೆಲ್ಲರೂ, ತಮ್ಮ ಕೆಲಸದ ಜೊತೆಗೆ ಶ್ರೀಕೃಷ್ಣನೊಡನೆ ಸೇರಿ ಕ್ರೀಡಾಂಗಣದಲ್ಲಿ ಆಟಗಳನ್ನು ಆಡುತ್ತಿದ್ದುದರಿಂದ ಎಲ್ಲರೂ ಶ್ರೀಕೃಷ್ಣನ ಸಹವಾಸವನ್ನೇ ಅಪೇಕ್ಷಿಸಿ, ಆನಂದಪಡುತ್ತಿದ್ದರು.

ವಂಶಸ್ವನೋ ವತ್ಸ ವಿಹಾರ ಪಾಂಸುಃ ಸಂಧ್ಯಾಗಮಸ್ತಸ್ಯ ಚ ವನ್ಯವೇಷಃ।
ಆಯಾತಿ ಕೃಷ್ಣೇ ವ್ರಜ ಸುಂದರೀಣಾಂ ಮಾಸೀಚ್ಚತುಃ ಸ್ಕಂಧಮನಂಗಸೈನ್ಯಂ ॥೫೩॥

ಶ್ರೀಕೃಷ್ಣನು ಕೊಳಲು ಊದುವಾಗ, ಮಕ್ಕಳೆಲ್ಲರೂ ಸೇರಿ, ಆಟವಾಡಿ ಅವನೊಡನೆ ಕುಣಿಯುತ್ತಿದ್ದರು. ಅವನು ಕಾಡು ಹೂವುಗಳನ್ನು ಕಿತ್ತು ತನ್ನನ್ನು ಅಲಂಕರಿಸಿಕೊಳ್ಳುವ ವೇಷವು, ಅವನು ಕಾಡಿನಿಂದ ಹಿಂತಿರುಗಿ ಬರುವಾಗ, ಸುಂದರಿಯರಾದ ಗೋಪಸ್ತ್ರೀಯರಿಗೆ ನಾಲ್ಕು ವಿಧವಾಗಿ ಮನ್ಮಥನ ಸೈನ್ಯವನ್ನು ವಿಭಾಗಿಸಿದ ಹಾಗೆ ಇತ್ತು.

(ಪಲ್ಲವ, ಮಯೂರ, ಪಿಂಛಾದಿ ವೇಷಗಳಲ್ಲಿ) ಕಾಡಿಗೆ ಹಸುಗಳನ್ನು ಮೇಯಿಸಲು ಕರೆದುಕೊಂಡು ಹೋಗಿ ಅಲ್ಲಿ ವೇಣುನಾದವನ್ನು ಮಾಡುವಾಗ, ಗೋಪಾಲಕರೆಲ್ಲರೂ ಆನಂದದಿಂದ ಕುಣಿಯುತ್ತಿದ್ದರು.



ಕಾಡು ಹೂವುಗಳಿಂದ ಅಲಂಕರಿಸಿಕೊಳ್ಳುವ ಅವನನ್ನು ನೋಡಲು ಗೋಪಸ್ತ್ರೀಯರು ತವಕದಿಂದ ಕಾದಿದ್ದು, ಮನ್ಮಥನ ಪ್ರಭಾವಕ್ಕೆ ಒಳಗಾಗಿ, ಅವನನ್ನು ನೋಡಿ ಆನಂದಿಸಲು ದುಂಬಾಲು ಬೀಳುತ್ತಿದ್ದರು. ಅವನ ಅಲಂಕಾರವು ವಿಧವಿಧವಾಗಿ ಇದ್ದು, ಎಲ್ಲಾ ಅಲಂಕಾರಗಳಲ್ಲಿಯೂ ವಿಶೇಷವಾಗಿ ಶೋಭಿಸುತ್ತಿದ್ದರು.



ಅನುಶ್ರವಾಣಾ ಮವತಂ ಸಭೂತಂ ಬರ್ಹಾವತಂಸೇನ ವಿಭೂಷಯಂತೀ।
ಅದಿವ್ಯಯಾ ಚರ್ಮ ದೃಶೈವ ಗೋಪೀ ಸಮಾಧಿ ಭಾಜಾಮಭಜತ್ ಸಮಾಧಿಂ॥೫೪॥

ವೇದಗಳ ಶಿರಸ್ಸಿಗೆ ಭೂಷಣನಾದ ಶ್ರೀಕೃಷ್ಣನು ನವಿಲುಗರಿಯನ್ನು ತಲೆಯಲ್ಲಿ ಸಿಕ್ಕಿಸಿ ಕೊಂಡಾಗ ಒಬ್ಬಗೋಪಿಯಾದವಳು ಯೋಗಿಗಳು ಸಮಾಧಿಯಲ್ಲಿ ದಿವ್ಯವಾದ ಅಂತಃಚಕ್ಷುವಿನಿಂದ ಕಾಣುವ ನೆಲೆಯನ್ನು ಸಮಾನ್ಯವಾದ ಚಕ್ಷುವಿನಿಂದಲೇ ನೋಡಿದಳು.

ಶ್ರೀಕೃಷ್ಣನು ನವಿಲುಗರಿಯನ್ನು ತಲೆಯಲ್ಲಿ ಸಿಕ್ಕಿಸಿ ಕೊಂಡಿರುವ ರೂಪವೇ ಅತ್ಯಂತ ಮೋಹಕವಾಗಿದ್ದು ಯೋಗಿಗಳು ಸಮಾಧಿಯಲ್ಲಿ ಅನುಭವಿಸುವ ರೂಪವನ್ನು ಗೋಪಿಯರು ಅವನ ಆ ನವಿಲುಗರಿಯನ್ನು ನೋಡಿ ಅನುಭವಿಸಿದರು. ಆಚಾರ್ಯರು 'ಗೋಪಾಲ ವಿಂಶತಿ' ಯಲ್ಲಿ ಹೀಗೆ ವರ್ಣಿಸಿದ್ದಾರೆ.

ಚಿತ್ರಾಕಲ್ಪಃ ಶ್ರವಸಿ ಕಲಯನ್ ಲಾಂಗಲೀ ಕರ್ಣಪೂರಂ
ಬರ್ಹೋತ್ತಂಸ ಸ್ಫುರಿತ ಚಿಕುರೋ ಬಂಧುಜೀವಂ ದಧಾನಃ।
ಗುಂಜಾಬದ್ಧಾಂ ಉರಸಿ ಲಲಿತಾಂ ಧಾರಯನ್ ಹಾರಯಿಷ್ಟಿಂ
ಗೋಪಸ್ತ್ರೀಣಾಂ ಜಯತಿ ಕಿತವಃ ಕೋಪಿ ಕೌಮಾರಹಾರೀ ॥

ದಿವ್ಯಾಭರಣಗಳಿಂದ ಕೂಡಿ ಆಶ್ಚರ್ಯವಾದ ವೇಷವುಳ್ಳವನೂ, ಕಿವಿಯಲ್ಲಿ ತೆಂಗಿನ ಹೂವನ್ನು ಕರ್ಣಾಭರಣವನ್ನಾಗಿ ಇಟ್ಟು ನವಿಲುಗರಿಗಳಿಂದ ಅಲಂಕೃತವಾದ ಮುಂಗುರುಳುಗಳಲ್ಲಿ ಗುಲಾಬಿಯನ್ನು ಧರಿಸಿದವನೂ, ಗುಲಗಂಜಿಯಿಂದ ಮಾಡಿದ ರಮ್ಯವಾದ ಮಾಲೆಯನ್ನು ವಕ್ಷಸ್ಥಳದಲ್ಲಿ ಧರಿಸಿರುವವನೂ ಗೊಲ್ಲಸುಂದರಿಯರ ಯೌವನವನ್ನಪಹರಿಸುವವನೂ ಆದ ಯಾವನೋ ಒಬ್ಬ ಚೋರನು ಸರ್ವೋತ್ಕೃಷ್ಟನಾಗಿರುತ್ತಾನೆ.

ಕಲಾಪಿನಾಂ ಕಲ್ಪಿತ ಮಾಲ್ಯಭಾವೈಃ ಪತ್ರೈಸ್ತದಾ ಪತ್ರಲ ದೇಹಕಾಂತಿಂ।
ಅವಾಪ್ಯ ಸಂಚಾರಿತ ಮಾಲಮಾದ್ಯಂ ಛಾಯಾತ್ಮತಾಂ ಪ್ರಾಪುರಿವಾಸ್ಯಗಾವಃ ॥೫೫॥

ಮಾಲೆಗಳಾಗಿ ಧರಿಸಲ್ಪಟ್ಟ ನವಿಲುಗರಿಗಳಿಂದ ಹಸಿರು ಕಲ್ಲುಗಳ ಮರದಂತೆ ಶೋಭಿತನಾದ ಆದಿ ಪುರುಷನು ತಾನು ಸಂತೋಷದಿಂದ ಮೇಯಿಸುವ ಹಸುಗಳ ನೆರಳಿನಲ್ಲಿ ಇರಲು ಇಚ್ಛಿಸಿದರೆ ಇತರರೆಲ್ಲರೂ ಇರಲು ಇಚ್ಛಿಸುತ್ತಾರೆ.

ವೃಂದಾವನದಲ್ಲಿ ಶ್ರೀ ಕೃಷ್ಣನು ನವಿಲುಗಳಿಗಳಿಂದ ಅಲಂಕೃತನಾಗಿ ಹಸುಗಳನ್ನು ಮೇಯಿಸುತ್ತಾ ಅವುಗಳ ಮಧ್ಯೆ ಇರುವ ನೆರಳಿನಲ್ಲಿ ವಿಶ್ರಮಿಸುತ್ತಾನೆ. ಆದರೆ ಜಗತ್ತಿನಲ್ಲಿ ಇರುವ ಇತರರೆಲ್ಲರೂ ಸರ್ವೇಶ್ವರನೆಂಬ ಮರದ ನೆರಳಿನಲ್ಲಿ ತಂಪನ್ನು ಪಡೆಯಲು ಇಚ್ಛಿಸುತ್ತಾರೆ. ರಾಮಾಯಣದಲ್ಲಿ ರಾಮನನ್ನು 'ನಿವಾಸ ವೃಕ್ಷ ಸಾಧೂನಾಂ' ಎಂದು ಕರೆಯಲಾಗಿದೆ.

ವಿತನ್ವತಾ ಮಾನ್ಮಥ ವಿಂದ್ರಜಾಲಂ ಪಿಂಛೇನ ತಾಪಿಂಚ್ಛನಿಭೋ ಬಭಾಸೇ।
ಅನೇಕ ರತ್ನ ಪ್ರಭವೇನ ಧಾಮ್ನಾ ಶಾರಾತ್ಮನಾ ಶೈಲ ಇವೇಂದ್ರ ನೀಲಃ ॥೫೬॥

ಮಾಯಾ ಚೇಷ್ಟಿತಗಳನ್ನು ಮಾಡುವ ಮನ್ಮಥನ ಇಂದ್ರಜಾಲವನ್ನು ವಿಸ್ತರಿಸುವ ನವಿಲುಗಳನ್ನು ಹೊಂದಿದವನಾಗಿ ಕಲ್ಪವೃಕ್ಷದಂತೆ ಇದ್ದ ಶ್ರೀ ಕೃಷ್ಣನು ಅನೇಕ ರತ್ನಗಳನ್ನು ಹೊಂದಿರುವ ಇಂದ್ರನೀಲ ಪರ್ವತದಂತೆ ಶೋಭಿಸುತ್ತಿದ್ದನು.

ಆ ನವಿಲುಗರಿಯನ್ನು ತಲೆಯಲ್ಲಿ ಧರಿಸಿರುವ ಶ್ರೀ ಕೃಷ್ಣನ ವರ್ಣನೆ ಮುಂದುವರೆದಿದೆ. ಮನ್ಮಥನಿಗೇ ತಂದೆಯಾದವನು ಶ್ರೀ ಕೃಷ್ಣ. ಅಂದ ಮೇಲೆ ಮನ್ಮಥನ ಮಾಯಾಜಾಲಗಳನ್ನು ಮೀರಿಸಿ, ಮಾಯಾ ಚೇಷ್ಟಿತಗಳನ್ನು ಮಾಡುವವನು ಸ್ವಾಮಿ. ಮನ್ಮಥನ ಬಾಣ ಜಾಲಕ್ಕೆ ಸಿಲುಕದವರು ಅತಿ ವಿರಳ. ಆದರೆ ಯೋಗಿಗಳೂ ಸಹ ಶ್ರೀ ಕೃಷ್ಣನ ರೂಪಕ್ಕೆ ಮರುಳಾದವರು. ಇಂದ್ರನೀಲ ಪರ್ವತವೆಂಬುದು ಪರ್ವತಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಅದರಂತೆಯೇ ಶ್ರೀ ಕೃಷ್ಣನೂ ಶೋಭಿಸುತ್ತಿದ್ದನು ಎಂಬುದು ಭಾವ.

ಮುಹುಃ ಸ್ಪೃಶಂತೋ ಮುಮುದೇ ಯಶೋದಾ ಮುಗ್ಧಾಂಗನಾ ಮೋಹನವಾಂಶಿಕೇನ
ಮನೀಷಿಣಾಂ ಮಾಂಗಲಿಕೇನ ಯೂನಾ ಮೌಲೌ ಧೃತಾಂ
ಮಂಡನ ಬರ್ಹಮಾಲಾಂ ॥೫೭॥

ಯೌವನವತಿಯರಾದ ಸ್ತ್ರೀಯರನ್ನು ಮೋಹಗೊಳಿಸಲು ಕೊಳಲನ್ನು ಊದುವುದನ್ನೇ ತನ್ನ ಕೆಲಸವನ್ನಾಗಿ ಮಾಡಿಕೊಂಡವನೂ, ಧ್ಯಾನವನ್ನು ಮಾಡುವವರಿಗೆ ಮಂಗಳಗಳನ್ನು ಉಂಟು ಮಾಡುವವನೂ, ತನ್ನ ದಿವ್ಯವಾದ ಶಿರಸ್ಸಿನಲ್ಲಿ ನವಿಲುಗರಿಯ ಮಾಲೆಯನ್ನು ಬಾರಿ ಬಾರಿಗೂ ಇಟ್ಟುಕೊಳ್ಳುವವನನ್ನು ಕಂಡು ಯಶೋದೆ ಸಂತೋಷಿಸಿದಳು. ಆ ಕೃಷ್ಣನ ಕೊಳಲಿನ ದಿವ್ಯ ನಾದಕ್ಕೆ ಮೋಹಗೊಳ್ಳದವರು ಯಾರಿದ್ದಾರೆ?

ಕೃತಾಸ್ಪದಾ ಕೃಷ್ಣ ಭುಜಾಂತರಾಲೇ ಪ್ರಾಲಂಭ ಬರ್ಹಾವಲಿರಾವಭಾಸೇ।
ವಿಶುದ್ಧ ಹೇಮದ್ಯುತಿರಬ್ಧಿ ಕನ್ಯಾ ಶ್ಯಾಮಯಾಮಾನೇವ ತದಂಗಕಾಂತ್ಯಾ ॥೫೮॥

ಶ್ರೀಕೃಷ್ಣನ ದಿವ್ಯವಾದ ಎದೆಯಲ್ಲಿ ಸ್ಥಳವನ್ನು ಹಿಡಿದು ಹಾರದ ಹಾಗೆ ತೂಗಾಡುವ ನವಿಲುಗರಿಯ ಹಾರವು ಅವನ ವಕ್ಷಸ್ಥಲವನ್ನು ಯಾವಾಗಲೂ ಅಲಂಕರಿಸುವ ಲಕ್ಷ್ಮಿಯ ಕಾಂತಿಯನ್ನು ಹೊಂದಿ ಶ್ಯಾಮಲ ವರ್ಣದಿಂದ ಶೋಭಿಸುತ್ತಿತ್ತು.

ನವಿಲುಗರಿಯ ಹಾರವು ಅವನ ಎದೆಯನ್ನು ಅಲಂಕರಿಸಿ, ನಿತ್ಯಾನಪಾಯಿನಿಯಾದ ಲಕ್ಷ್ಮಿಗೆ ಪೈಪೋಟಿಯನ್ನು ಉಂಟುಮಾಡುವಂತಿತ್ತು. ನವಿಲುಗರಿಯು ಶ್ರೀಕೃಷ್ಣನಿಗೆ ವಿಶಿಷ್ಟವಾದ ಒಂದು ಅಲಂಕಾರ. ಇನ್ಯಾವ ದೇವರಿಗೂ ಈ ಅಲಂಕಾರವಿಲ್ಲ. ಶ್ರೀ ವೇದಾಂತ ದೇಶಿಕರು 'ಗೋಪಾಲ ವಿಂಶತಿ ಸ್ತೋತ್ರ'ದಲ್ಲಿ ನವಿಲುಗರಿಯನ್ನು ವರ್ಣಿಸಿದ್ದಾರೆ.

ಅಧರಾಹಿತ-ಚಾರು-ವಂಶನಾಳಾಃ ಮಕುಟಾಲಂಬಿ-ಮಯೂರ-ಪಿಂಛಮಾಲಾಃ ।
ಹರಿನೀಲಶಿಲಾ-ವಿಭಂಗನೀಲಾಃ ಪ್ರತಿಭಾಃ ಸಂತು ಮಮಾಂತಿಮ-ಪ್ರಯಾಣೇ ॥

ಕೆಂದುಟಿಯ ಮೇಲಿಟ್ಟ ಮನೋಹರವಾದ ಬಿದಿರು ಕೊಳಲಿನಿಂದ ಕೂಡಿರುವುವೂ ಮುಡಿಯಲ್ಲಿ ಜೋಲಾಡುವ ನವಿಲುಗರಿಗಳ ಮಾಲೆಗಳುಳ್ಳವೂ, ಒಡೆದ ಇಂದ್ರನೀಲ ಮಣಿಯಂತೆ ನೀಲಕಾಂತಿಯುಳ್ಳವೂ ಆದ ಶ್ರೀಕೃಷ್ಣವಿಷಯಕವಾದ ರೂಪಗಳು - ಜ್ಞಾನ ಸಂತತಿಗಳು ನನ್ನ ಅವಸಾನ ಕಾಲದಲ್ಲಿ ಉಂಟಾಗಲಿ.

ಸಾಚೀಕೃತಾನಿ ಪ್ರಣಯತ್ರಪಾಭ್ಯಾಂ ವ್ಯಾವೃತ್ತರಾಜೀವ ನಿಭಾನಿ ಶೌರಿಃ ।
ಸಭ್ರೂವಿಲಾಸಾನಿ ದದರ್ಶ ತಾಸಾಂ ವಕ್ತ್ರಾಣಿ ವಾಚಾಲ ವಿಲೋಚನಾನಿ ॥೫೯॥

ಪ್ರೇಮವೂ, ನಾನೂ ಸೇರಿದರೆ, ಅದರಿಂದ ಬರುವ ಅನೇಕ ವಿಧವಾದ ಪ್ರಣಯ ಸಂಕೇತಗಳನ್ನೆಲ್ಲಾ, ತಾವರೆ ಹೂ ಅರಳಿದಂತೆ ಗೋಪಿಯರ ಮುಖಗಳಲ್ಲಿ ಶ್ರೀಕೃಷ್ಣನು ಕಂಡನು.

ಶ್ರೀಕೃಷ್ಣನನ್ನು ನೋಡಿದರೆ, ಗೋಪಿಕಾ ಸ್ತ್ರೀಯರು ಲಜ್ಜೆ ಪಡುತ್ತಿದ್ದರು. ಅವರು ಅವನಲ್ಲಿ ಅನೇಕ ಪ್ರಣಯ ಸಂಕೇತಗಳನ್ನು ಮಾಡುತ್ತಾ, ತಮ್ಮ ಆಸೆಗಳನ್ನು ಅವನಲ್ಲಿ ವ್ಯಕ್ತಪಡಿಸುತ್ತಿದ್ದರು. ಶ್ರೀಕೃಷ್ಣನೂ ಸಹ ಅವರಲ್ಲಿ ಅನುರಾಗ ಹೊಂದಿ, ಅವರ ಅರಳಿದ ಮುಖಗಳನ್ನು ಕಂಡು ಸಂತೋಷಿಸಿ, ತಾನೂ ಮುದಗೊಳ್ಳುತ್ತಿದ್ದನು. ಗೋಪಿಕೆಯರಂತೂ, ಲಜ್ಜೆಯನ್ನು ಬಿಟ್ಟು ತಮ್ಮ ಶೃಂಗಾರ ಭಾವನೆಗಳನ್ನು ಅವನಲ್ಲಿ ವ್ಯಕ್ತಪಡಿಸುತ್ತಿದ್ದರು.

ನಿರಂಕುಶ ಸ್ನೇಹರಸಾನು ವಿದ್ವಾನ್ ನಿಷ್ಪಂದ ಮಂದಾಲಸ ನಿರ್ನಿಮೇಷಾನ್ ।
ವಂಶೇನ ಕೃಷ್ಣಃ ಪ್ರತಿ ಸಂಬಭಾಷೆ ವಾರ್ತಾಹರಾನ್ ವಾಮದೃಶಾಂ ಕಟಾಕ್ಷಾನ್॥೬೦॥

ತಡೆಯಿಲ್ಲದ ಪ್ರೇಮದಿಂದ ಉತ್ತೇಜಿಸಲ್ಪಟ್ಟು, ಅಲ್ಲಾಡದೆ, ಬೇರಾವುದರಲ್ಲೂ ಚಿಂತಿಸದವನಾದ, ತಾನು ಹೇಳುವುದನ್ನು ಸ್ಪಷ್ಟವಾಗಿ ಹೇಳುವ ಕಣ್ಸನ್ನೆಗಳನ್ನು ತನ್ನ ಕಡೆಗಣ್ಣಿನ ನೋಟಗಳಿಂದ ತಿಳಿಸುವ ಶ್ರೀಕೃಷ್ಣನು, ತನ್ನ ಕೊಳಲಿನ ನಾದದಿಂದಲೇ ಎಲ್ಲವನ್ನೂ ತಿಳಿಸಿದನು.

ಪ್ರೇಮಿಗಳ ಭಾಷೆ ಕೇವಲ ಕಣ್ಸನ್ನೆ. ಅವರು ಕಣ್ಸನ್ನೆಯಿಂದಲೇ ಎಲ್ಲವನ್ನೂ ತಿಳಿಸಬಲ್ಲರೂ, ಗ್ರಹಿಸಲೂ ಬಲ್ಲರು. ಅದೇ ರೀತಿ ಗೋಪ ಸ್ತ್ರೀಯರು ಬೇರಾವುದನ್ನೂ ಚಿಂತಿಸದೆ, ಶ್ರೀಕೃಷ್ಣನಲ್ಲಿಯೇ ಧ್ಯಾನವುಳ್ಳವರಾಗಿ, ಆ ಶ್ರೀಕೃಷ್ಣನು ಸ್ಪಷ್ಟವಾಗಿ ಕಣ್ಸನ್ನೆಯಲ್ಲಿ ತಿಳಿಸುವ ಶೃಂಗಾರ ಭಾವನೆಗಳನ್ನು ಅರಿತು ಅದರಂತೆ ನಡೆಯುತ್ತಿದ್ದರು.

'ಭಾಮೆಯ ನೋಡಲು ತಾ ಬಂದ ಬೃಂದಾವನದಿಂದ' ಎಂಬ ಗೀತೆಯಲ್ಲಿ 'ಕಣ್ಣನ್ನೆಯಲ್ಲಿ ಎಲ್ಲರ ನೋಟ ಸಳೆದ ಚಿನ್ಮಯ ಮೂರುತಿ ಶ್ರೀ ಗೋವಿಂದ' ಎಂಬುದಾಗಿ ಭಕ್ತರು ಹಾಡಿದ್ದಾರೆ.

ಅಶಿಕ್ಷಿತಂ ತುಂಬುರು ನಾರದಾದ್ಯೈ ರಾಭೀರನಾಟ್ಯಂ ನವಮಾಸ್ಥಿತೇನ।
ಜಗೇ ಸಲೀಲಂ ಜಗದೇಕ ಧಾಮ್ನಾ ರಾಗಾಬ್ದಿನಾ ರಂಜಯತೇವ ವಿಶ್ವಂ ॥೬೧॥

ತುಂಬುರು, ನಾರದರು ಇವರುಗಳನ್ನು ಹೋಲುವ ಮಹಾತ್ಮರುಗಳಿಂದ ಕಲಿಯಲ್ಪಡದ ಹೊಸದಾದ ನಾಟ್ಯದಿಂದ ಕೂಡಿದವನೂ, ಲೋಕಗಳಿಗೆಲ್ಲಾ ಆಧಾರವಾದ ರಾಗಸಮುದ್ರನಾದ ಶ್ರೀಕೃಷ್ಣನು, ಜಗತ್ತನ್ನೇ ಮೋಹಗೊಳಿಸುವಂತೆ ವಿನೋದದಿಂದ ಎಲ್ಲರನ್ನೂ ರಂಜಿಸಿದನು

ಶ್ರೀಕೃಷ್ಣನು ಬೃಂದಾವನದಲ್ಲಿ ಎಲ್ಲರನ್ನೂ ತನ್ನ ವಿವಿಧ ಹಾವಭಾವಗಳಿಂದ ಸಂತೋಷಪಡಿಸುತ್ತಿದ್ದನು. ಯಾವ ನಾಟ್ಯ ಶಿರೋಮಣಿಗೂ ಕಡಿಮೆಯಿರುವುದಿಲ್ಲ. ಅವನ ನಾಟ್ಯಗಳು. ಕಾಳಿಯನ ಮೇಲೆ ಅದ್ಭುತವಾಗಿ ನಾಟ್ಯ ಮಾಡಿದವನಲ್ಲವೇ ಅವನು. ಚೇತನಾ ಚೇತನರುಗಳನ್ನು ಜಗತ್ತೆಂಬ ನಾಟಕ ರಂಗದಲ್ಲಿ ಆಟವಾಡಿಸುವವನು ಅವನೇ ಅವನಿಗೆ ತಿಳಿಯದ ನಾಟ್ಯ ಪ್ರಕಾರವಿಲ್ಲ. 'ಶ್ರೀಕೃಷ್ಣ ಕರ್ಣಾಮೃತ'ದಲ್ಲಿ ಲೀಲಾಶುಕರು ''**ತ್ರೈಲೋಕ್ಯಾ ಮೋಹನಾಂಗಂ ಸುರವರ ಗಣೀಕಾ ವಶ್ಯ ಗೋಪಾಲಕೃಷ್ಣಂ**'' ಎಂಬುದಾಗಿ ದೇವಾಸುರರೆಲ್ಲರನ್ನೂ ತನ್ನ ಮೋಹನ ನಾಟ್ಯದಿಂದ ಪರವಶಗೊಳಿಸುವವನು ಶ್ರೀಕೃಷ್ಣ ಎಂದಿದ್ದಾರೆ.

ಅಪತ್ರಪಾಸ್ವೈಕ ತಮಾಶ್ರಿತಾನಾಂ ರಾಗೋದಧೌ ಕೃಷ್ಣ ಮುಖೇಂದುನುನ್ನೆ।
ಹಸ್ತಾವಲಂಬೋ ನ ಬಭೂವ ತಾಸಾ ಮುತ್ಪಕ್ಷ್ಮಾಣ ಮುತ್ಕಲಿತಾ ಪ್ಲುತಾನಾಂ ॥೬೨॥

ಯಾರೇ ಆಗಲಿ, ಏನೇ ಹೇಳಿದರೂ, ದೃಢ ಮನಸ್ಸಿನಿಂದ ಕೃಷ್ಣನ ಮುಖವೆಂಬ ಚಂದ್ರನಿಂದ ಪ್ರೇಮ ಸಮುದ್ರದಲ್ಲಿ ಮುಳುಗಿದ ''ಇನ್ನು ಮುಂದೆ ನಮಗೆಲ್ಲಾ ಎಲ್ಲಾ ಇಂದ್ರಿಯ ಸುಖಗಳೂ ಶ್ರೀಕೃಷ್ಣನೇ'' ಎಂಬ ಉದ್ದೇಶ ಹೊಂದಿದ ಗೋಪಿಯರೆಲ್ಲರಿಗೂ ಬೇರೆ ಯಾವ ಅವಲಂಬನವೂ ಇರಲಿಲ್ಲ.

ಶ್ರೀಕೃಷ್ಣನಿಗೆ ಸಂಪೂರ್ಣವಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿದ್ದರು ಗೋಪಸ್ತ್ರೀಯರು. ತಮಗೆ ಇಹವು ಅವನೇ. ಪರವೂ ಅವನೇ ಎಂಬ ನಿಲುವಿಗೆ ಬಂದಿದ್ದರು. ಯಾರು ಏನು ಹೇಳಿದರೂ ಕೇಳದೆ, ಆ ಗೋಪಾಲಕೃಷ್ಣನ ಮುರಳಿಯ ನಾದಕ್ಕೆ ಮನಸೋತು, ಅವನ ಹಿಂದೆ ಪತಿ, ಸುತರನ್ನೆಲ್ಲಾ ಬಿಟ್ಟು ಓಡಿ ಹೋಗುತ್ತಿದ್ದರು. ಅವರದು ಅನನ್ಯ ಭಕ್ತಿ.

ಅಯಂತ್ರಿತ ಸ್ವೇರಗತಿಃ ಸ ತಾಸಾಂ ಸಂಭಾವಿತಾನಾಂ ಕರಪುಷ್ಕರೇಣ।
ಪ್ರಸ್ವಿನ್ನಗಂಡಃ ಪ್ರಣಯೀ ಚಕಾಶೇ ಮಧ್ಯೆ ವಶಾನಾಮಿವ ವಾರಣೇಂದ್ರಃ ॥೬೩॥

ಶ್ರೀಕೃಷ್ಣನು ತನ್ನ ಕೆಂದಾವರೆಯಂತಹ ಕೈಗಳಿಂದ ಮುಟ್ಟಿಕೊಂಡಾಡಲ್ಪಟ್ಟ ಆ ಗೋಪಿಯರ ಮಧ್ಯದಲ್ಲಿ ತಡೆಯೊಡ್ಡಿ ತನ್ನ ಇಷ್ಟದಂತೆ ನಡೆದುಕೊಂಡಿರುವವನಾದ, ಪ್ರೇಮಸೂಚಕವಾದ

ಕೆನ್ನೆಗಳೊಡನೆ ತುದಿಕೈಗಳಿಂದ ಅವರನ್ನು ಮುಟ್ಟುವ ಸ್ವಾಮಿಯು ಮದಜಲವನ್ನು ಸುರಿಸುತ್ತಾ ಸ್ವೇಚ್ಛೆಯಿಂದ ವಿಹರಿಸುವ ಆನೆಯಂತೆ ತೋರುತ್ತಿದ್ದನು.

ಶ್ರೀಕೃಷ್ಣನು ಗೋಪಿಯರ ಮಧ್ಯೆ ಮದಗಜದಂತೆ ಓಡಾಡುತ್ತಿದ್ದನು. ತನ್ನ ಕೈಗಳಿಂದ ಅವರ ದೇಹವನ್ನು ಸ್ಪರ್ಶಿಸುತ್ತಾ ಅವರಿಗೆ ರೋಮಾಂಚನವನ್ನುಂಟು ಮಾಡುತ್ತಾ, ಪ್ರೇಮ ಸೂಚಕವಾದ ಸಂಕೇತಗಳನ್ನು ಮಾಡಿ ಅವರನ್ನು ತನ್ನೆಡೆಗೆ ಸೆಳೆಯುತ್ತಿದ್ದನು. ಗೋಪಿಕಾ ಸ್ತ್ರೀಯರೂ ಸಹ ತಮ್ಮ ಸ್ತ್ರೀ ಸಹಜವಾದ ಲಜ್ಜೆಯನ್ನು ಬಿಟ್ಟು ಮುಕ್ತ ಮನಸ್ಸಿನಿಂದ ಅವನಲ್ಲಿ ವಿಹರಿಸುತ್ತಿದ್ದರು. ಗೋಪಿಗಳ ಮಧ್ಯೆ ಕೃಷ್ಣನು ತೋರುತ್ತಾ ಅವನನ್ನು ಬಿಟ್ಟು ಒಂದು ಕ್ಷಣವು ಇರಲಾಗದೆಂಬ ಸ್ಥಿತಿಯನ್ನು ಮುಟ್ಟಿದರು ಗೋಪಿಯರು. ಇದೂ ಒಂದು ರೀತಿಯಾದ ಐಕಾಂತಿಕ ಭಕ್ತಿ.

ವಿಮೋಹನೇ ವಲ್ಲವಗೇಹಿನೀನಾಂ ನ ಬ್ರಹ್ಮಚರ್ಯಂ ಬಿಭಿದೇ ತದೀಯಂ।
ಸಂಪತ್ಸತೇ ಬಾಲಕ ಜೀವನಂ ತತ್ ಸತ್ಯೇನ ಯೆನ್ನೈವ ಸತಾಂ ಸಮಕ್ಷಂ ॥೭೪॥

ಗೋಪರ ಹೆಂಡಂದಿರಾಗಿ, ಬಂದ ಗೋಪಿಯರು, ಅವನೊಡನೆ ಸೇರಿದಾಗಲೂ, ಅವನ ಬ್ರಹ್ಮಚರ್ಯಕ್ಕೆ ಭಂಗ ತರಲಿಲ್ಲ. ಈ ಸತ್ಯವಾದ ಬ್ರಹ್ಮಚರ್ಯದಿಂದಲ್ಲವೇ, ಮುಂದೆ ಒಂದು ದಿನ ಪರೀಕ್ಷಿತ್ ಎಂಬ ರಾಜಕುಮಾರನ ಪ್ರಾಣವು ರಕ್ಷಿಸಲ್ಪಟ್ಟಿದ್ದು.

ಶ್ರೀಕೃಷ್ಣನನ್ನು 'ಜಾರ'ನೆಂದು ಕರೆಯುವುದುಂಟು. ಆದರೆ ವಾಸ್ತವದಲ್ಲಿ ಅವನು ಯಾವ ಗೋಪಸ್ತ್ರೀಯರ ಶೀಲವನ್ನು ಭಂಗಮಾಡಿದವನಲ್ಲ. ಅವರ ಸಾಂಗತ್ಯದಲ್ಲಿ ಅವನ ಒಡನಾಟವಿತ್ತೇ ವಿನಃ ಅವರ ಶರೀರ ಸಂಬಂಧವನ್ನು ಬೆಳಸಲಿಲ್ಲ. ಹೀಗಾಗಿ ಅವನು ಅಷ್ಟೊಂದು ಸ್ತ್ರೀಯರ ನಡುವೆಯಿದ್ದರೂ ಬ್ರಹ್ಮಚಾರಿಯಾಗಿಯೇ ಉಳಿದಿದ್ದನು. ಇದು ಒಂದು ಆಶ್ಚರ್ಯಕರವಾದ ಸಂಗತಿ !

ಭಾರತ ಯುದ್ಧಾನಂತರ ಪಾಂಡವ ವಂಶವನ್ನು ನಿರ್ಮೂಲಗೊಳಿಸುವುದಾಗಿ ದುಷ್ಟ ದುರ್ಯೋಧನನಿಗೆ ವಚನವಿತ್ತ ಅಶ್ವತ್ಥಾಮನು ಮುಗ್ಧೆ ಉತ್ತರೆಯ ಗರ್ಭದ ಮೇಲೆ 'ಅಪಾಂಡವಾಸ್ತ್ರ'ವನ್ನು ಪ್ರಯೋಗಿಸಿದಾಗ, ಉತ್ತರೆಯ ಶಿಶುವನ್ನು ಕಾಪಾಡುವ ಸಂದರ್ಭದಲ್ಲಿ ಶ್ರೀಕೃಷ್ಣಪರಮಾತ್ಮನು **''ಯದಿ ಮೇ ಬ್ರಹ್ಮಚರ್ಯಂ ಸ್ಯಾತ್ ಮಯಿ ಸತ್ಯಂ ಚ ತಿಷ್ಠತಿ।**
ಅವ್ಯಾಹತಂ ಮಮೈಶ್ವರ್ಯಂ ತೇನ ಜೀವತು ಬಾಲಕಃ॥

''ನಾನು ಬ್ರಹ್ಮಚರ್ಯವನ್ನು ಆಚರಿಸಿದ್ದದ್ದೇ ಆದಲ್ಲಿ, ಸತ್ಯವು ನನ್ನಲ್ಲಿ ನೆಲೆ ಮಾಡಿಕೊಂಡಿದ್ದ ಪಕ್ಷದಲ್ಲಿ, ಮೂರು ಲೋಕಗಳಿಗಲ್ಲದೆ, ಎಲ್ಲ ಚರಾಚರ ವಸ್ತುಗಳಿಗೂ, ಸಕಲ ದೇವತೆಗಳಿಗೂ ನಾನು ಒಡೆಯನೇ ಆಗಿದ್ದ ಪಕ್ಷದಲ್ಲಿ, ನನ್ನ ಬ್ರಹ್ಮಚರ್ಯ, ಸತ್ಯನಿಷ್ಠೆ, ಐಶ್ವರ್ಯಗಳ ಪ್ರಭಾವದಿಂದ ಸತ್ತ ಈ ಬಾಲಕನು ಬದುಕಲಿ'' ಆ ತಕ್ಷಣವೇ ಮೃತಪ್ರಾಯವಾಗಿ ಬಿದ್ದಿದ್ದ ಆ ಶಿಶುವು ಭಗವಾನ್ ಶ್ರೀಕೃಷ್ಣಪರಮಾತ್ಮನ ಈ ಅದ್ಭುತ ಪ್ರತಿಜ್ಞೆಯ ಫಲವಾಗಿ ಬದುಕಿತು.

ಸ್ವಸಂಭವಂ ಕೃಷ್ಣಮವೇಕ್ಷಮಾಣೋ ಬಂಧು ಪ್ರಸೂತಂ ಚ ಬಲಂ ವ್ರಜೇಶಃ।
ನಿಸರ್ಗಮೈತ್ರ್ಯಾಂ ನಿಯತೈಕ ಭಾವೌ ನ್ಯಯುಂಕ್ತತೌ ವತ್ಸಕುಲಾನಿ ಗೋಪ್ತುಂ ॥೬೫॥

ತನ್ನ ಮಗನಾಗಿ ಕೃಷ್ಣನನ್ನು, ತನ್ನ ಸ್ನೇಹಿತರಾದ ವಸುದೇವನ ಮೊದಲ ಮಗನಾದ ಬಲರಾಮನನ್ನು ನೋಡಿ ತನಗೆ ವಿಧೇಯರಾಗಿರುವರೆಂದು ನೆನೆದು ಗೋಕುಲೇಶನಾದ ನಂದನು ಬಹುವಾದ ಸ್ನೇಹದಿಂದ ಒಂದೇ ಮನಸ್ಸಿನವನಾದ ಆ ಇಬ್ಬರನ್ನೂ ಕರುಗಳ ಸಮೂಹವನ್ನು ಕಾಯಲು ಕಳುಹಿಸಿದನು.

ಮುಂದೆ ಶ್ರೀಕೃಷ್ಣ ಬಲರಾಮರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸುವ ಉದ್ದೇಶದಿಂದ, ನಂದಗೋಪನು ಅವರಿಬ್ಬರನ್ನೂ ಹಸು ಕರುಗಳ ಮೇಲ್ವಿಚಾರಣೆಯನ್ನು ಒಪ್ಪಿಸಿ, ಹಸುಗಳನ್ನು ಕಾಯಲು ಕಾಡಿಗೆ ಕಳುಹಿಸಿದನು. ಶ್ರೀಕೃಷ್ಣನಿಗೆ ಸ್ವಭಾವತಃ ಹಸುಕರುಗಳಲ್ಲಿ ವಿಶೇಷ ಪ್ರೀತಿ. ಆದ್ದರಿಂದ ಅವರನ್ನೇ ಆ ಕೆಲಸಕ್ಕೆ ನಿಯಮಿಸಿದರೆ, ಅವರು ಇನ್ನೂ ಚೆನ್ನಾಗಿ ಅವುಗಳನ್ನು ನೋಡಿಕೊಳ್ಳುವರೆಂಬ ಭರವಸೆಯಿಂದ ನಂದಗೋಪನು ಅವರಿಬ್ಬರನ್ನೂ ಹಸುಕರುಗಳ ಮೇಲ್ವಿಚಾರಕರನ್ನಾಗಿ ನಿಯಮಿಸಿದನು.

ಅನನ್ಯ ತಂತ್ರಃ ಸ್ವಯಮೇವ ದೇವಾನ್ ಪದ್ಮಾಸನಾದೀನ್ ಪ್ರಜನಯ್ಯ ರಕ್ಷನ್।
ಸರಕ್ಷಕಃ ಸೀರಭೃತಾ ಸಹಾಽಽಸೀತ್ ನೇತಾ ಗವಾಂ ನಂದ ನಿಯೋಗವರ್ತೀ ॥೬೬॥

ಒಬ್ಬರಿಗೊಬ್ಬರು ಅಧೀನವಾಗಿರುವುದರಿಂದ, ತಾನೇ ಪದ್ಮಾಸನನೇ ಮೊದಲಾಟದ ದೇವತೆಗಳನ್ನು ಪಡೆದು ಕಾಪಾಡುವ ಸರ್ವೇಶ್ವರನು ನಂದನ ಆಜ್ಞೆಗೆ ಒಳಪಟ್ಟು ಬಲರಾಮನ ಜೊತೆಯಲ್ಲಿ ಹಸುಗಳನ್ನು ಕಾಯುವವನಾದನು.

ಜಗತ್ತೆಲ್ಲವನ್ನೂ ಚತುರ್ಮುಖ ಬ್ರಹ್ಮನ ಸಹಿತ ರಕ್ಷಿಸುವವನು ಪರಮಾತ್ಮನು. ತಾನಾಗಿಯೇ ಎಲ್ಲರನ್ನೂ ಕಾಪಾಡತಕ್ಕವನು. ಅಂತಹವನನ್ನು ಈಗ ನಂದಗೋಪನು ಹಸುಗಳನ್ನು ಕಾಪಾಡಲು ನಿಯಮಿಸಿದ್ದಾನೆಂದರೆ, ಇದು ನಿಜವಾಗಿಯೂ ವಿಡಂಬನೆಯೇ ಸರಿ. ಅವತಾರ ಕಾಲಗಳಲ್ಲಿ ಲೋಕ ಕ್ಷೇಮಾರ್ಥವಾಗಿ ಭಗವಂತನು ಎಂತೆಂತಹ ನಾಟಕಗಳನ್ನು ಮಾಡುತ್ತಾನೆ! ಈಗ ತಾವು ನಂದನ ಆಜ್ಞೆಗೆ ಒಳಪಟ್ಟವನಂತೆ ಅವನ ಆಜ್ಞಾಧಾರಕರಾಗಿ, ಗೋವುಗಳನ್ನು ಕಾಯಲು ಹೊರಟಿದ್ದಾರೆ ಆ ಬಾಲಕರು.

ಕಥಂ ವ್ರಜೇಚ್ಛರ್ಕರಿಲಾನ್ ಪ್ರದೇಶಾನ್ ಪದ್ಭ್ಯಾಮಸೌ ಪಲ್ಲವ ಕೋಮಲಾಭ್ಯಾಮ್।
ಇತಿ ಸ್ನುತ ಸ್ತನ್ಯರಸಾ ಯಶೋದಾ ಚಿಂತಾರ್ಣವೇ ನ ಪ್ಲವಮನ್ವವಿಂದತ್ ॥೬೭॥

ಕೋಮಲವಾಗಿರುವ, ತಾವರೆಯಂತಿರುವ ತನ್ನ ಪುಟ್ಟ ಪಾದಗಳನ್ನು ಕಲ್ಲು ಮುಳ್ಳು ತುಂಬಿದ ಸ್ಥಳಗಳಲ್ಲಿ ಹೇಗೆ ಇಟ್ಟುಕೊಂಡು ಬಹಳ ದೂರ ನಡೆಯುತ್ತಾನೋ ಎಂದು ದುಗುಡ ತುಂಬಿದ ಎದೆಯಿಂದ ಕೂಡಿದ ಯಶೋದೆಯು ಚಿಂತೆಯ ಸಮುದ್ರದಲ್ಲಿ ಇರುತ್ತಿದ್ದಳು.

ಯಶೋದೆಗೆ ಚಿಂತೆ. ಸುಕೋಮಲವಾದ ತನ್ನ ಇಬ್ಬರು ಮಕ್ಕಳು ಮೃದವಾದ ಪಾದಗಳನ್ನು ಹೇಗೆ ಕಲ್ಲು ಮುಳ್ಳು ತುಂಬಿದ ನೆಲದಲ್ಲಿ ಬರಿಗಾಲಿನಲ್ಲಿ ನಡೆಯುತ್ತಾ ಕಷ್ಟಪಡುತ್ತಾರೋ? ಅವರಿಗೇಕೆ ಈ ಕಷ್ಟವನ್ನು ನಂದಗೋಪರು ವಿಧಿಸಿದ್ದಾನೆ! ಎಂದು ಪರಿತಪಿಸುತ್ತಿದ್ದಳು. (ಮಾತೃ ಸಹಜವಾದ ಚಿಂತೆ).

ವಿಹಾರ ವಿತ್ರಾಸಿತ ದುಷ್ಟ ಸತ್ವೌ ಮೃಗೇಂದ್ರ ಪೋತಾವಿವ ಧೀರ ಚೇಷ್ಟೌ ।
ಬಭೂವತುಃ ಶಾಶ್ವತಿಕೇನ ಭೂಮ್ನಾ ಬಾಲೌ ಯುವಾನಾವಿವ ತೌ ಬಲಾಢ್ಯೌ ॥೬೮॥

ಅವರುಗಳು ಚಿಕ್ಕವರಾಗಿಯೂ, ಧೈರ್ಯಶಾಲಿಗಳಾಗಿಯೂ, ಕುಂದದ ಮಹಿಮೆ ಯುಳ್ಳವರಾಗಿ, ಕೆಲಸಗಳನ್ನು ಸಾಧಿಸುವವರಾಗಿದ್ದು ಎಳೆಯ ಸಿಂಹಗಳಂತೆ ಎಲ್ಲಾ ದುಷ್ಟ ಮೃಗಗಳನ್ನು ಲೀಲೆಯಿಂದಲೇ ಓಡಿಸುವವರಾಗಿ, ತಮ್ಮ ಕರ್ತವ್ಯವನ್ನು ನಿರ್ವಹಿಸು ತ್ತಿದ್ದರು.

ಅವರಿಬ್ಬರ ಕರ್ತವ್ಯ ನಿರ್ವಹಣೆಯಲ್ಲಿ ಯಾವ ಲೋಪವೂ ಇರುತ್ತಿರುತ್ತಿರಲಿಲ್ಲ. ಲೀಲಾಜಾಲವಾಗಿ ಎಲ್ಲಾ ದುಷ್ಟಮೃಗಗಳನ್ನು ದೂರಕ್ಕೆ ಓಡಿಸಿ, ಗೋವುಗಳ ಸಂರಕ್ಷಣೆ ಮಾಡುತ್ತಿದ್ದರು. ಬಲಾಢ್ಯರಾಗಿಯೂ, ಯೌವನಸ್ಥರಾಗಿದ್ದ ಅವರು, ಪರಬ್ರಹ್ಮದ ಸ್ವರೂಪಗಳೇ ಆಗಿದ್ದರಿಂದ, ನಿರ್ಭೀತರಾಗಿ, ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಾ, ತಂದೆಗೆ ಅತ್ಯಂತ ಸಂತೋಷವುಂಟುಮಾಡಿ ಸರಿಯಾದ ಅರ್ಥದಲ್ಲಿ ಪುತ್ರರೆನಿಸಿಕೊಂಡರು.

ಸಿಂಧೂರಿತೌ ವತ್ಸಪರಾಗಜಾಲೈಃ ಸಿತಾಸಿತೌ ಬಾಲಗಜಾವಿವ ದ್ವೌ ।
ಉದಾರ ಲೀಲಾ ವುಪಲಕ್ಷ್ಯ ಗೋಪ್ಯಃ ಸರ್ವಾಸ್ತದಾ ಅನನ್ಯವಶಾ ಬಭೂವುಃ ॥೬೯॥

ಕರುಗಳ ಕಾಲಿನ ಧೂಳಿನಿಂದ ತೋಯಲ್ಪಟ್ಟು ಸಿಂಧೂರದಂತೆ ಎರಚಿದಂತೆ ತೋರುತ್ತಾ, ಕಪ್ಪು-ಬಿಳುಪು ಎರಡು ಆನೆಗಳಂತೆ, ಅದ್ಭುತವಾಗಿ ಆಟವಾಡುತ್ತಾ ಬರುತ್ತಿರುವ ಆ ಇಬ್ಬರನ್ನೂ ಕಂಡು ಗೋಪಿಗಳು ಪರಸ್ಪರ ವಶೀಕರಿಸಲ್ಪಟ್ಟರು.

ಹಸುಕರುಗಳ ಕಾಲಿನ ಧೂಳಿನಿಂದ ಸಂಪೂರ್ಣವಾಗಿ ಆವರಿಸಲ್ಪಟ್ಟಿದ್ದ ಅವರನ್ನು ಕಂಡು ಗೋಪಸ್ತ್ರೀಯರೆಲ್ಲರೂ ಅಮಿತಾನಂದಪಟ್ಟರು.

ಗೋಪಾಯಮಾನೇ ಪುರುಷೇ ಪರಸ್ಮಿನ್ ಗೋರೂಪತಾಂ ವೇದಗಿರೋ ಭಜಂನ್ತ್ಯಃ ।
ಭವ್ಯೈ ರಸೇವಂತ ಪದಂ ತದೀಯಂ ಸ್ತೋಭ ಪ್ರತಿಚ್ಛಂದ ನಿಭೈಃ ಸ್ವಶಬ್ದೈಃ ॥೭೦॥

ತಮ್ಮನ್ನು ಕಾಯುವ ಪರಮ ಪುರುಷನು ಗೊಲ್ಲನಾಗಿರುವಾಗ ವೇದ ವಾಕ್ಕುಗಳು ತಾವು ಹಸುಗಳಾಗಿ ತಮ್ಮ 'ಅಂಬಾ' ಎಂಬ ಕೂಗಿನಿಂದ ಅವನ ಪಾದಾರವಿಂದಗಳನ್ನು ಮುಟ್ಟಿ ನಮಸ್ಕರಿಸಿದವು. ಅದು ವೇದಗಳು ಸಾಮಗಾನದ ಸಮಯದಲ್ಲಿ ಹೇಳುವ "ಹಾಂ, ಹೂಂ" ಎಂಬ ಶಬ್ದಗಳಂತೆ. ಭಗವಂತನ ಅಡಿದಾವರೆಗಳಲ್ಲಿ ತಮ್ಮನ್ನು ಅರ್ಪಣ ಮಾಡಿಕೊಳ್ಳುವಂತಿತ್ತು.

ಹಸುಗಳ 'ಅಂಬಾ' ಧ್ವನಿಯು ವೇದವಾಕ್ಕಿನಂತೆ ಇತ್ತು. ಸಾಮವೇದ ದಲ್ಲಿ 'ಹಾ ಊಹಾ ಉಹಾ ಊ' ಎಂಬ ಸ್ವರಗಳು ಬರುತ್ತವೆ. ಆ ಹಸುಗಳ 'ಅಂಬಾ' ಧ್ವನಿಯು ವೇದಪುರುಷ ನಾದ ಭಗವಂತನಿಗೆ ಸಾಮವೇದವನ್ನು ಹಾಡುವಂತೆ ಇತ್ತು. ಬಹಳ ಸುಂದರ ವಾದ ಉಪಮೆ.

ಅಬಾಲಿಶೋ ಬಾಲಿಶವತ್ ಪ್ರಜಾನಾಂ ಪ್ರಖ್ಯಾಪಯನ್ ಆತ್ಮನಿ ಪಾರತಂತ್ರ್ಯಂ।
ನ್ಯದರ್ಶಯನ್ ವಿಶ್ವಪತಿಃ ಪಶೂನಾಂ ಬಂಧೇ ಚ ಮೋಕ್ಷೇ ಚ ನಿಜಂ ಪ್ರಭುತ್ವಂ ॥೭೦॥

ಸರ್ವ ಸ್ವಾಮಿಯಾದ ಶ್ರೀಕೃಷ್ಣನು ತಾನು ನಿಜವಾಗಿಯೂ ಏನೂ ಅರಿಯದವನಂತೆ ಪ್ರಜೆಗಳಿಗೆ ತೋರುತ್ತಾ, ಅಮಾಯಕರಾದ ಹಸುಗಳನ್ನು ಕಟ್ಟುವುದು, ಬಿಡುವುದು ಮುಂತಾದ ಕೆಲಸಗಳನ್ನು ಮಾಡುವವನಾಗಿ, ಪಶುಗಳೆಂದು ಕರೆಯಲ್ಪಡುವ ಜೀವರುಗಳಿಗೆಲ್ಲಾ ಬಂಧವನ್ನೂ ಮೋಕ್ಷವನ್ನು ಕೊಡುವುದು ತನ್ನ ಅಧೀನವೆಂಬುದನ್ನು ಉದಾಹರಣವಾಗಿ ತೋರಿಸಿದನು.

ಶ್ರೀಕೃಷ್ಣನು ಕಾಡಿನಲ್ಲಿ ಹಸು ಕರುಗಳೊಡನೆ ಆಟವಾಡುತ್ತಾ, ಅವುಗಳಿಗೆ ಕಟ್ಟಿರುವ ಗಂಟನ್ನು ಬಿಚ್ಚುವುದು, ಮತ್ತೆ ಕಟ್ಟುವುದು ಇತ್ಯಾದಿ ಚೇಷ್ಟೆಗಳನ್ನು ಮಾಡುತ್ತಿದ್ದನು. ಎಲ್ಲರ ಸಂಸಾರ ಬಂಧಗಳನ್ನೂ ಬಿಚ್ಚುವವನೂ, ಅವನೇ, ಕಟ್ಟುವವನೂ, ಅವನೇ. ನಾವೆಲ್ಲರೂ ಪಶುಗಳೇ. ಅವನೇ ನಿಜವಾದ ಅರ್ಥದಲ್ಲಿ ಪಶುಪತಿ. ತಾನು ಅಮಾಯಕನಂತೆ ನಟಿಸುತ್ತಾ ವಿಧವಿಧವಾದ ಆಟಗಳನ್ನು ಆಡಿದನು.

ಆತ್ಮೋಪಮರ್ದೇ ಅಪ್ಯನುಮೋದಮಾನಾ ಆತ್ಮಾಧಿಕಂ ಪಾಲಯತಶ್ಚವತ್ಸಾನ್।
ಗಾವಸ್ತದಾನಿಂ ಮನಘಾಮವಿಂದನ್ ವಾತ್ಸಲ್ಯ ಶಿಕ್ಷಾಮಿವ ವಾಸುದೇವಾತ್ ॥೭೧॥

ಕಾಲಿನಿಂದ ತುಳಿದು, ನಾಲಿಗೆಯಿಂದ ತನ್ನನ್ನು ನೆಕ್ಕಿದರೂ, ಆ ಕರುಗಳ ಪ್ರೀತಿಯನ್ನು ಕಂಡು ಕೊಂಡಾಡುವವನೂ, ತನಗಿಂತ ಹೆಚ್ಚಿಗೆ ಕರುಗಳನ್ನು ಕಾಪಾಡುವವನಾದ, ಕೃಷ್ಣನು ಆಶ್ರಿತ ವಾತ್ಸಲ್ಯವೆಂಬ ಗುಣವನ್ನು ಹೊಂದಿ ಇತರರಿಗೆ ಶಿಕ್ಷಕನಂತಾದನು.



ಶ್ರೀಕೃಷ್ಣನಿಗೆ ಕರುಗಳ ಮೇಲಿರುವ ಪ್ರೀತಿ ಹೇಳಲಸಾಧ್ಯ. ಆ ಕರುಗಳು ಪ್ರೀತಿಯಿಂದ ಏನು ಮಾಡಿದರೂ ಎಲ್ಲವನ್ನೂ ಮಾಡಿಸಿಕೊಳ್ಳಲು ಶ್ರೀಕೃಷ್ಣನು ಸಿದ್ಧನಿದ್ದನು.

''**ಪಶುಪಿಶಿಶುಭಿಃ ಸಾಕಂ ವತ್ಸಾನುಪಾಲನ ಲೋಲುಪಃ**'' ಎಂದು 'ನಾರಾಯಣೀಯಂ'ನಲ್ಲಿ ನಾರಾಯಣ ಭಟ್ಟಾದ್ರಿಗಳು ಹೇಳುತ್ತಾರೆ. ನಮ್ಮ ಶ್ರೀಕೃಷ್ಣನು ಪಶುಗಳನ್ನು ಲಾಲಿಸುವುದರಲ್ಲಿ ಅತ್ಯಂತ ಮಗ್ನನಾಗಿದ್ದನು.

ಯೋ ಅಸಾವನಂತ ಪ್ರಮುಖೈರನಂತೈಃ ನಿರ್ವಿಶ್ಯತೆ ನಿತ್ಯ ಮನಂತಭೂಮಾಃ।
ವೈಮಾನಿಕಾನಾಂ ಪ್ರಥಮಃ ಸ ದೇವೋ ವತ್ಸೈರಲೇ ಲಿಹ್ಯತ ವತ್ಸಲಾತ್ಮಾ ॥೭೩॥

ಅನಂತ ವಿಷ್ವಕ್ಸೇನ ಗರುಡಾದಿಗಳಾದ ನಿತ್ಯಸೂರಿಗಳಿಂದ ಅಪಾರವಾದ ವೈಭವವನ್ನು ಹೊಂದಿರುವ ಯಾವನು ಅನುಭವಿಸುವನೋ, ವಿಮಾನಗಳಲ್ಲಿ ಸಂಚರಿಸುವ ದೇವತೆಗಳಿಗೆಲ್ಲಾ ಮೊದಲನೇಯವನಾದ ಆ ದೇವ ದೇವನೇ ವಾತ್ಸಲ್ಯಕ್ಕೆ ವಶಪಟ್ಟು ಕರುಗಳಿಂದ ನಾಲಿಗೆಯಿಂದ ನೆಕ್ಕಿಸಿಕೊಳ್ಳುತ್ತಿದ್ದನು.

ಹಸುಗಳಿಂದ ನೆಕ್ಕಿಸಿಕೊಳ್ಳಲ್ಪಡುವುದೇನೆಂದರೆ ಅದೊಂದು ಅವರ್ಣನೀಯವಾದ ಆನಂದ ಶ್ರೀಕೃಷ್ಣನಿಗೆ. **'ಯಥಾ ಧೇನು ಸ್ರವತಿ ಸ್ನೇಹಿತ ವತ್ಸಸ್ಯ ವತ್ಸಲಾ'** ಎಂಬಂತೆ ಆ ಕರುಗಳು ನಮ್ಮ ಕೃಷ್ಣನ ದೇಹವನ್ನು ವಾತ್ಸಲ್ಯದಿಂದ ನೆಕ್ಕುತ್ತಿದ್ದವು. ಕೃಷ್ಣನನ್ನೂ ಕರುವೆಂದೇ ಭಾವಿಸಿ, ತಾಯಿ ಹಸುವು ನೆಕ್ಕುತ್ತಿತ್ತು. ಭಗವಂತನೂ ಹಾಗೆಯೇ ನಮ್ಮ ಪಾಪಗಳನ್ನು ವಾತ್ಸಲ್ಯದಿಂದ ನೆಕ್ಕುತ್ತಾನೆ' ಎಂದು ಸ್ವಾಮಿ ದೇಶಿಕರು 'ದಯಾಶತಕ'ದಲ್ಲಿ ಹೇಳಿದ್ದಾರೆ.

ವನಭೋಜನ



ಮಹೀಯಸಾ ಮಂಡಿತ ಪಾಣಿ ಪದ್ಮಂ
ದಧ್ಯನ್ನ ಸಾರೇಣ ಮಧುಪ್ಲುತೇನ।
ದೃಷ್ಟ್ವಾ ನನಂದುಃ ಕ್ಷುದಯಾನ್ವಿತಾಸ್ತಂ
ವತ್ಸಾನುಚರ್ಯಾಸು ವಯಸ್ಯ ಗೋಪಾಃ ॥೭೪॥

ಕರುಗಳನ್ನು ಮೇಯಿಸಲು ಹಿಂದೆ ಹೋಗುವ ಸಮಯದಲ್ಲಿ ಸ್ನೇಹಿತರಾದ ಗೋಪ ಹುಡುಗರು ಹಸಿವಿನಿಂದ ಬಳಲಿದಾಗಲೆಲ್ಲಾ ಚೆನ್ನಾಗಿ ಸ್ವಾದುವಾಗಿ ಉಳ್ಳ ಮೊಸರನ್ನವನ್ನು ತನ್ನ ದಿವ್ಯವಾದ ಕರಾರವಿಂದಗಳಲ್ಲಿ ಇಟ್ಟುಕೊಂಡಿರುವ ಆ ಸ್ವಾಮಿಯನ್ನು ಕಂಡು ಎಲ್ಲರೂ ಸಂತೋಷಿಸಿದರು.

ತನ್ನ ಸ್ನೇಹಿತರೆಲ್ಲರಿಗೂ ಹಸಿವಾಗುತ್ತದೆಂಬುದನ್ನು ಚೆನ್ನಾಗಿ ಅರಿತಿದ್ದ ಸ್ವಾಮಿಯು, ಯಶೋದೆಯನ್ನು ಮೊದಲೇ ಕೇಳಿ, ಎಲ್ಲರಿಗೂ ಸಾಕಾಗುವಷ್ಟು ಮೊಸರನ್ನವನ್ನು ಕಲಸಿಟ್ಟು ತನ್ನ ಬಳಿ ಇಟ್ಟುಕೊಂಡು, ಅವರು ಬಳಲಿದಾಗಲೆಲ್ಲಾ ಅವರಿಗೆ ಅದನ್ನೂ ನೀಡಿ, ತಾನೂ ತಿಂದು, ವನ-ಭೋಜನ ಮಾಡಿ ಸಂತೋಷಿಸುತ್ತಿದ್ದನು. ಅವನ ಮುಂದಾಲೋಚನೆಯನ್ನು ನೋಡಿ ಎಲ್ಲರೂ ಆಶ್ಚರ್ಯ-ಆನಂದಪಟ್ಟರು.

ಸ್ವಾದೂನಿ ವನ್ಯಾನಿ ಫಲಾನಿ ತೈಸ್ತೈಃ ಸ್ನಿಗ್ಧೈರುಪಾನೀಯ ನಿದರ್ಶಿತಾನಿ।
ರಾಮಾಯ ಪೂರ್ವಂ ಪ್ರತಿಪಾದ್ಯ ಶೇಷೈಃ ಸ ಪಿಪ್ರಿಯೆ ಸಾದರ ಭುಜ್ಯಮಾನೈಃ ॥೭೫॥

ಆಯಾಯ ಸ್ನೇಹಿತರುಗಳು ಸ್ನೇಹದಿಂದ ಕಾಡಿನಲ್ಲಿ ಸಿಗುವ ಸಿಹಿಯಾದ ಹಣ್ಣುಗಳನ್ನು ತಿಂದು ''ಇದು ಚೆನ್ನಾಗಿದೆ... ಇದು ಚೆನ್ನಾಗಿದೆ'' ಎಂದು (ಶ್ರೀಕೃಷ್ಣನು ತಿನ್ನಬೇಕೆಂದು)

ತೋರಿಸುವಾಗ, ಅವುಗಳನ್ನು ಪಡೆದು, ಮೊದಲು ಅಣ್ಣನಾದ ಬಲರಾಮನಿಗೆ ನೀಡಿ, ಅವನು ಭುಜಿಸಿದ ನಂತರ ಮಿಕ್ಕ ಶೇಷವನ್ನು ಇತರರೊಡಗೂಡಿ, ತಾನೂ ಭುಜಿಸಿ ಆನಂದ ಪಡೆದನು.

ದೊಡ್ಡವರನ್ನು ಗೌರವಿಸುವುದರಲ್ಲಿ ಶ್ರೀಕೃಷ್ಣನನ್ನು ಮೀರಿಸಿದವರಿಲ್ಲ. ಮೊದಲು ತನ್ನಣ್ಣನಿಗೆ ನೀಡಿ, ಅವನೂ ಅದನ್ನು ಭುಜಿಸಿದ ಮೇಲೆ ನಂತರ ತಾನೂ, ತನ್ನ ಸ್ನೇಹಿತರೂ ಜೊತೆಯಾಗಿ ಕುಳಿತು ಸ್ವೀಕರಿಸುತ್ತಿದ್ದನು. "**ಏಕ ಸ್ವಾದು ನ ಭುಂಜೀಥಾ, ಭುಂಜೀಥ್ಯೆ ದಶಬಿಃ ಸಹ**" 'ಹಣ್ಣನ್ನು ಹಂಚಿ ತಿನ್ನಬೇಕು' ಎಂಬ ನಾಣ್ನುಡಿಯಂತೆ ಎಲ್ಲರಿಗೂ ಹಣ್ಣನ್ನು ನೀಡಿ, ನಂತರ ತಾನು ಭುಜಿಸುತ್ತಿದ್ದನು. ತಾನು ಸರ್ವೇಶ್ವರನೆಂದು ಅರಿತಿದ್ದರೂ ಶಾಸ್ತ್ರ ಮರ್ಯಾದೆಯನ್ನು ಮೀರುತ್ತಿರಲಿಲ್ಲ.

ತಾಭ್ಯಾಂ ತದಾನಂದ ನಿದೇಶಿತಾಭ್ಯಾಂ ರಕ್ಷಾವತೀಂ ರಾಮ ಜನಾರ್ದನಾಭ್ಯಾಂ।
ವಿಶೇಷ ಭೋಗ್ಯಾಮಭಜತ್ ವಿಭೂತೀಂ ವೃಂದಾವನಂ ವ್ಯಾಪೃತ ಧೇನುಬೃಂದಂ॥೭೩॥

ಆವಾಗ ನಂದನ ಆಜ್ಞೆಗೊಳಪಟ್ಟು ನಡೆದು ಬರುವ ರಾಮ ಕೃಷ್ಣರೆಂಬ ಇಬ್ಬರಿಂದ ಕಾಪಾಡಲ್ಪಡುವ ಎಲ್ಲರಿಂದಲೂ ಸಂತೋಷದಿಂದ ಅನುಭವಿಸಲ್ಪಡಬೇಕಾದ ವೈಭವ ವನ್ನು ಹೊಂದಿ, ಎಲ್ಲ ಕಡೆಯೂ ಆನಂದದಿಂದ ಓಡಿಯಾಡುವ ಹಸುಕರುಗಳಿಂದ ಕೂಡಿ ಬೃಂದಾವನವು ವಿಜಂಭಿಸುತ್ತಿತ್ತು. (ಎಲ್ಲರೂ ಹೊಗಳುವ ಹಾಗೆ)

ಬೃಂದಾವನವು ಶ್ರೀಕೃಷ್ಣ-ರಾಮರ ಸಾನ್ನಿಧ್ಯದಿಂದ ಅತ್ಯಂತ ಉತ್ಸಾಹದಿಂದ ಕಂಗೊಳಿಸು ತ್ತಿತ್ತು. ಎಲ್ಲರೂ ಬೃಂದಾವನದ ಸೌಭಾಗ್ಯವನ್ನು ಹೊಗಳುವವರೇ! ಹಸುಗಳು ಸಂತೋಷದಿಂದ ಸ್ವೇಚ್ಛೆಯಾಗಿ, ನಿರ್ಭಯವಾಗಿ ಓಡಾಡುತ್ತಾ ಕೃಷ್ಣನ ಸಾನ್ನಿಧ್ಯವು ಭಗವಂತನ ವೈಕುಂಠದಂತೆ ಇದ್ದು ಅತ್ಯಂತ ದಷ್ಟಪುಷ್ಟಗಳಾದವುಗಳಾಗಿದ್ದು ಸಮೃದ್ಧಿಯಾಗಿ ಹಾಲನ್ನು ಕೊಡುತ್ತಿದ್ದವು.

ಅಗಾಧ ಕಾಸಾರ ಮಹೀನ ಶಷ್ಪಮತೀಕ್ಷ್ಣ ಸೂರ್ಯಂ ತದ ಚಂಡವಾತಂ।
ಪ್ರಚ್ಛಾಯ ನಿದ್ರಾಯಚ ಧೇನು ವತ್ಸಂ ಪ್ರೌಢೇ ನಿದಾಗೇಽಪಿ ಬಭೂವ ಭೋಗ್ಯಂ॥೭೭॥

ಆ ಬೃಂದಾವನವಾದುದು ಸಮೃದ್ಧವಾಗಿ ಶೋಭಿಸುತ್ತಿತ್ತು. ತೀಕ್ಷ್ಣವಾದ, ಹಿತವಾದ ಸೂರ್ಯ ಕಿರಣಗಳಿಂದಲೂ, ಚೆನ್ನಾಗಿ ಬೀಸುವ ಗಾಳಿಯಿಂದಲೂ ಸಂತೋಷವಾಗಿ ವಿಹರಿಸುವ ಹಸುಕರುಗಳಿಂದಲೂ, ಆ ಪ್ರದೇಶವು ಭೋಗ್ಯವಾಗಿತ್ತು.

ಬೃಂದಾವನದ ವರ್ಣನೆ ಮುಂದುವರೆದಿದೆ. ಬೃಂದಾವನವು ಮತ್ತೊಂದು ಸ್ವರ್ಗವೇನೋ ಎಂಬಂತಿತ್ತು. ಯಮುನೆಯ ತೀರ. ಸುತ್ತಮುತ್ತಲಿನ ಗುಡ್ಡಗಾಡು ಪ್ರದೇಶಗಳು, ಅದ್ಭುತ ಪ್ರಕೃತಿ ಸೌಂದರ್ಯ. ಇವು ವೃಂದಾವನವನ್ನು ಸಂಪದ್ಭರಿತವನ್ನಾಗಿ ಮಾಡಿದ್ದವು. ಈಗಲೂ ಸಹ ಬೃಂದಾವನವು ಅದೇ ವನಸಿರಿಯನ್ನು ಸ್ವಲ್ಪ ಮಟ್ಟಿಗೆ ಉಳಿಸಿಕೊಂಡಿದೆ. ಬೃಂದಾವನದಲ್ಲಿ ಓಡಿಯಾಡಿದರೆ ಅಲೌಕಿಕ ಆನಂದ ಸಿಗುತ್ತದೆ.

ನ ವ್ಯಾಧಿ ಪೀಡಾ ನ ಚ ದೈತ್ಯ ಶಂಕಾ ನಾಸೀತ್ ಗವಾಂ ವ್ಯಾಘ್ರ ಭಯಂ ಚ ತಸ್ಮಿನ್ ।
ಸ್ವಬಾಹು ಕಲ್ಪೇನ ಬಲೇನ ಸಾರ್ಧಂ ನಾರಾಯಣೇ ರಕ್ಷತಿ ನಂದ ಲಕ್ಷ್ಮೀಂ ॥೭೮॥

ನಾರಾಯಣನೇ ಪರ್ವತಗಳನ್ನು ಹೋಲುವ ತನ್ನ ಭುಜಗಳಿಂದ ನಂದಗೋಪನ ಆ ಬೃಂದಾವನವನ್ನು ಕಾಪಾಡುವಾಗ, ವ್ಯಾಧಿಯಿಂದ ಬಾಧಿಸಲ್ಪಡುವವರಾಗಲೀ, ಅಸುರರಿಂದ ಬಾಧಿಸಲ್ಪಡುವವರಾಗಲೀ, ಕಾಡುಮೃಗಗಳಿಂದ ಭಯವಾಗಲೀ ಅಲ್ಲಿರುವವರಿಗೂ ಹಾಗೂ ಹಸುಕರುಗಳಿಗೂಇರಲೇ ಇಲ್ಲ.

ರಾಮರಾಜ್ಯದ ವರ್ಣನೆಯಂತಿದೆ. ಬೃಂದಾವನದಲ್ಲಿ ಯಾವ ದೋಷವೂ ಇರಲಿಲ್ಲ. ರೋಗ-ರುಜಿನ, ಬಡತನ, ಕಾಡುಮೃಗಗಳ ಭಯ ಯಾವುದೂ ಬೃಂದಾವನದಲ್ಲಿ ಇರಲಿಲ್ಲ. ಸಾಕ್ಷಾತ್ ಸರ್ವೇಶ್ವರನೇ ಇದ್ದಲ್ಲಿ ಕೊರೆಗಳು ಇರಲು ಸಾಧ್ಯವೇ? ಅಷ್ಟಾಕ್ಷರ ಮಂತ್ರ ಜಪ ಮಾಡುವ ಸ್ಥಳಗಳಲ್ಲೂ ಸಹ ಈ ರೀತಿಯ ಫಲ ಸಿದ್ಧಿ ಉಂಟಾಗುತ್ತದೆಂದು ಹೇಳುತ್ತಾರೆ.

ನಿರೀತಯಸ್ತೇ ನಿರಪಾಯವಾಂಭಾಃ ನಿಶ್ರೇಯಸಾದಪ್ಯಧಿಕ ಪ್ರಮೋದಾಃ।
ಪ್ರಪೇದಿರೇS ಪೂರ್ವಯುಗಾನುಭೂತಿಂ ಗೋಪಾಸ್ತದಾ ಗೋಪ್ತರಿ ವಾಸುದೇವೆ ॥೭೯॥

ಆವಾಗ ವಾಸುದೇವನು ಕಾಯುತ್ತಿದ್ದುದರಿಂದ ಅಧಿಕ ಮಳೆಯೋ ಅಥವಾ ಮಳೆಯಿಲ್ಲದ ಕ್ಷಾಮವೋ ಇತ್ಯಾದಿ ಇತಿ ಬಾಧೆಗಳು ಯಾವುವೂ ಇಲ್ಲದೆ, ಕೃತಯುಗಕ್ಕಿಂತ ಮೇಲಾದ ಯುಗದಲ್ಲಿದ್ದಂತೆ ಬೃಂದಾವನದಲ್ಲಿದ್ದ ಗೋಪಾಲಕರೆಲ್ಲರೂ ಅನುಭವ ಪಡೆದರು.

ಕೃತಯುಗದಲ್ಲಿ ಎಲ್ಲವೂ ಸರಿಯಾಗಿ ಆಯಾಕಾಲಕ್ಕೆ ತಕ್ಕಂತೆ ನಡೆಯುತ್ತಿತ್ತೆಂದು ಪುರಾಣಗಳಲ್ಲಿ ಹೇಳಿದೆ. ದ್ವಾಪರ ಯುಗದಲ್ಲೂ ಸಹ ಧರ್ಮವು ಎರಡು ಕಾಲು ನಿಂತಿದ್ದಾಗ್ಯೂ ಶ್ರೀಕೃಷ್ಣನ ಪ್ರಭಾವದಿಂದ ಕೃತಯುಗವನ್ನೇ ಹೋಲುತ್ತಿತ್ತು. ಎಲ್ಲರೂ ಅಧಿಕ ಸಂತೋಷದಿಂದ ನಲಿದಾಡುತ್ತಿದ್ದರು.

ವತ್ಸಾನುಚರ್ಯಾ ಚತುರಸ್ಯ ಕಾಲೇ ವಂಶಸ್ವನೈಃ ಕರ್ಣಸುಧಾಂವಿಧಾತುಃ।
ಗತಾಗತ ಪ್ರಾಣದಶಾಮವಿಂದನ್ ಗೋಪೀ ಜನಾಸ್ತಸ್ಯ ಗತಾಗತೇಷು ॥೮೦॥

ಕರುಗಳನ್ನು ಮೇಯಿಸಿದ ನಂತರ ಪ್ರೀತಿಯಿಂದ ಅವುಗಳ ಸಂತೋಷಾರ್ಥವಾಗಿ ಕಿವಿಗೆ ಇಂಪಾದ ಕೊಳಲ ಗಾನವನ್ನು ಮಾಡುವವನಾದ ಶ್ರೀಕೃಷ್ಣನು ಕಾಡಿಗೆ ಹೋಗುವುದು, ಬರುವುದು, ಮಾಡುತ್ತಿದ್ದಾಗ, ಗೋಪಸ್ತ್ರೀಯರ ಪ್ರಾಣಗಳೆಲ್ಲವೂ ಅವನ ಹಿಂದೆಯೇ ಹೋಗುವುದು, ಬರುವುದು ಮಾಡುತ್ತಿದ್ದವು.

ಗೋಪಸ್ತ್ರೀಯರೆಲ್ಲರೂ ತಮ್ಮ ಪ್ರಾಣಗಳನ್ನು ಶ್ರೀಕೃಷ್ಣನಲ್ಲಿಯೇ ಸಮರ್ಪಿಸಿಬಿಟ್ಟಿದ್ದರು. ಕ್ಷಣ ಕಾಲವೂ ಸಹ ಅವನ ವಿರಹವನ್ನು ಸಹಿಸುತ್ತಿರಲಿಲ್ಲ. ಅವನು ಹಸುಕರುಗಳ ಹಿಂದೆ ಕಾಡಿಗೆ ಹೋಗುವುದು, ಬರುವುದು ಮಾಡುತ್ತಿದ್ದಾಗಲೂ, ಅವರ ಮನಸ್ಸು ಅವನ ಮೇಲೂ, ಅವನ ಮನಸ್ಸು ಅವರ ಮೇಲೂ ಇರುತ್ತಿತ್ತು. ಪರಸ್ಪರ ಆಕರ್ಷಣೆ.

ಆಘ್ರಾತ ವರ್ತ್ಮಾನ ಮರಣ್ಯಭಾಗೇಷ್ವಾರಣ್ಯಕೈರಾಶ್ರಿತ ಧೇನುಭಾವೈಃ।
ಕೇನಾಪಿ ತಸ್ಯಾಪಹೃತಂ ಕಿರೀಟಂ ಪ್ರತ್ಯಾಹರನ್ ಪ್ರೈಕ್ಷತ ಪತ್ರಿನಾಥಃ ॥೮೧॥
ದೇವಸ್ಯ ದುಗ್ಧೋದಶಯಸ್ಯ ದೈತ್ಯಾ ದ್ವೈರೋಚನಾದ್ದ್ವಾಲ ಭುಜೋಪನೀತಃ।
ಕೃಷ್ಣಸ್ಯ ಮೌಳಾ ಕೃತ ಬರ್ಹಚೂಡೇ ನ್ಯಸ್ತಃ ಕಿರೀಟೋ ನಿಬೀಡಿ ಬಭೂವ ॥೮೨॥

ಯಾರೋ ಒಬ್ಬನಿಂದ ಭಗವಂತನ ಕಿರೀಟವು ಅಪಹರಿಸಲ್ಪಟ್ಟಿತು. ಅರಣ್ಯದಲ್ಲಿ ಪಠಿಸಲ್ಪಡುವ ವೇದಗಳೇ ಹಸುಗಳಾಗಿ ಅರಣ್ಯದಲ್ಲಿ ಬಗೆಬಗೆಯಾಗಿ ಶ್ರೀಕೃಷ್ಣನು ಓಡಾಡುವ ಜಾಗಗಳನ್ನು ನೋಡಿರುವುದರಿಂದ ಆ ದಾರಿಯಲ್ಲಿ ಶ್ರೀಕೃಷ್ಣನನ್ನು ನೋಡಿ ಗರುಡನು ಆಶ್ಚರ್ಯಗೊಂಡನು. ಪುರಾಣದಲ್ಲಿ ಒಂದು ಕಥೆ ಬರುತ್ತದೆ.

ಪ್ರಹ್ಲಾದನ ತಂದೆ ವಿರೋಚನನೆಂಬುವನು. ಅವನು ಕ್ಷೀರಸಮುದ್ರದಲ್ಲಿ ಭಗವಂತನಿಗೆ ಕೈಂಕರ್ಯವನ್ನು ಮಾಡಿಕೊಂಡಿದ್ದವನು. ಅಲ್ಲಿ ಬೇರೆ ಯಾರೂ ಇಲ್ಲದ ಸಮಯದಲ್ಲಿ ಭಗವಂತನು ಯೋಗ ನಿದ್ರೆ ಮಾಡುತ್ತಿದ್ದಾಗ, ವಿರೋಚನನಿಗೆ ಒಂದು ಕೆಟ್ಟ ಯೋಚನೆ ಪ್ರಾಪ್ತವಾಯಿತು. ಅದರಂತೆ ಭಗವಂತನ ಕಿರೀಟವನ್ನು ತೆಗೆದುಕೊಂಡು ಪಾತಾಳ ಲೋಕಕ್ಕೆ ಓಡಿ ಹೋದನು. ಅನಂತರ ಅಲ್ಲಿಗೆ ಬಂದ ಅನೇಕ ಮುನಿವರರು, ಭಗವಂತನು ಶಿರಸ್ಸಿನಲ್ಲಿ ಕಿರೀಟವಿಲ್ಲದುದನ್ನು ನೋಡಿ, ಅಲ್ಲಿ ಹಿಂದೆ ಇದ್ದ ವಿರೋಚನನೇ ಆ ಕಿರೀಟವನ್ನು ಅಪಹರಿಸಿರ ಬೇಕೆಂದು ನಿಶ್ಚಯಿಸಿದರು. ಅವರೆಲ್ಲರೂ ಗರುಡ ಭಗವಾನನನ್ನು ಕಂಡು, ಆ ಕಿರೀಟ ಎಲ್ಲಿದೆ? ಎಂಬುದನ್ನು ಕಂಡು ಹಿಡಿದು, ಅದನ್ನು ಹೇಗಾದರೂ ಮಾಡಿ ವಾಪಸ್ ತರಬೇಕೆಂದು ಪ್ರಾರ್ಥಿಸಿದರು.

ಒಡನೆಯೇ ಗರುಡ ಭಗವಾನನು ಪಾತಾಳ ಲೋಕಕ್ಕೆ ಹೋಗಿ ವಿರೋಚನ ನೊಡನೆ ಯುದ್ಧ ಮಾಡಿ, ಅವನನ್ನು ಗೆದ್ದು ಕಿರೀಟವನ್ನು ಹಿಂದಕ್ಕೆ ತಂದನು. ಗರುಡನು ವಿರೋಚನ ನೊಡನೆ ಹೋರಾಡಿದ ಸಂದರ್ಭದಲ್ಲಿ, ವಿರೋಚನನು ಪ್ರಯೋಗಿಸಿದ ಅಸ್ತ್ರಗಳಿಂದ ಗರುಡನಿಗೆ ಅನೇಕ ರೀತಿಯ ಗಾಯಗಳುಂಟಾದವು. ಇದಲ್ಲದೆ ಅಮೃತವನ್ನು ತರುವಾಗ, ಇಂದ್ರನ ವಜ್ರಾಯುಧದ ಏಟುಗಳೂ ಸಹ ಗರುತ್ಮಾನನ ಶರೀರದಲ್ಲಿ ಗಾಯಗಳನ್ನು ಉಂಟುಮಾಡಿದ್ದವು.

ಆ ಮೇಲೆ ಆ ಕಿರೀಟವನ್ನು ಎತ್ತಿಕೊಂಡು ಆಕಾಶ ಮಾರ್ಗದಲ್ಲಿ ಗರುಡನು ಬಂದನು. ಆಗ ಭೂಲೋಕದಲ್ಲಿ ಭಗವಂತನು ಕೃಷ್ಣನಾಗಿ ಅವತರಿಸಿ ಬೃಂದಾವನದಲ್ಲಿ ಗೋಪಾಲಕ ರೊಡನೆ, ಹಸುಗಳೊಡನೆ ನವಿಲುಗರಿಯನ್ನು ತಲೆಗೆ ಸಿಕ್ಕಿಸಿಕೊಂಡು ಆಟವಾಡುತ್ತಿದ್ದನು. ಅವನ ದಿವ್ಯ ತೇಜಸ್ಸನ್ನು ಕಂಡು ತಕ್ಷಣ ಅವನೇ ಪರಮಾತ್ಮನೆಂದು ಭಾವಿಸಿ, ಗರುಡನು ಶ್ರೀ ಕೃಷ್ಣನ ದಿವ್ಯ ಚರಣಾರವಿಂದಗಳಲ್ಲಿ ಆ ಶ್ರೇಷ್ಠವಾದ ಕಿರೀಟವನ್ನು ಸಮರ್ಪಿಸಿದನು. ಆ ಕಿರೀಟವು ಕ್ಷೀರ ಸಮುದ್ರದಂತೆ ಬಹಳ ಶ್ರೇಷ್ಠವಾಗಿತ್ತು. ಮತ್ತು ದೊಡ್ಡದಾಗಿತ್ತು.

ಆ ಕಿರೀಟವು ಚಿಕ್ಕವನಾಗಿದ್ದ ಶ್ರೀ ಕೃಷ್ಣನ ಶಿರಸ್ಸಿಗೆ ಹೇಗೆ ಸರಿ ಹೊಂದೀತು ? ಗರುಡನು ತನ್ನ ಶಿರಸ್ಸಿನಲ್ಲಿ ಅದನ್ನು ಇಟ್ಟ ತಕ್ಷಣ ಶ್ರೀ ಕೃಷ್ಣನು ತನ್ನ ಸಂಕಲ್ಪದಿಂದ ಆ ಕಿರೀಟವು ಸರಿಹೊಂದುವಂತೆ ಮಾರ್ಪಡಿಸಿ ಧರಿಸಿಕೊಂಡನು. ಶ್ರೀ ಕೃಷ್ಣನಿಗೆ ಎಲ್ಲಾ ಆಭರಣಗಳಿಗಿಂತಲೂ ನವಿಲುಗರಿಯೇ ಅತ್ಯಂತ ಪ್ರಿಯವಾದ ಮತ್ತು ಶ್ರೇಷ್ಠವಾದ ಆಭರಣ. ಈ ಕಿರೀಟಕ್ಕೂ ಸಹ ಅದು ಶೋಭೆಯನ್ನುಂಟುಮಾಡಿತು.

ಸಮಾಹಿತೈರಗ್ನಿಷು ಯಾಯಜೂಕೈರಾಧೀಯ ಮಾನಾನಿ ಹವೀಂಷಿ ಭೋಕ್ತಾ।
ಭಕ್ತೈಕಲಭ್ಯೋ ಭಗವಾನ್ ಕದಾಚಿತ್ ಪತ್ನೀಭಿರಾನೀತ ಮಭುಂಕ್ತ ಭೋಜ್ಯಂ ॥೮೩॥

ಶ್ರದ್ಧೆಯಿಂದ ಯಾಗಗಳನ್ನು ಮಾಡುವವರಿಂದ ಅಗ್ನಿಯಲ್ಲಿ ಹೋಮ ಮಾಡುವುದನ್ನು ಭುಜಿಸುವ ಭಗವಂತನು ಒಂದು ಬಾರಿ (ಹಸಿವಿನಿಂದ ಕಂಗಾಲಾಗಿದ್ದ ತನ್ನ ಸ್ನೇಹಿತರು ಅನ್ನವನ್ನು ಬಯಸಿದಾಗ ಯಾಗಗಳನ್ನು ಮಾಡುತ್ತಿದ್ದ ಬ್ರಾಹ್ಮಣರನ್ನು ಕೃಷ್ಣನು ಕೇಳಲಾಗಿ, ಅಪಾತ್ರದಲ್ಲಿ ಅದನ್ನು ಕೊಡಲು ಸಾಧ್ಯವಿಲ್ಲವೆಂದು ಬ್ರಾಹ್ಮಣರು ನಿರಾಕರಿಸಿದಾಗ, ಅವರಿಗೆ ತಿಳಿಯದಂತೆ ಬ್ರಾಹ್ಮಣ ಪತ್ನಿಯರನ್ನು ಶ್ರೀ ಕೃಷ್ಣನು ಕೇಳಿದಾಗ, ಭಗವಂತನ ಸೇವೆಗಿಂತ ಬೇರೆ ಯಾವ ಯಾಗವೂ ದೊಡ್ಡದಲ್ಲವೆಂದು ಆ ಋಷಿ ಪತ್ನಿಯರು ಭಾವಿಸಿ ಶ್ರೀಕೃಷ್ಣನಿಗೆ ಎಲ್ಲಾ ಪ್ರಸಾದವನ್ನೂ ನೀಡಿದಾಗ) ಅವರ ಭಕ್ತಿಯನ್ನು ಕಂಡು ಸಂತೋಷಿಸಿ, ತಾನು ಯಾಗದಲ್ಲಿ ಅಗ್ನಿಯ ಮೂಲಕ ಹವಿಸ್ಸನ್ನು ಭುಜಿಸಿದ ಹಾಗೆಯೇ ತೃಪ್ತಿಗೊಂಡನು. ಹಸಿದಿರುವ ತನ್ನ ಭಕ್ತರು ಭುಜಿಸಿದರೆ ತಾನು ಭುಜಿಸಿದಂತೆ ಭಾವಿಸುತ್ತಾನೆ ಪರಮಾತ್ಮ.

ಕರಾಂಬುಜ ಸ್ಪರ್ಶ ನಿಮೀಲಿತಾಕ್ಷಾನ್ ಆಮರ್ಶನೈ ರಾಕಲಿತಾರ್ಧನಿದ್ರಾನ್।
ವತ್ಸಾನ್ ಅನನ್ಯಾಭಿಮುಖಾನ್ ಸಮೇನೇ ಪ್ರಹ್ವಾಕೃತೀನ್ ಭಕ್ತಿಭರಾವ ನಮ್ರಾನ್॥೮೪॥

ತನ್ನ ಕೆಂದಾವರೆಯಂಥ ಕೈಯು ತಗುಲಿದಾಗ, ಸುಖವುಂಟಾದಾಗ ಕಣ್ಣನ್ನು ಮುಚ್ಚುವುದು, ಮೈಯ್ಯನ್ನು ತಡವಿದಾಗ, ಪುಳಕಿತಗೊಂಡು ಮುಖವನ್ನು ಬೇರೆಡೆಗೆ ತಿರುಗಿಸುವುದು ಮುಂತಾದುವನ್ನು ಮಾಡುವ ಕರುಗಳನ್ನು ಶ್ರೀಕೃಷ್ಣನು ತನ್ನನ್ನು ಭಕ್ತಿಯಿಂದ ಅನುಭವಿಸುವ ಮಹಾತ್ಮರುಗಳಂತೆ ಕಂಡನು.

ಮಹಾತ್ಮರುಗಳು ಯಾವ ರೀತಿ ತನ್ನನ್ನು ಭಕ್ತಿಯಿಂದ ಆರಾಧಿಸುತ್ತಾರೋ, ಅದೇ ರೀತಿ ಆ ಹಸುಕರುಗಳು ತನ್ನನ್ನು ಪ್ರೀತಿಯಿಂದ ನೆಕ್ಕಿ ತನ್ನ ದೇಹವನ್ನು ತಡವಿದಾಗ, ಆ ಭಕ್ತಿಯನ್ನು ಕಂಡು ಅವುಗಳನ್ನು ಅನುಗ್ರಹಿಸಿದನು. ಹಸುಕರುಗಳ ವಿವಿಧ ಚೇಷ್ಟೆಗಳೇ ಅವು ಅವನಿಗೆ (ಸರ್ವೇಶ್ವರನಿಗೆ ಮಾಡುವ ಆರಾಧನೆಗಳು) ತಾನೇ ಹಸುಕರುಗಳಲ್ಲಿ ಒಂದಾಗಿ ಅದ್ವೈತಾನುಭವ ವನ್ನು, ಆನಂದವನ್ನು ಅನುಭವಿಸಿದ್ದಾನೆ ಪರಮಾತ್ಮ.

ರೋಮಾಂಥ ಪೇನಾಂಜಿತ ಸೃಕ್ವಿಭಾಗೈ ರಸ್ಪಂದನೈರರ್ಧ ನಿಮೀಲಿತಾಕ್ಷೈಃ।
ಅನಾದೃತ ಸ್ತನ್ಯರಸೈರ್ಮುಕುಂದಃ ಕಂಡುಯಿತೈ ನಿರ್ವೃತಿ ಮಾಪವತ್ಸೈಃ ॥೮೫॥

ಶ್ರೀಕೃಷ್ಣನು ತನ್ನಿಂದ ತುರಿಸಲ್ಪಟ್ಟು, ಆ ಪರಮ ಸುಖದಲ್ಲಿ ಅಲ್ಲಾಡದೆ ಅರ್ಧ ಕಣ್ಣು ಮುಚ್ಚಿದವುಗಳಾಗಿ, ತಾಯಿಯ ಕೆಚ್ಚಲುಗಳಿಂದ ಹಾಲನ್ನು ಹೀರುತ್ತಾ ನೊರೆ ನೊರೆಯಾಗಿ ಜೊಲ್ಲನ್ನು ಸುರಿಸುತ್ತಾ ಆನಂದಿಸುವ ಕರುಗಳನ್ನು ಕಂಡು ತಾನೂ ಆನಂದವನ್ನು ಅನುಭವಿಸಿದನು.

ಕರುಗಳು ತಾಯಿ ಹಸುವಿನ ಕೆಚ್ಚಲುಗಳಿಂದ ಕಣ್ಣು ಮುಚ್ಚಿ ಹಾಲು ಕುಡಿಯುವುದನ್ನು ನೋಡುವುದೇ ಒಂದು ದಿವ್ಯವಾದ ಆನಂದ. ಆ ಆನಂದವನ್ನು ಗೋಪಾಲನಾದ ಶ್ರೀಕೃಷ್ಣನು ಅನುಭವಿಸಿ, ಅವುಗಳನ್ನು ಆನಂದಪಡಿಸಿ, ತಾನೂ ಆನಂದಿಸಿದ್ದಾನೆ. ಗೋಪಾಲನೆಂಬ ಹೆಸರು ಅವನಿಗೆ ಅನ್ವರ್ಥ ನಾಮವಾಗಿದೆ.

ಸಿಷೇವಿರೇ ಶಾದ್ವಲಿತಾನ್ ಪ್ರದೇಶಾನ್ ಕೃಷ್ಣಸ್ಯ ಧಾಮ್ನಾ ಮಣಿ ಮೇಚಕೇನ।
ವಸುಂಧರಾಯಾಮಪಿ ಕೇವಲಾಯಾಂ ವ್ಯಾಪಾರ ಯಂತೋ ವದನಾನಿ ವತ್ಸಾಃ॥೮೬॥

ಮರಕತ ಮಣಿಯ ಹಾಗೆ ಜ್ವಲಿಸುವ ಶ್ರೀಕೃಷ್ಣನ ಸ್ಪರ್ಶದಿಂದ ಹುಲ್ಲಿಲ್ಲದ ಪ್ರದೇಶಗಳಲ್ಲೂ ಹುಲ್ಲಿರುವಂತೆ ಭಾವಿಸಿ, ಕರುಗಳು ಮುಖವನ್ನು ಕೆಳಗೆ ಮಾಡಿ ಮೇಯಲು ಪ್ರಯತ್ನಿಸುವುದನ್ನು ಕಂಡು ಆ ಜಾಗವೆಲ್ಲಾ ಹುಲ್ಲಾಗುವಂತೆ ಮಾಡಿದನು.

ಹಸುಕರುಗಳು ಕೊಟ್ಟಿಗೆಯಿಂದ ಹೊರಕ್ಕೆ ಬಂದರೆ ಸಾಕು ಹುಲ್ಲನ್ನು ಮೇಯಲು ಆರಂಭಿಸಿ, ತಲೆಯನ್ನು ಕೆಳಗೆ ಹಾಕಿ ಹುಲ್ಲಿಗೆ ತಡಕಾಡುತ್ತವೆ. ಅವು ಹುಲ್ಲಿಗಾಗಿ ಹೆಚ್ಚು ದೂರ ಹೋಗುವ ಅವಶ್ಯಕತೆ ಇಲ್ಲವೆಂದು ಭಾವಿಸಿ, ಸ್ವಾಮಿಯು ಅವು ಇದ್ದ ಕಡೆಗಳಲ್ಲಿಯೇ, ತನ್ನ ದಿವ್ಯ ಸ್ಪರ್ಶದಿಂದ ಹಸಿರು ಹುಲ್ಲು ಯಥೇಚ್ಛವಾಗಿ ಬೆಳೆಯುವಂತೆ ಮಾಡಿದನು. ಆ ಹಸುಕರುಗಳ ಪ್ರೇಮಿಯಾದ ಸರ್ವೇಶ್ವರನು (ಅವನು ಅಘಟಿತ ಘಟನಾ ಸಾಮರ್ಥ್ಯವುಳ್ಳವನು).

ನವ ಪ್ರಸೂತಾಃ ಸತದಾ ವನಾಂತೆ ಪಯಸ್ವಿನೀ ರಪ್ರತಿಮಾನದೋಹಾಃ।
ಪರಿಭ್ರಮಶ್ರಾಂತಪದಾನ್ ಅದೂರಾತ್
ಪ್ರತ್ಯಾಗತಾನ್ ಪಾಯಯತೇ ಸ್ಮ ವತ್ಸಾನ್ ॥೮೭॥

ಕಾಡಿನಲ್ಲಿ ಹೊಸದಾಗಿ ಪ್ರಸವಿಸಿರುವ ಹಸುಗಳ ಬಳಿ ಹೆಚ್ಚಿನ ಹಾಲಿದ್ದರೂ, ಕರುಗಳಿಗೆ ಅದನ್ನು ಕೊಡದೆ, ಅವುಗಳನ್ನು ದೂರದಲ್ಲಿ ಕಟ್ಟಿ ಹಾಕುವಾಗ, ಶ್ರೀಕೃಷ್ಣನು ಅವುಗಳ ಕಟ್ಟನ್ನು ಬಿಚ್ಚಿ ತಾನೇ ತಾಯಂದಿರ ಬಳಿ ಕರೆದುಕೊಂಡು ಹೋಗಿ ಅವುಗಳಿಗೆ ಉಣಿಸುತ್ತಿದ್ದನು.

ಇದು ಮತ್ತೊಂದು ಕರುಣೆಯ ಆಟ. ಹೊಸದಾಗಿ ಕರುಗಳನ್ನು ಹಾಕಿರುವ ಹಸುಗಳ

ಬಳಿ, ಕರುಗಳನ್ನು ಹೆಚ್ಚಾಗಿ ಬಿಡುವುದಿಲ್ಲ. ಆದರೆ ಕರುಣಾ ಸಮುದ್ರನಾದ ಶ್ರೀಕೃಷ್ಣನು ಹಸುಗಳ ಕೆಚ್ಚಲಿನಲ್ಲಿ ಹಾಲು ತುಂಬಿರುವಾಗ, ಅದನ್ನು ಕರುಗಳಿಗೆ ಕೊಡದೆ ಹಿಂಸಿಸುತ್ತಾರಲ್ಲಾ ಎಂಬ ದಯೆಯಿಂದ, ನಿಷೇಧ ಮಾಡಿರುವ ಕರುಗಳ ಕಟ್ಟನ್ನೆಲ್ಲಾ ತಾನೇ ಹಿರಿಯರ ಆಜ್ಞೆ ಮೀರಿ ಬಿಚ್ಚಿ, ಹಸುಗಳ ಬಳಿ ಕರೆದುಕೊಂಡು ಹೋಗಿ, ಹಾಲನ್ನು ಕುಡಿಸಿ, ತಾನೂ ಆನಂದಪಡುತ್ತಿದ್ದನು. ಶ್ರೀಕೃಷ್ಣನ ಪ್ರಾಣಿ ವಾತ್ಸಲ್ಯ ಅಸಾಧಾರಣವಾದುದು. ದೇಶಕಾಲ ಗಳನ್ನು ಮೀರಿದುದು.

ನಿವಿಶ್ಯ ಮೂಲೇಷು ವನದ್ರುಮಾಣಾಂ ನಿದ್ರಾಯಿತಾನಾಂ ನಿಜತರ್ಣಕಾನಾಂ।
ಅಂಗಾನಿ ಗಾಃ ಸಾದರ ಮಾಲಿಹಂತೀ ರಮಸ್ತಂ ಸಂಭಾವ್ಯ ಗುಣಾಃ ಸ್ವಮಾತುಃ ॥೮೮॥

ಕಾಡಿನಲ್ಲಿ ಮರದ ಕೆಳಗೆ ವಿಶ್ರಮಿಸಿಕೊಳ್ಳುವ ತಮ್ಮ ಕರುಗಳ ಅಂಗಗಳನ್ನು ಪ್ರೀತಿಯಿಂದ ನೆಕ್ಕುವ ಹಸುಗಳನ್ನು ಕಂಡು ಕೃಷ್ಣನು ತನ್ನ ತಾಯಿಯು ತೋರಿಸುವ ವಾತ್ಸಲ್ಯ ಗುಣವೇ ಇದು ಭಾವಿಸಿಕೊಂಡನು.

ಹಸುಗಳು ಪ್ರೀತಿಯಿಂದ ತಮ್ಮ ಕರುಗಳ ಮೈಯ್ಯನ್ನು ನೆಕ್ಕುವುದನ್ನು ನೋಡಿ ತನ್ನ ತಾಯಿಯ ಮಾತೃವಾತ್ಸಲ್ಯದ ಪ್ರತೀಕವನ್ನು ಕೃಷ್ಣನು ಅಲ್ಲಿ ಕಂಡನು. ''ಆಲೀಹ್ಯ ತಾನ್ನಿರಮೇಷ ಅಲಬ್ಧತೃಪ್ತಿ'' ಎನ್ನುತ್ತಾರೆ ದಯಾಶತಕದಲ್ಲಿ ಸ್ವಾಮಿ ದೇಶಿಕರು. ಹಸು ಕರುವನ್ನು ಎಷ್ಟು ನೆಕ್ಕಿದರೂ ತೃಪ್ತಿಯಿಲ್ಲ. ಅದೇ ರೀತಿ ದಯಾದೇವಿಗೂ ನಮ್ಮ ಅಪರಾಧಗಳು ಎಷ್ಟಾದರೂ ಅವಳು ಅದನ್ನು ಪರಿಗಣಿಸುವುದಿಲ್ಲ.

ಸ ನೈಚಿಕಿಃ ಪ್ರತ್ಯಹಮಾತಪಾಂತೇ ಪ್ರತ್ಯುಕ್ತಘೋಷಾ ಇವ ವತ್ಸನಾದೈಃ।
ಮಧೂನಿ ವಂಶಧ್ವನಿಭೀಃ ಪ್ರಯಚ್ಛನ್ ನಿನಾಯ ಭೂಯೋಽಪಿ
ನಿವಾಸ ಭೂಮಿಂ ॥೮೯॥

ಅವನು ಪ್ರತೀದಿನವೂ ಸಾಯಂಕಾಲ ಕರುಗಳು ಕೂಗುವುದರಿಂದ ಅವುಗಳ ಕೂಗಿಗೆ ಪ್ರತಿಯಾಗಿ ಧ್ವನಿ ಕೊಡುವ ಹಸುಗಳನ್ನು ಅವುಗಳ ಕೊಟ್ಟಿಗೆಗೆ ತನ್ನ ಇಂಪಾದ ಕೊಳಲಿನ ಗಾನದೊಡನೆ ಕರೆದುಕೊಂಡು ಹೋಗಿ ಸೇರಿಸುತ್ತಿದ್ದನು.

ಶ್ರೀಕೃಷ್ಣನಿಗೆ 'ಗೋವಳ'ನೆಂದು ಹೆಸರು. ಹಸುಗಳ ಇಂಪಾದ ಸಾಯಂಕಾಲದ ''ಅಂಬಾ'' ಎಂಬ ಧ್ವನಿಗೆ ತನ್ನ ಕೊಳಲಿನ ಮಂಜುಳ ನಿನಾದವನ್ನು ಸೇರಿಸಿ, ಇನ್ನೂ ಇಂಪಾಗಿ ಮಾಡಿ, ಅವುಗಳನ್ನು ಅಟ್ಟಿಕೊಂಡು ಬಂದು ಕೊಟ್ಟಿಗೆಗಳಿಗೆ ಸೇರಿಸುವುದು ಅವನ ನಿತ್ಯದ ದಿನಚರಿ. ರಾಜಕುಮಾರನಾಗಿದ್ದೂ, ಅತ್ಯಂತ ಸಂತೋಷದಿಂದ ಈ ಕೆಲಸ ನಿರ್ವಹಿಸುತ್ತಿದ್ದನು. ಸಂಜೆಯ ಆ ವೇಣುನಾದ ಎಲ್ಲರನ್ನೂ ಸಂಪೂರ್ಣವಾಗಿ ವಿಮುಗೊಳಿಸುತ್ತಿತ್ತು. ಗೋವುಗಳು ಆ ಕೊಳಲಿನ ನಾದಕ್ಕೆ ಇನ್ನೂ ಹೆಚ್ಚು ಹೆಚ್ಚು ಹಾಲು ನೀಡುತ್ತಿದ್ದವು.

ಸಮಾವ್ರಜನ್ ವಿಶ್ವಪತಿರ್ವಜಾಂತಂ ಗೋಭಿಃ ಸಮಂ ಗೋಪ ವಿಲಾಸಿನೀನಾಂ।
ಉಲ್ಲಾಸಹೇತುಃ ಸ ಬಭೂವ ದೂರಾದುದ್ಯನ್ ವಿವಸ್ವಾನಿವ ಪದ್ಮಿನೀನಾಂ ॥೯೦॥

ಹಸುಗಳೊಡನೆ ಗೊಲ್ಲರ ಕೇರಿಗೆ ಬಂದು ಸೇರುವವನೂ, ಸರ್ವ ಸ್ವಾಮಿಯಾದ ಆ ಕೃಷ್ಣನು, ಯಾವ ರೀತಿ ತಾವರೆ ಹೂಗಳಿಗೆ ಸೂರ್ಯನು ಸಂತೋಷವನ್ನು ನೀಡುವನೋ ಅದೇ ರೀತಿ ಗೋಪಸ್ತ್ರೀಯರಿಗೆ ಉಲ್ಲಾಸವನ್ನು ಉಂಟು ಮಾಡುತ್ತಿದ್ದನು. ಗೋವುಗಳಿಗೆ ಯಾವ ರೀತಿ ಸಂತೋಷವನ್ನು ನೀಡುತ್ತಿದ್ದನೋ, ಅದೇ ರೀತಿ ಸಂಜೆಯ ಹೊತ್ತು, ಗೋಪ ಸ್ತ್ರೀಯರಿಗೂ ಸಂತೋಷವನ್ನು ಕೊಡುತ್ತಿದ್ದನು. ಅವನಿಗೆ ಹಸುಕರುಗಳು ಒಂದು ಅಂಗ ವಾದರೆ ಗೋಪಸ್ತ್ರೀಯರು ಮತ್ತೊಂದು ಅಂಗ. ಅವನು ಅವರನ್ನು ಬಿಟ್ಟು ಇರಲಾರ. ಅವು ಕೃಷ್ಣನನ್ನು ಬಿಟ್ಟು ಇರಲಾರವು. ಇಬ್ಬರೂ ಪರಸ್ಪರ ಅವಿಭಾಜ್ಯ ಅಂಗ.

ನಿವರ್ತಯನ್ ಗೋಕುಲ ಮಾತ್ತವಂಶೋ ಮಂದಾಯಮಾನೇ ದಿವಸೇ ಮುಕುಂದಃ।
ಪ್ರಿಯಾ ದೃಶಾಂ ಪಾರಣಯಾ ಸ್ವಕಾನ್ತ್ಯಾ ಬರ್ಹಾವೃತಂ ವ್ಯಾತನು ತೇವ ವಿಶ್ವಂ ॥೯೧॥

ಮೋಕ್ಷಾನಂದವನ್ನು ಕೊಡುವವನೂ, ಸಂಜೆಯಾದ ನಂತರ ಕೊಳಲನ್ನೂದಿಕೊಂಡೇ ಹಸು ಕರುಗಳನ್ನು ಗೋಕುಲಕ್ಕೆ ಹಿಂದಿರುಗಿ ತರುವವನೂ, ಪ್ರೇಮಿಗಳಾದ ಗೋಪಿಯರ ಕಣ್ಣುಗಳಿಗೆ ಪೂರ್ಣ ತೃಪ್ತಿಯನ್ನು ಕೊಡುವ ತನ್ನ ಸೌಂದರ್ಯದಿಂದ ಜಗತ್ತೆಲ್ಲವನ್ನೂ ವಶಪಡಿಸುವವನಾಗಿ ಬೆಳಗಿದನು ಶ್ರೀಕೃಷ್ಣ.

ಶ್ರೀಕೃಷ್ಣನ ನಯನ ಮನೋಹರ ರೂಪವನ್ನು ವರ್ಣಿಸುತ್ತಿದ್ದಾರೆ. **'ಮುಕ್ತಿಂ ದದಾತಿ ಇತಿ ಮುಕುಂದಃ'** ಎಂದು ಎಲ್ಲರಿಗೂ ಅಂತಿಮವಾಗಿ ಮೋಕ್ಷವನ್ನು ಕೊಡುವವನೂ ಅವನೇ. ಸಂಜೆಯಾದ ನಂತರ ವೇಣುಗಾನ ಮಾಡುತ್ತಾ ಹಸುಗಳನ್ನು ವಾಪಸ್ ಕಾಡಿನಿಂದ ಬೃಂದಾವನಕ್ಕೆ ಅಟ್ಟಿಕೊಂಡು ಬರುವವನಾದ ಆ ಸ್ವಾಮಿಯು ಗೋಪಸ್ತ್ರೀಯರ ಮನಸ್ಸನ್ನೆಲ್ಲಾ ಅಪಹರಿಸಿ, ಯಾವಾಗ ಕೃಷ್ಣನು ಬಂದು ಊರನ್ನು ಸೇರುವನೋ ಎಂದು ತವಕ ಪಡುವಂತೆ ಮಾಡುತ್ತಿದ್ದನು. ಅವರ ಕಣ್ಣುಗಳು ಶ್ರೀಕೃಷ್ಣನನ್ನು ಕಂಡು ಧನ್ಯತಾಭಾವವನ್ನು ಪಡೆದವು.

ಬಾಲಂ ತರುಣ್ಯಸ್ತರುಣಂ ಚ ಬಾಲಾ ಸ್ತಮನ್ವತರಜ್ಜಂತ ಸಮಾನ ಭಾವಾಃ।
ತದದ್ಭುತಂ ತಸ್ಯ ವಿಲೋಭನಂ ವಾ ತಸ್ಯೇವ ಸರ್ವಾಹರ ಸಾತ್ಮತಾ ವಾ ॥೯೨॥

ಚಿಕ್ಕವಯಸ್ಸಿನಲ್ಲಿ ಇರುವವನನ್ನು ಯೌವನದಲ್ಲಿರುವ ಸ್ತ್ರೀಯರು ಯೌವನಸ್ಥನನ್ನು ಚಿಕ್ಕವರು ಎಲ್ಲರೂ ಹೊಗಳುವ ಹಾಗೆ ಇರುವವನಾದವನಿಗೆ ಎಲ್ಲರೂ ಮನಸೋತರು. ಈ ರೀತಿಯಾದ ಅವನ ಕಾರ್ಯವು ಮಾಯೆಯೋ ಅಥವಾ ಎಲ್ಲರೂ ಅನುಭವಿಸುವ ಹಾಗೆ ಮಾಡಿದ ಅವನ ದಿವ್ಯ ಮಂಗಳ ವಿಗ್ರಹದ ಸೌಂದರ್ಯವೋ ಗೊತ್ತಾಗಲಿಲ್ಲ. ಎಲ್ಲರೂ ಆನಂದವನ್ನು ಅನುಭವಿಸಿದರು.

ಅವನ ಆ ಒಂದು ಮಾಯೆಯನ್ನು ಯಾರೂ ಅರಿಯಲು ಸಾಧ್ಯವಾಗಲಿಲ್ಲ. ಅವನು ಚಿಕ್ಕವನೋ, ದೊಡ್ಡವನೋ ಒಂದನ್ನೂ ಅರಿಯದೆ, ಅವನ ದಿವ್ಯಮಂಗಳ ವಿಗ್ರಹದಲ್ಲಿ ಮಾತ್ರ ಎಲ್ಲರೂ ತನ್ಮಯರಾಗಿ, ಆನಂದದ ಪರಾಕಾಷ್ಠೆಯನ್ನು ತಲುಪಿದರು. "**ಮಧುರಾಧಿಪತೇತ್ ಅಖಿಲಂ ಮಧುರಂ**" ಎನ್ನುವ ರೀತಿ.

ಅವೇದಿಷಾತಾಂ ಪೃಥುಕೌ ಪಿತೃಭ್ಯಾಂ ತಾರುಣ್ಯಪೂರ್ಣೌ ತರುಣೀ ಜನೇನ ।
ವೃದ್ಧೌ ಪುರಾವೃತ್ತ ವಿಶೇಷ ವಿದ್ಭಿಃ ಕ್ಲ್ಪ್ತೇಂದ್ರ ಜಾಲಾವಿವ ರಾಮಕೃಷ್ಣೌ ॥೯೩॥

ಬಲರಾಮನೂ, ಕೃಷ್ಣರಿಬ್ಬರೂ ಇಂದ್ರಜಾಲ ಮಾಡುವವರ ಹಾಗೆ ಒಬ್ಬರಿಗೊಬ್ಬರು ವಿಧವಿಧವಾಗಿ ತೋರಿದರು. ತಾಯಿ ತಂದೆಗಳು ಈ ಮಕ್ಕಳಿಗೆ ಚಿಕ್ಕವರೆಂದು ಯೌವನ ದಲ್ಲಿರುವ ಹುಡುಗಿಯರು ಯೌವನವನ್ನು ತುಂಬಿರುವರೆಂದೂ, ಅವತಾರ ರಹಸ್ಯವನ್ನು ತಿಳಿದ ಎಲ್ಲಾ ಹಿರಿಯರ ಮೂಲಕವಾಗಿ ಇವರು ಪುರಾಣ ಪುರುಷರೆಂದು ಅರಿತರು.

ಇವರಿಬ್ಬರೂ ಸಾಮಾನ್ಯ ಮಾನವರಲ್ಲ. ಅವತಾರ ಪುರುಷರೇ ಇರಬೇಕೆಂದು ಆ ವೃಂದಾವನವಾಸಿಗಳೆಲ್ಲರೂ ನಿಶ್ಚಯಿಸಿದರು. ಮಕ್ಕಳಿಗೆ ಮಕ್ಕಳಂತೆಯೂ, ಯೌವನಸ್ಥರಿಗೆ ಯೌವನದಲ್ಲಿ ಇರುವವರಂತೆಯೂ, ಹಿರಿಯರಿಗೆ ಪುರಾಣ ಪುರುಷರಂತೆಯೂ, ತೋರುತ್ತಾ, ಎಲ್ಲರನ್ನೂ ಅವರವರ ವಯಸ್ಸಿಗೆ ತಕ್ಕಂತೆ ಗೌರವಿಸುತ್ತಾ, ಎಲ್ಲರೊಡನೆಯೂ ಆನಂದದಿಂದ ಕಾಲ ಕಳೆಯುತ್ತಿದ್ದ ಆ ಬಲರಾಮನೂ, ಕೃಷ್ಣರಿಬ್ಬರೂ ಎಲ್ಲರ ಕಣ್ಮಣಿಗಳಾಗಿ ಬಿಟ್ಟಿದ್ದರು.

ಅಥಾ ಪದಾನಂ ಮದನಸ್ಯ ದಾತು ಮಾದಾತು ಮಾಲೋಕಯತಾಂ ಮನಾಂಸಿ ।
ನವಂ ವಯೋ ನಾಥ ಸಮಂ ಪ್ರಪೇದೇ ಗುಣೋತ್ತರಂ ಗೋಪಕುಮಾರಿಕಾಭಿಃ॥೯೪॥

ನಾಥನಾದ ಕಣ್ಣನು ಯೌವನವನ್ನು ಹೊಂದಿದೊಡನೆ ಅವನೊಡನೆ ಅವತರಿಸಿದ ಗೋಪ ಕನ್ನಿಕೆಯರು ಮನ್ಮಥನ ಪರಾಕ್ರಮಕ್ಕೆ ಒಳಪಟ್ಟು ಯೌವನದಲ್ಲಿ ಕಾಣಿಸಿಕೊಳ್ಳುವ ಗುಣವಿಶೇಷಗಳನ್ನು ಹೊಂದಿ, (ಕಾಂತಿ, ಸೌಂದರ್ಯ, ಸೌಕುಮಾರ್ಯ, ಇತ್ಯಾದಿ) ಅವನಿಗೆ ಸಮನಾಗಿ ಬೆಳಗಿದರು.

ಸ್ತ್ರೀಯರಲ್ಲಿ ಯೌವನದ ಚಿಹ್ನೆಗಳು ಬೇಗ ತೋರುತ್ತವೆ. ಅಂತೆಯೇ ಗೋಪಿಕಾ ಸ್ತ್ರೀಯರೆಲ್ಲರೂ ಯೌವನಕ್ಕೆ ಕಾಲಿಡುತ್ತಿದ್ದಂತೆಯೇ ಅವರಿಗೆ ಕೃಷ್ಣನಲ್ಲಿ ವಿಶೇಷ ಅನುರಾಗ ಪ್ರಾಪ್ತವಾಗಲು ಆರಂಭವಾಯಿತು.

ಬಾಲ್ಯದ ಅನುರಾಗ ಬೇರೆ. ಯೌವನದ ಅನುರಾಗ ಬೇರೆ. ಯೌವನದಲ್ಲಿ ಪ್ರೇಮ ತುಂಬಿದ ಅನುರಾಗ. ಶ್ರೀಕೃಷ್ಣನು ಸ್ವಲ್ಪ ವಯಸ್ಸಿಗೆ ಬಂದೊಡನೇ ಅವನಲ್ಲಿ ಅಂತಹ ಪ್ರೇಮ ಅನುರಾಗ ಗೋಪಿಕಾ ಸ್ತ್ರೀಯರಿಗೆ ಪ್ರಾಪ್ತವಾಯಿತು.

ಅನಂಗ ಸಿಂಧೋರಮೃತ ಪ್ರಥಿಮ್ನಾ ರಸಸ್ಯ ದಿವ್ಯೇನ ರಸಾಯನೇನ।
ಮಹೀಯಸೀಂ ಪ್ರೀತಿ ಮವಾಪ ತಾಸಾಂ ಯೋಗೀ ಮಹಾನ್
ಯೌವನ ಸಂಭವೇನ ॥ ॥೯೫॥

ಯೋಗೇಶ್ವರನಾದ ಭಗವಂತನು ಮನ್ಮಥನ ಸಮುದ್ರದಲ್ಲಿ ಅಮೃತದಂತಹ ಆನಂದ ವನ್ನೋ, ಶೃಂಗಾರ ರಸದಿಂದ ಕೂಡಿರುವ ದೇವಲೋಕದ ರಸಾಯನವೆಂಬ ಔಷಧವೋ ಎಂಬಂತಿರುವ ತನ್ನ ಸೌಂದರ್ಯದಿಂದ ಅವರುಗಳ ಯೌವನವನ್ನೂ ಇನ್ನೂ ಹೆಚ್ಚಾಗಿ ಬೆಳಗಿಸಿದನು.

ಶ್ರೀಕೃಷ್ಣನನ್ನು ನೋಡುತ್ತಿದ್ದಂತೆಲ್ಲಾ ಅವರ ಅನುರಾಗ ಹೆಚ್ಚುತ್ತಾ ಹೆಚ್ಚುತ್ತಾ ಶೃಂಗಾರ ರಸದತ್ತ ಹೊರಳಿತು. ಮನ್ಮಥನ ಪ್ರಭಾವಕ್ಕೆ ಗೋಪಸ್ತ್ರೀಯರೂ ಒಳಗಾದರು. ಶೃಂಗಾರ ವೆಂಬುದು ಎಲ್ಲಾ ರಸಗಳಲ್ಲೂ ಶ್ರೇಷ್ಠವಾದುದು. ಭರ್ತೃಹರಿ ತನ್ನ ಶೃಂಗಾರ ಶತಕದಲ್ಲಿ "**ವಿಶ್ವಾಮಿತ್ರ ಪರಾಶರ ಪ್ರಭೃತಯೋ ವಾತಾಂಬು ಪರ್ಣಶನಾ**" ಮನ್ಮಥನ ಬಾಣಗಳಿಗೆ ಸಿಲುಕದವರೇ ಅತಿ ವಿರಳ ಎಂದಿದ್ದಾರೆ.

ವಿಜೃಂಭಮಾಣ ಸ್ತನ ಕುಟ್ಮಲಾನಾಂ ವ್ಯಕ್ತೋನ್ಮಿಷಾದ್ವಿಭ್ರಮ ಸೌರಭಾಣಾಂ।
ಮಧುವ್ರತತ್ವಂ ಮಧುರಾಕೃತೀನಾಂ ಲೇಭೇ ಲತಾನಾಮಿವ ವಲ್ಲವೀನಾಂ ॥೯೬॥

ಅವರ ಸ್ತನಗಳ ತುದಿಗಳ ಮೇಲೆ, ವಾಸನೆಯ ಹೂಗಳಿಗೆ ಮುತ್ತುವ ಭ್ರಮರಗಳಂತೆ ಶ್ರೀಕೃಷ್ಣನ ದೃಷ್ಟಿಯು ನೆಟ್ಟಿದ್ದು ಅದರಿಂದ ಅವರ ಶೃಂಗಾರ ರಸವು ಹೆಚ್ಚಿ ಒಳಗೊಳಗೆ ಆನಂದಿಸಿತು.

ಶ್ರೀಕೃಷ್ಣನು ಅವರುಗಳ ಕಡೆಗೆ ಕಡೆಗಣ್ಣಿನಿಂದ ನೋಡುವಾಗ, ಅವನ ದೃಷ್ಟಿಯು ಗೋಪಸ್ತ್ರೀಯರ ಸ್ತನಗಳ ತುದಿಯ ಮೇಲೆ ನೆಟ್ಟಿತ್ತು. ಅದನ್ನು ಕಂಡು ಅವರು ಲಜ್ಜಿತರಾಗಿ ಲಜ್ಜೆಯಿಂದ ಅವನ ಕೆನ್ನೆಯ ರಂಗೇರಿ, ಇನ್ನೂ ಸುಂದರಿಯರಾಗಿ ಕಂಡರು. ಸ್ತ್ರೀಲೋಲನಾದ ಕೃಷ್ಣನ ಶೃಂಗಾರ ಚೇಷ್ಟೆಗಳಿಗೆ ಮಿತಿಯೇ ಇಲ್ಲ. ಇದರಲ್ಲೆಲ್ಲಾ ವೇದಾಂತಾರ್ಥ ಅಡಗಿದೆ. ಭಕ್ತಿಯು ಸಹ ಒಂದು ರೀತಿಯ ಶೃಂಗಾರ ರಸವೇ.

ಅತಿ ಪ್ರಸಂಗಾದವಧೀರಯನ್ತ್ಯಾ ಪ್ರಾಚೀನಯಾ ಸಂಯಮಿತೋ ನಿಯತ್ಯಾ।
ಪಾಂಚಾಲ ಕನ್ಯಾಮಿವ ಪಂಚಭುಕ್ತಾಂ ಧರ್ಮಃ ಸತೀರಾಧೃತ ತಾದೃಶೀಸ್ತಾಃ ॥೯೭॥

ಗೋಪಸ್ತ್ರೀಯರಿಗೆ ತಮ್ಮ ಗಂಡಂದಿರ ಹತ್ತಿರ ಇರುವ ಹಾಗೆ ಕೃಷ್ಣನ ಹತ್ತಿರವೂ ತಮ್ಮ ಪಾತಿವ್ರತ್ಯವು ನಾಶವಾಗದ ಹಾಗೆ ಪ್ರೇಮವಿತ್ತು. ಭಗವಂತನ ಹತ್ತಿರ ಭಕ್ತರು ನಡೆದುಕೊಳ್ಳುವ ಧರ್ಮವೇ ಬೇರೆಯಾದುದು. ಯಾವ ರೀತಿ ದ್ರೌಪದಿಯು ಪಂಚ ಪಾಂಡವರೊಡನೆ ಇದ್ದೂ ಪತಿವ್ರತೆಯೆನಿಸಿಕೊಂಡಳೋ ಆ ರೀತಿ.

ಶ್ರೀಕೃಷ್ಣನು ಗೋಪಸ್ತ್ರೀಯರೊಡನೆ ಒಡನಾಡಿದ್ದನ್ನು ಅನೇಕರು ಅಪಾರ್ಥವಾಗಿ ಭಾವಿಸುವುದುಂಟು. 'ಸ್ತ್ರೀಲೋಲ' 'ಜಾರ' ಇತ್ಯಾದಿಯಾಗಿ ಅವನನ್ನು ಅವಹೇಳನ ಮಾಡುವುದುಂಟು. ಆದರೆ ಇಲ್ಲಿಯ ಪ್ರಸಂಗವೇ ಬೇರೆ. ಪ್ರೀತಿ ಮಾಡುವವನು ಸಾಕ್ಷಾತ್ ಸರ್ವೇಶ್ವರನೇ ಆದ್ದರಿಂದ. ಇಲ್ಲಿ ತುಚ್ಛವಾದ ಕಾಮಕ್ಕೆ ಅವಕಾಶವಿಲ್ಲ. ಕೇವಲ ತುಚ್ಛವಾದ ಕಾಮಕ್ಕೆ ಅವಕಾಶವಿಲ್ಲ. ಕೇವಲ ಪವಿತ್ರ ಪ್ರೇಮವಷ್ಟೆ. ಭಗವಂತನಾದ ಶ್ರೀಕೃಷ್ಣನೇ ತಮ್ಮ ಸರ್ವಸ್ವ ಎಂದು ಭಾವಿಸಿದ್ದರು ಗೋಪಿಯರು.

ದಿಶಾಗಜಾನಾಮಿವ ಶಾಕ್ವರಾಣಾಂ ಶೃಂಗಾಗ್ರ ನಿರ್ಭಿನ್ನ ಶಿಲೋಚ್ಚಯಾನಾಂ।
ಸತಾದೃಶ ಬಾಹುಬಲೇನ ಕಂಠಾನ್ ನಿಪೀಡ್ಯಲೇಭೇ ಪಣಿತೇವ ನೀಲಾಂ ॥೯೮॥

ಅಷ್ಟೇ ಅಲ್ಲ, ಅವನು ಬಾಲ್ಯದಲ್ಲಿಯೇ ತಮ್ಮ ಕೊಂಬಿನ ತುದಿಯಿಂದ ಕಲ್ಲಿನ ಮಳೆಗಳನ್ನು ತಡೆದವುಗಳೂ, ದಿಗ್ಗಜಗಳಂತೆ ಇದ್ದ, ಏಳು ವಷಭಗಳನ್ನು, ತನ್ನ ಅಗಾಧ ಭುಜಬಲದಿಂದ ಅವುಗಳ ಸೊಕ್ಕನ್ನು ಅಡಗಿಸಿ, ಪಣವಾಗಿ ಇಟ್ಟಿದ್ದ 'ನಪ್ಪಿನ್ನೈ'ಯನ್ನು ಗೆದ್ದವನಾಗಿದ್ದನು.

ಇನ್ನು ಮುಂದೆ ನಪ್ಪಿನ್ನೈಯ ಪ್ರಕರಣ. ಆಂಡಾಳ್ ತನ್ನ 'ತಿರುಪ್ಪಾವೈ' ಗ್ರಂಥದಲ್ಲಿ ಶ್ರೀಕೃಷ್ಣನು ನಪ್ಪಿನ್ನೈಯನ್ನು ವರಿಸಿದುದಾಗಿ ಹೇಳಿದ್ದಾಳೆ. ಬಾಲ್ಯದಲ್ಲಿಯೇ ಅವರ ವಿವಾಹ ನಡೆಯಿತು. ಏಳು ವೃಷಭಗಳನ್ನು ಗೆಲ್ಲಬೇಕಾಗಿದ್ದ ಪಂಥದಲ್ಲಿ ಶ್ರೀಕೃಷ್ಣನು ಜಯಶಾಲಿಯಾಗಿ ನಪ್ಪಿನ್ನೈಯನ್ನು ಕೈ ಹಿಡಿದನು. ಇದು ಭಾಗವತದಲ್ಲಿ ಇಲ್ಲ. ಆದರೆ ಹರಿವಂಶ ಪುರಾಣ ದಲ್ಲಿ ಉಲ್ಲೇಖಿತವಾಗಿದೆ ತಿರುಪ್ಪಾವೈಯ ಎರಡು ಮೂರು ಪಾಶುರಗಳಲ್ಲಿ ನಪ್ಪಿನ್ನೈಯ ಪ್ರಸ್ತಾಪವಿದೆ.

ಕರೇಣ ದಂಬೋಲಿ ಕಠೋರ ತುಂಗಾನ್ ದೇಹಾನ್ ಪೃಥೂನ್ ದಾನವ ದುರ್ವೃಷಾಣಾಂ
ವಿಮೃದ್ಯನೂನಂ ವಿದಧೇ ಮುಕುಂದಃ ಪ್ರಿಯಾ ಸ್ತನಸ್ಪರ್ಶ ವಿಹಾರ ಯೋಗ್ಯಾಂ ॥೯೯॥

ವಜ್ರಾಯುಧದ ಹಾಗೆ ದೇಹಗಳಿದ್ದ ಆ ಏಳು ವೃಷಭಗಳ ದೇಹಗಳನ್ನು ಹೊಡೆದು ಹಾಕಿ ತನ್ನ ಕೈನಿಂದ ನಪ್ಪಿನ್ನೈಯ ಮೃದುವಾದ ಸ್ತನಗಳನ್ನು ಸ್ಪರ್ಶಿಸಿ, ಸ್ತ್ರೀಸೌಖ್ಯದ ಅಭ್ಯಾಸವನ್ನು ಪಡೆದುಕೊಂಡನು.

ಶ್ರೀಕೃಷ್ಣನಿಗೆ ಬಾಲ್ಯದಲ್ಲಿಯೇ ಸ್ತ್ರೀಸೌಖ್ಯ ಏರ್ಪಟ್ಟಿತ್ತು. 'ನಪ್ಪಿನ್ನೈ'ಯನ್ನು ಪಂಥದಲ್ಲಿ ಗೆದ್ದ ಮೇಲೆ, ಅವಳೊಡನೆ ಕೆಲ ಕಾಲ ವಿಹರಿಸಿದ್ದನೂ ಕೂಡ. ಹೀಗಾಗಿ ಅವನಿಗೆ ಗೋಪಿಕಾ ಸ್ತ್ರೀಯರ ಸಹವಾಸ ಅಪೂರ್ವವಾದದ್ದಾಗಿರಲಿಲ್ಲ. ಹಾಗೆಂದ ಮಾತ್ರಕ್ಕೆ ಅವನು ಕಾಮುಕ ಸ್ವಭಾವದವನಲ್ಲ. ತಾನು ತನ್ನ ಪರಾಕ್ರಮದಿಂದ (ಆನೆಗಳಂತಿರುವ ಆ ಏಳು ವೃಷಭಗಳನ್ನು ಜಯಿಸುವುದೆಂದರೆ ಸಾಮಾನ್ಯ ವಿಷಯವಲ್ಲ) ಕನ್ಯಾ ಶುಲ್ಕವಾಗಿ ಗೆದ್ದ ನಪ್ಪಿನ್ನೈಯನ್ನು ಅನುಭವಿಸಿ ಸ್ತ್ರೀಸೌಖ್ಯದ ಅನುಭವ ಪಡೆದಿದ್ದಾನೆ ಎಂಬುದೇ ತಾತ್ಪರ್ಯ. ಭಗವಂತನ ನಡೆನುಡಿ ಗಳನ್ನು ಅರಿಯುವುದು ಕಷ್ಟಸಾಧ್ಯವಾದ ವಿಷಯ. ಜ್ಞಾನಿಗಳಿಗೂ ಕೂಡ.

ಆತ್ಮೀಯ ಪರ್ಯಂಕ ಭುಜಂಗ ಕಲ್ಪೌ ಅಕ್ಷೇಪ್ಯ ರಕ್ಷಾ ಪರಿಘೌ ಪೃಥಿವ್ಯಾಃ ।
ನೀಲೋಪಧಾನೀ ಕರಣಾತ್ ಸಮೇನೇ ಭೂಯಿಷ್ಠ ಧನ್ಯಾ ಭುಜಪಾರಿಜಾತೌ ॥೧೦೦॥

ಭಗವಾನ್ ಶ್ರೀಕೃಷ್ಣನು ತನ್ನ ಪರ್ಯಂಕವಾದ ಹಾವಿನ ಹಾಸಿಗೆಯನ್ನು ಬಿಟ್ಟು ಈ ಭೂಮಿಯನ್ನು ಕಾಯುವ ಹಾಗೆ ಪಾರಿಜಾತ ವೃಕ್ಷದಂತಿರುವ ತನ್ನ ಭುಜಗಳನ್ನು ನೀಳಾದೇವಿಗೆ ಆಸರೆಯಾಗಿಟ್ಟು, ತಾನು ಧನ್ಯನಾದನೆಂದು ಭಾವಿಸಿದನು. (ತನ್ನ ಪ್ರೇಮಾತಿಶಯ ವನ್ನು ಸೂಚಿಸಲು)

ಭೂದೇವಿ, ನೀಳಾದೇವಿಯರನ್ನು ಆಲಿಂಗನ ಮಾಡಿಕೊಳ್ಳುವ ಆ ಸರ್ವಸ್ವಾಮಿಯು ತಾನು ಭೂಮಿಯನ್ನು ಕಾಪಾಡಲೋಸುಗವೇ ಅವತಾರ ಮಾಡಿರುವುದೆಂಬುದನ್ನು ತೋರಿಸುವಂತಿತ್ತು. ಅವನು ಅವರಿಬ್ಬರ ನಡುವೆ ತೋರುವ ಶೃಂಗಾರ ಚೇಷ್ಟೆಗಳು . ಭೂಮಿ ಯಲ್ಲಿ ಮಲಗಿಕೊಂಡು ನೀಳಾದೇವಿಯ ತೋಳುಗಳನ್ನು ದಿಂಬುಗಳನ್ನಾಗಿ ಇಟ್ಟುಕೊಂಡು ಉಭಯರೊಡನೆಯೂ ಸೌಖ್ಯವನ್ನು ಅನುಭವಿಸುತ್ತಿದ್ದನು.

ರಾಗಾದಿ ರೋಗ ಪ್ರತೀಕಾರಭೂತಂ ರಸಾಯನಂ ಸರ್ವದಶಾನುಭಾವ್ಯಂ।
ಆಸೀದನುಧ್ಯೇಯತಮಂ ಮುನಿನಾಂ ದಿವ್ಯಸ್ಯ ಪುಂಸೋ ದಯಿತೋಪಭೋಗಃ॥೧೦೧॥

ದಿವ್ಯ ಪುರುಷನು ತನ್ನ ಪ್ರಿಯೆಯಾದ ನಪ್ಪಿನ್ನೈಯೊಡನೆ ಚಿಕ್ಕ ವಯಸ್ಸಿನಲ್ಲಿ ಅನುಭವಿಸಿದ ಭೋಗವಾದುದು ಜಗತ್ತಿನ ರೀತಿಗೆ ಬೇರೆಯಾದ ರಾಗದ್ವೇಷಾದಿಗಳಾದ, ಸಾಂಸಾರಿಕ ರೋಗಗಳಿಗೆ ಪರಿಹಾರವಾಗಿ ಅನುಭವಿಸಲ್ಪಡುವ ರಸಾಯನವಾಗಿ, ಮಹರ್ಷಿಗಳು ಶ್ರದ್ಧೆಯಿಂದ ಧ್ಯಾನ ಮಾಡುವುದಾಗಿದೆ.

ಗೋಪಿಕೆಯರೊಡನೆ ಶ್ರೀಕೃಷ್ಣನ ಸಂಶ್ಲೇಷವು ಲೋಕ ಕ್ಷೇಮಾರ್ಥವಾಗಿ ಎಂಬುದು ಸರ್ವ ವಿದಿತವಾದ ವಿಷಯ. ಜಗದ್ಗುರುವಾದ ಆ ಸ್ವಾಮಿಯು ಕೇವಲ ಸ್ತ್ರೀ ಭೋಗದಲ್ಲಿ ನಿರತನಾಗಿ, ಜಗತ್ತಿಗೆ ಮಾರ್ಗದರ್ಶಿಯಾಗಲು ಸಾಧ್ಯವೇ? ಕೇವಲ ವಿಡಂಬನೆ ಅಷ್ಟೆ. ಅವನ ಆ ಒಂದು ಆಟವು, ಯೋಗಿಗಳಿಗೂ, ಜ್ಞಾನಿಗಳಿಗೂ ಧ್ಯಾನದ ವಸ್ತುವಾಗಿದೆಯೆಂದರೆ ಆ ಪ್ರೇಮವು ಎಂತಹ ಪವಿತ್ರವಾದುದೆಂಬುದನ್ನು ಎಲ್ಲರೂ ಅರಿಯಬಹುದು. ಶುದ್ಧವಾದ ಮನಸ್ಸಿನಿಂದ ಚಿಂತಿಸಿದಲ್ಲಿ ಎಲ್ಲವೂ ಸತ್ವಮಯವಾಗಿಯೇ ತೋರುವುದು. ನಮ್ಮ ಮನಸ್ಸು ಕಲುಷಿತವಾಗಿದ್ದರೆ, ನಮ್ಮ ಚಿಂತನೆಯೂ ಕಲುಷಿತವಾಗುತ್ತದೆ. ಶ್ರೀಕೃಷ್ಣನ ಗೋಪಿಕೆಯರ ಮಾನಸಿಕ ಹಾಗೂ ಶಾರೀರಿಕ ಒಡನಾಟ ಬಹಳ ಮೇಲ್ಪಟ್ಟದ್ದು.

ಅನುದ್ರತಾ ನೂನ ಮನಂಗ ಬಾಣೈಃ ಸುಲೋಚನಾ ಲೋಚನ ಭಾಗಧೇಯಂ।
ಪ್ರತ್ಯಗೃಹೀಷುಃ ಪ್ರತಿ ಸಂನಿವೃತ್ತಂ ವ್ಯಕ್ತೇತರೈ ರಕ್ಷಿಭಿರಾತ್ಮನಾಚ ॥ ॥೧೦೨॥

ಸೀತೆಯನ್ನು ಹೊಂದಿದ ರಾಮನಂತೆ, ನಂದಗೋಪ ಕುಮಾರನು, ವಿದೇಹ ದೇಶವನ್ನು ಸೇರಿ ಶುಲ್ಕವಾಗಿ ಇಡಲ್ಪಟ್ಟಿದ್ದ ನಪ್ಪಿನ್ನೈಯನ್ನು ಗೆದ್ದು ಹಿಂತಿರುಗಿ ಬರುವಾಗ, ಗೋಪಸ್ತ್ರೀಯರು

ಅವನ ವಿರಹದಲ್ಲಿ ಮನ್ಮಥನ ಬಾಣಗಳಿಂದ ನೊಂದವರಾಗಿ, ಬೇರೊಬ್ಬರನ್ನೂ ನೋಡದ ತಮ್ಮ ಭಾಗ್ಯ ತುಂಬಿದ ಕಣ್ಣುಗಳಿಂದ ಅವನನ್ನು ನೋಡಿ ಆನಂದಿಸಿದರು.

ಶ್ರೀಕೃಷ್ಣನು ನಪ್ಪಿನ್ನೈಯ ಬಗ್ಗೆ ಇಟ್ಟಿದ್ದ ಪಂಥವನ್ನು ಗೆಲ್ಲಲು ವಿದೇಹ ರಾಜ್ಯಕ್ಕೆ ಹೋಗಬೇಕಾಯಿತು. ಆಗ ಕೆಲಕಾಲ ಬೃಂದಾವನದಿಂದ ದೂರ ಇರುವುದು ಅನಿವಾರ್ಯ ವಾಯಿತು. ಆಗ ಆ ಗೋಪಿಕಾ ಸ್ತ್ರೀಯರ ವಿರಹ ದುಃಖವನ್ನು ಕೇಳಬೇಕೇ? ಮನ್ಮಥನ ಬಾಣ ಗಳಿಂದ ತೀವ್ರ ನೊಂದವರಾಗಿ, "ಯನ್ಮೂಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ದೃಶ್ಯತೇ" ಎಂಬಂತೆ ಒಂದು ಕ್ಷಣವು ಅವನನ್ನು ಕಾಣದೆ ಇರಲಾರದವರಾಗಿ, ಅವನು ಯಾವಾಗ ಬರುವನೋ ಎಂದು ತವಕಿಸುತ್ತಿದ್ದರು. ಅವನು ವಾಪಸ್ಸು ಬಂದಾಗ, ತಮ್ಮ ಕಣ್ಣುಗಳಲ್ಲಿ ಅವನನ್ನೇ ತುಂಬಿಕೊಂಡು ಪರಮಾನಂದವನ್ನು ಅನುಭವಿಸಿದರು.

ವ್ರಜೋಪಕಂಠೇ ವಿಭುಧಾನುಭಾವ್ಯೋ ಗೋಪೀಜನೈರಾತ್ಮ ಗುಣಾವದಾತೈಃ।
ಸಮಾವೃತೋ ನಂದಸುತಶ್ಚಕಾಶೇ ತಾರಾಗಣೈರಿಂದುರಿವಾಂತರಿಕ್ಷೇ॥ ॥೧೦೩॥

ಗೊಲ್ಲರ ಕೇರಿಯಲ್ಲಿ ತನ್ನ ಗುಣಗಳಲ್ಲಿ ಶುದ್ಧವಾದ ಆತ್ಮಗುಣವುಳ್ಳ ಗೋಪಸ್ತ್ರೀಯರ ಸ್ಪರ್ಶದಿಂದ ಮೇಲ್ಮೆ ಹೊಂದಿದವನಾಗಿ, ಮಹಾತ್ಮರಿಂದ ಅನುಭವಿಸಲ್ಪಡುವ ಶ್ರೇಷ್ಠನಾದ ನಂದಗೋಪಕುಮಾರನು ಆಕಾಶದಲ್ಲಿ ಚಂದ್ರನ ಕಿರಣಗಳ ಪ್ರಸರಿಕೆಯಿಂದ ಬೆಳಗುತ್ತಿರುವ ನಕ್ಷತ್ರಗಳ ಸಮೂಹದಲ್ಲಿ ಚಂದ್ರನಂತೆ ಪ್ರಕಾಶಿಸುತ್ತಿದ್ದನು. (ದೇವತೆಗಳಿಂದ ಅನುಭವಿಸಲ್ಪಡುವ ಚಂದ್ರನಂತೆಯೂ)

ಗೋಪಿಕೆಯರ ಮಧ್ಯದಲ್ಲಿ ಆ ಮಾಧವನು ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ಶೋಭಿಸುತ್ತಿದ್ದನು. ಚಂದ್ರನು ಎಲ್ಲರಿಗೂ ಆಹ್ಲಾದಕರನಾದವನು. ಅಂತೆಯೇ ಶ್ರೀಕೃಷ್ಣನು ಕೂಡ. ಅವನ ಗುಣಗಳಿಗೆ ಮನಸೋಲದವರೇ ಇಲ್ಲ. ಶ್ರೀರಾಮನ ಬಗ್ಗೆ ಹೇಳುವಾಗ ಲಕ್ಷ್ಮಣ ಸ್ವಾಮಿಯು "**ಗುಣೈರ್ದಾಸ್ಯ ಮುಪಾಗತಃ**" ಎನ್ನುತ್ತಾನೆ. ರಾಮನ ಗುಣಗಳಿಗೆ ಮಾರುಹೋಗಿ ಅವನ ಹಿಂದೆ ಬಂದಿದ್ದೇನೆ ಎಂಬುದಾಗಿ. ಅದೇ ರೀತಿ ಶ್ರೀಕೃಷ್ಣನ ಗುಣಗಳಿಗೆ ಗೋಪಿಕೆಯರು ಮಾರುಹೋಗಿ ತಮ್ಮನ್ನು ತಾವೇ ಅವನಿಗೆ ಸಂಪೂರ್ಣ ಸಮರ್ಪಣ ಮಾಡಿ ಕೊಂಡರು. ಗೋಪಿಕಾ ಸ್ತ್ರೀಯರ ಸ್ಪರ್ಶವನ್ನೆಲ್ಲಾ ತಾನೂ ಅನುಭವಿಸಿ, ತಾನೂ ಅವರನ್ನೆಲ್ಲಾ ಸ್ಪರ್ಶಿಸಿದನು. ಅವರ ಭಾಗ್ಯವೇ ಭಾಗ್ಯವು. ಯೋಗಿಗಳಿಗೂ ಆ ಭಾಗ್ಯ ಸಿಗಲಿಲ್ಲ.

ಹತ್ವಾ ಸಯೂಥಂ ತೃಣರಾಜ ಷಂಡೇ ರಾಮಾಚ್ಯುತೌ ರಾಸಭ ದೈತ್ಯಮುಗ್ರಂ।
ಅತೋಷಯೇತಾಂ ಭೃಶಮಾತ್ಮ ಭೃತ್ಯಾನ್ ಸ್ವಾದ್ವೈಃ ಸುಧಾಪಿಂಡನಿಭೈಃ ಫಲೌಘೈಃ॥೧೦೪॥

ಬಲರಾಮನೂ, ಶ್ರೀಕೃಷ್ಣನೂ ದೊಡ್ಡ ತಾಳೆಯ ವನಕ್ಕೆ ಹೋಗಿ, ಕತ್ತೆಯ ರೂಪದಲ್ಲಿದ್ದ ಧೇನುಕನೆಂಬ ಅಸುರನನ್ನು ಅವನ ಅನುಚರರೊಡನೆ, ಸಂಹರಿಸಿ, ಅಮೃತವ್ದಂತಿರುವ ಸಿಹಿಯಾದ ತಾಲ ಫಲಗಳನ್ನು ಕಿತ್ತು ತಂದು ತಮ್ಮ ಸಹಚರರಾದ ಮಕ್ಕಳಿಗೆ ನೀಡಿ, ತೃಪ್ತಿಯನ್ನುಂಟು ಮಾಡಿದನು.

ಧೇನುಕನೆಂಬ ಮತ್ತೊಬ್ಬ ಅಸುರನು ಕಂಸನಿಂದ ಪ್ರೇರಿತನಾಗಿ, ಕತ್ತೆಯ ರೂಪವನ್ನು ತಾಳಿ ಗೋಪರೆಲ್ಲರೂ ಹಣ್ಣುಗಳನ್ನು ಕೀಳಲು ಬರುವ ತಾಲವನದಲ್ಲಿ ಅಡಗಿಕೊಂಡು, ರಾಮ ಕೃಷ್ಣರಿಬ್ಬರನ್ನೂ ಸಂಹರಿಸಲು ಪ್ರಯತ್ನಿಸಿದನು. ಅವನ ಸಂಚನ್ನು ತಿಳಿದು ಅವನನ್ನು ಇಬ್ಬರೂ ಸೇರಿ ಸಂಹರಿಸಿ, ಗೋಪರು ಅಪೇಕ್ಷೆ ಪಡುತ್ತಿದ್ದ ದಪ್ಪ ದಪ್ಪನಾಗಿ ಇದ್ದ ತಾಲ ಫಲಗಳನ್ನು ಕಿತ್ತು ತಂದು ಎಲ್ಲರಿಗೂ ಹಂಚಿ ತಾವೂ ಭುಜಿಸಿ ಆನಂದಪಟ್ಟರು ರಾಮಕೃಷ್ಣರು.

ಕದಾಚಿ ದಾಸಾದಿತ ಗೋಪವೇಷಃ ಕ್ರೀಡಾಕುಲೇ ಗೋಪ ಕುಮಾರ ವೃಂದೇ।
ಸ್ಕಂಧೇನ ಸಂಗೃಹ್ಯ ಬಲಂ ಬಲೀಯಾನ್ ದೈತ್ಯಃ ಪ್ರಲಂಭೋ ದಿವಮುತ್ಪಪಾತ ॥೧೦೫॥

ಒಂದು ಸಮಯ ಪ್ರಲಂಭನೆಂಬ ಅಸುರನು ಒಬ್ಬ ಗೋಪಾಲಕನ ವೇಷ ಧರಿಸಿ, ಎಲ್ಲರೊಡನೆ ಕೂಡಿ ಆಡಿಕೊಂಡಿರುವಾಗ, ಮಧ್ಯೆ ಪ್ರವೇಶಿಸಿ ಸೋತವನು ಗೆದ್ದವನನ್ನು ಹೊರಬೇಕೆಂಬ ನಿಯಮದೊಡನೆ ಆಟವಾಡುತ್ತಾ ಬಲರಾಮನಿಗೆ ಸೋತು, ಅವನನ್ನು ಕೊಲ್ಲಲು ಬಯಸಿ ಎತ್ತಿಕೊಂಡು ಬಹಳ ದೂರ ಹೋಗಿ ಆಕಾಶಕ್ಕೆ ಹಾರಿದನು.

ಪ್ರಲಂಭಾಸುರ ವಧೆ:- ಇವನೂ ಸಹ ಕಂಸ ಪ್ರಚೋದಿತನೇ. ಗೋಪಾಲಕರ ವೇಷದಲ್ಲಿ ಗೋಪಾಲಕರ ನಡುವೆಯೇ ಇದ್ದಲ್ಲಿ, ಅವರನ್ನು ಸುಲಭವಾಗಿ ಮೋಸಗೊಳಿಸಬಹುದೆಂಬ ಉದ್ದೇಶದಿಂದ, ಅವನು ಅವರ ನಡುವೆ ಹೋಗಿ ಸಮಯ ಕಾಯುತ್ತಿದ್ದನು. ಒಂದು ಪಂಥವನ್ನು ಏರ್ಪಡಿಸಿಕೊಂಡರು. ಸೋತವರು ಗೆದ್ದವನನ್ನು ದೂರಕ್ಕೆ ಎತ್ತಿಕೊಂಡು ಬಿಡಬೇಕು. ಈ ಪ್ರಸಂಗವನ್ನು ಶ್ರೀಮದ್ಭಾಗವತದಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾರೆ.

ಪಪಾತ ಭೂಮೌ ಸಹಸಾ ಸ ದೈತ್ಯ ಸ್ತನ್ ಮುಷ್ಟಿನಾ ತಾಡಿತ ಶೀರ್ಣಮೌಳಿಃ।
ಮಹೇಂದ್ರಹಸ್ತ ಪ್ರಹಿತೇನ ಪೂರ್ವಂ ವಜ್ರೇಣ ನಿರ್ಭಿನ್ನ ಇವಾ ಚಲೇಂದ್ರಃ ॥೧೦೬॥

ಆ ಅಸುರನು ಬಹಳ ದೂರ ಹೋದಾಗ ಅವನು ಅಸುರನೆಂದು ಅರಿತು ಬಲರಾಮನು ಅವನನ್ನು ಮುಷ್ಟಿಯಿಂದ ಹೊಡೆದು, ಅವನ ತಲೆಯನ್ನು ಸೀಳಿದಾಗ, ಹಿಂದೆ ಒಂದು ಬಾರಿ ಇಂದ್ರನ ವಜ್ರಾಯುಧದ ಏಟಿನಿಂದ ಭಗ್ನವಾದ ಪರ್ವತದಂತೆ ತಲೆಯೊಡೆದು ಆ ಅಸುರನು ಕೆಳಗೆ ಬಿದ್ದನು.

ಸ್ವವಾಸಸಾ ಕ್ಲೃಪ್ತ ಕಳಂಕ ಲಕ್ಷ್ಮೀಃ ಕಾಂತ್ಯಾ ದಿಶ ಚಂದ್ರಿಕ ಯೇವಲಿಂಪನ್।
ರರಾಜ ರಾಮೋ ದನುಜೇ ನಿರಸ್ತೇ ಸ್ವರ್ಭಾನುನಾ ಮುಕ್ತ ಇವೋಡು ರಾಜಃ॥೧೦೭॥

ಅಸುರನನ್ನು ನಿಗ್ರಹಿಸಿದ ಮೇಲೆ ಬಲರಾಮನು ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆ ಬೆಳಗಿದನು. ಅವನು ಧರಿಸಿದ ನೀಲ ಬಟ್ಟೆಯು, ಚಂದ್ರನ ಮಧ್ಯದಲ್ಲಿ ತೋರುವ ಕಳಂಕಗಳ ಸೌಂದರ್ಯದಂತೆ ತೋರಿ, ಬೆಳದಿಂಗಳಿನಂತೆ ಶೋಭಿಸುತ್ತಿತ್ತು.

ವಿನೈವ ರಾಮೇಣ ವಿಭುಃ ಕದಾಚಿತ್ ಸಂಚಾರಯನ್ ಧೇನುಗಣಂ ಸವತ್ಸಂ।
ವನಶ್ರಿಯಾ ದೂರ ವಿಲೋಭಿತಾಕ್ಷಃ ಕಂಚಿತ್ ಯಯೌ ಕಚ್ಛಮದೃಷ್ಟಪೂರ್ವಂ॥೧೦೮॥

ಮತ್ತೊಂದು ಸಮಯದಲ್ಲಿ ಬಲರಾಮನನ್ನು ಬಿಟ್ಟು, ಸರ್ವೇಶ್ವರನಾದ ಕೃಷ್ಣನು ಒಬ್ಬನೇ ಕರುಗಳೊಡನೆ ಕಾಡಿನಲ್ಲಿ ಸ್ವಲ್ಪ ದೂರದಲ್ಲಿದ್ದ ಯಮುನಾ ನದಿಯ ತಟಾಕಕ್ಕೆ, ವನ ವಿಹಾರಕ್ಕಾಗಿ, ಹಸುಕರುಗಳ ಸಮೂಹದೊಡನೆ, ಹಿಂದೆ ನೋಡದ ಜಾಗಕ್ಕೆ ಬಂದನು.

ಯಮುನಾ ನದಿಯ ದಡದಲ್ಲಿ ಒಂದು ಜಾಗ ಸ್ವಲ್ಪ ನಿರ್ಜನವಾಗಿದ್ದು ಯಾರೂ ಅಲ್ಲಿಗೆ ಹೆಚ್ಚಿಗೆ ಹೋಗುತ್ತಿರಲಿಲ್ಲ. ಶ್ರೀಕೃಷ್ಣನು ಆ ಜಾಗದಲ್ಲಿ ಸ್ವಲ್ಪ ತೊಂದರೆಯಿರುವುದನ್ನು ಗ್ರಹಿಸಿ, ಅಲ್ಲಿಗೆ ಹೋಗಿ, ಆ ಜಾಗವನ್ನು ಯಾವ ಕಷ್ಟವೂ, ಬಾಧೆಯೂ ಇರದಂತೆ ಮುಕ್ತಗೊಳಿಸಬೇಕೆಂದು ನಿಶ್ಚಯಿಸಿ, ಕೆಲವು ಸ್ನೇಹಿತರೊಡನೆ, ಕೆಲವು ಹಸುಕರುಗಳೊಡನೆ ಹೋದನು. ಬಲರಾಮನನ್ನು ಕರೆದೊಯ್ಯಲಿಲ್ಲ.

ಯದೃಚ್ಛಯಾ ಚಾರಿತ ಧೇನುಚಕ್ರಃ ಕುಲಾಂತಿಕೇ ವಿಶ್ವಜನಾನುಕೂಲಃ।
ಕಲಿಂದಜಾಂ ಕಾಲಿಯ ಪನ್ನಗಸ್ಯ ಕ್ಷ್ವೇಲೋದ್ಗಮೈ ಕಂಜಲಿತಾಂ ದದರ್ಶ ॥೧೦೯॥

ಸಕಲ ಜನರಿಗೂ ಅನುಕೂಲ ಮಾಡುವ ಜನಾರ್ದನನು, ಯಾದೃಚ್ಛಿಕವಾಗಿ, ಹಸುಕರುಗಳನ್ನು ಕೂಡಿಕೊಂಡು ಅಲ್ಲಿಗೆ ಬಂದು ಕಾಳೀಯ ಎಂಬ ವಿಷದ ಹಾವಿನ ವಿಷಜ್ವಾಲೆಯಿಂದ, ಕಪ್ಪಾಗಿ ಮಾರ್ಪಟ್ಟಿರುವ ಯಮುನಾ ನದಿಯ ಜಲವನ್ನು ಕಂಡನು.

ಆ ಸ್ಥಳದಲ್ಲಿ ಕಾಳೀಯ ಎಂಬ ಭಯಂಕರ ವಿಷ ಸರ್ಪವು ಅನೇಕ ವರ್ಷಗಳಿಂದ ಮನೆ ಮಾಡಿ, ಯಮುನೆಯ ಆ ಭಾಗವನ್ನೆಲ್ಲಾ ವಿಷದಿಂದ ತುಂಬಿದ ಮಡುವನ್ನಾಗಿ ಮಾಡಿ, ಯಾರೂ ಅಲ್ಲಿಗೆ ಬರಲು ಸಾಧ್ಯವಿಲ್ಲದಂತೆ ಮಾಡಿತ್ತು. ಅದನ್ನು ನಿಗ್ರಹಿಸುವ ಸಲುವಾಗಿಯೇ ಶ್ರೀಕೃಷ್ಣನು ಆ ಸ್ಥಳಕ್ಕೆ ಎಲ್ಲರನ್ನೂ ಕೂಡಿಕೊಂಡು ಬಂದನು. ಬಲರಾಮನು ಶೇಷಾಂಶನಾದ್ದರಿಂದ, ಅವನು ಬಂದಲ್ಲಿ ಅವನಿಂದ ಕಾಳೀಯನ ನಿಗ್ರಹಕ್ಕೆ ಅಡ್ಡಿ ಉಂಟಾಗಬಹುದೆಂಬ ಮುನ್ನೆಚ್ಚರಿಕೆಯಿಂದ ಅವನನ್ನು ಜೊತೆಯಲ್ಲಿ ಕರೆತರಲಿಲ್ಲ. ತಾನೊಬ್ಬನೇ ಬಂದಿದ್ದಾನೆ. ಕಾಳೀಯನನ್ನು ನಿಗ್ರಹಿಸುವುದು ಕೃಷ್ಣನ ಉದ್ದೇಶವಾದರೂ, ಅಂತ್ಯದಲ್ಲಿ ಅದು ಕಾಳೀಯನಿಗೆ ಅನುಗ್ರಹವಾಗಿಯೇ ಪರಿಣಮಿಸಿತು.

ವಿಷಾಗ್ನಿನಾ ಮುರ್ಮುರಿತ ಪ್ರತಾನೆ ವೈರೋಚನೀ ತೀರವನಾವಕಾಶೇ।
ಅಹಿಂದ್ರ ಮಾಸ್ಕಂದಿತು ಮಧ್ಯರುಕ್ಷತ್ ಕಾಷ್ಠಾಕೃತಿಂ ಕಂಚನ ನೀಪವೃಕ್ಷಂ ॥೧೧೦॥

ಶ್ರೀ ಕೃಷ್ಣನು ಈ ನಾಗಗಳೆಲ್ಲವನ್ನೂ ಮರ್ದಿಸಲು ನಿರ್ಧರಿಸಿ, ವಿಷದ ಅಗ್ನಿಯಿಂದ ಬಾಧಿಸಲ್ಪಟ್ಟ ಆ ಯಮುನಾ ನದಿಯ ದಡದಲ್ಲಿ ವಿಷದ ಜ್ವಾಲೆಯಿಂದ ದಹಿಸಿಹೋಗಿದ್ದ ಸ್ವಲ್ಪ ದೂರದಲ್ಲಿದ್ದ ಒಂದಾನೊಂದು ಒಣಗಿದ (ಕದಂಬ ವೃಕ್ಷ) ಮರವನ್ನೇರಿ ಕುಳಿತನು.

ಕಾಳೀಯ ಮರ್ದನ



ಆ ನಾಗನನ್ನು ನಿಗ್ರಹಿಸುವ ಕ್ರಮವನ್ನು ಮೊದಲು ಶ್ರೀಕೃಷ್ಣನು ಚೆನ್ನಾಗಿ ಯೋಚಿಸಿದನು. ಆ ವಿಷದ ಮಡುವಿಗೆ ಮೇಲಿನಿಂದ ಧುಮುಕಿದರೆ ಹೆಚ್ಚು ಪ್ರಯೋಜನವಾಗುವುದೆಂದು ನಿರ್ಧರಿಸಿ, ಆ ಮಡುವಿನ ದಡದಲ್ಲಿ, ವಿಷದ ಜ್ವಾಲೆಯಿಂದ ಒಣಗಿ ಹೋಗಿದ್ದ ಒಂದಾನೊಂದು ದೊಡ್ಡ ಮರವನ್ನು ಏರಿ ಅದರ ತುದಿಯಲ್ಲಿ ಕುಳಿತು, ಯಮುನೆಯ ಆ ಜಾಗವನ್ನು ಸಿಂಹಾವಲೋಕನ ಮಾಡಿದನು. ಆ ಮರದ ಹೆಸರು ಕದಂಬ ವೃಕ್ಷ, ಶ್ರೀಕೃಷ್ಣನು ಅದನ್ನೇರಲು ಅದು ಎಷ್ಟು ಪುಣ್ಯ ಮಾಡಿತ್ತೋ?

ಮಧುದ್ರವೈರುಲ್ಬಣ ಹರ್ಷಬಾಷ್ಪಾ ರೋಮಾಂಚಿತಾ ಕೇಸರ ಜಾಲಕೇನ ।
ಪತ್ರಾಂಕುರೈ ಶ್ಚಿತ್ರ ತನುಶ್ಚಕಾಶೇ ಕೃಷ್ಣಾಶ್ರಿತಾ ಶುಷ್ಕ ಕದಂಬ ಶಾಖಾ ॥೧೧೧॥

ಆ ಕಪ್ಪಾದ ಒಣಗಿದ ಮರವು ಕೃಷ್ಣನು ತನ್ನ ಮೇಲೆ ತಂಗಿದ್ದುದರಿಂದ, ಅತ್ಯಂತ ಸಂತೋಷಗೊಂಡು ಆನಂದ ಕಣ್ಣೀರನ್ನು ಸುರಿಸುವಂತೆ ಪುಳಕಿತಗೊಂಡು ಯೌವನ ಪಡೆದವರಂತೆ ಹೊಸ ಎಲೆಗಳಿಂದ ಕೂಡಿ, (ಒಬ್ಬ ಯೌವನ ಸ್ತ್ರೀಯಂತೆ) ನಳನಳಿಸಿತು.

ಆ ಮರವು ಶ್ರೀಕೃಷ್ಣನು ಅದನ್ನೇರಿದ್ದರಿಂದ ಯೌವನ ಪಡೆಯಿತು. ಒಣಗಿದ್ದ ಮರವು ಶ್ರೀಕೃಷ್ಣನ ಪಾದಸ್ಪರ್ಶದಿಂದ ಮತ್ತೆ ಚಿಗುರಿ, ಎಲೆಗಳು ಬಿಡಲಾರಂಭಿಸಿತು. ಆನಂದ ಭಾಷ್ಪಗಳನ್ನು ಸುರಿಸುವಂತೆ ವೃಕ್ಷವು ಪುಳಕಿತಗೊಂಡಿತು.

ಇದನ್ನು ನಾರಾಯಣೀಯಂನಲ್ಲಿ ಹೀಗೆ ಅನುಭವಿಸಿದ್ದಾರೆ. ''ಹೊಸ ಚಿಗುರಿನಂತೆ ಮನೋಹರವಾದ ಕಾಂತಿಯಿಂದ ಕೂಡಿದ ಕಮಲಗಳಂತಹ ಪಾದಗಳಿಂದ ಕದಂಬ ವೃಕ್ಷವನ್ನು ಹತ್ತಿ ಚಕ್ರಾಕಾರವಾಗಿ ತಿರುಗುತ್ತಿರುವ ಸುಳಿಗಳಿಂದ ಕೂಡಿದ ಭಯಂಕರವಾದ ಅಲೆಗಳಿಂದ ತಾಡಿತವಾಗುತ್ತಿರುವ ಆ ಕುಂಡದ ನೀರಿನೊಳಕ್ಕೆ ವೇಗದಿಂದ ಸ್ವಾಮಿಯು ಧುಮುಕಿದನು''.

ನಿಪತ್ಯ ಸಂಕ್ಷಿಪ್ತ ಪಯೋಧಿಕಲ್ಪೆ ಮಹಾಹ್ರದೇ ಮಂದರಪೋತರಭ್ಯಃ।
ವಿಷವ್ಯಪೋಹಾದಮೃತಂ ವಿಧಾತುಂ ಸ್ವಾದೂದಯಂ ಕ್ಷೋಭಯತಿ ಸ್ಮ ಸಿಂಧುಂ॥೧೧೨॥

ಹಿಂದೆ ಒಂದು ಕಾಲದಲ್ಲಿ ಮಂಧರ ಪರ್ವತವಾದುದು ಕ್ಷೀರ ಸಮುದ್ರದಲ್ಲಿ ಹಾಲಾಹಲ ಎಂಬ ವಿಷವನ್ನು ನುಂಗಿ, ಸಿಹಿಯಾದ ಅಮೃತವನ್ನು ಹೊರಕ್ಕೆ ತರಲು ಕಡೆಗೋಲಾದಂತೆ ಶ್ರೀಕೃಷ್ಣನು ಚಿಕ್ಕ ಮಂದರ ಪರ್ವತದಂತೆ ಆ ದಿವ್ಯವಾದ ಯಮುನೆಯಲ್ಲಿ ಕಾಳಿಯನ

ವಿಷವನ್ನು ನೀಗಿ ತಿಳಿಯಾದ ನೀರನ್ನುಂಟುಮಾಡಲು, ನಿರ್ಧರಿಸಿ, ಆ ಮಹಾಮಡುವಿನಲ್ಲಿ ಧುಮುಕಿಬಿಟ್ಟನು.

ಹಿಂದೆ ಕ್ಷೀರ ಸಾಗರವನ್ನು ಕಡೆದು ತಾನೇ ಅಮೃತವನ್ನು ತಂದಂತೆ ಆ ಯಮುನೆಯ ವಿಷಪೂರಿತ ಮಡುವನ್ನು ಸ್ವಚ್ಛಗೊಳಿಸಿ, ಅದನ್ನು ಎಲ್ಲರೂ ಕುಡಿಯುವ ಅಮೃತದ ನೀರಿನಂತೆ ಮಾಡಲು, ಸ್ವಾಮಿಯು ಅಷ್ಟು ಎತ್ತರದಿಂದ ಅಲ್ಲಿಗೆ ಧುಮುಕಿ ಕೋಲಾಹಲವನ್ನುಂಟು ಮಾಡಿದನು. ಹಾಲಾಹಲವನ್ನು ನುಂಗಿ ಅಮೃತವನ್ನು ತಂದ ಉಪಮೆ ನೀಡಿದ್ದಾರೆ.

ಕೃತಾಹತಿಃ ಕೃಷ್ಣನಿಪಾತ ವೇಗಾ ದಾನಾದ್ದರೂಪಾ ವಿತತೈಸ್ತರಂಗೈಃ।
ಸರ್ಪಾಪ ಸಾರೌಷಧಿ ಸಂಪ್ರಯುಕ್ತಾ ಭೇರೀವ ಸಾ ಭೀಮತರಂ ರರಾಸ ॥೧೧೨॥

ಯಮುನೆಯು ಶ್ರೀಕೃಷ್ಣನು ಧುಮುಕಿದ ವೇಗಕ್ಕೆ ಕಲಕಿ ಹೋಗಿ, ಸರ್ಪಗಳನ್ನು ಹೊಡೆದೋಡಿಸುವ ಔಷಧಿಯಂತೆ ಮಾರ್ಪಟ್ಟು, ದೊಡ್ಡ ವಾದ್ಯದಂತೆ ಭಯಂಕರವಾಗಿ ಅಲೆಗಳನ್ನು ಹೊರಡಿಸಿದಳು. ಯಮುನೆಯು ವಿಸ್ತಾರವಾದ ಅಲೆಗಳಿಂದ ಕೂಡಿ ಹರಿದಿದ್ದ ರಿಂದ ಒಂದು ದೊಡ್ಡ ಭೇರಿ ವಾದ್ಯವನ್ನು ಹಗ್ಗಗಳಿಂದ ಕಟ್ಟಿದಂತೆ ತೋರುತ್ತಿದ್ದಳು. ಯಮುನೆಗೆ ಶ್ರೀಕೃಷ್ಣನು ಮೇಲಿನಿಂದ ಧುಮುಕಿದ ವೇಗವನ್ನು ವರ್ಣಿಸಿದ್ದಾರೆ.

ಪ್ರಸಕ್ತ ಕೃಷ್ಣದ್ಯುತಿಭಿಸ್ತದೀಯೈಃ ಪೃಷತ್ಕನ್ಯೈರುತ್ಪತಿತೈಃ ಪ್ರತೂರ್ಣಂ।
ಅದೃಶ್ಯತಾऽऽದ್ಯೋತಿತಮಂತರಿಕ್ಷಂ ಪೀತಾಂಧಕಾರೈರಿವ ತಾರಕೌಘೈಃ ॥೧೧೪॥

ಶ್ರೀಕೃಷ್ಣನ ಕಪ್ಪಾದ ದೇಹದೊಡನೆ ಸೇರಿ ಉಕ್ಕಿ ಹರಿದ ಯಮುನೆಯ ತಣ್ಣೀರಿನ (ತುಂತುರು ಹನಿಗಳ)ಎರಚಾಟವು ಆಕಾಶದಲ್ಲೆಲ್ಲಾ ಚೆಲ್ಲಿದ ನಕ್ಷತ್ರಗಳಂತೆ ಕತ್ತಲನ್ನು ಹೋಗಲಾಡಿಸುವಂತೆ ಬೆಳಗುತ್ತಿತ್ತು.

ಶ್ರೀಕೃಷ್ಣನ ದೇಹವು ಕಪ್ಪಾಗಿದ್ದುದರಿಂದ, ಯಮುನೆಯು ಅವನ ಪದಾಘಾತಕ್ಕೆ ಉಕ್ಕಿ ಹರಿದು, ಸಂಪೂರ್ಣವಾಗಿ ಅವನ ಮೈಯನ್ನು ತೋಯಿಸಿತು. ಅವನು ಬಿದ್ದ ರಭಸಕ್ಕೆ ಅಷ್ಟೆತ್ತರಕ್ಕೆ ಯಮುನೆಯು ಹಾರಿ ಆಕಾಶವನ್ನೆಲ್ಲಾ ತುಂತುರು ಹನಿಗಳು ಆವರಿಸಿತು. ನಕ್ಷತ್ರಗಳು ಯಾವ ರೀತಿ ಆಕಾಶದಲ್ಲಿ ಬೆಳಕನ್ನು ಚೆಲ್ಲಿ ಕತ್ತಲನ್ನು ಹೋಗಲಾಡಿಸುತ್ತದೆಯೋ ಅದೇ ರೀತಿ ಆ ತುಂತುರು ಹನಿಗಳು ನಕ್ಷತ್ರಗಳಂತೆ ಕಾಣಿಸಿ, ಅದನ್ನು ನೋಡಿದವರ ಮನಸ್ಸಿನ ಕತ್ತಲೆಯು ನೀಗುವಂತಿತ್ತು. (ಸುಂದರವಾದ ಉಪಮೆ).

ಉದಗ್ರ ಸಂರಂಭ ಮುದೀಕ್ಷ್ಯ ಭೀತಾಸ್ತಾರ್ಕ್ಷ್ಯಧ್ವಜಂ ತಾರ್ಕ್ಷ್ಯಮಿವಾऽऽಪತಂತಂ।
ಪ್ರಪೇದಿರೇ ಸಾಗರ ಮಾಶ್ರಿತೌಘಾಃ ಕಾಕೋದರಾಃ ಕಾಲೀಯಮಾತ್ರಶೇಷಾಃ॥೧೧೫॥

ಯಮುನೆಯ ಆಳವನ್ನು ಹೊಕ್ಕು ವಾಸಿಸುತ್ತಿದ್ದ ನಾಗಗಳು ಮತ್ತು ಕಾಳೀಯನನ್ನು ನಿಗ್ರಹಿಸಲು, ಗರುಡನನ್ನು ಧ್ವಜವಾಗಿ ಉಳ್ಳ ಸ್ವಾಮಿಯು ಗರುಡನಂತೆಯೇ ಎಲ್ಲೆ ಮೀರಿದ

ಕೋಪ ಮತ್ತು ವೇಗದಿಂದ ತಮ್ಮ ಮೇಲೆ ಬೀಳುವುದನ್ನು ನೋಡಿ ಹೆದರಿ ಎಲ್ಲಾ ನಾಗಗಳು ಸಮುದ್ರವನ್ನು ಸೇರಿದವು.

ಗರುಡ ಧ್ವಜನಾದ ಶ್ರೀಕೃಷ್ಣನು ತಮ್ಮ ನಾಗಸ್ಥಾನದ ಮೇಲೆ ಬೀಳುವುದನ್ನು ನೋಡಿದ, ಆ ಮಡುವಿನಲ್ಲಿ ಇದ್ದ, ನಾಗಗಳೆಲ್ಲವೂ (ಕಾಳೀಯನ ಅನುಚರರೆಲ್ಲರೂ) ಗರುಡನೇ ತಮ್ಮ ಮೇಲೆ ಆಕ್ರಮಣ ಮಾಡಿದನೆಂದು ಭಯಭೀತವಾಗಿ, ಆ ಸ್ಥಳವನ್ನೇ ಖಾಲಿ ಮಾಡಿ, ಸಮುದ್ರವನ್ನು ಹೊಕ್ಕವು. ಗರುಡನ ಚಿಹ್ನೆಯನ್ನು ಕಂಡರೇನೇ ನಾಗಗಳಿಗೆಲ್ಲಾ ಭಯ. ಅಂದ ಮೇಲೆ ಗರುಡನ ಸ್ವಾಮಿಯಾದ ಕೃಷ್ಣನನ್ನು ಕಂಡರೆ ಭಯವಿಲ್ಲದೆ ಶ್ರೀಕೃಷ್ಣನ ಸ್ಮರಣೆಯೇ ಅವುಗಳಲ್ಲಿ ಭೀತಿಯನ್ನುಂಟು ಮಾಡಿತು. ಕೃಷ್ಣನ ವೇಗವನ್ನು ಯಾವ ನಾಗವೂ ಸಹಿಸಲು ಸಾಧ್ಯವಾಗಲಿಲ್ಲ.

ಅಥಾಂಬಸಃ ಕಾಲೀಯ ನಾಗಮುಗ್ರಂ ವ್ಯಾತ್ತಾನನಂ ಮೃತ್ಯುಮಿವೋಂಜಿಹಾನಂ।
ಭೋಗೇನ ಬದ್ನಂತ ಮಪೋಹ್ಯ ಶೌರಿಃ ಪ್ರಹ್ವೀಕೃತಂ ತತ್ಫಣಮಾರುರೋಹ ॥೧೧೬॥

ಒಡನೆಯೇ ಕಾಳೀಯ ನಾಗವು ಉಗ್ರನಾಗಿ, ದೊಡ್ಡದಾಗಿ ಬಾಯನ್ನು ತೆರೆದು ನೀರಿನಿಂದ ಮೇಲೆದ್ದು ತನ್ನ ನೀಳವಾದ ದೇಹದಿಂದ ಶ್ರೀಕೃಷ್ಣನನ್ನು ಬಂಧಿಸಲು ಯತ್ನಿಸಿದಾಗ ಶ್ರೀಕೃಷ್ಣನು ಅದನ್ನು ಪಕ್ಕಕ್ಕೆ ತಳ್ಳಿ, ಅದರ ಫಣೆಯೊಂದರ ಮೇಲೆ ಏರಿ ನಿಂತನು.

ತನ್ನ ಅನುಚರರಿಗೆಲ್ಲಾ ಒದಗಿದ ಸ್ಥಿತಿಯನ್ನು ಕಂಡು ದುಷ್ಟನಾದ ಕಾಳಿಯ ಸರ್ಪವು ಉಗ್ರವಾಯಿತು. ಅದು ಶ್ರೀಕೃಷ್ಣನ ಮೇಲೆ ಎರಗಿ ಆಕ್ರಮಣಕ್ಕೆ ಪ್ರಾರಂಭಿಸಿತು. ಇದಕ್ಕಾಗಿಯೇ ಕಾಯುತ್ತಿದ್ದ ಶ್ರೀಕೃಷ್ಣನೂ ಸಹ ತನ್ನ ಎಲ್ಲಾ ಬಲವನ್ನು ಪ್ರಯೋಗಿಸಿ, ಆ ಮಹಾನಾಗನನ್ನು ಎದುರಿಸಿ ನಿಂತು, ತಾನೂ ಅದರ ಫಣೆಯ ಮೇಲೆ ಹತ್ತಿ ನಿಂತನು.

ಸದ್ಯೋ ಮಹಾನೀಲಮಯೀಂ ಮುಕುಂದಃ ಸಪದ್ಮರಾಗಾಮಿವ ಪಾದಪೀಠೀಮ್।
ಕ್ರಾಮನ್ ಫಣಾಂ ಕಾಳಿಯ ಪನ್ನಗಸ್ಯ ಗ್ರಸ್ತೋದಿತೋ ಭಾನುರಿವಾ ಬಭಾಸೆ ॥೧೧೭॥

ಏರಿದ ಕ್ಷಣವೇ ಶ್ರೀಕೃಷ್ಣನು ನಾಗದ ಹೆಡೆಯ ಮೇಲೆ ಪಾದವನ್ನಿಟ್ಟನು. ಮಣಿಯೊಡನೆ ಸೇರಿದ ಕಪ್ಪಾದ ಹೆಡೆಯಾದುದು ಪದ್ಮರಾಗ ಕಲ್ಲಿನ ಪ್ರಭೆಯನ್ನು ಹೊಂದಿ, ಇಂದ್ರನೀಲ ಮಣಿಯಿಂದ ಮಾಡಿದ ಪಾದಪೀಠದಂತೆ ಅವನ ಪಾದಕ್ಕೆ ಸರಿಹೊಂದಿತು. ಬಿಚ್ಚಿದ ಹೆಡೆಯ ಮೇಲೆಲ್ಲಾ ಕೃಷ್ಣನು ರಾಹುವಿನಿಂದ ಹಿಡಿಯಲ್ಪಟ್ಟ ಸ್ಥಿತಿಯಲ್ಲಿ ಇರುವ ಸೂರ್ಯನಂತೆ ಬೆಳಗಿದನು.

ಆ ನಾಗದ ಅಗಲವಾದ ಹೆಡೆಯ ಮೇಲೆ ಪಾದಗಳನ್ನು ಊರಿದ ಬಾಲ ಕೃಷ್ಣನು ಅದ್ಭುತವಾಗಿ ಶೋಭಿಸಿದನು. ಕಾಳಿಯ ನಾಗದ ಕೋಪದ ಬುಸುಗುಟ್ಟುವಿಕೆ, ಎಲ್ಲರನ್ನೂ ಹೆದರಿಸುವಂತಿತ್ತು. ಆದರೆ ಸ್ವಾಮಿಯು ಕಿಂಚಿತ್ತೂ ಹೆದರದೆ, ಅವನ ಹೆಡೆಯ ಮೇಲೆ ತನ್ನ ನರ್ತನವನ್ನು ಆರಂಭಿಸಿದನು.

ಫಣಾ ಮಣೀನಾಂ ಪ್ರಭಯೋಪರಕ್ತೇ ಖೇಲನ್ ಬಭೌ ಚಕ್ರಿಣಿ ಚಕ್ರಪಾಣಿಃ।
ಪ್ರದೋಪ ಸಿಂಧೂರಿತ ಮಂಬುವಾಹಂ ಪ್ರಾಚೇತಸೋ ನಾಗ ಇವೋಪ ಮೃದ್ನನ್ ॥೧೧೮॥

ಹೆಡೆಗಳಲ್ಲಿ ಇರುವ ಮಣಿ ಪ್ರಭೆಯಿಂದ (ಕುಂಡಲಾಕಾರವಾಗಿ ಸುತ್ತಿಕೊಂಡ ಮೈಯಿನ) ಶೋಭಿಸುತ್ತಿದ್ದ ಕಾಳಿಯನ ಮೇಲೆ ಉಲ್ಲಾಸವಾಗಿ ಆಟವಾಡಿದ ಚಕ್ರಪಾಣಿಯು, ದಟ್ಟವಾದ ಮೇಘವನ್ನು ಆವರಿಸಿರುವ ವರುಣನಂತೆ ಕಂಡನು.

ಪ್ರಣೇಮುಷಾಂ ಪ್ರಾಣಭೃತಾಮುದೀರ್ಣಂ ಮನೋ ವಿನೇಷ್ಯನ್ ವಿಷಮಾಕ್ಷ್ಯವಕ್ತ್ರಂ।
ಅಕಲ್ಪಯತ್ ಪನ್ನಗ ಮರ್ದನೇನ ಪ್ರಾಯೇಣ ಯೋಗ್ಯಾಂ ಪತಗೇಂದ್ರವಾಹಃ ॥೧೧೯॥

ತನ್ನನ್ನು ನಮಸ್ಕರಿಸುವ ಭಕ್ತರು ಮನಸ್ಸಿನಲ್ಲಿ ಬರುವ ಐದು ಜ್ಞಾನೇಂದ್ರಿಯಗಳನ್ನು ಮುಖವಾಗಿ ಹೊಂದಿ, ಐದು ಕರ್ಮೇಂದ್ರಿಯಗಳನ್ನೂ ನಿಗ್ರಹಿಸುವಂತೆ ಕಾಳೀಯನನ್ನು ಗರುಡ ವಾಹನನು ಮರ್ದಿಸಿದನು. ಕಾಳೀಯನ ಮುಖ, ಕಣ್ಣುಗಳು ಎಲ್ಲವೂ ವಿಕಾರವಾಗಿ ಕಂಡವು. ತನ್ನ ಭಕ್ತನು ಇಂದ್ರಿಯಗಳನ್ನು ನಿಗ್ರಹಿಸುವಂತೆ, ಸ್ವಾಮಿಯು ಆ ಕಾಳೀಯನ ಅನೇಕ ಹೆಡೆಗಳ ಮೇಲೆ ನರ್ತನ ಮಾಡುತ್ತಾ ಆ ದುಷ್ಟ ಸರ್ಪವನ್ನು ನಿಗ್ರಹಿಸಿದನು.

ಇದನ್ನು ನಾರಾಯಣೀಯಂನಲ್ಲಿ ಹೀಗೆ ಅನುಭವಿಸಿದ್ದಾರೆ.

ಅಧಿರುಹ್ಯ ತತಃ ಫಣಿರಾಜ ಫಣಾನ್ನನೃತೇ ಭವತಾ ಮೃದುಪಾದ ರುಚಾ।
ಕಲಶಿಂಜಿತ ನೂಪುರ ಪಂಜುಮಿಳತ್ಕರ ಕಂಕಣ ಸಂತುಲ ಸಂಕ್ವಣಿತಂ ॥

ಅನಂತರ ಫಣಿರಾಜನ ಹೆಡೆಗಳ ಮೇಲೇರಿ ನಿನ್ನ ಮೃದು ಪಾದಗಳಿಂದ ನೀನು ನರ್ತನ ಮಾಡಲಾರಂಭಿಸಲು ನಿನ್ನ ಕೈಗಳ ತಾಳದಿಂದ ಕಂಕಣಗಳು ಮನೋಹರವಾದ ಶಬ್ದವನ್ನು ಮಾಡಿದವು. ಮತ್ತು ನರ್ತಿಸುವ ಸಮಯದಲ್ಲಿ ಕಾಲಿನ ನೂಪುರಗಳ ಮೃದು ಮಧುರವಾದ ಝೇಂಕಾರವೂ ಉಂಟಾಯಿತು.

ಈ ಶ್ಲೋಕಕ್ಕೆ ಶ್ರೀ ಅಪ್ಪಯ್ಯ ದೀಕ್ಷಿತರು ವಿಸ್ತಾರವಾದ ವ್ಯಾಖ್ಯಾನವನ್ನು ಅನುಗ್ರಹಿಸಿದ್ದಾರೆ.

ತದ್ಭೋಗ ಬೃಂದೇ ಯುಗಪನ್ ಮುಕುಂದಶ್ಚಾರೀ ವಿಶೇಷೇಣ ಸಮೈಕ್ಷಿ ನೃತ್ಯನ್।
ಪರ್ಯಾಕುಲೇ ವೀಚಿಗಣೇ ಪಯೋಧೇಃ ಸಂಕ್ರಾಂತ ಬಿಂಬೌ ಬಹುಧೇವ ಚಂದ್ರಃ॥೧೨೦॥

ತಲೆಯಿಂದ ಅಡಿಯವರೆಗೂ ಆ ಕಾಳೀಯನ ಫಣಿಗಳ ಮೇಲೆ ಆಡುವಾಗ, ಒಂದೇ ಹೆಡೆಗಳ ಮೇಲೂ ನರ್ತನ ಮಾಡುತ್ತಾ ಇದ್ದ ಆ ಕೃಷ್ಣನು, ಒಂದೇ ಚಂದ್ರನು ಸಮುದ್ರದಲ್ಲಿ ಅನೇಕ ಬಿಂಬಗಳನ್ನು ತೋರುತ್ತಾ ಶೋಭಿಸುವಂತೆ ಬೆಳಗಿದನು.

ಕಾಳೀಯ ನರ್ತನದ ವರ್ಣನೆ ಮುಂದುವರೆದಿದೆ. ಯಾವ ನೃತ್ಯಪಟುವಿಗೂ ಕಡಿಮೆ ಯಿಲ್ಲದಂತೆ ಆ ಸರ್ಪದ ಹೆಡೆಗಳ ಮೇಲೆ ಶ್ರೀಕೃಷ್ಣನು ನರ್ತಿಸಿದ್ದಾನೆ.

ತದುತ್ತಮಾಂಗಂ ಪರಿಕಲ್ಪ್ಯ ರಂಗಂ ತರಂಗ ನಿಷ್ಪನ್ನ ಮೃದಂಗ ನಾದಂ।
ಪ್ರಶಸ್ಯಮಾನ ಸ್ತ್ರಿದಶೈರಕಾರ್ಷೀ ದಿವ್ಯಾಹತಾ ಮಾರ ಭಟೀ ಮನಂತಃ ॥೧೨೧॥

ಕಾಳೀಯನ ತಲೆಯನ್ನು ನಾಟ್ಯ ಸ್ಥಳವನ್ನಾಗಿ ಮಾಡಿಕೊಂಡು ಯಮುನೆಯ ಅಲೆಗಳ ಶಬ್ದವನ್ನು ಮೃದಂಗವನ್ನಾಗಿ ಮಾಡಿಕೊಂಡು, ದೇವತೆಗಳು ವಿಶೇಷವಾಗಿ ಕೊಂಡಾಡುತ್ತಿರುವಾಗ, ತಡೆಯಿಲ್ಲದ ವಿಶೇಷ ನರ್ತನವನ್ನು ಶ್ರೀಕೃಷ್ಣನು ಮಾಡಿದನು. ಅವನ (ಅನಂತನ) ಆಟಕ್ಕೆ ಅಂತ್ಯವೆಲ್ಲಿಯದು ? ಹಿಂದೆ ಯಾರೂ ಎಂದೂ ನೋಡಿರದ ಅದ್ಭುತ ನಾಟ್ಯವನ್ನು ಮಾಡಿದ್ದಾನೆ ಆ ಯದುನಂದನ.

ಇದನ್ನು ನಾರಾಯಣೀಯಂನಲ್ಲಿ ಹೀಗೆ ಹೇಳಿದ್ದಾರೆ.

ರುಚಿರ ಕಂಪಿತ ಕುಂಡಲ ಮಂಡಲಃ
ಸುಚಿರಮೀಶ ನನರ್ತಿಥ ಪನ್ನಗೇ।
ಅಮರ ತಾಡಿತ ದುಂದುಭಿ ಸುಂದರ
ವಿಯತಿ ಗಾಯತಿ ದೈವತ ಯೌವತೇ ॥

ಅಮರರು ನುಡಿಸುತ್ತಿದ್ದ ದುಂದುಭಿಯ ಸುಂದರ ತಾಳಕ್ಕೆ ಅನುಗುಣವಾಗಿ ಆಕಾಶದಲ್ಲಿ ದೇವ ಸುಂದರಿಯರ ಸಮೂಹ ಹಾಡುತ್ತಿರಲು ನೀನಿಲ್ಲಿ ಸರ್ಪದ ಮೇಲೆ ಸುಂದರವಾಗಿ ದೀರ್ಘ ಕಾಲದವರೆಗೂ ನರ್ತನ ಮಾಡುತ್ತಿದ್ದೆ. ನಿನ್ನ ನರ್ತನದಿಂದ ನಿನ್ನ ಕುಂಡಲ ಮಂಡಲಗಳು ಮನೋಹರವಾಗಿ ಕಂಪಿಸುತ್ತಿದ್ದವು.

ಆ ಭಗವಂತನ ನಾಟ್ಯವನ್ನು ಎಷ್ಟು ವರ್ಣಿಸಿದರೂ ಸಾಲದು.

ಏಕೇನ ಹಸ್ತೇನ ನಿಪೀಡ್ಯ ವಾಲಂ ಪಾದೇನ ಚೈಕೇನ ಫಣಾಮುದಗ್ರಾಂ।
ಹರಿಸ್ತದಾ ಹಂತುಮಿಯೇಷ ನಾಗಂ ಸ ಏವ ಸಂಸಾರ ಮಿವಾಶ್ರಿತಾನಾಂ ॥೧೨೨॥

ಒಂದು ಕೈಯ್ಯಲ್ಲಿ ಬಾಲವನ್ನು ಹಿಡಿದುಕೊಂಡು ಒಂದು ಪಾದದಿಂದ ಎದ್ದು ಎದ್ದು ಬುಸುಗುಟ್ಟುವ ಹೆಡೆಯನ್ನು ತುಳಿಯುತ್ತಾ ಇದ್ದ ಶ್ರೀಕೃಷ್ಣನು ಆಶ್ರಿತರ ಸಂಸಾರ ಸರ್ಪವನ್ನು ನಾಶ ಮಾಡುವ ಹಾಗೆ ಆ ನಾಗವನ್ನು ನಿಗ್ರಹಿಸಿ ಆನಂದಪಟ್ಟನು.

ಸಂಸಾರವೆಂಬುದು ಒಂದು ದೊಡ್ಡ ಸರ್ಪವಿದ್ದಂತೆ. ಇದರ ಬಗ್ಗೆ ಶ್ರೀ ಶಂಕರಾಚಾರ್ಯರು 'ಲಕ್ಷ್ಮೀ ನೃಸಿಂಹ ಕರಾವಲಂಬನ ಸ್ತೋತ್ರ'ದಲ್ಲಿ ಅನೇಕ ಶ್ಲೋಕಗಳಲ್ಲಿ ಹೇಳಿದ್ದಾರೆ. ಇದರಿಂದ ವಿಮುಕ್ತಿ ಪಡೆಯಲು ಅವನನ್ನು ಶರಣುಹೋಗಬೇಕು. ಆಗಲೇ ಆ ಭಗವಂತನು ನಮ್ಮ ಸಂಸಾರ ಸರ್ಪವನ್ನು ನಾಶಪಡಿಸಿ, ನಮಗೆ ಮೋಕ್ಷಾನಂದವನ್ನು ಕರುಣಿಸುತ್ತಾನೆ. ಇಲ್ಲಿ ಆ ಕಾಳೀಯ ನಾಗನನ್ನು ಭಗವಾನ್ ಶ್ರೀಕೃಷ್ಣನು ನಿಗ್ರಹಿಸಿ, ಸಕಲ ಲೋಕಕ್ಷೇಮ ವನ್ನುಂಟು ಮಾಡಿದ್ದಾನೆ.

ಸಪನ್ನಗೀನಾಂ ಪ್ರಣಿಪಾತ ಭಾಜಾಂ ದ್ರವೀಭವನ್ ದೀನ ವಿಲಾಪ ಭೇದೈಃ।
ಪ್ರಸಾದಿತಃ ಪ್ರಾದಿತ ಭರ್ತೃಭಿಕ್ಷಾಂ ಕಿಮಸ್ಯ ನಃ ಸ್ಯಾದ ಪದಂ ದಯಾಯಾಃ॥೧೨೩॥

ನಾಗಪತ್ನಿಯರು ತನ್ನ ಕಾಲಿನಲ್ಲಿ ಬಿದ್ದು ಬಗೆಬಗೆಯಾಗಿ ದೀನರಾಗಿ ಅಳುವುದನ್ನು ಕೇಳಿ ಮನಸ್ಸು ಕರಗಿ ಪ್ರೀತಿಯಿಂದ ಮಾಂಗಲ್ಯ ಭಿಕ್ಷೆಯನ್ನು ನೀಡಿದನು. ದೀನದಯಾಳುವಾದ ಭಗವಂತನ ದಯೆಗೆ ಪಾತ್ರರಾಗದವರು ಯಾರು ? ನಾಗಪತ್ನಿಯರು ಅಮೋಘವಾಗಿ ಶ್ರೀಕೃಷ್ಣನನ್ನು ಸ್ತುತಿಸುತ್ತಾರೆ. ಅದನ್ನು ಭಾಗವತದಲ್ಲಿ ವಿಶೇಷವಾಗಿ ವರ್ಣಿಸಿದ್ದಾರೆ.

ಲೋಲಾಪತಚ್ಚರಣ ಲೀಲಾಹತಿ ಕ್ಷರಿತ ಹಾಲಾಹಲೇ ನಿಜಫಣೇ
ನೃತ್ಯಂತ ಮಪ್ರತಿಘ ಕೃತ್ಯಂ ತಮಪ್ರತಿಮ ಮತ್ಯಂತ ಚಾರುವಪುಷಂ।
ದೇವಾದಿಭಿಃ ಸಮಯ ಸೇವಾದರ ತ್ವರಿತ ಹೇವಾಕ ಘೋಷಮುಖರೈಃ
ದೃಷ್ಟ್ವಾವಧಾನಮಥ ತುಷ್ಟಾವ ಶೌರಿ ಮಹಿರಿಷ್ಟಾವರೋಧ ಸಹಿತಃ ॥೧೨೪॥

ಆ ನರ್ತನ ಸಮಯದಲ್ಲಿ ಒಂದೊಂದು ಕಾಲುಗಳನ್ನು ಎತ್ತಿ ಆಟಕ್ಕಾಗಿ ಹೆಡೆಗಳ ಮೇಲೆ ಇಡುತ್ತಾ, ವಿನೋದದಿಂದ ಕುಣಿದಾಡುವಾಗ, ವಿಷವೆಲ್ಲವೂ ಹೊರಕ್ಕೆ ಬಂದು ತನ್ನ ಹೆಡೆಗಳಲ್ಲಿ ಆಡುತ್ತಿರುವವನೂ, ತಡೆಯಿಲ್ಲದ ವೇಗವುಳ್ಳವನೂ, ದಿವ್ಯವಾದ ಶರೀರವುಳ್ಳವನೂ ಆದ, ಅವನನ್ನು ಆ ಸಮಯದಲ್ಲಿ ಸೇವಿಸಬೇಕೆಂದು ದೇವ ಸಿದ್ಧ ಗಂಧರ್ವರೂ ಎಲ್ಲರೂ ಆಕಾಶದಲ್ಲಿ ಕೂಡಿದರು. ಬಿಚ್ಚಿದ ಹೆಡೆಗಳ ಮೇಲೆ ಅದ್ಭುತವಾಗಿ ನರ್ತಿಸಿದ ಆ ಶ್ರೀಕೃಷ್ಣನ ನಾಟ್ಯ ಚತುರತೆಯನ್ನು ಕಂಡ ಎಲ್ಲರೂ ಅವನನ್ನು ಬಹುವಾಗಿ ಸ್ತುತಿಸಿ ಕೊಂಡಾಡಿದರು. ಈ ರೀತಿ ಬೆಳಗಿದ ಶ್ರೀಕೃಷ್ಣನನ್ನು ನೋಡಿ ಕಾಳೀಯ ನಾಗವು ನಮಸ್ಕರಿಸಿ ತನ್ನ ಉಸಿರನ್ನು ಭಿಕ್ಷೆಯಾಗಿ ಕೇಳಿ ಪಡೆದು, ತನ್ನ ಪತ್ನಿಯರೊಡನೆ ಮತ್ತೆ ಸೇರಿದನು.

ಇದು ಅಮೋಘವಾದ ಶ್ಲೋಕ. ಆ ಸರ್ವೇಶ್ವರನ ನಾಟ್ಯವನ್ನು ಯಮಕಾಲಂಕಾರವನ್ನು ಬಳಸಿ ಶ್ರೀ ದೇಶಿಕರು ವರ್ಣಿಸಿದ್ದಾರೆ.

ಆಕಾಶದಲ್ಲಿ ಸಿದ್ಧರೂ, ಗಂಧರ್ವರೂ, ಇತರ ದೇವತೆಗಳೆಲ್ಲರೂ ಸೇರಿ, ಆ ಅಪೂರ್ವ ನರ್ತನವನ್ನು ನೋಡಿ, ಆನಂದಿಸಿದರು. ಕಾಳೀಯ ನಾಗನು ಭಗವಂತನನ್ನು ಪ್ರಾರ್ಥಿಸಿ ಪ್ರಾಣಭಿಕ್ಷೆಯನ್ನು ಪಡೆದನು.

ಮೊದಲನೆಯ ಸಾಲಿನಲ್ಲಿ 'ಲಾ' ಎಂಬ ಅಕ್ಷರವು ಮೂರು ಬಾರಿ
ಎರಡನೆಯ ಸಾಲಿನಲ್ಲಿ 'ತ್ಯ' ಎಂಬ ಅಕ್ಷರವು ಮೂರು ಬಾರಿ
ಮೂರನೆಯ ಸಾಲಿನಲ್ಲಿ 'ವಾ ಎಂಬ ಅಕ್ಷರವು ಮೂರು ಬಾರಿ
ನಾಲ್ಕನೆಯ ಸಾಲಿನಲ್ಲಿ 'ಷ್ಟಾ' ಎಂಬ ಅಕ್ಷರವು ಮೂರು ಬಾರಿ ಪ್ರಯೋಗಿಸಲ್ಪಟ್ಟಿದೆ.

ಹರಿಚರಣ ಸರೋಜನ್ಯಾಸಧನ್ಯೋತ್ತಮಾಂಗಃ ಶಮಿತ ಗರುಡಭೀತಿಃ ಸಾನುಬಂಧಃ ಸನಾಗಃ
ಯುಗ ವಿರತಿ ದಶಾಯಾಂ ಯೋಗ ನಿದ್ರಾನುರೂಪಾಂ
ಶರಣಮಶರಣಃ ಸನ್ ಪ್ರಾಪಶಯ್ಯಾಂ ತದೀಯಾಂ ||೧೨೫||

ಭಗವಂತನ ಪಾದಕಮಲದ ಗುರುತನ್ನು ತನ್ನತಲೆಯಲ್ಲಿ ಧರಿಸಿ ಧನ್ಯನಾದ ಕಾಳೀಯನು ಆ ಚಿಹ್ನೆಯನ್ನು ನೋಡುವಾಗಲೇ ಗರುಡನು ದೂರ ಹೋಗುತ್ತಾನೆಂದು ನಿನ್ನನ್ನು ಬಾಧಿಸುವುದಿಲ್ಲವೆಂದು ಶ್ರೀ ಕೃಷ್ಣನು ಹೇಳಿದ್ದರಿಂದ ಆಶ್ಚರ್ಯಪಟ್ಟು ಪ್ರಳಯ ಕಾಲದಲ್ಲಿ ಭಗವಂತನು ತನ್ನ ಯೋಗ ನಿದ್ರೆಗಾಗಿ ಏರ್ಪಡಿಸಿದ ಸಮುದ್ರದಲ್ಲಿ, ಯಮುನೆಯು ಸೇರದ ಸ್ಥಳದಲ್ಲಿ ಹೋಗಿ ವಾಸ ಮಾಡತೊಡಗಿದನು. (ತನ್ನ ಭಕ್ತರಿಗೆ ತನ್ನ ಜಾಗವನ್ನೇ ಭಗವಂತನ ನೀಡುತ್ತಾನೆ).

ಶ್ರೀ ಕೃಷ್ಣನು ಕಾಳೀಯನನ್ನು ನಿಗ್ರಹಿಸಿದುದರಿಂದ, ಅವನಿಗೆ ಎಲ್ಲ ಕಾಲಕ್ಕೂ ಅನುಕೂಲ ವಾಗುವಂತಹ ಸೌಭಾಗ್ಯವು ದೊರಕಿತು. ಅವನ ಜೀವಿತದ ಉಳಿದ ಕಾಲ ಪೂರ್ತ ಅವನಿಗೆ ಗರುಡನ ಭಯವಿರಲಿಲ್ಲ. ಏಕೆಂದರೆ ಶ್ರೀ ಕೃಷ್ಣನ ಪಾದಚಿಹ್ನೆ ಅವನ ತಲೆಯ ಮೇಲೆ ಬಿದ್ದಿದ್ದರಿಂದ, ಗರುಡನು ಅವನ ಹತ್ತಿರ ಬರುವುದಿಲ್ಲವೆಂದು ಸ್ವಾಮಿಯು ಅವನಿಗೆ ಅಭಯವನ್ನು ನೀಡಿದನು. ಅದರಂತೆ ಕಾಳೀಯನು ನಿರ್ಭಯನಾಗಿ ಯಮುನೆಯನ್ನು ಬಿಟ್ಟು ಸಮುದ್ರದಲ್ಲಿ ವಾಸಿಸತೊಡಗಿದನು.

ವಿವಿಧ ಮುನಿ ಗಣೋಪ ಜೀವ್ಯತೀರ್ಥಾ ವಿಗಮಿತ ಸರ್ಪಗಣಾ ಪರೇಣ ಪುಂಸಾ।
ಅಭಜತ ಯಮುನಾಂ ವಿಶುದ್ಧಿ ಮಗ್ರ್ಯಾಂ
ಶಮಿತ ಬಹಿರ್ಮತ ಸಂಪ್ಲವಾ ತ್ರಯೀವ ||೧೨೬||

ಪರಮ ಪುರುಷನು, ಸರ್ಪಗಳ ಸಮೂಹವನ್ನು ನಿಗ್ರಹಿಸಿದುದರಿಂದ ಅನೇಕ ಮಹರ್ಷಿ ಗಳು, ಆನಂದದಿಂದ ಯಮುನೆಯಲ್ಲಿ ಇಳಿದು ಅನುಷ್ಠಾನಗಳನ್ನು ಮಾಡಿಕೊಳ್ಳುವ ಹಾಗೆ ಯಮುನೆಯು ಶಾಸ್ತ್ರಗಳನ್ನು ಸಂಪ್ರದಾಯಗಳನ್ನು ತಿಳಿಸುವ ವೇದಗಳಂತೆ ಪರಿಶುದ್ಧಳಾಗಿ ಶೋಭಿಸಿದಳು.

ಯಮುನೆಯು ಪರಿಶುದ್ಧಳಾದಳು. ಇದುವರೆಗೂ ಧೈರ್ಯದಿಂದ ಸ್ನಾನ, ಆಹ್ನಿಕಗಳನ್ನು ನಡೆಸಲು ಹೆದರುತ್ತಿದ್ದ ಋಷಿ ಮುನಿಗಳು ಕಾಳೀಯನು ಯಮುನೆಯನ್ನು ಬಿಟ್ಟು ಹೋಗಿದ್ದರಿಂದ, ಈಗ ನಿರ್ಭಯವಾಗಿ ಯಮುನೆಯಲ್ಲಿ ತಮ್ಮ ನಿತ್ಯಕರ್ಮಗಳನ್ನು ನಡೆಸಲು ತೊಡಗಿದರು.

ಇದಾದ ಬಳಿಕ ಪ್ರೇಮಾನಂದದಿಂದ ಅವನ ಪ್ರದಕ್ಷಿಣೆ ಮಾಡಿ, ವಂದಿಸಿ, ಅವನಿಂದ ಬೀಳ್ಕೊಂಡು, ತನ್ನ ಪತ್ನೀ-ಪುತ್ರ, ಪರಿವಾರದೊಂದಿಗೆ ಹಾಗೂ ಬಂಧು-ಬಾಂಧವರೊಂದಿಗೆ ಸಮುದ್ರದಲ್ಲಿ ಸರ್ಪಗಳು ವಾಸವಾಗಿರುವ ರಮಣಕ ದ್ವೀಪಕ್ಕೆ ಪ್ರಯಾಣ ಮಾಡಿದನು.

ಹೀಗೆ ಲೀಲಾಮಾನುಷನಾದ ಭಗವಾನ್ ಶ್ರೀಕೃಷ್ಣನ ಕೃಪೆಯಿಂದ ಯಮುನೆಯ ನೀರು ಕೇವಲ ವಿಷಹೀನವಾದುದಲ್ಲ, ಆಗಿನಿಂದಲೇ ಅಮೃತದಂತೆ ಮಧುರವೂ ಪವಿತ್ರವೂ ಆಯಿತು.

ಅವಧೃತ ಭುಜಂಗ ಸಂಗದೋಷಾ ಹರಿಣಾ ಸೂರ್ಯಸುತಾ ಪವಿತ್ರಿತಾ ಚ ।
ಅಪಿ ತತ್ಪದ ಜನ್ಮನಃ ಸಪತ್ನ್ಯಾ ಬಹುಮಂತವ್ಯತರಾ ಭೃಶಂ ಬಭೂವ ॥೧೨೭॥

ಯೋಗ್ಯಳಾದ ಒಬ್ಬ ಸ್ತ್ರೀಗೆ, ಜಾರನಾದ ಒಬ್ಬನ ಸಹವಾಸವು ಹೇಗೆ ಅನೇಕ ದೋಷಗಳಿಗೆ ಕಾರಣವಾಗುವುದೋ, ಅದೇ ರೀತಿ ಸೂರ್ಯನ ಮಗಳಾದ ಯಮುನೆಗೆ ಕಾಳೀಯನ ಸಹವಾಸದಿಂದ ದೂಷಿತಳಾಗಿದ್ದಳು. ಈಗ ಸಕಲ ಪಾಪಗಳನ್ನು ಹೋಗಲಾಡಿಸುವ ಭಗವಂತನಿಂದ ಆ ದೋಷಗಳೆಲ್ಲವೂ ನೀಗಲ್ಪಟ್ಟವು. ಭಗವಂತನ ಮತ್ತು ಭಾಗವತರ ಸಹವಾಸವು ಎಲ್ಲರನ್ನೂ ಪರಿಶುದ್ಧ ಮಾಡುತ್ತದೆ. ಆ ಕಾರಣದಿಂದ ಭಗವಂತನ ತಿರುವಡಿಗಳ ಸಂಬಂಧವೊಂದನ್ನೇ ಹೊಂದಿರುವ ತನ್ನ ಭವತಿಯಾದ ಗಂಗೆಗಿಂತ ಯಮುನೆಯು ಹೆಚ್ಚು ಪವಿತ್ರಳು.

ಗಂಗೆಗಿಂತ ಯಮುನೆಯು ಪವಿತ್ರಳು. ಗಂಗೆಗೆ ಕೇವಲ ಸ್ವಲ್ಪ ಕಾಲ ಮಾತ್ರ ಭಗವಂತನ ಅಡಿದಾವರೆಗಳ ಸಂಪರ್ಕ ದೊರೆಯಿತು. ಆದರೆ ಯಮುನೆಗೆ ದೀರ್ಘಕಾಲ ಭಗವಂತನ ಒಡನಾಟ ದೊರೆತು, ಅವಳು ತ್ರಿಲೋಕ ಪೂಜ್ಯಳಾದಳು.

ಶ್ರೀಮದ್ಭಾಗವತದ ದಶಮ ಸ್ಕಂಧದ ಶ್ಲೋಕ ಹೀಗಿದೆ:-

ಯೋಽಸ್ಮಿನ್ಸ್ನಾತ್ವಾ ಮದಾಕ್ರೀಡೆ ದೇವಾದೀಂಸ್ತರ್ಪಯೇಜ್ಜಲೈಃ ।
ಉಪೋಷ್ಯ ಮಾಂ ಸ್ಮರನ್ನರ್ಚೇತ್ಸರ್ವಪಾಪೈಃ ಪ್ರಮುಚ್ಯತೇ ॥


ಈ ಕಾಳಿಯ ಮಡುವಿನಲ್ಲಿ ನಾನು ಕ್ರೀಡಿಸಿದ್ದರಿಂದ ಇದರಲ್ಲಿ ಸ್ನಾನಮಾಡಿ, ನೀರಿನಿಂದ ದೇವತೆಗಳಿಗೆ, ತರ್ಪಣ ಮಾಡುವ ಜನರು ಹಾಗೂ ಉಪವಾಸವಿದ್ದು ನನ್ನನ್ನು ಸ್ಮರಿಸುತ್ತಾ, ಪೂಜೆ ಮಾಡುವವರು ಎಲ್ಲ ಪಾಪಗಳಿಂದ ಮುಕ್ತರಾಗಿ ಹೋಗುವರು.

'ನಿರ್ಬಾಧ ಗೋಚಾರಣ'ವೆಂಬ ಚತುರ್ಥಃ ಸರ್ಗವು ಮುಗಿದುದು



ಪಂಚಮಃ ಸರ್ಗಃ - ೫

ಋತು ವರ್ಣನೆ



ಈ ಸರ್ಗದಲ್ಲಿ 98 ಶ್ಲೋಕಗಳಿವೆ. ಪ್ರಮುಖವಾಗಿ ಈ ಸರ್ಗದಲ್ಲಿ ವಿವಿಧ ಋತುಗಳ ವರ್ಣನೆ ಇದೆ. ವಸಂತ ಋತುವಿನಲ್ಲಿ ಪ್ರಕೃತಿಯಲ್ಲಿ ಕಂಡು ಬರುವ ವಿವಿಧ ವೈವಿಧ್ಯಗಳು. ಆ ಋತು ಹೇಗೆ ಪ್ರೇಮಿಗಳಿಗೆ ಆನಂದದಾಯಕವಾಗಿರುತ್ತದೆ ; ನಂತರ ಬರುವ ಶರದೃತುವಿನ ವೈಭವವ ವರ್ಣನೆಗಳಿವೆ.

ರಾಮಕೃಷ್ಣರು ಬೇಟೆಯಾಡಲು ಬರುವುದು, ಗೋಪಾಲಕರು ಅವರೊಡನೆ ಆನಂದದಿಂದ ಕಾಡಿನಲ್ಲಿ ವಿಹರಿಸುವುದು. ವರ್ಷಾಕಾಲ ವರ್ಣನೆ - ಇತ್ಯಾದಿಗಳ ವಿವರಣೆಯಿದೆ. ಕೊನೆಯಲ್ಲಿ ಪ್ರತಿ ವರ್ಷದಂತೆ ಗೋಪಾಲಕರು ಇಂದ್ರನ ಪೂಜೆ ಮಾಡಲು ನಿರ್ಧರಿಸಿ, ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಆರಂಭಿಸುವುದು. ಅಲ್ಲಿಯವರೆಗಿನ ಕಥಾ ಪ್ರಸಂಗಗಳಿವೆ.

ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1-5	ಬೃಂದಾವನದಲ್ಲಿ ವಸಂತ ಋತುವಿನ ಆರಂಭದ ವರ್ಣನೆ
6-13	ಗೋಪಾಲಕರೊಡನೆ ಶ್ರೀಕೃಷ್ಣ-ರಾಮರ ವಿಹಾರ
14-36	ಕಾಡಿನಲ್ಲಿ ಬೇಟೆ, ಗೋಪಾಲಕರ ರಕ್ಷಣೆ
37-47	ವರ್ಷಾಕಾಲ ವರ್ಣನೆ
48-95	ಶರತ್ಕಾಲದ ವರ್ಣನೆ, ಯಮುನೆಯ ವರ್ಣನೆ ಇತ್ಯಾದಿ.
96-98	ನಂದಗೋಪರು ಇಂದ್ರನ ಪೂಜೆ ಆರಂಭಿಸಲು ಚಿಂತನೆ ಮಾಡುವುದು.

ಪಂಚಮಃ ಸರ್ಗಃ - ೫

ಋತು ವರ್ಣನೆ

ತತಃ ಸಮಾನಿತರ ಸಾಲಪಾಕಃ ಸಂವೀಜಯನ್ ಪಾಟಲ ಗಂಧವಾಹೈಃ।
ನಿರೂಢಮಲ್ಲೀ ವಿಭವೋ ನಿದಾಘಃ ಸೀರಾಯುಧಂ ಶೌರಿ ಸಖಂ ಸಿಷೇವೇ ॥೧॥

ಮತ್ತೆ ಕೆಲವು ದಿನಗಳಲ್ಲಿ ಮಾವಿನ ಹಣ್ಣುಗಳು ಚೆನ್ನಾಗಿ ಹಣ್ಣಾಗಿಬಿಟ್ಟ ಮೇಲೆ ಪಾದಿರಿ ಹೂವುಗಳ ಸುವಾಸನೆಯನ್ನು ಚೆನ್ನಾಗಿ ಕೊಡುವಾಗ, ಸುಂದರವಾದ ಮಲ್ಲಿಗೆ ಹೂವುಗಳ ಕಾಲವು ಪ್ರಾಪ್ತವಾಗಿ ಶ್ರೀಕೃಷ್ಣನನ್ನು, ಅವನ ಅಣ್ಣನಾದ ಬಲರಾಮನನ್ನು ಸೇವೆ ಮಾಡಲು ಪ್ರಾರಂಭಿಸಿತು.

ಈ ಸರ್ಗದಲ್ಲಿ ಪ್ರಕೃತಿ ವರ್ಣನೆಯನ್ನು ಆಚಾರ್ಯರು ಚೆನ್ನಾಗಿ ಮಾಡಿದ್ದಾರೆ. ವರ್ಷಾಕಾಲ, ಶರತ್ಕಾಲ ಮುಂತಾದವುಗಳನ್ನು ಕಾವ್ಯದಿಂದ ಕೂಡಿದ ಶ್ಲೋಕಗಳಿಂದ, ಅನೇಕ ಸುಂದರ ಉಪಮೆಗಳನ್ನು ಕೊಟ್ಟು ತಮ್ಮ ಕವಿತಾ-ಪ್ರೌಢಿಮೆಯನ್ನು ಮೆರೆದಿದ್ದಾರೆ.

ಶ್ರೀಕೃಷ್ಣ- ಬಲರಾಮರು ಭಗವಂತನ ಅವತಾರವೆಂದು ಪ್ರಕೃತಿಗೂ ಚೆನ್ನಾಗಿ ಗೊತ್ತು. ಅವರುಗಳ ಸೇವೆ ಮಾಡಲು ಪ್ರಕೃತಿಗೂ ಉತ್ಸಾಹ, ಆನಂದ, ಸುವಾಸನೆಗಳನ್ನು ಬೀರುವ ಪುಷ್ಪಗಳು ಕೃಷ್ಣನ ಪದತಲದಲ್ಲಿ ತಮ್ಮನ್ನು ಯಾವಾಗ ಅರ್ಪಿಸುವರೋ ಎಂದು ತವಕದಿಂದ ಕಾಯುತ್ತಿರುತ್ತವೆ. ಬೃಂದಾವನದಲ್ಲಿ ಪೈಪೋಟಿಯ ಮೇಲೆ ಸಸ್ಯಗಳು ಸುವಾಸನೆಯನ್ನು ಬೀರುವ ಹೂವುಗಳನ್ನು ಬಿಟ್ಟು ಶ್ರೀಕೃಷ್ಣ- ಬಲರಾಮರ ಸೇವೆಗೆ ಕಂಕಣ ಬದ್ಧರಾಗಿ ನಿಂತಿದ್ದವು.

ಅಬಿ ಭೃತೀನಾಂ ಕುಚಕುಂಭ ಕರ್ತ್ಯಾ ಮಾಲಿಪ್ತ ಕರ್ಪೂರ ಹಿಮೋದಕಾನಾಮ್ ।
ಸ ಸುಭ್ರುವಾಂ ದೇಹ ಗುಣೇನ ಯೂನಾಂ ಆಸೀತ್
ವಸಂತಾದಪಿ ಮಾನನೀಯಃ ॥೨॥

ಆ ಗ್ರೀಷ್ಮ ಕಾಲದಲ್ಲಿ ಕೊಡದಂತಿರುವ ಸ್ತನಗಳನ್ನು ಮುಚ್ಚಿಕೊಳ್ಳಲು ಪಚ್ಚೆ ಕರ್ಪೂರಗಳನ್ನು ಪೂಸಿರುವ ಬಟ್ಟೆಗಳನ್ನು ತೊಟ್ಟ ಅಂಗನೆಯರು, ಅಲ್ಲಲ್ಲಿ ನಡೆದಾಡುವರು. ಆ ಗ್ರೀಷ್ಮ ಕಾಲವು ಯೌವನದಲ್ಲಿರುವವರಿಗೆ ವಸಂತ ಕಾಲಕ್ಕಿಂತಲೂ ವಿಶೇಷವಾಗಿ ಆಪ್ಯಾಯಮಾನವಾಗಿತ್ತು.

ಯೌವನದಲ್ಲಿರುವವರು ಗ್ರೀಷ್ಮ ಕಾಲದಲ್ಲಿ ಹೆಚ್ಚಾಗಿ ತಮ್ಮ ಪ್ರೇಮಿಗಳೊಡನೆ ಸೇರಿ ಕಾಲ ಕಳೆಯಲು ಇಚ್ಛಿಸುವರು. ಆ ಬೃಂದಾವನದಲ್ಲಿ ಗ್ರೀಷ್ಮಕಾಲವು ಅತ್ಯಂತ ಆಹ್ಲಾದಕರವಾಗಿದ್ದು ಅಂಗನೆಯರು, ತಮ್ಮ ಉಬ್ಬಿದ ಸ್ತನಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾ, ಇನಿಯರುಗಳ ಮಾರ್ಗವನ್ನು ಕಾಯುತ್ತಾ, ವಿರಹತಾಪದಲ್ಲಿ ಬೇಯುತ್ತಿದ್ದರು.

ವಿಹಾರಯೂನಾ ಭಜತಾಸ್ವಯಂ ತತ್ ಭೃಜಾಂಗನಾ ವಿಭ್ರಮ ಕಿಂಕರತ್ವಮ್ ।
ನಿತಾಂತ ಧನ್ಯಾಃ ಸ್ವಗುಣೈರಭೂವನ್ ನಿರ್ವಿಶ್ಯಮಾನಾ ಋತವಃ ಕ್ರಮೇಣ ॥೩॥

ಶ್ರೀಕೃಷ್ಣನು ಬೃಂದಾವನದಲ್ಲಿ ಗೋಪಸ್ತ್ರೀಯರೊಡನೆ ವಿಲಾಸಗಳಿಗೆ ತಾನೇ ವಶಪಟ್ಟು ಆಟವಾಡಿ ಅವನಿಂದ ಅನುಭವಿಸಲ್ಪಟ್ಟ ವಿಧವಿಧವಾದ ಋತುಗಳಲ್ಲೆವೂ, ತಾವೇ ಭಾಗ್ಯವನ್ನು ಪಡೆದುದಾಗಿ ಆನಂದಪಟ್ಟವು. ತಮ್ಮಲ್ಲಿರುವ ಪ್ರಕೃತಿ ಸೌಂದರ್ಯವೆಲ್ಲಾ ಪ್ರಯೋಜನಕ್ಕೆ ಬಂತೆಂದು ಖುಷಿಪಟ್ಟವು.

ಒಂದೊಂದು ಋತುವಿನಲ್ಲಿ ಒಂದೊಂದು ವಿಶೇಷವಿರುತ್ತದೆ. ಎಲ್ಲ ಋತುಗಳೂ ಸಹ ಪ್ರೇಮಿಗಳಿಗೆ ಆನಂದವನ್ನು ನೀಡುತ್ತವೆ. ಬೃಂದಾವನದಲ್ಲಿದ್ದಾಗ, ತನ್ನ ಶೃಂಗಾರ ಚೇಷ್ಟೆಗಳಿಂದ ಶ್ರೀಕೃಷ್ಣನು ಗೋಪಿಯರನ್ನೆಲ್ಲಾ ತನ್ನವಶಪಡಿಸಿಕೊಂಡಿದ್ದನು. ಋತುಗಳೆಲ್ಲವೂ ತಮ್ಮಲ್ಲಿರುವ ಎಲ್ಲಾ ಪ್ರಕೃತಿ ಸೌಂದರ್ಯವನ್ನು ಶ್ರೀಕೃಷ್ಣನ ಪ್ರೀತಿಗಾಗಿಯೇ ಸಮರ್ಪಿಸಿದ್ದವು. ಹಾಗೂ ಆ ಸಮರ್ಪಣೆಯಲ್ಲೇ ಸಾರ್ಥಕತೆಯನ್ನು ಪಡೆದಿದ್ದವು. ಸಂತರು ಯಾವ ರೀತಿ 'ಶ್ರೀ ಕೃಷ್ಣಾರ್ಪಣ' ಎನ್ನುವುದರಲ್ಲೇ ಬದುಕಿನ ಸಾರ್ಥಕತೆ ಕಂಡುಕೊಳ್ಳುವರೋ ಅದೇ ರೀತಿ.

ಕೃತಾವಸೇಕಾ ಇವ ಕೃಷ್ಣಗೀತೈರ್ವನಧ್ರುಮಾ ವರ್ಧಿತ ತುಂಗಶೃಂಗಾಃ।
ಅಯತ್ನಲಬ್ಧಾನಿ ಗವಾಂ ಬಭೂವುಃ ಸ್ತಾಯೀನಿ ವರ್ಷಾತಪ ವಾರಣಾನಿ ॥೪॥

ಕಾಡಿನಲ್ಲಿರುವ ಮರಗಳು ಕೃಷ್ಣನ ಗೀತರಸದಿಂದ ವೃದ್ಧಿಹೊಂದಿದ ಹಾಗೆ ಚೆನ್ನಾಗಿ ಬೆಳೆದು, ಉದ್ದವಾದ ಕೊಂಬೆಗಳನ್ನು ಹೊಂದಿ ಹಸುಗಳಿಗೆ ಅವು ತಮ್ಮ ಕೆಳಗೆ ವಿಶ್ರಮಿಸಿಕೊಳ್ಳುವ ಹಾಗೆ ಕೊಡೆಯಂತೆ ಹರಡಿ ಮಳೆ-ಬಿಸಿಲುಗಳಿಂದ ಕಾಪಾಡಿ, ರಕ್ಷಣೆ ನೀಡಿದವು.

ಶ್ರೀಕೃಷ್ಣನು ಪ್ರತಿನಿತ್ಯ ಬೃಂದಾವನದಲ್ಲಿ ಕಾಡಿಗೆ ಹೋಗಿ ವೇಣುಗಾನ ಮಾಡುತ್ತಿದ್ದನು. ಅದರಿಂದಾಗಿ, ಕಾಡಿನಲ್ಲಿದ್ದ ಮರಗಳೆಲ್ಲವೂ ಆ ಗಾನರಸಕ್ಕೆ ವಶವಾಗಿ, ಅದೇ ಅವುಗಳಿಗೆ ನೀರು ಗೊಬ್ಬರದಂತಿದ್ದು, ಯಥೇಚ್ಛವಾಗಿ, ದೊಡ್ಡದಾಗಿ ಬೆಳೆದಿದ್ದವು ಆ ಮರಗಳು, ಬೃಂದಾವನದಲ್ಲಿದ್ದ ಹಸುಕರುಗಳಿಗೆಲ್ಲಾ, ತಮ್ಮ ದೊಡ್ಡದಾದ, ನೀಳವಾದ ರೆಂಬೆಗಳಿಂದ, ಮಳೆ, ಬಿಸಿಲು ಇತ್ಯಾದಿಗಳಿಂದ ರಕ್ಷಣೆಯನ್ನೂ , ನೆರಳನ್ನೂ ನೀಡಿ, ಹಸುಕರುಗಳೆಲ್ಲಾ ಆನಂದದಿಂದ ನಲಿದಾಡುವಂತೆ ಮಾಡಿದವು.

ಬಭಂಜ ವಾತಃ ಪ್ರಬಲೋ ನ ವೃಕ್ಷಾನ್ ನ ತಿಗ್ಮರಶ್ಮಿಃ ಸಲಿಲಂ ತತಾಪ।
ದದಾಹ ವನ್ಯಾಂ ನ ಚ ತತ್ರ ದಾವಃ ಸಂರಕ್ಷಿತಾ ಯತ್ರ ಗವಾಂ ಸ ದೇವಃ ॥೫॥

ಕಾಡಿನ ದೊಡ್ಡ ಮರಗಳು ದೊಡ್ಡ ಗಾಳಿಯು ಬೀಸಿದರೂ ಅಲುಗದೆ ಹೆಚ್ಚಾಗಿ ಬಿಸಿಲಿನ ತಾಪ ಬೀಳದಂತೆ, ಮಾಡಿ, ಕಾಡುಗಿಚ್ಚಿನ ತಾಪಕ್ಕೆ ಮರಗಳು ಉರಿಯದಂತೆಯೂ ಇದ್ದು ಹಸುಗಳಿಗೆ ಯಾವ ಕಷ್ಟವೂ ತೋರಲಿಲ್ಲ. ಆ ಭಗವಂತನೇ ಅವುಗಳಲ್ಲಿ ವಿಶೇಷ ಪ್ರೀತಿ ಯುಳ್ಳವನಾಗಿದ್ದನಲ್ಲವೇ ?

ಭಗವಂತನು ಎಲ್ಲಿರುತ್ತಾನೋ ಅಲ್ಲಿ ಯಾರಿಗೂ ಯಾವ ತಾಪವೂ ತೋರುವುದಿಲ್ಲ. ಅದೇ ರೀತಿ ಶ್ರೀಕೃಷ್ಣನ ರಕ್ಷಣೆಯಲ್ಲಿದ್ದ ಆ ಬೃಂದಾವನದ ಗೋವುಗಳು, ದೊಡ್ಡ ಗಾಳಿಯ ಹೊಡೆತದಿಂದಾಗಲೀ, ಕಾಡುಗಿಚ್ಚಿನ ತಾಪದಿಂದಾಗಲೀ, ಶ್ರಮ ಪಡದೆ, ಆನಂದದಾಯಕ ವಾಗಿ ಮೇವನ್ನು ಮೇಯುತ್ತಾ ಸ್ವರ್ಗದಲ್ಲಿರುವಂತೆ ಶ್ರೀಕೃಷ್ಣನ ಸಾನ್ನಿಧ್ಯವನ್ನು ಅನುಭವಿ ಸುತ್ತಾ ಜೀವಿಸುತ್ತಿದ್ದವು. ಭಗವಂತನ ಕೃಪಾದೃಷ್ಟಿಗೆ ಪಾತ್ರವಾದ ಅವೇ ಧನ್ಯ ಜೀವಿಗಳು.

ಗಾವೋ ಮಹಿಷ್ಯಶ್ಚ ಗಭೀರನಾದಾಹ ಸಂಚಾರಿತಾಃ ಶಾರ್ಙ್ಗಭೃತಾ ಯಥಾರ್ಹಮ್।
ಕಲಿಂದ ಕನ್ಯಾಮವಗಾಹ್ಯ ಕಾಲೇ ಘರ್ಮಾಪದಾಂ ಸಂಪದಮೇವ ಭೇಜುಃ ॥೬॥

ಕೊಂಬಿನಿಂದುಂಟಾದ ಕೊಳಲನ್ನು ಕೈಯ್ಯಲ್ಲಿ ಹಿಡಿದಿರುವ ಶ್ರೀಕೃಷ್ಣನಿಂದ ಓಡಾಡಲ್ಪಟ್ಟ ಜಾಗಗಳಿಗೆ ಹೋಗಿ, ಉತ್ಸಾಹವಾದ ಆ ವಾದ್ಯ ಘೋಷವನ್ನು ಕೇಳಿ ಯಮುನೆಯ ಮರಳಿ ನಲ್ಲಿ ಓಡಿಯಾಡುವ ಹಸುಗಳೂ, ಎಮ್ಮೆಗಳೂ, ಸಂಪತ್ತನ್ನು ಹೊಂದಿದಂತಾದವು.

ಶ್ರೀಕೃಷ್ಣನು ಎಲ್ಲೆಲ್ಲಿ ಕೊಳಲನ್ನು ನುಡಿಸುವನೋ, ಅಲ್ಲೆಲ್ಲಾ ಹಸುಗಳು ಅವನ ಹಿಂದೆ ಹೋಗಿ ಆ ಕೊಳಲಿನ ನಾದವನ್ನು ಆಸ್ವಾದಿಸಿ ಸಂತೋಷಪಡುತ್ತಿದ್ದವು. ಆ ಕೊಳಲಿನ ನಾದವೇ ಅವುಗಳಿಗೆ ಆಹಾರದಂತಿದ್ದವು. ಯಮುನೆ ತೀರದುದ್ದಕ್ಕೂ ಆ ಕೃಷ್ಣನ ಕೊಳಲಿನ ನಾದ ಪ್ರತಿಧ್ವನಿಸುತ್ತಿತ್ತು.

ಗತೇಽಪಿ ಭೂಯಿಷ್ಟಗುಣೇ ವಸಂತೇ ಗೋಪಾಃ ಸುಖಂ ಚಾರಿತ ಗೋಧನಾಸ್ತೇ।
ಕಲಿಂದ ಜಾನೂಪ ಸಮೀಪ ಭಾಜಃ ಕಾಲಂ ಕಠೋರಾತಪ ಮತ್ಯನೈಷುಃ ॥೭॥

ಗೋಪಾಲಕರೂ ತಮಗೆ ಅನೇಕ ಕ್ಷೇಮಗಳನ್ನುಂಟುಮಾಡುವ ಕಾಲಗಳನ್ನು ಸುಖವಾಗಿ ಯಮುನೆಯ ತೀರದಲ್ಲಿ ಕಳೆದು, ಆನಂದವನ್ನು ಅನುಭವಿಸಿದರು.

ಬೃಂದಾವನಕ್ಕೆ ಬಂದ ಮೇಲೆ, ಗೋಪಾಲಕರು ಅನೇಕ ಋತುಗಳ ಕಾಲ, ಯಮುನೆಯ ತೀರದಲ್ಲಿ ಆನಂದದಿಂದ ಕಾಲವನ್ನು ಕಳೆದು ಆ ಕೃಷ್ಣನ ದಿವ್ಯನಾದ ಸಾನ್ನಿಧ್ಯ ವನ್ನು ಹೊಂದಿ, ಯಮುನೆಗೆ ಶೋಭೆಯನ್ನು ತಂದುಕೊಟ್ಟರು. ಆ ಕಾಲದಲ್ಲಿ ಅವರು ಗಳೆಲ್ಲಾ ಅನೇಕ ಸೌಖ್ಯಗಳನ್ನು ಅನುಭವಿಸಿದರು.

ವಿತೇನಿರೇ ಜಂಗಮ ಧಾಮ ಕಲ್ಪೈ ರನೋಭಿರಧ್ಯಾಸಿತ ಚತ್ವರಾಣಿ ।
ನಿದಾಘ ವರ್ಷಾನುಗುಣಾನಿ ಗೋಪಾ ಸ್ಥಾನಾನಿ ಗೋವತ್ಸ ಗುಣೋಚಿತಾನಿ ॥೮॥

ಆ ಬೃಂದಾವನದಲ್ಲಿ, ಯಮುನೆಯ ತೀರದಲ್ಲಿ, ದೊಡ್ಡ ದೊಡ್ಡ ಬಂಡಿಗಳಲ್ಲಿ ಬಂದ ಗೋಪಾಲಕರು ನೆರಳು ಚೆನ್ನಾಗಿರುವ ಪ್ರದೇಶಗಳಲ್ಲಿ ಹಸುಗಳಿಗೂ ಕರುಗಳಿಗೂ ಎಲ್ಲಾ ಅನುಕೂಲವಿರುವ ಜಾಗಗಳಲ್ಲಿ ತಮ್ಮ ನಿವಾಸವನ್ನು ಏರ್ಪಡಿಸಿಕೊಂಡರು.

ಬೃಂದಾವನಕ್ಕೆ ವಲಸೆ ಬಂದ ಆ ಗೋಪಾಲಕರೆಲ್ಲರೂ, ತಾವು ಯಾವ ಕಾಲಕ್ಕೂ ಅಲ್ಲಿ ತಂಗುವ ಹಾಗೆ, ಅನುಕೂಲವಾಗಿರುವ ಜಾಗಗಳನ್ನು ಹುಡುಕಿಕೊಂಡು "**ಜಲರಾಮಣ್ಯಕಂ ಯತ್ರ ವನರಾಮಣ್ಯಕಂ ತಥಾ**" ಎನ್ನುವಂತೆ ಜಲ ಸಮೃದ್ಧಿ ಸಸ್ಯ ಸಮೃದ್ಧಿ ಇರುವ ಅನುಕೂಲಕರ ಪ್ರದೇಶಗಳಲ್ಲಿ ತಮ್ಮ ಮನೆಗಳನ್ನು ಕಟ್ಟಿಕೊಂಡು ವಾಸಿಸಲು ಆರಂಭಿಸಿದರು. ಎಲ್ಲಾ ಋತುಗಳಲ್ಲೂ ವಾಸ ಯೋಗ್ಯವಾದ ನಿವಾಸಗಳನ್ನು ಏರ್ಪಡಿಸಿಕೊಂಡರು.

ಅಕಾಲಕಾಲ್ಯೇನ ಪರೇಣ ಪುಂಸಾಂ ಸಾಮ್ಯಂ ಗತಾನಾಮಿವ ವಲ್ಲವೀನಾಮ್ ।
ಸುಖಾಯ ಸರ್ವೇ ಸಮಯಾ ಬಭೂವುಃ ಸ್ವೈಃ ಸ್ವೈರ ವಿಚ್ಛಿನ್ನಗುಣೈರ್ವಿಶೇಷೈಃ॥೯॥

ಕಾಲವೆಂಬುವ ತತ್ವವು ತನ್ನ ಪ್ರಭಾವವನ್ನು ಎಲ್ಲಿ ತೋರಿಸಲು ಸಾಧ್ಯವಿಲ್ಲವೋ, ಆ ಪರಮ ಪುರುಷನ ಬಳಿ, ಗೋಪಸ್ತ್ರೀಯರು ಸಾಮ್ಯವನ್ನು ಹೊಂದಿದ್ದರಿಂದ, (ಅವನ ಹಾಗೆಯೇ), ಎಲ್ಲಾ ಕಾಲಗಳಲ್ಲಿಯೂ ಎಲ್ಲರೂ ಸಂತೋಷಾನುಭವವನ್ನು ಹೊಂದಿದರು.

ಭಗವಂತನು ಕಾಲಾತೀತನು. ಶ್ರೀಕೃಷ್ಣನು ಭಗವಂತನ ಅವತಾರವಾದ್ದರಿಂದ ಶ್ರೀಕೃಷ್ಣನ ಸಾಮೀಪ್ಯ ಹೊಂದಿದ್ದ ಗೋಪಸ್ತ್ರೀಯರು ಸ್ವಾಭಾವಿಕವಾಗಿಯೇ, ಕಾಲ ವೈಪರೀತ್ಯ ಏನೇ ಇರಲಿ, (ಬಿಸಿಲು ಮಳೆ ಏನೇ ಇದ್ದರೂ) ಅವನ ಸಾನ್ನಿಧ್ಯದಲ್ಲಿ ಪರಮ ಸುಖ ಅಂದರೆ ಮುಕ್ತಿಗೆ ಸಮನಾದ ಸುಖವನ್ನು ಅನುಭವಿಸುತ್ತಿದ್ದರು. "**ಉಭೇ ವಿದ್ವಾನ್ ಪುಣ್ಯ ಪಾಪೇ ವಿಧೂಯ ನಿರಂಜನಂ ಪರಮಂ ಸಾಮ್ಯ ಮುಪೈತಿ**" ಎಂಬ ಶೃತಿವಾಕ್ಯದಂತೆ, ಅವನ ಸಾನ್ನಿಧ್ಯದಲ್ಲಿ ಎಲ್ಲವನ್ನೂ ಮೀರಿದ್ದರು.

ಸುಧಾಪ್ಲವಸ್ವೈರ ಸಖೀಮಭಿಖ್ಯಾಂ ವನಾಶ್ರಿತೆ ವರ್ಷತಿ ಕೃಷ್ಣಮೇಘೇ ।
ಮಧ್ಯಂದಿನೇಽಽಪ್ಯಾದದಿರೆ ವಿಹಾರಾನ್ ಗಾವಃ ಪ್ರಕಾಮಂ ಗತಘರ್ಮತಾಪಾಃ ॥೧೦॥

ಕಾಡಿನಲ್ಲಿ ತಂಗಿ ಕೃಷ್ಣನೆಂಬ ಕಾಳಮೇಘವಾದುದು ಅಮೃತ ಪ್ರವಾಹಕ್ಕೆ ಸಮಾನ ವಾದ ತನ್ನ ದೇಹದ ಸೌಂದರ್ಯವನ್ನು ಪ್ರಸರಿಸಿದ್ದರಿಂದ ಹಸುಗಳು ನಡು ಹಗಲಿನಲ್ಲೂ ಯಾವ ತಾಪವನ್ನೂ ಅನುಭವಿಸದೆ, ಆನಂದದಿಂದ ಮೇಯುತ್ತಾ ಇದ್ದವು.

ಬೃಂದಾವನದಲ್ಲಿ ಬೇಸಿಗೆ ಕಾಲದಲ್ಲಿ ಬಿಸಿಲಿನ ಬೇಗೆಯನ್ನು ತಡೆಯುವುದು ಅಸಾಧ್ಯ. ಹಸು-ಕರುಗಳಿಗಂತೂ, ಆ ಸಮಯ ಬಹಳ ತ್ರಾಸದಾಯಕವಾದದ್ದು. ಆದರೆ ಆ ಶ್ರೀಕೃಷ್ಣನ

ಸಾನ್ನಿಧ್ಯ, ಅವುಗಳಿಗೆ ಯಾವ ತಾಪವೂ ತಿಳಿಯದಂತೆ ಮಾಡಿದ್ದು ಅವು ಬೇಸಿಗೆಯಲ್ಲೂ (ಮಧ್ಯಾಹ್ನದ ಬಿಸಿಲಿನಲ್ಲಿಯೂ) ಆನಂದದಿಂದ ಕಾಡಿನಲ್ಲಿ ಮೇಯುತ್ತಾ ಸಂತೋಷದಿಂದ ಇದ್ದವು.

ತಾಪಾಪಹಂತುಃ ಸ್ವಪದಾಶ್ರಿತಾನಾಂ ತತ್ತಾದೃಷಾ ತಸ್ಯ ಸಮೀಕ್ಷಣೇನ ।
ನ ತಸ್ಯ ಗೋಪಾದ್ಯುಷಿತಸ್ಯ ಜಘ್ನೇ ವನಸ್ಯ ವಾತಾತಪ ವಹ್ನಿಪೀಡಾ ॥ ॥೧೧॥

ತನ್ನ ಪಾದಗಳನ್ನು ಆಶ್ರಯಿಸಿದವರಿಗೆ, ತಾಪಗಳನ್ನು ನೀಗುವ ಅವನ ದಿವ್ಯವಾದ ಕಟಾಕ್ಷದಿಂದ ಗೋಪರು, ಆ ಕಾಡಿನಲ್ಲಿಯೂ, ಸಹ ಗಾಳಿ, ಮಳೆ, ಬಿಸಿಲು, ಬೆಂಕಿ, ಇವುಗಳ ಬಾಧೆಯಿಂದ ವಿಮುಕ್ತರಾಗಿದ್ದರು.

ಭಗವಂತನ ಪಾದಗಳನ್ನು ಆಶ್ರಯಿಸಿದವರಿಗೆ, ಸಂಸಾರ ತಾಪದ ತೀಕ್ಷ್ಣವಾದ ಕಷ್ಟವು ತೋರುವುದಿಲ್ಲ. ಅದೇ ರೀತಿ ಬೃಂದಾವನದಲ್ಲಿದ್ದ ಆ ಗೋಪಾಲಕರೆಲ್ಲರೂ ಶ್ರೀಕೃಷ್ಣನನ್ನು ಆಶ್ರಯಿಸಿದ್ದರಿಂದ, ಅವನ ರಕ್ಷೆಯಲ್ಲಿ ಇದ್ದದ್ದರಿಂದ, ಕಾಡಿನಲ್ಲಿ ಬಾಧಿಸುವ ತೀವ್ರವಾದ ಗಾಳಿ, ಮಳೆ, ಬೆಂಕಿ ಇವುಗಳಿಂದ ಹೆಚ್ಚಿನ ತಾಪವನ್ನು ಪಡದೆ, ಸುಖವಾಗಿಯೇ ಜೀವನ ಸಾಗಿಸುತ್ತಿದ್ದರು. ಭಗವಂತನ ಸಾನ್ನಿಧ್ಯ ಪ್ರಭಾವವೇ ಅಂತಹುದು. ಭಕ್ತರು ಕಷ್ಟಪಡುವುದನ್ನು ಅವನು ಎಂದಿಗೂ ಸಹಿಸಲಾರ.

ಪಸಾಧಿತಾಃ ಪಾಟಲಪುಷ್ಪಜಾಲೈಃ ಪ್ರಾಚ್ಛಾಯ ನಿದ್ರಾ ಶಮಿತೋಪ ತಾಪಾಃ ।
ದಿನಾವಸಾನ ಸ್ನಪನೇನ ಶೀತಾ ಗೋಪ್ಯಃ ಪ್ರಿಯೈರ್ನಿರ್ವಿವಿಶುರ್ನಿಶೀಥಾನ್ ॥೧೨॥

ಒಳ್ಳೆಯ ನೆರಳಿನಲ್ಲಿ, ಬಿಸಿಲಿನ ಬೇಗೆಯನ್ನು ನೀಗಿ, ಚೆನ್ನಾಗಿ ಸ್ನಾನ ಮಾಡುವ ಕಾರಣ, ಪಾದರಿ ಪುಷ್ಪಗಳಿಂದ ಅಲಂಕಾರ ಮಾಡಿಕೊಂಡ ಯೌವನವತಿಯರಾದ ಸ್ತ್ರೀಯರು ರಾತ್ರಿಯ ಹೊತ್ತು ತಮ್ಮ ಪ್ರೇಮಿಯನ್ನು ಸೇರಿ ಆನಂದಪಡುತ್ತಿದ್ದರು.

ಬೃಂದಾವನದಲ್ಲಿ ಯೌವನವತಿಯರಾದ ಸ್ತ್ರೀಯರು, ಉತ್ತಮವಾದ ಪುಷ್ಪಗಳಿಂದ ಅಲಂಕೃತರಾಗಿ, ಶುಚಿರ್ಭೂತರಾಗಿ, ರಾತ್ರಿಯ ವೇಳೆ ತಮ್ಮ ತಮ್ಮ ಪ್ರಿಯಕರರನ್ನು ಸಂಧಿಸಿ ದಾಂಪತ್ಯ ಸುಖವನ್ನು ಅನುಭವಿಸುತ್ತಾ, ಸುಖಿಸುತ್ತಿದ್ದರು. ದಾಂಪತ್ಯ ಸುಖದ ಅನುಭವಕ್ಕೆ ರಾತ್ರಿಯ ವೇಳೆ ಪ್ರಶಸ್ತವಾದ ಕಾಲ.

ನಿದಾಘತ್ರೈ ಕ್ಷಣ್ಯಾಧಿಹ ದುಷ್ಟಸತ್ವಾಃ ಕ್ಷೋಭಂ ಗವಾಂ ಕುರ್ಯುರತಿ ಕ್ಷುಧಾರ್ತಾಃ ।
ಇತಿ ಕ್ಷಮಾಣಃ ಸಹಜೇನ ಸಾರ್ಧಂ ವ್ಯ ಧತ್ತನಾಥೋ ಮೃಗಯಾವಿಹಾರಮ್॥೧೩॥

ಬಿಸಿಲಿನ ತಾಪದಿಂದ ಹಸಿವನ್ನು ತಡೆಯದೆ, ಕಾಡಿನಲ್ಲಿ ದುಷ್ಟಮೃಗಗಳು ಹಸುಗಳನ್ನು ಕೊಲ್ಲಲು ಪ್ರಯತ್ನಿಸಬಹುದೆಂದು ಮುಂದಾಲೋಚಿಸಿ, ಅಣ್ಣನಾದ ಬಲರಾಮನೊಡನೆ, ಅವುಗಳನ್ನು ಕಾಪಾಡಲು ಶ್ರೀಕೃಷ್ಣನು ಮುಂದಾದನು.

ಬೃಂದಾವನವು ಕಾಡಾಗಿದ್ದರಿಂದ, ದುಷ್ಟಮೃಗಗಳ ಸಂಚಾರವು ಅಧಿಕವಾಗಿಯೇ ಇತ್ತು. ಬೇಸಿಗೆಯ ಕಾಲದಲ್ಲಿ, ಬಿಸಿಲಿನ ತಾಪವನ್ನು ತಡೆಯಲಾರದೆ, ದುಷ್ಟ ಮೃಗಗಳು ಗುಹೆಗಳಿಂದ ಹೊರ ಬಂದು, ಸಾಧು ಪ್ರಾಣಿಗಳಾದ ಹಸು ಮೊದಲಾದುವುಗಳನ್ನೂ ಹಸಿವು ತಡೆಯಲಾರದೇ ಕೊಲ್ಲಬಹುದೆಂದು ಮುಂದಾಲೋಚಿಸಿ, ಶ್ರೀಕೃಷ್ಣನು ಅವುಗಳನ್ನು ಕೊಂದು ಹಸುಗಳನ್ನು ರಕ್ಷಿಸಲು ಬಲರಾಮನೊಡನೆ ಅಗತ್ಯವಾದ ಯೋಚನೆಗಳನ್ನು ಮಾಡಿದನು.

ಪ್ರಸಕ್ತಗಂಗಾ ಯಮುನಾನುಷಕ್ತ್ಯಾ ಭಾಸಾ ತಯೋರಾಹಿತಗಾಢ ಮೋಹಾಃ।
ಅಯತ್ನಲಭ್ಯೋಪಗಮಾಸ್ತದಾಽಽಸನ್ ವ್ಯಾಲಾಃ ಕ್ಷಣಾದರ್ಭಕವೇದಯೋಗ್ಯಾಃ ॥೧೪॥

ಗಂಗೆಯು ಯಮುನೆಯನ್ನು ಕೂಡುವ ಹಾಗೆ ಶ್ರೀಕೃಷ್ಣ-ಬಲರಾಮರೆಂಬ ಬಾಲಕರ ದೇಹ ಸೌಂದರ್ಯದಲ್ಲಿ ಆಸೆ ಪಟ್ಟು, ಕಾಡು ಮೃಗಗಳು ಅನಾಯಾಸವಾಗಿ ಹತ್ತಿರಕ್ಕೆ ಬಂದಾಗ, ಅವುಗಳನ್ನು ಚಿಕ್ಕ ಮಕ್ಕಳನ್ನು ಹೊಡೆಯುವಂತೆ ಹೊಡೆದುಹಾಕುತ್ತಿದ್ದರು.

ಶ್ರೀಕೃಷ್ಣ ಬಾಲರಾಮರ ಸಂಗಮ, ಗಂಗೆ ಯಮುನೆಯರ ಸಂಗಮವಿದ್ದಂತೆ. ಮೊದಲೇ ಸುಂದರ ಪುರುಷರಾಗಿದ್ದ ಅವರು, ತಾರುಣ್ಯದಲ್ಲಿ ಇನ್ನೂ ಅತಿ ಸುಂದರವಾಗಿ ಕಾಣುತ್ತಿದ್ದರು. ಸ್ತ್ರೀಯರು ಅವರನ್ನು ಮೋಹಿಸುವಂತೆಯೂ, ಕಾಡುಪ್ರಾಣಿಗಳಿಗೂ, ಅವರ ಸುಂದರ ದೇಹದ ಮೇಲಿನ ಆಶಯವು ಇದ್ದಂತಿತ್ತು. ಅದಕ್ಕಾಗಿ ಅವರನ್ನು ಭಕ್ಷಿಸಲು ಕಾಡುಪ್ರಾಣಿಗಳು ಹತ್ತಿರಕ್ಕೆ ಬಂದಾಗ, ತಮ್ಮ ಉದ್ದೇಶವನ್ನು ಸುಲಭವಾಗಿ ಸಫಲಗೊಳಿಸಲು ಅವಕಾಶ ದೊರೆತದ್ದರಿಂದ, ಆ ಸಮಯಗಳಲ್ಲಿ ಆ ದುಷ್ಟ ಮೃಗಗಳನ್ನು ಇಬ್ಬರು ಅಣ್ಣತಮ್ಮಂದಿರು ಮಕ್ಕಳಾಟದಂತೆ ಲೀಲಾಜಾಲವಾಗಿ ಹೊಡೆದು ಹಾಕುತ್ತಿದ್ದರು.

ಅನುಪ್ರಯಾತೈರಿವ ದೇವಮಾಯಾ ಮಚ್ಛೇದನೀಯೈರಪಿ ದಿಗ್ಗಜಾನಾಮ್।
ವನಂ ತದಂತರ್ಗತ ಸತ್ವಜಾತಂ ಪಾಶೈರವಾರುಂಧತ ವತ್ಸಪಾಲಾಃ ॥೧೫॥

ಎಲ್ಲಾ ಬಗೆಯ ಜೀವಾತ್ಮರುಗಳನ್ನು ಗುಣಮಯವಾದ ಮಾಯೆಗೆ ಕಟ್ಟಿ ಹಾಕುವ ಸ್ವಾಮಿಯಂತೆ ಹಸುಗಳನ್ನು ಮೇಯಿಸುವ ಗೋಪಾಲಕರು ಆ ಮೃಗಗಳನ್ನು ಕಟ್ಟಿಹಾಕಿದರು.

ಆ ದುಷ್ಟ ಮೃಗಗಳು ಕೃಷ್ಣ ಬಲರಾಮದಿಂದ ಆಕರ್ಷಿತರಾಗಿ ಹತ್ತಿರಕ್ಕೆ ಬಂದಾಗ, ಸಮಯ ಕಾಯುತ್ತಿದ್ದ ಗೋಪಾಲಕರು, ಭಗವಂತನ ಮಾಯೆಗೆ ಕಟ್ಟಿ ಬೀಳುವ ಜೀವಾತ್ಮರಂತೆ ತಮ್ಮ ದೊಡ್ಡ ಹಗ್ಗಗಳಿಂದ ಕಟ್ಟಿಹಾಕಿ, ಅವುಗಳ ಕಾಟದಿಂದ ತಪ್ಪಿಸಿಕೊಳ್ಳುತ್ತಿದ್ದರು.

ಅನಂತ ಲೀಲೋಚಿತ ಭೂಮಿಕಾಪ್ತೈರಾವೇದಿತಾನ್ ವೇದವನೇಚರೇಂದ್ರೈಃ।
ಪಥಃ ಸಮಾಸ್ಥಾಯ ಗೃಹೀತ ಚಾಪಾ ಗುಪ್ತಸ್ಥಿತಿಂ ಗೋಪಸುತಾ ವಿತೇನುಃ ॥೧೬॥

ವೇದಗಳೇ ಭಗವಂತನ ಆಟಗಳಿಗೆ ತಕ್ಕ ವೇಷಗಳನ್ನು (ಬೇಡರುಗಳಂತೆ) ಹಾಕಿಕೊಂಡು ಅನೇಕ ಶ್ರೇಷ್ಠವಾದ ಮಾರ್ಗಗಳನ್ನು ತೋರಿಸಿದಾಗ, ಅವುಗಳಲ್ಲಿ ಅಲ್ಲಲ್ಲಿ ಮರಗಳ ಹಿಂದೆ ಮರೆಯಾಗಿ ನಿಂತು ಆ ಗೋಪಸುತರು ಆಟವಾಡುತ್ತಿದ್ದರು.

ಶ್ರೀಕೃಷ್ಣನ ಜೊತೆ ಅನೇಕ ಗೋಪಾಲಕರು, ವಿಧವಿಧವಾದ ಆಟಗಳನ್ನು ಆಡುತ್ತಿದ್ದರು. ಬೇಡರುಗಳಂತೆ, ಕಿರಾತರಂತೆ ವೇಷಗಳನ್ನು ಧರಿಸಿ, ಶ್ರೀಕೃಷ್ಣನನ್ನು ರಂಜಿಸುತ್ತಿದ್ದರು. ಶ್ರೀಕೃಷ್ಣನು ಭಗವಂತನಾದ್ದರಿಂದ, ವೇದಗಳೇ ಆ ವೇಷಗಳನ್ನು ಧರಿಸಿದ್ದಂತಿತ್ತು.

ಕ್ಷಣಾದ ನಿರ್ಧಾರ್ಯ ನಿದಾನಭೇದಂ ದತ್ತಾಪಹಾಸ್ಯೈರ್ವನದೇವತಾಭಿಃ।
ಮೃಗಾಯಿತಂ ತತ್ರ ಮೃಗೇಂದ್ರಮುಖ್ಯೈಃ ಸಿಂಹಾಯಿತಂ ಗೋಕುಲಸಾರಮೇಯೈಃ॥೧೭॥

ಅಲ್ಲಿ ಸಿಂಹ ಮುಂತಾದವು ಸಾಧಾರಣ ಮೃಗಗಳಂತೆ ಇದ್ದವು. ಗೋಕುಲದ ನಾಯಿಗಳು ಸಿಂಹದಂತಿದ್ದವು. ಆ ಸ್ಥಿತಿಯಲ್ಲಿ ಅವರನ್ನು ನೋಡಿ ವನ ದೇವತೆಗಳು ಅವಸರದಲ್ಲಿ ಒಂದು ಕ್ಷಣ ಇದಕ್ಕೆ ಕಾರಣವೇನೆಂಬುದನ್ನು ಅರಿಯಲಾಗದೆ, ಪರಿಹಾಸ ಪಟ್ಟರು. (ಭಗವಂತನೇ ಇದಕ್ಕೆ ಕಾರಣವೆಂದು ಅರಿಯಲಾಗದೆ ಪರಿಹಾಸ ಮಾಡಿದರು).

ದುಷ್ಟ ಮೃಗಗಳು ತಮ್ಮ ದುಷ್ಟತನವನ್ನು ಮರೆತು, ಸಾಧು ಪ್ರಾಣಿಗಳಂತೆ ವರ್ತಿಸುತ್ತಿದ್ದವು ಆ ಬೃಂದಾವನದಲ್ಲಿ ನಾಯಿಗಳು ಸಿಂಹಗಳಂತೆ ಘರ್ಜಿಸುತ್ತಿದ್ದವು. ಈ ಬದಲಾವಣೆಗೆ ಕೃಷ್ಣ ಸಾನ್ನಿಧ್ಯವೇ ಕಾರಣ. ಆದರೆ ಇದನ್ನು ಅರಿಯಲಾಗದೆ, ವನದೇವತೆ ಗಳು ಪ್ರಾಣಿಗಳ ವಿರುದ್ಧ ವರ್ತನೆಗೆ ಅವುಗಳನ್ನು ಪರಿಹಾಸ್ಯ ಮಾಡಿದವು. ಅನೇಕ ಋಷ್ಯಾಶ್ರಮಗಳಲ್ಲಿ ಈ ರೀತಿಯ ಪರಿವರ್ತನೆಯು ಆಗುತ್ತಿತ್ತೆಂದು ಪುರಾಣಗಳಲ್ಲಿ ವರ್ಣನೆಯಿದೆ. ಶ್ರೀಕೃಷ್ಣನಿರುವಲ್ಲಿ ಎಲ್ಲರೂ ಸಾಧುಗಳಾಗಿಯೇ ಇರುತ್ತಾರೆ.

ಪರಿಸ್ಫುರತ್ಕೃತ್ರಿಮ ಸತ್ವಜಾತೈಃ ಪ್ರಸಾರಿತೈಃ ಶ್ಯಾಮಪಟೈರ್ವನಾಂತೇ।
ಸ್ವಯಂ ತಿರೋಧಾಯ ತದರ್ಹಶಬ್ದಾ ಗೋಪಾಮೃಗಾನ್ ಗೂಢಚರಾಶ್ಚಕರ್ಷುಃ॥೧೮॥

ಕಾಡಿನಲ್ಲಿರುವ ಹುಲಿ, ಸಿಂಹ, ಆನೆ, ಕರಡಿ, ಜಿಂಕೆ ಮುಂತಾದ ಮೃಗಗಳ ಚಿತ್ರಗಳನ್ನು ಬರೆದು, ಕಾಡಿನಲ್ಲಿ ಅಲ್ಲಲ್ಲಿ ಹರಡಿ ಅವುಗಳ ಕೆಳಗೆ ತಾವು ಮರೆಯಾಗಿ ಇದ್ದು ಚಿತ್ರಗಳಲ್ಲಿರುವ ಜಂತುಗಳಂತೆ ಗೋಪಾಲಕರು ಕತ್ತಿ, ಮುಂತಾದುವನ್ನು ಆಯಾ ಮೃಗಗಳಿಗನುಗುಣವಾಗಿ ಮಾಡಿ ವಿನೋದದಿಂದ ಕಾಲ ಕಳೆಯುತ್ತಿದ್ದರು.

ಹುಲಿ, ಕರಡಿ, ಸಿಂಹ ಇವುಗಳ ಸ್ವಭಾವಗಳನ್ನು ಗೋಪರು ವಿಹಾರಕ್ಕಾಗಿ ತಾವೂ ಅನುಕರಣೆ ಮಾಡುತ್ತಿದ್ದರು. ಅವುಗಳ ದೊಡ್ಡ ದೊಡ್ಡ ಚಿತ್ರಗಳನ್ನು ನೆಲದ ಮೇಲೆ ಬರೆದು, ತಾವು ಮರಗಳ ಮಧ್ಯೆ ಮರೆಯಾಗಿ ನಿಂತು, ಅವುಗಳನ್ನು ಬೇಟೆಯಾಡಿ ಕೊಲ್ಲುವಂತೆ ಆಟಗಳನ್ನು ಆಡುತ್ತಾ ವಿನೋದದಿಂದ ಕೃಷ್ಣನೊಡನೆ ಕಾಲ ಕಳೆಯುತ್ತಿದ್ದರು. ಬೃಂದಾವನ ದಲ್ಲಿ ಕೃಷ್ಣನು ಆಡಿದ ಕಾಲ ಗೋಪಾಲಕರ ಜೀವನದಲ್ಲಿ ಒಂದು ಮಹತ್ತರ ಪರ್ವ ಕಾಲ. ಆ ಭಾಗ್ಯ ಬೇರೆ ಯಾರಿಗೂ ಸಿಗಲಿಲ್ಲ.

ಶತಾವರೀ ದಾಮ ನಿಬದ್ಧಮೂರ್ಧ್ನಃ ಶಾರ್ಙ್ಗಧ್ವನಿ ತ್ರಾಸಿತ ಸಿಂಹಯೂಥಾನ್ ।
ಅನೀಕನಾಥ ಪ್ರಮುಖಾನ ಕಾರ್ಷೀದಗ್ರೇಸರಾನ್ ವ್ಯಾಧತ ನೂನನಂತಃ ॥೧೯॥

ಭಗವಾನನು ತನ್ನ ಸೇನೆ ನಾಯಕ ಮೊದಲಾದವರೊಡನೆ ನೀರಿನಿಂದ ನೆನೆಸಿದ ಹಗ್ಗಗಳಿಂದ ತಲೆಯನ್ನು ಕಟ್ಟಿಕೊಂಡು ಬಿಲ್ಲಿನಿಂದ ಸಿಂಹ ಮುಂತಾದ ಮೃಗಗಳನ್ನು ಹೆದರಿಸಿ ಕೊಂಡು ಕಾಡಿನಲ್ಲಿ ಓಡಿಯಾಡುವ ಬೇಡರುಗಳಂತಿದ್ದರು.

'ಶತಾವರಿ' ಎಂಬುದು ಒಂದು ಔಷಧದ ಸಸ್ಯ ವಿಶೇಷ. ಅದರ ಬಿಳಲುಗಳಿಂದ ತಲೆಗೆ ಹಗ್ಗದಂತೆ ಪಟ್ಟಿಯನ್ನು ಕಟ್ಟಿಕೊಂಡು ಬೇಡರುಗಳಂತೆ ಕಾಣುತ್ತಾ, ಬೇಡರ ನಾಯಕರುಗಳಂತೆ ಮೃಗಗಳನ್ನು ಕೊಲ್ಲಲು ಬಿಲ್ಲಿನಿಂದ ಬಾಣಗಳನ್ನು ಪ್ರಯೋಗಿಸುತ್ತಾ, ಆ ಗೋಪರು ಸೇನಾ ನಾಯಕರಂತೆ ಆ ಭಗವಂತನಿಗೆ ವಿನೋದಗಳಿಂದ ರಂಜಿಸುತ್ತಿದ್ದರು.

ವಿಮುಕ್ತಪಾಶಾ ಮಧುವೈರಿಭೃತ್ಯೈ ರ್ಜಿಹ್ವಾಲ ದುರ್ದರ್ಶ ಕರಾಲ ವಕ್ತ್ರಾಃ ।
ನಿಪೇತುರನ್ಯೋನ್ಯ ವಿಮುಕ್ತರೋಷಾಃ ಶ್ವಾನೋ ವರಾಹೇಷು ನಿಶಾತದಂಷ್ಟ್ರಾಃ ॥೨೦॥

ಭಗವಂತನ ಆಟಗಳನ್ನು ನೋಡುವುದರಲ್ಲಿ ಆಸಕ್ತಿ ಹೊಂದಿ, ನಾಲಿಗೆಯನ್ನು ನೀಡಿ ಭಯಂಕರವಾಗಿ ಗರ್ಜಿಸುವ ದೊಡ್ಡ ದೊಡ್ಡ ನಾಯಿಗಳು ತಮ್ಮ ದುಷ್ಟ ಸ್ವಭಾವವನ್ನು ಬಿಟ್ಟು ಒಂದಕ್ಕೊಂದು ಅನ್ಯೋನ್ಯವಾಗಿ ಆಟವಾಡುತ್ತಾ ಕಾಡಿನಲ್ಲಿ ಕಾಲ ಕಳೆಯುತ್ತಿದ್ದವು.

ಭಗವಂತನಾದ ಶ್ರೀಕೃಷ್ಣನು ಮತ್ತು ಇತರ ಗೋಪರು ಆಡುವ ಆಟಗಳನ್ನು ನೋಡುತ್ತಾ, ದೊಡ್ಡ ದೊಡ್ಡ ನಾಲಿಗೆಗಳನ್ನು ಹೊಂದಿರುವ ಬೇಟೆ ನಾಯಿಗಳೂ ಸಹ ತಮ್ಮ ದುಷ್ಟ ಸ್ವಭಾವವನ್ನು ಮರೆತು ಸಾಧಾರಣ ಊರು ನಾಯಿಗಳಂತೆ ವರ್ತಿಸಿ, ಅನ್ಯೋನ್ಯ ವಾಗಿ ಕಾಲ ಕಳೆಯುತ್ತಿದ್ದವು.

ಸಂಭೂಯ ಗೋಪಾಃ ಪ್ರಸಭಂ ಪ್ರಯುಕ್ತೈಃ ಸತ್ವಾನಿ ವನ್ಯಾನಿ ಸಮಗ್ರ ಸತ್ವಾಃ ।
ಗುಹಾಮುಖಾಮ್ರೇಡಿತ ತೀವ್ರ ಘೋಷೈಃ
ಕೋಲಾಹಲೈರಾಕುಲಯಾಂಬಭೂವುಃ ॥೨೧॥

ಗೋಪಾಲಕರು, ತುಂಬಿದ ಫಲಗಳನ್ನು ಹೊಂದಿರುವ ಮರಗಳ ಹಿಂದೆ ಅಡಗಿ ಒಬ್ಬರಿಗೊಬ್ಬರು ಕತ್ತಿ, ಇತ್ಯಾದಿ ಆಯುಧಗಳಿಂದ ಕೋಲಾಹಲ ಮಾಡುತ್ತಾ ಆಟವಾಡು ತ್ತಿದ್ದರು.

ಮರ ಕೋತಿ, ಬಚ್ಚಿಟ್ಟುಕೊಳ್ಳುವುದು ಮುಂತಾದ ಆಟಗಳನ್ನು ಆಡುತ್ತಾ ಜೋರಾಗಿ ಸಿಂಹನಾದಗಳನ್ನು ಮಾಡುತ್ತಾ, ಕತ್ತಿ ವರಸೆ, ಗದಾ ಯುದ್ಧ ಮುಂತಾದ ಆಟಗಳನ್ನೂ ಸಹ ಆಡುತ್ತಾ ಗೋಪರು ಕೃಷ್ಣ ಬಲರಾಮರೊಡನೆ ಸಂತೋಷದಿಂದ ಕಾಲ ಕಳೆಯು ತ್ತಿದ್ದರು. ಈ ಪ್ರಸಂಗವನ್ನು ಶ್ರೀಭಾಗವತದಲ್ಲಿ ವರ್ಣಿಸಲಾಗಿದೆ.

ಅಮೃಷ್ಯತೋ ಮಾನುಷ ಸಿಂಹನಾದಂ ಗಿರೀಂದ್ರರೌಧ್ರೈರಪಿ ದುರ್ನಿರೋಧಾನ್ ।
ಬಭಂಜ ದೃಪ್ತೋ ಬಲಭದ್ರಸಿಂಹಃ ಸಿಂಹಾನ್ ದ್ವಿಪೇಂದ್ರಾನಿವ ದುರ್ನಿವಾರಃ ॥೨೨॥

ದೊಡ್ಡ ಬಂಡೆಗಳನ್ನು ತೆಗೆದುಕೊಂಡು ತಡೆದರೂ ತಡೆಯಲಾಗದ, ಮನುಷ್ಯರು ಮಾಡುವ ಸಿಂಹನಾದವನ್ನು ಕೇಳಿ ಸಹಿಸದ ಸಿಂಹಗಳು ಎಲ್ಲಕಿಂತಲೂ ದೊಡ್ಡ ಸಿಂಹವಾದ ಕೃಷ್ಣನಿಂದ ತಡೆಯಲ್ಪಟ್ಟು ಆನೆಯಂತೆ ನಿಗ್ರಹಿಸಲ್ಪಟ್ಟವು.

ಗೋಪರು ಮಾಡುವ ಸಿಂಹನಾದಗಳನ್ನು ಕೇಳಿದ ನಿಜವಾದ ಸಿಂಹಗಳು ಕೆರಳಿ, ಗೋಪರ ಮೇಲೆ ಬೀಳಲು ಬಂದಾಗ, ಆ ನರಸಿಂಹನಾದ ಶ್ರೀಕೃಷ್ಣನು ಸಿಂಹವು ಆನೆಗಳನ್ನು ಕೊಲ್ಲುವಂತೆ ಆ ಕಾಡಿನ ದುಷ್ಟಪ್ರಾಣಿಗಳನ್ನೆಲ್ಲಾ ಕೊಂದು ಶಾಂತಿ ಕಾಪಾಡಿದನು.

ಗುಜ್ಜಾಕಲಾಪ ಪ್ರತಿನದ್ಧಕೇಶೈರಾಗುಲ್ಫ ಮಾಲಂಬಿತ ಪಿಂಛಜಾಲೈಃ ।
ನಿಷಜ್ಗಿಭಿ ಶ್ಚಾರು ಪೃಷತ್ಕ ಚಾಪೈರ್ಗುಪ್ತೋ ಬಭೌ ಗೋಪಸುತೈರ್ಮುಕುಂದಃ॥೨೩॥

ಉತ್ತಮವಾದ ಮಾಲೆಗಳನ್ನು ಧರಿಸಿ, ಚೆನ್ನಾಗಿ ತಲೆಯನ್ನು ಬಾಚಿ ಎತ್ತಿ ಕಟ್ಟಿ ಅಲಂಕರಿಸಿ ಕೊಂಡಿದ್ದ ಗೋಪಾಲಕರ ಸಮೂಹದಿಂದ ಕೂಡಿ ಬಿಲ್ಲುಬಾಣಗಳನ್ನು ಹಿಡಿದು ಶ್ರೀಕೃಷ್ಣನು ಶೋಭಿಸಿದನು.

ಶ್ರೀಕೃಷ್ಣನು ಸರ್ವಾಲಂಕಾರ ಭೂಷಿತನಾಗಿ, ಗೋಪರ ಮಧ್ಯೆ ಶೋಭಿಸುತ್ತಾ, ಗೋಪಸ್ತ್ರೀಯರ ಮನಸ್ಸನ್ನು ಸೆಳೆಯುತ್ತಾ ಆ ಬೃಂದಾವನದಲ್ಲಿ ಶೋಭಿಸಿದನು.

ಆಕ್ರಾಂತ್ಯಕಂಪೇಷು ನಗೇಷು ಧೈರ್ಯಂ ಶೌರ್ಯಕ್ರಮಂ ಶ್ವಾಪದ ವಿಕ್ರಮೇಷು ।
ಅಶಿಕ್ಷಯತ್ ಕ್ಷೇಮವಿದಾತ್ಮಭೃತ್ಯಾನ್ ವಿಹಾರಗೋಪೋ
ಮೃಗಯಾಪ ದೇಶಾತ್ ॥೨೪॥

ಬೇಟೆಯಿಂದ ಗೋಕುಲಕ್ಕೆ ಉತ್ತಮವಾದ ಆಟವನ್ನು ನೀಡಿದ ಕೃಷ್ಣನು ಬೇಟೆಯೆಂಬ ವ್ಯಾಜದಿಂದ ತನ್ನ ಅನುಚರರಿಗೆ ಯಾರು ಏನೇ ಮಾಡಿದರೂ ಅಲುಗದ ಧೈರ್ಯವುಳ್ಳ ವಾಗಿರುವಂತೆ, ಕಾಡು ಮೃಗಗಳಿಗಿಂತ ಹೆಚ್ಚು ಶೌರ್ಯವಾಗಿರುವವರಂತೆ ಇರಲು ಕಲಿಸಿದನು.

ಗೋಪಾಲಕರೆಲ್ಲರೂ ಸ್ವಾಭಾವಿಕವಾಗಿಯೇ ಋಜು ಸ್ವಭಾವದವರು ಮತ್ತು ಶಾಂತಿ ಪ್ರಿಯರು. ಆದರೆ ಕಾಡಿನಲ್ಲಿ ದುಷ್ಟ ಮೃಗಗಳ ನಡುವೆ ಅವರೂ ಸಹ ಸ್ವಲ್ಪ ಕಠಿಣವಾಗಿಯೇ ಇರಬೇಕು. ಆ ಸ್ವಭಾವವನ್ನು ಶ್ರೀಕೃಷ್ಣನು ಅವರಿಗೆ ಕಲಿಸಿ, ಅವರಿಗೆ ಬೇಟೆಗಾರರ ತರಭೇತಿ ನೀಡಿ, ದುಷ್ಟ ಮೃಗಗಳನ್ನು ಕಂಡರೆ ಧೈರ್ಯವಾಗಿರುವಂತೆ ಶೌರ್ಯದ ಪಾಠವನ್ನು ಕಲಿಸಿದನು.

ಆದಾಯ ಲೂನಾನಿ ಮುಕುಂದಬಾಣೈಃ ಶೃಂಗಾಣಿ ಶೀಘ್ರಂ ವನಕಾಸರಾಣಾಮ್ ।
ಶಾಂರ್ಙ್ಗಪ್ರಮಾಣಾನಿ ಶನೈರಕಾರ್ಷುಸ್ತೈರೇವ ಚಾರುಣಿ ಧನೂಂಷಿ ಬಾಲಾಃ ॥೨೫॥

ಗೋಪಾಲಕರು ಕೃಷ್ಣನ ಬಾಣಗಳಿಂದ ಕತ್ತರಿಸಿ ಬಿದ್ದ ಕಾಡಿನ ಹಸು ಎಮ್ಮೆಗಳ ಕೊಂಬುಗಳನ್ನು ನಾ ಮುಂದು ತಾಮುಂದು ಎಂದು ಕಡಿದು ತಮ್ಮ ಆಟಕ್ಕೆ ಬಿಲ್ಲುಗಳನ್ನಾಗಿ ಮಾಡಿಕೊಂಡರು.

ಕಾಡಿನ ಕೊಬ್ಬದ ಹಸು ಎಮ್ಮೆಗಳ ಕೊಂಬುಗಳು ಬಹಳ ಉದ್ದವಾಗಿ ಗಟ್ಟಿಯಾಗಿ ಇರುತ್ತವೆ. ಶ್ರೀಕೃಷ್ಣನು ಆ ದೃಪ್ತವಾದ ಎಮ್ಮೆ ಹಸುಗಳನ್ನು ಆತ್ಮ ರಕ್ಷಣಾರ್ಥವಾಗಿ ಕೊಲ್ಲಬೇಕಾದುದು ಅನಿವಾರ್ಯವಾಯಿತು. ಆಗ ಆ ಮರಣಿಸಿದ್ದ ಹಸು ಎಮ್ಮೆಗಳ ಕೊಂಬುಗಳಿಂದ, ಗೋಪಾಲಕರು ತಮ್ಮ ಆಟಕ್ಕೆ ಸಾಮಗ್ರಿಗಳನ್ನು ಮಾಡಿಕೊಂಡರು

ಮನುಷ್ಯಮಾಂಸ ಸ್ಪೃಹಯಾ ಸರೋಷಂ ಗುಹಾಂತರಾ ದುತ್ಪತಿತಂ ಪ್ರವೃತ್ತಾನ್ ।
ಶಿಲೀಮುಖೈಃ ಕೀಲಿತ ಶೈಲಕಂಠಾನ್ ಕೃಷ್ಣಸ್ತದಾ ಕೇಸರಿಣಶ್ಚಕಾರ ॥೨೬॥

ಮನುಷ್ಯರ ಮಾಂಸದಲ್ಲುಳ್ಳ ಆಸೆಯಿಂದ, ಅವರುಗಳನ್ನು ಹಿಡಿಯಲು ಬರುವ ಸಿಂಹಗಳನ್ನು ತನ್ನ ಬಾಣಗಳಿಂದ ಹೊಡೆದು, ಅವುಗಳ ಕಂಠಗಳನ್ನು ಮುರಿದು ಕೃಷ್ಣನು ದೂರಕ್ಕೋಡಿಸುತ್ತಿದ್ದನು.

ಬೃಂದಾವನದಲ್ಲಿರುವ ಸುತ್ತಮುತ್ತಲ ಕಾಡುಗಳಿಂದ ದುಷ್ಟ ಮೃಗಗಳು ಗೋಪಾಲಕರನ್ನು ಹಿಡಿದು ತಿನ್ನಲು ಆಶೆಯಿಂದ ಬರುತ್ತಿದ್ದವು. ಆದರೆ ಅವುಗಳನ್ನು ಹಿಡಿದು ಅವುಗಳನ್ನು ಬೆದರಿಸಿ ಹೊಡೆದು ದೂರಕ್ಕೆ ಅಟ್ಟುತ್ತಿದ್ದನು. ಬಾಣ ಪ್ರಯೋಗ ಮಾಡಿ ಕೃಷ್ಣನು ಅವುಗಳ ಬಾಧೆಯನ್ನು ತಪ್ಪಿಸುತ್ತಿದ್ದನು.

ನವಾಹೃತೈನಾರ್ಥಪರೀಕ್ಷ್ಯಿಯಾರ್ಹಾ ಗುಜ್ಜಾಸ್ರಜಂ ಗೋಪ ಕುಮಾರ ವೀರಾಃ ।
ವಿಭಿನ್ನ ವನ್ಯದ್ವಿಪ ಕುಂಭಮುಕ್ತೈರ್ ಮುಕ್ತಾ ಫಲೈರಂತರ ಯಾಂ ಬಭೂವುಃ ॥೨೭॥

ವೀರರಾದ ಗೋಪಾಲಕರು ಕಾಡಿನ ಆನೆಗಳನ್ನು ಹಿಡಿದು ಅವುಗಳ ಕುಂಭ ಸ್ಥಳಗಳಿಂದ ಬಂದ ಮುತ್ತುಗಳನ್ನು ತೆಗೆದುಕೊಂಡು ಮಾಲೆ ಮಾಡಿ ಶ್ರೀಕೃಷ್ಣನಿಗೆ ಸಮರ್ಪಿಸಿ, ಅವನು ಈಗಾಗಲೇ ಧರಿಸಿದ ಇತರ ಮಾಲೆಗಳ ಮೇಲೆ ಇನ್ನೂ ಶೋಭಾಯಮಾನವಾಗುವಂತೆ ಮಾಡಿದರು.

ಗೋಪರಿಗೆ ಕೃಷ್ಣನನ್ನು ಎಷ್ಟು ಅಲಂಕರಿಸಿದರೂ ಸಾಲದು. ಕಾಡಿನ ಆನೆಗಳ ಕುಂಭಸ್ಥಳಗಳಲ್ಲಿ ದೊರೆಯುವ ಮುತ್ತುಗಳ ಮಾಲೆಗಳನ್ನು ಮಾಡಿ, ಮೊದಲೇ ವೈಜಯಂತೀ ವಿಭೂಷಿತನಾದ ಆ ಸ್ವಾಮಿಗೆ ಮೇಲೆ ಮೇಲೆ ಹಾರಗಳನ್ನು ತೊಡಿಸಿ ಆನಂದಪಡುತ್ತಿದ್ದರು. ಶ್ರೀ ಕೃಷ್ಣನನ್ನು ಎಷ್ಟು ಅಲಂಕರಿಸಿದರೂ ಅವರಿಗೆ ತೃಪ್ತಿಯಿಲ್ಲ.

ಶರಾಹತಾನಾಂ ವಿಪಿನೇ ಮೃಗಾಣಾಮಾದ್ರಾಹೃತೈ ಶ್ಚರ್ಮಭಿರಾತ್ತಹರ್ಷಾಃ।
ಅಕಲ್ಪಯನ್ ಆಸ್ತರಣಾನಿ ಗೋಪಾಃ ಸಂವೇಶಯೋಗ್ಯಾನಿ ಸಹಾಯಿನೀನಾಂ ॥೨೮॥

ದೊಡ್ಡ ಗೋಪಾಲಕರು ಕಾಡಿನಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟ ಮೃಗಗಳ ಒದ್ದೆಯಾದ ಚರ್ಮಗಳನ್ನು ಸುಲಿದು ತೆಗೆದು ಆನಂದದಿಂದ ತಮ್ಮ ಮನವಿಯೊಡನೆ ಸೇರಿ ಮಲಗಲು ಹಾಸಿಗೆಗಳನ್ನಾಗಿ ಮಾಡಿಕೊಂಡರು.

ಹುಲಿಗಳ, ಸಿಂಹಗಳ ಚರ್ಮಗಳನ್ನು ಸುಲಿದು ಅವುಗಳಿಂದ ಹಾಸಿಗೆಗಳನ್ನು ಮಾಡಿಕೊಂಡು ಗೋಪಾಲಕರು ತಮ್ಮ ಮನವಿಯರೊಡನೆ ಸಂತೋಷದಿಂದ ರಾತ್ರಿಗಳನ್ನು ಕಳೆಯುತ್ತಿದ್ದರು. ಒಟ್ಟಿನಲ್ಲಿ ಬೃಂದಾವನದಲ್ಲಿ ಎಲ್ಲರೂ ಶ್ರೀಕೃಷ್ಣನ ರಕ್ಷಣೆಯಲ್ಲಿ ಆನಂದದಿಂದ ಕಾಲ ಕಲೆಯುತ್ತಿದ್ದರು.

ಅಭಿನ್ನಪಾರ್ಶ್ವೇರ್ ಶ್ವವಕಾಶ ಭೇದಾತ್ ಭಿನ್ನಸ್ಥಿತೀನ್ ಭೀತಿಮಪೋಹ್ಯವತ್ಸಾನ್।
ನಿರಸ್ತಸಿಂಹೇಷು ಗುಹಾಗೃಹೇಷು ನ್ಯವೀವಿಶನ್ ನಾಥ ನಿಯೋಗ ಭಾಜಃ ॥೨೯॥

ಶ್ರೀಕೃಷ್ಣನ ಆಜ್ಞೆಯನ್ನು ಪಾಲಿಸುವವರು ಸಿಂಹಗಳನ್ನು ಬೇಟೆಯಾಡಿ ಕರುಗಳಿಗೆ ಯಾವ ಭಯವೂ ಇರದಂತೆ ಅವು ಬೇರೆ ಬೇರೆಯಾಗಿ ಇರುವಂತೆ ಸ್ಥಳಗಳನ್ನು ಏರ್ಪಡಿಸಿದರು.

ಪ್ರತ್ಯೇಕವಾಗಿ ಎಲ್ಲಾ ಪ್ರಾಣಿಗಳಿಗೂ ಬೇರೆ ಬೇರೆಯಾಗಿ ನಿವಾಸಗಳನ್ನು ಏರ್ಪಡಿಸಿ, ಅವು ಒಂದಕ್ಕೊಂದು ಜಗಳವಾಡದಂತೆ ಎಚ್ಚರ ವಹಿಸಿ, ಎಲ್ಲವೂ ಸಂತೋಷವಾಗಿರುವಂತೆ ಆ ಗೋಪಾಲಕರು ವ್ಯವಸ್ಥೆ ಮಾಡಿದ್ದರು.

ಅಯಾತ ಯಾಮ್ಯೈರುಚಿರಪ್ರತಾಪಾತ್ ಸುಮೃಷ್ಟ ಪಾಕೈರಧಿಶಲ್ಯ ಶೃಂಗಮ್।
ಮಾಂಸೈರ್ಮೃಗಾಣಾಂ ಮಧುನಾऽऽವಸಿತ್ತೈ ನಂದಸ್ಯಭೃತ್ಯಾ ವಿಪಿನೇನನಂದುಃ ॥೨೦॥

ನಂದ ಗೋಪನ ಕೆಲಸಗಾರರು, ಕಾಡಿನಲ್ಲಿ ಮೃಗ ಮಾಂಸಗಳನ್ನು ಬಾಣದ ತುದಿಯಲ್ಲಿ ಚುಚ್ಚಿ ಚೆನ್ನಾಗಿ ಬೆಂಕಿಯಲ್ಲಿ ಬೇಯಿಸಿ, ಸುಟ್ಟಿದ್ದ ಆ ಮಾಂಸಗಳನ್ನು ಜೇನು ತುಪ್ಪದಲ್ಲಿ ಅದ್ದಿ ಆನಂದದಿಂದ ಭುಜಿಸಿದರು. ಆ ಗೋಪಾಲಕರು.

ಆ ಕಾಡಿನ ಪ್ರಾಣಿಗಳ ಮಾಂಸವು ಬಹಳ ರುಚಿಕರವಾದದ್ದು. ಆ ಮಾಂಸಗಳ ತುಂಡನ್ನು ಬಾಣಗಳ ತುದಿಗೆ ಚುಚ್ಚಿ ಅದನ್ನು ಬೆಂಕಿಯಲ್ಲಿ ಬೇಯಿಸಿ, ಕಾಡಿನ ಜೇನುತುಪ್ಪದಲ್ಲಿ ಅದ್ದಿ ಆ ಗೋಪಾಲಕರು ಸ್ವಾದುವಾದ ಆ ಭೋಜನವನ್ನು ಎಲ್ಲರು ಕುಳಿತು ಮಾಡುತ್ತಾ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಿದ್ದರು.

ನಿವೇದ್ಯಮಾನಾನ್ ವನದೇವತಾಭಿಃ ಸಂಗ್ರಹ್ಯ ವನ್ಯಾನ್ ಉಪದಾ ವಿಶೇಷಾನ್।
ಸಮಂ ಸುಹೃದ್ಭ್ಯಃ ಸಹಸಾವಿಭೇಜೇ ರಾಮಾನುರೋಧೇನ ರಮಾ ಸಹಾಯಃ ॥೨೦॥

ಶ್ರೀಕೃಷ್ಣನೂ, ವನದೇವತೆಗಳಿಂದ ಕೂಡಿ ಸಮರ್ಪಿಸಲ್ಪಟ್ಟ ಕಾಡಿನ ಉಪಹಾರಗಳನ್ನು ಬಲರಾಮನೊಡನೆ ಸೇರಿ ಸಮನಾಗಿ ಹಂಚಿಕೊಂಡು ಸ್ವೀಕರಿಸಿದನು.

ಶ್ರೀಕೃಷ್ಣನು ರಾಜಕುಮಾರನಾಗಿದ್ದರೂ, ಆ ಗೋಪಾಲಕರೊಡನೆ ಸೇರಿ, ತಾನೂ ಅವರಂತೆ ಕಾಡಿನ ಉಪಹಾರಗಳಾದ ಗೆಡ್ಡೆ ಗೆಣಸುಗಳನ್ನೇ ಬಲರಾಮನೊಡನೆ ಆನಂದದಿಂದ ಭುಜಿಸಿ, ತನಗೆ ಎಲ್ಲರೂ ಸಮಾನರೆಂದು ತೋರಿಸಿಕೊಟ್ಟನು.

ತ್ರಾಣಂ ಸತಾಂ ದುಷ್ಕೃತಿನಾಂ ವಿನಾಶಂ ತನ್ವನ್ನಭೀಷ್ಟಂ ಮೃಗಯಾಚ್ಛಲೇನ ।
ಸ್ವಚ್ಛಂದ ಚರ್ಯಾನುಗುಣಂ ಗವಾಂ ತಚ್ಚಕ್ರೇ ವನಂ ಶಾಂತಮೃಗಾವಶೇಷಂ ॥೨೧॥

ತನಗೆ ಇಷ್ಟವಾದ ಸಾಧು ಪರಿತ್ರಾಣ, ದುಷ್ಟ ನಿಗ್ರಹ ಎಂಬುವುಗಳನ್ನು ಅವನು ಬೇಟೆ ಎಂಬ ವ್ಯಾಜದಿಂದ ಮಾಡಿ ಸಾಧುಗಳಾದ ಮೃಗಗಳನ್ನು ಕಾಪಾಡಿ, ದುಷ್ಟ ಮೃಗಗಳನ್ನು ಸಂಹರಿಸಿ, ಎಲ್ಲರೂ ಕಾಡಿನಲ್ಲಿ ನಿರ್ಭಯವಾಗಿ ಓಡಿಯಾಡಿಕೊಂಡಿರುವಂತೆ ಮಾಡಿದನು.

ಅವತಾರದ ಮುಖ್ಯ ಪ್ರಯೋಜನವೇ ಸಾಧು ಪರಿತ್ರಾಣ, ದುಷ್ಟ ನಿಗ್ರಹ. ಅದಕ್ಕನುಸಾರವಾಗಿ ಬೇಟೆ ಎಂಬ ನೆಪದಿಂದ ದುಷ್ಟ ಪ್ರಾಣಿಗಳನ್ನು ನಿಗ್ರಹಿಸಿ, ಸಾಧು ಪ್ರಾಣಿಗಳಾದ ಹಸು ಮುಂತಾದವನ್ನು ಕಾಪಾಡಿ, ಎಲ್ಲ ಕಡೆಯೂ ಶಾಂತಿ ನೆಲೆಸುವಂತೆ ಮಾಡಿದನು.

ನಿಸರ್ಗ ಕಾರುಣ್ಯ ತರಂಗವೃತ್ತ್ಯಾ ನಿರ್ವೈರತಾಂ ನೈಗಮಗೋಪದೃಷ್ಟ್ಯಾ ।
ಸಂಪ್ರಾಪಿತಾಃ ಪ್ರಾಪು ರಿವೈಕಜಾತ್ಯಂ ಕೇಚಿದ್ ಗವಾಂ ಕೇಸರಿದಂತಿ ಮುಖ್ಯಾಃ ॥೨೨॥

ವೇದಗಳನ್ನು ಕಾಪಾಡುವ ಕೃಷ್ಣನು, ಪ್ರೀತಿಯಿಂದ ಕರುಣೆಯ ಅಲೆಯನ್ನು ಹರಿಸುವ ಕಟಾಕ್ಷಗಳಿಂದ ವೈರಗಳನ್ನು ಬಿಟ್ಟು ಸಿಂಹ, ಆನೆ ಮುಂತಾದ ಮೃಗಗಳು ಅನ್ಯೋನ್ಯತೆಯಿಂದ ಬಾಳುವಂತೆ ಮಾಡಿದನು.

ಶ್ರೀಕೃಷ್ಣನ ಕಟಾಕ್ಷ ಬಿದ್ದರೆ, ಎಲ್ಲಾ ಪ್ರಾಣಿಗಳೂ ಸಾಧುಗಳಾಗಿ ಬಿಡುತ್ತಿದ್ದುವು. ಪರಸ್ಪರ ವೈರವನ್ನು ಬಿಟ್ಟು ದುಷ್ಟ ಪ್ರಾಣಿಗಳೂ ಸಹ ಅನ್ಯೋನ್ಯತೆಯಿಂದ ಬಾಳುತ್ತಿದ್ದವು.

"**ಪರಸ್ಪರ ಹಿತೈಷಿಣಾಂ ಪರಿಸರೇಷು**" ಎಂಬಂತೆ ಪ್ರಾಣಿಗಳೂ ಸಹ ಒಂದರ ಹಿತವನ್ನು ಇನ್ನೊಂದು ಬಯಸುತ್ತಾ ಸಹೋದರ ಭಾವದಿಂದ ವರ್ತಿಸುತ್ತಿದ್ದವು. ಋಷ್ಯಾಶ್ರಮಗಳಲ್ಲಿ ಈ ರೀತಿಯ ವಾತಾವರಣ ಸರ್ವೇಸಾಧಾರಣವಾಗಿರುತ್ತದೆ. ಆ ರೀತಿ ಬೃಂದಾವನವು ಋಷ್ಯಾಶ್ರಮಗಳಂತೆಯೇ ಶೋಭಿಸುತ್ತಿತ್ತು.

ವಿಧುನ್ವತಾ ಧೂಲಿಕದಂಬರೇಣೂನ್ ಧಾರಾ ಕದಂಬಾಂಕುರ ಕಾರಣೇನ।
ನಿನ್ಯುಃ ಶ್ರಮಂ ನಿರ್ಜರ ಬಿಂದುಭಾಜಾ ನಭಸ್ವತಾನಂದಸುತಾನುಯಾತಾಃ ॥೨೪॥

ನಂದಗೋಪಕುಮಾರರನ್ನು ಅನುಸರಿಸಿದ ಎಲ್ಲರೂ ಎಲ್ಲ ಕಡೆಯೂ, ಒಂದು ಬಗೆಯಾದ ಕದಂಬ ಮರಗಳ ಹೂವುಗಳನ್ನು ಕಿತ್ತು ಅಲಂಕರಿಸಿಕೊಂಡು. ತಮಗೆ ಬೇಟೆಯಿಂದ ಉಂಟಾದ ಮೈಯಿನ ಧೂಳನ್ನೆಲ್ಲಾ ಮಳೆಯಲ್ಲಿ ಚೆನ್ನಾಗಿ ನೆನೆದು ಹೋಗಲಾಡಿಸಿಕೊಂಡರು.

ಶ್ರೀಕೃಷ್ಣನ ಜೊತೆ ವಿಹಾರ ಮಾಡುವ ಆ ಗೋಪಾಲಕರೆಲ್ಲರೂ ಕಾಡುಗಳಲ್ಲಿ ಯಥೇಚ್ಛವಾಗಿ ಕುಣಿದಾಡಿ, ಮೈಯ್ಯನ್ನೆಲ್ಲಾ ಧೂಳು ಮಾಡಿಕೊಂಡು ನಂತರ ಧಾರಾಕಾರವಾಗಿ ಸುರಿಸುವ ಮಳೆಯಲ್ಲಿ ಸ್ನಾನ ಮಾಡಿ, ಮೈಯಿನ ಕೊಳೆಯನ್ನೆಲ್ಲಾ ಹೋಗಲಾಡಿಸಿಕೊಂಡು ಆನಂದದಿಂದ ಕಾಲಕಳೆಯುತ್ತಿದ್ದರು.

ಅಮರ್ತ್ಯಯಕ್ಷೇಶ್ವರ ಧಾಮಭಾಜೋಃ ಆರಾಮಯೋರೇಕ ಮಿವಾವತಾರಂ।
ಪ್ರಶಾಂತ ಘರ್ಮಾತಿಶಯಂ ಪ್ರಭಾವಾತ್ ಬೃಂದಾವನಂ ನಂದಸುತೋ ವಿತೇನೆ ॥೨೫॥

ಈ ರೀತಿ ನಂದಗೋಪನು ತನ್ನ ಪ್ರಭಾವದಿಂದ ಬೃಂದಾವನವನ್ನು ಅದ್ಭುತವಾದ ವಾಸ ಸ್ಥಾನವನ್ನಾಗಿ ಮಾಡಿ, ಇಂದ್ರನ ನಗರಿಯಾದ ಅಮರಾವತಿಗೆ ಮತ್ತು ಕುಬೇರನ ವಾಸಸ್ಥಾನವಾದ ಅಲಕಾವತಿಯೂ ಕೂಡಿ ಇರುವ ಹಾಗೆ ಪರಿವರ್ತಿಸಿದನು.

ಬೃಂದಾವನಕ್ಕೆ ಸಮಾನವಾದ ಸ್ಥಳವು ಯಾವುದೂ ಇಲ್ಲ. ಎಲ್ಲಿ ಶ್ರೀಕೃಷ್ಣನು ವಾಸಿಸುತ್ತಾನೆಯೋ ಅದೇ ಸ್ವರ್ಗ. ಅದೇ ವೈಕುಂಠ. ಶ್ರೀಕೃಷ್ಣನ ಸಾನ್ನಿಧ್ಯವು ದಿವ್ಯ ಬೃಂದಾವನವನ್ನು ಅಮರಾವತಿಗೂ, ಅಲಕಾಪುರಿಗೂ ಮೇಲಾದ ಸ್ಥಳವನ್ನಾಗಿ ಪರಿವರ್ತಿಸಿತು.

ದಿಶಂ ಸಮಾಕ್ರಮ್ಯ ಕರೈರುದೀಚೀ ದೇವೇ ರವೌ ದಕ್ಷಿಣತಃ ಪ್ರವೃತ್ತೆ।
ನಿಧಾಘ ಕ್ಲಪ್ತ್ಯಾ ನಿಗ್ರಹೀತ ದೇಹಾನ್ ವೃಷ್ಟಿಂ ಪುನಃ ಸೃಷ್ಟುಮಿಯೇಷ ಶೌರಿಃ॥೨೬॥

ಪ್ರಕಾಶಮಾನವಾದ ಸೂರ್ಯನು ತನ್ನ ಕಿರಣಗಳಿಂದ ದಕ್ಷಿಣ ದಿಕ್ಕನ್ನು ಚೆನ್ನಾಗಿ ಆಕ್ರಮಿಸಿ ಬಿಸಿಲನ್ನು ಪ್ರಸರಿಸಿ, ಉತ್ತರ ದಿಕ್ಕನ್ನು ಮತ್ತೆ ಭಗವಂತನು, ಆ ಬಿಸಿಲಿನಿಂದ ಕಾಯಿಸಿ, ಮತ್ತೆ ಮಳೆಯನ್ನು ಸುರಿಸಲು ಇಚ್ಛಿಸಿದನು.

ಪ್ರಕೃತಿಯ ವಿವಿಧ ಕಾರ್ಯಗಳನ್ನು ವರ್ಣಿಸುತ್ತಾರೆ. ಸೂರ್ಯನು ಮೊದಲು ದಕ್ಷಿಣ ದಿಕ್ಕಿಗೆ ಚೆನ್ನಾಗಿ ಬಿಸಿಲನ್ನು ಹಾಯಿಸಿ, ನಂತರ ಉತ್ತರ ದಿಕ್ಕಿನಲ್ಲಿ ಅಮೋಘವಾಗಿ ಪ್ರಕಾಶಿಸುವವನಾಗಿ, ಒಟ್ಟಿನಲ್ಲಿ ಎಲ್ಲ ಕಡೆಯೂ ಬಿಸಿಲು ಮಳೆ ಇವುಗಳು ಯಥೇಚ್ಛವಾಗಿ ಉಂಟಾಗಿ, ದೇಶವು ಸುಭಿಕ್ಷವಾಗಿರುವಂತೆ ಮಾಡುತ್ತಿದ್ದನು. ಮಳೆಗಾಲ, ಬಿಸಿಲು, ಇವುಗಳು ಚೆನ್ನಾಗಿದ್ದರೇನೇ ಪ್ರಕೃತಿಯು ನಳನಳಿಸುತ್ತಿರುತ್ತದೆ.

ಅಥಾ ವಿರಾಸೀ ದಪಸಾರಯಂತೀ ತಾಪಂ ಗವಾಂ ಚಂಡಕರ ಪ್ರಸೂತಮ್।
ವಿಚಿತ್ರಸಸ್ಯೋದಯಮೇಚಕಾಂಕ್ಷೀ ಮೇಘಾವಿಲಾ ಮಾಧವ ಯೋಗವೇಲಾ ॥೩೭॥

ಸಹಸ್ರಾರು ಕಿರಣಗಳನ್ನು ಹೊಂದಿ ಸೂರ್ಯನು ಬೆಳಗುವ ತಾಪವನ್ನು ಹಸುಗಳಿಗೆ ಬೀಳದಂತೆ ಕಾಪಾಡಿದ ಆ ಭಗವಂತನು ಯೋಗ ನಿದ್ರೆಯನ್ನು ಮಾಡುವ ಸಮಯವು ಪ್ರಾಪ್ತವಾಯಿತು. (ಸಂಜೆಯಾಯಿತು)

ಮಧ್ಯಾಹ್ನದ ಹೊತ್ತಿನಲ್ಲಿ ಬಿಸಿಲಿನ ತಾಪವು ಅಧಿಕವಾಗಿದ್ದು ಹಸುಗಳು ಆ ಸಮಯ ದಲ್ಲಿ ಬಳಲುತ್ತವೆ. ಶ್ರೀಕೃಷ್ಣನು ಆವಾಗ ಆ ಹಸುಗಳಿಗೆ ರಕ್ಷಣೆಯನ್ನು ಒದಗಿಸುತ್ತಿದ್ದನು. ಸಂಜೆಯಾಗುತ್ತಾ ಬಿಸಿಲಿನ ತಾಪವು ಕಡಿಮೆಯಾಗುತ್ತಾ ಬರುವುದು. ಆಗ ಭಗವಂತನು ಆದಿಶೇಷನ ಮೇಲೆ ಯೋಗ ನಿದ್ರೆ ಮಾಡುವ ಸಮಯ.

ಮಹೀಭೃತಃ ಸಂಭೃತ ತೀರ್ಥತೋಯ್ಯೆ ರಂಭೋದರೈರಾಚರಿತಾಭಿಷೇಕಾಃ।
ಪ್ರಯುಕ್ತವಿದ್ಯುದ್ ಬಲಯೈಃ ಪುನಸ್ತೈಃ ಪ್ರಾಯೇಣ ನೀರಾಜನ ಮನ್ವಭೂವನ್॥೩೮॥

ಪರ್ವತಗಳೆಂಬ ಮಹಾರಾಜರು ತೀರ್ಥಜಲ ತುಂಬಿದ ಮೇಘಗಳ ಕೊಡದಿಂದ ಚೆನ್ನಾಗಿ ಅಭಿಷೇಕ ಮಾಡಲ್ಪಟ್ಟು ಮಂಡಲಾಕಾರವಾಗಿ ಪ್ರಸರಿಸುವ ಕಿರಣಗಳಿಂದ ಆರತಿ ಎತ್ತಿಸಿಕೊಳ್ಳುವಂತೆ ಇತ್ತು.

ಆಕಾಶದಿಂದ ಸುರಿಯುವ ಮಳೆಯನ್ನು ವರ್ಣಿಸಲಾಗಿದೆ. ಮೇಘಗಳನ್ನು ಕೊಡಗಳಿಗೆ ಹೋಲಿಸಿ, ಮಳೆಯ ನೀರು ಭೂಮಿಗೆ ಆ ಕೊಡಗಳಿಂದ ಅಭಿಷೇಕ ಮಾಡುವಂತಿದೆ. ಮಧ್ಯೆ ಮಧ್ಯೆ ತೂಗುವ ಸೂರ್ಯನ ಕಿರಣಗಳು ಭೂಮಿಗೆ ಆರತಿ ಎತ್ತುವಂತೆ ಇತ್ತು. (ಉತ್ಪ್ರೇಕ್ಷಾಲಂಕಾರ)

ಧೌತಾವದಾತೈಃ ಕ್ರಕಚಚ್ಛದಾನಾಂ ಪತ್ರೈರವಿಶ್ರಾಂತ ಷಡಂಘ್ರಿನಾದೈಃ।
ವ್ಯದಾರಯತ್ ಪುಷ್ಪಶರಃ ಪ್ರತೂರ್ಣಂ ಮಾನಗ್ರಹಂ ಮಾನವತೀ ಜನಾನಮ್ ॥೩೯॥

ಮನ್ಮಥನು, ಜೀವನದಂತಹ ಎಲೆಗಳನ್ನು ಹೊಂದಿರುವ, ನಿರ್ಮಲವಾಗಿ, ಶುಭ್ರವಾಗಿ ಯಾವಾಗಲೂ ದುಂಬಿಗಳು ಝೇಂಕಾರವನ್ನು ಬಿಡದೆ ಇರುವ ಹೂವಿನ ದಳಗಳನ್ನು ಹೊಂದಿ, ಮಾನಿನಿಯರಾದ ಸ್ತ್ರೀಯರು ಪ್ರಣಯ ಕಲಹದಿಂದಾದ ಮೊಂಡುತನವನ್ನು ಬಹಿರಂಗವಾಗಿ ಪ್ರಕಟಿಸಿದರು.

ಸ್ತ್ರೀಯರು ಪ್ರಣಯ ಕಲಹ ಉಂಟಾದಾಗ, ಯಾವ ರೀತಿ ನಡವಳಿಕೆ ಮಾಡುತ್ತಾ ರೆಂದು ಸೂಚ್ಯವಾಗಿ ಈ ಶ್ಲೋಕ ಹೇಳುತ್ತದೆ.

ಪಯೋಮುಚಾ ಸೇಕವತಾಂ ಸ್ಥಲಾನಾಂ ವೀರುತ್ಪ್ರರೋಹಾ ವಿವಿಧಾ ಬಭೂವುಃ।
ಸಮೀಕ್ಷಿತಾನಾಂ ಮಧುಸೂದನೇನ ಶ್ರದ್ಧಾ ದಯಾಢ್ಯಾ ಇವ ಸದ್ಗುಣೌಘಾಃ ॥೪೦॥

ಮಳೆ ಹೊಯ್ಯುವ ಮೇಘಗಳಿಂದ ಚೆನ್ನಾಗಿ ತೋಯಲ್ಪಟ್ಟ ಸ್ಥಳಗಳು ಬಗೆ ಬಗೆಯಾಗಿ ಮಧುಸೂದನನ ಕಟಾಕ್ಷದಿಂದ ಶೋಭಿಸುತ್ತಿದ್ದು ನೋಡುವವರಿಗೆ ಆನಂದ ಉಂಟುಮಾಡುತ್ತಿತ್ತು.

ಚೆನ್ನಾಗಿ ಮಳೆ ಬಿದ್ದಷ್ಟೂ ಭೂಮಿಯು ಆನಂದದಿಂದ ನರ್ತಿಸುತ್ತದೆ. ಮಧುಸೂದನನ ಕಟಾಕ್ಷ ಬಿದ್ದ ಆ ಬೃಂದಾವನವು ಮತ್ತಷ್ಟು ಶೋಭಾಯಮಾನವಾಗಿ, ಸತ್ಪುರುಷರು, ಇನ್ನೂ ಹೆಚ್ಚು ಹೆಚ್ಚು ಸತ್ಕಾರ್ಯಗಳನ್ನು ಮಾಡುತ್ತಾ ಆನಂದದಿಂದ ಕಾಲ ಕಳೆಯುತ್ತಿದ್ದರು.

ಇದನ್ನು ಶ್ರೀಭಾಗವತದಲ್ಲಿ ಹೀಗೆ ವರ್ಣಿಸಲಾಗಿದೆ.

ಖಮಶೋಭತ ನಿರ್ಮೇಘ ಶರದ್ವಿಮಲತಾರಕಮ್ ।
ಸತ್ತ್ವಯುಕ್ತಂ ಯಥಾ ಚಿತ್ತಂ ಶಬ್ದ ಬ್ರಹ್ಮಾರ್ಥದರ್ಶನಮ್ ॥

ವೇದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದಿರುವ ಸತ್ತ್ವಗುಣಿಯ ಚಿತ್ತವು ಅತ್ಯಂತ ಶೋಭಾಯಮಾನವಾಗಿರುವಂತೆ, ಶರದೃತುವಿನ ರಾತ್ರಿಯಲ್ಲಿ ಮೇಘರಹಿತವಾದ ನಿರ್ಮಲ ಆಕಾಶವು ತಾರೆಗಳ ಜ್ಯೋತಿಗಳಿಂದ ಬೆಳಗುತ್ತಿರುತ್ತದೆ.

ಶಿತೇನ ಪಂಚೇಷು ಶರೇಣಭಿನ್ನಾತ್ ವಿಯೋಗಿನೀ ಮಾನಸತೋ ವಿಕೀರ್ಣಾಃ।
ತದೇಂದ್ರಕೋ (ಗೋ)ಪತ್ವಮಿವಾಧಿಜಗ್ಮುಃ ಶೋಣಾಃಕ್ಷಿತೌಶೋಣಿತ ಬಿಂದುಭೇದಾಃ ॥೪೧॥

ಮನ್ಮಥನ ತೀಕ್ಷ್ಣವಾದ ಬಾಣಗಳಿಂದ ಬಾಧಿಸಲ್ಪಟ್ಟ ಪತಿಯನ್ನು ಅಗಲಿ ವಿರಹ ಪಡುವ ಸ್ತ್ರೀಯರ ಮನಸ್ಸು, ರಕ್ತವರ್ಣದಿಂದ ತೋಯಲ್ಪಟ್ಟ ಬಿಂದುಗಳಂತೆ ಚಡಪಡಿಸುತ್ತಿತ್ತು.

ಯಾವ ರೀತಿ ರಕ್ತದ ಬಿಂದುಗಳು ಮೈಮೇಲೆ ಬಿದ್ದರೆ ಚಡಪಡಿಕೆ ಉಂಟಾಗುತ್ತದೋ ಅದೇ ರೀತಿ ಆ ಶರತ್ಕಾಲದಲ್ಲಿ ಪತಿಗಳಿಂದ ದೂರವಾಗಿದ್ದ ಸ್ತ್ರೀಯರು, ಕಾಮ ಬಾಧೆಯಿಂದ ನರಳುತ್ತಾ ಆ ಪತಿಗಳ ಸಂಗಮಕ್ಕಾಗಿ ಹಾತೊರೆಯುತ್ತಿದ್ದರು.

ಮಧುದ್ರುತೇರುಲ್ಬಣದಂತ ಬೀಣಾ ಮೇಘಾನಿಲೆ ಮೇದುರ ಬಿಂದುಜಾಲೆ।
ಪ್ರಬೂತ ಕಂಪಾಃ ಪ್ರತಯಾಂ ಬಭೂವುಃ ಶೀತಾಲುತಾಂ ಕಂಟಕಿನಃ ಕದಂಬಾಃ ॥೪೨॥

ನೀರಿನ ಹನಿಗಳಿಂದ ತುಂಬಿದ ಮಳೆಗಾಲದಲ್ಲಿ ಎಲ್ಲೆಲ್ಲೂ ಜೇನು ತುಂಬಿ ಸುರಿಯುವ ಕದಂಬ ವೃಕ್ಷಗಳು ಆನಂದದಿಂದ ಕುಳಿರ್ಗಾಳಿಯನ್ನು ಎಲ್ಲೆಲ್ಲೂ ಬೀಸಿದವು.

ಆ ಶರತ್ಕಾಲದಲ್ಲಿ ಕುಳಿರ್ಗಾಳಿಯು ಹಿತವಾಗಿ ಬೀಸುತ್ತಿತ್ತು. ಎಲ್ಲರಿಗೂ ಆಪ್ಯಾಮಾನವಾಗಿತ್ತು. ಕದಂಬ ಎಂಬ ವೃಕ್ಷಗಳು ಆ ಸಮಯದಲ್ಲಿ ಯಥೇಚ್ಛವಾಗಿ ಜೇನನ್ನು ಸುರಿಸುತ್ತವೆ. ಆ ಕದಂಬ ಮರಗಳ ಮೇಲೆ ಬೀಸುವ ಕುಳಿರ್ಗಾಳಿಯು, ಆ ಜೇನಿನ ವಾಸನೆಯಿಂದ ಒಳ್ಳೆಯ ಪರಿಮಳವನ್ನು ಬೀಸುತ್ತಾ, ಎಲ್ಲರ ಮನಸ್ಸೂ ಸಂತೋಷಗೊಂಡವು.

ಶತ ಹೃದಾ ಶಸ್ತ್ರವಿಲಾಸದೀಪ್ತಾ ಧೀರ ಪ್ರಣಾದಾ ಧೃತ ಚಿತ್ರಚಾಪಾ।
ಕನ ದ್ವಲಾಕಾ ಧ್ವಜಪಂಕ್ತಿರಾಸೀತ್ ಕಾದಂಬಿನೀ ಕಾಮಚಮೂರ ಪೂರ್ವಾ ॥೪೩॥

ಮೇಘಗಳ ಸಾಲು ಮನ್ಮಥನ ಅದ್ಭುತವಾದ ಸೇನೆಯಾಗಿ ಬೆಳಗುತ್ತದೆ. ಅದರಿಂದಾದ ಮಿಂಚಿನ ಬೆಳಕು ಕತ್ತಿಯಂತೆ ಬೆಳಗಿ, ಸಿಂಹನಾದ ಮಾಡಿ ಮೇಘದಲ್ಲಿ ತೋರುವ ಇಂದ್ರ ಧನುಸ್ಸಿನಂತೆ ಕೊಕ್ಕುಗಳಲ್ಲಿ ಹಿಡಿಯುವ ಧ್ವಜಗಳಂತೆ ತೋರುತ್ತಿತ್ತು.

ಮಳೆಗಾಲದ ವರ್ಣನೆ. ಮಳೆಗಾಲವು ಮನ್ಮಥನ ಕಾಲ. ಮಳೆಗಾಲದಲ್ಲಿ ಮೇಘಗಳ ಮಧ್ಯೆ ಬೆಳಗುವ ಮಿಂಚುಗಳ ಕತ್ತಿಯ ಅಲಗಿನಂತೆ ತೋರಿ ಇಂದ್ರ ಧನುಸ್ಸಿನಂತೆ ತೋರುತ್ತದೆ.

ರಾಮಾಯಣದಲ್ಲಿಯೂ ಕೂಡ ಮಳೆಗಾಲದ ವರ್ಣನೆ ಹೀಗಿದೆ "ಹೊಳೆಗಳು ಹರಿಯುತ್ತಾ, ಮೋಡಗಳು ಮಳೆ ಸುರಿಸುತ್ತಾ, ಮಾತಂಗಗಳು ಘೀಂಕರಿಸುತ್ತಾ, ವನಾಂತಗಳು ವಿರಾಜಿಸುತ್ತಾ ಇರುವ ವರ್ಷಾಕಾಲದಲ್ಲಿ ಪ್ರಿಯಾ ವಿಮುಕ್ತರು ಯಾವುದೋ ಧ್ಯಾನದಲ್ಲಿ ಮುಳುಗಿದ್ದಾರೆ. ನವಿಲುಗಳು ನರ್ತಿಸುತ್ತವೆ.

ಮೃದಂಗ ಧೀರಸ್ತನಿ ತೊ ವಿಹಾಯಾಃ ಸೌದಾಮನೀ ಸಂಭೃತ ಚಾರುಲಾಸ್ಯಃ।
ಬಭೌ ನವಾನಾಂ ಪ್ರಭವೋ ರಸಾನಾಮ್ ರತಿಪ್ರಿಯಸ್ಯೇವ ನಟಸ್ಯರಂಗಃ ॥೪೪॥

ಆಕಾಶವು ಮಿಂಚುಗಳಿಂದ ಸುಂದರವಾದ ಆಟಗಳನ್ನು ಆಡುವ ರಂಗಭೂಮಿಯಂತೆ, ನವರಸಗಳಿಗೆ ಪ್ರಕಾಶವನ್ನು ಬೀರುವಂತೆ ರತಿ ದೇವಿಗೆ ಅವಳ ನಾಟ್ಯವನ್ನು ಮಾಡಲು ಅವಕಾಶವನ್ನು ಕೊಡುವಂತಿತ್ತು.

ರಾಮಾಯಣದಲ್ಲಿ ಹೀಗೆ ವರ್ಣಿಸಿದ್ದಾರೆ "ಆಕಾಶದಲ್ಲಿ ಗುಡುಗುವುದನ್ನು ಕೇಳಿದೆಯಾ ಲಕ್ಷ್ಮಣ? ಚಿನ್ನದ ಚಾಟಿಗಳಂತಿರುವ ಮಿಂಚುಗಳ ಹೊಡೆತವನ್ನು ತಾಳಲಾರದೆ ಆಕಾಶವು ವೇದನೆಯಿಂದ ಕೂಗಿಕೊಳ್ಳುವಂತೆ ತೋರುತ್ತವೆ."

ಅಚಿಂತಿತೋಪಸ್ಥಿತ ಜೀವನಾನಾಮಾಸೆದುಷಾಮಭ್ಯಧಿಕಾಂ ಸಮೃದ್ಧಿಮ್ ।
ತೋಯಾಶಯಾನಾಂ ಪರಿವಾಹಜನ್ಮಾ ಸ್ವಗುಪ್ತಿರನ್ಯೋಪಚಯ ಪ್ರದಾಽಭೂತ್॥೪೫॥

ಎದುರು ನೋಡದೆ, ದಿಢೀರನೆ ನೀರನ್ನು ಸೇರಿಸಿದರೆ ಆಳತೆಗೆ ಮೀರಿದ ದಡಗಳಲ್ಲಿ ಉಕ್ಕಿ ಹರಿಯುವ ಏರಿಗಳಿಂದ ನೀರಿಲ್ಲದ ಜಾಗಗಳಲ್ಲಿ ನೀರೂ, ನೀರಿರುವ ಜಾಗಗಳಲ್ಲಿ ಹೆಚ್ಚಿಗೆ ನೀರೂ ಶೇಖರವಾಯಿತು.

ಅಗಾಧವಾದ ಮಳೆಯಿಂದ ಹಳ್ಳ ತಿಟ್ಟು ಪ್ರದೇಶಗಳೆಲ್ಲಾ ಒಂದಾಗಿ, ಎಲ್ಲೆಲ್ಲೂ ನೀರೇ ಆವರಿಸಿಕೊಂಡಿತು. ಯಾವ ಸೂಚನೆಯೂ ಇಲ್ಲದೆ ದ್ರೋಣ ಮಳೆ ಸುರಿಯುವುದರಿಂದ, ಎಲ್ಲ ಪ್ರದೇಶವೂ ಜಲಾವೃತವಾಗಿ ಜನ ಜೀವನ ಅಸ್ತವ್ಯಸ್ತವಾಯಿತು.

ಗುಹಾಸು ಗೋವರ್ಧನ ಸಂಭವಾಸು ಪ್ರಕಾಮ ವಿಸ್ತೀರ್ಣ ಸಮಸ್ಥಲೀಷು।
ಗುಣಾಧಿಕೋ ವಿಶ್ವಸೃಜಾ ಪ್ರವರ್ಷೇ ವಾಸಃ ಸಮಾಧಿಯತ ವಲ್ಲವಾನಾಮ್ ॥೪೬॥

ಎಲ್ಲಾ ಹೊಂದುವವನೂ, ಅಧಿಕ ಮಳೆಯಾದ ಸಮಯದಲ್ಲಿ ದೊಡ್ಡದಾಗಿ ವಿಸ್ತಾರ ವಾಗಿ ಹಳ್ಳತಿಟ್ಟುಗಳು ಇಲ್ಲದ ಜಾಗದಲ್ಲಿ ತುಂಬಿದ ಗೋವರ್ಧನ ಪರ್ವತದ ಗುಹೆ ಗಳಲ್ಲಿ ಗೋಪಾಲಕರಿಗೆಲ್ಲಾ ವಾಸಸ್ಥಾನವನ್ನು, ವಿಶಾಲವಾದ ಭೂ ಸ್ಥಳಗಳಲ್ಲಿ ಎಲ್ಲವನ್ನೂ ಹೊಂದುವವನಾದ ಶ್ರೀಕೃಷ್ಣನು ಏರ್ಪಡಿಸಿದನು.

ದರೀಷು ಗೋಪ್ಯಃ ಪ್ರಸಮೀಕ್ಷ್ಯ ಕೃಷ್ಣಂ ದಿಶಾಸು ಜೀಮೂತಗಣಂ ಮಯೂರ್ಯಃ।
ಅಗ್ರೇ ಪತೀ ನಾಮದಿಗೀತ ನಾದಂ ವಿತೇನಿರೇ ಚಾರುವಿಹಾರಲಾಸ್ಯಂ ॥೪೭॥

ಗೋಪಿಯರು ಗುಹೆಗಳಲ್ಲಿ , ಕೃಷ್ಣನನ್ನೂ ನೋಡಿ, ನವಿಲುಗಳು ದಿಕ್ಕುಗಳಲ್ಲಿ ರೆಕ್ಕೆ ಬಿಚ್ಚುವುದನ್ನೂ ಚೆನ್ನಾಗಿ ಕಂಡು, ತಮ್ಮ ಪತಿಗಳ ಎದುರಿನಲ್ಲಿ ಅವರು ಕಾಣುವಂತೆ ವಿನೋದವಾಗಿ ನಾಟ್ಯವನ್ನು ಆಡಿದರು.

ಗೋಪಸ್ತ್ರೀಯರು, ಗುಹೆಗಳಲ್ಲಿ ಆನಂದದಿಂದ ನಾಟ್ಯವನ್ನು ಆಡುತ್ತಿದ್ದರು. ಶ್ರೀಕೃಷ್ಣನನ್ನು ನೋಡಿ ನವಿಲುಗಳು ಪುಳಕಗೊಂಡು ತಮ್ಮ ಗರಿಗಳನ್ನು ಬಿಚ್ಚಿ ನಾಟ್ಯವಾಡುತ್ತಿದ್ದವು. ಅವುಗಳನ್ನು ನೋಡಿ ಗೋಪಸ್ತ್ರೀಯರು ಸಂತೋಷದಿಂದ ನಾಟ್ಯವಾಡಿ, ತಮ್ಮ ಪತಿಯರಿಗೆ ಆನಂದ ನೀಡುತ್ತಿದ್ದರು. ಲೋಕೋತ್ತರ ಸುಂದರನಾದ ಶ್ರೀಕೃಷ್ಣನನ್ನು ನೋಡಿ ಯಾರು ತಾನೇ ಪರವಶರಾಗುವುದಿಲ್ಲ?

ಪಯೋದಲಕ್ಷ್ಯ ಪ್ರಹಿತಾಗ್ರಹಸ್ತಾಂ ಕೃಷ್ಣಃ ಸ್ವನೇತ್ರೇ ಇವ ಚಂದ್ರಸೂರ್ಯೌ।
ತಿರೋಧದಾನಾಂ ಪ್ರತಿರೋದ್ ಧೂಮ್ಯೈಚ್ಛತ್ ಸ್ವೈರೀ
ಸ್ವಲೀಲಾಮಿವ ವರ್ಷವೇಲಾಮ್ ॥೪೮॥

ವರ್ಷಾಕಾಲವು ಮುಗಿದ ಶರತ್ಕಾಲವು ಪ್ರಾರಂಭವಾಯಿತು. ಕೃಷ್ಣನು ತನ್ನ ಕಣ್ಣು ಗಳೆರಡನ್ನೂ ಹೋಲುವ ಚಂದ್ರ ಸೂರ್ಯರನ್ನು ಮೇಘಗಳ ನಡುವೆ ಹರಡಿ ಮರೆಯಾಗುವ ಆಟವನ್ನು ತನ್ನ ಲೀಲಾ ದೇವಿಯಂತಿರುವ ವರ್ಷಾಕಾಲದ ಆಟದಿಂದ ಮುಕ್ತಗೊಳಿಸಲು ನಿರ್ಧರಿಸಿದನು.

ಇನ್ನು ಮುಂದೆ ಶರತ್ಕಾಲದ ವರ್ಣನೆ. ವರ್ಷಾಕಾಲವು ಅಂದರೆ ಮಳೆಗಾಲವು ಮುಗಿದು ಶರತ್ಕಾಲವು ಪ್ರಾಪ್ತವಾಯಿತು. 'ಚಂದ್ರ ಸೂರ್ಯೌ ಚ ನೇತ್ರೇ' ಎಂದು ಸೂರ್ಯ ಚಂದ್ರರಿಬ್ಬರೂ ಭಗವಂತನ ಕಣ್ಣುಗಳು, ಯಾವ ರೀತಿ ಸೂರ್ಯನ ನಂತರ ಚಂದ್ರ, ಚಂದ್ರನ ನಂತರ ಸೂರ್ಯ. ಒಬ್ಬರಿಗಿಂತ ಹಿಂದೆ ಒಬ್ಬರು ಈ ಜಗತ್ತನ್ನು ಅಲಂಕರಿಸುತ್ತಾರೋ ಅದೇ ರೀತಿ ವರ್ಷಾಕಾಲದ ನಂತರ ಶರತ್ಕಾಲವು ಸನ್ನಿಹಿತವಾಯಿತು.

ಅಥಾಂಜನ ಸ್ನಿಗ್ಧ ನಭಃ ಪ್ರಕಾಶಾಃ ಕ್ಷಣತ್ವಿಷಾಂ ಕಲ್ಪಿತ ಲಾಸ್ಯಭಂಗಾಃ।
ದಿಶಾಮುಖೋಲ್ಲಾಸನ ದೃಷ್ಟದಾಕ್ಷ್ಯಾದೀನಾಂಬುವಾಹಾ ದಿವಸಾಬಭೂವುಃ॥೪೯॥

ಮತ್ತೆ ಹಗಲುಗಳು ಕಾಣುವ ಶುಭ್ರವಾದ ಆಕಾಶದಲ್ಲಿ ಪ್ರಕಾಶಮಾನವಾಗಿ ಜ್ವಲಿಸುವ ಮಿಂಚುಗಳಿಂದ ಸುತ್ತುವರಿಯಲ್ಪಟ್ಟ ದಿಕ್ಕುಗಳನ್ನು ಚೆನ್ನಾಗಿ ಕಾಣುವುದೂ, ಮುಂತಾದವುಗಳಿಂದ ಮೇಘಗಳು ಚೆನ್ನಾಗಿ ತೋರಿದವು.

ಶರತ್ಕಾಲದಲ್ಲಿ ಮೇಘಗಳು ಚೆನ್ನಾಗಿ ಪ್ರಕಾಶಿಸುತ್ತವೆ. ಶುಭ್ರವಾದ ಆಕಾಶದಲ್ಲಿ ಮೇಘಗಳು ಚಲಿಸಿ, ಆಕಾಶಕ್ಕೆ ಶೋಭೆಯನ್ನುಂಟುಮಾಡುತ್ತವೆ.

ಅಲಕ್ಷ್ಯತೀವ್ರಾತಪ ಮಂತರಿಕ್ಷಂ ಸಿತಾಸಿತೈರಂಬುಧರೈಶ್ಚಕಾಶೆ।
ವಿವೇಕ ಮಾಸಾದ್ ಯತಾಮಿವಾದೌ ಚಿತ್ತಂ ವಿತರ್ಕ್ಯೈ ರನಿವರ್ತಮಾನೈಃ ॥೫೦॥

ಆಕಾಶವು, ಉಗ್ರವಾದ ಬಿಸಿಲು ಕಾಣದಂತೆ ಕಪ್ಪು ಬಿಳುಪುಗಳಿಗಿಂತ ಕೂಡಿದ ಹತ್ತಿಯಂತ ಮೋಡಗಳನ್ನು ಹೊಂದಿ ಹೊಸದಾಗಿ ವಿವೇಕ ಹೊಂದುವವರಿಗೆ, ಮೊದಮೊದಲು ಕೆಲವು ಸಂದೇಶಗಳನ್ನು ಕೊಡುವ ಮನಸ್ಥಿತಿಯಂತಿತ್ತು.

ಜ್ಞಾನ ಪಡೆಯುವವರು, ಒಟ್ಟಿಗೆ ಎಲ್ಲವನ್ನೂ ಹೊಂದಲು ಸಾಧ್ಯವಿಲ್ಲ. ಸ್ವಲ್ಪಸ್ವಲ್ಪವಾಗಿ ಉಪದೇಶ ಹೊಂದಬೇಕು. ಅದೇ ರೀತಿ ಆಕಾಶದಲ್ಲೂ ಕಪ್ಪು ಬಿಳುಪು ಮೋಡಗಳು, ಸ್ವಲ್ಪ ಸ್ವಲ್ಪವಾಗಿ ಬಿಸಿಲನ್ನು ಮರೆಸುತ್ತಿದ್ದರೆ. ಆಗ ಬಿಸಿಲಿನ ಪೂರ್ಣತಾಪದ ಬಿಸಿಯು ತಟ್ಟುವುದಿಲ್ಲ. ಯಾವಾಗಲೂ ವಾತಾವರಣ ತಂಪಾಗಿಯೇ ಇರುತ್ತದೆ.

ವಿಹಾಯ ಸಧ್ಯಃ ಕುಟಜಾರ್ಜುನಾದೀನ್ ವಿಪ್ಲಾ ವಿತಾನ್ ಕಾಲವಿಪರ್ಯಯೇಣ।
ಪುನರ್ಬಬಂಧುಃ ಪ್ರಣಯಂ ದ್ವಿರೇಪಾಃ ಕೋಶೋಪ ಪನ್ನೇಷುಕುಶೇಶಯೇಷು॥೫೦॥

ಕಾಲದ ಬೀಗುವಿಕೆಯಿಂದ ಕ್ಷೀಣವಾದ ಏರುವಿಕೆ, ಬೀಳುವಿಕೆ, ಇವುಗಳನ್ನು ತಕ್ಷಣ ಬಿಟ್ಟು ದುಂಬಿಗಳು ಜೇನು ತುಂಬಿರುವ ತಾವರೆಗಳಲ್ಲಿ ಪ್ರೀತಿಯನ್ನು ಇಟ್ಟವು. ಕಾಲದ ಸೇರುವಿಕೆಯಲ್ಲಿ, ಚಂಚಲ ಮನಸ್ಸುಳ್ಳವರು ಒಬ್ಬರನ್ನು ಬಿಟ್ಟು ಮತ್ತೊಬ್ಬರ ಬಳಿ ಹೋಗುವುದನ್ನು ಇಲ್ಲಿ ಸ್ಮರಿಸಬಹುದು.

ಚಂಚಲವಾದ ಮನಸ್ಸುಳ್ಳ ಸ್ತ್ರೀಯರು, ದುಂಬಿಗಳಂತೆ, ಒಬ್ಬರನ್ನು ಬಿಟ್ಟು ಮತ್ತೊಬ್ಬರನ್ನು ಸೇವಿಸುವುದನ್ನು ಇಲ್ಲಿ ಸೂಚ್ಯವಾಗಿ ಹೇಳಲಾಗಿದೆ.

ತರಂಗಲೋಲಾಂಬುಜ ತಾಲವೃಂತಾ ಬರ್ಹಾತ ಪತ್ರ್ಯಾಯಿತ ಭೃಂಗಯೂಥಾಃ।
ವಿಧೂತ ಹಂಸಾವಲಿ ಚಾಮರೌಘಾ ನದ್ಯಃ ಸಮಾತನ್ವತ ನಾಥ ಸೇವಾಮ್ ॥೫೨॥

ನದಿಗಳು ಎಂಬ ನಲ್ಲೆಯರು, ಅರಳಿದ ತಾವರೆಗಳನ್ನು ಬೀಸಣಿಗೆಯಾಗಿ ದುಂಬಿಗಳ ಮುತ್ತುವಿಕೆಯನ್ನು ದೂರ ತಳ್ಳಲು ಕೊಡೆಯಾಗಿ ಹಿಡಿದು ನಲಿದಾಡುವ ಹಂಸ ಪಕ್ಷಿಗಳ ಚಾಮರಗಳಂತೆ ನಾಥನಾದ ಸಮುದ್ರವನ್ನು ಸೇವಿಸುತ್ತಾರೆ.

'ನದೀನಾಂ ಸಾಗರೋಗತಿ' ಎಂಬಂತೆ ಎಲ್ಲ ನದಿಗಳೂ ಸಾಗರವನ್ನು ಸೇರುತ್ತವೆ. ನದಿಗಳಲ್ಲಿ ಅರಳುವ ತಾವರೆಗಳಿಗೆ ದುಂಬಿಗಳು ಮುತ್ತುತ್ತವೆ. ಹಂಸ ಪಕ್ಷಿಗಳು ತಮ್ಮ ರೆಕ್ಕೆಗಳನ್ನು ಜೋರಾಗಿ ಬೀಸಿ, ಆ ದುಂಬಿಗಳನ್ನು ದೂರ ಓಡಿಸುತ್ತವೆ. ಸಮುದ್ರವನ್ನು ಸೇರುವಾಗ ಆ ರೆಕ್ಕೆಗಳ ಬೀಸುವಿಕೆ ಸಮುದ್ರರಾಜನಿಗೆ ಚಾಮರದಂತೆ ಇದೆ.

ತಾಪಾನುಬಂಧ ಪ್ರಶಮಾಯ ಪುಂಸಾಂ ಶಯ್ಯಾರ್ಥಿನಾ ಶಾರ್ಙ್ಗಭೃತೋಪಹೂತಾ।
ಪಯೋಧ ಮಾಲಾ ವ್ಯಪದೇಶ ದೃಶ್ಯಾ ಪ್ರಾಯಸ್ತಿರೋಽಧೀಯತ ಯೋಗನಿದ್ರಾ ॥೫೨॥

ಜೀವರುಗಳ ತಾಪಗಳನ್ನು ಹೋಗಲಾಡಿಸುವ ಭಗವಂತನ ಯೋಗನಿದ್ರೆಯಾದದು. ಮೇಘಗಳ ಸಾಲಾದ ಕೂಡುವಿಕೆಯನ್ನು ಮರೆಸಿದವು. ಭಗವಂತನು ಮಲಗಿದ್ದಲ್ಲಿ ಪ್ರಜೆಗಳಿಗೆ ತಾಪವು ಹೋಗುವಿಕೆಯೆಲ್ಲಿ ? ಮಳೆಗಾಲದಲ್ಲಿ ಶ್ರಮವು ಅಧಿಕವಾಗಿ ದೊಡ್ಡ ದೊಡ್ಡ ವ್ಯಾಪಾರಗಳು ನಡೆಯುವುದಿಲ್ಲವಷ್ಟೆ.

ಭಗವಂತನು ಯೋಗನಿದ್ರೆ ಮಾಡುವಾಗ, ಜಗತ್ತಿನ ಯೋಗಕ್ಷೇಮವನ್ನು ಮರೆಯುತ್ತಾನೆಯೇ? ಖಂಡಿತಾ ಇಲ್ಲ. ಯೋಗನಿದ್ರೆ ಒಂದು ಲೀಲೆಯಷ್ಟೆ. ಮಳೆಗಾಲದಲ್ಲಿ ಮೇಘಗಳು ಧಾರಾಕಾರವಾಗಿ ಸುರಿಯುವುದರಿಂದ ಎಲ್ಲಾ ಕೆಲಸ ಕಾರ್ಯಗಳು ಸ್ವಲ್ಪ ಸ್ಥಗಿತವಾಗುವುದಷ್ಟೆ ಅದರಂತೆ ಅವನ ಸೃಷ್ಠಿ ಕಾರ್ಯವು ಕುಂಠಿತವಾದಂತೆ ಕಾಣುತ್ತದಷ್ಟೆ.

ಇತ ಸ್ತತಃ ಪ್ರಾಪ್ತ ಶರದ್ವಿಹಾರಂ ಗೋಪೀಸಖಂ ದ್ರಷ್ಟುಮತೀವ ಹರ್ಷಾತ್।
ಅಶೋಭಿನೇತ್ರೈರಿವ ಜೃಂಭಮಾಣೈಃ ಕೀರ್ಣೈರ್ಧರಿತ್ರಿ ಶಿಖಿನಾಂ ಕಲಾಪೈಃ ॥೫೪॥

ಕಣ್ಣುಗಳಂತಿರುವ ನವಿಲುಗಳು ಭೂಮಿಯಲ್ಲಿ ಎಲ್ಲೆಲ್ಲೂ ಇರುತ್ತವೆ. ಶರತ್ಕಾಲದಲ್ಲಿ ಇಲ್ಲಿ ಅಲ್ಲಿ ಸಂಚಾರ ಮಾಡುವ ಗೋಪೀಕಾಂತನನ್ನು ಕಾಣಲು ಭೂದೇವಿ ಅಲ್ಲಲ್ಲಿ ದಿವ್ಯ ಕಣ್ಣುಗಳನ್ನು ಇಟ್ಟುಕೊಂಡಿದ್ದಾಳೆಯೇ ಎನ್ನುವಂತಿತ್ತು.

ಗೋಪೀಕಾಂತನಾದ ಶ್ರೀಕೃಷ್ಣನನ್ನು ಕಂಡು ಸಂತೋಷಿಸಲು ಭೂದೇವಿಯು ಕಾತುರಳಾಗಿ ನವಿಲುಗಳ ಕಣ್ಣುಗಳಂತಿರುವ ಗರಿಗಳ ಮೂಲಕ ಎಲ್ಲೆಲ್ಲೂ ನೋಡಲು ಇಚ್ಛಿಸುತ್ತಾಳೆ. ಮಲೆಗಾಲದಲ್ಲಿ ನವಿಲುಗಳು ಆನಂದದಿಂದ ರೆಕ್ಕೆಗಳನ್ನು ಬಿಚ್ಚಿ ನಲಿದಾಡುತ್ತವೆ. ಶ್ರೀಕೃಷ್ಣನನ್ನು ನೋಡಲು ಎರಡು ಕಣ್ಣುಗಳು ಸಾಲದೆಂದು ನವಿಲುಗಳ ಸಾವಿರಾರು ಕಣ್ಣುಗಳಿಂದ ಕಂಡು ಆನಂದಪಡುತ್ತಾಳೆ ಭೂದೇವಿ.

ಚರಾಚರೇಷ್ವಾಹಿತ ಜೀವನಾನಾಮನುಂಜತಾ ಸತ್ಪಥಮಂಬುದಾನಾಮ್।
ಶುಚಿತ್ವಮಂತರ್ಬಹಿರಪ್ಯಯತ್ನಾದಭ್ಯಾಗತೈರ್ಹಂಸ ಗಣೈಃ ಶಶಂಸೆ ॥೫೫॥

ಜಗತ್ತಿಗೆಲ್ಲಾ ಜೀವನವನ್ನು ನೀಡಿ, ಸನ್ಮಾರ್ಗವನ್ನು ಬಿಡದ ಮೇಘಗಳಿಗೆ ಇರುವ ಬಿಳುಪು, ಶುಚಿತ್ವವೂ ಏರ್ಪಟ್ಟಿತು. ತಾವಾಗಿಯೇ ಬಂದ ಹಂಸ ಪಕ್ಷಿಗಳ ಪ್ರಯತ್ನದಿಂದ ಇದು ಎಂದು ತಿಳಿಯಿತು.

ಹಂಸ ಪಕ್ಷಿಗಳು ಬಿಳುಪಿಗೂ, ಶುಚಿತ್ವಕ್ಕೂ ಪ್ರಸಿದ್ಧಿ. ಮೇಘಗಳು ಸನ್ಮಾರ್ಗವನ್ನು ಬಿಡುವುದಿಲ್ಲ. ಅಂದರೆ, ಮಳೆ ಸುರಿಸಬೇಕಾದ ಕಾಲಕ್ಕೆ ಸುರಿಸಿಯೇ ಸುರಿಸುತ್ತದೆ. ಮೇಘಗಳಿಗೂ ಹಂಸ ಪಕ್ಷಿಗಳ ಶುಚಿತ್ವ, ಬಿಳುಪು ಅವುಗಳ ಸಹವಾಸದಿಂದ ಬಂತು.

ಸಂಸ್ಕಾರಭೇದೈಃ ಕಮಲಾದಿಕಾನಾಂ ಕ್ರಮೇಣ ಲಬ್ಧೋಪಚಯ ಸ್ಥಿತೀನಾಮ್ ।
ಧರ್ಮಂ ನಿಜಂ ಸಾಧಯಿತುಂ ಕ್ಷಮಾಣಾಂ ಸಮುನ್ನತಿಃ ಸನ್ನತಿಹೇತುರಾಸೀತ್ ॥೫೬॥

ಕೀಳುವುದು, ನೆಡುವುದು, ಪಾತಿ ಮಾಡುವುದು, ಕಳೆ ಕೀಳುವುದು, ಮೊದಲಾದ ಸಂಸ್ಕಾರಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಹೊಂದಿ, ಬೆಳೆಯಬೇಕೆಂಬ ಕ್ರಮದಲ್ಲಿ ಪೈರುಗಳ ಬೆಳವಣಿಗೆಯಾಗುತ್ತದೆ. ಜಾತಕರಣ, ನಾಮಕರಣ ಮೊದಲಾದ ಸಂಸ್ಕಾರಗಳನ್ನು ಹೊಂದಿ ಮೇಲೆ ಮೇಲೆ ವೃದ್ಧಿ ಹೊಂದಿ ಆಚಾರಶೀಲರಾದ್ದರಿಂದ, ಆಯಾಯ ಫಲಗಳಿಗನುಸಾರವಾಗಿ ಕರ್ಮಗಳನ್ನು ಅನುಷ್ಠಿಸುವ ಅಧಿಕಾರವನ್ನು ಹೊಂದಿರುವ ಮಹಾನ್‌ಗಳು ಹಿರಿಮೆಯಾದುದು ಅವರುಗಳಿಗೆ ವಿನಯವನ್ನೂ ಕೊಡುತ್ತದೆ. ಆದ್ದರಿಂದಲೇ ಎಲ್ಲರಿಂದಲೂ ಅವರು ನಮಸ್ಕರಿಸಲ್ಪಡುತ್ತಾರೆ.

ವಿಹಾರ ಗೋಪಸ್ಯಗುಣಾನ್ ಗೃಣಾಬ್ಧಿಃ ಕ್ಷೀಭಾಶಯಾ ಗೀತಪದೈರುದಾರೈಃ।
ಚಕಾ ಸುರಾಸಾದಿ (ಶಿರೇಸಧಿ) ತ ಭಕ್ತಿಭೇದಾಃ
ಸಾಮೋಪಶಾಖಾ ಇವ ಶಾಲಿಗೋಪ್ಯಃ ॥೫೭॥

ಸಂಬಾರ ಪೈರುಗಳನ್ನು ಕಾಯುವ ಹೆಣ್ಣುಗಳು (ಗೋಪಿಯರು) ಭಗವಂತನ ಅನುಭವಾನಂದದಲ್ಲಿ ಮನಸ್ಸು ಹೊಂದಿ ಆಟಪಾಟಗಳಲ್ಲಿ ನಿರತನಾದ ಶ್ರೀಕೃಷ್ಣನ ಗುಣಗಳನ್ನು ಹೇಳುವ ಚಿಕ್ಕ ಗೀತಗಳನ್ನು ತಕ್ಕುದಾದ ಸ್ಥಳಗಳಲ್ಲಿ ಹೇಳುತ್ತಾ ಇದ್ದುದು ಸಾಮವೇದಗಳ ಶಾಖೆಗಳನ್ನು ಹೇಳುವಂತಿತ್ತು. ಭಗವಂತನಲ್ಲಿ ಭಕ್ತಿಯನ್ನು ತೋರ್ಪಡಿಸುವ ಭಕ್ತಿಗೀತಗಳಂತಿದ್ದವು.

ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಗೋಪ ಸ್ತ್ರೀಯರು ಹಾಡುಗಳನ್ನು ಹಾಡುತ್ತಾ ಗದ್ದೆಯ ಕೆಲಸಗಳನ್ನೂ ಮಾಡುತ್ತಿದ್ದರು. ಅವರು ಹಾಡುವ ಹಾಡುಗಳು ಭಗವಂತನಿಗೆ ವೇದ ಪಾರಾಯಣ ಮಾಡುವವರು ಸಾಮವೇದವನ್ನು ಹಾಡುವಂತಿತ್ತು. ಎಷ್ಟಾದರೂ ಗೋಪಿಯರು ಋಷಿಗಳ ಅವತಾರವಲ್ಲವೇ ? ಅವರ ಹಾಡುಗಳು ಭಗವಂತನಿಗೆ ಹೇಳುವ ಭಕ್ತಿಗೀತಗಳಂತೆಯೇ ಇದ್ದವು. ಶ್ರೀಕೃಷ್ಣನು ಅದನ್ನು ಕೇಳಿ ಸಂತೋಷಿಸಿದನು.

ವಿಕಸ್ವರೇಂದ್ರಾಯುಧ ಬರ್ಹದಾಮ್ನಃ ಶಾಮೀಕೃತಂ ಕೃಷ್ಣಘನಸ್ಯ ಧಾಮ್ನಾ।
ಶರತ್ಪ್ರಸಂಗೇಽಪಿ ತದಾ ತದಾಸೀತ್ ಬೃಂದಾವನಂ ಬದ್ಧಮಯೂರಲಾಸ್ಯಮ್॥೫೮॥

ಶರತ್ಕಾಲದಲ್ಲಿ ಮೇಘಗಳಿಲ್ಲದಿರುವುದರಿಂದ, ನವಿಲುಗಳ ಆಟಕ್ಕೆ ಜಾಗವಿಲ್ಲ. ಅಂದರೆ ಬೃಂದಾವನವು ಆಗ ಇಂದ್ರ ಧನುಸ್ಸಿನಂತೆ ಅನೇಕ ನವಿಲುಗರಿಗಳನ್ನು ಹೊಂದಿದ್ದ ಕಣ್ಣನ

ಸಾನ್ನಿಧ್ಯದಿಂದ ಎಲ್ಲವೂ ಕಪ್ಪಾಗಿ ಕಂಡು, ಅವನನ್ನು ಇಂದ್ರಿನ ಬಿಲ್ಲಿನ ಜೊತೆ ಇರುವ ಮೋಡದಂತೆ ಭಾವಿಸಿ ನವಿಲುಗಳು ಆಟವಾಡುವಂತಿತ್ತು.

ಮಳೆಗಾಲವಲ್ಲದಿದ್ದರೂ, ಶ್ರೀಕೃಷ್ಣನ ಸಾನ್ನಿಧ್ಯ, ನವಿಲುಗಳಿಗೆ ಆನಂದವನ್ನು ಉಂಟು ಮಾಡುವಂತಿತ್ತು. ಶ್ರೀಕೃಷ್ಣನು ನವಿಲುಗರಿಗಳನ್ನು ಧರಿಸಿದ್ದರಿಂದ ಇನ್ನೂ ಹೆಚ್ಚು ಕಪ್ಪಾಗಿ ಕಂಡು, ನವಿಲುಗಳು ಅದು ಮಳೆಗಾಲವೇನೋ ಎಂದು ಭಾವಿಸಿ, ಕುಣಿದಾಡುತ್ತಿದ್ದವು. ಭಾಗವತದ ಶ್ಲೋಕವು ಹೀಗಿದೆ

ಮೇಘಾಗಮೋತ್ಸವಾ ಹೃಷ್ಟಾಃ ಪ್ರತ್ಯನನ್ದಞ್ಛಿಖಣ್ಡಿನಃ ।
ಗೃಹೇಷು ತಪ್ತಾ ನಿರ್ವಿಣ್ಣಾ ಯಥಾಚ್ಯುತಜನಾಗಮೇ ॥

ತಾಪತ್ರಯಗಳಿಂದ ಬೆಂದು ಪರಿತಪಿಸುವ ಗೃಹಸ್ಥರ ಮನೆಗೆ ಹರಿದಾಸರು ಬಂದಾಗ ಅವರಿಗೆ ಆಗುವ ಆನಂದೋತ್ಸವದಂತೆ, ಮೇಘಗಳ ಶುಭಾಗಮನದಿಂದ ನವಿಲುಗಳು ಕೇಕೆ ಹಾಕಿಕೊಂಡು ನೃತ್ಯ ವಾಡುತ್ತಾ ಆನಂದೋತ್ಸವವನ್ನು ಆಚರಿಸುತ್ತಿರುವುವು.

ಸಮಗ್ರ ಬಂಧುಕರಜಃ ಸಮೇತಂ ಸ್ಮೇರಾತ ಸೀಮೇಚಕ ಮಂತರಿಕ್ಷಮ್ ।
ಪೀತಾಂಬರೇಣ ಪ್ರಭುಣಾ ತದಾನೀಮ್ ಅಯತ್ನಸಂಭೂತ ಮವಾಪ ಸಾಮ್ಯಂ॥೫೯॥

ಅರಳಿದ ಹೂಗಳ ಪ್ರಭೆಯಿಂದ ಆಕಾಶವು ಕೆಂದಾವರೆಯಂತೆ ಹರಡಿಕೊಂಡಿತ್ತು. ಪೀತಾಂಬರ ತೊಟ್ಟುಕೊಂಡಿರುವ ಸ್ವಾಮಿಯ ಜೊತೆ ಸ್ಪರ್ಧಿಸುವಂತಿತ್ತು.

ಅರಳಿದ ಹೂವುಗಳ ಜೊತೆ ಶ್ರೀಕೃಷ್ಣನ ಅಲಂಕಾರವು ಆಪ್ಯಾಯಮಾನವಾಗಿದ್ದು ಒಂದಕ್ಕೊಂದು ಸ್ಪರ್ಧಿಸುವಂತಿತ್ತು. ಅರಳಿದ ಹೂಗಳನ್ನು ನೋಡುವುದೇ ಒಂದು ಆನಂದ. ಅವು ಶ್ರೀಕೃಷ್ಣನ ದೇಹವನ್ನು ಅಲಂಕರಿಸಿದ್ದರಿಂದ ಇನ್ನೂ ಶೋಭಾಯಮಾನವಾಗಿ ಕಾಣುತ್ತಿದ್ದು. ಒಂದರ ಜೊತೆ ಇನ್ನೊಂದು ಸ್ಪರ್ಧಿಸುವಂತಿತ್ತು.

ಸಮಗ್ರ ಸಪ್ತಚ್ಛದ ರೇಣುಕೀರ್ಣೈಃ ಸ್ರೋತೋಭಿರುನ್ನೀತ ಮದಪ್ರವಾಹಃ ।
ಸ್ವಕಾನನೇ ಸ್ವೈರಜುಷಾಂ ಗಜಾನಾಂ ಗೋವರ್ಧನೋ ಯೂತಪತಿರ್ಬಭೂವ ॥೬೦॥

ಎಲ್ಲೆಲ್ಲೂ ಪ್ರವಾಹಗಳಿಂದ ಅಲ್ಲಾಡಿದ ಮರಗಳಿಂದ ಕೂಡಿದ್ದ ಗೋವರ್ಧನ ಗಿರಿಯು ತನ್ನ ಕಾಡಿನಲ್ಲಿ ಯಥೇಚ್ಛವಾಗಿ ತಿರುಗಾಡುವ ಆನೆಗಳಿಗೆ ನಾಯಕನಂತೆ ಪ್ರಧಾನ ಆನೆಯಂತೆ ಬೆಳಗುತ್ತಿತ್ತು.

ಗೋವರ್ಧನ ಗಿರಿಯು ಆ ಬೆಟ್ಟಗಳ ಸಾಲನಲ್ಲಿ ಎದ್ದು ನಿಲ್ಲುವಂತಿತ್ತು. ಆನೆಗಳ ನಾಯಕನಾದ ಗಜರಾಜನಂತೆ ಶೋಭಿಸುತ್ತಿತ್ತು.

ಅಧೋಮುಖೈಶ್ಚ ಪ್ರತಿಬಿಂಬರೂಪೈರಭ್ಯುನ್ನತೈರಾತ್ಮ ಭಿರಾಪ್ಯ ಶಂಸನ್ ।
ತ್ರಿವಿಕ್ರಮಸ್ಯ ಸ್ಥಿತಮುನ್ನತಂ ಚ ಪದದ್ವಯಂ ಪಾಥಸಿ ರಕ್ತಪದ್ಮಾಃ ॥೬೧॥

ಕೆಂದಾವರೆಯ ಹೂಗಳು ನೀರಿನ ಮೇಲೆ ಬೆಳೆದು ನಿಲ್ಲುವ ತಮ್ಮ ಗುಣಗಳಿಂದ ಅಲ್ಲಿ ಕೆಳಮುಖವಾಗಿ ಬಿದ್ದಿರುವ ತಮ್ಮ ನಾಳಗಳಿಂದ ತ್ರಿವಿಕ್ರಮಾವತಾರ ಮಾಡಿದ ಸ್ವಾಮಿಯನ್ನು ಮೇಲೆ ತಮ್ಮ ಎರಡಡಿಗಳಿಂದ ಅನುಕರಿಸಿದವು.

ತಾವರೆಯ ನಾಳಗಳು ನೀರಿನಲ್ಲಿ ಕೆಳಮುಖವಾಗಿ ಬೆಳೆಯುತ್ತವೆ. ತ್ರಿವಿಕ್ರಮಾವತಾರ ಮಾಡಿದ ಶ್ರೀಹರಿ ಊರ್ಧ್ವಮುಖವಾಗಿ ಬೆಳೆದನು. ಯಾವ ರೀತಿ ಎರಡಡಿಗಳಿಂದ ಅವನು ಭೂಲೋಕ ಹಾಗೂ ಊರ್ಧ್ವ ಲೋಕಗಳನ್ನು ಅಳೆದನೋ, ಅದೇ ರೀತಿ ತಾವರೆಯು ನೀರಿನಲ್ಲಿ ಕೆಳಗಡೆ ಎರಡಡಿ ಇಳಿಯುತ್ತದೆ. (ಉಪಮಾಲಂಕಾರ).

ಪಂಕಕ್ಷಯೇ ಪ್ರಾಕ್ತನ ವರ್ತನೀನಾಂ ವಕ್ರೇತರಾ ವ್ಯಕ್ತಿರಭೂತ್ ಪೃಥಿವ್ಯಾಮ್।
ಬಹಿರ್ಮತ ಪ್ರತ್ಯಯಿನಾಂ ವ್ಯಪೋಹೆ ವೇದೋದಿತಾನಾಮಿವ ಸತ್ಕ್ರಿಯಾಣಾಮ್ ॥೬೨॥

ಭೂಮಿಯಲ್ಲೆಲ್ಲಾ ವಕ್ರವಾದ ಮಾರ್ಗವನ್ನು ಬಿಟ್ಟು ನಡೆದು ಸೇರುವ ನೇರವಾದ ಮಾರ್ಗವೆಲ್ಲವೂ ತಿಳಿಯಾದವು. ವೇದಗಳಲ್ಲಿ ವಿಹಿತವಾದ ಸದಾಚಾರ ಧರ್ಮಗಳಿಗೆ ಪ್ರಕಾಶವು ಬರಲು ಇದು ಅನುಕೂಲವಾಯಿತು.

ಮಳೆಯ ಕಾಲದಲ್ಲಿ ವಕ್ರಮಾರ್ಗ, ನೇರ ಮಾರ್ಗ ಎಲ್ಲಾ ಒಂದಾಗುತ್ತವೆ. ವೇದ ಗಳಲ್ಲಿ ಉಕ್ತವಾಗಿರುವ ಸನ್ಮಾರ್ಗಗಳು ಸತ್ಪುರುಷರಿಂದ ಪ್ರಕಾಶಕ್ಕೆ ಬರುತ್ತವೆ. ಅಹಿಂಸಾ ಪ್ರಥಮೋಧರ್ಮ ಎಂದು ಹೇಳುವ ಅನೇಕ ವೇದ ವಿರೋಧಿ ಮತಗಳನ್ನು ವೈದಿಕ ಮಾರ್ಗ ಅನುಸರಿಸುವವರು, ಖಂಡಿಸಿ ಸನಾತನ ಧರ್ಮವನ್ನು ಸ್ಥಾಪಿಸುತ್ತಾರೆ. ಪಾಖಂಡ ಮತ ಗಳು ಇರುವುದರಿಂದ ವೇದಧರ್ಮಗಳ ಪ್ರಚಾರವು ಹೆಚ್ಚಿಗೆ ಆಗುತ್ತದೆ.

ಮದಪ್ರಭೂತಧ್ವನಯೋ ಮಹೋಕ್ಷ್ಣರೋಧೋ ವಿಭೇದೋಲ್ಬಣ ತುಂಗಶೃಂಜ್ಞಾಃ।
ದರ್ಪಸ್ಯದೇಹಾ ಇವಯೋಗಸಿದ್ಧಾಃ ದಂತಾವಲಾನ್ ಅಂತರಯಾ ಬಭೂವುಃ ॥೬೩॥

ಚೆನ್ನಾಗಿ ಕೊಬ್ಬಿ ಬೆಳೆದ ವೃಷಭಗಳು ತಮ್ಮ ನೀಳವಾದ ಕೊಂಬುಗಳಿಂದ ಉಜ್ಜಿಕೊಂಡು ಕೊಬ್ಬು ಎಂಬ ಗುಣವನ್ನು ಯೋಗ ಮಹಿಮೆಯಿಂದ ತಮ್ಮ ಮಹಿಮೆಯನ್ನು ಹೆಚ್ಚಿಸಿಕೊಳ್ಳುವ ಅನೇಕ ಮೂರ್ತಿಗಳಂತೆ ಆನೆಗಳನ್ನೂ ತಿರಸ್ಕಾರ ಮಾಡಿದವು.

ವೃಷಭಗಳು ತಮ್ಮ ಉದ್ದವಾಗಿ, ದಪ್ಪವಾಗಿ ಬೆಳೆಯುವ ಕೊಂಬುಗಳನ್ನು ಒಂದಕ್ಕೊಂದು ಉಜ್ಜಿ, ತಮ್ಮ ಕೊಬ್ಬನ್ನು ಇಳಿಸಿಕೊಳ್ಳುತ್ತವೆ. (ಆಗ) ಅವು ಆನೆಗಳನ್ನು ಸಹ ಮಾನ್ಯ ಮಾಡು ವುದಿಲ್ಲ.

ಸರೋರುಹಾಂ ರಕ್ತಸಿತಾಸಿತಾನಾಂ ಶ್ರಿಯಾ ಬಭೌ ಶಾರದ ವಾಸರ ಶ್ರೀಃ।
ವಿಹಾರಭಾಜಾ ಗುಣಭೇದ ಯೋಗಾತ್ ವ್ಯಕ್ತೀಕೃತಾ ವಿಶ್ವಸೃಜೇವ ಮಾಯಾ ॥೬೪॥

ನೀರಿನಲ್ಲಿ ತೋರುವ ಕೆಂಪು, ಬಿಳುಪು, ಕಪ್ಪೆಂಬ ಮೂರು ಬಗೆಯಾದ ಪುಷ್ಪಗಳ ಸಮೃದ್ಧಿ ಯಿಂದ ಶರತ್ಕಾಲದ ಸೌಂದರ್ಯವು ರಜಸ್ಸು, ಸತ್ವ, ತಮೋಗುಣಗಳನ್ನು ಹೊಂದಿ ಸೃಷ್ಟಿ ಎಂಬ ಆಟವನ್ನು ಮಾಡುವ ಭಗವಂತನಿಂದ ಅವ್ಯಕ್ತ ನೆಲೆಯಿಂದ ವ್ಯಕ್ತ ನೆಲೆಗೆ ಬಂದ ತೇಜಸ್ಸು, ಜಲ, ಪೃಥ್ವಿ ಎಂಬ ಪರಿಣಾಮಗಳನ್ನು ಹೊಂದುವ ಅವನ ಮಾಯೆಯೆಂಬ ಪ್ರಕೃತಿಯಂತೆ ಭಾಸವಾಗುವಂತಿತ್ತು.

ಇಲ್ಲಿ ಭಗವಂತನ ತ್ರಿವಿಧ ಸೃಷ್ಟಿಯನ್ನು ಶರತ್ಕಾಲದಲ್ಲಿ ಕಾಣುವ ಪ್ರಕೃತಿಗೆ ಹೋಲಿಸಲಾಗಿದೆ. ಸತ್ವ, ರಜಸ್ಸು ತಮಸ್ಸುಗುಣದಿಂದ ಕೂಡಿರುವ ಸೃಷ್ಠಿಯನ್ನು ಕೆಂಪು, ಕಪ್ಪು ಬಿಳುಪು ಬಣ್ಣಕ್ಕೆ ಹೋಲಿಸಿ, ಸೃಷ್ಠಿಯ ಪ್ರತಿಯೊಂದು ಕಾರ್ಯವು ತ್ರಿಗುಣಗಳಿಂದ ಕೂಡಿದೆಯೆಂಬ ವೇದಾಂತಾರ್ಥವನ್ನು ತಿಳಿಸಿದ್ದಾರೆ.

ಆರಕ್ತಕಲ್ಹಾರ ವಿಲೋಚನ ಶ್ರೀಃ ಕ್ಲಾಂತಾಭೃತಂ ಕೇಲಗತಿಃ ಸ್ಖಲಂತಿ।
ಉನ್ನಾಲ ನಾಲೀಕಮಧೂಪ ಭೋಗಾತ್ ಮತ್ತೇವ ಮಾರ್ತಾಂಡ ಸುತಾ ಬಭಾಸೆ ॥೬೫॥

ಸುಂದರವಾದ ಕಣ್ಣುಗ್ಗಳಂತಿರುವ ಪುಷ್ಪಗಳ ಅರಳುವಿಕೆಯು, ಕಣ್ಣೀರಿನ ಕೊರತೆಯಿಂದ ಬಾಡಿ ಹೋದುದು. ಉಲ್ಲಾಸವಾಗಿ ತೋರುವುದು, ಇಲ್ಲಿಯೂ, ಅಲ್ಲಿಯೂ ಕರುಗಳ ಕೂಟದಲ್ಲಿ ನೀರು ಕಡಿಮೆಯಾದರೂ, ಮೇಲೆ ಅರಳುವ ತಾವರೆಯ ಹೂಗಳಲ್ಲಿ ಸೂಸುವ ಜೇನಿನ ಗುಣವುಳ್ಳ ಯಮುನೆಯು, ಮದವೇರಿದ ಜೇನು ಹುಳುಗಳಂತೆ, ಒಬ್ಬ ಸ್ತ್ರೀಯಂತೆ ತೋರುತ್ತಿದ್ದಳು.

ಶರತ್ಕಾಲದಲ್ಲಿ ಮನೋಹರವಾಗಿ ಹರಿಯುವ ಯಮುನೆಯ ಗಮನವನ್ನು ಬಣ್ಣಿಸಿದ್ದಾರೆ. ಯಮುನೆಯನ್ನು ಒಬ್ಬ ಕಾಮದ ಮದವೇರಿದ ಸ್ತ್ರೀಗೆ ಹೋಲಿಸಿದ್ದಾರೆ. ಕೆಲವು ಕಡೆ ಕೃಶವಾಗಿಯೂ, ಕೆಲವು ಕಡೆ ವಿಸ್ತಾರವಾಗಿಯೂ, ಕೆಲವೆಡೆ ಪೂರ್ಣಪ್ರವಾಹದಲ್ಲಿ ಹರಿಯುವ ಯಮುನೆಯು, ಕಾಮ ವಿರಹದಿಂದ ಬಳಲಿ, ಕೆಲ ಬಾರಿ ಕೃಶವಾಗಿಯೂ, ಕೆಲವು ಬಾರಿ ಪೂರ್ಣ ಅಂಗಸೌಷ್ಠವವುಳ್ಳ ವನಿತೆಯಾಗಿಯೂ ತೋರುತ್ತಿದ್ದಳು. ಯಮುನೆಯಲ್ಲಿ ಅರಳುವ ತಾವರೆಗಳ ಸೌಂದರ್ಯವೇ ಒಂದು ವಿಶಿಷ್ಟ

ವಲಗ್ನಲಗ್ನೋರ್ಮಿ ವಲೀ ವಿಭಂಗಾಂ ಕಾಲೇ ಯಥಾಸ್ಥಾನ ಗೃಹೀತ ಕಾರ್ಶ್ಯಾಮ್।
ಅರಂಸ್ತ ಪಶ್ಯನ್ ಅನಘೋನುರೂಪಾಂ
ಶಾಮಾಂ ಸುದೃಷ್ಟಾಮಪಿ ಸೂರ್ಯಕನ್ಯಾಮ್ ॥೬೬॥

ಮಧ್ಯದಲ್ಲಿ ದೊಡ್ಡ ಅಲೆಗಳನ್ನು ಹೊಂದಿರುವುದೂ, ಶರತ್ಕಾಲವಾದ್ದರಿಂದ ಸ್ವಭಾವವಾದ ದೊಡ್ಡ ಪ್ರವಾಹವಿಲ್ಲದೆ ಇಳಿದು ಆಟವಾಡಲು ಸಾಧ್ಯವಾಗುವ ಆ ಕಾಳಿಂದೀಯನ್ನು ಕೃಷ್ಣನು ತನ್ನ ಮನವಿಯಂತೆ ಕಂಡನು. ಅವನಿಗೆ ಅದು ಯೌವನ ಮಧ್ಯದಲ್ಲಿ ಇರುವ ಸ್ತ್ರೀಯಂತೆ ಕಂಡಳು.

ಕಾಳಿಂದೀ ನದಿಯು ಶ್ರೀಕೃಷ್ಣನ ಪ್ರಿಯತಮೆಯಾದವಳು. ತನ್ನ ಬಾಲ್ಯದ ಬಹುಕಾಲವನ್ನು ಯಮುನೆಯ ದಡದಲ್ಲಿಯೇ ಸ್ವಾಮಿ ಕಳೆದಿದ್ದಾನೆ. ಶರತ್ಕಾಲದಲ್ಲಿ ಯಮುನೆಯಲ್ಲಿ ಪ್ರವಾಹವು ಕಡಿಮೆಯಿರುತ್ತದೆ. ಆಗ ಅವಳಲ್ಲಿ ವಿಹರಿಸಲು ಪ್ರಶಸ್ತ ಕಾಲ.

"ಶ್ಯಾಮಾ" ಎಂದರೆ "ಯೌವನ ಮಧ್ಯಸ್ಥಾ" ಎಂಬರ್ಥವುಂಟು. ಆ ಕಾಳಿಂದಿಯು ಯೌವನ ಮಧ್ಯಸ್ಥಳಾದ ಸ್ತ್ರೀಯು ಹೇಗೆ ಭೋಗಯೋಗ್ಯಳೋ ಅದೇ ರೀತಿ ಕೃಷ್ಣನಿಗೆ ವಿಹರಿಸಲು ಯೋಗ್ಯಳಾಗಿದ್ದಳು.

ಶೋಣಾಕೃತಿಂ ಕೋಕನದೈರುದಾರೈರಿಂದೀವರೈರಾಕಲಿತಾತ್ಮಕಾಂತಿಂ ।
ಸಿತಾಂಬುಜೈಃ ಸೂಚಿತಜಾಹ್ನವೀತಾ ಮೇಕಾಮ ನೇಕಾಮಿವ ತಾಮಭುಂಕ್ತ ॥೬೭॥

ಶ್ರೇಷ್ಠವಾದ ಅಲೆಗಳಿಂದ ಕೂಡಿದ, ಪುಷ್ಪಗಳಿಂದ ಸಮೃದ್ಧವಾದ ತನ್ನ ಸ್ವಭಾವದಿಂದ ಮನೋಹರವಾಗಿ ಹರಿಯುವ ಯಮುನೆಯು ಗಂಗಾ, ಶೋಣಾ ಮುಂತಾದ ನದಿಗಳ ರೀತಿ ಶೋಭಿಸುತ್ತಿದ್ದಳು.

ಯಮುನೆಯ ವರ್ಣನೆ ಮುಂದುವರೆದಿದೆ. ಇಲ್ಲಿ ಯಮುನೆಯನ್ನು ಭಾರತದ ಇತರ ನದಿಗಳಾದ ಗಂಗಾ, ಶೋಣಾ ನದಿಗಳಿಗೆ ಹೋಲಿಸಿದ್ದಾರೆ. ಗಂಗೆಯು ಪವಿತ್ರವಾದ ನದಿ. ಆದರೆ ಶ್ರೀಕೃಷ್ಣನ ಬಹು ಕಾಲದ ಸಂಪರ್ಕದಿಂದ ಯಮುನೆಯು ಗಂಗೆಗಿಂತ ಪವಿತ್ರಳೆನಿಸಿಕೊಂಡಳು. (4ನೇ ಸರ್ಗದಲ್ಲೂ ಇದನ್ನು ಹೇಳಿದ್ದಾರೆ).

ಕುಮುದ್ವತೀಂ ಪ್ರೇಕ್ಷ್ಯ ಕಲಿಂದ ಕನ್ಯಾಂ ತಾರಾಪರಿಷ್ಕಾರವತೀಂ ತ್ರಿಯಾಯಾಮ್ ।
ನಭಃ ಸ್ಥಲೀಂ ಚ ಸ್ಫುಟ ಹಂಸಮಾಲಾಂ ನಾಥ ಸ್ತ್ರಿಧಾಭೂತ ಮಮನ್ಯತೈಕಮ್ ॥೬೮॥

ಶ್ರೀಕೃಷ್ಣನು ಅಂಬರ ಹೂಗಳೊಡನೆ ಯಮುನೆಯನ್ನು, ನಕ್ಷತ್ರಗಳೊಡನೆ ರಾತ್ರಿಯನ್ನು ಹಂಸಗಳ ಸಮೂಹವನ್ನು ಆಕಾಶದಲ್ಲಿ ನೋಡಿ ಒಂದೇ ವಸ್ತುವು ಮೂರು ಆಗಿರುವಂತೆ ಭಾವಿಸಿದನು. ಈ ಮೂರೂ ಶರದೃತುವಿನಲ್ಲಿ ಮೇಳೈಸಿತು.

ಅಂಬರ ಹೂಗಳು, ನಕ್ಷತ್ರಗಳು, ಯಮುನೆಯಲ್ಲಿ ಹಂಸಗಳು ಇವು ಮೂರು ಒಂದೇಯಾಗಿ ಶ್ರೀಕೃಷ್ಣನಿಗೆ ಆ ಶರದೃತುವಿನಲ್ಲಿ ಕಂಡಿತು.

ಬಂಧೂಕ ಜಾಲೈಃ ಪರಿಧಾನ ಶೋಭಾ ಮಿಂದೀವರೈರ ಪ್ರತಿಮಾಮಭಿಖ್ಯಾಮ್ ।
ಮುಖಶ್ರಿಯಂ ತಾಮರಸೈರ್ಮುರಾರೈಃ ಸಂಭೃತ್ಯ ಲೇಭೇ ಶರದಾನುರೂಪ್ಯಂ ॥೬೯॥

ಶರತ್ಕಾಲವಾದುದು ಪಂದೂಕ ಪುಷ್ಪಗಳಿಂದ ಭಗವಂತನ ಪೀತಾಂಬರ ವಸ್ತ್ರವನ್ನು ಅಲಂಕರಿಸುದಾಗಿ ಕೆಂದಾವರೆಗಳಂತೆ ಅವನ ದಿವ್ಯ ಮುಖವನ್ನು ಸುಂದರವಾಗಿಯೂ, ಪ್ರಕಾಶಮಾನವನ್ನಾಗಿಯೂ ಮಾಡಿತು.

ಭೂಮಂಡಲದಲ್ಲಿ ಯದುವಂಶೀಯರಲ್ಲಿ ಯದುಪತಿ ಭಗವಾನ್ ಶ್ರೀಕೃಷ್ಣನು ಶೋಭಿಸುತ್ತಿರುವಂತೆಯೇ, ಆಕಾಶದಲ್ಲಿ ತಾರೆಗಳಿಂದ ಕೂಡಿದ ಚಂದ್ರನು ಶೋಭಿಸ ತೊಡಗಿದನು. ವಿಕಸಿತವಾದ ವನ ಕುಸುಮಗಳನ್ನು ಆಲಂಗಿಸಿಕೊಂಡು ಮೆಲ್ಲಮೆಲ್ಲನೇ

ಮತ್ತು ಸಮಶೀತೋಷ್ಣವಾಗಿ ಬೀಸುತ್ತಿದ್ದ ಮಾರುತವು ಸಮಸ್ತ ಜನರ ತಾಪವನ್ನು ಪರಿಹರಿಸುತ್ತಿತ್ತು. ಗೋಪಿಯರ ವಿರಹ ತಾಪವನ್ನು ಮಾತ್ರ ಪರಿಹರಿಸಲು ಸಮರ್ಥವಾಗಲಿಲ್ಲ. ಅವರ ಮನಸ್ಸುಗಳನ್ನು ಶ್ರೀಕೃಷ್ಣನೇ ಅಪಹರಿಸಿಬಿಟ್ಟಿದ್ದನು.

ಪಯೋಧರಾಣಾಂ ಪಲಿತಂಕರಣ್ಯಾ ದಿವಶ್ಚ ತಾರುಣ್ಯಮಿವಾರ್ಪಯಂತ್ಯಾ।
ವಿಚಿತ್ರಭೂಮ್ನಾ ಶರದಾ ಸ್ವಶಕ್ತಿಂ ವಿಖ್ಯಾಪಯಾಮಾಸ ವಿಹಾರಗೋಪಃ ॥೭೦॥

ಆಟವಾಡುವ ಭಗವಂತನು ಪಯೋಧರಗಳು ತುಂಬುವ ಹಾಗೆ ಆಕಾಶವನ್ನೆಲ್ಲಾ ಆಧರಿಸಿ, ಪ್ರಸರಿಸಿ, ತನ್ನ (ಮೇಘಗಳು ತುಂಬುವ ಹಾಗೆ ಅಗಾಧ ಶಕ್ತಿಯನ್ನು ತೋರ್ಪಡಿಸಿದನು).

ಸ್ತ್ರೀಯರ ಪಯೋಧರಗಳು ಹಾಲಿನಿಂದ ತುಂಬಿ, ಯಾವ ರೀತಿ ಶಿಶುಗಳಿಗೆ ಪ್ರಯೋಜನವಾಗುವುದೋ ಅದೇ ರೀತಿ, ಆಕಾಶವನ್ನೆಲ್ಲಾ ಮೇಘಗಳು ಆವರಿಸುವಂತೆ ಮಾಡಿ, ಮಳೆ ಸುರಿಯುವುದರ ಮೂಲಕ ಲೋಕಕ್ಕೆ ಕ್ಷೇಮವನ್ನುಂಟು ಮಾಡಿದನು ಭಗವಂತ. 'ಪಯೋಧರಾ' ಎಂದರೆ ಮೇಘಗಳು ಎಂಬ ಮತ್ತೊಂದರ್ಥವುಂಟು.

ಕುಮುದ್ವತೀ ಕಲ್ಪಿತ ಭೃಂಗ ಗೀತಃ ಸಂದರ್ಶಯನ್ ದರ್ಪಣಮಿನ್ದುಬಿಂಭಮ್।
ಸಚಾಮರ ಶ್ಚಂದ್ರಿಕಯಾ ಸಿಷೇವೇ ತಮೀಶ್ವರಂ ತತ್ರ ಶರತ್ಪ್ರದೋಷಃ ॥೭೦॥

ಶರತ್ಕಾಲದ ಸಂಜೆ ಹೊತ್ತು ಪ್ರಭುವಾದ ಶ್ರೀಕೃಷ್ಣನಿಗೆ ಇಂಪಾದ ಸಂಗೀತವನ್ನು ದುಂಬಿಗಳ ಮೂಲಕ ಕೇಳಿಸಿ, ಚಂದ್ರ ಬಿಂಬವಾಗಿರುವ ಕನ್ನಡಿಯನ್ನು ತೋರಿಸಿ, ಹಿತವಾದ ಚಾಮರವನ್ನು ಬೀಸಿ, ಸೇವೆ ಸಲ್ಲಿಸುತ್ತಿದ್ದರು.

ಬೃಂದಾವನದಲ್ಲಿ ಶ್ರೀಕೃಷ್ಣನಿಗೆ ಗೋಪಿಯರು ಸೇವೆ ಸಲ್ಲಿಸುತ್ತಿದ್ದ ರೀತಿಯನ್ನು ಇಲ್ಲಿ ವಿವರಿಸಿದ್ದಾರೆ. ಸಂಜೆಯ ಹೊತ್ತು ರಾಜರಿಗೆ ಸಂಗೀತ, ನೃತ್ಯ ಮುಂತಾದುವನ್ನು ಹೇಳಿ ಅವರನ್ನು ತೃಪ್ತಿ ಪಡಿಸುವಂತೆ ಗೋಪಿಯರು ಶ್ರೀಕೃಷ್ಣನಿಗೆ ಆನಂದ ಉಂಟುಮಾಡುತ್ತಿದ್ದರು.

ಸರೋರುಹಾಂ ರಕ್ತ ಸಿತಾಸಿತಾನಾಂ ಸ್ಥಾನೇಷು ಭೃಂಗ ಧ್ವನಿಭಿಃ ಪ್ರತೇನೆ।
ಜಿಗೀಷತಃ ಪಂಚಶರಸ್ಯ ವಿಶ್ವಂ ತೂರ್ಣಂ ಪ್ರವೃತ್ತೈರಿವ ತೂರ್ಯಘೋಷೈಃ ॥೭೨॥

ಕೆಂಪು, ಕಪ್ಪು ಬಿಳುಪು ಪುಷ್ಪಗಳಲ್ಲಿ ತಂಗುವ ದುಂಬಿಗಳು ಸೌಂದರ್ಯದಿಂದಲೇ ಜಗತ್ತನ್ನು ಗೆಲ್ಲುವ ಇಚ್ಛೆಹೊಂದಿರುವ ಸುಂದರವಾದ ಮನ್ಮಥನ ವೇಗವಾಗಿ ಬಾರಿಸಿದ ವಾದ್ಯಗಳಂತೆ ಶಬ್ದ ಮಾಡಿದವು.

ದುಂಬಿಗಳ ನಾದ ಶಬ್ದವು ಬಹಳ ಇಂಪಾಗಿದ್ದು ಎಂಥವರನ್ನೂ ಮರುಳು ಮಾಡುತ್ತದೆ. ಯಾವ ರೀತಿ ಮನ್ಮಥನು ಜಗತ್ತನ್ನೆಲ್ಲಾ ತನ್ನ ಪುಷ್ಪ ಬಾಣಗಳಿಂದ ಗೆಲ್ಲುತ್ತಾನೋ ಅದೇ ರೀತಿ ಶರತ್ಕಾಲದಲ್ಲಿ ಪುಷ್ಪಗಳಲ್ಲಿ ತಂಗುವ ದುಂಬಿಗಳು ತಮ್ಮ ನಾದದಿಂದ ಎಲ್ಲರನ್ನೂ ವಶಗೊಳಿಸುತ್ತಿದ್ದವು.

ನಿರ್ಮುಕ್ತಭೋಗೀಂದ್ರನಿಭೈಃ ಪಯೋದೈರ್ನಭಃಸ್ಥಲೀ ವ್ಯಾಪ್ತತನುರ್ಬಭಾಸೇ।
ಅನಂಗಯೋಗ್ಯೈರ್ಹರಿ ನೀಲಭೂಮಿ ದೌತಪ್ರಕೀರ್ಣ್ಣೈರಿವ ಚಾಮರೌಘೈಃ ॥೭೩॥

ಕಪ್ಪಾಗಿರುವ ಆಕಾಶ ಪ್ರದೇಶದಲ್ಲಿ ತಮ್ಮ ಪೊರೆಗಳನ್ನು ಕಳಚುವ ಸರ್ಪಗಳಂತೆ, ಬಿಳುಪಾದ ಮೇಘಗಳು ಹರಡಿಕೊಂಡು ಕೊಳೆಯನ್ನುನೀಗುವಂತಿತ್ತು. ಮನ್ಮಥನ ಚಾಮರಗಳು ಇಂದ್ರನೀಲ ರತ್ನಮಯದಿಂದ ಕೂಡಿದ ಜಾಗಗಳಂತಿದ್ದವು.

ಆಕಾಶದ ತುಂಬಾ ಬಿಳುಪಾದ ಮೇಘಗಳು ಹರಡಿ, ಆಕಾಶದ ಕೊಳೆಯನ್ನು ಯಾವ ರೀತಿ ಪೊರೆಗಳನ್ನು ಕಳಚಿ ಸರ್ಪಗಳು ಶುಭ್ರವಾಗುವುವೋ ಆ ರೀತಿ ನಿರ್ಮಲವನ್ನಾಗಿ ಮಾಡುತ್ತಿದ್ದವು.

ವಿಭಾವ್ಯ ಬಂಧೂಕ ವಿಭಾತಸಂಧ್ಯಾಂ ಕಾಲೋಚಿತಂ ಕಲ್ಪಯಿತುಂ ವಿಹಾರಮ್।
ದ್ವಿಜೈರುಪಾಧಾವಿ ನಿಸರ್ಗ ಶುದ್ಧೈರಂಗೀಕೃತಾನಾವಿಲ ತೀರ್ಥತೋಯೈಃ ॥೭೪॥

ನಿಜವಾಗಿಯೂ ಬಿಳಿಯದಾದ ಪಕ್ಷಿಗಳು (ಹಂಸಗಳು) ಬೆಳಿಗ್ಗೆ ಚೆನ್ನಾಗಿ ಅರಳುವ ಪುಷ್ಪಗಳನ್ನು ಕಂಡು ಶರತ್ಕಾಲ ಬಂದಿತೆಂದು ತಿಳಿದು ಸಂಚಾರ ಪ್ರಾರಂಭಿಸಿ ಈಗ ತಿಳಿಯಾದ ನೀರಿನಲ್ಲಿ ತಂಗಲು ಇಚ್ಛಿಸಿ ಬಂದವು.

ಬೆಳ್ಳಗಿರುವ ಪಕ್ಷಿಗಳು ಶುಭ್ರವಾದ ನೀರಿನಲ್ಲಿ ತಂಗಲು ಬಯಸುತ್ತವೆ. ಶರತ್ಕಾಲದಲ್ಲಿ ನದಿಯ ನೀರು ತಿಳಿಯಾಗಿರುವುದರಿಂದ, ಹಂಸ ಪಕ್ಷಿಗಳನ್ನು ಆ ನೀರಿನಲ್ಲಿ ನೋಡುವುದೇ ಒಂದು ಆನಂದ.

ಅನಿಂದಿತಾಂ ಗ್ಲಾನಿ ಮಿವೋದ್ವಹಂತ್ಯೋ ವಿತೇನಿರೇ ಮಂದತರಾನ್ ಪ್ರಚಾರಾನ್।
ವರ್ಷಾ ನಿಶೀಥೇ ದಯಿತೇನ ಭುಕ್ತಾಃ ಶ್ರಾಂತಿಂ ಪ್ರಯಾತ ಇವ ಶೈವಲಿನ್ಯಃ ॥೭೫॥

ವರ್ಷಾಕಾಲದಲ್ಲಿ ನದಿಗಳು ಉಕ್ಕಿ ಸಮುದ್ರ ಸೇರಿದ ನಂತರ, ಅಲೆಗಳು ಕಡಿಮೆಯಾಗಿ ರಾತ್ರಿ ಕಾಲದಲ್ಲಿ ಪ್ರೀತಿಯಿಂದ, ಮೆಲ್ಲನೆ ನಡೆಯುತ್ತಾ ತನ್ನಪ್ರೇಮಿಯನ್ನು ಸೇರುವ ಸ್ತ್ರೀಯಂತೆ ಇತ್ತು.

ಧಾರಾಕಾರವಾಗಿ ಸುರಿಯುವ ಮಳೆಯಿಂದ ನದಿಗಳು ತುಂಬಿ ಹರಿದು, ಸಮುದ್ರ ಸೇರುತ್ತವೆ. ಶರತ್ಕಾಲದಲ್ಲಿ ನದಿಯಲ್ಲಿ ಅಲೆಗಳು ಕಡಿಮೆ ಆಗಿ, ನಿಧಾನವಾಗಿ ಸಮುದ್ರ ಸೇರುತ್ತವೆ. ಅದು ಹೇಗಿದೆ ಅಂದರೆ ರಾತ್ರಿ ಕಾಲದಲ್ಲಿ ತನ್ನ ಗಂಡನನ್ನು ಸೇರಲು ಬಯಸುವ ಸ್ತ್ರೀಯು ನಿಧಾನವಾಗಿ ನಾಚಿಕೆಯಿಂದ ಕೂಡಿ ನಡೆದು ಬರುವಂತಿತ್ತು.

ಶ್ರಿಯಾ ಸಮಂ ಭಾವಿತ ಪದ್ಮಭೂಮ್ನಾ ಘನಾಗಮಾದುಲ್ಲಸಿತಃ ಪಯೋಧೇಃ।
ರರಾಜ ನೀಲೇ ರವಿರಂತರಿಕ್ಷೇ ಮಣೀಶ್ವರೋ ಮಾಧವ ವಕ್ಷಸೀವ ॥೭೬॥

ತಾವರೆ ಹೂಗಳಿಗೆ ಅರಳುವಿಕೆಯನ್ನು ಉಂಟು ಮಾಡುವ ಕಿರಣಗಳು ಸೇರಿ ಸೂರ್ಯನು ಬೆಳಗಿನ ಜಾವದಲ್ಲಿಯೇ ಉದಯಿಸಿ ಆಕಾಶದಲ್ಲಿ ಬೆಳಗಿದನು. ತಾವರೆ ಹೂವಾದ ತನ್ನ

ಸ್ಥಾನಕ್ಕೆ ಮೇಲ್ಮೈ ಉಂಟು ಮಾಡುವ ಲಕ್ಷ್ಮೀ ದೇವಿಯೊಡನೆ, ಸಮುದ್ರದಲ್ಲಿ ಉದಯಿಸಿದ ಕೌಸ್ತುಭ ಮಣಿಯು ಸ್ವಾಮಿಯು ದಿವ್ಯವಾದ ಎದೆಯಲ್ಲಿ ಶೋಭಿಸುವ ಹಾಗೆ ಅದು ತೋರಿತು.

ತಾವರೆ ಹೂವು ಲಕ್ಷ್ಮಿಯ ಆವಾಸಸ್ಥಾನ. ಅದು ಸೂರ್ಯನ ಕಿರಣಗಳು ಉದಯಿಸಿದೊಡನೆ, ಅರಳಲು ಪ್ರಾರಂಭಿಸುತ್ತವೆ. ಆಕಾಶದಲ್ಲಿ ಸೂರ್ಯನ ಉದಯವು, ಲಕ್ಷ್ಮಿಯ ಜೊತೆಯಲ್ಲಿಯೇ ಸಮುದ್ರದಲ್ಲಿ ಉದಯಿಸಿದ ಕೌಸ್ತುಭ ಮಣಿಯು ಶ್ರೀಮನ್ನಾರಾಯಣನ ಎದೆಯಲ್ಲಿ ಶೋಭಿಸುವಂತೆ ಶೋಭಿಸುತ್ತಿತ್ತು. (ಉಪಮಾಲಂಕಾರ)

ಅವಾಪ್ಯ ಸಂಕೋಚಮತೀವ ಭೂಯಃ ಕಾಲಾಗಮಾದುನ್ಮಿಷತೋ ನಭಸ್ತಃ ।
ವಿಭಾಗಮಾ ಪುರ್ವಿದಿಶೋ ದಿಶಶ್ಚ ಪ್ರಜಾಃ ಪ್ರಸನ್ನಾದಿವ ವಿಶ್ವಧಾಮ್ನಃ ॥೭೭॥

ಜಗತ್ತೆಲ್ಲವನ್ನೂ ಭುಜಿಸಿ, ಸ್ವಲ್ಪ ಕಾಲ ಆಲದ ಎಲೆಯ ಮೇಲೆ ಕಣ್ಣು ಮುಚ್ಚಿ ಮಲಗಿದವನು ಎಚ್ಚರಗೊಳ್ಳುವ ಹೊತ್ತಿನಲ್ಲಿ ಬೆಳೆದು ಪ್ರಜೆಗಳೆಲ್ಲವನ್ನೂ ವಿಂಗಡಿಸಿ ಬೇರೆ ಬೇರೆಯಾಗಿ ಸೃಷ್ಟಿಸಿದನು. ಅದೇ ರೀತಿ ಆಕಾಶ, ಇತ್ಯಾದಿಯಾಗಿ ಎಲ್ಲವೂ ಬೇರೆ ಬೇರೆಯಾಗಿ ದಿಕ್ಕು ವಿದಿಕ್ಕುಗಳೆಲ್ಲವೂ ಚೆನ್ನಾಗಿ ತೋರಿದವು.

ಯೋಗನಿದ್ರೆಯಿಂದ ಎದ್ದ ಮೇಲೆ ಶ್ರೀಮನ್ನಾರಾಯಣನು, ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾನೆ. ದೇವರು. ಮನುಷ್ಯರು, ಪಶುಗಳು, ಪ್ರಾಣಿಗಳು ಇತ್ಯಾದಿ ವಿಭಾಗಗಳನ್ನು ಮಾಡಿ ಆಕಾಶ, ಭೂಮಿ, ವಿವಿಧ ದಿಕ್ಕುಗಳು ಎಲ್ಲವನ್ನೂ ವಿಭಾಗಿಸುತ್ತಾನೆ.

ಸಮುದ್ಧೃತ ಸ್ನಿಗ್ಧ ರುಚೋ ಘನಾಬ್ಧೇ ರುನ್ನಿದ್ರತಾಂ ಪೂರ್ವಮುಪಾಜಗಾಮ ।
ರಥಾಂಗ ಪಾಣೇರಿವ ಸಿಂಧುಜನ್ಮಾ ಸರೋಜಿನೀ ಚಾರು ಸರೋಜ ಲಕ್ಷ್ಮ್ಯಾ ॥೭೮॥

ಕ್ಷೀರ ಸಮುದ್ರದಲ್ಲಿ ಭಗವಂತನು ಎದ್ದೇಳುವ ಮುನ್ನ ಸುಂದರವಾದ ತಾವರೆಗಳನ್ನು ಕೈಗಳಲ್ಲಿ ಹಿಡಿದಿರುವ ಲಕ್ಷ್ಮಿ ಏಳುವ ಹಾಗೆ ನೀರು ತುಂಬಿರುವ ಸಮುದ್ರದಿಂದ ಸೂರ್ಯನು ಏಳುವುದಕ್ಕೆ ಮುನ್ನವೇ ತಾವರೆ ಹೂವಿನ ನಾಳವು ಸುಂದರವಾದ ಅರಳಿದ ತಾವರೆ ಹೂಗಳೊಡನೆ ಕಂಡು ಬಂದು ಸಂತೋಷವನ್ನುಂಟುಮಾಡುತ್ತದೆ.

ಪೂರ್ವ ದಿಗಂತದಲ್ಲಿ ಸೂರ್ಯನು ಉದಯಿಸುತ್ತಾನೆ. ಸೂರ್ಯನು ಉದಯಿಸಿದ ನಂತರ ತಾವರೆಗಳು ಅರಳುತ್ತವೆ. ಆದರೆ ತಾವರೆ ಹೂವಿನ ನಾಳವು ಸೂರ್ಯೋದಯಕ್ಕೆ ಮುಂಚೆಯೇ ನೀರಿನಲ್ಲಿ ಕಂಡು ಬಂದು ನೋಡುವವರಿಗೆ ಸಂತೋಷವನ್ನು ಉಂಟು ಮಾಡುತ್ತದೆ. ಯಾವ ರೀತಿ ಪತಿವ್ರತೆಯಾದ ಲಕ್ಷ್ಮಿಯು ನಾರಾಯಣನ ಯೋಗನಿದ್ರೆಗೆ ಮುಂಚೆಯೇ ಏಳುವಳೋ ಅದೇ ರೀತಿ ಶರತ್ಕಾಲದಲ್ಲಿ ಸೂರ್ಯನಿಗಿಂತ ಮುಂಚೆ ತಾವರೆಯು ಅರಳುತ್ತದೆ.

ಉತ್ಸಾರಯನ್ ಜೀರ್ಣಸಿಲಿಂಧ್ರ ಜಾಲಂ ಪ್ರಯೋಮದೈಃ ಪೇಚಕಿನಾಂ ಪ್ರಸಿಂಚನ್।
ಚಕಾರ ಸಪ್ತಚ್ಛದರೇಣು ಜಾಲೈಃ ಕಾಲೋಮಹೀಂ ಕಾಮವಿಹಾರಯೋಗ್ಯಾಂ॥೭೯॥

ಕಾಲವೆಂಬುದು ಹಳೆಯ ನಾಯಿಕೊಡೆಗಳಿಂದ ಆದರಿಸಲ್ಪಟ್ಟ ಆನೆಗಳ ಮದಜಲ ಸುರಿಯುವಿಕೆಯಿಂದ ಎಲ್ಲಾ ಕಡೆಯೂ ಕೆಸರು ಉಂಟಾಗಿ, ಯಥೇಚ್ಛ ಸಂಚಾರಕ್ಕೆ ಮನ್ಮಥ ವಿಹಾರಕ್ಕೆ ಯೋಗ್ಯವಾಗಿ ಮಾಡಿತು.

ಮಳೆಯಿಂದಲೇ ನೆಲವೆಲ್ಲಾ ಕೆಸರು ತುಂಬಿದ್ದರೂ, ಆನೆಗಳ ಮದಜಲ ಸುರಿಯುವಿಕೆಯೂ ಸೇರಿ ಇನ್ನೂ ಹದಗೆಟ್ಟಿದ್ದರೂ, ಅದು ಕಾಮಿಗಳಿಗೆ ವಿಹಾರ ಯೋಗ್ಯವಾಗಿರುತ್ತದೆಂದು ಈ ಶ್ಲೋಕದಲ್ಲಿ ಹೇಳಿದೆ.

ಕೃತೋದಯಾಃ ಕೃಷ್ಣವಲಾಹಕೇನ ಸ್ರೋತೋ ವಹಾಃ ಸ್ವೈರ ವಿಹಾರಭಾಜಃ।
ತ್ರಪಾಮಿವ ಸ್ಥಾನಗತಿ ಪ್ರತೀಕ್ಷ್ಯಾಃ ಸ್ವಾಭಾವಿಕೀಂ ಸ್ವಚ್ಛ ದಶಾಮವಾಪುಃ ॥೮೦॥

ಕಪ್ಪು ಮೋಡಗಳಿಂದ ಉಕ್ಕಿ ಹರಿವ ಪ್ರವಾಹಗಳಿಂದ ಬೇಕಾದ ಹಾಗೆ ಹರಿಯುವ ನದಿಗಳು, ಇವು ಯಾವಾಗ, ತನ್ನ ಸ್ಥಾನವನ್ನು ಹೊಂದುತ್ತವೋ ಎಂದು ಎದುರು ನೋಡುವ ಹಾಗೆ ಆಗಿ, ತಮ್ಮ ನಡೆಗೆ ತಾವೇ ಕಡಿವಾಣ ಹಾಕಿಕೊಳ್ಳುವ ಹಾಗೆ ಸುಂದರವಾದ ಮಾರ್ಗವನ್ನು ಕಂಡುಕೊಂಡವು. (ಕುಲಸ್ತ್ರೀಯಾದವಳು ತಾಮಸ ವೃತ್ತಿಯಿಂದ ಕೆಟ್ಟು ಮತ್ತೆ ಸದ್ಬುದ್ಧಿ ಪಡೆದು ಸನ್ಮಾರ್ಗದಲ್ಲಿ ನಡೆದ ಹಾಗೆ).

ಮಳೆಯ ಪ್ರವಾಹ ಕಡಿಮೆ ಆಗಿ, ನದಿಗಳು ತಮ್ಮ ಎಂದಿನ ಮಾರ್ಗವನ್ನು ಅನುಸರಿಸಿ, ಕುಲಸ್ತ್ರೀಯಂತೆ ಸನ್ಮಾರ್ಗದಲ್ಲಿ ನಡೆದವು.

ಸುಖಾವಗಾಹೈಃ ಸುದೃಶಾಮತುಷ್ಯತ್ ಸ್ವಾದೋತ್ತರೈಃ ಶೌರಿರಪೇತ ಪಂಕೈಃ।
ಪ್ರಸನ್ನ ಶೀತೈ ರನಗೈಃ ಪಯೋಭಿಃ ಸ್ವಭಕ್ತ ಚಿತ್ತೈರಿವ ಯಾಮುನೀಯೈಃ ॥೮೧॥

ಗೋಪಿಗಳು ಸುಖವಾಗಿ ಇಳಿದು ನೀರಾಟ ಆಡಿಕೊಂಡು, ಮಧುರವಾಗಿ ಸಲ್ಲಾಪ ಮಾಡುತ್ತಾ, ಪಾಪಗಳನ್ನೆಲ್ಲಾ ಹೋಗಲಾಡಿಸುವ ಯಮುನೆಯ ತೀರ್ಥಗಳಲ್ಲಿ ಭಕ್ತರುಗಳ ಮನಸ್ಸಿನಂತೆ ಶ್ರೀಕೃಷ್ಣನು ಕಂಡನು. ಆ ಭಕ್ತರ ಮನಸ್ಸು ಸ್ನೇಹ -ಸಂತೋಷದಿಂದ ಕೂಡಿ ಸುಖವಾಗಿ ಇತ್ತು. ಭೋಗ್ಯವಾಗಿಯೂ ಇತ್ತು.

ಗೋಪಿಗಳು ಕೆಟ್ಟ ಯೋಚನೆಗಳನ್ನು ಮಾಡದೆ, ಶುದ್ಧರಾಗಿದ್ದರು. ಇತರರ ಪಾಪಗಳನ್ನು ಹೋಗ ಲಾಡಿಸುವ ಹಾಗೆ ಚಿಂತಿಸುತ್ತಿದ್ದರು. ಶ್ರೀ ಯಾಮುನಾಚಾರ್ಯರ ಶ್ರೀಸೂಕ್ತಿಗಳಂತೆ ಎಲ್ಲರಿಗೂ ಸಂತೋಷವನ್ನು ಉಂಟು ಮಾಡುತ್ತಿತ್ತು.

ಈ ಶ್ಲೋಕದಲ್ಲಿ ವಿಷ್ಣುಭಕ್ತರ ಮನಸ್ಸನ್ನು ವರ್ಣಿಸಲಾಗಿದೆ. ಭಗವಂತನ ಭಕ್ತರು ಎಲ್ಲರೊಡನೆ ಸಂತೋಷದಿಂದ ಕಾಲ ಕಳೆಯುತ್ತಾ ಯಾವಾಗಲೂ ಕೃಷ್ಣ ಧ್ಯಾನದಲ್ಲಿಯೇ ನಿರತರಾಗಿ, ಯಾವ ದುರ್ಯೋಚನೆಗಳೂ ಇಲ್ಲದೆ ಪರಿಶುದ್ಧ ಮನಸ್ಸಿನಿಂದ ಇತರರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡುವುದರ ಬಗ್ಗೆಯೇ ಚಿಂತಿಸುತ್ತಾರೆ. ಅವರುಗಳ

ನಡವಳಿಕೆಯು ಶ್ರೀ ಯಾಮುನಾಚಾರ್ಯರ ಶ್ರೀಸೂಕ್ತಿಗಳು ಹೇಗೆ ಮಾನ್ಯವೋ ಅದೇ ರೀತಿ ಎಲ್ಲರನ್ನೂ ರಂಜಿಸುತ್ತಿತ್ತು.

ಅನುಲ್ಬಣೈರನ್ವಹ ಮೂರ್ಮಿಭೇದೈಃ ಸಂಪನ್ನರೇಖಾಃ ಸರಿತಾ ಮಧೋಽಽಧಃ।
ಶ್ರಿಯೋ ದಧುಃ ಪದ್ಮವನಾವತಾರೆ ಸೋಪಾನ ತಾಂ ಸೈಕತ ಸನ್ನಿವೇಶಾಃ ॥೮೨॥

ಬೆಳಗಾದ ಮೇಲೆ ತಣ್ಣೀರು ನದಿಯಲ್ಲಿ ಹರಿದು ಬಂತು. ನೀರು ಮೇಲು ಮೇಲಕ್ಕೆ ಏರುತ್ತಾ, ತಾನಾಗಿಯೇ ಮೆಟ್ಟಿಲುಗಳು ರೂಪುಗೊಂಡವು. ತಾವರೆ ಹಿಡಿದಿರುವ ಲಕ್ಷ್ಮಿಯು ಮೇಲೇಳಲು ಸಹಾಯವಾಗುವಂತೆ ಮೆಟ್ಟಿಲುಗಳು ಮಾರ್ಪಟ್ಟವು.

ಯಮುನಾ ನದಿಯಲ್ಲಿ ಮೆಲ್ಲಮೆಲ್ಲನೆ ನೀರು ಮೇಲೇರುತ್ತಾ ಸ್ನಾನ ಘಟ್ಟಗಳಲ್ಲಿ ಮೆಟ್ಟಿಲುಗಳು ತಾವಾಗಿಯೇ ರೂಪುಗೊಂಡು ಸ್ನಾನ ಮಾಡಲು ಅನುಕೂಲವಾಗುವಂತೆ ಗೋಪ ಗೋಪಿಯರಿಗೆ ಸಂತೋಷವುಂಟುಮಾಡಿತು. ಸಮುದ್ರರಾಜನ ತನಯೆಯಾದ ಲಕ್ಷ್ಮಿಯು ತಾವರೆಯನ್ನು ಕೈಯ್ಯಲ್ಲಿ ಹಿಡಿದು ಯಮುನೆಯ ದಡದಲ್ಲಿ ಮೇಲೇರಲು ಬರಲು ಸಹಾಯವಾಗುವಂತಿತ್ತು ಆ ಸೋಪಾನಗಳು.

ಪ್ರಸಾದಭಾಜಾ ಸಮಯೇನ ದತ್ತಾ ಸ್ತ್ರೈಲೋಕ್ಯ ಲಕ್ಷ್ಮ್ಯಾ ಸ್ತರಲಸ್ವಭಾವಾಃ।
ಪಯೋಧರ ಸ್ಥಾನಗತಾ ವಿರೇಜುರ್ಹಾರಾಃ ಪ್ರಭೂತಾ ಇವ ಹಂಸಮಾಲಾಃ ॥೮೩॥

ಮೇಘ ಮಂಡಲದಲ್ಲಿ ಹಾರಾಡುವ ಅನ್ಯ ಪಕ್ಷಿಗಳು ವರಸೆ ವರಸೆಯಾಗಿ ಹಾರುತ್ತಿದ್ದವು. ಶರತ್ಕಾಲದಲ್ಲಿ ಏರ್ಪಟ್ಟ ಸೌಂದರ್ಯವನ್ನು ಕಂಡು ಕಾಲವೆಂಬ ಮಹಾನುಭಾವನು ಮೂಜಗವೆಂಬ ದೇವಿಗೆ ಪಯೋಧರಗಳಲ್ಲಿ ತೂಗಾಡುವ ವಜ್ರದ ಹಾರದಂತೆ ತೋರಿತು. ಈ ಶರತ್ಕಾಲವು ಮಳೆಗಾಲದಂತಲ್ಲ. ಅದು ಸ್ತ್ರೀಯರಿಗೆ ಪಯೋಧರದಲ್ಲಿ ಹಾರದಂತಿರಬೇಕು.

ಶರತ್ಕಾಲದ ಸೌಂದರ್ಯವೇ ಒಂದು ವಿಶಿಷ್ಟ ಅನುಭವವನ್ನು ನೀಡುತ್ತದೆ. ಈ ಕಾಲವು ಭೂದೇವಿಯ ಪಯೋಧರಗಳಲ್ಲಿ (ಸ್ತನಗಳಲ್ಲಿ) ತೂಗಾಡುವ ವಜ್ರದ ಹಾರದಂತೆ ಶೋಭಿಸುತ್ತದೆ. ಸ್ತ್ರೀಯರಿಗೆ ಎದೆಯ ಮೇಲೆ ಚಿನ್ನದ ಹಾರ ತೂಗುತ್ತಿದ್ದರೆ, ಅದು ಅವರ ಸೌಂದರ್ಯವನ್ನು ವರ್ಧಿಸುತ್ತದೆ. (ಸ್ವರೂಪೋತ್ ಪ್ರೇಕ್ಷಾಲಂಕಾರ).

ಜಲಾತ ಪತ್ಯಾಗಸ ಮಾಗಮಾಭ್ಯಾಂ ಪ್ರಾಚೀಮ ವಕ್ರಾಂ ಪ್ರಕೃತಿಂ ಭಜಂತ್ಯಃ।
ತದನ್ವಯ ತ್ಯಾಗವಶಾದ ವಾಪ್ತೈಃ ಪಂಕೈರಮುಚ್ಯಂತ ಶನೈಃ ಪದವ್ಯಃ ॥೮೪॥

ನೀರೆಲ್ಲಾ ಹರಿದು ಬಿಸಿಲು ಕಾದಿದ್ದರಿಂದ, ಹಿಂದಿನ ಮಾರ್ಗವನ್ನೇ ಅನುಸರಿಸಿ, ನೇರವಾದ ಹಾದಿಯಲ್ಲಿಯೇ ಎಲ್ಲರೂ ಸಾಗುವಂತಾಯಿತು. ಮಳೆಯ ಕೊಚ್ಚೆಯ ನೀರೆಲ್ಲಾ ಹರಿದು ದಾರಿಗಳು ಸ್ವಚ್ಛವಾಗಿದ್ದರಿಂದ ಎಲ್ಲರೂ ಸರಾಗವಾಗಿ ನೇರವಾದ ದಾರಿಯಲ್ಲೇ ನಡೆದು ತಮ್ಮ ತಮ್ಮ ಗಮ್ಯಸ್ಥಾನ ಸೇರುವಂತಾಯಿತು.

ಸ್ಥಾನೆ ವಿನಿದ್ರಾಃ ಸ್ಥಲಪದ್ಮಕೋಶಾಃ ಪ್ರಾಯೋಗತಿಂ ಪಾಂಥ ಜನಸ್ಯರೋದ್ಧುಂ।
ಅರುಂತುದಾನ್ ಆಮುಮುಚುಃ ಪರಾಗಾನ್ ಆಶ್ಯಾನಪಂಕೇಷು ಮಹಾಪಥೇಷು ॥೮೫॥

ನೀಲ ಕಮಲ ಪುಷ್ಪಗಳು ಅಲ್ಲಲ್ಲೇ ಅರಳಿ, ದೊಡ್ಡ ದೊಡ್ಡ ದಾರಿಗಳಲ್ಲಿ ಕುಸುಮಗಳನ್ನುಸುರಿದವು. ಹೆಂಡತಿಯರನ್ನು ಬಿಟ್ಟು ಏಕಾಂಗಿಗಳಾಗಿ ಭೋಗಿಸುವವರ ಮರ್ಮಸ್ಥಾನಗಳನ್ನು ಭೇದಿಸುವ ಅವರುಗಳ ಸಂಚಾರವನ್ನು ನಿಲ್ಲಿಸುವ ಹಾಗೆ ಇತ್ತು.

ದೊಡ್ಡ ದೊಡ್ಡ ಕಮಲ ಪುಷ್ಪಗಳು ಚೆನ್ನಾಗಿ ಅರಳಿ ಅವುಗಳ ಕುಸುಮಗಳು ದಾರಿಗಳಲ್ಲಿ ಸುರಿದಿದ್ದರಿಂದ, ತಮ್ಮ ಸ್ತ್ರೀಯರನ್ನು ಬಿಟ್ಟು ಪರ ಸ್ತ್ರೀಯರನ್ನು ಭೋಗಿಸುವ ವ್ಯಭಿಚಾರಿಗಳ ವ್ಯಾಪಾರವನ್ನು ನಿಲ್ಲಿಸುವಂತಿತ್ತು. (ಅನೈತಿಕ ಮಾರ್ಗವನ್ನು ಯಾರೂ ಅನುಸರಿಸುತ್ತಿರಲಿಲ್ಲ.)

ಪತತ್ರ ಲೀಲಾ ಹತ ಪುಷ್ಕರಾಂತೈಃ ಪದ್ಮಾಲಯಾ ನೂಪುರ ಸೌಮ್ಯನಾದೈಃ।
ಶುಭ್ರೈರಭಾವಿ ಸ್ವಪತ ಸ್ತ್ರಿಧಾಮ್ನಃ ಪ್ರತ್ಯೂಷ ತೂರ್ಯೈರಿವ ರಾಜಹಂಸೈಃ ॥೮೬॥

ಸುಂದರವಾದ ಹಂಸಗಳು ತಮ್ಮ ರೆಕ್ಕೆಗಳಿಂದ ತಾವರೆ ಹೂವುಗಳ ದಳಗಳನ್ನು ಹೊಡೆದುಕೊಂಡು ಮಹಾಲಕ್ಷ್ಮಿಯ ಪಾದಾರವಿಂದಳಲ್ಲಿ ಸಮರ್ಪಿಸಿದವು. ಆ ಹಂಸಗಳು ಶಬ್ದವು ಸ್ವಾಮಿಗೆ ಸುಪ್ರಭಾತ ಸಮಯದಲ್ಲಿ ಬಾರಿಸುವ ಶುಭವಾದ ವಾದ್ಯಗಳಂತೆ ಇದ್ದವು.

ಸರೋವರಗಳಲ್ಲಿ ವಿಹರಿಸುವ ಹಂಸ ಪಕ್ಷಿಗಳು ತಾವರೆ ಹೂವುಗಳ ದಳಗಳನ್ನು ತಮ್ಮ ರೆಕ್ಕೆಗಳ ಬಡಿತದಿಂದ ಹೊಡೆದು ಅವನ್ನು ಮಹಾಲಕ್ಷ್ಮಿಯ ಪಾದಕ್ಕೆ ಪೂಜೆ ಸಲ್ಲಿಸುವಂತಿತ್ತು. ಅವುಗಳ ಕಂಠದ ಶಬ್ದವು ಶ್ರೀಕೃಷ್ಣನಿಗೆ ಸುಪ್ರಭಾತವನ್ನು ಬಾರಿಸುವ ವಾದ್ಯಗಳ ಶಬ್ದದಂತಿತ್ತು.

ಕಲ್ಹಾರನಿಷ್ಪಾದಿತ ಕರ್ಣಪೂರಾ ವಿತೀರ್ಣ ಬಂಧೂಕ ವಿಶೇಷಕಶ್ರೀಃ।
ಆಮುಕ್ತ ಪದ್ಮೋತ್ಪಲ ರೇಣುರಾಸೀತ್ ಸೈರಂಧ್ರಿಕಾ ಕಾಪಿ ಶರತ್ ತ್ರಿಧಾಮ್ನಃ॥೮೭॥

ಶರದೃತುವಾದುದು, ಅವತರಿಸಿದ ಸ್ವಾಮಿಗೆ ಅಲಂಕಾರ ಮಾಡುವ ಒಂದು ಪೆಣ್ಮಣಿಯಂತಿತ್ತು. ಅರಳಿದ ಸುಂದರವಾದ ತಾವರೆ ಹೂಗಳು ಚಾಮರ ಬೀಸುವಂತೆ, ಕಾಡಿಗೆ ಇಡುವಂತೆ ಇತ್ಯಾದಿ ಕೈಂಕರ್ಯಗಳನ್ನು ಮಾಡುವಂತಿತ್ತು.

ಶರದೃತುವು ಗೋಕುಲದಲ್ಲಿ ಅವತರಿಸಿದ ಸ್ವಾಮಿಗೆ ಸರ್ವ ವಿಧ ಕೈಂಕರ್ಯವನ್ನು ಮಾಡುವಂತೆ ತೋರುತ್ತಿತ್ತು. ಸೌಗಂಧಿಕಾ ಪುಷ್ಪಗಳು ತಾವರೆ ಹೂಗಳು ಮತ್ತಿತರ ಅನೇಕ ಪುಷ್ಪಗಳು ಭಗವಂತನಿಗೆ ವಿವಿಧ ಸೇವೆಗಳಾದ, ಚಾಮರ ಬೀಸುವಿಕೆ, ಕಾಡಿಗೆ ಇಡುವುದು, ಮುಂತಾದವುಗಳನ್ನು ಸೈರಿಂಧ್ರಿಯು ಕೃಷ್ಣನಿಗೆ ಮಾಡುವಂತಿತ್ತು.

ಸರೋಜಕೋಶನ್ಮಿಷತಃ ಪ್ರಭುಗ್ನಾನ್ ಶಾಲೀನ್ ನಿಪಾಕಾ ನತ ಪಿಜ್ಜರಾಗ್ರಾನ್।
ಶುಕಾಂಶ್ಚ ತೇಶ್ವಾಪತ ತೋೞನುಮೇನೇ ಶೌರಿಃ ಸಯೂಥಾನಿವ ಶೋಣತುಂಡಾನ್॥೮೮॥

ನೀರಿನಲ್ಲಿ ಉದ್ದವಾದ ನಾಳವುಳ್ಳ ತಾವರೆಯು ದಂಡುಗಳು ಬೆಳೆದಿದ್ದವು. ತುಂಬಾ ಪೈರುಗಳು ಸಹ ಉದ್ದವಾಗಿ ಬೆಳೆದು ಭೂಮಿಯ ಕಡೆಗೆ ಬಾಗಿದ್ದವು. ಅಲ್ಲಿ ಗಿಳಿಗಳು

ಸುಂದರವಾದ ಕೊಕ್ಕುಗಳೊಡನೆ ಬಂದು ಬಿದ್ದಿದ್ದವು. ಅಲ್ಲಿನ ಮೂರು ವಿಧ ವಸ್ತುಗಳನ್ನು ಶ್ರೀಕೃಷ್ಣನು ಒಂದೇ ವಿಧವಾಗಿ ಭಾವಿಸಿದನು. ಯಾಕೆಂದರೆ ಅಲ್ಲವೂ ಅವನ ಕಡೆ ಬಾಗಿದ್ದವು. (ನಮಸ್ಕಾರ ರೂಪವಾಗಿ).

ಬೃಂದಾವನದಲ್ಲಿ ಎಲ್ಲಾ ಚರಾಚರ ವಸ್ತುಗಳು ಶ್ರೀಕೃಷ್ಣನ ಕೈಂಕರ್ಯದಲ್ಲಿ ನಿರತ ವಾದಂತೆಯೇ ಇದ್ದವು. ಎಲ್ಲವೂ ತಲೆ ಬಾಗಿ ಶ್ರೀಕೃಷ್ಣನಿಗೆ ನಮಸ್ಕರಿಸುವಂತೆ ಕಾಣುತ್ತಿದ್ದವು.

ಸ್ವವೇಗ ಸಂಭನ್ನ ಗಭೀರ ಭಾವಂ ಸ್ರೋತಸ್ವಿನೀ ನಾಮ ಪಹಾಯ ತೋಯಮ್।
ಕಾಲುಷ್ಯಮಾಯೋಧನ ಕಾಲಯೋಗಾತ್ ವೀರಾಂಗನಾನಾಂ ಹೃದಯಂ ವಿವೇಶ ॥೮೯॥

ನದಿಗಳಲ್ಲಿ ಕಲಕಿದ ಪ್ರವಾಹ ಉಂಟಾದಾಗ, ಆಳವು ತಿಳಿಯದೆ ಹೋಯಿತು. ಆ ರೀತಿಯ ಕಲಕುವಿಕೆ ನೀಗಿ, ಎಲ್ಲ ಕಡೆಯೂ ತಿಳಿ ಉಂಟಾದಾಗ, ಶೂರರ ಹೆಂಡತಿಯರು ಮನಸ್ಸಿನಲ್ಲಿ ಹೊಕ್ಕ ಅನೇಕ ಕೆಟ್ಟ ಯೋಚನೆಗಳು ನೀಗಿ ಅವರಿಗೆ ಶುಭ ಉಂಟಾಗುವ ಹಾಗೆ ಆಯಿತು.

ಕಲಕಿದ ನೀರಿನಲ್ಲಿ ಏನೂ ತಿಳಿಯುವುದಿಲ್ಲ. ಕೇವಲ ನೀರು ತಿಳಿಯಾದಾಗ ಮಾತ್ರವೇ ನೀರಿನಲ್ಲಿರುವುದು ತಿಳಿಯುತ್ತದೆ. ಅದೇ ರೀತಿ ಮನಸ್ಸು ಪರಿಶುದ್ಧವಾದಾಗ ಮಾತ್ರ ಅದರಲ್ಲಿ ಪರಮಾತ್ಮನು ಪ್ರಕಾಶಿಸುತ್ತಾನೆ. ಶೂರಪತ್ನಿಯರ ಮನಸ್ಸು ತಮ್ಮ ಪತಿಗಳು ಯುದ್ಧಕ್ಕೆ ಹೊರಟಾಗ ಅನೇಕ ಕೆಟ್ಟ ಯೋಚನೆಗಳಿಂದ ಕೂಡಿರುತ್ತದೆ. ಆದರೆ ಅವರು ವಿಜಯಿಗಳಾಗಿ ಹಿಂತಿರುಗಿದಾಗ ಅವೆಲ್ಲವೂ ನೀಗಿ, ಮನಸ್ಸು ಶುಭ್ರವಾಗುತ್ತದೆ.

ನವ ಪ್ರರೂಢೈರ್ನಿಲಿನೀಪ ಲಾಶೈಃ ಶಾರಾಣವೇಶಂತ ಜಲಾನ್ಯವಾಪುಃ।
ಸ್ಫುರತ್ಕಲಂಕಸ್ಯ ತುಷಾರಧಾಮ್ನ ಶ್ಚಾಯಾಭಿರನ್ಯಾಭಿ ರಿವಾ ವಿಶೇಷಂ ॥೯೦॥

ಹೊಸದಾಗಿ ಚಿಗುರೊಡೆದ ತಾವರೆಯ ಎಲೆಗಳು ಸೇರಿದ ಕಾಲದಲ್ಲಿ ಕಳಂಕ ಚೆನ್ನಾಗಿ ಕಳೆದ ಚಂದ್ರನ ಕಿರಣಗಳು ಪ್ರತಿಫಲಿಸಿದಂತಿತ್ತು.

ಹುಣ್ಣಿಮೆಯ ಚಂದ್ರನು ಕಳಂಕವನ್ನು ನೀಗಿಕೊಂಡು ಚೆನ್ನಾಗಿ ಪ್ರಕಾಶಿಸುತ್ತಾನೆ. ಆಗ ಆ ಚಂದ್ರನ ಕಿರಣಗಳು ನೀರಿನಲ್ಲಿ ಚೆನ್ನಾಗಿ ಪ್ರತಿಫಲಿಸುತ್ತವೆ. ತಾವರೆಯ ಎಲೆಗಳು ಚಿಗುರೊಡೆದಾಗ ಅದೇ ರೀತಿ ಪ್ರತಿಫಲಿಸುತ್ತವೆ. (ಉತ್ಪ್ರೇಕ್ಷಾಲಂಕಾರ).

ವರ್ಷೀಯ ಸೀನಾಮಪಿ ಪದ್ಮಿನೀನಾಂ ಸೌಮ್ಯೇನ ವರ್ಷಾಂತ ರಸಾಯನೇನ।
ಸಾಮೋದ ಮಂದಸ್ಮಿತಹಾರ್ಯ ಭೃಂಗಂ ಯುಕ್ತಂ ಶ್ರಿಯಾ ಯೌವನಮಾವಿರಾಸೀತ್॥೯೧॥

ರಸಾಯನವೆಂಬ ಔಷಧವು ಕಂದಕವೇ ಮೊದಲಾದ ಉಗ್ರವಾದ ವಸ್ತುಗಳಿಂದ ಮಾಡಲ್ಪಟ್ಟು ಮುಪ್ಪು, ರೋಗ ಎಂಬುವುಗಳನ್ನೆಲ್ಲಾ ಹೋಗಿಸುತ್ತದೆ. ವರ್ಷಾ ಕಾಲದಲ್ಲಿ ಬೆಳೆಯುವ ತಾವರೆಯ ದಂಟುಗಳಿಗೆ ವರ್ಷಾ ಕಾಲದ ಕೊನೆಯಲ್ಲಿ ಬರುವ ಶರತ್ಕಾಲ

ವೆಂಬ ಉಗ್ರವಾಗದ ಸಿಹಿಯಾದ ರಸಾಯನದಿಂದ ಹೊಸ ಯೌವನ ಪ್ರಾಪ್ತವಾಗುತ್ತದೆ. ಆ ಯೌವನವು ಮನಸ್ಸನ್ನು ಸಂತೋಷಪಡಿಸುವುದರಿಂದ ದುಂಬಿಗಳು ಆನಂದದಿಂದ ಇರುತ್ತವೆ.

''ರಸಾಯನಂ ಜರಾವ್ಯಾಧಿ ಹರೌಷಧೇ'' ಎಂಬಂತೆ ರಸಾಯನವೆಂಬ ದಿವ್ಯೌಷಧವು ಎಲ್ಲಾ ವ್ಯಾಧಿಗಳನ್ನೂ ಗುಣಪಡಿಸುತ್ತದೆ. ನವಯೌವನ ಕೊಡುತ್ತದೆ.

ಶರದ್ವಿಭೂತಿಂ ಕುಮುದಾವ ದಾತಾಂ ಸಂವೀತ ನೀಲಾಂಬರ ದರ್ಶನೀಯಾಮ್।
ಆಮಂಸ್ತ ನಿರ್ಧೂತ ಘನ ಪ್ರಲಂಬಾಂ ಮೂರ್ತಿಂ ಬಲಸ್ಯೇವ ಶುಭಾಂ ಮುಕುಂದಃ॥೯೨॥

ಅಂಬರ ಹೂವುಗಳು ಬಿಳುಪು. ಪಕ್ಷಿಗಳು ಕಪ್ಪಾಗಿರುವ ಆಕಾಶದಲ್ಲಿ ಕೊಳೆಯು, ಮೇಘಗಳ ಸಂಚಾರದಿಂದ ಶರತ್ಕಾಲವು ಶ್ರೀಕೃಷ್ಣನಿಗೆ ಬಲರಾಮನ ಸುಂದರವಾದ ದೇಹದಂತೆ ತೋರಿತು. ಅದೂ ಸಹ ಅಂಬಲದಂತೆ ಬಿಳುಪಾಗಿತ್ತು. ಶುಭ್ರವಾದ ವಸ್ತ್ರ ತೊಟ್ಟಿರುವುದರಿಂದ ನೀಲ ವರ್ಣದಂತೆ ತೋರುತ್ತಿತ್ತು.

ಪ್ರಲಂಬಾಸುರನನ್ನು ಕೊಂದ ಬಲದೇವನ ಸುಂದರವಾದ ದೇಹವು ಬಿಳುಪಾಗಿದ್ದು ಅಂಬರ ಹೂವುಗಳ ವರ್ಣವನ್ನು ಹೊಂದಿತ್ತು. ಶ್ರೀಕೃಷ್ಣನ ಮೈಯ್ಯು ಕಪ್ಪಾಗಿದ್ದು ಕಾರ್ಮೋಡ ದಂತೆ ಹೊಳೆಯುತ್ತಿತ್ತು. ಒಟ್ಟಿನಲ್ಲಿ ಶರತ್ಕಾಲದಲ್ಲಿ ಇಬ್ಬರೂ ರಾಜಕುಮಾರರು ಅಪೂರ್ವ ಸೌಂದರ್ಯದಿಂದ ಶೋಭಿಸುತ್ತಿದ್ದರು.

ನಿದ್ರಾಯಿತೇವ ಪ್ರಥಮಂ ಪಯೋದೈಃ ಪ್ರಶಾಂತ ನಿದ್ರೇವ ಶರತ್ಪ್ರಸಾದಾತ್।
ಜಗತ್ರಯೀ ತದ್ಧೃತಿನೀವ ಭೇಜೇ ಜಾತೋದ್ಯಮಂ ಜಾಗರಣೇ ಮುಕುಂದಂ ॥೯೩॥

ಮೂರು ಲೋಕವೆಂಬುದು ಹಿಂದೆ ಮೇಘಗಳು ದಟ್ಟವಾಗಿರುವ ಕಾಲದಲ್ಲಿ ಕತ್ತಲೆ ಆವರಿಸಿಕೊಂಡರೂ ಶರತ್ಕಾಲವು ಬಂದೊಡನೆ ಕತ್ತಲೆಯು ನೀಗಿ ಬೆಳಕು ಬಂದಂತೆ ತೋರಿತು. ಪತಿವ್ರತೆಯಾದದ್ದರಿಂದ ಭರ್ತಾವಾದ ಭಗವಾನನು ವರ್ಷಾ ಕಾಲದಲ್ಲಿ ವರ್ಷಿಸುವುದರಿಂದ ತಾನೂ ಇಳಿದು, ಭಗವಂತನ ಜೊತೆ ಅವನ ಹೆಂಡತಿಯಂತೆ ಬೆಳಗಿತು.

ಶರತ್ಕಾಲದಲ್ಲಿ ಚೆನ್ನಾಗಿ ಬೆಳಕು ಬರುತ್ತದೆ. ವರ್ಷಾಕಾಲದ ಕತ್ತಲೆಯು ನೀಗಿ ಆಕಾಶವು ತಿಳಿಯಾಗಿ ಪತಿವ್ರತೆಯಾದ ಸ್ತ್ರೀಯು ಭರ್ತಾನನ್ನು ಅನುಸರಿಸುವಂತೆ ಶರತ್ಕಾಲವು ಮಳೆಗಾಲವನ್ನು ಅನುಸರಿಸಿತು. ನಿದ್ರೆಯು ತಿಳಿದು ಎಚ್ಚರವಾದಂತೆ ಶರತ್ಕಾಲವು ಬೆಳಗಿತು. (ಉತ್ಪ್ರೇಕ್ಷಾಲಂಕಾರ).

ನಿದ್ರಾಪ್ರದೇಶೇನ ಜಗದ್ವಿಭೂತಿಂ ವಿಭಾವಯನ್ ನಿತ್ಯವಿಧೂತ ನಿದ್ರಃ।
ಪ್ರಬುಧ್ಯಮಾನಃ ಸ ವಿಭುಃ ಪ್ರಜಾನಾಂ ಪ್ರಾದಾತ್ ಸ್ವಧರ್ಮಾನುಗುಣಂ ಪ್ರಬೋಧಂ ॥೯೪॥

ಭಗವಂತನು ಯಾವಾಗಲೂ ಮಲಗದೇ ಇರುವವನಾದ್ದರಿಂದ, ಮಲಗುವುದು ಎಂಬ ವ್ಯಾಜದಿಂದ ಜಗತ್ತಿಗೆ ಒಂದು ವಿಧವಾದ ಒಳ್ಳೆಯದನ್ನೇ ಆಲೋಚಿಸುತ್ತಿರುತ್ತಾನೆ. ನಂತರ ಎದ್ದ ಮೇಲೂ ಪ್ರಜೆಗಳು ತಮ್ಮ ಧರ್ಮವನ್ನು ನಡೆಸಲು ಬೇಕಾದ ಬುದ್ಧಿಯನ್ನು ನೀಡುವನು.

ಕಾರ್ಗಾಲದಂತಲ್ಲದೆ ಶರತ್ಕಾಲವು ಅನೇಕ ಧರ್ಮಗಳನ್ನು ಮಾಡಲು ಅನುಕೂಲವಾಗಿದೆ. ದಯಾಶತಕದಲ್ಲಿ ಆಚಾರ್ಯರು ಪ್ರಳಯವು ಒಳ್ಳೆಯದಕ್ಕಾಗಿಯೇ ಎಂದಿದ್ದಾರೆ. (ಅರ್ಥ ಸ್ಪಷ್ಟವಾಗಿದೆ).

ಅವ್ಯಾಸಂಗಂ ಜಲಧಿಶಯನಾ ದುಃತ್ಥಿತಸ್ಯಾಽಽತ್ಮಧಾಮ್ನಃ।
ಪ್ರತ್ಯುಃ ಪುಣ್ಯಂ ಪ್ರಥಮ ನಯನ ಸ್ಪಂದಿತಂ ಪ್ರಾಪ್ತುಕಾಮಾ।
ನಿತ್ಯಾಪೂರ್ವ ಶೃತಿ ಪರಿಮಳಂ ನ್ಯಸ್ತಲೀಲಾರವಿಂದಾ।
ಪಾದಾಂಭೋಜಂ ಸಹ ವಸುಧಯಾ ಧಾರಯಾಮಾಸ ಪದ್ಮಾ ॥೯೫॥

ಕ್ಷೀರ ಸಮುದ್ರದಲ್ಲಿ ಮಲಗಿ ಎದ್ದ ಮೇಲೆ ಪರಮ ಪುರುಷನ ಪ್ರಥಮ ಕಟಾಕ್ಷವನ್ನು ತಾವು ಹೊಂದಬೇಕೆಂದು ಎಲ್ಲರ ಅಪೇಕ್ಷೆ. ಆಕಟಾಕ್ಷವಾದುದು ಅದಕ್ಕೆ ಮುಂಚೆ ಬೇರೆ ಎಲ್ಲೆಲ್ಲೂ ಬೀಳುವ ಕಟಾಕ್ಷದಂತಲ್ಲ. ಅದು ಶುದ್ಧವಾದುದದೆಂದು ಮಹಾಲಕ್ಷ್ಮಿಯಾದವಳು ಭೂಮಿ ದೇವಿಯೊಡನೆ ಸೇರಿ, ಅವನ ಪಾದಾರವಿಂದಗಳನ್ನು ಹಿಡಿದಳು.

ಯೋಗ ನಿದ್ರೆಯಿಂದ ಎದ್ದಮೇಲೆ ಭಗವಂತನ ಮೊದಲ ಕಟಾಕ್ಷವನ್ನು ತಾವು ಪಡೆಯಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಎಲ್ಲರಿಗಂತ ಮೊದಲು ಶ್ರೀ ಮಹಾ ಲಕ್ಷ್ಮಿಯು ಯಾವಾಗಲೂ ಅವನ ಪದತಲದಲ್ಲಿಯೇ ಇರುವುದರಿಂದ, ಆ ಮೊದಲ ಕಟಾಕ್ಷವು ಅವಳಿಗೆ ಭೂದೇವಿಯೊಡನೆ ಲಭಿಸುತ್ತದೆ.

'ನಿತ್ಯಾಪೂರ್ವನಾದ' ಅವನ ದಿವ್ಯ ಕಟಾಕ್ಷವು ನಿತ್ಯಾನಪಾಯಿನಿಯಾದ ಅವಳಿಗೆ ಲಭಿಸುವುದರಲ್ಲಿ ಏನು ವಿಶೇಷ? ಶ್ರುತಿ ಪರಿಮಳವನ್ನು ಬೀರುವ ಅವನ ಚರಣಾರವಿಂದದ ಸೇವೆ ಅವಳ ಜನ್ಮಸಿದ್ಧ ಹಕ್ಕು.

ಅನುಚರಿತವಿಧಿಜ್ಞೈರಾದೃತಾಂ ಪೂರ್ವಪೂರ್ವೈರ್ಮಹದಿದ ಮನಪಾಯಂ
ಮಂಗಳಂ ಮನ್ಯಮಾನಾಃ।
ಪ್ರಚಿತ ವಿವಿಧ ಭೋಗ್ಯಾಂ ಪ್ರಾರಭಂತ ಪ್ರತೀತಾಂ ವಲಮಥನ
ಸ ಪರ್ಯಾಂ ವಲ್ಲವಾ ನಂದ ಮುಖ್ಯಾಃ ॥೯೬॥

ಸತ್ಪುರುಷರು ಮಾಡುವ ಕರ್ಮಗಳನ್ನು ಅರಿತು, ಹಿರಿಯರಿಂದ ಅನುಸರಿಸಲ್ಪಟ್ಟದೂ ಶೇಖರಿಸಲ್ಪಟ್ಟ ಹಲವು ಪದಾರ್ಥಗಳನ್ನು "ಇದು ಒಳ್ಳೆಯದು" ಎಂದು ಚಿಂತಿಸಿ, ನಂದನೇ ಮೊದಲಾದ ಗೋಪರುಗಳು ಪೂಜೆಗಳನ್ನು ಅನುಷ್ಠಿಸಲು ಆರಂಭಿಸಿದರು.

ನಂದಗೋಪರೇ ಮುಂತಾದ ಗೋಕುಲದ ಮುಖಂಡರೆಲ್ಲರೂ ಹಿರಿಯರು ಅನುಸರಿಸಿದ ಅನೇಕ ಸತ್ಕಾರ್ಯಗಳನ್ನು ತಾವು ಇನ್ನು ಮುಂದೆ ಮಾಡುವುದಾಗಿ ನಿಶ್ಚಯಿಸಿ, ಅವುಗಳನ್ನು ಕಾರ್ಯಗತಗೊಳಿಸಲು ನಿಶ್ಚಯಿಸಿದರು.

ವಾಹೇಷು ಗೋಷು ದ್ವಿರದೇಷು ಬಾಗ್ರ್ಯಾಂ ತಜ್ಜನ್ಯಯಾ ಜೀವಿಕಯೋಪ ಪನ್ನಾಃ।
ತದರ್ಹ ಸಂಭಾರವತೀಂ ಸಪರ್ಯಾಂ ಕ್ಷಿಪ್ತಾಪದಂ ಕ್ಷೇಮವಿದೋ ವಿತೇನುಃ॥೯೭॥

ಕುದುರೆ, ಹಸು, ಆನೆ ಎಂದು ತಮ್ಮ ಪ್ರಾಣಿಗಳನ್ನು ತೆಗೆದುಕೊಂಡು ಜೀವನವನ್ನು ನಡೆಸುವವರು ತಮ್ಮ ಜೀವನಕ್ಕೆ ತಕ್ಕುದಾದ ಸರಕುಗಳನ್ನು ಶೇಖರಿಸಿ ಆ ಪ್ರಾಣಿಗಳಿಗೆ ಬೇಕಾದ ಅಲಂಕಾರವನ್ನು ಮಾಡಿ, ಆಪತ್ತುಗಳು ಎಲ್ಲವನ್ನೂ ಹೋಗಲಾಡಿಸುವ ಬ್ರಾಹ್ಮಣರ ಪೂಜೆಯನ್ನು ವಿಸ್ತಾರಗೊಳಿಸಿದರು. ಅದರಿಂದ ಜೀವನವು ಸರಾಗವಾಗಿ ನಡೆಯುವಂತಾಯಿತು.

ಅಷ್ಟೇ ಅಲ್ಲದೆ, ತಮ್ಮ ಜೀವನಕ್ಕೆ ಹಾಗೂ ತಮ್ಮನ್ನು ಆಶ್ರಯಿಸಿರುವ ಪಶು ಪ್ರಾಣಿಗಳೆಲ್ಲಕ್ಕೂ ಜೀವನಕ್ಕೆ ತೊಂದರೆಯಾಗದಂತೆ ಅಗತ್ಯವಸ್ತುಗಳನ್ನು ಸಂಗ್ರಹಿಸಿ, ಸರಾಗವಾಗಿ, ಜೀವನಯಾತ್ರೆ ನಡೆಸಲು ಪ್ರಾರಂಭಿಸಿದರು ಗೋಪಾಲಕರು.

ಆಬಾಲ ಪ್ರೇಕ್ಷಣೀಯಂ ಪ್ರಣತಮನಿ ಮಿಷ್ಯೈರದ್ಭುತಾನಾಂ ಪ್ರಧಾನಂ।
ಧೂತ ತ್ರೈಲೋಕ್ಯದೋಷಂ ಧ್ವಜಮಮರಪತೇ ತೂರ್ಣ ಮುತ್ಥಾಪಯಂತಃ।
ಘೃಷ್ಟೀನಾಮರ್ಚನಾಭಿಃ ಸ್ತುತಿಗುಣ ನಿಕಯಾ ಗೀತನೃತ್ತೋಪಹಾರೈ।
ರುದ್ವೇಲಪ್ರೀತಿಲೋಲಾ ವಿದಧೂರವಿಕಲ್ಪೈರುತ್ಸವಂ ಗೋಪವೃದ್ಧಾಃ॥೯೮॥

ವಯಸ್ಸು ಆದವರೂ, ತಿಳಿದವರೂ ಆದ ಗೋಪರು, ಚಿಕ್ಕ ವಯಸ್ಸಿನವರು ಎಲ್ಲರಿಂದಲೂ ಆನಂದವಾಗಿ ನೋಡತಕ್ಕುದೂ, ದೇವತೆಗಳಿಂದ ಪುರಸ್ಕರಿಸಲ್ಪಟ್ಟುದೂ, ಅತ್ಯಾಶ್ಚರ್ಯಕರವಾದುದೂ, ಮೂರು ಜಗತ್ತಿನ ಕೊರತೆಗಳನ್ನು ನೀಗುವ ಇಂದ್ರ ಧ್ವಜವನ್ನು ನೆಟ್ಟು ವಿಧ ವಿಧ ನೈವೇದ್ಯಗಳಿಂದಲೂ, ಸಂಗೀತ, ವಾದ್ಯ ನೃತ್ಯಗಳಿಂದಲೂ ಹಸುಗಳನ್ನು ಕರುಗಳನ್ನು ಪೂಜಿಸುವ ಆ ಉತ್ಸವವನ್ನು ಸಂಭ್ರಮದಿಂದ ಆನಂದದಿಂದ ನಡೆಸಲು ಪ್ರಾರಂಭಿಸಿದರು.

'ಋತುವರ್ಣನ'ವೆಂಬ ಪಂಚಮ ಸರ್ಗವು ಮುಗಿದುದು.

ಷಷ್ಠಃ ಸರ್ಗಃ - ೬ (ಚಿತ್ರ ಸರ್ಗ)



ಈ ಸರ್ಗವು ಬಹಳ ಅದ್ಭುತವಾಗಿದೆ. ಸ್ವಾಮಿ ದೇಶಿಕರ ಕವಿತಾ ಪ್ರೌಢಿಮೆಯ ಪರಾಕಾಷ್ಠೆಯನ್ನು ಎತ್ತಿ ತೋರಿಸುವ ಸರ್ಗ ಇದಾಗಿದೆ. ಇದನ್ನು ಚಿತ್ರಸರ್ಗವೆಂದು ಕರೆದಿದ್ದಾರೆ. ಚಿತ್ರಕಾವ್ಯವೆಂಬುದು ಒಂದು ವಿಶೇಷ ಪ್ರಯೋಗ. ಶ್ಲೋಕಗಳ ಪದಗಳನ್ನು ಅನೇಕ ವಿಧದಲ್ಲಿ ಪ್ರಾಸಬದ್ಧವಾಗಿ ಜೋಡಿಸಿ, ಅರ್ಥ ಸ್ವಾರಸ್ಯವನ್ನು ಹೊರತರುವುದು ಇದರ ಮುಖ್ಯ ಅಂಶ. ಈ ಸರ್ಗದಲ್ಲಿ ಕವಿ ಶ್ರೇಷ್ಠರಾದ ಶ್ರೀ ದೇಶಿಕರು ಅನೇಕ ವೃತ್ತಗಳಲ್ಲಿ ಶ್ಲೋಕ ರಚಿಸಿ, ತಾವು ಮಹಾ ಕವಿ ಎಂದು ನಿರೂಪಿಸಿದ್ದಾರೆ. ಈ ಸರ್ಗದಲ್ಲಿ 112 ಶ್ಲೋಕ ಗಳಿವೆ. ನಂದಗೋಪರೇ ಮೊದಲಾದವರನ್ನು ಇಂದ್ರನ ಪೂಜೆ ಮಾಡುವುದನ್ನು ತಪ್ಪಿಸಿ, ಗೋವರ್ಧನ ಗಿರಿಯ ಪೂಜೆಯನ್ನೇ ಮಾಡುವಂತೆ ಶ್ರೀಕೃಷ್ಣನು ಪ್ರೇರೇಪಿಸುವುದೇ ಇಲ್ಲಿನ ಪ್ರಮುಖ ವಿಷಯ. ಗೋವರ್ಧನಗಿರಿಯ ಮಹಿಮೆಯನ್ನು ವಿಸ್ತಾರವಾಗಿ ಹೇಳಲಾಗಿದೆ. ವಿಷಯಾನುಕ್ರಮಣಿಕೆ ಹೀಗಿದೆ.

1 ರಿಂದ 5 ಋತುವರ್ಣನೆ

6 - 108 ಗೋವರ್ಧನ ಗಿರಿಯ ಮಹಿಮೆ

109-112 ನಂದಾದಿಗಳು ಗಿರಿಯನ್ನೇ ಪೂಜಿಸಲು ನಿರ್ಧರಿಸುವುದು.

ಈ ಸರ್ಗದಲ್ಲಿ ಕೆಳಗೆ ಹೆಸರಿಸಿರುವ ವೃತ್ತಗಳನ್ನು ಬಳಸಲಾಗಿದೆ.

ಧ್ರುತ ವಿಲಂಬಿತ ವೃತ್ತ ಪೂರ್ಣ ಯಮಕ ವೃತ್ತ ಖಂಡ ಯಮಕ ವೃತ್ತ ಯಮಕ ಚತುಷ್ಟಯ ಸೃಷ್ಟಿ ಶೃಂಗಾರ ಯಮಕ ಅಷ್ಟವಿಧ ಚಿತ್ರಾಲಂಕಾರ	ಗೋಮೂತ್ರಿಕಾ ಬಂಧ ಏಕಸ್ಥಾನ ಚಿತ್ರಂ ಅನ್ಯೋಷ್ಟ ಚಿತ್ರಂ ಗೂಢ ಚತುರ್ಥ ಚಿತ್ರಂ ಏಕಾಕ್ಷರ, ದ್ವ್ಯಕ್ಷರ, ತ್ರಯಾಕ್ಷರ ಶ್ಲೋಕಗಳು ಸರ್ವತೋ ಭದ್ರಂ, ಮುರಜಬಂಧ	ಚಕ್ರಬಂಧ ವೃತ್ತ ಅಷ್ಟದಳ ಪದ್ಮ ಬಂಧ ವೃತ್ತ ಮಹಾಯಮಕ ಇತ್ಯಾದಿ

ಈ ಸರ್ಗದ ವಿಸ್ತಾರ ವಿವರಣೆಯನ್ನು ಪ್ರತ್ಯೇಕವಾಗಿಯೇ ಮುಂದಿನ ಸಂಪುಟದಲ್ಲಿ ನೀಡಲಾಗುವುದು.

ಷಷ್ಠ: ಸರ್ಗ: - ೬ (ಚಿತ್ರ ಸರ್ಗ:)

ಶಮಯಿತಾ ಪುರುಹೃತ ಮಹೋತ್ಸವಂ ವ್ರಜಪತಿಃ ಸಹವಲ್ಲವಯೂಥಪೈಃ।
ನಿಭೃತ ಮಂಜುಗಿರಾ ನಿಜ ಸೂನುನಾ ನಿಜಗದೆ ಜಗದೇಕ ಕುಟುಂಬಿನಾ॥ ॥೧॥

ಗೋಪಾಲಕರೆಲ್ಲರೂ ತಮ್ಮ ಗುಂಪುಗಳಿಗೆ ನಿರ್ವಾಹಕರಾದ ಹಿರಿಯರೊಡನೆ ನಂದಗೋಪನು ತಮ್ಮ ಕುಮಾರನಾದ ಲೋಕವೆಂಬ ಕುಟುಂಬಕ್ಕೆ ಮುಖ್ಯನಾಗಿ, ಒಡೆಯನಾದ ಶ್ರೀಕೃಷ್ಣ ಸ್ವಾಮಿಯಿಂದ ದೇವೇಂದ್ರನನ್ನು ಕುರಿತು ಅವರುಗಳು ಮಾಡುವ ಮಹೋತ್ಸವವನ್ನು ನಿಲ್ಲಿಸಬೇಕೆಂಬ ಇಚ್ಛೆಯೊಡನೆ ಎಲ್ಲರೂ ಅವನ ಮಾತನ್ನು ಅನುಸರಿಸಲು ನಿರ್ಧರಿದರು. (ಏಕ ಭಾಗ ವೃತ್ತಿಯ ಮಕಚಿತ್ರ)

ಈ ಸರ್ಗಕ್ಕೆ 'ಚಿತ್ರಸರ್ಗ'ವೆಂದು ಹೆಸರು. ಪ್ರತಿಯೊಂದು ಶ್ಲೋಕವನ್ನು ವಿಧವಿಧವಾದ ವೃತ್ತಗಳಲ್ಲಿ ರಚಿಸಿ, ಪ್ರತಿಯೊಂದಕ್ಕೂ ಒಂದೊಂದು ಹೆಸರನ್ನಿಟ್ಟಿದ್ದಾರೆ. ಶ್ರೇಷ್ಠರಾದ ಕವಿಗಳು ತಮ್ಮ ಕಾವ್ಯದಲ್ಲಿ ಒಂದು ಅಧ್ಯಾಯವನ್ನು ಈ ಪದ್ಧತಿಯಲ್ಲಿ ಬರೆಯುವ ವಾಡಿಕೆಯುಂಟು. ಸ್ವಾಮಿ ದೇಶಿಕರು 'ಪಾದುಕಾ ಸಹಸ್ರ'ದಲ್ಲಿಯೂ ಸಹ ಈ ರೀತಿಯ ಪದ್ಧತಿಯಲ್ಲಿ ರಚಿಸಿದ್ದಾರೆ.

ಶ್ರೀಕೃಷ್ಣನು, ನಂದಗೋಪ ಮುಂತಾದ ಬೃಂದಾವನದ ಮುಖಂಡರು ಈ ಬಾರಿ ದೇವತೆಗಳನ್ನು ಪೂಜಿಸಿ, ಅವರಿಂದ ಪ್ರತಿಫಲಗಳನ್ನು ಪಡೆಯುವ ಬದಲು ಸಕಲ ಸೌಲಭ್ಯಗಳನ್ನು ಒದಗಿಸುವ 'ಗೋವರ್ಧನ ಗಿರಿ'ಗೆ ಪೂಜೆಯನ್ನು ಮಾಡುವಂತೆ ಪ್ರೇರೇಪಿಸಿ, ಈ ಸರ್ಗ ಪೂರ್ತಿ ಗೋವರ್ಧನ ಮಹಿಮೆಯನ್ನು ಅವರಿಗೆ ಮನದಟ್ಟಾಗುವಂತೆ ಹೇಳಿದ್ದಾನೆ. ಈ ಶ್ಲೋಕದ ವೃತ್ತಕ್ಕೆ 'ದ್ರುತ ವಿಲಂಬಿತ' ವೃತ್ತವೆಂದು ಹೆಸರು.

ವಿದಿತ ವಾನಿವ ವಿಜ್ಞಪಯಾಮ್ಯಹಂ ಶೃಣುತ ಮೇ ಶಕುನೇ ರಿವ ಭಾಷಿತಂ।
ಪೃಥುಕ್ ಬುದ್ಧಿರಹಂ ಪೃಥುಚೇತಸಃ ಪ್ರಭವತೋ ಭವತೋ ನಹಿ ಶಿಕ್ಷಯೇ ॥೨॥

ಚಿಕ್ಕವನಾದ ನಾನು ತುಂಬಾ ಜ್ಞಾನಿಯಂತೆ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ. ಗಿಳಿಯ ಮಾತಿನಂತೆ ನನ್ನ ಮಾತನ್ನು ಕೇಳಬೇಕು. ಅಲ್ಪನಾದ ನಾನು ದೊಡ್ಡ ಮನಸ್ಸುಳ್ಳ, ಪ್ರಭಾವಶಾಲಿಗಳಾದ ದೊಡ್ಡವರಾದ ತಮಗೆ ಹೊಸದಾಗಿ ಉಪದೇಶ ಮಾಡಲು ಅವಕಾಶವೆಲ್ಲಿದೆ?

ತಮ್ಮ ನೈಚ್ಯವನ್ನು ಸ್ವಾಮಿ ಪ್ರಕಟಗೊಳಿಸುತ್ತಾನೆ. ನಿಮ್ಮಂತಹ ಹಿರಿಯರಿಗೆ, ಜ್ಞಾನಿಗಳಿಗೆ ಉಪದೇಶ ಮಾಡುವ ಯೋಗ್ಯತೆ ನನಗಿಲ್ಲ, ಆದರೂ ಎಲ್ಲರ ಹಿತವನ್ನು ಗಮನದಲ್ಲಿ

ಇಟ್ಟುಕೊಂಡು ಈ ಮಾತುಗಳನ್ನು ಹೇಳುತ್ತಿದ್ದೇನೆ. ದಯಮಾಡಿ ಲಾಲಿಸಬೇಕು. (ಇಂದ್ರನ ಗರ್ವವನ್ನು ಇಳಿಸಲು ಈ ರೀತಿ ಸ್ವಾಮಿಯು ಯೋಜನೆ ಹಾಕಿದನು).

ನಿಗಮ ದೃಷ್ಟಮಿದಂ ನಿಖಿಲೇನ ವಃ ಕ್ವಚಿನ ವಿಶ್ವತನೌ ಪುರುಷೇ ಸ್ಥಿತೇ।
ಯ ಇಹ ಯಾಮುಪಜೀವತಿ ತತ್ತನುಂ ಸ ಹಿತಯಾ ಹಿತಯಾ ಭುವಿ ನಾಥವಾನ್ ॥೩॥

ಶ್ರೀಕೃಷ್ಣನು ಬೃಂದಾವನದಲ್ಲಿ ಇದ್ದ ಕಾಲದಲ್ಲಿ ಗೋಪ ಸ್ತ್ರೀಯರ ವಿಲಾಸಗಳಿಗೆ ತಾನೇ ವಶಪಟ್ಟು ಆಟವಾಡಿ ಅವನಿಂದಲೇ ಅನುಭವಿಸಲ್ಪಟ್ಟಿದ್ದರಿಂದ ಋತುಗಳೆಲ್ಲವೂ ತಮ್ಮೊಳಗೆ ಇರುವ ಸೌಕರ್ಯಗಳನ್ನೆಲ್ಲಾ ಚೆನ್ನಾಗಿ ಉಪಯೋಗಪಡಿಸಿಕೊಂಡು ಉತ್ತಮ ಭಾಗ್ಯ ಪಡೆದವು.

ಶ್ರೀಕೃಷ್ಣನು ಪ್ರತಿಯೊಂದು ಋತುವಿನಲ್ಲಿಯೂ (ಆರು ಋತುಗಳುಂಟು) ಆ ಗೋಪ ಸ್ತ್ರೀಯರ ಜೊತೆ ಚೆನ್ನಾಗಿ ವಿಹರಿಸಿ ಎಲ್ಲರನ್ನೂ ಸಂತೋಷಗೊಳಿಸಿದನು. ಆಗ ಆ ಋತುಗಳೆಲ್ಲವೂ ತಾವೇ ಮಹತ್ತಾದ ಭಾಗ್ಯವನ್ನು ಪಡೆದುವೆಂದು ಖುಷಿ ಪಟ್ಟವು. ಆಯಾಯ ಋತುಗಳಲ್ಲಿ ದೊರಕುವ ಫಲಪುಷ್ಪಗಳೆಲ್ಲಾ ಸಮೃದ್ಧವಾಗಿ ನೀಡಿ, ಅದರಿಂದ ಕೃಷ್ಣ ಬಲರಾಮರ ಕೈಂಕರ್ಯವನ್ನು ಚೆನ್ನಾಗಿ ಮಾಡಿದೆವೆಂದು ತಮಗೆ ತಾವೇ ಹೆಮ್ಮೆಪಟ್ಟುಕೊಂಡವು.

ಅತಿಯಜೇತ ನಿಜಾಂ ಯದಿ ದೇವತಾ ಮುಭಯತ ಶ್ಚ್ಯವತೇ ಜುಷತೇಽಪ್ಯಥಮ್।
ಕ್ಷಿತಿ ಭೃತೈವ ಸದೈವ ತಕಾವಯಂ ವನವತಾಽನವತಾ ಕಿಮಹಿ ದ್ರುಹಾ ॥೪॥

ಕಾಡಿನಲ್ಲಿರುವ ಮರಗಳು ಕೃಷ್ಣನ ಗೀತ ರಸನಗಳಿಂದ ಪ್ರಭಾವಿತವಾದಂತೆ, ಚೆನ್ನಾಗಿ ಬೆಳೆದು ಉದ್ದುದ್ದ ಕೊಂಬೆಗಳಿಂದ ಕೂಡಿ ಹಸುಗಳಿಗೆ ರಕ್ಷಣೆಯಾಗಿ ಮಳೆ ಬಿಸಿಲಿಗೆ ನೆರಳನ್ನು ಒದಗಿಸಿದವು.

ಆ ಸ್ವಾಮಿ ಶ್ರೀಕೃಷ್ಣನ ಕೊಳಲಿನ ಗಾನ ಮಾಧುರ್ಯಕ್ಕೆ ಮಾರು ಹೋಗಿ ಅದರಿಂದ ಪ್ರಭಾವಿತವಾದ ಬಿದಿರಿನ ಮರಗಳು ಪುಷ್ಟವಾಗಿ ಬೆಳೆದು, ಉದ್ದುದ್ದ ಕೊಂಬೆಗಳನ್ನೂ ಎಲೆಗಳನ್ನೂ ಹೊಂದಿ, ಹಸುಗಳಿಗೆ ಬಿಸಿಲು ಮಳೆ ಇವುಗಳಿಂದ ರಕ್ಷಣೆ ನೀಡಿದವು.

ಅನಧ ಶಾದ್ವಲ ಕಾನನ ಸಂಪದಾ ನದನದೀಹ್ರದ ನಿರ್ಝರಶಾಲಿನಾ।
ಬಹುಪಶುಃ ಪಶುಪಾಲಕ ಸಂತತಿ ರ್ಮಹಿಭೃತಾ ಹಿ ಭೃತಾ ನ ಮರುತ್ವತಾ ॥೫॥

ಜೋರಾಗಿ ಬೀಸುವ ಗಾಳಿಯು ಮರಗಳನ್ನು ಮುರಿಯುವುದು, ಸೂರ್ಯನು ಬಿಸಿಲನ್ನು ಪ್ರಸರಿಸುವುದು, ಕಾಡುಗಿಚ್ಚುಗಳು ಕಾಡುಗಳನ್ನು ಸುಡುವುದು ಮುಂತಾದ ಕಷ್ಟಗಳು ಕಾಣಲಿಲ್ಲ. ಆ ಸ್ವಾಮಿಯೇ ಎಲ್ಲವನ್ನೂ ರಕ್ಷಿಸುತ್ತಿದ್ದನು.

ಪ್ರಕೃತಿಯ ವಿಕೋಪವಾದಂತಹ ಬಿರುಗಾಳಿಯಾಗಲೀ, ಸುಡುವ ಬಿಸಿಲಾಗಲೀ ಅಥವಾ ಕಾಡುಗಿಚ್ಚಾಗಲೀ ಆ ಬೃಂದಾವನವನ್ನು ಕಾಡಲಿಲ್ಲ. ಕಾರಣ ಶ್ರೀಕೃಷ್ಣನು ಬೃಂದಾವನಕ್ಕೆ ರಕ್ಷಕನಾಗಿದ್ದನು.

ಅಚಲಮರ್ಚತ ಕಿಂ ವಿಬುಧೈಶ್ಚಲೈಃ ಶುಭವನಂ ಭವನಂ ಚ ದಿವೌಕಸಾಮ್।
ಕ್ಷಮ ಮನೇನ ವನೇ ಪರಿರಕ್ಷಿತೆ ನ ಹರಿಣಾ ಹರಿಣಾನಪಿ ಭಾದಿತುಮ್ ॥೬॥

ಸುಂದರವಾದ ಕಾಡುಗಳಿರುವ, ದೇವತೆಗಳು ವಾಸಿಸಲು ಯೋಗ್ಯವಾಗಿರುವ ಸ್ಥಿರವಾದ ಬೆಟ್ಟವನ್ನು ಪೂಜಿಸಿ, ಅಸ್ಥಿರಗಳಾದ ಈ ದೇವತೆಗಳ ಮೂಲಕ ಏನು ಸಾಧಿಸಬಲ್ಲಿರಿ ? ಈ ಬೆಟ್ಟದಿಂದ ಕಾಡುಗಳೆಲ್ಲವೂ ರಕ್ಷಿಸಲ್ಪಟ್ಟಾಗ, ಆ ಇಂದ್ರನು ಇದರಲ್ಲಿರುವ ಜಿಂಕೆಗಳನ್ನು ಸಹ ಹಿಡಿಯಲಾರನು. (ಯಮಕ ದ್ವಯ ಸಂಸೃಷ್ಟಿಃ).

ದೇವತೆಗಳೆಲ್ಲರೂ ಶಾಶ್ವತವಲ್ಲ. ಆಗಾಗ ಅವರ ಸ್ಥಾನಗಳು ಬದಲಾಗುತ್ತವೆ. ಆದರೆ ಬೆಟ್ಟವು ಸ್ಥಿರವಾಗಿದೆ. ದೇವತೆಗಳು ನೀಡುವ ಫಲಗಳು ಅಸ್ಥಿರವಾದವು. ಅದರಿಂದ ಸ್ಥಿರವಾದ ಫಲಗಳನ್ನು ನೀಡುವ ಬೆಟ್ಟವನ್ನು ಪೂಜಿಸೋಣ. (ಎರಡು ಮತ್ತು ನಾಲ್ಕನೇ ಪಾದದಲ್ಲಿ 'ವನಂ' ಮತ್ತು 'ಹರಿಣಾ' ಎರಡೆರಡು ಬಾರಿ ಬಂದಿದೆ).

ಗಿರಿಷು ವಿಷ್ಣುವಿಭೂತಿಷು ಯುಜ್ಯತೆ ನಿಖಿಲದೇವಮಯೀಷು ಚ ಗೋಷು ನಃ।
ತದುಭಯಾಶ್ರಿತ ವೃತ್ಯುಪಜೀವಿನಾಂ ಗುರುಚಿರಂ ರುಚಿರಂ ಚ ಸಮರ್ಚನಮ್ ॥೭॥

ವಿಷ್ಣುವಿನ ವಿಭೂತಿಯಾದ ಬೆಟ್ಟಗಳನ್ನು ಎಲ್ಲಾ ದೇವತೆಗಳು ತಂಗುವ ಜಾಗವಾದ ಪಶುಗಳನ್ನು ಪೂಜಿಸುವುದು, ಅವೆರಡರ ಮೂಲವಾದ ಜೀವನವನ್ನು ಸಾಗಿಸುವ ನಮಗೆ ಅತ್ಯಂತ ಶ್ರೇಯಸ್ಕರವಾದುದು.

ನಮಗೆ ಯಾವುದು ಶ್ರೇಯಸ್ಕರವೆಂದು ಯೋಚಿಸಿದಲ್ಲಿ ಬೆಟ್ಟದ ಪೂಜೆಯೇ ಪರಮ ಶ್ರೇಯಸ್ಕರ. ಬೆಟ್ಟವು, ನಮ್ಮನ್ನು ನಮಗೆ ಆಧಾರವಾಗಿರುವ ಪಶುಗಳನ್ನು ಕಾಪಾಡುತ್ತದೆ. ಆದ್ದರಿಂದ ಬೆಟ್ಟವನ್ನೇ ಪೂಜಿಸೋಣ.

ಅಭಿಮತಂ ಗಿರಯಃ ಕೃತಸತ್ಕ್ರಿಯಾ ದದತಿ ದರ್ಶಿತ ದೈವತ ಭೂಮಿಕಾಃ।
ಹರಿತರಕ್ಷು ಮುಖೈರಪಿ ವಿಗ್ರಹೈರಹಿತಮಾಹಿತಮಾನ ವಿಪರ್ಯಯಾಃ ॥೮॥

ಬೆಟ್ಟಗಳ ಪೂಜೆಯು ಸರಿಯಾಗಿ ನಡೆಸಲ್ಪಟ್ಟರೆ , ದೇವತೆಗಳ ಅನುಗ್ರಹವು ತೋರಿ, ಬೇಕಾದುದು ಪ್ರಾಪ್ತವಾಗುತ್ತದೆ. ಪೂಜೆಗೆ ಅಡ್ಡಿ ಮಾಡುವ ದುಷ್ಟ ಮೃಗಗಳನ್ನು ನಿಗ್ರಹಿಸ ಬಹುದು.

ಬೆಟ್ಟವನ್ನು ಪೂಜಿಸಿದರೆ, ದುಷ್ಟಮೃಗಗಳು ತಾವಾಗಿಯೇ ದೂರ ಹೋಗುವುವು. ಅನಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿಯಾಗುತ್ತದೆ. ಆದ್ದರಿಂದ ಬೆಟ್ಟವನ್ನು ಪೂಜಿಸೋಣ. ಬೆಟ್ಟದ ಮೂಲಕವೇ ಅನುಗ್ರಹವನ್ನು ಸಂಪಾದಿಸಬಹುದು.

ಬೆಟ್ಟದ ಪೂಜೆಯೇ ಶ್ರೇಯಸ್ಕರವೆಂದು ಶ್ರೀಕೃಷ್ಣನು ಪ್ರತಿಪಾದಿಸುತ್ತಿದ್ದಾನೆ.

ಪಶುಭಿರದ್ರಿಚರೈ ರೂಪಕಲ್ಪಿತೆ ವೃಜನಯೇ ಜನಯೇಮ ನವಿಪ್ಲವಮ್।
ಕ್ಷಿತಿಭೃದೇಶ ಸಮೀಹಿತ ಸಿದ್ಧಯೇ ಜನಮಿತಂ ನಮಿತಂ ಪಚತಾಂ ನಯೇತ್ ॥೯॥

ಬೆಟ್ಟದಲ್ಲಿ ಮೆಯ್ದು ಕಾಲು ನಡಿಗೆಯಿಂದ ಬರುವ ಗೋಕುಲದ ಹಸುಕರುಗಳೆಲ್ಲಕ್ಕೂ ದುಷ್ಟಮೃಗಗಳಿಂದ ರಕ್ಷಣೆಯನ್ನು ಒದಗಿಸಬೇಕು. ಈ ಬೆಟ್ಟವಾದುದು ಸಂಪತ್ತುಗಳನ್ನೆಲ್ಲಾ ನೀಡುತ್ತದೆಯಾದ್ದರಿಂದ ಅದರ ಪೂಜೆ ವಿಹಿತವಾದುದು.

ಬೆಟ್ಟದಲ್ಲಿ ಯಥೇಚ್ಛವಾಗಿ ಹುಲ್ಲು ಸಿಗುವುದರಿಂದ, ಹಸು ಕರುಗಳೆಲ್ಲವೂ ಮೇಯಲು ಬೆಟ್ಟಕ್ಕೆ ಬರುತ್ತವೆ. ಆಗ ಅವುಗಳಿಗೆ ದುಷ್ಟ ಪ್ರಾಣಿಗಳಿಂದ ರಕ್ಷಣೆ ಅಗತ್ಯ. ಅಲ್ಲದೆ ಈ ಬೆಟ್ಟವು ಸಕಲ ಸಂಪತ್ತುಗಳನ್ನು ನೀಡುವುದರಿಂದ ಅದರ ಪೂಜೆ ಅತ್ಯಗತ್ಯವಾಗಿದೆ. ದುಷ್ಟಪ್ರಾಣಿಗಳು ಅಲ್ಲಿ ಬರದೆ ಇರಲು ನಾವು ಅಲ್ಲಿ ವಾಸಿಸುವುದಗತ್ಯ.

ಅಪಿಚ ಸಾಧು ಗವಾಂ ಅಭಿವರ್ಧನಾದ ನೃತಹಾನಿಜಯಾ ನಿಜಯಾऽऽಖ್ಯಯಾ।
ಭಜತಿ ಗೋಪಗಣೈರಭಿರಾಧ್ಯತಾಂ ವನಮಯಂ ನಮಯನ್ ಫಲಸಂಪದಾ ॥೧೦॥

ಅಲ್ಲದೆ, ಗೋವುಗಳನ್ನು ಕಾಪಾಡುವುದರಿಂದ 'ಗೋವರ್ಧನ' ಎಂಬ ತನ್ನ ಹೆಸರನ್ನು ಹೊಂದಿರುವ ಈ ಬೆಟ್ಟವು ಫಲಗಳನ್ನು ನೀಡುವುದಲ್ಲದೆ, ಕಾಡನ್ನು ನಮ್ಮ ಅಧೀನ ಮಾಡುವುದರಿಂದ ಗೋಪಾಲಕರು, ಗುಂಪು ಗುಂಪಾಗಿ ಕೂಡಿ ಆರಾಧಿಸಿ, ಸೌಭಾಗ್ಯವನ್ನು ಪಡೆಯಬಹುದು.

ಗೋವುಗಳನ್ನು ಕಾಪಾಡಿ, ಅವುಗಳನ್ನು ವರ್ಧಿಸುತ್ತದಾದ್ದರಿಂದ ಈ ಪರ್ವತಕ್ಕೆ 'ಗೋವರ್ಧನ'ವೆಂಬ ಹೆಸರು ಬಂದಿದೆ. ಇದರ ಆರಾಧನೆ ಸಕಲ ಸೌಭಾಗ್ಯಗಳನ್ನೂ ನೀಡುತ್ತದೆ.

ನಿಜಯಾ ನಿಜಯಾ ಮೊದಲನೇ ಪಾದದಲ್ಲೂ, ನಮಯಂ ನಮಯಂ ಎರಡನೇ ಪಾದದಲ್ಲೂ ಎರಡು ಬಾರಿ ಬಂದಿದೆ.

ಹರತಿ ತಾಪಮಸಾವುಪ ಸೇದುಷಾಂ ಮಹಿಮವಾನ್ ಹಿಮವಾನಿವ ದಕ್ಷಿಣಃ।
ವಿತನುತೇ ಮಣಿರಶ್ಮಿಭಿರಪ್ಯ ಸೌ ಸುರಪತೇ ರಪತೇಜ ಇವಾಸ್ಪದಮ್ ॥೧೧॥

ಈ ಬೆಟ್ಟವು ಹಿಮದಿಂದ ಕೂಡಿದ್ದು ತನ್ನನ್ನು ಆಶ್ರಯಿಸುವವರ ತಾಪಗಳನ್ನು ಹೋಗಲಾಡಿಸುತ್ತದೆ. ಈ ಗೋವರ್ಧನ ಬೆಟ್ಟವು ಅತ್ಯಂತ ಸಾಮರ್ಥ್ಯಶಾಲಿಯಾದುದು. ಎಲ್ಲಾ ತಾಪಗಳನ್ನು ಹೋಗಲಾಡಿಸುತ್ತದೆ. ಮೇಲಾಗಿ ಹಿಮವತ್ ಪರ್ವತದಂತೆ ಅನೇಕ ರತ್ನಗಳಿಗೂ ಆಕರವಾದುದು. ಇದು ತನ್ನ ರತ್ನಗಳಿಂದ ಬಹಳ ದೂರ ಪ್ರಕಾಶ ಬೀರಿ ದೇವೇಂದ್ರನ ಸ್ವರ್ಗವನ್ನೇ ತರಬಲ್ಲದು.

ಗೋವರ್ಧನ ಪರ್ವತದ ಹಿರಿಮೆಯ ವರ್ಣನೆ ಮುಂದುವರೆದಿದೆ. ಬೆಟ್ಟದ ಶಿಖರವು ತಂಪಾಗಿದ್ದು, ಎಲ್ಲಾ ತಾಪಗಳನ್ನೂ ನೀಗುತ್ತದೆ. ಹಿಮವತ್ ಪರ್ವತಕ್ಕೂ ಈ ಬೆಟ್ಟಕ್ಕೂ ಸಾಮ್ಯವನ್ನು ಹೇಳಲಾಗಿದೆ. ಇದರಲ್ಲಿರುವ ರತ್ನಗಳ ಪ್ರಕಾಶವು ದೂರದಲ್ಲಿರುವ ದೇವೇಂದ್ರನ ಅಮರಾವತಿಗೂ ಬೀಳುತ್ತದೆ.

ಪ್ರದೀಶತಾ ಮಧುಮೂಲ ಫಲಾನಿ ನಃ ಸತರುಣಾ ತರುಣಾದ್ಭುತ ವೀರುಧಾ।
ಉಪಕೃತಂ ಗಿರಿಣಾ ತದಿಹಾರ್ಪ್ಯತಾಂ ರಸತತಂ ಸತತಂ ಹವಿರಾಹೃತಮ್ ॥೧೨॥

ಇದು ಸುಂದರವಾದ ಮರಗಳಿಂದ, ಲತೆಗಳಿಂದ ಕೂಡಿದ್ದು ಜೇನುತುಪ್ಪ ಸಮೃದ್ಧಿಯಾಗಿದ್ದು ನಮಗೆ ಸಾಧಕವಾಗಿದೆ. (ಅನೇಕ ರಸಗಳನ್ನು ಕೊಡುವುದಾಗಿದೆ). ಷಡ್ರಸಗಳೆಂಬ ಅನೇಕ ರಸಗಳನ್ನು ಉಳ್ಳ ಸಸ್ಯಗಳಿರುವ ಜಾಗ ಇದು.

ಅನೇಕ ಔಷಧದ ಸಸ್ಯಗಳನ್ನು ಹೊಂದಿರುವ ಪರ್ವತವು ಇದಾಗಿದೆ. ಯಾವ ರೀತಿ ಹಿಮಾಲಯದ ಪರ್ವತಗಳಲ್ಲಿ ಔಷಧದ ಸಸ್ಯಗಳು ಹೇರಳವಾಗಿವೆಯೋ, ಅದೇ ರೀತಿ ಈ ಪರ್ವತದಲ್ಲೂ ಔಷಧದ ಗಿಡಗಳು ಸಮೃದ್ಧವಾಗಿವೆ. ಆ ಗಿಡಗಳ ಮೇಲೆ ಬೀಸುವ ಗಾಳಿಯ ಸೇವನೆಯೇ ಆರೋಗ್ಯದಾಯಕವಾದುದು. ಮೊದಲನೇ ಪಾದದಲ್ಲಿ 'ತರುಣಾ' ಎರಡು ಬಾರಿ 'ಸತತಂ' ಎರಡು ಬಾರಿ ಬಂದಿದೆ.

ಸಮರುತಾ ಮರುತಾಪ ಜಿತಾಽಮುನಾ ನದವತಾ ದವತಾಂತಿ ದವೀಯಸಾ।
ಶ್ರಮಹತಾ ಮಹತಾ ಕೃತವಿಶ್ರಮಾ ವಯಮಿತೋ ಯಮಿತೋಲ್ಬಣ ಶಾಕ್ಕರಾಃ ॥೧೩॥

ಆರೋಗ್ಯವಾದ ಗಾಳಿಯು, ಬೆಳಕು ಇರುವ ಜಾಗವಾಗಿ, ನೀರಿಲ್ಲದ ದೇಶಗಳಲ್ಲಿ ತಾಪಗಳನ್ನು ಉಂಟು ಮಾಡದ, ಕಾಡಿಗಿಚ್ಚಿನಿಂದ ಬೆಂದು ಹೋಗದ ಜಾಗವಾಗಿ, ಕಲುಷಗಳೆಲ್ಲವೂ ನೀಗುವ ಈ ಬೆಟ್ಟದಲ್ಲಿ ಇರುವುದರಿಂದಲ್ಲವೇ ನಾವೆಲ್ಲಾ ದೊಡ್ಡದೊಡ್ಡ ಎತ್ತುಗಳನ್ನು ಸಾಕಲು ಸಾಧ್ಯವಾಗಿರುವುದು.

ಈ ಶ್ಲೋಕವನ್ನು ಯಮಕ ಚತುಷ್ಟಯ ಸಂಸೃಷ್ಟಿ ಯಲ್ಲಿ ರಚಿಸಲಾಗಿದೆ. 'ಮರುತಾ' 'ದವತಾ'. ಎರಡು ಬಾರಿ ಪ್ರಥಮ ಪಾದದಲ್ಲಿ 'ಮಹತಾ' 'ಯಮಿತೋ' ಪಾದದಲ್ಲಿವೆ.

ಬಹುಮತೋ ಮನುಜಾದಧತೆ ಧೃತಿಂ ಬಹುಮತೋಽಽಯ ಮನನ್ಯಧೃತಿಃ ಸತಾಮ್।
ಗಿರಿಶತೋನ್ನತಿಮಿಮಾನ್ ಅಧಿಕೋಹ್ಯಸೌ ಗಿರಿಶ ತೋಷಕೃತೋಽಪಿ ಮಹೀಭೃತಃ ॥೧೪॥

ಎಲ್ಲಾ ಮನುಷ್ಯರು ಇದರ ಮೂಲಕ ವಿಧವಿಧವಾದ ಸೌಖ್ಯಗಳನ್ನು ಮೇಲೆ ಮೇಲೆ ಹೊಂದುತ್ತಿದ್ದೇವೆ. ಬೇರೆ ಕಡೆ ಇಲ್ಲದ ಈ ಸ್ಥಳವು ಸತ್ಪುರುಷರಿಂದ ಬಹಳವಾಗಿ ಕೊಂಡಾಡಲ್ಪಟ್ಟಿದೆ. ಗಿರೀಶನೆನಿಸಿಕೊಂಡಿರುವ ಪರಮ ಶಿವನಿಗೂ ಸೌಖ್ಯವನ್ನು ನೀಡುವ ಈ ಬೆಟ್ಟವು ಹಿಮಗಿರಿಗಿಂತಲೂ ಶ್ರೇಷ್ಠವಾದುದು.

ಇಲ್ಲಿ ಯಮಕ ದ್ವಯ ಸಂಸೃಷ್ಟಿಯನ್ನು ಪ್ರಯೋಗಿಸಲಾಗಿದೆ. ಮೊದಲನೆಯ ಸಾಲಿನಲ್ಲಿ 'ಬಹುಮತ' ಎಂಬ ಪದವು ಎರಡು ಬಾರಿ ಪ್ರಯೋಗಿಸಲ್ಪಟ್ಟಿದೆ. ಎರಡನೆಯ ಸಾಲಿನಲ್ಲಿ 'ಗಿರೀಶತೊ' ಎಂಬ ಪದವು ದ್ವಿರುಕ್ತಿಯಾಗಿದೆ.

ಸನಗರಾ ನಗರಾಜಿತ ಮತಾಽಮುನಾ ಕುಹರಿಣಾಹರಿಣಾ ಸಮಸಂಪದಾ।
ಸತತಮಾ ತತಮಾನ ಮಹೀಯಸೀ ವಸುಮತೀ ಸುಮತೀಶ್ವರಧಾರ್ಯತೇ ॥೧೫॥

ಶ್ರೇಷ್ಠತೆ, ಹಿರಿಮೆಯುಳ್ಳ ಈಶ್ವರರೇ! ಸಮೂಹ ಸಮೂಹವಾಗಿ ಮರಗಳು ತಂಗಲು ಗುಹೆಗಳಿರುವ ಸರ್ವೇಶ್ವರನಿಗೆ ಸಮನಾದ ಹಿರಿಮೆಯನ್ನು ಹೊಂದಿರುವ ಈ ಬೆಟ್ಟದಲ್ಲಿ ಅನೇಕ ನಗರಗಳು ಸೇರಿಕೊಂಡಿವೆ. ಒಳ್ಳೆಯ ಭೂಮಿಯನ್ನು ಹೊಂದಿದೆ. ಅನೇಕ ನಾಡು ನಗರಗಳು ಸಮೃದ್ಧಿ ಹೊಂದಿವೆ.

ಈ ಗೋವರ್ಧನ ಗಿರಿಯು ಎಲ್ಲರೂ ತಂಗಬಹುದಾದ ಅತ್ಯಂತ ಉತ್ತಮ ಸ್ಥಳ. ಶಿಖರದ ಮೇಲೆ ಸಮತಟ್ಟಾದ ಸ್ಥಳವಿದ್ದು ಹೊಸ ಹೊಸ ನಗರಗಳನ್ನು ನಿರ್ಮಿಸಲು ಪ್ರಶಸ್ತವಾಗಿದೆ.

ಯಮಕ ಚತುಷ್ಟಯ ಸಂಸೃಷ್ಟಿ. ನಗರಾ, ಹರಿಣಾ, ತತಮಾ ಮತ್ತು ಸಮತಿ ಎಂಬ ಪದಗಳು ಎರಡೆರಡು ಬಾರಿ ಪ್ರಯೋಗಿಸಲ್ಪಟ್ಟಿದೆ.

ಸುರಸಗಂಧ ವಿಭೂತಿನಿಧೇ ಹಿತಂ ಪರಿಗೃಹಾಣ ನಿಜೇ ಪಶುಪಾಲನೇ।
ಸುರಸಗಂಧ ವಿಭೂತಿನಿಧೇಹಿ ತಂ ಹರಿಮವೇತ್ಯ ಗಿರಿಂ ಹವಿರುತ್ತಮಮ್ ॥೧೬॥

ದೇವತೆಗಳಿಗೆ ಸಮನಾದ ಐಶ್ವರ್ಯ ಹೊಂದಿದವರೆ! ತಮ್ಮ ಕಾಲು ನಡಿಗೆಯನ್ನು ಕಾಯುವ ಬಗೆಗೆ ಹಿತವಾಗಿರುವ ಮಾರ್ಗವನ್ನು ಆರಿಸಿಕೊಳ್ಳಬೇಕು. ಈ ಬೆಟ್ಟವನ್ನು ಸರ್ವ ವೇದ ಪ್ರಸಿದ್ಧನಾದ ನಾರಾಯಣನೆಂದು ಭಾವಿಸಿ ಷಡ್ರಸಗಳು ತುಂಬಿರುವ ದಿವ್ಯವಾದ ನೈವೇದ್ಯ ಗಳನ್ನು ಸಮರ್ಪಿಸಬೇಕು.

ಗಿರಿಯನ್ನೇ ನಾರಾಯಣನೆಂದು ಭಾವಿಸಿ, ಎಲ್ಲಾ ನೈವೇದ್ಯಗಳನ್ನು ಇದಕ್ಕೆ ಸಮರ್ಪಿಸಿ.

ಪೂರ್ಣ, ಯಮಕ ಖಂಡ ಯಮಕ ಪ್ರಯೋಗ ಪ್ರತಿ ಸಾಲಿನ ಮೊದಲನೇಯ ಪಾದ ಒಂದೇ ಆಗಿದೆ.

ವಿಶುದ್ಧ ತೋಯೌಘ ಪರೀತ ಪಾರ್ಶ್ವೆ ಶುದ್ಧಾಶಯಾಃ ಶ್ವೇತ ಇವಾಂತರೀಪೆ ।
ನಿರಾಶಿಷೋ ನಿತ್ಯಮಿಹಾಶ್ರಯಂತೇ ನೈಃಶ್ರೇಯಸಂ ತಾತ ನಿವೃತ್ತಿ ಧರ್ಮಮ್ ॥೧೭॥

ಶುದ್ಧವಾದ ತೀರ್ಥಗಳು ಪ್ರವಹಿಸುವ ಈ ಬೆಟ್ಟದಲ್ಲಿ ಶ್ವೇತ ದ್ವೀಪದಂತೆ ನಿರ್ಮಲವಾದ ಮನಸ್ಸುಳ್ಳ, ಫಲವನ್ನಪೇಕ್ಷೆ ಪಡದೆ ಕೇವಲ ಮೋಕ್ಷದ ನಿವೃತ್ತಿ ಧರ್ಮವನ್ನು ಅನುಷ್ಠಿಸುವವರು ವಾಸಿಸುತ್ತಿರುವರು.

ತಪಸ್ವಿಗಳು ಇಷ್ಟಪಡುವ ಗಿರಿಯು ಇದಾಗಿದೆ. ತಮ್ಮ ತಪಸ್ಸುಗಳಿಗೆ ಯಾವ ಭಂಗವೂ ಬರದಂತೆ ಶಾಂತ ರೀತಿಯಲ್ಲಿ ಅವರುಗಳು ತಪಸ್ಸು ಮಾಡಬಹುದು. ನಿವೃತ್ತಿ ಧರ್ಮವನ್ನು ಅನುಸರಿಸುವವರಿಗೆ ಅಂದರೆ ಸರ್ವಸಂಗ ಪರಿತ್ಯಾಗ ಮಾಡಿದವರು ಇಲ್ಲಿ ಸಮಾಧಿ ಸ್ಥಿತಿಯನ್ನು ಹೊಂದಬಹುದು. ನಿವೃತ್ತಿ ಧರ್ಮವನ್ನು ಇಲ್ಲಿ ಚೆನ್ನಾಗಿ ಆಚರಿಸಬಹುದು.

ಇಹ ವಾಸ ಮಹೀ ಸಮಹೀನ ಗುಣೇ ಸ್ಥಿರ ಕುಂಜ ಗೃಹೆ ಜಗೃಹೆ ವಿಬುಧೈಃ।
ಅಯಮಾನ ಮತಾಂ ನ ಮತಾಂ ನ ತನುಂ ಕ್ಷಿತಿಭೃತ್ ಭಜತೇಭಜ ತೇನ ಧೃತಿಂ ॥೧೮॥

ತನ್ನ ಗುಣಗಳಿಗೆ ಸಮನಾದ ಗುಣಗಳು ಎಲ್ಲಿಯೂ ಇಲ್ಲವೆಂದು ಹೇಳುವ, ಮನೆಗಳಂತೆ ಇರುವ ಬುಧರುಗಳು ಸ್ಥಿರವಾದ ಸ್ಥಳಗಳನ್ನು ಹೊಂದಿರುವ ಈ ಬೆಟ್ಟದಲ್ಲಿ ದೇವತೆಗಳು ವಾಸಿಸಲು ಸ್ಥಳವನ್ನು ಕಾಯ್ದಿರಿಸುತ್ತಾರೆ. ಈ ಬೆಟ್ಟವಾದರೂ ತನ್ನನ್ನು ನಮಿಸುವವರಿಗೆ ಅವರುಗಳು ಬೇಡುವ ಎಲ್ಲವನ್ನೂ ನೀಡುತ್ತದೆ. ಆದ್ದರಿಂದ ಇದರಲ್ಲಿ ಸಂತೋಷವನ್ನು ನಂಬಿಕೆಯನ್ನು ಇಡಬೇಕು.

ಈ ಬೆಟ್ಟವನ್ನು ಆರಾಧಿಸಿದರೆ ನಮಗೆ ಎಲ್ಲಾ ಸೌಖ್ಯಗಳು ದೊರೆಯುತ್ತವೆ ಎಂಬ ನಂಬಿಕೆಯನ್ನು ಇಟ್ಟಲ್ಲಿ, ಎಲ್ಲವೂ ಲಭಿಸುತ್ತದೆ. ಯಾವುದೇ ಕಾರ್ಯಸಿದ್ಧಿಯಾಗಬೇಕಾದರೂ ನಂಬಿಕೆ ಬಹಳ ಮುಖ್ಯ. ಆ ನಂಬಿಕೆಯನ್ನು ಈ ಬೆಟ್ಟಗಳಲ್ಲಿಟ್ಟರೆ ನಮಗೆ ಕಾರ್ಯ ಸಿದ್ಧಿ ಆಗುವುದರಲ್ಲಿ ಸಂದೇಹವಿಲ್ಲ.

ತಟಭೂಮಿ ರಸೌ ಜಯತಿ ತ್ರಿದಿವಂ ಪವನಾಗತ ತಾಪ ವನಾಗ ತತಾ ।
ಇಹ ದೇವಗಣೈ ರನಿಶಾ ಧ್ಯುಷಿತಾಯುತ ಕೋಕನದಾಯುತ ಕೋಕನದಾ ॥೧೯॥

ಈ ಬೆಟ್ಟದ ಪ್ರದೇಶವು ಗಾಳಿಯ ಬೀಸುವಿಕೆಯಿಂದ ಎಲ್ಲೆಲ್ಲೂ ಅಲ್ಲಾಡುವ ಕಾಡಿನ ಮರಗಳಿಂದ ಕೂಡಿ ಚಕ್ರವಾಕ ಪಕ್ಷಿಗಳ ಗಾನದಿಂದ ರಮ್ಯವಾಗಿದ್ದು, ದೇವತೆಗಳು ಸಮೂಹ ಸಮೂಹವಾಗಿ ವಾಸಿಸಲು ಯೋಗ್ಯವಾಗಿದೆ. ದೇವತೆಗಳು ಇಲ್ಲಿ ವಾಸಿಸಲು ಇಷ್ಟಪಡುತ್ತಾರೆ.

ಪದಾರ್ಥ ವೃತ್ತಿರೂಪ ಯಮಕ ದ್ವಯ ಸಂಸೃಷ್ಟಿ :- ಮೊದಲನೆಯ ಸಾಲಿನಲ್ಲಿ "ಪವನಗತತಾ" ಎರಡು ಬಾರಿ ಪ್ರಯೋಗವೂ, ಎರಡನೆಯ ಸಾಲಿನಲ್ಲಿ "ಯುತಕೊಕನದಾ" ಎರಡು ಬಾರಿ ಪ್ರಯೋಗ ಪದಾರ್ಥ ವೃತ್ತಿರೂಪ ಯಮಕ ಸಂಸೃಷ್ಟಿ

ಪ್ರಕೃಷ್ಟ ವಂಶೋದಯ ಮಾನನೀಯಃ ಪ್ರಭೂತತೋಯ ಪ್ರಥಿತಾನುರೂಪ್ಯಃ।
ಪ್ರವಾಲ ಮುಕ್ತಾಮಣಿ ಚಿತ್ರಿತಾಂಗಿಃ ಪತ್ನೀರಯಂ ಪ್ರಾಪಯತೇ ಪಯೋಧಿಮ್ ॥೨೦॥

ಈ ಬೆಟ್ಟವೇ ಒಬ್ಬ ಮಹಾನುಭಾವನಂತಿದೆ. ಯಾವ ರೀತಿ ಒಬ್ಬನು ಉತ್ತಮ ವಂಶದಲ್ಲಿ ಜನಿಸಿದುದರಿಂದ ಕೊಂಡಾಡಲ್ಪಡುವನೋ ಅದೇ ರೀತಿ ಈ ಬೆಟ್ಟವು ಹವಳ, ಮುತ್ತು, ರತ್ನಗಳಿಂದ ಕೂಡಿ, ಶ್ರೇಷ್ಠವಾದ ಬೆಟ್ಟವೆಂದು ಕೊಂಡಾಡಲ್ಪಟ್ಟಿದೆ.

ಒಬ್ಬ ಮಹಾನುಭಾವನನ್ನು, ಸಂತನನ್ನು ಸತ್ಪುರುಷನನ್ನು ಯಾವ ರೀತಿ ಎಲ್ಲಕ್ಕೂ ಕೊಂಡಾಡುವರೋ ಅದೇ ರೀತಿ ಈ ಬೆಟ್ಟವನ್ನು ಎಲ್ಲರೂ ಕೊಂಡಾಡುತ್ತಾರೆ.

"ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬಂತೆ ಈ ಭೂಮಂಡಲದಲ್ಲೇ ಈ ಬೆಟ್ಟವನ್ನು ಎಲ್ಲರೂ ಶ್ಲಾಘಿಸುತ್ತಾರೆ. ಈ ಬೆಟ್ಟವನ್ನು ಪೂಜಿಸಿದರೆ ಭಾಗವತ ಆರಾಧನೆ ಮಾಡಿದಂತೆ.

ನಂದ ನೀತಿಧನ ಸರ್ವನಂದನೀ ತತ್ವಯಾತ ಮತಿಭೂಷ ತತ್ವಯಾ ।
ಸಾಧುನಾ ಕ್ಷಿತಿಭೃತೋ ರಸಾಧುನಾ ಸೇವ್ಯತಾಮಿಹ ಗತೇನ ಸೇವ್ಯತಾಮ್ ॥೨೦॥

ಆನಂದವನ್ನು ಅನುಭವಿಸುವವರೇ! ನ್ಯಾಯವನ್ನು ಧನವಾಗಿ ಹೊಂದಿದವರೇ! ನಿಜವನ್ನು ಅರಿಯಲು ಇಚ್ಛಿಸುವವರೆ! ಸದಾಚಾರ ಶೀಲರಾಗಿ ಎಲ್ಲರಿಂದಲೂ ಆಶ್ರಯಿಸಲ್ಪಡುವ ಯೋಗ್ಯತೆಯಿರುವ ತಾವು ಈಗ ಈ ಬೆಟ್ಟದ ಭೂಮಿಯನ್ನು ಆಶ್ರಯಿಸಿ, ಪೂಜಿಸಿರಿ.

ಪಾದಾದ್ಯಂತ ಭಾಗ ವೃತ್ತಿರೂಪ ಯಮಕ ಸಂಸೃಷ್ಟಿ ಮೊದಲನೇ ಸಾಲಿನಲ್ಲಿ 'ನಂದನೀತ' ಮತ್ತು ತತ್ವಯಾ ಎಂಬ ಪದಗಳು ಎರಡು ಬಾರಿಯೂ, ಎರಡನೇ ಸಾಲಿನಲ್ಲಿ 'ಸಾಧುನಾ' ಮತ್ತು 'ಸೇವ್ಯತಾ' ಎಂಬ ಪದಗಳು ಎರಡು ಬಾರಿ ಬಂದಿವೆ.

ನಮ್ಯತೇಹ ನಿಯತಾ ವಿಭೂತಯೇ ಭೂತಯೇಶ್ವರತಯಾ ವಿರಾಜತೇ ।
ರಾಜತೇ ದೃಶತಟೇ ಮಹೀಯಸೇ ಹೀಯಸೆ ನ ಯದಿ ನಾಮ ನಮ್ಯತೇ ॥೨೧॥

ಈ ಬೆಟ್ಟಕ್ಕೆ ಕ್ಷೇಮಕ್ಕಾಗಿ ನಮಿಸಲ್ಪಡುವ ಯೋಗ್ಯತೆ ಸ್ಥಿರವಾದುದು. ನಿಜವಾದ ಐಶ್ವರ್ಯ ದೊಡನೆ (ನಿಯಮನ ಶಕ್ತಿಯೊಡನೆ) ಬೆಳಗುವುದು, ನಾವು ನೋಡುವ ಬೆಳ್ಳಿಯ ಮಯವಾದ ಹೊದಿಕೆಯಿಂದ ಕೂಡಿರುವ ಈ ಬೆಟ್ಟವನ್ನು ನಮಸ್ಕರಿಸದಿದ್ದಲ್ಲಿ ನಮಗೆ ಕೇಡೇ ಸಂಭವಿಸುತ್ತದೆ.

ಪ್ರಾರಂಭ ಮತ್ತು ಕೊನೆ ನಮ್ಯತೆ ಎಂಬ ಪದದಿಂದ ವಿರಾಜಿತೆ, ರಾಜತೆ, ವಿಭೂತಯೇ ಭೂತಯೇ ಮಹೀಯಸೆ ಹೀಯಸೆ (ಶೃಂಗಾರ ಯಮಕ).

ಅಯೋಗನಿದ್ರಸ್ಯ ಹರೇರಿದಾನೀಂ ಮಾನ್ಯೇ ಪದೆ ಮಾನಸತಃ ಪ್ರವೃತ್ತಾಃ।
ತ್ವದಾಶಯ ಸ್ವಚ್ಛ ಸರಿತ್ಪ್ರವಾಹೇ ಹಂಸೈಃ ಸಮಂ ವಾಸಮಿಹಾಶ್ರಯೇಮ ॥೨೨॥

ಬೆಳ್ಳಂ ಬೆಳಗ್ಗೆ ಯೋಗ ನಿದ್ರೆ ಮಾಡುವ ಭಗವಾನನು ಈವಾಗ ಎದ್ದೇಳುತ್ತಾನೆ. ಅವನ ಸ್ಥಾನವಾದ ಆಕಾರದಲ್ಲಿ ಮಾನಸ ಸರಸ್ಸಿನಿಂದ, ಹೊರಟ ಪಕ್ಷಿಗಳು ಹಾರಿ ಬಂದು ನಿಮ್ಮ ಮನಸ್ಸಿನಂತೆ ತಿಳಿಯಾದ ನದಿಯ ಪ್ರವಾಹಗಳಲ್ಲಿ ಇಲ್ಲಿ ವಾಸ ಮಾಡುತ್ತವೆ. ಅವುಗಳೊಡನೆ ನಾವೂ ಇಲ್ಲಿ ತಂಗಿ ತಿಳಿಯಾದ ಮನಸ್ಸಿನಿಂದ ಕೂಡಿ ಭಗವಂತನ ಪದತಲದಲ್ಲಿ ವಾಸಿಸೋಣ.

ಗೋವರ್ಧನ ಗಿರಿಯಲ್ಲಿ ವಾಸಿಸುವುದು ಮನಸ್ಸಿಗೆ ಅತ್ಯಂತ ಹಿತಕರವಾದದ್ದು. ಇಲ್ಲಿಯ ತಿಳಿ ನೀರು ಸತ್ಪುರುಷರ ಮನಸ್ಸಿನಂತೆ ಇದೆ. ರಾಮಾಯಣದಲ್ಲಿ "ರಮಣೀಯ ಪ್ರಸನ್ನಾಂಬು ಸನ್ಮನುಷ್ಯ ಮನೋ ಯಥಾ" ಎಂದು ಹೇಳಿದೆ. ಅದೇ ರೀತಿ ಇಲ್ಲಿಯೂ ನದಿಯ ನೀರನ್ನು ಹೋಲಿಸಿದೆ. ಭಗವಂತನು ಕಾಲುಷ್ಯವಿಲ್ಲದವರ ಮನಸ್ಸಿನಲ್ಲಿ ಯಾವಾಗಲೂ ವಾಸಿಸುತ್ತಾನೆ. "**ರಾಗಾದಿ ದೂಷಿತೇ ಚಿತ್ತಃ ನಾಸ್ಪದಿ ಮಧುಸೂದನ**" ಚಿತ್ತ ಕಾಲುಷ್ಯ ಇರುವವರ ಹೃದಯದಲ್ಲಿ ಭಗವಂತನು ವಾಸಿಸುವುದಿಲ್ಲ.

ನಿಶಾಕರಸ್ಯ ಸ್ಫಟಿಕೇಷ್ವಿಹಾಧಿಕಂ ಸುಜಾತ ರೂಪಾ ಶ್ರಯತೋ ವಿಭಾಸಿತಾ ।
ರವಿಪ್ರಭಾ ಚ ಸ್ಪೃಶತೀವಸಾಧ್ಯತಾಂ ಸುಜಾತರೂಪಾಶ್ರಯತೋವಿಭಾಸಿತಾ ॥೨೪॥

ಈ ಬೆಟ್ಟದಲ್ಲಿ ಚಂದ್ರನು ಬಂದು ಸೇರುವಾಗ ಇಲ್ಲಿರುವ ಸ್ಪಟಿಕಗಳು ಕೆಳಗೆ ಬಿದ್ದು ಹೆಚ್ಚು ಬಿಳುಪಾಗಿ ತೋರುತ್ತವೆ. ಸೂರ್ಯಪ್ರಭೆಯಾದುದು ಹೊಂಬಣ್ಣದ ಕಿರಣಗಳಿಂದ ಸಂಧ್ಯಾ ಕಾಲವನ್ನು ಬೆಳಗುತ್ತಿದೆ.

''ಸುಜಾತ ರೂಪಾ ಶ್ರಯತೋ ವಿಭಾಸಿತಾ'' ಎಂಬ ಪದಗುಚ್ಛವು ಎರಡು ಸಾಲಿನಲ್ಲಿಯೂ ಕೊನೆಯಲ್ಲಿ ಬಂದಿದೆ. ಇದನ್ನು ''ದ್ವಿತೀಯ ಪಾದಯೋರೇಕ ರೂಪ್ಯಾತ್ ಸಂದಷ್ಟಕಂ ನಾಮ ಯಮಕಂ'' ಎಂದು ಕರೆಯುತ್ತಾರೆ. ಚಿನ್ನಕ್ಕೆ ''ಜಾತರೂಪಾ'' ಎಂದು ಹೆಸರು. 'ಸುಜಾತ ರೂಪಾ' ಎಂಬಂತೆ ಉತ್ತಮ ಚಿನ್ನದ ಬಣ್ಣದಂತಿರುವ ಎಂಬರ್ಥ.

ನ ದಂತಿನೋऽಸ್ಮಿತ್ ಮುದಿತಾ ನದಂತಿ ನೋ ವನಸ್ಥಲೀಲಾऽಸ್ತ್ವಿಹ ದೇವನಸ್ಥಲೀ।
ವ್ರಜಾಧಿಪಾಘೋನ್ನತಿ ತೀವ್ರಜಾಧಿಪಾ ಪ್ರಭಾತ ತಾಮ್ರಾಶ್ಮ ಗಣಪ್ರಭಾ ತತಾ ॥೨೫॥

ಇಲ್ಲಿರುವ ಆನೆಗಳು ಕಂದು ಬಣ್ಣದವುಗಳಾಗಿರುತ್ತವೆ. ಈ ರೀತಿ ಕಾಡಿನಲ್ಲಿರುವ ನಮ್ಮಂತಹ ಜೀವಿಗಳಿಗೆ ಆಟವು ಅವಶ್ಯಕವಾಗಿದೆ. ಯಾವುದೆಂದರೆ ಕೋಟಿ ಕೋಟಿ ಮನೋವ್ಯಾಧಿಗಳನ್ನು ಹೊಂದಿರುವ ರೋಗಿಗಳನ್ನು ಗುಣಪಡಿಸುವ ಉದಯ ಕಾಲದಲ್ಲಿ ಸುಮಧುರ ನಾದ ಹೊರಡಿಸುವ ಕೋಗಿಲೆಗಳ ಗಾನ.

ವದಂತಿನೋ, ವನಸ್ಥಲೀ, ವ್ರಜಾಧಿ, ಪ್ರಭಾತತಾ ಎಂಬ ಪದಗಳು ಎರಡೆರಡು ಬಾರಿ ಪ್ರಯೋಗವಾಗಿದೆ. (ಸರ್ವೇಷು ಪಾದೇಷ್ವಾದ್ಯಂತ ಭಾಗವೃತ್ತಿ ಯಮಕಾನಾಂ ಸಂಸೃಷ್ಟಿ). ದಂತನ = ಆನೆಗಳು, ವನಸ್ಥಲೀ = ಕಾಡಿನಲ್ಲಿರುವ, ವ್ರಜಾಧಿಪಾ= ಗೋಕುಲದ ಒಡೆಯ, ಪ್ರಭಾತತಾ = ಉದಯದ ಕಾಲ.

ಮಹೀಯಸೀ ಗೋಪಗಣಾಶ್ರಿತಾ ಮಹೀ ವನ್ಯೈರುಪೇತಾ ಫಲಪುಷ್ಪಭಾವನ್ಯೈಃ।
ರಸೌಘ ರಮ್ಯೈರಪಿ ನಿರ್ಝರೈರಸೌ ಚಕಾಸ್ತ್ಯಮುಷ್ಮಿನ್ ಯವಸೈಶ್ಚಮೇಚಕಾ॥೨೬॥

ಬಹಳ ದೊಡ್ಡದಾಗಿ ಗೋಪಾಲಕರು ಸಮೂಹವು ಸಮೂಹವಾಗಿ ತಂಗುವ ಈ ಬೆಟ್ಟದ ಭೂಮಿಯಾದುದು ಹಣ್ಣುಗಳು, ಹೂವುಗಳು ಸಮೃದ್ಧಿಯಾಗಿ ಬಿಡುವ ಜಾಗ. ಮಧುರವಾದ ತಣ್ಣೀರು ವೇಗವಾಗಿ ಹರಿಯುವುದರಿಂದ ಸುಂದರವಾದ ಹುಲ್ಲುಗಾವಲುಗಳು ಸಹ ಬೆಳೆದಿವೆ.

ಗೋವರ್ಧನ ಗಿರಿಯು ಎಲ್ಲ ರೀತಿಯಿಂದಲೂ ಸಮೃದ್ಧವಾದ ಪ್ರದೇಶವಾಗಿದೆ. ಇಲ್ಲಿ ತಂಗುವುದು ಎಲ್ಲ ರೀತಿಯಲ್ಲಿಯೂ ಶ್ರೇಯಸ್ಕರವಾದುದು.

'ಮಹಿ' ಎಂಬ ಪದವು ಎರಡು ಬಾರಿಯೂ ರಸೌ ಎಂಬ ಪದವು ಎರಡು ಬಾರಿ ಪ್ರಯೋಗಿಸಲ್ಪಟ್ಟಿದೆ. ಇದೂ ಕೂಡ 'ಯಮಕ ಸಂಸೃಷ್ಟಿ'.

ಸದೋನ್ನತಾಯ ಪ್ರಣಮತ್ಯ ಮುಷ್ಮೈ ಸತಾಂ ಕನಿಷ್ಠಾ ಪ್ರಥಮಾಂಕನಿಷ್ಠಾ।
ನಿಶಾಮ ಯಾಸ್ಮಿನ್ ಸರಿತಶ್ಚ ರತ್ನಪ್ರಭಾ ಸಮಾನಾಃ ಪ್ರತಿಭಾ ಸಮಾನಾಃ ॥೨೭॥

ಯಾವಾಗಲೂ ಮೇಲ್ಮೈ ಹೊಂದಿರುವ ಈ ಬೆಟ್ಟವನ್ನು ಕುರಿತೇ ಮೊದಲ ಬಾರಿಗೆ ಉತ್ತಮ ವಸ್ತುವನ್ನು ಮೊದಲು ಪರಿಗಣಿಸುವ ಸತ್ಪುರುಷರನ್ನು ಕಂಡು ನಮಸ್ಕರಿಸುವರು. ರತ್ನಗಳಂತಿರುವ ನಿರ್ಮಲವಾಗಿ ಬೆಳಗುವ ಮಾಸ ಪಕ್ಷಿಗಳು ಕೊಂಡಾಡುವ ನದಿಗಳು ಇಲ್ಲಿ ಹೇರಳವಾಗಿವೆ.

ಉತ್ತಮ ವಸ್ತುಗಳನ್ನು ಕಂಡರೆ ಅವಕ್ಕೆ ಮೊದಲು ನಮಸ್ಕರಿಸುವಂತೆ, ಈ ಬೆಟ್ಟವನ್ನೇ ಎಲ್ಲರೂ ನಮಸ್ಕರಿಸುತ್ತಾರೆ. ಇಲ್ಲಿ ಹರಿಯುವ ನದಿಗಳೆಲ್ಲವೂ ನಿರ್ಮಲವಾಗಿ ಅವುಗಳಲ್ಲಿ ರತ್ನಗಳು ಹೇರಳವಾಗಿ ಲಭಿಸುತ್ತವೆ. ಈ ಬೆಟ್ಟವು ಶ್ರೇಷ್ಠ ವಸ್ತುಗಳ ಪಂಕ್ತಿಗೆ ಸೇರಿದೆ.

ಇಹ ವಂಶಲತಾ ವಿಲಗ್ನವಾಲಾಃ ಪ್ರಿಯವಾಲಾ ನತಕಂಧರಾಶ್ಚಮರ್ಯಃ।
ಶಬರೀ ಕಬರೀ ನಿರೀಕ್ಷಣೇನ ತ್ರಪಮಾಣಾ ಇವ ನಿಶ್ಚಲಾಭವಂತಿ ॥೨೮॥

ಇಲ್ಲಿ ಚಮರೀ ಮೃಗಗಳು ಕೊಂಬೆಗಳಲ್ಲಿ ತಮ್ಮ ಬಲದ ಕೂದಲುಗಳು ಸಿಕ್ಕಿಕೊಂಡ ಕಾರಣ ಅದರಲ್ಲಿರುವ ಅಭಿಮಾನದಿಂದ ಕತ್ತನ್ನು ಬೆಳೆಸಿಕೊಂಡು ಅಲ್ಲಾಡದೆ ನಿಂತಿವೆ. ಒಂದು ಕಾಲದಲ್ಲಿ ಇಲ್ಲಿ ಇದ್ದ ಬೇಡತಿಯರ ಕೂದಲನ್ನು ಕಂಡು ತಮ್ಮ ಕೂದಲನ್ನು ಅವರೇನಾದರೂ ತೆಗೆದುಕೊಳ್ಳುವರೋ ಎಂಬಂತೆ ಭಾವಿಸಿದ್ದವು.

ಚಮರಿ (ಚಾಮರ ಮಾಡುವ ಕೂದಲನ್ನು ಹೊಂದಿರುವ ಪ್ರಾಣಿ). ಚಮರೀ ಮೃಗಗಳು ಇಲ್ಲಿ ಹೇರಳವಾಗಿವೆ. ಮರಗಳಿಗೆ ಸಿಕ್ಕಿಹಾಕಿಕೊಳ್ಳುವ ಕೂದಲನ್ನು ಬೇಡತಿಯರು ತೆಗೆದಿಟ್ಟುಕೊಳ್ಳುತ್ತಾರೆ. ಚಮರೀ ಮೃಗದ ಕೂದಲು ಶ್ರೇಷ್ಠವಾದುದು. ಆ ಕಾರಣದಿಂದಲೂ ಈ ಬೆಟ್ಟ ಶ್ರೇಷ್ಠವಾಗಿದೆ.

ಹರಿನೀಲರುಚಾ ಲಸತ್ತಮಿಸ್ರೋ ದಿವಸೇಽಪಿ ಸ್ಫುರದೋಷಧಿ ಪ್ರದೀಪಃ।
ನಿಶಿಚೈಷ ತಪೋಧನಾಂಗ ದೀಪ್ತ್ಯಾದಿನ ಮೋಹಾದ ವಿಭಕ್ತ ಕೋಕಯುಗ್ಮಃ ॥೨೯॥

ಈ ಬೆಟ್ಟವು ಹಗಲಲ್ಲಿ ಇಂದ್ರನೀಲ ರತ್ನಗಳು ಹರಡಿದಂತೆ ರಾತ್ರಿಯಲ್ಲಿ ತಂಪಾಗಿರುವುದರಿಂದ ದೀಪಗಳಿಂದ ಜ್ವಲಿಸುತ್ತಾ ರಾತ್ರಿಯಲ್ಲಿ ಯೋಗಿಗಳು ದೇಹದ ಮೇಲೆ ಬೀಸುವುದರಿಂದ 'ಇದು ಹಗಲೇನೋ' ಎಂದು ತಿಳಿದು ಚಕ್ರವಾಕ ಪಕ್ಷಿಗಳು ಬೇರ್ಪಡದೆ ಒಟ್ಟಾಗಿಯೇ ಇರುವುವು.

ಚಕ್ರವಾಕ ಪಕ್ಷಿಗಳು ಹಗಲು ಒಟ್ಟಾಗಿ ಇದ್ದು, ರಾತ್ರಿ ಬೇರ್ಪಡುತ್ತವೆ. ಆದರೆ ಈ ಬೆಟ್ಟದಲ್ಲಿ ರಾತ್ರಿಯು ಸಹ ಕಾಂತಿಯುಕ್ತವಾಗಿ ಇರುವುದರಿಂದ, ಪಕ್ಷಿಗಳು ರಾತ್ರಿ ಆಗಿಲ್ಲವೆಂದು ಭ್ರಮೆಯಿಂದ ಒಟ್ಟಾಗಿಯೇ ಇದ್ದು ವಿಹರಿಸುತ್ತವೆ.

ಈ ಬೆಟ್ಟದ ಪ್ರಭಾವವು ಅಂತಹುದು. ಇಲ್ಲಿ ಚಕ್ರವಾಕ ಪಕ್ಷಿಗಳು ವಿರಹವನ್ನು ಅನುಭವಿಸುವುದೇ ಇಲ್ಲ. ಯಾವಾಗಲೂ ಸಂತೋಷವಾಗಿರುತ್ತದೆ.

ವ್ರಜವೈರವತೀಷು ವಲ್ಲವಾನಾಂ ವೃಷ! ಸೇನಾಸು ಸ ದಾನವಾಸು ದೇವಃ।
ಅಚಲಾಕೃತಿರಾಶು ನೈಷ ಗೋಪ್ತ ವೃಷ ಸೇನಾಸು ಸದಾನ ವಾಸುದೇವಃ ॥೨೦॥

ಸ್ವಾಮಿಗಳೇ ! ಅಸುರ ಸೇನೆಗಳು, ಇಂದ್ರನ ಸೇನೆಗಳು ಹಗೆಯನ್ನು ಹೊಂದಿ ಯುದ್ಧ ಮಾಡುವಾಗ ಯಾವಾಗಲೂ ವಾಸುದೇವನೆಂಬ ದೇವ ದೇವನು ಈ ಬೆಟ್ಟದಲ್ಲಿದ್ದು ಅವರನ್ನು ಕಾಪಾಡದೇ ಇರುವುದಿಲ್ಲ. ವಾಸುದೇವನು ಯಾವಾಗಲೂ ಈ ಬೆಟ್ಟದಲ್ಲಿ ತಂಗಿದ್ದು ಎಲ್ಲ ಕಾಲಗಳಲ್ಲಿಯೂ ಇದನ್ನು ಅಸುರರಿಂದ ಕಾಪಾಡುತ್ತಾನೆ.

ಇಂದ್ರನು ಗಿರಿಪೂಜೆಯಿಂದ ಕುಪಿತಗೊಂಡರೂ, ವಾಸುದೇವನ ರಕ್ಷೆ ಇರುವುದ ರಿಂದ ಯಾವ ಭಯವೂ ಇಲ್ಲ. ಆದ್ದರಿಂದ ನಾವು ಇಲ್ಲಿ ಧೈರ್ಯದಿಂದ ತಂಗೋಣ. **"ನ ವಾಸುದೇವ ಭಕ್ತಾನಾಂ ಅಶುಭಂ ವಿದ್ಯತೇ ಕ್ವಚಿತ್"** ಎಂಬಂತೆ ವಾಸುದೇವನ ಭಕ್ತರಿಗೆ ಯಾವ ಅಶುಭವೂ ಇರುವುದಿಲ್ಲ.

ಮಧುನಾ ಸವಿಭವ ಸಂತಂ ಮದನಧನಂ ಯಂ ವದಂತಿ ಶುಭದಿವಸಂ ತಮ್।
ನಿಯತಮಿಹೈವ ವಸಂತಮ್ ನಿಷ್ಕಾಮಧಿಯೋಽಪಿ ನಿರ್ವಿಶಂತಿ ವಸಂತಮ್ ॥೨೧॥

ಐಶ್ವರ್ಯ ತುಂಬಿದವರೇ! ಯಾವ ಋತುವು ಎಲ್ಲೆಲ್ಲೂ ಜೇನು ಹರಡುವ ಮನ್ಮಥನಿಗೆ ಧನವಾಗಿ ಶುಭವಾದ ದಿನಗಳೆಂದು ಹೇಳುವರೋ ಆ ವಸಂತ ಋತುವಾದುದು ಇಲ್ಲಿ ಯಾವಾಗಲೂ ಇರುವುದರಿಂದ ವೈರಾಗ್ಯವುಳ ಮನಸ್ಸನ್ನು ಹೊಂದಿದವರು ತಮಗೆ ಅನುಕೂಲವಾಗಿ ಅದನ್ನು ಅನುಭವಿಸುತ್ತಾರೆ.

ವಸಂತ ಋತುವು ಎಲ್ಲಾ ಋತುಗಳಲ್ಲಿಯೂ ಶ್ರೇಷ್ಠವಾದುದು. ಆ ಋತುವು ಈ ಬೆಟ್ಟದಲ್ಲಿ ಯಾವಾಗಲೂ ಇರುವುದರಿಂದ ಇಲ್ಲಿ ಎಲ್ಲ ಕಾಲಕ್ಕೂ ಎಲ್ಲರೂ ತಂಗಬಹುದು. ಎಲ್ಲಾ ಋತುಗಳು ವಸಂತ ಋತುವಿನಂತೆ ಆನಂದದಾಯಕವಾಗಿರುತ್ತದೆ.

ಕಾನನಂ ದಧದಸೌ ಸದೋನ್ನಮತ್ಕಾಂಚನಾರ ಕಕುಭಂ ಸದೃಕ್ಷಕಃ।
ಮಂದರಸ್ಯ ಮಹತಾ ಸ್ವವರ್ಷ್ಮಣಾ ಕಾಂಚನಾಽಽರ ಕಕುಭಂ ಸದೃಕ್ಷಕಃ ॥೨೨॥

ಮರುತವು ಕಾಂಚನಾರವೆಂಬ ಮರಗಳು ಯಾವಾಗಲೂ ಎತ್ತರಕ್ಕೆ ಬೆಳೆಯುವ ವನ ವೃಕ್ಷವಾಗಿ ನಕ್ಷತ್ರಗಳು ತನ್ನ ಮೇಲೆ ವಾಸಿಸಲು ಅನುಕೂಲವಾಗುವ ಹಾಗೆ ಈ ಬೆಟ್ಟದ ಮೇಲೆ ಮಂತ್ರ ಮಲೆಗೆ ಸಮನಾದ ದೊಡ್ಡ ರೆಂಬೆಗಳನ್ನು ಹೊಂದಿರುವುದಾಗಿ ತನ್ನ ನಿಲುಮೆ ಯನ್ನು ಎಲ್ಲಾ ದಿಕ್ಕುಗಳಿಗೂ ಹರಡಿರುವುದಲ್ಲದೆ, ಒಂದೊಂದು ದಿಕ್ಕನ್ನು ಪ್ರಸರಿಸಿದೆ.

ಕಾಂಚನಾರವೆಂಬ ಮರಗಳು ಅತಿ ಎತ್ತರಕ್ಕೆ ಬೆಳೆಯುತ್ತವೆ. ಅದರಿಂದಾಗಿ ನಕ್ಷತ್ರಗಳು ಅವುಗಳ ಮೇಲೆ ವಾಸಿಸುತ್ತವೆ ಎಂಬಂತಿವೆ. ತನ್ನ ರೆಂಬೆಗಳನ್ನು ಉದ್ದವಾಗಿ ಎಲ್ಲಾ ದಿಕ್ಕುಗಳಿಗೂ ಹರಡುತ್ತವೆ. ಹೀಗಾಗಿ ಈ ಬೆಟ್ಟವು ತಂಗಲು ಯೋಗ್ಯವಾಗಿವೆ. ಮರಗಳು ಎತ್ತರಕ್ಕೆ ಬೆಳೆಯುವುದರಿಂದ, ಬೆಟ್ಟದ ಮೇಲಿನ ಪ್ರದೇಶವು ಯಾವಾಗಲೂ ತಂಪಾಗಿದ್ದು ಮನಸ್ಸಿಗೆ ಮುದವನ್ನು ನೀಡುತ್ತದೆ.

ಅನೇಹಸಾ ಹಾನಿರೂಪೈತಿ ನೇಹ ಸಾ ನ ಕಂದರಸ್ಥಸ್ಯ ದಿಶತ್ಯಕಂ ದರಃ।
ಅಪಾಸ್ಯ ತಾಂ ಭೀತಿಮಸಾ ಉಪಾಸ್ಯತಾಂ ಸದಾ ನವಾ ಭೂಮಿರಿಯಂ ಸದಾನವಾ॥೨೨॥

ದಿನ ಕಳೆದಂತೆಲ್ಲಾ ಕೆಲ ಮರಗಳ ಸಾರ ಕಡಿಮೆಯಾಗುತ್ತದೆ. ಅಂತಹದ್ದೆಲ್ಲಾ ಇಲ್ಲಿ ಇಲ್ಲ. ಗುಹೆಗಳಲ್ಲಿ ಇರುವವರಿಗೆ ಅಲ್ಲಿನ ಬಿಲಗಳ ದುಃಖವೆಲ್ಲಾ ಇರುವುದಿಲ್ಲ. ಯಾವಾಗಲೂ ಅನುಕೂಲರಾದ ಅಸುರರುಗಳನ್ನು ಹೊಂದಿರುವ ಈ ಮಲೆಯ ಪ್ರದೇಶವಾದುದು ನಿರ್ಭಯವಾಗಿ ಉಪಾಸಿಸಲ್ಪಡಬಹುದು.

ಇಲ್ಲಿನ ಮರಗಳು ಯಾವ ಕಾಲಕ್ಕೂ ತಮ್ಮ ಸಾರವನ್ನು ಕಳೆದುಕೊಳ್ಳುವುದೇ ಇಲ್ಲ. ಗುಹೆಗಳಲ್ಲಿ ಇದ್ದರೂ ಅಲ್ಲಿ ಯಾರ ಕಾಟವೂ ಇರುವುದಿಲ್ಲ. ಭೂಮಿಯು ಯಾವಾಗಲೂ ಫಲವತ್ತಾಗಿರುತ್ತದೆ. ಇಲ್ಲಿ ಯಾರೂ ಯಾರಿಗೂ ತೊಂದರೆ ಮಾಡುವುದಿಲ್ಲ. ನಿರ್ಭಯವಾಗಿ ಇರಬಹುದು. ಇಂದ್ರನು ಏನಾದರೂ ತೊಂದರೆ ಮಾಡಲು ಬಯಸಿದರೆ ಇಲ್ಲಿ ಅನುಕೂಲ ರಾಗಿರುವ ದಾನವರು ಅವನನ್ನು ಶಿಕ್ಷಿಸುತ್ತಾರೆ. ಕೆಲವು ದಾನವರೂ ಸಹ ಇಲ್ಲಿ ನಮಗೆ ಸಹಾಯ ಮಾಡುತ್ತಾರೆ.

ಸಮಿಂಧತೇಸ್ಮಿನ್ ಅಜಹತ್ಸಮಾಧಿಕಾಃ ಸಮಾಧಿಕಾ ತೀತಧಿಯಃ ಸ್ಥಿರಾಶಯಾ।
ಸ್ಥಿರಾಶಯಾಶ್ಚ ವ್ರತಿನಃ ಸದಾರಸಾಃ ಸದಾರಸಾಧ್ಯೇಷು ತಪಸ್ಸ್ವವಸ್ಥಿತಾಃ ॥೨೪॥

ಸ್ಥಿರವಾದ ಫಲಗಳುಳ್ಳ ಗುರಿಯಿಂದ ತಮ್ಮ ಬುದ್ಧಿಗೆ ಸಿಲುಕುವ, ಅಧಿಕವಾದ ಬುದ್ಧಿಯಿಲ್ಲ ದವರಾದ ಮಹಾತ್ಮರು ಸಮಾಧಿ ಎಂಬ ಯೋಗ ನೆಲೆಯನ್ನು ಬಿಡದೆ ಇಲ್ಲಿ ವಾಸಿಸುತ್ತಾರೆ,. ತಮ್ಮ ಹೆಂಡತಿಯರೊಡನೆ ಸೇರಿ ನಡೆಸುವ ತಪಸ್ಸುಗಳಲ್ಲಿ ಇಲ್ಲಿ ನಿರತರಾಗಿರುವರು ಬ್ರಹ್ಮರ್ಷಿಗಳು. ಗೃಹಸ್ಥರುಗಳು ವಾನಪ್ರಸ್ಥರು ಎಲ್ಲರೂ ಸ್ಥಿರವಾಗಿ ಇಲ್ಲಿ ನೆಲೆಸುತ್ತಾರೆ.

ನಾಲ್ಕು ಆಶ್ರಮ ವಾಸಿಗಳು ಸ್ಥಿರವಾಗಿ ಇಲ್ಲಿ ಸುಖದಿಂದ ಇದ್ದಾರೆ. ಇಲ್ಲಿ ಎಲ್ಲಾ ರೀತಿಯ ಆಶ್ರಮವಾಸಿಗಳು ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳನ್ನು ಯಾವ ವಿಘ್ನವೂ ಇಲ್ಲದೆ ನಡೆಸುತ್ತಾ ಶಾಂತಿಯಿಂದ ಇರುತ್ತಾರೆ. ಸಮಾಧಿಕಾ, ಸ್ಥಿರಾಶಯಾ, ಸದಾರಸಾ ಎಂಬ ಪದಗಳು ಎರಡು ಬಾರಿ ಕ್ರಮವಾಗಿ ಪ್ರಯೋಗಿಸಲ್ಪಟ್ಟಿದೆ.

ವಸತ್ಯಮುಷ್ಮಿನ್ ವನದೇವತಾಽದ್ಭುತಾ ವಿಭಾತಿ ಭಾಸ್ವ ತ್ತಿಲಕಾಲಿ ಕಾನನಾ।
ವಿಚಿತ್ರರತ್ನಾ ಮಹತೀ ಚ ಮೇಖಲಾ ವಿಭಾತಿ ಭಾಸ್ವತ್ತಿಲಕಾಲಿಕಾನನಾ ॥೨೬॥

ಇಲ್ಲಿ ಅದ್ಭುತವಾದ ದೇವತೆಯು ಅತ್ಯಂತ ಸುಂದರವಾದ ಮುಖ ಮಂಡಲದೊಡನೆ ವಾಸಿಸುತ್ತಾಳೆ. ದೊಡ್ಡ ರತ್ನಗಳನ್ನು ಹೊಂದಿರುವ ತಿಲತಿ ಮರಗಳನ್ನು ವರಸೆಯಾಗಿ ಹೊಂದಿರುವ ವನವು ಬೆಳಗುತ್ತಿದೆ.

ಇಲ್ಲಿನ ವನ ದೇವತೆಯು ಅತ್ಯಂತ ಸುಂದರಿಯಾಗಿದ್ದು ಯಾವಾಗಲೂ ಹಸನ್ಮುಖಿ ಯಾಗಿದ್ದಾಳೆ. ಇಲ್ಲಿ ರತ್ನಗಳನ್ನು ಹೊಂದಿರುವ ತಿಲತಿ ಮರಗಳು ಹೇರಳವಾಗಿ ಬೆಳೆಯುತ್ತವೆ.

"ವಿಭಾತಿ ಭಾಸ್ವತ್ತಿಲಕ ಕಾಲಿ ಕಾನನಾ" ಎಂದು ಪಾದವು ಎರಡು ಸಾಲುಗಳಲ್ಲಿಯೂ ಬರುತ್ತದೆ.

ಮೊದಲನೇಯ ಪಾದದಲ್ಲಿ ವನ ದೇವತೆಯನ್ನು ವರ್ಣಿಸುವುದಕ್ಕೂ ಎರಡನೆಯ ಸಾಲಿನಲ್ಲಿ ಕಾಡನ್ನು ವರ್ಣಿಸುವುದಕ್ಕೂ ಒಂದೇ ಪದಗುಚ್ಛವನ್ನು ಬಳಿಸಿದ್ದಾರೆ.

ತಪಸ್ವಿನಾ ಆತ್ಮವಿದಾಂ ನಿವಾಸೈಃ ಸಮಾನ ಭೂಮಾ ವಸಮಾನ ಭೂಮ।
ಇಹಾಟವೀ ಕಾಂಚನ ಕರ್ಣೀಕಾರ ಪರಾಗತಾ ಆಮ್ರಾಽಪ್ಯ ಪರಾಗತಾಮ್ರಾ ॥೭೬॥

ತಪವನ್ನು ಅರಿತ ಆತ್ಮಜ್ಞಾನಿಗಳು ಆಶ್ರಮಗಳಿಗೆ ಹಿರಿಮೆಯನ್ನು ಕೊಡುವ ಪ್ರದೇಶ ಹೊಂದಿರುವ ಈ ಬೆಟ್ಟಗಳಲ್ಲಿ ಉಳ್ಳ ವನವಾದುದೂ ವಿಶೇಷವಾದ ಮೇಲ್ಮೈಗಳನ್ನು ಹೊಂದಿ, ಚಂಪಕ, ಕರ್ಣಿಕಾರವೆಂಬ ಮರಗಳ ಹೂವುಗಳು ಹರಡಿ ಎಲ್ಲೂ ಪರಾಗ ಧಾಮವಾಗಿರುವಾಗ ಅಪರಾಗ ತಾಮ್ರದಂತೆ ಹೇಳಲ್ಪಡುತ್ತದೆ.

ಗೋವರ್ಧನ ಮಲೆಯ ಹಿರಿಮೆಯ ವರ್ಣನೆ ಮುಂದುವರೆದಿದೆ. ಇಲ್ಲಿ ಅನೇಕರು ತಪಸ್ಸನ್ನು ನಡೆಸಿ, ಸಿದ್ಧಿಯನ್ನು ಹೊಂದಿದ್ದಾರೆ. ಅನೇಕ ಉತ್ತಮ ಪುಷ್ಪಗಳನ್ನು ಬಿಡುವ ಮರಗಳನ್ನು ಹೊಂದಿದೆ ಈ ಬೆಟ್ಟ. ಆಮ್ರಾಃ ಎಂದರೆ ಮಾವಿನ ಮರಗಳು ವಿಶೇಷವಾಗಿದ್ದು ಫಲಗಳು ಬಿಡುತ್ತವೆ. ಹಣ್ಣುಗಳಲ್ಲೆಲ್ಲಾ ರಾಜನಾದುದು ಮಾವಿನ ಹಣ್ಣು (ಚೂತ ಫಲ). ಆದ್ದರಿಂದಲೂ ಈ ಬೆಟ್ಟವು ಶ್ರೇಷ್ಠವಾಗಿದೆ.

ಸರಸ್ಸು ಜಾತೈರ್ನಲಿನೈಃ ಸುಜಾತೈ ರಪಾಂ ತರಂಗೈಶ್ಚ ಸುಧಾಂತರಂಗೈಃ।
ಇಹಾಸ ಮೇಽಽ ಅತಿವ್ರತತೌ ಸಮೇತಿ ಮರುತ್ ತುಪಾರಃ ಶ್ರಮ ರುತ್ತುಪಾರಃ॥೭೭॥

ಸರೋವರಗಳಲ್ಲಿ ಉಂಟಾದ ತಾವರೆಗಳ ಅಮೃತಕ್ಕೆ ದಿವ್ಯವಾದ ನೀರಿನ ಹೂವುಗಳು ಸೇರಿ ಇನ್ನೂ ವಿಶೇಷ ಹೊಂದಿ ನಳನಳಿಸುವ ಈ ಬೆಟ್ಟದಲ್ಲಿ ಒಳ್ಳೆಯ ಸುವಾಸನೆಯನ್ನು ಬೀಸುವ ಗಾಳಿಯು ಬೀಸುತ್ತದೆ.

ಈ ಬೆಟ್ಟದಲ್ಲಿ ಬೀಸುವ ಗಾಳಿಯ ಸೇವನೆಯೂ ಸಹ ಆರೋಗ್ಯಕರವಾಗಿದ್ದು ಒಳ್ಳೆಯ ಸುವಾಸನೆಯಿಂದ ಕೂಡಿದೆ. ಮುಂಜಾನೆಯ ಗಾಳಿಯ ಸೇವನೆ ಆರೋಗ್ಯಕರವೆಂದು ವೈದ್ಯಶಾಸ್ತ್ರದಲ್ಲಿಯೂ ಹೇಳಿದೆ. ಔಷಧದ ಮರಗಳಿರುವುದರಿಂದ, ಅವುಗಳ ಮೇಲೆ ಬೀಸುವ ಗಾಳಿಯ ಸೇವನೆ ಆರೋಗ್ಯಕರ.

ಯಮಭಿಪ್ಲುತ ಮಂಬುಧರೈರಭಿತಃ ಸರಸಾ ಸ ರಸಾ ಸ ರಸಾಽಽಸ ರಸಾ।
ಸ್ಥಿರ ಧರ್ಮ ತಯಾ ಗಿರಿರಾದ್ರಿಯತೆ ಸ ಮಯಾ ಸಮಯಾಸಮ ಯಾ ಸಮಯಾ॥೭೮॥

ಮಳೆ ಹೊಯ್ದಿರುವ ಈ ಬೆಟ್ಟದಲ್ಲಿ ನಾಲ್ಕು ಕಡೆಗಳಿಂದಲೂ ಭೂಮಿಯಾದುದು ಸರೋವರ ಗಳಿಂದ ಕೂಡಿರುವುದರಿಂದ ತಂಪಾಗಿ ಇದೆ. ಧರ್ಮಾಚರಣೆಯಲ್ಲಿ ಆಸಕ್ತಿಯುಳ್ಳವರೇ !

ಶಾಸ್ತ್ರ ರೀತಿಯಲ್ಲಿ ನಂಬಿಕೆ ಉಳ್ಳವರೆ ! ಯಾವುದಾದರೂ ಒಂದು ಕಾರಣವಿಲ್ಲದೆ ಈ ಭೂಮಿಯನ್ನು ನಾನು ಇಷ್ಟಪಡಲಿಲ್ಲ. ಇದು ಶ್ರೇಷ್ಠ ಭೂಮಿ ಅದಕ್ಕಾಗಿ.

ಯಾವ ಕಾರಣವೂ ಇಲ್ಲದೆ, ಈ ಬೆಟ್ಟದಲ್ಲಿ ವಾಸ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಅದಕ್ಕೆ ಪ್ರಬಲವಾದ ಕಾರಣಗಳು ಇವೆ. ಈ ಜಾಗ ತಂಪಾಗಿ ಇದ್ದು ಧರ್ಮಾಚರಣೆಗೆ ಅನುಕೂಲವಾಗಿದೆ. ಈಗಾಗಲೇ ಇದರ ಹಿರಿಮೆಯನ್ನು ಹೇಳಿದ್ದೇನೆ. ಇನ್ನು ಮುಂದೆಯೂ ಹೇಳುತ್ತೇನೆ.

ಸರಸಾ ಸರಸಾ ಸರಸಾ ಆ ಸರಸಾ
ಸಮಯಾ ಸಮಯಾ ಸಮಯಾ ಸಮಯಾ

ಎಂಬ ಪದಗಳು ನಾಲ್ಕು ಬಾರಿ ಸಾಲಿನಲ್ಲಿ ಪ್ರಯೋಗಿಸಲ್ಪಟ್ಟಿದೆ. ಪದ ವಿಭಾಗ ಮಾಡಿದಾಗ ಬೇರೆ ಬೇರೆ ಅರ್ಥಗಳು ತೋರುತ್ತವೆ.

ಪ್ರಣಮ ತಮಿಮ ಮಚಲಮ್ ಅಮರ ಮಹಿತ ಮಹಿತಮಹಿತಮಹಿತ।
ಭಜನ ಮಲಘು ವಿಫಲಮಿಹ ನ ಸದಯ ಸದಯ ! ಸದಯ ! ಸದಯ ॥ ॥೩೯॥

ವೃತ್ರಾಸುರ ವಿರೋಧಿಯಾದ ಹೀನನಾದ ಇಂದ್ರನ ಬಳಿ ಹಿತವಾಗಿರುವವರೇ! ನೀವು ದೇವತೆಗಳಿಂದ ವಂದಿಸಲ್ಪಟ್ಟ ಈ ಶ್ರೇಷ್ಠವಾದ ಬೆಟ್ಟವನ್ನು ನಮಸ್ಕರಿಸಿ, ಅನಾಯಾಸವಾಗಿ ಸೌಭಾಗ್ಯವನ್ನು ಹೊಂದಿರುವಿರಿ. ದಿನದಯಾಳುವೇ! ಸತ್ಪುರುಷರನ್ನು ಆಳುವವರೇ! ಇಂದ್ರನನ್ನು ನಮಸ್ಕರಿಸುವುದನ್ನು ಬಿಟ್ಟು ಈ ಬೆಟ್ಟವನ್ನು ನಮಸ್ಕರಿಸಿ ಎಲ್ಲಾ ಶ್ರೇಯಸ್ಸು ಉಂಟಾಗುತ್ತದೆ.

ಮಹಿತ ಮಹಿತ ಮಹಿತ ಮಹಿತ
ಸದಯ ಸದಯ ಸದಯ ಸದಯ
ಹ್ರಸ್ವ ತ್ರಿಸ್ವರ ರೂಪ ಚಿತ್ರಾಲಂಕಾರಸ್ಸ ಸಂ ಸೃಷ್ಟಿಃ
(ಅಷ್ಟ ವಿಧ ಚಿತ್ರಾಲಂಕಾರ)

ರತ್ನೋಪ ಸಂಘಟಿತ ಶೃಂಗ ಫಣಾ ಸಹಸ್ರಃ ಸ್ವಾರೋದಿತ ಸ್ಪಟಿಕ ರಶ್ಮಿ ವಿಶುದ್ಧಕಾಯಃ।
ನಿತ್ಯಂ ವಹನ್ ನಿಜ ಬಲೇನ ಮಹೀ ಮಹೀನಃ ಪುಷ್ಯತ್ಯಸೌ
ಮಧುರಿಪೋರಪಿ ಭೋಗಯೋಗಮ್ ॥೪೦॥

ರತ್ನಗಳು ಸೇರಿ ಬೆಳಗುವ ಶಿಖರಗಳನ್ನು ಸಾವಿರ ಸಂಖ್ಯೆಯಲ್ಲಿ ಹೊಂದಿರುವ ವಿಶೇಷ ವಾದ ಸ್ಪಟಿಕ ಮಣಿಗಳಿಂದ ಕೂಡಿರುವ ಈ ಬೆಟ್ಟವು ಭಗವಂತನಿಗೆ ಭೋಗ ಸ್ಥಾನವಾಗಿದೆ. ಭಗವಾನನು ತಾನಾಗಿಯೇ ಇಷ್ಟಪಟ್ಟಿರುವ ಬೆಟ್ಟವಾಗಿದೆ ಇದು.

ಭಗವಂತನಿಗೂ ಇಷ್ಟವಾದ ಬೆಟ್ಟ ಇದಾಗಿದೆ. ಆದ್ದರಿಂದ ಇದನ್ನೇ ಪೂಜಿಸೋಣ. ಕ್ಷೀರ ಸಾಗರದಂತೆ, ವೈಕುಂಠದಂತೆ ಭಗವಂತನು ಇಲ್ಲಿ ಇಷ್ಟಪಟ್ಟು ವಾಸಿಸುತ್ತಾನೆ.

ಮರುದ್ಗಣ ಸಮಾಶ್ರಿತೋ ಮಘವರತ್ನ ನೀಲದ್ಯುತಿ
ವಿಭಾತಿ ವನಮಾಲಯಾ ವಿತತ ನಿತ್ಯತುಂಗಾಕೃತಿಃ।
ಕನತ್ಯಭಿಗತಃ ಶ್ರಿಯಾ ಕನಕರಶ್ಮಿ ಪೀತಾಂಬರಃ ಕರೋತಿ ವಿಧೃತಿಂ ಭುವಃ
ಕಥಮಸೌ ನ ವಿಶ್ವಂಭರಃ ॥೪೧॥

ದೇವತೆಗಳಿಂದ ಆಶ್ರಯಿಸಲ್ಪಟ್ಟುದ್ದೂ, ಇಂದ್ರನೀಲ ರತ್ನಗಳ ಕಾಂತಿಯನ್ನು ಹೊಂದಿರುವುದೂ, ಶ್ರೇಷ್ಠವಾದ ವನಮಾಲೆಯಿಂದ ಶೋಭಿಸುವುದೂ, ಶ್ರೀಯಿಂದ ಆಶ್ರಯಿಸಲ್ಪಟ್ಟುದ್ದೂ (ಐಶ್ವರ್ಯದಿಂದ ಕೂಡಿದುದೂ) ಪೀತಾಂಬರದಂತೆ ತೋರುವುದೂ, ಮೇಲಾಗಿ ಭೂಮಿ ಧರಿಸಲ್ಪಟ್ಟುದ್ದೂ ಆದ ಈ ಬೆಟ್ಟವು ವಿಶ್ವಂಭರನೆನಿಸಿಕೊಳ್ಳುವ ಭಗವಂತನಿಗೆ ಸಮಾನವಾದುದು.

ಭಗವಂತನು ಮತ್ತು ಈ ಬೆಟ್ಟವು ಎರಡೂ ಒಂದೇ. ಭಗವಂತನಿಗೆ ನಾವು ಹೇಳುವ ಎಲ್ಲಾ ಗುಣಗಳೂ ಈ ಬೆಟ್ಟದಲ್ಲಿದೆ. ವಿಷ್ಣುವಿಗೆ ವಿಶ್ವಂಭರನೆಂದು ಹೆಸರು. ಬೆಟ್ಟವು ಎಲ್ಲರನ್ನೂ ಭರಿಸುವುದರಿಂದ ಇದನ್ನು 'ವಿಶ್ವಂಭರ' ಎಂದು ಕರೆದು ಇದನ್ನು ಪೂಜಿಸೋಣ. ಶ್ಯಾಮಲ ಪದ್ಧತಿಯಂತೆ ತೋರುತ್ತಾ ಇಂದ್ರನೀಲ ಮಣಿಯ ಕಾಂತಿಯನ್ನು ಈ ಬೆಟ್ಟವು ಹೊಂದಿದೆ. (ಶ್ಲೇಷ ಸಂಕೀರ್ಣ ಅನುಮಾನಾಲಂಕಾರ)

ಮುಹುರವ ಧೀರೀತೋಽಪಿ ಭಜತೀಹ ಯುವಾ ಗಣಯನ್
ಹಿತಮತಿ ಭೂರಿ ತಾನ ವಸುಧೇ ವನಿತಾಂ ತರಸಾ ।
ಸಪದಿ ವಿಹಾಯ ಮಾನಮಿಯ ಮೃಚ್ಛತಿ ತಂ ಪ್ರತಿಸಂ
ಹಿತಮತಿ ಭೂರಿತಾ ನ ವಸುಧೇವ ನಿತಾಂತ ರಸಾ ॥೪೨॥

ಚಿನ್ನದ ಗಣಿ ಇರುವ ಈ ಬೆಟ್ಟದಲ್ಲಿ ಎಳೆಯದಾದ ವಯಸ್ಸಿನ ಪ್ರೇಮಿಗಳಿಂದ ಅನೇಕ ಕಾಲ ತಿರಸ್ಕರಿಸಲ್ಪಟ್ಟಿರುವಂತವರು ಮತ್ತೆ ಅವಳನ್ನು ಹೊಂದಬೇಕೆಂಬ ಆಸೆಯುಳ್ಳವರಾಗಿರುತ್ತಾರೆ. ಅವಳು ಅವನ ವಿಷಯದಲ್ಲಿ ಆಲೋಚನೆಗಳನ್ನು ಮಾಡುತ್ತಾ, ಹಿಂದೆ ಹೊಂದಿದ್ದ ಅಹಂಕಾರವನ್ನು ಒಡನೆ ಬಿಟ್ಟು, ಮತ್ತೆ ಅವನನ್ನು ಆಶಿಸಿ ಭೋಗ್ಯವಾಗಿ ಸೇರುತ್ತಾಳೆ. ಈ ರೀತಿ ವಿರಹಿಗಳನ್ನು ಸೇರಿಸುವ ಬೆಟ್ಟವಾಗಿದೆ ಇದು.

ಈ ಬೆಟ್ಟವು ದೂರವಾದ ಪ್ರೇಮಿಗಳನ್ನು ಮತ್ತೆ ಒಂದಾಗಿಸುತ್ತದೆ. ಈ ಬೆಟ್ಟದಲ್ಲಿ ವಾಸವಾಗಿರುವ ವಿರಹಿಗಳು ಶೀಘ್ರದಲ್ಲೇ ಒಂದಾಗಿ ಅಪರಿಮಿತ ಸುಖವನ್ನು ಅನುಭವಿಸುತ್ತಾರೆ. ಈ ಬೆಟ್ಟದ ವಾತಾವರಣವೇ ಕಾಮೋದ್ದೀಪನವನ್ನು ಉಂಟುಮಾಡತಕ್ಕದ್ದಾಗಿದೆ. ಪ್ರೇಮಿಗಳು ಇಲ್ಲಿ ಬಹುಕಾಲ ವಿರಹ ದುಃಖವನ್ನನುಭವಿಸುವುದಿಲ್ಲ. ಆದ್ದರಿಂದ ಎಲ್ಲರನ್ನೂ ಒಂದಾಗಿಸುವ ಈ ಪರ್ವತವನ್ನೇ ಪೂಜಿಸೋಣ. ವಿರಾಗಿಗಳನ್ನು, ಸಂಸಾರದಲ್ಲಿ ಆಸಕ್ತಿ ಹೊಂದುವಂತೆ ಮಾಡುವ ಬೆಟ್ಟವು ಇದಾಗಿದೆ.

ಇಹ ಮರುತೋ ವಹಂತಿ ಸುರಸಿಂಧು ಸುಗಂಧ ಸರಿದ್ವಿಕಸಿತ
ಹೇಮ ಕೋಕನದ ಸೌರಭ ಸಾರಭೃತಃ।
ಮಧುಕರ ಮೌಲಿದಗ್ನ ಮದದಂತುರ ದಂತಿ ಘಟಾಕರಟ
ಕಟಾಹ ವಾಹಿ ಘನ ಶೀಕರ ಶೀ ಭರಿತಾಃ ॥೪೩॥

ಆಕಾಶ ಗಂಗೆಗೆ ಅರಳುವ ಚಿನ್ನದ ಬಣ್ಣದ ಹೂಗಳು ಮನಸ್ಸನ್ನು ನಿರ್ಮಲವಾಗಿಟ್ಟು ಕೊಂಡು ದುಂಬಿಗಳ ತಲೆ ತಿರುಗಿ ಹೋಗುವಂಥ ಮದವೇರಿದ ಆನೆಗಳ ಮದ ಜಲದ ಮೇಲೆ ಬೀಸುವ ಗಾಳಿಯು ಸುಖಕರವಾಗಿರುವುದು. ಈ ಬೆಟ್ಟದಲ್ಲಿ.

ಈ ಬೆಟ್ಟದ ಮೇಲೆ ಬೀಸುವ ಗಾಳಿ ಅತ್ಯಂತ ಹಿತಕರವಾಗಿದೆ. ಅದು ಎಂತಹ ಗಾಳಿ ಯೆಂದರೆ, ಮದವೇರಿದ ಆನೆಗಳ ಕುಂಭ ಸ್ಥಳದಿಂದ ಸುರಿಯುವ ಮದ ಜಲದ ಮೇಲೆ ಬೀಸುವ ಗಾಳಿಯಾಗಿದ್ದು ಸುವಾಸನೆಯಿಂದ ಕೂಡಿದ್ದಾಗಿದೆ.

ಮನಃ ಪ್ರಿಯಮಿಹ ಪ್ರಭೋ ಮಧು ರಸಾದರಂ ಸಾದರಂ
ವಿಧಾಸ್ತ್ವ ಹವಿರಪ್ರಯನ್ ವ್ರತ ಶುಭಾವನಾಂ ಭಾವನಾಂ ।
ಕುರುಷ್ವ ಚ ಗುರುಷ್ವಘ ಕ್ಷಪಣ ದಕ್ಷಿಣಾಂ ದಕ್ಷಿಣಾಂ
ಪ್ರಯಚ್ಛತಿ ತವೇಪ್ಸಿತಂ ಪ್ರಣಯ ಪರ್ವತಃ ಪರ್ವತಃ ॥೪೪॥

ಪ್ರಭುವೇ ! ಜೇನಿನ ಸಿಹಿಗೆ ಮೇಲಾಗಿ ಮನಸ್ಸಿಗೆ ಹಿಡಿಸುವ ಹವಿಸ್ಸನ್ನು ಪ್ರೀತಿ ಯಿಂದ ಅರ್ಪಣ ಮಾಡಿಕೊಂಡು ವಿರಕ್ತಿಯಿಂದ ಬರುವ ಶುಭವನ್ನು ಕಾಪಾಡುವ ಭಕ್ತಿಯಲ್ಲದೆ ಧ್ಯಾನವನ್ನೂ ಮಾಡಬೇಕು. ಉಪದೇಶಿಸುವ ಪುರೋಹಿತರುಗಳಿಗೆ ಪಾಪಗಳನ್ನು ಹೋಗಲಾಡಿಸುವ ವಿಪುಲ ದಕ್ಷಿಣೆಯನ್ನು ನೀಡಬೇಕು. ಈ ಬೆಟ್ಟವು ಆ ಫಲಗಳೆಲ್ಲವನ್ನೂ ನೀಡುತ್ತದೆ.

ಈ ಬೆಟ್ಟವು ಭಕ್ತಿ ಜ್ಞಾನಗಳನ್ನು ವೃದ್ಧಿಗೊಳಿಸುತ್ತದೆ. ಶುದ್ಧವಾದ ಮನಸ್ಸಿನಿಂದ ಧ್ಯಾನ ಮಾಡಲು ಎಲ್ಲ ಅನುಕೂಲಗಳನ್ನೂ ಈ ಬೆಟ್ಟವು ನೀಡುತ್ತದೆ.

(ಭಾವನಾ ಎಂದರೆ ಭಕ್ತಿರೂಪ ಧ್ಯಾನ ಎಂದರ್ಥ.)

ಮೊದಲ ಸಾಲಿನಲ್ಲಿ ಸಾದರಂ

ಎರಡನೆಯ ಸಾಲಿನಲ್ಲಿ ಭಾವನಾಂ

ಮೂರನೆಯ ಸಾಲಿನಲ್ಲಿ ದಕ್ಷಿಣಾಂ

ನಾಲ್ಕನೇಯ ಸಾಲಿನಲ್ಲಿ ಪರ್ವತಃ ಎಂಬ ಪದಗಳು ಎರಡೆರಡು ಬಾರಿ ಬಂದಿವೆ.

ಗಿರಿಭಜನೋದಿತ ಪ್ರಿಯ ವಿಕಾಸಮಯೇ ಸಮಯೇ
ಜನಿತ ನಭಃ ಪ್ರಚಾರ ಜಲಪತ್ರಿದಶೈ ಸ್ತ್ರಿದಶೈಃ ।
ಸಹ ಯದಿ ನಃ ಸಮೇತಿ ಹರಿರ ಪ್ರತಿಘ ಪ್ರತಿಘಃ
ಪ್ರತಿಹ ತಿಮೇತು ದುಷ್ಟಿ ವಧ ದೋಹಲಿನಾ ಹಲಿನಾ ॥೪೫॥

ನಾವು ಬೆಟ್ಟಕ್ಕೆ ಪೂಜೆ ಮಾಡುವುದರಿಂದ ನಮಗೆ ಸ್ನೇಹಿತರಾಗಿರುವವರೆಲ್ಲಾ ಸಂತೋಷವಾಗಿರುವ ಸಮಯದಲ್ಲಿ ಇಂದ್ರನು ಇತರ ದೇವತೆಗಳೊಡನೆ ಸೇರಿ, ವಿಘ್ನಗಳನ್ನು ಉಂಟು ಮಾಡಲು ಪ್ರಯತ್ನಿಸಿದಾಗ ನಾವು ಅಧೈರ್ಯಪಡದೆ ಇದ್ದಲ್ಲಿ, ನಮ್ಮನ್ನೇನೂ ಮಾಡಲಾರನು. (ಬಲದೇವನಿರುವಾಗ ನಮ್ಮನ್ನು ಯಾರೂ ಏನೂ ಮಾಡಲಾರರು).

ಇಲ್ಲೂ ಸಹ ಮೊದಲನೇಯ ಸಾಲಿನಲ್ಲಿ – ಸಮಯೇ ಸಮಯೇ
ಎರಡನೆಯ ಸಾಲಿನಲ್ಲಿ – ತ್ರಿದಶೈಃ ತ್ರಿದಶೈಃ
ಮೂರನೇಯ ಸಾಲಿನಲ್ಲಿ – ಪ್ರತಿಘಃ ಪ್ರತಿಘಃ
ಎರಡನೆಯ ಸಾಲಿನಲ್ಲಿ – ಹಲಿನಾ ಹಲಿನಾ (ದ್ವಿರುಕ್ತಿ ಪ್ರಯೋಗ.)
(ಹಲಿನಾ ಎಂದರೆ ಬಲದೇವ)

ಪ್ರತ್ಯಕ್ಷಂ ಗೋತ್ರಮಾಸನ್ನಂ ಕಿಮನಾದೃತ್ಯ ಗೋಧನೈಃ।
ಅದೃಶ್ಯೋ ಗೋತ್ರಭಿತ್ ಕಶ್ಚಿತ್ ಗತಃ ಸ್ವರ್ಗಂ ಗವೇಶ್ಯತೇ॥ ॥೪೬॥

ಹಸುಗಳನ್ನೇ ಧನವಾಗಿ ಉಳ್ಳ ನಾವು ನಮಗೆ ಪ್ರತ್ಯಕ್ಷವಾಗಿಯೂ, ಸಮೀಪದ ಸೋತ್ರವಾಗಿರುವ ಈ ಬೆಟ್ಟವನ್ನು ಬಿಟ್ಟು ಕಾಣದೆ ಇರುವ ದೂರದ ಸ್ವರ್ಗದಲ್ಲಿ ವಾಸಿಸುವವರಾದ, ಗೋತ್ರದ ರೀತಿಯೂ ವಿರೋಧಿಯಾದ ಇಂದ್ರನನ್ನು ಏಕೆ ಪೂಜಿಸಬೇಕು?

ಇಂದ್ರನು ನಮಗೆ ಕುಲದೈವವೇನಲ್ಲ, ನಮ್ಮ ಗೋತ್ರಕ್ಕೆ ಸೇರಿದವನೂ ಅಲ್ಲ. ಆದ್ದರಿಂದ ಅವನನ್ನು ಪೂಜಿಸುವುದರಿಂದ ನಮಗೇನು ಲಾಭ? ಈ ಬೆಟ್ಟವಾದರೋ "ಗೋವರ್ಧನ" ಎಂಬ ಹೆಸರನ್ನು ಪಡೆದಿರುವುದರಿಂದ, ನಾವೆಲ್ಲರೂ ಗೋವುಗಳನ್ನೇ ಸಂಪತ್ತನ್ನಾಗಿ ಉಳ್ಳವರಾದ್ದರಿಂದ, ಈ ಬೆಟ್ಟದ ಪೂಜೆಯೇ ನಮಗೆ ವಿಹಿತವಾದದ್ದು. ಆದ್ದರಿಂದ ಇಂದ್ರನ ಪೂಜೆಯನ್ನು ಕೈಬಿಟ್ಟು ಗೋವರ್ಧನ ಗಿರಿಯನ್ನು ಪೂಜಿಸೋಣ. ನಮ್ಮ ಗೋತ್ರಕ್ಕೆ ಸೇರಿದ ಬೆಟ್ಟ ಇದು.

ಆಹಾರ್ಯೋ ವಿವಿಧೈರ್ಭೋಗ್ಯೈ ರಾಕರ್ಷನ್ ವಿಬುಧಾನಪಿ ।
ಅಪರಿಚ್ಛಿನ್ನಮೂಲೋಽಸೌ ಸಸಾರಃ ಸರ್ವ ದುಃಖಕೃತ್ ॥೪೭॥

ಅನೇಕ ವಿಧವಾದ ಭೋಗ್ಯ ವಸ್ತುಗಳನ್ನು ಕೊಂಡು ದೇವತೆಗಳನ್ನು ವಶಪಡಿಸುವ ಈ ಬೆಟ್ಟವು ಸಾರಂಗಗಳನ್ನೆಲ್ಲಾ ಹೊಂದಿದೆ. ಅವುಗಳ ಮೂಲಭಾಗವನ್ನುಳ್ಳದ್ದಾಗಿದೆ. ಎಲ್ಲಾ ದುಃಖಗಳನ್ನು ಹೋಗಲಾಡಿಸುತ್ತದೆ. ಈ ಬೆಟ್ಟವು ದುಃಖದ ಮೂಲವನ್ನೇ ನಿರ್ಮೂಲ ಮಾಡುತ್ತದೆ.

ಮತ್ತೆ ಮತ್ತೆ ಬೆಟ್ಟದ ಹಿರಿಮೆಯನ್ನೇ ಕೊಂಡಾಡಲಾಗಿದೆ. 'ಸಾರಂಗ' ಎಂಬ ಪ್ರಾಣಿಯು ಬಹಳ ಶ್ರೇಷ್ಠವಾದ ಹಾಗೂ ಅಪರೂಪದ ಪ್ರಾಣಿ. ಈ ಬೆಟ್ಟದಲ್ಲಿ ಅವು ಬಹು ಸಂಖ್ಯೆಯಲ್ಲಿ ವಾಸಿಸುತ್ತವೆ. ಈ ಬೆಟ್ಟವು ಸರ್ವ ದುಃಖಹರವಾಗಿದೆ.

ಈ ಶ್ಲೋಕ 'ಬಿಂದುಮತಿ' ಶಬ್ದಾಲಂಕಾರದಲ್ಲಿ ರಚಿತವಾಗಿದೆ. (ಸಸಾರಕ್ಕೂ ಸಂಸಾರಕ್ಕೂ ಬಿಂದು ಮಾತ್ರ ವ್ಯತ್ಯಾಸ ? ಸಂಸಾರದ ದುಃಖವನ್ನು ಸಾರ ಸಹಿತವಾಗಿ ನೀಗುತ್ತದೆ ಈ ಬೆಟ್ಟ ಎಂಬರ್ಥವು ಈ ಶ್ಲೋಕದಲ್ಲಿದೆ).

ನಂದಗೋಪ ಪ್ರಭೋ ಧರ್ಮೈರ್ವ್ರಜ ವೃದ್ಧಾರ್ಯ ಸದ್ಗತಿಂ।
ಭಜ ತಾಮೇವ ಬುದ್ವಾದ್ರಿಂ ತನುತ್ರಾಣೇ ರತಿಂ ಗವಾಮ್ ॥೪೮॥

ಗೋಪ ಪ್ರಭುವೇ! ಧರ್ಮಗಳನ್ನು ಮಾಡಿ ಆನಂದವಾಗಿರಿ. ಜ್ಞಾನವೂ, ಅನುಷ್ಠಾನವೂ ಉಳ್ಳವರೇ ! ಒಳ್ಳೆಯ ಕಾರ್ಯವನ್ನು ಮಾಡಬೇಕು. ಬೆಟ್ಟವನ್ನು ಸ್ನೇಹಿತನಂತೆ ಭಾವಿಸಿ ಆಶ್ರಯಿಸೋಣ. ಗೋವುಗಳನ್ನು ಕಾಪಾಡುವುದರಲ್ಲಿ ಆಸಕ್ತಿ ವಹಿಸೋಣ.

ಶ್ರೀಕೃಷ್ಣನು ಹಿರಿಯರನ್ನು ಮತ್ತೆ ಪ್ರಾರ್ಥಿಸುತ್ತಾನೆ. ಸತ್ಕಾರ್ಯಗಳನ್ನು ಮಾಡುವುದರಲ್ಲಿ ಆಸಕ್ತಿ ವಹಿಸಿ, ಈ ಬೆಟ್ಟವನ್ನು ಪೂಜಿಸೋಣ.

'ಪ್ರಹೇಳಿಕಾ' ಎಂಬ ಹೆಸರಿನಲ್ಲಿ ಈ ಶ್ಲೋಕ ರಚಿತವಾಗಿದೆ.

''ಕ್ರಿಯಾ ಚತುಷ್ಟಯ ವಂಚಿಕಾ ಪ್ರಹೇಳಿಕಾ, ದುರ್ವಿಜ್ಞಾನಾರ್ಥ ಪ್ರಹೇಳಿಕಾ'' 'ಪ್ರಹೇಳಿಕಾ' ಎಂದರೆ ಗೂಢಾರ್ಥ ವುಳ್ಳ ಗ್ರಂಥ.

ನಾನಾ ಫಲ ವನಾಲೀಕೆ ನಾಲಿಕೇದ್ಧಾ ಮಿ ತೋದಕೆ।
ತೋದಕೆ ಚ ಕ್ಷುಧಾಮತ್ರ ಧಾಮ ತ್ರಸ್ತಹಿತಂ ವಿದುಃ ॥ ॥೪೯॥

ಅನೇಕ ವಿಧವಾಗಿ ಫಲಗಳು ತುಂಬಿರುವ ವರಸೆ ವರಸೆಯಾಗಿ ಕಾಡುಗಳನ್ನು ಹೊಂದಿರುವ ತಾವರೆಗಳಿಂದ ತುಂಬಿರುವ ಸರಸ್ಸಗಳನ್ನು ಹೊಂದಿರುವ ಹಸಿವನ್ನು ಹೋಗಲಾಡಿಸುವ ಈ ಬೆಟ್ಟದಲ್ಲಿ ಸ್ಥಳವನ್ನು ಹೊಂದಲು ಯೋಗ್ಯತೆಯುಳ್ಳವರಿಗೆ ಮಾತ್ರ ಸಾಧ್ಯ.

ಈ ಬೆಟ್ಟದಲ್ಲಿ ಎಲ್ಲರೂ ವಾಸಿಸಲು ಸಾಧ್ಯವಿಲ್ಲ. ಕೇವಲ ಯೋಗ್ಯತೆಯಿರುವವರು ಮಾತ್ರ ಇರಬಹುದು. ಏಕೆಂದರೆ ಸರ್ವೋತ್ಕೃಷ್ಟವಾದ ಕಾಡುಗಳನ್ನು ದಿವ್ಯವಾದ ಸರಸ್ಸುಗಳನ್ನು ಈ ಬೆಟ್ಟವು ಹೊಂದಿದೆ. ದ್ರಾಕ್ಷಿ, ಖರ್ಜೂರ ಮುಂತಾದ ಅನೇಕ ಸ್ವಾದುವಾದ ಫಲಗಳನ್ನು ಬಿಡುವ ಮರಗಳನ್ನು ಹೊಂದಿದೆ ಈ ಬೆಟ್ಟ. ಇಲ್ಲಿ ವಾಸಿಸುವವರು ಕ್ಷುದ್ಬಾಧೆಯಿಂದ ಬಳಲುವುದಿಲ್ಲ.

ಸಹಸಾ ಸಹ ಸಾರ್ಥೈರ್ಮಾ ಸರಸೇತರ ಸೇವನಮ್।
ತನು ತಾ ತ ನುತಾ ದ್ವಜ್ರೀ ನಗತೋ ನ ಗತೋ ಅರ್ಚ್ಯತಾಮ್ ॥೫೦॥

ಹುಡುಕಾಡಿ ನೋಡದೆಯೇ ಬಂಧುಗಳೊಡನೆ, ಇರುವ ಎಲ್ಲಾ ಫಲಗಳನ್ನು ಹೊಂದಿರಿ. ಬೇರಾರರನ್ನೂ ಆಶ್ರಯಿಸಬೇಡಿ. ಏಕೆಂದರೆ, ವಜ್ರಾಯುಧವನ್ನು ಹಿಡಿದ ಇಂದ್ರನು ಹೊಗಳಲ್ಪಡುವ ಈ ಬೆಟ್ಟವನ್ನು ಬಿಟ್ಟು ಬೇರಾವುದನ್ನೂ ಆರಾಧಿಸಲು ಯೋಗ್ಯವಾದುದಲ್ಲ.

ಬೇರೆ ಯಾರನ್ನೂ ನಮ್ಮ ಆಶೋತ್ತರಗಳನ್ನು ಈಡೇರಿಸಲು ಆಶ್ರಯಿಸುವ ಅಗತ್ಯವಿಲ್ಲ. ಈ ಬೆಟ್ಟವೇ ಎಲ್ಲವನ್ನೂ ನೀಡುತ್ತದೆ.

ಮೊದಲನೇಯ ಸಾಲಿನಲ್ಲಿ – ಸಹಸಾ ಎರಡು ಬಾರಿ ಬಂದಿದೆ.

ಎರಡನೆಯ ಸಾಲಿನಲ್ಲಿ – ತನುತಾ ಎರಡು ಬಾರಿ ಪ್ರಯೋಗವಾಗಿದೆ.

ಜುಷತಾಮಿಹ ಧೀಃ ಸೂರ್ಯ ಸಮಾಹಿ ತವ ಸುಂದರೀಮ್।
ರಕ್ಷಾರ್ಥಮಿಹ ಯಕ್ಷೇಣ ಸಮಾಹಿತ ವಸುಂ ದರೀಮ್॥ ॥೫೧॥

ಯಕ್ಷನಿಂದ ಅಳಿಯದೆ ಕಾಪಾಡಿಕೊಳ್ಳಲ್ಪಟ್ಟಿರುವ ಈ ಸುಂದರವಾದ ಬೆಟ್ಟದಲ್ಲಿಯೇ ನೀವು ನಿಮ್ಮ ಬುದ್ಧಿಯನ್ನಿಡಬೇಕು. ಸೂರ್ಯನಿಗೆ ಸಮನಾದ ಪ್ರಕಾಶವುಳ್ಳದ್ದಾಗಿದೆ ನಿಮ್ಮಗಳ ಬುದ್ಧಿ.

ನೀವೆಲ್ಲರೂ ಬುದ್ಧಿವಂತರಾಗಿದ್ದೀರಿ. ನಿಮ್ಮ ಬುದ್ಧಿಶಕ್ತಿಯು ಸೂರ್ಯಪ್ರಕಾಶಕ್ಕೆ ಸಮಾನವಾದ್ದದ್ದಾಗಿದೆ. ಆದ್ದರಿಂದ ಈ ಸುಂದರವಾದ ಬೆಟ್ಟದಲ್ಲೇ ನೀವು ನಿಮ್ಮ ಬುದ್ಧಿಯನ್ನಿಟ್ಟು ಇದನ್ನೇ ಪೂಜಿಸಿರಿ.

ಎರಡು ಸಾಲುಗಳಲ್ಲಿಯೂ "ಸಮಾಹಿತ ಸುಂದರೀಂ" ಎಂಬ ವಾಕ್ಯ ಬಂದಿದೆ. ಈ ಬೆಟ್ಟದ ಗುಪ್ತ ಸ್ಥಳಗಳಲ್ಲಿ ನಿಧಿಯೂ ಇದೆ. ಸಮಾಹಿತ ವಸುಂ ಮತ್ತು ಧರಿಂ ಎಂದು ವಿಭಾಗಿಸಿದರೆ ಈ ಅರ್ಥವು ಲಭಿಸುತ್ತದೆ.

ಸಭಾ ಜನಂ ವದಾಮ್ಯೇತತ್ ಗವ್ಯೈಃ ಸರಸ ಭಾಜನಮ್।
ಸಭಾ ಜನಂ ಗಿರೇರರ್ಥ್ಯಂ ಸ್ವವೃತ್ಯುಲ್ಲಾಸ ಭಾಜನಮ್॥ ॥೫೨॥

ಸಭೆಯಲ್ಲಿರುವ ಮಹಾ ಜನಗಳಿಗೆ ನನ್ನ ಬಿನ್ನಹ. ಹಾಲು, ಮೊಸರು, ಬೆಣ್ಣೆ– ಇತ್ಯಾದಿ ರಸವಸ್ತುಗಳು ತುಂಬಿರುವ ಪಾತ್ರೆಗಳನ್ನು ಕೊಂಡು ಬೆಟ್ಟದಲ್ಲಿ ಪೂಜೆಯನ್ನು ಮಾಡುವುದೇ ನಮಗೆ ಬೇಕಾಗಿರುವುದು. ನಮ್ಮ ತೋಳುಗಳ ಅಭಿವೃದ್ಧಿಗೆ ಇದು ಸಹಾಯಕವು.

ಈ ಗೋವರ್ಧನ ಗಿರಿಗೆ ಎಲ್ಲಾ ಉತ್ತಮ ಪರಿಕರಗಳನ್ನು ತೆಗೆದುಕೊಂಡು ಹೋಗಿ ನೈವೇದ್ಯ ಸಲ್ಲಿಸಿ ಪೂಜಿಸೋಣ.

ಮೊದಲನೇಯ ಸಾಲಿನಲ್ಲಿ – 'ಸಭಾಜನ' ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿಯೂ.

ಅದೇ ರೀತಿ ಎರಡನೆಯ ಸಾಲಿನಲ್ಲಿಯೂ ಸಹ – 'ಸಭಾಜನಂ' ಎರಡು ಬಾರಿ ಒಟ್ಟು ಶ್ಲೋಕದಲ್ಲಿ ನಾಲ್ಕು ಬಾರಿ ಬಂದಿದೆ. ಪ್ರತಿಯೊಂದು ಪ್ರಯೋಗಕ್ಕೂ ಬೇರೆ ಬೇರೆ ಅರ್ಥವುಂಟು.

ಮೊದಲನೆಯದಕ್ಕೆ ಸಭೆಯಲ್ಲಿರುವ ಜನರು

ಎರಡನೆಯದಕ್ಕೆ ರಸಗಳಿಂದ ತುಂಬಿರುವ ಭಾಂಡಗಳು

ಮೂರನೆಯದಕ್ಕೆ ಹೊಂದುವುದು.

ನಾಲ್ಕನೆಯದಕ್ಕೆ 'ಪ್ರೀಣನಂ' ಪ್ರೀತಿಗೊಳ್ಳುವುದು.

ಭವತಾ ಭವ ತಾ ಪಘ್ನೇ ಭಾವಿತೆ ಭಾವಿ ತೇಜ ಸಾ ।
ಸು ತರಾ ಸುತರಾ ಮಸ್ಮಿನ್ ಸುರಭೀ ಸ್ಸುರಭಿಸ್ವರ ॥ ॥೫೩॥

ಗೋವುಗಳ ಅರಸನೆ ! ನೀವು ಸಂಸಾರ ತಾಪಗಳನ್ನೆಲ್ಲಾ ಹೋಗಲಾಡಿಸುವ ಈ ಬೆಟ್ಟವನ್ನು ಆರಾಧಿಸಿದಲ್ಲಿ ಅದರಿಂದ ಬರುವ ಪರಾಕ್ರಮದಿಂದ ದೇವತೆಗಳ ಮೂಲಕ ದೊರಕುವ ಸೌಭಾಗ್ಯಗಳು ಚೆನ್ನಾಗಿಯೇ ದೊರಕುತ್ತದೆ.

ದೇವತೆಗಳು ನಮಗೆ ಏನು ಸೌಭಾಗ್ಯಗಳನ್ನು ನೀಡುತ್ತಾರೋ ಅವೆಲ್ಲವನ್ನೂ ಈ ಬೆಟ್ಟವೇ ನೀಡುತ್ತದೆ. ಆದ್ದರಿಂದ ಇದನ್ನೇ ಆರಾಧಿಸೋಣ. ನಮ್ಮ ತಾಪವೆಲ್ಲವೂ ನೀಗುತ್ತದೆ.

ಮೊದಲನೇಯ ಸಾಲಿನಲ್ಲಿ – ಭವತಾ ಭವತಾ – ಭಾವಿತೇ ಭಾವಿತೇ' ಎರಡೆರಡು ಬಾರಿ

ಅದೇ ರೀತಿ ಎರಡನೆಯ ಸಾಲಿನಲ್ಲಿಯೂ ಸುತರಾ ಸುತರಾ – ಸುರಭಿ ಸುರಭಿ. 'ಸುರಭಿ' ಎಂದರೆ ಶ್ರೇಷ್ಠವಾದ ಹಸುಗಳು. ಭವತಾ–ನಿಮ್ಮಗಳ, ಭವತಾಫಘ್ನ–ಸಂಸಾರ ತಾಪಗಳನ್ನು.

ಬಹುವಿದ್ಭ್ಯಃ ಸಮಗ್ರಾಹಿ ಸಮಗ್ರಾ ಹಿ ಮತಿಸ್ತ್ವಯಾ ।
ಅತೋಽನ್ಯ ಜನ ಸಂದಿಗ್ಧೇ ನ ಸಂದಿಗ್ಧೇ ಹಿತಾ ಹಿತೆ ॥ ॥೫೪॥

ಎಲ್ಲಾ ಶಾಸ್ತ್ರಗಳನ್ನು ತಿಳಿದವರ ಮೂಲಕ ನೀವು ಪುಣ್ಯವಾದ ಜ್ಞಾನವನ್ನು ಸಂಪಾದಿಸಿದ್ದೀರಿ. ಆದ್ದರಿಂದ ಬೇರೆ ಜನಗಳು ಹಿತಾಹಿತಗಳನ್ನು ಸಂದೇಹಿಸುವ ಹಾಗೆ ನಿಮ್ಮ ಬುದ್ಧಿಯು ಸಂದೇಹಗಳನ್ನು ಹೊಂದದು.

ಹಿರಿಯರೆ, ನೀವು ಶಾಸ್ತ್ರಜ್ಞಾನವನ್ನು ಚೆನ್ನಾಗಿ ಅರಿತಿದ್ದೀರಿ. ಪಂಡಿತರಿಂದ ಜ್ಞಾನವನ್ನು ತಿಳಿದು ಅದರಂತೆ ನಡೆಯುತ್ತಿದ್ದೀರಿ. ನಿಮಗೆ ಕೃತ್ಯಾಕೃತ್ಯಗಳ ಬಗ್ಗೆ ಯಾವ ಸಂದೇಹವೂ ಇಲ್ಲ. ಆದ್ದರಿಂದ ಮನಸ್ಸಿನಲ್ಲಿ ಯಾವ ಸಂದೇಹಗಳನ್ನು ಇಟ್ಟುಕೊಳ್ಳದೇ ಈ ಬೆಟ್ಟದ ಪೂಜೆಯನ್ನು ಆರಂಭಿಸಿ.

ಗೋವರ್ಧನ ಪ್ರಕಾಶಿನ್ಯಾ ಗೋವರ್ಧನ ಸಮಾಖ್ಯಯಾ ।
ಸಮಕ್ಷ್ಯೇಽಪಿ ಗಿರೇರಸ್ಯ ಸಮಕ್ಷೇಪಿ ಕ್ಷಮಾ ಸ್ತುತಿಃ ॥೫೫॥

ಗೋವುಗಳನ್ನು ಬೆಳೆಸುವ ಕೆಲಸವನ್ನು ಮಾಡುವ ಗೋವರ್ಧನವೆಂಬ ಬೆಟ್ಟದ ಎದುರಿನಲ್ಲಿಯೂ, ಮರೆಯಲ್ಲಿಯೂ ಮಾಡುವ ಸ್ತೋತ್ರಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಈ ಗೋವರ್ಧನ ಗಿರಿಯ ಮಹಿಮೆಯನ್ನು ಎಷ್ಟು ಹೇಳಿದರೂ ಸಾಲದು. ಸಂಕ್ಷೇಪವಾಗಿ ಮಾತ್ರ ಹೇಳುತ್ತಿದ್ದೇನೆ. ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಈ ಬೆಟ್ಟದ ಮಹಿಮೆಯನ್ನು ಕೊಂಡಾಡಿದರೂ ಅದು ಕಡಿಮೆಯೇ.

ಗೋವರ್ಧನ ಎಂಬುದು ಮೊದಲನೇಯ ಸಾಲಿನಲ್ಲಿ ಎರಡು ಬಾರಿ ಬಂದಿದೆ.
ಸಮಕ್ಷೇಪಿ ಎಂಬುದು ಎರಡನೆಯ ಸಾಲಿನಲ್ಲಿ ಎರಡು ಬಾರಿ ಬಂದಿದೆ.
'ಗವಾಂ ಇತಿ ಗೋವರ್ಧನ'- ಗೋವರ್ಧನ ಇತಿ ಸಂಜ್ಞಯಾ
ಸಮಕ್ಷೇಪಿ - ಎಂದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಎಂದರ್ಥ.

ವಯಂ ಧೇನು ಶತೈಃ ಸಾರ್ಧಮತ್ರಾ ಸಂಕಟಕಾನ್ವಯಾಃ ।
ಅನ್ವಭೂಮ ನಿರಾಬಾಧ ಮತ್ರಾಸಂ ಕಂಟಕಾನ್ವಯಾಃ ॥೫೬॥

ನಾವು ಈ ಬೆಟ್ಟದಲ್ಲಿ ಕೆಳಗಡೆ ನೂರಾರು ಹಸು ಕರುಗಳೊಡನೆ ಸೇರಿ ವಂಶಪರಂಪರೆಯಾಗಿ ಸಂಕಟಪಟ್ಟುದೆಲ್ಲವನ್ನೂ ಮರೆತು, ಸುಖವಾಗಿ ಕಾಲ ಕಳೆಯುತ್ತಾ ಬಂದಿದ್ದೇವೆ. ಈ ಬೆಟ್ಟದಲ್ಲೇ ನಾವು ನಮ್ಮ ಜೀವಿತ ಕಾಲವನ್ನೆಲ್ಲಾ ವಂಶ ಪಾರಂಪರ್ಯವಾಗಿ ಕಳೆದಿದ್ದೇವೆ. ನಮಗೆ ಸಕಲ ಸಮೃದ್ಧಿಗಳನ್ನು ನೀಡಿದೆ ಈ ಬೆಟ್ಟ. ಆದ್ದರಿಂದ ಇದನ್ನೇ ಪೂಜಿಸೋಣ.

"**ಸಾರ್ಧಮತ್ರಾ ಸಂಕಟಾನ್ವಯಾ**" ಎಂಬ ಪಾದವು ಎರಡು ಸಾಲಿನಲ್ಲಿಯೂ ಪ್ರಯೋಗವಾಗಿದೆ. "ಅಸಂಕಟಾನ್ವಯಾ" ಎಂದರೆ ನಮ್ಮ ಸಂಕಟಗಳನ್ನೆಲ್ಲಾ ನೀಗಿದೆ ಎಂದರ್ಥ.

ಅನಂತ ಮಹಿಮಾ ಸೋಽಯಂ ಸಮಸ್ತ ವಸುಧಾ ಧರಃ ।
ಮೌಲಿ ಮಂಡ ನ ಮಸ್ಯೇಂದುಃ ಸಮಸ್ತವ ಸುಧಾಧರಃ ॥೫೭॥

ಎಲ್ಲಾ ಭೂಮಿಯನ್ನೂ ಧರಿಸುವ ಈ ಬೆಟ್ಟದಲ್ಲಿ ಅಳತೆಗೆ ಮೀರಿದ ಸೌಖ್ಯಗಳು ಉಂಟಾಗುತ್ತವೆ. ಆದಿಶೇಷನ ಹಿರಿಮೆಯುಳ್ಳದು. ಅಮೃತ ನೀಡುವ ಚಂದ್ರನು ಇದರ ಶಿಖರಕ್ಕೆ ಅಲಂಕಾರಪ್ರಾಯನಾಗಿದ್ದಾನೆ. ನಿಮಗೆ ಸಮಾನನಾಗಿದ್ದಾನೆ. ನೀವು ಇಲ್ಲಿ ತಂಗುವುದು ಬೆಟ್ಟಕ್ಕೆ ಶೋಭೆ.

ಹಿರಿಯರಾದ ನೀವೆಲ್ಲರೂ ತಂಗುವುದು ಬೆಟ್ಟಕ್ಕೂ ಸಹ ಹಿರಿಮೆ ತರುತ್ತದೆ.

"ಸಮಸ್ತ ವಸುಧಾಧರಃ" ಎಂಬುದು ಎರಡು ಸಾಲಿನಲ್ಲೂ ಇದೆ.

ತಪೋಧನೈರಯಂ ಶೈಲೋ ಮಹಾಭಾಗ ಮಹೀಯತೇ ।
ಗೋಧನೈರಪಿ ನ ತತ್ರ ಮಹಾಭಾಗಮ ಹೀಯತೆ ॥೫೮॥

ತುಂಬಾ ಭಾಗ್ಯವನ್ನು ಪಡೆದವರೇ! ಈ ಬೆಟ್ಟವು ತಪಸ್ಸನ್ನು ಧನವಾಗಿ ಹೊಂದಿರುವುದರಿಂದ ವಿಶೇಷವಾಗಿ ಗೌರವಿಸಲ್ಪಟ್ಟಿದೆ. ಮಹೋತ್ಸವಗಳನ್ನು ಕೊಂಡಾಡುವವರೇ! ಇಲ್ಲಿ ಗೋವುಗಳನ್ನು ಧನವಾಗಿ ಪಡೆದವರಿಗೆ ಯಾವ ವಿಧವಾದ ಹಾನಿಯೂ ಇಲ್ಲ. ಕೇವಲ ಅಭಿವೃದ್ಧಿಯಷ್ಟೆ

ಇಲ್ಲಿ ದುಃಖವೆಂಬುದು ಯಾಪಿಗೂ ಯಾವ ಕಾಲಕ್ಕೂ ಆಗುವುದಿಲ್ಲ. ಎಲ್ಲರಿಗೂ ಯಾವಾಗಲೂ ಸಂತೋಷ ಕಾಲವೇ ಪ್ರಾಪ್ತಿಯಾಗುತ್ತದೆ. ಈ ಬೆಟ್ಟವನ್ನು ಹಿರಿಯರೆಲ್ಲರೂ ಈ ಹಿಂದೆ ಗೌರವಿಸಿದ್ದಾರೆ. ಮುಂದೆಯೂ ಸಹ ಗೌರವಿಸುತ್ತಾರೆ. ಆದ್ದರಿಂದ ಇದನ್ನೇ ಆರಾಧಿಸೋಣ.

"ಮಹಾಭಾಗ ಮಹೀಯತೆ"- ಎಂಬುದು ಎರಡು ಸಾಲಿನಲ್ಲೂ ಇದೆ.

"ಮಹೀಯತೆ"-ಪೂಜ್ಯತೆ "ಮಹಾಭಾಗಮ"- ಮಹಾನಾಂ ಉತ್ಸವಾನಾಂ.

ಹೀಯತೆ -ಗೋಧನೈರಪಿ ನೈವ ಹೀಯತೆ -ಗೋ ಸಂಪತ್ತು ಯಾವತ್ತೂ ಕಡಿಮೆಯಾಗುವುದಿಲ್ಲ.

ರೋಧೋ ರೋಧೋ ಜಿತ್ಯೈ ರತ್ಯೈ ರುತ್ಸ್ರೈ ರುತ್ಸ್ರೈ ಕತ್ಯೈರಸೌ ।
ಮಹೀ ಮಹೀನಾಂ ತನುತೇ ಗ್ರಾವಾಕ ಗ್ರಾವಾಕಪತ್ತಾರಕಃ ॥೫೯॥

ತನ್ನ ಶಿಖರದಿಂದ ನಕ್ಷತ್ರಗಳನ್ನುಮುಟ್ಟುವ ಈ ಬೆಟ್ಟವು ಅನೇಕ ತಡೆಗಳಿಂದ ಏರ್ಪಡುವ ವಿಘ್ನಗಳನ್ನು ನಿವಾರಿಸಿ, ಭೂಮಿಯನ್ನು ಆವರಿಸಿಕೊಂಡಿದೆ.

ಎತ್ತರಕ್ಕೆ ಇರುವ ಶಿಖರಗಳನ್ನು ಹೊಂದಿರುವ ಈ ಬೆಟ್ಟವು ನಕ್ಷತ್ರ ಮಂಡಲಗಳನ್ನು ಮುಟ್ಟುತ್ತದೆ. ಯಾವ ವಿಘ್ನಗಳು ಬಂದರೂ ಎಲ್ಲವನ್ನೂ ಈ ಬೆಟ್ಟವು ನಿವಾರಿಸುತ್ತದೆ. ಎತ್ತರವಾಗಿರುವುದಷ್ಟೇ ಅಲ್ಲ. ವಿಸ್ತಾರವಾದ ಭೂ ಪ್ರದೇಶವನ್ನೂ ಈ ಬೆಟ್ಟವು ಆವರಿಸಿಕೊಂಡಿದೆ. ಹೀಗಾಗಿ ಉದ್ದ ಮತ್ತು ಅಗಲ ಎರಡೂ ಈ ಬೆಟ್ಟಕ್ಕೆ ವಿಶೇಷವಾಗಿ ಕೂಡಿಕೊಂಡಿದೆ.

ಧಿಷಣಾತೀತ ಧಿಷಣಾ ಲೋಕ ನೀತ್ಯಾಕಸ್ತು ಲೋಕನಿ ।
ಸುಧರೇಽಸ್ಮಿನ್ ವಸುಧರೆ ತಾತ ತೇಜಸ್ವಿತಾ ತತೆ ॥ ॥೬೦॥

ದೇವಗುರುವಾದ ಬೃಹಸ್ಪತಿಗೆ ಮೇಲ್ಪಟ್ಟವರೆ! ನಿಮ್ಮ ಬುದ್ಧಿಯಾದುದು ಧನವನ್ನು ಧರಿಸುವುದು, ಉತ್ತಮ ಪ್ರಭಾವ ಬೀರಿ ಈ ಶ್ರೇಷ್ಠವಾದ ಬೆಟ್ಟದ ವಿಷಯದಲ್ಲಿ ಲೋಕ ನ್ಯಾಯವನ್ನು ಸರಿಯಾಗಿ ಕಾಣಬೇಕು.

ಮಹನೀಯರೇ ! ನೀವೆಲ್ಲರೂ ಅತಿ ಬುದ್ಧಿವಂತರು - ವಿವೇಕಿಗಳು. ಜ್ಞಾನವನ್ನೇ ಧನವಾಗಿ ಉಳ್ಳವರು. ಆದ್ದರಿಂದ ಲೋಕ ನ್ಯಾಯವನ್ನು ಅರಿತು, ದೇವತೆಗಳ ಪೂಜೆಯನ್ನು ಕೈ ಬಿಟ್ಟು ಈ ಬೆಟ್ಟವನ್ನೇ ಪೂಜಿಸುವುದರಲ್ಲಿ ನಿಮ್ಮ ಮನಸ್ಸನ್ನಿಡಿ. ನಮಗೆ ಬೆಟ್ಟವು ಒಳ್ಳೆಯದನ್ನೇ ಮಾಡುವುದರಿಂದ ಅದನ್ನು ಪೂಜಿಸುವುದು ಲೋಕನ್ಯಾಯ.

ಪಾದ ಪಾದ ಭೃ ಪರ್ಯಂತಾ ದೀನಾ ದೀನಾ ಮಸೌ ಗತಿಃ।
ಗೋಪ ಗೋಪನ ಯೋಗ್ಯಾಽಸ್ಮಿನ್ ಕಾಂತಾ ಕಾಂತಾರ ಭೂರಪಿ ॥೬೦॥

ಎಲೈ ಸತ್ಪುರುಷರೇ ! ಮರಗಳನ್ನು ಸುತ್ತಲೂ ಹೊಂದಿರುವುದೂ, ಅನಾಥರಾದಿಯಾಗಿ ಎಲ್ಲರಿಗೂ ಆಶ್ರಯವಾಗಿರುವ ಈ ಬೆಟ್ಟದಲ್ಲಿರುವ ವನ ಪ್ರದೇಶವು ನಮ್ಮನ್ನೆಲ್ಲಾ ಕಾಪಾಡುತ್ತದೆ. ಈ ಬೆಟ್ಟವು ಮರಗಳನ್ನು ಹೇರಳವಾಗಿ ಹೊಂದಿದ್ದು ಯಾವ ಭೇದ ಭಾವವೂ ಇಲ್ಲದೆ ಎಲ್ಲರಿಗೂ ಆಶ್ರಯವಾಗಿದೆ.

ಪಾದ ಪಾದ, ದೀನಾ ದೀನಾ - ,, -

ಗೋಪ ಗೋಪ, ಕಾಂತಾ ಕಾಂತಾ ಎಂಬ ಪದಗಳು ದ್ವಿರುಕ್ತಿಯಾಗಿದೆ.

ಈ ನಾಲ್ಕೂ ಪದಗುಚ್ಛಗಳು ವಿಪುಲವಾಗಿದೆ. ದೀನರಿಗೆ ಆಶ್ರಯವಾಗಿದೆ, ಮನೋಹರವಾಗಿದೆ. ನಮಗೆ ರಕ್ಷಣೆ ನೀಡುತ್ತದೆ ಎಂಬರ್ಥಗಳನ್ನು ನೀಡುತ್ತವೆ.

ಇಹ ಪುಷ್ಪೌಘ ನಿಷ್ಪನ್ನ ವ್ರಜಾಮೋದೇ ವನೇಹಿತೇ।
ಭೃಶ ಮುತ್ಸವ ಸಂತೋಷಂ ವ್ರಜಾಮೋ ದೇವನೇ ಹಿತೇ॥ ॥೬೧॥

ಗೋಕುಲದಲ್ಲಿರುವ ಪರಿಮಳಭೂಷಿತವಾದ ಹೂಗಳನ್ನು ಬಿಡುವ, ಸೌಕಲ ಸೌಖ್ಯಗಳನ್ನೂ ಉತ್ಸವ ಕಾಲದಲ್ಲಿ ಕೊಡುವ ಈ ಕಾಡಿನಲ್ಲಿ ಮಹೋತ್ಸವಗಳನ್ನು ನಡೆಸಿ ಅಪಾರ ಸಂತೋಷವನ್ನು ಹೊಂದೋಣ.

ಗೋಕುಲದಲ್ಲಿರುವ ನಾವು ಏನೇನು ಉತ್ಸವಗಳನ್ನು ನಡೆಸುತ್ತಿದ್ದೇವೋ ಅದೆಲ್ಲವನ್ನೂ ಇಲ್ಲಿಯೇ ಈ ಬೆಟ್ಟದಲ್ಲಿಯೇ ನಡೆಸಿ ಆನಂದ ಪಡೆಯೋಣ. ಈ ಬೆಟ್ಟದಲ್ಲಿದ್ದರೆ ನಾವು ಗೋಕುಲದಲ್ಲಿ ಇಲ್ಲ ಎಂಬ ಕೊರೆಯು ಇರುವುದಿಲ್ಲ.

'ವ್ರಜಾಮೋ ದೇವನೇ ಹಿತೆ' ಎಂಬ ವಾಕ್ಯವು ಎರಡು ಸಾಲಿನಲ್ಲೂ ಬಂದಿದೆ.

'ವ್ರಜಾಮೋ ದೇವನೇ ಹಿತೆ' - ಗೋಕುಲದಲ್ಲಿ ದೊರೆಯುವುದೆಲ್ಲವೂ ಇಲ್ಲಿ ದೊರೆಯುತ್ತದೆ.

'ವ್ರಜಾಮೋ ವನೇ ಹಿತೆ' - ದೇವತೆಗಳಿಗೂ ಒಳ್ಳೆಯದನ್ನು ಮಾಡುವ ಬೆಟ್ಟವನ್ನು ಆಶ್ರಯಿಸೋಣ.

ಪ್ರಯತಸ್ವ ಗಿರೇಶಸ್ಯ ವ್ರಜದೇವ ಸಭಾಜನೇ ।
ಸ್ವಪುಷ್ಪ ಕಲ್ಪೇಮಾ ಭಕ್ತಿಂ ವ್ರಜದೇವ ಸಭಾ ಜನೇ॥ ॥೬೩॥

ಗೋಕುಲನಾಥನೇ! ಈ ಬೆಟ್ಟದ ಪೂಜೆಯ ವಿಷಯದಲ್ಲಿ ಪ್ರಯತ್ನ ಮಾಡಿ, ದೇವತೆಗಳನ್ನು ಆರಾಧಿಸುವುದೆಂಬುದು ಆಕಾಶ ಪುಷ್ಪದಂತೆ. ದುಸ್ಸಹವಾದುದು. ಅದರಲ್ಲಿ ಉತ್ಸಾಹ ಬೇಡ.

ದೇವತೆಗಳ ಆರಾಧನೆಯನ್ನು ಬಿಟ್ಟು ಬಿಡೋಣ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಅದು ಕಷ್ಟಸಾಧ್ಯವಾದುದು.

ವ್ರಜದೇವ - ಸಭಾಜನೆ

ವ್ರಜ - ದೇವ - ಸಭಾ - ಜನೇ = ದ್ವಿರುಕ್ತಿ ಬಂದಿದೆ. ಅರ್ಥದಲ್ಲೂ ವ್ಯತ್ಯಾಸ ಇದೆ.

ದೇವ ಸಭಾ ಜನೆ ಮಾ ವ್ರಜ = ದೇವತೆಗಳನ್ನು ಈಗ ಆಶ್ರಯಿಸುವುದು ಬೇಡ.

ದೇವಸ್ಥಾನ ಮಿವೇಂಧಾನಂ ಪರಾಯಣ ಮಿವಾರಿತಮ್।
ಗೋವರ್ಧನ ಮವೇಹ್ಯೇನಂ ನಾರಾಯಣ ಮಿವಾಗತಮ್ ॥೬೪॥

ನಮ್ಮಿಂದ ಚೆನ್ನಾಗಿ ಪೂಜಿಸಲ್ಪಟ್ಟ ಈ ಬೆಟ್ಟವು ದೇವತೆಗಳ ವಾಸಸ್ಥಾನವಾದ ಸ್ವರ್ಗದಂತೆ ಬೆಳಗುತ್ತಿದೆ. ಇದನ್ನು ಎಲ್ಲಾದಕ್ಕೂ ಮೇಲಾದ ಉಪಾಯವಾಗಿರುವ ಸಾಕ್ಷಾತ್ ನಾರಾಯಣನೆಂದೇ ನೀವು ಭಾವಿಸಬೇಕು.

ಸಾಕ್ಷಾತ್ ನಾರಾಯಣನೇ ಈ ಬೆಟ್ಟವು. ಅವನೇ ಇಲ್ಲಿ ನಿತ್ಯ ವಾಸ ಮಾಡುತ್ತಾನೆ. ಇದು ಸ್ವರ್ಗದಂತೆ ಇದೆ. ಈ ಶ್ಲೋಕವನ್ನು "ಗೋ ಮೂತ್ರಿಕಾ ಬಂಧಃ" ವೃತ್ತದಲ್ಲಿ ರಚಿಸಲಾಗಿದೆ.
ವಿವರಣೆ:- ಗೋವುಗಳು ಬಿಟ್ಟುಬಿಟ್ಟು ಮೂತ್ರವನ್ನು ಹುಯ್ಯುವ ರೀತಿ.

ದೇ	ವ	ಸ್ಥಾ	ನ	ಮಿ	ವೇಂ	ಧ	ನಂ
ಗೋ	ವ	ರ್ಧ	ನ	ಮ	ವೇ	ಹ್ಯೇ	ನಂ.

ಮೋಘಾ ಶೋ ಮಘವಾನ್ ದೇವಃ ಸ್ಯಾದತ್ರ ತ್ಯತ್ಯ ಸಾಧನೆ ।
ಮೇಘಾನಾಮಪಿ ವಾ ಭಾವಃ ಸಾದಮೇತ್ಯದ್ರಿ ಸಾಧನೇ॥ ॥೬೫॥

ಈ ಬೆಟ್ಟದಲ್ಲಿ ಆಸೆ ಪಟ್ಟು ಇರುವ ಪ್ರಜೆಗಳನ್ನು ನಾಶಪಡಿಸಲು ದೇವನಾದ ಇಂದ್ರನು ಆಸೆ ಪಟ್ಟಲ್ಲಿ ನಡೆಯುವುದಿಲ್ಲ. ಬೆಟ್ಟವನ್ನು ಧ್ವಂಸ ಮಾಡಲು ಮೋಡಗಳೆಲ್ಲವೂ ಸೇರಿದರೂ ಸಾಧ್ಯವಾಗುವುದಿಲ್ಲ.

ಇದನ್ನೂ ಸಹ "ಗೋ ಮೂತ್ರಿಕಾ ಬಂಧಃ" ವೃತ್ತದಲ್ಲಿ ರಚಿಸಲಾಗಿದೆ.

ಚಿತ್ರರಚನೆಯ ವಿವರಣೆ ಹೀಗಿದೆ-

ಮೋ	ಘಾ	ಶೋ	ಮಂ	ಘ	ವಾ	ನ್	ದೇ	ವಃ
ಮೇ	ಘಾ	ನಾ	ಮ	ಪಿ	ವಾ	ಭಾ	ವಃ	ವಂ

ದೇವ ದೇವನಾದ ಇಂದ್ರನು ನಾವು ಈ ಬೆಟ್ಟವನ್ನು ಪೂಜೆ ಮಾಡುವುದನ್ನು ನೋಡಿ ಕೋಪಗೊಂಡು, ನಿಮ್ಮನ್ನೆಲ್ಲಾ ನಾಶ ಪಡಿಸಬೇಕೆಂದು ಆಶಿಸಿದರೂ ಅದು ನಡೆಯುವುದಿಲ್ಲ. ಮೋಡಗಳೆಲ್ಲಾ ಸೇರಿ ಘನ ಘೋರ ಮಳೆ ಸುರಿಸಿದರೂ ಏನೂ ಆಗುವುದಿಲ್ಲ, ಹೆದರಬೇಡಿ.

ಅ ಚಂಚಲಾಂಗ ಸತ್ತ್ವಾಕಶ್ಚಲಾ ಚಲ ಘನಾತತಃ ।
ಅಚಲಃ ಕಸ್ಯಾ ನಾಽಽಕಲ್ಯಃ ಸಾಧ್ಯಾನಂದಸ್ಯ ಸಿದ್ಧಿಕೃತ್ ॥ ॥೬೬॥

ಚಲಿಸದೆ, ಸ್ಥಿರವಾಗಿ ತನ್ನ ಅಂಗಗಳನ್ನು ಉಳ್ಳದೂ, ಸಂಚರಿಸುವ ಮೋಡಗಳಿಂದ ಆವರಿಸಲ್ಪಟ್ಟದ್ದೂ, ಪ್ರಯತ್ನದಿಂದ ಹೊಂದಬೇಕಾದ ಆನಂದವನ್ನು ತರುವುದು ಆದ ಈ ಬೆಟ್ಟವನ್ನು ಯಾರು ತಾನೇ ಗೆಲ್ಲಬಲ್ಲರು?

ಈ ಬೆಟ್ಟವನ್ನು ಗೆಲ್ಲಲು ಯಾವ ದೇವರಿಂದಲೂ ಸಾಧ್ಯವಿಲ್ಲ. ಇದನ್ನು ಅಲ್ಲಾಡಿಸಲೂ ಸಹ ಯಾರಿಂದಲೂ ಸಾಧ್ಯವಿಲ್ಲ. 'ತ್ರಿಸ್ಥಾನ ಚಿತ್ರಂ' ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ.

ಅಗಃ ಸುನಗ ಆಸನ್ನಃ ಸಾಲ.ತಾಲ ಲತಾ ತತಃ ।
ಸತತಂ ಸಂಹತ ಘನಃ ಸಂಗತಾನಂದ ಸಾಧಕಃ ॥ ॥೬೭॥

ಸುತ್ತಲೂ ಸಸ್ಯ ವಿಶೇಷವನ್ನು ಹೊಂದಿರುವುದೂ, ನಮಗೆ ಸಾದಿತವಾಗಿರುವುದೂ ಆದ ಬೆಟ್ಟವು ಯಾವಾಗಲೂ ಮೇಘಗಳಿಂದ ಆವೃತವಾಗಿ ಆನಂದವನ್ನು ನೀಡುತ್ತದೆ.

ಈ ಗೋವರ್ಧನ ಗಿರಿಯು ನಮಗೆ ಸಾಧಕವಾಗಿದೆ. ನಮ್ಮ ಎಲ್ಲಾ ಯಜ್ಞ ಯಾಗಾದಿಗಳನ್ನು ಇಲ್ಲಿ ನಿರ್ವಿಘ್ನವಾಗಿ ನೆರವೇರಿಸಬಹುದು. 'ದ್ವಿಸ್ಥಾನ ಚಿತ್ರಂ' ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ.

ಅಹಹಾಂಗ ಖಗಾಂಗಾಕ ಗಾಹಕಾ ಗಾಂಗ ಗಾಕಕಃ।
ಅಘಾಕಾಗಾಂಕ ಕಾಗಾಂಕಾ ಗಾಂಗಕಾಗ ಖಗಾಂಕಃ ॥ ॥೬೮॥

ಸ್ವಾಮಿಯೇ ! ಆಕಾಶ ಗಂಗೆಯಿಂದ ಬರುವ ಪ್ರವಾಹಗಳಲ್ಲಿ ಸ್ನಾನ ಮಾಡುವ ದೇವತೆಗಳ ಶರೀರದಲ್ಲಿ ಉಳ್ಳ ಬಟ್ಟೆ ಮುಂತಾದವುಗಳನ್ನು ಮರಗಳಲ್ಲಿ ಕಾಣಬಹುದು. ಪಾಪಗಳೇನು, ಅವುಗಳ ಫಲಗಳೇನು ಎಲ್ಲವನ್ನೂ ಹೋಗಲಾಡಿಸುವ ಗಂಗೆಯ ನೀರಿನಲ್ಲಿ ಕುಣಿದಾಡುವ ಪಕ್ಷಿಗಳನ್ನು ಹೊಂದಿದೆ ಈ ಬೆಟ್ಟವು. ಆಶ್ಚರ್ಯವು!

ಆಕಾಶ ಗಂಗೆಯಲ್ಲಿ ಸ್ನಾನ ಮಾಡಿ ದೇವತೆಗಳು ವಿಸರ್ಜಿಸಿದ ಬಟ್ಟೆಗಳನ್ನು ಈ ಬೆಟ್ಟದಲ್ಲಿ ಕಾಣಬಹುದು. ಅನೇಕ ಉತ್ತಮ ಪಕ್ಷಿಗಳನ್ನು ಈ ಬೆಟ್ಟವು ಹೊಂದಿದೆ.

'ಏಕ ಸ್ಥಾನ ಚಿತ್ರಂ' ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ. ಈ ಶ್ಲೋಕಕ್ಕೆ ಸ್ವಾಮಿ ಅಪ್ಪಯ್ಯ ದೀಕ್ಷಿತರು ಬಹು ವಿಸ್ತಾರವಾದ ವ್ಯಾಖ್ಯಾನವನ್ನು ಅನುಗ್ರಹಿಸಿದ್ದಾರೆ.

ರಜತಗೈರಿಕ ರತ್ನಗಣೈರಯಂ ಕನತಿ ಕಾಂತ ಲತಾಂಚಿತ ಕಾನನಃ।
ತ್ರಿಜಗದೇಕ ನಿಧಾನ ತಯಾಽ ಅಧಿಕ ಸ್ತ್ರಿದಶ ರಾಜಧರಾಧರ ತಲ್ಲಜಾತ್॥ ॥೬೯॥

ಸುಂದರವಾದ ವೃಕ್ಷ ಸಮೃದ್ಧಿಯಿರುವ ಕಾಡುಗಳನ್ನು ಹೊಂದಿರುವ ಈ ಬೆಟ್ಟವು ಮೂರು ಜಗತ್ತಿಗೂ ಮುಖ್ಯವಾದ ಸ್ಥಾನವಾಗಿ ನಿಧಿಯಂತೆ ಇರುವುದರಿಂದ ದೇವತೆಗಳಿಗೆ ಮಾತ್ರ ವಾಸಸ್ಥಾನವಾದ ಮೇರು ಪರ್ವತಕ್ಕಿಂತಲೂ ಮೇಲಾಗಿದೆ. ರತ್ನಗಳೂ ಹೇರಳವಾಗಿವೆ.

ಅತ್ಯುತ್ತಮವಾದ ಬೆಟ್ಟವಿದು. ಮೇರು ಪರ್ವತಕ್ಕಿಂತಲೂ ಮೇಲಾದುದು.

'ಅನ್ಯೋನ್ಯಷ್ಟ್ಯ ಚಿತ್ರಮ್' ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ.

ಸಹೇತ ಪರ್ವತೋಽಯಂ ವೋ ಗೋಪ್ತುಂ ಕ್ವಜನ ಕಂದರೆ।
ಅದರಿದ್ರಾ ವಸಾಮೋಽತ್ರ ಸರ್ವ ಹೇತೋರಿವೋದರೇ॥ ॥೭೦॥

ಈ ಬೆಟ್ಟವು ಒಂದು ಗುಹೆಯಲ್ಲಿ ನಿಮ್ಮನ್ನೆಲ್ಲಾ ಕಾಪಾಡುತ್ತದೆ. ಎಲ್ಲಕ್ಕೂ ಕಾರಣನಾದ ಭಗವಂತನ ಉದರವಂತೆ ಈ ಭೂಮಿಯು ಎಲ್ಲಾ ಆಯಾಸವನ್ನು ಹೋಗಲಾಡಿಸಿ, ನಾವು ಸುಖವಾಗಿ ವಾಸ ಮಾಡಬಹುದು.

'ಗೂಢ ಚತುರ್ಥ ಚಿತ್ರಂ' ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ.

ಬೆಟ್ಟದ ಮಹಿಮೆಯ ವರ್ಣನೆ ಮುಂದುವರೆದಿದೆ. ಈ ಬೆಟ್ಟದ ಪ್ರದೇಶವು ನಮ್ಮ ಎಲ್ಲಾ ಆಯಾಸವನ್ನೂ ನೀಗಿ ಆನಂದವನ್ನು ನೀಡುತ್ತದೆ. ಭಗವಂತನ ಉದರವು ಯಾವ ರೀತಿ ಪ್ರಳಯ ಕಾಲದಲ್ಲಿ ಎಲ್ಲವನ್ನೂ ಅಡಗಿಕೊಳ್ಳುತ್ತದೆಯೋ ಅದೇ ರೀತಿ ಈ ಬೆಟ್ಟವು ಎಲ್ಲರಿಗೂ ಆಶ್ರಯ ನೀಡುತ್ತದೆ.

ಗೂಢ ಚತುರ್ಥ ಚಿತ್ರಂ – ಚತುರ್ಥ ಪಾದದ ಅಕ್ಷರಗಳು ಇತರ ಮೂರು ಪಾದಗಳಲ್ಲಿ ಅಲ್ಲಲ್ಲಿ ಸೇರಿಸುವುದು – ಈ ಗೂಢ ಚಿತ್ರ ಶಬ್ದಾಲಂಕಾರದ ವೈಶಿಷ್ಟ್ಯ.

''ಸರ್ವಹೇತುರಿವೋದರೇಯ ಎಂಬ ಪದದ ಅಕ್ಷರಗಳು ಇತರ ಸಾಲುಗಳಲ್ಲಿ ಅಲ್ಲಲ್ಲಿ ಸೇರಿವೆ.

ಘನಾಘನಾ ಘನಾಘನಾ ದ್ಯುತ್ತೇಹ ಶಾಖಿಸಂತತಿಃ।
ವನಾ ವನಾ ವನಾ ವನಾನು ರೂಪ ಸ್ತಪ್ಲಾವೃತಾ॥ ॥೭೧॥

ಈ ಬೆಟ್ಟದಲ್ಲಿ ಕಾಡು ಪ್ರದೇಶಗಳಲ್ಲಿ, ಮರಗಳು ವರಸೆಯಾಗಿ ಒತ್ತಾಗಿ ಕೆಲವು ಸ್ಥಳಗಳಲ್ಲಿ ವಿರಳವಾಗಿ ಮೇಲೆ ದೊಡ್ಡದಾಗಿಯೂ, ಕೆಳಗೆ ಚಿಕ್ಕದಾಗಿಯೂ, ಅಘನಾಶಕವಾಗಿ ಮೇಘಗಳು ಕವಿಯುವಂತೆ ಅದ್ಭುತವಾಗಿ ಆಯಾಯ ಪ್ರಾಣಿಗಳಿಗೆ ತಕ್ಕಂತೆ ಒಳ್ಳೆಯ ಹಣ್ಣುಗಳನ್ನು ತುಂಬಾ ಬಿಡುತ್ತಾ ಇವೆ. 'ಅಘನಾಶನ' ಎಂದರೆ ಪಾಪಗಳನ್ನು ಹೋಗಲಾಡಿಸುವುದು.

ಈ ಬೆಟ್ಟದಲ್ಲಿ ಇರುವ ಪ್ರಾಣಿಗಳಿಗೆಲ್ಲಾ ಅವುಗಳ ಹಸಿವನ್ನು ತೀರಿಸಲು ಆಯಾಯ ಪ್ರಾಣಿಗಳಿಗೆ ಬೇಕಾದ ಹಣ್ಣು, ಹಂಪಲುಗಳನ್ನು ಈ ಬೆಟ್ಟದ ಮರಗಳು ನೀಡುತ್ತವೆ. ಈ ಬೆಟ್ಟವು ಎಲ್ಲಾ ಪಾಪಗಳನ್ನು ನಾಶಮಾಡುತ್ತದೆ.

ಮೊದಲನೇಯ ಸಾಲಿನಲ್ಲಿ - 'ಘನಾಘನಾ' ಎರಡು ಬಾರಿ ಬಂದಿದೆ.

ಎರಡನೆಯ ಸಾಲಿನಲ್ಲಿ - 'ವನಾವನಾ' ಎರಡು ಬಾರಿ ಪ್ರಯೋಗವಾಗಿದೆ.

ಈ ಶ್ಲೋಕವು ಪ್ರಮಾಣಿಕಾ ವೃತ್ತದಲ್ಲಿದೆ.

ವೃತೇಹ ಭಾತಿ ಹೇಮಭೂರ್ ನ್ರ್ಗ ಮೇರುಣಾ ಸಮಂತತಃ।
ಪ್ರತೀಹಿ ನೈನಮದ್ಭುತಂ ನ ಮೇರುಣಾ ಸಮಂ ತತಃ ॥ ॥೭೨॥

ಈ ಬೆಟ್ಟದಲ್ಲಿ ಚಿನ್ನಮಯವಾದ ಸ್ಥಳವಾದುದು ನಾಲ್ಕು ಕಡೆಗಳಿಂದಲೂ ನೆರಳು ಮರಗಳಿಂದ ತಂಪಾಗಿಸಲ್ಪಟ್ಟು ಬೆಳಗುತ್ತಿದೆ. ಆದ್ದರಿಂದ ನೀವು ಈ ಬೆಟ್ಟವನ್ನು ಮೇರು ಪರ್ವತಕ್ಕೆ ಸಮಾನವಾದುದಾಗಿ ಭಾವಿಸಬೇಕು.

ಈ ಬೆಟ್ಟದ ಮಹಿಮೆಯ ವಿಷಯದಲ್ಲಿ ಯಾವ ಸಂದೇಹವೂ ಬೇಡ. ಮೇರು ಪರ್ವತಕ್ಕೆ ಸಮಾನವಾದುದು ಇದು. ಇದನ್ನೇ ಆರಾಧಿಸೋಣ. ಚಿನ್ನದ ಬೀಡು ಈ ಬೆಟ್ಟ.

ಇಹ ಪ್ರಭೃತ ವಾಹಿನೀ ವನೇ ವನೇ ವನೇ ವನೇ।
ಫಲೇನ ಭೂಯತೇ ಸ್ವಯಂ ನತೇನ ತೇನ ತೇನ ತೇ ॥ ॥೭೩॥

ಪ್ರವಾಹದ ನೀರಿನಲ್ಲಿ ಸುಂದರವಾದ ಕಾಡು ತೋರುವ ಇಲ್ಲಿ ಆಯಾಯಾ ಮರಗಳಲ್ಲಿ ಬಿಡುವ ಹಣ್ಣುಗಳು ತಾವಾಗಿಯೇ ನಿಮಗೆ ಸಿಗುತ್ತವೆ.

ಇಲ್ಲಿನ ಮರಗಳಲ್ಲಿ ಬಿಡುವ ಹಣ್ಣುಗಳು ಚೆನ್ನಾಗಿ ಪಕ್ವವಾಗಿ ತಾವಾಗಿಯೇ ಕೆಳಕ್ಕೆ ಉದುರಿ ನಿಮಗೆ ಲಭಿಸುತ್ತವೆ. ನೀವು ಅದನ್ನು ಕೀಳಲು ಪ್ರಯತ್ನಿಸಬೇಕಾದುದಿಲ್ಲ.

ಮೊದಲನೇಯ ಸಾಲಿನಲ್ಲಿ - ವನೆ ವನೆ ವನೆ ವನೆ ನಾಲ್ಕು ಬಾರಿ ಬಂದಿದೆ.

ಎರಡನೆಯ ಸಾಲಿನಲ್ಲಿ - ನತೇ ನತೇ ನತೇ ನತೇ ನಾಲ್ಕು ಬಾರಿ ಬಂದಿದೆ.

ಇವೆಲ್ಲವೂ ಕವಿಯ ಚಮತ್ಕಾರವನ್ನು ತೋರಿಸುತ್ತದೆ.

ಅಹಾರ್ಯಮೇತಿಚೇತನಾ ಸಿತಾಸಿತಾನರಾಜ ತೇ।
ಅಹಾರ್ಯಮೇತಿ ಚೇತನಾ ಸಿತಾ ಸಿತಾ ನ ರಾಜತೇ ॥೭೪॥

ಬೇರೆಯುವರಿಂದ ಬೇಪಡಿಸಲಾಗದ ಸಂಬಂಧ ಹೊಂದಿದವರೇ ! ಚೇತನರೆಂಬ ಹೆಸರು ಪಡೆದು ಬೆಳಗುವ ಪ್ರಾಣಿಗಳಿಗೆಲ್ಲಾ ರಸರೇ ! ನಿಮ್ಮ ಬುದ್ಧಿಯಾದುದು ಇದು ಪೂಜಿಸಬಹುದೇ ? ಇಲ್ಲವೇ ಎಂಬ ಹೊಯ್ದಾಟದಲ್ಲಿ ಈ ಬೆಟ್ಟದ ಬಗ್ಗೆ ಇದೆ. ಆದ್ದರಿಂದ

ಅದು ಸರಿಯಲ್ಲ. ಇದರಿಂದಾಗಿಯೇ ಅಲಕ್ಷ್ಮಿಯು ಸೇರುತ್ತದೆ. ಆ ರೀತಿ ಹೊಯ್ದಾಟದ ಬುದ್ಧಿಯಾರಿಗೂ ಶೋಭೆಯನ್ನು ತರುವುದಿಲ್ಲ.

ಈ ಬೆಟ್ಟವನ್ನು ಆರಾಧಿಸೋವೇ ? ಬೇಡವೇ ? ಎಂಬ ದ್ವಂದ್ವ ಬುದ್ಧಿಯನ್ನು ಬಿಟ್ಟುಬಿಡಿ. ನಿಶ್ಚಿತ ಬುದ್ಧಿಯಿಂದ ಈ ಬೆಟ್ಟವನ್ನೇ ಆರಾಧಿಸೋಣ. ದ್ವಂದ್ವವು ಯಾರಿಗೂ, ಯಾವಾಗಲೂ ಒಳ್ಳೆಯದಲ್ಲ.

ಎಲ್ಲ ಅಕ್ಷರಗಳೂ ಎರಡು ಸಾಲಿನಲ್ಲೂ ಇವೆ. ಪದ ವಿಭಾಗ ಮಾಡಿ ಅರ್ಥೈಸಬೇಕು.

'ಅರ್ಧ ಯಮಕ ಚಿತ್ರಮ್'- ವೃತ್ತದಲ್ಲಿ ಈ ಶ್ಲೋಕವನ್ನು ರಚಿಸಲಾಗಿದೆ.

ಸಮಗ್ರ ಗುಣ ಭೂಮಾಽಸೌ ಸಾನುಮಾನ ಗಮಾನಿತಃ।
ಸಮಾಹಿತ ಧಿಯಾಂ ಸೇವ್ಯಃ ಸಾನುಮಾನ ಗಮಾನಿತಃ ॥೭೫॥

ಈ ಬೆಟ್ಟದ ಗುಣ ವೈಭವಗಳು ಬಹುವಾಗಿದ್ದು, ಸಂಚಾರ ಮಾಡಲು ಸಮನಾದ ಮರಗಳಿಂದ ತುಂಬಿದೆ. ಯೋಗಾಭ್ಯಾಸ ಮಾಡುವವರು ತಂಗಲು ಇಚ್ಛಿಸಿ ವೇದ ಮೊದಲಾದ ಪ್ರಮಾಣಗಳಲ್ಲಿ ಕೊಂಡಾಡುವ ಸ್ಥಳಗಳಾಗಿವೆ. ಈ ಗೌರವವು ಭಗವಂತನಿಗೆ ಮಾತ್ರ ಸಲ್ಲುತ್ತದೆ.

ಈ ಬೆಟ್ಟವು ವೇದಗಳಲ್ಲಿ ಕೊಂಡಾಡಲ್ಪಟ್ಟ ಸ್ಥಳವಾಗಿದೆ. ಆಗಮ =ವೇದಗಳು.

'ಸಾನುಮಾನಾಗಮಾನಿತ' ಎರಡು ಸಾಲಿನಲ್ಲೂ ಕೊನೆಯಲ್ಲಿ ಬಂದಿವೆ.

ಯಾಚಲೆ ಜರ ಸಾನೇತಾ ತಾನೆ ಸಾರ ಜಲೆ ಚಯಾ।
ಕಾಲಿಮಾನ ವಸಾ ಯಾಮಾ ಮಾಯಾ ಸಾ ವನಮಾಲಿಕಾ॥ ॥೭೬॥

ಎಲ್ಲರಿಗೂ ಸಹಾಯ ಮಾಡುವ ನೀವು ಸಮೃದ್ಧವಾಗಿ ಈ ಬೆಟ್ಟದಲ್ಲಿ ಕಾಡುಗಳು ವರಸೆಯಾಗಿ (ಸಾಲಾಗಿ) ತಮ್ಮ ಹಸಿರನ್ನು ನೀಗದೆ, ಮೇಲೆ ಮೇಲೆ ಅಭಿವೃದ್ಧಿ ಪಡೆದು ಮರಗಳನ್ನು ಹೊಂದಿರುವುದರಿಂದ ರಾತ್ರಿಯೆಲ್ಲಾ ತಂಪಾಗಿದ್ದು ಆಶ್ಚರ್ಯಕರವಾಗಿದೆ. ಈ ವನಸಿರಿಯು ಭಗವಂತನ ವನಮಾಲೆಯಂತಿದೆ. ಇದು ಅಚಲವಾಗಿ, ಅವಿನಾಶಿ ಯಾಗಿರುವ ಭಗವಂತನ ಮಹಿಮೆಯನ್ನು ಸಾರುವಂತಿದೆ.

ಈ ಬೆಟ್ಟವು ಭಗವಂತನ ಮಹಿಮೆಯನ್ನೇ ಪ್ರಕಾಶಪಡಿಸುತ್ತಿದೆ. ಕಾಡುಗಳು ಹೇರಳವಾಗಿದ್ದು ರಾತ್ರಿಯೆಲ್ಲಾ ತಂಪಾಗಿರುವುದರಿಂದ ತಂಗಲು ಅತ್ಯಂತ ಪ್ರಶಸ್ತ ಸ್ಥಳವಾಗಿದೆ.

ಅನುಲೋಮ ಪ್ರತಿ ಲೋಮಂ ಗತ ಪ್ರತ್ಯಾಗತ ಪಾದ ಚಿತ್ರಂ

''ಯಾಚಲೆ ಜನಸಾನೇತಾ'' ಎಂಬ ಪದವು ಕೊನೆಯಲ್ಲಿ ತಿರುಗು ಮುರುಗಾಗಿ ಪ್ರಯೋಗಿಸಿದೆ.

''ಕಾಲಿನಾನವ ಸಾಯಯಾಮಾ'' ಮತ್ತು ''ಕಾಲಿಮಾನ ವಸಾಯಾಮಾ'' ಎಂಬ ಎರಡನೇ ಸಾಲಿನ ಪದಗುಚ್ಛವೂ ತಿರುಗು ಮುರುಗಾಗಿ ಪ್ರಯೋಗಿಸಲ್ಪಟ್ಟಿದೆ.

ಅಭ್ರಾಂತ ಮತಿ ಶಯ್ಯೇಹ ವಿರಾಜಿತ ತಮಾಗಮೆ।
ನಿಶಾಮಯಾ ಲೀನ ಘನಂ ಸಾಲೌಘಾ ಮತಿ ನಂದನಮ್ ॥ ॥೭೭॥

ಮೇಘಗಳು ಎಲ್ಲೆಯನ್ನು ಮೀರಿ ಬೆಳೆದು ನಿಂತ ಮರಗಳು ಸಮೃದ್ಧಿಯಾಗಿ ಇರುವ ಈ ಬೆಟ್ಟದಲ್ಲಿ ತಮ್ಮಲ್ಲಿ ಮೇಘಗಳು ಮರೆಯಾಗುವಂತೆ ಮರಗಳ ರೆಂಬೆಗಳು ಆಕರ್ಷಕ ರೀತಿಯಲ್ಲಿ ಆಕಾಶದಲ್ಲಿ ಪ್ರಸರಿಸಿವೆ.

ಉದ್ದಕ್ಕೆ ಎತ್ತರವಾಗಿ ಬೆಳೆದಿರುವ ಮರಗಳು ಮೇಘಗಳ ಪಂಕ್ತಿಯನ್ನು ಮರೆ ಮಾಡಿವೆ. 'ಏಕ ಕ್ರಿಯಾನ್ವಿತ ಶ್ಲೋಕ ವೃತ್ತಿ' ಒಂದೇ ಶ್ಲೋಕವನ್ನು ಎರಡು ಬಾರಿ ಪ್ರಯೋಗಿಸಲಾಗಿದೆ. ಕ್ರಿಯಾಪದ ವ್ಯತಿರೇಕದಿಂದ ಅರ್ಥದಲ್ಲಿ ವ್ಯತ್ಯಾಸ ಇದೆ.

ಚಾರು ಚೇರಿ ರುಚಾ ರೋಚಿ ರೂರುಚಾರ್ವೈ ರಚರ್ಚರುಃ।
ಚಿರೋಚ್ಛರೋಚಿ ರಚರೋ ರುಚಿರೋ ರುಚಿರಾಚರಃ ॥೭೮॥

ಸುಂದರವಾದ 'ಜಿಲ್ಲಿ' ಎಂಬ ಪಕ್ಷಿಗಳು ಸಂತೋಷದಿಂದ ಹಾರಾಡುವುದು, ಜಿಂಕೆಗಳು ಯಥೇಚ್ಛವಾಗಿ ಸುತ್ತುವುದರಿಂದ ಇಲ್ಲಿ ಯಾವ ತೊಂದರೆಯೂ ಇಲ್ಲವೆಂದು ತಿಳಿಯ ಬಹುದು. ಯಾವಾಗಲೂ ಇರುವ ಶ್ರೇಷ್ಠವಾದ ರಥಗಳಿಂದ ಕೂಡಿರುವುದೂ, ಸುಂದರವಾದ ಮರಗಳನ್ನು ಹೊಂದಿರುವುದು, ಆಶೆಯನ್ನು ವೃದ್ಧಿಸುವುದಾಗಿದೆ ಈ ಬೆಟ್ಟವು.

ಬೆಟ್ಟದ ಮಹಿಮೆಯ ವರ್ಣನೆ ಮುಂದುವರೆದಿದೆ. ಅದಂತ್ಯಕ್ಷ ದ್ವಯಕ್ಷರಃ ರ ಮತ್ತು ಚ ಇವೆರಡೇ ಅಕ್ಷರಗಳಲ್ಲಿ ಶ್ಲೋಕ ರಚಿತವಾಗಿದೆ. ಚಾ, ರು ಎಂಬ ಎರಡಕ್ಷರಗಳಿಂದಲೇ ರಚಿತವಾಗಿರುವ ಶ್ಲೋಕ.

ಚಾ, ಚೀ, ರೀ, ರು, ರೋ ಎಂಬ ಅಕ್ಷರಗಳು ವಿವಿಧ ರೀತಿಯಲ್ಲಿ ಪ್ರಯೋಗಿಸಲ್ಪಟ್ಟಿವೆ.

ನೀತಿನೇತ್ರ ನತಾನಂತ ನಿತಾಂತೋ ನ್ನತತಾ ನತಃ।
ತಾತೇತೋ ಅತನುತೋऽನಿ ನೀತಂ ನ ನುತ್ತೈನೋನು ತಾಂ ತತಃ॥ ॥೭೯॥

ನಿಧಿಯನ್ನು ಹೊಂದಿರುವುದರಿಂದ ನಮಿಸಲ್ಪಡುವವರೇ ! ಎದ್ದೇಳಿ! ಅಳತೆಗೆ ಮೀರಿ ಶ್ರೇಷ್ಠವಾದ ಜಾಗಗಳನ್ನು ಹೊಂದಿರುವುದು ಪಾಪಗಳೆಲ್ಲವನ್ನೂ ಹೋಗಲಾಡಿಸುವ ಸಾಮರ್ಥ್ಯವುಳ್ಳ ಮಹಾ ಪುರುಷರಿಂದ ಸೇವಿಸಲ್ಪಡುವುದು, ವಿಸ್ತಾರವಾದ ಈ ಬೆಟ್ಟದಲ್ಲಿರುವ ಪ್ರಜೆಗಳು ಹೊಂದದ ಸೌಭಾಗ್ಯ ಉಂಟೆ?

ಈ ಬೆಟ್ಟದಲ್ಲಿರುವವರು ಹೊಂದದೇ ಇರುವ ಸೌಭಾಗ್ಯ ಯಾವುದೂ ಇಲ್ಲ. ಆದ್ದರಿಂದ ಎಚ್ಚೆತ್ತುಕೊಂಡು ಈ ಬೆಟ್ಟದ ಪೂಜೆಯಲ್ಲಿ ತೊಡಗಿರಿ. ಹಿರಿಯರಾದ ನಿಮಗೆ ಹೆಚ್ಚಿಗೆ ಹೇಳಬೇಕಾದ ಅಗತ್ಯವೇನಿಲ್ಲ. ''ದಂನ್ತ್ಯದ್ವ್ಯಕ್ಷರಃ''

ನ, ತಾ ಎಂಬ ಎರಡು ಅಕ್ಷರಗಳು ನೀ, ನೇ, ನ, ನ್ನ ನು, ತಾ, ತೀ, ತ್ರ ತಾ, ತೋ ಎಂಬ ಅಕ್ಷರಗಳಿಂದ ವಿವಿಧ ಮೇಲಿನ ಅರ್ಥ ಬರುವಂತೆ ರಚಿತವಾಗಿದೆ.

ಸರಾ ಸಸಾರ ಸಾಸಾರ್ರೈಃ ಸೂರೋಃ ಸ್ರಸ ರುಸಾರಸ್ಯೈಃ।
ರಸಸೂಃ ಸರಸ ಸ್ರಸ್ಯೈಃ ಸರಃ ಸಾರ ರಸ್ಯೈರಸೌ॥ ॥೮೦॥

ಚಕ್ರವಾಕ ಪಕ್ಷಿಗಳು ಸುತ್ತಾಡುತ್ತಾ ಸೂರ್ಯನ ಕಿರಣಗಳಿಂದ ಅರಳಿದ ತಾವರೆಗಳನ್ನು ಹೊಂದಿರುವುದು, ಸಿಹಿಯಾದ ನೀರನ್ನು ಹೊಂದಿರುವ ಸರಸ್ಸುಗಳು ಇರುವ ಈ ಬೆಟ್ಟವು ತನ್ನಲ್ಲಿ ಇರುವ ಎಲ್ಲರಿಗೂ ಶ್ರೇಯಸ್ಸನ್ನುಂಟು ಮಾಡುತ್ತದೆ.

ಈ ಗೋವರ್ಧನ ಗಿರಿಯು ಸರ್ವ ಶ್ರೇಯಸ್ಕರವಾದುದು.

ಈ ಶ್ಲೋಕವು ''ದಂತ್ಯ ದ್ವ್ಯಕ್ಷರಃ'' ರೀತಿಯಲ್ಲಿ ರಚಿತವಾಗಿದೆ.

ಸ, ರಾ ಇವೆರಡು ಅಕ್ಷರಗಳಿಂದ ರಚಿತವಾಗಿದೆ.

ಸ, ಸಾ, ಸು, ಸ್ರ, ಸ್ಯೈ, ರ, ರಾ, ರೈ, ರೋ

ಧೀರ ಧೀರ ಧುರಾಧಾರೀ ಧಾರಾಧರ ಧರೋಽ ಅಧರೇ।
ರೋಧೋ ಧರಾ ರೋಧ ರೋಧಿ ಧಾರಾಧಾರೋ ಧರಾಧರಃ॥ ॥೮೧॥

ಧೀರ ಪುರುಷರೇ! ಈ ಬೆಟ್ಟವು ಕುಂಕುಮ ವೃಕ್ಷಗಳಿಂದ ಸಮೃದ್ಧವಾಗಿ ಕೂಡಿದೆ. ದಟ್ಟವಾದ ಮೇಘಗಳಿಂದ ಕೂಡಿ, ತಡೆಗಳನ್ನು ನೀಗಿ, ಮಳೆ ಸುರಿದು, ಪ್ರವಾಹವು ಹರಿಯುತ್ತಿರುತ್ತದೆ. ಸಮೃದ್ಧಿಯಾದ ಪ್ರಕೃತಿ ಸಂಪತ್ತನ್ನು ಹೊಂದಿದೆ ಈ ಬೆಟ್ಟ.

ಈ ಶ್ಲೋಕವೂ ಸಹ ''ದ್ವಯಕ್ಷರ''ದಲ್ಲಿ ರಚಿತವಾಗಿದೆ.

ಧ ಮತ್ತು ರ ಎರಡು ಅಕ್ಷರಗಳು.

ಧೀ, ರ, ಧಾ, ರೋ, ಧು.

ಭೂಭೃ ನ್ನಿಭೇ ಭಭಾನೇ ನಾನೇನ ಭೂನಾಭಿ ನೇನಭ।
ಭಾನು ಭಾನು ಭಭಾ ಭಿನ್ನಂ ನುನ್ನಂ ನೂನಂ ನ ನೋ ನಭಃ॥ ॥೮೨॥

ಸೂರ್ಯನಂತೆ ಪ್ರಕಾಶಿಸುವವರೆ! ಹಗಲಲ್ಲಿ ಸೂರ್ಯನ ಪ್ರಕಾಶವು ರಾತ್ರಿಯಲ್ಲಿ ನಕ್ಷತ್ರಗಳ ಸಮೂಹದ ಮೇಲೆ ಆಕಾಶವಾದುದು ಬೆಟ್ಟಗಳಿಗೆ ಸಮನಾದ ಆನೆಗಳಿಂದ ಬೆಳಗಿ ಈ ಬೆಟ್ಟದಲ್ಲಿ ಕತ್ತಲೆಯು ಇಲ್ಲವೇನೋ ಎನ್ನುವಂತಿದೆ.

ಬೆಳಗಿನ ಹೊತ್ತು ಪ್ರಕಾಶಮಾನವಾದ ಸೂರ್ಯನ ಬೆಳಕು, ರಾತ್ರಿಯ ನಕ್ಷತ್ರ ಮಂಡಲ ದಿಂದ ಕೂಡಿದ ಚಂದ್ರನ ಬೆಳಕಿನಿಂದ, ಈ ಬೆಟ್ಟದ ಮೇಲೆ ಕತ್ತಲೆಯು ಕಾಣಿಸುವುದೇ ಇಲ್ಲ.

ದ್ವಯಕ್ಷರದ ಶ್ಲೋಕ. ಭ ಮತ್ತು ನಾ - ಎರಡಕ್ಷರ.

(ಭು, ಭೃ, ನ, ನ್ನ, ನಾ, ನೇ, ನ್ನಂ)

ತತ್ರ ತತ್ರಾತಿ ತಾರೇಽತ್ರ ತಾರಾತೀತ ತರೂತ್ತರೇ।
ತರೇತ್ ತಾತಾ ರತಿ ರೇ ತಾತತೇ ತ್ರಾತರಿ ತೇ ರತಿಃ॥ ॥೮೩॥

ತಾತರಾದ ನಂದರೇ! ಅಲ್ಲಲ್ಲಿ ನಕ್ಷತ್ರಗಳ ಬೆಳಕಿನಲ್ಲಿ ತೋರುವ ಶ್ರೇಷ್ಠ ಮರಗಳನ್ನು ಹೊಂದಿರುವುದೂ ತಂಗಲು ಬಂದವರಿಂದ ಶ್ಲಾಘಿಸಲ್ಪಟ್ಟದ್ದೂ, ಎಲ್ಲರನ್ನೂ ಕಾಪಾಡುವುದೂ ಆದ ಈ ಬೆಟ್ಟದಲ್ಲಿ ನಿಮಗೆ ಉಂಟಾದ ಅನೇಕ ಆಯಾಸಗಳನ್ನು ನೀಗುತ್ತದೆ. (ಪ್ರೀತಿಯಾದುದು)

ನಿಮ್ಮ ಎಲ್ಲಾ ಆಯಾಸಗಳನ್ನು ಈ ಬೆಟ್ಟವು ಹೋಗಲಾಡಿಸುತ್ತದೆ. ಅತ್ಯಂತ ಶ್ರೇಷ್ಠ ಮರಗಳನ್ನು ಹೊಂದಿದೆ.

ಇದೂ ಕೂಡ ದ್ವಯಕ್ಷರದ ಶ್ಲೋಕ. ತ ಮತ್ತು ರ ಅಕ್ಷರಗಳು ಮಾತ್ರ.

ತ, ತ್ರ, ರ, ರು, ರೆ, ತಾ – ಈ ಅಕ್ಷರಗಳಿಂದ ಹೆಣೆಯಲ್ಪಟ್ಟ ಶ್ಲೋಕ.

ಪದ ವಿಭಾಗದಿಂದ ಮೇಲಿನ ಅರ್ಥ ತೋರಿ ಬರುತ್ತದೆ.

ವಿತತೀತಾ ವೃತಿ ವೃತೆ ವೀತಾತೀತ ವೃತಾ ವೃತೌ।
ತಾತಾ ವಾತಾತಿ ವೃತ್ತೇಽತಿ ವಾತೋಽತಿ ವಾತತೇಽ ವತಿ॥ ॥೮೪॥

ಪಕ್ಷಿಗಳು ಸಮೂಹ ಸಮೂಹವಾಗಿ, ವಸಿಸುವ ತೋಪುಗಳನ್ನು ಹೊಂದಿದೆ. ಆದಿ ಎಂಬ ಪಕ್ಷಿಗಳ ಪ್ರವಾಹವನ್ನು ಹೊಂದಿರುವುದೂ, ವಿಷಯಾಸಕ್ತಿ ಉಳ್ಳವರು ತಂಗುವ ಸ್ಥಳವಾದ ವಿಶಾಲವಾದ ಇಲ್ಲಿ ಒಂದೊಂದು ಋತುವಿನಲ್ಲೂ ಗಾಳಿಯು ಎಲ್ಲವನ್ನೂ ಕಾಪಾಡುತ್ತದೆ.

ಪ್ರಣಯಿಗಳು ಇಲ್ಲಿ ಆನಂದವಾಗಿ ಎಲ್ಲಾ ಋತುಗಳಲ್ಲೂ ವಿಹರಿಸಬಹುದು. ಆದಿ ಎಂಬ ಪಕ್ಷಿಗಳು ಹೇರಳವಾಗಿವೆ.

ಇದೂ ದ್ವಯಕ್ಷರದಿಂದ ಕೂಡಿರುವ ಶ್ಲೋಕ. ವಾ, ವ, ತಾ, ತಿ, ವೃ, ವೀ –

ವ ಮತ್ತು ತ ಅಕ್ಷರಗಳ ವಿವಿಧ ಪ್ರತ್ಯಯಗಳಲ್ಲಿ ಶ್ಲೋಕ ರಚನೆಯಾಗಿದೆ.

ನುನ್ನೈನಸಾಂ ನಿನಂ ಸೂನಾಂ ಸಾನೂ ನಾಸ ನಸಾನುನಾ।
ಸಾನ ಸಾಂ ನಃ ಸಸೇ ನಾನಾಂ ಸಾಽಽನೇನಾಽಽಸನ್ನಸುಃ ಸನಿಃ॥ ॥೮೫॥

'ಅಸನ' ಎಂಬ ಮರಗಳನ್ನು ಹೆಚ್ಚಾಗಿ ಹೊಂದಿರುವ ಈ ಬೆಟ್ಟದಿಂದ ಪಾಪಗಳನ್ನು ಕಳೆದುಕೊಂಡವರಾಗಿ ನಮಸ್ಕರಿಸಲ್ಪಡುವವರಾದ, ನಾವು ಅದಕ್ಕಾಗಿ ಬಂಡಿಗಳನ್ನು ಸೇನೆಗಳನ್ನು ಹೊಂದಿರುವ ನಮ್ಮ ಕೋರಿಕೆಯಾದುದು ಮುಂದೆ ಬರುವ ಫಲಗಳಿಗೆ ಕಾರಣವಾಗಿದೆ.

ನಾವು ನಮ್ಮ ಬಂಡಿಗಳನ್ನು ಸೇನೆಗಳನ್ನು ತಂದು ಇಲ್ಲಿ ಇರಿಸೋಣ. ಈ ಬೆಟ್ಟವನ್ನು ಆರಾಧಿಸಿದಲ್ಲಿ ನಮ್ಮ ಎಲ್ಲಾ ಕೋರಿಕೆಗಳೂ ಈಡೇರುವುವು.

ಇದೂ ದ್ವಯಕ್ಷರದಿಂದ ಕೂಡಿರುವ ಶ್ಲೋಕ.

ನ ಮತ್ತು ಸಾ ಅಕ್ಷರಗಳಿಂದ

ನು, ನೈ, ನ, ನಿ, ನಾ, ಸಾ, ಸು, ಸ, ಸೇ, ಸುಃ

ಆಚಾರ್ಯರು ಅನೇಕ ಅಕ್ಷರಗಳಲ್ಲಿ ದ್ವಯಕ್ಷರ ಶ್ಲೋಕಗಳನ್ನು ರಚಿಸಿ, ತಮ್ಮ ಕಾವ್ಯ ಪ್ರತಿಭೆಯನ್ನು ಮೆರೆದಿದ್ದಾರೆ.

ಕಲ್ಲೋಲಲೋ ಲ್ಲೋಲಕೀಲಾಲೆ ಕೇಕಾ ಕಲ ಕಲಾಕುಲೇ।
ಕಾಲಿ ಕಾಕಾ ಲಿಲಾ ಲೋಕೆ ಕಾಲೆ ಕಾಲೆ ಕಿಲೈ ಕಕುಃ ॥ ॥೮೬॥

ಪೇರಳೆಗಳಿಂದ ಉಂಟಾದ ನೀರಿನ ಪ್ರವಾಹವುಳ್ಳದೂ, ನವಿಲುಗಳ ಕೇ ಕಾ ಎಂಬ ಕೂಗುಗಳ ಕೋಲಾಹಲವು ಉಂಟಾಗಿ, ಕಾರ್ಮೋಡಗಳಿಂದ ಕಡಿಮೆಯಾದ ಬೆಳಕಿನ ಕಾಲವು ಬರುವಾಗಲೆಲ್ಲಾ ಇದೊಂದು ನಮಗೆ ಸರಿಯಾದ ಜಾಗವಾಗಿದೆ.

ಇದು ನಮಗೆ ಸರ್ವೋತ್ಕೃಷ್ಟ ಜಾಗವಾಗಿದೆ.

ಇದೂ ಕೂಡ ದ್ವಯಕ್ಷರದಿಂದ ಕೂಡಿರುವ ಶ್ಲೋಕ.

ಕ, ಲ – ಕ, ಲ್ಲೋ ಲೊ, ಲ, ಕೀ, – ಲಾ, ಲೇ, ಕೇ, ಕಾ, ತು ತಾ, ಲೀ,

ಕ ಮತ್ತು ಲ – ಇವುಗಳ ವಿವಿಧ ಸಂಯೋಜನೆಯಲ್ಲಿ ವಿವಿಧ ಅರ್ಥಗಳು.

ಪತತಾ ಪತತೋ ಪೇತಃ ಪತಿತೋತ್ಪತಿತಾ ತಪಃ।
ಪಾತಾ ಪೀತೋ ಪತಾ ಪೋऽಪಿ ತಪಃ ಪೂತ ಪತೇ ಪಿತಃ ॥ ॥೮೭॥

'ಪರ' ಎಂಬ ಪಕ್ಷಿಗಳನ್ನು ಹೊಂದಿರುವುದು. ಬಿಸಿಲು ಕೆಲ ಜಾಗಗಳಲ್ಲಿ ತೀಕ್ಷ್ಣವಾದುದು. ಕೆಲ ಜಾಗಗಳಲ್ಲಿ ಸೌಮ್ಯವಾದುದು. ಸುಖೋಷ್ಣವಾಗಿರುವ ಈ ಬೆಟ್ಟವು ನಮ್ಮನ್ನು ಕಾಯುತ್ತದೆ. ತಪಸ್ಸನ್ನು ಅರಿತು ಶುದ್ಧವಾದವರಿಗೆಲ್ಲಾ ಸ್ವಾಮಿಯೇ! ಅನುಗ್ರಹಿಸಿ.

ನಂದ ಗೋಪರೇ, ಈ ಬೆಟ್ಟವನ್ನು ದಯಮಾಡಿ ಸ್ವೀಕರಿಸಿ. ಎಂದು ಶ್ರೀಕೃಷ್ಣನು ತಂದೆಯನ್ನು ಪ್ರಾರ್ಥಿಸುತ್ತಿದ್ದಾನೆ. ಇಲ್ಲಿ ಮತ್ತೆ ದ್ವಯಕ್ಷರ– ಪ, ತ, ತಾ, ತೋ, ಪೆ, ತಿ

ಸರಿಯಾಗಿ ಪದ ವಿಭಾಗ ಮಾಡದಿದ್ದರೆ ಅಪಾರ್ಥಕ್ಕೆ ಎಡೆಯಾದೀತು.

ಭೂತ ಭೂತೇ ಭೃತ ಭೃತೋ ಭೀತ ತಾ ಭೀತಿ ಭೂತಿಭುಃ।
ಭಾತೀತೋ ಭೂಭೃತೋ ಭಾಭೃದ್ಬಾತಾ ಭಾತಾ ತು ಭೃತಿತಃ ॥೮೮॥

ಕರಗದ ಸಂಪತ್ತುಳ್ಳವರೇ, ಎಲ್ಲರಿಗೂ ಅಭಯವನ್ನು ನೀಡುವುದೂ, ನಕ್ಷತ್ರ ಮಂಡಲ ವನ್ನು ದಾಟಿ ಭೂತನಾಥನಾದ ಶಿವನ ಬೆಟ್ಟವಾದ ಕೈಲಾಸದ ಹಿರಿಮೆಯನ್ನು ಹೊಂದಿರುವ ಈ ಬೆಟ್ಟವು ಐಶ್ವರ್ಯದಿಂದ ತುಂಬಿ ಬೆಳಗುತ್ತಿದೆ.

ಈ ಬೆಟ್ಟವು ಶಿವನ ಆವಾಸ ಸ್ಥಾನವಾದ ಕೈಲಾಸಕ್ಕೆ ಸಮನಾದುದು. ಪ್ರಕೃತಿ ಸಂಪತ್ತಿನಿಂದ ಕೂಡಿದೆ.

ದ್ವಯಕ್ಷರ - ಭು, ತ-

ಭೂ, ಭೃ, ಭೀ, ತ, ತೋ, ತೀ, ತಾ,

ಭೂತ ಭೂತೆ, ಭೂತ ಭೃತೋ, ಭೀತತಾ, ಭೀತಿಭು,

ಭಾ, ತಿತೋ, ಭುಭೃತೋ, ಭಾತಾ, ಭೂತಿತಃ ಇತ್ಯಾದಿ.

ಪದಗುಚ್ಛಗಳನ್ನು ಬಳಸಿ ಶ್ಲೋಕ ರಚಿಸಿದ್ದಾರೆ.

ಮರು ಮುರ್ಮರ ಮರ್ಮಾರಿಂ ಮಾರಮಾರೇಽ ಮರಾಮರೆ।
ರಮಾರಾಮೇ ಮುರಾರೌ ರುರಾಮೇಮ ಮುರು ಮೇರುಮಮ್॥ ॥೮೯॥

ಮನ ಮನ್ಮಥನಾಗಿ, ದೇವ ದೇವನಾಗಿ, ಮಹಾಲಕ್ಷ್ಮಿಗೆ ಸಂತೋಷವನ್ನುಂಟು ಮಾಡುವ, ಮುರಾಸುರ ಸಂಹಾರ ಮಾಡಿದ ಸ್ವಾಮಿಗೆ ಸೇರಿದ ಶರಣಾಗತ ರಕ್ಷಣವೆಂಬ ಪ್ರಸಿದ್ಧಿಯು ಮೇರು ಪರ್ವತಕ್ಕಿಂತ ಹಿರಿದಾದ ಪ್ರಸಿದ್ಧಿಯನ್ನು ಹೊಂದಿರುವ ಈ ಬೆಟ್ಟದ ಮೂಲಕ ಬೆಳಗುತ್ತಿದೆ. ತನ್ನ ಪಾದವನ್ನು ಇಲ್ಲಿ ಇಟ್ಟು ಭಗವಂತನು ಬೆಳಗುತ್ತಿದ್ದಾನೆ.

ಇಲ್ಲಿ ಭಗವಂತನು ತನ್ನ ಸರ್ವಶ್ರೇಷ್ಠವಾದ ಶರಣಾಗತ ಧರ್ಮವನ್ನು ಪಾಲಿಸಿ ಬೆಳಗುತ್ತಾನೆ. ಆದ್ದರಿಂದ ಅವನನ್ನು ಶರಣು ಹೊಂದಿ, ನಿರ್ಭಯವಾಗಿ ಇಲ್ಲಿ ವಾಸಿಸೋಣ.

ದ್ವಯಕ್ಷರ - ಮ ಮತ್ತು ರ

ಮ, ಮೂ, ರ್ಮ, ರ್ಮಾ ಮಾ
ರು, ರ, ರಿ, ರೆ ರಾ, } ವ್ಯಾಖ್ಯಾನವನ್ನು ಓದಿಯೇ ಅರ್ಥ ಅರಿಯಬೇಕು.

ರವಿರೇ ರಾವ ರಾವಾರೋಽ ವರ ವೈರಿವಿರಾವರ।
ವಿವರಾರಾ ವಿವಿವರೋ ವೀರ ವರ್ವೇ ವರ್ರೈರುರುಃ ॥ ॥೯೦॥

ವಿಷ್ಣುವನ್ನು ಆರಾಧಿಸುವವರೇ! ವೀರರೇ! ಶ್ರೇಷ್ಠರಾದ ಶತ್ರುಗಳನ್ನು ನಾಶಪಡಿಸುವವರೇ, ಸೂರ್ಯನನ್ನು ಮುಟ್ಟಿ ಪ್ರೇರಣೆ ಮಾಡುವ, ಕುಂಕುಮ ಮರಗಳಿಂದ ತುಂಬಿರುವ ಈ ಬೆಟ್ಟವು ಶ್ರೇಷ್ಠ ಪಕ್ಷಿಗಳಿಂದಲೂ ಸೇವಿಸಲ್ಪಡುತ್ತದೆ.

ಮತ್ತೆ ಈ ಶ್ಲೋಕದಲ್ಲಿ ಬೆಟ್ಟದ ವರ್ಣನೆಯಾಗಿದೆ.

ಕಡೆಯ ದ್ವಯಕ್ಷರ ಶ್ಲೋಕ - ರ ಮತ್ತು ವ

ರ, ರೆ, ರಾ, ರೋ, ರಿ
ವಿ, ವ, ವೈ, ವ್ರೆ } ಈ ಅಕ್ಷರಗಳ ವಿವಿಧವಾಗಿ ಜೋಡಣೆಯಾಗಿದೆ.

ಮಾನಯಾನನ್ಯ ನಿಯಮೋ ಮಾನ್ಯಮೇನ ಮನಾಮಯಃ।
ಯಮಿನಾಂ ನಾಮ ನಮ್ಯೋऽಸ ಯಮ ಮೇಯೋ ಮೌನ ಮಾನಿನಾಮ್॥ ॥೯೧॥

ಇಂದ್ರಾದಿಗಳನ್ನು ಆರಾಧಿಸುವುದು ಎಂಬ ಕಟ್ಟುಪಾಡನ್ನು ಬಿಟ್ಟುಕೊಂಡಾಡಲ್ಪಡಬೇಕಾದ ಈ ಬೆಟ್ಟವನ್ನು ಪೂಜಿಸಿರಿ. ರೋಗಗಳನ್ನೆಲ್ಲಾ ಹೋಗಲಾಡಿಸಿ, ಆರೋಗ್ಯವನ್ನು ಕರುಣಿಸುವ ಈ ಬೆಟ್ಟವು ಯೋಗಿಗಳಿಂದ ನಮಸ್ಕರಿಸಲ್ಪಡತಕ್ಕದ್ದಾಗಿದ್ದು ಆಗಿದೆ. ಅಹಂಕಾರದಿಂದ ಬೀಗುವವರಿಗೆ ಇದನ್ನು ಅರಿಯಲಾಗದು.

ಅಹಂಕಾರವನ್ನು ಬಿಟ್ಟು ಈ ಬೆಟ್ಟವನ್ನೇ ಪೂಜಿಸೋಣ. ಸಮಸ್ತ ಕಲ್ಯಾಣವೂ ಉಂಟಾಗುವುದು. ಆರೋಗ್ಯವನ್ನೂ ಈ ಬೆಟ್ಟವು ಕರುಣಿಸುತ್ತದೆ.

ಈ ಶ್ಲೋಕವು "**ಅಮೂರ್ಧನ್ಯ ತ್ರಯಕ್ಷರಃ**" ದಲ್ಲಿ ರಚಿತವಾಗಿದೆ.

ಮಾ, ನ, ಯಾ, ಈ ಮೂರು ಅಕ್ಷರಗಳು.

ಮಾ, ಮೊ, ಮೆ, ಮ, ಮಿ, ಮೌ
ನ, ನಿ, ನಾ, ನಾಂ, ನ್ಯ
ಯಾ, ಯ, ನ, ಯಃ ಯೋ } ಈ ಅಕ್ಷರಗಳ ವಿವಿಧವಾಗಿ ಜೋಡಣೆಯಾಗಿದೆ.

ನಿಃ ಸಮಾನೇನ ಮಾನೇನ ಸುಮನೋ ಮಾನಸ್ಯೈಃ ಸಮಃ।
ಸೋಮ ಸೀಮಾ ಸಮಾಸನ್ನಸಾನುಮಾನ್ ಸಾನುಮಾನ ಸೌ ॥ ॥೯೨॥

ಈ ಬೆಟ್ಟವು ಅನೇಕ ಹಿರಿಮೆಯನ್ನು ಹೊಂದಿರುವ ಸತ್ಪುರುಷರ ಮನಸ್ಸಿನಂತೆ ವಿಶಾಲ ವಾದುದೂ, ಚಂದ್ರ ಮಂಡಲದಂತೆ ತೇಜಸ್ಸನ್ನು ಹೊಂದಿದೆ

ಬೆಟ್ಟದ ವರ್ಣನೆ ಇನ್ನೂ ಮುಂದುವರೆದಿದೆ.

ಈ ಶ್ಲೋಕವೂ ಕೂಡ "ಅಮೂರ್ಧನ್ಯ ತ್ರಯಕ್ಷರಃ" ದಲ್ಲಿ ರಚಿತವಾಗಿದೆ.

ನ, ಸ, ಮಾ – ಇವೇ ಆ ಮೂರು ಅಕ್ಷರಗಳು.

ಸ, ಸು, ಸ್ಯೈ, ಸೋ, ಸೀ, ಸೌ
ಮಾ, ಮ, ಮಃ } ಈ ಅಕ್ಷರಗಳ ವಿವಿಧವಾಗಿ ಜೋಡಣೆಯಾಗಿದೆ.

ತಾ ತೇತಾತೀ ತಿತಾ ತೀತಃ ಕೇ ಕಾಕಾ ಕುಕಕೆ ಕಿಕಃ ।
ಪಾಪೋಪ ಪಾಪ ಪಾಪಾಪೋ ನಾನಾ ನಾನಾ ನ್ನನಾ ನ್ನನೀಃ॥ ॥೯೩॥

ನಂದಗೋಪರೇ! ಈ ಬೆಟ್ಟವು ಅತಿ ವೃಷ್ಟಿ ಮೊದಲಾದ ರೀತಿಯ ಬಾಧೆಗಳು ಇಲ್ಲದೆ ವಿಶೇಷವಾಗಿ ಬೆಳಗುವುದು. ಕೇಕಾ ಎಂಬ ಶಬ್ದ ಮಾಡುವ ನವಿಲುಗಳನ್ನು ಹೊಂದಿರುವ ಪಾತಕ ಉಪ ಪಾತಕಗಳನ್ನೆಲ್ಲಾ ಹೋಗಲಾಡಿಸುವ ಅನೇಕ ತೀರ್ಥಗಳನ್ನು ಹೊಂದಿದೆ.

ಅನೇಕ ವಿಧವಾದ ಆಹಾರ ಹೊಂದಿರುವವರು, ಒಂದೇ ವಿಧವಾದ ಆಹಾರ ಸೇವಿಸುವವರು ಆಹಾರವನ್ನೇ ಬಿಟ್ಟವರು - ಇತ್ಯಾದಿ ಎಲ್ಲಾ ಚೇತನರುಗಳಿಗೂ ಬಾಳನ್ನು ಸಾಗಿಸಲು ಅವಕಾಶ ನೀಡುತ್ತಿದೆ. ಯಾವ ಇತಿ ಬಾಧೆಗಳೂ ಈ ಬೆಟ್ಟದಲ್ಲಿ ಇರುವುದಿಲ್ಲ,

ಅವರವರಿಗೆ ಬೇಕಾದ ಆಹಾರವು ಸಿಗುತ್ತದೆ.

ಈ ಶ್ಲೋಕವು ''ಪ್ರತಿಪಾದ ಭಿನ್ನೇಕಾಕ್ಷರಃ''ದಲ್ಲಿ ರಚಿತವಾಗಿದೆ.

ತ ಇಂದ ಒಂದು ಪಾದ, ಕ ಇಂದ ಒಂದು ಪಾದ,

ಪಾ ಇಂದ ಮೂರನೇ ಪಾದ, ನಾ ಇಂದ ನಾಲ್ಕನೇ ಪಾದ.

ಯಯೀಯಾ ಯಾಯ ಯೋ ಯೋಯಃ ಸ ಸೋಽಸಸೌ ಸಾಸ ಸಾ ಸೂಸೂಃ।
ಮಮ ಮಾಮೋಽ ಮಮಾ ಮಾಮ ಗೋಗಾ ಗೋಗಾ ಗ್ಗಗೋ ಗಗುಃ॥ ॥೯೪॥

ವಿಷ್ಣುವನ್ನು ಆಶ್ರಯಿಸಿದವರೆ! ಹಗೆಗಳನ್ನು ನಿಗ್ರಹಿಸುವವರೆ! ಐಶ್ವರ್ಯವಿಲ್ಲದವರಿಗೆ ಐಶ್ವರ್ಯವನ್ನು ಕೊಡುವವರೆ! ಸೂರ್ಯನ ಕಿರಣಗಳಿಂದ ಬಾಧೆಯನ್ನು ಹೊಂದುವ ಮರಗಳನ್ನು ಹೊಂದಿರುವುದೂ, ಆ ಮರಗಳ ಅಡಿತಳಗಳಲ್ಲಿ ಹಸುಗಳು ತಂಗುತ್ತವೆ. ಉಸಿರನ್ನು ಕೊಡುವ ಔಷಧಿಗಳು ಬೆಳೆಯುವ ಈ ಬೆಟ್ಟವಾದುದು. ಎಷ್ಟು ವಿಧವಾದ ಐಶವರ್ಯವುಂಟೋ ಎಷ್ಟು ಮಂಗಳಕರವಾದ ಭಾಗ್ಯವುಂಟೋ ಅವೆಲ್ಲವನ್ನೂ ಹೊಂದಿದೆ.

ಶ್ರೀ ಕೃಷ್ಣನು ಮತ್ತೆ ಮತ್ತೆ ಬೆಟ್ಟದ ಸರ್ವ ವಿಧ ಐಶ್ವರ್ಯ ಸಂಪತ್ತನ್ನು ನಂದಗೋಪಾದಿಗಳಿಗೆ ಹೇಳುತ್ತಿದ್ದಾನೆ.

ಈ ಶ್ಲೋಕವು ಸಹ ''ಪ್ರತಿಪಾದ ಭಿನ್ನೈಕಾಕ್ಷರ''ದಲ್ಲಿ ರಚಿತವಾಗಿದೆ.

ಮೊದಲನೇಯ ಪಾದವು ಯ ಅಕ್ಷರದಲ್ಲಿ
ಎರಡನೇಯ ಪಾದವು ಸ ಅಕ್ಷರದಲ್ಲಿ
ಮೂರನೇಯ ಪಾದವು ಮ ಅಕ್ಷರದಲ್ಲಿ
ನಾಲ್ಕನೇಯ ಪಾದವು ಗ ಅಕ್ಷರದಲ್ಲಿ

ರೂರೂರೂ ರೂರಿ ರಾರೋಽರಂ ದುದಾದಿಂ ದದ ದಾದಿ ದಃ।
ಲಾಲಿ ಲೋಲಾ ಲಿಲೀ ಲಾಲೋ ಹಾಹಾ ಹೂಹೂ ಹಹೇ ಹ ಹಿ॥ ॥೯೫॥

ಇತರರಿಗೆ ತಾಪವನ್ನು ಉಂಟು ಮಾಡುವವರನ್ನು ನಿಗ್ರಹಿಸುವರೇ! ಹಾಹಾ, ಹೂಹೂ ಎಂಬುದರಿಂದಲೂ ಊಹಿಸಲಾಗದು. ಕಾರ್ಯಗಳನ್ನು ಮಾಡುವವರೆ! ಈ ಬೆಟ್ಟವು ಮೃಗಗಳು ಕೂಗುವ ಸ್ಥಳವಾದ ಜಲ ಸಮೃದ್ಧಿ ಇರುವ, ಚೆನ್ನಾಗಿ ಪೂಜಿಸುವವರಿಗೆ ಎಲ್ಲವನ್ನೂ ಕೊಡುವ ದುಂಬಿಗಳಿಗೆ ಯಥೇಚ್ಛವಾಗಿ ವಿಹಾರವನ್ನು ಒದಗಿಸುತ್ತದೆ.

ಮೊದಲನೇಯ ಪಾದವು	ರ	ಅಕ್ಷರದಲ್ಲಿ	}	ಅಪ್ಪಯ್ಯ ದೀಕ್ಷಿತರು ದೀರ್ಘವಾದ ವ್ಯಾಖ್ಯಾನವನ್ನು ಅನುಗ್ರಹಿಸಿದ್ದಾರೆ.
ಎರಡನೇಯ ಪಾದವು	ದ	ಅಕ್ಷರದಲ್ಲಿ		
ಮೂರನೇಯ ಪಾದವು	ಲಾ	ಅಕ್ಷರದಲ್ಲಿ		
ನಾಲ್ಕನೇಯ ಪಾದವು	ಹಾ	ಅಕ್ಷರದಲ್ಲಿ		

ನಾನಾನಾನಾನಾನಾನಾನಾ ನಾನಾನಾನಾನಾನಾನಾನಾ ।
ನಾನಾನಾನಾನಾನಾನಾನಾ ನಾನಾನಾನಾನಾನಾನಾನಾ ॥ "ಏಕಾಕ್ಷರಃ" ॥೯೬॥

ಆರಾಧಿಸಲು ಯೋಗ್ಯವಲ್ಲದ, ಆರಾಧಿಸದೆ ಇರಲು ಸಾಧ್ಯವಿಲ್ಲದ ಕೆಲವು ವಸ್ತುಗಳಿವೆ. ಕೆಲವರು ಆರಾಧಿಸಲು ಇಷ್ಟಪಡುವ, ಕೆಲವರು ಆರಾಧಿಸಲು ಇಷ್ಟಪಡದ ಕೆಲವು ವಸ್ತುಗಳಿವೆ. ಆಯಾಯ ವಸ್ತುಗಳ ಯೋಗ್ಯತೆಯನ್ನು ಸರಿಯಾಗಿ ಗ್ರಹಿಸಬೇಕು.

ಇದು ಏಕಾಕ್ಷರ ಶ್ಲೋಕ. ಕೇವಲ 'ನಾ' ಎಂಬ ಅಕ್ಷರವನ್ನು ತೆಗೆದುಕೊಂಡು 32 ಬಾರಿ 'ನಾ' ಪ್ರಯೋಗಿಸಲ್ಪಟ್ಟಿದೆ.

ಪಾದುಕಾ ಸಹಸ್ರದಲ್ಲಿ 'ಯಾ' ಅಕ್ಷರದಲ್ಲಿ ಈ ರೀತಿಯ ಶ್ಲೋಕವಿದೆ.

ಇತಿ ತತ್ವಮತತ್ವಂ ಚ ಯಥಾವದವ ಗಾಢಯಾ ।
ಅರ್ಚ್ಯಾನರ್ಚ್ಯೌ ಧಿಯಾಭಿಂದನ್ ಗೋಧನಾನ್ಯವ ಗಾಢಯಾ ॥ ॥೯೭॥

ಹೀಗೆ ಇದು ನಿಜವು. ಇದು ತಕ್ಕುದಲ್ಲ ಎನ್ನುವವರನ್ನು ಸರಿಯಾಗಿ ವಿಚಾರಿಸಿ, ಉತ್ತಮ ಬುದ್ಧಿಯಿಂದ ಆರಾಧಿಸಲ್ಪಡುವ, ಬೇಕಾದುದನ್ನು ಬೇಡದುದನ್ನು ವಿವೇಚನೆಯಿಂದ ತಿಳಿದು ಮಾಡುವ ನಮ್ಮ ಜ್ಞಾನವನ್ನು ಕಾಪಾಡಿಕೊಳ್ಳಬೇಕು.

ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಮ್ಮ ವಿವೇಚನೆಯಿಂದ ಅರಿತು, ಸರಿಯಾದುದನ್ನು ಮಾತ್ರ ಆಚರಿಸಬೇಕು. ಆರಾಧಿಸಬೇಕಾದ ಈ ಬೆಟ್ಟವನ್ನು ಆರಾಧಿಸಿ, ಆರಾಧಿಸಲು ಅಗತ್ಯ ಇಲ್ಲದ ದೇವತೆಗಳ ಆರಾಧನೆಯನ್ನು ಬಿಟ್ಟುಬಿಡೋಣ. ಇದರಿಂದ ಯಾವ ತೊಂದರೆಯೂ ಇರುವುದಿಲ್ಲ. ಭಗವಂತನು ನಮ್ಮನ್ನು ಕಾಪಾಡುತ್ತಾನೆ.
ಹಿಂದಿನ ಶ್ಲೋಕದ ವಿವರಣೆ ಈ ಶ್ಲೋಕದಲ್ಲಿದೆ.

ನಯಾನಯಾನಯಾನಯಾನಯಾನಯಾನಯಾನಯಾ ।
ನಯಾನಯಾನಯಾನಯಾನಯಾನಯಾನಯಾನಯಾ ॥ ॥೯೮॥

ನೀವು ಅನೀತಿಗಳನ್ನು ಅನುಸರಿಸದವರಾಗಿ, ಒಬ್ಬನು ತೆಗೆದುಕೊಂಡು ಹೋಗುವುದನ್ನು ಎದುರು ನೋಡದೆ, ತಾವೇ ಮಾಡುವುದು, ವಿಷ್ಣುವನ್ನು ಶರಣು ಹೊಂದುವ, ಕೆಳಗೆ ಹೇಳಿದ ನಿಮ್ಮ ಬುದ್ಧಿಯಿಂದ, ನ್ಯಾಯವಾದುದನ್ನು ಶುಭವಾದುದನ್ನು ಮಾಡಿರಿ. ಅನ್ಯಾಯವನ್ನೂ ಅಶುಭವನ್ನೂ ಹೋಗಲಾಡಿಸಿ.

ಅನೀತಿಗಳನ್ನು ಅನುಸರಿಸಬೇಡಿ. ನಿಮ್ಮ ಬುದ್ಧಿಯಿಂದ ಕೇವಲ ನ್ಯಾಯವಾದುದನ್ನು ಮಾತ್ರ ಮಾಡಿ.

ದ್ವಯಜಲ್ ಶ್ಲೋಕ	ಮೊದಲನೇಯ ಶ್ಲೋಕವನ್ನು ತಿರುಗುಮುರುಗಾಗಿ ಓದಿದರೆ ಎರಡನೇಯ ಶ್ಲೋಕ ದೊರಕುತ್ತದೆ. ಹಾಗೆಯೇ ಎರಡನೇಯ ಶ್ಲೋಕವೂ ಸಹ.

ನಯಾ ಎಂಬ ಪದವನ್ನು 16 ಬಾರಿ ಪ್ರಯೋಗಿಸಿದೆ. ಮುಂದಿನ ಶ್ಲೋಕದಲ್ಲಿ ಯಾನ ಎಂಬ ಪದ 16 ಬಾರಿ ಪ್ರಯೋಗಿಸಲ್ಪಟ್ಟಿದೆ. ಎರಡನೇಯ ಶ್ಲೋಕವು ಹೀಗಿದೆ.

ಯಾನಯಾನಯಾನಯಾನ ಯಾನಯಾನಯಾನಯಾನ।
ಯಾನಯಾನಯಾನಯಾನ ಯಾನಯಾನಯಾನಯಾನ॥

ಮಾಯಾಭಾಸಾ ಸಾಭಾಯಾಮಾ ಯಾಸೂತಾಯಾ ಯಾತಾ ಸೂಯಾ।
ಭಾತಾ ಯಾಯಾ ಯಾಯಾತಾಭಾ ಸಾ ಯಾಯಾಗೇ ಗೇಯಾ ಯಾಸಾ ॥೯೯॥

ಹೊಸ ಹೊಸದಾಗಿ ವಿಷಯಗಳನ್ನು ತೋರಿ ಪ್ರಕಾಶಿಸುವುದೂ ಆಶ್ಚರ್ಯವಾಗಿರುವುದು ಯಾವುದಿದೆಯೋ ಈ ರೀತಿಯ ನಿಮ್ಮ ಬುದ್ಧಿಯಾದುದು ಭಾಗ್ಯದಿಂದ ಕೂಡಿದ್ದು ಹೇಮಭೂಷಿತವಾದ ಮಂಗಳಕರವಾದ ಭಾಗ್ಯವನ್ನು ಹೊಂದಿ ಬೆಳಗುತ್ತಿದೆ. ಭಗವಂತನ ವಿಷಯವಾದ ಹೊಂದಿದವರಾಗಿ ಭಾಗವತರುಗಳಲ್ಲಿ ಗೌರವ ಹೊಂದಿ ಇತರರು ಕೊಂಡಾಡುವ ಹಾಗೆ ಈ ಬೆಟ್ಟದ ವಿಷಯದಲ್ಲಿ ಆಸಕ್ತಿಯನ್ನು ಹೊಂದಿದವರಾಗಿ.

ಕೇವಲ ನಾಲ್ಕಕ್ಷರಗಳು ಮಾ, ಯಾ, ಭಾ, ಸಾ, ''ಸರ್ವತೋಭದ್ರಂ''

ಮಾಯಾಭಾಸಾ	ತಿರುಗಮುರುಗ	ಸಾಭಾಯಾಮಾ
ಯಾಸುತಾಯಾ	,,	ಯಾತಾಸುಯಾ
ಭಾತಾಯಾಯಾ	,,	ಯಾಯಾತಾಭಾ
ಸಾಯಾಯಾಗೇ	,,	ಗೇಯಾಯಾ ಸಾ

ಸೇವಾ ಮಾನನ ಮಾವಾಸೇ ವಾಸಿತಾಹಿ ಹಿತಾಸಿವಾ ।
ಮಾತಾಪಿತಾ ತಾಪಿತಾಮಾ ನಹಿ ನಹಿತಾತ ತತಾಹಿನ॥ ॥೧೦೦॥

ಆದಿಶೇಷನೇ ದೇವಸ್ಥಾನವಾಗಿರುವ ಸ್ವಾಮಿಗೆ ದೊಡ್ಡ ಹಿತವಾದವರೇ ! ನಮಗೆ ಇರಲು ಸ್ಥಳವಾದ ಈ ಬೆಟ್ಟದ ವಿಷಯವಾದ ನಮ್ಮ ಸೇವೆಯಾದುದು ಐಶ್ವರ್ಯಕ್ಕೆ ಮುಖವಾಗಿ, ಸತ್ತುಗಳನ್ನು ಕೊಡುವುದು, ತಾಯಿ ತಂದೆಯರಾಗಿ ನೋವುಗಳನ್ನು ಹೋಗಲಾಡಿಸುವುದು. ಹಿತಕ್ಕೆ ಧಕ್ಕೆ ತರುವವರಿಗೆ ಈ ಭಾಗ್ಯಗಳು ದೊರಕುವುದಿಲ್ಲ.

ವಿಷ್ಣುವು ಆದಿಶೇಷನ ಮೇಲೆ ವಾಸಿಸುವ ಜಾಗ ಇದು. ಈ ಬೆಟ್ಟದ ಪೂಜೆ ಎಲ್ಲರಿಗೂ ಲಭಿಸುವುದಿಲ್ಲ.

ಈ ಶ್ಲೋಕವು ಸಹ "ಸರ್ವತೋ ಭದ್ರಂ"ನಲ್ಲಿ ರಚಿತವಾಗಿದೆ.

ಸೇವಾಮಾನ ನಮಾವಾಸೇ
ವಾಸಿತಾಹಿ ಹಿತಾಸಿವಾ
ಮಾತಾಪಿತಾ ತಾಪಿತಾಮಾ
ನಹಿತಾತ ತತಾಹಿನ

ಗೇಹಾ ದೇವ ವದೇಹಾಗೇ ಹಾಸ ತಾನ ನತಾ ಸಹಾ ।
ದೇತೇ ನಯಾ ಯಾಽಽನತಾ ದೇಽವ ನಯಾತ ತಯಾಽಽನವ ॥ ॥೧೦೧॥

ಬನ್ನಿರಿ, ದೈವ ಭಕ್ತರೇ ! ನಿಯಮ ಪಾಲಿಸುವವುದರಲ್ಲಿ ಮುಖ್ಯರಾದವರೇ ! ನ್ಯಾಯ ಮಾರ್ಗದಲ್ಲಿ ನಡೆಯುವವರೇ ! ಸತ್ಪುರುಷರೇ ! ಈ ಬೆಟ್ಟದ ವಿಷಯವಾದ ಸ್ತೋತ್ರವನ್ನು ಮಾಡುವುದರಲ್ಲಿ ಆಸಕ್ತಿಯಾದುದು, ದೇವತೆಗಳಿಗೆ ಭಜನವನ್ನು ನೀಡುತ್ತಿರುವುದನ್ನು ಅವರನ್ನು ನಮಸ್ಕರಿಸುವುದನ್ನು ಇದು ಸಹಿಸುವುದಿಲ್ಲ. ಅಕ್ರಮಗಳನ್ನು ತಡೆಯುವ ಮನಸ್ಸನ್ನು ಕಾಪಾಡಿರಿ.

ಈ ಬೆಟ್ಟವನ್ನು ಪೂಜಿಸಿದಲ್ಲಿ ಬೇರೆ ದೇವರನ್ನು ಪೂಜಿಸುವ ಅಗತ್ಯವಿಲ್ಲ. ಬ್ರಹ್ಮಾಸ್ತ್ರದಂತೆ ಇದು ಅನ್ಯ ದೇವತಾ ಪೂಜೆಯನ್ನು ಸಹಿಸುವುದಿಲ್ಲ. - ಇದು ಸರ್ವತೋ ಭದ್ರ ಶ್ಲೋಕ.

ದೇಹಾ ದೇವ ವದೆ ಹಾಗೆ ತಿರುಗಮುರುಗಾ ಓದಿದರೂ ಅದೇ ವಾಕ್ಯ
ಹಾಸತಾ ನನ ತಾಸಹಾ ''
ದೇತಾ ನಯಯಾ ಅನತಾದೇ ''
ವನಯಾತ ತಯಾ ನವ ''

ನದೀ ಸಾರ ಸಮೇತಾತ್ರ ದೀಪ್ತಾ ಭಾಸಾ ನರಾವೃತಾ ।
ಸಾಭಾಸಾಸೌ ಮಾಭಿರಾಮೆ ರಸಾ ಸೌಮ್ಯಾ ಸುಮಾನ ಸ ॥ ॥೧೦೨॥

ಒಳ್ಳೆಯ ಮನಸ್ಸಿನವರೇ! ತೇಜಸ್ಸುಳ್ಳವರೇ ! ಲಕ್ಷ್ಮೀ ವಿಲಾಸವುಳ್ಳ ಬೆಟ್ಟದಲ್ಲಿ ಭೂಮಿಯಾದುದು ಶ್ರೇಷ್ಠವಾದ ರತ್ನಗಳನ್ನು ಹೊಂದಿ ನವರತ್ನಗಳನ್ನು ಉಳ್ಳದಾಗಿದೆ.

ಇದು ಅರ್ಧ ಭ್ರಮ ಶ್ಲೋಕ - ವಿನ್ಯಾಸ ಕ್ರಮ - ಸರ್ವತೋ ಭದ್ರಂ
ಪಾದಾರ್ಧಾನ ಮೇವ ಭ್ರಮಣಂ - ನತು ಪಾದಾನಾಮಿತಿ ವಿಶೇಷ

ವಸುದಾ ತ್ರಸದಾನಂದ ಧೀಸುದಾಂತ ಮುದಾ ಸತಾ ।
ಸಾನದಾ ಮುಕ್ತಿದಾ ರಮ್ಯಾ ಸನದಾಽತ್ರ ಸದಾ ರಸಾ ॥ ॥೧೦೩॥

ಅಂಜಿದವರಿಗೆ ಅಭಯವನ್ನು ನೀಡುವ, ಆನಂದವನ್ನು ಕೊಡುವವರೆ! ವಿವೇಕದಿಂದ ಇಂದ್ರಿಯ ನಿಗ್ರಹವನ್ನು ಮಾಡುವವರೆ! ಈ ಬೆಟ್ಟದ ಭೂಮಿಯಾದುದು. ಮನಸ್ಥಿತಿಯನ್ನು ಕಾಯುತ್ತದೆ. ವಸಿಸುವವರ ಸಂತೋಷಕ್ಕೆ ಆಕರವಾಗಿ, ವಿಶ್ವಾಸವುಳ್ಳವರ ಹತ್ತಿರ ಕರುಣೆಯನ್ನು ಹೊಂದಿದೆ. ಮೋಕ್ಷವನ್ನು ನೀಡುವುದಾಗಿ ಸದಾ ರಸವತ್ತಾಗಿ ಇದೆ.

ಈ ಬೆಟ್ಟವು ನಾರಾಯಣನಂತೆ ಮೋಕ್ಷಪ್ರದವೂ ಹೌದು. ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಈ ಶ್ಲೋಕವು ''ಮುರಜ ಬಂಧ'' ವೃತ್ತದಲ್ಲಿ ರಚಿತವಾಗಿದೆ.

ಸದ್ದೈವೇಽಂಕುರ ಯಾತ ವೈಭವಲತಾ ಶೋಭ್ಯುಚ್ಚನಾನಾಗಭಿ
ಭವ್ಯಂಕರ್ಮ ಸದಾರ್ಚಿತೋದ್ಭವ ನದೀಯಾ ದಸ್ಸನಾಥಿಕೃತೆ ।
ಚಿತ್ರಾಟವ್ಯಾನು ವಾಹಿವಾತ ವಲನ ಶ್ರೇಯಃ ಪ್ರಚೇಯೋತ್ಸವೇ ॥
ವೇದೋಕ್ತ್ಯಾ ಸಮಯೇ ಭಜೇಃ ಶುಚಿ ಗಿರೌ ಮೇರುನ್ನತೇ ಅಽಸ್ಮಿನ್ ಧ್ರುವೆ
॥೧೦೪॥

ಎಲ್ಲರಿಂದಲೂ ಗೌರವಿಸಲ್ಪಡುವ ಮರ್ಯಾದೆ ಉಳ್ಳವರೇ! ಒಳ್ಳೆಯವರಿಂದ ಯೋಗ್ಯ ವೆನಿಸಿಕೊಳ್ಳುವುದು, ಪುಷ್ಪ, ಹಣ್ಣು, ಮೊದಲಾದವುಗಳಿಂದ ಹಿರಿಮೆ ಹೊಂದಿರುವ ಅನೇಕ ಸಹಸ್ರ ಉತ್ತಮ ಮರಗಳಿಂದ ಕೂಡಿರುವುದೂ, ನದಿಗಳು ನೀರಿನಿಂದ ತುಂಬಿರುವುದೂ, ವಿಚಿತ್ರವಾದ ಕಾಡುಗಳಲ್ಲಿ ಅನುಕೂಲವಾಗಿ ಬೀಸುವ ಗಾಳಿಯಿಂದ ಮಹೋತ್ಸವವು ಚೆನ್ನಾಗಿ ನಡೆಸಲ್ಪಡಬಹುದು. ಮೇರು ಪರ್ವತದಂತೆ ಸ್ಥಿರವಾದ ಶ್ರೇಷ್ಠವಾದ ಈ ಬೆಟ್ಟದ ಬಗ್ಗೆ ವೇದದಲ್ಲೂ ಸಹ ಹೇಳಿರುವುದರಿಂದ ಆನಂದವಾದ ಮನಸ್ಸಿನಿಂದ ಇದನ್ನು ಆರಾಧಿಸೋಣ. ಅರ್ಥ ಸ್ಪಷ್ಟವಾಗಿದೆ. ಈ ಶ್ಲೋಕ ಚಕ್ರಬಂಧಃ ಕವಿ ಕಾವ್ಯ ನಾಮೋದ್ಧಾರಃ:-

1	2	3	4	5	6	7	8	9	10	11	12
ವೇಂ	ಕ	ಟ	ನಾ	ಥ	ಯೋ	ಯಾ	ದ	ವಾ	ಭ್ಯು	ದ	ಯ

ಈ ಶ್ಲೋಕದಲ್ಲಿ ಮೇಲಿನ ಪದದ ಅಕ್ಷರಗಳೆಲ್ಲವೂ ಇವೆ. 12 ಅಕ್ಷರಗಳು ನಡು ನಡುವೆ ಸೇರಿವೆ.

ಮೊದಲನೇಯ ಸಾಲಿನಲ್ಲಿ	1, 7, 10, 4
ಎರಡನೇ ಸಾಲಿನಲ್ಲಿ	2, 8, 11, 5
ಮೂರನೇ ಸಾಲಿನಲ್ಲಿ	3, 9, 12, 6

ವಾಸೆ ನಾಸ್ಮಿನ್ ಪೂಜಾದೇಽವಾ ವಾದೇ ಜಾತಾ ತೋದ್ಯಾರಾವಾ ।
ವಾರಾದ್ಯಾವಿರ್ಭೂತಾ ಜೇವಾ ವಾಜೇತಾತ್ರಾ ದೀನಾ ಸೇವಾ ॥ ॥೧೦೫॥

ವಾದದಲ್ಲಿ ಜಯಿಸಲು ಸಾಧ್ಯವಾಗದವರೆ ! ನಾವು ವಾಸಿಸುವ ಈ ಬೆಟ್ಟದಲ್ಲಿ ವಾದ್ಯಘೋಷದೊಡನೆ, ನಡೆಸುವ ಪೂಜೆಯಾದುದು ದೇವತೆಗಳಿಗೆ ತಿಳಿಯೋದು ಬೇಡ. ಅನ್ನ, ತುಪ್ಪ ಮೊದಲಾದ ಉಪಹಾರಗಳನ್ನು ಹೊಂದಿರುವ ಶ್ರೇಷ್ಠವಾದ ಈ ಪೂಜೆಯು ನೀರು, ಹುಲ್ಲು ಮೊದಲಾದ ಆಹಾರವನ್ನು ಒದಗಿಸುತ್ತದೆ.

ಗೋವರ್ಧ ಪೂಜೆಯಿಂದ ಹಸುಗಳಿಗೂ ಆಹಾರ ದೊರೆಯುತ್ತದೆ.

ಈ ಶ್ಲೋಕವು ''ಅಷ್ಟದಳ ಪದ್ಮಬಂಧಃ''ದಲ್ಲಿ ರಚಿತವಾಗಿದೆ.

ಸಾನುಮಾನ ಯಮತೀತ ತಾರಕಃ ಸಾನುಮಾನ ಯಮತೀತ ತಾರಕಃ।
ಸಾನುಮಾನ ಯಮತೀತ ತಾರಕಃ ಸಾನುಮಾನ ಯಮತೀತ ತಾರಕಃ॥ ॥೧೦೬॥

ಈ ಬೆಟ್ಟವಾದುದು ನಕ್ಷತ್ರ ಮಂಡಲಕ್ಕೆ ಮೇಲಾದುದು. ಬೆಟ್ಟದ ದಾರಿಗೆ ಹೋಗುವ ಎಲ್ಲರಿಂದಲೂ ಆಶೆ ಪಡುವಂತಹ ಮುತ್ತುಗಳನ್ನು ಹೊಂದಿದೆ. ಹಿಂದೆ ಇಲ್ಲಿವಾಸಿಸುವರನ್ನು ಕಾಪಾಡಿದುದರಿಂದ ಯಾವ ಸಂದೇಹಕ್ಕೂ ಎಡೆಯಿಲ್ಲದಂತೆ ಎಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತದೆ. ಭಕ್ತಿ ಮೂಲಕವಾಗಿ ಕ್ರಮವಾಗಿ ಮಾಡಲ್ಪಟ್ಟಿರುವ ಪೂಜೆಗೆ ಅಳತೆಗೆ ಮೀರಿದ ಐಶ್ವರ್ಯವನ್ನು ಭೋಗವನ್ನು ನೀಡುವುದು.

ಈ ಗೋವರ್ಧನ ಗಿರಿಯನ್ನು ಭಕ್ತಿಯಿಂದ ಪೂಜಿಸುವವರಿಗೆ ಎಲ್ಲಾ ಸೌಭಾಗ್ಯಗಳನ್ನು ನೀಡುತ್ತದೆ.

ಈ ಶ್ಲೋಕವು ''**ಮಹಾ ಯಮಕ**''ದಲ್ಲಿ ರಚಿತವಾಗಿದೆ.

ಮೊದಲನೇಯ ಮತ್ತು ಎರಡನೇಯ ಪಾದ,
ಮೂರನೇಯ ಪಾದ, ಮತ್ತು ನಾಲ್ಕನೇಯ ಪಾದ ಎಲ್ಲವೂ ಒಂದೇ ಪದಗುಚ್ಛ
ಸಾನುಮಾನ ಯಮತೀತಿ ತಾರಕಃ

ವಿರಾಜಮಾನಾ ದಸಮಾನ ಭೂ-ಮಾ-ವಿರಾಜಮಾನಾ ದಸಮಾನ ಭೂಮಾ।
ವಿ-ರಾಜಮಾನಾ ದಸಮಾನ ಭೂ-ಮಾ ವಿ-ರಾ-ಜ
ಮಾನಾದಸ ಮಾ-ನ-ಭೂಮಾ ॥೧೦೭॥

ಚೆನ್ನಾಗಿ ಬೆಳಗುವುದೂ, ಶ್ರೀದೇವಿ, ಭೂದೇವಿಯರೊಡನೆ ವಿರಾಜಿಸುವ ಭಗವಂತನ ವಿಷಯವಾದ ಜ್ಞಾನದ ಕಾರಣದಿಂದ ಸಂಪಾದಿಸಲ್ಪಟ್ಟ ಐಶ್ವರ್ಯವುಳ್ಳವರೇ ! ಗರುಡನಿಂದ ಎಲ್ಲರಿಗೂ ಪ್ರಕಾಶಮಾನವಾಗುವ ಭಗವಂತನನ್ನು ಅನುಭವಿಸಲು ಸಿದ್ಧರಾಗಿ, ಅಹಂಕಾರದಿಂದ ಮಲೀನವಾದ ಬುದ್ಧಿಯುಳ್ಳ ನೀವು ಗಿಳಿಯ ಮಾತಿನಂತೆ ನನ್ನ ಮಾತನ್ನು ಕೇಳಿ, ಸಂಬಂಧವನ್ನು ಉಳಿಸಿಕೊಳ್ಳುವವರಾಗಿ.

ಭಗವಂತನಿಗೂ, ನಿಮಗೂ ಇರುವ ನವವಿಧ ಸಂಬಂಧ ಅಂದರೆ

ಪಿತಾ ಚ ರಕ್ಷಕ ಶ್ಶೇಷೀ ಭರ್ತಾ ಚ ಜ್ಞೇಯೋ ರಮಾಪತಿಃ।
ಸ್ವಾಮ್ಯಾಧಾರೋ ಮಮಾತ್ಮಾ ಚ ಭೋಕ್ತಾ ಚಾದ್ಯಮನೂದಿತಃ॥

ಪಿತಾ	-	ಪುತ್ರ	ಸ್ವಾಮಿ	-	ಸ್ವತ್ತು
ರಕ್ಷ್ಯ	-	ರಕ್ಷಕ	ಶರೀರ	-	ಶರೀರಿ
ಶೇಷ	-	ಶೇಷಿ	ಆಧಾರ	-	ಆಧೇಯ
ಭರ್ತಾ	-	ಭಾರ್ಯಾ	ಭೋಕ್ತ	-	ಭೋಗ್ಯ
ಜ್ಞಾತೃ	-	ಜ್ಞೇಯ			

ಅದನ್ನು ಚೆನ್ನಾಗಿ ಅರಿತು, ಅವನ ಅನುಗ್ರಹ ಸಂಪಾದಿಸಲು ಈ ಗಿರಿಯನ್ನು ಆರಾಧಿಸುವವರಾಗಿ.

ಈ ಶ್ಲೋಕವೂ ಸಹ ಮಹಾ ಯಮಕ – "ವಿರಾಜಮಾನಾದ ಸಮಾನ ಭೂಮಾ"ದಲ್ಲಿ ರಚಿತವಾಗಿದೆ.

ನಾಲ್ಕು ಪಾದಗಳಲ್ಲೂ ಇದೆ.

ವಿರಾಜ ಮಾನಾ, ಭೂಮಾ ವಿರಾಜಮಾನಾತ್, ಭೂಮಾ ವಿರಾಜ,

ಅಸಮಾನ ಭೂಮಾ ವಿರಾಜಮಾನಾತ್ ವಿನಾ ಇತ್ಯಾದಿ ಪದ ವಿಭಾಗ.

ಅಕ್ಲಿಷ್ಟ ಚಿತ್ರಮಿದಮತ್ರ ಮನಾಗಿವೋಕ್ತಂ
ಚಿತ್ರಾಯುತಾನಿ ಸುವಚಾನಿ ಪುನಸ್ತಥಾ ಪಿ।
ಕೃತ್ಯಂ ವಿಭೋರ್ನಿಗಮನೀಯ ಮನನ್ಯ ಭಕ್ತ್ಯೈಃ
ಆರಾಧ್ಯತಾಂ ಹರಿ ರಸೌ ಪೃಥಿವೀಧರಾತ್ಮಾ ॥೧೦೮॥

ಚಿತ್ರವಿಚಿತ್ರವಾದ ಸಂಗತಿಗಳು ಈ ಬೆಟ್ಟದಲ್ಲಿ ಇದೆಯೆಂದು ಹೇಳುವುದುಂಟು. ಹದಿನಾರು ಸಾವಿರ ಚಿತ್ರಗಳಿದೆಯೆಂದು ಹೇಳುತ್ತಾರೆ. ಬೇರೆಯಲ್ಲಿ ಮಾಡುವ ಪೂಜೆಯನ್ನು ಬಿಟ್ಟು ಭಗವಂತನಲ್ಲಿ ಪೂಜೆಯನ್ನು ಮಾಡಬೇಕು. ಹದಿನಾರು ಸಾವಿರ ಚಿತ್ರಗಳನ್ನು ಹೇಳುತ್ತಲೇ ಇರೋಣ. ಮತ್ತು ಅವನ ಕೈಂಕರ್ಯ ಮಾಡುತ್ತಿರೋಣ. ಅವನನ್ನೇ ಆರಾಧಿಸುತ್ತಿರೋಣ.

ಭಗವಂತನ ಅನೇಕ ರೂಪಗಳನ್ನು ಧ್ಯಾನ ಮಾಡುತ್ತಾ ಈ ಗಿರಿಯನ್ನೇ ಪೂಜಿಸೋಣ.

ಈ ಶ್ಲೋಕದೊಡನೆ ಚಿತ್ರಕಾವ್ಯ ಮುಗಿಯಿತು.

ಇತಿ ಕಥಯತಿ ಕೃಷ್ಣೇ ಗೋಪ ವೃದ್ಧಾ ನಿದದ್ಯುಃ
ಶರಣಮಶರಣಾನಾಂ ಶಾದ್ವಲ ಶ್ಯಾಮಲಾಂಗಮ್।
ಪುಲಕಿತ ವನಮಾಲಂ ಪುಷ್ಪಕಿಂಜಲ್ಕಜಾಲೈಃ
ಪುರುಷ ಮಚಲಶೃಂಗೆ ಪುಂಡರೀಕಾಯತಾಕ್ಷಮ್ ॥೧೦೯॥

ಈ ಬೆಟ್ಟದ ದೇವರಾದ ವಿಷ್ಣುವನ್ನು ಆರಾಧಿಸಬೇಕೆಂದು ಶ್ರೀಕೃಷ್ಣನು ಹೇಳಿದ್ದರಿಂದ, ಗೋಪಾಲಕ ಹಿರಿಯರೆಲ್ಲರೂ ಆ ಬೆಟ್ಟದ ಶಿಖರದಲ್ಲಿ ಒಂದು ಪುರುಷ ರೂಪವನ್ನು ಕಂಡರು. ಶರಣಾಗತರಿಗೆ ಶರಣ್ಯನಾದವನೂ, ಸರ್ವಾಲಂಕಾರ ಭೂಷಿತನೂ, ವೈಜಯಂತೀ ವನಮಾಲೆಯನ್ನು ಧರಿಸಿದವನೂ ಆದ ಭಗವಂತನು ಆ ಬೆಟ್ಟದಂತೆಯೇ ಬೆಳಗಿದನು. ಬೆಟ್ಟವು ಅವನ ದಿವ್ಯ ಮಂಗಳ ಶರೀರದಂತೆಯೇ ಬೆಳಗಿತು.

ಶ್ರೀಕೃಷ್ಣನ ಅತ್ಯಂತ ಉಪಯುಕ್ತವಾದ, ಸರ್ವ ಹಿತಕರವಾದ ಉಪದೇಶವನ್ನು ಕೇಳಿ, ನಂದಗೋಪಾದಿ ಎಲ್ಲ ಹಿರಿಯರು ಅವನ ಮಾತಿನಂತೆ ನಡೆಯಲು ನಿರ್ಧರಿಸಿದರು. ಆಗ ಅವರಿಗೆಲ್ಲಾ ಶ್ರೀಕೃಷ್ಣನ ದಿವ್ಯರೂಪವಾದ ವನಮಾಲೆಯನ್ನು ಧರಿಸಿರುವ, ಪುಂಡರೀಕಾಕ್ಷನಾದ ದಿವ್ಯಸೌಂದರ್ಯದಿಂದ ಕೂಡಿರುವವನು ಆ ಗಿರಿಯ ಮೇಲೆ ಗೋಚರಿಸಿ, ಬೆಟ್ಟವು ಅದ್ಭುತವಾಗಿ ಪ್ರಕಾಶಿಸಿತು. ಎಲ್ಲರೂ ಶ್ರೀಕೃಷ್ಣನಿಗೆ ಶರಣಾಗತರಾದರು.

ಶತಮಖ ಮಣಿಶೈಲಃ ಸ್ಯಾದಸೌ ದೇವತಾತ್ಮಾ
ಶರಧಿ ಸಮುದಿತಂ ವಾ ತೋಯ ಕಾಲಸ್ಯ ತೋಕಮ್।
ಚಿರಪರಿಚಿತ ಪೂರ್ವಂ ಚೇತಸಾಂ ಕಿಂ ನ(ನು) ಭಾಗ್ಯಂ
ನ ಕಿಮಿದಮಿತಿ ಚಿಂತಾ ನ ವ್ಯತೀಯಾಯ ನಂದಃ॥ ॥೧೧೦॥

ಆ ಪುರುಷನು ಮಾಡುವ ಕಾರ್ಯವು ಇಂದ್ರನೀಲ ಬೆಟ್ಟ ಆಗಬಹುದು. ಚಿಕ್ಕ ಮೇಘವಾಗಿರಬಹುದು. ಮಳೆಗಾಲದಲ್ಲಿ ವಿಜೃಂಭಿಸಿದ ಶರತ್ಕಾಲದಲ್ಲಿ ಅದರಿಂದ ಹುಟ್ಟಿದ ಚಿಕ್ಕ ಮೇಘವಾಗಿ, ಎಲ್ಲಾ ಸೌಭಾಗ್ಯಗಳನ್ನು ಪಡೆಯುವುದಲ್ಲವೇ? ಅವನ ಮಾತನ್ನು ಮೀರದೆ ನಂದಗೋಪನು ಚಿಂತೆಗೀಡಾದರು.

ಶ್ರೀಕೃಷ್ಣನ ಮಾತಿನಂತೆ ನಡೆಯಲು ನಿರ್ಧರಿಸಿದರೂ ಸಹ, ನಂದಗೋಪರೇ ಮೊದಲಾದ ಹಿರಿಯರು ದೇವೇಂದ್ರನನ್ನು ಧಿಕ್ಕರಿಸುವುದರಿಂದ ಮುಂದೆ ಏನಾದರೂ ತೊಂದರೆ ಬರಬಹುದೇನೋ ಎಂಬ ಚಿಂತೆಗೀಡಾದರು. ಅವನ ಕರುಣೆಯಿಂದ ಎಲ್ಲಾ ಸೌಭಾಗ್ಯಗಳನ್ನು ಪಡೆಯುವುದರಲ್ಲಿ ಯಾವ ಸಂದೇಹವು ಇಲ್ಲದಿದ್ದರೂ ಭವಿಷ್ಯವನ್ನು ಯೋಚಿಸಿ ಸ್ವಲ್ಪ ಚಿಂತೆಗೀಡಾದರು ನಂದಾದಿಗಳು.

ಆದ್ಯಂ ಕಿಮೇತ ದಧಿ ದೈವತ ಮದ್ಭುತಾನಾ
ಮಾಕಾಲಿಕಂ ಫಲಮೃತೈಕಮಿದಂ ಶುಭಾನಾಮ್।
ಏಕೀ ಭವನ್ನಿಧಿ ರಸೌ ಕಿಮಭೀಪ್ಸಿತಾನಾಮ್
ಮಿತ್ಯನ್ವಭಾವಿ ಸವಿಧೋಪಗತೈಃ ಸ ದೇವಃ॥ ॥೧೧೧॥

ಆಶ್ಚರ್ಯಗಳಿಗೆಲ್ಲಾ ಆದಿಯಾದ ದೈವವಿದು. ಶುಭಗಳೆಲ್ಲವೂ ಒಂದಾಗಿ ಸೇರಿ ಬಂದ ಫಲವಿರಬಹುದು. ನಮ್ಮ ಇಷ್ಟಗಳೆಲ್ಲಾ ನಿಧಿಯಾಗಿ ಬಂದು ಈ ದೈವವಾಗಿದೆ ಎಂದು ಭಾವಿಸಿ ಆ ದೈವವನ್ನು ಅನುಸರಿಸಲು ಸಿದ್ಧರಾದರು.

ಆದರೂ ಆ ಭಗವಂತನ ಅಪಾರ ಮಹಿಮೆಯನ್ನು ನೆನೆದು ಅವನೇ ತಮ್ಮ ಮಧ್ಯೆ ಇರುವಾಗ, ತಮಗೇತರ ಭಯ ಎಂದು ಮನಸ್ಸಿನಲ್ಲಿ ಧೈರ್ಯ ತಂದುಕೊಂಡು, ಅವನ ಮಾತಿನಂತೆ ನಡೆಯಲು ನಿರ್ಧರಿಸಿ, ಗಿರಿ ಪೂಜೆಗೆ ಅಣಿ ಮಾಡಿಕೊಳ್ಳತೊಡಗಿದರು.

ಪೀತಾಂಶುಕೇ ಪೃಥುಲ ಬಾಹು ಭುಜಾಂತರಾಲೇ
ಮೇಘಾಭಿ ಜನ್ಮನಿ ಮಿಥಃ ಪ್ರತಿಬಿಂಬಬುದ್ಧ್ಯಾ।
ಧನ್ಯಾನಿ ಗೋಪ ನಯನಾನಿ ತದಾಽನ್ವಭೂವನ್
ಕೃಷ್ಣೇ ಚ ತತ್ರಚಕಿಯಂತಿ ಗತಾ ಗತಾನಿ ॥೧೧೨॥

ಈ ರೀತಿ ಅನುಭವಿಸಲ್ಪಡುವ ದೇವತೆಯನ್ನೂ, ಶ್ರೀಕೃಷ್ಣನನ್ನೂ ನೋಡಿ ಇಬ್ಬರು ಮೂರ್ತಿಗಳು ದಿವ್ಯವಾದ ಪೀತಾಂಬರವನ್ನು ಧರಿಸಿ, ದೊಡ್ಡ ಭುಜಗಳನ್ನು ಎದೆಯನ್ನೂ, ಹೊಂದಿರುವ, ಮುಗಿಲಿನ ಬಣ್ಣದವರಾದ್ದರಿಂದ ಒಂದಕ್ಕೊಂದು ಪ್ರತಿಬಿಂಬವಾಗಿ, ಮತ್ತೊಂದು ಇರಬಹುದೇನೋ ಎಂದು ಭಾವಿಸಿ ಗೋಪರು, ಆ ಇಬ್ಬರು ಪುರುಷರನ್ನೂ (ಶ್ರೀಕೃಷ್ಣನನ್ನೂ ಬಲರಾಮನನ್ನೂ) ತಮ್ಮ ಭಾಗ್ಯ ಪಡೆದ ಕಣ್ಣುಗಳಿಂದ ಪದೇ ಪದೇ ನೋಡಿ ಆನಂದಿಸಿದರು.

ಒಬ್ಬರ ಪ್ರತಿಬಿಂಬದಂತೆ, ಎಲ್ಲರ ಕಣ್ಣುಗಳಿಗೂ ಆನಂದ ಉಂಟು ಮಾಡುತ್ತಿದ್ದ ಆ ಇಬ್ಬರು ಮಹಾಪುರುಷರಾದ ಬಲರಾಮ-ಶ್ರೀಕೃಷ್ಣರನ್ನು ಪದೇ ಪದೇ ನೋಡಿ ನೋಡಿ ಆ ಗೋಪಾಲಕರೆಲ್ಲರೂ, ಸ್ತ್ರೀ, ಬಾಲ - ವೃದ್ಧರಾದಿಯಾಗಿ ಆನಂದ ಪಡೆದು ಧನ್ಯರಾದರು.

ಆ ಭಗವಂತನ ದರ್ಶನವೇ ಅಂತಹ ಸೌಭಾಗ್ಯವನ್ನು ನೀಡುತ್ತದೆ. ಗೋಪಾಲಕರಿಗಿಂತ ಧನ್ಯರು ಯಾರಿದ್ದಾರೆ ಈ ಲೋಕದಲ್ಲಿ? ಈ ಆರನೆಯ ಸರ್ಗವು ಬಹಳ ಅದ್ಭುತವಾದ ಸರ್ಗ.

ಸ್ವಾಮಿ ದೇಶಿಕರ ಕವಿತಾ ಪ್ರೌಢಿಮೆಯ ಪರಾಕಾಷ್ಠೆಯನ್ನು ಎತ್ತಿ ತೋರಿಸುವ ಸರ್ಗ ಇದಾಗಿದೆ.

'ಚಿತ್ರಸರ್ಗ'ವೆಂಬ ಷಷ್ಠ ಸರ್ಗವು ಮುಗಿದುದು.



ಸಪ್ತಮಃ ಸರ್ಗಃ - ೭

ಗೋವರ್ಧನ ಧಾರಣ



ಈ ಸರ್ಗದಲ್ಲಿ 109 ಶ್ಲೋಕಗಳಿವೆ. ಶ್ರೀಕೃಷ್ಣನ ಸಲಹೆಯಂತೆ ಗೋವರ್ಧನ ಗಿರಿಯ ಪೂಜೆಯನ್ನು ನಂದನೇ ಮೊದಲಾದ ಹಿರಿಯರು ಆರಂಭಿಸಿದರು. ಇದರಿಂದ ತೀವ್ರವಾಗಿ ಕೋಪಗೊಂಡ ಇಂದ್ರನು ಬೃಂದಾವನದಲ್ಲಿ ಹಿಂದೆಂದೂ ಕಾಣದ ಘನಘೋರ ಮಳೆಯನ್ನು ಸುರಿಸಿದಾಗ, ಗೋಪಾಲಕರೆಲ್ಲರೂ ಮತ್ತು ದನಕರುಗಳಾದಿಯಾಗಿ ತತ್ತರಿಸಿ ನಿಂತರು. ವಿಪರೀತವಾಗಿ ಗಾಭರಿಗೊಂಡ ಅವರನ್ನು ನೋಡಿ ಕೃಪಾಳುವಾದ ಸ್ವಾಮಿಯು, ಗೋವರ್ಧನ ಗಿರಿಯನ್ನೇ ತನ್ನ ಕೈಯ್ಯಿಂದ ಕೊಡೆಯಾಕಾರದಲ್ಲಿ ಎತ್ತಿ ಹಿಡಿದು, ಎಲ್ಲರನ್ನೂ ಸಂರಕ್ಷಿಸಿದನು.

ಆ ರೀತಿ ಎತ್ತಿ ಹಿಡಿದ ಗಿರಿಯ ಕೆಳಗೆ ಎಲ್ಲರೂ ಆಶ್ರಯ ಪಡೆದು ಆನಂದದಿಂದ ಏಳು ದಿನಗಳು ಮಳೆಯ ಯಾವ ಬಾಧೆಯೂ ಇಲ್ಲದೆ ಕಾಲ ಕಳೆದರು.

ಗರ್ವಭಂಗ ಹೊಂದಿದ ಇಂದ್ರನು ತನ್ನ ತಪ್ಪನ್ನು ಅರಿತು, ಶ್ರೀಕೃಷ್ಣನಲ್ಲಿ ಶರಣಾಗತ ನಾಗಿ ಅವನನ್ನು ಸ್ತೋತ್ರ ಮಾಡಿ, ಕೃಷ್ಣಸ್ವಾಮಿಗೆ "ಗೋವಿಂದ"ನೆಂಬ ನಾಮಕರಣ ಮಾಡಿ ಪಟ್ಟಾಭಿಷೇಕ ನಡೆಸಿ ಕೃತಕೃತ್ಯನಾದನು. ಸ್ವಾಮಿಯೂ ಸಹ ಅವನನ್ನು ಮನ್ನಿಸಿ, ಆಶೀರ್ವದಿಸಿದನು. ಈ ಪ್ರಸಂಗಗಳು ಅದ್ಭುತವಾಗಿ ವಿವರಿಸಲ್ಪಟ್ಟಿವೆ.

ಇದು ಬಹಳ ಸುಂದರವಾದ ಸರ್ಗ.

ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 10	ಗಿರಿಯ ಪೂಜೆ ಆರಂಭ
11-20	ಇಂದ್ರನ ಕೋಪ, ಘೋರ ಮಳೆ ಸುರಿಸುವಿಕೆ.
21-29	ಮಳೆಯ ವರ್ಣನೆ
30-45	ಮಳೆಯ ಆರ್ಭಟದ ವಿವರಗಳು
46-50	ಸ್ವಾಮಿಯ ಭರವಸೆ ಮತ್ತು ಗೋವರ್ಧನ ಗಿರಿಯನ್ನು ಎತ್ತಿದ್ದು
51-54	ಗಿರಿಯನ್ನು ಎತ್ತಿ ಹಿಡಿದ ಶ್ರೀಕೃಷ್ಣನ ಮೋಹಕ ಭಂಗಿಯ ವರ್ಣನೆ.
55-60	ಸ್ವಾಮಿಯ ಅದ್ಭುತ ಕಾರ್ಯ ಕಂಡು ಗೋಪಾಲಕರ ಅಚ್ಚರಿ.
61-70	ಗೋವರ್ಧನ ಗಿರಿಯ ಕೆಳಗೆ ಆಶ್ರಯ ಪಡೆದ ಗೋಪಾಲಕರ ಸಂಭ್ರಮ - ಜೀವನ.
71-80	ಶ್ರೀಕೃಷ್ಣನ ಸ್ಪರ್ಶದಿಂದ ಗೋವರ್ಧನ ಗಿರಿಗುಂಟಾದ ಶ್ರೇಷ್ಠತೆ, ಗೋಪಸ್ತ್ರೀಯರ ಆನಂದ, ಶ್ರೀಕೃಷ್ಣನ ಪರತ್ವ ಪ್ರದರ್ಶನ.
81-85	ಇಂದ್ರನಿಗೆ ಜ್ಞಾನೋದಯ, ಸ್ವಾಮಿಯಲ್ಲಿ ಕ್ಷಮಾಯಾಚನೆ.
86-90	ಗೋವರ್ಧನ ಗಿರಿಯ ಪುನರ್ ಪ್ರತಿಷ್ಠಾಪನೆ.
91-100	ಇಂದ್ರನು ಶ್ರೀಕೃಷ್ಣನಿಗೆ ಮಾಡಿದ ಸ್ತುತಿ. ಅನೇಕ ವೇದಾಂತಾರ್ಥಗಳ ನಿರೂಪಣೆ,
101-106	ಶ್ರೀಕೃಷ್ಣನಿಗೆ 'ಗೋವಿಂದ'ನೆಂಬ ನಾಮಕರಣ. ಗೋವಿಂದ ಪಟ್ಟಾಭಿಷೇಕ.
106-109	ಸ್ವಾಮಿಯು ಎಂದಿನಂತೆ ಗೋಪಾಲಕರೊಡನೆ ಗೋಕುಲದಲ್ಲಿ ವಿಹರಿಸಿದುದು.

ಸಪ್ತಮಃ ಸರ್ಗಃ - ೭

ಗೋವರ್ಧನ ಧಾರಣ

ವ್ರಜೌಕಸೋ ವಿಸ್ಮಯಮಂಥರಾಕ್ಷ ಬಾಲಾರ್ಕವರ್ಣಂ ವಸನಂ ವಸಾನಮ್ ।
ಶ್ಯಾಮಂ ಯುವಾನಂ ಶತಪತ್ರನೇತ್ರಂ ಶೈಲೋದಿತಂ ದೇವಮಥೋಪಸೇದುಃ ॥೧॥

ಗೋಕುಲದಲ್ಲಿ ಎಲ್ಲರೂ ಆ ಅನುಭವದಲ್ಲಿ ಇಳಿದು ಆಶ್ಚರ್ಯದಿಂದ ಆಸೆಯಿಂದ ಕಣ್ಣುಗಳನ್ನು ಹೊಂದಿದವರಾಗಿ, ಉದಯ ಸೂರ್ಯನಿಗೆ ಸಮನಾದ ಪೀತಾಂಬರವನ್ನು ಧರಿಸಿದವನೂ, ಕಪ್ಪಾದ ಮೈಯ್ಯುಳ್ಳವನೂ, ಕೆಂದಾವರೆಯಂಥ ಕಣ್ಣುಳ್ಳವನೂ, ಯುವಕನೂ ಬೆಟ್ಟದ ಮೇಲೆ ತೋರಿದ ದೇವನನ್ನು ಆರಾಧಿಸಲು ಸಮೀಪಿಸಿದರು.

ಆ ಗೋವರ್ಧನ ಗಿರಿಯ ಮೇಲೆ ದಿವ್ಯ ಮಂಗಳ ವಿಗ್ರಹರೂಪನಾದ ಅದ್ಭುತವಾಗಿ ತೋರಿದ ಆ ಶ್ರೀಕೃಷ್ಣನನ್ನೇ ಆರಾಧಿಸಿ ಕೃತಾರ್ಥರಾದರು. ಗೋಪಾಲಕರೆಲ್ಲರೂ, ನಂದಗೋಪನನ್ನು ಮುಂದಿಟ್ಟುಕೊಂಡು ಅವನ ಸಮೀಪಕ್ಕೆ ಬಂದರು.

(ಈ ಸರ್ಗದಲ್ಲಿ ಶ್ರೀಕೃಷ್ಣನ ಮೇಲಿನ ಕೋಪದಿಂದ, ತನಗೆ ಪೂಜೆ ಸಲ್ಲಿಸಲಿಲ್ಲವೆಂಬ ಕಾರಣಕ್ಕೆ ಇಂದ್ರನು ಘನ ಘೋರವಾದ ಮಳೆ ಸುರಿಸಲಾಗಿ, ಭಗವಂತನು ಆ ಗೋವರ್ಧನ ಗಿರಿಯನ್ನೇ ಕೊಡೆಯಾಗಿ ಎತ್ತಿ ಹಿಡಿದು ಗೋಪಾಲಕರನ್ನೆಲ್ಲಾ ರಕ್ಷಿಸಿದಾಗ, ಇಂದ್ರನ ಗರ್ವವು ಅಡಗಿ ಅವನು ಶ್ರೀಕೃಷ್ಣನಲ್ಲಿ ಶರಣಾಗತನಾಗಿ "ಗೋವಿಂದ ಪಟ್ಟಾಭಿಷೇಕ" ಮಾಡಿದನು).

ಯಮಾಹುರಂತರ್ಬಹಿರಪ್ಯಲಕ್ಷ್ಯಂ ಯೋಗೇಶ್ವರಂ ಯೋಗಿಭಿರೇವ ದೃಶ್ಯಮ್ ।
ತಮದ್ರಿಶೃಂಗೇ ಸಮುದೀಕ್ಷಮಾಣ ಗೋಪಂ ಸತಾಂಗೋಪಗಣಾಃ ಪ್ರಣೇಮುಃ ॥೨॥

ಒಳಗೆ-ಹೊರಗೆ ಎಲ್ಲಾ ಕಡೆ ಇದ್ದೂ, ಯಾವುದರಿಂದಲೂ ಬಾಧಿಸಲ್ಪಡದವನಾದ, ಸರ್ವ ಕಲ್ಯಾಣ ಗುಣ ಸಮೃದ್ಧಿಹೊಂದಿರುವ ಈಶ್ವರನಾಗಿ, ಯೋಗಿಗಳಿಗೆ ಕಾಣುವ ಯಾವನನ್ನು ವೇದವೇದಾಂತಗಳು ಹೊಗಳಲ್ಪಡುತ್ತವೆಯೋ, ಸತ್ಪುರುಷರನ್ನು ಕಾಪಾಡುವ ಅವನನ್ನು ಬೆಟ್ಟದ ಶಿಖರದ ಮೇಲೆ ಎದ್ದು ನಿಂತು ಚೆನ್ನಾಗಿ ಕಂಡವರಾಗಿ ಗೋಪರು ಭಕ್ತಿಯಿಂದ ನಮಸ್ಕರಿಸಿದರು.

ಸರ್ವಸ್ಮಾತ್ ಪರನಾದ ಶ್ರೀಮನ್ನಾರಾಯಣನೇ ಶ್ರೀಕೃಷ್ಣನಾಗಿ ಅವತರಿಸಿ, ಗೋಪಾಲಕರ ಮಧ್ಯೆ ತೋರಿದ್ದಾನೆ. ಅದನ್ನು ಈಗ ಅರಿತ ಗೋಪಾಲಕರೆಲ್ಲರೂ, ತಮ್ಮ ಹಠವನ್ನು ಬಿಟ್ಟು ಕೃಷ್ಣನು ಹೇಳಿದ ರೀತಿ ಗೋವರ್ಧನ ಗಿರಿಯನ್ನೇ ಪೂಜಿಸಲು ನಿರ್ಧರಿಸಿ, ಗಿರಿಯ ಮೇಲೆ ನಿಂತಿದ್ದ ಆ ಸರ್ವೇಶ್ವರನಿಗೆ ಭಕ್ತಿಯಿಂದ ನಮಿಸಿ ಪ್ರಾರ್ಥಿಸಿದರು.

ಸ ತಾನ್ ಅಶೇಷಾನ್ ಸುಧಯೇವ ದೃಷ್ಟ್ಯಾ ಪ್ರಹರ್ಷಯನ್ ಪ್ರತ್ಯಯಿತ ಪ್ರಸಾದಃ।
ಸ ರಾಮಕೃಷ್ಣಾನ್ ಸನಕಾದಿ ಗಮ್ಯಃ ಸ್ವಾಮೀ ಸತಾಂ ಸ್ವಾಗತಮನ್ವಯುಂಕ್ತ ॥೩॥

ಸತ್ಪುರುಷರಿಗೆ ನಾಥನಾದ ಆ ದೇವನು ಸನಕ-ಸನಂದಾದಿಗಳಂತೆ ಅರಿತವನಾಗಿದ್ದೂ ಈಗ ಗೋಪಾಲಕನಾಗಿರುವುದರಿಂದ ಬಲರಾಮನೊಡಗೂಡಿ ಗೋಪಾಲಕರೆಲ್ಲರನ್ನೂ ಅಮೃತದಂತಿರುವ ತನ್ನ ದಿವ್ಯ ಕಟಾಕ್ಷದಿಂದ ಆನಂದಪಡಿಸಿ, ತನ್ನ ಅನುಗ್ರಹದಿಂದ ನಂಬಿಕೆ ಬರಿಸಿ ಅವರನ್ನೆಲ್ಲಾ ಕುಶಲ ಪ್ರಶ್ನೆ ಮಾಡಿದನು.

ತನ್ನಲ್ಲಿ ಬಂದ ಶರಣಾಗತರಾಗಿ ಮಾರ್ಗ ತೋರಿಸಬೇಕೆಂದು ಪ್ರಾರ್ಥಿಸಿದ ಆ ಗೋಪಾಲಕರನ್ನೆಲ್ಲಾ, ಸರ್ವಜ್ಞನಾಗಿ ಎಲ್ಲವನ್ನೂ ಅರಿತವನಾಗಿದ್ದಾಗ್ಯೂ ಸಹ ಅವರಲ್ಲಿ ಒಬ್ಬನಂತೆ ನಟಿಸಿ, ಅವರ ಯೋಗಕ್ಷೇಮವನ್ನೆಲ್ಲಾ ವಿಚಾರಿಸಿ, ಸ್ವಾಗತ ಕೋರಿದನು. ಸನಕಾದಿ ಋಷಿಗಳು ತ್ರಿಕಾಲ ಜ್ಞಾನಸಂಪನ್ನರು. ಅವರಂತೆಯೇ ಭಗವಂತನು ಶ್ರೀಕೃಷ್ಣನಾಗಿ ಅವತಾರ ಮಾಡಿದ್ದಾಗ್ಯೂ ಸಹ ಸರ್ವವನ್ನೂ ತಿಳಿದವನಾಗಿದ್ದನು.

ಶರತ್ಪ್ರವೃತ್ತ್ಯೇವ ಶಶಾಂಕ ಭಾಸೋ ವಾಚಾ ಹರೇರ್ಗೋಪದಿಯಃ ಪ್ರಸನ್ನಾಃ।
ಮಿಥೋವಿಮರ್ಶೈಃ ಕುಮುದೈರಿವಾSSಸನ್ ಮಿಷದ್ಭಿರಾಸಾದಿತ ನಿರ್ಮಲಾಶಾಃ॥೪॥

ಈ ವಾರ್ತೆಯನ್ನು ಕೇಳಿದುದರಿಂದ ಗೋಪರುಗಳ ಮನಸ್ಸು ಚೆನ್ನಾಗಿ ತಿಳಿಯಾಗಿ ಒಬ್ಬರಿಗೊಬ್ಬರು ಮಾತನಾಡಿ ಗಿರಿಯನ್ನೇ ಆರಾಧಿಸಬೇಕೆಂದು ನಿರ್ಧರಿಸಿ, ಅದರಿಂದ ತಮ್ಮ ಮನೋರಥಗಳೆಲ್ಲವೂ ಈಡೇರಿವುದೆಂದು ನಿಲುವನ್ನು ತಳೆದರು. ಚಂದ್ರ ಕಿರಣಗಳು ಶರತ್ಕಾಲದ ಆಗಮನದಿಂದ ಎಲ್ಲೆಲ್ಲೂ ಅರಳುವ ಅಂಬಲ ಹೂವುಗಳಿಂದ ದಿಕ್ಕುಗಳೆಲ್ಲವೂ ಶೋಭಿಸಿದವು.

ಶ್ರೀಕೃಷ್ಣನ ಉಪದೇಶವು ತಮಗೆ ಸರ್ವ ವಿಧದಲ್ಲೂ ಉಪಾದೇಯವೆಂದು ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ನಿರ್ಧರಿಸಿ, ಅವನ ಸಲಹೆಯಂತೆ ಗೋವರ್ಧನ ಗಿರಿಯನ್ನೇ ಪೂಜಿಸುವುದೆಂದು ನಿರ್ಧರಿಸಿದರು. ನಂದ ಗೋಪಾದಿಗಳು ಶರತ್ಕಾಲದ ಆಗಮನವನ್ನು ಸೂಚಿಸಲು ಎಲ್ಲೆಲ್ಲೂ ಹೂವುಗಳು ಅರಳಿ, ದಿಕ್ಕುಗಳೆಲ್ಲವೂ ಶೋಭಿಸಿದವು.

ವಿಧಾನದಕ್ಷಾ ವಿಪಿನಾಶ್ರಯಾಸ್ತೇ ತದನ್ಯ ಸಂರಾಧನ ವೀತಸಂಗಾಃ।
ತಮರ್ಚಯಾಮಾಸು ರದೀನ ಸತ್ವಾಃ ಸಂಪ್ರೀಣನೈಃ ಶಕ್ರಮಖೋಪನೀತೈಃ ॥೫॥

ಅರಣ್ಯದಲ್ಲಿ ವಾಸವಾಗಿರುವ ಅವರುಗಳು ಸಂಪ್ರದಾಯಗಳನ್ನೆಲ್ಲಾ ಮಾಡುವುದರಲ್ಲಿ ನಿಪುಣರಾಗಿ ಬೆಟ್ಟವನ್ನು ಬಿಟ್ಟು ಬೇರೇನನ್ನೂ ಆರಾಧಿಸುವುದಿಲ್ಲವೆಂದು ನಿರ್ಧಾರವಾದ ಮನಸ್ಸಿನಿಂದ ಇಂದ್ರನಿಗೆಂದು ಶೇಖರಿಸಲ್ಪಟ್ಟಿದ್ದ ಎಲ್ಲಾ ಒಳ್ಳೆಯ ವಸ್ತುಗಳನ್ನು ತೆಗೆದುಕೊಂಡು ಗೋವರ್ಧನವನ್ನು ಆರಾಧಿಸಲು ಪ್ರಾರಂಭಿಸಿದರು.

ಇಂದ್ರನ ಪೂಜೆಗೆಂದು ಸಿದ್ಧಪಡಿಸಿಟ್ಟುಕೊಂಡಿದ್ದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಇಂದ್ರನ ಪೂಜೆಗೆ ಬದಲಾಗಿ ಗೋವರ್ಧನ ಗಿರಿಗೆ ಪೂಜೆಯನ್ನು ಆರಂಭಿಸಿದರು. ಗಿರಿಯ ಪೂಜೆಯ ಮುಖಾಂತರ ಶ್ರಿಯಃಪತಿಯಾದ ಭಗವಂತನ ಪೂಜೆಯೂ ಸಹ ಆರಂಭವಾಯಿತು.

ಅನನ್ಯ ಯೋಗಾದ ಯಜಂತ ಜನ್ಯೈ ಕೃಷ್ಣೇನ ತೇನೈವ ಕೃತಾನುಚಾರಾಃ।
ಸಮೇಘ ಕೈಲಾಸ ನಿಭೈರಸಂಖ್ಯೈಃ ಸವ್ಯಂಜನೈಃ ಸಾದರಮನ್ನಕೂಟೈಃ॥ ॥೬॥

ಆರಾಧಿಸುವ ದೇವನೇ ಶ್ರೀಕೃಷ್ಣನಾಗಿ ತೋರಿರುವಾಗ, ಆ ಶ್ರೀಕೃಷ್ಣನನ್ನೇ ಜೊತೆಯಾಗಿ ಹೊಂದಿ ಪರಮೈಕಾಂತಿಗಳು ಮಾಡುವ ರೀತಿಯಲ್ಲಿ ಆ ಬೆಟ್ಟದ ದೇವನನ್ನು ಫಲವಿಧವಲ್ಲಿ ಪರಿಕರಗಳನ್ನು ಬಿಟ್ಟು ಮೇಘಗಳು ಪೂಜಿಸುವ ಕೈಲಾಸ ಪರ್ವತದಂತೆ ಬೆಳಗುವ ಅನ್ನಕೂಟಗಳಿಂದ ಆರಾಧಿಸಿದರು.

ಶಾಸ್ತ್ರೋಕ್ತ ರೀತಿಯಲ್ಲಿ, ಯಾವ ರೀತಿ ಪರಮೈಕಾಂತಿಗಳಾದ ಭಗವದ್ಭಕ್ತರು ಭಗವಂತನನ್ನು ಪೂಜಿಸುವರೋ ಅದೇ ರೀತಿ ಗಿರಿಯ ಪೂಜೆಯನ್ನು ನಂದ ಗೋಪಾದಿಗಳು ಆರಂಭಿಸಿ ಅತ್ಯಂತ ಭಕ್ತಿ ಭಾವದಿಂದ ಆರಾಧನೆಯನ್ನು ನಡೆಸಿದರು.

ನಿರ್ಧಾರಿತಾರ್ಥೇಷು ನಿಜೋಪದೇಶಾತ್ ನ್ಯಸ್ತೋಪಹಾರೇಷು ಮಹೀಧರಾರ್ಥಮ್।
ಅಚ್ಯರ್ತ್ವಮಾಚಾರ್ಯಕ ಮಪ್ಯಯಾಸೀತ್ ಗೋಪೇಷು ಕೃಷ್ಣೋ ಭುವನೇಷು ಗೋಪ್ತಾ॥೭॥

ಲೋಕಗಳನ್ನು ಕಾಯುವ ಶ್ರೀಕೃಷ್ಣನು ತನ್ನ ಉಪದೇಶದಿಂದ ಮಾರ್ಪಟ್ಟು ಬೆಟ್ಟಕ್ಕಾಗಿ ಎಲ್ಲಾ ನೇವೇದ್ಯಗಳನ್ನು ಸಮರ್ಪಿಸಿದ ಆ ಗೋಪಾಲಕರಿಗೆ ಉಪದೇಶಿಸಲು ಆಚಾರ್ಯನಾಗಿಯೂ, ಆರಾಧಿಸುವ ದೇವತೆಯೂ ಆದನು.

ಶ್ರೀಕೃಷ್ಣನು ಲೋಕಕ್ಕೆಲ್ಲಾ ಉಪದೇಶಿಸುವ ಜಗದ್ಗುರುವಾಗಿರುವಾಗ, ನಂದಗೋಪಾದಿಗಳಿಗೆ ಸನ್ಮಾರ್ಗವನ್ನು ಉಪದೇಶಿಸಿದ್ದು ಸರಿಯಾಗಿಯೇ ಇದೆ. ಲೋಕಾಚಾರ್ಯನಾದ ಅವನು ತನ್ನ ಪಿತೃವರ್ಗಕ್ಕೂ ಆಚಾರ್ಯ ಪುರುಷನಾಗಿಯೂ, ಆರಾಧ್ಯ ದೈವವಾಗಿಯೂ ತೋರಿದನು. ಶ್ರೀಕೃಷ್ಣನು ಲೋಕಾಚಾರ್ಯನಷ್ಟೇ ಅಲ್ಲ. ಲೋಕಗಳನ್ನೆಲ್ಲಾ ಕಾಪಾಡುವವನೂ ಹೌದು. "ಭುವನೇಷು ಗೋಪ್ತಾ" ಎಂಬುದು ಇದನ್ನು ಸೂಚಿಸುತ್ತದೆ.

ಉಪಾಹರನ್ ಯಾನಿ ಸಭಾ ಜನಾರ್ಥಂ ಬಲದ್ವಿಷೋ ವಲ್ಲವ ವಂಶವೃದ್ಧಾಃ।
ಪರೇಣ ಪುಂಸಾಂ ಪರಿಗೃಹ್ಯಮಾಣೈಃ ಪ್ರಾಪ್ತಂ ಫಲಂ ಪುಷ್ಪ ಫಲಾದಿಭಿಸ್ತೈಃ ॥೮॥

ಗೋಪಾಲಕರ ವಂಶಕ್ಕೆ ಸೇರಿದ ಹಿರಿಯರುಗಳು ಇಂದ್ರನ ಪೂಜೆಗಾಗಿ ತಂದಿದ್ದೆಲ್ಲವನ್ನೂ ಅಂದರೆ, ನಾನಾ ವಿಧವಾದ ಪುಷ್ಪಗಳು, ಫಲಗಳು, ಮುಂತಾದವೆಲ್ಲವನ್ನೂ ಪುರುಷೋತ್ತಮನು ಸ್ವೀಕರಿಸಿದ್ದರಿಂದ ಜನ್ಮ ಸಾಫಲ್ಯ ಪಡೆದರು.

ಪುರುಷೋತ್ತಮನಾದ ಶ್ರೀಕೃಷ್ಣನು ತಾನೇ ಗಿರಿರಾಜನಾಗಿ ಆ ನೈವೇದ್ಯಗಳನ್ನೆಲ್ಲಾ ಸ್ವೀಕರಿಸಿದನು. ಶ್ರೀಕೃಷ್ಣನು ಗೋಪಾಲಕರಿಗೆ ವಿಶ್ವಾಸವನ್ನುಂಟುಮಾಡಲಿಕ್ಕಾಗಿ ಗೋವರ್ಧನ ಗಿರಿಯ ಮೇಲೆ ಇನ್ನೊಂದು ವಿಶಾಲ ದೇಹವನ್ನು ಧರಿಸಿ ಪ್ರಕಟನಾದನು. 'ನಾನು ಗಿರಿರಾಜ ನಾಗಿರುವೆ' ಹೀಗೆಹೇಳುತ್ತಾ ಅವರು ಅರ್ಪಿಸಿದ ಪೂಜೆಯನ್ನು ಸ್ವೀಕರಿಸಿ, ಭಕ್ಷ್ಯ ಭೋಜ್ಯಗಳನ್ನು ಸಾಕ್ಷಾತ್ತಾಗಿ ಭುಂಜಿಸಿದನು.

ಮೃತ್ಯುಪ ಸಿಕ್ತೈ ರ್ಭವನ್ನೈರಶೇಷೈರನನ್ಯದತ್ತೈರಪಿ ಹವ್ಯಕವ್ಯೈಃ।
ಅಲಬ್ಧಪೂರ್ವಾಮಭಜತ್ ತದಾನೀಂ ಗೋಪಾಹೃತೈಃ ಪ್ರೀತಮಶೇಷಗೋಪ್ತಾ ॥೯॥

ಹಾಲು, ಮೊಸರು ಮುಂತಾದ ವಸ್ತುಗಳನ್ನು ಕೊಂಡು, ಚರಾಚರಗಳಾದ ಜಗತ್ತೆಲ್ಲ ವನ್ನೂ ತನಗೆ ಅನ್ನವಾಗಿ ತಾನೇ ಸ್ವೀಕರಿಸುವ ಪರಮನಿಗೆ ಆ ಆಹಾರದಿಂದ ತನಗೆ ಮೇಲಾದ ತನ್ನ ಭಕ್ತರುಗಳಾದ ಪರಮೈಕಾಂತಿಗಳಿಂದ ಯಾಗ, ಹೋಮ ಮುಂತಾದವುಗಳಿಂದ ಸಮರ್ಪಿಸಲ್ಪಡುವ ಹವ್ಯ ಕವ್ಯಗಳಿಂದಲೂ ಹೊಂದದ ತೃಪ್ತಿಯನ್ನು ಗೋಪಾಲಕರು ಮಾಡಿದ ಆರಾಧನದಿಂದ ಶ್ರೀಕೃಷ್ಣನು ಹೊಂದಿದನು. ತಾನು ಸರ್ವ ರಕ್ಷಕನೆಂಬ ಬಿರುದನ್ನು ಸಾರ್ಥಕ ಪಡಿಸಿಕೊಂಡನು.

ಮುಗ್ಧವಾದ ಭಕ್ತಿಗೆ ಒಲಿಯುವಂತೆ ಬೇರೆ ಯಾವುದಕ್ಕೂ ಭಗವಂತನು ಒಲಿಯುವುದಿಲ್ಲ. ಇದಕ್ಕೆ ಗೋಪರೇ ಸಾಕ್ಷಿ.

ವಿಧಿಪ್ರಯುಕ್ತೆ ಹವಿಷೀ ಪ್ರಭೂತೆ ಸಂಭುಜ್ಯಮಾನೆ ಹರಿಣಾ ಸಮಕ್ಷಮ್।
ಅನಾಗಮಶ್ರಾಂತ ಧಿಯೋಽಪಿ ತತ್ರ ಶ್ರದ್ಧಾಮವಿಂದಂತ ಸಮಗ್ರತೋಷಾಃ ॥೧೦॥

ಶಾಸ್ತ್ರವೆಲ್ಲವೂ ಆ ಭಗವಂತನ ಆರಾಧನೆಯೇ ಎಂಬ ಜ್ಞಾನ ಪಡೆದು ಅದನ್ನು ಅನುಷ್ಠಿಸು ವಾಗ, ವಿಶೇಷವಾದ ನೈವೇದ್ಯಗಳನ್ನು ಭಗವಂತನನ್ನು ಪೂಜಿಸುವಾಗ ನೇರವಾಗಿ ನೋಡಿದಾಗ, ವೇದಗಳಲ್ಲಿ ವಿಶೇಷವಾಗಿ ಆಸಕ್ತಿಯಿರುವವರು ಹೆಚ್ಚಾಗಿ ಸಂತೋಷಿಸಿ, ದೇವದೇವಾದಿ ರಾಜನ ವಿಷಯದಲ್ಲಿ ಮೇಲಾಗಿ ನಂಬಿಕೆಯನ್ನು ತಳೆದರು.

ವೇದಗಳನ್ನೇ ಅಭ್ಯಸಿಸಿ, ಜ್ಞಾನವೇ ಹಿರಿದೆಂದು ಭಾವಿಸುವ ಅನೇಕ ವೈದಿಕರೂ ಸಹ ಶ್ರೀಕೃಷ್ಣನು ಸಾಕ್ಷಾತ್ತಾಗಿ ಗೋಪರು ಮಾಡಿದ ಪೂಜೆಯನ್ನು ಆನಂದದಿಂದ ಅಂಗೀಕರಿಸಿದ್ದನ್ನು ನೋಡಿ ''ಭಕ್ತಿಯೇ'' ಶ್ರೇಷ್ಠವಾದ ಮಾರ್ಗವೆಂದು ಅರಿತುಕೊಂಡರು.

ಶ್ರೀ ಶಂಕರಾಚಾರ್ಯರೂ ಸಹ ''ಮೋಕ್ಷ ಸಾಧನ ಮಾರ್ಗೇಣ ಭಕಿರೇವ ಗರೀಯಸಿ'' ಎಂದಿದ್ದಾರೆ. ಗೋಪರುಗಳು ಸಮರ್ಪಿಸಿದ ಅನ್ನಕೂಟಗಳನ್ನು ಪರಮ ಪ್ರೀತಿಯಿಂದ ಶ್ರೀಕೃಷ್ಣನು ಭುಜಿಸಿದನು.

ಅಮೃಷ್ಯಮಾಣೋ ವಿಹತಾಂ ಸ್ವಪೂಜಾಂ ಮಕ್ಷ್ಣಾಂ ಸಹಸ್ರೇಣ ತದಾ ಮಹೇಂದ್ರಃ।
ಅನೇಹಸಂ ರಕ್ತ ಶಿಲೀಂದ್ರಜಾಲೈ ರಾಕಾಲಿಕೈರಚಿಂತ ಮಸ್ವಾರ್ಷೀತ್ ॥೧೧॥

ತನ್ನ ಪೂಜೆಯು ತಡೆಯಲ್ಪಟ್ಟಿರುವುದನ್ನು ಸಹಿಸಲಾರದ ದೇವೇಂದ್ರನು ಸಾವಿರ ಕಣ್ಣುಗಳನ್ನು ದೊಡ್ಡದಾಗಿ ಬಿಡುತ್ತಾ ಬೃಹದಾಕಾರದ ಆಲಿಕಲ್ಲುಗಳಿಂದ ಅಕಾಲಿಕವಾದ ಮಳೆಯನ್ನು ಸುರಿಸಲಾರಂಭಿಸಿದನು.

ಶ್ರೀಕೃಷ್ಣನ ಉಪದೇಶದಿಂದ ಗಿರಿಪೂಜೆಯನ್ನು ಗೋಪಾಲಕರು ಮಾಡಿದ್ದನ್ನು ಇಂದ್ರನು ನೋಡಿ, ಅದನ್ನು ಸಹಿಸಲಾರದೆ, ಅತ್ಯಂತ ಕೋಪಾವಿಷ್ಟನಾಗಿ ಘೋರವಾದ ಮಳೆ ಸುರಿಸಲಾರಂಭಿಸಿದನು.

ಅವಚಿಂತಾನ್ಯೂನಪಯಃ ಪ್ರಧಾನಾನ್ ಆರಾಧಕಾನ್ ಕಾಲಮಿಯಂತಮಿಂದ್ರಃ।
ಆಹಾರ ಕರ್ಷಾದಭಿಹಂತುಮೈಚ್ಛತ್ ಕೃತಾನಭಿಜ್ಞೇಷು ಕಿಮಾಸ್ಯ ಶಂಸ್ಯಮ್ ॥೧೨॥

ಇಂದ್ರನು ಇಷ್ಟು ದಿನವೂ ನಿರ್ವಂಚನೆಯಿಂದ ಕಡಿಮೆ ಹಾಲು ಕೊಡದೆ ತನ್ನನ್ನು ಆರಾಧಿಸುತ್ತಾ ಇದ್ದ ಗೋಪಾಲಕರನ್ನು ಈವಾಗ, ತನ್ನ ಆಹಾರವನ್ನು ನಿಲ್ಲಿಸಿದ ಕಾರಣ ಅವರನ್ನು ನಾಶ ಮಾಡಲು ಮುಂದೆ ಬಂದನು. ಕೃತಘ್ನರಿಗೆ ಕರುಣೆ ಎಲ್ಲಿಯದು?

ಗೋಪರು ಇದುವರೆಗೂ ಯಾವ ವಂಚನೆಯೂ ಇಲ್ಲದೆ ಇಂದ್ರನಿಗೆ ಹಾಲು ಸಮರ್ಪಿಸುತ್ತಿದ್ದರು. ಈ ಬಾರಿ ತನ್ನನ್ನು ಆರಾಧಿಸಲ್ಲಿಲವೆಂಬ ಕಾರಣದಿಂದ ಅವರನ್ನು ಶಿಕ್ಷಿಸಲು ಮುಂದಾದನು. ''ಕೃತಘ್ನೇ ನಾಸ್ತಿ ಕಾರುಣ್ಯಃ'' ಎಂಬಂತೆ ಇಂದ್ರನು ಕೃತಘ್ನನಾದ್ದರಿಂದ ಅವನ ದುಷ್ಟನವನ್ನು ತೋರಿಸಲಾರಂಭಿಸಿದನು.

ಅಥಾಽಜುಹಾವ ಪ್ರತಿಘಾನುಷಂಗಾತ್ ಘೋರಾಶಯೋ
ಘೋಷವಿಮರ್ದಕಾಂಕ್ಷೀ।
ಸಮೇಕ್ಷ್ಯತಾಂ ಸಂಭವ ಮರ್ಣವಾನಾಂ
ಸಂವರ್ತಕಂ ನಾಮ ಗಣಂ ಘನಾನಾಮ್॥೧೩॥

ತಕ್ಷಣವೇ ತುಂಬಾ ಕೋಪಗೊಂಡವನಾಗಿ, ಗೋಪಾಲಕರ ಕೇರಿಯನ್ನು ನಾಶಮಾಡಿ ಬಿಡಬೇಕೆಂದು ನಿರ್ಧರಿಸಿ, ಪ್ರಳಯದಲ್ಲಿ ಎಲ್ಲಾ ಸಮುದ್ರಗಳನ್ನು ಒಂದಾಗಿ ಸೇರಿಸುವ ಹಾಗೆ ಹುಯ್ಯುವ ಸಂವರ್ಧಕವೆಂಬ ಮೇಘವನ್ನು ಇಂದ್ರನು ಕರೆದು ಆಜ್ಞೆ ಇತ್ತನು.

ಇಂದ್ರನು ಗೋಕುಲವನ್ನೂ, ಬೃಂದಾವನವನ್ನೂ, ಸರ್ವನಾಶ ಮಾಡಲು ನಿರ್ಧರಿಸಿ, ಬಲಿಷ್ಠವಾದ ಸಂವರ್ತಕಗಳೆಂಬ ಮೇಘಗಳನ್ನು ಕರೆದು ಧಾರಾಕಾರವಾಗಿ ಮಳೆ ಸುರಿಸುವಂತೆ ಆಜ್ಞಾಪಿಸಿದನು.

ಪ್ರದೀಪಿತಾನ್ ಕೋಪಹುತಾಶುಭೂಮ್ನಾ ಪೀತೋದಧೀನ್ ವಾರಿಧರಾಯುಧೌಘಾನ್।
ಮರುದ್ ಭುಜೀನ ತ್ವರಿತಂ ಮರುತ್ವಾನ್
ಪ್ರಾಯುಂಙ್ಕ ಘೋಷಾಭಿಮುಖಂ ಸ ಘೋಷಾನ್ ॥೧೪॥

ದೇವೇಂದ್ರನು ಕೋಪವನ್ನು ಹೊಂದಿ ಮೇಘಗಳನ್ನು ಪ್ರಚೋದಿಸುತ್ತಾ ಸಂಪೂರ್ಣ ಗೋಕುಲವನ್ನು ನಾಶಪಡಿಸಲು ಇಚ್ಛಿಸಿದನು. ಆ ಮೇಘಗಳು ಕೋಪವು ಅಗ್ನಿಜ್ವಾಲೆಯಂತೆ ಇದ್ದವು. ಜೋರಾಗಿ ಸಿಡಿಲು ಬಡಿಯುತ್ತಾ, ಜೋರಾಗಿ ಗಾಳಿಯು ಬೀಸಿ ತೀವ್ರವಾಗಿ ಇರುಚಲು ಬಡಿಯುತ್ತಾ, ಆಯುಧಗಳಂತೆ ಹೊಳೆದವು. ಮೇಘಗಳ ತೀವ್ರತೆ ಸಹಿಸಲಸಾಧ್ಯವಾಗಿತ್ತು.

ಪ್ರಕಲ್ಪಯಂತಃ ಪರಿವೇಷ ಚಕ್ರಂ ಬೃಂದಾವನೇ ವಿಹ್ವಲ ಗೋಪಬೃಂದೇ।
ಸಮೀರನುನ್ನಾಃ ಸಹಸಾ ಪಯೋಧಾಃ ಶಕ್ರಸ್ಯತೆ ಶಾಸನ ಮನ್ವತಿಷ್ಠನ್ ॥೧೫॥

ಗೋಪಾಲಕರು ಸಮೂಹ ಸಮೂಹವಾಗಿ, ಗಾಭರಿಗೊಂಡು ನಿಂತ ಬೃಂದಾವನದಲ್ಲಿ ಜೋರಾಗಿ ಬೀಸುತ್ತಿದ್ದ ಗಾಳಿಯಿಂದ ಕೂಡಿದ ಮೇಘಗಳು ಇಂದ್ರನ ಆಜ್ಞೆಯನ್ನು ನೆರವೇರಿಸಲು ಸಿದ್ಧರಾಗಿ ಮಂಡಲಾಕಾರ ಮಾಡಿಕೊಂಡವು.

ಮೇಘಗಳು ಬೃಂದಾವನವನ್ನು ಪೀಡಿಸಲು ಸಿದ್ಧವಾಗಿ ತಮ್ಮ ದುಷ್ಕಾರ್ಯವನ್ನು ಆರಂಭಿಸಿದವು.

ತಟಿಸ್ಸಹಸ್ರೇಣ ವಿದೀಪ್ತನೇತ್ರಃ ಸಮೇತ ವಜ್ರೋ ಧೃತಚಿತ್ರಚಾಪಃ।
ಅತರ್ಕ್ಯತೇಂದ್ರಃ ಸ್ವಯಮಭ್ರವಾಹಃ ಕಾಲಾತ್ಮನಾ ಭೂಮಿಕಯೇವ ಖೇಲನ್ ॥೧೬॥

ಸಾವಿರ ಸಂಖ್ಯೆಯಲ್ಲಿ ಮಿಂಚುಗಳು ಮಿಂಚಿ ಸಿಡಿಲುಗಳು ಬಡಿದು, ಆಕಾಶವೆಲ್ಲವೂ ವಿಚಿತ್ರವಾಗಿ ಬೆಳಗಿ, ಆವಾಗ ಮೇಘವು ದೇವೇದ್ರನನ್ನು ಸಂಹಾರ ಮಾಡುವ ಆ ಕಾಲಮೇಘ ದೊಡನೆ ಸಾವಿರ ದೀಪಗಳ ಪ್ರಭೆಯಿರುವ ವಜ್ರಾಯುಧವನ್ನು ತೆಗೆದುಕೊಂಡು ಬಿಲ್ಲನ್ನು ಹಿಡಿದು, ಮೇಘ ವಾಹನವೇರಿ ನಿಂತಿರುವಂತೆ ಬೆಳಗುತ್ತಿತ್ತು.

ದೇವೇದ್ರನು ಮೇಘಗಳನ್ನೇ ವಾಹನವನ್ನಾಗಿ ಮಾಡಿಕೊಂಡು ವಜ್ರಾಯುಧವನ್ನು ಬಿಲ್ಲನ್ನು ಹಿಡಿದು, ಯುದ್ಧಕ್ಕೆ ಸನ್ನದ್ಧನಾಗಿ ಹೊರಟು ನಿಂತಂತೆ ಇತ್ತು. ಮಿಂಚುಗಳ ಬೆಳಕಿನಲ್ಲಿ ಅವನು ಯಮ ಸ್ವರೂಪನಂತೆ ಕಂಡನು.

ಅಸೂಯತಾ ವಜ್ರಭೃತಾ ಪ್ರಯುಕ್ತಾಮಾಕಾಲಿಕೀಂ ಪ್ರಾವೃಷ ಮಾದಿದೇವಃ।
ಆಶಾನಿರೋಧಂ ಜಗತಾಂ ದಿಶಂತೀಂ ನಿರೋದ್‌ಧೂಮೈಚ್ಛನ್ನಿಜಯಾ ನಶಕ್ತ್ಯಾ॥೧೭॥

ತನ್ನ ಸಂಕಲ್ಪ ಶಕ್ತಿಯಿಂದಲೇ ಮಳೆಯನ್ನು ತಡೆಯುವ ಸರ್ವೇಶ್ವರನಾಗಿ, ಸರ್ವ ಕಾರಣನಾಗಿರುವ ಶ್ರೀಕೃಷ್ಣನಿಗೆ ಸ್ನೇಹಿತನಾಗಿದ್ದೂ, ಲೋಕಗಳ ಆಶೆಯನ್ನು ತಡೆಯುವ ಸಾಮರ್ಥ್ಯ ವಿರುವ ವಜ್ರಾಯುಧವನ್ನು ಧರಿಸಿರುವ ಇಂದ್ರನ ಕೋಪದಿಂದ ಏರ್ಪಟ್ಟ ಆ ಮಳೆಯನ್ನು ನಿಲ್ಲಿಸಲು ಭಗವಂತನು ಇಚ್ಛಿಸದೆ, ಇದು ಅಕಾಲಿಕ ಮಳೆ. ಹಾಗೆಯೇ ಹೊರಟುಹೋಗುತ್ತದೆ ಎಂದು ಸುಮ್ಮನಿದ್ದನು.

ಸ್ವಲ್ಪಕಾಲ ಶ್ರೀಕೃಷ್ಣನು ನೋಡೋಣ. ಎಷ್ಟರಮಟ್ಟಿಗೆ ದೇವಂದ್ರನು ಆಟ ಆಡುತ್ತಾನೆ ಎಂದು ಉದಾಸೀನದಿಂದ ಇದ್ದನು. ಕೃಷ್ಣನಿಗೆ ಸ್ನೇಹಿತನಾಗಿದ್ದೂ ಅವನಿಗೆ ವಿರುದ್ಧವಾಗಿ ನಿಂತ ಇಂದ್ರನು, ಮುಂದೆ ಏನಾಗಬಹುದೆಂಬ ಕಲ್ಪನೆಯಿಲ್ಲದೆ, ಶ್ರೀಕೃಷ್ಣನ ಪ್ರಭಾವವನ್ನು ಅರಿತುಕೊಳ್ಳದೆ ತನ್ನ ದುಷ್ಟತನವನ್ನು ಮುಂದುವರೆಸಿದನು.

ವಿಯತ್ಪಯೋಧಿಂ ಪರಿತಃ ಪಯೋದೈರ್ವೈಲಾರ್ತ ಮಾಲೈರಿವ ವರ್ಧಮಾನೈಃ।
ಜಿಘಾಂಸತಾ ಗೋಪ ಗಣಾನ್ ಮಘೋನಾಚ್ಛನ್ನೇನ ತಸ್ಥೇ ಮೃಗಯಾರ್ಥಿನೇವ॥೧೮॥

ಆಕಾಶದಲ್ಲಿ ಇಂದ್ರನು ಮೇಘಗಳ ಮರೆಯಲ್ಲಿ ನಿಂತು ಮಳೆಯನ್ನು ಸುರಿಸುವಾಗ ಆಕಾಶವೇ ಒಂದು ಸಮುದ್ರದಂತೆ ಇತ್ತು. ಅದರ ದಡದಲ್ಲಿ ತಮಾಲ ಮರಗಳಂತೆ ಇದೆ ಮೇಘಗಳು. ಆ ಮರಗಳ ಮಧ್ಯದಲ್ಲಿ ಮರೆಸಿಕೊಂಡು ಗೋಪರನ್ನು ಪಶುಗಳನ್ನಾಗಿ ಇಟ್ಟು ಇಂದ್ರನು ಬೇಟೆಯಾಡುವಂತೆ ತೋರುತ್ತಿತ್ತು.

ಉಪಮಾಲಂಕಾರ - ಮೇಘಗಳ ಆರ್ಭಟವನ್ನು ವರ್ಣಿಸಿದ್ದಾರೆ. ಮಳೆಯ ನೀರಿನ ಮಧ್ಯದಲ್ಲಿ ಆಕಾಶವೇ ಸಮುದ್ರದೋಪಾದಿ ಕಂಡಿತು.

ಅದೃಶ್ಯರೂಪಃ ಸ ತದಾ ಮರುತ್ವಾನ್ ಅಂಭೋಮುಚಾಮಂತರತೋಽವತಸ್ಥೇ।
ಅಪಾರಯನ್ ದ್ರಷ್ಟುಮಿವ ತ್ರಿಧಾಮ್ನೋ ದೀಪ್ತಿಂ ದಿವಾಭೀತ ಇವಾತಿಸೂರ್ಯಾಮ್॥೧೯॥

ಆಗ ಮೇಘಗಳ ಮಧ್ಯದಲ್ಲಿಯೇ ಇಂದ್ರನು ಮರೆಸಿಕೊಂಡು ಇದ್ದ ಸ್ಥಿತಿಯು ಸೂರ್ಯ ಮಂಡಲಕ್ಕೂ ಮೇಲಿರುವ ಭಗವಂತನು ಅವನಿಗೆ ಅಂಜಿ ಇರುವಂತೆ ತೋರುತ್ತಿತ್ತು.

ಸೂರ್ಯ ಮಂಡಲದಾಚೆ ಇರುವ ಭಗವಂತನು ಸಹ ಈ ಇಂದ್ರನು ಆರಂಭಿಸಿದ ಮಳೆಯ ಆರ್ಭಟಕ್ಕೆ ಅಂಜಿ ಸುಮ್ಮನಿರುವನೋ ಎಂಬಂತೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಶ್ರೀಕೃಷ್ಣನು ಇಂದ್ರನಿಗೆ ಪಾಠ ಕಲಿಸಲು ನಿರ್ಧರಿಸಿದನು.

ಅಮರ್ಷವೇಗಾದ ಚಮತ್ಕ್ರಿಯೋತ್ಥಾತ್ ಜಿಘೃಕ್ಷತಾ ವಜ್ರಮಕುಂಠವೀರ್ಯಂ।
ಅಲಕ್ಷಿ ಜೀಮೂತರಥೇ ಮಘೋನಾ ಮೋಘಕ್ರಿಯೋ ಮುಕ್ತ ಇವೇಂದ್ರಚಾಪಃ॥೨೦॥

ಮೇಘ ಮಂಡಲದಲ್ಲಿ ಕಾಮನ ಬಿಲ್ಲನ್ನು ಕಂಡಾಗ ದೇವೇಂದ್ರನು ಮೊದಲು ಬಿಲ್ಲನ್ನು ಎತ್ತಿ ಅದು ಸರಿಯಾಗಿ ಕೆಲಸ ಮಾಡದ್ದನ್ನು ನೋಡಿ ತನ್ನ ಬಿಲ್ಲು ಮುರಿದು ಹೋಯಿತೆಂದು ಭಾವಿಸಿ ಅಸಾಮರ್ಥ್ಯದಿಂದ ಕೋಪಗೊಂಡು ವಜ್ರಾಯುಧವನ್ನು ಎತ್ತಲು ನಿಶ್ಚಯಿಸಿದಾಗ, ಅದು ಅವನ ಕೈಯ್ಯಲ್ಲಿ ಹಿಡಿದ ಬಿಲ್ಲಿನಂತೆ ತೋರುತ್ತಿತ್ತು.

ಇಂದ್ರನು ತನ್ನ ಅಮೋಘವಾದ ವಜ್ರಾಯುಧವನ್ನು ಪ್ರಯೋಗ ಮಾಡಲು ನಿರ್ಧರಿಸಿದನು. ಶತಾಯ ಗತಾಯ ಗೋಪಾಲಕರನ್ನೆಲ್ಲಾ ನಾಶ ಮಾಡಲು ಸಂಕಲ್ಪ ಮಾಡಿದನು. ತನ್ನ ಈ ಪ್ರಯತ್ನವು ಯಾವ ರೀತಿಯಿಂದಲೂ ವಿಫಲವಾಗಬಾರದೆಂದು ಹಿಂದೆಂದೂ ಯಾರೂ ನೋಡದೆ ಇದ್ದಂತಹ ಮಳೆಯನ್ನು ಸುರಿಸಲು ಪ್ರಾರಂಭಿಸಿದನು.

ಸುತೀವ್ರಹುಂಕಾರ ಭೃತೋ ನಿನಾದೈಃ ಸೌದಾಮನಿ ದರ್ಶಿತ ತರ್ಜನೀಕಾಃ।
ಮರುತ್ವದಾಜ್ಞಾ ವಿಮುಖಾನ್ ಅಭೀಕ್ಷ್ಣಂ
ನಿರ್ಭರ್ತ್ಸಯಾಮಾಸುರಿವಾಂಬುವಾಹಾಃ ॥೨೧॥

ಮೇಘಗಳು ಸಿಡಿಲುಗಳೊಡನೆ ಮಿಂಚುಗಳನ್ನು ತೋರಿ ಬೀಸುವುದನ್ನು ಕಂಡಾಗ, ದೇವೇಂದ್ರನ ಆಜ್ಞೆಗೆ ಒಳಪಡದೆ ಇರುವವರನ್ನು ತೀವ್ರವಾಗಿ ಹೂಂಕರಿಸಿ ಹೆದರಿಸಿ, ದೊಣ್ಣೆಗಳಿಂದ ಬೆದರಿಸುವಂತೆ ತೋರುತ್ತಿತ್ತು.

ದೇವೇಂದ್ರನು ಯಾರು ತನ್ನ ಆಜ್ಞೆಯನ್ನು ಮೀರಿ, ಅಂದರೆ ಗೋಪಾಲಕರಿಗೆ ಸಹಾಯ ಮಾಡುವವರನ್ನು ಬೆದರಿಸುವಂತೆ ಸಿಡಿಲು ಗುಡುಗು ಮಿಂಚುಗಳೊಡನೆ ಮಳೆಯನ್ನು ಸುರಿಸುತ್ತಿದ್ದನು. ಎಲ್ಲರೂ ಅವನಿಗೆ ಹೆದರಿ, ಅವನ ಆಜ್ಞಾಧಾರಕರಾಗಿದ್ದರು.

ಕ್ಷಣ ಪ್ರಭಾಸ್ತತ್ಕ್ಷಣ ಮಂತರಿಕ್ಷೇ ಪ್ರಾಯೇಣ ಗೋಪಾನ್ ಗ್ರಸಿತುಂ ಪ್ರವೃತ್ತಾಃ।
ಬಭಾಸಿರೇ ವಾಸವರೋಪ ವಹ್ನೇ ರ್ಜ್ವಾಲಾಗ್ರಜಿಹ್ವಾ ಇವ ಜಾತಲೌಲ್ಯಾಃ ॥೨೨॥

ಆಕಾಶದಲ್ಲಿ ಮಿಂಚುಗಳು ಒಂದೇ ಕ್ಷಣದಲ್ಲಿ ಗೋಪಾಲಕರೆಲ್ಲರನ್ನೂ ತಲ್ಲಣಗೊಳಿಸಿ, ಇಲ್ಲಿ ಅಲ್ಲಿ ಪ್ರಜ್ವಲಿಸುವ ದೇವೇಂದ್ರನ ಕೋಪಾಗ್ನಿಯನ್ನು ಹೊ ಚೆಲ್ಲುವ ನಾಲಿಗೆಗಳೇನೋ ಎಂಬಂತಿತ್ತು. ಮಿಂಚುಗಳು ಪ್ರಜ್ವಲವಾಗಿ ತೋರಿ, ಗೋಪಾಲಕರನ್ನೆಲ್ಲಾ ಗಾಭರಿಗೊಳಿಸಿತು.

ಕಿಮಂತರಿಕ್ಷೇಣ ಘನೀಬಭೂವೆ ಕಿಮುತ್ಥಿತಂ ಧ್ವಾಂತ ಮಹೀಂದ್ರಲೋಕಾತ್ ।
ಮೂಲಂ ಕಿಮೇತತ್ ಪ್ರಳಯಾರ್ಣವಾನಾಮಿತೀವಮೇನೇ ಮಲಿನಾಭ್ರಮಾಲಾ ॥೨೩॥

ಆಕಾಶವೇ ಹೀಗೆ ಬಲವಾದ ಮೇಘಗಳಾಗಿ ಆವರಿಸಿಕೊಂಡು, ಅಲ್ಲಿ ಪಾತಾಳವೆಂಬ ನಾಗಲೋಕದಿಂದ ಹಬ್ಬಿದ ಕತ್ತಲೆಯೋ ಎಂಬಂತೆ ಪ್ರಳಯ ಸಮುದ್ರಗಳಿಗೆ ಕಾರಣವಾಗುತ್ತದೆಯೇನೋ ಎಂಬ ರೀತಿ ಅನೇಕ ವಿಧವಾಗಿ ಆ ಮೇಘ ಸಮೂಹವು ಚಿಂತೆ ಉಂಟು ಮಾಡಿತು.

ಆ ಘೋರವಾದ ಮಳೆಯ ಪರಿಣಾಮ ಅಷ್ಟಿಷ್ಟಲ್ಲ. ಮಹಾಪ್ರಳಯವೇ ಆಗುತ್ತಿದೆಯೇನೋ ಎಂಬಂತೆ ಎಲ್ಲರೂ ಭಯಭೀತರಾದರು.

ವ್ರಜೋಪಮರ್ದಂ ಸಮಯೋ ವಿಧಾಸ್ಯನ್ ಬಭಾರ ನಮ್ರೇಣ ಪಯೋದಮೂರ್ಧ್ನಾ।
ಮಹೀಯಸೀಂ ವಾಸವ ಚಾಪಲೇಖಾಂ ಮಾಯಾಪ್ತದಿಷ್ಟಾಮಿವ ಮಾಲ್ಯಶೇಷಾಂ ॥೨೪॥

ಕಾಲವೆಂಬ ಯುದ್ಧವೀರನು, ಗೋಪರ ಕೇರಿಯನ್ನು ನಾಶ ಮಾಡಲು ಹೊರಟವನಾಗಿ, ತನ್ನ ಮೇಘದಿಂದ ತುಂಬಿದ ತಲೆಯನ್ನು ತಗ್ಗಿಸಿ, ಅಲ್ಲಿ ಒಂದು ವಿಧವಾಗಿ ಭಗವಂತನ ಮಾಯೆಯಿಂದ, ನಿರ್ಮಾಲ್ಯವನ್ನು ಧರಿಸಿ, ಇಂದ್ರನ ಬಿಲ್ಲೆಂಬ ಪರಿವಟ್ಟವನ್ನು ಕಟ್ಟಿಕೊಂಡನೋ ಏನೋ ಎಂದು ಭಾಸವಾಗುತ್ತಿತ್ತು.

ಪ್ರಳಯ ಪುರುಷನು ಪರಿವಟ್ಟವನ್ನು ಕಟ್ಟಿಸಿಕೊಳ್ಳುವಂತೆ ಮೇಘಗಳನ್ನು ತಲೆಗೆ ಕಟ್ಟಿಕೊಂಡು (ಪರಿವಟ್ಟವನ್ನು ಕಟ್ಟಿಸಿಕೊಳ್ಳುವಾಗ ತಲೆ ತಗ್ಗಿಸುತ್ತಾರೆ). ತಲೆಯನ್ನು ತಗ್ಗಿಸಿ ಮಳೆಯನ್ನು ಸುರಿಸುತ್ತಾನೇನೋ ಎಂಬಂತಿತ್ತು.

ಕಠೋರ ಗರ್ಜಾಪಟಹ ಪ್ರಣಾದಃ ಕರಪ್ರಸೂನೈರವಕೀರ್ಯ ಪೃಥ್ವೀಮ್ ।
ಕ್ಷಣ ಪ್ರಭಾಭಿರ್ ಘಟಿತಾಂಗ ಹಾರಃ ಕಾಲಃ ಪ್ರತುಷ್ಟಾವ ಯುಗಾಂತ ನೃತ್ತಮ್ ॥೨೫॥

ಕಾಲ ಪುರುಷನು ಆ ರೀತಿ ಮೇಘಗಳಿಂದ ಮಳೆ ಸುರಿಸಿದ್ದು ನಾಟ್ಯ ಆಡುವವನು ವಾದ್ಯಘೋಷಗಳ ನಡುವೆ ಆಗಾಗ ಹೂವುಗಳನ್ನು ಎರಚಿ ತನ್ನ ಅಂಗಗಳನ್ನು ವಿಲಾಸವಾಗಿ ಆಡಿಸುತ್ತಾ ನಾಟ್ಯ ಮಾಡಲು ತೊಡಗಿದಂತಿತ್ತು. (ಸಿಡಿಲಿನ ಗರ್ಜನೆ ಇತ್ಯಾದಿಗಳು ಭಯಂಕರ ಶಬ್ದ ಉಂಟು ಮಾಡುತ್ತಿತ್ತು.)

ಸ್ವಾಮಿ ದೇಶಿಕರು ಆ ಮಳೆಯ ಆರ್ಭಟವನ್ನು ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ. ಹಿಂದಿನ ಶ್ಲೋಕದಲ್ಲಿ ಕಾಲ ಪುರುಷನು ಮೇಘಗಳನ್ನು ತಲೆಗೆ ಕಟ್ಟಿಕೊಂಡಂತಿದೆ ಎಂದರೆ, ಈ ಶ್ಲೋಕದಲ್ಲಿ ಅವನು ರುದ್ರ ನಾಟ್ಯವಾಡುವಂತೆ ತೋರುತ್ತಿದೆ ಎಂದಿದ್ದಾರೆ. ನಾಟ್ಯವಾಡುವವರು ಮೊದಲು ಹೂವನ್ನು ಎರಚುವಂತೆ ಇಲ್ಲಿ ಮಳೆಯ ದಪ್ಪದಪ್ಪ ಹನಿಗಳನ್ನು ಎರಚುತ್ತಿದ್ದಾನೆ ಕಾಲಪುರುಷ ಎಂಬ ವರ್ಣನೆ ಇದೆ.

ಪ್ರಣುದ್ಯಮಾನಾಃ ಪ್ರಭಲೈಃ ಸಮೀರೈರಾಪ್ಲಾವಯಾಮಾಸುರ ಮಂದಘೋಷಾಃ ।
ಮಹೀಮ ಪರ್ಯಾಯ ನಿಪೀತ ಮುಕ್ತೈರಾದನ್ವರಂಬುಭಿರಾಂಬುವಾಹಾಃ ॥೨೬॥

ಮೇಘಗಳು ಒಂದೇ ಸಮನಾಗಿ ಸಮುದ್ರದ ನೀರನ್ನೆಲ್ಲಾ ತುಂಬಿಕೊಂಡು ಪ್ರಬಲವಾದ ಗಾಳಿಗಳೊಡನೆ ಕೆಳಗೆ ಸುರಿಯುವುದರಿಂದ, ಭೂಮಿಯನ್ನು ನೀರಿನಲ್ಲಿ ಮುಳುಗಿಸುವ ಹಾಗೆ ತೋರುತ್ತಿತ್ತು.

ಪ್ರಳಯ ಕಾಲದಲ್ಲಿ ಹೇಗೆ ಭೂಮಿಯೆಲ್ಲವೂ ಜಲಾವೃತವಾಗುವುದೋ ಅದೇ ರೀತಿ ಇಂದ್ರನು ಸುರಿಸಿದ ಆ ಮಳೆಯಿಂದ, ಬೃಂದಾವನದ ಸುತ್ತಮುತ್ತಲಿನ ಭೂಮಿಯೆಲ್ಲವೂ ಸಂಪೂರ್ಣ ನೀರಿನಿಂದ ತುಂಬಿಹೋಯಿತು. ಜನರೆಲ್ಲರೂ ಓಡಿಯಾಡುವುದೇ ಬಹಳ ಕಷ್ಟವಾಯಿತು.

ಅಂಗಾರ ರೂಕ್ಷ ಸ್ತನಯಿತ್ನು ಪೂರ್ಣಾತ್ ಎರಂಬದೇ ತೇಜಸಿ ತಪ್ಯಮಾನಾತ್ ।
ವಿಹಾಯಸೋ ನೂನ ಮಭೂದ್ವಿಲೀನಾತ್ ವಿಶ್ವಗ್‌ಮುಖೀ ವೃಷ್ಟಿರವಾರಣೀಯಾ॥೨೭॥

ಕಪ್ಪು ಕಟ್ಟಿಗೆಗಳು ಇವು ಎನ್ನುವಂತೆ ಮೇಘಗಳು ತುಂಬಿ, ಸಿಡಿಲು, ಬೆಂಕಿ, ಎಲ್ಲಾ ಕಡೆಯೂ ಘನ ಘನವೆಂದು ಉರಿಯುತ್ತಿರಲು, ಆಕಾಶವೇ ಕರಗಿ ಎಲ್ಲಿ ಬಿದ್ದು ಬಿಡುವುದೋ ಎಂಬ ರೀತಿ ತಡೆಯಿಲ್ಲದೆ ಮಳೆ ಸುರಿಯುತ್ತಿತ್ತು. (ಉತ್ಪ್ರೇಕ್ಷಾಲಂಕಾರ).

ಮೇಲಿನಿಂದ ಆಕಾಶವೇ ಕರಗಿ ನೀರಿನೋಪಾದಿಯಲ್ಲಿ ಸುರಿಯುತ್ತಿದೆಯೇನೋ ಎಂಬಂತೆ ಅಡೆತಡೆಯಿಲ್ಲದೆ ಅಹೋ ರಾತ್ರಿ ಮಳೆ ಸುರಿಯುತ್ತಿತ್ತು. ಆಕಾಶದಿಂದ ಕಪ್ಪು ಕಟ್ಟಿಗೆಗಳು ಬೆಂಕಿಯನ್ನು ಚೆಲ್ಲುತ್ತಾ ಬೀಳುತ್ತಿರುವಂತಿತ್ತು.

ಪ್ರದೀಪ್ತವಿದ್ಯುದ್ಗಣದುರ್ನಿರೀಕ್ಷಾನ್ ಸೋಢುಂ ವ್ರಜಾಃ ಶ್ರೋತ್ರವಿಘಾತಿ ಘೋಷಾನ್।
ನ ಶೇಕುರಾವರ್ಜಿತ ಶಕ್ರಚಾಪಾನ್ ಧಾರಾಶರ ಶ್ರೇಣಿಮುಚಃ ಪಯೋದಾನ್ ॥೧೮॥

ಮಿಂಚುಗಳು ಇನ್ನೂ ಪ್ರಕಾಶಿಸುವುದಾಗಿ ಘರ್ಜಿಸುತ್ತಾ, ಕಿವಿಯು ತೂತು ಆಗುವ ಹಾಗೆ ಶಬ್ದಮಾಡಿ, ಆಕಾಶದಲ್ಲಿ ಬಾಣಗಳ ರೀತಿ ವರ್ಷವನ್ನು ವರ್ಷಿಸುತ್ತಾ ಮೇಘಗಳ ಆ ಗೋಕುಲದಲ್ಲಿದ್ದವರೂ ಯಾರೂ ಅದನ್ನು ತಡೆಯುವ ಹಾಗೆ ಮಾಡಿ, ಅವರ ಕಣ್ಣು, ಕಿವಿ, ದೇಹವೆಲ್ಲಾ ನಡುಗುವ ಹಾಗೆ ಮಾಡಿದವು.

ಗೋಕುಲದಲ್ಲಿದ್ದ ಗೋಪಾಲಕರೆಲ್ಲರೂ ಆ ಮಿಂಚು, ಸಿಡಿಲುಗಳ ಘರ್ಜನೆಗೆ ಭಯಭೀತರಾಗಿ ಅವರುಗಳ ಪೂರ್ಣ ದೇಹವು ಛಳಿಯಿಂದ ನಡುಗುವ ಹಾಗೆ ಆ ಮೇಘಗಳು ಮಳೆಯನ್ನು ಸುರಿಸಿದವು. ಶ್ರೀರಾಮನು ರಾಕ್ಷಸರ ಮೇಲೆ ಬಾಣಗಳ ಮಳೆಯನ್ನು ಸುರಿಸಿದ ಹಾಗೆ (ಶರವರ್ಷಂ ವವರ್ಷಹ) ಇಂದ್ರನು ಮಳೆಯ ಬಾಣಗಳನ್ನು ಸುರಿಸಿದನು.

ಸ ಹುಂ ಕೃತಾಃ ಸ್ವಾಮಿ ನಿಮೀಲಿತಾಕ್ಷಾ ದೀರ್ಘೋರೀರುಶೃಂಗಾ ದರಭುಗ್ನವಕ್ತ್ರಾ।
ಪ್ರತ್ಯಗ್ರಹೀಷುಃ ಪ್ರತಿಪನ್ನರೋಷಾ ಧಾರಾಃ ಕ್ಷಣಂ ಧೈರ್ಯಭೃತೋ ಮಹೋಕ್ಷಾಃ॥೧೯॥

ದೊಡ್ಡ ಎತ್ತುಗಳು ಮಾತ್ರವೇ ಹುಂಕಾರ ಮಾಡಿ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಉದ್ದವಾಗಿರುವ ಕೊಂಬುಗಳೊಡನೆ ಮುಖಗಳನ್ನು ಚಿಕ್ಕದು ಮಾಡಿ ಕೋಪದಿಂದ ಬಹು ಪ್ರಯೋಗದಿಂದ ಆ ಮಳೆಯು ವೇಗವನ್ನು ತಡೆದುಕೊಂಡವು.

ಕೇವಲ ಕೆಲವು ಪ್ರಾಣಿಗಳು ಅಂದರೆ ಬಲಿಷ್ಠವಾದ ಎತ್ತಗಳು ಮಾತ್ರ ಸ್ವಲ್ಪ ಮಟ್ಟಿಗೆ ಆ ಮಳೆಯ ವೇಗವನ್ನು ಸಹಿಸಲು ಸಾಧ್ಯವಾದವು. ಬಹು ಪ್ರಯಾಸದಿಂದ ಆ ಪ್ರಾಣಿಗಳು ಮಳೆಯ ವಿರುದ್ಧ ದಿಕ್ಕಿಗೆ ಮುಖ ಮಾಡಿಕೊಂಡು, ಮಳೆಯ ವೇಗವನ್ನು ತಡೆದುಕೊಂಡವು. ಎತ್ತುಗಳ ಸ್ವಭಾವ ಮಾಡುವ ವರ್ಣನೆ ಮಾಡುವ ಸ್ವಭಾವೋಕ್ತಿರಲಂಕಾರ.

ಸ್ತನಾಹಿತ ಸ್ವಸ್ತಿಕ ಬಾಹುಬಂಧಾಃ ಸ್ನಾನಾಲಕಾಃ ಸಂನತವಕ್ತ್ರಪದ್ಮಾಃ।
ವಿಲಗ್ನದೇಹಾ ವಸನೈರ್ ನ್ಯಷೀದನ್ ವ್ರಜಸ್ತ್ರಿಯೋ ವಾದಿತ ದಂತವೀಣಾಃ ॥೨೦॥

ಗೋಪಿಸ್ತ್ರೀಯರು ತೋಳುಗಳಲ್ಲಿ ತೂಗಿ ಹಾಕಿಕೊಂಡ ತಮ್ಮ ಕೈಗಳೊಡನೆ ಸ್ತನಗಳ ಮೇಲೆ ಭುಜವನ್ನು ಇಟ್ಟುಕೊಂಡು (ಸ್ವಸ್ತಿಕ ರೀತಿಯಲ್ಲಿ) ಮುಂದಕ್ಕೆ ಬಾಗುವ ಮುಂಗುರುಳುಗಳೊಡನೆ ಮುಖಾರವಿಂದವನ್ನು ಮರೆಸಿಕೊಂಡು ದೇಹಕ್ಕೆ ಅಂಟಿಕೊಂಡ ಒದ್ದೆಯ ಬಟ್ಟೆಗಳನ್ನು

ಹೊಂದಿದವರಾಗಿ, ಛಳಿಯನ್ನು ತಡೆಯದೆ, ಹಲ್ಲುಗಳನ್ನು ನಡುಗಿಸುತ್ತಾ ಅಲ್ಲಾಡದೆ ಒಂದೇ ಕಡೆ ಕುಳಿತಿದ್ದನು. (ಸ್ವಭಾವೋಕ್ತಿರಲಂಕಾರ).

ಮಳೆಯಲ್ಲಿ ಸಂಪೂರ್ಣವಾಗಿ ತೊಯ್ದು ಹೋದ ಗೋಪ ಸ್ತ್ರೀಯರು ಒದ್ದೆಯ ಬಟ್ಟೆಗಳೊಡನೆ ಛಳಿಯನ್ನು ತಡೆಯಲಾರದೆ, ಒದ್ದೆಯ ಬಟ್ಟೆಯಲ್ಲಿ ತಮ್ಮ ದೇಹ ಸೌಷ್ಠವವು ಎಲ್ಲಿ ಪ್ರದರ್ಶನವಾಗುವುದೋ ಎಂಬ ಭಯದಿಂದ ಮುದುಡಿಕೊಂಡು ಕೈಗಳಿಂದ ಎದೆಯನ್ನು ಮುಚ್ಚಿಕೊಂಡು ಛಳಿಯಿಂದ ಅಲುಗಾಡುವ ಹಲ್ಲುಗಳೊಡನೆ ಕುಳಿತಿದ್ದರು.

ಚಲದ್ಬಲಾಕೋಲ್ಬಣ ಶಂಖಮಾಲಾ ಪಯೋಧರ ವ್ಯಕ್ತಿಧರೋರ್ಮಿಹಾರಾ।
ಪ್ರಾವೃಟ್ ಪುನಃ ಸಂವವೃತೇऽತಿ ಘೋರಾ ಸಂವರ್ತ ಸಿಂಧೋರಿವ ಧರ್ಮಪತ್ನೀ ॥೨೧॥

ಮತ್ತೆ ವರ್ಷಾಕಾಲವು ಬಂದಿತು. ಅದು ಪ್ರಳಯ ಸಮುದ್ರವಾದ ಪುರುಷನ ಹೆಂಡತಿಯಾದ ಒಂದು ನದಿಯಂತೆ ಬೆಳಗುತ್ತಿತ್ತು. ವರ್ಷಾಕಾಲದಲ್ಲಿ ಮೇಘಗಳ ಕೆಳಗೆ ಕೊಕ್ಕರೆಗಳು ಸಮೂಹ ಸಮೂಹವಾಗಿ ಸೇರುತ್ತದೆ. ಅದು ಆ ನದಿಯಲ್ಲಿ ಪ್ರವಾಹದಲ್ಲಿ ಬರುವ ಶಂಖಗಳ ಸಮೂಹದಂತಿತ್ತು.

ಮೇಲೆ ಮೇಲೆ ಬರುವ ಮೇಘಗಳು ಅಲೆಗಳಂತಿದ್ದವು. ಇಂತಹ ಭಯಂಕರವಾದ ಕಾಲವನ್ನು ಪ್ರಳಯ ಸಮುದ್ರದ ಧರ್ಮಪತ್ನಿ ಎನ್ನಬಹುದು. ಅವಳು ಧರಿಸಿರುವ ಶಂಖ ಮಾಲೆಯಂತೆ ಕೊಕ್ಕರೆಗಳು ತೋರಿದವು. ಶಂಖಮಾಲೆಯಾದುದು ಪ್ರಳಯದಲ್ಲಿ ಸಾಯುವ ಪ್ರಾಣಿಗಳ ಎಲುಬುಗಳ ಸಮೂಹದಂತೆಯೂ, ಎಲ್ಲಾ ಸ್ತ್ರೀಯರಿಗೂ ಹೊಂದುವ ಶಂಖಮಾಲೆ ಯಂತೆಯೂ, ಪಯೋಧರಗಳನ್ನು ಅಲಂಕರಿಸಿದಂತೆಯೂ ಇದ್ದವು.

ಇಂದ್ರನು ಸುರಿಸುವ ಮಳೆಯ ಜೊತೆಗೆ ವರ್ಷಾಕಾಲದ ಮಳೆಯು ಸೇರಿ, ಬೃಂದಾವನಕ್ಕೆ ಇನ್ನೂ ಹೆಚ್ಚಿನ ಆಘಾತ ಉಂಟಾಯಿತು. ಅನೇಕ ಉಪಮಾನಗಳನ್ನು ಬಳಸಿ, ಈ ಶ್ಲೋಕವನ್ನು ರಚಿಸಿದ್ದಾರೆ. ಜಲ ಸಮುದ್ರದಲ್ಲಿ ತೇಲಿ ಬಂದ ಬಿಳುಪಾದ ಶಂಖಗಳು ಸ್ತ್ರೀಯರು ತಮ್ಮ ಎದೆಯ ಮೇಲೆ ಧರಿಸಿರುವ ಮಾಲೆಯಂತಿತ್ತು.

ಗಂಭೀರ ಗರ್ಜಾಪಟಹ ಪ್ರಣಾದಂ ಪ್ರಾರಬ್ಧಝುಂಜಾ ನಿಲನಾದಗೀತಮ್।
ತಡಿದ್ಭಿರಾಪಾದಿತ ತಾಂಡವಂ ತತ್ ಕಾಲಸ್ಯ ಸಂಗೀತಮಪೂರ್ವಮಾಸೀತ್ ॥೨೨॥

ಆ ಮಳೆಯ ಕಾಲದಲ್ಲಿ ಒಂದು ವಿಧವಾದ ಸಂಗೀತವು ಏರ್ಪಟ್ಟಿತ್ತು. ಸಂಗೀತಕ್ಕೆ ವಾದ್ಯ ಘೋಷ, ಹಾಡು, ನಾಟ್ಯ, ಮೂರೂ ಬೇಕು. ಸಿಡಿಲುಗಳು ಪೂರ್ತಿ ವಾದ್ಯ ಘೋಷ ದಂತೆಯೂ, ಮಳೆಯೊಡನೆ ಸೇರಿದ ಗಾಳಿಯ ಹೊಡೆತದ ನಾದವು ಹಾಡಿದಂತಿತ್ತು. ಮಿಂಚುಗಳ ಪ್ರಕಾರವು ನಾಟ್ಯದಂತಿತ್ತು. ಇದೊಂದು ರೀತಿಯಾದ ಅಪೂರ್ವವಾದ ಸಂಗೀತ.

ಸುಂದರವಾದ ಶ್ಲೋಕ. ಮಳೆಯ ಆರ್ಭಟವನ್ನು ಸಂಗೀತಕ್ಕೆ ಹೋಲಿಸಿದ್ದಾರೆ. ಸಂಗೀತಕ್ಕೆ ವಾದ್ಯ, ಗೀತ, ನೃತ್ಯ, ಮೂರೂ ಇರಬೇಕು. "**ನೃತ್ಯ ಗೀತ ವಾದ್ಯತ್ರಯಂ ಸಂಗೀತಂ**"

ಎಂಬ ವಾಕ್ಯವಿದೆ. ಅದೇ ರೀತಿ ಮಳೆಯ ಸಿಡಿಲು ಮಿಂಚು, ಗಾಳಿಯ ಹೊಡೆತ ಮೂರೂ ಸೇರಿ ಯಾವುದೋ ಸಂಗೀತದಂತೆ ಕೇಳಿ ಬರುತ್ತಿತ್ತು.

ವಿದ್ಯುದ್ ಗುಣೈಃ ಸಂದಿತಯಾ ಸಮಂತಾತ್
ವ್ರಜೇ ಮರುತ್ವಾನ್ ಮೃಗಯಾಮಿವೇಚ್ಛನ್ ।
ಸಮಾವೃಣೋತ್ ಸಾಂದ್ರತಮಿಸ್ರ ಧಾಮ್ನಾ
ಮೇಘಾತ್ಮನಾ ವಾಗುರಯಾ ವನಾದ್ರೀನ್ ॥೨೨॥

ದೇವೇಂದ್ರನು ಮೇಘಗಳೆಂಬ ಬಲೆಯನ್ನು ಬೀಸಿ ಕಾಡುಗಳನ್ನು ಬೆಟ್ಟಗಳನ್ನು ಮರೆ ಮಾಡಿದನು. ಬಲೆಯಾದುದು ನೂಲುಗಳಿಂದ ಹೆಣೆಯಲ್ಪಟ್ಟಿದ್ದವು. ಮೇಘ ಬಲೆಗೆ ಮಿಂಚುಗಳ ದಾರಗಳಾಗಿದ್ದವು. ಕತ್ತಲೆಯಾದ ಜಾಗದಲ್ಲಿ ಬಲೆ ಹಾಕಿದ್ದರೆ, ಮೃಗಗಳು ಗಮನಿಸದೆ, ಬಂದು ಬೀಳುತ್ತವೆ. ಈ ಮೇಘ ಬಲೆಯು ರಾತ್ರಿಯಲ್ಲಿ ಹಾಸಲ್ಪಟ್ಟಿತ್ತು. ಈ ಬಲೆಯನ್ನು ಅವನು ಬೀಸಿ ಗೋಕುಲದ ಪ್ರಾಣಿಗಳೆಲ್ಲವನ್ನೂ ಬೇಟೆಯಾಡಿ ಹಿಡಿಯಲು ಯೋಚಿಸಿದಂತಿತ್ತು.

ಮತ್ತೊಂದು ಉತ್ತಮ ಉಪಮಾನದ ಶ್ಲೋಕ. ಇಂದ್ರನು ಗೋಕುಲದ ಜನರು, ಪ್ರಾಣಿಗಳು ಎಲ್ಲವನ್ನೂ ಬೇಡನು ತನ್ನ ಬಲೆಯನ್ನು ಬೀಸಿ ದುಷ್ಟ ಪ್ರಾಣಿಗಳನ್ನು ಹಿಡಿಯುವಂತೆ ಮಳೆ, ಸಿಡಿಲು, ಮಿಂಚು – ಇವುಗಳಿಂದ ಹೆಣೆಯಲ್ಪಟ್ಟ ಬಲೆಯನ್ನು ಬೀಸಿ, ಗೋಪಾಲಕರೆಲ್ಲರನ್ನೂ ಹಿಡಿದು ನಾಶಪಡಿಸಲು ಇಚ್ಛಿಸಿದಂತಿತ್ತು.

ಮತ್ತೊಂದು ಉಪಮಾನದ ಶ್ಲೋಕ. ಇಂದ್ರನು ಗೋಕುಲದ ಜನರು, ಪ್ರಾಣಿಗಳು ಎಲ್ಲವನ್ನೂ ಬೇಡನು ತನ್ನ ಬಲೆಯನ್ನು ಬೀಸಿ ದುಷ್ಟ ಪ್ರಾಣಿಗಳನ್ನು ಹಿಡಿಯುವಂತೆ, ಮಳೆ, ಸಿಡಿಲು, ಮಿಂಚು ಇವುಗಳಿಂದ ಹೆಣೆಯಲ್ಪಟ್ಟ ಬಲೆಯನ್ನು ಬೀಸಿ, ಗೋಪಾಲಕರೆಲ್ಲರನ್ನೂ ಹಿಡಿದು ನಾಶಪಡಿಸಲು ಇಚ್ಛಿಸಿದಂತಿತ್ತು.

ಆಸಾರ ಧಾರಾಚ್ಛುರಿತೇಂದ್ರ ಚಾಪೈರ್ಮೇಘೈರ್ದಿಶಾ ಮಾಘವತೀ ಚಕಾಶೆ।
ಆಮುಕ್ತಮುಕ್ತಾಗುಣರತ್ನದಾಮ್ನೈಃ ಸಿಂಧೋರಪತ್ಯೈರಿವ ಧೀರನಾದೈಃ ॥೨೪॥

ಎಡೆಬಿಡದೆ, ಹೊಳೆಯುವ ನಕ್ಷತ್ರಗಳೊಡನೆ ಸೇರಿದ ಆಕಾಶದಲ್ಲಿ ತೋರಿದ ಮೇಘಗಳಿಂದ ದಕ್ಷಿಣ ದಿಕ್ಕು ಇಂದ್ರ ದಿಕ್ಕಿನಲ್ಲಿ ಆ ಮೇಘಗಳು ದೊಡ್ಡವುಗಳೊಡನೆ ಸೇರಿ ಸಮುದ್ರದಂತೆ ಘರ್ಜಿಸುವಾಗ, ಹಲವು ಮುತ್ತು ಮಾಲೆಗಳನ್ನು ರತ್ನಮಾಲೆಗಳನ್ನು ಅಡಿಗಿಸಿಕೊಂಡಿರುವ ಸಮುದ್ರದ ಮಕ್ಕಳೇನೋ ಎಂಬಂತಿತ್ತು.

ಸಮುದ್ರದಲ್ಲಿ ಹೇರಳವಾಗಿ, ಮುತ್ತುಗಳೂ, ರತ್ನಗಳೂ ಸಿಗುತ್ತವೆ. ಅದೇ ರೀತಿ ಮಳೆಯ ನೀರಿನಿಂದ ಉಂಟಾದ ಸಮುದ್ರದಂತಹ ಪ್ರವಾಹ, ಅಲೆಗಳಲ್ಲಿ ಅನೇಕ ಉತ್ತಮ ಮುತ್ತುಗಳೂ, ರತ್ನಗಳೂ ಸಿಕ್ಕವು. ಈ ಚಿಕ್ಕ ಚಿಕ್ಕ ಮಳೆಯ ಮಡುಗಳು, ಸಮುದ್ರದ ಮಕ್ಕಳೇನೋ (ಅಪಥ್ಯ) ಎಂಬಂತೆ ತೋರುತ್ತಿತ್ತು. (ಉತ್ಪ್ರೇಕ್ಷಾಲಂಕಾರ).

ಹುಂಕಾರವಂತಃ ಸ್ತನಿತೈರುದಾರೈಃ ಕ್ಷಣಪ್ರಭಾ ಕಾಂಚನವೇತ್ರಭಾಜಃ।
ಪುರಂದರಸ್ಯೇವ ಪುರಃಸರಾಸ್ತೇ ಪ್ರಚೇರುರುತ್ಸಾರಿತ ಗೋಪವರ್ಗಾಃ ॥೨೫॥

ಆ ಮೇಘಗಳು ಗಂಭೀರವಾದ ಸಿಡಿಲುಗಳಿಂದ ಕೂಡಿ, ಸಹಸ್ರ ಮಿಂಚುಗಳನ್ನೂ ಹೊಂದಿ ಇಂದ್ರನೆಂಬ ಅರಸನು ಸಂಚರಿಸಲು ಅನುಕೂಲವಾಗಿ ಅವನ ಮುಂದೆ ಅವನ ಭಟರುಗಳು ಹೂಂಕಾರ ಮಾಡಿಕೊಂಡು, ಯುದ್ಧೋತ್ಸಾಹದಿಂದ, ಪ್ರಜೆಗಳೆಲ್ಲರನ್ನೂ ಹೆದರಿಸುವ ಹಾಗೆ ಗೋಪಾಲಕರ ದಂಡನ್ನೆಲ್ಲಾ ಬೆದರಿಸುತ್ತಿದ್ದವು.

ಮಳೆಯ ಆರ್ಭಟದ ವರ್ಣನೆ ಮುಂದುವರೆದಿದೆ. ಗೋಪಾಲಕರನ್ನೆಲ್ಲಾ ಯುದ್ಧದಲ್ಲಿ ಜಯಿಸಲು, ಇಂದ್ರನು ಯುದ್ಧ ಸನ್ನದ್ದನಾಗಿ, ಮಳೆ, ಸಿಡಿಲುಗಳನ್ನು ತನ್ನ ಸೈನ್ಯವನ್ನಾಗಿ ಮಾಡಿಕೊಂಡು ಹೋರಾಟ ನಡೆಸುವಂತಿತ್ತು. ಆ ಮಳೆಯ ರಭಸ. (ರೂಪಕಾನು ಪಾಣಿತೋತ್ಪ್ರೇಕ್ಷಾಲಂಕಾರ)

ಶ್ರೀ ದೇಶಿಕರ ಮೂಲ ಶ್ಲೋಕಕ್ಕೆ ಶ್ರೀ ಅಪ್ಪಯ್ಯ ದೀಕ್ಷಿತರು, ಅಲಂಕಾರ ಶಾಸ್ತ್ರದ ವಿವಿಧ ಪ್ರಕಾರಗಳನ್ನು ಹೆಸರಿಸಿದ್ದಾರೆ.

ಪ್ರಕೃಷ್ಟವಜ್ರಾಯುಧ ಚಾಪಚಿಹ್ನಾಂ ಪೌರಸ್ತ್ಯವಾತೇನಕೃತಪ್ರಕಂಪಾಮ್।
ಕಾಲಸ್ಯ ಕೃಷ್ಣಾಮಿವ ಕೇತುಮಾಲಾಂ ಕಾದಂಬಿನೀಂ ಪ್ರೇಕ್ಷ್ಯ ಜನಶ್ಚಕಂಪೇ ॥೨೬॥

ಸಿಡಿಲುಗಳೆಲ್ಲವೂ ಇಂದ್ರ ಬಿಲ್ಲನ್ನು ಹೊಂದಿ ಜೋರಾದ ಗಾಳಿಯಿಂದ ಚೆನ್ನಾಗಿ ಅಲ್ಲಾಡುವ ಮೇಘಗಳ ಸಮೂಹವನ್ನು ಕಂಡ ಜನಗಳು ಪೂರ್ತಿ ಹೆದರಲು ಕಾರಣವಾದ ಆಯುಧ ಬಿಲ್ಲನ್ನು ಗುರುತನ್ನಾಗಿ ತೋರುವ ಗಾಳಿಯಿಂದ ಅಲ್ಲಾಡುವ ಕಾಲವೆಂಬ ಯುದ್ಧ ಪುರುಷನು ಕಪ್ಪು ಧ್ವಜವನ್ನು ಬೀಸಿ ಗುಡುಗಿದನು.

ಮಳೆಯ ಆರ್ಭಟದ ವರ್ಣನೆ ಮುಂದುವರೆದಿದೆ. ವಜ್ರಾಯುಧವನ್ನು ಇಂದ್ರಚಾಪ ವೆಂದು ಕರೆದಿದ್ದಾರೆ. ಆ ಮೇಘಗಳ ಹೊಡೆತವನ್ನು ನೋಡಿ ಜನರೆಲ್ಲರೂ ಪೂರ್ತಿಯಾಗಿ ಹೆದರಿಬಿಟ್ಟರು. ತಮ್ಮ ಸರ್ವನಾಶ ಸಿದ್ಧವೆಂದು ಭಾವಿಸಿದರು.

ಪಯೋಮುಚಾಂ ಪಂಕ್ತಿರಸಹ್ಯಧಾರಾ ಭೂಭೃದ್ಗಣಾನ್ ಭೇತ್ತುಮಿವ ಪ್ರವೃತ್ತಾ।
ವಿಡಂಬಯಾಮಾಸ ವಿಶೇಷಭೀಮಾಂ ಕೃತಾಂತ ಕೋಪೋಲ್ಲಸಿತಾಂ ಕೃಪಾಣೀಂ ॥೨೭॥

ತಡೆಯಲಾಗದ ಧಾರೆಗಳನ್ನು ಸುರಿಸುವ ಮೇಘ ಸಮೂಹವಾದುದು ಬೆಟ್ಟಗಳೆಲ್ಲ ವನ್ನೂ ಅಲ್ಲಾಡಿಸಿತು. ಅಲ್ಲದೆ, ಭಯಂಕರವಾದ ಯಮನ ಕೋಪದಿಂದ ಸೃಷ್ಟಿಸಲ್ಪಟ್ಟ ತೀಕ್ಷ್ಣವಾದ ಚೂಪಾದ ಕತ್ತಿಗಳಂತೆ ಇತ್ತು.

ಮಳೆಯ ಧಾರೆ ಚೂಪಾದ ಕತ್ತಿಗಳಂತೆ ಸಹ ಸಹಿಸಲಸಾಧ್ಯವಾಗಿತ್ತು. ಆ ಪ್ರದೇಶದಲ್ಲಿದ್ದ ಎಲ್ಲಾ ಬೆಟ್ಟಗುಡ್ಡಗಳನ್ನು ಆ ಘನಘೋರ ಮಳೆಯು ಅಲ್ಲಾಡಿಸಿತು.

ಪಯೋದಭಾರೈರ್ನಮಿತಂ ನಭಃ ಕಿಂ ಶೇಷಾಹಿನಾ ಭೂಮಿರುತ ಪ್ರಣುನ್ನಾ।
ಅದೂರತಃ ಸಂಪುಟ ಭಾವಭಾಜೋರಾಸೀತ್ ತಯೋರಂತರಮಲ್ಪಶೇಷಮ್ ॥೩೮॥

ಆಕಾಶವು ಭೂಮಿಯೂ, ಎರಡೂ ಬೇರೆ ಬೇರೆಯಾಗಿದ್ದರೂ ನಡುವೆ ಹೆಚ್ಚಿಗೆ ಜಾಗವಿಲ್ಲದಂತಾಯಿತು. ಅದರಿಂದ ಸೇರಿ ಒಂದಾದ ವಸ್ತುವಿನ ಹಾಗೆ ಕಾಣುತ್ತಿತ್ತು. ಆಕಾಶವೇ ಮೇಘಗಳು. ಆ ವೇಗವನ್ನು ತಾಳದೆ ಬಿದ್ದುಹೋಯಿತೇನೋ ಎಂಬಂತೆ ಅಥವಾ ಭೂಮಿ ಆದಿಶೇಷನಿಂದ ಮೇಲಕ್ಕೆ ಎತ್ತಲ್ಪಟ್ಟೇನೋ ಎಂಬಂತಿತ್ತು.

ಆಕಾಶವು ಭೂಮಿಯ ನಡುವೆ ಇದ್ದ ಅಂತರ ಆ ಮಳೆಯ ಆರ್ಭಟದಿಂದ ಕಡಿಮೆಯಾಗಿ ಎರಡೂ ಒಂದಾಗಿ ಸೇರಿಹೋಯಿತೇನೋ ಎಂಬಂತೆ ಭಾಸವಾಯಿತು. ಆಕಾಶ ಕೆಳಗೆ ಬಿದ್ದಂತೆಯೋ ಅಥವಾ ಭೂಮಿಯ ಮೇಲಕ್ಕೆ ಎತ್ತಲ್ಪಟ್ಟಂತೆಯೂ ತೋರುತ್ತಿತ್ತು.

ಪ್ರಾಯಃ ಪ್ರಕೀರ್ಣಾಶನಿ ವಿಪ್ರುಲಿಂಗೈರ್ಲೋಕಾಸ್ತಥಾಲೋಚನ ರೋಧಮಾಪುಃ।
ಪಯೋದ ರೂಪೇಣ ವಿವರ್ತಮಾನೈಃ ಪರ್ಜನ್ಯಕೋಪಾನಲ ಧೂಮಜಾಲೈಃ॥೩೯॥

ಅಗ್ನಿಯಂತೆ ಜ್ವಲಿಸುವ ಮೇಘಗಳ ದೇವತೆಯ ಕೋಪದಿಂದುಂಟಾದ ದಟ್ಟವಾದ ಹೊಗೆಯ ಜ್ವಾಲೆಯೇ ಸಿಡಿಲುಗಳು ಎಲ್ಲೆಲ್ಲೂ ಬಡಿದು ಮೇಘಗಳಾಗಿ ಬಂದಿರಬೇಕೆಂದು ಭಾಸವಾಯಿತು. ಎಲ್ಲಾ ಪ್ರಜೆಗಳ ಕಣ್ಣುಗಳು ಕಾಣದಾದವು.

ಆ ಘನಘೋರ ಮಳೆಯ ಪರಿಣಾಮದಿಂದ ಯಾರಿಗೂ ಏನೂ ಕಾಣದಂತಾಗಿ, ಅಗ್ನಿಜ್ವಾಲೆಯ ಮಳೆಯೇನೋ ಎಂಬಂತೆಯೂ ತೋರತೊಡಗಿತು. ಸಿಡಿಲುಗಳು ಮೇಲೆ ಮೇಲೆ ಬಡಿದು ಅದರ ಜ್ವಾಲೆಯ ಹೊಗೆಯು ಭೂಮಂಡಲವನ್ನೆಲ್ಲಾ ಆವರಿಸಿತು.

ಅಲಾತಕಲ್ಪಾಃ ಕರಕಾ ಸ್ತ್ರಿಲೋಕೀ ಮಾಪೂರಯನ್ ಅದ್ಭುತ ಭೀಮರೂಪಾಃ।
ಯುಗಾಂತ ವಾತ್ಯಾ ರಭಸಾ ವಧೂತಾಃ ಸಂಭೂಯ ತಾರಾ ಇವ ಸಂಪತಂತ್ಯಃ ॥೪೦॥

ಉಲ್ಕಾಪಾತದಂತೆ ಕಾಣುವ ಭಯಂಕರವಾದ ಮೇಘಗಳು ಪ್ರಳಯ ಕಾಲದಲ್ಲಿ ತಣ್ಣನೆಯ ಗಾಳಿಯಿಂದ ಒಂದೆಡೆಗೆ ತಳ್ಳಲ್ಪಟ್ಟು ಒಂದೇ ಸಮಯದಲ್ಲಿ ಎಲ್ಲಾ ಕಡೆಯು ಬೀಳುವ ನಕ್ಷತ್ರಗಳಂತೆ ಆಗಿ ಮೂರು ಜಗತ್ತು ಒಂದಾದಂತೆ ತೋರಿತು.

ಸಿಡಿಲಿನ ಅಗ್ನಿಜ್ವಾಲೆಗಳು ಉಲ್ಕಾಪಾತದಂತೆ (ಅಂದರೆ ಧೂಮಕೇತುಗಳಂತೆ) ತೋರಿ, ಆಕಾಶದಿಂದ ನಕ್ಷತ್ರಗಳು ಉದುರುತ್ತಿವೆಯೇನೋ ಮತ್ತು ಮೂರು ಜಗತ್ತು ಪ್ರಳಯ ಕಾಲದಲ್ಲಿ ಒಂದಾಗುವಂತೆ ಆಯಿತೇನೋ ಎಂದು ಎಲ್ಲರಿಗೂ ಗಾಭರಿಗೊಳ್ಳುವಂತಾಯಿತು.

ಚಕಾಸ ಚಂಚತ್ಕರ ಕಾಸ್ಥಿಮಾಲಾ ಕಾದಂಬಿನೀ ಕಂಟಕ ಭೀಷಣಾ ದ್ಯೌಃ।
ವಜ್ರೌಘ ನಿಷ್ಪೇಷ ಮಹಾಟ್ಟಹಾಸಾ ಮೂರ್ತಿಸ್ತದಾ ಮೋಹಕರೀವ ರೌದ್ರಿ ॥೪೧॥

ಪ್ರಕಾಶವಾಗಿ ಬೆಳಗುವ ಉಲ್ಕಾಪಾತಗಳು ಮಾಲೆಯಾದ ಎಲುಬುಗಳಂತೆಯೂ, ಮೇಘ ಸಮೂಹಗಳು ಜೋರಾಗಿ ಭಯಂಕರವಾಗಿ ಸೀಳಿದ ಕೂದಲುಗಳಂತೆ ಸಿಡಿಲುಗಳ ಎಡೆಬಿಡದ

ಹೊಡೆತಗಳ ಅಟ್ಟಹಾಸದಂತೆ ಲೋಕಕ್ಕೆಲ್ಲಾ ಮೋಹವನ್ನು ಉಂಟುಮಾಡುವ ಪ್ರಳಯ ರುದ್ರ ಮೂರ್ತಿಯಂತೆ ಆಕಾಶವು ತೋರಿತು.

ಮಳೆ, ಗುಡುಗು, ಸಿಡುಲುಗಳ ಆರ್ಭಟದ ವರ್ಣನೆ ವಿಧವಿಧವಾಗಿ ಮಾಡಲಾಗಿದೆ. ಪ್ರಳಯ ಕಾಲದಲ್ಲಿ ಯಾವ ರೀತಿ ರುದ್ರನು ತಾಂಡವ ನರ್ತ್ಯವನ್ನು ಮಾಡುತ್ತಾನೋ, ಅದೇ ರೀತಿ ಮಳೆಯೂ ನೃತ್ಯ ಮಾಡುತ್ತಿರುವಂತೆ ಭಾಸವಾಯಿತು.

ಶತ ಹೃದಾಭಿರ್ಧೃತ ಹೇಮಕಕ್ಷ್ಯಾ ಧಾರಾಧರಾಃ ಸೇಂದ್ರಧನುಷ್ಪತಾಕಾಃ।
ಅದಭ್ರ ಘೋಷಧ್ವನಯೋಽನುಚಕ್ರುಃ ಸಪ್ತಸ್ರುತಾಂ ಶಕ್ರಮತಂಗಜಾನಾಮ್ ॥೪೨॥

ಮೇಘಗಳು ದೇವೇಂದ್ರನ ಮದದಾನೆಗಳೋ ಎಂಬಂತೆ ವಿಜೃಂಭಿಸಿತು. ಮಿಂಚುಗಳು ಆನೆಗಳ ಹೊಟ್ಟೆಯಲ್ಲಿ ಕಟ್ಟಲ್ಪಟ್ಟ ಹಗ್ಗಗಳಂತೆಯೂ, ಆಕಾಶ ಬಿಲ್ಲಾದದು ಧ್ವಜಪಟದಂತೆಯೂ, ಸಿಡಿಲುಗಳೇ ಆನೆಗಳ ತೀವ್ರವಾದ ಘೋಷಗಳಂತೆ ಇತ್ತು. ಹುಯ್ಯುವ ಮಳೆಯೂ, ಆನೆಗೆ ಏಳು ಸ್ಥಳಗಳಲ್ಲಿ ಸುರಿಯುವ ಮದಜಲದಂತೆ ತೋರುತ್ತಿತ್ತು. (ಏಳು ಸ್ಥಳಗಳು ಯಾವುವೆಂದರೆ ಎರಡು ಗಂಧ ಸ್ಥಳಗಳು, ಎರಡು ಕಣ್ಣುಗಳು, ಎರಡು ತುದಿ ದ್ವಾರಗಳು, ಒಂದು ಗಂಡಾನೆಯ ವೃಷಣ !).

ಆನೆಗಳಿಂದ ವಿವಿಧ ಸ್ಥಳಗಳಿಂದ ಸುರಿಯುವ ಮದಜಲದಂತೆ ಮಳೆಯು ಸುರಿಯುತ್ತಿತ್ತು.

ಉಪಮಾಲಂಕಾರದ ಶ್ಲೋಕ. ಉತ್ಪ್ರೇಕ್ಷಾಲಂಕಾರದ ಶ್ಲೋಕ.

ದೇವೇಂದ್ರನು ಆನೆಗಳ ಸಮೂಹವನ್ನೇ ಹೊಂದಿದ್ದಾನೆ. ಆ ಆನೆಗಳ ಮದಜಲದಂತೆ ತೋರಿತು ಆ ಹೊತ್ತಿನ ಮಳೆ.

ಅಹೀಂದ್ರಭೋಗಪ್ರತಿಮಾಃ ಪತಂತ್ಯೋ ಧಾರಾ ಸ್ತದಾ ಘೋರಮರುತ್ಪ್ರಣುನ್ನಾಃ।
ಅಭಾವಯನ್ ಭೀಮ ಪಯೋದ ನಕ್ರಂ ವ್ಯೋಮಾರ್ಣವಂ ವೀಚಿ
ಗಣಾವ ಕೀರ್ಣಮ್ ॥ ॥೪೩॥

ಭಯಂಕರವಾದ ಗಾಳಿಯಂತೆ ತಳ್ಳಲ್ಪಟ್ಟ ವರ್ಷಧಾರೆಗಳು ದೊಡ್ಡದೊಡ್ಡ ಹಾವುಗಳ ದೇಹದ ಹಾಗೆ ಬಿದ್ದವು. ಅದರಿಂದಲೂ ಮೇಘಗಳು ಮೊಸಳೆಗಳಾಗಿಯೂ, ಮಳೆಯ ಪ್ರವಾಹವು ಅಲೆಗಳಾಗಿಯೂ ತೋರಿದುದರಿಂದ, ಆಕಾಶವನ್ನೇ ಸಮುದ್ರದಂತೆ ಭಾವಿಸಿದರು.

ಸಮುದ್ರದಂತೆ ದೊಡ್ಡದೊಡ್ಡ ಮೊಸಳೆಗಳೂ, ದಪ್ಪ ದಪ್ಪ ಹಾವುಗಳೂ ಇರುವ ಹಾಗೆ ಮಳೆಯ ಧಾರೆಯು ಬಹಳ ದಪ್ಪವಾಗಿದ್ದು ಆಕಾಶದಿಂದ ಬೀಳುತ್ತಿರುವ ಮಳೆಯು ಮೊಸಳೆಗಳು ಮತ್ತು ಹಾವುಗಳ ಸಮುದ್ರವಾಗಿ ಪರಿವರ್ತನೆ ಹೊಂದಿದೆಯೋನೋ ಎಂಬಂತೆ ತೋರುತ್ತಿತ್ತು.

'ನಕ್ರಂ' ಎಂದರೆ ಮೊಸಳೆಗಳು. ಅಹೀಂದ್ರ ಎಂದರೆ ಹಾವುಗಳು.

ಆಸಾರ ದುರ್ಲಕ್ಷ ತಡಿತ್ಪ್ರಕಾಶ ಮನ್ಯೋನ್ಯ ಸಂಕೀರ್ಣ ಹರಿದ್ವಿಭಾಗಮ್।
ಆಸೀದ ಸಹ್ಯಸ್ತನಿತಂ ಪ್ರಜಾನಾಮ್ ಅಭಿನ್ನ ನಕ್ತಂದಿವ ಮಂತರಿಕ್ಷಮ್॥ ॥೪೪॥

ಎಡೆಬಿಡದೆ, ಮಳೆ ಹುಯ್ಯುತ್ತಿದ್ದ ಕಣ್ಣಿನಿಂದ ನೋಡಲಾಗದ ಮಿಂಚುಗಳು, ಸಹಿಸಲಾಗದ ಸಿಡಿಲುಗಳು ಸೇರಿದ ಆಕಾಶದಲ್ಲಿ ಎಲ್ಲಾ ದಿಕ್ಕುಗಳು ಬೇರೆ ಬೇರೆಯಾಗಿ ತೋರದೆ, ಒಂದೇ ಆಗಿ ತೋರಿ ಹಗಲು ರಾತ್ರಿ ಎಂಬ ವ್ಯತ್ಯಾಸವೇ ಪ್ರಜೆಗಳಿಗೆ ತೋರಿದೆ ಹೋಯಿತು.

ಮಳೆಯ ಆರ್ಭಟದಲ್ಲಿ ದಿಕ್ಕುಗಳ ವ್ಯತ್ಯಾಸವೇ ತಿಳಿಯದೆ, ಹೋಗಿ, ಎಲ್ಲಾ ದಿಕ್ಕುಗಳೂ ಒಂದೇ ಎಂಬಂತೆ ತೋರಿತು. ಸಂಪೂರ್ಣ ಕತ್ತಲು ಆವರಿಸಿದ್ದರಿಂದ, ಹಗಲು ವ್ಯತ್ಯಾಸವೂ ತಿಳಿಯಲಿಲ್ಲ. ವಿಚ್ಛಿತ್ತಿಯಿಲ್ಲದೆ ಏಳು ದಿನಗಳು ಮಳೆ ಸುರಿಯುತ್ತಿತ್ತು. ಗೋಪಾಲಕರೆಲ್ಲರೂ ಪೂರ್ತಿಯಾಗಿ ಜೀವಿತಾಶೆಯನ್ನು ಬಿಟ್ಟರು.

ತಡಿತ್ ಸ್ವಭಾವೇನ ತಮಃ ಪ್ರಕೃತ್ಯಾ ನಿರ್ಹಾದ ರೂಪೇಣ ಜಲಾತ್ಮನಾ ಚ।
ವಿವರ್ತತೇ ವಿಶ್ವಮಿತೀವ ಗೋಪಾಃ ಪ್ರಾಯೋ ನ ಚಿಂತಾರ್ಣವ ಪಾರಮಾಪುಃ॥೪೫॥

ಜಗತ್ತೆಲ್ಲವೂ ಮಿಂಚಿನಂತೆಯೇ ಆಗುತ್ತದೇನೋ ಎಂಬಂತಿತ್ತು. ರಾತ್ರಿಯೇ ಎಲ್ಲವೂ ಏನೋ ಬರೀ ಸಿಡಿಲುಗಳೇನೋ, ಎಲ್ಲೆಲ್ಲೂ ಜಲವೇನೋ ಎಂದು ಭಾವಿಸಿದ ಗೋಪಾಲಕರು ಚಿಂತಾ ಸಮುದ್ರದಲ್ಲಿ ಮುಳುಗಿ ಯಾವ ಅಂತ್ಯವನ್ನು ಕಾಣದಾದರು.

ಪ್ರಳಯವೇನೋ ಆಗುತ್ತಿರುವುದೋ ಎಂಬಂತೆ ಗೋಪಾಲಕರೆಲ್ಲರೂ ಚಿಂತೆಗೀಡಾಗಿ ತಮ್ಮನ್ನು ಈ ಕಷ್ಟದಿಂದ ಯಾರು ಪಾರು ಮಾಡುತ್ತಾರೆ ಎಂಬುದಾಗಿ ನಿರಾಶಾಭಾವ ತಾಳಿದರು.

ಇಲ್ಲಿಗೆ ಮೇಘಗಳ ಆರ್ಭಟದ ವರ್ಣನೆ ಮುಗಿಯಿತು.

ಪ್ರವರ್ತಮಾನಾನ್ ಪ್ರತಿಸರ್ಗಕಲ್ಪೌ ಪಶ್ಯನ್ ಘನಾನ್ ಪಾಶಭೃತಾಽಪ್ಯವಾರ್ಯಾನ್।
ಅಭೀತಿಮುದ್ರಾ ಮಧುರೇಣ ಗೋಪಾನ್ ಆಶ್ವಾಸಯಾಮಾಸ ಕರೇಣ ಶೌರಿಃ॥೪೬॥

ಪೂರ್ಣ ಪ್ರಳಯವನ್ನು ಉಂಟು ಮಾಡುವ ಮೇಘಗಳು ವರುಣನಿಂದ ತಡೆಯಲಾಗದ ಸ್ಥಿತಿಯಲ್ಲಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಮಧುರವಾದ ಅಭಯ ಮುದ್ರೆಯನ್ನು ಹೊಂದಿದ ದಿವ್ಯ ಹಸ್ತದಿಂದ ಗೋಪಾಲಕರಿಗೆ 'ಅಂಜಬೇಡಿ' ಎಂದು ಸಮಾಧಾನ ಮಾಡಿದನು.

ಗೋಪಾಲಕರಿಗೆ ಇಂದ್ರನಿಂದ ಉಂಟಾದ ಈ ಕಷ್ಟವನ್ನು ನೋಡಿ, ಸರ್ವೇಶ್ವರನಾದ ಶ್ರೀಕೃಷ್ಣನು ಇನ್ನು ಸುಮ್ಮನಿರುವುದು ಸರಿಯಲ್ಲವೆಂದು ಭಾವಿಸಿ, ಸರ್ವರಿಗೂ ಶರಣ್ಯನಾದ ಸ್ವಾಮಿಯು ತನ್ನ ದಿವ್ಯ ಹಸ್ತದ ಅಭಯ ಮುದ್ರೆಯನ್ನು ಅವರಿಗೆ ತೋರಿಸಿ, "**ಭಯಂ ತ್ಯಜತ ಭದ್ರಂ**" ಎಂಬಂತೆ ಹೆದರಬೇಡಿ, ನಾನಿದ್ದೇನೆ. ಎಲ್ಲವೂ ಒಳ್ಳೆಯದಾಗುತ್ತದೆ ಎಂದು ಅವರನ್ನು ಸಂತೈಸಿದನು.

ಯದರ್ಚನಾದಾಪದಿಯಂ ಪ್ರಸಕ್ತಾ ತೇನೈವ ಗೋಪಾಲ ಗಣಸ್ಯ ಗುಪ್ತಿಂ।
ಅರೋಚಯತ್ ಕರ್ತೃಮಶೇಷಗೋಪ್ತಾ ರಾಮೇಣ ಸಮಂತ್ರ್ಯರಥಾಂಗ ಪಾಣಿಃ ॥೪೭॥

ಚಕ್ರಧಾರಿಯಾದ ಶ್ರೀಕೃಷ್ಣನು ಬಲರಾಮನೊಡಗೂಡಿ ಮಾತನಾಡಿ (ತಮ್ಮ ಆಯುಧಗಳಿಗೆ ಇಲ್ಲಿ ಸ್ಥಳವಿಲ್ಲವೆಂದು ನಿಶ್ಚಯಿಸಿ). ಯಾವುದನ್ನು ಆರಾಧಿಸಿದ್ದರಿಂದ ಈ ಕಷ್ಟಪ್ರಾಪ್ತಿ ಆಯಿತೋ ಆ ಗಿರಿಯನ್ನೇ ಆಶ್ರಯಿಸಿ, ಗೋಪಾಲಕರ ಸೌಖ್ಯವನ್ನು ಕಾಪಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದರು.

ತನ್ನ ಆಯುಧಗಳಾದ ಚಕ್ರವನ್ನಾಗಲೀ, ಬಲರಾಮನ ಆಯುಧವಾದ ಹಲಾಯುಧವನ್ನಾಗಲೀ ಬಳಸುವುದು ಬೇಡವೆಂದು ನಿರ್ಧರಿಸಿ, ಯಾವ ಗೋವರ್ಧನ ಗಿರಿಯ ಪೂಜೆಯ ಈ ಅನಾಹುತಕ್ಕೆ ಕಾರಣವಾಯಿತೋ ಆ ಗೋವರ್ಧನ ಗಿರಿಯನ್ನೇ ಇಂದ್ರನಿಗೆ ಎದುರಾಗಿ ಆಯುಧವನ್ನಾಗಿ ಬಳಸಲು ನಿಶ್ಚಯಿಸಿದನು.

ಸಲೀಲಯಾ ಮೇರುಮಿವ ದ್ವಿತೀಯಂ ಗೋವರ್ಧನಂ ಗೋಪಕುಲ ಪ್ರದೀಪಃ।
ನವಪ್ರರೂಢಂ ನಿಹಿತೈಕ ಹಸ್ತೋ ನಾಗೋ ನಲಸ್ತಂಬ ಮಿವ್ರೋಂಜಹಾರ ॥೪೮॥

ಗೋಪಾಲಕರ ವಂಶಕ್ಕೆ ರತ್ನದೀಪವಾದ ಶ್ರೀಕೃಷ್ಣನು ಮತ್ತೊಂದು ಮೇರು ಪರ್ವತವೆಂಬಂತಿರುವ ಆ ದೊಡ್ಡ ಗೋವರ್ಧನವನ್ನು ಅದರ ಮೇಲೆ ಒಂದು ಕೈಯಿಟ್ಟು ಲೀಲಾಜಾಲವಾಗಿ ಆನೆಯು ಹುಲ್ಲಿನ ಕಂತೆಯನ್ನು ಮೇಲಕ್ಕೆ ಎತ್ತುವಂತೆ ಎತ್ತಿ ಹಿಡಿದುಕೊಂಡನು.

ಅದ್ಭುತ ಪರಾಕ್ರಮಶಾಲಿಯಾದ ಶ್ರೀಕೃಷ್ಣನು ಲೀಲಾಜಾಲವಾಗಿ ಆ ಗೋವರ್ಧನ ಪರ್ವತವನ್ನು ಬುಡ ಸಮೇತ ಕೈಯಿಂದ ಎತ್ತಿ (ಒಂದೇ ಕೈಯಿಂದ) ಕೊಡೆಯಾಕಾರದಲ್ಲಿ ರಕ್ಷಣೆಗಾಗಿ ಹಿಡಿದು ನಿಂತನು.

ಅಧೋಮುಖಾವಸ್ಥಿತ ಮೇರುಕಲ್ಪಂ ಶೈಲಂ ತಮುತ್ಪಾಯ ಶರಣ್ಯಗೋಪಃ।
ಉದಂಚಯನ್ ಸ್ತ್ವರ ಮೂರ್ಧ್ವಮೂಲಂ ಚಕ್ರೇ ಮಹೇಂದ್ರಂ ಶಮಿತಾರ್ಧಗರ್ವಂ ॥೪೯॥

ಆ ರೀತಿಯಾಗಿ ಎಲ್ಲರನ್ನೂ ಕಾಪಾಡುವ ಗೋಪನಾದ ಕೃಷ್ಣನು ತನ್ನ ಒಂದು ಪಾದವನ್ನು ಮೇಲಕ್ಕೆ ಎತ್ತಿದ್ದನು. ಆವಾಗಲೇ ಇಂದ್ರನ ಗರ್ವವು ಅರ್ಧ ಭಂಗವಾಯಿತು. (ಈ ಪರ್ವತವನ್ನು ತಲೆ ಕೆಳಗಾದ ಮೇರು ಪರ್ವತವೆನ್ನಬಹುದು).

ಯಾವಾಗ ಶ್ರೀಕೃಷ್ಣನು ಮೇರು ಪರ್ವತದಂತಿದ್ದ ಗೋವರ್ಧನವನ್ನೇ ತಲೆ ಕೆಳಕಾಗಿ ಕೊಡೆಯಾಕಾರದಲ್ಲಿ ಹಿಡಿದನೋ, ಆ ಕ್ಷಣವೇ ಇಂದ್ರನಿಗೆ ತನ್ನ ಆಟ ಇನ್ನು ಮುಂದೆ ಸಾಗದೆಂಬ ಅರಿವಾಗಿ ಅವನ ದರ್ಪವೆಲ್ಲಾ ಅಡಗಿ ಹೋಯಿತು. ನಾರಾಯಣೀಯಂನಲ್ಲಿ ಹೀಗೆ ಹೇಳಿದ್ದಾರೆ "ನಮ್ಮ ಗೋಪಾಲಕರೆಲ್ಲರಿಗೂ ಈ ಗೋವರ್ಧನ ಗಿರಿಯೇ ದೈವವು. ಈ ಪರ್ವತವೇ ನಮ್ಮ ಶತ್ರುವಾದ ಇಂದ್ರನ ದುಷ್ಕರ್ಮಗಳನ್ನು ತಡೆದು ರಕ್ಷಿಸುವುದು. ಇದರಲ್ಲಿ ಅನುಮಾನಪಡಬೇಕಾಗಿಲ್ಲ' ಎಂದು ಹೇಳುತ್ತಾ ಕೂಡಲೇ ನೀನು ಕಿರುನಗೆಯಿಂದ ನಿನ್ನ ಬಲ ಹಸ್ತಗಳಿಂದ ಗೋವರ್ಧನ ಪರ್ವತವನ್ನು ಸಮೂಲವಾಗಿ ಮೇಲಕ್ಕೆತ್ತಿದೆ".

ಫಣಾಭಿ ರಾಮ ಪ್ರಸುತಾಂಗುಲೀಕಃ ಪ್ರಿಯಾಂಗರಾಗ ವ್ಯತಿಷಂಗಪಾಂಡುಃ।
ಭುಜಸ್ತದೀಯೋ ಗಿರೀಣಾ ಬಭಾಸೇ ಭೂಮಂಡಲೇನೇವ ಭುಜಂಗ ರಾಜಃ॥೫೦॥

ದಿವ್ಯ ಹಸ್ತದಿಂದ ಗಿರಿಯನ್ನು ಎತ್ತಿಕೊಂಡ ಹೊತ್ತಿನಲ್ಲಿ ಆ ಭುಜವಾದುದು ಭೂಮಿಯನ್ನು ತಲೆಯಲ್ಲಿ ಧರಿಸುವ ಆದಿಶೇಷನಂತೆ ಬೆಳಗಿತು. ಅದರ ಬೆರಳುಗಳೆಲ್ಲವೂ ಆದಿಶೇಷನ ಹೆಡೆಗಳಂತೆ ತೋರುತ್ತಿದ್ದು ಆ ಭುಜದಲ್ಲಿ ನೀಳಾದೇವಿಯು ಸಮರ್ಪಿಸಿದ ಚಂದನದ ಲೇಪನವು ಆದಿಶೇಷನ ಶರೀರದಂತಿತ್ತು.

ಪೆರಿಯಾಳ್ವಾರ್ ತಿರುಮೊಳಿಯ 3-5-7 ಪಾಶುರದಲ್ಲೂ ಇದೇ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಭಗವಂತನ ದಿವ್ಯ ದೇಹವು ಆ ಸಮಯದಲ್ಲಿ ಅದ್ಭುತವಾಗಿ ಪ್ರಕಾಶಿಸುತ್ತಿತ್ತು.

ಆಭುಗ್ನ ರಕ್ತಾಂಗುಲಿ ಪಂಜರಂ ತತ್ ರತ್ನೋರ್ಮಿ ಕಾರಶ್ಮಿ ಶಲಾಕಮಂತಃ।
ನವೋದಕ ಕ್ಷೌಮವೃತಂ ವ್ಯಭಾಸೀಚ್ಛತ್ರಪ್ರಕಾಂಡಂ ಹರಿಬಾಹುದಂಡೆ ॥೫೧॥

ಆ ಗಿರಿಯು ಸುಂದರವಾದ ಕೊಡೆಯಂತೆ ಶೋಭಿಸುತ್ತಿತ್ತು. ಅದಕ್ಕೆ ಶ್ರೀಕೃಷ್ಣನ ಭುಜವು ಕೊಡೆಯ ಪ್ರಧಾನ ಕಡ್ಡಿಯಂತೆಯೂ ಬೆರಳುಗಳು ಒಳಭಾಗದ ಸಣ್ಣ ಸಣ್ಣ ಕೊಂಡಿಗಳಂತೆಯೂ, ಮಳೆ ನೀರು ಹರಿದುಹೋಗಲು ಇಳಿಜಾರಾದ ಬಟ್ಟೆಯಂತೆಯೂ ತೋರಿತು.

ಆ ದಿವ್ಯ ಗಿರಿಯು ಕೊಡೆಯಾಕಾರದಲ್ಲಿ ಅವನ ಕೈಯ್ಯಲ್ಲಿ ಬೆಳಗಿತು.

ವಿಹಾರ ಪದ್ಮಸ್ಪೃಹ ಏವ ಕೃಷ್ಣೋ ಭುಜಾದ್ರಿಣಾ ಭೂಮಿಧರಂ ದಧಾನಃ।
ಸ್ವಶೇಷ ಭೂತಸ್ಯ ಹಲಾಯುಧಸ್ಯ ಪ್ರಾಚೀ ನವಸ್ಥಾಂ ಪ್ರಥಯಾಂ ಬಭೂವ ॥೫೨॥

ಆಟವಾಡುವಂತೆ ಒಂದು ಕೈಯ್ಯಲ್ಲಿ ತಾವರೆಯನ್ನು ಹಿಡಿಯಬೇಕೆಂದು ಆಸೆ ಪಟ್ಟ ಕೃಷ್ಣನ ಭುಜವೆಂಬ ಬೆಟ್ಟವು ಈ ಗೋವರ್ಧನ ಗಿರಿಯನ್ನು ಒಂದು ತಾವರೆ ಹೂವಿನಂತೆ ಧರಿಸಿತ್ತು ಎನ್ನಬಹುದು. ಇದರಿಂದ ಶ್ರೀಕೃಷ್ಣನು ತನಗೆ ಹಾಸಿಗೆಯಾಗಿ ಶೇಷನಾಗಿರುವ ಆದಿಶೇಷನು ಈಗ, ಬಲರಾಮನಾಗಿ ಇದ್ದು, ಭೂಮಿಯನ್ನು ಧರಿಸುವುದನ್ನು ಪ್ರಮಾಣಗೊಳಿಸಿದನೆನ್ನಬಹುದು.

ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ತನ್ನ ಭುಜಗಳ ಮೇಲೆ ಧರಿಸಿರುವುದು ಬಲರಾಮನು ತನ್ನ ಆದಿಶೇಷನ ರೂಪದಲ್ಲಿ ಭೂಮಿಯನ್ನು ಧರಿಸಿದಂತಿತ್ತು.

ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಲೀಲಾಜಾಲವಾಗಿ ಎತ್ತಿರುವುದನ್ನು ನೋಡಿದರೆ, ಆದಿಸೇಷನು ಭೂಮಿಯನ್ನು ತಲೆಯ ಮೇಲೆ ಹೊತ್ತಿರುವುದಕ್ಕೆ ಬೇರೆ ಯಾವ ಪ್ರಮಾಣವು ಆಗತ್ಯವಿಲ್ಲ ಎಂಬಂತಿತ್ತು.

ನಿವಾಸಭೂತೇ ನಿಖಿಲಸ್ಯ ತಸ್ಮಿನ್ ಬಾಲಾಕೃತೌ ವಿಭ್ರತಿ ಶೈಲಮೇಕಮ್।
ಸ ವಿಸ್ಮಯಾನ್ ವೀಕ್ಷ್ಯ ಜಹಾಸ ಗೋಪಾನ್ ಸಂಪ್ರೀತಿ ಲಕ್ಷೇಣ ತದಗ್ರ ಜನ್ಮಾ॥೫೩॥

ಎಲ್ಲಾ ಲೋಕಗಳಿಗೂ ವಾಸಸ್ಥಾನವಾದ ಭಗವಂತನು, ಬಾಲಕನಾಗಿ ಒಂದು ಬೆಟ್ಟವನ್ನು ಧರಿಸಿಕೊಂಡಿರುವುದನ್ನು ಆಶ್ಚರ್ಯದಿಂದ ನೋಡಿದ ಗೋಪಾಲಕರನ್ನು ನೋಡುವಾಗ, ಶ್ರೀಕೃಷ್ಣನ ಅಣ್ಣನಿಗೆ ನಗೆಪಾಟಲಾಗಿತ್ತು. ಅವನ ಮಹಿಮೆಯನ್ನು ಇವರ್‍ಯಾರೂ ಅರಿಯಲು ಸಾಧ್ಯವಾಗಲಿಲ್ಲವೆಂದು. ಆದರೆ ಅದನ್ನು ಅವನು ಅವರುಗಳೊಡನೆ ಸೇರಿ, ತಿಳಿಸದೆ, ಹೊರಗಡೆ ಅವನೂ ಸಹ ನಗುತ್ತಾ ಅಭಿನಯಿಸಿದನು. (ವಿಸ್ಮಯ ವ್ಯಕ್ತಪಡಿಸಿದನು).

ಶ್ರೀಕೃಷ್ಣನ ಆ ಸಾಹಸ ಕ್ರಿಯೆಯು, ಗೋಪಾಲಕರೆಲ್ಲರಿಗೂ ಆಶ್ಚರ್ಯ ಉಂಟು ಮಾಡಿದರೆ, ಅವನು ಅಗ್ರಜನಾದ ಬಲರಾಮನಿಗೆ, ಅವನು ಕೃಷ್ಣನ ನಿಜ ಸ್ವರೂಪವನ್ನು ಅರಿತಿದ್ದರಿಂದ, ಇದು ದೊಡ್ಡ ಸಾಹಸ ಕಾರ್ಯವೆಂದು ಅನಿಸಲಿಲ್ಲ. ಅವನು ನಸುನಗುತ್ತಲೇ ಕೃಷ್ಣನನ್ನು ನೋಡುತ್ತಿದ್ದನು. ಸಮಸ್ತ ಜಗತ್ತೆಲ್ಲವನ್ನೂ ಧರಿಸುವ ಪರಮಾತ್ಮನಿಗೆ ಇದು ಅತ್ಯಲ್ಪವಾದ ಕೆಲಸ. ಆದ್ದರಿಂದ ಬಲರಾಮನಿಗೆ ಇದು ಬಹಳ ಸಾಧಾರಣವಾದ ವಿಷಯ ಎಂದು ತೋರಿತು.

ಸ ಕಾಲಿಕಾ ಕಾಲ ಕೃಪಾಣಿ ಕಾನಾಂ ಧಾರಾ ಶತೈರಾಹತ ಸಂಧಿಬಂಧಃ।
ಅವಾಸೃಜತ್ ಕ್ಷಿಪ್ರತರಂ ಕ್ಷರದ್ಭಿರ್ ಧಾತುದ್ರವೈ ನೂನ ಮಾಸೃಂಜಿ ಶೈಲಃ ॥೫೪॥

ಮಳೆಯ ಧಾರೆ ಧಾರೆಯು ನೂರಾರು ಸಂಖ್ಯೆಯಲ್ಲಿ ಬೀಳುತ್ತಿರಲು ಹಳ್ಳವಾದ ಜಾಗ ಗಳೆಲ್ಲವೂ ಕುಸಿದು, ಬೆಟ್ಟದಿಂದ ಮಣ್ಣುಗಳು ಗೈರಿಕಾದಿ ಧಾತುಗಳು, ಕರಗಿ, ಪ್ರವಾಹದಂತೆ ಹರಿಯುತ್ತಿತ್ತು. ಅದನ್ನು ನೋಡುವಾಗ, ಯಮನ ಕತ್ತಿಯಿಂದ ಧಾರೆಯೆಂಬ ಚೂಪಾದ ತುದಿಯಿಂದ ಕತ್ತರಿಸಲ್ಪಟ್ಟ ಬೆಟ್ಟದ ತುಂಡುಗಳು ರುದ್ರ ಪ್ರವಾಹದಂತೆ ತೋರುತ್ತಿತ್ತು.

ಶ್ರೀಕೃಷ್ಣನು ಗಿರಿಯನ್ನು ಎತ್ತಿದ ನಂತರವೂ, ಇಂದ್ರನು ಮಳೆಯನ್ನು ಸುರಿಸುತ್ತಲೇ ಇದ್ದನು. ಶ್ರೀಕೃಷ್ಣನ ಮೇಲಿನ ಕೋಪದಿಂದ ಇನ್ನೂ ತೀವ್ರವಾದ ಧಾರೆಗಳನ್ನು ಸುರಿಸಲು ಆರಂಭಿಸಿದನು. ಅದರಿಂದಾಗಿ ಬೆಟ್ಟದ ಮೇಲಿದ್ದ ತೀವ್ರವಾದ ಮಣ್ಣಿನ ಭಾಗವೆಲ್ಲಾ ಕುಸಿದು, ಕರಗಿ ಮಣ್ಣಿನ ಪ್ರವಾಹವೇ ಬೆಟ್ಟದ ಸುತ್ತಲೂ ಸುರಿಯುತ್ತಿತ್ತು.

ಸ ಗೈರಿ ಕಸ್ತಸ್ಯ ಗಿರೇಃ ಸಮಂತಾತ್ ವಿಲಂಬಿತೋ ವರ್ಷಪಯಃ ಪ್ರವಾಹಃ।
ವಿತಾನ ಪರ್ಯಂತ ಜುಷೋ ವಿತೇನೆ ವಿಡಂಬನಾಂ ವರ್ಣ ತಿರಸ್ಕರಿಣ್ಯಾಃ ॥೫೫॥

ಆ ಗಿರಿಯಲ್ಲಿ ನಾಲ್ಕು ಕಡೆಗಳಲ್ಲೂ ಮಣ್ಣಿನ ಜೊತೆ ಸೇರಿ ಪ್ರವಾಹವು ಬಿಡದೆ ಧಾರೆ ಯಾಗಿ ಬೀಳುತ್ತಿದ್ದ ಸಮಯದಲ್ಲಿ ಒಂದು ದೊಡ್ಡ ವೃಕ್ಷವು ನಾಲ್ಕು ಪಕ್ಕಗಳಲ್ಲೂ ತೂಗುತ್ತಿದ್ದು ಅನೇಕ ಪದರಗಳನ್ನು ಹೊಂದಿರುವ ಅಲೆಗಳಂತೆ ತೋರುತ್ತಿತ್ತು.

ಆ ಸಮಯದಲ್ಲಿ ಬೆಟ್ಟವು ಹೇಗೆ ತೋರುತ್ತಿತ್ತೆಂದು ವರ್ಣಿಸಿದ್ದಾರೆ. ಬೆಟ್ಟದ ಸುತ್ತಲೂ ದೊಡ್ಡ ದೊಡ್ಡ ವಸ್ತ್ರಗಳನ್ನು ತೂಗು ಹಾಕಿದಂತೆ ಮಳೆಯ ಆರ್ಭಟದಿಂದ ಮಣ್ಣಿನ ಪ್ರವಾಹವು ಹರಿಯುತ್ತಿತ್ತು.

ಇರಂ ಮದಾರ್ಚಿರ್ ವ್ಯತಿಷಂಗ ದೀಪ್ತಃ ಪಾಣೌ ಹರೇರದ್ರಿಪತಿಶ್ಚಕಾಶೇ।
ಪ್ರತ್ಯಸ್ತ್ರಮಿಂದ್ರೇಣಮುಮುಕ್ಷಿತಾನಾಂ ಪ್ರಯುಂಕ್ತಮುತ್ಖಾತ ಇವಾಶನೀನಾಂ ॥೫೬॥

ಮೇಘ ಮಂಡಲದಿಂದ ಬೀಳುತ್ತಿದ್ದ ಬೆಂಕಿಯ ಜ್ವಾಲೆಗಳು ಬಡಿದು, ಪ್ರಜ್ವಲಿಸುವ ಗಿರಿಯಾದುದು ಶ್ರೀಕೃಷ್ಣನ ಕೈಯ್ಯಲ್ಲಿ ಇನ್ನು ಇಂದ್ರನಿಂದ ಬಿಡುಗಡೆ ಹೊಂದಿ ವಜ್ರಾಯುಧ ದಂತಹ ಆಯುಧಗಳನ್ನೆಲ್ಲಾ ತಡೆಯಲು ತೆಗೆದುಕೊಂಡ ಪ್ರತ್ಯಸ್ತ್ರದಂತೆ ಇತ್ತು.

ಇಂದ್ರನ ವಜ್ರಾಯುಧದ ಆಘಾತವನ್ನು ತಡೆಯಲು ಆ ಗಿರಿಯನ್ನೇ ಶ್ರೀಕೃಷ್ಣನು ಆಯುಧವನ್ನಾಗಿ ಬಳಿಸಿದನು. ವಜ್ರಾಯುಧಕ್ಕೆ ಪ್ರತ್ಯಸ್ತ್ರದಂತಿತ್ತು ಆ ಗಿರಿ.

ಸ ಬಾಹುದಂಡೇನ ವಹನ್ ಸಲೀಲಂ ಪ್ರವಾಲ ಕಲ್ಪಾಂಗುಲಿ ಪಂಜರೇಣ।
ಮಹೀಧರಚ್ಛತ್ರ ಮನನ್ಯವಾಹ್ಯಂ ಮಾಯಾಮಯೀಂ ವ್ಯಾಕುರುತೇವ ಲೀಲಾಮ್ ॥೫೭॥

ದೃಢವಾದ, ಬಲಿಷ್ಠವಾದ ತನ್ನ ಭುಜಗಳೆಂಬ ದಂಡವನ್ನು ಹಿಡಿದು ಲೀಲಾಜಾಲ ವಾಗಿ ಅವನು ಯಾರಿಂದಲೂ ಎತ್ತಲಾಗದ, ಬೆಟ್ಟವನ್ನು ಕೊಡೆಯಾಗಿ ಧರಿಸಿದವನಾಗಿ ತಾನು ಮಾಡುವ ಅದ್ಭುತ ಲೀಲೆಗಳೆಲ್ಲವೂ ಹೀಗೆಯೇ ಇರುತ್ತದೆ ಎಂಬುದನ್ನು ತೋರಿಸಿದನು.

ಭಗವಾನ್ ಶ್ರೀಕೃಷ್ಣನಿಗೆ 'ಲೀಲಾಮಾನುಷ ವಿಗ್ರಹಃ' ಎಂಬ ಹೆಸರಿದೆ. ಮನುಷ್ಯನಾಗಿ ಅವತರಿಸಿಯೂ, ತನ್ನ ಅತಿ ಮಾನುಷ ಚೇಷ್ಟೆಗಳನ್ನು ತೋರಿಸಿದನು. ಈ ಅವತಾರದಲ್ಲಿ. ಈ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಿದ್ದು ಅಂತಹ ಅತಿ ಮಾನುಷ ಚೇಷ್ಟೆಗಳಲ್ಲಿ ಒಂದು. ಇತರ ಲೀಲೆಗಳೆಲ್ಲವೂ ಹೀಗೆ ಇರುತ್ತದೆ ಎಂದೂ ಸಹ ಶ್ರೀಕೃಷ್ಣನು ತೋರಿಸಿದನು.

ಕರಾಲರೂಕ್ಷಾಕೃತಿ ವರ್ಣಭೇದಾನ್ ಕಾಲಾಗ್ನಿ ನಿರ್ವಾಪಣ ಕಲ್ಪ ವೃತ್ತೀನ್।
ರುರೋಧ ಶೈಲೀಕೃತಯಾ ಸ್ವಶಕ್ತ್ಯಾಪ್ರಾಯೋ ಘನಾನ್ ಪರ್ವತ ಕೂಟಕಲ್ಪಾನ್॥೫೮॥

ತೀಕ್ಷ್ಣವಾಗಿಯೂ, ಪರುಷವಾಗಿಯೂ, ಉಗ್ರವಾಗಿಯೂ ಪ್ರಜ್ವಲಿಸುತ್ತಿದ್ದ ಮೇಘಗಳು ಪ್ರಳಯದ ಬೆಂಕಿಯಂತೆ ನಾಶ ಮಾಡುವ ಕಾರ್ಯದಲ್ಲಿ ನಿರತವಾಗಿ, ಬೆಟ್ಟ ಬೆಟ್ಟವಾಗಿ ಬಂದ ಹಾಗೆ, ಅವೆಲ್ಲವನ್ನೂ ತಡೆದು ವರವೋ ಎಂಬಂತೆ ಒಂದು ಬೆಟ್ಟವನ್ನು ತನ್ನ ಶಕ್ತಿಯಿಂದ ಶ್ರೀಕೃಷ್ಣನು ಎತ್ತಿ ಹಿಡಿದು ಎಲ್ಲರನ್ನೂ ಕಾಪಾಡಿದನು.

ಬೆಟ್ಟವನ್ನು ಎತ್ತಿ ಗೋಪಾಲಕರಿಗೆ ಬಂದಿದ್ದ ಕಷ್ಟವನ್ನು ನಿವಾರಿಸಿದನು ಸ್ವಾಮಿ. ಅವರಿಗೆ ಅಭಯವನ್ನು ನೀಡಿದನು.

ಪೃಥ್ವ್ಯಾ ಯಥಾವದ್ಧರಿತಂ ಗಿರೇಸ್ತನ್ ಮೂಲಂ ನಿವಾಸಾಯ ಗವಾಂ ಬಭೂವ।
ಗ್ರಾಸಾನುಭಾವ ಗ್ರಹಣಾರ್ಹ ಮಾಸೀದಗ್ರಂ ಚ ತಸ್ಯಾನತಿ ವಿಪ್ರಕೃಷ್ಟಂ ॥ ॥೫೯॥

ಆ ರೀತಿಯಾಗಿ ಭೂಮಿಯಾದುದು ಹಳ್ಳದಿಂದ ಕೂಡಿದರೂ ಅವನ ಮಹಿಮೆಯಿಂದ ಬೆಟ್ಟದಲ್ಲಿದ್ದ ಹುಲ್ಲುಗಳು ಕೆಳಗೆ ಬೆಳೆದು ಸಮೀಪದಲ್ಲಿ ಹಸುಗಳು ಮೇಯುವುದಕ್ಕೆ ಅನುಕೂಲ ವಾಗಿತ್ತು.

ಬೆಟ್ಟವನ್ನು ಮೇಲಕ್ಕೆತ್ತಿದ್ದರೂ, ಕೆಳಗೆ ಅವನ ಮಹಿಮೆಯಿಂದ ನೆಲವು ಸಮತಟ್ಟಾಗಿದ್ದು ಅಲ್ಲಿ ಹುಲ್ಲು ಯಥೇಚ್ಛವಾಗಿ ಬೆಳೆದಿತ್ತು. ಆಗ ಗೋವುಗಳೆಲ್ಲವೂ ಆ ಸಮೃದ್ಧವಾದ ಹುಲ್ಲನ್ನು ಮೇಯ್ದು ಆನಂದದಿಂದ ಬೆಟ್ಟದ ಕೆಳಗೆ ವಿಹರಿಸುತ್ತಿದ್ದವು.

ಉದಂಚಿತಸ್ಯಾದ್ರಿ ಪತೇರುಪಾಂತೆ ಪಯಃ ಪ್ರವಾಹಾನಿಬಿಡಂ ಪತಂತಃ।
ಅತನ್ವತ ಸ್ಫಾಟಿಕ ವಪ್ರ ಶೋಭಾಂಮತರ್ಗತೈಃ ರಸ್ತಭಯೈರವೈಕ್ಯ್ಯಮ್ ॥೬೦॥

ಎತ್ತರಕ್ಕೆ ಎತ್ತಲ್ಪಟ್ಟ ಬೆಟ್ಟದ ಪಕ್ಕಗಳಲ್ಲಿ ಎಡಬಿಡದೆ ಬೀಳುವ ಪ್ರವಾಹಗಳು ಒಳಗೆ ಇರುವ ಗೋಪಾಲಕರಿಗೆ ಸ್ಫಟಿಕದಿಂದ ಮಾಡಿದ ಚಂದ್ರ ಪ್ರಭೆಯಂತೆ ಕಂಡು ಅವರು ಆಶ್ಚರ್ಯಚಕಿತರಾದರು.

ಸುತ್ತಲೂ ಪ್ರವಾಹ ಬೆಳಗುತ್ತಿದ್ದರೂ, ಬೆಟ್ಟದ ಕೆಳಗೆ ನಿಂತಿದ್ದ ಗೋಪಾಲಕರಿಗೆ ಯಾವ ತೊಂದರೆಯೂ ಆಗಲಿಲ್ಲ. ಅವರು ಸೌಖ್ಯವಾಗಿ, ತಮ್ಮ ನಿತ್ಯ ಕರ್ಮಗಳನ್ನು ಮಾಡುತ್ತಾ ಏಳು ದಿನಗಳ ಕಾಲ ಸಂತೋಷದಿಂದ ಇದ್ದರು. ಆ ಏಳು ದಿನಗಳ ಕಾಲವೂ ಹಸಿವು ಬಾಯಾರಿಕೆಗಳನ್ನೆಲ್ಲಾ ಮರೆತು ಆನಂದದಿಂದ ಶ್ರೀಕೃಷ್ಣನನ್ನು ನೋಡುತ್ತಾ ನಿಂತಿದ್ದರು.

ಅಲಬ್ಧ ಸೂರ್ಯೇಂದು ಕರ ಪ್ರವೇಶೇ ಮೂಲೆ ಗಿರೇರಾ ವಸತಾಂ ಜನಾನಾಮ್।
ಸ್ವಲೋಚನ ದ್ವಂದ್ವ ವಿಹಾರ ಭೇದಾತ್ ನಕ್ತಂ ದಿನಾನ್ಯಾ ತನುತೇ ಸ್ಮ ನಾಥಃ ॥೬೧॥

ಪ್ರವಾಹದಿಂದ ಮರೆ ಮಾಡಲ್ಪಟ್ಟ ಮೇಘಗಳು ಆಕಾಶವನ್ನು ಆವರಿಸಿದ್ದರಿಂದ, ಸೂರ್ಯ ಚಂದ್ರರ ಕಿರಣಗಳು ಒಳಹೋಗುವ ಹಾಗೆ ಇಲ್ಲದೆ, ಶ್ರೀಕೃಷ್ಣನು ಸೂರ್ಯ ಚಂದ್ರರುಗಳನ್ನು ತನ್ನ ಕಣ್ಣಾಗಿ ಹೊಂದಿರುವುದರಿಂದ ಸಮಯಕ್ಕೆ ತಕ್ಕಂತೆ ಆ ಕಣ್ಣುಗಳನ್ನು ಉಪಯೋಗಿಸಿ ಹಗಲು, ರಾತ್ರಿ ಎಂಬ ವ್ಯತ್ಯಾಸಗಳನ್ನು ಇವರಿಗೆ ಉಂಟು ಮಾಡಿದನು.

ಆ ಮಳೆಯ ಪ್ರವಾಹದಿಂದ ಹಗಲು ರಾತ್ರಿಯ ವ್ಯತ್ಯಾಸ ತಿಳಿಯದೆ ಹೋದರೂ ಶ್ರೀಕೃಷ್ಣನ ಕಣ್ಣುಗಳು ಸೂರ್ಯ ಚಂದ್ರರನ್ನು ಪ್ರತಿಬಿಂಬಿಸುವುದರಿಂದ, ತನ್ನ ದಿವ್ಯ ಚಕ್ಷುಗಳನ್ನು ಉಪಯೋಗಿಸಿ, ಹಗಲು, ರಾತ್ರಿಯ ವ್ಯತ್ಯಾಸ ತೋರಿಸಿದನು. 'ಚಂದ್ರ ಸೂರ್ಯೌ ಚ ನೇತ್ರೇ' ಎಂದು ಸಹಸ್ರನಾಮದಲ್ಲಿ ಹೇಳಿದೆ.

ಮುಕುಂದಗಾತ್ರಂ ಮಣಿದರ್ಪಣಾಭಂ ಛಾಯಾಪದೇಶೇನ ವಿಗಾಹಮಾನೈಃ।
ಸಗೋಧನೈ ಸ್ತತ್ರಾ ಸುರೇಂದ್ರಭೀತ್ಯಾ ಗೋಪೈಸ್ತದಾಗೂಢಮಿವಾವತಸ್ಥೇ ॥ ॥೬೨॥

ರತ್ನ ಕನ್ನಡಿಯಂತೆ ಇರುವ ಮುಕುಂದನ ದಿವ್ಯ ಶರೀರದಲ್ಲಿ ಹಸುಗಳು, ಗೋಪರುಗಳು ಪ್ರತಿಫಲಿಸುತ್ತಿದ್ದವು. ಆ ನೆಲೆಯನ್ನು ನೋಡುವಾಗ ಇಂದ್ರನಿಗೆ ಅಂಜಿ ಅವರುಗಳು ಅಲ್ಲೇ ಅಡಗಿಕೊಂಡು ವಾಸಿಸುವರೇನೋ ಎಂಬಂತಿತ್ತು.

ಶ್ರೀಕೃಷ್ಣನು ಗಿರಿಯನ್ನು ಎತ್ತಿ ಹಿಡಿದಿದ್ದಾಗ್ಯೂ ಗೋಪರುಗಳಿಗೆಲ್ಲಾ ಇನ್ನೂ ಇಂದ್ರನ ಭಯವಿನ್ನೂ ಹೋಗಿರಲಿಲ್ಲ. ಅವರು, ಆ ಶ್ರೀಕೃಷ್ಣನ ಶರೀರದಲ್ಲೇ ಅಡಗಿ, ಕುಳಿತಿದ್ದರು. ಆ ಮುಕುಂದನ ದಿವ್ಯ ಶರೀರವು, ಅದ್ಭುತವಾಗಿ ರತ್ನ ಗನ್ನಡಿಯಂತೆ ಪ್ರಕಾಶಿಸುತ್ತಾ ತನ್ನ ಪ್ರಭೆಯನ್ನು ಎಲ್ಲೆಡೆಗೂ ಬೀರುತ್ತಿತ್ತು. (ಉತ್ಪ್ರೇಕ್ಷಾಲಂಕಾರ).

ವಿಭರ್ತಿ ಕೃಷ್ಣಃ ಸುಕುಮಾರ ಗಾತ್ರಃ ಕ್ಷಮಾಧರಂ ತೇನ ವಿಭಾವಯಾಮಃ ।
ತದಗ್ರಜೋಽಸೌ ಬಿಭೃಯಾದ ಸೇಷಾಂ ಬಲಃ ಕ್ಷಮಾಮಿತ್ಯವದನ್ ವ್ರಜಸ್ಥಾಃ ॥೬೩॥

ಅತ್ಯಂತ ದೊಡ್ಡ ಹಿರಿಮೆಯನ್ನು ಹೊಂದಿರುವ ಕಣ್ಣನು ಬೆಟ್ಟವನ್ನು ಕೈಯಿಂದ ಎತ್ತಿದ್ದಾನೆ ಅಂದರೆ, ಅವನಿಗೆ ಅಣ್ಣನಾದ ಬಲರಾಮನು ಸಮಸ್ತ ಭೂಮಿಯನ್ನೇ ಧರಿಸಿದವನೆಂದು ಗೋಪಾಲಕರು ನೆನೆದರು. (ಅವನು ಆದಿಶೇಷನಾದ್ದರಿಂದ ಅವರ ಅನಿಸಿಕೆಯು ನಿಜವಾಗಿತ್ತು).

ಈ ಭಾವವನ್ನು ಹಿಂದೆಯೂ ಒಂದು ಶ್ಲೋಕದಲ್ಲಿ ಹೇಳಿದ್ದಾರೆ. ತಮ್ಮನಾದ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹೊರಲು ಸಮರ್ಥನಾಗಿದ್ದಾಗ, ಅಣ್ಣನಾದ ಶೇಷಾವತಾರ ವಾದ ಬಲರಾಮನು, ಭೂಮಿಯನ್ನು ಹೊರುವುದೇನಾಶ್ಚರ್ಯ ಎಂಬುದಾಗಿ ಗೋಪಾಲಕರೆಲ್ಲಾ ಮಾತನಾಡಿಕೊಂಡರು.

ಬಭುಃ ಸ್ವಶಾಖಾ ಗ್ರಥಿತಾಗ್ರಪಾದೈ ಸ್ತಪೋದನ್ಯೈಃ ಪಾಕಮಧಃ ಶಿರೋಭಿಃ ।
ಕೃತಾಭಿಮುಖ್ಯಾಃ ಕೃತಿನೋ ಮುಕುಂದೆ ತಪಃ ಪ್ರವೃತ್ತಾ ಇವ ತತ್ರ ವೃಕ್ಷಾಃ ॥೬೪॥

ಎತ್ತಲ್ಪಟ್ಟ ಬೆಟ್ಟದ ಮರಗಳು ಎಲ್ಲವೂ ತಲೆಕೆಳಗಾಗಿ ಶ್ರೀಕೃಷ್ಣನನ್ನು ನೋಡುತ್ತಾ ನಿಂತವು. ದೊಡ್ಡ ದೊಡ್ಡ ಮರಗಳನ್ನು ಏರಿ ಕಾಲುಗಳನ್ನು ಬಿಟ್ಟು ತಪಸ್ಸನ್ನು ಮಾಡುತ್ತಿದ್ದವರೆಲ್ಲರೂ ಅಲ್ಲಾಡದೆ, ಏನೂ ಅರಿಯದೆ, ತಪಸ್ಸನ್ನು ಮಾಡುತ್ತಲೇ ತಲೆಕೆಳಗಾಗಿ ಇದ್ದರು. ಅವರಂತೆಯೇ ಮರಗಳೂ ತಪಸ್ಸನ್ನಾಚರಿಸುವಂತಿದ್ದವು.

ಬೆಟ್ಟವನ್ನು ಎತ್ತಿದ್ದಾಗ, ಮರಗಳ ಮೇಲೆ ಅನೇಕ ಯೋಗಿಗಳು ತಪಸ್ಸನ್ನಾಚರಿಸು ವಂತಿದ್ದರು. ಮರಗಳ ಸಮೇತ ಬೆಟ್ಟವನ್ನೆತ್ತಿದಾಗ, ಅವರು ಹಾಗೆಯೇ ತಪಸ್ಸನ್ನು ಆಚರಿಸುತ್ತಾ ಆಶ್ಚರ್ಯದಿಂದ ನೋಡುತ್ತಿದ್ದರು. ತಪಸ್ವಿಗಳಲ್ಲಿ ಅನೇಕ ವಿಧ. ಮರದ ಮೇಲೆಯೇ ತಪಸ್ಸು ಮಾಡುವವರು ಒಂದು ರೀತಿಯ ಯೋಗಿಗಳು. (ಕಲಿಯುಗದಲ್ಲಿಯೂ ಕೆಲವರು ಇದ್ದಾರೆ).

ಅಧೋಮುಖಸ್ಯಾದ್ರಿಪತೇಸ್ತೃಣಾನಿ ಸ್ಪೃಷ್ಟ್ವಾ ಮುಕುಂದೇನ ನಿದರ್ಶಿತಾನಿ ।
ಜಾತ ಸ್ಪೃಹಾ ಜಗ್ರಸಿರೇ ಸಹರ್ಷ ಗಾವಸ್ತದಾ ಕಿಂಚಿದಿವೋನ್ನಮಂತ್ಯಾಃ ॥೬೫॥

ತಲೆಕೆಳಗಾಗಿ ಇರುವ ಬೆಟ್ಟದಲ್ಲಿರುವ ಹುಲ್ಲುಗಳನ್ನು ಶ್ರೀಕೃಷ್ಣನು ಪ್ರೀತಿಯಿಂದ ನೋಡಲು, ಹಸುಗಳು, ಆಸೆಯನ್ನು ಹೊಂದಿ ಎದ್ದು ನಿಂತು ಆ ಹುಲ್ಲನ್ನು ಮೇಯುತ್ತಿದ್ದವು.

ಆ ತಲೆಕೆಳಗಾಗಿ ಹಿಡಿದ ಬೆಟ್ಟವನ್ನು ತನ್ನ ಪ್ರೀತಿಯ ಕಣ್ಣುಗಳಿಂದ ನೋಡಿದಾಗ, ಅಲ್ಲಿದ್ದ

ಹುಲ್ಲುಗಳೆಲ್ಲವೂ ನಳನಳಿಸುತ್ತಾ ಹಸುಗಳಿಗೆ ಆಸೆಯನ್ನುಂಟು ಮಾಡಿತು. ಆಗ ಆ ಗೋವುಗಳು ಸಮೃದ್ಧವಾಗಿ ಆ ಹುಲ್ಲನ್ನು ತಿಂದು ಆನಂದ ಮತ್ತು ಸಂತೃಪ್ತಿ ಪಡೆಯಿತು.

ಶ್ರೀಕೃಷ್ಣನ ಕಟಾಕ್ಷವೇ ಅಂತಹದು. ಒಣಗಿ ಹೋದ ಪೈರುಗಳನ್ನೆಲ್ಲಾ ಚಿಗುರುವಂತೆ ಮಾಡಿ, ಗೋವುಗಳು ಹಾಗೂ ಗೋಪಾಲಕರು ಏಳು ದಿನಗಳ ಕಾಲ ಆಹಾರವಿಲ್ಲದೆ ಒದ್ದಾಡುವುದನ್ನು ನಿವಾರಿಸಿದನು.

ಮಣಿಪ್ರದೀಪೈರ ತಮಾಂಸಿ ಗೋಪ್ಯಃ ಪ್ರವಿಶ್ಯರಮ್ಯಾಣಿ ಗುಹಾ ಗೃಹಾಣಿ।
ಅಸ್ಪೃಷ್ಟ ಶೀತೋಷ್ಣಮಯತ್ನಲಬ್ಧಂ ಸ್ವಸ್ಥಾಶಯಾಃ ಸ್ವರ್ಗಮಿವಾನ್ವಭೂವನ್॥೬೬॥

ಗೋಪಸ್ತ್ರೀಯರು ಅಲ್ಲಿ ಸುಂದರವಾದ ಗುಹೆಗಳಲ್ಲಿ ರತ್ನಗಳನ್ನು ದೀಪವಾಗಿ ಇಟ್ಟುಕೊಂಡು ಕತ್ತಲನ್ನು ಹೋಗಲಾಡಿಸಿದುದರಿಂದ, ವಿಚಲಿತರಾಗದೆ, ನೆಮ್ಮದಿಯಾದ ಮನಸ್ಸಿನಿಂದ ಇದು ಪ್ರಯತ್ನವಿಲ್ಲದೆ, ನಮಗೆ ಏರ್ಪಟ್ಟ ಶೀತೋಷ್ಣಬಾಧೆಯಿಲ್ಲದ ಸ್ವರ್ಗವೆಂದು ಅನುಭವಿಸಿದರು.

ಆ ಬೆಟ್ಟದಲ್ಲಿರುವ ಗುಹೆಗಳಲ್ಲಿ ಗೋಪ ಸ್ತ್ರೀಯರು ವಾಸ ಮಾಡತೊಡಗಿದರು. ಆ ಕತ್ತಲಿನ ಗುಹೆಗಳಲ್ಲಿ ರತ್ನಗಳಿಂದ ಹೊರ ಹೊಮ್ಮುವ ಬೆಳಕನ್ನೇ ದೀಪಗಳನ್ನಾಗಿಸಿ ಭಾವಿಸಿ, ಯಾವುದಕ್ಕೂ ಭಯಪಡದೆ, ಶಾಂತವಾದ ಮನಸ್ಸಿನಿಂದ, ಸ್ವರ್ಗ ಸುಖವನ್ನು ಅನುಭವಿಸಿದರು.

ಯಥಾಪುರಂ ತತ್ರ ಸಪುತ್ರದಾರೈರಬ್ಚಿನ್ನಗೋದೋಹನ ಮಂಥನಾದ್ಯೈಃ।
ಸ್ವಪ್ನಾವಬೋಧ ಪ್ರಭೃತೀನಿ ಗೋಪೈಃ ಸಿಷೇವಿರೇ ವಿಸ್ಮೃತ ಪೂರ್ವವಾಸೈಃ ॥೬೭॥

ಹಿಂದಿನಂತೆಯೇ ಗೋಪಾಲಕರು ಆ ಬೆಟ್ಟದ ಕೆಳಗೆ ಹೆಂಡತಿ ಮಕ್ಕಳೊಡನೆ ಸೇರಿ, ಪಸುಗಳನ್ನು ಕರೆಯುವುದು, ಮೊಸರು ಕಡೆಯುವುದು ಮುಂತಾದ ಕೆಲಸಗಳನ್ನು ಬಿಡದೆ ಮಾಡಿಕೊಂಡು ಹಿಂದಿನದೆಲ್ಲವನ್ನೂ ಮರೆತು, ಸಂತೋಷದಿಂದ ಅನುಭವಿಸುತ್ತಿದ್ದರು.

ಗೋಪಾಲಕರು ಆ ಏಳು ದಿನಗಳ ಕಾಲವೂ, ತಮ್ಮ ದೈನಂದಿನ ಚಟುವಟಿಕೆಗಳನ್ನು ಬಿಡದೆ, ಪತ್ನಿಯರೊಡಗೂಡಿ, ಗೋಕುಲ, ಬೃಂದಾವನದಲ್ಲಿ ಹೇಗಿರುತ್ತಿದ್ದರೋ, ಅದೇ ರೀತಿ ಆನಂದದಿಂದ ಆ ಬೆಟ್ಟದ ಕೆಳಗೆ ಕಾಲ ಕಳೆದರು.

ಅಸ್ಪೃಷ್ಟ ಧಾರಾಜಲ ಬಿಂದುಸೇಕೈರಕಂಪಮಾನೈ ರಪದಂತ ವೀನೈಃ।
ಗೋಪೀಜನೈರಾದಧಿರೆ ವಿಹಾರಾ ಗಿರೀಂದ್ರಮೂಲೆ ಗೃಹ ನಿರ್ವಿಶೇಷಮ್ ॥೬೮॥

ಗೋಪ ಸ್ತ್ರೀಯರೂ, ಮಳೆಯ ನೀರನ್ನು ತಡೆಗಟ್ಟುತ್ತಾ, ನಡುಕ ಉಂಟಾಗುವ ಬಾಧೆಗಳಿಂದ ವಿಮುಕ್ತರಾಗಿ ಯಥೇಚ್ಛವಾಗಿ ಆ ಬೆಟ್ಟದ ಕೆಳಗೆ ಮನೆಗಳಲ್ಲಿ ಸುಖ ಸಂಚಾರ ಮಾಡುತ್ತಿದ್ದರು.

ಗೋಪ ಸ್ತ್ರೀಯರೂ ಸಹ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗಿ, ಮಳೆಯಿಂದುಂಟಾಗುವ ಅನಾಹುತಗಳನ್ನು ಸರಿಪಡಿಸಲು ಕ್ರಮ ಕೈಗೊಂಡು, ಮಳೆಯ ನೀರನ್ನು ಬೇರೆಡೆಗೆ ತಳ್ಳುವುದು ಮುಂತಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಯಥೇಚ್ಛವಾಗಿ ಆ ಬೆಟ್ಟದ ಕೆಳಗೆ ಓಡಿಯಾಡುತ್ತಾ, ತಮ್ಮೆಲ್ಲರ ದುಃಖ ದುಮ್ಮಾನಗಳನ್ನು ಮರೆತರು.

ವನೇಚರಾ ಗೋಪಗಣೈಃ ಸಮೇತ ವಿಮುಕ್ತ ಪರ್ಜನ್ಯಭಯಾ ಬಿಜೇರುಃ।
ಮಹೀಧರಚ್ಛತ್ರಧರೇ ಮುಕುಂದೆ ವನ್ಯಾನಿ ಸತ್ವಾನಿ ಚ ತತ್ರಗೋಭಿಃ ॥ ॥೬೯॥

ಕೃಷ್ಣನು ಬೆಟ್ಟವನ್ನು ತಲೆ ಕೆಳಕಾಗಿ ಕೊಡೆಯಂತೆ ಕೈಯ್ಯಲ್ಲಿ ಹಿಡಿದಿದ್ದರಿಂದ ಆ ಕಾಡಿನಲ್ಲಿ ವಾಸಿಸುವ ಬೇಡರುಗಳು ಮೇಘಗಳಿಂದ ಏರ್ಪಡುವ ಕಷ್ಟವನ್ನು ನೋಡಿ ಗೋಪಾಲಕರೊಡನೆ ಸೇರಿ ಸುಖವಾಗಿ ಇರಲು ಆರಂಭಿಸಿದರು. ಕಾಡು ಮೃಗಗಳಾದ ಹುಲಿ ಸಿಂಹಗಳೂ ಸಹ ಹಸುಗಳಂತೆ ತಮ್ಮ ಸಹಜ ಸ್ವಭಾವವಾದ ಕ್ರೌರ್ಯವನ್ನು ಬಿಟ್ಟು ಜೀವಿಸಿದವು.

ಆ ಬೆಟ್ಟದಲ್ಲಿದ್ದ ಜೇಡರ ಜಾತಿಯವರೆಲ್ಲರೂ, (ಅವರು ಸಾಮಾನ್ಯವಾಗಿ ಕ್ರೂರ ಸ್ವಭಾವದವರು). ಇನ್ನು ಮುಂದೆ ನಾವೆಲ್ಲರೂ ಗೋಪಾಲಕರೊಡನೆ ಸ್ನೇಹ ಸೌಹಾರ್ದದಿಂದ ಇರಬೇಕೆಂದು ನಿಶ್ಚಯಿಸಿದರು. ಅದೇ ರೀತಿ ಕಾಡಿನ ದುಷ್ಟಪ್ರಾಣಿಗಳಾದ ಹುಲಿ, ಸಿಂಹಗಳೂ ಸಹ ಹಸು, ಕರುಗಳೊಡನೆ, ಸ್ನೇಹ ಭಾವದಿಂದ ವರ್ತಿಸತೊಡಗಿದವು. ಇವೆಲ್ಲವೂ ಆ ಕೃಷ್ಣ ಸಾನ್ನಿಧ್ಯದ ಪ್ರಭಾವ.

ಪ್ರಭೂತ ಧಾರಾ ಪ್ರತಿಪನ್ನ ಶೈತ್ಯಂ ಪ್ರಾಪ್ತಾರಮದ್ರಿಂ ಪ್ರಬುರದ್ಬುತಾನಾಮ್।
ಸುದರ್ಶನಾದಪ್ಯಧಿಕಾ ಮನೈಷೀತ್ ಪವಿತ್ರತಾಂ ಪಾಣಿ ಸರೋಜಯೋಗಾತ್ ॥೭೦॥

ಶ್ರೀಕೃಷ್ಣನು ತನ್ನ ತಾವರೆಯಂಥಾ ದಿವ್ಯ ಹಸ್ತದಿಂದ ಬೆಟ್ಟವನ್ನು ಎತ್ತಿಕೊಂಡು ಅದನ್ನು ಚಕ್ರಕ್ಕೆ ಮೇಲಾಗಿ ಪವಿತ್ರಗೊಳಿಸಿದನು. ಚಕ್ರಕ್ಕೂ ಬೆಟ್ಟಕ್ಕೂ ಕೆಲವು ವಿಷಯಗಳಲ್ಲಿ ಸಾಮ್ಯವುಂಟು. ವಿಶೇಷವಾಗಿ ಧಾರೆಗಳಲ್ಲಿ ಎರಡಕ್ಕೂ ಶೈತ್ಯ ಇದೆ.

ಶ್ರೀಕೃಷ್ಣನ ಕೈಯ್ಯಲ್ಲಿ ಯಾವಾಗಲೂ ಸುದರ್ಶನ ಚಕ್ರವಿರುತ್ತದೆ. ಆದರೆ ಈಗ ಅದಕ್ಕೆ ಬದಲು ಕೈಯ್ಯಲ್ಲಿ ಗೋವರ್ಧನ ಗಿರಿಯಿದೆ. ಆದ್ದರಿಂದ ಗಿರಿಯೂ, ಚಕ್ರವೂ ಒಂದೇ ಆಗಿ ಗೋವರ್ಧನ ಗಿರಿಯು ಕೃಷ್ಣನ ಹಸ್ತ ಸ್ಪರ್ಶದಿಂದ ಚಕ್ರಕ್ಕಿಂತ ಹೆಚ್ಚು ಪವಿತ್ರವಾಯಿತು.

ಮುಕುಂದ ಹಸ್ತಾಂಬುರುಹಾಧಿರೋಹಾತ್ ಪ್ರಾಪ್ತಃ ಶ್ರಿಯಂ ಮೇರುಮುಖೈರಲಂಭ್ಯಾಂ।
ವರ್ಷಾಪದೇಶೇನ ಗಿರಿಃ ಸ ಲೇಭೇ ನಗಾಧಿ ಪತ್ಯಾರ್ಹಮಿವಾಭಿಷೇಕಮ್ ॥೭೧॥

ಭಗವಂತನ ದಿವ್ಯ ಹಸ್ತಾರವಿಂದದಲ್ಲಿ ಹಿಡಿಯಲ್ಪಟ್ಟದ್ದರಿಂದ ಮೇರು ಮುಂತಾದ ಬೆಟ್ಟಗಳು ಹೊಂದದ ಐಶ್ವರ್ಯವನ್ನು ಹೊಂದಿದ ಈ ಬೆಟ್ಟದ (ಗೋವರ್ಧನ ಗಿರಿಯೂ) ಮೇಲೆ ದೇವೇಂದ್ರನು ಮಳೆ ಸುರಿಸಿದನೆಂದರೆ, ಅದು ಬಾಧಿಸುವ ಮಳೆಯಲ್ಲಿ ಬೆಟ್ಟಗಳ ರಾಜನಿಗೆ ಪಟ್ಟಾಭಿಷೇಕ ಆಯಿತು ಎನ್ನಬೇಕಷ್ಟೆ.

ಗೋವರ್ಧನ ಗಿರಿಯು ಶ್ರೀಕೃಷ್ಣನು ಎತ್ತಿ ಹಿಡಿಯಲ್ಪಟ್ಟಿದ್ದರಿಂದ ಅತ್ಯಂತ ಪವಿತ್ರವೆನಿಸಿ ಮೇರು ಪರ್ವತಕ್ಕಿಂತ ಶ್ರೇಷ್ಠ ಎಂದೆನಿಸಿಕೊಂಡಿತು. ಅಷ್ಟೇ ಅಲ್ಲ! ಆ ಇಂದ್ರನು ಮಳೆಯನ್ನು ಅದರ ಮೇಲೆ ಸುರಿಸಿದ್ದರಿಂದ, ಪರ್ವತರಾಜನೆನಿಸಿಕೊಂಡ ಆ ಗಿರಿಗೆ ಎಲ್ಲರೂ ಸೇರಿ ಪಟ್ಟಾಭಿಷೇಕ ಮಾಡಿದಂತಾಯಿತು. ಪಟ್ಟಾಭಿಷೇಕಕ್ಕೆ ಮೊದಲು ಜಲದಿಂದ ಅಭಿಷೇಕ ಮಾಡುತ್ತಾರಷ್ಟೆ

ಮದೋಲ್ಬಣಾನಾಮಿವ ವಲ್ಲವಿನಾಂ ಗೀತಂ ಗಣೈಃ ಶೌರಿ ಗುಣಾನುಬಂಧಮ್।
ಗುಹಾವಿಶೇಷೈರ್ಧ್ರುವ ಮನ್ವವಾದೀತ್ ಗೋವರ್ಧನೋ ಗೋಪಗಣಾಭಿನಂದ್ಯಃ ॥೭೨॥

ಗೋಪ ಸ್ತ್ರೀಯರು, ಭಗವಂತನಲ್ಲಿ ಆಸೆ ಪಟ್ಟು ಮನ್ಮಥ ಪರವಶರಾಗಿ, ಸಂತೋಷದಿಂದ ಅವನ ಗುಣಗಳನ್ನು ಸಮೂಹ ಸಮೂಹವಾಗಿ ಗೀತಗಳನ್ನು ಹಾಡಿಕೊಂಡು ಬರುವಾಗ ಗೋವರ್ಧನ ಬೆಟ್ಟವು ಗೋಪಿಯರ ಜೊತೆ ಕೂಡಿಕೊಂಡು ಗುಹೆಗಳಲ್ಲಿ ಪ್ರತಿಧ್ವನಿ ಎಂಬ ವ್ಯಾಜದಿಂದ ಅದೂ ಗೀತಗಳನ್ನು ಹಾಡಿತು.

ಬೆಟ್ಟಗಳ ಗುಹೆಗಳಲ್ಲಿ, ಯಾರಾದರೂ ಮಾತನಾಡಿದರೆ ಅದು ಪ್ರತಿಧ್ವನಿಸುತ್ತದೆ. ಅದೇ ರೀತಿ ಗೋಪಸ್ತ್ರೀಯರು ಶ್ರೀಕೃಷ್ಣನು ಗುಣಗಾನ ಮಾಡುತ್ತಿದ್ದಾಗ ಗೋವರ್ಧನ ಗಿರಿಯು, ತಾನು ಕೃಷ್ಣನ ಕರಸ್ಪರ್ಶ ಹೊಂದಿದ ಆನಂದಕ್ಕೆ, ತನ್ನ ಗುಹೆಗಳ ಮುಖಾಂತರ ಆ ಗೀತಗಳನ್ನು ತಾನೂ ಪ್ರತಿಧ್ವನಿಸಿತು.

ಕರಾಗ್ರಯಂತ್ರೇ ಘಟಿತೇನ ಕೃಷ್ಣಃ ಸವಾರಿಣಾ ಸಾನುಮತಾಽಭಿಗುಪ್ತಾನ್।
ಅಲಂಭಯತ್ ಗೋಪಗಣಾನ್ ಸದಾರಾನ್ ಧಾರಾ ಗೃಹಾಭ್ಯಂತರ ವಾಸ ಸೌಖ್ಯಮ್ ॥೭೩॥

ಶ್ರೀಕೃಷ್ಣನು ತನ್ನ ದಿವ್ಯ ಹಸ್ತದ ತುದಿ ಎಂಬ ಯಂತ್ರದಲ್ಲಿ ನಾಲ್ಕು ಪಕ್ಕವೂ ಮಳೆ ಹೊಯ್ಯುವ ಬೆಟ್ಟವನ್ನು ಹಿಡಿದಿಟ್ಟಾಗ, ಗೋಪರು ತಮ್ಮ ಹೆಂಡತಿಯರೊಡನೆ ಶೀತ ಕಾಲದಲ್ಲಿ ತಂಪಾದ ಜಾಗಗಳಲ್ಲಿ ಇರುವಂತೆ ಧಾರಾಗೃಹಗಳಲ್ಲಿ (ಹವಾ ನಿಯಂತ್ರಿತ) ತಂಗಿ ಸುಖಪಡುವ ಹಾಗೆ ಸಂತೋಷದಿಂದ ಇದ್ದರು.

ಗೋವರ್ಧನ ಗಿರಿಯ ಕೆಳಗೆ ಗೋಪಾಲಕರೆಲ್ಲರೂ ಆನಂದದಿಂದ ಒಂದು ವಾರ ಕಾಲ ಕಳೆದರು.

ಅಚಿಂತ್ಯಶಕ್ತೇ ರಕುಮಾರಯೂನಃ ಕೌಮಾರಲೀಲಾ ಕವಚೇನ ಗುಪ್ತಂ।
ಬಲಂ ತದಗ್ರಾಂಗುಲಿ ಸಂಶ್ರಿತಾದ್ರೇ ಸ್ತಾವತ್ ಪರಿಚ್ಛಿನ್ನಮಬೋಧಿ ಗೋಪೈಃ ॥೭೪॥

ಎಣಿಸಲಾಗದ ಶಕ್ತಿಯೊಡನೆ, ಕೌಮಾರ ದಶೆಯಿಂದಲೇ ಯೌವನವು ಹೊಂದಿದವ ನೆಂದು ಹೇಳದ ಹಾಗೆ ಯಾವಾಗಲೂ ಹೊಸ ಯೌವನವನ್ನು ಹೊಂದಿದವನು. ಅವನು ಆವಾಗ ಕೌಮಾರ ದಶೆಯಲ್ಲಿಯೇ ತನ್ನ ಪ್ರಭಾವವನ್ನು ಮರೆಸಿಕೊಂಡು ಚಿಕ್ಕ ಮಕ್ಕಳಾಟದಂತೆ ಬೆಟ್ಟವನ್ನು ತನ್ನ ಕಿರು ಬೆರಳಿನಲ್ಲಿ ಎತ್ತಿಕೊಂಡು ನಿಂತರು. ಆದರೆ ಗೋಪರು ಇವನನ್ನು

ಇಷ್ಟು ದೊಡ್ಡ ಬೆಟ್ಟವನ್ನು ಎತ್ತುವ ಶಕ್ತಿಯುಳ್ಳವನೆಂದು ನೆನೆಯಲೇ ಇಲ್ಲ. ಆದ್ದರಿಂದ ಅವನನ್ನು ಅಪಾರಶಕ್ತಿಯುಳ್ಳ ಪುರುಷೋತ್ತಮನೆಂದು ಭಾವಿಸಿದರು.

ಆ ಶ್ರೀಕೃಷ್ಣನ ಶಕ್ತಿಯ ಅರಿವು ಅವನ ಸಹಚರರಾದ ಗೋಪಾಲಕರಿಗೆ ಇರಲೇ ಇಲ್ಲ. ಯೌವನ ದಶೆಯಲ್ಲಿ ಹೊಂದುವ ಶಕ್ತಿಯನ್ನು ಅವನು ಕೌಮಾರ ದಶೆಯಲ್ಲಿ ಹೊಂದಿದ್ದನು. ತನ್ನ ಕಿರು ಬೆರಳಿನ ತುದಿಯಲ್ಲಿ ಬೆಟ್ಟ ಹಿಡಿದು ನಿಂತ ಆ ಕೃಷ್ಣನನ್ನು ಕಂಡ ಗೋಪಾಲಕರು ಅತ್ಯಾಶ್ಚರ್ಯದಿಂದ, ಅವನು ಸಾಕ್ಷಾತ್ ಸರ್ವೇಶ್ವರನಾದ ಪುರುಷೋತ್ತಮನೆಂದು ಭಾವಿಸಿದರು.

ನಿಮೇಷನಿಷ್ಪ್ಯೂತಯುಗಾನಿ ಯಾಸಾಂಯೇಭ್ಯೋ ನಿರೋಧವ್ಯಸನಾನ್ಯಭೂವನ್ ।
ತಾಸಾಂ ಸ್ತ್ರೈಃ ಸಾರ್ಥಮಭೂತ್ ಸಮೀಕ್ಷ್ಯೋ ವಾಮಭ್ರುವಾಂವಲ್ಲವಯೂಥನಾಥಃ॥೭೫॥

ಗೋಪಾಲಕರ ಸಮೂಹಗಳಿಗೆ ಅರಸನಾದ ಶ್ರೀಕೃಷ್ಣನು ಯಾವ ಗೋಪಾಲಕರ ವಿರಹದಿಂದ ಒಂದು ನಿಮಿಷವನ್ನೂ ಅನೇಕ ಯುಗಗಳಂತೆ ಭಾವಿಸುತ್ತಿದ್ದನೋ, ಹಾಗೆಯೇ ಗೋಪ ಸ್ತ್ರೀಯರೂ ಹಾಗೆಯೇ ಭಾವಿಸುತ್ತಿದ್ದರೋ, ಆ ಗೋಪಾಲಕರೊಡನೆ ಸೇರಿಯೇ ಆ ಸುಂದರವಾದ ದೇಹಗಳುಳ್ಳ ಸ್ತ್ರೀಯರು ಆಶ್ಚರ್ಯದಿಂದ ಅವನನ್ನು ನೋಡುವಂತೆ ಆ ಬೆಟ್ಟವನ್ನು ಹಿಡಿದು ನಿಂತಿದ್ದನು.

ಏಳು ದಿನಗಳ ಕಾಲ ಆ ಬೆಟ್ಟವನ್ನು ಶ್ರೀಕೃಷ್ಣನು ಹಿಡಿದು ನಿಂತಿದ್ದಾಗ ಅವನ ದಿವ್ಯ ಮಂಗಳ ಶರೀರವನ್ನು ಸಹಜವಾಗಿಯೇ, ಅವನಲ್ಲಿ ಮೋಹಿತರಾಗಿದ್ದ ಗೋಪಸ್ತ್ರೀಯರು ಮತ್ತೂ ಹೆಚ್ಚಿನ ಆಶ್ಚರ್ಯ ಆನಂದಗಳೊಡನೆ, ಅವನ ದಿವ್ಯ ವಿಗ್ರಹದ ಸೌಂದರ್ಯವನ್ನು ತನ್ಮಯತೆಯಿಂದ ಅನುಭವಿಸಿದರು. ಗೋಪಾಲಕರೂ ಸಹ ಬೆಟ್ಟವನ್ನು ಎತ್ತಿ ಹಿಡಿದ ಆ ಅಮೋಘ ರೂಪವನ್ನು ನೋಡಿ ಅತೀವ ಆಶ್ಚರ್ಯಪಟ್ಟರು.

ಕೃತಾರ್ಥಭಾವಂ ಭೃಶಮಾ ದಧಾನೇ ಕೃಷ್ಣಾಂಗ ಸಂಸ್ಪರ್ಶವಿಲೋಕನಾದೌ ।
ಅಯಂತ್ರಿತಾಭಿಶ್ಚಿರಮಾಶ ಶಂಸೆ ವರ್ಷಾನು ವೃತ್ತಿರ್ವ್ರಜಸುಂದರೀಭಿಃ॥ ॥೭೬॥

ತಮ್ಮನ್ನು ಪೂರ್ಣವಾಗಿ ಪುರುಷಾರ್ಥವನ್ನು ಹೊಂದುವಂತೆ ಮಾಡುವ ಶ್ರೀಕೃಷ್ಣನ ದಿವ್ಯ ಶರೀರವನ್ನು ಸ್ಪರ್ಶಿಸುವುದು, ನೋಡುವುದು ಮುಂತಾದವನ್ನು ಮಾಡುತ್ತಲೇ ಇದ್ದ ಗೋಪ ಸ್ತ್ರೀಯರು ಇದೇ ರೀತಿ ಮಳೆ ಬರುತ್ತಿರಬೇಕೆಂದು ಪ್ರಾರ್ಥಿಸುತ್ತಿದ್ದರು. (ಶ್ರೀಕೃಷ್ಣನನ್ನು ಪೂರ್ಣವಾಗಿ ಅನುಭವಿಸಬಹುದೆಂದು).

ಶ್ರೀಕೃಷ್ಣನ ಸಕಲ ವಿಧ ಕೈಂಕರ್ಯವು ತಮಗೆ ಯಾವಾಗಲೂ ದೊರಕಬೇಕೆಂದು ಗೋಪಿಯರು ಆಶಿಸುತ್ತಿದ್ದರು. ಅದೇ ನೆರವೇರಬೇಕಾದರೆ, ಈ ರೀತಿಯಾದ ಮಳೆಯು ಆವಾಗ ಬರುತ್ತಿದ್ದರೆ ಮಾತ್ರ ಸಾಧ್ಯ ಎಂಬುದು ಅವರ ಮನದಾಳದ ಆಶೆಯಾಗಿತ್ತು. ಅಂದರೆ ಆ ಕಷ್ಟಕಾಲದಲ್ಲೂ ಅಪರಿಮಿತವಾದ ಸುಖವಿದೆ (ಶ್ರೀಕೃಷ್ಣನ ಸತತ ಸಂಶ್ಲೇಷವೆಂಬ ಸುಖ) ಎಂಬುದು ಅವರ ಅಭಿಪ್ರಾಯವಾಗಿತ್ತು.

ಧಾರಾನಿಪಾತೈಃ ಸ್ತನತಾಂ ಘನಾನಾ ಮಕ್ಷಪ್ರಮಾಣೈ ರಭಿಹನ್ಯಮಾನಃ।
ಆಕಸ್ಮಿಕೀ ಮನ್ವಭವತ್ ಸ ಶೈಲೋ ವಜ್ರವ್ಯಥಾಂ ವಾಸವ ರೋಷಜಾತಾಮ್ ॥೭೭॥

ಮೇಘಗಳು ಗರ್ಜಿಸಿ ಬಿಡುವ ದೊಡ್ಡ ದೊಡ್ಡ ಧಾರೆಗಳು ಮೇಲೆ ಮೇಲೆ ಬೀಳುತ್ತಿರುವುದರಿಂದ, ಗಾಯಗೊಂಡ ಆ ಬೆಟ್ಟವಾದುದು ತಾನು ಒಂದು ತಪ್ಪು ಮಾಡದೆ, ಎದುರು ನೋಡದ ಇಂದ್ರನು ಬೀಸುವ ವಜ್ರಾಯುಧದ ಹೊಡೆತದಿಂದ ಉಂಟಾದ ಬಾಧೆಯನ್ನು ಅನುಭವಿಸಿತು.

ಗೋವರ್ಧನ ಗಿರಿಯು ಯಾವ ತಪ್ಪನ್ನೂ ಮಾಡಲಿಲ್ಲ. ಅದನ್ನು ಪೂಜಿಸಬೇಕೆಂದು ನಿರ್ಧರಿಸಿದ್ದು ಗೋಪಾಲಕರು ಶ್ರೀಕೃಷ್ಣನ ಸಲಹೆಯ ಮೇರೆಗೆ ಆದರೆ ಗೋವರ್ಧನ ಗಿರಿಯು ಇಂದ್ರನ ಪ್ರಕೋಪಕ್ಕೆ ಗುರಿಯಾಗಿ, ಮಳೆಯ ಧಾರಾಕಾರದ ಪೆಟ್ಟನ್ನು ಅನುಭವಿಸಬೇಕಾಯಿತು. ತನ್ನದಲ್ಲದ ತಪ್ಪಿಗೂ ಶಿಕ್ಷೆಯನ್ನು ಇತರರ ಹಿತಕ್ಕಾಗಿ ಅನುಭವಿಸುವುದು ಆ ಮಹಾತ್ಮರ ಲಕ್ಷಣ.

ತಮೇಕ ಹಸ್ತಾಂಗುಲಿ ಯಂತ್ರಲಗ್ನಂ ಧಾರಾಹತಂ ಧಾರಯತ ಸ್ತ್ರಿಧಾಮ್ನಃ।
ಅಮುಕ್ತಬಾಲ್ಯಸ್ಯ ಸಮಗ್ರಶಕ್ತೇಃ ಕ್ಷಣಾರ್ಥವತ್ ಸಪ್ತ ದಿನಾನ್ಯತೀಯುಃ ॥೭೮॥

ಎಷ್ಟೋ ಮಳೆ ಸುರಿದೂ, ಬಾಧಿಸಲ್ಪಟ್ಟ ಆ ಬೆಟ್ಟವನ್ನು ಅಲ್ಲಾಡದ ಹಾಗೆ ತನ್ನ ಒಂದು ಕೈಯಿನಿಂದಲೇ ಹಿಡಿದು ಧರಿಸಿದ ಶ್ರೀಕೃಷ್ಣಸ್ವಾಮಿಯು ಇದಕ್ಕಾಗಿ ತನ್ನ ಬಾಲ್ಯದಲ್ಲಿ ಹೊಂದಿದ್ದ ಶಕ್ತಿಯನ್ನು ಕಡಿಮೆಗೊಳಿಸದೆ, ಅಪಾರವಾದ ಶಕ್ತಿಯನ್ನು ಹೊಂದಿದ್ದನು.

ಏಳು ದಿನಗಳೂ ಒಂದೇ ಕಡೆಯಲ್ಲಿ ಆ ಬೆಟ್ಟವನ್ನು ಎತ್ತಿ ಹಿಡಿದು ನಿಂತಿದ್ದ ಆ ಸ್ವಾಮಿಯ ಸ್ಥೈರ್ಯವನ್ನು ಎತ್ತಿ ಕೊಂಡಾಡಿದರೂ ಸಾಲದು. ಅನ್ನಾಹಾರಗಳನ್ನು ಬಿಟ್ಟು ಅಚಲನಾಗಿ ಇಂದ್ರನು ಮಳೆಯನ್ನು ನಿಲ್ಲಿಸುವವರೆಗೂ ಒಂದೇ ಸಮನೆ ವಿಚ್ಛಿತ್ತಿ ಇಲ್ಲದೆ ಬೆಟ್ಟವನ್ನು ನಿಂತಿದ್ದನು.

ಸತಾದೃಶಾಂ ಸ್ತೋಯಭೃತೋ ಯುಗಾಂತೆ ಶ್ವಾಸಾನಿಲೈಃ ಶೋಷಯಿತುಂ ಕ್ಷಮೋಽಪಿ।
ಮಹೇಂದ್ರ ದರ್ಪಾತ್ಯಯಮಾತ್ರಕಾಂಕ್ಷಿ ಪ್ರಖ್ಯಾಪಯಾಮಾಸ ಗಿರೇಃ ಪ್ರಭಾವಂ॥೭೯॥

ಆ ಮೇಘಗಳಂತೆಯೇ ಪ್ರಳಯ ಕಾಲದಲ್ಲಿ ತನ್ನ ಉಸಿರಾಟದ ಗಾಳಿಯಿಂದಲೇ ಎಲ್ಲವನ್ನೂ ವಿನಾಶಗೊಳಿಸಬಲ್ಲವನಾಗಿದ್ದರೂ ಆಗ ದೇವೇಂದ್ರನ ಕೊಬ್ಬನ್ನು ಅಡಗಿಸಲು ಆ ಮಳೆಯೆಲ್ಲವೂ ಸುರಿಯಲಿ ಎಂದು ಭಾವಿಸಿ, ಬೆಟ್ಟದ ಮಹಿಮೆಯನ್ನು ಪ್ರಕಾಶಪಡಿಸಲಿಚ್ಛಿಸಿದನು.

ತಾನು ಸರ್ವಶಕ್ತನಾಗಿ, ಎಲ್ಲವನ್ನೂ ಪ್ರಳಯ ಕಾಲದಂತೆ ಒಂದೇ ಬಾರಿಗೆ ನಿಗ್ರಹಿಸಬಲ್ಲವನಾಗಿದ್ದರೂ, ತಾಳ್ಮೆಯಿಂದ ಸ್ವಾಮಿಯು, ಇಂದ್ರನು ಎಷ್ಟು ಮಳೆ ಸುರಿಸುತ್ತಾನೋ ನೋಡೋಣ. ಅವನೇ ಸೋತು ನನ್ನಲ್ಲಿ ಶರಣಾಗತನಾಗುತ್ತಾನೆ. ಅಲ್ಲಿಯವರೆಗೆ ನಾನು

ಬಲ ಪ್ರಯೋಗ ಮಾಡುವುದಿಲ್ಲ. ಕೇವಲ ಈ ಬೆಟ್ಟವನ್ನು ರಕ್ಷಣೆಯಂತೆ ಹಿಡಿದುಕೊಂಡಿರುತ್ತೇನೆ. ಇದರಿಂದ ಬೆಟ್ಟದ ಮಹಿಮೆಯು ಪ್ರಕಾಶಿಸಲ್ಪಡುತ್ತದೆ ಎಂದು ಸುಮ್ಮನಿದ್ದನು.

ಏಕತ್ರ ಸಂರಕ್ಷತಿ ಕೃಷ್ಣಮೇಘೇ ಗೋತ್ರೇಣ ಚೈಕೇನ ಗವಾಂ ಕುಲಾನಿ।
ಅಶೇಷಗೋತ್ರೌಘಭಿದಾ ನಿಯುಕ್ತೈರ್ಮೇಘಾಯುತೈರ್ಮೋಘತಮೈರ್ಬಭೂವೆ॥೮೦॥

ಒಂದು ಕೃಷ್ಣನೆಂಬ ಮೇಘವು ಒಂದೇ ಬೆಟ್ಟವನ್ನು ಹಿಡಿದು ಎಲ್ಲರನ್ನೂ ಕಾಪಾಡುವ ಸಮಯದಲ್ಲಿ ಎಲ್ಲಾ ಬೆಟ್ಟಗಳನ್ನು ನಿಯಮಿಸುವನಾದ, ಅನೇಕ ಸಹಸ್ರ ಸಂಖ್ಯೆಯ ಮೇಘಗಳ ಕಾರ್ಯಗಳೆಲ್ಲವೂ ನಿಷ್ಪ್ರಯೋಜನವಾಯಿತು. ಗೋತ್ರದಲ್ಲಿ ಗೌರವವು ಮುಖ್ಯ.

ಕೃಷ್ಣನು ಒಬ್ಬನೇ ಎಲ್ಲಾ ಮೇಘಗಳನ್ನು ತಡೆದು ಗೋಪಾಲಕರನ್ನು ಕಾಪಾಡಿದ್ದಾನೆ. ಎಷ್ಟು ದೊಡ್ಡ ದೊಡ್ಡ ಮೇಘಗಳು ಸಹಸ್ರ ಸಂಖ್ಯೆಯಲ್ಲಿ ಒಂದು ಮಳೆ ಸುರಿಸಿದರೂ, ಶ್ರೀಕೃಷ್ಣನ ಬಲದಿಂದ ಗೋವರ್ಧನ ಗಿರಿಯು ಎಲ್ಲವನ್ನೂ ತಡೆದುಕೊಂಡಿತು. ಗೋಪರು, ಗೋವರ್ಧನ ಗಿರಿಯು ಒಂದೇ ಗೋತ್ರದವರಾದ್ದರಿಂದ ಗೋವರ್ಧನವು ತನ್ನ ಗೋತ್ರದ ಗೌರವವನ್ನು ಕಾಪಾಡಲು ಇಂದ್ರನ ಆಕ್ರಮಣವನ್ನು ಸಮರ್ಥವಾಗಿ ತಡೆಯಿತು.

ವ್ರಜೋಪಮರ್ದೇಂ ವಿತಥೇ ಸುರೇಂದ್ರಃ ಸ್ವಯಂ ವೃತೋಽಪ ತ್ರಪಯಾಭಿಯಾ ಚ।
ದುನೋತಿ ಮಾಮಿಂದ್ರಪದಂ ದುರಂತಂ ಕಿಂ ಪೌರುಷಂ ಕೇವಲ ಮಿತ್ಯದುಃಖ್ಯತ್॥೮೧॥

ಗೋಪಾಲಕರ ಕೇರಿಯನ್ನು ನಾಶ ಮಾಡಲು ಪ್ರಯತ್ನವು ವ್ಯರ್ಥವಾದಾಗ, ದೇವೇಂದ್ರನನ್ನು ಆಶ್ಚರ್ಯ, ನಾಚಿಕೆ ಎಂಬ ಎರಡು ಗುಣಗಳೂ ಬಂದು ಸೇರಿದವು. ಹಾಗೆ ಆಭಾಸವಾದ ಪರಾಕ್ರಮ ಹೊಂದಿದ್ದೂ, ದುಷ್ಟ ಉದ್ದೇಶದಿಂದ ಕೂಡಿದುದೂ ಆದ ತುಂಬಾ ಅಲ್ಪವಾದ ಇಂದ್ರಪದವು ನನ್ನನ್ನು ಬಿಟ್ಟು ಹೋಯಿತು ಎಂದು ಇಂದ್ರನು ದುಃಖಿಸಿದನು.

ಯಾವಾಗ ಶ್ರೀಕೃಷ್ಣನಿಂದ ತನ್ನ ಪ್ರಯತ್ನವೆಲ್ಲವೂ ವ್ಯರ್ಥವಾಯಿತೋ ಆಗ ಇಂದ್ರನಿಗೆ ಪಶ್ಚಾತ್ತಾಪ ಪ್ರಾಪ್ತವಾಯಿತು. ನಾಚಿಕೆಯೂ ಉಂಟಾಯಿತು. ತನ್ನ ಕಾರ್ಯವು ದುಷ್ಟವಾದ ಉದ್ದೇಶದಿಂದ ಕೂಡಿದ್ದರಿಂದ ತನಗೆ ಸೋಲುಂಟಾಯಿತೆಂದು ಭಾವಿಸಿ, ಇದು ತನ್ನ ಇಂದ್ರ ಪದವಿಯನ್ನು ಬಾಧಿಸುತ್ತದೆಂದು ಚಿಂತೆಗೀಡಾದನು.

ನಿವೃತ್ತರೋಷೇ ನಿಭೃತೇಽಪಿ ಶಕ್ರೇ ಸಂದರ್ಶಿತ ಸ್ವಾಮಿ ನಿದೇಶ ಸಂಗಾಃ।
ವವರ್ಷುರುಗ್ರಾಂ ಮುಹುರಶ್ಮ ವೃಷ್ಟಿಂ ವೈರೋಪಪನ್ನಾ ಇವ ವಾರಿವಾಹಾಃ॥೮೨॥

ಇಂದ್ರನು ರೋಷ ತಳೆದು, ತಗ್ಗಿನ ನಡತೆಯುಳ್ಳವನಾದನು. ಅರಸನ ಆಜ್ಞೆಯಿಂದ ತಮ್ಮ ಪ್ರಭಾವವನ್ನು ತೋರಿದ ಮೇಘಗಳು ತಮಗೆ ನೇರಾಗಿ, ವಿರೋಧ ಇರುವ ಹಾಗೆ ಅಭಿನಯಿಸಿ, ಬೇಡವೆಂಬ ಆಜ್ಞೆಯು ಬರುವವರೆಗೆ ಉಗ್ರವಾಗಿ ಕಲ್ಲು ಮಳೆಯನ್ನು ಸುರಿಸಿದವು.

ಇಂದ್ರನು ಶ್ರೀಕೃಷ್ಣನ ಪರಾಕ್ರಮವನ್ನು ನೋಡಿ, ಅವನ ಗರ್ವ ಅಡಗಿ, ಸೋಲನ್ನು ಒಪ್ಪಬೇಕಾಯಿತು. ಮೇಘಗಳೂ ಸಹ ತಮಗೆ ಶ್ರೀಕೃಷ್ಣನ ವಿರುದ್ಧ ಹೋಗಲು ಇಷ್ಟವಿಲ್ಲದಿದ್ದರೂ ರಾಜಾಜ್ಞೆಯನ್ನು ಮೀರಲಾರದೆ ಘನಘೋರವಾದ ಆಲಿಕಲ್ಲು ಮಳೆಯನ್ನು ಸುರಿಸಿದವು. ಭಗವಂತನಿಗೆ ವಿರೋಧವಾಗಿ ಯಾರಾದರೂ ನಡೆಯಲಾದೀತೇ?

ನಿವಾರ್ಯ ದುರ್ವಾರಜವಾನ್ ಪಯೋದಾನ್ ನಾಥಂಸತಾಂ ನಂದಸುತಂ ಪ್ರಪಿತ್ಸುಃ।
ಕರಂಬಿತ ಪ್ರೀತಿಭಯಃ ಕ್ಷಣಾರ್ಧಂ ವ್ಯಕ್ತಿಂ ಭಜನ್ ವ್ಯೋಮತಲೇಽವತಸ್ಥೇ ॥೮೩॥

ಸತ್ಪುರುಷರಿಗೆ ನಾಥನಾದ ನಂದ ಕುಮಾರನನ್ನು ಶರಣುಹೊಂದಬೇಕೆಂದು ಚಿಂತಿಸಿ, ನಿಲ್ಲಿಸಲು ಸಾಧ್ಯವಿಲ್ಲದಿದ್ದಂತಹ ಮೇಘಗಳನ್ನು ಚೆನ್ನಾಗಿ ನಿಲ್ಲಿಸಿ, (ತನ್ನನ್ನು ವಧಿಸದೆ ಹಾಗೆ ಬಿಟ್ಟುದಕ್ಕೆ ಶ್ರೀಕೃಷ್ಣನಲ್ಲಿ ತನಗೆ ಪ್ರೀತಿ ಇದೆಯೆಂದು ತೋರಿಸಲು) ತನ್ನಲ್ಲಿ ಒಂದು ಕಡೆ ಪ್ರೀತಿಯು, ಮತ್ತೊಂದು ಕಡೆ ಭಯವು ಸೇರಿ (ಶ್ರೀಕೃಷ್ಣನ ವಿಷಯದಲ್ಲಿ) ಆಕಾಶದಲ್ಲಿ ತೋರಿ ಅರೆಕ್ಷಣ ನಿಂತನು.

ಇಂದ್ರನು ಶ್ರೀಕೃಷ್ಣನಲ್ಲಿ ಶರಣಾಗತಿಯನ್ನನುಷ್ಠಿಸಿದನು. ಅವನು ಸ್ವಾಮಿಯಲ್ಲಿ ತನಗೆ ಪರಮ ಪ್ರೀತಿಯೆಂದು ತೋರಿಸಲು, ಮೇಘಗಳ ಹಾವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಿ ಶಾಂತಿಯನ್ನೇರ್ಪಡಿಸಿದನು. ಗೋಪಾಲಕರಿಗೆ ಅಷ್ಟು ತೊಂದರೆ ಕೊಟ್ಟ ಇಂದ್ರನನ್ನು ವಧಿಸದೆ ಬಿಟ್ಟದ್ದೆ ಅವನ ಪುಣ್ಯ. ಅದನ್ನರಿತ ಇಂದ್ರನು ಹೆಚ್ಚು ವಿರೋಧ ವ್ಯಕ್ತಪಡಿಸದೆ ಸ್ವಾಮಿಯಲ್ಲಿ ಶರಣು ಹೊಂದಿ, ಕ್ಷಮಾಯಾಚನೆ ಮಾಡಿದನು.

ಕ್ರಮೇಣ ಪೃಥ್ವೀಮಭಿಗಂತು ಕಾಮಃ ಶ್ವೇತಾಭ್ರ ಪರ್ಯಾಯ ಗಜಾಧಿರೂಢಃ।
ವಿಲೋಚನ ವ್ಯಂಜಿತ ಪದ್ಮಸಂಪತ್ ವರ್ಷಾತ್ಯಯೋ ಮೂರ್ತ ಇವಾ ಬಭಾಸೆ ॥೮೪॥

ಮೇಲೆ ನಿಂತು ಶ್ರೀಕೃಷ್ಣನಿರುವ ಜಾಗಕ್ಕೆ ಬರಬೇಕೆಂದು ಐರಾವತವನ್ನು ಏರಿ, ಅರಳಿದ, ತನ್ನ ಸಾವಿರ ಕಣ್ಣುಗಳೊಡನೆ ತೋರಿದನು. ಅದರಿಂದ ಇನ್ನು ಮುಂದೆ ಮಳೆಯಿಲ್ಲ ಎಂಬುದು ಸ್ಪಷ್ಟವಾಯಿತು. ಆವಾಗ ಇಂದ್ರನು, ಬರುವುದು ಶರತ್ಕಾಲವು ಬರುವಂತಿತ್ತು. ಅವನು ಏರಿದ ಐರಾವತವು ಬಿಳಿಯ ಮೇಘದಂತೆ, ಅವನ ಕಣ್ಣುಗಳು ಅರಳಿದ ತಾವರೆ ಹೂಗಳಂತೆಯೂ ಇದ್ದದ್ದರಿಂದ, ಕೆಟ್ಟಕಾಲವು ಕಳೆದು ಒಳ್ಳೆಯ ಕಾಲ ಬರುವಂತೆ ತೋರುತ್ತಿತ್ತು.

ಮೊದಲು ತೋರಿದ ಇಂದ್ರನು ದುಷ್ಟನಂತಿದ್ದನು. ಈಗ ಕೃಷ್ಣನನ್ನು ನೋಡಲು ಬರುತ್ತಿರುವ ಇಂದ್ರನು, ಶರತ್ಕಾಲದ ಚಂದ್ರನಂತೆ ಆಹ್ಲಾದದಾಯಕನಾಗಿದ್ದನು. ಎಲ್ಲರ ಕಷ್ಟ ಕಾಲವು ಮುಗಿದು ಹೋಗಿ ಸತ್ಕಾಲವು ಪ್ರಾಪ್ತವಾದಂತಿತ್ತು. ಇಂದ್ರನ ಗರ್ವವು ಸಂಪೂರ್ಣವಾಗಿ ಅಡಗಿ ಹೋಗಿತ್ತು.

ಪುನಃ ಪ್ರಸನ್ನಾಂ ಪುರುಹೂತ ದಾಂತ್ಯಾ ಪಶ್ಯನ್ ದಿವಂ ಪ್ರಾಣಭೃತಾಮಧೀಶಃ।
ತಮದ್ರಿಮವ್ಯಾಹತ ದಿವ್ಯಲೀಲಃ ಸಂತೋಲಯಾಮಾಸ ನಿವೇಶ ಯಿಷ್ಯನ್ ॥೮೫॥

ಇಂದ್ರನು ಅಡಗಿದ್ದರಿಂದ ಆಕಾಶವು ತಿಳಿಯಾಯಿತು ಎನ್ನುವುದನ್ನು ಸರ್ವ ಪ್ರಾಣಿಗಳಿಗೂ ಸ್ವಾಮಿಯಾದ ಕೃಷ್ಣನು ಕಂಡು ತಡೆಯಿಲ್ಲದ ಅದ್ಭುತ ಲೀಲೆಗಳನ್ನು ಹೊಂದಿ ಬೆಟ್ಟವನ್ನು ಮೊದಲಿನ ಸ್ಥಳದಲ್ಲಿಯೇ ಇಡಲು ನಿರ್ಧರಿಸಿ, ಕೈನಲ್ಲಿ ಚಂಡಿನಂತೆ ಇಟ್ಟುಕೊಂಡು ಅದನ್ನು ಇಳಿಸಿದನು.

ಇಂದ್ರನು ಯಾವಾಗ ಶರಣಾಗತನಾದನೋ, ಆಗ, ಇನ್ನು ಮುಂದೆ ಅವನಿಂದ ಯಾವ ಭಯವೂ ಇಲ್ಲವೆಂದರಿತು, ಸ್ವಾಮಿಯಾದ ಶ್ರೀಕೃಷ್ಣನು, ಆ ಪರಮ ಪಾವನವಾದ ಗಿರಿಯನ್ನು ಸ್ವಸ್ಥಾನದಲ್ಲಿರಿಸಲು ನಿರ್ಧರಿಸಿ, ಮತ್ತೆ ಲೀಲಾಜಾಲವಾಗಿ ಅದನ್ನು ಕೆಳಗಿಳಿಸಿ, ತನ್ನ ಶರಣಾಗತ ಧರ್ಮವು ಪಾಲನೆಯಾಗಿದ್ದಕ್ಕಾಗಿ ಕೃತಕೃತ್ಯನಾದನು.

ವಿಲಕ್ಷವೃತ್ತ್ಯೈವ ತಿರೋಹಿತೇಷು ಮೇಘೇಷು ವಿಶ್ರಾಂತ ವಿಕತ್ಥನೇಷು।
ಸ್ಥಾನೆ ನಿವೇಶಾದಚಲೀಚಕಾರ ಛತ್ರಾಚಲಂ ಶೌರಿ ರಖಿನ್ನ ಬಾಹುಃ॥ ॥೮೬॥

ಆರ್ಭಟಗಳಿಂದ ತೊಡಗಿ, ಮೇಘಗಳು ನಾಚಿಕೆಯಿಂದ ಮರೆಯಾದ ಮೇಲೆ ಕೊಡೆಯಾಗಿದ್ದ ಬೆಟ್ಟವನ್ನು ಮತ್ತೆ ತನ್ನ ಸ್ಥಾನದಲ್ಲಿ ಇಟ್ಟು ಅದನ್ನು ಅಚಲವಾಗಿ ಮಾಡಿದ ಶೌರಿಯು ತನ್ನ ಭುಜಬಲದಿಂದ ಬೆಳಗಿದನು.

ಶ್ರೀಕೃಷ್ಣನು ತಾನು ಎತ್ತಿದ್ದ ಗೋವರ್ಧನ ಗಿರಿಯನ್ನು ಅದರ ಸ್ವಸ್ಥಾನದಲ್ಲಿ ಇರಿಸಿದ ಮೇಲೆ ಇನ್ನೂ ಹೆಚ್ಚಿನ ಶೋಭೆಯಿಂದ ಬೆಳಗಿದನು. ಬೆಟ್ಟಕ್ಕೆ 'ಅಚಲ' ಎಂದು ಹೆಸರು. ಆದರೆ ಗೋವರ್ಧನ ಗಿರಿಯನ್ನು ಒಂದು ಬಾರಿ ಎತ್ತಿದ್ದರಿಂದ ಅದು 'ಚಲ'ವಾಯಿತು. ಮತ್ತೆ ಅದನ್ನು ಸ್ವಸ್ಥಾನದಲ್ಲಿರಿಸಿ, ಅದು ಮತ್ತೆಂದೂ ಚಲಿಸದ ಹಾಗೆ ನಿಜವಾದ ಅರ್ಥದಲ್ಲಿ ಅಚಲವಾಗಿಸಿದನು.

ಉತ್ಕ್ಷಿಪ್ಯಮಾಣಃ ಪರಿವರ್ತಮಾನಃ ಸಂಸ್ಥಾಪ್ಯಮಾನೋಽಪಿ ತಥೈವ ಭೂಯಃ।
ಸ ತಸ್ಯ ಸಂಕಲ್ಪವಶೇನ ಭೇಜೇ ಶೈಲೋ ನ ಶೈತಿಲ್ಯ ಕಥಾಪ್ರಸಂಗಮ್ ॥೮೭॥

ಆ ಬೆಟ್ಟವು ಮೇಲಕ್ಕೆ ಎತ್ತಿದ ಸಮಯದಲ್ಲೂ, ತಲೆ ಕೆಳಗಾಗಿ ತಿರುಗಿಸಿದಾಗಲೂ ಒಂದು ಸಮಯದಲ್ಲಿಯೂ ವಿಕಾರವನ್ನು ಹೊಂದಲಿಲ್ಲ. (ಮತ್ತೆ ಕೆಳಗೆ ಇಟ್ಟಾಗಲೂ ಸಹ) ಶೈಥಿಲ್ಯವನ್ನೂ ಹೊಂದಲಿಲ್ಲ, ಒಂದೇ ವಿಧವಾಗಿ ಇತ್ತು. ಎಲ್ಲವೂ ಅವನ ಸಂಕಲ್ಪವಷ್ಟೆ.

ಆ ಬೆಟ್ಟವು ಆ ದುಷ್ಕರವಾದ ಏಳು ದಿನಗಳಲ್ಲಿ ಯಾವ ರೀತಿಯಾದ ವಿಕಾರವನ್ನೂ ಹೊಂದಲಿಲ್ಲ. ತಲೆ ಕೆಳಗಾಗಿ ಹಿಡಿದಾಗ ಆಗಲೀ, ಮಳೆ ಅಗಾಧವಾಗಿ ಸುರಿದಾಗಲಾಗಲೀ ಅವನ ಅನುಗ್ರಹದಿಂದ ಅದು ತನ್ನ ನಿಜ ಸ್ವರೂಪವನ್ನು ಸ್ವಲ್ಪವೂ ಕಳೆದುಕೊಳ್ಳಲಿಲ್ಲ. ಅವನ ಸಂಕಲ್ಪವಿದ್ದರೆ, ಯಾವುದೂ ದುಸ್ಸಾಧ್ಯವಲ್ಲ.

ವ್ಯಪೇತ ಶೈಲ ವ್ಯವಧಾನ ದೃಶ್ಯೋ ವಿಭೂಷಿತಃ ಸ್ವೇದಕಣೈಃ ಸ ಬಾಲಃ।
ದಿಶದ್ಭಿರಾಮೋದಮ ಭೌಮಭೋಗ್ಯಂ ದಿವ್ಯೈರವಾಕೀರ್ಯತ ಪುಷ್ಪವರ್ಷೈಃ ॥೮೮॥

ಬೆಟ್ಟದಿಂದ ಮರೆಯಾಗದೆ ಇದ್ದ ಆ ಬಾಲಕೃಷ್ಣನು ಈಗ ಕಣ್ಣಿನಿಂದ ನೇರವಾಗಿ ನೋಡಲ್ಪಡುವನಾದ್ದರಿಂದ ಹಣೆಯಲ್ಲಿ ಬೆವರಿನ ಬೊಟ್ಟುಗಳಿಂದ ಶೋಭಿಸುತ್ತಿದ್ದವನ ಮೇಲೆ ಭೂಮಿಯಲ್ಲಿರುವ ಜನರ ಅನುಭವಕ್ಕೆ ಬರದ ಉತ್ತಮವಾದ ದೇವಲೋಕದ ಪುಷ್ಪಗಳನ್ನು ದೇವತೆಗಳು ವರ್ಷಿಸಿದರು.

ಬೆಟ್ಟವನ್ನು ಎತ್ತಿ ಹಿಡಿದಾಗಲೂ ಅವನ ಯಾರ ಕಣ್ಣಿನಿಂದಲೂ ಮರೆಯಾಗಿರಲಿಲ್ಲ. ಆ ಸಂದರ್ಭದಲ್ಲಿ ಭೂಲೋಕದ ಜನರು ನೋಡದೆ ಇರುವ ದೇವಲೋಕದ ಅಪೂರ್ವ ಪುಷ್ಪಗಳ ರಾಶಿಯನ್ನು ದೇವತೆಗಳು ಕೃಷ್ಣನ ಮೇಲೆ ವರ್ಷಿಸಿದರು.

ನಿವೇಶ್ಯ ಕೃಷ್ಣಂ ಶಕಟೀರಥಾಗ್ರೇ ನಾಥೋಪಚಾರೈರೂಪಸೇದಿ ವಾಂಸಃ।
ಸಗೋಧನಾಃ ಸ್ವಂ ವ್ರಜಮಾವ್ರಜಂತಃ ಸಂಗೀತ ಲೀಲಾಮಭಜಂತ ಗೋಪಾಃ ॥೮೯॥

ರಥದಂತೆ ಬಂಡಿಯಲ್ಲಿ ಮೇಲಿನ ಸ್ಥಾನದಲ್ಲಿ ಶ್ರೀಕೃಷ್ಣನನ್ನು ವೀಕ್ಷಿಸಿ, ಉಪಚಾರಗಳನ್ನು ಮಾಡಿಕೊಂಡು ಸಂತೋಷದಿಂದ ಗೋಪರು, ತಮ್ಮ ಸ್ವತ್ತಾದ ಹಸುಗಳೊಡನೆ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ (ಮರಳಿ) ಬರುವವರಾಗಿ, ನೃತ್ಯ ಗೀತ ವಾದ್ಯಗಳನ್ನು ನಡೆಸಿದರು.

ಆ ಸಂದಭದಲ್ಲಿ ಗೋಪಾಲಕರ ಆನಂದ ಹೇಳತೀರದು. ಬೆಟ್ಟದ ಮೇಲೆ ಉಪಸ್ಥಿತ ನಾಗಿದ್ದ ಶ್ರೀಕೃಷ್ಣನನ್ನು ನೋಡಿ ಅತೀವ ಸಂತೋಷದಿಂದ, ಅವನಿಗೆ ಷೋಡಷೋಪಚಾರ ಗಳನ್ನು ಮಾಡಿಕೊಂಡು, ತಮ್ಮತಮ್ಮ ಸ್ವಸ್ಥಾನಗಳಿಗೆ, ಹಾಡುತ್ತಾ ಕುಣಿಯುತ್ತಾ ಹಿಂತಿರುಗ ಲಾರಂಭಿಸಿದರು.

ಕಚ್ಚಿನ್ನ ಖಿನ್ನೋಽಸಿ ವಹನ್ ಗಿರೀಂದ್ರಂ ಕಚ್ಚಿನ್ನವಿಮ್ಲಾಯತಿ ಪಾಣಿಪದ್ಮಮ್।
ಇತಿ ಬ್ರುವಾಣಾಃ ಸುಹೃದೋ ಮುಕುಂದಂ
ಪರ್ಯಾಕುಲಾಃ ಪಸ್ಪೃಶು ರಂಗಮಂಗಮ್ ॥೯೦॥

ಸ್ನೇಹಿತರುಗಳು ಒಂದು ರೀತಿ ಕೈ ನೀಡಿ ಕಣ್ಣಾ, ದೊಡ್ಡ ಬೆಟ್ಟವನ್ನು ಎತ್ತಿದ್ದೀಯೇ! ಆಯಾಸವಾಗಿದೆಯೇ, ನಿನ್ನ ಹಸ್ತಾರವಿಂದವು ಬಾಡದೇ ಇದೆಯೇ ಎಂದೆಲ್ಲಾ ಕೇಳಿಕೊಂಡು ಅವನ ಒಂದೊಂದು ಅಂಗವನ್ನು ತಡವುತ್ತಾ ಅವನನ್ನು ಉಪಚರಿಸುತ್ತಿದ್ದರು.

ಶ್ರೀಕೃಷ್ಣನನ್ನು ಅವನ ಸಖರೆಲ್ಲರೂ ಉಪಚರಿಸಿದ ರೀತಿಯನ್ನು ವರ್ಣಿಸುತ್ತಿದ್ದಾರೆ. ಅವನಿಗೆ ಆಯಾಸವಾಗಿರಬಹುದೆಂದು ಕೆಲವರು, ಅವನಿಗೆ ಬಾಯಾರಿಕೆ ಆಗಿರಬಹುದೆಂದು ಕೆಲವರು, ಹಸಿವಾಗಿರಬಹುದೆಂದು ಕೆಲವರು, ಮೈ ಕೈ ಎಲ್ಲಾ ನೋವಾಗಿರಬಹುದೆಂದು ಕೆಲವರು, ಹೀಗೆ ವಿವಿಧ ರೀತಿಯಲ್ಲಿ ಅವನ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು.

ಅಥಾವತೀರ್ಯ ಸ್ವಯಮಂತರಿಕ್ಷಾದನುಂಜಿತೈ ರಾವತ ದಾನವರ್ಷಾತ್।
ವಿಲಕ್ಷಚಿತ್ತೋ ವಸುದೇವ ಸೂನುಂ ವಲುಸ್ಮಿತಂ ವಜ್ರ ಮೃದಾ ಸಸಾದ ॥ ॥೯೧॥

ಮತ್ತೆ ಮಳೆ ಹುಯ್ಯುವುದು ನಿಂತು ಐರಾವತ ಆನೆಯ ಮದಜಲವನ್ನು ಮಾತ್ರ ಉಳ್ಳ ಆಕಾಶದಿಂದ ಕೆಳಗೆ ಇಳಿದು ಇಂದ್ರನು ತಾನು ನಾಚಿಕೆ ಉಳ್ಳವನಾಗಿ ಹಸನ್ಮುಖಿಯಾಗಿ ಶ್ರೀಕೃಷ್ಣನ ಸಮೀಪಕ್ಕೆ ಬಂದನು.

ಮಳೆಯ ಆರ್ಭಟ ನಿಂತಿತು. ಇಂದ್ರನು ಆಕಾಶದಿಂದ ಕೆಳಗೆ ಇಳಿದು ಬರುವಾಗ (ಶ್ರೀಕೃಷ್ಣನನ್ನು ದರ್ಶಿಸಲು) ಅವನ ವಾಹನವಾದ ಐರಾವತದ ಮದ ಜಲವು ಮಾತ್ರ ಕೆಳಕ್ಕೆ ಸುರಿಯುತ್ತಿತ್ತು. ಇಂದ್ರನಿಗೆ ತಾನು ಮಾಡಿದ ಕೃತ್ಯದಿಂದ ನಾಚಿಕೆ ಆದರೂ ಅದನ್ನು ತೋರಗೊಡದೆ ಹಸನ್ಮುಖಿಯಾಗಿ ಶ್ರೀಕೃಷ್ಣನ ಪಾದಾರವಿಂದದ ದರ್ಶನಕ್ಕೆ ಅವನ ಸಮೀಪ ಬಂದು ನಿಂತನು.

ಪುರೋ ದದಾನಃ ಸುರಭಿಂ ಪ್ರತೀಕ್ಷ್ಯಾ ಮಾಜಗ್ಮುಷೀ ಮಾತ್ಮಭುವೋ ನಿಯೋಗಾತ್।
ಅಪತ್ರ ಪಾಗದ್ಗದಮಾ ಬಭಾಷೆ ಬಧ್ವಾಂಜಲಿಂ ಬಾಲ ಮುಪೇಂದ್ರಮಿಂದ್ರಃ ॥೯೨॥

ಇಂದ್ರನು ಹಿಂದೆ ತನಗೆ ಸಹಾಯ ಮಾಡಲು ಉಪೇಂದ್ರನಾಗಿ ತೋರಿ ಆದರೆ ಇಲ್ಲಿ ಬಾಲನಾಗಿರುವ ಕೃಷ್ಣನಿಗೆ ಕೈ ಮುಗಿದು ಬ್ರಹ್ಮನ ಆಜ್ಞೆಯಿಂದ ಶ್ರೀಕೃಷ್ಣನಿಗೆ ಪೂಜೆ ಮಾಡಲು ಬಂದು ತನ್ನಿಂದ ಗೌರವಿಸಲ್ಪಡಬೇಕಾದದ್ದೂ, ಎಲ್ಲರಿಂದಲೂ ಆಸೆಪಡಲ್ಪಡುವುದು ಆದ ಕಾಮಧೇನುವಿನ ಎದುರಿನಲ್ಲಿ ನಿಂತುಕೊಂಡು ನಾಚಿಕೆಯಿಂದ ಗದ್ಗದ ಕಂಠದಿಂದ ಹೇಳ ತೊಡಗಿದನು.

ಈ ಹಿಂದೆಯೂ ಭಗವಂತನು ಇಂದ್ರನಿಗೆ ಉಪೇಂದ್ರನಾಗಿ ಸಹಾಯ ಮಾಡಿದ್ದಾನೆ. ಅದನ್ನೆಲ್ಲಾ ನೆನೆದು, ಪಶ್ಚಾತ್ತಾಪದಿಂದ, ಬ್ರಹ್ಮನ ಆಜ್ಞೆಯಂತೆ ಶ್ರೀಕೃಷ್ಣನನ್ನು ಪೂಜಿಸಲು ನಿರ್ಧರಿಸಿ, ಅವನ ಎದುರಿನಲ್ಲಿ ನಿಂತು ಅವನನ್ನು ಸ್ತೋತ್ರ ಮಾಡತೊಡಗಿದನು.

ನಾಥ ತ್ವಯಾ ನರ್ಮವಿಹಾರಭಾಜಾ ವಿಮೋಹಿತೋ ವಿಪ್ರಸಿ ಸಾರಿತಶ್ಚ।
ಅಕಿಂಚನಸ್ತ್ವಾಮ್ ಮಹಮಾಶ್ರಿತಃ ಸನ್ ಕ್ಷಿಪ್ತಾಪಕಾರೋ ನ ಬಹಿಷ್ಕ್ರಿಯಾರ್ಹಃ॥೯೩॥

ಸರ್ವೇಶ್ವರನೇ ನೀನು ಆಟವಾಡುವಂತೆ ನನ್ನನ್ನು ಮೋಹಗೊಳಿಸಿದೆ. ಅಪರಾಧ ಮಾಡಿದ ಮೇಲೆ ಅನುತಾಪಪಡುವಂತೆ ಮಾಡಿದೆ. ನಾನು ಮಾಡಿದ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬಯಸುತ್ತೇನೆ. ಆದ್ದರಿಂದ ನಿನ್ನನ್ನು ಶರಣು ಹೊಂದುತ್ತೇನೆ. ಆ ರೀತಿ ಅಪರಾಧ ನೀಗಲ್ಪಟ್ಟ ನನ್ನನ್ನು ನಿರಾಕರಿಸದೆ ಸ್ವೀಕರಿಸಬೇಕು.

ಪ್ರಭೋ! ನಿನ್ನಲ್ಲಿ ಮಹಾಪರಾಧ ಮಾಡಿದ್ದೇನೆ. ಈಗ ಪಶ್ಚಾತ್ತಾಪ ಪಟ್ಟು ನಿನ್ನಲ್ಲಿ ಶರಣಾಗತನಾಗಿದ್ದೇನೆ. ಶರಣಾಗತ ವತ್ಸಲನಾದ ನೀನು, ನನ್ನನ್ನು ತಿರಸ್ಕರಿಸದೆ, ನನ್ನ ಪೂಜೆಯನ್ನು ಸ್ವೀಕರಿಸಿ ನನ್ನನ್ನು ಉದ್ಧರಿಸಬೇಕು.

ಕೃತಾಪರಾಧೇಷ್ವಪಿ ಸಾನುಕಂಪಂ ಕ್ಷೇಮಂಕರಂ ಕ್ಷೇತ್ರವಿವೇಚಕಾನಾಮ್ ।
ವಿಶ್ವೋಪಕಾರಾಧ್ವರ ಬದ್ಧದೀಕ್ಷಂ ವೇದ್ಯಂ ಪರಂ ವೇದವಿದೋ ವಿದುಸ್ತ್ವಾಮ್ ॥೯೪॥

ತಪ್ಪು ಮಾಡಿದವರ ಬಳಿ ಕರುಣೆ ತೋರಿಸುವವನೂ, ದೇಹ, ಬೇರೆ ಆತ್ಮಾ ಬೇರೆ ಎಂಬ ವಿವೇಕ ಹೊಂದಿ ಅಹಂಕಾರ ನೀಗಿಕೊಂಡವರಿಗೆ ಕ್ಷೇಮ ಉಂಟುಮಾಡುವವನೂ, ಎಲ್ಲಾ ಲೋಕಗಳಿಗೂ ಉಪಕಾರ ಮಾಡುವ ಯಾಗದಲ್ಲಿ ದೀಕ್ಷೆ ವಹಿಸಿರುವವನೂ ಎಲ್ಲರಿಂದಲೂ ಉಪಾಸಿಸಲ್ಪಡುವವನೂ ಆದ ಪರಮಾತ್ಮನೇ ನೀನು ಎಂದು ವೇದವನ್ನು ತಿಳಿದವರು ಹೇಳುತ್ತಾರೆ.

ಭಗವಂತನ ಗುಣಗಳನ್ನು ಇನ್ನು ಮುಂದೆ ವರ್ಣಿಸಲಾಗಿದೆ. ಅನೇಕ ವೇದಾಂತಾರ್ಥಗಳನ್ನು ಪ್ರಚುರಪಡಿಸುವ ಶ್ಲೋಕಗಳಿವು. ವೇದವೇದ್ಯನಾದ ಭಗವಂತನೇ ಸರ್ವರಿಂದಲೂ ಉಪಾಸಿಸಲ್ಪಡುತ್ತಾನೆ.

ನಿಗೃಹ್ಣತಸ್ತೇ ಸೃಜತಶ್ಚ ವರ್ಷಂ ನಿಮಿತ್ತಭಾವೆ ನಿಹಿತೈಸ್ತ್ವಯೈವ ।
ಪ್ರವರ್ತತೆ ನಿಷ್ಪ್ರತಿಪೋ ವಿಹಾರಃ ಸ್ವಯಂ ಪ್ರಯುಕ್ತೈರಿವ ಯಂತ್ರಭೇದೈಃ ॥೯೫॥

ಮಳೆಯನ್ನು ನಿಲ್ಲಿಸುವುದೇ ಹುಯ್ಯುವುದೋ ಎಲ್ಲವೂ ನಿನ್ನ ಅಧೀನ. ಮಿಕ್ಕವರೆಲ್ಲಾ ನಿನಗೆ ಸೇರಿದವರು. ಮಿಕ್ಕವರೆಲ್ಲಾ ನಿನಗೆ ಸೇರಿದವರು. ಅಚೇತನರುಗಳಾದ ಯಂತ್ರಗಳಂತೆ ಇರುವವರು. ನೀನು ನಮ್ಮನ್ನು ಯಂತ್ರಗಳಂತೆ ಆಡಿಸುವುದರಿಂದ ನಿನ್ನ ಲೀಲೆಯು ತಡೆಯಿಲ್ಲದೆ ನಡೆಯುತ್ತದೆ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಾಂ ಯಂತ್ರಾರೂಢಾನಿ ಭಾರತ ॥

ಎಂದು ಗೀತೆಯಲ್ಲಿ ಹೇಳಿರುವಂತೆ, ಜಗತ್ತಿನ ಸಮಸ್ತ ಚರಾಚರ ವಸ್ತುಗಳನ್ನು ಭಗವಂತನು ಯಂತ್ರಗಳಂತೆ ತನ್ನ ಮಾಯೆಯಿಂದ ಆಡಿಸುತ್ತಾನೆ. ಎಲ್ಲವೂ ಅವನಿಗೆ ಅಧೀನ. ಅವನ ಲೀಲೆಗೆ ಎಂದಿಗೂ ಕುಂದಿಲ್ಲ. ಇದನ್ನು ಸರಿಯಾಗಿ ಅರಿಯದೆ, ಅಹಂಕಾರದಿಂದ ನಾನು ವರ್ತಿಸಿದೆ. ನನ್ನನ್ನು ಕ್ಷಮಿಸು.

ಅನನ್ಯ ಸಾಧಾರಣ ಪಾರಮೇಷ್ಠ್ಯಾತ್ ಅನ್ಯಾನ್ ಅಶೇಷಾನ್ ಅತಿಸಂದಧಾನಾತ್ ।
ಗೋಪಾಯಿತುಂ ಪಾರಯತಿ ತ್ರಿಲೋಕೀಂ ಗೋಪಾಯಮಾನಾದಪಿ ನ ತ್ವದನ್ಯಃ॥೯೬॥

ಪ್ರಜೆಗಳನ್ನು ಅವತಾರಗಳನ್ನು ಹೊಂದಿ ತನ್ನನ್ನು ತಂದೆಯಾಗಿ ತೋರಿಸಿ ವಂಚನೆ ಮಾಡುವವನಾಗಿ ಗೋಪನಾಗಿ ತೋರಿರುವುದರಿಂದಲೂ ಶ್ರೀವೈಕುಂಠವೆಂಬ ನಿತ್ಯವಿಭೂತಿಯಲ್ಲಿ ಬೇರೆ ರೂಪದಲ್ಲಿ ಇದ್ದು, ವಿರಾಜಿಸುವವನಾದ ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ರಕ್ಷಕನಾಗಿ ಭಾವಿಸುವುದಿಲ್ಲ.

"ಅಖಿನ ಭುವನ ರಕಾ ಗೋಪ ವೇಷಸ್ಯ ವಿಷ್ಣೋಃ" ಎಂಬಂತೆ ಸರ್ವೇಶ್ವರನಾದ ಸ್ವಾಮಿಯು ಗೋಪಾಲನ ವೇಷವನ್ನು ಧರಿಸಿ ಸಮಸ್ತ ಜಗತ್ತನ್ನು ಕಾಪಾಡುತ್ತಿದ್ದಾನೆ. ಗೋಪಾಲನೇ ವಿಶ್ವಗೋಪ್ತಾ ಆಗಿದ್ದಾನೆ. ಗೋಪ ರೂಪದಿಂದ ಶೈಲವನ್ನು ಎತ್ತಿ ನನ್ನ ಅಹಂಕಾರ ವನ್ನು ಉರಿದಿದ್ದೀಯೇ! ನಿನಗೆ ನಮನ.

ವ್ರಜೌ ಕಸಾಂ ನಾಥ ದಿವೌಕಸಾಂ ವಾ ವಿಪತ್ಪ್ರಸಂಗೇ ವಿಹಿತಾವತಾರಃ।
ಏಕಸ್ತ್ವಮೇವ ಸ್ವಯಮೀಪ್ಸಿತಾನಾಂ ದಯಾ ಸಹಾಯೋ ನಿಯಮೇನ ದಾತಾ॥೯೭॥

ಗೋಪರ ಕೇರಿಯಲ್ಲಿ ಇರುವವರಿಗೆ ನಾಥನಾಗಿಯೂ, ಸ್ವರ್ಗವಾಸ ಮಾಡುವವರಿಗೂ ನಾಥನಾಗಿಯೂ ಕಷ್ಟವು ಬರುವ ಕಾಲದಲ್ಲಿ ಅವತರಿಸಿ ಅವರುಗಳಿಗೆ ಬೇಕಾದ ಪ್ರೀತಿ ತೋರಿಸುತ್ತಾ ತಪ್ಪದೆ ಕಾಪಾಡುವವನೂ ನೀನೇ.

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂಬ ನಿನ್ನ ವಾಕ್ಯಕ್ಕನುಸಾರವಾಗಿಯೇ ನೀನು ಆಗಾಗ್ಗೆ ಅವತಾರಗಳನ್ನು ಮಾಡಿ ಜಗತ್ತನ್ನು ಉದ್ಧರಿಸುತ್ತೀಯೇ. ಅಂಥ ಅವತಾರಗಳಲ್ಲಿ ಈ ನಿನ್ನ ಕೃಷ್ಣಾವತಾರವು ಅತ್ಯಂತ ಶ್ರೇಷ್ಠವಾದದ್ದು.

ಸ್ವರೂಪತೋ ವಿಗ್ರಹತಶ್ಚ ವಿಶ್ವಂ ನಿತ್ಯಂ ತ್ವಯೈಕೇನ ಧೃತಂ ಯದೇತತ್।
ತದೇಕ ದೇಶೋದ್ವಹ ನಾದ ಮುಷ್ಮಾತ್ ನ ವಿಸ್ಮಯಂ ತತ್ವವಿದೋ ಭಜಂತಿ ॥೯೮॥

ತತ್ವ ತಿಳಿದವರು ನೀನು ಈ ಬೆಟ್ಟವನ್ನು ಎತ್ತಿದ್ದಕ್ಕೆ ಆಶ್ಚರ್ಯ ಪಡುವುದಿಲ್ಲ. ಏಕೆಂದರೆ, ನೀನು ನಿನ್ನ ಪರಮಾತ್ಮ ಸ್ವರೂಪವನ್ನು ಹೊಂದಿ ಸಂಕಲ್ಪ ಮಾತ್ರದಿಂದಲೇ ಸರ್ವಕ್ಕೂ ಆಧಾರ ನಾಗಿರುವವನು. ಅಲ್ಲದೆ ದಿವ್ಯ ಶರೀರದಿಂದ ಎಲ್ಲವನ್ನೂ ಧರಿಸುತ್ತೀಯೆ.

(ವಿಶ್ವರೂಪ ದರ್ಶನ ಆಲದ ಎಲೆಯ ಮಲಗಿ ಬ್ರಹ್ಮಾಂಡ ದರ್ಶನ ಇತ್ಯಾದಿ). ಜ್ಞಾನಿಗಳಾದ ಮಹನೀಯರು ನಿನ್ನ ನಿಜ ಸ್ವರೂಪವನ್ನು ಬಲ್ಲವರಾಗಿರುವುದರಿಂದ, ಈ ನಿನ್ನ ಗಿರಿಯನ್ನು ಎತ್ತಿದ ಕಾರ್ಯ ಅವರಿಗೆ ದೊಡ್ಡದಾಗಿ ತೋರುವುದಿಲ್ಲ. ಏಕೆಂದರೆ ನೀನು ಸರ್ವಶಕ್ತನು.

ಪ್ರಯೋಜಿತೋಽಹಂ ತ್ವಯಿ ಭಕ್ತಿ ಬಂಧಾತ್ ಗೋಭಿಃ ಸ್ವಲೋಕಾದುಪಸೇದುಷೀಭಿಃ।
ಇಚ್ಛಾಮಿ ಸಂರಕ್ಷಿತ ಗೋವ್ರಜಂ ತ್ವಾಂ ಸ್ಥಾನೇ ಗವಾಮಿಂದ್ರ ತಯಾಽಭಿಷೇಕ್ತುಂ ॥೯೯॥

ತಮ್ಮ ಆಸೆಗಳನ್ನು ಕಾಯುವ ನಿನ್ನಲ್ಲಿ ಉತ್ತಮ ಭಕ್ತಿಯಿಂದ ಸ್ವರ್ಗದಿಂದ ಬಂದ ಕಾಮಧೇನುಗಳಿಂದ ಪೂಜಿಸಲ್ಪಡುವ ನಿನಗೆ. ಗೋವುಗಳಿಗೆ ಇಂದ್ರನಾಗಿ (ಗೋವಿಂದನಾಗಿ) ಅಭಿಷೇಕ ಮಾಡಲು ಇಚ್ಛಿಸುತ್ತೇನೆ.

ಅಂತಹ ಸರ್ವಸ್ವಾಮಿಯಾದ, ಗೋವುಗಳಿಗೆ ನಾಥನಾದ ನಿನಗೆ, ಗೋವಿಂದನಾದ, ನಿನಗೆ, ನಾನು ನನಗೆ ಜ್ಞಾನೋದಯ ಉಂಟುಮಾಡಿದ್ದಕ್ಕಾಗಿ, ನಿನಗೆ ಅಭಿಷೇಕ ಮಾಡಲಿಚ್ಛಿಸುತ್ತೇನೆ. ದಯವಿಟ್ಟು ಆ ನನ್ನ ಕೈಂಕರ್ಯವನ್ನು ಸ್ವೀಕರಿಸಬೇಕು. ಕಾಮಧೇನುವೇ ನಿನಗೆ ಅಭಿಷೇಕ ಮಾಡುತ್ತದೆ.

ತಿರೋಹಿತಾಮಂಭಸಿ ವಿಂದತಾ ಗಾಂ ಪೂರ್ವಂ ತ್ವಯಾ ಪೋತ್ರಿವರೇಣ ಲಬ್ಧಾ।
ನಿರುಕ್ತನಿಷ್ಣಾತ ಕೃತಾಭ್ಯನುಜ್ಞಾ ವ್ಯಕ್ತಿಂ ಪುನರ್ಯಾತು ಶುಭಾ ತ್ವದಾಖ್ಯಾ ॥೧೦೦॥

ನೀರಿನಲ್ಲಿ ಮರೆಯಾದ ಪೂರ್ತಿ ಭೂಮಿಯನ್ನು ಮಹಾ ವರಾಹನಾಗಿ ಹಿಂದೆಯೂ ಎತ್ತಿ ಕಾಪಾಡಿರುವುದರಿಂದ, ಗೋವಿಂದನೆಂಬ ದಿವ್ಯವಾದ ಹೆಸರು ನಿನಗೆ ಏರ್ಪಟ್ಟಿದೆ. ಸಚ್ಛಾಸ್ತ್ರಗಳನ್ನು ಚೆನ್ನಾಗಿ ಅರಿತವರಿಂದಲೂ ಇದು ಸಮ್ಮತಿಸಲ್ಪಟ್ಟಿದೆ. ಅದನ್ನು ಇಲ್ಲಿ ಮತ್ತೊಮ್ಮೆ ಪ್ರಕಾಶಪಡಿಸಬೇಕು.

ಈ ಹಿಂದೆಯೇ ನಿನಗೆ ಭೂಮಿಯನ್ನು ಕಾಪಾಡಿದ್ದರಿಂದ (ವರಾಹಾನಾಗಿ) ನಿನಗೆ 'ಗೋವಿಂದ'ನೆಂಬ ಹೆಸರು ಪ್ರಾಪ್ತವಾಗಿದೆ. ಅದನ್ನು ಮತ್ತೊಮ್ಮೆ ನನ್ನ ಮೂಲಕ ಪ್ರಚುರಪಡಿಸು. ನನಗೆ ಅನುಗ್ರಹ ಮಾಡು. ಈಗ ಗೋವುಗಳನ್ನು ಕಾಪಾಡಿದ್ದರಿಂದ 'ಗೋವಿಂದ' ನೆಂಬ ಹೆಸರು ಹೆಚ್ಚು ಪ್ರಸಿದ್ಧಿ ಪಡೆಯಲಿ.

ಉಪೇಂದ್ರಭೂತಾದ್ಭವತೋಽಪಿ ಭೂಮ್ನಾ ಮಾನ್ಯೋ ಮನುಷ್ಯಾಭಿನಯೋ ಮಯಾತ್ವಂ।
ಅಭ್ಯರ್ಥ ನಾಮಾದರತಸ್ತದೇನಾಂ ಪ್ರತೀಚ್ಛ ವಿಶ್ವಂಭರ ವಿಶ್ವಭೃತ್ಯೈ ॥೧೦೧॥

ಉಪೇಂದ್ರನಾದ ನೀನು ಅವತರಿಸಿರುವ ನಿಲುವಿಗಿಂತಲೂ ಈ ಗೋಪನ ಅವತಾರವು ನನ್ನಿಂದ ವಿಶೇಷವಾಗಿ ಗೌರವಿಸಲ್ಪಟ್ಟಿದೆ. ಆದ್ದರಿಂದ ಸರ್ವ ರಕ್ಷಕನೇ! ಎಲ್ಲರ ಕ್ಷೇಮಕ್ಕಾಗಿ ಈ ಬೇಡಿಕೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕು.

ಈ ಹಿಂದೆ ಉಪೇಂದ್ರನೆಂಬ ಹೆಸರಿನಿಂದ ನನ್ನನ್ನು ಅನುಗ್ರಹಿಸಿದ್ದಕ್ಕಿಂತ ಈಗ ಗೋವುಗಳನ್ನು ರಕ್ಷಿಸಲು ಗೋವರ್ಧನ ಗಿರಿಯನ್ನು ಎತ್ತಿ, ನನ್ನನ್ನೂ ವಿಶೇಷವಾಗಿ ಅನುಗ್ರಹಿಸಿದ್ದೀಯೆ. ಈಗ ನಾನು ಮಾಡುವ ಪ್ರಾರ್ಥನೆಯಾದ ''ಗೋವಿಂದ ಪಟ್ಟಾಭಿಷೇಕ'' ಮಹೋತ್ಸವವನ್ನು ಸ್ವೀಕರಿಸಿ ನನ್ನನ್ನು ಉದ್ಧರಿಸಿ, ನನ್ನ ಹೆಸರು ಶಾಶ್ವತವಾಗಿ ನಿನ್ನ ಭಕ್ತರ ಸಾಲಿನಲ್ಲಿ ಸೇರುವಂತೆ ಮಾಡಬೇಕು. ಯದುವಂಶದಲ್ಲಿ ಹುಟ್ಟಿದ ನಿನಗೆ ರಾಜ್ಯಾಭಿಷೇಕ ಇಲ್ಲವಾದರೂ, ನಾನು ಮಾಡುವ ಈ ಅಭಿಷೇಕವನ್ನು ಸ್ವೀಕರಿಸಿ, ನೀನೂ ಚಕ್ರವರ್ತಿಗಳ ಪಂಕ್ತಿಗೆ ಸೇರುವವನಾಗು.

ಇತಿ ಬ್ರವಾಣೋ ಮಘವಾನ್ ಧೃತಾದ್ರೇಃ ಶ್ರಾಂತಿಂ ಜಗದ್ಧಾತುರಿ ವಾಪನೇಷ್ಯನ್ ।
ಧ್ಯಾತೋಪಯಾತಾಂ ತ್ರಿದಶ ಪ್ರಣೇತಾ ದಿವ್ಯಾಪಗಾಂ ದರ್ಶಯತಿಸ್ಮ ದೇವೀಂ ॥೧೦೨॥

ದೇವತೆಗಳೆಲ್ಲರನ್ನೂ ಆಳುವ ಇಂದ್ರನು ಅಷ್ಟು ಪ್ರಾರ್ಥಿಸಿದ ಮೇಲೆ ಜಗತ್ತನ್ನೆಲ್ಲಾ ರಕ್ಷಿಸುವ ಪರಮಾತ್ಮನಿಗೆ ಬೆಟ್ಟವನ್ನು ಎತ್ತಿದ್ದರಿಂದ ಆಗಿದ್ದ ಆಯಾಸವನ್ನು ಪರಿಹರಿಸಲು, (ಯಾವ ಆಯಾಸವು ಇಲ್ಲದಿದ್ದರೂ) ದೇವಗಂಗೆಯನ್ನು ಸ್ಮರಿಸಿದಾಗ, ಆ ನದಿಯ ಕೆಳಗಿಳಿದು ಬಂತು. ಅದನ್ನು ನೋಡಿ ದೇವೇಂದ್ರನು ತನ್ನ ಇಷ್ಟವನ್ನು ಅದಕ್ಕೆ ತಿಳಿಸಿದನು.

ಶ್ರೀಕೃಷ್ಣನು ಇಂದ್ರನ ಪ್ರಾರ್ಥನೆಯನ್ನು ಅಂಗೀಕರಿಸಿ, ಪಟ್ಟಾಭಿಷಿಕ್ತನಾಗಲು ಒಪ್ಪಿದನು. ಆಗ ಭೂಮಿಯಲ್ಲಿ ಹರಿಯುವ ನೀರಿನಿಂದ ಅಭಿಷೇಕ ಮಾಡಲಿಚ್ಛಿಸದೆ, ಸ್ವರ್ಗದಲ್ಲಿ ಹರಿಯುವ ದೇವಗಂಗೆಯನ್ನೇ ದೇವಂದ್ರನು ತರಿಸಿದನು. ದಿವ್ಯವಾದ ಗಂಗೆಯ ನೀರಿನಿಂದ ಅಭಿಷೇಕ ಮಾಡುವುದರಿಂದ, ಗಿರಿಯನ್ನು ಎತ್ತಿ ಏಳು ದಿನಗಳು ಹಿಡಿದಿದ್ದರಿಂದ ಆಗಿದ್ದ ಶರೀರಾಯಾಸವೆಲ್ಲವೂ ನೀಗಿ, ಶ್ರೀಕೃಷ್ಣನಿಗೆ ನವಯೌವನ ಪ್ರಾಪ್ತವಾದಂತಾಯಿತು.

ಅಭೌಮ ಗಂಗಾ ಪಯಸಾ ಪ್ರಪೂರ್ಣಾ ಮಾವರ್ಜಯನ್ ವಾರಣರಾಜ ಘಂಟಾಂ।
ಅಶೇಷ ಸಾಮ್ರಾಜ್ಯ ಪದಾಭಿಷಿಕ್ತಂ ಗುಪ್ತೈ ಗವಾಂ ಗೋತ್ರಭಿದಭ್ಯಷಿಂಚತ್ ॥೧೦೩॥

ಬೆಟ್ಟಗಳನ್ನು ನಿಯಮಿಸುವ ಮಹೇಂದ್ರನು ಉಭಯ ವಿಭೂತಿ ನಾಯಕನಾಗಿ ಸರ್ವ ಸಾಮ್ರಾಜ್ಯ ಸಾರ್ವಭೌಮ ಸ್ಥಾನದಲ್ಲಿ ಶ್ರೀಕೃಷ್ಣನಿಗೆ ತಾನೇ ಅಭಿಷೇಕ ಮಾಡಲಿಚ್ಛಿಸಿ, ಪರಮಾತ್ಮನಾದ ಕೃಷ್ಣನಿಗೆ ಆಕಾಶದಲ್ಲಿರುವ ದೇವಗಂಗೆಯನ್ನು ಐರಾವತದ ಮೇಲೆ ಇರಿಸಿರುವ ಕೊಡದಲ್ಲಿ ತುಂಬಿ, ತರಿಸಿ ಪೂರ್ಣ ಭಕ್ತಿಯಿಂದ ಅಭಿಷೇಕ ಮಾಡಿದನು.

(ಕಾಮಧೇನುವಿದ್ದರೂ ಮೊದಲು ತೀರ್ಥಾಭಿಷೇಕ ಅಗತ್ಯ).

ಇಂದ್ರನು ಶ್ರೀಕೃಷ್ಣನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ಶ್ರೀರಾಮನಿಗೆ ಋಷಿಗಳೆಲ್ಲರೂ ಸೇರಿ ಅಭಿಷೇಕ ಮಾಡಿದ ಹಾಗೆ, ಐರಾವತದ ಮೇಲೆ ಇಟ್ಟು ತರಿಸಿದ್ದ, ದೇವಗಂಗೆಯ ನೀರು ತುಂಬಿದ್ದ ಕೊಡದಿಂದ ಪವಿತ್ರವಾದ ಮಂಗಳಸ್ನಾನ ಅಭಿಷೇಕವನ್ನು ಮಾಡಿದನು. ಆನಂತರ ಎಲ್ಲಾ ದೇವತೆಗಳೂ, ಋಷಿಗಳೂ, ಸುವಾಸಿನಿಯರೂ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿದರು. ನಂತರ ಕಾಮಧೇನುವೇ ಸ್ವಯಂ ತನ್ನ ಹಾಲಿನಿಂದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿತು.

ತದಂಗ ಸಂಸ್ಪರ್ಶ ವಶೇನ ಧನ್ಯೈ ರಾಪ್ಲಾವ್ಯ ಮಾನಾಭಿಷೇಕ ತೋಯೈಃ।
ಅಪೇತ ಭಾರಾಮಿವ ಭೂತದಾತ್ರೀ ಮೂಲ್ಲಾಘಿತಾಂ ಪ್ರೈಕ್ಷತ ನಾಕನಾಥಃ ॥೧೦೪॥

ಭಗವಂತನ ಶರೀರ ಸಂಬಂಧ ಹೊಂದಿ ಭಾಗ್ಯ ಹೊಂದಿದ ಅಭಿಷೇಕ ತೀರ್ಥಗಳಿಂದ ಅನೇಕ ವಿಧವಾದ ಪ್ರಾಣಗಳನ್ನು ಧರಿಸುವ ಭೂಮಿಯಾದುದು ನೆನೆಸಲ್ಪಟ್ಟಾಗ, ಭೂಭಾರವು ನೀಗಿ, ರೋಗಗಳು [illegible] ಮದಾಗಿ ಪವಿತ್ರೀಗೊಳಿಸಲ್ಪಟ್ಟ ಹಾಗೆ ಇಂದ್ರನಿಂದ ಭಾವಿಸಲ್ಪಟ್ಟಿತು.

ಶ್ರೀಕೃಷ್ಣನಿಗೆ ಮಾಡಿದ ಅಭಿಷೇಕ ತೀರ್ಥವು ಭೂಮಿಯಲ್ಲೆಲ್ಲಾ ಹರಿಯಿತು. ಭಗವಂತನ ದಿವ್ಯ ಮಂಗಳ ವಿಗ್ರಹದ ಮೇಲೆ ಬಿದ್ದು ಭೂಮಿಗೆ ಹರಿದ ಆ ದಿವ್ಯ ಜಲದ ಪ್ರಭಾವದಿಂದ ಭೂಮಿಯಲ್ಲಿದ್ದ ದುಷ್ಪರ ಕಾಟವು ಕಡಿಮೆಯಾಗಿ, ಸಮಸ್ತ ಪ್ರಾಣಿಗಳಿಗಿದ್ದ ರೋಗಗಳೆಲ್ಲಾ ತೊಲಗಿ, ಭೂದೇವಿಯು ನವಯೌವನ ಪಡೆದಳು. ಇಂದ್ರನೂ ಪವಿತ್ರೀಗೊಳಿಸಲ್ಪಟ್ಟನು.

ಕೃತಾಭಿಷೇಕಃ ಕೃತಿನಾ ಮಘೋನಾ ಗುಪ್ತೇನ ಗೋವಿಂದ ಇತಿ ಸ್ವನಾಮ್ನಾ।
ಕೃತಪ್ರಸಾದಃ ಪ್ರಜಿಘಾಯ ಕೃಷ್ಣಃ ಸ್ವರ್ಗಾಧಿರೋಹಾಯ ಪುನಃ ಸುರೇಂದ್ರಂ ॥೧೦೫॥

ಭಾಗ್ಯಶಾಲಿಯಾದ ಇಂದ್ರನು ಅಭಿಷೇಕ ಮಾಡಿ ಹಿರಿಯರುಗಳಿಂದ ಆಶೀರ್ವದಿಸಲ್ಪಟ್ಟು 'ಗೋವಿಂದ'ನೆಂಬ ದಿವ್ಯ ನಾಮವನ್ನು ಹೇಳಿ, ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರನಾದನು. ಪುನಃ ಶ್ರೀಕೃಷ್ಣನು ಅವನಿಗೆ ಸ್ವರ್ಗಕ್ಕೆ ತೆರಳಲು ಅನುಮತಿಯಿತ್ತನು.

ಶ್ರೀಕೃಷ್ಣನಿಂದ ಅನುಗ್ರಹಿಸಲ್ಪಟ್ಟ ಇಂದ್ರನೂ ಸಹ ಸಕಲರಿಂದಲೂ ಮಾನ್ಯ ಮಾಡಲ್ಪಟ್ಟು ಇನ್ನು ಮುಂದೆ "ಗೋವಿಂದ" ನೆಂಬ ನಾಮವು ಲೋಕದಲ್ಲೆಲ್ಲಾ ಕೀರ್ತಿಸಲ್ಪಡಲು ಎಂದು ಆಶಿಸುತ್ತಾ ತನ್ನ ಸ್ವಸ್ಥಾನವಾದ ಅಮರಾವತಿಗೆ ತೆರಳಲು ಸಿದ್ಧನಾದನು.

ತಿರುಪತಿಯ ಶ್ರೀನಿವಾಸನು ಶ್ರೀಕೃಷ್ಣನ ಪ್ರತಿರೂಪವೆಂದು ಹೇಳುತ್ತಾರೆ. ಆದ್ದರಿಂದಲೇ ತಿರುಪತಿಯಲ್ಲಿ "ಗೋವಿಂದ" ನಾಮಘೋಷವು ಮುಗಿಲನ್ನು ಮುಟ್ಟುತ್ತದೆ. ಗೋವಿಂದ ಪಟ್ಟಾಭಿಷೇಕದ ಸಂಕೇತ ಅದು.

ಪ್ರತಿಗತವತಿ ಯೂಥೇ ಪುಷ್ಕಲಾ ವರ್ತಕಾನಾಂ
ದಿವಿ ಭುವಿ ಚ ನಿಯತ್ಯಾ ದೀರ್ಘ ನಿದ್ರೋಂಜ್ಝಿತಾನಾಮ್।
ಗುಣಗರಿಮ ಸಮೃದ್ಧಂ ಗೋಕುಲಂ ವೀಕ್ಷ್ಯ ತುಷ್ಯನ್
ಗುರುಭಿ ರಭಿ ನಿಯುಕ್ತಾ ಮಾಶಿಷಂ ಪ್ರತ್ಯಗೃಹ್ಣಾತ್ ॥೧೦೬॥

ಪುಷ್ಕಲಾವರ್ತವೆಂಬ ಮೇಘಗಳು ನಾಶವಾಗದೆ, ಭಾಗ್ಯವಶದಿಂದ ಬದುಕುಳಿದು ಮತ್ತೆ ಸ್ವಸ್ಥಾನ ಸೇರಿದವು. ಆಕಾಶದಲ್ಲೂ, ಭೂಮಿಯಲ್ಲೂ ಗೋಕುಲವಾದುದು ಅಗಾಧ ಹಿರಿಮೆಯನ್ನು ಹೊಂದಿತು. ಮೇಘಗಳಿಲ್ಲದೆ, ಬಿಸಿಲು ಚೆನ್ನಾಗಿ ಬರುವುದಿಲ್ಲ. ಆ ಪರಿಸ್ಥಿತಿ ಕಂಡು ಗೋಕುಲದಲ್ಲಿ ಹಿರಿಯರೆಲ್ಲರೂ ಶ್ರೀಕೃಷ್ಣನಿಗೆ ಮಂಗಳಾಶಾಸನವನ್ನು ಮಾಡಿದಾಗ ಅವುಗಳನ್ನು ಸಂತೋಷದಿಂದ ಸ್ವಾಮಿಯು ಸ್ವೀಕರಿಸಿದನು.

ಅಗಾಧ ಮಳೆ ಸುರಿಸಿದ ಮೇಘಗಳು, ಶ್ರೀಕೃಷ್ಣನ ಅನುಗ್ರಹದಿಂದ ಸಂಪೂರ್ಣ ನಾಶವಾಗದೆ, ಆಕಾಶದಲ್ಲಿ ಮತ್ತೆ ತಮ್ಮ ಸ್ವಸ್ಥಾನ ಸೇರಿದವು. ಜಗತ್ತಿನ ಉಳಿವಿಗೆ ಮೇಘಗಳು ಅವಶ್ಯಕ. ಮಳೆಯಿಲ್ಲದಿದ್ದಲ್ಲಿ ಭೂಮಿಯಲ್ಲಿ ಸಸ್ಯಗಳು ಬೆಳೆಯದೆ, ಪ್ರಾಣಿಗಳ ಜೀವನ ದುರ್ಭರವಾಗುತ್ತದೆ. ಆದರೆ ಅತಿ ವೃಷ್ಟಿ ಆಗಬಾರದಷ್ಟೆ. ಇದೇ ನಾವು ಗೋವರ್ಧನ ಗಿರಿಯ ಪ್ರಸಂಗದಿಂದ ನಾವು ಅರಿಯಬೇಕಾದ ನೀತಿ.

ವಿಜಯಶಾಲಿಯಾದ ಶ್ರೀಕೃಷ್ಣನನ್ನು ಗೋಕುಲದ ಹಿರಿಯರೆಲ್ಲರೂ ಅಭಿನಂದಿಸಿ, ಪೂಜಿಸಿ, ಸತ್ಕಾರ ಮಾಡಿದರು.

ಮುಕುಲಿತ ರವಿಧಾಮ್ನಾ ದೇಹದೀಪ್ತ್ಯೈವ ಮುಷ್ಣನ್
ಜಲದ ಕದನ ಜಾತಂ ಜೀವಲೋಕಸ್ಯ ಜಾಡ್ಯಮ್ ।
ವ್ಯಚರದ ಚಲಭಾಗೇ ಚಾರಯನ್ ಧೇನುಚಕ್ರಂ
ಪಿಶುನಿತ ನಿಜಮಾಯಾಂ ಭೂಷಯನ್ ಪಿಂಛಮಾಲಾಮ್ ॥೧೦೭॥

ಮೇಘಗಳು ಭಯ ಹೋಗಲಾಡಿಸಿದ್ದರಿಂದ ಪ್ರಾಣಿಗಳಿಗೆ ಉಂಟಾದ ಛಳಿಯನ್ನು ಕೃಷ್ಣನು ಸೂರ್ಯಕಿರಣಗಳಂತೆ ಪ್ರಕಾಶ ಬೀರುವ ತನ್ನ ದಿವ್ಯ ಶರೀರ ಕಾಂತಿಯಿಂದ ಹೋಗಲಾಡಿಸಿದನು. ಮಾಯೆ ಎಂಬ ಪ್ರಕೃತಿಯನ್ನು ತನಗೆ ವಶವೆಂದೂ ತೋರಿಸಲು ನವಿಲುಗರಿಯ ಮಾಲೆಯನ್ನು ಧರಿಸಿಕೊಂಡು ಬೆಟ್ಟದ ಬುಡದಲ್ಲಿ ಹಸುಕರುಗಳನ್ನು ಮೇಯಿಸುತ್ತಾ ಸಂತೋಷದಿಂದ ವಿಹರಿಸುತ್ತಿದ್ದನು.

ಎಂದಿನಂತೆ ಶ್ರೀಕೃಷ್ಣನು ತನಗೆ ಪ್ರಿಯವಾದ ಹಸುಕರುಗಳನ್ನು ಮೇಯಿಸುವ ಕಾರ್ಯವನ್ನು ನಡೆಸುತ್ತಾ, ಬೃಂದಾವನದಲ್ಲಿ ಗೋಕುಲದಲ್ಲಿ ವಿಹರಿಸುತ್ತಿದ್ದನು. ತಾನೂ ಮಾಯೆಗೂ ಅಧಿಪತಿಯೆಂದು ತೋರಿಸುತ್ತಾ ದಿವ್ಯವಾದ ನವಿಲುಗರಿಯ ಮಾಲೆಯನ್ನು ಧರಿಸಿ, ಗೋಪಸ್ತ್ರೀಯರನ್ನು ಆನಂದಪಡಿಸುತ್ತಾ, ಕಾಲ ಕಳೆಯುತ್ತಿದ್ದನು.

ಪ್ರಣಿಹಿತ ಮಧಿರೋಹನ್ ಪ್ರಾಗಿವಾದ್ರಿಂ ಪೃಥಿವ್ಯಾಮ್
ಅವಮತ ಪುರುಹೂತೈರರ್ಚಿತೋ ಗೋಪಬೃಂದೈಃ ।
ವ್ರಜಪತಿರುಪಸೀದನ್ ಬಾಲಯೋಗ್ಯಾನ್ ವಿಹಾರಾನ್
ವನಚರ ಪರಿಬರ್ಹೋ ವತ್ಸಪಾಲೈಃ ಸಿಷೇವೇ ॥ ॥೧೦೮॥

ಭೂಮಿಯಲ್ಲಿ ನಿಲ್ಲಿಸಲ್ಪಟ್ಟ ಬೆಟ್ಟದ ಮೇಲೆ ಹಿಂದಿನಂತೆ ಹತ್ತಿ ನಿಂತು ಇಂದ್ರನನ್ನು ಭಾವಿಸದ ಗೋಪಾಲಕರ ಸಮೂಹಗಳಿಂದ ಗೌರವಿಸಲ್ಪಟ್ಟು, ಗೋಪಾಲಕರ ಕೇರಿಗೆ ನಾಥ ನಾಗಿದ್ದೂ, ಚಿಕ್ಕಮಕ್ಕಳಂತೆ, ಕಾಡಿನಲ್ಲಿ ಬೇಟೆಯಾಡುತ್ತಾ, ಅವರುಗಳಿಗೆ ಸಹಾಯ ಮಾಡಿ ಕೊಂಡು, ಕಾಡಿನಲ್ಲಿರುವ ವಸ್ತುಗಳನ್ನು ತನಗಾಗಿ ತೆಗೆದುಕೊಂಡು ಕರುಗಳನ್ನು ಮೇಯಿಸುವ ಹುಡುಗರೊಡನೆ ಆನಂದದಿಂದ ಇದ್ದನು ಆ ಸ್ವಾಮಿ ಶ್ರೀಕೃಷ್ಣನು.

ಇನ್ನು ಮುಂದೆ ಇಂದ್ರನು ನಿಮ್ಮ ತಂಟೆಗೆ ಬರುವುದಿಲ್ಲ, ನೀವು ಧೈರ್ಯವಾಗಿ ಗೋವರ್ಧನ ಗಿರಿಯ ಮೇಲೆ ವಿಹರಿಸಿ, ನಿಮಗೆಲ್ಲರಿಗೂ ಕ್ಷೇಮವುಂಟಾಗುವುದು ಎಂದು ಗೋಪಾಲಕರಿಗೆಲ್ಲಾ ಅಭಯ ನೀಡಿ, ಶ್ರೀಕೃಷ್ಣಸ್ವಾಮಿಯು ಎಂದಿನಂತೆ ತನ್ನ ದೈನಂದಿನ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಾ ಗೋಪಾಲಕರೊಡನೆ ಆಟವಾಡಿಕೊಂಡಿದ್ದನು.

ನಾಥಃ ಸೋऽಯಂ ಶಿಶುರಪಿ ಸತಾಂ ನಂದಗೋಪಸ್ಯ ಸೂನುಃ
ಪ್ರಾಯಃ ಶೈಲಃ ಪ್ರತಿನಿಧಿ ರಸೌ ಪದ್ಮನಾಭಸ್ಯ ಪುಂಸಃ।
ಕಿಂ ನಃ ಸಾಧ್ಯಂ ಸುರಪತಿ ಮುಖ್ಯೈಃ ಕಿಂಪಚಾನ್ಯೈ ಸ್ತದನ್ಯೈಃ
ಸಾಕಂ ದಾರೈರಿತಿ ಕಿಲ ಜಗು ಸ್ತತ್ರ ಸಂಭೂಯ ಗೋಪಾಃ॥ ॥೧೦೯॥

ಬೆಟ್ಟವನ್ನು ಎತ್ತಿದ ನಂದಗೋಪಕುಮಾರನು ಬಾಲನಾಗಿದ್ದೂ ಸತ್ಪುರುಷರಿಗೆ ನಾಥನು. ಪದ್ಮನಾಭನೆಂಬ ಭಗವಂತನಿಗೆ ಪ್ರತಿನಿಧಿಯಾಗಿ, ನಮಗೆ ಈ ಬೆಟ್ಟವು ತೋರುತ್ತದೆ. ಏನೂ ಮಾಡಲು ಸಾಧ್ಯವಾಗದ ಇಂದ್ರಾದಿಗಳಿಂದ ನಮಗೆ ಆಗಬೇಕಾದದ್ದೇನು' ಎಂಬುದಾಗಿ ಗೋಪಾಲಕರು ತಮ್ಮ ಹೆಂಡತಿಯರನ್ನು ಸೇರಿ ಮಾತನಾಡಿಕೊಳ್ಳುತ್ತಿದ್ದರು.

ಇಲ್ಲಿಗೆ ಗೋವರ್ಧನ ಧಾರಣವೆಂಬ ಸಪ್ತಮ ಸರ್ಗವು ಮುಗಿದುದು

ಗೋಪಾಲಕರೆಲ್ಲರೂ, ತಮ್ಮ ತಮ್ಮ ಮಡದಿಯರೊಡಗೂಡಿ ಶ್ರೀಕೃಷ್ಣನ ಅದ್ಭುತ ಲೀಲೆಗಳನ್ನು ಸ್ಮರಿಸಿಕೊಳ್ಳುತ್ತಾ ಶ್ರೀಕೃಷ್ಣನ ಸಾಮೀಪ್ಯ ದೊರೆತಿರುವ ತಾವೇ ಪರಮ ಧನ್ಯರೆಂದು ಭಾವಿಸಿಕೊಳ್ಳುತ್ತಾ, ಶ್ರೀಕೃಷ್ಣನಿರುವಾಗ ತಮಗೆ ಬೇರೆ ದೇವತೆಗಳ ಕೃಪೆ ಏತಕ್ಕೆ ಬೇಕು ಎಂದುಕೊಳ್ಳುತ್ತಾ ಆನಂದದಿಂದ ಕಾಲ ಕಳೆಯುತ್ತಿದ್ದರು.

ಶ್ರೀಮದ್ಭಾಗವತದ ದಶಮ ಸ್ಕಂಧದಲ್ಲಿರುವ 25, 26, 27ನೇ ಅಧ್ಯಾಯಗಳು ಈ ಗೋವರ್ಧನೋದ್ಧಾರಣ ಪ್ರಸಂಗವನ್ನು ಉಲ್ಲೇಖಿಸುತ್ತದೆ.



ಅಷ್ಟಮ ಸರ್ಗಃ - ರಾಸಕ್ರೀಡೆ



ಈ ಸರ್ಗದಲ್ಲಿ 121 ಶ್ಲೋಕಗಳಿವೆ. ಪ್ರಧಾನವಾಗಿ ಸರ್ಗದಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ರಾಸಕ್ರೀಡೆ ಆಡಿದ ವಿವರಗಳು ಅದ್ಭುತವಾಗಿ ಕಾವ್ಯಮಯವಾಗಿ ವರ್ಣಿಸಲ್ಪಟ್ಟಿವೆ. ಪ್ರಾರಂಭದಲ್ಲಿ ಶ್ರೀಕೃಷ್ಣನು ಬಲರಾಮನನ್ನುದ್ದೇಶಿಸಿ ಬೃಂದಾವನದಲ್ಲಿ ನಡೆದಾಡುತ್ತಾ ಪ್ರಕೃತಿ ವರ್ಣನೆ ಮಾಡಿದ್ದು, ನಂತರ ಗೋಪಿಕೆಯರನ್ನು ಆಕರ್ಷಿಸಲು, ವೇಣುಗಾನ ಮಾಡಿದ್ದು ಗೋಪಿಕೆಯರೊಡನೆ ವಿಹರಿಸಲು ಇಚ್ಛಿಸಿ, ರಾಸಕ್ರೀಡೆ ಆರಂಭಿಸಿದ್ದು, ರಾಸಕ್ರೀಡೆಯ ದೃಶ್ಯಗಳು, ನಂತರ ಯಮುನೆಯಲ್ಲಿ ಜಲಕ್ರೀಡೆಯಾಡಿದ್ದು, ಇತ್ಯಾದಿಗಳು ಬಹಳ ಶೃಂಗಾರಮಯವಾಗಿ ವಿವರಿಸಲ್ಪಟ್ಟಿವೆ. ಕಡೆಯಲ್ಲಿ ಗೋಕುಲಕ್ಕೆ ಹಿಂತಿರುಗುವಾಗ ದಾರಿಯಲ್ಲಿ ವೃಷಭಾಸುರನ ವಧೆಯನ್ನು ಹೇಳಲಾಗಿದೆ. ಒಟ್ಟಿನಲ್ಲಿ ಇದೂ ಬಹಳ ಸುಂದರವಾದ ಸರ್ಗವಾಗಿದೆ.

ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 14	ವಸಂತ ವರ್ಣನೆ.
15-43	ಬಲರಾಮನೊಡನೆ ಪ್ರೀತಿಯ ಸಂಭಾಷಣೆ ಹಾಗೂ ಪ್ರಕೃತಿಯ ವರ್ಣನೆ.
44-57	ಗೋಪಿಕೆಯರನ್ನು ಆಕರ್ಷಿಸಲು ವೇಣುಗಾನ.
58-66	ಗೋಪಿಕೆಯರು ಶ್ರೀಕೃಷ್ಣನನ್ನು ಬಂದು ಸೇರುವುದು.
67-70	ರಾಸಕ್ರೀಡೆಯ ಆರಂಭ
71-81	ಶ್ರೀಕೃಷ್ಣನು ಸ್ವಲ್ಪಕಾಲ ಮರೆಯಾಗಿ ಮತ್ತೆ ಪ್ರತ್ಯಕ್ಷನಾದುದು, ಗೋಪಿಕೆಯರ ವಿರಹ ವೇದನೆ.
82-93	ರಾಸಕ್ರೀಡೆ.
94-110	ಯಮುನೆಯಲ್ಲಿ ಜಲಕ್ರೀಡೆ.
111-115	ಯಮುನೆಯ ಹಿರಿಮೆ.
116-121	ವೃಷಭಾಸುರ ವಧೆ.

ಅಷ್ಟಮಃ ಸರ್ಗಃ - ೮

ರಾಸಕ್ರೀಡೆ

ಅಥ ಪ್ರಸೂನಾಯುಧ ಭಾಗಧೇಯಾನ್ಯಾರಬ್ಧ ಮಂದಾನಿಲ ಸೌತಿಕಾನಿ ।
ಮಧು ಪ್ರಸಂಗಾನ್ಮಧುರಾಣಿಯೂನಾ ಮನುಷ್ಣಶೀತಾನ್ಯಭವನ್ ದಿನಾನಿ ॥೧॥

ಸ್ವಲ್ಪ ಕಾಲ ಕಳೆದ ನಂತರ ಪುಷ್ಪಗಳನ್ನು ಆಯುಧಗಳನ್ನಾಗಿ ಹೊಂದಿದ ಮನ್ಮಥನಿಗೆ ಭಾಗ್ಯವಾಗಿರುವುದು ಮಂದಮಾರುತವನ್ನು ಹಿತವಾಗಿ ಬೀಸುವುದೂ, ಯೌವನಸ್ಥರಿಗೆ ಆನಂದವನ್ನು ತರುವ ಹೆಚ್ಚಾಗಿ ಉಷ್ಣ, ಶೀತ, ಇಲ್ಲದ, ಮಧ್ಯಮ ಕಾಲವಾದ ವಸಂತ ಕಾಲವು ಪ್ರಾಪ್ತವಾಯಿತು.

ಮಳೆಗಾಲ, ಶರತ್ಕಾಲ ಕಳೆದ ಮೇಲೆ ಋತುಗಳೆಲ್ಲಾ ಶ್ರೇಷ್ಠವಾದ ವಸಂತ ಋತುವು ಪ್ರಾಪ್ತವಾಯಿತು. ವಸಂತ ಋತುವಿನಲ್ಲಿ ಗಾಳಿಯು ಹಿತವಾಗಿ ಬೀಸುವುದಲ್ಲದೆ ಪ್ರೇಮಿಗಳಿಗೆ, ಆನಂದ ತರುವಂತಹ, ಉಲ್ಲಾಸಕರವಾದ ವಾತಾವರಣವಿರುತ್ತದೆ. ಪುಷ್ಪಗಳೆಲ್ಲಾ ವಸಂತ ಕಾಲದಲ್ಲಿ ಚೆನ್ನಾಗಿ ಚಿಗುರಿ ಪುಷ್ಪ ಸಮೃದ್ಧಿ ಇರುತ್ತದೆ. (ಈ ಸರ್ಗದಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ನಡೆಸಿದ ರಾಸಕ್ರೀಡೆಯ ವರ್ಣನೆ ಇದೆ).

ಅನೇಕ ರೂಪೈಃ ಸ್ವಯಮೇಕರೂಪಃ ಕಾಲಾತ್ಮಕಂ ರೂಪಮಕಾಕಾಲ್ಯಃ ।
ಋತುಪ್ರಭೇದೈ ರನುಭೂಯರೇಮೇ ರಾಮಾಸಖೋ ರಾಮಮನುಪ್ರಯಾತಃ ॥೨॥

ಕಾಲದಿಂದ ವಿಚಲಿತನಾಗದ ಸ್ವಾಮಿಯಾದ ಕೃಷ್ಣನು ಗೋಪಸ್ತ್ರೀಗಳನ್ನು ಕೂಡಿಕೊಂಡು ಬಲರಾಮನಿಗೆ ಅನುಯಾಯಿಯಾಗಿ ಒಂದೇ ವಿಧವಾಗಿ ಇದ್ದುಕೊಂಡು ಅನೇಕ ವಿಧವಾಗಿ ಆಗಾಗ್ಗೆ ಬರುವ ಋತುಗಳಿಂದ ಕಾಲವೆಂಬ ತನ್ನ ಶರೀರವನ್ನು ಅನುಭವಿಸುತ್ತಾ ಬಂದನು.

ಭಗವಂತನಾದ ಸರ್ವೇಶ್ವರನು ಎಲ್ಲಕ್ಕೂ ಅತೀತನು, ಕಾಲಾತೀತನೂ ಹೌದು. ಆದರೂ ಸಹ ಮನುಷ್ಯನಾಗಿ ಅವತಾರ ಮಾಡಿದಾಗ ಆಯಾ ಕಾಲಕ್ಕನುಗುಣವಾಗಿ ಆಯಾ ಋತುಮಾನಗಳಿಗನುಸಾರವಾಗಿ, ಆಯಾ ಋತುಮಾನಗಳಿಗನುಗುಣವಾಗಿ ಬರುವ ವಾತಾವರಣವನ್ನು ಎಲ್ಲರಂತೆ ಅವನೂ ಅನುಭವಿಸುತ್ತಾನೆ. ಬಲರಾಮ ಕೃಷ್ಣರಿಬ್ಬರೂ ಎಂದೂ ಬೇರೆಯಾಗಿರುವವರಲ್ಲ, ಎಲ್ಲಾ ಸುಖ-ದುಃಖಗಳನ್ನೂ ಒಟ್ಟಿಗೆ ಅನುಭವಿಸುವವರು.

ಈಗ ಪ್ರಾಪ್ತವಾಗಿರುವ ವಸಂತ ಋತುವನ್ನೂ ಸಹ ಶ್ರೀಕೃಷ್ಣನು ಬಲರಾಮನೊಡಗೂಡಿ ಗೋಪ ಸ್ತ್ರೀಯರೊಡನೆ, ಆನಂದದಿಂದ ಅನುಭವಿಸುತ್ತಿದ್ದನು. ಶಾಸ್ತ್ರಗಳಲ್ಲಿ ಹೇಳಿರುವಂತೆ ಕಾಲವೇ ಭಗವಂತನ ಶರೀರ.

ಹೇಮಾಂತ ಪೂರ್ವಃ ಶಿಶಿರಾಂತಿಮಶ್ಚ ಶರಶ್ಚ ಸಂಭೂಯ ವಸಂತ ವೃತ್ತ್ಯಾ।
ಶನೈಃಶನೈಃ ಶಾಂತಿ ಮುಪೇಯಿವಾಂ ಸಸ್ತದ್ವೈಭವಾತ್ ತನ್ಮಯತಾಮಿ ವಾಽಪುಃ॥೩॥

ಹೇಮಂತವು, ಶಿಶಿರವು ಸೇರಿದ ಹಾಗೆ ಮುಂದೆ ಹಿಂದೆ ಆಗುವ ಶರತ್ಕಾಲವೂ, ತಮ್ಮಲ್ಲಿರುವ ಅಸಂಖ್ಯ ತಣ್ಣನೆಯ ಮಳೆ ಮೊದಲಾದ ಬಾಧೆಗಳನ್ನು ಚಿಕ್ಕಚಿಕ್ಕದಾಗಿ ಬಿಟ್ಟು ಬಿಟ್ಟು ವಸಂತ ಋತುವಿನ ಹಾಗೆ ನಿಂತು ವಸಂತವೆಂದು ಹೇಳಲ್ಪಡುವ ಹಾಗೆ ಎಲ್ಲಾ ಋತುಗಳಿಗಿಂತಲೂ ಆನಂದಮಯವಾಗಿತ್ತು.

ಪ್ರಾಯೇಣ ಪಂಚಾಯುಧ ಪಂಚ ವಕ್ತ್ರ ಪಲಾಶ ಕೋಶಾಕೃತಿ ಮಾದಧಾನೈಃ।
ಮನಸ್ವಿನೀ ಮಾನಗಜೇಂದ್ರ ಭೇದಾತ್ ಸ ಶೋಣಿತೈಃ ಪಾಣಿರುಹೈಶ್ಚಕಾಶೆ ॥೪॥

ಮುರುಗ ಮರಗಳಲ್ಲಿ ಎಲ್ಲ ಕಡೆಯೂ ಚಿಗುರೊಡೆಯುವುದನ್ನು ನೋಡುವಾಗ, ಪ್ರಣಯ ಕಲಹ ಮಾಡಿ ದೂರವಾಗಿರುವ ಸ್ತ್ರೀಯರ ಅಹಂಕಾರವನ್ನು ಕಡಿಮೆ ಮಾಡುವ ಮನ್ಮಥನಾದ ಸಿಂಹದ ಉಗುರುಗಳನ್ನು ಆ ರಕ್ತದಿಂದ ಬಣ್ಣ ಹಚ್ಚಿದಂತೆ ಇತ್ತು.

ವಸಂತ ಕಾಲದಲ್ಲಿ ಎಲ್ಲಾ ಮರಗಳಲ್ಲಿಯೂ ಚಿಗುರು ಒಡೆಯುತ್ತದೆ. ಸ್ತ್ರೀಯರು ಕೆಲವು ಬಾರಿ ಪ್ರೇಮಿಯೊಡನೆ ಪ್ರಣಯಕಲಹವಾಡಿ ದೂರವಾಗುತ್ತಾರೆ. ಆದರೆ ಮನ್ಮಥನ ಆಕರ್ಷಣೆಯಿಂದ ಅವರ ಅಹಂಕಾರವು ತಗ್ಗಿ ಅವರು ಮತ್ತೆ ಪ್ರೇಮಿಗಳೊಡನೆ ಸೇರುತ್ತಾರೆ.

ಜಗಂತಿ ಪುಂಡ್ರೇಷು ಶರಾಸನೇನ ಪ್ರಸೂನ ಬಾಣೈರಪಿ ಜೇತುಮಿಚ್ಛೋಃ।
ಅಸೂಚಯನ್ ಆತ್ಮಭುವಃ ಸ್ವನಾದ್ಯೈರವ್ಯಾಹತಾ ಮಾಶಿಷ ಮನ್ಯಪುಷ್ಟಾಃ ॥೫॥

ಪುಂಡ್ರವೆಂಬ ಒಂದು ಬಗೆಯ ಕಬ್ಬನ್ನು ಬಿಲ್ಲಾಗಿಯೂ ಪುಷ್ಪಗಳನ್ನು ಬಾಣಗಳನ್ನಾಗಿಯೂ ಮಾಡಿಕೊಂಡು ಜಗತ್ತನ್ನೆಲ್ಲಾ ಗೆಲ್ಲಲಿಚ್ಛಿಸುವ ಮನ್ಮಥನಿಗೆ ಕೋಗಿಲೆಗಳು ತಮ್ಮ ಪಂಚಮ ಸ್ವರದಿಂದ ತಡೆಯನ್ನುಂಟುಮಾಡಲು ಬಯಸಿದವು.

ಮನ್ಮಥನು ತನ್ನ ಪುಷ್ಪ ಬಾಣಗಳಿಂದ ಜಗತ್ತನ್ನು ಗೆಲ್ಲಲು ಬಯಸುತ್ತಾನೆ. ಆದರೆ ಕೋಗಿಲೆಗಳು ಅವನ ಪ್ರತಿಸ್ಪರ್ಧಿಗಳು. ಅದು ತನ್ನ ಮಧುರವಾದ ಕೋಕಿಲ ಗಾನ ದಿಂದ ಜಗತ್ತನ್ನು ಆಕರ್ಷಿಸುತ್ತದೆ.

ವರಾಂಗನಾ ವಕ್ತ್ರ ಪದಾಂಬುಜಾನಾಂ ಸ್ವಾಭಾವಿಕೀಂ ಸೌರಭ ರಾಗಲಕ್ಷ್ಮೀಂ।
ಪ್ರಪೀತ್ಸಮಾನೌ ಪ್ರಸವೈ ಸ್ತದರ್ಹಂ ದ್ವೇಧಾ ದ್ರುಮೌ ದೋಹದ ಮನ್ವಭೂತಾಂ ॥೬॥

ಬಕುಳ - ಅಶೋಕವೆಂಬ ಎರಡು ಬಗೆಯಾದ ಮರಗಳು ಉತ್ತಮವಾದ ಸ್ತ್ರೀಯರ ಮುಖ ಅರಳುಪಿಕೆಯು ತಾವರೆಯ ವಾಸನೆಯು ಸೇರಿ, ತಮ್ಮ ಪುಷ್ಪಗಳಲ್ಲಿ ಇರಲು ಅವರುಗಳ ಲಾಸ್ಯವು ಹೆಚ್ಚಾಯಿತು.

ತೀಕ್ಷ್ಣಾರುಣಾ ಗ್ರಾಣ್ಯಚಿರ ಪ್ರರೋಹಾ ಚಕಾಶಿರೇ ಚಂಪಕ ಕುಟ್ಮಲಾನಿ।
ದತ್ತಾನಿ ಕಾಮೋತ್ಸವ ಮಂಗಲಾರ್ಥಂ ದೀಪಾಂಕುರಾಣೀವ ವಸಂತ ಲಕ್ಷ್ಮ್ಯಾ॥೭॥

ಆವಾಗಲೇ ಉಂಟಾದ ಸ್ವಭಾವದಿಂದ ಚೂಪಾದ ಉತ್ತಮ ತುದಿಗಳಿಂದ ಕೂಡಿದ ಚಂಪಕ ಮೊಗ್ಗುಗಳು ವಸಂತಲಕ್ಷ್ಮಿಯಿಂದ ಕಾಮನ ಮಹೋತ್ಸವಕ್ಕೆ ವಿಶೇಷವಾಗಿ ದೀಪರೇಖೆಗಳಂತೆ ಪ್ರಕಾಶಿಸಿದವು.

ಮುಕ್ತಾಪಗಾ ಮಗ್ನ ಸಮುತ್ಥಿತಾತ್ಮಾ ಭೂಯೋ ಭಜನ್ ಪುಷ್ಪರಜೋಭಿಷೇಕಂ।
ಚಚಾರ ಮಂದಂ ಮಲಯಾದ್ರಿ ವಾತ ಶ್ಚೇತೋ ಭುವೋ ದೃಪ್ತ ಇವೌಪವಾಹ್ಯಃ॥೮॥

ಮುಕ್ತಾಪಗಾ ಎನಿಸಿಕೊಳ್ಳುವ ತಾಮ್ರಪರ್ಣಿ ನದಿಯಲ್ಲಿ ಮುಳುಗಿ ಏಳುವ ಮಲಯ ಮಳೆಯ ಮಂದಮಾರುತವಾದುದು ಮತ್ತೆ ತನ್ನ ಗಮನದಲ್ಲಿ ಎಲ್ಲೆಲ್ಲೂ ಹೂವುಗಳು ಪ್ರಸರಿಸುವ ಹಾಗೆ ಮಾಡಿ ಮನ್ಮಥನ ಮದ ಹಿಡಿದ ಆನೆಯಂತೆ ನಿಧಾನವಾಗಿ ಬೀಸುತ್ತಿತ್ತು.

ನದಿಯ ಮೇಲೆ ಬೀಸುವ ಗಾಳಿಯಾದುದು ಪುಷ್ಪಗಳ ಮೇಲೆ ಬೀಸುವುದರಿಂದ ಎಲ್ಲೆಲ್ಲೂ ಸುವಾಸನೆ ಬೀರಿ, ವಾತಾವರಣವು ಹರ್ಷದಾಯಕವಾಗಿತ್ತು.

ಪುಷ್ಪೇಷು ಸಂಯೋಗ ವಿಯೋಗ ವೃತ್ತ್ಯಾ ಕ್ರಮಾದ್ಭಜಂತಿನ್ನತಿ ಮುನ್ನತಿಂಚ।
ವನಾಂತರೇ ಷಟ್‌ಪದ ಪಂಕ್ತಿರಾಸೀ ಮಂಜುಸ್ವನಾ ಮನ್ಮಥ ಚಾಪಮೌರ್ವಿ ॥೯॥

ಮನ್ಮಥನ ಶಿಲೆಗೆ ಮುತ್ತುಗಳಂತೆ ಇರುವ ದುಂಬಿಗಳು ಸಮೂಹವಾಗಿ, ಕಾಡಿನಲ್ಲಿರುವ ಸುಂದರವಾದ ಝೇಂಕಾರ ಮಾಡಿಕೊಂಡು ಪುಷ್ಪಗಳಲ್ಲಿ ಸೇರಿಕೊಂಡಾಗ, ನಮಸ್ಕಾರವನ್ನು ಹೊರಗೆ ಹೊರಡುವಾಗ, ತಲೆ ಎತ್ತಿಕೊಂಡು ಕಾಮ ವಿಕಾರಕ್ಕೆ ಕಾರಣವಾಯಿತು.

ವಸಂತ ಕ್ಲ್ಪಾನ್ ಮದನಸ್ಯ ಬಾಣಾನ್ ಆಂದೋಲಯನ್ ನೂನ ಮನೋಕಹೇಷು।
ದಿನೇ ದಿನೇ ದಕ್ಷಿಣ ಮಾತರಿಶ್ವಾ ಗತಾಗತಾಭ್ಯಾಂ ಗಣಯಾಂಚಕಾರ ॥೧೦॥

ಒಂದೊಂದು ದಿನವೂ ವಸಂತ ಋತುವಿನಿಂದ, ಮರಗಳಲ್ಲಿ ಮನ್ಮಥನು ಹುದುಗಿಸಿ ಇಡುವ ಬಾಣಗಳನ್ನು ಅಲ್ಲಾಡಿಸುವುದಾಗಿ ಎಲ್ಲೆಲ್ಲಿಯೂ ಬೀಸುವ ತಂಗಾಳಿಯು ಮತ್ತು ಬರಿಸುವ ಹಾಗಿತ್ತು.

ಆಘೂರ್ಣ್ಯಮಾನೈ ರಭಿತೋ ನಭಸ್ವಾನ್ ಕಾಂತ್ಯೈಃ ಪ್ರದೀಪೈರಿವ ಕರ್ಣಿಕಾರೈಃ।
ವನಶ್ರಿಯೋ ಮಾಧವ ಸಂಗಮಾರ್ಹಂ ಮಂಗಲ್ಯ ನೀರಾಜನ ಮಾಚಚಾರ ॥೧೧॥

ಗಾಳಿಯಾದುದು ನಾಲ್ಕು ದಿಕ್ಕುಗಳಲ್ಲೂ ಸುಂದರವಾದ ದೀಪಗಳಂತೆ ಕಣಿಕಾರ ಪುಷ್ಪಗಳನ್ನು ಅಲ್ಲಾಡಿಸುವುದಾಗಿ, ವಸಂತ ಋತುವಿಗೂ, ವನಲಕ್ಷ್ಮಿಗೂ ಆದ ಮದುವೆಗಾಗಿ ಮಂಗಳ ಆರತಿಯನ್ನು ಎತ್ತುವಂತಿತ್ತು.

ಪ್ರಸೂನ ಹಾಸಾಧರ ಪಲ್ಲವಾನಾಂ ಕಿಂಜಲ್ಕರೋಮಾಂಜುಷಾಮ ಭುಂಕ್ತ।
ಮಂದಾನಿಲೈ ರಾಹಿತ ವೇಪಥೂನಾಂ ಕಾಂತಿಂ ವಸಂತೋ ವನವಲ್ಲರೀಣಾಂ ॥೧೨॥

ಹೊಸ ಹೂವುಗಳು ಮೊದಲು ಬಿಡುವ ಮೊಗ್ಗುಗಳೊಡನೆ ಕೂಡಿ ಒಂಟಿಯಾಗಿ ತುಟಿಗಳಂತೆ ಇರುವ, ಕೂದಲಿನ ಕುಚ್ಚುಗಳಂತಿರುವ ಮಂದಮಾರುತವು ಬೀಸಿ ನಡುಗುತ್ತಿರುವ ಸ್ತ್ರೀಗಳಂತಿರುವ ಕಾಡು ಲತೆಗಳ ಸೌಂದರ್ಯವನ್ನು ವಸಂತ ಋತುವಾಗಿರುವ ಪುರುಷನು ಅನುಭವಿಸುವಂತಿತ್ತು.

ವಿಹಾರ ಯೋಗ್ಯಾಮಥ ವೀಕ್ಷ್ಯ ವನ್ಯಾಂ ರಮಾಪತಿಂ ರಾಮಸಖಂ ವಿಶಂತಂ।
ನಭಶ್ಚರೈಃ ಸಾಕ ಮನೋಕಹಾಸ್ತಂ ನಾಥಂ ಪ್ರಸೂನೋರ್ಮಿಭಿರಭ್ಯಷಿಂಚನ್ ॥೧೩॥

ಕಾಡುಗಳು ವಿನೋದದಿಂದ, ಆಟವಾಡುವುದಕ್ಕೆ ಇವೆ ಎಂದು ತಿಳಿದ ಕೃಷ್ಣಸ್ವಾಮಿಯೂ ಬಲರಾಮನೊಡನೆ ಅಲ್ಲಿ ಒಳಹೊಕ್ಕಾಗ ಮರಗಳೆಲ್ಲವೂ ಹೆಚ್ಚಿನ ಪುಷ್ಪಗಳೊಡನೆ ಆ ಸ್ವಾಮಿಗೆ ಅಭಿಷೇಕ ಮಾಡಿದವು. ಆಕಾಶದಿಂದ ದೇವತೆಗಳು ಅದೇ ರೀತಿ ಮಾಡಿದರು.

ಬೃಂದಾವನದ ಕಾಡುಗಳಲ್ಲಿ ಈ ವಸಂತ ಕಾಲದಲ್ಲಿ ವಿಹಾರ ಮಾಡಿ ವಿನೋದ ಮಾಡಬಹುದೆಂದು ಸ್ವಾಮಿ ಕೃಷ್ಣನು ಅಣ್ಣನಾದ ಬಲರಾಮನೊಡಗೂಡಿ ಅಲ್ಲಿಗೆ ಪ್ರವೇಶಿಸಿದನು. ಆಗ ಪುಷ್ಪ ಸಮೃದ್ಧಿಯಿಂದ ಮರಗಳೆಲ್ಲವೂ ಅವರಿಬ್ಬರ ಮೇಲೂ ಪುಷ್ಪಗಳನ್ನು ಸುರಿಸುವುದರ ಮೂಲಕ ಅಭಿಷೇಕ ಮಾಡಿದವು. ಅದೇ ರೀತಿ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿ ಸುರಿಸಿದವು.

ಪುಷ್ಪಾಕರೇಣ ಪ್ರತಿಪನ್ನಶೋಭಂ ಬೃಂದಾವನಂ ನಂದಿತ ಗೋಪ ಬೃಂದಂ।
ಪ್ರದರ್ಶಯನ್ ಪ್ರಾಪಿತ ಧೇನುವತ್ಸಂ ರಾಮಾನುಜೋ ರಾಮಮಿದಂ ಬಭಾಷೇ ॥೧೪॥

ವಸಂತ ಋತುವಿನಿಂದ ಎಲ್ಲೆಲ್ಲೂ ಹೊಸ ಸುಂದರವಾದ ಗೋಪರ ಸಮೂಹಕ್ಕೆ ಉತ್ಸಾಹವನ್ನು ನೀಡುವ ಬೃಂದಾವನಕ್ಕೆ ಹಸುಗಳನ್ನೂ, ಕರುಗಳನ್ನೂ ಮುಂದೆ ಕಳುಹಿಸಿ, ತಾನೂ ಬಲರಾಮನೊಡನೆ ಹಿಂದೆ ಬರುತ್ತಾ ಹೀಗೆ ಹೇಳಿದನು.

ಬೃಂದಾವನದ ಕಾಡುಗಳಿಗೆ ಹಸುಗಳನ್ನು ಕರುಗಳನ್ನು ಮುಂದೆ ಕಳುಹಿಸಿ, ತಾನು ಬಲರಾಮನೊಡನೆ ಹಿಂದೆ ಬರುತ್ತಾ, ಬಲರಾಮನನ್ನು ಉದ್ದೇಶಿಸಿ ಈ ರೀತಿ ಸ್ವಾಮಿಯು ಹೇಳಿದನು.

ಮನೋ ಬುವೋ ಮೂರ್ತಮಿವಾವಲೇಪಂ ಮಾನ್ಯಂ ಮನಸ್ಕರಾಮಿವ ತ್ವದೀಯಂ।
ಚಿರಂ ತ್ವಯಾ ಸೇವ್ಯಮಿಹಾರ್ಯ ಮನ್ಯೇ ಚಿತ್ರಂ ವನಂ ಚೈತ್ರ ರಥಾಭಿನಂದ್ಯಂ ॥೧೫॥

ಅಣ್ಣಾ! ಮನ್ಮಥನ ಗರ್ವವೇ ಮೈದಳೆದಂತೆ ನಿಮ್ಮ ಬುದ್ಧಿಶಕ್ತಿಯು ಮನಸ್ಸಿನ ಗಮನವು, ಆಗಿ, ಆಶ್ಚರ್ಯವಾಗಿ ಚೈತ್ರವೆಂಬ ಕುಬೇರನ ಉದ್ಯಾನದಲ್ಲಿ ಕೊಂಡಾಡಲ್ಪಡುವ ಈ ವನವಾದುದು ನಿಮಗೆ ಅನೇಕ ಕಾಲ ಭೋಗಸ್ಥಾನವಾಗಿರುತ್ತದೆಂದು ಭಾವಿಸುತ್ತೇನೆ.

ಅಗ್ರಜಾ! ನೀನು ಅತ್ಯಂತ ಬುದ್ಧಿಶಾಲಿಯಾದವನು. ನಿನ್ನ ಮನಸ್ಸು ಯಾವಾಗಲೂ, ಒಳ್ಳೆಯ ವಿಷಯಗಳಲ್ಲಿಯೇ ಅನುವರ್ತಿಸುತ್ತದೆ. ಈ ಉದ್ಯಾನವು (ಬೃಂದಾವನದ ಕಾಡು) ಕುಬೇರನ ಉದ್ಯಾನವಾದ ಚೈತ್ರದಂತೆ ಇದೆ. ಇದು ನಿನಗೆ ಪರಮಭೋಗ್ಯವಾಗುವುದರಲ್ಲಿ ಸಂದೇಹವಿಲ್ಲ.

ಅಮಾನುಷ ಪ್ರಾಪ್ಯಂ ಮರಣ್ಯಮೇತತ್ ಪ್ರಾಪ್ತಸ್ಯ ತೇ ಪಾದರಜಃ ಪ್ರಭಾವಾತ್।
ಸತ್ವೋಪಪನ್ನಾ ನ ಭಜಂತಿ ಸತ್ವಾಃ ಶಾಂತಾಶಯಾಃ ಶಾಶ್ವತಿಕಂ ವಿರೋಧಂ ॥೧೬॥

ಇದುವರೆಗೂ ಮನುಷ್ಯರು ಒಳಗೆ ಹೋಗದ ಈ ಕಾನನದಲ್ಲಿ ಬಂದಿರುವ ನಿಮ್ಮ ಪಾದಧೂಳಿಯಿಂದ ಹೆಮ್ಮೆಯಿಂದ ಛಲವುಳ್ಳ ದುಷ್ಟ ಪ್ರಾಣಿಗಳೂ, ಮನಸ್ಸಿನಲ್ಲಿ ಕಾಮ, ಕ್ರೋಧಗಳನ್ನು ಬಿಟ್ಟು ಸಹಜವಾದ ಜಾತಿ ಹಗೆಗಳನ್ನು ಬಿಟ್ಟುಬಿಟ್ಟಿವೆ.

ಬಲರಾಮನ ವನ ಪ್ರವೇಶದಿಂದ, ಆ ವನದ ತುಂಬಾ ಶಾಂತಿಯು ನೆಲೆಸಿ, ದುಷ್ಟ ಪ್ರಾಣಿಗಳೆಲ್ಲಾ ತಮ್ಮ ಕ್ರೌರ್ಯವನ್ನು ಮರೆತು ಇತರ ಪ್ರಾಣಿಗಳೆಲ್ಲಾ ಸೌಹಾರ್ದದಿಂದ ಇರುತ್ತದೆ. ಸತ್ಪುರುಷರ ಪಾದ ಸ್ಪರ್ಶವೇ ಅಂತಹುದು. ಋಷ್ಯಾಶ್ರಮದಂತೆ ಈ ವನವು ತಾವಿರಲು ಶ್ರೇಷ್ಠವಾದ ತಾಣವಾಗಿದೆ.

ಅಚಿಂತ್ಯ ಭೂಮ್ನಸ್ತವ ಸಂನಿಧಾನಾ ದನ್ಯೋನ್ಯ ಜಾತೀಯ ದಶಾಂ ದಧಾನಾಃ।
ಸಿಂಹೀ ವಶಾ ಸ್ತನ್ಯವಿದೋ ಭಜಂತೆ ಸುಭ್ರಾತೃತಾಂ ಕೇಸರಿದಂತಿ ಪೋತಾಃ॥೧೭॥

ಚಿಂತಿಸಲಸಾಧ್ಯವಾದ ಮೇಲ್ಮೈಯುಳ್ಳ ಸನ್ನಿಧಾನದಿಂದ ಒಂದೊಂದು ಪ್ರಾಣಿಯೂ ಮತ್ತೊಂದು ಪ್ರಾಣಿಯೊಡನೆ ಸ್ನೇಹದಿಂದಿರುವುದರಿಂದ, ಆನೆ ಮರಿಗಳು ಸಿಂಹದ ಮರಿಗಳಂತೆಯೇ ಇದು ಎಲ್ಲಾ ಹೆಣ್ಣು ಸಿಂಹಗಳು ಆನೆಗಳ ಮರಿಗಳಿಗೂ ಹಾಲು ಕುಡಿಸುತ್ತಾ ಒಂದಕ್ಕೊಂದು ಸಹೋದರ ಭಾವದಲ್ಲಿದೆ.

ಸಿಂಹಗಳಿಗೂ, ಆನೆಗಳಿಗೂ ಬದ್ಧ ದ್ವೇಷ, ಆನೆಯ ಸ್ವಪ್ನದಲ್ಲಿ ಸಿಂಹ ಬಂದರೂ ಆನೆ ಸಾಯುವುದೆಂಬ ಪ್ರತೀತಿ ಇದೆ. ಆದರೂ ನಿಮ್ಮ ಪ್ರವೇಶದಿಂದ ಈ ವನದಲ್ಲಿ ಆ ರೀತಿ ಇಲ್ಲದೆ, ಸಿಂಹದ ಮರಿಗಳೂ ಆನೆಯ ಮರಿಗಳೂ ಅನ್ಯೋನ್ಯ ಸೌಹಾರ್ದದಿಂದ ಜೀವಿಸುತ್ತದೆ.

ತ್ವದರ್ಪಿತ ಸ್ವಾದು ತೃಣಾದಿನೀನಾಂ ತ್ವದ್ವಂಶ ನಾದಾಮೃತ ಪಾಯಿನೀನಾಂ।
ಮನ್ಯೆ ಗವಾಂ ವತ್ಸಗಣಾ ವೃತಾನಾಂ ವಿಷ್ವಗ್ವನಂ ವಿಶ್ರಮ ಯೋಗ್ಯಮೇತತ್ ॥೧೮॥

ನಿಮ್ಮಿಂದ ಬೆಳೆಸಲ್ಪಟ್ಟ ಮಧುರವಾದ ಹುಲ್ಲನ್ನು ಮೇಯ್ದು ಮತ್ತು ನಿಮ್ಮ ಕೊಳಲಿನ ಅಮೃತ ನಾದವನ್ನು ಆಸ್ವಾದಿಸಿ, ಕರುಗಳೊಡನೆ ಸೇರುವ ಹಸುಗಳಿಗೆ ಈ ವನವು ಎಲ್ಲೆಲ್ಲೂ ತಂಗಲು ಅನುಕೂಲವಾಗಿದೆ. ಆದುದರಿಂದ ಇದು ನಿಮಗೆ ಇಷ್ಟವಾಗಿರುತ್ತದೆ.

ಹಸುಗಳಿಗೆ ಹುಲ್ಲು ಎಲ್ಲಿ ಯಥೇಚ್ಛವಾಗಿ ಸಿಗುವುದೋ ಆ ಪ್ರದೇಶವು ಅವುಗಳಿಗೆ ಬಹು ಆಪ್ಯಾಯಮಾನವಾಗಿರುತ್ತದೆ. ಇಲ್ಲಿ ಬೆಳೆಯುವ ಹುಲ್ಲು ತಮ್ಮ ಪಾದಸ್ಪರ್ಶದಿಂದ ಅತ್ಯಂತ ಸ್ವಾದುವಾಗಿದ್ದು, ಹಸುಗಳು ಆನಂದದಿಂದ ಮೇಯುತ್ತದೆ. ಹಸುಗಳ ಆನಂದವೇ ನಿಮ್ಮ ಆನಂದ. ಅಲ್ಲದೆ ನಿಮ್ಮ ಇಂಪಾದ ವೇಣುನಾದವು ಅವುಗಳ ಆನಂದವನ್ನು ಮತ್ತಷ್ಟು ಹೆಚ್ಚಿಸುತ್ತವೆ. ತನ್ನ ವೇಣುನಾದವನ್ನೇ ಬಲರಾಮನ ವೇಣುಗಾನವೆನ್ನುತ್ತಾನೆ ಸ್ವಾಮಿ.

ವಸಂತಲಕ್ಷ್ಮ್ಯಾ ಇವ ವಾಸಭೂಮಿಂ ಸಂಕಲ್ಪಯೋನೇರಿವ ಶಿಲ್ಪಶಾಲಾಂ।
ರತೇರಿವಾ ರಾಮ ವಿಭೂತಿಮನ್ಯಾಂ ವನ್ಯಾಮಿಮಾಂ ವೇದ್ಮಿ ತವೋಪಕಾರ್ಯಾಂ ॥೧೯॥

ವಸಂತ ಋತುವಿನ ಸುಂದರವಾದ ಸಂಪತ್ತಿಗೆ ಮನ್ಮಥನ ಶಿಲ್ಪಸ್ಥಾನದಂತೆ (ಶೃಂಗಾರ ಕ್ರೀಡಾ ಸ್ಥಾನದಂತೆ) ಅವನ ಹೆಂಡತಿಯಾದ ರತೀದೇವಿಯು ವಾಸ ಸ್ಥಾನವಾದ ಈ ವನವು ನಿಮಗೆ ವಿಹಾರ ಸ್ಥಾನವಾಗಿ ರಾಜಗೃಹದಂತಿದೆ. ಎಂದು ಭಾವಿಸುತ್ತೇನೆ.

ವಸಂತ ಋತುವು ಮನ್ಮಥನ ಆವಾಸ ಸ್ಥಾನ. ತನ್ನ ಪ್ರಿಯ ಪತ್ನಿಯಾದ ರತಿಯೊಡನೆ ಈ ವನದಲ್ಲಿ ಅವನು ವಿಹರಿಸುತ್ತಾ ಎಲ್ಲರನ್ನೂ ವಶೀಕರಿಸುತ್ತಾನೆ. ನೀವು ಸಹ ಅವನಂತೆ ಸುಂದರ ಪುರುಷರಾದ್ದರಿಂದ, ಈ ಕಾಡು ತಮಗೆ ವಿಹಾರ ಯೋಗ್ಯವಾಗಿ ರಾಜಗೃಹದಂತೆಯೇ ಇರುತ್ತದೆ.

ವನಸ್ಥಲೀಯಂ ಮಕರಂದ ವರ್ಷೈ ರತೋಽಯ ಕರ್ಮಾಂತಿಕ ಮಾತ್ತಸೇಕಾ।
ಪ್ರಸೌತಿ ಪರ್ಯಾಪ್ತ ಪರಾಗ ಜಾಲಾ ಸಮೀಹಿತಂ ಸಂಚರಣೋತ್ಸವಂ ತೇ ॥೨೦॥

ಜೇನುಗಳನ್ನು ಸಮೃದ್ಧವಾಗಿ ಕೊಡುವ ಸಸ್ಯಗಳನ್ನು ಹೊಂದಿರುವ ಈ ವನಪ್ರದೇಶವು ಎಲ್ಲ ಕಡೆಯೂ ಹೂವುಗಳನ್ನು ಬಿಡುವುದರಿಂದ ನೀವು ಅಪೇಕ್ಷಿಸುವ ಸಂಚಾರ ಮಹೋತ್ಸವ ವನ್ನು ಆಚರಿಸಲು ಅನುಕೂಲವಾಗಿದೆ.

ನೀವು ಈ ವನದಲ್ಲಿ ಎಲ್ಲ ಕಡೆಯೂ ಆನಂದವಾಗಿ ವಿಹರಿಸಲು ಬಯಸುತ್ತೀರಿ. ನಿಮ್ಮ ಸಂಚಾರಕ್ಕೆ ಇಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ. ಇಲ್ಲಿ ಜೇನುಗಳು ಸಮೃದ್ಧ ವಾಗಿ ಜೇನನ್ನು ಸುರಿಸುತ್ತದೆ. ಈ ವನವು ರಾಜ ಸಂಚಾರಕ್ಕೆ ಯೋಗ್ಯವಾಗಿದೆ.

ನಭಃ ಸ್ಪೃಶಾಮತ್ರ ಮಹೀರುಹಾಣಾಂ ನಿಡಾದಮೀ ನಿಷ್ಪತಿತಾಃ ಸಲೀಲಂ।
ಪ್ರಯುಂಜತೆ ಸ್ವಾಗತ ಮಂಜಸಾ ತೇ ಪ್ರಾಯಃ ಶುಭಾಲಾಪಜುಷಃ ಶಕುಂತಾಃ॥೨೧॥

ಆಕಾಶವನ್ನು ಮುಟ್ಟುವ ಮರಗಳಲ್ಲಿ ಆನಂದವಾಗಿ ವಾಸಿಸುವ ಪಕ್ಷಿಗಳು ಮಧುರ ಧ್ವನಿ ಮಾಡುತ್ತಾ ನಿಮ್ಮನ್ನು ಕುಶಲಪ್ರಶ್ನೆ ಮಾಡುವಂತಿದೆ.

ಈ ಬೃಂದಾವನದಲ್ಲಿ ಬೆಳೆಯುವ ಮರಗಳೆಲ್ಲವೂ ಬಹಳ ಎತ್ತರಕ್ಕೆ ಬೆಳೆಯುತ್ತವೆ. ಆಕಾಶವನ್ನೇ ಮುಟ್ಟುವಂತಿವೆ. ಅಲ್ಲದೆ ಅವುಗಳಲ್ಲಿ ಯಥೇಚ್ಛವಾಗಿ ಪಕ್ಷಿಗಳು ಆನಂದದಿಂದ

ವಾಸಿಸುತ್ತವೆ. ಅವುಗಳ ಶುಭವಾದ ಆಲಾಪಗಳು ನಿಮ್ಮನ್ನು ಕುಶಲಪ್ರಶ್ನೆ ಮಾಡುವಂತಿವೆ. ಸ್ವಾಗತ ಬಯಸುವಂತಿದೆ.

ವಾತಾವಧೂತ ಸ್ತರವಃ ಸ್ವಮೂರ್ಧ್ನಾ ಸಂತಾನ ಸಾಂತಾನಿಕ ಸಂಪದಸ್ತೇ।
ಪ್ರಾಜ್ಯೈರಮೀ ಪುಷ್ಪಫಲೈಶ್ಚ ನೂನಂ ವಿತನ್ವತೇ ವಂದನ ಮರ್ಹಣಾಂಚ ॥೨೨॥

ಕಲ್ಪವೃಕ್ಷದಲ್ಲಿ ಪರಂಪರೆಯಾಗಿ ಬಂದ ಹಿರಿಮೆ ಪಡೆದಿರುವ ಮರಗಳ ಗಾಳಿಯಿಂದ ತಲೆಯು ಆಡುವಂತಿರುವುದರಿಂದ ಪುಷ್ಪಗಳು ಹಾಗೂ ಫಲಗಳು ಕೆಳಕ್ಕೆ ಬಾಗುವುದರಿಂದ ನಿಮಗೆ ನಮಸ್ಕಾರವನ್ನೂ ಆರಾಧನೆಯನ್ನೂ ಮಾಡುವಂತಿದೆ.

ಈ ವನದಲ್ಲಿ ಹಿತಕರವಾಗಿ ಬೀಸುವ ಗಾಳಿಯಿಂದ ಮರಗಳೆಲ್ಲವೂ ಅಲ್ಲಾಡುತ್ತಾ ಬಾಗುತ್ತಾ ಅವುಗಳಲ್ಲಿ ಬಿಡುವ ಹೂವುಗಳು, ಹಣ್ಣುಗಳೂ, ಎಲ್ಲವೂ ನಿಮ್ಮ ಆಗಮನದಿಂದ ಸಂತೋಷಿಸಿ, ತಲೆ ಬಾಗಿ ನಮಸ್ಕರಿಸಿ, ಪುಷ್ಪಗಳಿಂದ ಅರ್ಚಿಸಿ, ಫಲಗಳನ್ನು ನೈವೇದ್ಯ ಮಾಡಿ ಆರಾಧಿಸುವಂತಿದೆ. (ಉತ್ಪ್ರೇಕ್ಷಾಲಂಕಾರ).

ಆಸ್ವಾದ್ಯ ಚೂತಾಂಕುರ ಮನ್ಯಪುಷ್ಟಾಃ ಪ್ರಾಯಃ ಸ್ವನೈಃ ಪಂಚಮ ಮುದ್ಗಿರಂತಃ।
ಆಕಾರಯಂತೀವ ವನಂ ಗತಂತ್ವಾಂ ದಿವ್ಯಾನಮೀ ದರ್ಶಯಿತುಂ ಪ್ರದೇಶಾನ್॥೨೩॥

ಈ ಕೋಗಿಲೆಗಳು ಮಾವಿನ ಚಿಗುರನ್ನು ಸಿಹಿಯಾಗಿ ಭುಜಿಸಿ, ಪಂಚಮ ಸ್ವರದೊಡನೆ ಹಾಡುವುದರಿಂದ, ವನದೊಳಗೆ ಬರುವ ನಿಮ್ಮನ್ನು ಸುಂದರವಾದ ತಾಣಗಳಿಗೆ ಆಹ್ವಾನಿಸುವಂತಿದೆ.

ಕೋಗಿಲೆಗಳ ಗಾನವು ಕೇಳಲು ಅತ್ಯಂತ ಮಧುರವಾಗಿರುತ್ತದೆ. ಆದ್ದರಿಂದಲೇ ವಾಲ್ಮೀಕಿ ಋಷಿಗಳನ್ನು ಕೋಗಿಲೆ ಎಂದು ಸಂಭೋಧಿಸಿದ್ದಾರೆ. ಈ ವನದಲ್ಲಿ ಆ ಕೋಗಿಲೆಗಳ ಗಾನವು ನಿಮಗೆ ಸ್ವಾಗತವನ್ನು ಹೇಳಿ, ವನದಲ್ಲಿರುವ ರಮ್ಯ ಸ್ಥಳಗಳಿಗೆ ಆಹ್ವಾನಿಸುವಂತಿದೆ. ಕೋಗಿಲೆಗಳು ಅದರ ಧ್ವನಿಯೂ ಇಂಪಾಗಿರುತ್ತದೆ ಎನ್ನುತ್ತಾರೆ.

ತ್ವತ್ಪಾದ ವಿನ್ಯಾಸ ವಿಶೇಷ ಧನ್ಯಾ ಮಾಪಾದಯಿಷ್ಯಂತ ಇವಾತ್ಮ ಧಾತ್ರೀಂ।
ಏನಾಂ ಸ್ವಶಾಖಾಗ್ರ ಕರ ಪ್ರಯುಕ್ತೈಃ ಪ್ರಚಿನ್ವತೇ ಭೂಮಿರುಹಾಃ ಪ್ರಸೂನೈಃ ॥೨೪॥

ಮರಗಳು ತಮ್ಮ ತಾಯಿಯಾದ ಭೂಮಿಯು ನಿಮ್ಮ ದಿವ್ಯ ಪಾದಾರವಿಂದದ ಸ್ಪರ್ಶದಿಂದ ವಿಶೇಷ ಭಾಗ್ಯವನ್ನು ಹೊಂದಿದುದರಿಂದ ನಿಮ್ಮ ಉಪಚಾರಕ್ಕಾಗಿ, ದಾರಿಯುದ್ದಕ್ಕೂ ಸುಂದರವಾದ ಪುಷ್ಪಗಳನ್ನು ಸುರಿಸುತ್ತವೆ.

ಭಗವಂತನ ಅವತಾರವಾದ ಬಲರಾಮನ ಪಾದಸ್ಪರ್ಶದಿಂದ ಭೂದೇವಿಯು ಪವಿತ್ರಳಾಗುತ್ತಾಳೆ. ಆ ಪವಿತ್ರವಾದ ಮಣ್ಣಿನಲ್ಲಿ ಬೆಳೆಯುವ ಮರಗಳು, ತಮ್ಮ ಕೃತಜ್ಞತೆಯನ್ನು ತೋರಿಸಲು, ನೀವು ಈ ವನದಲ್ಲಿ ಸಂಚರಿಸುವಾಗ, ಅತ್ಯುತ್ತಮವಾದ ಪುಷ್ಪಗಳನ್ನು ಬಿಟ್ಟು, ಅವುಗಳನ್ನು ಉದುರಿಸಿ, ನಿಮಗೆ ನಡೆಮುಡಿ ಹಾಸಿದಂತೆ ರಾಜೋಪಚಾರವನ್ನು ಮಾಡುತ್ತಿವೆ

ನಿಶಾಮಯಂತ್ಯೋ ವನದೇವತಾಸ್ತ್ವಾಂ ಚಕೋರ ಸಂಮೋಹನ ಚಾರುದೀಪ್ತಿಂ।
ಪ್ರೀತಿಂ ಪ್ರಸೂತಾಂ ಪರಿವಾಹ್ಯಗೀತ್ಯೈಃ ಸೀತಾಶ್ರುಣಾ ಶೇಷಮಿವೋದ್ಧಮಂತಿ॥೨೫॥

ವನದಲ್ಲಿ ದೇವತೆಗಳು ಚಕೋರ ಪಕ್ಷಿಗಳಿಗೆ 'ಚಂದ್ರನ ಬೆಳದಿಂಗಳು ಇದು' ಎಂದು ಮೋಹಗೊಳಿಸತಕ್ಕ ಸುಂದರವಾದ ಶರೀರವುಳ್ಳ ನಿಮ್ಮನ್ನು ನೋಡಿ ಪರಮಾನಂದ ಹೊಂದಿ ಶರೀರವುಳ್ಳ ಅವುಗಳಿಗೆ ಆನಂದ ತರಿಸುವ ಹಾಡುಗಳನ್ನು ಹಾಡಿ ಹೆಚ್ಚಿನ ಆನಂದವನ್ನು ತಮ್ಮ ತಣ್ಣಗಿನ ಆನಂದ ಭಾಷ್ಪಗಳಿಂದ ವ್ಯಕ್ತಪಡಿಸುತ್ತವೆ. (ಉತ್ಪ್ರೇಕ್ಷಾಲಂಕಾರ).

ಚಕೋರ ಪಕ್ಷಿಗಳಿಗೆ ಚಂದ್ರನನ್ನು ನೋಡುವುದು ಬಹಳ ಆನಂದದಾಯಕವಾದದ್ದು, ಅದಕ್ಕಾಗಿ ಅನು ಕಾಯುತ್ತಿರುತ್ತವೆ. ಚಂದ್ರನನ್ನು ನೋಡಿದ ತಕ್ಷಣ, ಆನಂದದಿಂದ ಗಾಯನ ಮಾಡುತ್ತವೆ. ಈ ವನದಲ್ಲಿ ಈಗ, ಚಂದ್ರನಂತಿರುವ ನಿಮ್ಮನ್ನು ಚಂದ್ರನೆಂದು ಭಾವಿಸಿ, ಚಕೋರ ಪಕ್ಷಿಗಳು ಆನಂದ ವ್ಯಕ್ತಪಡಿಸುತ್ತವೆ. ಅವುಗಳು ನಿಮ್ಮನ್ನು ಕಂಡು ಆನಂದಭಾಷ್ಪ ವನ್ನು ಸುರಿಸುವಂತೆ ಮಾಡುತ್ತಾರೆ ವನಲಕ್ಷ್ಮಿಯರು.

ರಸಾಲ ರಂಭಾದಿ ಭವೈರಿಹೈತಾಃ ಫಲದ್ರವೈಃ ಪಿಂಚಿಲ ಪಾರ್ಶ್ವ ಭಾಗಾಃ
ವತ್ಸಾವಗಾಹ್ಯಾ ವನರಾಜಿಮಧ್ಯೆ ಪೂರ್ಣಾಃ ಸುಧಾಯಾ ಇವ ಭಾಂತಿ ಕುಲ್ಯಾಃ ॥೨೬॥

ಮಾವು, ಬಾಳೆ, ಮುಂತಾದ ಮರಗಳಲ್ಲಿ ಉಂಟಾದ ಹೂವುಗಳ ರಸದ ಸುರಿಯುವಿಕೆ ಯಿಂದ ಕೆಸರಾಗಿ ಒದ್ದೆಯಾದ ಇಳಿಜಾರಾದ ಗದ್ದೆಗಳು ಈ ವನಪ್ರದೇಶದಲ್ಲಿ ಉಂಟಾಗಿ ಹಳ್ಳಗಳಲ್ಲಿ ಜಾರುವ ಕರುಗಳು ಅಮೃತ ತುಂಬಿದಂತೆ ಬೆಳಗುತ್ತವೆ.

ಭೂಮಿ ಪ್ರದೇಶವೆಲ್ಲವೂ, ಹೂಗಳ ರಸಗಳ ಸೋರುವಿಕೆಯಿಂದ ಕೆಸರಾಗಿ, ಸುವಾಸನೆ ಯನ್ನೂ ಬೀರುತ್ತದೆ. ಆ ಒದ್ದೆಯಾದ ಜಾಗಗಳಲ್ಲಿ ಕರುಗಳೂ ಜಾರಿ ಬೀಳುತ್ತವೆ. ಒಟ್ಟಿನಲ್ಲಿ ನಿಮ್ಮ ಪ್ರವೇಶದಿಂದ ಈ ಭೂಮಿಯ ಜಾಗದಲ್ಲಿ ಎಲ್ಲೆಲ್ಲೂ ಅಮೃತ ತುಂಬಿರುವಂತೆ ಭಾಸವಾಗುತ್ತದೆ.

ಕಲ್ಹಾರ ಪದ್ಮೋತ್ಪಲ ಕಾಂತಿಭಿಸ್ತೆ ಕಟಾಕ್ಷ ವಿಕ್ಷೇಪ ಗುಣಂ ಭಜಂತ್ಯ।
ಅರಣ್ಯಭಾಗಾನ್ ಅಭಿತಃ ಪ್ರವಾಹೈರಾಪ್ಯಾಯ ಯತ್ಯಾಪ ಇಮಾಃ ಪ್ರಸನ್ನಾಃ ॥೨೭॥

ಇಲ್ಲಿ ತಿಳಿಯಾದ ತೀರ್ಥಗಳು ಕಲ್ಹಾರ, ತಾವರೆ ಉತ್ಪಲ, ಎನ್ನುವ ಪುಷ್ಪಗಳನ್ನು ಹೊಂದಿ, ನಿಮ್ಮ ಕಟಾಕ್ಷದಿಂದ ಸುಂದರವಾಗಿ ನಳನಳಿಸುತ್ತಾ ತಮ್ಮ ಪ್ರವಾಹಗಳಲ್ಲಿ ಕಾಡಿನ ಪ್ರದೇಶಗಳಿಗೆ ಹರಿಯುತ್ತವೆ.

ಎಲ್ಲಾ ತೀರ್ಥಗಳು ನಿಮ್ಮ ಪದತಲ ಸ್ಪರ್ಶದಿಂದ, ತುಂಬಿ ಹರಿಯುತ್ತಾ ಪ್ರವಾಹಗಳನ್ನು ಉಂಟು ಮಾಡುತ್ತಾ ವಿವಿಧ ಪುಷ್ಪಗಳನ್ನು ಬಿಡುವ ಮರಗಳಿಂದ ತುಂಬಿ ನಳನಳಿಸುತ್ತಾ ಆಪ್ಯಾಯಮಾನವಾಗಿದೆ.

ತದ್ವಕ್ತ್ರ ಪದ್ಮ ಪ್ರತಿಮಾ ಸಹಸ್ರೈಃ ಸಂ ಸೃಜ್ಯಮಾನೇವ ಸ ಪುಷ್ಕರಾಸೌ।
ಪ್ರಭಾವತಃ ಖ್ಯಾಪಿತ ಪುಷ್ಕರಶ್ರೀಃ ಪುಣ್ಯೋದಕಾ ಪುಷ್ಕರಿಣೀ ವಿಭಾತಿ ॥೨೮॥

ಪುನೀತವಾದ ತೀರ್ಥ ಹೊಂದಿರುವ ಈ ಪುಷ್ಕರಿಣಿಯಾದುದು ಕೆಂದಾವರೆ ಪುಷ್ಪಗಳನ್ನು ಹೊಂದಿ ನಿಮ್ಮ ಮುಖಾರವಿಂದದ ಕಾಂತಿಯನ್ನು ಅಸಂಖ್ಯವಾಗಿ ಪಡೆದುಕೊಂಡು, ಹೆಮ್ಮೆಯಿಂದ ಪುಷ್ಕರವೆಂಬ ಪ್ರಸಿದ್ಧವಾದ ದಿವ್ಯ ತೀರ್ಥದ ಹಿರಿಮೆಯನ್ನು ತಾನೂ ಹೊಂದಿರುವುದಾಗಿ ತಿಳಿಸುತ್ತಿರುವಂತಿದೆ.

ತೀರ್ಥಗಳೆಲ್ಲಾ ಅತ್ಯಂತ ಶ್ರೇಷ್ಠವಾದುದು ಪುಷ್ಕರ ತೀರ್ಥ. ಇಲ್ಲಿರುವ ಪುಷ್ಕರಿಣಿಯೂ ಸಹ, ನಿಮ್ಮ ಮುಖ ಕಾಂತಿಯಿಂದ ಉತ್ತೇಜಿತಗೊಂಡು ತಾನೂ ಪುಷ್ಕರ ತೀರ್ಥಕ್ಕೆ ಯಾವ ರೀತಿಯಿಂದಲೂ ಕಡಿಮೆಯಿಲ್ಲವೆಂದು ಹೆಮ್ಮೆಯಿಂದ ಬೀಗುತ್ತದೆ.

ಸಂಚಾರ ಜಾತೈಃ ಶ್ರಮವಾರಿ ಲೇಶೈ ರಾಲಕ್ಷ್ಯ ಮುಕ್ತಾ ಗುಣ ಮಂಡನಂ ತ್ವಾಂ।
ವ್ಯಕ್ತಂ ನದೀ ಬಿಜಯತೀಯ ಮಾರಾ ದಂಬೋರುಹೈರಾಶ್ರಿತ ವೀಚಿಹಸ್ತೈ ॥೨೯॥

ಕಾಡಿನಲ್ಲಿ ಎಲ್ಲೆಲ್ಲೂ ಕಾಣಬರುವ ಹೂವಿನ ಉದುರುವಿಕೆಯಿಂದ ಉಂಟಾದ ಮುತ್ತು ಮಾಲೆಯಿಂದ ಅಲಂಕರಿಸಲ್ಪಟ್ಟಂತೆ ಕಾಣುವ ನಿಮಗೆ ಇಲ್ಲಿ ನದಿಯು ತನ್ನ ಅಲೆಯಂತೆ ಕೈಗಳಲ್ಲಿ ತಾವರೆ ಹೂವುಗಳನ್ನು ಎತ್ತಿ ಚೆನ್ನಾಗಿ ಅರ್ಪಿಸಿ, ಉಪಚಾರ ಮಾಡುವಂತೆ ತೋರುತ್ತಿದೆ.

ಈ ವನದಲ್ಲಿರುವ ಸಸ್ಯಗಳೆಲ್ಲವೂ ಪುಷ್ಪ ಭರಿತವಾಗಿದ್ದು, ಅವುಗಳ ಹೂಗಳು ನಿಮ್ಮ ಮೇಲೆ ಉದುರಿ ನಿಮಗೆ ಮಾಲೆಯನ್ನು ತೊಡಿಸಿದಂತೆ ಅಲ್ಲದೆ, ದೊಡ್ಡದಾದ ಎಲೆಗಳು ಗಾಳಿಯು ಬೀಸುವಿಕೆಯಿಂದ ತಮಗೆ ಚಾಮರ ಸೇವೆ ಮಾಡುವಂತಿದೆ.

ಸಹಂತಿ ವಾತಾ ತಪವರ್ಷ ವಾತಾಂ ಸ್ತೋಯೇಷು ತಿಷ್ಠಂತಿ ರವಿ ಪ್ರತೀಕ್ಷಾಃ।
ತಪಸ್ಯತ ಸ್ತ್ವನ್ಮುಖ ಕಾಂತಿ ಲೋಭಾತ್ ಪದ್ಮಾನಿಮಾನ್ ಪಶ್ಚಿಮ ರಾಮಮನ್ಯೈ॥೩೦॥

ಪರಶುರಾಮನಾಗಿ, ಚಕ್ರವರ್ತಿ ಕುಮಾರ (ರಾಮ)ನಾಗಿ ಹಿಂದೆ ಅವತರಿಸಿ, ಈಗ ಮೂರನೆಯ ರಾಮನಾಗಿ ತೋರುವ ನಿಮ್ಮ ದಿವ್ಯ ಮುಖಾರವಿಂದದ ಕಾಂತಿಯನ್ನು ತಾವೂ ಹೊಂದಬೇಕೆಂಬ ಆಸೆಯಿಂದ ಇಲ್ಲಿ ತಾವರೆಗಳು ಗಾಳಿ, ಬಿಸಿಲು, ಮಳೆ ಇವೆಲ್ಲವನ್ನೂ ಸಹಿಸಿಕೊಂಡು ನಡು ನೀರಿನಲ್ಲಿ ನಿಂತುಕೊಂಡು ತಪಸ್ಸನ್ನು ಮಾಡುತ್ತಿವೆಯೋ ಎಂಬಂತೆ ತೋರುತ್ತಿದೆ.

ಭಗವಂತನ ಅವತಾರವಾದ ಬಲರಾಮನ ಶೋಭೆಯೇ ಅಪೂರ್ವವಾದದ್ದು. ಅವನಂತೆಯೇ ಅಂದರೆ ಅವನ ಮುಖಾರವಿಂದದಂತೆಯೇ ತೋರಬೇಕೆಂದು ತಾವರೆ ಪುಷ್ಪಗಳು ಸರಸ್ಸುಗಳಲ್ಲಿ ನಡು ನೀರಿನಲ್ಲಿ ಗಾಳಿ, ಮಳೆಯನ್ನು ಲೆಕ್ಕಿಸದೆ ತಪಸ್ಸನ್ನು ನಡೆಸುತ್ತಿರುವ ಹಾಗೆ ತೋರುತ್ತಿದೆ.

ತರಂಗೀಣೀಭಿಃ ಪರಿರಮ್ಯಮುಕ್ತಃ ಸಂಲಾಪವಾನ್ ಭೃಂಗರವೈರಧೀರೈಃ।
ಆಪೃಚ್ಛತೇ ನೂನಮತ ಪ್ರಯಾತಂ ಮಂದೀಭವನ್ ಕುಂದ ಸಮೀರಣಸ್ತ್ವಾಂ॥೨೧॥

ಇಲ್ಲಿ ನದಿಯ ಮೇಲೆ ಬೀಸುವ ಗಾಳಿಯಾದುದು ದಳಗಳಾಗಿ ಸೇರಿದವುದಾದುದಾಗಿ ಧೈರ್ಯವಿಲ್ಲದ ಮೃದುವಾದ ದುಂಬಿಗಳ ಶಬ್ದದಿಂದ ಮಾತಾಡುವ ಹಾಗೆ ಮೆಲ್ಲಗೆ ಬೀಸಿ ಇಲ್ಲಿಂದ ಹೊರಡುವ ನಿಮ್ಮನ್ನು ಕಂಡು ಗೌರವಿಸುವಂತಿದೆ.

ಗಾಳಿಯು ಹಿತವಾಗಿ ಬೀಸುತ್ತಿದ್ದು, ದುಂಬಿಗಳು ಸಹ ತಮ್ಮ ಇಂಪಾದ ಝೇಂಕಾರ ದಿಂದ ನಿಮ್ಮನ್ನು ಗೌರವಿಸುವ ರೀತಿ ತೋರುತ್ತಿದೆ.

ಮನಃ ಪ್ರಸಾದಂ ತವ ದರ್ಶಯಂತಿ ಪ್ರಾಲೇಯ ಸಂಘಾತನಿಭೈಃ ಪಯೋಭಿಃ।
ಶುದ್ಧಾನವೇಂದೀವರ ನೀಲವಾಸಾ ಶ್ಛಾಯೇವ ತೇ ಶೈವಲಿನಿ ವಿಭಾತಿ ॥೨೨॥

ಇಬ್ಬನಿಯ ತಣ್ಣೀರಿನಲ್ಲಿ ನಿಮ್ಮ ಮನಸ್ಸಿನ ಪ್ರಶಾಂತತೆಯನ್ನು ಇತರರು ನೋಡುವ ಹಾಗೆ ಬಿಳಿಯಾಗಿ ಹೊಸ ಅರಳಿದ ಹೂಗಳು ನೀಲವಸ್ತ್ರದಂತೆ ಕಾಣುವ ಈ ನದಿಯು ನಿಮ್ಮ ಶರೀರದಂತೆಯೂ ಬೆಳಗುತ್ತಿದೆ.

ಇಲ್ಲಿ ಸರಸ್ಸಿನ ತಣ್ಣೀರು ಬಹಳ ಪ್ರಶಾಂತವಾಗಿ ನಿಮ್ಮ ಮನಸ್ಸಿನಂತೆಯೇ ಇದೆ. ರಾಮಾಯಣದಲ್ಲಿ ''ರಮಣೀಯ ಪ್ರಸನ್ನಾಂಬು ಸನ್ಮನುಷ್ಯ ಮನೋಯಥಾ'' ಎಂದು ಹೇಳಿದೆ. ಸತ್ಪುರುಷರ ಮನಸ್ಸು ತಿಳಿಯಾದ ನೀರಿನಂತಿರುತ್ತದೆ. ಅದೇ ರೀತಿ ಇಲ್ಲಿ ಹರಿಯುವ ನದಿಯು. ಬಹಳ ಶುಭ್ರವಾಗಿ, ಕೆಸರಿಲ್ಲದೆ ನಿಮ್ಮ ಶರೀರವು ಯಾವ ರೀತಿ ಶುಭ್ರವಾಗಿದೆಯೋ ಅದೇ ರೀತಿ ಇದೆ.

ಸಹ ಪ್ರಯಚ್ಛಂತಿ ತವ ಪ್ರಿಯಾಭಿ ಚಂಚೂರ್ಯಮಾಣಾ ಇವ ಚಕ್ರವಾಕಾಃ।
ಆಹೂಯ ದಾತಾರ ಇವಾತಿಥೇಯಾಃ ಕಾಲೋಚಿತಾಂ ಕಸ್ತ್ವಮಿತೀವ ವಾಚಂ॥೨೩॥

ಚಕ್ರವಾಕ ಪಕ್ಷಿಗಳು ತಮ್ಮ ಸಹಚರರೊಡನೆ ಇಲ್ಲಿ ಓಡಾಡುವುದರಿಂದ ಅತಿಥಿಗಳ ವಿಷಯದಲ್ಲಿ ಸತ್ಪುರುಷರಂತೆ ಕರೆದು ಉಪಚರಿಸಿದಂತೆ (ನೀವು ಯಾರು, ಎಲ್ಲಿಂದ ಬಂದಿರಿ) ಎಂದು ಪ್ರೀತಿಯಿಂದ ಮಾತನಾಡಿಸುವಂತೆ ಇವೆ.

''**ಅತಿಥಿ ಖಿಲ ಪೂಜಾರ್ಹ ಪ್ರಾಕೃತೋಽಪಿ ವಿಜಾನತಃ**'' ಎಂದು ರಾಮಾಯಣ ವಾಕ್ಯವಿದೆ. ಅತಿಥಿಗಳು ಎಂತಹವರನ್ನೂ ಎಂಥವರೇ ಆಗಿರಲಿ ಅವರನ್ನು ಸತ್ಕರಿಸಬೇಕು. ಅಂತಹುದರಲ್ಲಿ ಸ್ವಯಂ ಭಗವಂತನೇ (ಸಕಲ ಕಲ್ಯಾಣ ಗುಣ ಪರಿಪೂರ್ಣನಾದ) ಈ ವನಕ್ಕೆ ಬಂದಿರುವಾಗ, ಅವನನ್ನು ಸತ್ಕರಿಸಲು ಪಶುಪಕ್ಷಿಗಳಾದಿಯಾಗಿ ಸಿದ್ಧರಾಗಿ ನಿಂತು, ನಿಮ್ಮನ್ನು ಪ್ರೀತಿಯಿಂದ ಮಾತನಾಡಿಸುತ್ತಿರುವಂತಿದೆ.

ವಿಧೂತ ಬಾಲ ವ್ಯಜನಾಃ ಸ್ವಪಕ್ಷ್ಯೈಶ್ಚಾರುಸ್ವನಾಪಾದಿತ ಚಾಟುವಾದಾಃ।
ಅಭಿನ್ನವರ್ಣಾಃ ಪ್ರತಿಯಂತ್ಯಮೀ ತ್ವಾಂ ರಾಜೋಪಚಾರೈರಿವ ರಾಜ ಹಂಸಾಃ॥೭೪॥

ನಿಮ್ಮೊಡನೆ ವರ್ಗ ಸಾಮ್ಯವನ್ನು ಹೊಂದಿರುವ ರಾಜ ಹಂಸಗಳೆಂಬ ಪಕ್ಷಿಗಳು, ತಮ್ಮ ರೆಕ್ಕೆಗಳನ್ನು ಚಾಮರಗಳಂತೆ ಮಾಡಿಕೊಂಡು ಬೀಸುವುದರಿಂದ ಮತ್ತು ಮಧುರವಾದ ಧ್ವನಿಯಿಂದ ಚಮತ್ಕಾರವಾದ ಮಾತುಗಳನ್ನಾಡುತ್ತಾ ನಿಮಗೆ ರಾಜೋಪಚಾರ ಮಾಡುವಂತಿದೆ.

ಶ್ರೀಕೃಷ್ಣನ ಬಣ್ಣ ಕಪ್ಪು ಆದರೆ ಬಲರಾಮನು ಶ್ವೇತ ವರ್ಣದವನು. ಆದ್ದರಿಂದ ಈ ವನದಲ್ಲಿ ಸರಸ್ಸಿನಲ್ಲಿ ಓಡಿಯಾಡುವ ಬಿಳಿಯ ರಾಜ ಹಂಸಗಳು, ತಮ್ಮ ವರ್ಣದವನೇ ಆದ ನಿಮ್ಮನ್ನು ನೋಡಿ ತಮ್ಮ ರೆಕ್ಕೆಗಳನ್ನು ಚಾಮರಗಳಂತೆ ಬೀಸುತ್ತಾ, ಮಧುರ ಧ್ವನಿಗೈಯ್ಯುತ್ತಾ ತಮಗೆ ಘೋರ ಷೋಡಶೋಪಚಾರ ಮಾಡುತ್ತಿವೆಯೇನೋ ಎಂದು ತೋರುತ್ತಿದೆ.

ದಿವಾಪಿ ಗೋವರ್ಧನ ನಿರ್ಜರಾಣಾಂ ಸಂಭಾದಿತೇ ವ್ಯೋಮ್ನಿ ತುಷಾರಜಾಲೈಃ।
ಇಹಾತ ಪಶ್ಚಾಂದ್ರಮಸೇನ ಧಾಮ್ನಾ ವಿಕಲ್ಪ್ಯತೆ ಬೋಧಿತ ಪಂಕಜೋಽಪಿ ॥೭೫॥

ಗೋವರ್ಧನ ಬೆಟ್ಟದಲ್ಲಿ, ಮರಗಳು ಎತ್ತರಕ್ಕೆ ಬೆಳೆದು ಆಕಾರವನ್ನು ಮರೆ ಮಾಡುವುದರಿಂದ ಛಳಿಯು ಹೆಚ್ಚಾಗುತ್ತದೆ. (ಹಗಲು ಸಹ ರಾತ್ರಿಯಂತೆ ಕಾಣುವುದರಿಂದ) ಇಲ್ಲಿ ಬಿಸಿಲಾದುದು ತಾವರೆ ಹೂವುಗಳು ಅರಳುವಂತೆ ಮಾಡಿರುವುದರಿಂದ ಚಂದ್ರನ ಬೆಳದಿಂಗಳೋ ಎಂದು ಭ್ರಮಿಸುವಂತೆ ಆಗಿದೆ.

ಗೋವರ್ಧನ ಬೆಟ್ಟಕ್ಕಿಂತ ಇಲ್ಲಿಯ ವಾತಾವರಣ ಹಿತವಾಗಿದೆ. ಅಲ್ಲಿ ಗಿರಿಯ ಮೇಲೆ ಛಳಿ ಜಾಸ್ತಿ. ಇಲ್ಲಿ ಹಾಗಿಲ್ಲದೆ ಸಮಶೀತೋಷ್ಣವಾಗಿದೆ. ಇಲ್ಲಿ ಬಿಸಿಲಿನಿಂದ ತಾವರೆ ಹೂಗಳು ಅರಳಿ, ಅವುಗಳ ಪ್ರತಿರೂಪವು ಚಂದ್ರನ ಬೆಳದಿಂಗಳನ್ನು ನೆನಪಿಗೆ ತರುತ್ತದೆ. ನಿಮ್ಮ ವಿಹಾರಕ್ಕೆ ಯೋಗ್ಯವಾಗಿದೆ ಈ ವನ.

ಅತರ್ಕಿತ ಪ್ರಾಪ್ತಮವೇಕ್ಷ್ಯ ಕಾಂತ್ಯಾ ಮೇಘಂಕರಂ ಮೇಚಕ ಮಂಬರಂ ತೇ।
ನಿನಾದ ನಿಷ್ಪಾದಿತ ಷಡ್ಜ ಗೀತಾ ನೃತ್ಯಂತ್ಯಮೀ ಸಾನುಷು ನೀಲಕಂಠಾಃ ॥೭೬॥

ನಿಮ್ಮ ನೀಲಿಯ ಬಟ್ಟೆಯಾದುದು, ತನ್ನಂತೆಯೇ ಇರುವ ಆಕಾರವನ್ನು ತೋರಿಸುತ್ತದೆಯಾದ್ದರಿಂದ ಮೇಘವೇ ತಾವು ಎದಿರು ನೋಡದೆ ಇರುವ ಕಾಂತಿಯು ಬಂದದ್ದರಿಂದ ನವಿಲುಗಳು "ಕೇಕಾ" ಎಂದು ಮಧುರವಾದ ಷಡ್ಜ ಸ್ವರದಿಂದ ಆನಂದದಿಂದ ನರ್ತಿಸುತ್ತಿವೆ.

ಬಲರಾಮನು ಧರಿಸಿರುವ ನೀಲಿಯ ಬಟ್ಟೆಯು ಶುಭ್ರ ಆಕಾಶದ ಬಣ್ಣವಾದ ನೀಲಿಯನ್ನು ಹೋಲುತ್ತಿದೆ. ಇದರಿಂದಾಗಿ ನೀವು ಆಕಾಶಕ್ಕಿಂತ ಹೆಚ್ಚು ಕಾಂತಿಯುಕ್ತವಾಗಿ ತೋರುತ್ತಿರುವುದರಿಂದ ನಿಮ್ಮನ್ನು ನೋಡಿಯೇ ಮೇಘಗಳನ್ನು ನೋಡಿ ಆನಂದದಿಂದ ಕೇಕೆ ಹಾಕುವ ನವಿಲುಗಳು ಇಂಪಾದ ಷಡ್ಜ ಸ್ವರವನ್ನು ಹೊರಡಿಸುತ್ತಿವೆ.

ನದೀ ಭಿರಾರಬ್ಧ ತರಂಗಲಾಸ್ಯಂ ನಾದೈರ್ಯುತಂ ನಿರ್ಜರ ದುಂದುಭಿನಾಂ।
ಗಾಯದ್ದ್ವಿರೇಫಂ ಗಿರಿಣಾ ತ್ವದರ್ಥಂ ಪ್ರಾಯೇಣ ಸಂಗೀತಮಿಹ ಪ್ರಯುಕ್ತಂ॥೩೭॥

ಈ ಬೆಟ್ಟವಾದುದು ನಿಮಗಾಗಿ ನದಿಗಳಲ್ಲಿ ಅಲೆಗಳನ್ನು ಹೊಂದಿ ಆಟಗಳನ್ನು ಬೆಟ್ಟದ ಪ್ರಕೃತಿ ಸೌಂದರ್ಯವನ್ನು ಕೂಡಿ ದುಂದುಭಿ ವಾದ್ಯಘೋಷವನ್ನು ದುಂಬಿಗಳ ಮೂಲಕ ಮಾಡಿ ಹಾಡುಗಳನ್ನು ಹಾಡುತ್ತಾ ಸಂಗೀತವನ್ನು ಹೇಳುವಂತಿದೆ.

ನದಿಗಳೆಲ್ಲವೂ ನಿಮಗಾಗಿಯೇ ತುಂಬಿ ಹರಿದು ಪ್ರಕೃತಿ ಸೌಂದರ್ಯವು ಹೆಚ್ಚಿದೆ. ದುಂಬಿಗಳ ಝೇಂಕಾರ ಧ್ವನಿಯು ದುಂದುಭಿ ಘೋಷದಂತೆ ಸಂಗೀತವನ್ನು ಹಾಡಿ ನಿಮಗೆ ಆನಂದ ಉಂಟು ಮಾಡುತ್ತಿದೆ.

ಕಲಿಂದಜಾ ಕಚ್ಛಭುವಾಂ ಸಖೀಭಿಃ ಪ್ರಚ್ಛಾಯ ವನ್ಯಾಭಿ ರಧಿತ್ಯಕಾಭಿಃ।
ಸೂತೇಗಿರಿಃ ಸೂಚಿತ ನಂದನೋಽಸೌ ಸ್ವರ್ಗೌಕಸಾಂ ಸ್ವೈರ ವಿಹಾರ ವಾಂಛಾಂ ॥೩೮॥

ಯಮುನಾ ನದಿಯ ದಡದ ತೀರಗಳಲ್ಲಿ ಹರಡಿರುವ ತಂಪಾಗಿರುವ ವನ ಪ್ರದೇಶ ಗಳನ್ನು ಹೊಂದಿರುವ ಬೆಟ್ಟದ ಮೇಲಿನ ಪ್ರದೇಶಗಳ ನಂದನ ವನಗಳಲ್ಲಿ ತೋರುವವ ರಾದ್ದರಿಂದ ಸ್ವರ್ಗದಲ್ಲಿರುವವರಿಗೆ ಇಲ್ಲಿಯೇ ಯಥೇಚ್ಛವಾಗಿ ವಿಹರಿಸಲು ಆಸೆಯನ್ನು ಉಂಟು ಮಾಡುತ್ತದೆ. ಈ ಬೆಟ್ಟವು ಸ್ವರ್ಗದಲ್ಲಿರುವವರೂ ಸಹ ಈ ಬೆಟ್ಟದಲ್ಲೇ ವಿಹರಿಸಲು ಇಚ್ಛಿಸುತ್ತಾರೆ.

'ಕಳಿಂದಜಾ' ಎಂದರೆ ಯಮುನಾ ನದಿ. ಯಮುನಾ ನದಿಯ ತೀರಗಳಲ್ಲಿ ವನ ಸಿರಿಯು ಅದ್ಭುತವಾಗಿದೆ. ಪ್ರೇಮಿಗಳಿಗೆ, ಪ್ರಣಯಿಗಳಿಗೆ ವಿಹಾರ ಯೋಗ್ಯವಾದ ಸ್ಥಳವಾಗಿದೆ.

ಅನ್ಯಗತಂ ವೀಕ್ಷ್ಯ ಭವಂತಮಾರಾತ್ ಸಾಲಾ ಇಮೇ ಸ್ವಾಮಿನ ತಾಗ್ರಶಾಖಾಃ।
ಸುಧಾರಸಸ್ವಾದು ತಮಾನಿ ಭಕ್ತ್ಯಾಸ್ವಯಂ ಪ್ರಯಚ್ಛಂತಿ ಫಲಾನಿ ಧನ್ಯಾಃ ॥೩೯॥

ಹೊಸದಾದ ಬಂದಿರುವ ನಿಮ್ಮನ್ನು ನೋಡಿ ಇಲ್ಲಿ ಮರಗಳು ಭಾಗ್ಯ ಹೊಂದಿದವು ಗಳಾಗಿ, ನಿಮಗೆ ಪ್ರೀತಿಯಿಂದ ಅತ್ಯಂತ ಸ್ವಾದುವಾಗಿರುವ ಫಲಗಳನ್ನು ತಾವಾಗಿಯೇ ಸಮರ್ಪಿಸುತ್ತಿವೆ. ಮತ್ತೆ ಈ ವನದ ಮರಗಳು ಬಲರಾಮನನ್ನು ನೋಡಿ ಅವನಿಗೆ ಉಪಚಾರ ಮಾಡುವ ರೀತಿ ಯಥೇಚ್ಛವಾಗಿ ಸ್ವಾದುವಾದ ಫಲಗಳನ್ನು ನೀಡುತ್ತಿವೆ ಎಂದು ವರ್ಣಿಸ ಲಾಗಿದೆ. ಹಿಂದೆಯೂ ಈ ರೀತಿಯ ವರ್ಣನೆ ಮಾಡಿದ್ದಾರೆ.

ಪಾತ್ರೀ ಭವಂತಸ್ತವ ವೀಕ್ಷಣಾನಾಂ ಪದ್ಮಾಲಯಾ ವಾಸ ವಿಕಲ್ಪಿತಾನಾಂ।
ಚರಾಚರಾಃ ಕಾನಿ ಕಿಯಂತಿ ವೈತೆ ತಪಾಂಸ್ಯತಪ್ಯಂತ ಭವಾಂತರೇಷು ॥೪೦॥

ಅಲರ್‌ಮೇಲ್ ಮಂಗೈ (ಲಕ್ಷ್ಮಿ)ಯ ಕೈಯ್ಯಲ್ಲಿ ಬೆಳಗುವ ತಾವರೆಯಂತೆ ತೋರುವ ನಿಮ್ಮ ಕಣ್ಣುಗಳಿಗೆ ತೋರುವ ಇಲ್ಲಿರುವ ಚರಾಚರ ವಸ್ತುಗಳು ಹಿಂದಿನ ಜನ್ಮಗಳಲ್ಲಿ ಎಷ್ಟು ತಪಸ್ಸನ್ನು ಮಾಡಿದ್ದವೋ ಎನ್ನುವಂತಿದೆ.

ನಿಮ್ಮ ಕಟಾಕ್ಷ ಬೀಳುವ ಎಲ್ಲಾ ಚರಾಚರ ವಸ್ತುಗಳು ಅನೇಕ ಜನ್ಮಗಳ ಪುಣ್ಯ ಫಲವನ್ನು ಪಡೆದಿದ್ದಿರಬೇಕು. ಇಲ್ಲದಿದ್ದಲ್ಲಿ ಈ ಕ್ಷೇತ್ರದಲ್ಲಿ ಸ್ವಯಂ ಭಗವಂತನೇ ಓಡಿಯಾಡುತ್ತಾ ಇರಲು ಸಾಧ್ಯವಿದ್ದಿತ್ತೆ? ಅವೆಲ್ಲವೂ ಮಹಾಭಾಗ್ಯಶಾಲಿಗಳು.

ವಿಜಾನತಾಂ ಸತ್ಪುರುಷ ಪ್ರಭಾವಂ ಪುಂಸಾಮಮಿ ಪುಣ್ಯತಮೀ ಭವಂತಃ।
ಪ್ರಾಯಸ್ತ್ವದಂಗೀ ಕರಣಾತ್ ಪ್ರಯಾಸ್ಯನ್ತ್ಯಾರಾಧ್ಯತಾ ಮದ್ರಿ ವನಾವಕಾಶಾಃ ॥೪೧॥

ನೀವು ಓಡಿಯಾಡಲು ಇಚ್ಛಿಸಿರುವುದರಿಂದ ಇನ್ನೂ ಹೆಚ್ಚು ಪವಿತ್ರವಾದ ಈ ಬೆಟ್ಟದ ಕಾಡುಮರಗಳು ಸತ್ಪುರುಷರ ಮಹಿಮೆಯನ್ನು ಅರಿತ ಪುರುಷರು ಪೂಜಿಸುವಂತಾಗಿದೆ.

ನೀವು ಈ ಕಾಡುಗಳಲ್ಲಿ ವಿಹರಿಸಲು ಇಚ್ಛಿಸಿದ್ದೀರಿ. ಇದರಿಂದ ಈ ಪ್ರದೇಶ ಇನ್ನೂ ಹೆಚ್ಚು ಪವಿತ್ರವಾಗಿದೆ. ಯಾವುದೇ ಸ್ಥಳವು ತನಗೆ ತಾನೇ ಪವಿತ್ರವಾಗುವುದಿಲ್ಲ, ಆ ಸ್ಥಳದಲ್ಲಿ ಸತ್ಪುರುಷರು ವಾಸ ಮಾಡಿದರೆ ಹೆಚ್ಚು ಪವಿತ್ರವೆನಿಸುತ್ತದೆ.

ಸ್ವಾಮಿ ದೇಶಿಕರು ರಹಸ್ಯತ್ರಯ ಸಾರದ ಸ್ಥಾನ ವಿಶೇಷಾಧಿಕಾರದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ.

ಸಾಕಾಶೀತಿ ನ ಚಾಕಶೀತಿ ಭುವಿಸಾ ಯೋಧ್ಯೇತಿ ನಾಧ್ಯಾಸತೇ
ಸಾವಂತೀತಿ ನ ಕಲ್ಮಷಾ ದವತಿ ಸಾಕಾಂಚೀತಿ ನೋದಂಚತೇ।
ಧತ್ತೇಸಾ ಮಧುರೇತಿ ನೋತ್ತ ಮಧುರಂ ಮಾನ್ಯಾಪಿ ನಾನ್ಯಾಪುರಿ
ಯಾ ವೈಕುಂಠ ಕಥಾ ಸುಧಾರಸ ಭುಜಾಂ ರೋಚೇತ ನೋ ಚೇತಸೇ ॥

ಪವಿತ್ರ ಕ್ಷೇತ್ರಗಳೆನಿಸಿಕೊಂಡಿರುವ ಕಾಶಿಯಾಗಲೀ, ಆವಂತಿಯಾಗಲೀ, ಅಯೋಧ್ಯೆ ಯಾಗಲೀ, ಮಧುರೆಯಾಗಲೀ ಕೇವಲ ಭಗವತಾನ್ನಿಧ್ಯದಿಂದ ಮಾತ್ರವೇ ಪವಿತ್ರವೆನಿಸುವುದಿಲ್ಲ. ಆ ಕ್ಷೇತ್ರಗಳು ಭಾಗವತೋತ್ತಮರಿಂದ ಸ್ತುತಿಸಲ್ಪಟ್ಟು ಅವರಿಗೆ ಗ್ರಾಹ್ಯವಾಗಿದ್ದಲ್ಲಿ ಮಾತ್ರ ಅವು ಪ್ರಪನ್ನನಿಗೆ ವಾಸಯೋಗ್ಯವಾಗಿರುತ್ತವೆ.

ಸಂಸ್ಕಾರ ಪೂತಾಭಿರಿತೀವ ವಾಗ್ಭಿಃ ಸಂಮೋದಯನ್ನಗ್ರಜ ಮಾದಿದೇವಃ।
ವಿಜಾತಲೀಲೋ ವಿಜಹಾರ ಹೃಷ್ಯನ್ ವಂದ್ಯಃ ಸತಾಂ ವತ್ಸಗಣಾನುಯಾಯಿ ॥೪೨॥

ಆದಿದೇವನಾದ ಶ್ರೀಕೃಷ್ಣನು ಹೇಳಿದ ಈ ಮಧುರವಾದ ಮಾತುಗಳಿಂದ ಅಣ್ಣನಿಗೆ ಆನಂದ ಉಂಟಾಗಿ, ಕರುಗಳ ಸಮೂಹದ ಹಿಂದೆ ಸಂತೋಷದಿಂದ ಆಟವಾಡಿಕೊಂಡೇ ಸತ್ಪುರುಷರಿಂದ ನಮಸ್ಕರಿಸಲ್ಪಟ್ಟು ಹೊಗಳಲ್ಪಟ್ಟು ಸಂಚಾರ ಮಾಡತೊಡಗಿದನು.

ಬಲರಾಮನಿಗೆ ಆ ಶ್ರೀಕೃಷ್ಣನ ಸ್ತುತಿಯು ಅತ್ಯಂತ ಆಪ್ಯಾಯಮಾನವಾಗಿತ್ತು. ತನಗೂ ಸಹ ಹಸುಕರುಗಳೊಡನೆ ಗೋಪಸ್ತ್ರೀಯರೊಡನೆ ಬೃಂದಾವನದ ಕಾಡಿನಲ್ಲಿ ವಿಹರಿಸು ವುದು ಇಷ್ಟವಾದ ವೃತ್ತಿಯಾದ್ದರಿಂದ ಆ ಕೃಷ್ಣನ ಮಾತನ್ನು ಅಂಗೀಕರಿಸಿ ಅವನೊಡನೆಯೇ ಆ ವನದಲ್ಲಿ ವಿಹರಿಸಲಾರಂಭಿಸಿದನು.

ಸ್ವಯಂವೃತಃ ಸ್ವೈರ ವಿಹಾರ ಲಕ್ಷ್ಮ್ಯಾ ಮುಹುರ್ವಿತೇನೇ ವಿಪಿನೇ ಮುಕುಂದಃ।
ಸ್ಥಾನಾಂತರ ಪ್ರಾಪ್ತಿ ವಿಭಾವಿತಾನಿ ಸ್ಥಿತೇರಭಿನ್ನಾನಿ ಗತಾಗತಾನಿ ॥೪೨॥

ಯಥೇಚ್ಛವಾಗಿ ವಿಹರಿಸುತ್ತಾ ಲಕ್ಷ್ಮಿಯಿಂದ ತಾನೇ ವರಿಸಲ್ಪಟ್ಟ ಸ್ವಾಮಿಯು ಅಲ್ಲಿ ವನದಲ್ಲಿ ಅನೇಕ ಗೃಹಗಳಿಗೆ ಪದೇ ಪದೇ ಹೋಗುವುದು. ಬರುವುದು ಮಾಡಿಕೊಂಡು, ಬರುತ್ತಾ ಆಯಾಸದಿಂದ ಬಳಲಿ, ತನ್ನ ಓಡಾಟವನ್ನು ನಿಯಂತ್ರಿಸಿಕೊಂಡನು.

ಶ್ರೀಕೃಷ್ಣ-ಬಲರಾಮರಿಬ್ಬರನ್ನೂ ಎಲ್ಲರೂ ಆ ವನದಲ್ಲಿ ತಮ್ಮ ತಮ್ಮ ಗೃಹಗಳಿಗೆ ಕರೆಯುವವರೆ. ಅವರೆಲ್ಲರ ಪ್ರಾರ್ಥನೆಯನ್ನು ಮನ್ನಿಸಿ, ಶ್ರೀಕೃಷ್ಣನು ಬಹುವಾಗಿ ಸುತ್ತಾಡಿ ಆಯಾಸಗೊಂಡನು. ಬಳಿಕ ಆಯಾಸ ಪರಿಹಾರ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ತನ್ನ ಅಲೆದಾಟವನ್ನು ತಾನೇ ನಿಯಂತ್ರಿಸಿಕೊಂಡನು.

ಪ್ರಭೂತಯಾ ಪುಷ್ಪಫಲ ಪ್ರಸೂತ್ಯಾ ವದಾನ್ಯವೃತ್ತೀನಿ ವನಾನಿ ದೃಷ್ಟ್ವಾ।
ಸಸ್ಮಾರ ಚಿಂತಾವಶವರ್ತಿನೀನಾಂ ವ್ರಜಸ್ಥಿತಾನಾಂ ವರವರ್ಣಿನೀನಾಂ ॥೪೪॥

ಹೂವುಗಳನ್ನು, ಹಣ್ಣುಗಳನ್ನು ಯಥೇಚ್ಛವಾಗಿ ಬಿಡುವ ವನಗಳಲ್ಲಿ ಆ ಸಿರಿಯನ್ನು ಕಂಡು ಶ್ರೀಕೃಷ್ಣನು ತನ್ನ ಚಿಂತನೆಗೆ ವಶಪಟ್ಟು ಗೋಕುಲದಿಂದ ಬರುವ ಸ್ತ್ರೀಯರನ್ನು ಕುರಿತು ಚಿಂತಿಸತೊಡಗಿದನು.

ಅಲ್ಲಿನ ವನ ಸಿರಿಯನ್ನು ಕಂಡ ಮೇಲೆ ಶ್ರೀಕೃಷ್ಣನಿಗೆ ಗೋಪಸ್ತ್ರೀಯರ ನೆನಪಾಯಿತು. ಅವರೂ ಸಹ ತನ್ನ ಬಳಿ ಇದ್ದಲ್ಲಿ ಸಂತೋಷವಾಗಿ ಕಾಲ ಕಳೆಯಬಹುದೆಂದು ನಿಶ್ಚಯಿಸಿ ಅದನ್ನು ಯಾವ ರೀತಿ ಪ್ರಾರಂಭಿಸಬೇಕೆಂದು ಚಿಂತಿಸತೊಡಗಿದನು.

ಪ್ರಾಯಸ್ತದಾಹ್ವಾನ ವಿಧೌ ನಿಯೋಕ್ತುಂ ಪ್ರಗೃಹ್ಯ ವೇಣುಂ ಪ್ರತಿಪನ್ನದೂತ್ಯಂ।
ನ್ಯವೇಶಯತ್ ಕುಟ್ಮಲಿತೆ ಸಲೀಲಂ ಬಿಂಬಾಧರೇ ಸೂಚಿತ ಚಿತ್ತರಾಗೇ ॥೪೫॥

ದೌತ್ಯಕ್ಕಾಗಿ ತನ್ನ ಕೊಳಲನ್ನು ತೆಗೆದು ಅವರುಗಳನ್ನು ಕರೆಯಲು ಉಪಯೋಗ ಮಾಡಲು ತನ್ನ ಚಿತ್ತದಲ್ಲಿ ಇರುವ ರಾಗವನ್ನು (ಪ್ರೇಮವನ್ನು) ತಿಳಿಸುವ ರೀತಿಯಲ್ಲಿ ಪ್ರೇಮ ಹೊಂದಿ, ತನ್ನ ದಿವ್ಯ ತುಟಿಯನ್ನು ಮುಚ್ಚಿಕೊಂಡು ವಿನೋದವಾಗಿ ಅದರಲ್ಲಿ ಲೀನವಾದನು. (ಕೊಳಲನ್ನು ನುಡಿಸಲು ಆರಂಭಿಸಿದನು).

ಅವರನ್ನು (ಗೋಪಸ್ತ್ರೀಯರನ್ನು) ವಶಪಡಿಸಲು, ಕೊಳಲು ಗಾನವೇ ಸರಿಯಾದ ಉಪಾಯವೆಂದು ನಿರ್ಧರಿಸಿ, ತನ್ನ ಮನಸ್ಸಿನಲ್ಲಿರುವ ಪ್ರೇಮದ ಪ್ರಕಟಣೆಗೆ, ಕೊಳಲೇ ಸರಿಯಾದ ದೂತನೆಂದು ಭಾವಿಸಿ, ತನ್ನ ದಿವ್ಯವಾದ ಅದರಗಳಿಂದ ವೇಣುಗಾನವನ್ನು ಆರಂಭಿಸಿದನು.

ಸಾಮೋಪಪನ್ನಾನ್ ಕ್ರಮಶಃ ಸ್ವರಂಧ್ರೈಃ ಸಪ್ತಸ್ವರಾನ್ ಸಪ್ತಭಿ ರುದ್ವಮಂತಂ।
ಪ್ರಚಕ್ರಮೇ ಬಾದಯಿತುಂ ವನಾಂತೆ ವಂಶಂ ಪ್ರಿಯೋ ವಲ್ಲವ ವಂಶಜಾನಾಂ ॥೪೬॥

ಗೋಕುಲದಲ್ಲಿ ಗೋಪಾಲಕರ ವಂಶದಲ್ಲಿ ಜನಿಸಿರುವ ಹೆಣ್ಣುಮಕ್ಕಳಿಗೆ ಪ್ರಿಯನಾದ ಶ್ರೀಕೃಷ್ಣನು ತನ್ನ ಕೊಳಲಿನ ರಂಧ್ರಗಳ ಮೂಲಕ ಏಳು ಬಗೆಯಾಗಿ ಸಾಮವೇದದ ಸ್ವರಗಳನ್ನು ಕ್ರಮವಾಗಿ ಹೊರಹೊಮ್ಮಿಸುವ ಕೊಳಲನ್ನು ಆ ವನದ ಮಧ್ಯದಲ್ಲಿದ್ದು ನುಡಿಸತೊಡಗಿದನು.

ಆ ಕೊಳಲಿನ ನಾದವೇ ಸಾಮವೇದದ ಸಾರದಂತಿತ್ತು. ಆ ಏಳು ರಂಧ್ರಗಳಿರುವ ಕೊಳಲಿನ ಗಾನವು ಸಪ್ತ ಸ್ವರ (ಸ, ರಿ, ಗ, ಮ, ಪ, ದ, ನಿ) ಗಳಿಂದ ಕೂಡಿ ಹೇಳುವ ಸಾಮವೇದವನ್ನು ಪ್ರತಿಬಿಂಬಿಸುತ್ತಿತ್ತು.

ಮುಕುಂದ ವಕ್ತ್ರಾನಿಲ ವಾದ್ಯಮಾನೋ ವೇಣುರ್ಬಭೌ ವೇದ ಇವ ದ್ವಿತೀಯಃ।
ರಾಗಾವಧೀನಾಂ ರಹಸಾ ಯದೇಕಂ ಗೀತಾತ್ಮನಾಂ ತಸ್ಯ ನಿದಾನಮಾಸೀತ್ ॥೪೭॥

ಶ್ರೀಕೃಷ್ಣನ ದಿವ್ಯ ಮುಖಾರವಿಂದದ ಗಾಳಿಯಿಂದ ಬರಿಸಲ್ಪಟ್ಟ ಕೊಳಲಾದುದು ಎರಡನೇಯ ವೇದದಂತಿತ್ತು. ವೇದದಲ್ಲಿ ಅಡಕವಾಗಿರುವ ಅನೇಕ ರಹಸ್ಯಗಳನ್ನು ತಿಳಿಸುವ ರಾಗಗಳಂತೆ ಇತ್ತು ಅವನ ವೇಣುಗಾನ.

ವೇದಗಳಲ್ಲಿ ಅಡಕವಾಗಿರುವ ಎಲ್ಲಾ ರಹಸ್ಯಾರ್ಥಗಳನ್ನೂ ಆ ಕೊಳಲಿನ ನಾದವು ತಿಳಿಸುವಂತಿತ್ತು. ಆ ನಾದವನ್ನು ಆಸ್ವಾದಿಸಿದವರು ವೇದಾರ್ಥವನ್ನು ಪೂರ್ಣವಾಗಿ ಅರಿತವರಾದರು. ರಾಗ ಲಕ್ಷಣಗಳನ್ನು ಹೀಗೆ ಹೇಳಿದ್ದಾರೆ.

ಯೋ ನೌ ಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ
ರಂಜಕೋ ಜನ ಚಿತ್ತಾನಾಂ ಸ ರಾಗಃ ಕಥಿತೋ ಬುಧೈಃ

ಜನರ ಮನಸ್ಸನ್ನು ರಂಜಿಸುವುದೇ ರಾಗದ ಲಕ್ಷಣ.

ತದ್ವಂಶ ನಾದಃ ಸುಭಗೋಽಽನುಗಚ್ಛನ್ ಅಗ್ರೇಸರಂ ಸೌರಭ ಭಾಗಮೂನಾಮ್।
ಅಯತ್ನನಿಷ್ಪನ್ನ ಮನಸ್ಸಮಾಧೀನ್ ಆ ಬ್ರಹ್ಮಕಾನ್ ಆತನು ತೇವ ಜಂತೂನ್ ॥೪೮॥

ವೇದಗಳಲ್ಲಿ ಮನಸ್ಸಾಗಿರುವ ಅವನ ಪ್ರಾಣ ವಾಯುವಿನಿಂದ ಅವನು ನುಡಿಸುವ ಕೊಳಲಿನ ನಾದವು ಸ್ವಾಮಿಯು ಮೊದಲು ಎಲ್ಲಾ ಪ್ರಾಣಿಗಳನ್ನು ವಶಪಡಿಸಿ, ಬೇರೆಲ್ಲೂ ಮನಸ್ಸುಹೋಗದ ಹಾಗೆ ಮಾಡುತ್ತಿದ್ದು ಯೋಗ ಎಂಬುದನ್ನು ಅನಾಯಾಸವಾಗಿ ಸಿದ್ಧಿಸಿ ಕೊಳ್ಳುವ ಹಾಗೆ ಮಾಡಿತು ಎನ್ನಬಹುದು.

ಅವನ ಕೊಳಲಿನ ಗಾನವನ್ನು ಆಸ್ವಾದಿಸುವರಿಗೆ ಬೇರಾವ ಯೋಗಾಭ್ಯಾಸವನ್ನು ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಕಾರಣವೇನೆಂದರೆ ಯೋಗವೆಂದರೆ ಮನಸ್ಸನ್ನು ಒಂದೇ ವಿಷಯದಲ್ಲಿ ತಲ್ಲೀನವಾಗಿಸುವುದು. ಇಲ್ಲಿ ಆ ಗೋಪ ಗೋಪ ಸ್ತ್ರೀಯರೆಲ್ಲರೂ, ವೇಣುಗಾನದಲ್ಲಿ ಸಂಪೂರ್ಣ ಮನಸ್ಸನ್ನು ತಲ್ಲೀನರಾಗಿಸಿದ್ದರಿಂದ ಅವರಿಗೆ ಬೇರಾವ ಯೋಗ ಶಿಕ್ಷಣವೂ ಬೇಕಿರಲಿಲ್ಲ.

ವೇಣುಗಾನ ವೈಭವ



ಶೃಣ್ವದ್ಭಿರುದ್ಧಾಂತ ಮಧು ಪ್ರವಾಹಂ ವಂಶಸ್ವನಂ ತಸ್ಯ ಸುಧೈಕ ವಂಶಂ।
ಸಯೂಥ್ಯತಾಂ ನೂನ ಮವಾಪ್ಯ ಸರ್ವೈಃ ಸತ್ವೈಃ ಸ್ಥಿತಂ ಸಾಮಿ ನಿಮೀಲಿತಾಕ್ಷೈಃ ॥೪೯॥

ಅಮೃತದ ಜೊತೆ ಒಂದೇ ಕುಲದಲ್ಲಿ ಉಂಟಾದ ಜೇನಿನ ಪ್ರವಾಹದ ಹಾಗೆ ಇದ್ದ ಅವನ ಕೊಳಲಿನ ಗಾನವನ್ನು ಕೇಳಿ ಎಲ್ಲಾ ಮೃಗಗಳೂ ಆನಂದ ಪರವಶರಾಗಿ ಅರ್ಧ ಕಣ್ಣು ಮುಚ್ಚಿ ಎಲ್ಲಾ ಭೇದವನ್ನು ಮರೆತು ಒಂದು ಕುಲದವರಂತೆ ಇದ್ದವು.

ಕೊಳಲಿನ ಗಾನದ ಮೋಡಿ ಹೇಗಿತ್ತೆಂದರೆ, ಎಲ್ಲರೂ ತಮ್ಮ ಜಾತಿ, ಕುಲ ಭೇದಗಳನ್ನು ಮರೆತು, ತಾವೆಲ್ಲಾ ಒಂದೇ ಎಂಬ ಭಾವನಾ ಲೋಕದಲ್ಲಿ ವಿಹರಿಸುತ್ತಿದ್ದರು. ಅರ್ಧ ನಿಮೀಲಿತ ಲೋಚನರಾಗಿ, ಇಹಲೋಕದ ಪರಿವೆಯನ್ನೇ ಮರೆತಿದ್ದರು.

ಮಧು ದ್ರವೈರುಲ್ಬಣ ಸಂಮದಾ ಆಶ್ರುಣ್ಯಾಲೇಖ್ಯನಿಷ್ಪಂದ ಮೃಗ ದ್ವಿಜಾನಿ।
ಉದಗ್ರ ಕೋಶೋತ್ಪುಲಕಾನಿ ಕೃಷ್ಣೋ ವಂಶೀ ನಿನಾದೇನ ವನಾನ್ಯಕಾರ್ಷಿತ್ ॥೫೦॥

ಕೊಳಲಿನ ಗಾನವನ್ನು ನುಡಿಸಿ, ಕೃಷ್ಣನು ಮೃಗಪಕ್ಷಿಗಳನ್ನೆಲ್ಲಾ ಚಿತ್ರಗಳಲ್ಲಿರುವ ಜಡ ಮೇಘಗಳಂತೆ ಅಲ್ಲಾಡದ ಹಾಗೆ ಅವು ಆನಂದ ಬಾಷ್ಪ ಸುರಿಸುವ ಹಾಗೆ ಜೇನಿನ ಪ್ರವಾಹವನ್ನು ವಿಶೇಷವಾಗಿ ಹರಿಸುತ್ತಾ, ಎಲ್ಲೆಲ್ಲೂ ಅವು ರೋಮಾಂಚನಗೊಂಡು ಕೂದಲುಗಳು ನಿಮಿರುವ ಹಾಗೆ ಮಾಡಿದನು.

ಅವನ ಕೊಳಲಿನ ಗಾನ ಸುಧೆಯು ಅಮೃತ ಸೇಚನದಂತಿತ್ತು. ಎಲ್ಲರೂ ಜಡವಾಗಿ ಆ ಅಮೃತವನ್ನಾಸ್ವಾದಿಸುತ್ತಾ ತಾವು ಎಲ್ಲಿದ್ದೇವೆ ಎಂಬುದನ್ನೇ ಮರೆತಿದ್ದರು.

ಆಸ್ವಾದ್ಯ ತದ್ವಂಶ ನಿನಾದ ಮಾಧ್ವಿ ಮಾಘ್ರಾಯ ತತ್ಸಂಚರ ಸೌರಭಂ ಚ।
ಭಕ್ತಾಮೃತಾನಾಂ ಭುವಿ ಸೌರಭೇಯಃ ಕ್ಷಿಪ್ತೇತರಾಂ ಕ್ಷೀಬ ದಶಾಮವಾಪುಃ ॥೫೧॥

ಕಾಮಧೇನು ವಂಶದ ಗೋವುಗಳು ಆ ಕೊಳಲಿನ ನಾದವನ್ನು ಅದರೊಡನೆ ಬಂದ ಮನಃ ಸಂತೋಷದಿಂದ ಮದ ಸೇವಿಸಿದವರಂತೆ, ಮತ್ತು ಬಂದವರಂತೆ ತೂರಾಡುತ್ತಾ, ಕುಣಿಯುತ್ತಿದ್ದವು.

"ಶಿಶುರ್ವೇತ್ತಿ ಪುಶುರ್ವೇತ್ತಿ ವೇತ್ತಿ ಗಾನ ಫಣಾಮಣಿ" ಎಂಬುವಂತೆ ಸುಮಧುರ ನಾದವನ್ನು ಮಕ್ಕಳು, (ಶಿಶುಗಳು), ಪಶುಗಳು, ಸರ್ಪಗಳು ಎಲ್ಲವೂ ಕೇಳಿ ಆನಂದಿಸುತ್ತವೆ ಎನ್ನುತ್ತಾರೆ. ಅದೇ ರೀತಿ ಆ ಕೃಷ್ಣನ ಕೊಳಲಿನಿಂದ ಹೊರಹೊಮ್ಮುತ್ತಿದ್ದ ನಾದ ಸುಧೆಯನ್ನು ಕೇಳಿ ಗೋಕುಲದ ಗೋವುಗಳೆಲ್ಲವೂ ಆನಂದಾತಿರೇಕದಲ್ಲಿ ಕುಣಿಯುತ್ತಿದ್ದವು.

ವಂಶಸ್ವನಾ ಸ್ವಾದ ವಶೀಕೃತಾನಾಂ ವ್ಯಕ್ತೋದಯಾನಾಂ ವನದೇವತಾನಾಂ।
ಸ ಕರ್ಬೂರಃ ಸ್ನಿಗ್ಧತಮೈಃ ಕಟಾಕ್ಷೈಃ ಸೇಂದ್ರಾಯುಧೋ ಮೇಘ ಇವಾವಭಾಸೇ॥೫೨॥

ಕೊಳಲಿನ ನಾದದ ಮಾಧುರ್ಯಕ್ಕೆ ವಶವಾಗಿ ಎದುರಿಗೆ ನಿಂತ ವನದೇವತೆಗಳ ಪ್ರೀತಿ ತುಂಬಿದ ಕಟಾಕ್ಷಗಳಿಗೆ ಶ್ರೀಕೃಷ್ಣನು ಸ್ಥಾನವಾದನು. ಫಲವನ್ನು ಕೊಡುವ ಅವರ ಕಡೆಗಣ್ಣಿನ ನೋಟಗಳು ಆಕಾಶದಲ್ಲಿ ಅನೇಕ ವರ್ಣಗಳುಳ್ಳ ಕಾಮನ ಬಿಲ್ಲಿನಂತೆ ತೋರಿದವು.

ಶ್ರೀಕೃಷ್ಣನ ವೇಣುಗಾನದ ಮಾಧುರ್ಯವು ವನದೇವತೆಗಳನ್ನೆಲ್ಲಾ ಆಕರ್ಷಿಸಿತು.

ಆಧ್ಯಾಪಯಾಮಾಸ ಸ ಶೃಂಗ ಮಗ್ರ್ಯಂ ಶಂಖಂ ತಥಾಭೂತಮಿವಾತ್ಮಯೋಗಾತ್।
ಜಗೌ ಚ ಗೇಯಾನಿ ಬಹೂನಿಯೇಷಾಂ ಗಾಂಧರ್ವವೇದೋಽಪಿ ನ ಪಾರದೃಶ್ವಾ॥೫೩॥

ನಿತ್ಯಸೂರಿಯಾದ ಪಾಂಚಜನ್ಯವೆಂಬ ಶಂಖವು ತನ್ನ ಪ್ರಭಾವದಿಂದ ಮುಖವಾದ್ಯ ವಾಗಿ ಬದಲಾದ ಆ ಕೊಳಲಿನ ಆಕಾರವಾಗಿ ಅವನು ಅದನ್ನು ಊದಿದನು. ಅನೇಕ ಹಾಡು ಗಳನ್ನು ಹಾಡಿದನು. ಅವುಗಳನ್ನು ನೋಡುವಾಗ ಗಾಂಧರ್ವ ವೇದಕ್ಕೂ ಮಿಗಿಲಾಗಿತ್ತು.

ಭಗವಂತನ ಪಾಂಚಜನ್ಯವೇ ಈಗ ಕೊಳಲಾಗಿ ಮಾರ್ಪಟ್ಟು ಅವನ ಕೈಯ್ಯಲ್ಲಿದೆ. ಅದನ್ನು ಊದಿ, ಅದರ ಮೂಲಕ ಅನೇಕ ಉತ್ತಮವಾದ ಗೀತಗಳನ್ನು ನುಡಿಸಿದನು. ಗಂಧರ್ವರು ಗಾನದಲ್ಲಿ ನಿಷ್ಣಾತರು. ಶ್ರೀಕೃಷ್ಣನ ಕೊಳಲಿನ ಗಾನವು ಅವರ ಗಾನವನ್ನು ಮೀರಿಸುವಂತಿತ್ತು.

ತ್ರಿಸ್ಥಾನಯುಕ್ತ ಸ್ವರ ಭೂಷಿತಂ ತತ್ ತ್ರಿಧಾ ಸ್ಥಿತಂ ಗ್ರಾಮ ವಿಶೇಷ ಯೋಗಾತ್।
ಅರಂಜಯತ್ ಸಪ್ತ ಜಗಂತ್ಯ ಯತ್ನಾತ್ ಗೀತಂ ಹರೇ ರಾಹೃತ ಕಿಂ ನ ರಾಘಂ ॥೫೪॥

ಹೃದಯ, ಕಂಠ, ತಲೆ ಎಂಬ ಮೂರು ಸ್ಥಾನಗಳಿಂದ ಉಂಟಾಗುವ ಮಧ್ಯಮ, ತಾರಕ, ಮಂದರ ಎಂಬ ಮೂರು ಬಗೆಯಾದ ಸ್ವರಗಳು ಸೇರಿದ ಷಡ್ಜ ಮಧ್ಯಮ, ಗಾಂಧಾರ ಎಂಬ ಮೂರು ಸ್ಥಾಯಿಗಳು ಸೇರಿರುವ ಶ್ರೀಕೃಷ್ಣನ ಗಾನವಾದುದು ಕಿನ್ನರರನ್ನೂ ವಶಪಡಿಸುವ ಗಾನ ಮಾಧುರ್ಯದಿಂದ ಕೂಡಿ, ಏಳು ಲೋಕಗಳನ್ನೂ ಅನಾಯಾಸವಾಗಿ ಆನಂದಸಾಗರಕ್ಕೆ ದೂಡಿತು.

ಆ ಶ್ರೀಕೃಷ್ಣನ ಕೊಳಲಿನ ನಾದವು ಸಕಲ ಗುಣಗಳಿಂದ ಕೂಡಿದ ಶಾಸ್ತ್ರೀಯ ಸಂಗೀತದಂತೆ ಎಲ್ಲಾ ಅಂಶಗಳನ್ನೂ ಒಳಗೊಂಡಿತ್ತು. ಯಾವನೋ ಒಬ್ಬ ಅತ್ಯುತ್ತಮ ಸಂಗೀತಜ್ಞನು

ನುಡಿಸುವಂತೆ ಸ್ವಾಮಿಯು ಆ ವೇಣುವನ್ನು ನುಡಿಸಿ, ಎಲ್ಲರನ್ನೂ ಆನಂದ ಸಾಗರದಲ್ಲಿ ಮುಳುಗಿಸಿದನು. ಸಾಮವೇದ ಸಂಗೀತಕ್ಕೆ ಮೂಲ. ಭಗವಂತನೇ ಗೀತೆಯಲ್ಲಿ "ವೇದಾನಾಂ ಸಾಮವೇದೋಸ್ಮಿ" ಎಂದಿದ್ದಾನೆ.

ವಿಲಾಸ ವಾಕ್ಯೈರಿವ ವೇಣುನಾದೈ ರ್ದಿವ್ಯೇನ ಗೀತೇನ ಚ ದೈತ್ಯಹಂತುಃ।
ನಿವೇದಿತಾರ್ಥಾಃ ಸುದೃಶಃ ಸ್ವವಾಸಾ ದಾಜಗ್ಮುರಾಕರ್ಷಣ ಮಂತ್ರತೀಕ್ಷ್ಣೈಃ॥೫೫॥

ಬಹಳ ದೂರದಲ್ಲಿರುವವರನ್ನೂ ಆಸೆಯೊಡನೆ ಕರೆಯುವ ಮಂತ್ರಗಳಿಗೆ ಸಮನಾದ ಶಕ್ತಿ ಹೊಂದಿರುವ ಇವನ ಕೊಳಲಿನ ಗಾನವು ವಿನೋದವಾಗಿ ಮಾತನಾಡುವ ಮಾತುಗಳಂತೆ ಇದ್ದು ಅವನ ದಿವ್ಯವಾದ ಹಾಡಿನ ಮಾಧುರ್ಯದಿಂದ ಭ್ರಮೆಗೊಂಡ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಮನೆಗಳಿಂದ ಹೊರ ಬಂದರು.

ಯಾವ ಯಾವ ಸ್ತ್ರೀಯರು ತಮ್ಮ ತಮ್ಮ ಮನೆಯೊಳಗೆ ಅಡಗಿಕೊಂಡಿದ್ದರೋ, ಅವರೆಲ್ಲರೂ ಆ ಗಾನವನ್ನು ಕೇಳಿದೊಡನೇ, ಸಂತೋಷ ತಡೆಯಲಾರದೆ ಹೊರಬಂದು ಹೊರಗೆ ನಿಂತು ಆಸ್ವಾದಿಸತೊಡಗಿದರು. ಆ ಕೊಳಲಿನ ನಾದಕ್ಕೆ ಮಂತ್ರಶಕ್ತಿ ಇತ್ತು.

ಅನಿಷ್ಟ ಶಬ್ದೈರ್ವಲಯೈರಪೋಢಾಃ ಕಾಂಚಯಾಽಪ್ಯವಜ್ಞಾತ ಪದೋಪಗತ್ಯಾ।
ಗುಣಾವಕೃಷ್ಟಾಃ ಪ್ರಿಯಮಾಪ್ತುಮೀಷುಃ ಕಾಮೋಪದಿಷ್ಟೇನ ಮಹಾಪಥೇನ ॥೫೬॥

ಗೋಪಿಯರು ತಾವು ಹೋಗುವುದು ಬರುವುದು ಇತರರಿಗೆ ತಿಳಿಯದಂತೆ ಶಬ್ದ ಮಾಡುವ ಬಳೆಗಳನ್ನೂ, ತನ್ನ ಜಾಗದಿಂದ ಕಳಚಿ ಬೀಳುವ ಒಡ್ಯಾಣವನ್ನೂ ಬಿಟ್ಟು ಹಗ್ಗ ಕಟ್ಟಿ ಎಳೆಯಲ್ಪಟ್ಟವರಂತೆ ಅವನ ಗುಣಗಳಿಂದ ಆಕರ್ಷಿಸಲ್ಪಟ್ಟು ಮನ್ಮಥನ ಉಪದೇಶದಂತೆ ಮಹತ್ತಾದ ಮಾರ್ಗದಿಂದ ತಮ್ಮ ಪ್ರೇಮಿಯನ್ನು ಅನುಸರಿಸಿ ಬಂದರು.

ಕೃಷ್ಣನ ದೇಹ ಸೌಂದರ್ಯವೇ ಅತ್ಯಂತ ಆಕರ್ಷಕ. ಅವನು ಸಾಕ್ಷಾತ್ ಮನ್ಮಥಮನ್ಮಥನು. ಇದರ ಜೊತೆಗೆ ಅವನ ಅತ್ಯಂತ ಸುಮಧುರ ವೇಣುಗಾನ. ಇನ್ನೇನು ಬೇಕು. ಸ್ತ್ರೀಯರು ಆಕರ್ಷಿತರಾಗಲು?

ಮೋಡಿಗೆ ಒಳಗಾದವರಂತೆ, ಹಗ್ಗಕಟ್ಟಿ ಎಳೆಯಲ್ಪಟ್ಟವರಂತೆ ತಮ್ಮ ದೇಹದ ಅಲಂಕಾರ, ವಸ್ತ್ರಗಳು ಜಾರಿ ಬೀಳುವುದನ್ನೂ ಗಮನಿಸದೆ ಗೋಪ ಸ್ತ್ರೀಯರು, ಅವರ ಪ್ರೇಮಿಯಾದ ಸ್ವಾಮಿಯನ್ನು ಅನುಸರಿಸಿ ಬಂದರು.

ಆದಿಶ್ಯಮಾನಾಂ ಪ್ರಿಯವಂಶನಾದೈ ರಾಶಾಂ ನಿಜಾಷಾಮಿವ ನಿರ್ವಿಘಾತಾಂ।
ತದಾಸ್ಥಿತಾಂ ಪ್ರಾಸ್ಥಿಷತಾಶು ಧನ್ಯಾಃಽಮಾಸನ್ನ ಸಂಧ್ಯಾಧಿಕ ರಾಗ ಭಾಜಃ ॥೫೭॥

ಸಂಜೆಯ ಹೊತ್ತಿಗೆ ಉಂಟಾದ ಅತಿಯಾದ ರಾಗ ಹೊಂದಿದವರಾಗಿ ಅವನ ಕೊಳಲ ನಾದದಿಂದ ಅವನಿರುವ ಕಡೆಗೇ ಸೆಳೆಯಲ್ಪಟ್ಟು ತಮ್ಮ ತಡೆಯಲಾಗದ ಇಷ್ಟವಾದ ಆಸೆಯಂತೆ ಅವನಿರುವುದೇ ಭಾಗ್ಯವಾದ ಸ್ಥಳವೆಂದು ಭಾವಿಸಿ ಅಲ್ಲಿಗೆ ಹೊರಟು ಬಂದರು.

ಶ್ರೀಕೃಷ್ಣನ ವೇಣುಗಾನದ ಜಾಡನ್ನೇ ಅನುಸರಿಸಿ, ಅಂದರೆ ಆ ಗಾನಸುಧೆಯು ಯಾವ ದಿಕ್ಕಿನಿಂದ ಬರುತ್ತದೆ ಎಂಬುದನ್ನು ಗುರುತಿಸಿಕೊಂಡು, ಗೋಪಸ್ತ್ರೀಯರು. ಅಲ್ಲಿ ಅವನನ್ನು ನೋಡಿ ನೇರವಾಗಿಯೇ ಆ ಗಾನಮಾಧುರ್ಯವನ್ನು ಕೇಳಬೇಕೆಂದು ಅಲ್ಲಿಗೆ ಹೊರಟು ಬಂದರು.

ಮಧುವ್ರತಾಧಿಜ್ಯ ಶರಾಸನೇನ ಪುಷ್ಪಾತ್ರಕಂ ಸಂದಧತಾ ಪೃಷತ್ಕಂ।
ಅನುಪ್ಲವೇನ ವ್ರಜತಾ ಬಭೂವೆ ತಾಸಾಮನಂಗೇನ ತದೋದ್ಯತಾನಾಂ ॥೫೮॥

ಆವಾಗ ಹೊರಟ ಈ ಸ್ತ್ರೀಯರಿಗೆ ದುಂಬಿಗಳ ಸಾಲನ್ನು ಹಗ್ಗವಾಗಿ ಬಿಲ್ಲಿನಲ್ಲಿ ಕಟ್ಟಿ ಹೂವೆಂಬ ಬಾಣವನ್ನು ಹೂಡಿ ಜೊತೆಯಲ್ಲಿ ಮನ್ಮಥನು ಸಹಾಯಮಾಡಿದನು.

ಅವರಿಗೆ ಮೇಲೆಮೇಲೆ ಶ್ರೀಕೃಷ್ಣನ ಮೇಲಿನ ಮೋಹವನ್ನು ಹೆಚ್ಚಿಸುತ್ತಾ ಹೋದನು. ಕಾಮಜನಕನಾದ ಮನ್ಮಥನು, ಅವನ ಬಾಣಗಳಿಗೆ ಎಲ್ಲರೂ ಕಟ್ಟುಬಿದ್ದು 'ಕೃಷ್ಣತೃಷ್ಣೆಗೆ ವಶರಾದರು.

ಆದೇಶಯೋಗ್ಯೈರಥ ತತ್ರ ಗೋಪ್ಯೋ ನಿವಾರ್ಯಮಾಣಾ ಅಪಿ ದುರ್ನಿವಾರಾಃ।
ಅನಿನ್ಯಿರೆ ರಾಗಮಯ್ಯೆರ್ಮಹೌಘೈ ಕ್ಲೇಶಾಪಹಂ ಕೃಷ್ಣ ಸುಧಾಪಯೋಧಿಂ ॥೫೯॥

ಆ ಗೋಪಿಗಳು ದೊಡ್ಡವರಿಂದ ಹಲವಾರು ಬಾರಿ ಅನುಮತಿ ನೀಡಿದ ಕಾಲದಲ್ಲೂ ಆ ತಡೆಯನ್ನು ಮೀರಿದವರಾಗಿ ಆನಂದ ಪ್ರವಾಹವನ್ನು ತಡೆಯಲಸಾಧ್ಯವಾಗಿ ಬರುವ ಕ್ಲೇಶಗಳೆಲ್ಲವನ್ನೂ ಸಹಿಸಿಕೊಳ್ಳುತ್ತಾ, ಕೃಷ್ಣನೆಂಬ ಅಮೃತಸಮುದ್ರವನ್ನು ಸೇರಲು ಅಪೇಕ್ಷಿಸಿದರು.

ಆ ಗೋಪಸ್ತ್ರೀಯರ ಕೃಷ್ಣ ವ್ಯಾಮೋಹಕ್ಕೆ ಗೋಕುಲದ ಹಿರಿಯರ ವಿರೋಧವಿತ್ತು. ಆದರೂ ಅವರು ಅದನ್ನೆಲ್ಲಾ ಮೀರಿದವರಾಗಿ, ಅವರ ಅವಕೃಪೆಗೆ ಪಾತ್ರರಾದರೂ ಸರಿ ''ನಾವು ಕೃಷ್ಣನ ಹಿಂದೆ ಹೋಗಿಯೇ ಹೋಗುತ್ತೇವೆ'' ಎಂಬ ದೃಢ ನಿರ್ಧಾರದಿಂದ ಆ ಕೃಷ್ಣನ ಆಕರ್ಷಣೆಯನ್ನು ತಡೆಯಲಾರದೆ, ಯಾರ ಚುಚ್ಚುನುಡಿಗೂ ಚಿಂತಿಸದೆ, ತಲೆ ಬಾಗದೆ ಕೃಷ್ಣನನ್ನು ಸೇರಲು ಬಯಸಿದರು.

ತ್ವರಾ ಸಖೀನಾಂ ಪುರತಃ ಪ್ರಚೇಲೇ ತರಸ್ವಿನಾ ನಿಶ್ವಸಿತೇನ ತಾಸಾಂ।
ಸದಾಗತಿ ಪ್ರಾರ್ಥನಯಾ ಸಮೇತಂ ದೂರಸ್ಥಿತಂ ಕೃಷ್ಣಮಿವೋಪನೇತುಂ ॥೬೦॥

ವೇಗದಿಂದ ಬರುವ ಗೋಪಸ್ತ್ರೀಯರಿಗೆ ಮುಂದೆ ಅವರ ಉಸಿರಾಟದ ಗಾಳಿಯು ಬೀಸುತ್ತಿದೆ. ಅದನ್ನು ನೋಡುವಾಗ ತಾವು ಸದಾ ಪ್ರಾರ್ಥನೆಯನ್ನು ಮಾಡುವ ಶ್ರೀಕೃಷ್ಣನು ದೂರದಲ್ಲಿರುವುದರಿಂದ ಅವನನ್ನು ಹತ್ತಿರ ಸೇರಲು ಮಾಡುವ ಪ್ರಯತ್ನದಂತೆ ತೋರುತ್ತಿತ್ತು.

ಬೇಗ ಬೇಗ ನಡೆದು ಬರುತ್ತಿರುವ ಅವರುಗಳ ಉಸಿರಾಟದ ಗಾಳಿಯೇ ಅವರಿಗೆ ಅಡ್ಡಿಪಡಿಸುವಂತೆ ತೋರುತ್ತಿತ್ತು. ಕೃಷ್ಣನು ದೂರದಲ್ಲಿದ್ದು ವೇಣುವನ್ನು ನುಡಿಸುತ್ತಿದ್ದುದ

ರಿಂದ ಅವನು ಶೀಘ್ರವಾಗಿ ಸೇರುವ ತವಕ ಅವರಲ್ಲಿ ಹೆಚ್ಚಾಗುತ್ತಿತ್ತು. 'ಸದಾಗತಿ' ಎಂದರೆ ಉಸಿರಾಟ ಎಂದರ್ಥ.

ಪ್ರಾಯೇಣ ವೇಗಾತ್ ಸುದೃಶಾಂ ವಿಭಿನ್ನಃ ಪ್ರಕೀರ್ಣ ಮುಕ್ತಾಫಲ ಪುಷ್ಪಜಾಲಃ।
ಪ್ರಸ್ತಾವಯನ್ ಕಾಮವಿಹಾರನಾಟ್ಯಂ ಹಾರಃ ಸಮಾಲಕ್ಷ್ಯತ ಸೂತ್ರಧಾರಃ ॥೬೧॥

ಸಂಭ್ರಮದಿಂದ ಹೋಗುವಾಗ, ಮುತ್ತು ಮಾಲೆಗಳಿಂದ ಮುತ್ತುಗಳು ಪುಷ್ಪಗಳು ಉದುರಿ ಅನೇಕ ಬಣ್ಣಗಳನ್ನು ಹೊಂದಿತ್ತು. ಅದರಿಂದ ಅವು ಅವರುಗಳ ಹತ್ತಿರ ನಾಚಿಕೆಯಿಂದ ಆಟವಾಡುತ್ತಾ ನಡೆದಾಡುವಂತಿತ್ತು. ಇದನ್ನು ನೋಡುವಾಗ, ನಾಟ್ಯವಾಡುವುದಕ್ಕೆ ಮುಂಚೆ ಸೂತ್ರಕಾರನು ಪುಷ್ಪಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ರಂಗಮಂಟಪದಲ್ಲಿ ಎರೆಚಿ. ನಾಟ್ಯ ಪ್ರಾರಂಭವಾಗುವುದನ್ನು ತಿಳಿಸುವ ಹಾಗೆ ಈ ಹಾರವಾದುದು ಮುತ್ತುಗಳನ್ನು ಚೆಲ್ಲುವಿಕೆಯಿಂದ ಶ್ರೀಕೃಷ್ಣನ ಈ ನಾಟ್ಯವು ಆರಂಭವಾಗುವುದೆಂಬ ಸೂಚನೆಯನ್ನು ನೀಡುವಂತಿತ್ತು.

ಕೃಷ್ಣನ ಸಂಗಡ ಆ ಗೋಪಸ್ತ್ರೀಯರು ಆಡುವ ರಾಸಕ್ರೀಡೆ ಎಂಬ ನಾಟ್ಯವು ಆರಂಭದ ಸೂಚನೆಯಂತೆ ಅವರು ಮುಡಿದಿದ್ದ ಹೂಮಾಲೆಗಳು, ಉದುರಿ, ಮುತ್ತುಗಳು ಎರೆಚಿದಂತೆ ಇತ್ತು.

ಅವಸ್ಥಿತಂ ಕ್ವಾಪಿ ಕದಂಬಮೂಲೇ ವಲ್ಗುಸ್ಮಿತಂ ವಾದಿತ ಮಂಜುವೇಣುಂ।
ಸಾಚೀ ಕೃತಾಕ್ಷಂ ದದೃಶುಸ್ತರುಣ್ಯಃ ಸ್ವಾದ್ಯಂ ಸತಾಂ ಸ್ವಸ್ತಿಕ ಚಾರು ಜಂಘಂ ॥೬೨॥

ಒಂದು ಕದಂಬ ಮರದ ಕೆಳಗೆ ಸುಂದರವಾದ ಒಂದು ಕಾಲನ್ನು ಮತ್ತೊಂದರ ಮೇಲಿಟ್ಟು ಮಹಾತ್ಮರಿಗೆ ಅತಿಯಾದ ಭೋಗ್ಯದಿಂದ, ಅರ್ಧನಿಮಿಲಿತ ನೇತ್ರದ ದೃಷ್ಟಿಯಾದ ಮುಖವನ್ನು ಇಟ್ಟುಕೊಂಡು, ಸುಂದರವಾದ ಮುಗುಳ್ನಗೆಯಿಂದ ಕೊಳಲನ್ನು ಊದುತ್ತಿರುವ ಕೃಷ್ಣನನ್ನು ಗೋಪಿಗಳು ಕಂಡರು.

ಕೃಷ್ಣನು ಕದಂಬ ಮರದ ಕೆಳಗೆ ನಿಂತು ಕೊಳಲನ್ನು ನುಡಿಸುತ್ತಿದ್ದಾನೆ. ಅವನನ್ನು ಆ ಭಂಗಿ ಯಲ್ಲಿ ನೋಡುವುದೇ ಚೆಂದ. ಅರ್ಧ ಕಣ್ಣನ್ನು ಮುಚ್ಚಿಕೊಂಡು, ಎಲ್ಲಿಯೋ ನೋಡುತ್ತಾ ಒಂದು ಕಾಲನ್ನು ಮತ್ತೊಂದರ ಮೇಲಿಟ್ಟು ತನ್ಮಯತೆಯಿಂದ ವೇಣುಗಾನದಲ್ಲಿ ಲೀನನಾಗಿ ಹೋಗಿದ್ದಾನೆ ಸ್ವಾಮಿ. ಮುಗುಳ್ನಗೆಯಿಂದ ತನ್ನನ್ನು ತಾನು ಮರೆತು ಕೊಳಲನ್ನು ಊದುತ್ತಿದ್ದ ಅವನನ್ನು ನೋಡಲು ಅವಸರದಿಂದ, ಸಡಗರದಿಂದ ಬಂದ ಗೋಪಿಗಳು ಆನಂದಿಸಿದರು.



ತದಂಗ ಶೋಭಾಮವಲೋಕ್ಯ ದಿವ್ಯಾಂ ವಿಸ್ಮೇರಭಾವಂ ವ್ರಜತೇವ ದೂರಾತ್।
ಅಮೋಹಯತ್ ಯೌವತ ಮಾದಿಧೂರ್ತಃ ಸಂತೋಷದಿಗ್ಧೇನ ಸಮೀಕ್ಷಣೇನ ॥೬೨॥

ಮೊದಲೇ ವಂಚಕನಾದ ಶ್ರೀಕೃಷ್ಣನು ಬಹಳ ದೂರದಿಂದಲೇ ತನ್ನ ತೃಪ್ತಿಯಿಂದ ಕೂಡಿದ ಕಟಾಕ್ಷವನ್ನು ಆ ಹೆಣ್ಣುಗಳ ಶರೀರದ ಮೇಲೆ ಇಟ್ಟನು. ಅದು ಅವರುಗಳ ದಿವ್ಯವಾದ ಅವಯವಗಳನ್ನು ಸ್ಪರ್ಶಿಸುವುದನ್ನು ಕಂಡು ಅವನು ಸಂತೋಷವಂಟಾದ ಹಾಗೆ ನಟಿಸಿದನು. ಅದರಿಂದ ಅವರುಗಳಿಗೆ ಅವನ ಮೇಲೆ ಮೋಹವು ಉಂಟಾಯಿತು.

ಸ್ತ್ರೀಯರನ್ನು ಆಕರ್ಷಿಸುವುದರಲ್ಲಿ ಮೊದಲೇ ಸ್ವಾಮಿಯಾದ ಶ್ರೀಕೃಷ್ಣನು ನಿಪುಣನು. ಈಗ ಅವರಾಗಿಯೇ ಅವನ ಬಳಿ ಬಂದುದರಿಂದ ಇನ್ನೂ ಹೆಚ್ಚು ಉತ್ಸಾಹದಿಂದ ತನ್ನ ಕಣ್ಣಿನ ನೋಟವನ್ನು ಅವರೆಲ್ಲರ ಅಂಗಾಗಳನ್ನು ಸ್ಪರ್ಶಿಸುವ ರೀತಿಯ ದೂರದಿಂದಲೇ ಹರಿಸಿ, ಅವರೂ ಸಹ ತನ್ನಲ್ಲಿ ಮೋಹಗೊಳ್ಳುವಂತೆ ಉಂಟು ಮಾಡಿದನು.

ದ್ರುತಾಗತಿ ವ್ಯಾಕುಲ ಭೂಷಣಾಸ್ತಾಃ ಕಿಂಚಿತ್ ಸಮುಚ್ಛ್ವಾಸಿತ ನೀವಿಬಂಧಾಃ।
ಪರ್ಯಾಕುಲಾಕ್ಷ್ಯಃ ಪರಿವಾರ್ಯ ತಸ್ಥುಃ ಕೃಷ್ಣಂ ಕೃಪಾಧೀನ ದೃಶಂ ಕೃಶಾಂಘ್ಯಃ ॥೬೪॥

ಎಳೆಯ ಹೆಣ್ಣು ಮಕ್ಕಳು ಬಹಳ ವೇಗದಿಂದ ಬಂದದ್ದರಿಂದ ಹಾಕಿಕೊಂಡಿದ್ದ ಆಭರಣ ಗಳೆಲ್ಲಾ ಸಡಿಲಗೊಂಡವು. ಉಟ್ಟಿದ್ದ ಬಟ್ಟೆಗಳೂ ಸಡಿಲಗೊಂಡವು. ಕಣ್ಣುಗಳು ನೀರಾಡಿ ಸುಸ್ತಾಗಿ, ತಮ್ಮ ಮೇಲೆ ದಯಾಪೂರಿತ ಕಟಾಕ್ಷವನ್ನು ತೋರಲು, ಶ್ರೀಕೃಷ್ಣನನ್ನು ಸುತ್ತುವರಿದು ನಿಂತರು.

ಶ್ರೀಕೃಷ್ಣನನ್ನು ಕಂಡು ಅವನ ವೇಣುನಾದವನ್ನು ಆಸ್ವಾದಿಸಲು ಬಹು ದೂರದಿಂದ ಓಡೋಡಿ ಬಂದಿದ್ದ ಆ ಗೋಪಸ್ತ್ರೀಯರು ಬರುವಾಗ ಅವರ ಮೈಮೇಲಿನ ಆಭರಣ, ಬಟ್ಟೆಗಳೂ ಎಲ್ಲವೂ ಜಾರಿದವು. ಪತಿ, ಪಿತೃ, ಮಾತೃ, ಭ್ರಾತೃ ಎಲ್ಲರನ್ನೂ ಬಿಟ್ಟು ತನಗಾಗಿ ಓಡಿ ಬಂದಿರುವ ಅವರನ್ನು ಶ್ರೀಕೃಷ್ಣನು ತನ್ನ ಕೃಪಾ ಕಟಾಕ್ಷದಿಂದ ತೋಯಿಸುವನೆಂಬ ಆಸೆ ಅವರಿಗೆ. ಅದಕ್ಕಾಗಿ ಅವನನ್ನು ಸುತ್ತುವರಿದು ನಿಂತರು.

ಸ ವಲ್ಲಭಃ ಸಂಸದಿ ವಲ್ಲವೀನಾಂ ಬರ್ಹಸ್ರಜಾ ದರ್ಶಿತ ದಾನರಾಜಿಃ।
ಉದಗ್ರ ಶೃಂಗ ಧ್ವನಿ ರಾವಭಾಸೆ ದೃಪ್ತೋ ವಶಾನಾಮಿವ ವಾರಣೇಂದ್ರಃ ॥೬೫॥

ಗೋಪಸ್ತ್ರೀಯರು ಮಧ್ಯದಲ್ಲಿ ಅವರುಗಳಿಗೆ ಪ್ರಿಯನಾದ ಶ್ರೀಕೃಷ್ಣನು ತಲೆಯಲ್ಲಿ ನವಿಲು ಗರಿಯನ್ನೂ, ಕೊರಳಲ್ಲಿ ವನಮಾಲೆಯನ್ನೂ ಧರಿಸಿ, ಶ್ರೇಷ್ಠವಾದ ಕೊಳಲೊಡನೆ, ಮದಜಲವನ್ನು ಧಾರೆ ಧಾರೆಯಾಗಿ ಸುರಿಸುವ ದೊಡ್ಡ ಧ್ವನಿಯೊಡನೆ ಹೆಣ್ಣಾನೆಗಳೊಡನೆ ಸೇರಿ ವಿಹರಿಸುವ ಮದ ಗಜದಂತೆ ಬೆಳಗಿದನು.

ಆ ಕಾಮಪೀಡಿತರಾದ ಗೋಪ ಸ್ತ್ರೀಯರ ನಡುವೆ ಶ್ರೀಕೃಷ್ಣನು ನಿಂತು, ನವಿಲುಗರಿ, ವನಮಾಲೆಯ ಶೃಂಗಾರದಿಂದ ಶೋಭಿತನಾಗಿ ವಂಶನಾಳವನ್ನು ಹಿಡಿದು ನಿಂತಿದ್ದು ನೋಡಿದರೆ,

ಕಾಡಿನಲ್ಲಿ ಒಂದು ದೊಡ್ಡ ದಿಗ್ಗಜವು ಕುಂಭ ಸ್ಥಳದಿಂದ ಧಾರೆ ಧಾರೆಯಾಗಿ ಸುರಿಯುವ ಮದಜಲದೊಡನೆ, ಹೆಣ್ಣಾನೆಗಳಿಂದ ಸುತ್ತುವರಿಯಲ್ಪಟ್ಟ ಜಲ ವಿಹಾರಕ್ಕೆ ಸಿದ್ಧವಾಗಿ ನಿಂತಿದೆ ಯೇನೋ ಎನ್ನುವಂತೆ ತೋರುತ್ತಿತ್ತು.

ಅವೃದ್ಧಿ ಸಂಕೋಚಮಿವೆಂದು ಮನ್ಯ ಮಕಾರ್ಮುಕಂ ಕಾಮಮಿವಾಽಽತ್ತವೇಣುಂ।
ತಮದ್ಭುತಾನಾಮಿವ ರಾಶಿ ಮೇಕಂ ಗೋಪ್ಯಸ್ತದಾತ್ಮಾನ ಇವಾನ್ವಭೂವನ್ ॥೬೬॥

ಗೋಪಿಗಳು ಅವನನ್ನು ಕೆಲಕಾಲ ಬೆಳೆಯುವ ಕೆಲ ಕಾಲ ಕಡಿಮೆಯಾಗಿ ಬೆಳಗುವ ಬೇರೊಬ್ಬ ಚಂದ್ರನಂತೆ ಬಿಲ್ಲನ್ನು ಬಿಟ್ಟು ಕೊಳಲನ್ನು ಕೈಯ್ಯಲ್ಲಿ ಹಿಡಿದುಕೊಂಡ ಕಾಮದೇವ ನಂತೆ, ಮಧುರವಾಗಿ ಹಾಡುವ ಕೋಗಿಲೆಯಂತೆಯೂ ಅವನು ತಮಗೆ ಪತಿ ಎಂಬ ಭಾವನೆಯಿಂದ ಅವನೂ, ತಾವೂ ಒಂದೇ ಆತ್ಮಾ ಎನ್ನುವಂತೆ ಅನುಭವಿಸಿದರು.

ಗೋಪಿಯರು ಸಂಪೂರ್ಣವಾಗಿ ಅವನಲ್ಲಿ ಏಕೀಭಾವ ಅನುಭವಿಸಿದರು. ಹುಣ್ಣಿಮೆಯ ಚಂದ್ರನು ಯಾವ ರೀತಿ ವೃದ್ಧಿಕ್ಷಯಗಳನ್ನು ಹೊಂದಿ ಬೆಳಗುತ್ತಾನೋ ಅದೇ ರೀತಿ ಅವನನ್ನು ಚಂದ್ರನಂತೆಯೂ ಕಾಮೋದ್ದೀಪಕನಾದ ಮನ್ಮಥನಂತೆಯೂ ಸುಮಧುರವಾಗಿ ಗಾನ ಮಾಡುವ ಕೋಗಿಲೆಯಂತೆಯೂ ಭಾವಿಸಿದರು. ಜ್ಞಾನಿಗಳು ಸಮಾಧಿಯಲ್ಲಿ ಪರಮಾತ್ಮನಲ್ಲಿ ಒಂದಾಗುವಂತೆ, ಅವನೇ ತಮಗೇನೇ ಎಂದು ಭಾವಿಸಿ, ತಾದಾತ್ಮ್ಯ ಅನುಭವಿಸಿದರು.

ಸುರಾಂಗನಾಭಿಃ ಸಮಯೀ ಘೃತಾಯಾಂ ಸ್ವೇನೈವ ಗೋಪಾಕೃತಿ ಭೂಮಿಕಾಯಾಂ।
ಅಕರ್ಮವಶ್ಯಸ್ಯ ವಿಭೋಸ್ತ ದಾಸೀ ದರ್ಚಾಫಲ ಸ್ಪರ್ಶನ ಮಾತ್ರಲೀಲಾ ॥೬೭॥

ಕರ್ಮಗಳಿಗೆ ವಶಪಡದ ಸರ್ವೇಶ್ವರನು ತನ್ನ ಗಾನದಿಂದ ಗೋಪಾಲಕನಂತೆ ವೇಷವನ್ನು ಹಾಕಿದಾಗ ಅವರುಗಳು ಹಿಂದೆ ದೇವಸ್ತ್ರೀಗಳಾಗಿ ಹಳೆಯ ಏರ್ಪಾಡಿನಂತೆ, ಅವನ ಸಂಕಲ್ಪ ದಿಂದ ಗೋಪಸ್ತ್ರೀಯರಾಗಿ ಮಾರ್ಪಟ್ಟಿದ್ದರು. ಅವರುಗ ಹಿಂದೆ ಮಾಡಿದ ಅರ್ಚನೆಗೆ ಫಲರೂಪವಾಗಿ ಇದು ಅಷ್ಟೆ ತಾನು ಅವರುಗಳೊಡನೆ ಬಂದು ಕಾಮಸುಖ ಅನುಭವಿಸ ಬೇಕೆಂದು ಉದ್ದೇಶದಿಂದ ಮಾಡಿದ್ದಲ್ಲ. (ಸೌಶೀಲ್ಯ ಗುಣ ಪ್ರದರ್ಶನ)

ಗೋಪ ಸ್ತ್ರೀಯರೆಲ್ಲರೂ ಅಪ್ಸರೆಯರು. ಅವರು ತಮಗೆ ಹಿಂದೆ ಮಾಡಿದ ಅರ್ಚನೆಯ ಫಲವಾಗಿ ಈಗ ಗೋಕುಲದಲ್ಲಿ ಹುಟ್ಟಿರುವುದರಿಂದ, ಅವರ ಅರ್ಚನೆಗೆ ಫಲವಾಗಿ ತನ್ನನ್ನು ತಾನೇ ಅವರಿಗೆ ಸಮರ್ಪಿಸಿಕೊಳ್ಳುತ್ತಿದ್ದಾನೆಯೇ ವಿನಃ ಕೇವಲ ಐಹಿಕ ಕಾಮ ಸುಖಕ್ಕಾಗಿ ಅವರ ಸಂಗವನ್ನು ಬಯಸುತ್ತಿಲ್ಲ. ತನ್ನ ಸಾನ್ನಿಧ್ಯ ಅವರಿಗೆ ಸಿಗಬೇಕೆಂಬ ಉದ್ದೇಶ ಅಷ್ಟೇ ವಿನಃ ದೇಹ ಸೌಖ್ಯವಲ್ಲ. (ಇದು ಭಕ್ತರ ಅತ್ಯುನ್ನತ ಸ್ಥಿತಿ).

ನ ಖಲ್ವಮುಚ್ಯ ಪ್ರಮದಾ ಮದಾಂಧ್ಯಂ ನ ಕುತ್ಸನಂ ತತ್ತದಭೀಷ್ಟ ದಾತುಃ।
ನ ಧರ್ಮ ಸಂಸ್ಥಾಪನ ಬಾಧಗಂಧಃ ಶುದ್ಧಾನುಚಿಂತ್ಯಾ ಹಿ ಶುಭಸ್ಯ ಲೀಲಾ ॥೬೮॥

ಪರಿಪೂರ್ಣನಾದ ಭಗವಂತನಿಗೆ ಗೋಪಿಕಾ ಸ್ತ್ರೀಗಳೊಡನೆ ಸೇರಿ ಉಂಟಾಗುವ ಮೋಹವೆಲ್ಲಿಯದು? ಮುಗ್ಧರಾದ ಅವರುಗಳೊಡನೆ ಸೇರಿದ್ದಾಗ್ಯೂ ಅವನು ಅವರುಗಳನ್ನು

ಆಸೆ ಪಡುತ್ತಾನೆಂಬುದು ಇಲ್ಲವೇ ಇಲ್ಲ. ಅವರುಗಳು ಬೇಡಿದ ವರಗಳಿಗೆ ಫಲವನ್ನು ಕೊಟ್ಟಿದ್ದಾನಷ್ಟೆ. ಆದ್ದರಿಂದ ಎಲ್ಲರಿಗೂ ಅನ್ವಯಿಸುವ ಧರ್ಮ ಸಂಸ್ಥಾಪನೆಗೆ ಇದರಿಂದ ಭಂಗ ಏರ್ಪಡುವುದಿಲ್ಲ. ಪರಮೈಕಾಂತಿಗಳು ಇದನ್ನು ಧ್ಯಾನ ಮಾಡಿ ಶುದ್ಧಿ ಹೊಂದಿರುವುದರಿಂದ ಇದರಿಂದ ಧರ್ಮ ಸಂಸ್ಥಾಪನೆಯೇ ಆಗಿದೆ.

ಭಗವಂತನಿಂದ ಯಾವ ತಪ್ಪು ನಡೆಯಲು ಸಾಧ್ಯವೇ ಇಲ್ಲ. ಅವನನ್ನು ಕೃಷ್ಣಾವತಾರದಲ್ಲಿ ಸ್ತ್ರೀಲೋಲ ಎಂದು ಕರೆಯುವವರಿದ್ದಾರೆ. ಆದರೆ ಸರಿಯಾಗಿ ವಿಚಾರ ಮಾಡಿ ನೋಡಿದಲ್ಲಿ, ಆ ಗೋಪ ಸ್ತ್ರೀಯರು ಪೂರ್ವ ಜನ್ಮದಲ್ಲಿ ಮಾಡಿದ ತಪಸ್ಸಿಗೆ ಫಲವಾಗಿ ಈ ಜನ್ಮದಲ್ಲಿ ತನ್ನ ಸಾನ್ನಿಧ್ಯವನ್ನು ಅವರಿಗೆ ನೀಡಿದಾನಷ್ಟೇ ವಿನಃ ಒಡಲ ಸಂಬಂಧವನ್ನು ಮಾಡಿ ಧರ್ಮಭ್ರಷ್ಟನಾಗಿಲ್ಲ. ಧರ್ಮ ಸಂಸ್ಥಾಪನೆಯೇ ಅವತಾರದ ಉದ್ದೇಶ ಎಂದು ಹೇಳಿರುವುದರಿಂದ ಭಗವಂತನಲ್ಲಿ ಯಾವ ದೋಷವನ್ನು ಆರೋಪಿಸಬೇಕಾದುದಿಲ್ಲ.

ಅನಾಗಮ ಪ್ರತ್ಯಯ ಸಂಭವಾನಾಂ ಗುರುತ್ಯಜಾಂ ಗೋಪ ಕುಮಾರಿಕಾಣಾಂ।
ಅನನ್ಯ ಸಂಗಾತ್ ಸ ದಯಾಲು ರಾಸೀದ ಸಂಗ ಘಂಟಾಪಥ ಸಾರ್ಥವಾಹಿ ॥೬೯॥

ರಾಗ ರಹಿತರಾದವರು ನಡೆಯುವ ರಾಜ ಮಾರ್ಗದಲ್ಲಿ ಸಮೂಹ ಸಮೂಹವಾಗಿ ಜೀವರುಗಳನ್ನು ನಡೆಸುವ ಸ್ವಾಮಿಯು ಗೋಪ ಕನ್ನಿಕೆಗಳೊಡನೆ, ಕೃಪೆ ಹೊಂದಿದವನಾದನು. ಅವರುಗಳು ಭರ್ತಾಗಳನ್ನು ಕಡೆಗಾಣಿಸಿದ ಬಾರದೆಂಬ ಶಾಸ್ತ್ರದಲ್ಲಿ ನಂಬಿಕೆಯನ್ನು ಬಿಟ್ಟವರೆಂದು ಹಿರಿಯರ ಆಜ್ಞೆಯನ್ನು ಮೀರಿ ಬಂದರೆಂದು ಅವರುಗಳಿಗೆ ಶಿಕ್ಷೆಯನ್ನು ಮಾಡದೆ ಪ್ರೀತಿ ತೋರಿಸಬಹುದೇ ಎಂದರೆ, ಬೇರೆ ಯಾವುದರಲ್ಲೂ ಆಸಕ್ತಿ ಇಲ್ಲದೆ ಭಗವಂತನನೊಬ್ಬನಲ್ಲೇ ಪ್ರೀತಿ ಇಡಬೇಕೆಂಬುದು ಶಾಸ್ತ್ರ ಹೇಳಿದೆ. ಶಾಸ್ತ್ರವು ಎಲ್ಲಕ್ಕಿಂತಲೂ ಮುಖ್ಯವಾದುದು. ಅದನ್ನು ಅವರುಗಳು ಅರಿತವರೆಂದು ತಿಳಿದು ಅವರ ಬಳಿ ಪ್ರೀತಿ ಹೊಂದಿ ಇತರ ದೋಷಗಳೆಲ್ಲವನ್ನೂ ದಯೆಯಿಂದ ಕ್ಷಮಿಸಿದನು.

ಏಕಾಂತ್ಯ ಭಕ್ತಿ ಎಂದರೆ ಎಲ್ಲವನ್ನೂ ತ್ಯಜಿಸಿ, ಭಗವಂತನೊಬ್ಬನಲ್ಲಿಯೇ ಸಂಪೂರ್ಣ ಮನಸ್ಸನ್ನಿಡುವುದು. ಐಹಿಕ ಸಂಬಂಧಗಳೆಲ್ಲವನ್ನೂ ತೊರೆದು (ಮಾನಸಿಕವಾಗಿ) ಕೇವಲ ಭಗವಂತನಾದ ವಾಸುದೇವನೊಬ್ಬನೇ ನನಗೆ ಗತಿ, ಪಿತಾ, ಮಾತಾ, ಬಂಧು, ಸುಹೃತ್ ಎಲ್ಲವೂ ನಾರಾಯಣನೇ ಎಂಬ ದೃಢ ಬುದ್ಧಿ ಯಾರಿಗಿರುವುದೋ ಅವರೇ ಪರಮೈಕಾಂತಿಗಳು. ಪರಮ ಭಕ್ತರು. ಪ್ರಹ್ಲಾದ, ಲಕ್ಷ್ಮಣ, ವಿಭೀಷಣ ಮುಂತಾದವರು ಇದಕ್ಕೆ ಉದಾಹರಣೆ ಗೋಪಿಯರು ಅದೇ ರೀತಿ ತಮ್ಮ ಸರ್ವಸ್ವವನ್ನು ಶ್ರೀಕೃಷ್ಣನಿಗೆ ಅರ್ಪಿಸಿದವರು. ಕೃಷ್ಣನೇ ಭಗವಂತನಾದ್ದರಿಂದ ಅವರ ವರ್ತನೆಯಲ್ಲಿ ಯಾವ ದೋಷವೂ ಇಲ್ಲ.

ಪುಷ್ಪಾವಚಾಯ ಪ್ರವಣೇನ ಗೋಪ್ಯಃ ಪ್ರಸಾಧಿತಾಸ್ತೇನ ಸ ಚ ಪ್ರಿಯಾಭಿಃ।
ಅಭಿನ್ನ ಬಾಹ್ಯಾಂತರ ಮೈಕರಸ್ಯಾ ದಾಮೋದ ಮನ್ಯೋನ್ಯ ಸ ಗಂಧಮಾಪುಃ ॥೭೦॥

ಪುಷ್ಪಗಳನ್ನು ಕೀಳುವುದರಲ್ಲಿ ಉದ್ದೇಶ ಹೊಂದಿದವನಾದ ಶ್ರೀಕೃಷ್ಣನಿಂದ ಗೋಪಿಯರು ಅಲಂಕರಿಸಲ್ಪಟ್ಟರು. ಅವರುಗಳಿಂದ ಅವನೂ ಅಲಂಕರಿಸಲ್ಪಟ್ಟನು. ಆದ್ದರಿಂದ ಪರಸ್ಪರ

ಒಬ್ಬರಿಗೊಬ್ಬರು ಸಮನಾಗಿ ಮನಸ್ಸನ್ನು ಇಟ್ಟು ಆಮೋದವನ್ನು ಅನುಭವಿಸಿದರು. (ಒಳ ಆಮೋದ ಆನಂದ, ಹೊರಗಿನ ಆಮೋದ ಪುಷ್ಪಾಲಂಕಾರ).

ಯಾವಾಗ ಗೋಪಿ ಸ್ತ್ರೀಯರು ಅವನನ್ನೇ ಆಶ್ರಯಿಸಿ ಬಂದರೋ ಆವಾಗ ಅವರಲ್ಲಿ ಪರಸ್ಪರ ಅನುರಾಗ ಪ್ರಾಪ್ತವಾಗಿ, ಮನಸ್ಸು ಒಂದಾಯಿತು. ಪರಸ್ಪರ ಅಲಂಕಾರಗಳನ್ನು ಮಾಡಿ ಆನಂದಪಟ್ಟರು. ಭಗವಂತನಲ್ಲೇ ಸಂಪೂರ್ಣವಾಗಿ ತಮ್ಮ ಮನಸ್ಸನ್ನು ಸೇರಿಸಿಬಿಟ್ಟರು.

ಸ್ವಲಾಲ ನಾದಾಪತಿತಂ ಸ ತಾಸಾಂ ಸೌಭಾಗ್ಯ ದುರ್ಮಾನ ಮದಂ ವಿನೇಷ್ಯನ್ ।
ಪುಷ್ಪಾವಚಾಯ ವ್ಯಪದೇಶ ಲೌಲ್ಯಾದಾಸೀತ್ ದವೀಯಾನ ಬಹಿಃ ಸ್ಥಿತೋಽಪಿ॥೭೧॥

ಒಡನೆಯೇ ಗೋಪಿಯರು ಅವನು ತಮ್ಮನ್ನು ಹೊಗಳುವ ಹಾಗೆ ಮಂದಹಾಸ ಸೂಸುತ್ತಾ ಮದವನ್ನು (ಅಹಂಕಾರ) ಹೊಂದಿದರು. ಅದನ್ನು ಹೋಗಲಾಡಿಸಬೇಕೆಂದು ಶ್ರೀಕೃಷ್ಣನು ಆಲೋಚಿಸಿದನು. ನಿಮಗೆ ಹೂಗಳನ್ನು ಬಿಡಿಸಿಕೊಡುತ್ತೇನೆ ಎಂದು ಹೇಳಿ ಕೊಳ್ಳುತ್ತಲೇ ಅವರಿಂದ ಮರೆಯಾಗಿ, ಸ್ವಲ್ಪ ದೂರ ಹೋಗಿ ನಿಂತನು.

ಯಾವಾಗ ಶ್ರೀಕೃಷ್ಣನು ಸಹ ತಮ್ಮಿಂದ ಆಕರ್ಷಿತನಾದನೋ ಆವಾಗ ಗೋಪಿಯರಿಗೆ ಸ್ವಲ್ಪ ಅಹಂಕಾರ ಪ್ರಾಪ್ತಿಯಾಯಿತು. ಅವರ ಸೌಂದರ್ಯ ಮದವನ್ನು ಇಳಿಸಲು, ಶ್ರೀಕೃಷ್ಣನು ಹೂಗಳನ್ನು ಕೀಳುವ ನೆವದಲ್ಲಿ ಅವರಿಂದ ಮರೆಯಾಗಿ, ಅವರನ್ನು ಆಟವಾಡಿಸಬೇಕೆಂದು ಕೊಂಡನು.

ಅವಿಪ್ರಕರ್ಷೇಪಿ ತಿರಸ್ಕರಣ್ಯಾ ಕ್ಲ್ಪಾತ್ವೃತಿಂ ಕೃಷ್ಣಮನೀಕ್ಷಮಾಣಾಃ।
ಭೀಮೈರದೂಯಂತ ಭೃಶಂ ತರುಣ್ಯಃ ಕ್ಷಣೈಃ ಸ್ವನಿಃಶ್ವಾಸ ಸಮೀರದೀರ್ಘೈಃ॥೭೨॥

ಮಾಯೆಯೆಂಬ ದಂಡದಿಂದ ಮರೆಸಲ್ಪಟ್ಟವನಾದ್ದರಿಂದ, ಅವನು ಹತ್ತಿರದಲ್ಲಿದ್ದೂ ಕಾಣದವನಾದನು. ಅದರಿಂದ ಅವರುಗಳಿಗೆ ಒಂದೊಂದು ಕ್ಷಣವೂ ಬಹಳ ಭಯಂಕರವಾಗಿ ಅವರುಗಳ ದೊಡ್ಡ ಉಸಿರಾಟಕ್ಕೂ ದೊಡ್ಡದಾದ ಕಾಲವೆಂದು ಭಾವಿಸಿ, ಚಿಂತೆಗೀಡಾದರು. ಎಲ್ಲ ಕಾಲದಲ್ಲೂ ಜೋರಾಗಿ ಉಸಿರಾಡತೊಡಗಿದರು.

ಅವನು ತಮ್ಮ ಕಣ್ಣಿನ ನೋಟದಿಂದ ಮರೆಯಾದಾಗ, ಅವನ ವಿರಹದಿಂದ ಗೋಪ ಸ್ತ್ರೀಯರು ಮಾನಸಿಕವಾಗಿ ಬಳಲಿ, ಕಾಲವು ಬಹಳ ದೀರ್ಘವಾಗಿದೆ ಎಂದು ಭಾವಿಸಿದರು.

ಪುಷ್ಪಾವಕೀರ್ಣೇಷು ವನದ್ರುಮಾಣಾಂ ಮೂಲೇಷು ಮೋಹಾಲಸ ಚೇತಸಸ್ತಾಃ।
ಕೃತಾಸಿಕಾಃ ಕೃಷ್ಣ ವಿಯೋಗ ಖೇದಾತ್ ಕಾಮಾಸ್ತ್ರ ಪರ್ಯಂಕ ಗತಾ ಇವಾಽಽಸನ್॥೭೩॥

ಕಾಡಿನಲ್ಲಿ ಎಲ್ಲೆಲ್ಲೂ ಮರಗಳು ಪುಷ್ಪಗಳನ್ನು ಬಿಡುತ್ತಿದ್ದವು. ಅಲ್ಲಿ ಮರಗಳ ಕೆಳಗೆ ಮೋಹದಿಂದ ಗಾನ ಮಾಡುತ್ತಿರುವವನು ವೇಣುಗೋಪಾಲನೆಂಬುದನ್ನು ಅರಿಯದೆ ಗೋಪಿಗಳು ಕುಳಿತು ಶ್ರೀಕೃಷ್ಣನ ಅಗಲಿಕೆಯಿಂದ ದುಃಖವನ್ನು ಅನುಭವಿಸುವುದನ್ನು ನೋಡಿದಾಗ ಇವರುಗಳು ಕಾಮ ಬಾಣಗಳಿಂದ ಬಾಧಿಸಲ್ಪಟ್ಟಿರುವರೆಂದು ತಿಳಿಯುತ್ತಿತ್ತು.

ಶ್ರೀಕೃಷ್ಣನು ಹತ್ತಿರದಲ್ಲಿ ಎಲ್ಲೋ ಇದ್ದರೂ, ಅವನು ಗೋಪಿಯರ ಕಣ್ಣಿಗೆ ಬೀಳದೆ ಅವನ ವೇಣುಗಾನ ಮಾತ್ರ ಕೇಳಿಬರುತ್ತಿದೆ. ಅವನು ಎಲ್ಲಿ ? ಅವನು ಎಲ್ಲಿ ? ಎಂದು ಹಾಡುಕಾಡತೊಡಗಿದರು. ಅವರ ಆ ಅವಸ್ಥೆಯನ್ನು ಕಂಡಾಗ, ಅವರೆಲ್ಲರೂ ಮನ್ಮಥನ ಪಾಶಕ್ಕೆ ಒಳಗಾಗಿರುವರೆಂಬುದು ಸ್ಪಷ್ಟವಾಗಿ ತಿಳಿಯುತ್ತಿತ್ತು.

ವಿಲೀನಚಿತ್ತಾ ವಿಷಮಾಸ್ತ್ರತಾಪಾತ್ ವಿಲಾಪಯನ್ತ್ಯೋ ವಸುಧಾಂ ವಿಲಾಪೈಃ।
ಅದೃಶ್ಯರೂಪಸ್ಯ ಹರೇರಗಾಯನ್ ಗುಣಾಂಶ್ಚರಿತ್ರಾಣಿ ಚ ಗೋಪಕನ್ಯಾಃ ॥೭೪॥

ಗೋಪಿಗಳು ಮನ್ಮಥನ ತಾಪದಿಂದ ಮನಕ್ಲೇಶ ಹೊಂದಿ ಅಳುವವರಾಗಿ, ಊರು, ನಾಡು ಎಂಬ ಲೋಕವನ್ನೆಲ್ಲಾ ಮರೆತವರಾಗಿ ತನ್ನ ದಿವ್ಯ ದೇಹವನ್ನು ಮರೆಸಿಕೊಂಡಿರುವ ಆ ಶ್ರೀಕೃಷ್ಣನ ಗುಣಗಳನ್ನು ಅದ್ಭುತ ಕಾರ್ಯಗಳನ್ನು ಹೇಳುತ್ತಾ, ಹಾಡತೊಡಗಿದರು.

ಅವನ ವಿರಹ ತಾಪವನ್ನು ಮರೆಯಲು, ಅವನು ಇದುವರೆಗೂ ಗೋಕುಲದಲ್ಲಿ ಮಾಡಿದ ಅದ್ಭುತ ಲೀಲೆಗಳನ್ನು ನೆನೆಯುತ್ತಾ, ಅವುಗಳನ್ನು ವರ್ಣಿಸುತ್ತಾ, ಅವನ ಸಖ್ಯ ವನ್ನು ಮಾನಸಿಕವಾಗಿ ಅನುಭವಿಸತೊಡಗಿದನು.

ಮುಕುಂದ ವಿಶ್ಲೇಷ ವಿಮೋಹಿತಾನಾಂ ಸಂಶ್ರೂಯಮಾಣಾನಿ ಮುಹುರ್ವನಾಂತೇ।
ಶಮ ಪ್ರದಾನ್ಯಾತ್ಮ ವಿದಾತ್ಮಭೂವಂ ಪ್ರಯ್ಯಂತ ಗಂಧಿನಿ ವಚಾಂಸಿ ತಾಸಾಂ ॥೭೫॥

ಮೋಕ್ಷ ನೀಡುವ ಭಗವಂತನು ಅಗಲಿಕೆಯಿಂದ ಅಗಲಿಕೆಯಿಂದ ಮೋಹ ಹೊಂದಿದ ಅವರುಗಳ ಮನಸ್ಸಿನ ಕ್ಷೋಭೆಯು ಕಾಡಿನಲ್ಲಿ ಎಲ್ಲೆಲ್ಲೂ ಮೇಲೆ ಮೇಲೆ ಕೇಳಲ್ಪಟ್ಟುದಾಗಿ, ಅವುಗಳು ವೇದಾಂತಗಳಲ್ಲಿ ಮನಸ್ಸನ್ನು ಇಟ್ಟು ಭಗವಂತನನ್ನು ಉಪಾಸಿಸುವ ಯೋಗಿಗಳು ಇರುವಂತೆ ಶಾಂತಿ ಮೊದಲಾದ ಗುಣಗಳನ್ನು ಅವರು ಹೊಂದಿದವರಂತಾದರು.

ಅವರ ಆಗಿನ ಮನಸ್ಥಿತಿಯು ಯೋಗಿಗಳ, ವೇದಾಂತಿಗಳ ಮನಸ್ಥಿತಿಯಂತಿತ್ತು. ವೇದಾಂತಿಗಳು ಒಂದು ಬಾರಿ ಭಗವಂತನಲ್ಲಿ ಮನಸ್ಸನ್ನು ಇಟ್ಟ ಮೇಲೆ ಮತ್ತೆ ಬೇರಾವುದರಲ್ಲೂ ಆಸಕ್ತಿ ತೋರಿಸುವವರಲ್ಲ, ಗೋಪಸ್ತ್ರೀಯರು ಅದೇ ರೀತಿ ತಮ್ಮ ಮನಸ್ಸನ್ನು ಶ್ರೀಕೃಷ್ಣನಿಗೆ ಅರ್ಪಿಸಿದ ಮೇಲೆ ಬೇರಾವುದನ್ನೂ ಬಯಸಲಿಲ್ಲ, ಅವರ ಮನಸ್ಸಿನ ಕ್ಷೋಭೆಯು ಆ ವನ ದಲ್ಲೆಲ್ಲಾ ಪ್ರತಿಫಲಿಸುತ್ತಿತ್ತು.

ಸ ಮಾಯಯಾಽಽತ್ಮಾನಮಸೌ ಪರೇಷಾಂ ಪ್ರಚ್ಛಾದ್ಯ ಸಂದರ್ಶಯತಿ ಪ್ರಸಾದಾತ್।
ಇತೀಮಮರ್ಥಂ ಪ್ರಥಯನ್ ಪ್ರಿಯಾಣಾಂ ದೃಷ್ಟಿಂ ಶುಭಾಂ ದಾತುಮಿಯೇಷ ತಾಸಾಂ॥೭೬॥

ಸರ್ವೇಶ್ವರನು, ಇತರರಿಗೆ ತನ್ನ ಮಾಯೆಯಿಂದ ಮರೆಸಿಕೊಂಡರೂ, ಅನುಗ್ರಹ ಮಾಡುವ ಹೊತ್ತಿನಲ್ಲಿ ತೋರುವನೆಂಬುದು ಪ್ರಮಾಣ ಸಿದ್ಧವಾದ ವಿಷಯವೆಂದು ಹೇಳುವ ರೀತಿ ತನಗೆ ಇಷ್ಟವಾದ ಗೋಪಸ್ತ್ರೀಗಳಿಗೆ ಅವನು ಕ್ಷೇಮಕರವಾದ ತನ್ನ ರೂಪವನ್ನು ತೋರಿಸಲು ಇಚ್ಛಿಸಿದನು.

ಭಗವಂತನು ತನ್ನ ಭಕ್ತರಿಗೆ ಕಷ್ಟಗಳನ್ನು ನೀಡಿದರೂ, ಅವರಿಗೆ ಅಂತ್ಯದಲ್ಲಿ ಪೂರ್ಣಾನುಗ್ರಹ ಮಾಡುತ್ತಾನೆ. ಸಂಪೂರ್ಣವಾಗಿ ತನ್ನರೂಪ ತೋರಿಸಿ, ಸಾಕ್ಷಾತ್ಕಾರ ಅವರಿಗೆ ಕೊಡುತ್ತಾನೆ. ಅದೇ ರೀತಿ ಗೋಪಸ್ತ್ರೀರನ್ನು ಕಂಡರೆ ಅವನಿಗೆ ವಿಶೇಷ ಪ್ರೀತಿ. ಆದ್ದರಿಂದ ಸ್ವಲ್ಪ ಕಾಲ, ಅವರಿಂದ ಮರೆಯಾದರೂ, ಅನಂತರ ತನ್ನ ಪೂರ್ಣ ಸ್ವರೂಪವನ್ನು ಅವರಿಗೆ ತೋರಿ, ಅವರನ್ನು ಅನುಗ್ರಹಿಸಲು ಕೃಷ್ಣಸ್ವಾಮಿಯು ಇಚ್ಛಿಸಿದನು.

ತಾಸಾಮಥ ಸ್ಮೇರಮುಖಾಂಬುಜೇನ ಶ್ಯಾಮೇನ ಪೀತಾಂಬರ ಚಿತ್ರಿತೇನ।
ಆವಿರ್ಬಭೂವೆ ಸಹಸಾ ಪುರಸ್ತಾತ್ ಮಧುದ್ವಿಷಾ ಮನ್ಮಥ ಮನ್ಮಥೇನ ॥೭೭॥

ತಕ್ಷಣವೇ ಅವರುಗಳ ಎದುರಿನಲ್ಲಿ ಕೃಷ್ಣನು ಅರಳಿದ ತಾವರೆ ಹೂವಿನಂತೆ ಮುಗುಳ್ನಗೆಯೊಡನೆ, ಕೂಡಿದ ಮುಖಾರವಿಂದದೊಡನೆ ಪೀತಾಂಬರ ಮಾಲೆಯೊಡನೆ, ವಿಚಿತ್ರವಾದ ನೀಲಮೇಘ ಶ್ಯಾಮನಾಗಿ ಮನ್ಮಥನಿಗೂ ಮನ್ಮಥನಾಗಿ, ತನ್ನದಿವ್ಯ ರೂಪದಿಂದ ನಿಂತನು.

ಶ್ರೀಕೃಷ್ಣನು ಅವರುಗಳಿಗೆ ಆ ಸಂದರ್ಭದಲ್ಲಿ ತೋರಿದ ರೂಪವನ್ನು ವರ್ಣಿಸಿದ್ದಾರೆ. ಭಾಗವತದಲ್ಲೂ ಈ ಬಗ್ಗೆ ಶ್ಲೋಕ ಬಹಳ ಸುಂದರವಾಗಿದೆ.

ತಾಸಾಮಾವಿರಭೂಚ್ಛೌರಿ ಸ್ಮಯಮಾನ ಮುಖಾಂಬುಜಃ
ಪೀತಾಮ್ಬರಧರಃ ಸ್ರಗ್ವಿ ಸಾಕ್ಷಾನ್ಮನ್ಮಥ ಮನ್ಮಥಃ

ಒಡನೆಯೇ ಅವರ ಮಧ್ಯದಲ್ಲಿ ಭಗವಾನ್ ಶ್ರೀಕೃಷ್ಣನು ಪ್ರಕಟನಾದನು. ಅವನ ಮುಖಾರವಿಂದವು ಮಂದಹಾಸದಿಂದ ಪ್ರಫುಲ್ಲವಾಗಿತ್ತು. ವನಮಾಲೆಯನ್ನೂ, ಪೀತಾಂಬರವನ್ನೂ ಧರಿಸಿದ್ದ ಶ್ರೀಹರಿಯು ಸಾಕ್ಷಾತ್ ಮನ್ಮಥನ ಮನಸ್ಸನ್ನು ಸೂರೆಗೊಳ್ಳುವಂಥ ಸುಂದರ ರೂಪದಿಂದ ಬೆಳಗಿದನು. ಈ ಶ್ಲೋಕವನ್ನು ಪ್ರತಿನಿತ್ಯ ದೇವರ ಆರಾಧನೆಯ ಸಮಯದಲ್ಲಿ ಮನೆಗಳಲ್ಲೂ ಮತ್ತು ದೇವಸ್ಥಾನಗಳಲ್ಲಿಯೂ ಪಠಿಸುತ್ತಾರೆ.

ತಮೇಕ ಚಿತ್ತಾಃ ಪ್ರತಿ ಸಂನಿವೃತ್ತಂ ಯಾತೇನ ನೃತ್ಯಂತ ಮಿವಾದ್ಭುತೇನ।
ಗೋಪ್ಯಃ ಪುನರ್ಜಾತಮಿವಾತ್ಮನೈವ ಪ್ರೈಕ್ಷಂತ ಸಂಮೋದ ಪಯೋಧಿಮಗ್ನಾಃ ॥೭೮॥

ಅವರುಗಳೊಡನೆಯೇ ಸೇರಿದ ಮನವುಳ್ಳವನಾಗಿ, ಆ ಗೋಪಿಕಾಸ್ತ್ರೀಯರಿಗೆ ಮತ್ತೆ ತೋರಿದವನಾದ, ಅದ್ಭುತವಾದ ನಡೆಯುಳ್ಳ ನಾಟ್ಯವನ್ನು ಮಾಡುವ ಶ್ರೀಕೃಷ್ಣನನ್ನು, ಪುನರ್ಜನ್ಮ ಹೊಂದಿದವರಂತೆ ಆನಂದ ಸಮುದ್ರದಲ್ಲಿ ಮುಳುಗಿ ಕಂಡವರಾದರು. (ಅಥವಾ ಶ್ರೀಕೃಷ್ಣನೇ ಪುನರ್ಜನ್ಮ ಹೊಂದಿ ಬಂದನೆಂದು ತಿಳಿದು).

ಆಗ ಆ ಗೋಪಿಯರ ಆನಂದ ಹೇಳತೀರದು. ಶ್ರೀಕೃಷ್ಣನು ತಮ್ಮಿಂದ ದೂರವಾಗಿ ಹೋದನೇನೋ ಎಂಬ ಭಯ ಆತಂಕದಲ್ಲಿದ್ದವರಿಗೆ, ಅವನ ದರ್ಶನವಾದದ್ದು, ಆನಂದ ಸಾಗರದಲ್ಲಿ ತೇಲಾಡುವಂತಾಯಿತು. ತಮಗೆಲ್ಲರಿಗೂ ಪುನರ್ಜನ್ಮವಾದಂತೆಯೂ ಮತ್ತೂ ಶ್ರೀಕೃಷ್ಣನು ಸಹ ಪುನರ್ಜನ್ಮ ಪಡೆದನೇನೋ ಎಂಬಂತೆ ಗೋಪಿಯರು ಕುಣಿದಾಡಿದರು.

ನವೇಂದು ರೇಖಾ ಕೃಶ ಪಾಂಡುರಾಂಗೀ ಸ್ತಾಪಾಶ್ರು ಸಂದರ್ಶಿತ ವಹ್ನಿ ತೋಯಾಃ।
ದದರ್ಶ ಗೋಪಿ ರವತಾರಗೋಪಃ ಶ್ವಾಸೈರ್ ತ್ರಿಲೋಕೀಮಿವ ಶೋಷಯಂತಿಃ॥೭೯॥

ಅವನನ್ನು ಬಿಟ್ಟು ಅಗಲಿದ್ದ ಗೋಪಿಗಳು, (ಆ ಒಂದು ರಾತ್ರಿಯಲ್ಲಿಯೇ) ತಪಸ್ಸನ್ನು ಮಾಡಿದವರಂತೆ ಆಗಿದ್ದರು. ಹೇಗೆಂದರೆ, ಹೊಸ ಚಂದ್ರೋದಯದಂತೆ, ಅಳುತ್ತಾ, ನಗುತ್ತಾ ಇದ್ದು ಅವರುಗಳ ದೇಹವು ದೇಹದಲ್ಲಿ ತಾಪವೂ, ಕಣ್ಣೀರೂ ಉಂಟಾದ ಹೊತ್ತಿನಲ್ಲಿ ಬೆಂಕಿಯೂ, ನೀರೂ ಒಟ್ಟಿಗೆ ಇಟ್ಟಂತವರಂತೆ ಇದ್ದರು. ತಮ್ಮ ಉಸಿರಿನ ಗಾಳಿಯಿಂದ ಮೂರು ಲೋಕಗಳನ್ನು ಸುಡುವಂತಿದ್ದರು. ಈ ಸ್ಥಿತಿಯಲ್ಲಿ ಅವರುಗಳನ್ನು ಅವತಾರ ಪುರುಷನು ಕಂಡನು.

ಗೋಪ ಸ್ತ್ರೀಯರ ಆ ಹೊತ್ತಿನ ಸ್ಥಿತಿಯನ್ನು ಸುಂದರವಾಗಿ ಕವಿಗಳು ವರ್ಣಿಸಿದ್ದಾರೆ. ಯಾವ ರೀತಿ ಯೋಗಿಗಳಾದವರು, ತಪಸ್ಸನ್ನು ಮಾಡುವಾಗ, ಸ್ವಲ್ಪಕಾಲ ಶೀತಲವಾದ ವಾತಾವರಣದಲ್ಲಿಯೂ, ಸ್ವಲ್ಪಕಾಲ ಉಷ್ಣವಾದ ವಾತಾವರಣದಲ್ಲಿಯೂ ಇರುತ್ತಾ ಎಲ್ಲವನ್ನೂ ಸಹಿಸಿಕೊಂಡು, ಏಕಾಗ್ರ ಚಿತ್ತದಿಂದ ಭಗವಂತನನ್ನೇ ಧ್ಯಾನ ಮಾಡುತ್ತಾ ಇರುವರೋ, ಅವರಂತೆಯೇ ಗೋಪಸ್ತ್ರೀಯರು ಕೃಷ್ಣನ ವಿರಹ ಕಾಲದಲ್ಲಿ ಯೋಗಿಗಳಿಗೂ ಮಿಗಿಲಾಗಿ ಅವನನ್ನೇ ಧ್ಯಾನಿಸುತ್ತಿದ್ದರು.

ಅವಿಧ್ಯತೈಕಃ ಪ್ರಣಯಾಪರಾಧಿ ಯೋಗ್ಯೈ ರಲಕ್ಷ್ಯೋ ಯುಗಪತ್ ಪ್ರಯುಕ್ತೈಃ ।
ಆವರ್ಜಿತ ಭ್ರೂಧನುಷಾಮಮೋಘೈ ರೇಣೀದೃಶಾ ಮೀಕ್ಷಣ ಚಿತ್ರಪುಂಖೈಃ ॥೮೦॥

ಪ್ರೀತಿಯಿಂದ ಇದ್ದೂ ತಮ್ಮನ್ನು ಬಿಟ್ಟು ಅಗಲಿ ತಪ್ಪನ್ನು ಮಾಡಿದ ಕೃಷ್ಣನನ್ನು ಶಾಸ್ತ್ರಗಳಲ್ಲಿ ಹೇಳಿರುವ ಯೋಗಗಳಿಗೆ ಕಾಣದವನಾದ ಅವನನ್ನು ಕಂಡು ಈ ಎಳೆಯ ಸ್ತ್ರೀಯರ, ಅಪಾರ ಪ್ರೀತಿಯಿಂದ ತಮ್ಮ ಮೇಲೆ ತೋರಿರುವ ಕಟಾಕ್ಷವೆಂಬ ಕಣ್ನೋಟದಿಂದ ಎಲ್ಲರೂ ಸೇರಿ ಒಂದೇ ಸಮಯದಲ್ಲಿ ಒಂದಾದವರಂತಾದರು.

ಶ್ರೀಕೃಷ್ಣನೂ, ತಾವೆಲ್ಲರೂ ಆ ಅಗಲಿಕೆಯಿಂದ ಬಿಡುಗಡೆ ಹೊಂದಿ ಮತ್ತೆ ಸೇರಿದ್ದನ್ನು ಅದ್ವೈತ ಭಾವದಿಂದ ಕಂಡು, ತಮ್ಮ ಆತ್ಮಗಳೂ, ಶ್ರೀಕೃಷ್ಣನ ಆತ್ಮವೂ ಒಂದೇ ಎಂಬ ಭಾವ ಸಮಾಧಿಯನ್ನು ಹೊಂದಿ ಮೋಕ್ಷಾನಂದವನ್ನು ಅಲ್ಲಿಯೇ, ಆ ದಿನವೇ ಗೋಪಿಗಳು ಅನುಭವಿಸಿದರು. ಅವರಲ್ಲವೇ ಪರಮಧನ್ಯರು.

ಪ್ರಸಾದ ಜೀವಾತುಭಿರಂಗನಾನಾಂ ಪ್ರತ್ಯೇಕ ಮನ್ಯಾಭಿ ರಲಕ್ಷಣೀಯೈಃ
ವಿಲಾಸ ಚಾಟೂಕ್ತಿ ವಿಲೋಕನಾದ್ಯೈರಾನಂದಯನ್ ಸಾಂತ್ವನ ಮಾಚಚಾರಃ॥೮೧॥

ಕೃಷ್ಣನು ಆ ಹೆಣ್ಣುಮಕ್ಕಳು, ಮನಶ್ಶುದ್ಧಿಯಿಂದ ಉಸಿರು ಹಿಡಿಯಲು ಔಷಧವಾಗಿ ಒಬ್ಬಳು ಮಾಡುವುದು ಮತ್ತೊಬ್ಬಳಿಗೆ ತಿಳಿಯದಂತೆ ವಿಲಾಸವನ್ನು ಚಮತ್ಕಾರದವಾದ ಮಾತು, ಕಣ್ನೋಟ ಮುಂತಾದವುಗಳಿಂದ ಆನಂದಪಡಿಸಲ್ಪಟ್ಟವನಾಗಿ ಸಮಾಧಾನವನ್ನು ಹೊಂದಿದನು.

ಆ ಗೋಪಸ್ತ್ರೀಯರ ಹಾವಭಾವಗಳನ್ನೆಲ್ಲಾ ಆನಂದದಿಂದ ಅನುಭವಿಸಿದ ಶ್ರೀಕೃಷ್ಣನು ತಾನೂ ಸಮಾಧಾನ ಹೊಂದಿ ಅವರನ್ನೂ ಸಮಾಧಾನ ಪಡಿಸಿದನು. ಅವರ ಶೃಂಗಾರ ಸೂಚಕವಾದ ಮಾತುಗಳಿಂದ ಇವನೂ ತೃಪ್ತನಾಗಿ, ಅವರನ್ನೂ ತೃಪ್ತಿ ಪಡಿಸಿದನು.

ತಾಸಾಂ ತದಂಗ ವ್ಯತಿಷಂಗ ಲೋಭಾತ್ ಸೈರಂಧ್ರಿಕಾ ವೃತ್ತಿ ಮುಪೇಯುಷೀಣಾಂ।
ವಿರಕ್ತ ನಿಧ್ಯೆಯಪದಃ ಸ ರಾಗೀ ರಾಗಾಧಿಕಾಂ ಪ್ರಾಸ್ತುತ ರಾಸಲೀಲಾಂ ॥೮೨॥

ವೈರಾಗ್ಯ ಹೊಂದಿದವರುಗಳಿಂದ ಧ್ಯಾನ ಮಾಡಲ್ಪಟ್ಟು ಬೇಡುವ ದಿವ್ಯ ಪಾದಾರವಿಂದಗಳನ್ನು ಹೊಂದಿರುವ ಶ್ರೀಕೃಷ್ಣನು, ಅವರುಗಳ ಬಳಿ ಪ್ರೇಮಗೊಂಡು ತನ್ನ ದಿವ್ಯ ದೇಹದಿಂದ ಹೊರಸೂಸುವ ನಶೆಯಿಂದ ತನಗೂ ಅನೇಕ ಅಲಂಕಾರಗಳನ್ನು ಮಾಡಿಕೊಳ್ಳುವ ಹಾಗೆ ಪ್ರೀತಿಸುವ ಆ ಹೆಣ್ಣುಮಕ್ಕಳೊಡನೆ ಮೇಲೆ ಮೇಲೆ ಪ್ರೀತಿಯನ್ನು ತೋರಿಸುತ್ತಾ, ರಾಸಕ್ರೀಡೆಯನ್ನು ಆರಂಭಿಸಿದನು.

ಕೇವಲ ಯೋಗಿಗಳಿಂದಲೇ ಧ್ಯಾನಿಸಲ್ಪಡುವ ಶ್ರೀಕೃಷ್ಣನು, ತಾನು ಎಲ್ಲರಿಗೂ ಸುಲಭನೆಂಬುದನ್ನು ತೋರಿಸಲು, ಗೋಪಿಯರ ಮೇಲೆ ವಿಶೇಷ ಪ್ರೀತಿ ತೋರಿಸಲು, ಅವರೊಡನೆ ರಾಸಕ್ರೀಡೆಯನ್ನು ಆಡಲು ನಿಶ್ಚಯಿಸಿ, ಅದನ್ನು ಆರಂಭಿಸಿದನು. ರಾಸ ಲೀಲೆಯ ಲಕ್ಷಣವನ್ನು ಈ ರೀತಿ ವರ್ಣಿಸಲಾಗಿದೆ.

ಅನೇಕ ನರ್ತಕೀ ಯೋಜ್ಯಂ ಚಿತ್ರ ತಾಲ ಲಯಾನ್ವಿತಂ।
ಆಚತುಃ ಷಷ್ಠಿ ಯುಗಳಂ ರಾಸಕಂ ಮಸೃಣೋ ಅದ್ಭುತಂ ॥

ತದಗ್ರ ಹಸ್ತಾ ಗ್ರಹಣಾರ್ಥಿನೀನಾಂ ಸ ಸವ್ಯತೊ ದಕ್ಷಿಣತಶ್ಚ ತಿಷ್ಠನ್।
ಬಭಾರ ವಿದ್ಯುದ್ವಯವಧಾನ ಭಾಜಾಂ ವಾತ್ಯಾಜುಷಾಂ ವಾರಿ ಮುಚಾಮಭಿಖ್ಯಾಂ॥೮೩॥

ತನ್ನ ದಿವ್ಯ ಹಸ್ತದ ತುದಿಯನ್ನು ಹಿಡಿದು ಆಟ ಪ್ರಾರಂಭಿಸಿದ ಆ ಸ್ತ್ರೀಯರಿಗೆ ಎರಡು ಕಡೆಗಳಲ್ಲೂ ತಾನು ಅನೇಕ ರೂಪ ತಳೆದು ಮಂಡಲಾಕಾರದಿಂದ ಅವರುಗಳೊಡನೆ, ಸುತ್ತಲಾರಂಭಿಸಿ ಮಧ್ಯೆ ಮಧ್ಯೆ ಮಿಂಚಿ ಬೆಳಗುವ ಮೇಘದಂತೆ ವಿಜೃಂಭಿಸಿದನು.

ಆ ಸುಂದರಿಯರಾದ ಗೋಪಸ್ತ್ರೀಯರ ಕೈಗಳನ್ನು ತನ್ನ ಹಸ್ತದ ತುದಿಯಿಂದ ಹಿಡಿದು, ಅವರೆಷ್ಟು ಜನರಿದ್ದರೋ ಅಷ್ಟು ರೂಪಗಳನ್ನು ಮಾಯಾವಿಯಾದ ಶ್ರೀಕೃಷ್ಣನು ತಳೆದು, ಮಂಡಲಾಕಾರವಾಗಿ ಸುತ್ತುತ್ತಾ, ರಾಸಕ್ರೀಡೆಯನ್ನು ಆರಂಭಿಸಿದನು.



ದ್ವಯೋ ದ್ವಯೋ ರೇಕ ತಯಾ ಸ ತಾಸಾಂ ಮಧ್ಯೇ ಸ್ಥಿತೋ ಮಂಡಲ ರಾಸ ನೃತ್ತೇ।
ಕರದ್ವಯ ಸ್ಪರ್ಶ ರಸೇನ ಕಾಂತಾಃ ಪ್ರತ್ಯೇಕ ಮಾನಂದ್ಯ ಭೃಶಂ ನನಂದ ॥೮೪॥

ಆ ರೀತಿ ರಾಸಕ್ರೀಡೆಯಾಡುವಾಗ, ಇಬ್ಬರ ನಡುವೆ ತಾನೊಬ್ಬನಾಗಿ, ಒಬ್ಬೊಬ್ಬಳು ತನ್ನ ಬಳಿಯಲ್ಲಿ ಎನ್ನುವ ಲೆಕ್ಕದಲ್ಲಿ ನಿಂತವನಾಗಿ ಒಬ್ಬೊಬ್ಬಳನ್ನು ತನ್ನ ಎರಡು ಕೈಗಳಿಂದ ಆಲಿಂಗಿಸಿ ಕೊಂಡಿರುವಂತೆ ಮಾಡಿ ಎಲ್ಲರ ಕೈಗಳೆಲ್ಲವನ್ನೂ ತಾನು ಒಬ್ಬನೇ ಹಿಡಿದು ಅತ್ಯಂತ ಆನಂದವನ್ನು ಹೊಂದಿದನು.

ಇಬ್ಬರ ನಡುವೆ ತಾನು, ಇಬ್ಬರು ಕೃಷ್ಣ - ನಡುವೆ ಒಬ್ಬಳು ಗೋಪಿ ಎಂಬಂತೆ ಎಲ್ಲರ ನಡುವೆಯೂ ತೋರುತ್ತಾ, ಅದ್ಭುತ ಲೀಲಾ ಮಾನುಷನಾದ ಶ್ರೀಕೃಷ್ಣನು ಎಲ್ಲರನ್ನೂ ಪ್ರತ್ಯೇಕ ವಾಗಿ ಆನಂದಪಡಿಸುವವನಂತೆ ರಾಸಲೀಲೆಯನ್ನು ಮಾಡಿದನು.

ಅಂಗನಾಮಂಗನಾಮಂತರೇ ಮಾಧವೋ
ಮಾಧವಂ ಮಾಧವಂ ಚಾಂತರೇಣಾಂಗನಾ।
ಇತ್ಥ ಮಾಕಲ್ಪಿತೋ ಮಂಡಲೇ ಮಧ್ಯಗಃ
ಸಂಜಗೌ ವೇಣುನಾ ದೇವಕೀನಂದನಃ॥ - ಶ್ರೀಕೃಷ್ಣ ಕರ್ಣಾಮೃತ

ಅಂಗನೆಗೆ ಅಂಗನೆಗೆ ಮಧ್ಯದಲ್ಲಿ ಮಾಧವ, ಮಾಧವ ಮಾಧವನ ಮಧ್ಯದಲ್ಲಿ ಅಂಗನೆ, ಹೀಗೆ ರಚಿತವಾದ ಮಂಡಲದ ಮಧ್ಯದಲ್ಲಿ ನಿಂತು ದೇವಕೀನಂದನನು ಕೊಳಲಿನಿಂದ ಚೆನ್ನಾಗಿ ಹಾಡಿದನು.

ಅಪಾರ ಮಾವರ್ತಯತಾ ರಸಾಬ್ಧಿಂ ರಾಮಾನುಜೋ ರಾಸಜವೇನ ದಿವ್ಯನ್।
ಪದಾಶ್ರಿತಾನಾಂ ಭ್ರಮಶಾಂತಿ ಹೇತುಃ ಪ್ರಿಯಾಸಹಸ್ರಂ ಭ್ರಮಯಾಂಚಕಾರ ॥೮೫॥

ತನ್ನ ಪಾದಾರವಿಂದಗಳನ್ನು ಆಶ್ರಯಿಸಿದವರಿಗೆ ಭ್ರಮೆಗಳನ್ನು ಹೋಗಲಾಡಿಸುವ ಬಲರಾಮನ ತಮ್ಮನಾದ ಶ್ರೀಕೃಷ್ಣನು ಆ ಶೃಂಗಾರ ರಸ ಸಮುದ್ರದ ಮಧ್ಯದಲ್ಲಿ ಆಟವಾಡು ವವನಾಗಿ, ಸಾವಿರ ಪ್ರೇಮಿಗಳನ್ನೂ ಒಂದೇ ಬಾರಿಗೆ ಭ್ರಮೆಗೊಳಿಸಿದನು.

ಆ ಶ್ರೀಕೃಷ್ಣನ ರಾಸಕ್ರೀಡೆಯನ್ನು ಎಷ್ಟು ವರ್ಣಿಸಿದರೂ ಸಾಲದು. ಶೃಂಗಾರ ರಸವೇ ಮೈವೆತ್ತಿ ಬಂದವನಾಗಿದ್ದ ಆ ಶ್ರೀಕೃಷ್ಣನು ಎಲ್ಲರನ್ನೂ ಬಿಟ್ಟು ತನ್ನೆಡೆಗೆ ಬಂದಿರುವ ಆ ಗೋಪಸ್ತ್ರೀಯರನ್ನು ಆನಂದ ಸಾಗರದಲ್ಲಿ ಮುಳುಗಿಸಿದನು. ಅವನ ಆ ದಿವ್ಯ ರೂಪವನ್ನು ಕಂಡು ಎಲ್ಲರೂ ಭ್ರಮೆಗೊಳಗಾದರು.

ಸ್ವಮಾಯಯಾ ಘೂರ್ಣಯತೋ ಮಹತ್ಯಾ ವಿಶ್ವಾನಿ ಭೂತಾನಿ ವಿಭೋ ರಜಸ್ರಂ।
ರಾಮಾಜನಂ ರಾಸವಶಂ ವಿಧಾಯ ಸ್ವಸ್ಯ ಸ್ವಯಂ ಪ್ರಾಪ ನಿದರ್ಶನತ್ವಂ ॥೮೬॥

ದೊಡ್ಡ ಪ್ರಕೃತಿ ಎಂಬ ತನ್ನ ಮಾಯೆಯಿಂದ, ಎಲ್ಲಾ ಪ್ರಾಣಿಗಳನ್ನು ಯಾವಾಗಲೂ, ಆಡಿಸುವ ಪ್ರಭುವು ಸಾವಿರ ಹೆಣ್ಣುಮಕ್ಕಳನ್ನು ಆಟವಾಡಿಸಿ ವಶಪಡಿಸುವ ಕೃಷ್ಣನಾಗಿ ಅದನ್ನು ಮಾಡುವ ತನಗೆ ತಾನೇ ಉದಾಹರಣೆಯಾಗಿದ್ದನು.

ಎಲ್ಲರೂ ಅವನ ಮಾಯೆಗೆ ಒಳಗಾಗಿ, ವಶೀಕರಿಸಲ್ಪಟ್ಟವರಂತೆ ಆಗಿದ್ದರು. **''ಮಾಯಾಂ ತು ಪ್ರಕೃತಿಂ ವಿದ್ಧಿ ಮಾಯಿನಂ ತು ಮಹೇಶ್ವರಂ''** ಎಂಬ ಗೀತಾ ವಾಕ್ಯದಂತೆ, ಈ ಜಗತ್ತನ್ನೇ ಮೋಹಗೊಳಿಸುವ ಸರ್ವೇಶ್ವರನು, ಮುಗ್ಧರಾದ ಗೋಪಿಯರನ್ನು ಭ್ರಮೆಗೊಳಿಸಿದ್ದರಲ್ಲಿ ಏನಾಶ್ಚರ್ಯವಿದೆ? ಎಲ್ಲರೂ ಅವನ ಮಾಯೆಗೆ ಒಳಪಟ್ಟವರೇ!

ಸ್ಫುರತ್ಪರಾನಂದರ ಸಾತ್ಮಕೇನ ತ್ವಯಾ ಸಮಾಸಾಧಿತ ಭೋಗಲೀಲಾಃ ।
ಅಸೀಮಮಾನಂದಭರಂ ಪ್ರಸನ್ನಾ ಮಹಾಂತಮಾಪುರ್ಮದ ಮಂಬುಜಾಕ್ಷ್ಯಃ ॥

'ಸ್ವಾಮೀ ! ಪರಮಾನಂದ ಸ್ವರೂಪನಾದ ನಿನ್ನೊಂದಿಗೆ ರಮಿಸಿದ ಗೋಪಿಯರು ಎಣೆಯಿಲ್ಲದ ಆನಂದದಿಂದ ಪರವಶರಾದರು. ಬಳಿಕ ಅವರು ಭೋಗಿಸಿದ ಭಾಗ್ಯ ಸಂಪತ್ತನ್ನು ನೆನೆದು ಆ ಗೋಪಿಯರು ತುಂಬ ಗರ್ವಿತರಾದರು. (ನಾರಾಯಣೀಯಂ - 678)

ಸ್ವಪಾದ ಪಾಂಸು ಸ್ನಪೀತಾ ಕೃತಿನಾಂ ಸ್ವಿದ್ಯನ್ ಮುಖೀನಾಂ ವ್ರಜ ಸುಂದರೀಣಾಂ।
ಲಂಬಾಲಕಾನಾಂ ಲಲಿತ ಸ್ಮಿತಾನಾಂ ಲಾಭಾತ್ ಸ್ವಯಂ
ಲಬ್ಧ ಮನೋರಥೋ ಅಭೂತ್ ॥೮೭॥

ಶ್ರೀಕೃಷ್ಣನು ಆಟ ಆಡುವಾಗ, ಮಧ್ಯದಲ್ಲಿ ಬಿದ್ದ ತನ್ನ ಪಾದಾರವಿಂದದ ಧೂಳಿನಿಂದ ಮೈಯೆಲ್ಲಾ ಹರಡಿದವನಾಗಿ, ಮುಖವು ಮರೆಯಾಗಿ, ಮುಂಗೂದಲುಗಳು ಮುಖದಲ್ಲಿ ತೂಗಾಡುವ ಸುಂದರವಾದ ಮುಗುಳ್ನಗೆಯೊಡನೆ, ಅಲ್ಲಿ ಇರುವ ಗೋಪಸ್ತ್ರೀಯರುಗಳೊಡನೆ ಸೇರಿ, ಅವರುಗಳ ಆ ನಿಲುಮೆಯನ್ನು ನೋಡಿ ತನ್ನ ಮನೋರಥ ಪೂರ್ತಿ ಆಯಿತೆಂದು ಭಾವಿಸಿದನು.

ರಾಮಾವತಾರದಲ್ಲಿ ಅರಣ್ಯದಲ್ಲಿ ಮುನಿಗಳು ಅವನ ಮೋಹಕ ರೂಪ ಸೌಂದರ್ಯ ವನ್ನು ನೋಡಿ ಅವನನ್ನು ಅನುಭವಿಸಬೇಕೆಂದು ಆಶಿಸಿದಾಗ, ತಾನು ರಾಮಾವತಾರದಲ್ಲಿ ಏಕಪತ್ನೀ ವ್ರತಸ್ಥನೆಂದೂ, ಮುಂದೆ ಕೃಷ್ಣಾವತಾರದಲ್ಲಿ ಅವರ ಆಸೆಯನ್ನು ಈಡೇರಿಸುವುದಾಗಿ ಹೇಳಿದ್ದನ್ನು ಸ್ಮರಿಸಿ, ಈಗ ಗೋಪಿಯರಾಗಿ ಬಂದಿರುವ ಅವರ ಆಸೆಯನ್ನು ಈ ರಾಸಕ್ರೀಡೆಯಲ್ಲಿ ಪೂರೈಸಿ ಕೃತಕೃತ್ಯನಾದನು ಸ್ವಾಮಿ.

ಸನೃತ್ತ ಗೀತೇನ ವಿಹಾರಯೂನಾ ಗೋಪೀಜನೈ ರಂತರಿತೇನ ಬದ್ಧಂ।
ತದದ್ಭುತ ಪ್ರಸ್ಥಿತಿ ರಾಸಚಕ್ರಂ ಜವಾದ ಲಕ್ಷ್ಯಾಂತರ ಮಾವಭಾಸೆ ॥೮೮॥

ಮಧ್ಯೆ ಮಧ್ಯೆ ಗೋಪಸ್ತ್ರೀಯರೊಡನೆ ಸೇರಿ ಉಚ್ಚವಾಗಿ ಹಾಡುತ್ತಾ, ಅನಂದಭರಿತ ವಾದ ಸಂಚಾರವು ಇದ್ದ ಆ ಸಮೂಹ ನೃತ್ಯವು ತುಂಬಾ ಸಂತೋಷದಿಂದ ವಿರಾಮವೇ ತಿಳಿಯದೆ ಒಂದೇ ಚಕ್ರದಂತೆ ತೋರಿತು.

ಒಂದು ಚಕ್ರವು ಜೋರಾಗಿ ತಿರುಗುವಾಗ, ಅದರ ಕೋಲುಗಳು ಒಂದೇಯೇನೋ ಎಂಬಂತೆ ಭಾಸವಾಗುತ್ತದೆ. ಅದೇ ರೀತಿ ಶ್ರೀಕೃಷ್ಣನೊಡನೆ ಆ ಗೋಪಿಯರೆಲ್ಲಾ ಸುತ್ತುವರಿದು,

ಶೀಘ್ರವಾಗಿ ಕುಣಿಯುತ್ತಾ ಆಡುತ್ತಾ, ಚಕ್ರಾಕಾರವಾಗಿ ಸುತ್ತುವಾಗ, ಎಲ್ಲರೂ ಒಂದೇಯೇನೋ ಎಂಬಂತೆ ಭಾಸವಾಗಿ ನೋಡುವವರಿಗೆ ಭ್ರಮೆ ಉಂಟಾಗುತ್ತಿತ್ತು.

ಜಗುಃ ಸಹರ್ಷಂ ದಿವಿ ದೇವಕನ್ಯಾಃ ದಿವ್ಯಾಸ್ತದಾ ದುಂದುಭಯಃ ಪ್ರಣೇದುಃ।
ಪಪಾತ ಕಲ್ಪದ್ರುಮ ಪುಷ್ಪವೃಷ್ಟಿಃ ಸದರ್ಚಿತೆ ಸಂಶ್ರಿತ ರಾಸಲೀಲೆ ॥೮೯॥

ಆವಾಗ ಆಕಾಶದಲ್ಲಿ ದೇವತಾಸ್ತ್ರೀಯರು, ಅತೀವ ಸಂತೋಷದಿಂದ ಹಾಡಿದರು. ಮೇಲು ಲೋಕದ ದೊಡ್ಡ ದೊಡ್ಡ ವಾದ್ಯಗಳು ಬಾರಿಸಲ್ಪಟ್ಟವು. ಆ ರಾಸನೃತ್ಯದಲ್ಲಿ ಮನಸ್ಸಿಡುವ ಸತ್ಪುರುಷರಿಂದ ಆರಾಧಿಸಲ್ಪಡುವ ಕೃಷ್ಣನ ಮೇಲೆ ಕದಂಬ ವೃಕ್ಷದ ಪುಷ್ಪಗಳು ಸುರಿಸಲ್ಪಟ್ಟವು.

ಆ ರಾಸಕ್ರೀಡೆಯನ್ನು ಮೇಲಿನಿಂದ ವೀಕ್ಷಿಸಿದ ದೇವತೆಗಳು, ದೇವತಾಸ್ತ್ರೀಯರು ಅತ್ಯಂತ ಆನಂದದಿಂದ, ತಮಗೆ ಈ ಭಾಗ್ಯ ದೊರಕಲಿಲ್ಲವಲ್ಲಾ ಎಂದು ಪರಿತಪಿಸಿದರೂ, ಅತ್ಯಂತ ಹರ್ಷದಿಂದ ಅವರೆಲ್ಲರ ಮೇಲೂ, (ಮೈಮರೆತು ನೃತ್ಯ ಮಾಡುತ್ತಿರುವ) ಪುಷ್ಪವೃಷ್ಟಿಯನ್ನು ಸುರಿಸಿದರು. ವಿಧವಿಧವಾದ ದೇವಲೋಕದ ಪುಷ್ಪಗಳು ಸುರಿಸಲ್ಪಟ್ಟವು.

ಗೃಹೀತ ಹಸ್ತ ದ್ವಿತಯಾಃ ಸಲೀಲಂ ಮಿಥ್ಯಾಭುಜಂಗೇನ ಮೃಗೀ ದೃಶಸ್ತಾಃ।
ಪರಿಭ್ರಮಂತ್ಯೋ ವಿಪರೀತ ವೃತ್ತ್ಯಾ ಪ್ರಕ್ರಾಂತರಾಸಾಂ ಭುವಮಭ್ಯಜಾನನ್ ॥೯೦॥

ಪರ ಸ್ತ್ರೀಗಳೊಡನೆ ಸಂಬಂಧವಿರುವ ಪುರುಷನಂತೆ ತನ್ನನ್ನು ಭಾವಿಸುವ ಶ್ರೀಕೃಷ್ಣನಿಂದ ಎರಡು ಕೈಗಳಿಂದಲೂ, ವಿನೋದವಾಗಿ ಹಿಡಿಯಲ್ಪಟ್ಟಿರುವ ಸ್ತ್ರೀಗಳು, ನಿಜವಾಗಿಯೂ, ತಾವೇ ಸುತ್ತುತ್ತಿದ್ದರೂ ವಿಪರೀತವಾಗಿ ಭೂಮಿಯನ್ನು ಸುತ್ತುವುದಾಗಿ ಭಾವಿಸಿದರು.

ಕೃಷ್ಣನೇನೋ ಪರಸ್ತ್ರೀಯರ ಸಂಬಂಧ ಹೊಂದಿದವನು. ಅವನು ತನ್ನನ್ನು ಜಾರನೆಂದೇ ಕರೆದುಕೊಳ್ಳುತ್ತಾನೆ. ಆದರೆ ತಾವು ಪತಿವ್ರತಾ ಸ್ತ್ರೀಯರಾಗಿದ್ದರೂ, ಈ ಹೊತ್ತು, ಆ ತ್ರೈಲೋಕ್ಯ ಮೋಹನನ ಆಕರ್ಷಣೆಯನ್ನು ತಡೆಯಲಾರದೆ, ತಾವು ತಪ್ಪಿತಸ್ಥರೆಂದು ಭಾವಿಸಿದರೂ, ಅವನೊಡನೆ ಕ್ರೀಡಿಸುವುದು ಪಾಪವಲ್ಲವೆಂದು ನಿಶ್ಚಯಿಸಿ, ಆನಂದ ಕಡಲಿನಲ್ಲಿ ಮುಳುಗಿದರು. ಅವರು ಸುತ್ತುವಾಗ ಭೂಮಿಯೂ ತಮ್ಮೊಡನೆ ಸುತ್ತುವುದಾಗಿ ಭಾವಿಸಿದರು.

ಮನೋಜ್ಞಮಲ್ಲೀ ಹಸಿತೇನ ತಾಸಾಂ ರಮ್ಯೇಣ ಕೃಷ್ಣೋ ರಜನೀ ಮುಖೇನ।
ಅನ್ಯಾದೃಶೀಂ ಪ್ರೀತಿ ಮನನ್ಯ ಯೋಷಾ ದಾಪಾದಯಿಷ್ಯನ್ ವಿರರಾಮ ರಾಸಾತ್ ॥೯೧॥

ಆ ಗೋಪಸ್ತ್ರೀಯರು ತನ್ನಲ್ಲಿಯೇ ಪ್ರೀತಿ ಉಳ್ಳವರಾಗಿ ಇದ್ದವರಾದ್ದರಿಂದ ಶ್ರೀಕೃಷ್ಣನು ಮನೋಹರವಾದ ಮಲ್ಲಿಗೆ ಹೂಗಳ ಮಾಲೆಗಳನ್ನು ನೋಡಿ ಅವರುಗಳಿಗೆ ಬೇರೆ ಬಗೆಯಾದ ಆನಂದವನ್ನು ಕೊಡಲು ನಿಶ್ಚಯಿಸಿ, ರಾಸಕ್ರೀಡೆಯನ್ನು ನಿಲ್ಲಿಸಿದನು.

ರಾಸಕ್ರೀಡೆಯನ್ನು ಸಂತೋಷಕರವಾಗಿ ಆಡಿ ಆನಂದಿಸಿದ ನಂತರ, ಇತರ ಕ್ರೀಡೆಗಳನ್ನು ಅವರೊಡನೆ ಆಡ ಬಯಸಿ, ಪುಷ್ಪ ಪ್ರಿಯರಾದ ಆ ಗೋಪಿಕಾ ಸ್ತ್ರೀಯರಿಗೆ ಮಲ್ಲಿಗೆ

ಮುಂತಾದ ಪುಷ್ಪಗಳನ್ನು ನೀಡಿ, ರಾಸಕ್ರೀಡೆಯನ್ನು ಮುಕ್ತಾಯಗೊಳಿಸಿದನು. ಎಲ್ಲ ಪ್ರಕಾರಗಳಿಂದಲೂ ಪ್ರಪನ್ನರನ್ನು ಅನುಗ್ರಹಿಸುವುದೇ ಅವನ ಉದ್ದೇಶ.

ಉದ್ಭಿನ್ನ ಘರ್ಮಾಂಬುಕಣಂ ವಿಹಾರಾತ್ ತಾಸಾಂ ಕರಸ್ಪರ್ಶ ರಸೇನ ಚೈನಂ।
ಲತಾಗೃಹೇ ನಂದನಗರ್ಭ ಶೋಭಿನ್ಯಾಸೀನ ಮನ್ವಾಪ್ತ ಗೋಪಕನ್ಯಾಃ ॥೯೨॥

ಗೋಪ ಕನ್ನಿಕೆಯರು, ತಮ್ಮೊಡನೆ, ಬಹಳ ಕಾಲ ಕ್ರೀಡೆ ಆಡಿದುದದರಿಂದಲೂ, ತಮ್ಮ ಕೈಗಳನ್ನು ಸ್ಪರ್ಶಿಸುವುದರಿಂದಲೂ, ಬೆವರು ಅಂಟಿಕೊಂಡಿದ್ದ ಅದನ್ನು ತೊಳೆದು ದಿವ್ಯ ನಂದನ ವನದಂತಿದ್ದ, ಸುಂದರವಾದ ಕೋಟಿ ಮಂಟಪದಲ್ಲಿ ವಿರಾಜಮಾನನಾಗಿದ್ದ ಶ್ರೀಕೃಷ್ಣನನ್ನು ಸುತ್ತುವರಿದು ಕುಳಿತರು.

ರಾಸಕ್ರೀಡೆಯು ಗೋಪಿಯರಿಗೆ ಆಯಾಸ ತಂದಿತ್ತು. ಬಹಳ ಕಾಲ ಒಬ್ಬರ ಕೈಯ್ಯನ್ನು ಮತ್ತೊಬ್ಬರು ಹಿಡಿದು ಶ್ರೀಕೃಷ್ಣನ ಸ್ಪರ್ಶವನ್ನೂ ಮಾಡಿದುದರಿಂದ, ಅವರುಗಳ ಕೈಗಳಲ್ಲೆಲ್ಲಾ ಬೆವರು ಅಂಟಿಕೊಂಡಿತ್ತು. ಆಯಾಸ ಪರಿಹಾರಕ್ಕಾಗಿ, ಅಲ್ಲಿಯೇ ಇದ್ದ ಒಂದು ದೊಡ್ಡ ಲತಾ ಮಂಟಪದಲ್ಲಿ ಶ್ರೀಕೃಷ್ಣನಿದ್ದುದರಿಂದ, ಅವನನ್ನು ಸುತ್ತುವರಿದು ಕುಳಿತರು.

ಸ್ವಲಂಭಿತೈ ಶ್ಚಿತ್ರ ಪಲಾಶಪುಷ್ಪೈಃ ಸಂವೀಜ್ಯಮಾನೋ ವಿಟಪೈಃ ಪ್ರಿಯಾಭಿಃ।
ನಿದರ್ಶಯಾಮಾಸ ವನಾಂತರಾಲೇ ನೀಲಾದ್ರಿಮುದ್ಭ್ರಾಂತ ಮಯೂರ ವೃಂದಂ॥೯೩॥

ಶ್ರೀಕೃಷ್ಣನು ತಾನು ಕಿತ್ತು ಇಟ್ಟಿದ್ದ ಎಳೆಯ ಹೂವುಗಳಿಂದ ಕಟ್ಟಿದ್ದ ಬೀಸಣಿಗೆಗಳನ್ನು ತೆಗೆದುಕೊಂಡು ತನ್ನ ಪ್ರೇಮಿಗಳಿಂದ ವನದ ಮಧ್ಯದಲ್ಲಿ ಬೀಸಲ್ಪಟ್ಟವನಾಗಿ, ನವಿಲುಗಳು ಸಮೂಹವಾಗಿ ಮೇಲೆ ಹಾರಿ ಇರುವ ನೀಲಗಿರಿಯಂತೆ ಇದ್ದನು.

ಆ ಶ್ರೀಕೃಷ್ಣನಿಗೆ ಗೋಪಿಕೆಯರು ತಮ್ಮ ಸೇವೆಯನ್ನು ಆರಂಭಿಸಿದರು. ಶ್ರೀಕೃಷ್ಣನೇ ಕಿತ್ತು ತಂದಿದ್ದ ಪುಷ್ಪಗಳಿಂದ ಮಾಲೆಯನ್ನು ಬೀಸಣಿಗೆಯಾಕಾರದಲ್ಲಿ ಕಟ್ಟಿ ಅವನ ಆಯಾಸ ಪರಿಹರಿಸಲು, ಅದರಿಂದ ಅವನಿಗೆ ಚಾಮರ ಸೇವೆ ಮಾಡಿ ಆನಂದಿಸಿದರು. ನವಿಲುಗರಿಯಿಂದ ಅಲಂಕೃತನಾಗಿದ್ದ ಸ್ವಾಮಿಯು ನವಿಲುಗಳು ಸಮೂಹವಾಗಿ ಕುಳಿತುಕೊಳ್ಳುವ ಗಿರಿಯಂತೆ ಶೋಭಿಸಿದನು.

ವಿಚಿತ್ರ ಲೀಲಾಹಿತ ವೇಪಥೂನಾಂ ತಾಸಾ ಮನಾಸಾದಿತ ವಿಶ್ರಮಾಣಾಂ।
ತಾಪೋಪ ಶಾಂತ್ಯೈ ತಪನಾತ್ಮಜಾಯಾ ಮಾಹ್ಲಾದಿನೀಮದ್ಬಿ ರಿಯೇಷ ಲೀಲಾಂ॥೯೪॥

ಅನೇಕ ಬಗೆಯಾದ ಕ್ರೀಡೆಗಳಿಂದ ದೇಹವು ನಡುಗಿದರೂ, ತಮ್ಮ ಉತ್ಸಾಹವು ಕುಂದದೆ ಇದ್ದ ಆ ಗೋಪಸ್ತ್ರೀಯರ ತಾಪವನ್ನು ಹೋಗಲಾಡಿಸಲು ಯಮುನೆಯ ತೀರದಲ್ಲಿ ಆನಂದವಾಗಿ ಜಲಕ್ರೀಡೆ ಆಡಲು ಯೋಚಿಸಿದನು ಸ್ವಾಮಿ.

ರಾಸಕ್ರೀಡೆಯ ನಂತರ ಆಯಾಸ ಪರಿಹಾರಕ್ಕಾಗಿ, ಯಮುನಾ ನದಿಯಲ್ಲಿ ಗೋಪಿಕಾಸ್ತ್ರೀಯರೊಡನೆ, ಜಲಕ್ರೀಡೆಯಾಡಲು ಸ್ವಾಮಿಯು ನಿರ್ಧರಿಸಿದನು. ಶ್ರೀಕೃಷ್ಣನ ಸಮೀಪದಲ್ಲಿ

ಇದ್ದ ಅವರಿಗೆ ಶರೀರಾಯಾಸವು ಇದ್ದರೂ, ಮನಸ್ಸಿನಲ್ಲಿ ಯಾವ ಆಯಾಸವೂ ಇಲ್ಲದೆ, ನವೋತ್ಸಾಹದಿಂದ ಕೂಡಿ ಅವನೊಡನೆ ಜಲಕ್ರೀಡೆಗೆ ಸಿದ್ಧರಾದರು. ಸಂಜೆಯಾದರೆ, ತಾವರೆಗಳು ಮುದುಡುತ್ತವೆ. ಆದರೆ ಇವರ ಮುಖಾರವಿಂದಗಳು ಚಂದ್ರನ ಕಾಂತಿಯಿಂದ ಬಾಡದೆ ಉತ್ಸಾಹದಿಂದಲೇ ಕೂಡಿತ್ತು.

ಮುಖೇನ ತಸ್ಯ ದ್ವಿಜರಾಜಭಾಸಾ ತಾರಾಭಿ ರಾಮೇಣ ತಮೋಪಹೇನ ।
ಪ್ರೇಮೋದಧಿಂ ವರ್ಧಯತಾ ಪ್ರಿಯಾಣಾಂ ಸಂಚಿಕ್ಷಿಪೇ ತತ್ರ ಸರೋಜ ಕಾಂತಿಃ ॥೯೫॥

ಶ್ರೀಕೃಷ್ಣನು ಯಮುನೆಯಲ್ಲಿ ಇಳಿದಾಗ, ಪ್ರೇಮಿಗಳಿಗೆ ಆನಂದ ಸಾಗರವನ್ನು ಉಕ್ಕಿಸುವುದೂ, ಅಜ್ಞಾನ ಕತ್ತಲನ್ನು ಹೋಗಿಸುವುದು ಸೌಂದರ್ಯದಿಂದ ಶೋಭಿಸುವುದು, ಸಮುದ್ರವನ್ನು ಉಕ್ಕಿಸುವ ಕತ್ತಲನ್ನು ಹೋಗಲಾಡಿಸಿ ನಕ್ಷತ್ರಗಳೊಡನೆ ಕೂಡಿದ ಚಂದ್ರನಿಗೆ ಸಮಾನನಾದವನು ತನ್ನ ಮುಖ ಕಾಂತಿಯಿಂದ ನದಿಯಲ್ಲಿ ಇದ್ದ ತಾವರೆಗಳೆಲ್ಲದರ ಕಾಂತಿಯನ್ನು ಕುಗ್ಗಿಸಿದನು.

ಶ್ರೀಕೃಷ್ಣನು ಜಲಕ್ರೀಡೆಯಾಡಲು ಯಮುನೆಯಲ್ಲಿ ಇಳಿದಾಗ, ಅವನ ಮುಖ ಕಾಂತಿಯ ಮುಂದೆ, ಯಮುನೆಯಲ್ಲಿದ್ದ ತಾವರೆ ಹೂಗಳ ಕಾಂತಿಯೆಲ್ಲವೂ ಕಳಾಹೀನವಾಯಿತು. ಅವನ ಸಾನ್ನಿಧ್ಯವೇ ಪ್ರೇಮಿಗಳ ಆನಂದವನ್ನು ಉಕ್ಕಿಸುವ ಚಂದ್ರನಿಗಿಂತಲೂ ಮಿಗಿಲಾಗಿದ್ದು ಗೋಪಿಗೆ ಮನಸ್ಸೆಲ್ಲವೂ ಅರಳಿ, ಅವರು ಮುದಗೊಂಡರು.

ಸಂಧ್ಯಾಘನಾಭಃ ಸ ತದಾ ಪ್ರಿಯಾಣಾಂ ಮಧ್ಯೆ ಬಭೌ ವಾರಿಜರೇಣು ತಾಮ್ರೈಃ।
ಶೃಂಗಾರ ದಿಗ್ಧೈರಿವ ದೃಷ್ಟಿಪಾತ್ರೈಃ ಶೃಂಗೋಧಕೈ ರಾಪ್ಲುತ ಚಿತ್ರದೇಹಃ ॥೯೬॥

ಜಲಕ್ರೀಡೆಯಲ್ಲಿ ಶ್ರೀಕೃಷ್ಣನು ತಾವರೆ ಹೂವುಗಳು ಸೇರಿ ಅರಳಿದ ಹಾಗೆ ಶೃಂಗಾರ ರಸ ಸೇರಿದ ಪ್ರೇಮದಿಂದ ಕೂಡಿದ ಕಡೆಗಣ್ಣಿನ ನೋಟವೆಂಬ ತಣ್ಣೀರಿನಿಂದ ದಿವ್ಯ ಶರೀರ ಪೂರ್ತಿ ನೆನೆಸಲ್ಪಟ್ಟವನಾಗಿ ಸಾಯಂಕಾಲದ ಮೇಘದಂತೆ ಬೆಳಗಿದನು.

ಶ್ರೀಕೃಷ್ಣನು ಯಮುನಾ ನದಿಯಲ್ಲಿ ಜಲಕ್ರೀಡೆಯಾಡಲು ಇಳಿದಾಗ, ಅವನ ದೇಹ ಕಾಂತಿಯು ಅದ್ಭುತವಾಗಿ ಪ್ರಕಾಶಿಸುತ್ತಿದ್ದು, ಗೋಪಿಕೆಯರ ಶೃಂಗಾರರಸ ಭರಿತವಾದ ಕಡೆಗಣ್ಣಿನ ನೋಟಗಳಿಂದ ಅವನು ಸಂಪೂರ್ಣವಾಗಿ ತೋಯ್ದು, ಮೇಘರಾಜನಂತೆ ವಿರಾಜಿಸಿದನು.

ಸ ಪದ್ಮಿನೀನಾಂ ಸಲಿಲ ಸ್ಥಿತಾನಾಂ ಚಕಾರ ಸಂಮಿಲನ ಮಾಶು ತಾಸಾಂ।
ತುಷಾರ ಜಾಲೈಸ್ತು ಹಿಮಾಂಶು ಸೌಮ್ಯಃ ಕಾಮೋಪನೇತಾ ಕರಯಂತ್ರ ಮುಕ್ತೈಃ ॥೯೭॥

ಅವನು ಆವಾಗ ನಾಚಿಕೆಯನ್ನು ತೋರಿಸುವವನಾಗಿ ತನ್ನ ಕೈಯಿಂದ ಕೀಳಲ್ಪಟ್ಟ ತುಂಬಿದ ನೀರಿನಲ್ಲಿ ಬಿಡುವ ಪದ್ಮಿನಿ ಜಾತಿಯ ಸ್ತ್ರೀಗಳಾದ ಗೋಪಿಯರನ್ನು ಕಂಡು, ಚಂದ್ರನ ಕಿರಣಗಳಿಂದ ಮುಚ್ಚುಕೊಳ್ಳುವ ತಾವರೆಗಳಂತೆ ತನ್ನ ಕಣ್ಣನ್ನು ಮುಚ್ಚಿಕೊಂಡನು.

ಶ್ರೀಕೃಷ್ಣನು ಗೋಪಿಕೆಯರಿಂದ ಸುತ್ತುವರಿಯಲ್ಪಟ್ಟವನಾಗಿ, ನಾಚಿಕೆಯನ್ನು ಪ್ರಕಟಿಸುತ್ತಾ ಜಲಕ್ರೀಡೆಯನ್ನು ಆಡುವಾಗ, ಉತ್ತಮ ಜಾತಿಯ ತಾವರೆ ಹೂಗಳಂತಿದ್ದ, ಗೋಪಿಯರನ್ನು ಕಂಡು, ಚಂದ್ರನನ್ನು ಕಂಡು ತಾವರೆ ಹೂಗಳು ಮುದುಡಿಕೊಳ್ಳುವಂತೆ ತನ್ನ ಕಣ್ಣನ್ನು ವಿನೋದಾರ್ಥವಾಗಿ ಮುಚ್ಚಿಕೊಂಡನು.

ಪಟೀರಪಂಕ್ಯೈಃ ಪ್ರತಿಪನ್ನಗಂಗಾಂ ಶೋಣಾನ್ವಿತಾಂ ಕುಂಕುಮ ಸಂಗಮೇನ ।
ಕಸ್ತೂರಿಕಾಭಿಃ ಪ್ರಚಿತಾತ್ಮವರ್ಣಾಂ ಕೃಷ್ಣಪ್ರಿಯಾಃ ಕೃಷ್ಣನದೀಂ ವಿತೇನುಃ ॥೯೮॥

ಶ್ರೀಕೃಷ್ಣನ ಪ್ರೇಮಿಗಳು ಕಪ್ಪಾದ ಯಮುನೆಯಲ್ಲಿ ತಾವು ಪೂಸಿದ್ದ ಚಂದನದ ತಂಪಾದ ಕರಗುವಿಕೆಯಿಂದ ಗಂಗೆಯೊಡನೆ ಸೇರಿದುದಾಗಿಯೂ, ಕುಂಕುಮದ ಸೇರುವಿಕೆಯಿಂದ ಶೋಣಾ ಎನ್ನುವ ನದಿಯೊಡನೆ ಸೇರಿದಂತೆ ಕಸ್ತೂರಿಗಳ ಮಿಶ್ರಣದಿಂದ ತನ್ನ ನಿಲುವನ್ನು ಇನ್ನೂ ಹೆಚ್ಚು ಆಕರ್ಷಕವಾಗಿ ಮಾಡಿದನು.

ಶ್ರೀಕೃಷ್ಣನೇ ಸರ್ವಾಂಗ ಸುಂದರನು, ಇನ್ನು ಅವನು ಗೋಪಿಯರು ಎಂಬ ತನ್ನ ಪ್ರೇಮಿಗಳೊಡನೆ ಜಲಕ್ರೀಡೆಯಾಡುತ್ತಿದ್ದಲ್ಲಿ ಗೋಪಿಯರು ಪೂಸಿದ್ದ ಚಂದನ, ಕುಂಕುಮವೆಲ್ಲಾ ನೀರಿನಲ್ಲಿ ಕಲಸಿ, ಆ ನೀರೆಲ್ಲವೂ ಕೃಷ್ಣನ ಮೇಲೆ ಹರಿಸಿದಾಗ ಅವನು ಇನ್ನೂ ಹೆಚ್ಚು ಆಕರ್ಷಕನಾಗಿ ಕಂಡನು. ಇದೇ ಭಾವವನ್ನು ಸ್ವಾಮಿ ದೇಶಿಕರು 'ತತ್ತ್ವಮುಕ್ತಾ ಕಲಾಪ'ದಲ್ಲಿಯೂ ಹೇಳಿದ್ದಾರೆ.

ಲಕ್ಷ್ಮೀ ನೇತ್ರೋತ್ಪಲ ಶ್ರೀ ಸತತ ಪರಿಚಯಾದೇಷ ಸಂವರ್ಧಮಾನೋ
ನಾಭೀನಾಳೀಕ ರಿಂಕಾಂ ಮಧುಕರ ಪಟಲೀ ದತ್ತಹಸ್ತಾವಲಂಭಃ ।
ಅಸ್ಮಾಕಂ ಸಂಪದೌಘಾನ್ ಅವಿರಲ ತುಳಸೀದಾಮ ಸಂಜಾತ ಭೂಮಾ
ಕಾಳಿಂದೀ ಕಾಂತಿಹಾರೀ ಕಲಯತು ವಪುಷಃ ಕಾಳಿಮಾ ಕೈಟಭಾರೇ ॥

ಅಕಾಲ ಜಾತ ಪ್ರತಿಮೆಂದು ಜಾಲಾನ್ ಆಕೀರ್ಣ ಮಿಥ್ಯಾತ ಫರಾಂಸ್ತರಂಗಾನ್ ।
ವಕ್ತ್ರಾಕ್ಷಿ ವಕ್ಷೋರುಹ ಬಿಂಬಯೋಗಾದ ಅಕಲ್ಪಯನ್ ಕಲ್ಪಿತ ಚಕ್ರವಾಕಾನ್ ॥೯೯॥

ಅವರುಗಳು ತಮ್ಮ ಮುಖವು, ಕಣ್ಣುಗಳು, ಸ್ತನಗಳು ಇವುಗಳ ಸೇರುವಿಕೆಯಿಂದ ನದಿಯ ಅಲೆಗಳನ್ನು ಅಕಾಲದಲ್ಲಿ ಎದ್ದ ಅನೇಕ ಚಂದ್ರಬಿಂಬಗಳನ್ನು ಎಬ್ಬಿಸಿ, ಅಲೆಗಳಲ್ಲಿ ಅನೇಕ ಸ್ಥಳಗಳಲ್ಲಿ ಅಡಗಿದ್ದ ಮೀನುಗಳನ್ನೂ ಚಕ್ರವಾಕ ಪಕ್ಷಿಗಳನ್ನೂ ಹೊಂದುವ ಹಾಗೆ ಮಾಡಿದರು.

ಯಮುನಾ ನದಿಯ ನೀರಿನಲ್ಲಿ ಗೋಪಿಯರ ಮುಖಬಿಂಬಗಳಂತೆ ತೋರುತ್ತಾ, ಅಕಾಲದಲ್ಲಿ ಉದ್ಭವಿಸಿದದುರಿಂದ, ನೀರಿನಲ್ಲಿ ಅಡಗಿರುವ ಮೀನುಗಳೆಲ್ಲಾ ಕಾಣುವ ಹಾಗೆ ಆಗಿ ಚಕ್ರವಾಕ ಪಕ್ಷಿಗಳು ಆ ಮೀನುಗಳನ್ನು ಹಿಡಿಯಲು ಪ್ರಯತ್ನಪಡುವಂತೆ ಆಯಿತು.

ಸ ವಿಭ್ರಮಾ ಚಾರು ಪಯೋಧರಾಭಾ ತಾಭಿಃ ಸಮಂ ಸೂರ್ಯಸುತಾ ಪ್ರಪೇದೇ।
ಅಲಬ್ಧಪೂರ್ವಂ ತದನನ್ಯಲಭ್ಯಂ ಕೃಷ್ಣೋಪ ಭೋಗೇನ ಕೃತಾರ್ಥಭಾವಂ ॥೧೦೦॥

ಶ್ರೀಕೃಷ್ಣನೊಡನೆ ಸೇರಿ, ಆ ಪ್ರೇಮಿಗಳು ಇದಕ್ಕೆ ಮುಂಚೆ ಹೆಸರು ಪಡೆದುದು, ಬೇರೊಬ್ಬರಿಂದ, ಪಡೆಯಲಾಗದ ಪುರುಷಾರ್ಥವನ್ನು ಹೊಂದಿದಂತೆ, ಯಮುನೆಯು ಅದನ್ನು ಹೊಂದಿತು. ಪ್ರೇಮಿಗಳಿಗೂ, ಯಮುನೆಗೂ, ಒಂದೇ ಭಾಷೆ ಆಗುತ್ತದೆ. ಸವಿಬ್ರಮ ಎಂಬುದು 'ಚಾರು ಪಯೋಧರಾಭೆ' ಎನ್ನುವುದು.

ಯಮುನಾ ನದಿಯೂ ಸಹ ಶ್ರೀಕೃಷ್ಣನ ಪ್ರೇಮಿಗಳಾದ ಗೋಪಿಯರಂತೆ, ತಾನೂ ಕೂಡಿ, ಶ್ರೀಕೃಷ್ಣನು ತನ್ನಲ್ಲಿ ಜಲಕ್ರೀಡೆ ಆಡಿದುದರಿಂದ ಧನ್ಯತೆ ಪಡೆಯಿತು. ಭಗವಂತನನ್ನು ಹೊಂದುವುದೇ ಪರಮ ಪುರುಷಾರ್ಥ. ಅದನ್ನು ಗೋಪಿಯರು ಮತ್ತು ಯಮುನಾ ನದಿ ಸುಲಭವಾಗಿ ಈ ಜಲಕ್ರೀಡೆಯಲ್ಲಿ ಪಡೆದರು. ಯಮುನಾ ನದಿ ಹಾಗೂ ಗೋಪಿಯರು ಇಬ್ಬರೂ ಅವನ ಪ್ರೇಯಸಿಯರೇ, ಇಬ್ಬರ ಭಾಷೆಯೂ ಒಂದೇ.

ನಿತಂಬ ವಕ್ಷೋಜ ನಿರೂಢ ವೃದ್ಧಿರ್ಮಧ್ಯೆ ಕೃಶಾ ಸಂಶ್ರಿತ ನಿಮ್ನನಾಭಿಃ।
ವಿಲೋಲ ಪದ್ಮಾಗ್ರ ತರಂಗಹಸ್ತಾ ತಾಸಾಮಭೂದನ್ಯ ತಮೇವ ಸಾಽಪಿ ॥೧೦೧॥

ಮತ್ತೆ ಯಮುನೆಯಾದುದು, ಆ ಸ್ತ್ರೀಗಳಲ್ಲಿ ಒಬ್ಬಳ ಹಾಗೆ ಆಗಿಬಿಟ್ಟಳು. ಹೇಗೆಂದರೆ, ಸ್ತನಗಳಿಂದಲೂ, ನಿತಂಬಗಳಿಂದಲೂ ದೇಹವು ವೃದ್ಧಿ ಪಡೆದವರು. ಸಣ್ಣ ನಡು ಉಳ್ಳವರು, ನೀಳವಾದ ನಾಭಿ ಉಳ್ಳವರೂ, ತಾವರೆಯಂಥಾ ಹಸ್ತವುಳ್ಳವರೂ, ಯಮುನೆಯೂ ಅವರುಗಳ ಸ್ತನಗಳಲ್ಲಿ ವೃದ್ಧಿ ಪಡೆಯಿತು. ಸ್ತನಗಳೂ, ನಿತಂಬಗಳೂ ಇರದ ಮಧ್ಯದ ಜಾಗದಲ್ಲಿ ಕಡಿಮೆ ಆಗಿ ಹೀಗೇ ಒಂದಾದರು. ತಾವರೇ ಸೇರಿದ ಅಲೆಗಳಿಂದ ಕೈಗಳನ್ನು ಒಂದುಗೂಡಿಸಿದರು.

ಗೋಪ ಸ್ತ್ರೀಯರು ಜಲಕ್ರೀಡೆಯಾಡುವಾಗ, ಅವರ ಸ್ತನಗಳ ಮಧ್ಯೆ ನಿತಂಬಗಳಲ್ಲಿ ಯಮುನೆಯ ನೀರು ಹರಿದು, ಯಾವ ರೀತಿ ಅವರ ಅಂಗಗಳು ಶ್ರೀಕೃಷ್ಣನಿಗೆ ಆನಂದವನ್ನು ನೀಡುತ್ತಿತ್ತೋ ಅದೇ ರೀತಿ ಯಮುನೆಯೂ ಅವರ ಮೇಲೆ ಹರಿದು ನಂತರ ಕೃಷ್ಣನ ಮೇಲೆ ಹರಿಯುವಾಗ ಅದೇ ಆನಂದವನ್ನು ಅನುಭವಿಸಿದಳು. ಸುಂದರ ಸ್ತ್ರೀಯರ ದೇಹವು ಮಧ್ಯೆ ಕೃಶವಾಗಿರುತ್ತದೆ. ಸ್ತನಗಳು ಮತ್ತು ನಿತಂಬಗಳು ಉಬ್ಬಿರುತ್ತವೆ. ಅವುಗಳ ಮೇಲೆ ಬರಿದು ಬರುವ ನೀರು ಕೃಷ್ಣನಿಗೂ ಅಮಿತಾನಂದವನ್ನೂ, ವಿಶೇಷ ಅನುಭವವನ್ನೂ ನೀಡಿತು. ಯಮುನೆಯೂ ಶ್ರೀಕೃಷ್ಣನ ಅಂಗಸ್ಪರ್ಶದಿಂದ ಮಹಾಧನ್ಯಳಾದಳು.

ಅಸೂಯ ಯೇವ ಪ್ರಮದಾ ಜನಾನಾಂ ಲಾಕ್ಷಾಂಜನಾದೀನಿ ವಿಲೋಪಯಂತಿ।
ನಿಸರ್ಗ ಶೋಭಾತಿಶಯ ಪ್ರಕಾಶಾತ್ ಕೃತೋಪಕಾರೇವ ನದೀ ಬಭೂವ ॥೧೦೨॥

ಯಮುನೆಯಾದುದು ಆ ಸ್ತ್ರೀಗಳ ಅಲಂಕಾರದಲ್ಲಿ ಅಸೂಯೆ ಪಟ್ಟು ಅವರುಗಳ ಕಾಲಿನಲ್ಲಿ ಪೂಸಿದ್ದ ಚಂಪಕ ಹೂಗಳನ್ನೂ, ಕಣ್ಣಲ್ಲಿ ಇದ್ದ ಮೇಖಲವನ್ನೂ, ದೇಹದ ಮೇಲೆ

ಇದ್ದ ಚಂದನಾದಿಗಳನ್ನೂ ತೊಳೆದು ತಳ್ಳಿ ಅಪಕಾರ ಮಾಡುವ ಹಾಗೆ ಇದ್ದದ್ದರಿಂದ ಆ ರೀತಿ ಮಾಡುವುದರಿಂದ ಅವರುಗಳಿಗೆ ನಿಜವಾಗಿಯೂ ಇರುವ ಸೌಂದರ್ಯವು ಅಧಿಕವಾದ ಪ್ರಕಾಶವು ಹೊಂದುವುದಾಗಿ ಅವರುಗಳಿಗೆ ಉಪಕಾರವನ್ನೇ ಮಾಡಿದಂತಾಯಿತು.

ಗೋಪಿಯರ ಸೌಭಾಗ್ಯವನ್ನು ನೋಡಿ ಯಮುನೆಗೂ ಅಸೂಯೆ ಉಂಟಾಯಿತು. ಅಸೂಯೆ ಸ್ತ್ರೀಯರ ಸಹಜ ಗುಣ. ಅದೇ ಪ್ರಕಾರ ಯಮುನೆ ಗೋಪಿಯರ ಸೌಂದರ್ಯ ಕಡಿಮೆ ಮಾಡಬೇಕೆಂದು ಅವರು ಜಲಕ್ರೀಡೆ ಆಡುವಾಗ, ಅವರು ಕಾಲಿಗೆ, ಮುಖಕ್ಕೆ ಮಾಡಿಕೊಂಡಿದ್ದ ಅಲಂಕಾರಗಳನ್ನೆಲ್ಲಾ ತೊಳೆದು ಹಾಕಿದಳು. ಆದರೆ ಅದರಿಂದ, ಅವರ ಸೌಂದರ್ಯ ಇಮ್ಮಡಿಸಿತೇ ಹೊರತು ಕಮ್ಮಿಯಾಗಲಿಲ್ಲ. ಯಮುನೆ ಅವರಿಗೆ ಉಪಕಾರವನ್ನೇ ಮಾಡಿದಳು.

ಚಿರಪ್ರವೃದ್ಧಂ ದಯಿತೆ ಅನುರಾಗಂ ಚಿತ್ತೆ ದುರಾಸೇಧ ಮಿಮೋದ್ವಮಂತಿ।
ಪ್ರಾಯೇಣ ತತ್ಕಾಂತಿ ಮಧೂಪ ಭೋಗಾತ್ ದೃಷ್ಟಿಸ್ತದಾ ರಾಗ ಮುವಾಹ ತಾಸಾಂ॥೧೦೭॥

ಆ ಸ್ತ್ರೀಯರ ಕಣ್ಣುಗಳಲ್ಲಿ ಜಲಕ್ರೀಡೆಯಿಂದ ಕೆಂಪಾಗಿದ್ದು ಅದು ಶ್ರೀಕೃಷ್ಣನ ಕಾಂತಿಯಾದ ಮದ್ಯವನ್ನು ಕುಡಿದುದರಿಂದ ಉಂಟಾದ ಹಾಗೆ, ಶೀಘ್ರಕಾಲದಲ್ಲೇ ತಮ್ಮ ಮನಸ್ಸಿನಲ್ಲಿ ಬೆಳೆದ ಅವನ ಮೇಲಿನ ಪ್ರೇಮವನ್ನು ಒಳಗೆ ಅಡಗಿಸಿಕೊಳ್ಳಲಾರದೆ ಹೊರಗೆ ತೋರ್ಪಡಿಸಿ ಕೊಳ್ಳುವ ಹಾಗೆ ಇತ್ತು.

ಆ ಜಲಕ್ರೀಡೆಯಿಂದ ಗೋಪ ಸ್ತ್ರೀಯರ ಕಣ್ಣುಗಳಲ್ಲಿ ಉರಿಯು ಏರ್ಪಟ್ಟು ಅದು ಕೆಂಪಗೆ ತೋರುತ್ತಿತ್ತು. ಅದು 'ಕೃಷ್ಣ' ಎಂಬ ಮದ್ಯಪಾನ ಮಾಡಿ ಮತ್ತೇರಿದವರ ಕಣ್ಣು ಗಳಂತೆ ತೋರುತ್ತಿತ್ತು. ಅಷ್ಟೇ ಅಲ್ಲದೆ ತಮ್ಮಲ್ಲಿ ಉಂಟಾದ ಆ ಸಂತೋಷದ, ಪ್ರೇಮದ ತೀವ್ರತೆಯನ್ನು ಅಡಗಿಸಿಕೊಳ್ಳಲು ಸಾಧ್ಯವಾಗದೆ, ಹೊರಗೆ ಅದನ್ನು ತೋರಿಸುವಂತಿತ್ತು.

ಅನಂಗ ರಾಗೋಜ್ವಲ ಚಿತ್ತದೇಹಾ ವಿಶ್ವಾಧಿಕಂ ವಿವ್ಯಧುರಾಯ ತಾಕ್ಷ್ಯೈಃ।
ಕಲ್ಹಾರ ಶೋಭಾ ರಚಿತೈಃ ಕಟಾಕ್ಷ್ಯೈಃ ಕಾಮಸ್ಯ ಬಾಣೈರಿವ ತಾಪ ದೀಪ್ತೈಃ॥೧೦೪॥

ಎಲ್ಲಕ್ಕೂ ಮೇಲ್ಪಟ್ಟ ಭಗವಂತನನ್ನೂ, ಸುಂದರವಾದ ಕಣ್ಣುಳ್ಳ ಗೋಪಿಯರು, ದೇಹವನ್ನೂ ಮನಸ್ಸನ್ನೂ ಆನಂದ ರಾಗೋಜ್ವಲವಾಗಿ ಹೊಂದಿ ಕಮಲ ಪುಷ್ಪವು ನೀರಿನಲ್ಲಿ ಅರಳಿ ಆಕರ್ಷಿಸುವ ಹಾಗೆ ತಮ್ಮ ಕಡೆಗಣ್ಣಿನ ನೋಟದಿಂದ ವಶಪಡಿಸಿದರು.

ತಾವೂ ಶ್ರೀಕೃಷ್ಣನ ಮೋಹಕ್ಕೆ ವಶವಾಗುವುದಲ್ಲದೆ, ಶ್ರೀಕೃಷ್ಣನನ್ನೂ ತಮ್ಮ ಹಾವಭಾವ ಗಳಿಂದ ವಶಪಡಿಸಿ ತಮ್ಮ ಜೀವನದ ಸಾರ್ಥಕತೆಯನ್ನು ಪಡೆದರು. ಶೃಂಗಾರ ಭಾವದಿಂದ ಕೂಡಿ ಪರಸ್ಪರ ಅನುರಾಗ ತೋರಿದರು.

ವಿಗಾಹನಾತ್ ಗೋಪ ನಿತಂಬಿನೀನಾಂ ಸಂವರ್ಧಮಾನೆ ಸಹಸಾಽಂಬುಪೂರೆ।
ತದ್ವಕ್ತ್ರ ಶೋಭಾ ವಿಜಿತೈಃ ಸರೋಜೈಃ ಅಂತರ್ಹಿತಂ ನೂನ ಮವಾಪ್ತಲಜ್ಜೈಃ ॥೧೦೫॥

ಎಲ್ಲಾ ಗೋಪಿಗಳೂ ನೀರಿನಲ್ಲಿ ನಿಂತಿದ್ದರಿಂದ ಯಮುನೆಯ ಪ್ರವಾಹವು ಅಧಿಕವಾಗಿ ಏರಿತು. ಅದರಿಂದ ಅಲ್ಲಿ ಅರಳಿದ್ದ ತಾವರೆ ಹೂಗಳೆಲ್ಲಾ ನೀರಿನಲ್ಲಿ ಮರೆಯಾದವು. ಅವುಗಳ ಮುಖ ಕಾಂತಿಯಿಂದ ಪರಿಭವ ಹೊಂದಿ ನಾಚಿಕೆಯಿಂದ ಮರೆಯಾದವೇನೋ ಎಂಬಂತೆ ತೋರುತ್ತಿತ್ತು.

ಗೋಕುಲದಲ್ಲಿದ್ದ ಗೋಪಿಯರೆಲ್ಲರೂ, ಶ್ರೀಕೃಷ್ಣನೊಡನೆ ಜಲಕ್ರೀಡೆಯಾಡಲು ಬಂದು ಯಮುನೆಯಲ್ಲಿ ನಿಂತಿದ್ದರಿಂದ, ಜಲ ಪ್ರವಾಹವು ಅಧಿಕವಾಯಿತು. ಆ ನೀರಿನ ವೇಗಕ್ಕೆ ಯಮುನೆಯಲ್ಲಿ ಅರಳಿದ್ದ ತಾವರೆ ಹೂಗಳೆಲ್ಲವೂ ಮರೆಯಾದವು. ಗೋಪಿಯರ ಮುಖಕಾಂತಿಯ ಮುಂದೆ ತಮ್ಮ ಸೌಂದರ್ಯವೂ ಏನೂ ಇಲ್ಲ ಎಂದು ನಾಚಿಕೆಯಿಂದ ನೀರಿನಲ್ಲಿ ಮರೆಯಾದ ಹಾಗೆ ತೋರುತ್ತಿತ್ತು. (ಉತ್ಪ್ರೇಕ್ಷಾಲಂಕಾರ).

ಕೃಷ್ಣಾಂಬುದಃ ಕಲ್ಪಿತ ಹಸ್ತಯಂತ್ರಶ್ಚಕಾರ ಗೋಪೀ ನಯನೋತ್ಪಲೇಷು ।
ಧಾರಾಂಬು ಸೇಕಾ ದುಪ ಸಂಭವಂತ್ಯಾ ರಾಗಶ್ರಿಯಾ ರಕ್ತಸಿಲೀಂಧ್ರ ಶೋಭಾಂ ॥೧೦೬॥

ಕಾರ್ಮೇಘದಂತೆ ಇದ್ದ ಶ್ರೀಕೃಷ್ಣನು ಕೈಗಳನ್ನು ತಣ್ಣೀರಿನಿಂದ ತಣ್ಣಗೆ ಮಾಡಿ ಗೋಪಿಗಳು ಕಣ್ಣುಗಳಲ್ಲಿ ಇದ್ದದ್ದರಿಂದ ಅದರಿಂದ ಕಣ್ಣುಗಳು ದೊಡ್ಡದಾದ ಕೆಂಪಾದ ಪುಷ್ಪಗಳಂತೆ ಆದವು.

ಶ್ರೀಕೃಷ್ಣನು ಯಮುನೆಯ ನೀರಿನಲ್ಲಿ ತನ್ನ ಕೈಗಳನ್ನು ನೆನೆಸಿಕೊಂಡು ಗೋಪಿಯರ ಕಣ್ಣುಗಳಲ್ಲಿ ಅದರಿಂದ ಉಜ್ಜಿದುದರಿಂದ, ಅವರ ಕಣ್ಣುಗಳು ಕೆಂಪಾದವು. ಆ ಕಣ್ಣುಗಳು ಕೆಂಪಾಗಿ, ಅಗಲವಾಗಿ ನಾಯಿ ಕೊಡೆಗಳಂತೆ ತೋರಿದವು. (ಅರುಣ ಕದಲಿ ಪುಷ್ಪ ಕಾಂತಿಯನ್ನು ಆ ಕಣ್ಣುಗಳು ಹೊಂದಿದವು).

ಮುಹುಃ ಪ್ರಯುಕ್ತಾಂ ಮುಖ ಪುಂಡರೀಕೆ ಕದರ್ಥಯಂತ್ಯಾ ಕರ ಯಂತ್ರಧಾರಾಂ।
ಕಾಂತಿ ಕಯಾಚಿತ್ ದಧಿರೆ ಕರಾಭ್ಯಾಂ ಗತಾಗತನ್ಯುತ್ಫಲ ಕಾನ ನಾನಾಂ ॥೧೦೭॥

ಕೈಯ್ಯನ್ನು ಕೊಂಡು ತನ್ನ ತಾವರೆಯಂಥಾ ಮುಖದಲ್ಲಿ ಮೇಲೆ ಮೇಲೆ ನೀರನ್ನು ಎರಚುವ ಶ್ರೀಕೃಷ್ಣನ ಕಾರ್ಯವನ್ನು ವ್ಯರ್ಥಗೊಳಿಸುವಳಾಗಿ, ಒಬ್ಬಳು ತನ್ನ ಕೈಗಳಿಂದ (ಹಾವಭಾವವಾಗಿ ಬೀಸುತ್ತಾ) ಹೋಗುವುದು ಬರುವುದು ಮಾಡುತ್ತಾ ಬರುತ್ತಿದ್ದಳು. ಅಂದರೆ, ಅವನು ಎರಚಲು ಆರಂಭಿಸಿದ ಹೊತ್ತು ನೋಡಿ ತನ್ನ ಮುಖವನ್ನು ಕೈಗಳಿಂದ ಮರೆಸಿಕೊಂಡು ಇರುತ್ತಿದ್ದಳು.

ಮುಂದೆ ಪರಸ್ಪರ ಒಬ್ಬರ ಮೇಲೆ ಮತ್ತೊಬ್ಬರು ನೀರೆರಚುವ ಕಾರ್ಯವು ಆರಂಭವಾಯಿತು. ಜಲಕ್ರೀಡೆಯಲ್ಲಿ ಇದು ಒಂದು ಸಾಮಾನ್ಯ ಕ್ರಿಯೆ.

ಪ್ರಯಾಪಿತೆ ಗೋಪಿಕಯಾ ಕಯಾಚಿತ್ ಕೃಷ್ಣಾನನಂ ಕೀಚಕ ಯಂತ್ರ ತೋಯಿ।
ನಿಮೀಲನೋನ್ಮಿಲನ ತಸ್ತದೀಯಾತ್ ನಕ್ತಂದಿವಂ ತತ್‌ಕ್ಷಣ ದೃಶ್ಯಮಾಸೀತ್ ॥೧೦೮॥

ಒಬ್ಬಳು ಗೋಪಿಯು ಮುಂಗೈ ಮೂಲಕವಾಗಿ ಕೃಷ್ಣನ ಮುಖದಲ್ಲಿ ನೀರನ್ನು ತುಂಬಿ ಎರಚುವ ಹೊತ್ತೆಲ್ಲಾ ಅವನು ತನ್ನ ಕಣ್ಣುಗಳನ್ನೂ, ಮುಖವನ್ನೂ ಮುಚ್ಚುವುದು ತೆಗೆಯುವುದು ಮಾಡುವವನಾಗಿ ಹಗಲು ರಾತ್ರಿಯ ಕಾಲಗಳನ್ನು ಆಯಾಯ ಕ್ಷಣದಲ್ಲಿ ತೋರಿಸುತ್ತಾ ಬಂದನು. ಮುಖವನ್ನು ತೋರಿಸಿದಾಗ ಹಗಲಿನ ಹಾಗೂ ಅದನ್ನು ಮರೆಸಿದಾಗ, ರಾತ್ರಿಯಂತೆಯೂ ಕಾಣುವಂತೆ ಮಾಡಿದನು. ಅವನ ಕಟಾಕ್ಷ ಕಾಲವು ಇವರುಗಳಿಗೆ ಹಗಲಾಗಿಯೂ, ಕಟಾಕ್ಷಿಸದೇ ಇದ್ದ ಹೊತ್ತು ರಾತ್ರಿಯಾಗಿಯೂ, ತೋರಿದಂತೆ ಎನ್ನಬಹುದು.

ಆ ಕೃಷ್ಣನು ಗೋಪಿಯರ ಮೇಲೆ ನೀರನ್ನು ಎರಚುವಾಗ, ಅವರು ಇವನ ಮೇಲೆ ನೀರನ್ನೆರಚುವುದು ಈ ಆಟವು ಬಹಳ ಕಾಲ ನಡೆಯಿತು. ಅವರುಗಳು ಅವನ ಮೇಲೆ ನೀರನ್ನೆರಚುವಾಗ ಇವನು ಕಣ್ಣುಮುಚ್ಚುವುದು, ತೆರೆಯುವುದು ಮಾಡುವುದನ್ನು ನೋಡಿದಾಗ, ತಾನೇ ಹಗಲು ರಾತ್ರಿಗಳ ನಿರ್ಮಾತೃವೆಂದು ತೋರಿಸುತ್ತಿದ್ದಾನೋ ಎಂಬಂತಿತ್ತು. ಚಂದ್ರ ಸೂರ್ಯರೇ ಅವನ ನೇತ್ರಗಳು.

ತಮಾರ್ದ್ರ ಭಾವಾ ನ್ನಿಬಿಡಾಂತರೀಯಂ ಲಂಬಾಲಕಂ ರಾಶಿಮಿವಾದ್ಭುತಾನಾಂ।
ಪಶ್ಚಾದುಪೇತಾ ಪರಿರಭ್ಯ ತಸ್ಥೌ ಕಾಚಿತ್ ಪ್ರಿಯಾ ಕಾಮವಧೂರಿವಾನ್ಯಾ ॥೧೦೯॥

ನೀರಿನಲ್ಲಿ ನೆನೆದಿದ್ದುದರಿಂದ, ದೇಹದಲ್ಲಿ ಅಂಟಿದ್ದ ಬಟ್ಟೆಯೊಡನೆ, ಕೂದಲುಗಳು ತೂಗಾಡುತ್ತಾ ಆಶ್ಚರ್ಯಗಳ ರಾಶಿಯಂತೆ ತೋರುವ ಅವನನ್ನು ನದಿ ದೇವಿಯರಂತೆ ಕಾಣುವ ಒಬ್ಬ ಪ್ರೇಮಿಯ ಹಿಂದೆ ಹೋಗಿ ನಿಂತಂತಿತ್ತು.

ನೀರಿನಲ್ಲಿ ನೆನೆದಾಗ, ಬಟ್ಟೆಗಳೆಲ್ಲಾ ಮೈಗೆ ಅಂಟಿಕೊಳ್ಳುತ್ತವೆ. ಹಾಗೆ ಬಟ್ಟೆಗಳು ಅಂಟಿಕೊಂಡ ಆ ಕೃಷ್ಣನನ್ನು ನೋಡಿದಾಗ, ಯಮುನಾ ದೇವಿಯು, ಅವನ ಹಿಂದೆ ಒಬ್ಬ ಪ್ರೇಮಿಯಂತೆ ಹೋಗಿ ನಿಂತಂತೆ ಭಾಸವಾಯಿತು. ನೀರು ಮೈಯಿಂದ ಸುರಿಯುತ್ತಿದ್ದುದರಿಂದ ಈ ಉಪಮಾನ ನೀಡಿದ್ದಾರೆ.

ಅಭಂಗುರ ಪ್ರೇಮ ಬಲೇನ ತಸ್ಯಾ ಬದ್ಧಂ ಪ್ರಿಯಂ ಬಾಹು ಲತಾದ್ವಯೇನ।
ಸಮಿಕ್ಷ್ಯ ಕಾಮಾರ್ಪಿತ ಪಾಶಮನ್ಯಾಃ ಸಂಪ್ಲಾವಯಾಮಾಸು ರಪೇತಶಂಕಾಃ ॥೧೧೦॥

ಅಳಿಸಲಾಗದ ಪ್ರೇಮದ ಬಲದಿಂದ ಎರಡು ಕೈಗಳಿಂದಲೂ ಗಾಢವಾಗಿ ಅವಳಿಂದ ಕಟ್ಟಲ್ಪಟ್ಟು ನಿಂತ ಅವನನ್ನು ಮನ್ಮಥನ ಪಾಶಾಯುಧದಿಂದ ಕಟ್ಟಲ್ಪಟ್ಟವನನ್ನಾಗಿ ಕಂಡು ಇತರ ಗೋಪಿಗಳು ಅವಳನ್ನು ತಡೆಯಲು ಸಾಧ್ಯವಿಲ್ಲದ್ದರಿಂದ ಜಯಘೋಷ ಮಾಡಿ ನೀರನ್ನು ಬಾಚಿ ಬಾಚಿ ಎರಚಿದರು.

ಒಬ್ಬ ಗೋಪಿಯು ಅವನನ್ನು ಪ್ರೇಮದಿಂದ ಆಲಿಂಗಿಸಿಕೊಂಡಾಗ, ಅವಳನ್ನು ತಡೆಯಲು ಸಾಧ್ಯವಿಲ್ಲದೆ, ಇತರ ಗೋಪಿಯರು, ತಮಗೆ ಇನ್ನೂ ಆ ಸೌಭಾಗ್ಯ ಸಿಗಲಿಲ್ಲ ವೆಂದು, ಅಸೂಯೆಯಿಂದ ಅವರಿಬ್ಬರ ಮೇಲೆ ನೀರನ್ನು ಬಾಚಿ ಬಾಚಿ ಎರಚಾಡಿದಳು.

ಯದಂಘ್ರಿ ಯೋಗಾ ಜ್ಜಗತಾಂ ತ್ರಯಾಣಾಂ ಮಂದಾಕಿನೀ ಮಾನ್ಯತಮಾ ಬಭೂವ।
ತಯಾಪಿ ಸಂಭಾವ್ಯತಮಾ ತದಾಽಸೀತ್ ಕೃಷ್ಣೇನ ಸಾತೇನ ಕೃತಾವಗಾಹಾ॥೧೧೧॥

ಯಾರ ಪಾದಾರವಿಂದಗಳಲ್ಲಿ ಸೇರುವುದರಿಂದ, ಗಂಗೆ ಎಂಬ ನದಿ ಮೂರು ಲೋಕ ಗಳನ್ನು ಪವಿತ್ರೀಗೊಳಿಸಿತೋ, ಅವನ ಪೂರ್ಣ ದೇಹವನ್ನು ತನ್ನಲ್ಲಿ ಅಡಗಿಸಿ ಆನಂದದಿಂದ ಕ್ರೀಡೆ ಆಡಿದುದರಿಂದ ಯಮುನಾ ನದಿಯು ಇನ್ನೂ ಹೆಚ್ಚಿನ ಪಾವಿತ್ರ್ಯತೆ ಪಡೆಯಿತು.

ಕಾಳಿಯ ಮರ್ದನದ ಪ್ರಕರಣದಲ್ಲಿಯೇ, ಯಮುನಾ ನದಿಯು ಗಂಗೆಗಿಂತ ಪವಿತ್ರಳು ಎಂದು ಹೇಳಲಾಯಿತು. ಈಗ ಮತ್ತೆ ಅವಳಲ್ಲಿ ಭಗವಂತನು ಆನಂದದಿಂದ ಯಥೇಚ್ಛ ವಾಗಿ ಜಲಕ್ರೀಡೆಯಾಡಿದುದರಿಂದ, ಯಮುನೆಯೇ ಗಂಗೆಗಿಂತ ಹೆಚ್ಚು ಮಹಿಮೆ ಪಡೆದಳು. ಗಂಗೆಗೆ ಭಗವಂತನ ಪಾದಸ್ಪರ್ಶ ಮಾತ್ರ. ಯಮುನೆಯು ಅವನ ಪೂರ್ಣ ದೇಹವನ್ನೇ ತನ್ನಲ್ಲಿ ಬಹಳ ಕಾಲ ಅಡಗಿಸಿಕೊಂಡಿದ್ದಳು. ಸರ್ವಾವಯವ ಸಂಪರ್ಕ ಹೊಂದಿದವಳು ಯಮುನೆ.

ಅಥೋಪಚಾರಾನ್ ಉಪಪಾದಯಂತಿ ದಿವ್ಯೇನ ದೇಹೇನ ದಿನೇಶ ಕನ್ಯಾ।
ಅನರ್ಘ ಪಾದಾರ್ಪಿತ ರತ್ನ ಪುಷ್ಪಾ ಗೋಪೀ ಸಖಂ ಗೋಪಕುಮಾರ ಮಾದ್ಯಂ॥೧೧೨॥

ಶ್ರೀಕೃಷ್ಣನು ತನ್ನಲ್ಲಿ ಗೋಪಿಯರೊಡನೆ ಸೇರಿ ನೀರಾಟವಾಡಿದ ನಂತರ ಯಮುನಾ ನದಿಯು ದೇವ ಶರೀರದೊಡನೆ ಬಂದು ಉಪಚಾರಗಳನ್ನು ನಡೆಸುವವಳಾಗಿ, ಗೋಪಿಯ ರೊಡನೆ ಕೂಡಿದ ಗೋಪರಾಜನ ದಿವ್ಯ ಚರಣಾರವಿಂದಗಳಲ್ಲಿ ರತ್ನಗಳನ್ನೂ, ಪುಷ್ಪಗಳನ್ನೂ ಅರ್ಪಣ ಮಾಡಿ ಅರ್ಚಿಸಿದಳು.

ಧನ್ಯತಾ ಭಾವವನ್ನು ಅನುಭವಿಸಿದ ಯಮುನೆಯು, ತನಗೆ ಅವನ ದೇಹಸ್ಪರ್ಶದ ಸೌಭಾಗ್ಯವನ್ನು ನೀಡಿದ ಸ್ವಾಮಿಯನ್ನು ಪೂಜಿಸಲು ಬಯಸಿ, ಗೋಪಿಯರೊಡನೆ ಕೂಡಿದ ಅವನ ದಿವ್ಯ ಚರಣಾರವಿಂದಗಳಿಗೆ ಯಥಾವತ್ತಾಗಿ ಅರ್ಚನೆ ಮಾಡಿದಳು.

ಸರಿದ್ಭಿರನ್ಯಾಭಿರಪಿ ಪ್ರಭಾವಾನ್ ಪ್ರಾಯೇಣ ಗೋಪಿ ತನುಮಾಶ್ರಿತಾಭಿಃ।
ತೋಷಾದುದನ್ವ ಸುತಯೋಪ ಭೋಗ್ಯ ಸ್ತೋಯೋಪಚಾರೇಣ ವಿಭುಃ ಸಿಷೇವೆ ॥೧೧೩॥

ಲಕ್ಷ್ಮೀದೇವಿಗೆ ಯಾವಾಗಲೂ ಭೋಗ್ಯನಾದ ಶ್ರೀಕೃಷ್ಣನು ಇತರ ನದಿಗಳಿಂದ ತಮ್ಮ ಮಹಿಮೆಯಿಂದ ಗೋಪಿಯರಾಗಿ ಮಾರ್ಪಟ್ಟು ಜಲಕ್ರೀಡೆ ಎಂಬುದರಿಂದ ಆನಂದದಿಂದ ಉಪಚರಿಸಲ್ಪಟ್ಟನು ಎಂಬಂತಿತ್ತು.

ಭಾರತದಲ್ಲಿರುವ ಎಲ್ಲಾ ನದಿಗಳೂ, ಶ್ರೀಕೃಷ್ಣನನ್ನು ಸೇವಿಸಲು ಆಸೆಪಟ್ಟವು. ಆದರೆ ಅದು ಸಾಧ್ಯವಾಗಲಿಲ್ಲವಾದ್ದರಿಂದ, ಆ ನದಿಗಳೆಲ್ಲವೂ ಗೋಪಿಯರಾಗಿ ಮಾರ್ಪಟ್ಟು ಯಮುನೆಯ ಜತೆ ಸೇರಿ, ಸರ್ವೇಶ್ವರನಾದ ಶ್ರೀಕೃಷ್ಣನನ್ನು ಈ ಜಲಕ್ರೀಡೆಯ ಆಟದಲ್ಲಿ ಸೇವಿಸಿ, ಅವನನ್ನು ಪೂಜಿಸಿದವು.

ತಮುತ್ತರಂತಂ ಸರಿತಃ ಪ್ರವಾಹಾ ದುತ್ತಾರಕಂ ಪಂಕಮಯಾತ್ ಪಯೋಧೇಃ।
ಮರುತ್‌ಪ್ರಯುಕ್ತಾ ವಸನಾಂಗರಾಗೈ ರಾಕಲ್ಪಯನ್ ಅಪ್ಸರಸ ಸ್ತದರ್ಹೈಃ ॥೧೧೪॥

ಸಂಸಾರವೆಂಬ ಕೆಸರಿನ ಸಮುದ್ರದಿಂದ ಜೀವರುಗಳನ್ನು ಉದ್ಧಾರ ಮಾಡುವ ಶ್ರೀಕೃಷ್ಣ ಸ್ವಾಮಿಯು ಯಮುನೆಯ ಪ್ರವಾಹದಿಂದ ದಡವನ್ನು ಹತ್ತಿದಾಗ, ಉತ್ತೇಜಿಸಲ್ಪಟ್ಟ ಅಪ್ಸರೆಯರು, ಬಂದು ಅವನಿಗೆ ಯೋಗ್ಯವಾದ ಬಟ್ಟೆ, ಆಭರಣ, ಹೂವುಗಳನ್ನು (ಕುಚ್ಚು) ತಂದು ಅಲಂಕಾರ ಮಾಡಿದರು.

ಯಮುನಾ ನದಿಯಲ್ಲಿ ಜಲಕ್ರೀಡೆ ಆಡಿ, ಆನಂದಿಸಿದ ನಂತರ, ಸಮಸ್ತ ಚೇತನರನ್ನೂ ಸಂಸಾರವೆಂಬ ಪಂಕದಿಂದ ಉದ್ಧರಿಸುವ ಶ್ರೀಕೃಷ್ಣ ಭಗವಾನನು ದಡದ ಮೇಲೆ ಹತ್ತಿ ಬಂದಾಗ, ದೇವತೆಗಳಿಂದ ಕಳಿಸಲ್ಪಟ್ಟ ಅಪ್ಸರ ಸ್ತ್ರೀಯರು, ಅವನಿಗೆ ಷೋಡಶೋಪಚಾರಗಳನ್ನು ಮಾಡಿ, ಅವನನ್ನು ದಿವ್ಯವಾಗಿ ಅಲಂಕರಿಸಿದರು.

ವ್ರಜಾಂಗನಾಶ್ಚ ತ್ರಿದಶಾಂಗ ನಾಭಿಃ ಪ್ರಸಾಧ್ಯಮಾನಾ ಬಹುಮಾನ ಪೂರ್ವಂ।
ರಮಾ ಸಹಾಯ ಪ್ರಣಯಾನುರೂಪಾ ಸಂಮಾನನಾಂ ಸಾಧುಜನೇಷ್ವವಿಂದನ್॥೧೧೫॥

ಗೋಪಸ್ತ್ರೀಯರು ದೇವತಾ ಸ್ತ್ರೀಯರಿಂದ ಬಹು ಚೆನ್ನಾಗಿ ಅಲಂಕರಿಸಲ್ಪಟ್ಟವರಾಗಿ, ಸಾಧು ಜನಗಳ ಸಮೀಪವೂ ಭಗವಂತನಲ್ಲಿ ಇಟ್ಟಿರುವ ಪ್ರೀತಿಯಂತೆ, ಪ್ರೀತಿಯನ್ನು ತೋರುವ ಸದ್ಬುದ್ಧಿಯನ್ನು ಹೊಂದಿದರು. ಆ ದೇವತೆಗಳು.

ಕೇವಲ ಶ್ರೀಕೃಷ್ಣನನ್ನು ಮಾತ್ರವಲ್ಲ, ಅವನೊಡನೆ ರಾಸಕ್ರೀಡೆ, ಜಲಕ್ರೀಡೆ ಆಡಿದ ಗೋಪಸ್ತ್ರೀಯರನ್ನೂ ದೇವತಾ ಸ್ತ್ರೀಯರು ಅಲಂಕರಿಸಿ ಸನ್ಮಾನಿಸಿದರು. ಭಗವಂತನ ಸಂಪರ್ಕ ದಿಂದ ಎಲ್ಲರೂ ದೈವತ್ವಕ್ಕೆ ಏರುತ್ತಾರೆ. ಋಷಿ ಮುನಿಗಳಿಗಿಂತ ಮೇಲಾಗಿ ಗೋಪ ಸ್ತ್ರೀಯರು ದೇವತೆಗಳಿಂದ ಪೂಜಿಸಲ್ಪಟ್ಟರು.

ವಿಹೃತ್ಯ ತಸ್ಮಿನ್ ವ್ರಜ ಸಂಮುಖೀನೆ ಚಕ್ರಂ ಗವಾಂ ಶೈಲವನಾನ್ನಿವೃತ್ತಂ।
ಉಪಾದ್ರವತ್ ಕಶ್ಚಿದರಿಷ್ಟನಾಮಾ ಕೈಲಾಸ ಪರ್ಯಾಯ ತನುಃ ಕಕುದ್ಮಾನ್॥೧೧೬॥

ಇಷ್ಟೊಂದು ವಿಹಾರ ಮಾಡಿ ಬಿಟ್ಟು ಶ್ರೀಕೃಷ್ಣನು ಗೋಪರ ಕೇರಿಯ ಜನಗಳೆಲ್ಲರೂ ಎದ್ದು ನಿಂತು ನೋಡುವಂತೆ (ಗೋಕುಲಕ್ಕೆ ಹಿಂದಿರುಗುವಾಗ) ಬೆಟ್ಟದ ಕಾಡಿನಿಂದ ಮತ್ತೆ ಹಿಂತಿರುಗಿ, ಅರಿಷ್ಟವನ್ನು ನಿವಾರಣೆ ಮಾಡುವವನು ಎಂಬ ನಾಮ ಧರಿಸಿದ, ಅಸುರನಾದ ಒಂದು ವೃಷಭವಾದುದು ಕೈಲಾಸ ಪರ್ವತದಂತೆ ದೇಹವನ್ನು ತೋರಿದನು.

ತನ್ನ ವಿಹಾರವನ್ನೆಲ್ಲಾ ಮುಗಿಸಿ ಶ್ರೀಕೃಷ್ಣನು ಗೋಕುಲಕ್ಕೆ ಹಿಂತಿರುಗಿ ಬರುವಾಗ, ಅರಿಷ್ಟಾಸುರ ಎಂಬ ಹೆಸರಿನ ಒಬ್ಬ ರಾಕ್ಷಸನು ಗೂಳಿಯ ರೂಪ ಧರಿಸಿ ತನ್ನ ದೊಡ್ಡ ದೇಹದಿಂದ ಎಲ್ಲರನ್ನೂ ಭಯಪಡಿಸುತ್ತಾ, ಗೋಕುಲಕ್ಕೆ ನುಗ್ಗಿದನು.

ಖುರಾಗ್ರ ವಜ್ರೇಣ ವಿದಾರಯನ್ ಕ್ಷ್ಮಾಂ ವಿಷಾಣ ನಿರ್ಭಿನ್ನ ವಿಮಾನ ಮೂಲಃ।
ದುರ್ವಾರ ವೇಗೋ ದದೃಶೇ ಸ ದೂರಾನ್ಮೃತ್ಯೋ ರುಪಕ್ರಾಂತ ಮಹೋ ಮಹೋಕ್ಷಃ॥೧೧೭॥

ತೀಕ್ಷ್ಣವಾದ ವಜ್ರಾಯುಧದಂತೆ ಇರುವ ಚೂಪಾದ ಮೊನೆಗಳುಳ್ಳ ಭೂಮಿಯನ್ನು ಛೇದಿಸಿಕೊಂಡು, ಕೊಂಬುಗಳಿಂದ ಆಕಾಶದಲ್ಲಿ ದೇವ ವಿಮಾನಗಳಲ್ಲಿ ಸಂಚರಿಸಿ ಮಹೋತ್ಸವ ವನ್ನು ನಡೆಸುವವನಾಗಿ ಆ ಅಸುರನು ಬಹಳ ದೂರದಿಂದಲೇ ಕಾಣಲ್ಪಟ್ಟನು.

ಆ ವೃಷಭವು ಭೂಮಿಯನ್ನು ತನ್ನ ದಪ್ಪ ಕೊಂಬುಗಳಿಂದ ಛೇದಿಸುತ್ತಾ ಬರುವುದನ್ನು ಬಹಳ ದೂರದಿಂದಲೇ ಸ್ವಾಮಿಯಾದ ಶ್ರೀಕೃಷ್ಣನು ಕಂಡನು.

ಶೃಂಗಾವರುಗ್ಣೈ ಶಕಟ್ಯೈಃ ಪ್ರಕೀರ್ಣಂ ವೃಷಾಂತರ್ರೈರಾಶು ವಿಮುಕ್ತಮಾರ್ಗಂ।
ವಜ್ರಂ ತದಾ ವಿಪ್ಲುತ ಗೋಪವರ್ಗಂ ತ್ಯಕ್ತ್ವಾ ಸ ಕೃಷ್ಣಾಭಿಮುಖಂ ಜಗಾಮ॥೧೧೮॥

ಗೊಲ್ಲರ ಕೇರಿಯ ಬಂಡಿಗಳನ್ನು ಕೊಂಬಿನಿಂದ ಎತ್ತಿ ಬಿಸಾಡಿ ಎಲ್ಲೆಲ್ಲೂ ಗದ್ದಲ ಉಂಟು ಮಾಡಿದ ಗೋಕುಲದ ಎತ್ತುಗಳು ದಾರಿ ಬಿಟ್ಟು ಮಧ್ಯದಲ್ಲಿ ಹೋದುದರಿಂದ ಅವುಗಳನ್ನು ತ್ಯಜಿಸಿ, ಶ್ರೀಕೃಷ್ಣನನ್ನು ಎದುರುಗೊಳ್ಳಲು, ಆ ವೃಷಭವು ಅವನಿಗೆ ಅಭಿಮುಖವಾಗಿ ಹೋಯಿತು.

ಗೋಕುಲದಲ್ಲಿ ಆ ಮಹಾ ವೃಷಭವನ್ನು ಕಂಡು ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಓಡಿದರು. ಆ ರಾಕ್ಷಸನು, ಅವರನ್ನೆಲ್ಲಾ ದೂರತಳ್ಳಿ ಶ್ರೀಕೃಷ್ಣನನ್ನು ಕೊಲ್ಲಬೇಕೆಂಬ ಉದ್ದೇಶ ಹೊಂದಿ ಬಂದಿದ್ದರಿಂದ, ಅವನಿದ್ದ ಕಡೆಗೆ ಓಡೋಡಿ ಬಂದನು.

ತಮಾಪತಂತಂ ಪ್ರತಿಸಂಜಿಹಾನೋ ನಿಹ್ರಾದ ವಿತ್ರಾಸಿತ ದೀನಧೇನುಂ।
ವಿಷಾಣ ಯುಗ್ಮ ಗ್ರಹಣೇನ ಶೌರಿಶ್ಚಕ್ರೇ ವಿನಿಷ್ಪೀಡಿತ ಪೀನಕಂಠಂ ॥೧೧೯॥

ತನ್ನ ಬಾಯಿಂದ ಬಂದ ಗಾನದಿಂದ ಕುಣಿದಾಡುವ ಹಸುಕರುಗಳೆಲ್ಲವನ್ನೂ ತೊಂದರೆ ಮಾಡುವ ಆ ಎತ್ತಿನ ಎರಡು ಕೊಂಬುಗಳನ್ನು ಹಿಡಿದು ಶ್ರೀಕೃಷ್ಣನು ಅವುಗಳ ಕೊಬ್ಬನ್ನು ಅಡಗಿಸಿದನು.

ಆಗ ಆ ವೃಷಭದ ಎರಡು ಕೊಂಬುಗಳನ್ನು ಹಿಡಿದು, ಅದನ್ನು ಗಿರಗಿರನೆ ಸುತ್ತಿ ದೂರಕ್ಕೆ ಎಸೆದು ಅದರ ಕೊಬ್ಬನ್ನು ಅಡಗಿಸಿದನು ಸ್ವಾಮಿ.

ಅಪಹತ್ಯ ದುರ್ಜಯ ಮರಿಷ್ಟದಾನವಂ ಜಗತಾಮರಿಷ್ಟಮಿವ ಜಾತವಿಗ್ರಹಂ।
ವ್ರಜಸದ್ಭಿರದ್ಭುತ ವಿಹಾರ ತೋಷಿತೈಃ ಸುರಸತ್ತಮೈರಪಿ ಸಮಂ ಸ ತುಷ್ಟುವೆ॥೧೨೦॥

ಲೋಕಗಳಲ್ಲಿ ಜಯಿಸಲು ಅಶಕ್ತನಾಗಿದ್ದ ಅರಿಷ್ಟನೆಂಬ ಹೆಸರನ್ನು ಪಡೆದಿದ್ದ ಆ ದಾನವನನ್ನು ಶ್ರೀಕೃಷ್ಣನು ಲೀಲಾಜಾಲವಾಗಿ ವಧಿಸಿ, ಗೋಪಾಲಕರೆಲ್ಲರಿಗೂ, ಸಮಸ್ತ ದೇವತೆಗಳೆಲ್ಲರಿಗೂ ಆನಂದವನ್ನುಂಟು ಮಾಡಿ ದೇವಶ್ರೇಷ್ಠನೆಂಬ ಹೆಸರು ಪಡೆದನು.

ಅನ್ಯೈರಪ್ಯಸುರ ಮಲಿಂಬುಚೈ ರನೇಕೈರಾತಂಕಾನ್ ಸ್ಥಿರ ಚರ ಸೂತಿಭಿಃ ಪ್ರಸೂತಾನ್।
ಗೋಪಾನಾಂ ಪ್ರತಿವಿದಧೇ ಗವಾಂ ಚ ಕಾಲೇ
ರಾಮೇಣ ಸ್ತುತ ಚರಿತೋ ರಥಾಂಗಪಾಣಿಃ ॥೧೨೧॥

ಮತ್ತೂ ಅನೇಕ ಜಂಗಮಗಳೂ, ಸ್ಥಾವರಗಳೂ ಆದ ಜಂತುಗಳಾಗಿ ಮಾರ್ಪಟ್ಟ ಕಳ್ಳ ಅಸುರರುಗಳಿಂದ ಗೋವುಗಳಿಗೂ, ಗೋಪಾಲಕರಿಗೂ ಆಯಾಯ ಕಾಲಗಳಲ್ಲಿ ಏರ್ಪಟ್ಟ ಅನೇಕ ಕೇಡುಗಳನ್ನೆಲ್ಲಾ ಬಲರಾಮನೊಡಗೂಡಿ ಸೇರಿದ ಚಕ್ರಧರನು, (ಶ್ರೀಕೃಷ್ಣನು) ಇತರರು ಹೊಗಳುವ ಹಾಗೆ ಅದ್ಭುತ ಕಾರ್ಯಗಳನ್ನು ಮಾಡುವವನಾಗಿ ಎಲ್ಲರನ್ನೂ ಅನುಗ್ರಹಿಸಿದನು.

ಕೇವಲ ವೃಷಭಾಸುರನೇ ಅಲ್ಲ, ಗೋಕುಲಕ್ಕೆ ತೊಂದರೆ ಮಾಡುತ್ತಿದ್ದ ಕಂಸನಿಂದ ಕಳುಹಿಸಲ್ಪಟ್ಟ ಅಸುರರು ಯಾರಿಗೂ ತಿಳಿಯಬಾರದೆಂದು, ಆ ಸ್ಥಾವರ ಜಂಗಮ ಜಂತುಗಳಾಗಿ ಅಲ್ಲಲ್ಲಿ ಅಡಗಿದ್ದರು. ಅವರನ್ನೆಲ್ಲಾ ಸ್ವಾಮಿಯು ನಿರ್ನಾಮ ಮಾಡಿದನು. ಇತರ ಅನೇಕ ರಾಕ್ಷಸರೂ, ದುಷ್ಟರುಗಳನ್ನೆಲ್ಲಾ (ಕಂಸನಿಂದ ಕಳುಹಿಸಲ್ಪಟ್ಟ) ಆ ರಾಕ್ಷಸರು ಗೋಕುಲಕ್ಕೆ ಮಾರುವೇಷದಲ್ಲಿ ಬಂದಾಗಲೆಲ್ಲಾ ಆಶ್ರಿತ ರಕ್ಷಕನಾದ ಸ್ವಾಮಿಯು ಬಲರಾಮನೊಡಗೂಡಿ ಸಂಹರಿಸಿ, ತನ್ನ ಅದ್ಭುತ ಕಾರ್ಯಗಳಿಂದ ಗೋಪಾಲಕರೆಲ್ಲರಿಗೂ ಸಂತೋಷ ಪಡಿಸುತ್ತಾ ಕಾಲವನ್ನು ಕಳೆಯುತ್ತಿದ್ದನು.

'ರಾಸಕ್ರೀಡೆ'ಯೆಂಬ ಅಷ್ಟಮ ಸರ್ಗವು ಮುಗಿದುದು



ನವಮಃ ಸರ್ಗಃ - ೯

ಮಥುರಾ ಪ್ರತ್ಯಾಗಮನ



122 ಶ್ಲೋಕಗಳಿರುವ ಈ ಸರ್ಗದಲ್ಲಿ ಕಂಸನು ಕೃಷ್ಣನನ್ನು ಸಂಹರಿಸಲು ನಿರ್ಧರಿಸಿ, ಅದಕ್ಕಾಗಿ ಅವನನ್ನು ಮಥುರೆಗೆ ಕರೆತರಲು ಅಕ್ರೂರನನ್ನು ಬೃಂದಾವನಕ್ಕೆ ಕಳುಹಿಸುತ್ತಾನೆ. ಹಾಗೆಯೇ 'ಕೇಶಿ' ಎಂಬ ಅಸುರನನ್ನೂ ಶ್ರೀಕೃಷ್ಣನನ್ನು ಸಂಹರಿಸಲು ನಿಯಮಿಸುತ್ತಾನೆ.

ಕೇಶಿಯು ಕುದುರೆಯ ರೂಪದಲ್ಲಿ ಬೃಂದಾವನಕ್ಕೆ ಬರುತ್ತಾನೆ. ಈ ಕುದುರೆಯ ವರ್ಣನೆಯನ್ನು 13 ಶ್ಲೋಕಗಳಲ್ಲಿ ಮಾಡಿದ್ದಾರೆ. ನಂತರ ಕೇಶಿಯ ಸಂಹಾರದ ನಂತರ ಅಕ್ರೂರನು ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಬೃಂದಾವನಕ್ಕೆ ಬರುವುದು. ಅಕ್ರೂರ ಕೃತ ಶ್ರೀಕೃಷ್ಣ ಸ್ತುತಿಯಲ್ಲಿ ವೇದಾಂತಾರ್ಥಗಳಿಂದ ತುಂಬಿರುವ ಅನೇಕ ದಿವ್ಯ ಶ್ಲೋಕಗಳಿವೆ. ಅಕ್ರೂರನು ಬೃಂದಾವನಕ್ಕೆ ಬಂದು ನಂದಾದಿಗಳ ಅಪ್ಪಣೆ ಪಡೆದು, ಶ್ರೀಕೃಷ್ಣ-ಬಲರಾಮರನ್ನು ರಥದಲ್ಲಿ ಕರೆದೊಯ್ಯುವುದು. ಮುಂದಿನ ಅನೇಕ ಸುಂದರ ಶ್ಲೋಕಗಳಲ್ಲಿ ಗೋಪಿಕಾ ಸ್ತ್ರೀಯರ ವಿರಹ ವೇದನೆ ಹಾಗೂ ಕ್ರೋಧ ಪ್ರಕಟಣೆ. ಯಮುನೆಯಲ್ಲಿ ಅಕ್ರೂರನಿಗೆ ಭಗವಂತನ ಪರತ್ವ ರೂಪ ದರ್ಶನ. ಮತ್ತೆ ಅಕ್ರೂರನ ಸ್ತೋತ್ರ ಇತ್ಯಾದಿ ಅದ್ಭುತ ಪ್ರಸಂಗಗಳನ್ನೊಳಗೊಂಡಿದೆ. ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 7	ಕಂಸನ ಭಯ, ಕ್ರೋಧ
8-12	ಕಂಸನು ಅಕ್ರೂರನ ಬಳಿ ಶ್ರೀಕೃಷ್ಣನನ್ನು ಮಥುರೆಗೆ ಕರೆತರಲು ಪ್ರಾರ್ಥನೆ.
13-30	ಕೇಶಿ ಎಂಬ ಕುದುರೆಯ ವರ್ಣನೆ ಮತ್ತು ಅದರ ಸಂಹಾರ.
31-59	ಅಕ್ರೂರನ ಆನಂದ, ವೃಂದಾವನಕ್ಕೆ ಪ್ರಯಾಣ, ದಾರಿಯುದ್ದಕ್ಕೂ ಕೃಷ್ಣನ ಧ್ಯಾನ. ಶ್ರೀಕೃಷ್ಣನನ್ನು ಕಂಡು ಅಕ್ರೂರನ ಸಂತೋಷ.
60-73	ಅಕ್ರೂರ ಕೃತ ಶ್ರೀಕೃಷ್ಣ ಸ್ತುತಿ.
74-75	ಅಕ್ರೂರನ ಜೊತೆ ರಾಮ-ಕೃಷ್ಣರು ಮಥುರೆಗೆ ಹೊರಟಿದ್ದು.
76-113	ಗೋಪಿಕೆಯರ ವಿರಹ ವೇದನೆ ಕೋಪ, ದುಃಖ.
114-117	ರಥವು ಯಮುನಾ ತೀರಕ್ಕೆ ಬಂದುದು.
118-122	ನದಿಯ ಒಳಗೆ ಅಕ್ರೂರನಿಗೆ ಪರ ಸ್ವರೂಪ ದರ್ಶನ. ಮಥುರೆಗೆ ಆಗಮನ.

ನವಮಃ ಸರ್ಗಃ - ೯

ಮಥುರಾ ಪ್ರತ್ಯಾಗಮನ

ಅಥ ಭೋಜಪತಿರ್ಜಗತ್ಪತೆ ರವತಾರಂ ಭುವಿ ನಾರದಾನ್ ಮುನೇಃ।
ಶ್ರುತವಾನ್ ಅತಿ ದೇವ ದಾನವಂ ವ್ಯಥಯಾ ಪೀತ ವಿಷೋಪಮೋ ಅಭವತ್ ॥೧॥

ದೇವತೆಗಳಿಗೂ ಅಸುರರುಗಳಿಗೂ ಎಲ್ಲಾ ವಿಧದಲ್ಲೂ ಮೇಲಾದವನಾದ ಭಗವಂತನ ಅವತಾರವನ್ನು ನಾರದ ಮಹರ್ಷಿಗಳಿಂದ ಕೇಳಿ ತಿಳಿದ ಕಂಸನು ಅರಿಷ್ಟಾಸುರ ವಧೆ ಮುಂತಾದ ಸಮಾಚಾರಗಳಿಗೆ ವಿಷ ಸೇವಿಸಿದವನಂತೆ ವ್ಯಸನಕ್ಕೀಡಾದನು.

ಕೃಷ್ಣನು ಬಲರಾಮನೊಡಗೂಡಿ, ಗೋಕುಲದಲ್ಲಿ ಪೂತನೆಯ ಸಾವಿನಿಂದ ಪ್ರಾರಂಭಿಸಿ, ಅರಿಷ್ಟಾಸುರ ವಧೆಯವರೆಗೆ ನಡೆಸಿದ ಮಹತ್ಕಾರ್ಯಗಳನ್ನು ನಾರದ ಮಹರ್ಷಿಗಳಿಂದ ಕೇಳಿ ತಿಳಿದ ಕಂಸನು ಬಹುವಾಗಿ ಚಿಂತೆಗೀಡಾದನು. ತನ್ನಲ್ಲಿದ್ದ ಅನೇಕ ಶಕ್ತಿಶಾಲಿ ಅಸುರರನ್ನೆಲ್ಲಾ ಲೀಲಾಜಾಲವಾಗಿ ಸಂಹರಿಸಿದ ಪುರುಷೋತ್ತಮನಾದ ಶ್ರೀಕೃಷ್ಣನ ಬಗ್ಗೆ ಭಯವು ಪ್ರಾಪ್ತವಾಗಿ ಅವನನ್ನು ನಿಗ್ರಹಿಸಲು ಮುಂದೆ ಏನು ಮಾಡಬೇಕೆಂದು ಚಿಂತಿಸತೊಡಗಿದನು.

ನಿಹತಾ ಪೃಥುಕೇನ ಪೂತನಾ ಶಕಟಂ ತತ್ ಪರಿವರ್ತಿತಂ ಮಹತ್ ।
ಕಕುಭ ದ್ವಿತಯಂ ನಿಪಾತಿತಂ ಪ್ರಹಿತಃ ಕ್ವಾಪಿ ನಿಪೀಡ್ಯ ಕಾಲಿಯಃ ॥೨॥

ಕಂಸನು ಈ ಬಗ್ಗೆ ವ್ಯಸನಪಡಲು ಕಾರಣವೇನೆಂದರೆ ಈ ಹಿಂದೆ ಶ್ರೀಕೃಷ್ಣನು ಮಗುವಾಗಿದ್ದಾಗಲೇ ಪೂತನೆ ವಧಿಸಲ್ಪಟ್ಟಿದ್ದಳು. ಆ ದೊಡ್ಡ ಶಕಟವು ಕಾಲಿನ ಒದೆತದಿಂದ ಮುರಿಯಲ್ಪಟ್ಟಿತು. ನ್ಯಗ್ರೋಧ ಮರಗಳು ಎರಡಾಗಿ ಮುರಿಯಲ್ಪಟ್ಟವು. ಕಾಳಿಯ ಎಂಬ ನಾಗವು ಸಹ ಅವನಿಂದ ನಿಗ್ರಹಿಸಲ್ಪಟ್ಟು ಪಾಡು ಪಟ್ಟಿತು.

ಶ್ರೀಕೃಷ್ಣನ ಬಾಲಲೀಲೆಗಳು ಒಂದೊಂದಾಗಿ ಕಂಸನ ಮನಃಪಟಲದ ಮೇಲೆ ಸುಳಿಯತೊಡಗಿ, ನಿಜವಾಗಿ ಶ್ರೀಕೃಷ್ಣನು ಮನುಷ್ಯನೇ ಅಥವಾ ದೈವಾಂಶ ಸಂಭೂತನೇ ಎಂಬ ಸಂಶಯ ಉಂಟಾಗಿ, ಮನಸ್ಸಿಗೆ ಗಾಭರಿ ಉಂಟಾಯಿತು.

ಸ ಚ ಗೋಮುಖ ವರ್ಧನೋ ದಧೇ ಗಮಿತಃ ಕ್ಷೋದಮರಿಷ್ಟಪರ್ವತಃ।
ಪ್ರಥಿತಶ್ಚಬಲಃ ಪ್ರಲಂಭ ಜಿತ್ ನಿಧನಂ ಧೇನುಕ ದಾನವೋಗತಃ॥ ॥೩॥

ಅಂತಹ ಗೋವರ್ಧನ ಪರ್ವತವು ಕೃಷ್ಣನ ಕೈಯ್ಯಿಂದ ಎತ್ತಲ್ಪಟ್ಟಿತು. ಅರಿಷ್ಟಾಸುರನೆಂಬ ಪರ್ವತವೂ ಪುಡಿ ಪುಡಿ ಮಾಡಲ್ಪಟ್ಟಿತು. ಬಲರಾಮನಿಗೆ ಪ್ರಲಂಭಾಸುರನನ್ನು ಕೊಂದವನೆಂಬ ಹೆಸರು ಬಂದಿತು. ಧೇನುಕನೆಂಬ ಅಸುರನೂ ಸಹ ಬಲರಾಮನಿಂದ ವಧಿಸಲ್ಪಟ್ಟನು.

ಹೀಗೆಯೇ ಶ್ರೀಕೃಷ್ಣ- ಬಲರಾಮರಿಂದ ತನ್ನ ಅನುಚರರಾದ, ರಾಕ್ಷಸರೆಲ್ಲರೂ ಹತರಾಗಿ, ಯಾರೂ ಚಿಂತಿಸದ ಹಾಗೆ ಗೋವರ್ಧನ ಪರ್ವತವನ್ನು ಮೇಲೆತ್ತಿ ಏಳು ದಿನಗಳು ಹಿಡಿದಿದ್ದುದು ಅವನು ನಿಜವಾಗಿಯೂ ವಿಷ್ಣುವಿನ ಅವತಾರವೋ ಏನೋ ಎಂಬ ಶಂಕೆ ಪ್ರಾಪ್ತವಾಯಿತು ಕಂಸನಿಗೆ.

ದವ ಹವ್ಯ ವಹಶ್ಚ ಜಗ್ರಸೆ ವಿಷದೃತ್ ವಿಂಧ್ಯ ಸಮೋ ವಿದಾರಿತಃ।
ಇತಿ ನಾಮ ವಿಜೃಂಭಣೇ ರಿಪೊ ರಲಮೇಕೈಕಮಲಂಘ್ಯತಾಸ್ಥಿತೆ ॥೪॥

ಕಾಡುಗಿಚ್ಚನ್ನು ತನ್ನ ಬಾಯಿಯಲ್ಲಿ ಅಡಗಿಸಿಕೊಂಡಿದ್ದನು. ವಿಂಧ್ಯಮಲೆಯಂತಿದ್ದ ಅಘಾಸುರನು ಅಸುರನೂ ಸೀಳಲ್ಪಟ್ಟನು. ಶತ್ರುವಿನ ಈ ರೀತಿಯ ಕಾರ್ಯಗಳು ಒಂದೊಂದೂ ನಮಗೆ ಅತಿಕ್ರಮಿಸಲು ಸಾಧ್ಯವಾಗದಂತಿದೆ.

ಶ್ರೀಕೃಷ್ಣನು ನನಗೆ ಅಜೇಯನೆಂದೇ ಅನ್ನಿಸುತ್ತಿದೆ. ಎಲ್ಲಿಯಾದರೂ ಒಬ್ಬ ಬಾಲಕನು ಕಾಡುಗಿಚ್ಚನ್ನು ನುಂಗಲು ಸಾಧ್ಯವೇ ? ಅತಿ ಮಾನುಷ ಕಾರ್ಯಗಳನ್ನು ಮಾಡುತ್ತಿರುವ ಶ್ರೀಕೃಷ್ಣನು ನಿಜವಾಗಿಯೂ ನನಗೆ ಮೃತ್ಯುವೇ ಆಗುತ್ತಾನೆಂದು ತೋರುತ್ತದೆ.

ಬಹುಭಿಃ ಕಿಮಿಹ ಪ್ರತರ್ಕಿತೈರ್ಬಲಿನಃ ಸ್ರೋತಸಿ ಧಾವತೋ ವಿಧೇಃ।
ಯದ ತೀತ ಮತೀವ ಮೇವ ತತ್ ಕರಣೀಯಂ ಪುನರಾಯತಿ ಕ್ಷಮಂ॥ ॥೫॥

ಅನೇಕ ವಿಧವಾದ ವಿಚಾರಗಳು ಚಿಂತಿಸಿದರೂ ಇಲ್ಲಿ ಯಾವುದೂ ಪ್ರಯೋಜನವಿಲ್ಲ. ಪ್ರಬಲವಾಗಿ ತೋರುತ್ತಿರುವ ವಿಧಿಯ ಪ್ರವಾಹದಲ್ಲಿ ಹೋದದ್ದು ಹೋದಂತೆಯೇ ? ಇನ್ನು ಮುಂದೆ ಭವಿಷ್ಯತ್ಕಾಲವನ್ನು ಸರಿಯಾಗಿ ಮಾಡಬೇಕು.

'ಗತಂತು ಗತ ಮೇವಹಿ' ಎಂಬಂತೆ ಕಳೆದುಹೋದುದನ್ನು ಚಿಂತಿಸಿ ಫಲವಿಲ್ಲ. ವಿಧಿಯ ಆಟದಲ್ಲಿ ನಾವೆಲ್ಲಾ ಕೊಚ್ಚಿಹೋಗುತ್ತಿದ್ದೇವೆ. ಇನ್ನು ಮುಂದೆ ಸರಿಯಾದ ಕ್ರಮಗಳನ್ನು ತೆಗೆದುಕೊಂಡು ಶ್ರೀಕೃಷ್ಣನನ್ನು ನಿಗ್ರಹಿಸದಿದ್ದಲ್ಲಿ ನಮಗೆ ಉಳಿಗಾಲವಿಲ್ಲ.

ಇತಿ ವಿಪ್ರತಿ ಸಾರ ವಿಹ್ವಲಃ ಸ್ವಯಮುತ್ಥಾಪಿತ ಮೃತ್ಯುಚೋದಿತಃ।
ಪ್ರತಿಹಂತುಮಿಯೇಷ ಚಕ್ರಿಣಂ ಶಲಭೋ ದೀಪ್ತಮಿವಾಶುಶುಕ್ಷಣಂ ॥೬॥

ಈ ರೀತಿ ಇದುವರೆಗೂ ತಾನು ಮಾಡಿದ ದುಷ್ಕೃತ್ಯದಿಂದ ಏರ್ಪಟ್ಟ ಪರಿಭವಗಳೆಲ್ಲವೂ ತನ್ನ ಕರ್ಮಫಲವೆಂದು ಅರಿತು (ತನಗೆ ಮೃತ್ಯು ಕಾಲವು ಸಮೀಪಿಸಿತೆಂದು ಭಾವಿಸಿ)

ಉರಿಯುವ ಬೆಂಕಿಯನ್ನು ಎದುರಿಸುವವನ ರೀತಿ, ಶತ್ರುವಿನ ಸಂಹರಿಸುವ ವಿಷಯದಲ್ಲಿ ಆಸಕ್ತಿ ವಹಿಸಿದನು.

ನನಗೆ ಕಾಲ ಸರಿಯಾಗಿಲ್ಲ. ನಾನು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಯಿತು. ಹಾಗೆಂದು ಸುಮ್ಮನಿರಲು ಸಾಧ್ಯವಿಲ್ಲ. ಶತ್ರುವು ಬಲಿಷ್ಠನಾಗುತ್ತಿದ್ದಾನೆ. ಅವನನ್ನು ಈಗಲೇ ಅಡಗಿಸಬೇಕು. ಅದಕ್ಕಾಗಿ ಯೋಜನೆಗಳನ್ನು ಸಿದ್ಧಪಡಿಸಬೇಕು ಎಂದು ಕಂಸನು ವಿಧವಿಧ ವಾಗಿ ಯೋಚಿಸಲು ಉಪಕ್ರಮಿಸಿದನು.

ದಿವಸಾಂತ ದಿವಾಕರೋಪಮಃ ಶ್ವಸಿತಾಂದೋಲಿತ ಜೀವಿತ ಸ್ಥಿತಿಃ।
ಭಯ ವಿಸ್ಮಯ ರೋಷ ಕರ್ಬುರಃ ಸಶಿರಃ ಕಂಪ ಮವರ್ತಯತ್ ಕ್ಷಣಂ॥ ॥೭॥

ಅಸ್ತಮಾನನಾಗುವ ಸೂರ್ಯನಂತೆ ತೇಜೋಹೀನನಾಗಿ, ಉಸಿರು ಸಿಕ್ಕಿಹಾಕಿಕೊಂಡವ ನಂತೆ ಆ ಕಂಸನು ಭಯ, ವಿಸ್ಮಯ, ರೋಷ - ಇವುಗಳಿಂದ ಮನಸ್ಸು ಕಲಕಿದವನಾಗಿ ತಲೆಯನ್ನು ಕೊಡವುತ್ತಾ ಒಂದು ನಿರ್ಧಾರಕ್ಕೆ ಬಂದನು.

ಆ ಕಂಸನ ಆಗಿನ ಮನಸ್ಥಿತಿಯನ್ನು ಹೇಳತೀರದು. ಅಸ್ತಮಾನವಾಗುವ ಸೂರ್ಯನಂತೆ ಕಳಾಹೀನನಾಗಿ, ತನಗೆ ಮೃತ್ಯುಕಾಲ ಸನ್ನಿಹಿತವಾದವನಂತೆ ಭಯ ಭ್ರಾಂತಿಗಳಿಂದ ಕೂಡಿ, ನಡುಗಿದ ಶರೀರವುಳ್ಳವನಾಗಿ, ಶ್ರೀಕೃಷ್ಣನನ್ನು ಮಧುರೆಗೆ ಕರೆತರಬೇಕೆಂದು ಯೋಚಿಸಿದನು.

ಸ ಚ ದಾನಪತಿಂ ಸಮಾದಿಶತ್ ಭವತೋ ಜೀವತು ಭದ್ರ ಸೌಹೃದಂ।
ಅಜಿತೇನ ಜಿಘಾಂಸಿ ತಸ್ಯ ಮೆ ಭಜ ಸಾಹಾಯಕ ಮಾತ್ಮರಕ್ಷಣೆ॥ ॥೮॥

ಅನಂತರ ಅವನು ಅಕ್ರೂರನೆಂಬುವನನ್ನು ಕರೆಸಿ, ಆಜ್ಞೆ ಮಾಡಿದನು. ಸತ್ಪುರುಷರೇ ನಿಮಗೆ ಮಂಗಳವಾಗಲಿ. ಯಾರಿಂದಲೂ ಜಯಿಸಲಾಗದವನೆಂಬ ಕಾರಣದಿಂದ ಅಜಿತನೆಂಬ ಹೆಸರು ಪಡೆದ ಕೃಷ್ಣನನ್ನು ಅಡಗಿಸುವ ಕಾರ್ಯದಲ್ಲಿ ನನಗೆ ಸಹಾಯ ಮಾಡಿ, ನನ್ನನ್ನು ರಕ್ಷಿಸಬೇಕು.

ಶ್ರೀಕೃಷ್ಣನನ್ನು ಸಾಮೋಪಾಯದಿಂದಲೇ ಮಧುರೆಗೆ ಕರೆತರಬೇಕು. ಅದಕ್ಕೆ ಸಾತ್ವಿಕ ನಾದ ಅಕ್ರೂರನೇ ಸರಿಯಾದ ವ್ಯಕ್ತಿ. ಆದ್ದರಿಂದ ಅವನಿಗೆ ಕರೆ ಕಳುಹಿಸಿದನು. ಅವನು ಬಂದ ನಂತರ ಅವನನ್ನು ಸತ್ಕರಿಸಿ, ಅವನಿಗೆ ಹೇಳುತ್ತಾನೆ "ಸತ್ಪುರುಷರಾದ ಅಕ್ರೂರರೇ ! ಕೃಷ್ಣನು ಅಜೇಯನಾಗಿದ್ದಾನೆ. ಅವನಿಂದ ನನ್ನನ್ನು ನೀವು ರಕ್ಷಿಸಬೇಕು. ನೀವು ನನ್ನಲ್ಲಿ ರಾಜಭಕ್ತಿ ಇಟ್ಟಿದ್ದರೆ ನನಗೆ ಈ ವಿಷಯದಲ್ಲಿ ಸಹಕರಿಸಿ.

ಅತಿ ಮಾನುಷ ಚೇಷ್ಟಿತಃ ಸ್ವಯಂ ಮಧುಜಿನ್ಮಾನುಷ ಭೂಮಿಕಾಂ ವಹನ್।
ಅಸುರಾನ್ ಅಭಿಹಂತು ಮೀಹತೆ ದಮನೀಯೋಽಯಮರೂಢ ಯೌವನಃ ॥೯॥

ಮಧು ಎಂಬ ಅಸುರನನ್ನು ಕೊಂದವನು (ಯಾವಾಗಲೂ ಅಸುರರೊಡನೆ ಹಗೆಯನ್ನು ಬೆಳೆಸುವವನೂ) ತಾನೇ ಶ್ರೇಷ್ಠನೆಂದು ಭಾವಿಸಿ, ಅಮಾನುಷ ಕೃತ್ಯಗಳನ್ನು ಮಾಡುವವನೂ, ಆದ ಕೃಷ್ಣನನ್ನು ಅವನು ದೊಡ್ಡವನಾಗುವುದಕ್ಕೆ ಮುಂಚೆಯೇ ನಿಗ್ರಹಿಸಬೇಕು.

ಬಾಲ್ಯದಲ್ಲಿಯೇ ಕೃಷ್ಣನು ಯಾರೂ ಊಹಿಸಲಾಗದ ಕಾರ್ಯಗಳನ್ನು ನಡೆಸಿದ್ದಾನೆ. ಇನ್ನು ಪ್ರೌಢಾವಸ್ಥೆಗೆ ಬಂದರೆ ಅವನನ್ನು ಹಿಡಿಯುವುದೇ ದುಸ್ತರವಾದೀತು. ಆದ್ದರಿಂದ ಈಗಲೇ ಅವನನ್ನು ನಿರ್ವೀರ್ಯನನ್ನಾಗಿ ಮಾಡಬೇಕು. ನನಗೆ ನಿಮ್ಮ ಸಹಕಾರ ಅಗತ್ಯವಾಗಿದೆ.

ಅವಿಚಾರಿತ ಮಾಶು ಗಮ್ಯತಾ ಮಧಿ ನಂದಾ ವಸಥಂ ವಿಹಾರಿಣೌ।
ಬಲದೇವ ಜನಾರ್ದನೌ ಬಲಾದುಪನೇಯೌ ಭವತಾ ಛಲೇನ ವಾ॥ ॥೧೦॥

ಆಲೋಚನೆಗೆ ಅವಕಾಶ ಇಟ್ಟುಕೊಳ್ಳದೆ, ತಕ್ಷಣವೇ ಹೊರಟು ನಂದ ಗೋಪನ ಮನೆಯಲ್ಲಿ ಆಟವಾಡಿಕೊಂಡಿರುವ ಬಲರಾಮ - ಕೃಷ್ಣರೆಂಬ ಇಬ್ಬರನ್ನೂ ನಿಮ್ಮ ಬಲ ಪ್ರಯೋಗಿಸಿಯೋ ಅಥವಾ ಇನ್ನಾವುದಾದರೂ ಮಾರ್ಗದಲ್ಲಿ ಕರೆದುಕೊಂಡು ಬಂದು ನನ್ನ ಹತ್ತಿರ ಸೇರಿಸಬೇಕು.

ಅದಕ್ಕಾಗಿ ನೀವು ಮಾಡಬೇಕಾದುದಿಷ್ಟೆ. ಈ ಕ್ಷಣವೇ ನಂದಗೋಕುಲಕ್ಕೆ ಹೋಗಿ, ಅವರನ್ನು ಕಂಡು, ಅವರ ಅನುಮತಿ ಪಡೆದೋ ಅಥವಾ ಬಲಾತ್ಕಾರವಾಗಿಯೋ ನನ್ನ ಮೇಲೆ ದ್ವೇಷ ಸಾಧಿಸುತ್ತಿರುವ ಆ ಬಲರಾಮ - ಕೃಷ್ಣರೆಂಬ ಸಹೋದರರನ್ನು ಕರೆದುಕೊಂಡು ಮಥುರೆಗೆ ಬಂದು ನನ್ನ ಮುಂದೆ ನಿಲ್ಲಿಸಬೇಕು. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ

ಸಹ ನಂದ ಮುಖ್ಯೈರಶಂಕಿತಂ ಕರಧಾನ ವ್ಯಪದೇಶ ವಂಚಿತೈಃ।
ಅಪರೇದ್ಯುರಿ ಹೋಪ ಸಪ್ಯತಾಮಸುರ ಧ್ವಂಸ ಕೃದಗ್ರಜಾನ್ವಿತಃ ॥೧೧॥

ಕಪ್ಪವನ್ನು ಕಟ್ಟಿದ ಒಡನೆಯೇ ಬರಬೇಕೆಂದು ವ್ಯಾಜವಾಗಿಟ್ಟು ಯಾವುದೇ ಸಂದೇಹಕ್ಕೆ ಎಡೆಯಿಲ್ಲದಂತೆ, ನಂದನೇ ಮೊದಲಾದವರುಗಳನ್ನು ಕರೆದುಕೊಂಡು, ನೀನು ಅಸುರರನ್ನು ಸಂಹರಿಸುವ ಶ್ರೀಕೃಷ್ಣನನ್ನು ಅಣ್ಣನೊಡಗೂಡಿ ನಾಳೆಯ ದಿನವೇ ಇಲ್ಲಿಗೆ ಕರೆದುಕೊಂಡು ಬರಬೇಕು.

ಇಲ್ಲಿಗೆ ಬರಲು ನಂದಗೋಪಾದಿಗಳು ಏನಾದರೂ ನೆಪ ತೆಗೆಯಬಹುದು. ಆದರೆ ಅದಕ್ಕೆ ಅವಕಾಶ ಕೊಡದೆ, ಅವರುಗಳು ಪ್ರತಿ ವರ್ಷವೂ ಕಪ್ಪವನ್ನು ನನಗೆ ಕೊಡಬೇಕಲ್ಲಾ, ಅದನ್ನು ಹೇಳಿ, ಈ ಬಾರಿ ಇನ್ನೂ ಬಂದಿಲ್ಲವಾದ್ದರಿಂದ, ಒಡನೇ ರಾಮಕೃಷ್ಣರೊಡನೆ ಹೊರಟು ಬರಬೇಕೆಂದು ಆಗ್ರಹಪಡಿಸಿ, ನಾಳೆಯೇ ಇಲ್ಲಿಗೆ ಕರೆದುಕೊಂಡು ಬರಬೇಕು.

ಇತಿ ವಾಚ ಮುದೀಯನ್ ದುರ್ಮತಿಃ ಸ್ವವಧೋಪಾತ್ತ ಕೃಪಾಣಕೋಪಮಾಂ।
ಸಪದಿ ಪ್ರಜಿಘಾಯ ಕೇಶಿನಂ ಮಧುಜಿತ್ ಪೀಡನ ಲೋಭ ಮೋಹಿತಃ ॥೧೨॥

ಈ ರೀತಿ ತನ್ನನ್ನು ಅಳಿಸಲು ತಾನೇ ಸಿದ್ಧಮಾಡಿಕೊಂಡ ಹಾಗೆ ಮಾತುಗಳನ್ನು ಹೇಳಿಬಿಟ್ಟು, ಆ ದುರ್ಬುದ್ಧಿಯಾದವನು, ಶ್ರೀಕೃಷ್ಣನನ್ನು ಬೃಂದಾವನದಲ್ಲಿಯೇ ಕೊಲ್ಲಬೇಕೆಂಬ ವಿಪರೀತ ಉದ್ದೇಶದಿಂದ ಒಡನೇ 'ಕೇಶಿ' ಎಂಬ ಅಸುರನನ್ನೂ ಕಳುಹಿಸಿದನು.

ಅಕ್ರೂರನನ್ನು ಗೋಕುಲಕ್ಕೆ ಕಳುಹಿಸಿದುದು ಅಲ್ಲದೆ ಮತ್ತೆ, ತನ್ನ ದುಷ್ಕೃತ್ಯಗಳನ್ನು ಮುಂದುವರಿಸುತ್ತಾ 'ಕೇಶಿ' ಎಂಬ ಅಸುರನನ್ನು ಶ್ರೀಕೃಷ್ಣನ ಸಂಹಾರಕ್ಕಾಗಿ ಗೋಕುಲಕ್ಕೆ ಕಳುಹಿಸಿದನು.

ಸ ಚ ವಾಜಿ ಮಹಾ ಸುರಶ್ಚರನ್ ಅನು ಬೃಂದಾವನ ಮದ್ರಿ ಸಂನಿಭಃ।
ಸಮಹೇಷತ ಸಮುಖಂ ಪ್ರಭೋರಶನಿಧ್ವಾನ ಭಯಾನಕ ಧ್ವನಿಃ ॥ ॥೧೩॥

ಗಿರಿಯಂತಿರುವ ಕುದುರೆ ರೂಪದಲ್ಲಿರುವ ಕೇಶಿ ಎಂಬ ಅಸುರನು ಬೃಂದಾವನದಲ್ಲಿ ತಿರುಗಾಡುತ್ತಾ, ಸಿಡಿಲಿನಂತೆ ಭಯಂಕವಾಗಿ ಭಗವಂತನ ಮುಂದೆ ಕೆನೆದುಕೊಂಡು ಬಂದನು.

ಕೇಶಿ ಎಂಬ ಅಸುರನು ದೊಡ್ಡ ಕುದುರೆ ರೂಪ ತಾಳಿ ಬೃಂದಾವನಕ್ಕೆ ಬಂದು, ಜೋರಾಗಿ ಕೆನೆಯುತ್ತಾ, ಶ್ರೀಕೃಷ್ಣನನ್ನು ಅರಸಿಕೊಂಡು ಬಂದನು.

ಕುಲಿಶೋಪ ಮದಂತ ಪಂಕ್ತಿಕಂ ಕುಟಿಲ ಪ್ರೇಕ್ಷಿತ ಜಾತ ವಿದ್ಯುತಂ।
ಖುರ ಖಂಡಿತ ಭೂಮಿ ಮಂಡಲಂ ಜ್ವಲದಂಗ ಸ್ಫುಟ ವಿಸ್ಫುಲಿಂಗಕಂ॥ ॥೧೪॥

ಆ ಕುದುರೆಯು ವಜ್ರಾಯುಧದಂತೆ ಹಲ್ಲಿನ ಪಂಕ್ತಿಯನ್ನು ಹೊಂದಿರುವುದೂ, ಮಿಂಚಿನಂತೆ ತೀಕ್ಷ್ಣವಾಗಿರುವ ಕಣ್ಣೋಟವನ್ನು ಹೊಂದಿರುವುದೂ, ಖುರಪುಟದಿಂದ ಭೂಮಂಡಲವನ್ನೇ ನಡುಗಿಸುವುದೂ, ಜ್ವಲಿಸುವ ದೇಹದಿಂದ ಬೆಂಕಿಯನ್ನು ಹೊರ ಸೂಸುವಂತಿತ್ತು (ಇಲ್ಲಿಂದ ಮುಂದೆ 13 ಶ್ಲೋಕಗಳು ಆ 'ಕೇಶಿ' ಎಂಬ ಕುದುರೆ ರೂಪದ ರಾಕ್ಷಸನ ವರ್ಣನೆ ಇದೆ).

ಬಡವಾಮುಖ ವಹ್ನಿದಾರುಣಂ ವಿಪುಲಾವರ್ತ ವಿಶೇಷ ಚಿತ್ರಿತಂ।
ಧೃತ ಸಿಂಧು ತರಂಗ ತಾಂಡವಂ ಮುಖ ನಿಷ್ಕಾಸಿತ ಫೇನ ಸಂಪ್ಲವಂ ॥೧೫॥
ಕ್ಷಿತಿ ಭೇದ ಕೃತಕ್ಷಣೈಃ ಖುರೈಃ ಪಟುಧೀರ ಧ್ವನಿ ನಿರ್ಜಿತಾಂಬುಧೈಃ।
ವಿದಧಾನ ಮಶೇಷ ಘಾತಿನಃ ಶಮನಸ್ಯೇವ ಮೃದಂಗ ವಾದನಂ ॥೧೬॥
ಧೃತ ವಾಲಧಿ ಧೂಮ ಸಂಹತಿಂ ಚಟು ಲೋತ್ಕಾಕತ ಚಂಡ ಕೇಸರಂ।
ಗ್ರಸಿತುಂ ಕ್ಷಮಮಂಬುಧೀನ್ ಕ್ಷಣಾತ್ ಅನುಕಲ್ಪಾಶ್ರಿತ ಕಲ್ಪಪಾವಕಂ ॥೧೭॥
ಗರುಡಾನಿಲ ಚಿತ್ತರಂಹಸಂ ಗತ ದೂರಾಂತಿಕ ಮಕ್ರಮೈಃ ಕ್ರಮೈಃ।
ಮುಹುರುಪ್ಲುತಿ ಭಿನ್ನ ಭಾಸ್ಕರಂ ನಿಬಿಡಾಸ್ಯೂತ ಪಯೋಧ ಕೇಸರಂ ॥೧೮॥

ಸಮುದ್ರದಲ್ಲಿರುವ ಬಡಬಾಗ್ನಿಯಂತೆ ಕುದುರೆಯ ಲಕ್ಷಣಗಳಾದ ಅನೇಕ ಸುಳಿಗಳಿಂದ ವಿಚಿತ್ರವಾಗಿ, ಸಮುದ್ರದ ಅಲೆಗಳಂತೆ ಎದ್ದು ಎದ್ದು ಕುಣಿಯುವ, ಬಾಯಿನಿಂದ ನೊರೆಯನ್ನು ಸುರಿಸುತ್ತಾ ಇರುವುದೂ, ಭೂಮಿಯನ್ನು ತುಳಿಯಲು ಉತ್ಸಾಹವುಳ್ಳವನೂ, ಕ್ರೂರವಾಗಿ ಖುರಪುಟದ ಧ್ವನಿಯಿಂದ ಮೇಘಗಳನ್ನು ಗೆಲ್ಲುವವನೂ, ಎಲ್ಲವನ್ನೂ ನಾಶ ಮಾಡುವ ಯಮನಿಗೆ ಮೃದಂಗ ಬಾರಿಸುವವನಂತೆ ಇರುವ, ಬಾಲಬಂದ ವಿರಾಜಮಾನವಾದ ಧೂಮದಿಂದ ಕೂಡಿರುವುದೂ, ಅಸಂಖ್ಯ ಕಟ್ಟಿಗೆಗಳ ಜ್ವಾಲೆಯನ್ನು ಕೂದಲುಗಳಾಗಿ

ಹೊಂದಿರುವುದೂ, ಒಂದು ಕ್ಷಣದಲ್ಲಿ ಸಮುದ್ರವನ್ನು ಲಂಘಿಸಬಲ್ಲುದೂ, ಎಲ್ಲಾ ಪ್ರಳಯ ಕ್ಕಿಂತಲೂ ಮುಖ್ಯವಾದ ಅಗ್ನಿಯಂತಿರುವುದೂ, ಗರುಡನು, ವಾಯು, ಮನಸ್ಸು - ಇವುಗಳಿಗೂ ಮೀರಿದ ವೇಗವುಳ್ಳದೂ, ಒಂದರ ಹಿಂದೆ ಮತ್ತೊಂದನ್ನು ಅರಿಯಲಾಗದ ವೇಗದಿಂದ ಬಂದು ಹೋಗುವುದೂ, ಅತಿ ದೂರದಲ್ಲಿರುವ ವಸ್ತುಗಳನ್ನೂ ಆಕರ್ಷಿಸಬಲ್ಲುದೂ, ತನ್ನ ನಿಮಿರಿದ ಕೂದಲುಗಳಿಂದ ಮೇಘಗಳನ್ನು ಚುಚ್ಚುವುದು ಮಾಡುವ, ಆಗಾಗ ಸೂರ್ಯಮಂಡಲವನ್ನು ಭೇದಿಸುವ,

ಭ್ರಮಣೇ ಕೃತ ಸಾಲ ಮಂಡಲಂ ಕ್ರಮಣೇ ದಿಕ್ಷು ವಿದಿಕ್ಷು ಚ ಸ್ಥಿತಂ।
ನಟ ವೃತ್ತಿಮಿವಾಶು ನರ್ತನೆ ಕಲಿತಾಕಾಶ ಮಿವಾಂಗಧೂನನೆ ॥೧೯॥
ಮಧುಜಿದ್ವಹನ ಕ್ಷಮಾತ್ಮನಾ ದರನಿರ್ಭುಗ್ನ ಫಣೇನ ಬೋಗಿನಾ।
ಮುಹುರು ನ್ನಮಿತಾ ಮಯತ್ನತೋ ನಮಯಂತಂ ನಿಜ ಭಾರತಃ ಕ್ಷಿತಿಂ॥ ॥೨೦॥

ವೇಗದಿಂದ ಸುತ್ತುವಾಗ, ಕುಂಡಲಾಕಾರ ಮಾಡುವುದೂ. ಅಡಿಗಳನ್ನು ಇಟ್ಟು ನಡೆಯು ವಾಗ, ಎಲ್ಲಾ ದಿಕ್ಕುಗಳಲ್ಲೂ ಇರುವುದೂ, ಸಂತೋಷದಿಂದ ಆಡುವಾಗ, ನಟನೆ ಮಾಡು ವಂತಿರುವುದೂ, ದೇಹವನ್ನು ಒದರುವಾಗ, ಆಕಾಶವನ್ನೆಲ್ಲಾ ಅಲುಗಾಡಿಸುವುದೂ, ಭಗವಂತನನ್ನು ಎತ್ತಲು ನಿಯೋಜಿಸಲ್ಪಟ್ಟಿರುವುದರಿಂದ, ಶ್ರೇಷ್ಠವಾದ ಹೆಡೆಗಳುಳ್ಳ ಆದಿಶೇಷ ನಿಂದ ಈ ಕುದುರೆಯು ಮತ್ತೆ ಮತ್ತೆ ಪ್ರಯತ್ನದಿಂದ ಎತ್ತಿ ಬಿಸಾಕಲ್ಪಟ್ಟ ಸಮಯದಲ್ಲೂ ಅನಾಯಾಸವಾಗಿ ತನ್ನ ಕೆನೆಯುವಿಕೆಯಿಂದ ಭೂಮಿಯನ್ನು ನಡುಗಿಸುವುದು.

ಅಚಲ ಕ್ಷಿತಿ ಸಂಧಿ ಭೇದನೈರನಿಲ ಸ್ಕಂಧ ವಿಭಾಗ ಭಂಜಕೈಃ।
ಬಧಿರೀ ಕೃತ ನಿರ್ಜರಶ್ರುತಿಂ ಬಹುಭಿಃ ಸಂಭ್ರಮ ಹೇಷಿತೋರ್ಮಿಭಿಃ ॥೨೧॥
ದ್ವಿರದಾಯುತ ಸಾರ ದುರ್ದಮಂ ದ್ರುತ ವಿದ್ರಾವಿತ ದಿಗ್ಗಜಂ ಗಜಂ।
ಅಸುರಾದಿ ಭಿರಪ್ಯ ನಾಸ್ಥಿತಂ ಸುರಸೇನಾ ಪರ ಭಾಗ ದರ್ಶಿನಂ ॥ ॥೨೨॥
ಪ್ರತಿಕಾಯ ಮಿವಾಸುರ ಶ್ರೀಯಃ ಪ್ರಥಮಾಕಲ್ಪ ಮಿವಾಂತಕ ಭ್ರುವಃ ।
ಪರಿವರ್ತಮಿವಾಮರಾಶ್ರಿಯಃ ಪ್ರತಿಘ ಸ್ಯೇವ ಮಹೋತ್ಸವಂ ನವಂ॥ ॥೨೩॥

ಬೆಟ್ಟಗಳಿಗೂ, ಭೂಮಿಗೂ ಇರುವ ಬಿರುಕುಗಳನ್ನು ಅಳಿಸುವವನೂ, ಬೇರೆ ಬೇರೆಯಾಗಿ ಬೇರ್ಪಟ್ಟಿರುವ ಗಾಳಿಯ ಹದಿನಾರು ಸಾವಿರ ಆನೆಗಳ ಬಲವುಳ್ಳದೂ, ಅಡಗಿಸಲಾಗದ ದಿಗ್ಗಜಗಳನ್ನು ಯುದ್ಧದಲ್ಲಿ ಅಡಗಿಸುವುದೂ, ಅಸುರರುಗಳೊಡನೆ ಬಗ್ಗದ, ಅಂಜಿ ಓಡಿಸುವ ದೇವತೆಗಳ ಸೇನೆಯನ್ನು ಹಿಂದಿನ ಭಾಗವನ್ನು ನೋಡುವುದೂ. ಅಸುರ ಐಶ್ವರ್ಯ ಲಕ್ಷ್ಮಿಯ (ಪ್ರತಿಬಿಂಬರೂಪವಾದ) ಕಾಂತಿಯನ್ನು ಹೊಂದಿರುವುದೂ, ಪ್ರಧಾನವಾದ ಆಭರಣ ದಂತಿರುವುದೂ, ದೇವತೆಗಳ ಐಶ್ವರ್ಯ ಶಕ್ತಿಯನ್ನು ಹೊಂದಿರುವುದೂ, ರೋಷ ದೇವತೆಯ ಹೊಸ ದೊಡ್ಡ ಮಹೋತ್ಸವದಂತಿರುವುದೂ,

ಉಪಮಾನ ಮಿವಾತ್ಮನಃ ಸ್ವಯಂ ಪ್ರತಿಮಾನೇಪಿ ಸಮೇ ಸಮತ್ಸರಂ।
ಅವಲೇಪ ಮಿವಾಽಽತ್ತ ವಿಗ್ರಹಂ ದ್ವಿಷದುತ್ಪಾತಮಿವ ದ್ಯುತೋದಿತಂ ॥೨೪॥
ಅಚಮತ್ಕೃತ ಪಂಚವಕ್ತ್ರಂ ಕೃತಮನ್ಯೇರಿಹ ದುಷ್ಟ ಸತ್ವೈಃ।
ಅಪ ಸರ್ಪಿತ ಗೋಕುಲಂ ಭಯಾತ್ ಅಭಿಲೀನಸ್ಥಲ ಗೋಪಯೂಥಪಂ ॥೨೫॥
ಅವಮತ್ಯ ತುರಂಗ ದಾನವಂ ಶಮಯನ್ ಗೋಪ ಗಣಸ್ಯ ಸಾಧ್ವಸಂ।
ಪ್ರಜಹಾಸ ಹರಿಃ ಪ್ರತಿದ್ರವನ್ ಪ್ರಸಭಾ ಸ್ಫೋಟಿತ ಭಾವಿತೋದ್ಯಮಃ ॥೨೬॥

ತನಗೆ ತಾನೆ ಉಪಮಾನವಾಗಿರುವುದೂ, ತನಗೆ ಸಮಾನರಾರು ಎಂದು ತನ್ನ ಬಗ್ಗೆಯೇ ಅಸೂಯೆ ಪಡುವುದೂ, ಅಹಂಕಾರವೇ ಮೈದಳೆದಂತಿರುವುದೂ, ವಿರೋಧಿಗಳಿಗೆ ನಡುಕವನ್ನುಂಟುಮಾಡುವುದೂ, ಇತರ ದುಷ್ಟಮೃಗಗಳ ಬಗ್ಗೆ ಹೇಳುವದೇನು? ಮೃಗಶ್ರೇಷ್ಠವಾದ ಸಿಂಹವನ್ನೇ ಭಯಪಡಿಸುವಂತದೂ, ಎಲ್ಲರೂ ಅಂಜಿ ಓಡುವ ಗೋಪಾಲಕರ ಮುಖಂಡರು ಜಾಗಗಳಲ್ಲಿ ಮರೆಯಾಗಿ ಅವಿತುಕೊಳ್ಳುವ ಹಾಗೆ ಮಾಡುವ ಅಸುರ ಕುದುರೆಯನ್ನು ಅಲಕ್ಷ್ಯ ಮಾಡಿ ಗೋಪರ ಸಮೂಹಕ್ಕೆ ಆಶ್ಚರ್ಯವನ್ನೂ ಉಂಟು ಮಾಡಿಕೊಂಡು ಬಲವಾಗಿ ತೋಳನ್ನು ತಟ್ಟಿ ಪರಿಹಾಸದೊಡನೆ ಶ್ರೀಕೃಷ್ಣನು ಅಟ್ಟಹಾಸ ಮಾಡಿದನು.

ಆ ರೀತಿ ಬೃಹದಾಕಾರವಾಗಿ ಇದ್ದ, ಘೋರ ರೂಪ ಧರಿಸಿ, ನೋಡುವವರಿಗೆ ಹೆದರಿಕೆ ಉಂಟು ಮಾಡುತ್ತಿದ್ದ ಆ ಕೇಶಿ ಎಂಬ ಅಸುರನನ್ನು ಶ್ರೀಕೃಷ್ಣನು ಕೊಲ್ಲಲು ನಿಶ್ಚಯಿಸಿ, ತನ್ನ ತೋಳನ್ನು ಬಲವಾಗಿ ತಟ್ಟಿ, ಅದರ ಎದುರು ನಿಂತು ಅಟ್ಟಹಾಸ ಮಾಡಿದನು.

ವಿವೃತಾಯತ ವಕ್ತ್ರಕಂದರಂ ಪ್ರತಿಧಾವಂತ ಮಿವಾಂತಕಂ ಪ್ರಭುಃ।
ಭುಜಸಾನುಮತಃ ಪ್ರವೇಶನಾದಗಮಂ ವಜ್ರ ಇವ ವ್ಯದಾರಯತ್ ॥ ॥೨೭॥

ಗುಹೆಯಂತೆ ತೋರುವ ಬಾಯನ್ನು ತೆರೆದುಕೊಂಡು ಯಮನಂತೆ ಭಯಂಕರವಾಗಿ ಎದುರು ಓಡಿ ಬರುತ್ತಿರುವ ಅದನ್ನು ಪ್ರಭಾವಶಾಲಿಯಾದ ಸ್ವಾಮಿಯು ಅದರ ಬಾಯಲ್ಲಿ ಪ್ರವೇಶಿಸಿ ಬೆಟ್ಟದಂತೆ ಇದ್ದ ತನ್ನ ಭುಜದಿಂದ ವಜ್ರಾಯುಧವು ಬೆಟ್ಟವನ್ನು ಸೀಳುವ ಹಾಗೆ ಸೀಳಿ ಹಾಕಿದನು.

ಆ ಕುದುರೆಯ ಬಾಯಿಯನ್ನು ದೊಡ್ಡದಾಗಿ ತೆರೆಯುತ್ತಾ ಕೃಷ್ಣನನ್ನು ನುಂಗಲು ಬಂದಿತು. ಆಗ ಶ್ರೀಕೃಷ್ಣನು ತನ್ನ ಬೆಟ್ಟದಂತಿದ್ದ ತೋಳನ್ನು ಅದರ ಬಾಯಿಯೊಳಗೆ ತುರುಕಿ, ಅದು ಉಸಿರುಗಟ್ಟುವಂತೆ ಮಾಡಿ ಅದರ ದೇಹವನ್ನು ಎರಡು ಸೀಳು ಮಾಡಿ ಬಿಸಾಕಿದನು.

ಕ್ರಕ ಚಕ್ಷತ ದಾರು ಭೇದವತ್ ಸಮಪಾದಾಕ್ಷಿ ಲಲಾಟ ನಾಸಿಕೇ।
ದದತುಃ ಕ್ಷಿತಿ ಕಂಪಮಾಘ್ನತಿ ಶಕಲೇ ಸೈಂಧವ ದಾನವಸ್ಯತೆ ॥೨೮॥

ಬಾಳೆಯ ಮರವನ್ನು ಕೊಯ್ಯುವಂತೆ ಕಾಲು, ಕಣ್ಣು, ನೆತ್ತಿ, ಮೂಗು ಎಲ್ಲಾ ಶರೀರದೊಳಗೆ ಸೇರುವಂತೆ ಅವನನ್ನು ಸೀಳಿದಾಗ, ಆ ಅಸುರ ಕುದುರೆಯ ಎರಡು ತುಂಡುಗಳೂ ಭೂಮಿಯಲ್ಲಿ ಬಿದ್ದು ಭೂಮಿಗೆ ನಡುಕವುಂಟುಮಾಡಿತು.

ವಿಶರಾರುಭಿರಸ್ಯ ವಿಶ್ವತಃ ಕಲಧೌತಾಚಲ ಖಂಡ ಪಾಂಡರೈಃ।
ವಿತತಾ ಪೃಥಿವಿ ವಿದಿದ್ಯುತೆ ವಿಬುಧ ಪ್ರೀತಿ ಲತಾಂಕುರೈರಿವ ॥೧೯॥

ಎಲ್ಲಾ ಸ್ಥಳಗಳಿಗೂ ಭಯವನ್ನುಂಟು ಮಾಡುವ, ಬಿಳಿ ಪರ್ವತವಾದ ಕೈಲಾಸದಂತೆ, ಬಲಿಷ್ಠವಾದ ಅಂಗಗಳು ಭೂಮಿಯಲ್ಲಿ ಹರಡಿ ದೇವತೆಗಳ ಆನಂದವೆಂಬ ಲತೆಗಳ ಚೂರುಗಳಂತೆ ಕಂಡವು.

ಆ ಕೇಶಿಯ ಸಂಹಾರದಿಂದ ದೇವತೆಗಳೂ, ತುಂಬಾ ಸಂತೋಷಪಟ್ಟರು. ಕೇಶಿಯು ಬೃಹತ್ ಗಾತ್ರದ ದೇಹದ ಅಂಗಗಳು ಭೂಮಿಯಲ್ಲೆಲ್ಲಾ ಹರಡಿ ಒಂದೊಂದು ಪರ್ವತದಂತೆ ಚೆಲ್ಲಾಪಿಲ್ಲಿಯಾಗಿ ಬಿದ್ದು, ಭಯವನ್ನುಂಟು ಮಾಡುತ್ತಿತ್ತು.

ತದನಾಧಿ ವಿಭೂತಿ ಬಂಧುರಂ ವಿಗತ ವ್ಯಾಧಿ ಕುಲಂ ವ್ರಜೌಕಸಾಂ।
ದಮಿತಾರಿಗಣೇನ ದಿವ್ಯತಾ ಯದುನಾಥೇನ ಸನಾಥತಾಂ ಯಯೌ ॥೨೦॥

ಐಶ್ವರ್ಯ, ಹೆಮ್ಮೆಯಿಂದ ಕೂಡಿ, ಮನೋವ್ಯಾಧಿಯೂ, ಶರೀರ ವ್ಯಾಧಿಯೂ ಎಲ್ಲವೂ ನೀಗಿ, ಆ ಗೋಕುಲವಾದುದೂ ಎಲ್ಲಾ ವಿರೋಧಿಗಳನ್ನು ವಧಿಸಿ ಬೆಳಗುವ ವೃಷ್ಣಿವಂಶ ಕುಲದೈವವಾದ ಶ್ರೀಕೃಷ್ಣನಿಂದ ನಾಥನನ್ನು ಹೊಂದಿದಂತಾಯಿತು.

ಗೋಕುಲಕ್ಕೆ ಬಂದೊದಗಿದ ಎಲ್ಲಾ ದುಷ್ಟ ಪೀಡೆಗಳೂ, ಶ್ರೀಕೃಷ್ಣನಿಂದ ನಿವಾರಣೆ ಆದವು. ಗೋಪಾಲಕರು ಅತ್ಯಂತ ಹರ್ಷ ವ್ಯಕ್ತಪಡಿಸಿದರು. ಶ್ರೀಕೃಷ್ಣನು ಕೇಶಿ ಎಂಬ ಅಸುರನನ್ನು ಸಂಹರಿಸಿದ್ದರಿಂದ ಅವನಿಗೆ ''ಕೇಶವ'' ಎಂಬ ನಾಮವು ಪ್ರಸಿದ್ಧವಾಯಿತು.

ತ್ವರಿತಂ ಚ ತದಾ ಶ್ವಫಲ್ಕಜಃ ಸ್ವಹಿತಂ ಕಂಸ ನಿಯೋಗ ಮಾಸ್ಥಿತಃ।
ದನುಜಾಂತಕ ದರ್ಶನೋತ್ಸವ ಸ್ಥಿರ ಸಂಪ್ರೀತಿ ರಿತಿ ವ್ಯಚಿಂತಯತ್ ॥೨೧॥

ಆ ಸಂದರ್ಭದಲ್ಲಿ ತಮಗೆ ಹಿತನಾದ ಕಂಸನ ಆಜ್ಞೆಯನ್ನು ಸರಿಯಾಗಿ ಆದರಿಸಿ, ನೆರವೇರಿಸಲು ಹೊರಟು ಬಂದ ಅಕ್ರೂರನು, ಅಸುರರುಗಳಿಗೆ ಅಂತಕನಾದ ಶ್ರೀಕೃಷ್ಣನನ್ನು ಕಂಡು ಅವನನ್ನು ಕರೆದುಕೊಂಡು ಹೋಗಲೋಸುಗ ಈ ರೀತಿ ಆಲೋಚನೆಗಳನ್ನು ಮಾಡಿದನು.

ಅಕ್ರೂರನನ್ನು ಶ್ರೀಕೃಷ್ಣನ ಬಳಿಗೆ ಕಂಸನು ಕಳುಹಿಸಿದ್ದನಷ್ಟೆ. ಬೃಂದಾವನಕ್ಕೆ ಬರುತ್ತಾ, ಶ್ರೀಕೃಷ್ಣನ ಭಕ್ತನಾದ ಅಕ್ರೂರನು ತನಗೆ ಸ್ವಾಮಿಯನ್ನು ಕಾಣಲು ದೊರಕಿದ ಅವಕಾಶ ಪೂರ್ವಜನ್ಮ ಪುಣ್ಯ ಫಲದಂತೆ ಭಾವಿಸಿ, ಯಾವ ರೀತಿ ಶ್ರೀಕೃಷ್ಣನನ್ನು ಕರೆದುಕೊಂಡು ಬರಬೇಕೆಂಬುದರ ಬಗ್ಗೆ ಯೋಜನೆಗಳನ್ನು ಹಾಕತೊಡಗಿದನು.

ಅಪಿ ನಾಮ ನಿಶಾಮಯಿಷ್ಯತೆ ನಿಗಮಾಂತೈರಿವ ನಿರ್ಮಿತಾ ಸ್ಥಲೀ।
ರಮಯಿಷ್ಯತಿ ಯತ್ರ ಮೇ ದೃಶೌ ರಸಭೂಮಾ ರಮಣೀಯ ಮಾತೃಕಾ ॥೨೨॥

ಯಾವ ಸ್ಥಳದಲ್ಲಿ ನನ್ನ ಕಣ್ಣುಗಳು ಸುಂದರವಾದ ವಸ್ತುಗಳಿಗೆಲ್ಲಾ ಆದಿ ಮೂಲನಾಗಿ, ಆನಂದ ನೀಡುವ ಪರವಸ್ತು ಪರಮಾನಂದ ಉಂಟು ಮಾಡುವುದೋ, ಉಪನಿಷತ್ತುಗಳಿಂದ ಕೊಂಡಾಡಲ್ಪಟ್ಟಿರುವ ಸ್ಥಾನವಾದ ಬೃಂದಾವನವು ಕಾಣುವುದೋ?

ಆ ಕೃಷ್ಣನ ಸ್ಮರಣ ಮಾತ್ರದಿಂದಲೇ ಅಕ್ರೂರನು ಪರವಶನಾದನು. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಎಂಬ ಉಪನಿಷದ್ವಾಕ್ಯದಂತೆ ವಾಕ್ಕಿಗೂ, ಮನಸ್ಸಿಗೂ, ಅಗೋಚರನಾದ ಶ್ರೀಕೃಷ್ಣನನ್ನು ನಾನು ಕಾಣಬಲ್ಲನೇ? 'ಆನಂದೋಮಯೋ ಅಭ್ಯಾಸಾತ್' ಎಂದು ಬ್ರಹ್ಮಸೂತ್ರದಲ್ಲಿ ಹೇಳಿರುವ ಹಾಗೆ ಆನಂದ ಪರಬ್ರಹ್ಮನಾದ ಸ್ವಾಮಿಯನ್ನು ನನ್ನ ಕಣ್ಣುಗಳಿಗೆ ಗೋಚರನಾಗುವನೇ? ಎಂಬುದಾಗೆಲ್ಲಾ ಚಿಂತಿಸುತ್ತಾ ಬರುತ್ತಿದ್ದನು.

ಭವ ದುರ್ಗತ ದಿವ್ಯ ಭೇಷಜೈಃ ಪ್ರಚಿತಾಂ ತತ್ಪದ ಪದ್ಮರೇಣುಭಿಃ।
ಪ್ರಣಿಪತ್ಯ ಶುಭಾಂ ವನಸ್ಥಲೀಂ ಪರಿಪೂತೋ ಭವಿತಾऽಹಮಪ್ಯತ ॥೨೩॥

ಸಂಸಾರದಲ್ಲಿ ಉಳ್ಳ ದುಃಖಗಳಿಗೆ ಔಷಧಿಯಾದ, ಅವನ ದಿವ್ಯ ಪಾದಾರವಿಂದಗಳ ಧೂಳನ್ನು ಧರಿಸುವುದರಿಂದ ಶುಭ್ರವಾಗಿರುವ ಬೃಂದಾವನ ಪ್ರದೇಶವನ್ನು ನಮಸ್ಕರಿಸಿ, ನಾನೂ ಪುನೀತನಾಗುತ್ತೇನೆ.

ಅವನ ಪಾದಸ್ಪರ್ಶದಿಂದ ಬೃಂದಾವನವು ಪವಿತ್ರವಾಗಿದೆ. ಅಂತಹ ದಿವ್ಯ ಕ್ಷೇತ್ರವಾದ ಬೃಂದಾವನವನ್ನು ನಾನೂ ಸೇವಿಸಿ, ಪುನೀತನಾಗಿ, ನನ್ನ ಜೀವನವನ್ನು ಸಾರ್ಥಕಪಡಿಸಿ ಕೊಳ್ಳುತ್ತೇನೆ.

ರಸಮಪ್ರತಿಮಂ ರಸಾಯನಂ ರಮಯಾ ಚ ಕ್ಷಮಯಾ ಚ ಸೇವಿತಂ।
ನಯನೇ ಮಮ ಕಿಂ ನು ಪಾಸ್ಯತೋ ನರಕಾಂತಕ ನಿದಾನಭೇದನಂ ॥೨೪॥

ಲಕ್ಷ್ಮೀದೇವಿಯಿಂದಲೂ, ಭೂದೇವಿಯಿಂದಲೂ ಸೇವಿಸಲ್ಪಡುವ, ನರಕ ವ್ಯಾಧಿಗೆ ಕಾರಣವಾದ ಪಾಪಗಳೆಲ್ಲವನ್ನೂ ಹೋಗಲಾಡಿಸುವ, ಆನಂದವನ್ನು ತರುವ ರಸಾಯನ ದಂತಿರುವ ದಿವ್ಯವಾದ ಔಷಧವು ಆಗಿರುವ ಶ್ರೀಕೃಷ್ಣನನ್ನು ನನ್ನ ಕಣ್ಣುಗಳು ನೋಡಲು ಸಾಧ್ಯವೇ?

ಇನ್ನು ಮುಂದಿನ ಕೆಲವು ಶ್ಲೋಕಗಳಲ್ಲಿ ಅಕ್ರೂರನು ಶ್ರೀಕೃಷ್ಣನನ್ನು ನೆನೆದು, ಅವನನ್ನು ಕಾಣುವ ತನ್ನ ಸೌಭಾಗ್ಯವನ್ನು ಕೊಂಡಾಡುವ ಶ್ಲೋಕಗಳಾಗಿವೆ. ಶ್ರೀಕೃಷ್ಣನು ಪರಮಾತ್ಮನಾದ ನಾರಾಯಣನ ಅವತಾರವೆಂದು ತಿಳಿದಿದ್ದ ಜ್ಞಾನಿ ಅಕ್ರೂರ.

ಈ ಶ್ಲೋಕಗಳನ್ನು "ಅಕ್ರೂರ ಸ್ತುತಿ" ಎಂದು ಪ್ರತ್ಯೇಕವಾಗಿಯೇ ಕರೆಯಬಹುದು.

ಅಪಿ ಶಂಖ ರಥಾಂಗ ತೋರಣ ಧ್ವಜ ವಜ್ರಾಂಕುಶ ಮತ್ಸ್ಯಲಾಂಛನಂ।
ವಿನಿವೇಶಯತಾದ್ ವಿಭುಃ ಸಮೇ ವಿನತೆ ಮೂರ್ಧನಿ ಪಾಕಪಂಕಜಂ ॥೨೫॥

ಶಂಖ, ಚಕ್ರ, ತೋರಣ, ಧ್ವಜ, ವಜ್ರಯುಧ ಮುಂತಾದ ಲಾಂಛನಗಳನ್ನು ಹೊಂದಿರುವ, ತನ್ನ ದಿವ್ಯ ಪಾದಾರವಿಂದವನ್ನು ಪ್ರಭುವಾದ ಸ್ವಾಮಿಯು ನಮಸ್ಕರಿಸುವ ನನ್ನ ತಲೆಯ ಮೇಲೆ ಯಾವಾಗ ಇಡುವನೋ?

ಶ್ರೀ ಆಳವಂದಾರರು ತಮ್ಮ ಸ್ತೋತ್ರರತ್ನದ ಒಂದು ಶ್ಲೋಕದಲ್ಲಿ ಇದೇ ಭಾವವನ್ನು ವ್ಯಕ್ತಪಡಿಸಿದ್ದಾರೆ. "ಕದಾಪುನಃ ಶಂಖ ರಥಾಂಗ ಕಲ್ಪಕ, ಧ್ವಜಾರವಿಂದ ಕುಶ ವಜ್ರ ಲಾಂಛನಂ

ತ್ರಿವಿಕ್ರಮ ತ್ವಚ್ಚರಣಾರವಿಂದಂ ಮದೀಯ ಮೂರ್ಧ್ನಾಮಲಂ ಕರಿಷ್ಯಸಿ'' ಅನೇಕ ಆಳ್ವಾರರೂ ಸಹ ಇದನ್ನೇ ಉದ್ಧರಿಸಿದ್ದಾರೆ. ಭಗವಂತನ ಪಾದವು ತಮ್ಮ ಮೇಲಿರಬೇಕೆಂದು ಎಲ್ಲ ಭಕ್ತರ ಆಶಯ.

ಯದುವಂಶ ಮಸೌ ಸಭಾಜಯನ್ ಬಹುಮಾನೇನ ವಿಹಾರ ಜೇನಮಾಂ।
ಭುಜ ಪಂಜರ ಮಧ್ಯ ಯಂತ್ರಿತಃ ಪುಲಕೋದ್ಭಾಸಿತನುಂ ವಿಧಾಸ್ಯತಿ ॥೩೬॥

ಯದು ವಂಶವನ್ನು ಬೆಳಗುತ್ತಿರುವ ಶ್ರೀಕೃಷ್ಣನು, ನಮ್ಮ ವಂಶಕ್ಕೆ ಕೀರ್ತಿಯನ್ನು ತರುತ್ತಾನೆ ಎಂದು ಅವನ ಅವತಾರ ಲೀಲೆಗಳನ್ನು ನೆನೆಯುವ ನನ್ನಿಂದ ಶೀಘ್ರದಲ್ಲಿಯೇ ನನ್ನ ಎದೆಯನ್ನು ಅವನ ಎರಡು ಕೈಗಳಿಂದ ಆಲಿಂಗಿಸಿ ನನ್ನ ದೇಹದ ರೋಮಗಳೆಲ್ಲವೂ ಪುಳಕಗೊಳ್ಳುವಂತೆ ಮಾಡುವನಾ ?

ಆ ಶ್ರೀಕೃಷ್ಣನ ಆಲಿಂಗನ ಸೌಖ್ಯ ಎಲ್ಲರಿಗೂ ಲಭಿಸುವುದಿಲ್ಲ. ಅವನ (ಶ್ರೀರಾಮನ) ಪರಮ ಭಕ್ತನಾದ ಆಂಜನೇಯನಿಗೆ ಲಭಿಸಿತ್ತು. ''ಏಷ ಸರ್ವಸ್ವ ಭೂತಸ್ತು ಪರಿಷ್ವಂಗೋ ಹನೂಮತಃ'' ಅದನ್ನು ಇಲ್ಲಿ ಅಕ್ರೂರನು ಅಪೇಕ್ಷಿಸಿದ್ದಾನೆ.

ಶ್ರುತಿ ಸೌರಭ ಸೌಮ್ಯಯಾಗಿರಾ ಸುಧಯೈವೈಷ ಮುಖೇಂದು ಸೂತಯಾ।
ಶಮಯೇದಪಿ ನಾಮ ಸಂಜ್ವರಂ ಪುರುಷಃ ಪುಷ್ಕರ ಲೋಚನೋ ಮಮ ॥೩೭॥

ಕೆಂದಾವರೆಯಂಥ ಕಣ್ಣುಗಳುಳ್ಳ (ಪುರುಷೋತ್ತಮನಾಗಿರುವ) ಮಹಾಪುರುಷನಾದ ಶ್ರೀಕೃಷ್ಣನು ತನ್ನ ಮುಖ ಚಂದ್ರದಿಂದ ಸೂಸುವ ಅಮೃತದಂತಿರುವ ವೇದಗಳಲ್ಲಿ ಮನಸ್ಸಿಟ್ಟು ಭೋಗ್ಯವಾದ, ತನ್ನ ಮಾತುಗಳಿಂದ ನನ್ನಲ್ಲಿ ಇರುವ ಸಂಸಾರದ ಜ್ವರವನ್ನು ಹೋಗಲಾಡಿಸುವನೇ ?

ನನ್ನ ಸಂಸಾರ ತಾಪವನ್ನು ಅವನ ದಿವ್ಯ ವಾಣಿಯು ನೀಗುವುದೇ ? ವೇದಗಳೆಲ್ಲವೂ ಅವನಿಂದಲೇ ಹೊರಟಿವೆ. ಆ ವೇದವಾಕ್ಕುಗಳು ನನ್ನನ್ನು ಪುನೀತಗೊಳಿಸುತ್ತದೆಯೇ ? ಎಂದು ಅಕ್ರೂರನು ಆಶಿಸುತ್ತಿದ್ದಾನೆ.

ಅಹಮಸ್ಮಿ ತವೇತಿ ವಾದಿನಂ ಪ್ರಣಯ ಸ್ಮೇರ ಮುಖಃ ಪ್ರಸನ್ನಧೀಃ।
ವಿದಿತೇ ತರ ವರ್ಜಿತೋಽಪ್ಯಸೌ ವಿಭುರ ಕ್ರೂರ ವದೇತಿ ವಕ್ಷ್ಯತಿ ॥ ॥೩೮॥

ತನ್ನಿಂದ ತಿಳಿಯದೇ ಇರುವುದು ಯಾವುದೂ ಇಲ್ಲವೆಂದು ತಿಳಿದಿರುವ ಆ ಸ್ವಾಮಿಯು ''ನಿನಗೆ ನಾನು ದಾಸನಾಗಿರುವೆನು'' ಎಂದು ವಿಜ್ಞಾಪನೆ ಮಾಡುವ ನನ್ನನ್ನು ಕುರಿತು, ಶುದ್ಧವಾದ ಮನಸ್ಸಿನಿಂದ ಅರಳಿದ ಮುಖವುಳ್ಳವನಾಗಿ ''ಅಕ್ರೂರನೇ ! ಏನು ಹೇಳು'' ಎಂದು ಬಾಯಿ ತೆರೆದು ಸೌಹಾರ್ದದಿಂದ ಮಾತನಾಡುವನೇ ?

ಆಶ್ರಿತರ ಕೈ ಬಿಡದ ಭಗವಂತನು ಖಂಡಿತವಾಗಿಯೂ ನನ್ನನ್ನು ಹಸನ್ಮುಖಿಯಾಗಿ ಮಾತನಾಡಿಸುತ್ತಾನೆಂಬ ನಂಬಿಕೆ ನನಗಿದೆ.

ಚಿರಶಿಲೀತ ಸಂಯಮ ಕ್ರಮೈರ್ಯತಿಭಿರ್ ಯೋಗದೃಶಾ ದಿದೃಕ್ಷಿತಂ।
ನಿಧಿಮದ್ಭುತ ಮುಂಜಿತಾವಧಿಂ ಪರಿಪಶ್ಯೇಯ ಮಹಂ ಪ್ರಸಂಗತಃ ॥೩೯॥

ಇಂದ್ರಿಯಗಳನ್ನು ಜಯಿಸಿ, ಬಹುಕಾಲ ಮಾಡಿದ ಅಭ್ಯಾಸದಿಂದ ಹಂತ ಹಂತವಾಗಿ ಯೋಗ ಮಾಡುವುದರಿಂದ ಯೋಗ ದೃಷ್ಟಿಯಿಂದ ಮಾತ್ರ ಕಾಣಲ್ಪಡುವುದೂ, ಅದ್ಭುತವಾದ ನಿಧಿಯಾದ ಅವನನ್ನು ಬೇರೊಂದು ವ್ಯಾಜದಿಂದ ಕಾಣಬಯಸುವ ನಾನು ನೋಡಲು ಸಾಧ್ಯವೇ?

ನಾನು ಯಾವ ತಪಸ್ಸನ್ನೂ ಮಾಡಿದವನಲ್ಲ. ಈಗ ನೋಡಲು ಗೋಕುಲಕ್ಕೆ ಹೋಗುತ್ತಿರುವುದು, ಅವನನ್ನು ಕರೆತರುವ ವ್ಯಾಜದಿಂದ. ಹೀಗಿದ್ದೂ ಅವನು ನನ್ನನ್ನು ಆದರಿಸುತ್ತಾನೆಯೇ? ಸ್ತೋತ್ರರತ್ನದಲ್ಲಿ ಆಳವಂದಾರರು "ನ ಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ ನ ಭಕ್ತಿಮಾಂಸ್ತ್ವಚ್ಚರಣಾರವಿಂದೇ । ಅಕಿಂಚನೋಽನನ್ಯಗತಿಶ್ಶರಣ್ಯ ತ್ವತ್ಪಾದ ಮೂಲಂ ಶರಣಂ ಪ್ರಪದ್ಯೇ॥ "ನಾನು ಧರ್ಮನಿಷ್ಠನಲ್ಲ, ಆತ್ಮಜ್ಞಾನಿಯಲ್ಲ ಮತ್ತು ನಿನ್ನ ಅಡಿದಾವರೆಗಳಲ್ಲಿ ನನಗೆ ಭಕ್ತಿಯೂ ಇಲ್ಲ ; ಶರಣ್ಯನೆ, ಏನೂ ಇಲ್ಲದೆ, ಯಾವ ಗತಿಯೂ ಇಲ್ಲದೆ, ನಿನ್ನ ಪಾದಮೂಲವನ್ನು ಮರೆಹೊಕ್ಕಿರುತ್ತೇನೆ" ಎಂದಿದ್ದಾರೆ.

ಸ ದೃಶಾ ಸ ದೃಶಾಂತರೋಂಜಿತಃ ಸುಮುಖಃ ಸ್ವಾಗತ ವಾಕ್ಯ ಗರ್ಭಯಾ।
ಕಲುಷಂ ಕಿಮ ಪಹ್ನುವೀತ ಮೇ ಕರುಣಾ ಸಿಂಧು ಸುಧೋರ್ಮಿಕಲ್ಪಯಾ ॥೪೦॥

ತನಗೆ ಸಮಾನರಿಲ್ಲದ ಶ್ರೀಕೃಷ್ಣನು, ಮಂದಹಾಸದಿಂದ ಕೂಡಿದ ಮುಖವುಳ್ಳವನಾಗಿ ಕರುಣೆಯೇ ಸಮುದ್ರವಾಗಿರುವ ತನ್ನ ಅಮೃತ ತುಂಬಿರುವ ದಿವ್ಯ ವಾಣಿಯಿಂದ ಮತ್ತೂ ತನ್ನ ದಿವ್ಯ ಕಟಾಕ್ಷದಿಂದ ನನ್ನನ್ನು ಸ್ವಾಗತಿಸುತ್ತಾನೆಯೇ?

"ನ ತತ್ಸಮಃ ಅಧಿಕಶ್ಚ ದೃಶ್ಯತೇ" ಎನ್ನುತ್ತದೆ ವೇದ. ಭಗವಂತನಿಗೆ ಯಾರೂ ಸಮರಲ್ಲ. ಅಂತಹ ಸರ್ವೇಶ್ವರನು ನನ್ನನ್ನು ಸ್ವಾಗತಿಸುತ್ತಾನೆಯೇ? ಎಂಬ ಸಂದೇಹ ನನ್ನನ್ನು ಕಾಡುತ್ತಿದೆ. ಅವನು ಸರ್ವ ಸುಲಭನು ಮತ್ತು ಸುಶೀಲನು. ಆದ್ದರಿಂದ ನನ್ನನ್ನು ತಿರಸ್ಕರಿಸುವುದಿಲ್ಲ ಎಂಬ ನಂಬಿಕೆ ನನಗಿದೆ.

ವ್ಯಥಿತಂ ವೃಜಿನೇನ ಧನ್ವನಾ ವಿಷಯಾಶೀ ವಿಷಮೋಹಿತಂ ಚ ಮಾಂ।
ಅಪಿ ಜೀವಯಿತಾ ಪತಿಃ ಸತಾ ಮಮೃತಾಸಾರ ನಿಭೈರವೇಕ್ಷಣೈಃ ॥೪೧॥

ಸತ್ಪುರುಷರನ್ನು ಕಾಪಾಡಲು ಪ್ರತಿಜ್ಞೆ ಮಾಡಿರುವ ಶ್ರೀಕೃಷ್ಣನು, ಪಾಪವೆಂಬ ಮಡಕೆಯಲ್ಲಿ ಬೆಂದು ಪರಿತಪಿಸುತ್ತಿರುವ, ಸಂಸಾರ ವಿಷಯಗಳೆಂಬ ಸರ್ಪಗಳ ವಿಷಗಳಿಂದ ಬಾಧಿಸಲ್ಪಟ್ಟಿರುವ ನನಗೆ ಎಡೆ ಬಿಡದೆ, ಅಮೃತ ಸೇಚನದಂತಿರುವ ತನ್ನ ಕಟಾಕ್ಷವನ್ನು ಬೀರಿ ಬದುಕಿಸುತ್ತಾನೆಯೇ ?

ಮೇಲಿನ ಶ್ಲೋಕದ ಭಾವವೇ ಇಲ್ಲಿ ವ್ಯಕ್ತವಾಗಿದೆ. "ಅದ್ಯಮೇ ಸಫಲಂ ಜನ್ಮ ಸುಪ್ರಭಾತಾ ಚ ಮೇ ನಿಶಾ" ಎಂಬಂತೆ ಅವನು ನನ್ನನ್ನು ನೋಡಿದರೇ ನನ್ನ ಜನ್ಮ ಸಾರ್ಥಕವಾಗುತ್ತದೆ.

ಅಲಮತ್ರ ಪೃಥಗ್ವಿಧೈಃ ಫಲೈ ರವಶಾದ ಧ್ವನಿ ವಿಂದತೋ ಮಮ।
ವಸುಧಾ ವಸುದೇವ ದೇವಕಿ ತಪಸಾ ಮೇಕಮಿದಂ ಮಹತ್ಫಲಂ ॥೪೨॥

ಕಂಸನಿಗೆ ಊಳಿಗ ಮಾಡಿಕೊಂಡಿರುವ ನಾನು ನನಗೆ ತಿಳಿಯದಂತೆ ಶ್ರೀಕೃಷ್ಣನನ್ನು ನೋಡುವದಂಬ ಒಳ್ಳೆಯ ದಾರಿಯಲ್ಲಿ ಸೇರಿದ್ದೇನೆ. ವಸುದೇವನೂ, ದೇವಕಿಯೂ, ಮಾಡಿದ ತಪಸ್ಸೆಲ್ಲವೂ ಸೇರಿ ಒಂದು ದೊಡ್ಡ ಫಲವಾದ ಕೃಷ್ಣನನ್ನು ಹೊಂದುವ ನನಗೆ ಬೇರೆ ಯಾವ ಫಲವೂ ಬೇಡ.

ದುಷ್ಟನಾದ ಕಂಸನ ಬಳಿಯಿದ್ದರೂ ನನ್ನ ಬುದ್ಧಿಯು ಅವನಂತೆ ಕೃಷ್ಣದ್ವೇಷವನ್ನು ಹೊಂದಿಲ್ಲ. ಪೂರ್ವ ಪುಣ್ಯವಶಾತ್ ಅವನಲ್ಲಿ ಭಕ್ತಿಯೇ ಉಂಟಾಗಿದೆ. ನಾನೇ ಧನ್ಯನು. ಅವನ ದರ್ಶನ ಭಾಗ್ಯ ಬಿಟ್ಟು ಬೇರೇನೂ ನನಗೆ ಬೇಡ.

ಮದ ಖೇಲಗತಿ ಮಹಾಬಲೌ ಮಧುರಾಲಂಕರಣಂ ವಿಧಿತ್ಸತಃ।
ವ್ರಜಯೂಥಪತಿ ವಶಾನುಗೌ ಭವಿತಾರೌ ಮಮ ಭಾಗಧೇಯತಃ ॥೪೩॥

ಕಾಡಿನಲ್ಲಿ ಆನೆಗಳಿಗೆಲ್ಲಾ ನಾಯಕನಾಗಿ ನಿಲ್ಲುವ ಗಜಯೂಥಪದಂತೆ ಗೋಕುಲದಲ್ಲಿ ಎಲ್ಲರಿಗೂ ನಾಯಕರಾದ, ಗಂಭೀರವಾದ ನಡೆಯುಳ್ಳವನೂ, ಮಹಾ ಬಲಶಾಲಿಯೂ ಆದ ಶ್ರೀಕೃಷ್ಣ-ಬಲರಾಮ ಎಂಬ ಇಬ್ಬರನ್ನೂ ಕರೆದುಕೊಂಡು ಮಧುರೆಗೆ ಹೋಗಬಯಸುವ ನನಗೆ, ಭಾಗ್ಯವಶದಿಂದ ಇವರ ದೇಹವನ್ನು ಭರಿಸುವ ಯೂಥಪತಿ ಎಂಬ ಆನೆಯು, ವಶಾ ಎಂಬ ಅದರ ಪಡೆಯನ್ನು ಗುರುತಿಸುವುದರಿಂದ, ಬಲವುಳ್ಳ ಆ ಆನೆಗಳನ್ನು ಮಧುರ ವಾಗಿ ಅಲಂಕರಿಸಲು ನನ್ನ ಆನೆ ಪಡೆಗಳು ಇಚ್ಛಿಸುತ್ತವೆ.

ಅವನನ್ನು ಮಧುರೆಗೆ ಸರ್ವಾಲಂಕಾರ ಭೂಷಿತನಾಗಿ ಕರೆದುಕೊಂಡು ಹೋಗಬೇಕು. ನನ್ನ ಆನೆಗಳ ಸುತ್ತುವರಿದ ಅವನನ್ನು ರಾಜಯೋಗ್ಯತೆಗೆ ತಕ್ಕಂತೆ ಕರೆದೊಯ್ಯಬೇಕು.

ಕಿಮಕುರ್ವತ ಪುಣ್ಯಮಗ್ರಿಮಂ ಮಹಿತಾಸ್ತೇ ಮಧುರಾ ನಿವಾಸಿನಃ।
ಕೃಪಯೋಪ ಗತೌ ನಿರೀಕ್ಷಿತುಂ ಕೃತಿನಃ ಕೃಷ್ಣ ಹಲಾಯುಧಾ ಬುಭೌ ॥೪೪॥

ಮಧುರೆಯಲ್ಲಿ ವಾಸಿಸುವವರು ಸೌಭಾಗ್ಯಶಾಲಿಗಳು ಅವರುಗಳು ಎಷ್ಟು ಉತ್ತಮ ವಾದ ತಪಸ್ಸು ಮಾಡಿದ್ದಾರೋ ! ಕೃಪೆ ಹೊಂದಿ ತಾನೇ ಬರುವ ಶ್ರೀಕೃಷ್ಣನನ್ನು ಬಲರಾಮನನ್ನು ಅವರುಗಳು ಇರುವ ಸ್ಥಳದಲ್ಲಿಯೇ ಇದ್ದುಕೊಂಡು, ಅವರುಗಳು ಕಣ್ಣು ತುಂಬಾ ನೋಡುವ ಸೌಭಾಗ್ಯ ಪಡೆದಿದ್ದಾರೆ.

ಅಹೋ ಭಾಗ್ಯ ಅಹೋ ಭಾಗ್ಯಂ ನಂದಗೋಪ ವ್ರಜೌಕಸಾಂ
ಯನ್ಮಿತ್ರಂ ಪರಮಾನಂದಂ ಪೂರ್ಣಬ್ರಹ್ಮ ಸನಾತನಂ

ಎಂಬಂತೆ ಇದುವರೆಗೂ ಗೋಕುಲದ ನಿವಾಸಿಗಳು ಭಾಗ್ಯಶಾಲಿಗಳಾಗಿದ್ದರು. ಇನ್ನು ಮುಂದೆ ಮಧುರಾವಾಸಿಗಳು ಆ ಸೌಭಾಗ್ಯವನ್ನು ಪಡೆಯಲಿದ್ದಾರೆ. ಸಾಕ್ಷಾತ್ ಸರ್ವೇಶ್ವರನೇ ಅವರ ನಡುವೆ ಇರುತ್ತಾನೆಂದರೆ, ಯಾರು ಭಾಗ್ಯಶಾಲಿಗಳಲ್ಲ!

ರಮಯಾ ಕ್ಷಮಯಾ ಚ ಮಾಧವೋ ರಮಮಾಣಃ ಪ್ರತಿಗಮ್ಯ ತಾಂ ಪುರಿಂ।
ಅಪಿ ಚರ್ಮ ದೃಶೋಪಿ ಮಾದೃಶಾನ್ ಅವಿಸಂವಾದಯಿತಾ ಸ್ವವೈಭವೆ ॥೪೫॥

ಮಹಾಲಕ್ಷ್ಮಿಯೊಡನೆಯೂ, ಭೂಮಿ ದೇವಿಯೊಡನೆಯೂ, ಆನಂದವಾಗಿರುವ ಮಾಧವನು ಆ ಮಧುರೆಗೆ ಮತ್ತೆ ಬಂದು ಇದ್ದು ಕೇವಲ ಬಾಹ್ಯ ಚಕ್ಷುವನ್ನು ಹೊಂದಿರುವ ನನ್ನಂಥಹವ ರನ್ನೂ ತನ್ನ ವೈಭವದಿಂದ ವಿಪರೀತ ವಿಷಯಗಳಲ್ಲಿ ಮನಸ್ಸು ಹೋಗದಂತೆ ಮಾಡುತ್ತಾನೆ

''ಪರಮಾತ್ಮಾ ಯೋನಿ ರಕ್ತಾ ವಿರಕ್ತೋ ಅಪರಮಾತ್ಮನಿ'' ಎನ್ನುವಂತೆ ಶ್ರೀಕೃಷ್ಣನ ಸಾಂಗತ್ಯ ದೊರೆತ ಮೇಲೆ, ಬೇರೆ ಯಾವುದನ್ನೂ ಭಕ್ತರು ಅಪೇಕ್ಷಿಸುವುದಿಲ್ಲ. ಇನ್ನು ಮುಂದೆ ಮಧುರಾ ನಿವಾಸಿಗಳು ''ಪರಮೈಕಾಂತಿ''ಗಳಾಗಿರುವುದರಲ್ಲಿ ಸಂದೇಹವಿಲ್ಲ.

ಅವರುದ್ಧ ಭುಜಾಂತರಃ ಶ್ರಿಯಾ ವಿಧಧಾನೋ ವಸುಧಾ ಕರಗ್ರಹಂ।
ಅಭಿಷೇಕ ಮುಪೇಯಿ ವಾನಸೌ ಕಿಮು ನಾಥೋ ಭವಿತಾ ಕುಲಸ್ಯನಃ ॥೪೬॥

ಮಹಾ ಲಕ್ಷ್ಮಿಯಿಂದ ತನ್ನ ಅಂತಃಪುರವೆಂಬ ಎದೆಯನ್ನು ಹೊಂದಿದವನಾದ, ಭೂಮಿಯ ಕೈಯನ್ನು ಹಿಡಿದವನಾದ ಶ್ರೀಕೃಷ್ಣನು ಅಭಿಷೇಕವನ್ನು ಹೊಂದಿ ನಮ್ಮ ಕುಲಕ್ಕೆ ನಾಥನಾಗಿ ದ್ದಾನೆ.

ಗೋವಿಂದ ಪಟ್ಟಾಭಿಷೇಕವನ್ನು ಮಾಡಿಕೊಂಡಿರುವ ಶ್ರೀಕೃಷ್ಣನು, ನಮ್ಮ ಕುಲಕ್ಕೆ ನಾಥನು. ವೈಕುಂಠದಲ್ಲಿ ಶ್ರೀದೇವಿ ಭೂದೇವಿಯರೊಡನೆ ಆನಂದದಿಂದ ವಿಹರಿಸುವ ಸರ್ವೇಶ್ವರನು, ಇಲ್ಲಿ ನಮ್ಮ ಕುಲಕ್ಕೆ ನಾಥನಾಗಿರುವುದು ಯದು ವಂಶದ ಭಾಗ್ಯ ವಿಶೇಷವಲ್ಲವೇ ? ಈಗ ಇಲ್ಲಿಯೂ ಕೂಡ ರಾಜ್ಯಾಭಿಷೇಕವನ್ನು ಹೊಂದುತ್ತಾನೆ.

ಅಸಹಿಷ್ಣು ರಸಹ್ಯ ವಿಕ್ರಮ ಸ್ತ್ರಿಜಗತ್ ಕ್ಷೋಭ ಕುದುಗ್ರ ಸೇನಜಃ।
ಬಲವಾನ್ ಬಲಭದ್ರ ಕೃಷ್ಣಯೋರ್ಹತ ಧೀರ್‌ಹಂತ ಕಿಮಾಚರಿಷ್ಯತಿ ॥೪೭॥

ಇತರರ ಮಹಿಮೆಯನ್ನು ಸಹಿಸದವನೂ, ಇತರರು ಊಹಿಸಲಾಗದ ಪರಾಕ್ರಮ ವುಳ್ಳವನೂ, ಮೂರು ಜಗತ್ತನ್ನೂ ನಡುಗಿಸುವವನೂ, ಬಲಿಷ್ಠನೂ ಆದ ಕಂಸನು ತನ್ನ ದುರ್ಬುದ್ಧಿಯಿಂದ ಬಲರಾಮನಿಗೂ, ಶ್ರೀಕೃಷ್ಣನಿಗೂ ''ಅಯ್ಯೋ'' ಎಂಥಾ ಕೆಟ್ಟದನ್ನು ಉಂಟು ಮಾಡುವನೋ ?

ಕಂಸನು ಸ್ವಭಾವತಃ ದುಷ್ಟನು. ಅವನು ಈಗ ತನ್ನ ಅನುಚರರೆಲ್ಲರೂ, ಶ್ರೀಕೃಷ್ಣನಿಂದ ಹತರಾದರೆಂಬ ವಿಷಯ ತಿಳಿದಿರುವುದರಿಂದ ಮಧುರೆಗೆ ಬರುವ ಅವರಿಗೆ ಯಾವ ಕೆಡುಕನ್ನೂ ಉಂಟು ಮಾಡುತ್ತಾನೋ ತಿಳಿಯದಲ್ಲಾ!'' ಎಂಬುದಾಗಿ ಅಕ್ರೂರನು ಸ್ವಾಮಿಯ ಯೋಗಕ್ಷೇಮವನ್ನು ಚಿಂತಿಸುತ್ತಾನೆ.

ಅಕಠೋರ ಶಿರೀಷ ಕೋಮಲೈಃ ಕಥಮಂಗೈಃ ಪ್ರತಿಯೋತ್ಸ್ಯತೇ ಹರಿಃ।
ಕುಲಶೈಲ ಕುಲೀನ ಮುಷ್ಟಿಭಿಃ ಕುಟಿಲೈಃ ಸಂಯತಿ ಮುಷ್ಟಿಕಾದಿಭಿಃ ॥೪೮॥

ಶ್ರೀಕೃಷ್ಣನು ಕಠಿಣವಲ್ಲದ ಕಾಡಿನ ಹೂವಿನಂತೆ ಉತ್ತಮವಾದ ತನ್ನ ಅಂಗಗಳನ್ನು ಹೊಂದಿದವನು. ಅವನು ಕುಲ ಬೆಟ್ಟದ ಕುಲದಲ್ಲಿ ಹುಟ್ಟಿದವನಾಗಿ, ಮುಷ್ಟಿಗಳನ್ನು ಹೊಂದಿರುವ, ಹಿಂಸಿಸುವವರಾದ ಮುಷ್ಟಿಕನೇ ಮೊದಲಾದವರೊಡನೆ, ಹೇಗೆ ಹೋರಾಡ ಬಲ್ಲನು?

ಶ್ರೀಕೃಷ್ಣನು ಕೋಮಲವಾದ ಅಂಗಗಳುಳ್ಳವನು. ಅವನು ಮಧುರೆಯಲ್ಲಿ ಮಲ್ಲರು ಗಳೊಡನೆ ಕಾಳಗ ಮಾಡುವನೆ? ಅವರೋ ಮಹಾ ಬಲಶಾಲಿಗಳು ಹಾಗೂ ಕ್ರೂರರು. ಮುಂದೆ ಏನು ಅನರ್ಥ ಕಾದಿದೆಯೋ?

ಉದಯಾಸ್ತ ಮಹೀಧರಸ್ತನಿಂ ಚತುರಂಭೋನಿಧಿ ಮೇಖಲಾಂ ಭುವಂ।
ಉಪಭೋಕ್ಷ್ಯತ ಏಷ ಕಂಸಜಿನ್ನಹಿ ದುಃಸಾಧಮಚಿಂತ್ಯ ತೇಜಸಃ ॥೪೯॥

ಇವನು ಕಂಸನನ್ನು ಗೆದ್ದು, ಸೂರ್ಯನು ಉದಯಿಸುವ ಬೆಟ್ಟವನ್ನು ಅಸ್ತಮಿಸುವ ಬೆಟ್ಟವನ್ನೇ ಸ್ತನಗಳನ್ನಾಗಿ ಹೊಂದಿರುವ, ನಾಲ್ಕು ಸಮುದ್ರಗಳನ್ನು ಮೇಖಲಗಳನ್ನಾಗಿ ಹೊಂದಿರುವ ಭೂಮಿಯನ್ನು ಅನುಭವಿಸುತ್ತಾನೆ. ಚಿಂತಿಸಲಾಗದ ತೇಜಸ್ಸುಳ್ಳ ಅವನಿಗೆ ಅಸಾಧ್ಯವಾದುದು ಯಾವುದೂ ಇಲ್ಲ!

ಖಂಡಿತವಾಗಿಯೂ ಶ್ರೀಕೃಷ್ಣನು ಎಲ್ಲರನ್ನೂ ಜಯಿಸಿ, ಭೂಮಿಗೆ ಒಡೆಯನಾಗುತ್ತಾನೆ ಇದರಲ್ಲಿ ಸಂದೇಹವಿಲ್ಲ. ಅಪಾರ ಮಹಿಮೆಯುಳ್ಳ ಅವನಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಅವನು ನಿಜವಾಗಿಯೂ "ಅಘಟಿತ ಘಟನಾ ಸಮರ್ಥ".

ಇತಿ ಸಂಮತ ಸತ್ವಸಾರಥೌ ಮಹಿತಸ್ತೇಮ್ನಿ ಮನೋರಥೇ ಸ್ಥಿತಃ।
ಹರಿಪಾದ ರಜಃ ಪವಿತ್ರಿತಂ ವ್ರಜಮಾಸಾದ್ಯ ರಥಾದವಾತರತ್ ॥೫೦॥

ಈ ರೀತಿ ಸತ್ವಗುಣವೆಂಬ ಸಾರಥಿಯಿಂದ ಉತ್ತಮವಾಗಿ ನಡೆಸಲ್ಪಟ್ಟವನೂ, ಸಚ್ಚಿಂತನೆ ಯಿಂದ ಕೂಡಿದ ಮನೋರಥವುಳ್ಳವನಾದ ಅಕ್ರೂರನು, ಭಗವಂತನ ದಿವ್ಯ ಪಾದಾರವಿಂದಗಳ ಧೂಳುಗಳಿಂದ ಪುನೀತನಾದವನಾಗಿ, ಗೋಕುಲವನ್ನು ಸೇರಿ ರಥದಿಂದ ಇಳಿದನು.

ಹೀಗೆ ಶ್ರೀಕೃಷ್ಣನ ಉದಾತ್ತ ಗುಣಗಳನ್ನೇ ಮಾರ್ಗದುದ್ದಕ್ಕೂ ಚಿಂತಿಸುತ್ತಾ ಬರುತ್ತಿದ್ದ ಅಕ್ರೂರನು ಗೋಕುಲವನ್ನು ತಲುಪಿ, ಶ್ರೀಕೃಷ್ಣನ ಧ್ಯಾನವನ್ನೇ ಮಾಡುತ್ತಾ ರಥದಿಂದ ಕೆಳಗಿಳಿದನು. ಶ್ರೀಮದ್ಭಾಗವತದ ದಶಮ ಸ್ಕಂಧದಲ್ಲಿ ಬರುವ ಅಕ್ರೂರನ ಸ್ತುತಿಯೇ ಈ ಮೇಲಿನ ಶ್ಲೋಕಗಳಿಗೆ ಮೂಲ.

ನವನೀತ ಮುಖ್ಯೈರುಪಾಯನೈರಥ ನಂದ ಪ್ರಮುಖ ಪ್ರಕಲ್ಪಿತೈ:।
ಉಚಿತಾಮಭಿನಂದ್ಯ ಸತ್ಕ್ರಿಯಾ ಮಭಿತಸ್ತಾನ್ ಅಗವೇಷಯತ್ ಪ್ರಭುಂ ॥೫೦॥

ಮತ್ತೆ ನಂದರೇ ಮೊದಲಾದ ಗೋಪರು ಅರ್ಪಣೆ ಮಾಡಿದ ಬೆಣ್ಣೆ ಮೊದಲಾದ ಉಪಹಾರಗಳನ್ನು ಹೊಂದಿ ತಕ್ಕ ಮರ್ಯಾದೆಯನ್ನು ಸ್ವೀಕರಿಸಿ, ಅಕ್ರೂರನು, ಪ್ರಭುವಾದ ಶ್ರೀಕೃಷ್ಣನನ್ನು ಕಾಣಲು ಅಲ್ಲಿ ಇಲ್ಲಿ ಸುತ್ತೆಲ್ಲಾ ಹುಡುಕಾಡಿದನು. (ಶ್ರೀಕೃಷ್ಣನ ಬಗ್ಗೆ ಕೇಳಿದನು).

ಗೋಕುಲದಲ್ಲಿ ಬಂದಿಳಿದ ಅಕ್ರೂರನನ್ನು ಕಂಡು ನಂದಗೋಪನು ಮೊದಲಾದ ಹಿರಿಯರು ಅವನನ್ನು ಆದರದಿಂದ ಬರಮಾಡಿಕೊಂಡು ಅವನಿಗೆ ಸತ್ಕಾರಗಳನ್ನು ಮಾಡಿದರು. ತಮ್ಮಲ್ಲಿ ಯಥೇಚ್ಛವಾಗಿ ಇರುವ ಬೆಣ್ಣೆ ಹಾಲು ಮುಂತಾದುವನ್ನು ಗೌರವದಿಂದ ಅರ್ಪಿಸಿದರು. ಅವೆಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸಿದ ಅಕ್ರೂರನು, ತಾನು ಬಂದಿದ್ದ ಮುಖ್ಯ ಉದ್ದೇಶದ ಸಾಧನೆಗಾಗಿ ಶ್ರೀಕೃಷ್ಣ- ಬಲರಾಮರ ಬಗ್ಗೆ ವಿಚಾರಿಸಿ, ಅವರನ್ನು ಕಾಣಲಿಲ್ಲವಲ್ಲಾ ಎಂದು ಕೇಳಿದನು.

ಸ ದದರ್ಶ ಗವಾಮನುಪ್ಲವಂ ಮುದಿತಂ ಕೇಶಿ ವಧೇನ ಕೇಶವಂ।
ಗತಿಮ ಪ್ರತಿಘಾದ್ವಯಾಯಿನಾಂ ಗರುಡಚ್ಛತ್ರ, ನಿವಾರಿತಾ ತಪಂ ॥೫೧॥

ಕೇಶಿ ಎಂಬ ಕುದುರೆಯನ್ನು ಕೊಂದು ಬರುವಾಗ, ಗರುಡನು ಕೊಡೆಯಾಗಿ, ಬಿಸಿಲನ್ನು ಮರೆ ಮಾಡಿ ಬಂದಾಗ, ಕರುಗಳ ಹಿಂದೆ ಕುಣಿದಾಡಿಕೊಂಡು ಬರುವ, ತಡೆಯಿಲ್ಲದ ಮಾರ್ಗದಲ್ಲಿ ಸಾಗುವವರಿಂದ ಸ್ತುತಿಸಲ್ಪಡುವ (ಅರ್ಚಿರಾದಿ ಮಾರ್ಗದಲ್ಲಿ) ಶ್ರೀಕೃಷ್ಣನನ್ನು ಅಕ್ರೂರನು ಕಂಡನು.

ಆ ಸಮಯದಲ್ಲಿ ಕೇಶಿ ಎಂಬ ಅಸುರನನ್ನು (ಕುದುರೆ)ಯನ್ನು ಕೊಂದು ಬರುತ್ತಿದ್ದ ಶ್ರೀಕೃಷ್ಣನು ಗೋಪಾಲಕರ ಮಧ್ಯದಲ್ಲಿ ಕುಣಿದಾಡಿಕೊಂಡು ಬರುತ್ತಿದ್ದನು. ಅವನನ್ನು ಮಾರ್ಗದಲ್ಲಿದ್ದ ಎಲ್ಲರೂ ಸ್ತುತಿಸುತ್ತಿದ್ದರು. ಅವನನ್ನು ಕಂಡು ಅಕ್ರೂರನು ಪುಳಕಿತನಾದನು.

ಘನ ಸಂವೃತ ನಾರದ ಸ್ತುತಂ ನಿಗಮಾಘ್ರಾತ ನಿಜಾಂಘ್ರಿ ಸೌರಭಂ।
ತರುಣಾರುಣ ತಾಮ್ರವಾಸಸಂ ಶುಭತಾಪಚ್ಛಿತುಲಾಧರದ್ಯುತಿಂ ॥೫೨॥

ಮೇಘಗಳಲ್ಲಿ ಮರೆಯಾಗಿ, ನಾರದ ಮಹರ್ಷಿಗಳಿಂದ ಸಮಾಧಾನದಿಂದ ಕೇಳಿದ ವೇದಗಳಿಂದ ಹೊಗಳಲ್ಪಡುವವನೂ, ವೇದ ಪುರುಷರುಗಳಿಂದ ಪೂಜಿಸಲ್ಪಟ್ಟ ದಿವ್ಯ ಪಾದಾರವಿಂದಗಳನ್ನು ಹೊಂದಿರುವವನೂ, ಬಾಲ ಸೂರ್ಯನಂತೆ ಉತ್ತಮ ವಸ್ತ್ರಧಾರಿಯಾದವನೂ, ಸುಂದರವಾದ ತಮಾಲ ಹೂವಿನ ಕಾಂತಿಯನ್ನು ಹೊಂದಿದವನೂ,

ವೇದ ಪುರುಷನಾದ ನಾರಾಯಣನ ಅವತಾರವಾದ, ಶ್ರೀಕೃಷ್ಣನನ್ನು ಅಕ್ರೂರನು ಕಂಡು ಆನಂದಪಟ್ಟುದನ್ನು ಮುಂದಿನ ಕೆಲವು ಶ್ಲೋಕಗಳಲ್ಲಿ ವರ್ಣಿಸಿದ್ದಾರೆ.

ಅಭಿಲಕ್ಷ್ಯಮನುಶ್ರವೇಕ್ಷಣೈ ರವಿಪರ್ಯಸ್ತ ಹಿತಾಹಿತಕ್ರಮೈಃ।
ಪರಿಭೂಷಿತ ಬರ್ಹ ಭೂಷಣಂ ಕಮಲಾಕೌಸ್ತುಭ ನಿತ್ಯಭೂಷಿತಂ ॥೫೪॥

ಒಳ್ಳೆಯದು, ಕೆಟ್ಟದ್ದು ಇವುಗಳಿಂದ ವಿಚಲಿತರಾಗದವರಾಗಿ, ವೇದವನ್ನೇ ಶ್ರೀಕೃಷ್ಣನನ್ನಾಗಿ ತಿಳಿದವರಿಂದ, ಕಾಣಲ್ಪಡುವವನೂ, ತಾನೇ ನವಿಲುಗರಿಯಿಂದ ಅಲಂಕಾರ ಮಾಡಿಕೊಂಡಿರುವವನೂ, ಲಕ್ಷ್ಮೀ, ಕೌಸ್ತುಭ ಮುಂತಾದವುಗಳಿಂದ ಯಾವಾಗಲೂ ಭೂಷಿತನಾದವನೂ, ಆದ ಶ್ರೀಕೃಷ್ಣನನ್ನು ಕಂಡನು.

ಅತಿ ಸೂರ್ಯ ಸುಧಾಂಶು ತೇಜಸಂ ಸಮಹಾನೇರುಪಮೇಯಮಾತ್ಮನಾ।
ನಿಬಿಡಾದ್ಭುತ ರಾಶಿಮಕ್ಷಯಂ ನಿಗಮಾನಾಮಪಿ ನಿತ್ಯನೂತನಂ ॥೫೫॥

ಸೂರ್ಯ ಚಂದ್ರರುಗಳಿಗೂ ಮಿಗಿಲಾದ ತೇಜಸ್ಸುಳ್ಳವನೂ, ತನಗೆ ಸಮಾನರಾರೂ ಇಲ್ಲದೆ, ತನಗೆ ತಾನೇ ಉಪಮಾನನಾದವನೂ, ಆಶ್ಚರ್ಯಗಳಿಗೆಲ್ಲಾ ಆಶ್ಚರ್ಯನಾಗಿ ಅಕ್ಷಯನಂತೆ ತೋರುವವನೂ, ವೇದಗಳಿಗೆಲ್ಲಾ ನಿತ್ಯನೂತನವಾಗಿ ತೋರುವ ಶ್ರೀಕೃಷ್ಣನ್ನು ಅಕ್ರೂರನು ದರ್ಶನ ಮಾಡಿದನು.

54, 55ನೇ ಶ್ಲೋಕಗಳ ಅರ್ಥವು ಸರಳವಾಗಿದೆ. ಸರ್ವಸ್ವಾತ್ಪರನಾದ ಶ್ರೀಕೃಷ್ಣನ ಸ್ತೋತ್ರವನ್ನು ಅವನ ಗುಣ ವರ್ಣನವನ್ನೂ ಮಾಡಿದ್ದಾರೆ.

ಉಪವೀಣಾಯತ ಸ್ತಮರ್ಭಕಾನ್ ಉಪಗಾತೃನ್ ಉಪನೃತ್ಯ ತಶ್ಚಸಃ।
ತದವಸ್ಥತ ದರ್ಹ ಭೂಮಿಕಾನ್ ಯಮಿನೋ ಅನನ್ಯಮತಿನ್ ಅಮನ್ಯತ ॥೫೬॥

ಅವನ ಉಸಿರಿನಿಂದ ತೋರುವ ಅಂಗೋಪಾಂಗಳನ್ನುಳ್ಳ ವೇದಗಳೇ ಆ ಸಮಯದಲ್ಲಿ ಸುಂದರವಾದ ಕರುಗಳನ್ನು ಹಿಂಬಾಲಿಸುವ ಹಸುಗಳಾಗಿ ಬಂದು ಶ್ರೀಕೃಷ್ಣನನ್ನು ಅನುಸರಿಸುತ್ತಾ ಇಲ್ಲಿ ಓಡಿಯಾಡುತ್ತಿವೆ ಎಂದು ಅಕ್ರೂರನು ನೆನೆದನು.

"ಸರ್ವೋಪನಿಷದೋ ಗಾವೋ, ದೋಗ್ಧಾ ಗೋಪಾಲನಂದನ ಪಾರ್ಥೋ ವತ್ಸ ಸುಧೀರ್ಭೋಕ್ತಾ ದುಗ್ಧ ಗೀತಾಮೃತಂ" ಎಂಬಂತೆ ಎಲ್ಲಾ ಉಪನಿಷತ್ತುಗಳೆಂಬ ಗೋವುಗಳನ್ನು ಆಟವಾಡಿಸಿಕೊಂಡು ಶ್ರೀಕೃಷ್ಣನು ಇಲ್ಲಿದ್ದಾನೆ ಎಂದು ಅಕ್ರೂರನು ಭಾವಿಸಿದನು.

ಶುಭತರ್ಣಕ ಶೋಭಿತಾಂತಿಕಾಃ ಸವಿಧೇ ತಸ್ಯ ಚ ಧೇನು ವಿಗ್ರಹಾಃ।
ಅನಘಾಂಗ ವತೀರಮನ್ಯತಃ ಶ್ವಸಿತೈರಸ್ಯ ಸಮುತ್ಥಿತಾಃ ಶ್ರುತಿಃ ॥೫೭॥

ಅಲ್ಲಿ ಶ್ರೀಕೃಷ್ಣನೊಡನೆ ಸೇರಿ ವೀಣೆಯನ್ನು ತೆಗೆದುಕೊಂಡು ಗಾನವನ್ನು ಮಾಡುವವರೂ ಶಾರೀರವಾಗಿ ಹಾಡುವವರುಗಳೂ, ಅವನೊಡನೆ ಆಡುವವರುಗಳೂ, ಆದ ಗೋಪಾಲಕರನ್ನು ನೋಡಿ, ಅವರುಗಳನ್ನು ಭಗವಂತನಲ್ಲಿಯೇ ಯಾವಾಗಲೂ ಮನಸ್ಸಿಟ್ಟು ಧ್ಯಾನ ಮಾಡುವ ಯೋಗಿಗಳಂತೆ ತಿಳಿದನು.

ಶ್ರೀಕೃಷ್ಣನೊಡನೆ ಆಟವಾಡುವ ಗೋಪಾಲಕರೆಲ್ಲರನ್ನೂ ನೋಡಿದ ಅಕ್ರೂರನು ಅವರೆಲ್ಲರನ್ನೂ ಸಮಾಧಿ ಸ್ಥಿತಿಗೆ ಹೋಗುವ ಯೋಗಿಗಳಂತೆ ಭಾವಿಸಿ, ಅವರಷ್ಟು ಅದೃಷ್ಟಶಾಲಿಗಳು ಯಾರೂ ಇಲ್ಲವೆಂದು ಭಾವಿಸಿದರು.

ಪ್ರಣುನಾವ ಚ ಭಕ್ತಿಸಂನತಃ ಪ್ರಣಿಧಾನೇನ ವಿನಾ ಸಮೀಕ್ಷಿತಂ।
ಹರಿಮದ್ಭುತ ಗೋಪ ಖೇಲನಂ ಶ್ರುತ ಸರ್ವಾತಿಥಿ ಮಾಗತೋ ಅತಿಥಿಃ ॥೫೮॥

ಅತಿಥಿಯಾಗಿ ಬಂದ ಅಕ್ರೂರನು, ಆಶ್ರಿತರೆಲ್ಲರಿಗೂ, ಅತಿಥಿಯಾಗಿ ಇದ್ದು ಆಶ್ಚರ್ಯವಾದ ಹುಡುಗನಾಗಿ ಆಟವಾಡಿಕೊಂಡಿರುವ, ಯೋಗಾಭ್ಯಾಸವಿಲ್ಲದೆ ಅನಾಯಾಸವಾಗಿ ಕಂಡ ಶ್ರೀಕೃಷ್ಣನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿದನು. ಶ್ರೀಕೃಷ್ಣನನ್ನು ನೋಡಿದೊಡನೆ, ಅವನಿಗೆ ಭಕ್ತಿಯು ಉದ್ರೇಕಗೊಂಡು ಸ್ವಾಮಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.

ದುರಿತ ಗ್ರಹಯೋಗ ದುಃಖಿತಂ ತ್ರಿಗುಣ ಗ್ರಂಥಿ ನಿಬಂಧ ನಿಘ್ನಿತಂ।
ಪತಿತಂ ನಿಜಪಾದ ಪಂಕಜೆ ಪರಿಗೃಹ್ಣೀಷ್ವ ಘೃಣಾನಿಧಾನ ಮಾಂ ॥೫೯॥

ಕರುಣಾನಿಧಿಯೇ! ಪಾಪಿಗಳಾಗಿರುವ ಪಿಶಾಚಿಗಳ ಪ್ರವೇಶದಿಂದ ಬಾಧಿಸಲ್ಪಟ್ಟವನಾಗಿದ್ದೇನೆ. ತ್ರಿಗುಣಗಳಾದ ಮೂಲ ಪ್ರಕೃತಿಯನ್ನು ಜಯಿಸಲಶಕ್ಯವಾದ ಕಟ್ಟುಗಳಿಗೆ ಒಳಪಟ್ಟು ನಿನ್ನ ಪಾದಾರವಿಂದಗಳನ್ನು ಆಶ್ರಯಿಸಿರುವ ನನ್ನನ್ನು ಎತ್ತಿ ಕಾಪಾಡಬೇಕು.

ಮತ್ತೆ ಶ್ರೀಕೃಷ್ಣನನ್ನು ಅಕ್ರೂರನು ಸ್ತೋತ್ರ ಮಾಡುತ್ತಾನೆ. 59ರಿಂದ 73ರ ವರೆಗೆ ಅಕ್ರೂರನು ಶ್ರೀಕೃಷ್ಣನನ್ನು ಅಕ್ರೂರನು ವಿಧವಿಧವಾಗಿ ಸ್ತುತಿಸುತ್ತಾನೆ. ಸಮಸ್ತ ವೇದಾಂತಾರ್ಥಗಳ ಸಾರವನ್ನೂ ಈ ಶ್ಲೋಕಗಳಲ್ಲಿ ಅಡಗಿಸಲಾಗಿದೆ. ಶ್ರೀಮದ್ಭಾಗವತದ ದಶಮ ಸ್ಕಂಧದ 40ನೇ ಅಧ್ಯಾಯದ ಶ್ಲೋಕಗಳು ಇದೇ ಭಾವವನ್ನು ವ್ಯಕ್ತಪಡಿಸುತ್ತದೆ. 1ರಿಂದ 30ರ ವರೆಗಿನ ಶ್ಲೋಕಗಳ ಅರ್ಥಗಳು ಈ ಶ್ಲೋಕಗಳ ವ್ಯಾಖ್ಯಾನದಂತಿದೆ.

ಸ್ವಪದ ಪ್ಲವ ಮಾಶ್ರಿತಾನ್ ಜನಾನ್ ನಯಸೆ ಪಾರ ಮಪಾರ ವೈಭವಃ।
ಅತಿವೇಲ ಮಹೋರ್ಮಿ ಸಂಕುಲೆ ಕಲುಷೋದನ್ವತಿ ಕರ್ಣಧಾರಿತಃ ॥೬೦॥
ರಮಯಾ ಸಹ ರಾಜಹಂಸವತ್ ಪರಮಂ ಧಾಮ ವಿಭೂಷಯನ್ ಭವಾನ್।
ಪ್ರಣಿಧಾನ ವತಾ ಮಪಂಕಿಲೆ ಪದಮೇತ ನ್ನಿದಧಾತಿ ಮಾನಸೆ ॥೬೦॥
ಅತಿರೋಧಿರಸೌ ನಿಧಿಃ ಶ್ರುತೆ ರನಿಮೇಷವ್ರತ ದೇಶಿನಿ ದೃಶೋಃ।
ತನುತೆ ತನುರೀಶ ತಾವಕೀ ಸ್ಮರಣಂ ವಿಸ್ಮರಣಂ ಚ ದುಃಶಕಂ॥ ॥೬೨॥

ಎಲ್ಲರನ್ನೂ ದಡ ಮುಟ್ಟಿಸುವ ವೈಭವ ಹೊಂದಿರುವ ನೀನು ಸಂಸಾರ ಸಮುದ್ರದಲ್ಲಿ ನಾವೆಯನ್ನು ಓಡಿಸುವವನಾಗಿರುವ ನಿನ್ನ ದಿವ್ಯ ಅಡಿ ಎಂಬ ದೋಣಿಯನ್ನು ಹಿಡಿದಿರುವ ಪ್ರಜೆಗಳನ್ನು ಆ ಕಡೆ ದಡ ಸೇರಿಸಬಲ್ಲೆ (ವೈಕುಂಠಕ್ಕೆ ಸೇರಿಸಬಲ್ಲೆ). ಮಹಾಲಕ್ಷ್ಮಿಯೊಡನೆ, ಪರಮ ಪದವನ್ನು ಅಲಂಕರಿಸುವವನೂ, ಆದ ನೀನು ರಾಜಹಂಸದಂತೆ ಪಾಪ ಮಾಡದ ಯೋಗಿಗಳ ಮನಸ್ಸಿನಲ್ಲಿ ನಿನ್ನ ಪಾದಗಳನ್ನು ಇಟ್ಟಿರುತ್ತೀಯೇ. (ರಾಜ ಹಂಸದಂತೆ ಶುದ್ಧವಾಗಿರುವವರ ಮನಸ್ಸಿನಲ್ಲಿ) ನಿಧಿಯಂತೆ ಮರೆಯಾಗಿ ಇದ್ದು, ಯಾರಿಂದಲೂ ಅರಿಯಲಾಗದ ನಿನ್ನ ದಿವ್ಯ ದೇಹವು ಈಗ ಆ ಅದೃಶ್ಯ ರೂಪವನ್ನು ತೊರೆದು ಎಲ್ಲರೂ ನೋಡುವ ಹಾಗೆ ಆಗಿರುವುದರಿಂದ, ಧ್ಯಾನಿಸುವುದಾಗಲೀ, ಮರೆಯುವುದಾಗಲೀ ಎರಡೂ ಅಗತ್ಯವಿಲ್ಲ.

ವ್ಯಪದಿಶ್ಯ ಮುಕುಂದ ದೇವಕೀಂ ವಿಹರನ್ಸ್ಯಾ ವಸುದೇವ ಮಂದಿರೆ।
ಜನಿತೋಽಸಿ ನಿಜಾನುಕಂಪಯಾ ಜಗತೀ ರಕ್ಷಣ ಜಾಗರೂಕಧೀಃ॥ ॥೬೩॥
ಭವತೋ ಭವನಾಟಿಕಾಂ ವಿದನ್ ವಿಭವಾಡಂಬರಿಣಾಂ ವಿಡಂಬಿನಿಂ।
ಅನಪಾಯ ಪದಾದಿರೋಹಣಾದಪ ವೃತ್ತೋ ನ ಪುನರ್ನಿವರ್ತತೆ॥ ॥೬೪॥

ದೇವಕಿಯೆಂಬ ಹೆಸರು ಪಡೆದು ನಿಜವಾಗಿಯೂ ವಸುದೇವನ ಗೃಹದಲ್ಲಿ ವಾಸಿಸುವುದು ನಿನ್ನ ಕೃಪೆಯಷ್ಟೆ. ಬೇರೆ ಸ್ತ್ರೀಯಲ್ಲ. ನೀನು ಭೂಮಿಯನ್ನು ಕಾಪಾಡಲು ಇಚ್ಛಿಸಿದ್ದರಿಂದ ನಿನ್ನ ಕರುಣೆಯೇ ನಿನ್ನನ್ನು ತೋರಿಸಿಕೊಟ್ಟಿತು (ನೀನಾಗಿಯೇ ಅವತಾರ ಮಾಡಿದ್ದೀಯೆ. ದೇವಕಿ ಒಂದು ವ್ಯಾಜ (ನೆಪ) ಮಾತ್ರ). ತಮಗೆ ಐಶ್ವರ್ಯವು ಇರುವುದಾಗಿಯೂ, ಅಹಂಕಾರವುಳ್ಳ ಜಗತ್ತಿನ ಜನರಿಗೆ ಪರಿಹಾಸ ಮಾಡಲು ಅವರು ಸಂಸಾರ ನಾಟ್ಯಗಳನ್ನು ನೀನು (ಅವತಾರಗಳನ್ನು) ಮಾಡುವುದು, ಅರಿತಲ್ಲಿ ನೀನು ವಾಸಿಸುವ ಪರಮ ಪದವನ್ನು ಹೊಂದುವುದರಿಂದ ಅವರು ಮತ್ತೆ ಭೂಮಿಗೆ ಬರಲು ಇಚ್ಛಿಸುವುದಿಲ್ಲ.

ಸುಧಿಯಸ್ತವ ಗೋಪಭೂಮಿಕಾಂ ಸುಭಗಾಂ ಕೌತುಕ ಸೂತಿಕಾಂಧಿಯಾಂ।
ಅನುವಿದ್ಯ ಗತಾಗ್ರ್ಯಭೂಮಿಕಾ ಮಧಿವಿಂದೇಯುರನಶ್ವರೀಂ ಶ್ರಿಯಂ ॥೬೫॥
ದುರಿತಾನಿ ಭಜಂತಿ ಸಂಕ್ಷಯಂ ತಪನೇನೇವ ತಮಾಂಸಿ ದೀವ್ಯತಾ।
ಹೃದಯಾನಿ ಚ ಯೋಗಿನಾಂ ತ್ವಯಾ ಕುಮುದಾನೀವ ವಿಕಾಸಮಿಂದುನಾ ॥೬೬॥
ಗುಣತಶ್ಚ ವಿಭೂತಿ ತಶ್ಚ ತೆ ಕ್ವಚಿದಂಶೋಽಪಿ ಸಮಾಧಿಕತ್ಯಜಃ।
ಉಪಮಾನ ಕಲಾ ವಿಕಲ್ಪಿತೈರುಪಲಕ್ಷ್ಯೇತ ಜಗತ್ಪ್ರದಾನತಾ ॥೬೭॥

ಮನಸ್ಸಿಗೆ ಸಂತೋಷ ತರುವ, ನಿನ್ನ ಗೋಪಾಲ ವೇಷವನ್ನು ಕಂಡ ಬುದ್ಧಿವಂತರು, ಶ್ರೇಷ್ಠವಾದ ಪರಮಪದವೆಂಬ ಸ್ಥಳದಲ್ಲಿ ಮಾಡುವ ಕೈಂಕರ್ಯ ಸಾಮ್ರಾಜ್ಯವನ್ನು ಸಹ ಉಪೇಕ್ಷಿಸಿ ಬಿಡುತ್ತಾರೆ. (ನಿನ್ನ ರೂಪವು ಅಷ್ಟು ಆಕರ್ಷಕವಾಗಿದೆ ಎಂದರ್ಥ).

ಯೋಗಿಗಳ ಎರಡು ಬಗೆಯಾದ ಪಾಪಗಳೂ, ಇತರರ ಪಾಪಗಳು ಕತ್ತಲೆಯು ಸೂರ್ಯನಂತೆ ಹೇಗೋ ಹಾಗೆ ನಿನ್ನಿಂದ ನಾಶವಾಗುವುವು. ಚಂದ್ರನಿಂದ ಅಂಬರ ಹೂವುಗಳಂತೆ ಯೋಗಿಗಳ ಹೃದಯಗಳು ನಿನ್ನಿಂದ ಅರಳುತ್ತವೆ. ಗುಣಗಳಲ್ಲಿಯೋ, ವೈಭವಗಳಲ್ಲಿಯೋ, ಯಾವುದಾದರೂ ಒಂದು ವಿಧದಲ್ಲಿಯೂ, ಸಮಾನರಿಲ್ಲದ ನಿನಗೆ ಉಪಮಾನಗಳನ್ನು ಹುಡುಕುವುದರಲ್ಲಿ ನಿರತರಾದವರಿಂದಲೂ ನಿನಗೆ ನೀನೇ ಸಮಾನನೆಂದು ಹೇಳಲ್ಪಟ್ಟಿದೆ.

ಮಹಿಮಾರ್ಣವ ವರ್ಣನೋದ್ಯತಾಃ ಪರಿಮಾತುಂ ಗುಣಮೇಕಮಕ್ಷಮಾಃ।
ತ್ರಪಯೇವ ಭಜಂತ್ಯ ಸೀಮನಿ ತ್ವಯಿ ವಾಚಂ ಯಮತಾ ಮನುಶ್ರವಾಃ ॥೬೮॥

ನಿನ್ನ ಮಹಿಮೆಯ ಸಮುದ್ರವನ್ನು ಹೇಳಲು ಪ್ರಯತ್ನಿಸುವ ವೇದಗಳು ಒಂದು ಗುಣವನ್ನೂ ಕೂಡ ಸರಿಯಾಗಿ ಹೇಳಲು ಸಾಧ್ಯವಿಲ್ಲದೆ ಎಣೆಯಿಲ್ಲದ ನಿನ್ನನ್ನು ವರ್ಣಿಸಲು ನಾಚಿಕೆ ಹೊಂದಿದಂತೆ ಆಗಿಹೋಗಿವೆ.

ತವ ವಿಶ್ವವಿದೋ ವದಾಮಿ ಕಿಂ ಜಗದೇಕಾಧಿಪತೇ ರ್ದಿಶಾಮಿ ಕಿಂ।
ಕೃಪಣಃ ಪರಿಪೂರ್ಣ ಸಂಪದಃ ಕಮಿವಾಂಶಂ ಪರಿಪೂರಯಾಮ್ಯಹಂ ॥೬೯॥
ಪ್ರಕೃತೇ ಕಿಮನೇನ ತತ್ ಪ್ರಭೋ ಭವದಾವಿರ್ಭವನಸ್ಥಲೀಂ ಪುನಃ।
ಪದಪದ್ಮರಜಃ ಪವಿತ್ರಿತಾಂ ವಿಧಧಾನೋ ಜಹಿ ನಾಥ ವಿದ್ವಿಷಃ ॥೭೦॥

ಎಲ್ಲವನ್ನೂ ತಿಳಿದ ನಿನಗೆ ನಾನು ಹೇಳುವುದೇನಿದೆ ? ಜಗತ್ತಿಗೆಲ್ಲಾ ಪ್ರಧಾನ ಶ್ರೇಷ್ಠಿಯಾಗಿರುವ ನಿನಗೆ ನಾನು ಅರ್ಪಣ ಮಾಡುವುದೇನಿದೆ? ಎಲ್ಲಾ ಸಂಪತ್ತನ್ನು ಹೊಂದಿರುವ ನಿನ್ನನ್ನು ನಾನು ಯಾವ ವಸ್ತುವನ್ನು ಕೊಂಡು ಪೂಜಿಸಲಿ?

ಈವಾಗ, ಈ ವಿಚಾರವು ಏತಕ್ಕೆ ? ಹೇ ಮಹಾಪ್ರಭೋ! ನಾಥಾ!! ನೀನು ತೋರಿರುವ ಕ್ಷೇತ್ರವಾದ ಮಥುರೆಯನ್ನು ನಿನ್ನ ದಿವ್ಯ ಪಾದಾರವಿಂದ ಧೂಳಿಯಿಂದ ಪರಿಶುದ್ಧ ಮಾಡಿ ಹಗೆಗಳನ್ನು ನಿರ್ಮೂಲನ ಮಾಡು.

ಬಹುಶಾಖಾ ವಿಜೃಂಬಣೋ ಮಹಾನ್ ಅವದಾತೇನ ಸುಗಂಧಿನಾದ್ಯ ನಃ।
ಯಶಸಾ ಭವತು ಪ್ರಸೂನವಾನ್ ಯದು ಸಂತಾನ ಮಹೀರುಹಸ್ತವ ॥೭೦॥
ತ್ವರತೇ ರಿಪುರಾಗತೌ ತವ ಸ್ವಯ ಮೇವಾವಸರಂ ಸಮರ್ಪಯನ್।
ನತ ರಕ್ಷಣ ಕಿಂ ವದಂತ್ಯಸೌ ನ ವಿಲೋಪಂ ಭುವಿಯಾತು ತಾವಕೀ ॥೭೧॥

ಬಲಶಾಲಿಗಳಾಗಿ ಹುಟ್ಟಿ, ಬೆಳೆದು, ಬರುವ ನಮ್ಮ ಯದುವಂಶವೆಂಬ ಕಲ್ಪವೃಕ್ಷವಾದುದು ನಿರ್ಮಲವಾಗಿ ಇರುವ ನಿನ್ನ ಸ್ತೋತ್ರವೆಂಬ ಪುಷ್ಪದಿಂದ ಕೂಡಿದ್ದಾಗಿ ಇರಬೇಕು.

ಹಗೆಯಾದ ಕಂಸನು ತಾನೇ ತನ್ನ ನಾಶಕ್ಕೆ ದಾರಿಮಾಡಿಕೊಂಡವನಾಗಿ, ನಿನ್ನ ಬರುವಿಕೆಯಲ್ಲಿ ಆಸಕ್ತ ಹೊಂದಿದ್ದಾನೆ. ನಮಸ್ಕರಿಸಿದವರನ್ನು ಕಾಪಾಡುವ ನಿನ್ನ ಪ್ರಸಿದ್ಧಿಯಾದುದು ಮೇಲು ಲೋಕದಲ್ಲೂ ಭೂಲೋಕದಲ್ಲೂ ಕೊರೆಯಿಲ್ಲದೆ ಇರಬೇಕು.

ಕಂಸನು ನಿಮ್ಮನ್ನು ಕರೆತರಲು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಇದರಿಂದಾಗಿ ತನ್ನ ಮೃತ್ಯುವನ್ನು ತಾನೇ ಆಹ್ವಾನಿಸಿದ್ದಾನೆ. ಅವನು ನಿನ್ನ ಮಹಿಮೆಯನ್ನು ಅರಿತವನಾಗಿಲ್ಲ. ಆದ್ದರಿಂದಲೇ ಅವನಿಗೆ ಈ ವಿಪರೀತ ಬುದ್ಧಿ ಪ್ರಾಪ್ತವಾಗಿದೆ. 'ವಿನಾಶಕಾಲೇ ವಿಪರೀತ ಬುದ್ಧಿಃ' ಎನ್ನುವಂತೆ ಅವನಿಗೆ ವಿನಾಶಕಾಲ ಪ್ರಾಪ್ತವಾಗಿದೆ.

ಸ್ವಯಮೇವ ಸಮೇಯುಷಾಂ ವಧೆ ವಿಮತಾನಾಂ ಕ್ಷಿತಿಭಾರ ಜನ್ಮನಾಂ।
ಮೃಗಯಾಮಿವ ಭಾವಯಂತ್ಯಸೌ ಮಹತೀ ಸಂಪದುಪಸ್ಥಿತಾಽದ್ಯತೆ ॥೭೩॥
ಶತಕೋಟಿ ಸಹಸ್ರ ಸಾರವಾನ್ ಮಥನಂ ಪ್ರಾಪ್ಸ್ಯಸಿ ಮಾತುಲಸ್ತ್ವಯಾ ।
ವ್ಯಸನಂ ವಿಪದಪ್ಯನೇಹಸಾ ವಿನಿಪಾತಶ್ಚ ನ ಕಸ್ಯ ಕರ್ಮಿಣಃ ॥೭೪॥

ಭೂಮಿಗೆ ಭಾರವಾಗಿ ಹುಟ್ಟಿ ತಾವೇ ತಮ್ಮ ಸಾವಿಗೆ ಕಾರಣರಾಗುವ ಮೃಗಗಳ ವಿಷಯವಾದ ಬೇಟೆಯು ನಡೆಯಲೆಂದು ಮದಹೈಶ್ವರ್ಯವು ಈವಾಗ ನಿನ್ನನ್ನು ಅಪೇಕ್ಷಿಸುತ್ತಿದೆ.

ನಿನ್ನಿಂದ ಕಂಸನ ಬೇಟೆಯು ಆಗಬೇಕಾಗಿದೆ. ಕಾಡಿನಲ್ಲಿ ಕೆಲವು ಮೃಗಗಳು, ತಮ್ಮನ್ನು ಬೇಟೆಯಾಡುವ ದುಷ್ಟ ಪ್ರಾಣಿಗಳು ತಾವಿರುವಲ್ಲಿ ಬರುತ್ತವೆಂದು ತಿಳಿದೂ, ಅವುಗಳ ಬಾಯಿಗೆ ಸಿಕ್ಕಿಹಾಕಿಕೊಳ್ಳುತ್ತವೆ. ಅದೇ ರೀತಿ ಕಂಸನೂ ಕೂಡ, ನಿನ್ನನ್ನು ಮಧುರೆಯು ಎದುರು ನೋಡುತ್ತಿದೆ. ದಯಮಾಡಿ ಬಂದು ಕಂಸನನ್ನು ನಿಗ್ರಹಿಸು.

ಸಾವಿರ ವಜ್ರಾಯುಧಗಳಿಗೆ ಸಮಾನವಾದ ಶಸ್ತ್ರಗಳನ್ನು ಹೊಂದಿರುವ ನಿನ್ನ ಮಾವನಾದ ಕಂಸನು ಖಂಡಿತ ಮರಣಿಸುತ್ತಾನೆ. ಅಕ್ರಮದಲ್ಲಿ ಮುಗಿಯುವ ಉದ್ದೇಶವಿಟ್ಟು ಆಪತ್ತು, ವಿನಾಶ, ಪಾಪವನ್ನು ಮಾಡಿದವನಿಗೆ ಕಾಲದಲ್ಲಿ ಸಾವು ಬರದೇ ಇರುತ್ತದೆಯೇ?

ನಿನ್ನಿಂದ ಕಂಸನ ಸಾವು ನಿಶ್ಚಯ. ''ಶುಭಕೃತ್ ಶುಭ ಮಾಪ್ನೋತಿ ಪಾಪಕೃತ್ ಪಾಪ ಮಶ್ನುತೇ'' ಎಂಬಂತೆ ಪಾಪ ಮಾಡಿದವರು ಖಂಡಿತ ಅದರ ಫಲ ಅನುಭವಿಸಿಯೇ ತೀರುತ್ತಾರೆ. ಕಂಸನು ಪಾಪ ಮಾಡಿದ್ದಾನೆ. ಅದರ ಫಲವನ್ನು ಅವನು ಅನುಭವಿಸುತ್ತಾನೆ. ನೀನು ನಿಮಿತ್ತ ಮಾತ್ರ.

ಅಭಿ ಸಂಹಿತ ಮೌಗ್ರಸೇನಿನಾ ಕಥಿತಂ ಚ ಕ್ರಮಶೋ ವ್ಯಜಿಜ್ಞಪತ್।
ಕುಲಜಃ ಕುಟಿಲಾಶಯೋಂಜಿತಃ ಕುಶಲಂ ಪೃಷ್ಟವತೆ ಮದುದ್ವಿಷೆ ॥೭೫॥

ಮಧುರೆಯ ಕ್ಷೇಮವನ್ನು ವಿಚಾರಿಸುವ ಮಧುಸೂದನನ ಬಳಿ ಅಕ್ರೂರನು ಮನಸ್ಸಿನಲ್ಲಿ ದೋಷ ಯಾವುದೂ ಇಲ್ಲದೆ ಕುಲದ ಉದ್ಧಾರಕ್ಕಾಗಿ, ಕಂಸನು ತಾನು ಚಿಂತಿಸುತ್ತಿರುವುದನ್ನು (ದುಷ್ಟ ಚಿಂತನೆಯನ್ನು) ನೇರವಾಗಿ ವಿಜ್ಞಾಪನೆ ಮಾಡಿದನು.

ಈ ರೀತಿ ದುಷ್ಟ ಕಂಸನ ಉದ್ದೇಶವನ್ನು ಅಕ್ರೂರನು ಕೃಷ್ಣನ ಬಳಿ ನೇರವಾಗಿ ವಿಜ್ಞಾಪಿಸಿ ಅವನು ಮಧುರೆಗೆ ಹೊರಡಲು ತ್ವರೆ ಪಡಿಸಿದನು. ಶ್ರೀಕೃಷ್ಣನ ಆಗಮನದಿಂದ ಮಧುರೆಗೆ ಕ್ಷೇಮ ಉಂಟಾಗುತ್ತದೆ ಎಂಬ ಅಂಶವನ್ನು ಒತ್ತಿ ಹೇಳಿ ಇದರಿಂದ ಶ್ರೀಕೃಷ್ಣನ ಮಾತಾ ಪಿತೃಗಳಾದ ದೇವಕಿ ವಸುದೇವರು ಸಂತೋಷಿಸುತ್ತಾರೆಂದೂ ತಿಳಿಸಿದನು.

ಅಪರೇ ದ್ಯುರಶೇಷತೋ ನಯನ್ ಸಹಸಾ ಗೋಪಗಣಾನ್ ಸ ಯಾದವಃ।
ಸ್ಥಿತ ಮಧ್ವನಿ ರಾಮಕೇಶವೌ ರಥಮಾರೋಪಯ ದಗ್ರ್ಯರಂಹಸಂ॥ ॥೭೪॥

ಯದು ವಂಶದವನಾದ ಅಕ್ರೂರನು ಪ್ರತ್ಯೇಕವಾಗಿ ಗೋಪರುಗಳನ್ನೆಲ್ಲಾ ಮಧುರೆಗೆ ಆಹ್ವಾನಿಸಿ, ಮತ್ತೆ ಮರಳಿ ಶೀಘ್ರವಾಗಿ ಮಧುರೆಗೆ ಹೋಗಲು ದಾರಿಯಲ್ಲಿ ಸಿದ್ಧವಾಗಿ ನಿಂತಿರುವ ರಥದಲ್ಲಿ ಬಲರಾಮ ಕೃಷ್ಣರನ್ನು ಕುಳ್ಳಿರಿಸಿಕೊಂಡನು.

ನಂದ ಗೋಪನು ಕೃಷ್ಣ ಬಲರಾಮರನ್ನು ಮಧುರೆಗೆ ಕರೆದೊಯ್ಯಲು ಅನುಮತಿ ನೀಡಿದ ನಂತರ, ಅಕ್ರೂರನು ರಥವನ್ನು ಸಿದ್ಧಗೊಳಿಸಿ, ನಂತರ ಎಲ್ಲಾ ಗೋಪ ನಾಯಕರುಗಳನ್ನೂ ಪ್ರತ್ಯೇಕವಾಗಿ ಭೇಟಿ ಮಾಡಿ ಎಲ್ಲರನ್ನೂ ಮಧುರೆಗೆ ಬರಬೇಕೆಂದು ಆಹ್ವಾನಿಸಿ, ರಾಮ ಕೃಷ್ಣ ರೊಡನೆ ರಥವನ್ನು ಏರಿದನು.



ವ್ರಜತೋರಥ ವಲ್ಲವಸ್ತ್ರಿಯೋ ಬಲಭದ್ರಸ್ಯ ಜನಾರ್ದನಸ್ಯ ಚ।
ಅನುದುದ್ರುವರಾಶು ವರ್ತನೀಂ ಕುರರೀ ಕೂಜಿತ ಸೂಚಕ ಸ್ವನಾಃ ॥೭೭॥

ಆ ನಂತರ ಗೋಪಸ್ತ್ರೀಯರು ಮಧುರೆಗೆ ಹೊರಟಿರುವ ರಾಮಕೃಷ್ಣರ ರಥವು ಬರುವ ದಾರಿಯಲ್ಲಿ ದುಃಖತಪ್ತರಾಗಿ ಅಳುವವರಾಗಿ ಆ ರಥದ ಹಿಂದೆ ಓಡಿ ಬಂದರು.

ಶ್ರೀಕೃಷ್ಣನು ಗೋಕುಲವನ್ನು ಬಿಟ್ಟು ಮಧುರೆಗೆ ಹೋಗುವುದನ್ನು ತಿಳಿದ ಗೋಪಸ್ತ್ರೀಯರ ದುಃಖ ದುಮ್ಮಾನಗಳು ಹೇಳತೀರದು. ಆ ರಥುವ ಹೋಗುತ್ತಿದ್ದ ದಾರಿಯಲ್ಲಿ ರಥದ ಹಿಂದೆ ಓಡಿ ಬರುತ್ತಾ ತಮ್ಮ ಅಳಲನ್ನೆಲ್ಲಾ ಹೊರಗೆಡಹತೊಡಗಿದರು. ಅವರು ಹೀಗೆ ಶ್ರೀಕೃಷ್ಣನು ಯಾವ ಸುಳಿವೂ ಕೊಡದೆ ತಮ್ಮನ್ನು ಬಿಟ್ಟು ಹೋಗುವನೆಂದು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ. ಅವರಿಗೆ ಆದ ದುಃಖ ಸಹಜವೇ ಸರಿ.

ವ್ಯಲಪನ್ನಿತಿ ಭಾಷ್ಪಗದ್ಗದಂ ವಿರಹಾರಂಭ ವಿಷಾದ ವಿಹ್ವಲಾಃ।
ವಲಯೈಃ ಪ್ರಿಯ ವರ್ತ್ಮಪಾತಿಭಿಃ ಕ್ಷತ ಪುಷ್ಪಾ ಇವ ಘರ್ಮವೀರುಧಃ ॥೭೮॥

ಅವರುಗಳ ಪ್ರೇಮಿಯು ಹೋಗುವ ಮಾರ್ಗದಲ್ಲಿ ಅವರು ತೊಟ್ಟಿದ್ದ ಬಳೆಗಳೆಲ್ಲಾ ಕಳಚಿ ಬೀಳುವ ಹಾಗೆ ಓಡುವವರಾಗಿ, ಹೂವುಗಳು ಎಲ್ಲವೂ ಉದುರುತ್ತಿದ್ದ ಕಾಲದಲ್ಲಿ ಸ್ತಂಭೀಭೂತರಾಗಿ ಅವನನ್ನು ಬಿಟ್ಟು ಹೊಸದಾಗಿ ಅಗಲುವುದರಿಂದ, ಗದ್ಗದ ಸ್ವರವುಳ್ಳವ ರಾಗಿ, ಕಣ್ಣೀರು ಸುರಿಸುತ್ತಾ ವಿಲಪಿಸತೊಡಗಿದರು.

ಅವರೆಲ್ಲರ ಪ್ರಿಯಕರನಾದ ಶ್ರೀಕೃಷ್ಣನು ಮಧುರೆಗೆ ಹೋಗುತ್ತಿರುವ ಮಾರ್ಗದಲ್ಲಿ ಓಡೋಡಿ ಬರುತ್ತಿದ್ದಾಗ, ಅವರ ಓಟದ ರಭಸಕ್ಕೆ ಅವರು ತೊಟ್ಟಿದ್ದ ಬಳೆಗಳೆಲ್ಲಾ ಕಳಚಿ ಬಿದ್ದು, ಮುಡಿದಿದ್ದ ಹೂವುಗಳೆಲ್ಲಾ ಉದುರಿ ಹೋದವು. ಕಣ್ಣೀರು ಸುರಿಸುತ್ತಾ ಶ್ರೀಕೃಷ್ಣನನ್ನು ನೆನೆಯುತ್ತಾ ಈ ರೀತಿ ದುಃಖಿಸತೊಡಗಿದರು.

ಅಪಯಾತಿ ಸಹಾಗ್ರ ಜನ್ಮನಾ ಸಹಸಾ ನಂದ ಸುತೋ ವಿಹಾಯನಃ।
ಅನುಯಾಮ ನಿವಾರಯಾಮವಾ ಕಥಮಸ್ಮಾಭಿ ರುದಾಸ್ಯತೆ ಮುಧಾ ॥೭೯॥

ನಂದಕುಮಾರನು ನಮ್ಮನ್ನು ಬಿಟ್ಟು ಅಧಿಕ ಉತ್ಸಾಹದಿಂದ ಬೇರೆಡೆಗೆ ಹೋಗುತ್ತಿದ್ದಾನೆ. ಅವನನ್ನು ನಾವೂ ಹಿಂಬಾಲಿಸೋಣ. ಇಲ್ಲದಿದ್ದಲ್ಲಿ ಅವನನ್ನು ಹಿಂತಿರುಗಿಸೋಣ. ನಾವು ಅವನಿಲ್ಲದೆ ಹೇಗೆ ಜೀವಿಸಬಲ್ಲೆವು.

ನಂದಕುಮಾರನಾದ ಶ್ರೀಕೃಷ್ಣನು ನಮ್ಮನ್ನು ಬಿಟ್ಟು ಹೊರಟು ಹೋದರೆ ನಾವು ಜೀವಿಸಲು ಸಾಧ್ಯವೇ? ನಾವು ಸಹ ಅವನ ಹಿಂದೆಯೇ ಹೋಗಿ ಬಿಡೋಣ.

ಗೋಪಿಯರ ಭಾವವನ್ನು ಶ್ರೀಮದ್ಭಾಗವತದಲ್ಲಿ ಹೀಗೆ ವರ್ಣಿಸಲಾಗಿದೆ. "ಶ್ರೀಕೃಷ್ಣನು ಮಥುರೆಗೆ ಹೋಗುವನೆಂಬ ಮಾತನ್ನು ಕೇಳುತ್ತಲೇ ಗೋಪಿಯರು ಪರಿತಾಪದಿಂದ ನಿಟ್ಟುಸಿರುಬಿಟ್ಟರು. ಎಲ್ಲರ ಮುಖಕಮಲಗಳು ಬಾಡಿದವು. ಉಟ್ಟಸೀರೆಗಳು ಜಾರಿ ಹೋಗುತ್ತಿದ್ದರೂ, ಕೈಕಡಗಗಳು ಕಳಚಿ ಬೀಳುತ್ತಿದ್ದರೂ, ತುರುಬುಗಳು ಬಿಚ್ಚಿಹೋಗುತ್ತಿದ್ದರೂ ತಿಳಿಯದಷ್ಟು ಪರವಶರಾದರು. ಭಗವಂತನಲ್ಲೇ ನೆಟ್ಟಮನಸ್ಸುಳ್ಳವರಾಗಿ ಅವನನ್ನೇ ಧ್ಯಾನಿಸುತ್ತಾ ಕೆಲವು ಗೋಪಿಯರಿಗೆ ಚಿತ್ತವೃತ್ತಿಯೇ ನಿಂತು ಹೋದಂತಾಗಿ ಸಮಾಧಿಸ್ಥರಾದರು. ಅವರಿಗೆ ತಮ್ಮ ಶರೀರದ ಕುರಿತಾಗಲೀ, ಸಂಸಾರದ ಕುರಿತಾಗಲೀ ಎಚ್ಚರವೇ ಇರಲಿಲ್ಲ".

ಶ್ರುತಿಷು ಜ್ವಲನಂ ವಮತ್ಯ ಸಾವ ದವೀಯೋರಥ ಚಕ್ರ ಚೀತ್ಕೃತಿಃ।
ಧೃತಮೇತ್ಯ ಪತೇಮ ತತ್ಪದೆ ಗುರುಭರ್ತ್ರಾದಿಷು ಮುಕ್ತ ಗೌರವಾಃ ॥೮೦॥

ಅಧಿಕ ದೂರ ಹೋಗಿರದ ಈ ರಥದ ಚಕ್ರದ ಗಾಲಿಯ ಶಬ್ದಗಳು ನಮ್ಮ ಕಿವಿಗಳಲ್ಲಿ ಬೆಂಕಿಯನ್ನು ಕಕ್ಕುತ್ತಿದೆ.

ದೊಡ್ಡವರೆಲ್ಲರೂ, ಗಂಡಂದಿರೆಲ್ಲರೂ ನಾವೂ ಮರ್ಯಾದೆಯನ್ನೆಲ್ಲಾ ಬಿಟ್ಟು ಅವನ ರಥದ ಮುಂದೆ ಬಿದ್ದು ರಥವನ್ನು ನಿಲ್ಲಿಸೋಣ. ಅವನ ಕಾಲಿಗೆ ಬೀಳೋಣ. ಹೇಗಾದರೂ ಮಾಡಿ ಅವನು ಮಧುರೆಗೆ ಹೋಗದಂತೆ ತಡೆಯೋಣ. ಅಗತ್ಯಬಿದ್ದರೆ ಅವನ ರಥದ ಮುಂದೆ ಗೋಕುಲದಲ್ಲಿರುವ ಎಲ್ಲರೂ ಮಲಗಿ ಮುಷ್ಕರ ಹೂಡೋಣ. ಅವನಲ್ಲಿ ಶರಣಾಗತರಾಗಿ ಪ್ರಾರ್ಥಿಸೋಣ. ಇನ್ನೂ ಬಹಳ ದೂರ ಹೋಗಿರಲಾರರು.

ಪ್ರಗುಣತ್ವಮಿವ ವ್ರಜಸ್ತ್ರಿಯ ಶ್ಚಲ ಸಂಬಂಧಿನಿ ನಂದ ನಂದನೆ ।
ಮುದಿರ ಧ್ವನಿತಾಂ ವಿಜಾನತೇ ಶಿಖಿನ ಸ್ತದ್ರಥ ನೇಮಿನಿಸ್ವನೇ ॥೮೧॥

ಗೋಪಸ್ತ್ರೀಗಳಾದ ನಮ್ಮನ್ನು ಈ ರೀತಿ ಅಸ್ಥಿರವಾಗಿ ಸೇರಿ, ಈಗ ಅಗಲುತ್ತಿರುವ ನಂದಕುಮಾರನನ್ನು ಒಳ್ಳೆಯ ಮನಸ್ಸಿನಿಂದ ಕೂಡಿ ಚಿಂತಿಸುತ್ತಿದ್ದ ಹಾಗೆ, ಈ ನವಿಲುಗಳು ಈ ರಥದ ಚಕ್ರಗಳನ್ನು ಮೇಘದ ಚಕ್ರಗಳಂತೆ ತಿಳಿಯುತ್ತಿವೆ. (ವೇಗದಲ್ಲಿ ರಥದ ಚಕ್ರಗಳ ಅಲಗು ಕಾಣುವುದಿಲ್ಲ).

ಭ್ರಾಂತಿ ಹೊಂದಿದ್ದ ಗೋಪೀ ಜನಗಳು ಅಚೇತನಗಳನ್ನೂ ಚೇತನಗಳೆಂದು ತಿಳಿದು, ತಮ್ಮ ವಿರಹ ದುಃಖವನ್ನು ತೋಡಿಕೊಳ್ಳತೊಡಗಿದರು. ರಥದ ಚಕ್ರವು ಜೋರಾಗಿ ತಿರುಗಿದರೆ, ಅದರ ಕಡ್ಡಿಗಳು ಒಂದೇ ಎಂಬಂತೆ ತೋರುತ್ತದೆ. ರಥದ ಗಾಲಿಗಳ ಧ್ವನಿಗೆ ನವಿಲುಗಳೂ ಮೇಘದ ಧ್ವನಿಯೇನೋ ಎಂದು ಸಂತೋಷದಿಂದ ನರ್ತಿಸುತ್ತಿವೆ.

ಅಯ ಮುದ್ಧೃತ ಗೋಕುಲೇಕ್ಷಣಃ ಕಥಮಕ್ರೂರ ಇತಿ ಪ್ರಜಲ್ಪ್ಯತೇ ।
ಅಥವಾ ಭುವನೇಷು ದಾರುಣಾಃ ಪ್ರಥಿತಾಃ ಪುಣ್ಯ ಜನಾ ನಿಶಾಚರಾಃ ॥೮೨॥

ಗೋಕುಲದಲ್ಲಿ ಕಣ್ಣಾಗಿದ್ದವನನ್ನು ಕರೆದುಕೊಂಡು ಹೋಗುತ್ತಿರುವ ಅಕ್ರೂರನೆಂದು ಹೇಗೆ ಕರೆಯಬಹುದು ? ಅಥವಾ ಜಗತ್ತಿನಲ್ಲಿ ಭಯಂಕರವಾಗಿರುವ ರಾಕ್ಷಸರುಗಳು ಪುಣ್ಯ ಜನಗಳೆಂದು ಕರೆಯಲ್ಪಡುವರು.

ಕೃಷ್ಣನು ಗೋಕುಲದ ಕಣ್ಣಾಗಿದ್ದಾನೆ. ಅವನನ್ನು ಕರುಣೆಯಿಲ್ಲದೆ ಕರೆದುಕೊಂಡು ಹೋಗುತ್ತಿರುವ ಅಕ್ರೂರನು ನಿಜವಾಗಿಯೂ ಅಕ್ರೂರನಲ್ಲ. ಅವನು ಕ್ರೂರಿಯೇ! ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೆ ನಮ್ಮಿಂದ ಕೃಷ್ಣನನ್ನು ಅಗಲಿಸುತ್ತಿದ್ದಾನೆ. ಶ್ವಫಲ ನಂದನನಾದ ಈ ಅಕ್ರೂರನು ರಾಕ್ಷಸ ಜಾತಿಗೆ ಸೇರಿದವನಾಗಿದ್ದಾನೆ. ಕೆಲವು ರಾಕ್ಷಸರು ಉತ್ತಮರ ಹೆಸರುಗಳನ್ನು ಹೊಂದಿರುತ್ತಾರೆ. ಅದೇ ರೀತಿ ಇವನೂ ಸಹ.

ಬಡಿಶಾಮಿಷವ ಪ್ರಯುಕ್ತಯಾ ರಿಪುರಕ್ರೂರ ಸಮಾಖ್ಯಯಾಽನ್ವಿತಃ ।
ವಿಭವಂ ಹರತಿ ವ್ರಜೌಕಸಾಂ ಕಿಮಿಹೋಚ್ಯೇತ ವದೇಮ ಕಸ್ಯ ವಾ ॥೮೩॥

ಗಾಳಕ್ಕೆ ಸಿಕ್ಕಿಸಿರುವ ಎರೆ ಹುಳುವಿನಂತೆ ಇವನಲ್ಲಿ ಅಕ್ರೂರನೆಂಬ ಹೆಸರು ಸೇರಿರುವುದರಿಂದ ಗೋಪರುಗಳ ಐಶ್ವರ್ಯವನ್ನೇ ಇವನು ಕೊಳ್ಳೆ ಹೊಡೆಯುತ್ತಿದ್ದಾನೆ. ಏನೆಂದು ಹೇಳೋಣ ? ಯಾರಲ್ಲಿ ಮೊರೆಯಿಡೋಣ?

ಇವನು ನಮ್ಮ ಐಶ್ವರ್ಯವನ್ನೇ ಕೊಳ್ಳೆ ಹೊಡೆದುಕೊಂಡು ಹೋಗುತ್ತಿದ್ದಾನೆ. ಕೃಷ್ಣನಲ್ಲವೇ ನಮ್ಮ ಐಶ್ವರ್ಯ. ಅವನು "ನೀಂಗಾದ ಶೆಲ್ವಂ" ಅಳಿಯದ ಆಶ್ವರ್ಯ. ಗೋಕುಲದ ಭಾಗ್ಯವನ್ನು ಕರೆದೊಯ್ಯುತ್ತಿರುವ ಇವನಿಗೆ ಅಕ್ರೂರನೆಂದು ಯಾರು ಹೆಸರಿಟ್ಟರು?

ಅವತಾರ ವರಾಹ ರೂಪಿಣಾ ಹರಿಣಾ ಭೂಮಿ ರುದಂಚಿತೋ ದಧೇಃ ।
ವಿರಹ ವ್ಯಸನೋ ದಧೇರಿತಃ ಕ ಇವೋದಂಚಯಿತುಂ ಕ್ಷಮೇತ ನಃ ॥೮೪॥

ಹಿಂದೆ ಭಗವಂತನು, ಕೃಪೆಯಿಂದ ವರಾಹನಾಗಿ ಅವತರಿಸಿ, ಭೂಮಿಯನ್ನು ಸಮುದ್ರದಿಂದ ಎತ್ತಿ ಕಾಪಾಡಿದ್ದಾನೆ. ಈಗ ದುಃಖ ಸಮುದ್ರದಲ್ಲಿ ಮುಳುಗಿರುವ ನಮ್ಮನ್ನು ಯಾರು ಕಾಪಾಡಬಲ್ಲರು?

ಹಿಂದೆ ವರಾಹಾವತಾರ ಮಾಡಿದಾಗ, ಭೂಮಿಯನ್ನು ಸಮುದ್ರದಿಂದ ಎತ್ತಿ ಶ್ರೀಕೃಷ್ಣನು ಕಾಪಾಡಿದ್ದನು. ಈಗ ಅವನನ್ನೇ ಕರೆದೊಯ್ಯುತ್ತಿರುವುದರಿಂದ, ದುಃಖ ಸಮುದ್ರದಿಂದ ಕಾಪಾಡಲು ಅವನೇ ಇಲ್ಲವಲ್ಲ? ಇನ್ನು ಯಾರಲ್ಲಿ ನಾವು ಪ್ರಾರ್ಥಿಸುವುದು ? ನಮ್ಮ ಪ್ರಾರ್ಥನೆಯನ್ನು ಲಾಲಿಸುವವರೇ ಇಲ್ಲದೆ ಹೋದನಲ್ಲಾ?

ಚಿರ ಸಂಘಟಿತೋಪಿ ನಃ ಕ್ಷಣಾದನುರಾಗೋ ಬಲಭದ್ರ ಕೃಷ್ಣಯೋಃ।
ಅಪಯಾತ ಮಹಾನದೀ ದ್ವಯೋ ಭವಿತಾ ಶೋಣ ಇವೈಷ ನಿಷ್ಫಲಃ ॥೮೫॥

ಬಲರಾಮನಲ್ಲಿಯೂ, ಶ್ರೀಕೃಷ್ಣನಲ್ಲಿಯೂ, ಬಹುಕಾಲದಿಂದ ಇದ್ದ ನಮ್ಮ ಪ್ರೇಮವಾದುದು, ಗಂಗೆ-ಯಮುನೆ ಎರಡರಲ್ಲಿಯೂ ಸೇರಿ ಇರುವ ಶೋಣಾ ನದಿಯಂತೆ ನಿಷ್ಫಲವಾಗಿದೆ.

ಶೋಣಾ ನದಿ ಎಂಬುದು ಗಂಗೆ, ಯಮುನೆ ಎರಡರಲ್ಲಿಯೂ ಸೇರಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಹಾಗೆಯೂ ಆ ಇಬ್ಬರು ರಾಜ ಕುಮಾರರಲ್ಲಿ ಇಟ್ಟ ನಮ್ಮ ಪ್ರೇಮವು ವ್ಯರ್ಥವಾಗುತ್ತದೆ. ಅವರು ಮಥುರಾ ನಗರಕ್ಕೆ ಒಮ್ಮೆ ಹೋದ ಮೇಲೆ ಅಲ್ಲಿನ ಸ್ತ್ರೀಯರ ಮೋಹಪಾಶದಲ್ಲಿ ಸಿಲುಕಿ, ನಮ್ಮ ಪ್ರೇಮವನ್ನು ಮರೆಯುತ್ತಾನೆ.

ಅವಿಕಲ್ಪಿತ ಬಾಲ್ಯ ಯೌವನಃ ಪ್ರಣಯೋಽಸ್ಮಾಸು ಬಲಾನುಜನ್ಮನಃ।
ವಿಧಿನಾ ವಿಷಮ ಪ್ರವಾಹಿಣಾ ಸಿಕತಾ ಸೇತು ರಿವೈಷ ಭಿದ್ಯತೇ ॥೮೬॥

ಬಾಲ್ಯ, ಯೌವನ ಎಂಬ ದಶೆಗಳಲ್ಲಿ ವ್ಯತ್ಯಾಸವಾಗದ ಒಂದೇ ವಿಧವಾಗಿ ನಮ್ಮಲ್ಲಿ ಬಲರಾಮನ ತಮ್ಮನು ಇಟ್ಟಿದ್ದ ಪ್ರೀತಿಯಾದುದು ವಿಪರೀತವಾಗಿ ಪ್ರವಾಹದಂತಿರುವ ವಿಧಿಯ ಅಣೆಕಟ್ಟಿನಂತೆ ತಡೆಯಲ್ಪಟ್ಟಿದೆ.

ಯಾವ ಕಾಲ, ಘಟ್ಟದಲ್ಲಿಯೂ ನಮಗಾಗಲೀ, ಅವನಿಗಾಗಲೀ ಪರಸ್ಪರ ಪ್ರೇಮದಲ್ಲಿ ಅಡಚಣೆಯಾಗಲೀ, ವ್ಯತ್ಯಾಸವಾಗಲೀ ಇರಲಿಲ್ಲ. ಆದರೆ ಈಗ ವಿಧಿ ಎಂಬುದು ನಮ್ಮ ಈ ಪವಿತ್ರ ಪ್ರೇಮ ಪ್ರವಾಹಕ್ಕೆ ಅಕ್ರೂರನೆಂಬ ಅಣೆಕಟ್ಟನ್ನು ಹಾಕಿ ತಡೆಯೊಡ್ಡಿದೆ. ನಾವು ಮತ್ತೆ ಅವನ ಪ್ರೇಮ ಗಳಿಸಲು ಸಾಧ್ಯವೇ? ವಿಧಿಯು ನಮಗೆ ಪ್ರತಿಕೂಲವಾಗಿದೆ.

ಅಮುನಾ ಶಶಿನೇವ ಕಲ್ಪಿತ ಶ್ಚಿರಮಸ್ಮಾಸು ಶರನ್ನದೀಷ್ವಿವ ।
ಪ್ರಣಯಃ ಪ್ರತಿಭಾಸ ಜೀವಿತಃ ಪ್ರತಿಮಾ ಚಂದ್ರ ಇವ ಪ್ರಲೀಯತೆ ॥೮೭॥

ಚಂದ್ರನಂತಿರುವ ಶ್ರೀಕೃಷ್ಣನಿಂದ ಶರತ್ಕಾಲದಲ್ಲಿ ಓಡುವ ನದಿಗಳಂತಿರುವ ನಮ್ಮ ಬಳಿ ಬೆಳದಿಂಗಳ ಚಂದ್ರನಂತೆ ಉಂಟು ಮಾಡಿದ ಅವನ ಪ್ರೀತಿಯಾದುದು ಹೊರಗೆ ವ್ಯಕ್ತವಾಗದ ಹಾಗೆ ಇರುವುದರಿಂದ, ನಶಿಸಿಹೋಗುತ್ತಿದೆ.

ಅವನಲ್ಲಿ ಇಟ್ಟ ಪ್ರೇಮವು ಹೊರಗೆ ವ್ಯಕ್ತಪಡಿಸುವಂತದ್ದಲ್ಲ. ಅವನನ್ನು ಮನಸ್ಸಿನಲ್ಲಿಯೇ ಇಟ್ಟ ಆನಂದವನ್ನು ಅನುಭವಿಸಿದ್ದೇವೆ. ಈಗ ಅದು ನಶಿಸಿಹೋಗುತ್ತಿದೆ.

ಅಹಮಸ್ಮಿ ತವ ತ್ವಮೇವ ವಾ ಮಮ ದೃಷ್ಟಿಸ್ತ್ವಮಿತಿ ಪ್ರಲೋಭಯನ್।
ವಿಜಹಾತಿ ಸ ಏವ ವಲ್ಲವೀರಲ ಮೇತಾ ವದತಃ ಪರೇಣ ಕಿಂ ॥೮೮॥

ನಾನು ನಿಮಗೇನೇ. ಇಲ್ಲವೇ ನೀನೇ ನಾನು. ನೀನು ನನ್ನ ಕಣ್ಣು ಎಂದೆಲ್ಲಾ ಹೇಳಿ ಮರುಳು ಮಾಡಿದವನು, ಈಗ, ಗೋಪಸ್ತ್ರೀಯರು ಇವರೆಲ್ಲಾ ಎಂದು ನಮ್ಮನ್ನು ಬಿಟ್ಟು ಹೋಗುತ್ತಿದ್ದಾನೆ. ಇಷ್ಟೇ ಸಾಕು, ಇದಕ್ಕೆ ಮೇಲೇನಿದೆ?

ಈಗ ಕೃಷ್ಣನು ನಮ್ಮನ್ನು ಬಿಟ್ಟುಹೋಗಲು ಮುಖ್ಯ ಕಾರಣ ನಾವೆಲ್ಲಾ ಕೀಳುಜಾತಿಯ ಗೋಪಸ್ತ್ರೀಯರು ಎಂಬ ಕಾರಣಕ್ಕಾಗಿ. ಇದುವರೆಗೂ ನಮ್ಮನ್ನೆಲ್ಲಾ ಮರುಳು ಮಾಡಿದ್ದನು. ಆದರೆ ಈಗ ನೋಡಿದರೆ, ನಿಷ್ಕರುಣೆಯಿಂದ ನಮ್ಮನ್ನೆಲ್ಲಾ ಬಿಟ್ಟು ಹೋಗುತ್ತಿದ್ದಾನೆ ! ಅವನು ಮಾಯಾವಿಯಲ್ಲವೇ?

ಅಯಮೇವ ಮತುಲ್ಕದಾಸಿಕಾಃ ಸ್ವಪದೋಪಘ್ನ ಲತಾಃ ಸ್ವಯಂ ಪ್ರಭುಃ।
ಬಹುಮತ್ಯ ಜಹಾತಿ ನಿಸ್ಪೃಹಃ ಕಥಮಾಲೇಖ್ಯಗತಾ ಇವಾದ್ಯ ನಃ ॥೮೯॥

ನಾನು ಬೆಲೆಗೆ ದಾಸನಲ್ಲ, ಪ್ರೀತಿಗೆ ದಾಸನು ಎಂದು ತನ್ನ ಪಾದಾರವಿಂದಗಳನ್ನು ಹಿಡಿದು ಪ್ರಾರ್ಥಿಸುವ ನಮ್ಮನ್ನು ಪ್ರಭುವೇ ತಾನು ಎಂದು ಕೊಂಡಾಡಿದವನು. ಈಗ ಚಿತ್ರದಲ್ಲಿ ಬರೆದಿರುವ ಹಾಗೆ ಆಸೆ ಬಿಟ್ಟು ಹೇಗೆ ತಾನೇ ಇರುತ್ತಾನೆ?

ನಾನು ನಿಜವಾದ ಪ್ರೀತಿಯನ್ನು ಗೌರವಿಸುವವನು, ಎಂದಿಗೂ ನಿಮ್ಮ ಕೈ ಬಿಡುವುದಿಲ್ಲ ಎಂದು ಹೇಳಿದ ಸ್ವಾಮಿಯು ಈಗ ಎಲ್ಲವನ್ನೂ ಮರೆತು ಮಧುರೆಗೆ ಹೊರಟಿದ್ದಾನೆ. ಈಗ ನಮ್ಮನ್ನೆಲ್ಲಾ ಬಿಟ್ಟು ಅವನಿಗೆ ಇರಲು ಸಾಧ್ಯವೇ? ಕೇವಲ ಚಿತ್ರದಲ್ಲಿ ನೋಡಿದ ವಸ್ತುಗಳೊಡನೆ ಒಡನಾಟ ಸಾಧ್ಯವೇ? ಅವನು ನಮ್ಮನ್ನು ನಿರ್ಲಕ್ಷಿಸುತ್ತಾನೆಯೇ? ಚಿತ್ರವನ್ನು ನೋಡಿ ಆಸ್ವಾದಿಸಿದ ಮಾತ್ರಕ್ಕೆ ಆನಂದಪಡಲು ಸಾಧ್ಯವೇ?

ನಿರಪೇಕ್ಷ ಇವೈಷ ನೀಲಯಾ ರಸಿಕಃ ಪಾಲಿಕಯಾ ಸ ರಾಧಯಾ।
ಪೃಥಗತ್ರ ಕಿಮೇತ ದುಚ್ಯತೆ ಕುಹಕಃ ಕಶ್ಚಿದಸೌ ಕುಲಸ್ಯ ನಃ ॥೯೦॥

ಅವನು ಅರಸಿಕನಾದುದರಿಂದಲೇ ನೀಳಾ, ರಾಧಾ, ಪಾಲಿಕಾ ಎಂಬುವರೆಲ್ಲರ ಬಳಿಯೂ ಪ್ರೀತಿ ಇಲ್ಲದವರಂತೆ ಇದ್ದಾನೆ. ಅವರುಗಳು ಬೇಡುವುದನ್ನು ನಡೆಸದವನು ಇವನು. ಪ್ರತ್ಯೇಕವಾಗಿ ಹೆಸರುಗಳನ್ನು ಹೇಳಿ ಏನು ಪ್ರಯೋಜನ? ನಮ್ಮ ಕುಲಕ್ಕೆ ಇವನು ಮಹಾ ವಂಚಕನು.

ಇಲ್ಲಿ (ಗೋಕುಲದಲ್ಲಿ) ಅವನ ನಿಕಟ ಪ್ರೇಯಸಿಯರಾದ, ನೀಳಾ, ರಾಧಾ, ಪಾಲಿಕಾ ಇವರನ್ನೂ ಕರೆದೊಯ್ಯುತ್ತಿಲ್ಲ, ಅವರೊಡನೆ ಆಡಿದ ಆಟಗಳನ್ನೆಲ್ಲಾ ಮರೆತು, ಏನೂ ತಿಳಿಯದವನಂತೆ ಹೋಗುತ್ತಿರುವನಲ್ಲಾ. ಇವನು ನಿಜವಾಗಿಯೂ ನಯವಂಚಕನೇ ಸರಿ. ನಾವು ತಿಳಿಯದೆ ಮೋಸ ಹೋದೆವು. ಈಗ ಚಿಂತಿಸಿ ಫಲವಿಲ್ಲ.

ಅಮೃತಸ್ಯ ವಿಷಸ್ಯ ಚ ಸ್ವಯಂ ಪ್ರಭವ ಸ್ಥಾನ ಮಭೂತ್ ಪಯೋನಿಧಿಃ।
ನಿಯತಂ ತದನೇನ ದರ್ಶಿತಂ ನಿಜ ಸಂಯೋಗ ವಿಯೋಗದಾಯಿನಾಂ ॥೯೧॥

ಇವನು ನಮ್ಮಲ್ಲಿ ಸೇರಿರುವುದರಿಂದಲೇ ನಮಗೆ ಈ ರೀತಿ ಮೋಸ ಮಾಡಿದನು. ಈವಾಗ, ಅಗಲಿಕೆಯನ್ನು ಏರ್ಪಡಿಸಿದ್ದಾನೆ. ಸಮುದ್ರದಲ್ಲಿ ಅಮೃತವು ಹುಟ್ಟಿದರೂ, ಷವೂ ಸಹ ಅಲ್ಲಿಯೇ ಹುಟ್ಟಿತಲ್ಲವೇ ? ಅದು ನಿಜ. ವಿರೋಧ ಸ್ವಭಾವವಿದ್ದರೂ ಎರಡಕ್ಕೂ ಒಂದೇ ಉಗಮ ಸ್ಥಾನವೆಂಬುದು ಈಗ ತಿಳಿಯುತ್ತಿದೆ.

ಇವನು ಹಿಂದೆ ನಮಗೆ ಎಷ್ಟು ಸಂತೋಷವನ್ನುಂಟು ಮಾಡಿದ್ದನೋ ಅಷ್ಟೇ ದುಃಖವನ್ನು ಈಗ ಉಂಟು ಮಾಡುತ್ತಿದ್ದಾನೆ. ಸಮುದ್ರದಲ್ಲಿ ವಿಷ ಮತ್ತು ಅಮೃತ ಒಟ್ಟಿಗೆ ಹುಟ್ಟಿದಂತೆ ಇವನಲ್ಲಿ ವಿರುದ್ಧ ಸ್ವಭಾವಗಳೂ ಒಟ್ಟಿಗೆ ಇವೆ.

ಮುಖ ಚಂದ್ರಿಕಯಾ ಮುಖಾನಿ ನಃ ಕುಮುದಾನೀವ ವಿಕಾಸ ಮಾನಯನ್।
ಕಿತವೋ ಯದುವಾಚ ಸತ್ಯವತ್ ಕ್ವಗತಂ ತತ್ ಕ್ವಚತೇನ ಗಮ್ಯತೇ ॥೯೨॥

ತನ್ನ ಮುಖದ ಬೆಳದಿಂಗಳಿನಿಂದ ನಮ್ಮ ಮುಖಗಳನ್ನು ಅಂಬ ಹೂಗಳಂತೆ (ಕುಮುದ ಹೂಗಳಂತೆ) ಅರಳುವ ಹಾಗೆ ಮಾಡಿದವನು ಸತ್ಯವಾದಿಯಂತೆ ಮಾತಾಡಿದನು. ಆ ಮಾತು ಈಗ ಎಲ್ಲಿ ಹೋಯಿತು? ಈಗ ಎಲ್ಲಿ ಹೋಗಿದ್ದಾನೆ!

ಇವನು ತನ್ನ ಅಮೃತ ತುಂಬಿದ ಮಾತುಗಳಿಂದ ನಮ್ಮನ್ನು ಮರುಳುಗೊಳಿಸಿದನು. ಇವನು ಮಹಾ ಸತ್ಯವಾದಿಯೆಂದು ನಂಬಿದ್ದು ತಪ್ಪಾಯಿತು. ಇವನು ಸುಳ್ಳನೇ ಸರಿ. ಎಲ್ಲಿ ಹೋಯಿತು ಇವನ ಆಶ್ವಾಸನೆಗಳು ? ನಮ್ಮಿಂದ ದೂರವಾಗಿ ಈಗ ಎಲ್ಲಿ ಹೋದನು?

ಯಮುನಾ ಪುಲಿನೇಷು ದೀವ್ಯತಾ ಯದು ತಾನೇನ ವಶೀಕೃತಾ ವಯಂ।
ವಿಫಲ ಪ್ರಣಯ ಪ್ರದಾಯಿನಾ ವಿಧಿನಾ ಹಂತ ವಿಲೋಭಿತಾಸ್ತತಃ ॥೯೩॥

ಯಮುನೆಯ ಮರಳು ದಿಣ್ಣೆಗಳ ಮೇಲೆ ಆಟವಾಡುವಾಗ, ವ್ಯರ್ಥವಾದ ಪ್ರೀತಿಯನ್ನು ತೋರಿ, ನಮ್ಮನ್ನು ವಶಪಡಿಸಿದನಲ್ಲಾ ಅದರಿಂದ ದುರ್ಭಾಗ್ಯದಿಂದ ನಾವೇ ಮೋಸ ಹೋದವು.

ಯಮುನೆಯ ತೀರದಲ್ಲಿ ನಮ್ಮೊಡನೆ ಆಟವಾಡಿದ್ದೆಲ್ಲಾ ಕೇವಲ ನಾಟಕವೆಂಬುದು ಈಗ ಅರಿವಾಗುತ್ತಿದೆ. ನಾವು ಮೂರ್ಖರೇ ಸರಿ. ಅವನನ್ನು ನಂಬಿ ಮೋಸ ಹೋದೆವು.

ವಿಜಹಾತಿ ಸ ಏಷ ಗೋಕುಲಂ ಮಥುರಾ ಮಾದ್ರಿಯತೆ ಮನೋರಮಾಂ।
ಭವಿತವ್ಯತಯಾ ಶುಭಾಶುಭೆ ತದಿಹೈವಂ ಪರಿವರ್ತಿತಾಸ್ಪದೆ ॥೯೪॥

ಅವನೇ ಇದು ಗೊಲ್ಲರ ಕೇರಿ ಎಂದು ಜಾಗ (ಬದಲಾಯಿಸಿ) ಬಿಡುತ್ತಿದ್ದಾನೆ. ಮಧುರೆಯು ಸುಂದರವಾಗಿದೆ ಎಂದು ಅಲ್ಲಿ ಪ್ರೀತಿ ತೋರಿಸುತ್ತಿದ್ದಾನೆ. ಬರಬೇಕಾದ ಸಮಯವಾದ್ದರಿಂದ ಶುಭಾ ಶುಭಗಳು ಈ ಹೊತ್ತು ಬೇರೆ ಬೇರೆಯಾಗಿ ಬರುತ್ತಿವೆ.

ಅವನು ನಮ್ಮನ್ನು ಬಿಟ್ಟು ಮಧುರೆಗೆ ಹೋಗಲು ಮುಖ್ಯ ಕಾರಣ, ಇದು ಗೊಲ್ಲರ ಕೇರಿ ಎಂಬುದಕ್ಕಾಗಿ. ಗೋಕುಲವು ಮಧುರೆಯಷ್ಟು ಸುಂದರವಾಗಿಲ್ಲ? ನಾಗರೀಕವಾಗಿಲ್ಲ? ಅಲ್ಲಿ ಇವನು ಭೋಗ ಪಡಲು ಅನೇಕ ಅವಕಾಶಗಳಿವೆ. ಇಲ್ಲಿ ಯಾವುದೂ ಇಲ್ಲ, ಇಲ್ಲಿ ಸುತ್ತಲೂ ವನಗಳೇ ತುಂಬಿವೆ. ನಗರದ ಆಕರ್ಷಣೆಗಾಗಿ ಅಲ್ಲಿಗೆ ಹೊರಟಿದ್ದಾನೆ.

ಸಹಜಂ ಹರತಾ ಮಹಾನಿಧಿಂ ವಿವಶಾನಾಮಿವ ವೈರಿಣೇವ ನಃ।
ವಿಹಿತಃ ಸುಕೃತೇನ ಕೀದೃಶಾ ಮಧುರಾಯೋಷಿತ ದನುಗ್ರಹೋ ಮಹಾನ್ ॥೯೫॥

ಏನೂ ಮಾಡಲಾಗದೆ, ಪರವಶರಾಗಿದ್ದೇವೆ. ನಮ್ಮ ಸಹಜವಾದ ಮಹಾ ನಿಧಿಯನ್ನು ಶತ್ರುವಾದವನು ಕೊಳ್ಳೆ ಹೊಡೆಯುವಂತೆ ಮಧುರೆ ನಗರಿಯು ಮಹಾ ಪುಣ್ಯವನ್ನು ಮಾಡಿದೆ. ಅಲ್ಲಿರುವ ಸ್ತ್ರೀಯರೆಲ್ಲರೂ ಪರಮಾನುಗ್ರಹ ಹೊಂದಲಿದ್ದಾರೆ.

ಮಧುರೆಯ ಭಾಗ್ಯವೇ ಭಾಗ್ಯವು. ನಮ್ಮ ನಿಧಿಯನ್ನು ಆ ನಗರದ ಜನರು ಕೊಳ್ಳೆ ಹೊಡೆದಿದ್ದಾರೆ. ''ಮಧುರಾ ಭಾಗ್ಯ ಅನನ್ಯ ಭೋಗ್ಯಮೀಡೇ'' ಎಂಬಂತೆ ಮಧುರೆಯ ಭಾಗ್ಯ ಬೇರಾವ ನಗರಿಗೂ ಬಾರದು. ನಾವು ನಮ್ಮ ಭಾಗ್ಯವನ್ನು ಕಳೆದುಕೊಂಡು ಬಿಟ್ಟೆವು. ಮಧುರೆಯ ಜನರು ನಮ್ಮ ವೈರಿಗಳಾದರು.

ಸಹಪಾಂಸು ವಿಹಾರ ಸಂಭೃತಂ ಜಹತಾ ಸ್ನೇಹ ಮನಂಗ ವರ್ಧಿತಂ।
ಅಪಿ ನಾಗರ ಯೌವತಂ ಕ್ಷಣಾದಮುನಾ ಹಂತ ವಿಲೋಭಯಿಷ್ಯತೆ ॥೯೬॥

ಧೂಳಿನ ಮಣ್ಣುಗಳಲ್ಲಿ ಆಟವಾಡುವ ವಯಸ್ಸಿನಿಂದ ಆರಂಭಿಸಿ ಶೇಖರಿಸಲ್ಪಟ್ಟು ಮನ್ಮಥನಿಂದ ಬೆಳೆಸಲ್ಪಟ್ಟ ನಮ್ಮ ಪ್ರೀತಿಯನ್ನು (ತ್ಯಜಿಸು) ಬಿಡುತ್ತಿರುವ ಇವನು ಒಂದಲ್ಲ ಒಂದು ದಿನ ನಗರದ ಹೆಣ್ಣುಮಕ್ಕಳನ್ನೂ ಮೋಸಗೊಳಿಸುತ್ತಾನೆ. ಅಯ್ಯೋ!

ನಮ್ಮನ್ನು ಚಿಕ್ಕ ವಯಸ್ಸಿನಿಂದ ಪ್ರೌಢ ವಯಸ್ಸಿನವರೆಗೆ ಆಡಿಸಿ ಸಂತೋಷಪಡಿಸಿದ ಈ ನಯವಂಚಕನು ಖಂಡಿತವಾಗಿಯೂ ಮಥುರಾ ನಗರದ ಸ್ತ್ರೀಯರನ್ನೂ ವಂಚಿಸುತ್ತಾನೆ. ಅವರೂ ಸಹ ಅರಿಯದೆ ಮೋಸ ಹೋಗುತ್ತಾರೆ. ಅವರ ಸ್ಥಿತಿಯೂ ಚಿಂತಾಜನಕ.

ನಟವತ್ ಪರಿಗೃಹ್ಯ ಮಾಯಯಾ ನತ ಚಿಂತಾಮಣಿರೇಷ ನಸ್ತ್ಯಜನ್ ।
ಅನುರೂಪ ತಮಾಸ್ವಪಿ ಧ್ರುವಂ ನಗರಸ್ತ್ರೀಷು ನ ಸಂಗಮೇಷ್ಯತಿ ॥೯೭॥

ನಮಸ್ಕರಿಸುವವರಿಗೆ ಚಿಂತಾಮಣಿ ಎಂಬಂತಿರುವ ಇವನು ನಾಟ್ಯವಾಡುವ ಕಿನ್ನರನಂತೆ ಮಾಯೆ ಮಾಡಿ ನಮ್ಮನ್ನು ಬಿಟ್ಟುಹೋಗುತ್ತಿದ್ದಾನೆ. ಎಷ್ಟೇ ಸಹನೆಯುಳ್ಳವರಾಗಿದ್ದರೂ, ನಗರದ ಸ್ತ್ರೀಗಳ ಹತ್ತಿರ ಬಹಳ ದಿನಗಳು ಇವನು ಇರುವುದಿಲ್ಲ.

ನಗರದ ಸ್ತ್ರೀಯರೂ ಇವನಿಂದ ಮೋಸ ಹೋಗುವ ಕಾಲ ದೂರವಿಲ್ಲ. ಇವನೇನೋ ತನ್ನನ್ನು ಆಶ್ರಯಿಸುವವರಿಗೆ ಎಲ್ಲವನ್ನೂ ಕೊಡುತ್ತಾನೇನೋ ಸರಿ. ಆದರೆ ಇವನನ್ನು ಪೂರ್ಣವಾಗಿ ನಂಬಲು ಸಾಧ್ಯವಿಲ್ಲ. ಮಧುರೆಯ ಸ್ತ್ರೀಯರೂ ಈ ಸತ್ಯವನ್ನು ಶೀಘ್ರವಾಗಿ ಅರಿಯುತ್ತಾರೆ. ಇವನು ನಗರದ ಸ್ತ್ರೀಯರೊಡನೆಯೂ ಬಹಕಾಲ ಇರುವುದಿಲ್ಲ. ಇವನು ಹುಟ್ಟು ಜಾರನೇ ಸರಿ.

ನಿಜವಂಶ ನಿನಾದತೋಽಪಿ ಯತ್ ಸ್ವದತೇ ಶ್ರೋತ್ರ ರಸಾಯನಂ ವಚಃ।
ನಿದಧೀತ ನೃಶಂಸ ಧೀರಸೌ ಪುರಯೋಷಿತ್ಸ್ವಪಿ ವಾಗುರಾಮಿ ಮಾಂ ॥೯೮॥

ತನ್ನ ದಿವ್ಯವಾದ ಕೊಳಲಿನಿಂದ ಮಧುರವಾದ ಗಾನವನ್ನು (ಮಾತುಗಳನ್ನು) ನಮ್ಮ ಕಿವಿಗಳಿಗೆ ರಸಾಯನದಂತೆ ಹೇಳಿದವನು. ಪರ ಹಿಂಸೆಯಲ್ಲಿ ಉದ್ದೇಶ ಹೊಂದಿರುವುದರಿಂದ ಪಟ್ಟಣದ ಸ್ತ್ರೀಯರುಗಳೊಡನೆಯೂ ಸಹ ಬಲೆ ಬೀಸುವನು.

ನಮ್ಮನ್ನು ತನ್ನ ಕೊಳಲಿನ ಧ್ವನಿಯಿಂದ ಪರವಶಗೊಳಿಸಿದಂತೆ ಮಧುರೆಯ ಸ್ತ್ರೀಯರಿಗೂ ಬಲೆ ಬೀಸಿ, ಅವರೊಡನೆ ಆಟವಾಡಿ ನಂತರ ಅವರನ್ನೂ ದೂರ ತಳ್ಳುತ್ತಾನೆ. ಇವನು ನೃಶಂಸನು (ಕ್ರೂರಿ). ಇವನನ್ನು ನಂಬಬಾರದು.

ಇಹ ತಾವದುಪೇಕ್ಷಿತಾ ವಯಂ ವಶಿನಾ ಆಲೇಖ್ಯ ಪರಾಂಗನಾ ಇವ।
ವಿಹರನ್ ವಿರಸೇನ ಚೇತಸಾ ಕಿತವಸ್ತತ್ರ ಕಿಮಾಚರಿಷ್ಯತಿ ॥ ॥೯೯॥

ಚಿತ್ರದಲ್ಲಿ ಬರೆದಿಟ್ಟಿರುವ ಸ್ತ್ರೀಯರುಗಳಂತೆ ನಮ್ಮನ್ನು ಇಲ್ಲಿ ಇವನು ಇಂದ್ರಿಯಗಳನ್ನು ಜಯಿಸಲ್ಪಟ್ಟವನಂತೆ ಚಿತ್ರದ ಗೊಂಬೆಗಳಂತೆ ನಮ್ಮನ್ನು ಉಪೇಕ್ಷೆ ಮಾಡಿಬಿಟ್ಟನು. ಆದರೆ ಈ ರೀತಿ ವಿರಸವಾದ ರಸಾನುಭವ ಮಾಡುವ ವಂಚಕ ಮನಸ್ಸುಳ್ಳ ಇವನು ನಗರದಲ್ಲಿ ಯಾವ ರೀತಿ ಇರಬಲ್ಲನು?

ಎರಡು ನಾಲಿಗೆ ಇರುವ ಈ ಮಹಾನುಭಾವನು, ನಗರದಲ್ಲಿ ಇವನು ತನ್ನ ನಿಜರೂಪ ತೋರಿಸಿಕೊಳ್ಳದೆ ಎಷ್ಟು ಕಾಲ ಇರಬಲ್ಲನು? ನಮ್ಮನ್ನು ಚಿತ್ರದಲ್ಲಿ ಬರೆದಿರುವ ಸ್ತ್ರೀಯರುಗಳಂತೆ ಭಾವಿಸಿ ಅನಾದರಿಸಿಬಿಟ್ಟನಲ್ಲಾ? ನಮ್ಮೊಡನೆ ನಿಜವಾಗಿಯೂ ಆಡಿದ ಆಟಗಳನ್ನೆಲ್ಲಾ ಮರೆತುಬಿಟ್ಟನೇ?

ಯುವತೀ ರಯಮಿಂದು ಕಾಂತಯೇತ್ ನಗರೇ ನಂದಕುಮಾರ ಚಂದ್ರಮಾಃ।
ಸ್ಮಿತ ಚಂದ್ರಿಕಯಾ ಯದೀಯಯಾ ದ್ರವತಾಮೇತಿ ಮನಃ ಶಿಲಾಪಿನಃ ॥೧೦೦॥

ನಂದ ಕುಮಾರನೆಂದು ಕರೆಯಲ್ಪಡುವ ಈ ಚಂದ್ರನು ನಗರದಲ್ಲಿರುವ ಎಳೆಯ ಹೆಣ್ಣು ಗಳನ್ನು ಚಂದ್ರಕಾಂತ ಕಲ್ಲಿನಂತೆ ಆಕರ್ಷಿಸುತ್ತಾನೆ. ಈ ರೀತಿ ಚಂದ್ರಕಾಂತವಾದ ನಮ್ಮ ಮನಃ ಶಿಲೆಯನ್ನು ಅವನ ಸ್ಮಿತವದನವು ಕರಗಿಸಿ ಬಿಡುತ್ತದೆಯಲ್ಲಾ!

ಸ್ತ್ರೀಯರ ಮನಸ್ಸನ್ನು ಕರಗಿಸುವ ವಿದ್ಯೆಯು ಇವನಿಗೆ ಕರಗತವಾಗಿದೆ. ನಮ್ಮ ಮನಸ್ಸನ್ನು ಚಂದ್ರಕಾಂತದ ಶಿಲೆಯಂತೆ ಆಕರ್ಷಿಸದೆ ಇರುತ್ತಾನೆಯೇ? ನಮ್ಮ ಮನಸ್ಸುಗಳು ದೃಢವಿಲ್ಲ, ಅವನೇನು ಮಾಡಿಯಾನು? ಅವನ ಮುಖಾರವಿಂದವು ಅಷ್ಟು ಆಕರ್ಷಣೀಯ ವಾಗಿದೆ.

ಅಪಿ ಜಹ್ನುರಮುಷ್ಯ ದರ್ಶನೆ ನವಲುಬ್ಧಾ ನಗರಸ್ತ್ರಿಯಃ ಪ್ರಿಯಾನ್।
ಸುಲಭೇ ಸುಮಣೌ ಕಥಂ ಮತಿಃ ಕ್ರಮತೇ ಕಾಂಚನ ಕಾಚ ಸಂಗ್ರಹೇ ॥೧೦೧॥

ಇವನನ್ನು ನೋಡಿದೊಡನೆ, ಹೊಸದರಲ್ಲಿ ಯಾವಾಗಲೂ ಮನಸ್ಸಿಡುವ ನಗರದ ಹೆಣ್ಣುಮಕ್ಕಳು, ತಮ್ಮ ಇಷ್ಟರುಗಳಾದ ಗಂಡಂದಿರನ್ನು ಬಿಟ್ಟುಬಿಡುವರು. ಉತ್ತಮವಾದ ಮಣಿಯು ಪ್ರಯಾಸವಿಲ್ಲದೆ ಸಿಗುವಾಗ, ಹಳೆಯದರಲ್ಲಿ ಬುದ್ಧಿಯು ಹೇಗೆ ಪ್ರವರ್ತಿಸುತ್ತದೆ?

ಶ್ರೀಕೃಷ್ಣನನ್ನು ನೋಡಿದರೆ, ಎಂಥವರಾದರೂ, ಮೋಹಗೊಳ್ಳುತ್ತಾರೆ. ಇವನು ತ್ರಿಲೋಕ ಮೋಹನನು. ಹೀಗಿರುವಲ್ಲಿ ಚಂಚಲೆಯರಾದ ನಗರದ ಸ್ತ್ರೀಯರು ತಮ್ಮ ತಮ್ಮ ಗಂಡಂದಿರನ್ನು ಬಿಟ್ಟು ಇವನಲ್ಲಿ ಆಸಕ್ತರಾಗುವುದರಲ್ಲಿ ಸಂದೇಹವೇ ಇಲ್ಲ. ಶ್ರೇಷ್ಠವಾದ ಹೊಸದು ಸಿಕ್ಕಿದರೆ ಹಳೆಯದನ್ನು ಅನಾದರಿಸುವುದು ಮನುಷ್ಯರ ಸಹಜ ಸ್ವಭಾವ.

ಲಲಿತಾದ್ಭುತ ಲಾಸ್ಯಗಂಧಿಷು ಧ್ರುವ ಮಂಗೇಷು ಬಲಾನುಜನ್ಮನಃ।
ನವ ಯೌವನ ರಾಮಣೀಯಕಂ ನಯನೈಃ ಪಾಸ್ಯತಿ ನಾಗರೀ ಜನಃ ॥೧೦೨॥

ನಿಜವಾಗಿಯೂ, ನಗರದ ಸ್ತ್ರೀಯರು ಶ್ರೇಷ್ಠವಾದ ಬಲದೇವನ ತಮ್ಮನ ಸುಂದರವಾದ, ಅದ್ಭುತವಾದ ಮಾಟವಾದ ಅಂಗಗಳನ್ನು ತಮ್ಮ ಎಳೆಯದಾದ ಲಾಸ್ಯಗಳಿಂದ ಕೂಡಿರುವ ಕಣ್ಣುಗಳಿಂದ ಆಕರ್ಷಿಸಿಬಿಡುತ್ತಾರೆ.

ಶ್ರೀಕೃಷ್ಣನೂ ರಸಿಕನೇ! ಆದ್ದರಿಂದ ಶೀಘ್ರವಾಗಿಯೇ ನಗರದ ಸ್ತ್ರೀಯರು ಅವನ ಬಲೆಯಲ್ಲಿ ಬೀಳುತ್ತಾರೆ. ಹೀಗೆ ಪರಸ್ಪರ ಆಕರ್ಷಣೆ ಇರುವಲ್ಲಿ ನಮ್ಮ ನೆನಪು ಅವನಿಗೆ ಆಗುವುದಾದರೂ ಹೇಗೆ? ಸ್ತ್ರೀಯರು ತಮ್ಮ ಕಣ್ಣೋಟಗಳಿಂದ ಎಲ್ಲರನ್ನೂ ವಶಪಡಿಸಿಕೊಳ್ಳುತ್ತಾರೆ.

ವಿಧಿನಾ ವಿಷಮ ಪ್ರವೃತ್ತಿನಾ ವ್ಯಪನೀತೋಽಪಿ ಕದಾಚಿದಾಗತಃ।
ಅಪಿನಃ ಪುನರಾರ್ದ್ರಯಿಷ್ಯತೆ ಮದನ ಪ್ರಾಣ ಸುಹೃದ್ಭಿರೀಕ್ಷಿತೈಃ॥ ॥೧೦೩॥

ಈವಾಗ, ವಿಪರೀತವಾಗಿ ನಡೆಯುವ ವಿಧಿಯಿಂದ ಅವನು ಬೇರ್ಪಟ್ಟು ಹೋದರೂ, ಮುಂದೆ ಒಂದು ಕಾಲ ಇಲ್ಲಿಗೆ ಬಂದು ಮನ್ಮಥನಿಗೆ ಪ್ರಾಣದಂತಿರುವ ತನ್ನ ದಿವ್ಯವಾದ ಕಣ್ಣುಗಳಿಂದ ನಮ್ಮನ್ನು ನೋಡಿ ನಮಗೆ ಸಂತೋಷ ತರದೇ ಇರುವನೇ?

ಈಗ ತಾತ್ಕಾಲಿಕವಾಗಿ ನಮ್ಮಿಂದ ಬೇರ್ಪಟ್ಟಿದ್ದಾನೆ. ಆದರಿಂದ ನಮಗೆ ವ್ಯಥೆಯಾಗಿದೆ. ಆದರೆ ಮುಂದೆ ಅವನಿಗೆ ಮಧುರೆಯ ಕರ್ತವ್ಯಗಳೆಲ್ಲಾ ಮುಗಿದ ಮೇಲೆ ಮತ್ತೆ ಇಲ್ಲಿಗೆ ಬರದಿರುತ್ತಾನೆಯೇ? ಮನ್ಮಥನ ಜನಕನಾದ ಅವನು ಮತ್ತೆ ತನ್ನ ದಿವ್ಯವಾದ ಕಣ್ಣುಗಳಿಂದ ನಮ್ಮನ್ನು ಕಟಾಕ್ಷಿಸಿ ಆನಂದಪಡಿಸುವುದಿಲ್ಲವೇ? ಗೋಪಿಯರು ತಮ್ಮ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಇಹ ತತ್ಪದ ಕಾಂಕ್ಷಿಭಿಃ ಸ್ತನೈ ನಯನೈ ಸ್ತನ್ಮುಖ ಪದ್ಮಷಟ್ಪದೈಃ।
ಶ್ರವಣೈಶ್ಚ ತದುಕ್ತಿಜೀವಿತೈರಪಿ ಜೀವೇಮ ಪುನಸ್ತದಾ ದೃತಾಃ ॥೧೦೪॥

ಮತ್ತೆ ಇಲ್ಲಿ ಅವನು ತನ್ನ ಪಾದಗಳಿಂದ ನಮ್ಮ ಸ್ತನಗಳನ್ನು ಸ್ಪರ್ಶ ಮಾಡಿ, ತನ್ನ ದಿವ್ಯ ಮುಖಾರವಿಂದವೆಂಬ ಹೂಗಳಲ್ಲಿ ದುಂಬಿಗಳಂತೆ ಇರುವ ನಮ್ಮ ಕಣ್ಣುಗಳೊಡನೆ, ಅವನ ಮಾತುಗಳನ್ನು ಉಸಿರಂತೆ ಭಾವಿಸುವ ನಮ್ಮ ಕಿವಿಗಳಿಂದ ಕೇಳಿ, ನಾವು ಜೀವನವನ್ನು ನಡೆಸಲು ಸಾಧ್ಯವೇ?

ಮತ್ತೆ ಶ್ರೀಕೃಷ್ಣನು ಹಿಂತಿರುಗಿ ಬಂದು, ತನ್ನ ಸವಿ ಮಾತುಗಳಿಂದ ನಮ್ಮನ್ನು ಸಂತೋಷಪಡಿಸಿ, ನಾವು ಆ ಆನಂದವನ್ನು ಅನುಭವಿಸಲು ಸಾಧ್ಯವೇ? ಈ ಗೋಕುಲಕ್ಕೆ ಅವನ ಪಾದಸ್ಪರ್ಶ ಮತ್ತೆ ಸಿಗುತ್ತದೆಯೇ?

ಕರುಣಾಭರಿತೈಃ ಕದಾಪುನಃ ಸ್ವಯ ಮುಲ್ಲಾಘಯಿತಾ ಸ ಏವನಃ।
ಅಪರಸ್ಪರ ಪಾತಿಭಿಃ ಶನೈ ರಗ ದಂಕಾರ ನಿಭೈರವೇಕ್ಷಣೈಃ ॥೧೦೫॥

ಅವನು ತಾನಾಗಿಯೇ ಕರುಣೆ ತುಂಬಿ ಮೇಲೆ ಮೇಲೆ ವಿಚ್ಛಿತ್ತಿಯಿಲ್ಲದೆ, ಆರೋಗ್ಯ ಕೊಡುವ ವೈದ್ಯನ ಔಷಧದಂತೆ ಇರುವ ತನ್ನ ಕಟಾಕ್ಷವನ್ನು ನಮ್ಮ ಮೇಲೆ ಬೀರಿ, ನಮ್ಮ ರೋಗಗಳನ್ನು ಯಾವಾಗ ಗುಣಪಡಿಸುವನೋ?

ಅವನ ದಿವ್ಯ ಕಟಾಕ್ಷವೇ ನಮ್ಮ ಎಲ್ಲಾ ರೋಗಗಳಿಗೂ ಔಷಧವಿದ್ದಂತೆ. ಅದನ್ನು ಅವನು ನಮಗೆ ಮತ್ತೆ ನೀಡುವನೇ? ಅವನ ವಿರಹದಿಂದ ಬಳಲಿ ಬೆಂಡಾಗುವ ನಮ್ಮ ದೈಹಿಕ ಹಾಗೂ ಮನೋರೋಗವನ್ನು ಮತ್ತೆ ಬಂದು ಗುಣಪಡಿಸಿಯಾನೆ?

ವಿವಿಧಾರುಣ ರಾಜಿರಂಜಿತೆ ವಿಶದಸ್ಮೇರ ವಿಶಾಲ ಶೀತಲೆ।
ಕಿಮಪಿ ಬ್ರುವತಿ ಕೃತಾರ್ಥತಾಂ ನಯನೇ ತಸ್ಯ ಕದಾ ಅನುನೇಷ್ಯತಃ ॥೧೦೬॥

ಬಗೆ ಬಗೆಯಾಗಿ ಕಿವಿಗಳಿಗೆ ಇಂಪಾಗಿಯೂ, ಇರುವ ಅವನ ಮಾತುಗಳೂ ಅಮೃತ ಸೇಚನವನ್ನು ಸೂಸುವ ಅವನ ಕಣ್ಣುಗಳೂ ನಮ್ಮನ್ನು ನೋಡಿದುದರಿಂದ, ಧನ್ಯರಾದವೆಂದು ಭಾವಿಸಿದ್ದ ನಮ್ಮ ಇಂದ್ರಿಯಗಳು ಮತ್ತೆ ಯಾವಾಗ ಅವನ್ನೆಲ್ಲಾ ಅನುಭವಿಸುತ್ತವೆಯೋ?

ನಮ್ಮ ಸಮಸ್ತ ಇಂದ್ರಿಯಗಳನ್ನು ಅವನು ಸಂತೋಷಪಡಿಸುತ್ತಿದ್ದನು. ಈಗ ಮತ್ತೆ ಅವನು ಹೊರಟು ಹೋದರೆ ಅದನ್ನೆಲ್ಲಾ ಪಡೆಯಲು ಸಾಧ್ಯವೇ? ನಮಗೆಲ್ಲರಿಗೂ ಪ್ರಣಯ ಕೋಪ ಉಂಟಾಗುತ್ತದೆಯಲ್ಲಾ!

ಬಧಿರತ್ವ ಮಿವಾಗತಾನ್ಯಸೌ ಶ್ರವಣಾನ್ಯದ್ಯ ಪುನಃ ಸಮೇತ್ಯನಃ।
ರಮಯಿಷ್ಯತಿ ಚಾಟುಭಿಃ ಕದಾ ರತಿ ಸಿಂಧೋರಿವ ವೀಚಿ ಪಂಕ್ತಿಭಿಃ ॥೧೦೭॥

ಇವನು ಈಗ ನಮ್ಮನ್ನು ಬಿಟ್ಟು ಇರುವುದರಿಂದ, ಕಿವುಡಾಗಿರುವ ನಮ್ಮ ಕಿವಿಗಳಿಗೆ ಮತ್ತೆ ಬಂದು ಆನಂದ ಸಾಗರದ ಅಲೆಗಳಂತೆ ಇರುವ ತನ್ನ ಪ್ರಿಯವಾದ ಮಾತುಗಳಿಂದ ಸುಖವನ್ನು ನೀಡುವುದು ಯಾವಾಗಲೋ?

ಅವನು ಹೋದ ಮೇಲೆ ನಮ್ಮ ಕಿವಿಗಳೆಲ್ಲಾ ಕಿವುಡಾಗಿ ಹೋಗುತ್ತದೆ. ಅವನ ಕೊಳಲಿನ ಗಾನವನ್ನು ಕೇಳದೆ. ನಾವು ಜಡರಾಗುತ್ತೇವೆ. ಮತ್ತೆ ಅವನು ಬಂದು ನಮಗೆ ಜೀವ ನೀಡುತ್ತಾನೆಯೇ ? ಇದು ಸಾಧ್ಯವೇ ? ಅವನ ಸವಿ ನುಡಿಗಳು ನಮ್ಮ ಕಿವಿಗಳ ಮೇಲೆ ಬೀಳುತ್ತದೆಯೇ?

ಮದಯನ್ ಹೃದಿಯಾನಿ ವಿಭ್ರಮೈರವಿ ಸಂವಾದ ಮಿವಾಽಚರನ್ ದೃಶಾ।
ಅವಿಭಾಗ ಮಿವಾವಹನ್ ಗುಣೈರಪಿ ನಃ ಪ್ರತ್ಯವಪತ್ಸ್ಯತೇ ಪುನಃ ॥೧೦೮॥

ತನ್ನ ವಿಲಾಸಗಳಿಂದ ಮನಸ್ಸುಗಳಿಗೆ ಸಂತೋಷವನ್ನು ಉಂಟು ಮಾಡುವವನಾದ, ಕಣ್ಣುಗಳಿಂದಲೇ ನಮ್ಮ ಹೃದಯಗಳನ್ನು ಆಕರ್ಷಿಸುತ್ತಿದ್ದವನಾಗಿ, ತನ್ನ ಗುಣಗಳಿಂದ ನಮ್ಮನ್ನು ಬಿಟ್ಟು ಹೋಗದೆ ಇರುವವನಾಗಿರುವ ಅವನು ಮತ್ತೆ ನಮ್ಮನ್ನು ಸೇರುವನಾ?

ಅವನನ್ನು ಮತ್ತೆ ಸೇರುವ ಸಾಧ್ಯತೆ ಇದೆಯೇ? ಅವನು ಎಂತಹವನು ? ತನ್ನ ಹಾವಭಾವಗಳಿಂದ ನಮ್ಮನ್ನೆಲ್ಲಾ ಅತ್ಯಂತ ಸಂತೋಷಗೊಳಿಸಿದವನು. ತನ್ನ ದಿವ್ಯವಾದ ನೇತ್ರಗಳಿಂದ ನಮ್ಮ ಹೃದಯಗಳನ್ನು ಅಪಹರಿಸಿದನು. ಅವನ ಕಲ್ಯಾಣ ಗುಣಗಳಿಂದ ನಮ್ಮನ್ನು ಯಾವಾಗಲೂ ರಂಜಿಸುತ್ತಿದ್ದವನು. ಅವನನ್ನು ಬಿಟ್ಟಿರಲು ಸಾಧ್ಯವೇ?

ಪರಿವರ್ತಯಿತಾ ಜಗತ್ ತ್ರಯಿ ಮಪರಾವೃತ್ತಿರನೇಹಸಃ ಕ್ರಮಃ।
ಯದತೀತ ಮತೀತ ಮೇವ ತತ್ ಪುನರೇಷ್ಯತ್ಯಪಿ ಪುಷ್ಕರೇಕ್ಷಣಃ ॥೧೦೯॥
ಅಥವಾ ಪುರ ಸುಂದರೀ ಜನೈಃ ಸುಭಗಂ ಭಾವುಕ ಸೌಮ್ಯ ವೃತ್ತಿಭಿಃ।
ಅವಶಾದವರುದ್ಧ ಚೇತಸಃ ಕೃತಿನಃ ಕ್ವೈವ ಕಥಾ ವ್ರಜಾಗಮೇ ॥೧೧೦॥

ಮೂರು ಜಗತ್ತನ್ನೂ ಪರಿವರ್ತನೆ ಮಾಡುತ್ತಲೇ, ಇರುವ ಕಳೆದುಹೋದ ಕಾಲವು ಮತ್ತೆ ಬರುವುದಿಲ್ಲವಷ್ಟೆ ಹೋದದ್ದು ಹೋಯಿತು. ಅದರಿಂದ ಕೆಂದಾವರೆಯಂಥ ಕಣ್ಣುಳ್ಳ ಶ್ರೀಕೃಷ್ಣನು ಮತ್ತೆ ಖಂಡಿತಾ ಬರುವನೇ

ಈಗ ಹೆಚ್ಚು ಮಾತನಾಡಿ ಏನೂ ಪ್ರಯೋಜನವಿಲ್ಲ, ಅವನು ಹೊರಟುಬಿಟ್ಟಿದ್ದಾನೆ. ''ಗತಂ ತು ಗತಮೇವಹಿ'' ಎನ್ನುವಂತೆ ಕಳೆದುಹೋದ ಕಾಲವು ಮತ್ತೆ ಬರುವುದಿಲ್ಲ, ಆದರೆ ಕಮಲೇಕ್ಷಣನಾದ ಆ ಸ್ವಾಮಿಯು ಮತ್ತೆ ಖಂಡಿತಾ ಬರುವನೆ ? ನಮ್ಮನ್ನು ಮುದಗೊಳಿಸುವನೇ ? ಕೇವಲ ನಿರೀಕ್ಷೆಯಲ್ಲೇ ಮುಂದೆ ನಾವು ಜೀವನ ಸಾಗಿಸಬೇಕು. ಅಥವಾ ಅಭಿವೃದ್ಧಿ ಪಡೆದ ಸುಂದರವಾದ ವಿಲಾಸಗಳನ್ನು ಪ್ರದರ್ಶಿಸುವ ನಗರದ ಸುಂದರಿಯರಿಂದ ತನ್ನ ಮನಸ್ಸನ್ನು ಕಟ್ಟಿಸಿಕೊಳ್ಳುವ ಶ್ರೀಕೃಷ್ಣನು ಅದರಿಂದ ಭಾಗ್ಯವಂತನಾಗಿರುವಾಗ, ಗೋಕುಲಕ್ಕೆ ಮತ್ತೆ ಬರುವನೆಂಬ ಕಥೆ ಉಂಟೆ?

ನಮಗಂತೂ ಅವನು ಗೋಕುಲಕ್ಕೆ ಬರುವಂಥ ಭರವಸೆ ಇಲ್ಲ. ನಗರದ ಸ್ತ್ರೀಯರ ಹಾವಭಾವ ವಿಲಾಸದ ಪಾಶಗಳಿಗೆ ಕಟ್ಟು ಬೀಳುವ ಅವನು, ನಮ್ಮನ್ನು ಮತ್ತೆ ಸ್ಮರಿಸುತ್ತಾನೆಯೇ ? ಗೋಕುಲದ ನೆನಪು ಅವನ ಸ್ಮೃತಿಯಿಂದ ಹೊರಟುಹೋಗಬಹುದು.

ಮಧುರಾಪುರ ಮತ್ತಕಾಶಿನೀ ಮಧುರಾಲಾಪ ವಿಲೋಭಿತಾಶಯಃ।
ಪುನರೇಷ್ಯತಿ ನಂದನಂದನಃ ಕಿಮಿವಾಸ್ಮಾಸು ವಿಚಿಂತ್ಯ ಕಾರಣಂ ॥೧೧೧॥

ಊರೇ ಮಧುರೆ. ಅಲ್ಲಿಯ ಸ್ತ್ರೀಯರೋ ತಮ್ಮನ್ನು ತಾವೇ ಶ್ರೇಷ್ಠರೆಂದು ಭಾವಿಸುವರು. ಅವರುಗಳ ಮಾತು ವೀಣೆಯ ಆಲಾಪದಂತೆ ಆನಂದವನ್ನು ನೀಡುತ್ತದೆ. ಅದರಿಂದ ಮನಸ್ಸು ಪರವಶವಾಗಿ, ನಂದಕುಮಾರನು ಯಾವ ಕಾರಣವನ್ನು ಇಟ್ಟುಕೊಂಡು ಇಲ್ಲಿಗೆ ಹಿಂತಿರುಗುವನು?

ಅವನು ಹೋಗುವ ಊರಿನ ಹೆಸರೇ ಮಧುರೆ. ಮಧುವಿಂದ ಕೂಡಿದೆ. ಅಲ್ಲಿನ ಸ್ತ್ರೀಯರು ಅಪ್ರತಿಮ ಸುಂದರಿಯರು. ಅವರ ಮಾತು ಅವನ ಹೃದಯ ವೀಣೆಯನ್ನು ನುಡಿಸಿ, ಅವನನ್ನು ಬಂಧಿಸುತ್ತದೆ. ಹೀಗಿರುವಾಗ ಅವನು ಮತ್ತೆ ಗೋಕುಲಕ್ಕೆ ಬರಲು ಯಾವ ಪ್ರಮುಖವಾದ ಕಾರಣಗಳೂ ಇಲ್ಲ. ಅವನು ಇಲ್ಲಿಗೆ ಹಿಂತಿರುಗುವುದು ಕೇವಲ ಭ್ರಮೆಯಷ್ಟೆ (ಸಪ್ತ ಮೋಕ್ಷ ಕ್ಷೇತ್ರಗಳಲ್ಲಿ ಮಧುರೆಯೂ ಒಂದು).

ಬಹುವಿಭ್ರಮ ಪಾಶ ಬಂಧುರಾಂ ಗುಣಗ್ರಹ್ಯಃ ಸ್ವಯಮೇವ ದುಸ್ತರಾಂ।
ಅತಿಲಂಘಯಿತುಂ ನ ಶಕ್ನುಯಾತ್ ನಗರ ಸ್ತ್ರಿಜನ ನೇತ್ರವಾಗುರಾಂ ॥೧೧೨॥

ಶ್ರೀಕೃಷ್ಣನು ಗುಣದಲ್ಲಿ ಮೇಲಾದವನು. ಗುಣ ಪಕ್ಷಪಾತಿಯೂ ಹೌದು. ಅನೇಕ ವಿಲಾಸಗಳೆಂಬ ಹಗ್ಗಗಳಿಂದ ಕಟ್ಟಲ್ಪಟ್ಟ ನಗರ ಸ್ತ್ರೀಯರ ಕಣ್ನೋಟಗಳೆಂಬ ಪಾಶಗಳಿಗೆ ಸಿಲುಕುವ ಕೃಷ್ಣನು ಅವುಗಳನ್ನು ಅತಿಕ್ರಮಿಸುವನೆ ? ಸಾಧ್ಯವಿಲ್ಲ.

ಕೃಷ್ಣನು ಗುಣ ಪಕ್ಷಪಾತಿಯಾದ್ದರಿಂದ ನಮಗಿಂತ ಹೆಚ್ಚು ಗುಣವತಿಯರೂ, ಹೆಚ್ಚು ಸುಂದರಿಯರೂ ಉತ್ತಮ ಅಂಗಸೌಷ್ಟವವುಳ್ಳವರಾದ ಮಧುರಾ ನಗರದ ಸ್ತ್ರೀಯರ ಪಾಶಕ್ಕೆ ಸಿಕ್ಕಿ ಅವುಗಳನ್ನು ಬಿಡಿಸಿಕೊಂಡು ಮತ್ತೆ ಇಲ್ಲಿಗೆ ಬರಲು ಸಾಧ್ಯವೇ ಇಲ್ಲವೆಂದು ಭಾವಿಸುತ್ತೇವೆ.

ನ ರಥಃ ಪರಿದೃಶ್ಯತೆ ಮಹಾನ್ ನ ಚ ನೇಮಿಸ್ತನಿತಂ ನಿಶಮ್ಯತೇ।
ನ ಚ ರೇಣುರಿತೋ ವಿಜೃಂಭತೇ ತದಪಿ ಭೃಶ್ಯತಿ ಜೀವಿತಂ ನನಃ ॥೧೧೩॥

ಆಹಾ ! ದೊಡ್ಡ ರಥವು ಯಾವ ದಿಕ್ಕಿನಲ್ಲೂ ಕಾಣುತ್ತಿಲ್ಲ. ಚಕ್ರಗಳ ಧ್ವನಿಯು ಕಿವಿಗೆ ಬೀಳುತ್ತಿಲ್ಲ. ರಥದ ಧೂಳು ಸಹ ಇಲ್ಲಿಲ್ಲ. ಈಗ ನಮ್ಮ ಉಸಿರಾಟ ನಿಂತುಹೋಗಿದೆ.

ಅಕ್ರೂರನು ಶ್ರೀಕೃಷ್ಣನು ಬಲರಾಮರನ್ನು ಕೂರಿಸಿಕೊಂಡು ಹೋದ ರಥವು ಎಲ್ಲಿಯೂ ಕಾಣುತ್ತಿಲ್ಲ. ಚಕ್ರಗಳ ಘಂಟಾನಾದವಾಗಲೀ, ರಥದ ಧೂಳಾಗಲೀ ತಿಳಿಯುತ್ತಿಲ್ಲ. ಬಹುಶಃ

ಬೃಂದಾವನವನ್ನು ದಾಟಿ ಹೋಗಿರಬೇಕು. ನಮ್ಮ ಉಸಿರಾಟವು ನಿಂತುಹೋದಂತಿದೆ. ಅವನ ಹಿಂದೆಯೂ ನಮ್ಮ ಉಸಿರು ಹೋಗಿಬಿಟ್ಟಿದೆ.

ಇತಿ ವಾದಿನಿ ವಲ್ಲವೀ ಜನೇ ಯಮುನಾಂ ಸತ್ವರಸೂತ ಚೋದಿತಃ।
ಘಟಯನ್ ವಸುಧಾ ಮನೋರಥಂ ವಶಿನಿಸ್ತ್ಸ್ಯ ರಥಃ ಕ್ಷಣಾತ್ ಯಯೌ ॥೧೧೪॥

ಈ ರೀತಿ ಕೆಸರಿನ ಗೋಕುಲದ ಹೆಣ್ಣುಮಕ್ಕಳು ಕೂಡಿ ಮಾತನಾಡುತ್ತಲೇ ಇದ್ದರು. ಅದಕ್ಕೆ ನಡುವೆ ರಥವು ಚಲಿಸಿದ್ದರಿಂದ, ದುರಿತವಾಗಿರುವ ಯಾರಿಗೂ ವಶಪಡದೆ, ಎಲ್ಲವನ್ನೂ ತನ್ನ ವಶದಲ್ಲಿ ಇಟ್ಟುಕೊಂಡಿರುವ ಶ್ರೀಕೃಷ್ಣನು ಏರಿದ ರಥವಾದುದು, ಭೂದೇವಿಯ ಮನೋರಥವನ್ನು ಪೂರ್ಣಗೊಳಿಸುವುದಕ್ಕಾಗಿ, ಯಮುನೆಯು ತೀರಕ್ಕೆ ಹೊರಟುಹೋಯಿತು.

ಕೃಷ್ಣಾವತಾರವಾಗಿರುವುದೇ ಭೂದೇವಿಯ ಪ್ರಾರ್ಥನೆಯಂತೆ ಭೂಭಾರ ಹರಣಾರ್ಥವಾಗಿ. ಅದಕ್ಕೆ ಅವನು ಮಧುರೆಗೆ ಹೋಗುವುದು ಅನಿವಾರ್ಯವಾಗಿತ್ತು. ಅದನ್ನು ಅರಿತ ಸ್ವಾಮಿಯು ತನ್ನ ಅಂತರಂಗ ಭಕ್ತರೂ, ಪ್ರೀತಿಪಾತ್ರರೂ ಆದ ಗೋಪಿಯರನ್ನು ಬಿಟ್ಟು ಹೊರಡಲೇಬೇಕಾಯಿತು. ತನ್ನ ಅವತಾರ ಉದ್ದೇಶ ಪೂರ್ಣವಾಗಲು, ಅಕ್ರೂರನ ಜತೆ ಬಲರಾಮನೊಡಗೂಡಿ ರಥವನ್ನೇರಿ ಯಮುನಾ ನದಿ ತೀರದಲ್ಲಿ ಮಧುರೆಯ ಮಾರ್ಗ ಹಿಡಿದನು.

ಸ್ವಗುಣಾನುಭವೇನ ಸುಭ್ರುವಾಂ ಭವ ಭೋಗೋಚಿತ ಪುಣ್ಯ ಸಂಚಯಂ।
ವಿರಹ ವ್ಯಥಯಾತು ತೀವ್ರಯಾ ವೃಜಿನಾಂಬೋಧಿ ಮಶೋಷಯತ್ ಪ್ರಭುಃ॥೧೧೫॥

ಅವರುಗಳ ಪ್ರಾರಬ್ಧ ಪುಣ್ಯಪಾಪಗಳೆಲ್ಲವನ್ನೂ ಕಳೆಯುವವನಾಗಿ, ತನ್ನ ಗುಣಗಳಿಂದ ಅವರುಗಳು ಆಸೆ ಪಡುವ ಸಂತೋಷವನ್ನು ಅವರುಗಳ ಪುಣ್ಯಕ್ಕೆ ಫಲವಾಗಿ ನೀಡಿದನು. ಅವರುಗಳು ಪಟ್ಟ ವಿರಹ ವೇದನೆಯಿಂದ ಅವರ ಪಾಪಗಳೆಲ್ಲವನ್ನೂ ನೀಗಿದನು. ಕೊನೆಯಲ್ಲಿ ಅವರಿಗೆ ಮೋಕ್ಷವೇ ದೊರಕಿತು. ಭಗವಂತನ ಕರುಣೆ ಅಸಾಧಾರಣವಾದುದು.

ಗೋಪಸ್ತ್ರೀಯರೇ ಜಗತ್ತಿನಲ್ಲಿ ಅತ್ಯಂತ ಪುಣ್ಯಶಾಲಿಗಳು. ಋಷಿ ಮುನಿಗಳಾಗಲೀ, ಯೋಗಿಗಳಾಗಲೀ, ವೇದವನ್ನರಿತವರಾಗಲೀ, ಅನುಭವಿಸದ ಶ್ರೀಕೃಷ್ಣ ಸಾನ್ನಿಧ್ಯವನ್ನು ಅವರು ಅನುಭವಿಸಿದರು. ಅವರು ತಮ್ಮ ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯ ಫಲಗಳಿಗೆ ಪ್ರತಿಯಾಗಿ, ತನ್ನನ್ನೇ ತಾನು ಅವರುಗಳಿಗೆ ಸಮರ್ಪಿಸಿಕೊಂಡನು. ಸರ್ವೇಶ್ವರನಾದ ಆ ಸ್ವಾಮಿಯ ಕಟಾಕ್ಷದಿಂದ ಅವರ ಪಾಪಗಳೆಲ್ಲವೂ ಅವರು ಪಟ್ಟ ವಿರಹ ವೇದನೆಯಿಂದ ನೀಗಿತು. ದೇಹಾವಸಾನದಲ್ಲಿ ಅವರಿಗೆ ಯಾರಿಗೂ ಸುಲಭವಾಗಿ ಲಭಿಸದ ಮೋಕ್ಷವೇ ಲಭಿಸಿತು. ಭಗವಂತನ ಕರುಣೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಗೋಪಿಯರ ಭಾಗ್ಯವೇ ಭಾಗ್ಯವು.

ಪರವಂತಿ ಜಗಂತಿ ಬಾಧಿತುಂ ನಿಯತಿಃ ಕಿಂ ನ ಕರೋತಿ ನಿಷ್ಠುರಾ।
ವಿಜಹೌ ಕರುಣಾ ನಿಧಿಃ ಪ್ರಿಯಾಃ ವಿರಹೇ ತಸ್ಯ ಚ ತಾಭಿರಾಸ್ಯತ ॥೧೧೬॥

ವಿಧಿ ಎನ್ನುವುದು ಬಹಳ ಕ್ರೂರವಾದದ್ದು. ಜಗತ್ತೆಲ್ಲವನ್ನೂ ನಾಶ ಮಾಡಲು ಅದು ಏನನ್ನಾದರೂ ಮಾಡುತ್ತದೆ. ಕರುಣೆಗೆ ನಿಧಿಯಂತಿರುವವನೂ, ತನಗೆ ಪ್ರಿಯರಾದವರನ್ನು ಬಿಡದವನೂ ಅವನು. ಅವನನ್ನು ಬಿಟ್ಟು ಇರುವುದು ಅವರುಗಳು ಮಾಡಿದ ಕರ್ಮಫಲವಷ್ಟೆ (ದೈವ ಸಂಕಲ್ಪವೇ ಅದು).

ದೀರ್ಘಕಾಲ ಶ್ರೀಕೃಷ್ಣನ ಒಡನಾಟವಿದ್ದರೂ, ಅವನನ್ನು ಬಿಟ್ಟು ಅವನ ವಿರಹ ವೇದನೆಯನ್ನು ಗೋಪಿಯರು ಅನುಭವಿಸಬೇಕಾಯಿತು. ಇದೂ ಸಹ ಅವರು ಮಾಡಿದ ಕರ್ಮಫಲ. ಎಷ್ಟೇ ಪುಣ್ಯವಂತರಾಗಿದ್ದರೂ ವಿಧಿಯ ಆಟಕ್ಕೆ ಎಲ್ಲರೂ ತಲೆಬಾಗಲೇಬೇಕು. ಅದೇ ರೀತಿ ಈಗ ಗೋಪಿಯರೂ ವಿಧಿಯ ಆಜ್ಞೆಗನುಸಾರವಾಗಿ ಸರ್ವೇಶ್ವರನಾದ ಶ್ರೀಕೃಷ್ಣನ, ತಾನಾಗಿ ಗೋಕುಲದಲ್ಲಿ ತೋರಿದವನ ಸಾನ್ನಿಧ್ಯವನ್ನು ಬಿಡಬೇಕಾಯಿತು. ಅವನೇನೋ ಕರುಣಾನಿಧಿ. ಆದರೆ ಅವನು ವಿಧಿಗೆ ತಲೆಬಾಗುತ್ತಾನೆ.

ವಿನಿವೇಶ್ಯ ರಥೇ ಸಿತಾಸಿತೌ ವಸುದೇವಸ್ಯ ಸುತೌ ಸ ಯಾದವಃ।
ಮಣಿಭಂಗರುಚಂ ಮಹಾಪಗಾಂ ದಿವ ಮುಷ್ಣಾಂಶುರಿವ ವ್ಯಗಾಹತ ॥೧೧೭॥

ಯದುವಂಶದವನಾದ ಆ ಅಕ್ರೂರನು, ಪುಣ್ಯಶಾಲಿಯಾದ ವಸುದೇವನ ಮಕ್ಕಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಇಂದ್ರನೀಲ ಮಣಿಯಂತೆ ಶುಭ್ರವಾಗಿದ್ದ ಮಹಾನದಿಯಾದ ಯಮುನೆಯ ತೀರದಲ್ಲಿ ಓಡಿಸಿಕೊಂಡು ಸೂರ್ಯನು ಆಕಾಶದಲ್ಲಿ ಬರುವಂತೆ ಬರುತ್ತಿದ್ದನು.

ಆ ಪರಮ ಭಾಗವತೋತ್ತಮನಾದ ಅಕ್ರೂರನು ಆ ಅಣ್ಣ ತಮ್ಮಂದಿರಿಬ್ಬರನ್ನೂ ಕಂಸನ ಆಣತಿಯಂತೆ ರಥದಲ್ಲಿ ಕೂರಿಸಿಕೊಂಡು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯಳಾದ ಯಮುನಾ ನದಿ ತೀರದಲ್ಲಿ ವೇಗವಾಗಿ ರಥವನ್ನು ಓಡಿಸುತ್ತಾ ಬರುತ್ತಿದ್ದನು. ಆಕಾಶದಲ್ಲಿ ಸೂರ್ಯನು ಯಾವ ತಡೆಯಿಲ್ಲದೆ ಬರುವಂತೆ ಅವರು ರಥದಲ್ಲಿ ಬರುತ್ತಿದ್ದರು.

ಅಘಮರ್ಷಣ ಲೀನ ಕಿಲ್ಬಿಷಃ ಸಲಿಲೇ ಮಗ್ನತನುರ್ ದದರ್ಶತೌ।
ಭುಜಗೇಂದ್ರ ಭುಜಂಗಶಾಯಿನೌ ಪುರುಷೌ ಕಿಂಚಿ ದವಾನ್ಯ ಲಕ್ಷಣೌ ॥೧೧೮॥

ಪಾಪಗಳನ್ನು ಹೋಗಲಾಡಿಸುವುದರಿಂದ ಅಘಮರ್ಷಣ ಎಂಬ ಹೆಸರು ಪಡೆದ ಸೂಕ್ತವನ್ನು ನೀರಿನಲ್ಲಿ ನಿಂತು ಜಪಿಸಿದರೆ, ಪಾಪಗಳು ನಾಶವಾಗುತ್ತದೆ. ತೀರ್ಥದಲ್ಲಿ ಆ ಸೂಕ್ತವನ್ನು ಜಪಿಸುತ್ತಾ ಅಕ್ರೂರನು ನೀರಿನಲ್ಲಿ ಮುಳುಗಿದೊಡನೆಯೇ ಬಲರಾಮ–ಕೃಷ್ಣರಿಬ್ಬರನ್ನೂ ನದಿಯ ನೀರಿನೊಳಗೆ ಕಂಡನು. ಅಲ್ಲದೆ ಆದಿಶೇಷನ ಮೇಲೆ ಮಲಗಿರುವ ಭಗವಂತನನ್ನೂ ಕಂಡನು.

ಅಕ್ರೂರನು ಯಮುನಾ ನದಿಯಲ್ಲಿ ಸ್ನಾನ ಮಾಡಲಿಚ್ಛಿಸಿ, ರಾಮ-ಕೃಷ್ಣರಿಬ್ಬರನ್ನೂ ರಥದಲ್ಲಿ ಕುಳಿತಿರಲು ತಿಳಿಸಿ, ತಾನು ನೀರಿನಲ್ಲಿ ಮುಳುಗಿದನು. ಆದರೆ ನೀರಿನ ಒಳಗೆ ಶೇಷಶಾಯಿಯಾಗಿ ಮಲಗಿರುವ ಶ್ರೀಮನ್ನಾರಾಯಣನನ್ನು ಕಂಡನು. ಅವನಿಗೆ ಪರಮಾಶ್ಚರ್ಯವಾಯಿತು.

ಉಪಸೃತ್ಯ ಚ ತೀರ ಮಾದರಾತ್ ತದವಸ್ಥೌ ನಿರವರ್ಣಯತ್ ರಥೇ।
ಸ್ಮಯಮಾನ ದೃಶೋಸ್ತಯೋರಸೌ ನಿಭೃತಃ ಸ್ವಾನುಭವಂ ನ್ಯವೀವಿದತ್ ॥೧೧೯॥

ಅಕ್ರೂರನು ಆಶ್ಚರ್ಯದಿಂದ ಮೇಲೇರಿ ಬಂದು ನೋಡಿದಾಗ, ಹಿಂದಿನಂತೆಯೇ ಬಲರಾಮ-ಕೃಷ್ಣರಿಬ್ಬರೂ ಅದೇ ರಥದ ಮೇಲೆ ಕುಳಿತಿದ್ದುದನ್ನು ಕಂಡು ಅರಳಿದ ಕಣ್ಣುಗಳೊಡನೆ, ತನಗೆ ನದಿಯ ಒಳಗಾದ ಅನುಭವವನ್ನು ತನ್ನನ್ನೇ ನೋಡುತ್ತಿದ್ದ ಅವರುಗಳಿಗೆ ತಿಳಿಸಿದನು.

ನದಿಯ ನೀರಿನೊಳಗೆ ತನಗಾದ ದಿವ್ಯ ಅನುಭವವನ್ನು ನಂಬಲಾಗದೇ ನೀರಿನಿಂದ ಎದ್ದು ತೀರದ ಮೇಲೇರಿ ಬಂದು ನೋಡಿದರೆ, ರಾಮ-ಕೃಷ್ಣರಿಬ್ಬರೂ ಹಿಂದೆ ಕುಳಿತಂತೆಯೇ ರಥದಲ್ಲಿ ಆಸೀನರಾಗಿದ್ದರು. ತನ್ನ ಪರ ಸ್ವರೂಪವನ್ನು ತನ್ನ ಪರಮ ಭಕ್ತನಾದ ಅಕ್ರೂರನಿಗೆ ತೋರಿಸಿದ್ದಾನೆ ಸ್ವಾಮಿ. ಅವನಿಗೆ ಭಕ್ತರ ಮೇಲಿನ ವಾತ್ಸಲ್ಯ ಅಂತಹುದು. ಅಕ್ರೂರನು ರಾಮ-ಕೃಷ್ಣರು ಭಗವಂತನ ಅವತಾರವೆಂದು ತಿಳಿದಿದ್ದರೂ, ಈ ಅನುಭವವನ್ನು ಅವನು ನಿರೀಕ್ಷಿಸಿರಲಿಲ್ಲ. ತಾನೇ ಪರಮ ಧನ್ಯನೆಂದು ಭಾವಿಸಿ, ಅವರಿಬ್ಬರನ್ನೂ ಮನಸಾರೆ ಸ್ತುತಿಸಿದನು. ಅವನ ಆನಂದಕ್ಕೆ ಮಿತಿಯೇ ಇರಲಿಲ್ಲ.

ಪ್ರಣಿಧಾನ ಬಹಿರ್ವಿಲೋಚನೈಃ ಪ್ರತಿಲಬ್ಧಾನುಭವಃ ಪ್ರಸಾದಯನ್।
ಅನಿ ನೀಷತ ತಾವುಭೌ ತದಾ ಪುರಮಾರಬ್ಧ ಶರಾಸನೋಽತ್ಸವಾಂ ॥೧೨೦॥

ಮನಸ್ಸಿನಲ್ಲಿ ಸಮಾಧಿ ಸ್ಥಿತಿಯಲ್ಲಿ ಬಾಹ್ಯ ಚಕ್ಷುಗಳಿಂದ ಅವರುಗಳ ಅನುಭವವನ್ನು ಹೊಂದಿ ಅವರುಗಳ (ಬಲರಾಮ-ಕೃಷ್ಣರ) ಅನುಗ್ರಹ ಪಡೆದು, ಸ್ತುತಿಸುವುದರಲ್ಲಿ ವಿಳಂಬವಾದ್ದರಿಂದ ಶೀಘ್ರವಾಗಿ ನಗರಕ್ಕೆ ಆ ಕ್ಷಣವೇ ಹೋಗಲು ನಿರ್ಧರಿಸಿದನು.

ಸಮಾಧಿ ಸ್ಥಿತಿಯಲ್ಲಿ ಯೋಗಿಗಳು ಹೊಂದುವ ಸ್ಥಿತಿಯನ್ನು ತನ್ನ ಬಾಹ್ಯ ಚಕ್ಷುಗಳಿಂದ ನೋಡಿದ ಅಕ್ರೂರನು, ಅವರನ್ನು ಪರಮಾಶ್ಚರ್ಯದಿಂದ ನೋಡುತ್ತಾ ಅದ್ಭುತವಾಗಿ ಸ್ತೋತ್ರ ಮಾಡಿದನು.

ಗಜಸಿಂಹಗತೀ ತತಶ್ಚತೌ ಗಿರಿ ತುಂಗೇನ ರಥೇನ ತೇರತುಃ।
ಗಗನ ದ್ರವ ಸಂನಿಭಾಂ ನದೀ ಮಪುನಃ ಪ್ರಾಪ್ತಿ ಭಯಾದಿವಾಽಽಕುಲಾಂ ॥೧೨೧॥

ಮತ್ತೆ ಬಲರಾಮ-ಕೃಷ್ಣರೊಡನೆ ಆನೆ ನಡೆ, ಸಿಂಹ ನಡೆಗಳನ್ನು ಮಾಡುವ ಅವರಿಬ್ಬರೂ ಬೆಟ್ಟಗಳಂತೆ ಉತ್ತಮವಾದ ರಥವನ್ನು ಹೊಂದಿ, ಅದನ್ನು ವೇಗವಾಗಿ ಓಡಿಸಿಕೊಂಡು ಶ್ರೀಕೃಷ್ಣನು ಮತ್ತೆ ಇಲ್ಲಿಗೆ ಬರುವುದಿಲ್ಲ ಎಂಬ ಅಂಜಿಕೆಯಿಂದ ದುಃಖತಪ್ತಳಾಗಿದ್ದ, ದೊಡ್ಡದಾಗಿದ್ದ ಆಕಾಶವೇ ಕರಗಿ ಬಿದ್ದಿದೆಯೋ ಎಂಬಂತಿದ್ದ ಯಮುನೆಯನ್ನು ದಾಟಿದನು.

ಯಮುನಾ ನದಿಯೂ ಸಹ ಗೋಪಿಯರಂತೆ, ಮತ್ತು ಶ್ರೀಕೃಷ್ಣನ ಸಂಸ್ಪರ್ಶ ದೊರೆಯುವುದೋ ಇಲ್ಲವೋ ಎಂದು ದುಃಖತಪ್ತಳಾಗಿದ್ದಳು. "ಗಜಸಿಂಹ ಗತಿ ವೀರೌ" ಎಂಬಂತೆ ಸಿಂಹದ ನಡೆ, ಗಜದ ನಡೆ ಎರಡನ್ನೂ ಮೈಗೂಡಿಸಿಕೊಂಡಿದ್ದ ಅವರ್ಬಿಬರನ್ನೂ ಮತ್ತೆ ರಥದಲ್ಲಿ ಕುಳ್ಳಿರಿಸಿಕೊಂಡು ಮಧುರಾ ಪಟ್ಟಣದತ್ತ ಸಾಗಿದನು.

ಅಥ ವಿಯತಿ ಸಮೇತ್ಯೈಃ ಸಿದ್ಧ ಗಂಧರ್ವ ಮುಖ್ಯೈ ರ್ಭುವಿ ಚ
ಭುವನ ಗೋಪಃ ಸಂಸ್ತುತೋ ಗೋಪ ವೃದ್ಧೈಃ।
ಲಲಿತ ಗತಿ ವಿಹಾರೋ ರಾಮಚಂದ್ರೇಣ ಸಾರ್ಧಂ
ರಣ ಪರಿಣತಿಕಾಂಕ್ಷಿ ರಾಜಧಾನಿಂ ಜಗಾಹೇ ॥೧೨೨॥

ಮತ್ತೆ ಆಕಾಶದಲ್ಲಿ ನೆರೆದಿದ್ದ ಸಿದ್ಧರು, ಗಂಧರ್ವರೇ ಮೊದಲಾದವರಿಂದಲೂ, ಭೂಮಿಯಲ್ಲಿ ವಯಸ್ಸಾದ ಗೋಪವೃದ್ಧರಿಂದಲೂ, ಸ್ತೋತ್ರ ಮಾಡಲ್ಪಟ್ಟವನಾಗಿ, ಜಗತ್ತಿನ ರಕ್ಷಕನಾದ, ಸರ್ವೇಶ್ವರನಾದ ಸ್ವಾಮಿಯೂ, ಚಂದ್ರನಂತೆ ಶೋಭಿಸುತ್ತಾ, ಅಣ್ಣನಾದ ಬಲರಾಮನೊಡನೆ, ಹೋಗುವ ಇಚ್ಛೆಯುಳ್ಳವನಾಗಿ, ಮಧುರೆ ಎಂಬ ರಾಜಧಾನಿಯನ್ನು ಸುಂದರವಾದ ನಡೆಯಿಂದ ಗಾಂಭೀರ್ಯದಿಂದ (ರಣಾಕಾಂಕ್ಷಿಯಾಗಿ) ಪ್ರವೇಶಿಸಿದನು.

ಶ್ರೀಕೃಷ್ಣನ ಚರಿತ್ರೆಯಲ್ಲಿ ಮತ್ತೊಂದು ಅಧ್ಯಾಯ ಆರಂಭವಾಯಿತು. ಗೋಕುಲದಲ್ಲಿ ಹುಟ್ಟಿದಾರಭ್ಯ ನಡೆಸಿದ ಅದ್ಭುತ ಲೀಲೆಗಳನ್ನು ಅನುಭವಿಸಿದ ನಂದರೇ ಮೊದಲಾದ ಗೋಪವೃದ್ಧರನ್ನೂ ಪರಮ ಪುಣ್ಯವತಿಯರಾದ ಯಶೋದೆ ಮುಂತಾದ ಗೋಪಿಯರನ್ನೆಲ್ಲಾ ಬಿಟ್ಟು ಅವರಿಂದ ಅದ್ಭುತವಾಗಿ ಸ್ತುತಿಸಲ್ಪಟ್ಟವನಾಗಿ ತನ್ನ ಅವತಾರದ ಮುಖ್ಯೋದ್ದೇಶ ಸಾಧನೆಗಾಗಿ ಅಣ್ಣನಾದ ಬಲರಾಮನೊಡಗೂಡಿ ಹುಡುಗಾಟಿಕೆಯನ್ನು ಬಿಟ್ಟು ಚಕ್ರವರ್ತಿಯ ಗಾಂಭೀರ್ಯದಿಂದ ಮಧುರೆಯನ್ನು ಪ್ರವೇಶಿಸಿದನು.

'ಮಧುರಾ ಗಮನ ಪ್ರವೇಶ'ವೆಂಬ ನವಮಃ ಸರ್ಗವು ಮುಗಿದುದು.

ದಶಮಃ ಸರ್ಗಃ - ೧೦

ಕಂಸ ರಾಜ್ಯೋದ್ಧಾರಃ



ಈ ಸರ್ಗದಲ್ಲಿ 119 ಶ್ಲೋಕಗಳಿವೆ. ಶ್ರೀಕೃಷ್ಣನು ಬಲರಾಮನೊಡಗೂಡಿ ಮಧುರೆಯನ್ನು ಪ್ರವೇಶಿಸಿದಾಗಿನಿಂದ ಪ್ರಾರಂಭಿಸಿ, ಕಂಸನ ವಧೆ ಮತ್ತು ಉಗ್ರಸೇನ ಮಹಾರಾಜನ ಪಟ್ಟಾಭಿಷೇಕದವರೆಗಿನ ಪ್ರಸಂಗಗಳನ್ನು ವಿವರಿಸಲಾಗಿದೆ. ರಾಮಕೃಷ್ಣರು ಮಧುರೆಯ ರಾಜ ಬೀದಿಗಳಲ್ಲಿ ಓಡಿಯಾಡುವಾಗ ಅವರನ್ನು ಮಧುರಾ ಪುರವಾಸಿಗಳು ಸಂತೋಷಾಶ್ಚರ್ಯಗಳಿಂದ ವೀಕ್ಷಿಸಿದರು. ಮಧುರೆಯ ಸ್ತ್ರೀಯರು ಶ್ರೀಕೃಷ್ಣನನ್ನು ಕಂಡು ಮೋಹಿಸಿದುದು. ಮಾಲಾಕಾರನೆಂಬ ಹೂವಾಡಿಗನಿಗೆ ಅನುಗ್ರಹ ಮಾಡಿದ್ದು, ತನಗೆ ಸೇವೆ ಮಾಡಲು ನಿರಾಕರಿಸಿದ ರಜಕ (ಕಂಸನ ಭಂಟನಾದ ಅಗಸ)ನಿಗೆ ಶಿಕ್ಷೆ, ಗೂನಿಯನ್ನು ಸರ್ವಾಂಗ ಸುಂದರಿಯನ್ನಾಗಿ ಮಾಡಿ ಅವಳ ಆತಿಥ್ಯ ಸ್ವೀಕರಿಸಿದುದು, ಮಲ್ಲಯುದ್ಧರಂಗಮಂಟಪ ಪ್ರವೇಶ. ಅಲ್ಲಿ ಕಂಸನ ಬಿಲ್ಲನ್ನು ಮುರಿದು, ಇತರ ರಾಕ್ಷಸರನ್ನೆಲ್ಲಾ ಸದೆ ಬಡಿದುದು. 'ಕುವಲಯಾಪೀಡ' ವೆಂಬ ದುಷ್ಟ ಆನೆಯ ನಿಗ್ರಹ. ಚಾಣೂರ ಮುಷ್ಟಿಕರೆಂಬ ಜಟ್ಟಿಗಳನ್ನು ಕಾಳಗದಲ್ಲಿ ಸಂಹಾರ ಮಾಡಿದುದು ಮತ್ತು ಕಡೆಯಲ್ಲಿ ಕಂಸನ ವಧಾ ಪ್ರಸಂಗವಿದೆ.

ಹೀಗೆ ಶ್ರೀಕೃಷ್ಣನು ಮಧುರಾ ನಗರಿಯಲ್ಲಿ ನಡೆಸಿದ ಹಲವಾರು ವೀರಕೃತ್ಯಗಳನ್ನು ಹೃದಯಂಗಮವಾಗಿ ಆಚಾರ್ಯರು ವರ್ಣಿಸಿದ್ದಾರೆ. ವಸುದೇವನು ಮಾಡಿದ ಶ್ರೀಕೃಷ್ಣ ಸ್ತುತಿಯಲ್ಲಿ ಅನೇಕ ಗೂಢಾರ್ಥಗಳನ್ನು ತಿಳಿಸಿದ್ದಾರೆ.

ತಾನು ಸರ್ವ ಶಕ್ತನಾಗಿದ್ದರೂ, ಉಗ್ರಸೇನನನ್ನು ರಾಜನನ್ನಾಗಿ ಮಾಡಿ, ತಾನು ಅವನಿಗೆ ವಿಧೇಯನಾಗಿ ನಡೆದುಕೊಂಡದ್ದು ಶ್ರೀಕೃಷ್ಣನು ಹಿರಿಯರಿಗೆ ತೋರಿಸುವ ವಿನಯದ ಪ್ರತೀಕವಾಗಿದೆ.

ಶ್ರೀಕೃಷ್ಣನು ಯಾವ ಕಾರಣಕ್ಕಾಗಿ ಅವತಾರ ಮಾಡಿದನೋ ಅದನ್ನು ಭಾಗಶಃ ಈ ಸರ್ಗದಲ್ಲಿ ಪೂರೈಸಿದುದನ್ನು ವಿವರವಾಗಿ ತಿಳಿಸಲಾಗಿದೆ.

ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 11	ಮಧುರೆಯ ರಾಜಬೀದಿಗಳಲ್ಲಿ ರಾಮ ಕೃಷ್ಣರ ಓಡಾಟ. ಪ್ರಜೆಗಳ ಆನಂದ
12-13	ರಜಕ (ಅಗಸ)ನಿಂದ ಬಲಾತ್ಕಾರವಾಗಿ ಬಟ್ಟೆ ಪಡೆದದ್ದು
14-16	ಕುಬ್ಜೆ (ತ್ರಿವಕ್ರೆ) ಹಾಗೂ ಮಾಲಾಕಾರರಿಗೆ ಅನುಗ್ರಹ.
17-20	ಕಂಸ ಧನುರ್ಭಂಗ.
21-24	ರಂಗಮಂಟಪ ಪ್ರವೇಶ, ಬಾಗಿಲಲ್ಲಿ ಇದ್ದ ಕುವಲಯಾಪೀಡ ಆನೆಯ ವಧೆ.
25-30	ರಂಗಮಂಟಪದಲ್ಲಿದ್ದವರೆಲ್ಲರಿಗೂ ಶ್ರೀಕೃಷ್ಣನ ದರ್ಶನ.
31-55	ಚಾಣೂರ-ಮುಷ್ಟಿಕರೆಂಬ ಮಲ್ಲರ ವಧೆ.
56-63	ಕಂಸ ವಧೆ.
64-84	ವಸುದೇವನು ಮಾಡಿದ ಶ್ರೀಕೃಷ್ಣ ಸ್ತುತಿ.
85-88	ಶ್ರೀಕೃಷ್ಣನಿಂದ ಮಾತಾಪಿತೃಗಳ ಸಮಾಧಾನ.
89-97	ಶ್ರೀಕೃಷ್ಣ-ಬಲರಾಮರಿಗೆ ಪುರಜನರಿಂದ ಪುರಸ್ಕಾರ.
98-105	ಉಗ್ರಸೇನನಿಗೆ ರಾಜ್ಯಾಭಿಷೇಕ, ಶ್ರೀಕೃಷ್ಣನಿಗೆ ಯುವ ರಾಜ್ಯಾಭಿಷೇಕ, ಅಲಂಕೃತನಾದ ಶ್ರೀಕೃಷ್ಣನ ವರ್ಣನೆ.
106-119	ಉಗ್ರಸೇನನ ರಾಜ್ಯಪರಿಪಾಲನೆಯ ವರ್ಣನೆ.



ದಶಮಃ ಸರ್ಗಃ - ೧೦
ಕಂಸ ರಾಜ್ಯೋದ್ಧಾರ

ತತಸ್ತೌ ದದೃಶುಸ್ತತ್ರ, ವಿಶಂತೌ ರಾಜವೀಥಿಕಾಂ।
ಪೂರ್ಣದೃಷ್ಟಿಫಲಾಃ ಪೌರಾಃ ಪುಣ್ಯೈರೇಕ ಮುಖೈರಿವ ॥೧॥

ಮಥುರೆಯನ್ನು ಪ್ರವೇಶಿಸಿದ ಬಳಿಕ ಅಲ್ಲಿ ರಾಜಬೀದಿಯಲ್ಲಿ ಹೋಗುವ ಶ್ರೀಕೃಷ್ಣನನ್ನೂ ಬಲರಾಮನನ್ನೂ ಮಧುರಾ ನಗರವಾಸಿಗಳು ತಮ್ಮ ಪುಣ್ಯ ಬಲವೆಲ್ಲವೂ ಸೇರಿ ಒಂದಾಗಿ ಫಲ ನೀಡಿದಂತೆ ಕಣ್ಣುಗಳನ್ನು ಹೊಂದಿದ್ದಕ್ಕೆ ಪೂರ್ಣ ಫಲವಾಗಿ, ಕಣ್ತುಂಬಾ ಅವರುಗಳನ್ನು ಕಂಡು ಆನಂದಿಸಿದರು.

ಮಧುರಾ ನಗರವಾಸಿಗಳು ತಮ್ಮ ಊರಿನಲ್ಲಿಯೇ ಜನಿಸಿದ್ದ, ಆದರೆ ಇಷ್ಟು ದಿನ ತಮ್ಮಿಂದ ದೂರವಿದ್ದ ಸಾಕ್ಷಾತ್ ಭಗವಂತನ ಅವತಾರವಾದ ಶ್ರೀಕೃಷ್ಣನು ಪುನಃ ತಮ್ಮಲ್ಲಿಗೆ ಬಂದು ಸೇರಿದ್ದನ್ನು ತಮ್ಮ ಪೂರ್ವ ಜನ್ಮದ ಪುಣ್ಯ ಫಲವೆಂದೇ ಭಾವಿಸಿದರು. ಅಕ್ರೂರನಿಂದ ಕರೆತರಲ್ಪಟ್ಟ ಅವರು, ಮಧುರಾ ನಗರದ ಬೀದಿಗಳಲ್ಲಿ ಓಡಿಯಾಡುವುದನ್ನು ನೋಡಿ ಅತ್ಯಂತ ಆನಂದಪಟ್ಟರು. ತಮ್ಮ ಕಣ್ಣುಗಳ ಸೌಭಾಗ್ಯವನ್ನು ಅವರೇ ಕೊಂಡಾಡಿದರು.

ಚಕ್ಷುಷಾಮಿವ ಭಾಗ್ಯೇನ ಸಂಪ್ರವೃತ್ತೌ ಮಹೋತ್ಸವೌ।
ಯುಕ್ತೌ ಮದನ ಶಕ್ತ್ಯೈವ ಯುಗಪನ್ ಮಧು ಮಾಧವೌ ॥೨॥

ಭಾಗ್ಯ ವಶದಿಂದ ಕಣ್ಣುಗಳಿಗೆ ಏರ್ಪಟ್ಟ ಮಹೋತ್ಸವದಂತೆ ಮನ್ಮಥನ ಶಕ್ತಿಯಿಂದ ವಸಂತ ಮಾಸಗಳಾದ ಚೈತ್ರವೂ, ವೈಶಾಖವೂ ಒಂದಾಗಿ ಸೇರಿದಂತೆ ಭಾವಿಸಿದರು.

ರಾಮ-ಕೃಷ್ಣರಿಬ್ಬರನ್ನೂ ಒಟ್ಟಿಗೆ ನೋಡಿ, ವಸಂತ ಮಾಸಗಳಾದ ಚೈತ್ರ-ವೈಶಾಖಗಳು ಹೇಗೆ ಎಲ್ಲರಿಗೂ ಆನಂದ ನೀಡುತ್ತವೆಯೋ ಆ ರೀತಿ ಅವರಿಬ್ಬರೂ ತಮಗೆ ಆನಂದ ನೀಡಲೆಂದೇ ಮಧುರಾ ನಗರಿಗೆ ಪುನಃ ಬಂದಿದ್ದಾರೆಂದು ಸಂಭ್ರಮಿಸಿದರು.

ಅಭಿಖ್ಯಾ ವೀಚಿ ವಿಕ್ಷೇಪೈ ರಪೃಥಗ್ಭಾವ ಚಿತ್ರಿತೈಃ।
ಸಮೇತೇರನುಭಾವಾದ್ಯೈ ಸಕ್ತಾಮಿವ ರಸೋತ್ತಮೌ॥ ॥೩॥

ಅಗಲಲಾರದೆ, ಸೇರಿದುದರಿಂದ, ವಿಚಿತ್ರವಾದ ಅಲೆಗಳ ಹೊಡೆತದಿಂದ ವಿಭಾವ, ಅನುಭಾವ ಎಂಬ ಸಂಚಾರಿ ಭಾವಗಳ ಸೇರುವಿಕೆಯಿಂದ ಉಂಟಾಗುವ ಎರಡು ಉತ್ತಮ ವಾದ ರಸಗಳು ಒಂದಾಗಿ ತೋರಿದಂತೆ ಆಯಿತು.

ವಿಭಾವ, ಅನುಭಾವ ಎಂಬ ರಸಗಳಂತೆ ಕಾರ್ಯ ಕಾರಣಗಳು ಹೇಗೆ ಒಂದಕ್ಕೊಂದು ಪೂರಕವೋ, ಅದೇ ರೀತಿ ಇರುವ ರಾಮ-ಕೃಷ್ಣರನ್ನು ನೋಡಿ, ಶೃಂಗಾರ ರಸವು ಹೇಗೆ ಎಲ್ಲಾ ರಸಗಳನ್ನೊಳಗೊಂಡಿರುವುದೋ ಅದೇ ರೀತಿ ಅವರ ಸಮ್ಮಿಲನವು ಎಂದು ಭಾವಿಸಿದರು.

ಕ್ರಮಮುಲ್ಲಂಘ್ಯ ಭೂತಾನಾಂ ಭೋಗಮೋಕ್ಷ ವಿವೋದ್ಗೌ।
ತಯೋರೇವ ವಿನಿಷ್ಪತ್ತ್ಯೈ ಧರ್ಮಾವಿವಚ ತಾದೃಶೌ॥ ॥೪॥

ಒಂದರ ಹಿಂದೆ ಮತ್ತೊಂದರಂತೆ, ಕ್ರಮವನ್ನು ಉಲ್ಲಂಘಿಸಿ, ವಿಷಯಾನುಭವ, ಮೋಕ್ಷವು ಪ್ರಾಣಿಗಳಿಗೆ ಒಟ್ಟಿಗೆ ಸೇರಿದಂತಾಗಿತ್ತು. ಎರಡು ಫಲಗಳನ್ನು ನೀಡುವ ಪ್ರವೃತ್ತಿ ನಿವೃತ್ತಿ ಧರ್ಮಗಳೇ ಸೇರಿ ಬಂದಂತ್ತಿತ್ತು.

ವಿಷಯಗಳ ಸುಖ (ಕಾಮೇಚ್ಛೆ) ಮತ್ತು ಮೋಕ್ಷ ಒಟ್ಟಿಗೆ ಇರಲಾರವು. ಆದರೆ ರಾಮ-ಕೃಷ್ಣರಿಬ್ಬರೂ ಒಟ್ಟಿಗೆ ಇರುವುದು. ಆ ಲೋಕ ನಿಯಮವನ್ನು ಮೀರಿ ಇರುವಂತಿತ್ತು. ಪ್ರವೃತ್ತಿ ಧರ್ಮವು ಲೌಕಿಕ ಜೀವನದಲ್ಲಿ ಆಸೆಯುಂಟು ಮಾಡುತ್ತದೆ. ನಿವೃತ್ತಿ ಧರ್ಮವು ಅದರಲ್ಲಿ ಜಿಹಾಸೆ (ವಿರಾಗ?) ಉಂಟು ಮಾಡಿ ಸಂನ್ಯಾಸ ಬೋಧಿಸುತ್ತದೆ. ಆದರೆ ಈಗ ಅವೆರಡೂ ವಿರುದ್ಧ ಧರ್ಮಗಳು ಒಟ್ಟಿಗೆ ಸೇರಿದಂತಿತ್ತು.

ಪುನಂತೌ ಭುವನಂ ಪಾದೈಃ ಪುಷ್ಪವಂತಾ ವಿವಾಪರೌ।
ಸಿಂಚತೌ ಕಾಂತಿ ವರ್ಷೇಣ ಸಿತ ಕೃಷ್ಣಾ ವಿವಾಂಬುದೌ॥ ॥೫॥

ತಮ್ಮ ಪಾದಸ್ಪರ್ಶದಿಂದ ಭೂಮಿಯನ್ನು ಪರಿಶುದ್ಧವಾಗಿಸುವ ಸೂರ್ಯಚಂದ್ರರಂತೆ ತಮ್ಮ ಕಾಂತಿಯನ್ನು ಎಲ್ಲೆಲ್ಲೂ ಹರಡಿ ಭೂಮಿಯನ್ನು ತಣ್ಣಗೆ ಮಾಡುವ ಕಪ್ಪು-ಬಿಳುಪು ಮೇಘಗಳಂತೆ ಆ ಇಬ್ಬರೂ ತೋರಿದರು.

ಸೂರ್ಯಚಂದ್ರರಿಬ್ಬರೂ ಲೋಕವನ್ನು ತಮ್ಮ ಪಾದಸ್ಪರ್ಶದಿಂದ ಅಂದರೆ ಕಿರಣ ಗಳಿಂದ ಪಾವನ ಮಾಡುತ್ತಾರೆ. ಅದೇ ರೀತಿ ಭಗವದಂಶ ಸಂಭೂತರಾದ ಬಲರಾಮ ಕೃಷ್ಣರು ತಮ್ಮ ಪಾದಸ್ಪರ್ಶದಿಂದ ಮಧುರಾ ನಗರಿಯನ್ನು ಪಾವನಗೊಳಿಸಿದರು. ಬಲರಾಮನು ಶ್ವೇತ ವರ್ಣದವನಾಗಿದ್ದರಿಂದ ಕರಿಯ ಹಾಗೂ ಬಿಳಿಯ ಮೇಘಗಳು ಒಟ್ಟಿಗೆ ತೋರಿದಂತೆ ಇದ್ದರು. ಅದ್ಭುತ ಕಾಂತಿಯಿಂದ ಶೋಭಿಸುತ್ತಿದ್ದರು.

ಮದೋಪಕ್ರಮ ದುರ್ಧಾಂತೌ ಮಧುರೋದ್ಧತ ವಿಭ್ರಮೌ।
ಕಲಭಾವಿವ ಸನ್ನದ್ಧೌ ಕಂಸಾದಿ ನ ಲ ಮರ್ದನೇ ॥ ॥೬॥

ಮದವು ಉಂಟಾಗಿರುವುದರಿಂದ, ಅಡಗಿಸಲಾಗದ, ಗಂಭೀರವಾದ, ಚೇಷ್ಟೆಗಳನ್ನು ಹೊಂದಿರುವವನೂ, ಕಂಸನೇ ಮೊದಲಾದ ಅಸುರರುಗಳಿಂದ ನಿಗ್ರಹಿಸಲಾಗದ, ಎಳೆಯ ಆನೆಗಳಂತೆಯೂ ಇದ್ದರು.

ಆ ಈರ್ವವು ರಾಜಕುಮಾರರು, ಯಾವ ರೀತಿ ಮದ ತುಂಬಿದ ಆನೆಗಳು ಯಾರಿಂದಲೂ ಅಡಗಿಸಲಾಗದೆ, ಸ್ವೇಚ್ಛೆಯಾಗಿ ತಮ್ಮ ಕ್ರೀಡೆಗಳನ್ನು ನಡೆಸುವವುವೋ, ಆ ರೀತಿ ಯಾರಿಂದಲೂ ಅಂದರೆ ಕಂಸನೇ ಮೊದಲಾದ ಅಸುರರಿಂದ ಜಯಿಸಲಾಗದ ಚಿಕ್ಕ ವಯಸ್ಸಿನ ಆನೆಗಳಂತೆ ಮಧುರೆಯ ಬೀದಿಯಲ್ಲಿ ಸುತ್ತಾಡುತ್ತಿದ್ದರು. ಮಧುರಾ ನಗರಾ ವಾಸಿಗಳು ಅವರಿಗೆ ಸುಸ್ವಾಗತವನ್ನು ಕೋರಿದರು.

ಶುಭಾನಾಮಿವ ಸೀಮಂತ್ಯೈಃ ಶ್ರುತಿ ಸೀಮಂತ ಸೇವಿತೈಃ ।
ಪುನಂತೌ ರಾಜ ವಿಶಿಖಾಂ ಪುಣ್ಯೈಶ್ಚರಣ ಪಂಕಜೈಃ॥ ॥೭॥

ಉಚ್ಛ್ರಾಯಕ್ಕೂ ಉಚ್ಛ್ರಾಯವಾಗಿರುವ ಕ್ಷೇಮಗಳನ್ನು ಉಂಟು ಮಾಡುವವರೂ, ವೇದಗಳ ಮುಡಿಗಳಿಂದ ಸೇವಿಸಲ್ಪಡುವವರೂ ತಮ್ಮ ಪಾವನವಾದ ಪಾದಾರವಿಂದಗಳಿಂದ ರಾಜಬೀದಿಯನ್ನು ಪಾವನ ಮಾಡುತ್ತಿರುವವರಾದ ಆ ಇಬ್ಬರು ರಾಜಕುಮಾರರನ್ನು ಎಲ್ಲರೂ ಕಂಡರು.

ಉಪನಿಷತ್ ಪ್ರತಿಪಾದ್ಯರಾದ ಆ ರಾಮಕೃಷ್ಣರು, ಎಲ್ಲರಿಗಿಂತಲೂ ಮೇಲಾದವರು. ಅವರ ದಿವ್ಯ ಪಾದಾರವಿಂದಗಳನ್ನೂ ಯೋಗಿಗಳು, ಮಹರ್ಷಿಗಳಾದಿಯಾಗಿ ಎಲ್ಲರೂ ಸೇವಿಸುತ್ತಾರೆ. ಅಂತಹ ದಿವ್ಯ ಚರಣಾರವಿಂದಗಳಿಂದ ಮಧುರೆಯ ಬೀದಿಗಳನ್ನು ಪಾವನ ಮಾಡುತ್ತಾ, ಆ ಇಬ್ಬರೂ ತಮ್ಮನ್ನು ನೋಡುವ ಎಲ್ಲರನ್ನೂ ಅನುಗ್ರಹಿಸುತ್ತಾ ನಡೆದು ಬರುತ್ತಿದ್ದರು.

ಶೀಲ ಸಂವೃತ ಪಾರಮ್ಯೈಃ ಶೃಂಗಾರ ಪರಿಕರ್ಮಿತೈಃ।
ದೃಷದೋಽಪಿ ದ್ರವೀ ಭಾವಂ ನಯಂತೌ ದಿವ್ಯಚೇಷ್ಟಿತೈಃ॥ ॥೮॥

ಸೌಶೀಲ್ಯದಿಂದ ತನ್ನ ಪರತ್ವವನ್ನು ಮರೆಸಿಕೊಂಡಿರುವವನೂ, ಶೃಂಗಾರದಿಂದ ಸೌಂದರ್ಯಭರಿತವಾದ ನಡೆನುಡಿಗಳಿಂದ, ಭಾವನೆಗಳಿಂದ ಕಲ್ಲುಗಳನ್ನು ಕರಗಿಸುವ ಸ್ವಭಾವ ವುಳ್ಳವರೂ ಆದ,

ಭಗವಂತನು ಭೂಮಿಯಲ್ಲಿ ಅವತಾರ ಮಾಡುವುದೇ ತನ್ನ ಸೌಶೀಲ್ಯ ಗುಣವನ್ನು ಪ್ರಕಟಪಡಿಸುವುದಕ್ಕಾಗಿ. ಸೌಶೀಲ್ಯವೆಂದರೆ, ಬಹಳ ಎತ್ತರದಲ್ಲಿ ಇರುವವನು, ತಾನಾಗಿಯೇ ಕೆಳಗೆ ಇಳಿದು, ಕೆಳಗಿಳಿರುವವರೊಡನೆ, ಸಂತೋಷದಿಂದ ಬೆರೆಯುವುದು. ತಾನು ಪರಸ್ವರೂಪನಾಗಿದ್ದರೂ ಅಂದರೆ ಯಾರೂ ಅರಿಯಲಾಗದ ರೂಪಗುಣವುಳ್ಳವನಾಗಿಯೂ, ಭೂಲೋಕದ ಎಲ್ಲರೂ ತನ್ನನ್ನು ಅನುಭವಿಸಲೆಂದು, ಮನುಷ್ಯನಾಗಿ, ಅವತಾರ ಮಾಡಿ ಪ್ರಾಕೃತ ಜನರೊಡನೆ ಸೇರಿ ಅವರೊಡನೆ ಒಡನಾಡುವುದು. ರಾಮಕೃಷ್ಣಾದ್ಯವತಾರಗಳಲ್ಲಿ ಅದನ್ನು ತೋರಿದ್ದಾನೆ.

ದಿದೃಕ್ಷಾದತ್ತ ದೃಷ್ಟಿನಾಂ ಮನಸ್ಕಾರ ಮನೀಷಯೋಃ ।
ಸ ಪೀತಿ ರಸ ಸಂತೋಷಂ ದಿಶಂತೌ ದೇಹಕಾಂತಿತಃ ॥೯॥

ನಾಚಿಕೆಯಿಂದ ಕೂಡಿದ ಕಣ್ಣುಗಳನ್ನಿಟ್ಟುಕೊಂಡು ನಿಂತಿರುವವರ ಮೇಲೆ ಮನಸ್ಸಿಗೂ, ಬುದ್ಧಿಗೂ, ತಮ್ಮ ದಿವ್ಯ ಶರೀರದಿಂದ ಆನಂದವನ್ನು ಉಂಟು ಮಾಡುತ್ತಿರುವವರೂ ಆದ,

ಮಧುರಾ ನಗರಿಯ ಸ್ತ್ರೀಯರು, ಕೃಷ್ಣನನ್ನು ಧೈರ್ಯದಿಂದ ಕಣ್ಣೆತ್ತಿ ನೋಡಲು ನಾಚಿಕೆ ಪಡುತ್ತಿದ್ದರು. ಆ ಭುವನ ಸುಂದರನಾದ ಸ್ವಾಮಿಯ ದಿವ್ಯ ಮಂಗಳ ಶರೀರವನ್ನೂ, ಯಾವ ಆ ದಿವ್ಯ ರೂಪವನ್ನು ಇಷ್ಟು ದಿನ ಗೋಪ ಗೋಪಿಯರೆಲ್ಲರೂ ಆನಂದದಿಂದ ಅನುಭವಿಸಿದರೋ, ತಮ್ಮ ಮನಸ್ಸಿಗೂ, ಬುದ್ಧಿಗೂ ನಿಲುಕಲಾರದ ಆ ದಿವ್ಯ ಶರೀರವನ್ನು ನೋಡಿ ಆನಂದಪಡುತ್ತಿದ್ದರು. ಮಧುರಾ ನಗರವಾಸಿಗಳು. ಅವರೆಲ್ಲವೇ ಧನ್ಯರು!

ಮನ್ಮಥಾಯುತ ಸೌಂದರ್ಯೌ ವಸಂತಾಯುತ ಸೌರಭೌ ।
ಶಶಾಂಕಾಯುತ ಲಾವಣ್ಯೌ ಚಂಡರಶ್ಮ್ಯಯುತ ದ್ಯುತಿಃ ॥೧೦॥

ಹತ್ತು ಸಾವಿರ ಮನ್ಮಥರುಗಳಿಗಿಂತ ಸುಂದರನಾದವನೂ, ಹತ್ತು ಸಾವಿರ ವಸಂತ ಋತುಗಳಿಂದ ಮನಸ್ಸನ್ನು ಸಂತೋಷಪಡಿಸುವವನೂ, ಹತ್ತು ಸಾವಿರ ಚಂದ್ರರುಗಳ ಬೆಳದಿಂಗಳಿನಂತೆ ಶೋಭಿಸುವವನೂ, ಹತ್ತು ಸಾವಿರ ಸೂರ್ಯರಂತೆ ಕಾಂತಿಯುಳ್ಳವನಾದ,

''ಸಾಕ್ಷಾದ್ ಮನ್ಮಥ ಮನ್ಮಥ' ಎಂಬಂತೆ ಕಾಮ ಜನಕನಾದ ಶ್ರೀಕೃಷ್ಣನ ಸೌಂದರ್ಯವನ್ನು ಕೇಳಬೇಕೇ? ಅನೇಕಾನೇಕ ವಸಂತ ಋತುಗಳು ಸೇರಿದರೆ ಯಾವ ರೀತಿ ಮನಸ್ಸಿಗೆ ಹರ್ಷ ಉಂಟಾಗುವುದೋ ಆ ರೀತಿ ಆನಂದವನ್ನು ನೀಡುವ, ಅನೇಕ ಚಂದ್ರರುಗಳು ಒಟ್ಟಿಗೆ ಬೆಳದಿಂಗಳು ಸೂಸಿದರೆ, ಹೇಗೆ ಜಗತ್ತು ಆಹ್ಲಾದಿಸುವುದೋ, ಆ ರೀತಿ ಎಲ್ಲರನ್ನೂ ಆನಂದ ಪಡಿಸುವ ಶ್ರೀಕೃಷ್ಣನು ಮಧುರೆಯಲ್ಲಿ ನಡೆದುಬಂದನು. (ಆಯುತವೆಂದರೆ ಹತ್ತು ಸಾವಿರ). ಸಾಮುದ್ರಿಕಾ ಶಾಸ್ತ್ರದ ಎಲ್ಲಾ ಲಕ್ಷಣಗಳನ್ನೂ ಹೊಂದಿದವನು ಶ್ರೀಕೃಷ್ಣ

ಚಿತ್ರಿತಾವಿವ ನೀತಾನಾಂ ಚಿತ್ತ ಚೇಷ್ಟಾಪಹಾರತಃ।
ಪ್ರತಿಸೌಧಂ ಪುರಸ್ತ್ರೀಣಾಂ ನಿರ್ವಿಶಂತೌ ನಿರೀಕ್ಷಣಂ ॥೧೧॥

ಮನಸ್ಸನ್ನೂ ಬಾಹ್ಯ ಚೇಷ್ಟೆಗಳನ್ನೂ ಕೊಳ್ಳೆ ಹೊಡೆದುದರಿಂದ, ಚಿತ್ರದಂತಿರುವ ಒಂದೊಂದು ಉಪ್ಪರಿಗೆಗಳಲ್ಲಿರುವ ನಗರದ ಹೆಣ್ಣುಮಕ್ಕಳು, ಕಣ್ನೋಟಗಳನ್ನು ಅನುಭವಿಸುವವರೂ ಆದ,

ಶ್ರೀಕೃಷ್ಣನನ್ನು ನೋಡುತ್ತಾ ಮಧುರಾ ನಗರದ ಒಂದೊಂದು ಮನೆಯ ಉಪ್ಪರಿಗೆಗಳಲ್ಲಿ ನಿಂತು ಅವನ ಬಾಹ್ಯ ಸೌಂದರ್ಯವನ್ನು ಅನುಭವಿಸುತ್ತಿದ್ದ ಆ ಸುಂದರ ಸ್ತ್ರೀಯರು ಚಿತ್ರದ ಗೊಂಬೆಗಳಂತೆ ಸ್ತಬ್ಧರಾಗಿ ನಿಂತು ಅವನನ್ನು ಎವೆಯಿಕ್ಕದೆ ನೋಡುತ್ತಿದ್ದರು. ಕೃಷ್ಣನೂ ಸಹ ಅವರ ಕಡೆ ದೃಷ್ಟಿಬೀರಿ, ಅವರ ಕಣ್ನೋಟಗಳ ಸವಿಯನ್ನು ಅನುಭವಿಸುತ್ತಿದ್ದನು.

ಸುಪ್ರಭಾತಮಿಹ ಪ್ರಾಪ್ತಂ ಸೂಷಾ ಚ ಸುದಿನಂ ಚ ನಃ।
ಇತಿ ವಾದಿಭಿರನ್ಯೋನ್ಯಂ ಧೃತ ಚಿತ್ತೈರನುದ್ರುತಾ ॥೧೨॥

ಇದು ನಮಗೆ ಒಳ್ಳೆಯ ಕಾಲವು. ಒಳ್ಳೆಯ ಉದಯ, ಒಳ್ಳೆಯ ಹಗಲು ಎನ್ನುತ್ತಾ ಅಲ್ಲಲ್ಲೇ ಸೇರಿ ಮಾತಾಡಿಕೊಂಡು, ಮನಸ್ಸು ಕರಗಿ, ಓಡಿ ಬರುವ ಜನಗಳಿಂದ ಹಿಂಬಾಲಿಸಲ್ಪಟ್ಟವರೂ ಆದ,

ಆಬಾಲ ವೃದ್ಧರಾದಿಯಾಗಿ, ಎಲ್ಲರೂ ಇದಲ್ಲವೇ ನಮ್ಮ ಒಳ್ಳೆಯ ಕಾಲ. ''ಅದ್ಯಮೇ ಸಫಲಂ ಜನ್ಮ ಸುಪ್ರಭಾತಾ ಚ ಮೇ ನಿಶಾ'' ಎಂಬಂತೆ ತಮ್ಮ ಸೌಭಾಗ್ಯವನ್ನು ಕೊಂಡಾಡುತ್ತಾ ಶ್ರೀಕೃಷ್ಣನನ್ನು ಹತ್ತಿರದಿಂದ ನೋಡಲು ಅವನ ಹಿಂದೆ ಓಡೋಡಿ ಬರುತ್ತಿದ್ದನು. ''ಇಂದಿನ ದಿನವೇ ಶುಭ ದಿನವು'' ಎಂದೆಲ್ಲಾ ಉಚ್ಚರಿಸುತ್ತಾ, ಕೃಷ್ಣನನ್ನು ಹಿಂಬಾಲಿಸುತ್ತಿದ್ದರು.

ಬಲಾದಪ ಹೃತೈಸ್ತತ್ರ ರಜಕಾತ್ ರಾಜ ಸಂಮತಾತ್।
ಪರಭಾಗಶ್ರಿಯಂ ಪ್ರಾಪ್ತೌ ವಾಸೋಭಿ ರಸಿತಾರುಣೈಃ ॥೧೩॥

ಅರಸನಿಗೆ ಸೇರಿದ ರಜಕನ ಬಳಿ ಬಲಾತ್ಕಾರದಿಂದ ಕಿತ್ತುಕೊಂಡಿದ್ದ ಬಿಳಿ ಮತ್ತು ಕೆಂಪು ಬಟ್ಟೆಗಳನ್ನು ಧರಿಸಿ, ತಮ್ಮ ದಿವ್ಯ ಶರೀರಗಳನ್ನು ಅಲಂಕರಿಸಿಕೊಂಡವರೂ ಆದ,

ಅವರು ಬೀದಿಗಳಲ್ಲಿ ನಡೆದು ಬರುವಾಗ, ಕಂಸನ ಅರನೆಗೆ ಸೇರಿದ ರಜಕನೊಬ್ಬನು, ಬಿಳಿ, ಕೆಂಪು ಇತ್ಯಾದಿ ಬಣ್ಣಗಳ ಬಟ್ಟೆಗಳನ್ನು ಒಗೆದು ಪರಿಷ್ಕೃತಗೊಳಿಸಿ ತೆಗೆದುಕೊಂಡು ಬರುತ್ತಿದ್ದರು. ಅವನನ್ನು ನಯ ವಾಕ್ಯಗಳಿಂದ ಕೆಂಪು ಬಟ್ಟೆಗಳನ್ನು ಕೊಡೆಂದು ಕೇಳಿದಾಗ, ಅವನು ನಿರಾಕರಿಸಿದನು. ಆವಾಗ ರಾಮಕೃಷ್ಣರು ಅವನಿಂದ ಬಲಾತ್ಕಾರದಿಂದ ಬಟ್ಟೆಗಳನ್ನು ಪಡೆದು ಅದರಿಂದ ತಮ್ಮ ದೇಹವನ್ನು ಅಲಂಕರಿಸಿಕೊಂಡರು.

ಭಗವಂತನಿಗೆ ಅನಾಯಾಸವಾಗಿ ಸೇವೆ ಮಾಡುವ ಸದವಕಾಶವನ್ನು ಆ ಅಗಸನು ಅಹಂಕಾರದಿಂದ ಕಳೆದುಕೊಂಡನು.

ಲಬ್ದ ಪುಣ್ಯ ವಿಪಾಕೇನ ಮಾಲಾಕಾರೇಣ ಲಂಭಿತೈಃ।
ಶಬಲೌ ದಾಮಭಿಶ್ಚಿತ್ರೈಃ ಸಂದಿಗ್ಧ ವನಮಾಲಿಕೈಃ ॥೧೪॥

ಭಾಗ್ಯವು ಫಲಿಸುವ ಕಾಲ ಪಡೆದ ಒಬ್ಬ ಮಾಲಾಕಾರನಿಂದ ಭಕ್ತಿಯಿಂದ ಸಮರ್ಪಿಸಿದ ವನಮಾಲೆಗಳನ್ನು ಧರಿಸಿ, ಇತರ ಸುಗಂಧ ಸೂಸುವ ಪುಷ್ಪ ಮಾಲೆಗಳಿಂದ ಶೋಭಿತರಾದವರಾದ,

ಆದರೆ ಅದೇ ರೀತಿ ಒಬ್ಬ ಮಾಲಾಕಾರನಿಂದ (ಸುದಾಮನೆಂಬ ಹೆಸರು ಪಡೆದ ಪುಷ್ಪಮಾಲೆಗಳನ್ನು ಕಟ್ಟುವ ಹೂವಾಡಿಗ) ಮಾಲೆಗಳನ್ನು ಅಪೇಕ್ಷಿಸಿದಾಗ, ಅವನು ಅತ್ಯಂತ ಭಕ್ತಿಯಿಂದ ಅವುಗಳನ್ನು ರಾಮ – ಕೃಷ್ಣರಿಗೆ ಸಮರ್ಪಿಸಿ ಧನ್ಯನಾದನು. ಭಾಗ್ಯವು ಇದ್ದಲ್ಲಿ ಮಾತ್ರ ಭಗವತ್ಕೈಂಕರ್ಯ ಲಾಭವು ದೊರೆಯುತ್ತದೆ. ಅಗಸನಿಗೆ ಭಾಗ್ಯವಿರಲಿಲ್ಲ. ಮಾಲಾಕಾರನಿಗೆ ಸಕಲ ಸೌಭಾಗ್ಯಗಳನ್ನಿತ್ತು, ಅವನಿತ್ತ ಮಾಲೆಗಳನ್ನು ಧರಿಸಿ, ಮೊದಲೇ ಸುಂದರರಾಗಿದ್ದ ಆ ಇಬ್ಬರು ಮತ್ತಷ್ಟು ಸುಂದರರಂತೆ ಬೆಳಗಿದರು.

ಕಾಂತಿ ನಿರ್ಜಿತಯಾ ಕಾಮಾತ್ ಪ್ರದಿಷ್ಟೈಃ ಕಂಸ ಕುಬ್ಜಯಾ।
ದಧತೌ ವರ್ಣಕೈರ್ಭೂಯೋ ದಿವ್ಯ ಗಂಧೌ ಸುಗಂಧಿತಾಂ॥ ॥೧೫॥

ಅಪ್ರಾಕೃತವಾದ ಪರಿಮಳಗಳು ಸಹಜವಾಗಿ ಇದ್ದರೂ, ಕಂಸನಿಗೆ ಸೇವೆ ಮಾಡುವ ಗೂನಿಯೊಬ್ಬಳಿಂದ (ಸೈರಿಂಧ್ರಿ) ಇವರ ಸೌಂದರ್ಯದಲ್ಲಿ ಆಸೆ ಪಟ್ಟು ಸೋತು ಹೋದ ಪ್ರೇಮ ದಿಂದ ತಯಾರಿಸಲ್ಪಟ್ಟ ಚಂದನ ಪುಷ್ಪಾದಿಗಳಿಂದ ಅಲಂಕಾರ ಹೊಂದಿ ಆನಂದ ಪಟ್ಟವರಾದ,

ಅದೇ ರೀತಿ ಮುಂದೆ ಬರುತ್ತಾ ಒಬ್ಬ ಕುಬ್ಜೆಯನ್ನು ಶ್ರೀಕೃಷ್ಣನು ಸಂಧಿಸಿದನು. ಅವಳು ಕಂಸನಿಗೆ ಗಂಧವನ್ನು ತೇಯ್ದು ದಿನವೂ ಸಮರ್ಪಿಸುವವಳು. ರಾಮಕೃಷ್ಣರನ್ನು ಕಂಡು, ಅತ್ಯಂತ ಪ್ರೇಮಾವಿಷ್ಟಳಾಗಿ, ತನ್ನ ಕೈಯ್ಯಲ್ಲಿದ್ದ ಗಂಧದ ಬಟ್ಟಲಿನಿಂದ ಯಥೇಚ್ಛವಾಗಿ ಗಂಧ ತೆಗೆದು ಅವರಿಗೆ ಪೂಸಿಕೊಳ್ಳಲು ಕೊಟ್ಟು ಧನ್ಯಳಾದಳು. ಕಂಸನ ಭಯವಿದ್ದರೂ ಶ್ರೀಕೃಷ್ಣನ ಮೇಲಿನ ಪ್ರೇಮದಿಂದ ಗಂಧವನ್ನೂ, ಅಂಗರಾಗವನ್ನೂ ನೀಡಿ ಆನಂದಿಸಿದಳು.

ಋಜುಕೃತ ಸುಜಾತಾಂಗ್ಯಾ ಋಜು ಬುದ್ಧ್ಯಾಥ ಕುಬ್ಜಯಾ।
ಪ್ರಣಯಂತ್ಯಾ ಸ್ವಗೇಹಾಪ್ತಿಃ ಪ್ರಾಪ್ತಮಂದಸ್ಮಿತೌ ಮಿಥಃ ॥ ॥೧೬॥

ಮತ್ತೆ ಅವಳ ಸೇವೆಯಿಂದ ತೃಪ್ತರಾಗಿ ಅವಳಿಗೆ ಸುಂದರವಾದ ಶರೀರವನ್ನು ಅನುಗ್ರಹಿಸಲಾಗಿ, ಅವರಿಬ್ಬರೂ ತನ್ನ ಮನೆಗೆ ದಯಮಾಡಿಸಬೇಕೆಂಬ ಅವಳ ಪ್ರಾರ್ಥನೆ ಯನ್ನು ಅಂಗೀಕರಿಸಿ, ಅವಳ ಮನೆಯನ್ನು ಸ್ಮಿತವದನನಾಗಿ ಹೊಕ್ಕರು.

ಶ್ರೀಕೃಷ್ಣನಿಗೆ ಅಂಗರಾಗವನ್ನು ಕೊಟ್ಟ ಆ ಗೂನಿಯು, ಅವರನ್ನು ಮನೆಯ ಒಳಗೆ ಬಂದು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದಾಗ, ಅದನ್ನು ಮನ್ನಿಸಿ, ಅವಳ ಗೃಹದೊಳಕ್ಕೆ ಬಿಜಯ ಮಾಡಿ, ಅವಳ ಅಂಗನ್ಯೂನತೆಯನ್ನು ಸರಿಪಡಿಸಿ, ಅವಳನ್ನು ಒಬ್ಬ ಸುಂದರ ಸ್ತ್ರೀಯನ್ನಾಗಿ ಪರಿವರ್ತಿಸಿದರು.

ತತೋ ವಿವಿಶತುಃ ಶಾಲಾಂ ಬಲಿ ಸದ್ಮ ಗುಹಾಮಿವ।
ಪ್ರಥಿತಾಂ ಪೃಥುಭಿಶ್ಚಾಪೈಃ ಪನ್ನಗೈರಿವ ಭೀಷಣೈಃ ॥ ॥೧೭॥

ಮುಂದೆ ಆ ಇಬ್ಬರೂ ಭಯಂಕರವಾದ ಹಾವುಗಳಂತೆ ಇರುವ ದೊಡ್ಡ ಬಿಲ್ಲುಗಳಿಂದ ಕೂಡಿ ಬಲಿ ಚಕ್ರವರ್ತಿಯ ಸ್ಥಳವಾದ ಪಾತಾಳ ಗುಹೆಯಂತಿರುವ ಧನುಶಾಲೆಯನ್ನು ಹೊಕ್ಕರು.

ಮುಂದೆ ಬರುವಾಗ ಕಂಸನ ಧನುಃಶಾಲೆಯನ್ನು ಕಂಡರು. ಆ ಧನುಶಾಲೆಯು ವಿಧವಿಧವಾದ ದೊಡ್ಡ ದೊಡ್ಡ ಬಿಲ್ಲುಗಳನ್ನು ಹೊಂದಿದ್ದು ಅವುಗಳನ್ನು ಹೆದೆಗೇರಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಆ ಧನುಶಾಲೆಯು ವಿಶಾಲವಾಗಿದ್ದು, ಬಲಿ ಚಕ್ರವರ್ತಿಯು ವಾಸಿಸುವ ಪಾತಾಳ ಗುಹೆಯಂತೆ ಇದ್ದು ನೋಡುವವರಿಗೆ ಭಯ ಹುಟ್ಟಿಸುವಂತಿತ್ತು.

ತತ್ರ ಶೈಲನಿಭಂ ಶೌರಿ ಸ್ತ್ರಿದಶೈರಪಿ ದುರ್ದಮಂ।
ದದರ್ಶಾ ಜಗವ ಪ್ರಖ್ಯಂ ದಂಭೋಲಿ ಕಠಿನಂ ಧನುಃ॥ ॥೧೮॥

ಆ ಧನುಃಶಾಲೆಯಲ್ಲಿ ಶ್ರೀಕೃಷ್ಣನು ಬೆಟ್ಟದಂತೆ ದೇವತೆಗಳಿಂದಲೂ, ಭಗ್ನಗೊಳಿಸಲಾಗದ ರುದ್ರನ ಪಿನಾಕವೆಂಬ ಬಿಲ್ಲಿಗೆ ಸಮನಾದ, ವಜ್ರಾಯುಧದಂತಿದ್ದ ಕಂಸನ ಬಿಲ್ಲನ್ನು ಕಂಡನು.

ಅಲ್ಲಿ ಕಂಸನ ಬಿಲ್ಲನ್ನು ಇಡಲಾಗಿತ್ತು. ಅದು ಬಹಳ ದೊಡ್ಡ ಧನುಸ್ಸಾಗಿದ್ದು ಕಂಸನು ಅದನ್ನು ಉಪಯೋಗಿಸಿ ಅನೇಕ ಯುದ್ಧಗಳನ್ನು ಗೆದ್ದಿದ್ದನು. ಆ ಬಿಲ್ಲು, ಸಾಕ್ಷಾತ್ ರುದ್ರನ ಪಿನಾಕವೆಂಬ ಧನುಸ್ಸನ್ನು ಹೋಲುತ್ತಿತ್ತು. ಅದನ್ನು ಕೃಷ್ಣನು ಆಶ್ಚರ್ಯಚಕಿತನಾದರೂ ಅವನ ಸಾಮರ್ಥ್ಯಕ್ಕೆ ಅದೇನೂ ದೊಡ್ಡ ವಿಷಯವಾಗಿರಲಿಲ್ಲ. ಅದನ್ನು ಹೆದೆಯೇರಿಸಲು ಸ್ವಾಮಿಯು ಆಸೆ ಪಟ್ಟನು.

ಸ್ವಪೂರ್ವ ಪ್ರಭವೋ ದಂತಮಿದಾನಿಂ ತನಯನ್ನಿವ ।
ತದಾನಮ್ಯ ಧನುರ್ಭೀಮಂ ಬಭಂಜ ಭುಜಲೀಲಯಾ॥ ॥೧೯॥

ತನ್ನ ಹಿಂದಿನ ಅವತಾರದಲ್ಲಿ ಮಾಡಿದ (ಶ್ರೀರಾಮಾವತಾರದಲ್ಲಿ ಮಾಡಿದ ಧನುರ್ಭಂಗದಂತೆ) ಈ ಅವತಾರದಲ್ಲೂ ಮಾಡುವ ಹಾಗೆ ಭುಜದಿಂದ (ಕೈಯಿಂದ) ಲೀಲಾಜಾಲವಾಗಿ ಭಯಂಕರವಾದ ಆ ಬಿಲ್ಲನ್ನು ಎತ್ತಿ ಹೆದೆಯೇರಿಸಿ ಮುರಿದುಬಿಟ್ಟನು.

ರಾಮಾವತಾರದಲ್ಲಿ ಶಿವನ ಬಿಲ್ಲನ್ನು ಸೀತೆಯನ್ನು ವರಿಸುವುದಕ್ಕಾಗಿ ಎರಡು ತುಂಡಾಗಿ ಮುರಿದಂತೆ ಈ ಅವತಾರದಲ್ಲಿಯೂ, ನಾರಾಯಣನ ಅವತಾರವಾದ ಶ್ರೀಕೃಷ್ಣನು ಆ ಕಂಸನ ಬಿಲ್ಲನ್ನು ಲೀಲಾಜಾಲವಾಗಿ ಮುರಿದು ಬೀಸಾಕಿದನು. ''ತದ್ ಬಭಂಜ ಧನುರ್ಮಧ್ಯೇ ನರಶ್ರೇಷ್ಠೋ ಮಹಾಯಶಾಃ'' ಎಂಬುದು ರಾಮಾಯಣ ವಾಕ್ಯ.

ಮಹತಾ ತಸ್ಯ ಘೋಷೇಣ ವಿದದ್ರೆ ದ್ವಿಷತಾಂ ಮನಃ।
ಸೌಧಾನಿ ಮಥುರಾಯಾಶ್ಚ ತುಷ್ಕಾ ಶನಿ ವಿಡಂಬಿನಾ॥ ॥೨೦॥

ಪ್ರಳಯ ಕಾಲದಲ್ಲಿ ಉಂಟಾಗುವ ಸಿಡಿಲಿನ ಧ್ವನಿಯೋ ಎಂಬಂತೆ ಆಗ ಆ ಧನುರ್ಭಂಗದ ಶಬ್ದದಿಂದ ಶತ್ರುಗಳ ಮನಸ್ಸು ಮುದುಡಿಹೋಯಿತು. ಮಧುರೆಯ ಉಪ್ಪರಿಗೆಗಳೆಲ್ಲವೂ ಅಲ್ಲಾಡಿ ಹೋದವು.

ಆ ಧನುರ್ಭಂಗದ ಶಬ್ದಕ್ಕೆ ಮಧುರಾಪುರಿಯೇ ಕಂಪಿಸಿತು. ಆ ಭಯಂಕರ ಶಬ್ದವನ್ನು ಕೇಳಿ ಕಂಸನು ನಡುಗಿಹೋದನು.

ಚಾಪಗೋಪ ಚ ಮೂಂ ಹತ್ವಾತೌ ಜಗದ್ಧಿತ ಮಾನುಷೌ।
ಅತಿಲಂಘ್ಯ ಧನುಃಶಾಲಾಂ ರಂಗದ್ವಾರಮುವಾಪತುಃ॥ ॥೨೧॥

ಜಗತ್ತಿನ ಒಳ್ಳೆಯದಕ್ಕಾಗಿ ಮನುಷ್ಯಾವತಾರ ಮಾಡಿದ ಆ ಇಬ್ಬರೂ ಬಿಲ್ಲನ್ನು ಕಾಯುತ್ತಿದ್ದ ಸೈನ್ಯವನ್ನು ಸಂಹರಿಸಿ, ಆ ಧನುಶ್ಶಾಲೆಯನ್ನು ಬಿಟ್ಟು ಮಲ್ಲಯುದ್ಧ ಮಂಟಪದ ಬಾಗಿಲಿಗೆ ಬಂದು ಸೇರಿದರು.

ಅಷ್ಟೇ ಅಲ್ಲ; ಆ ಧನುಸ್ಸನ್ನು ಅನೇಕ ಯೋಧರು ಕಾಯುತ್ತಿದ್ದರು. ಅವರೆಲ್ಲರೂ ಒಟ್ಟಾಗಿ ರಾಮಕೃಷ್ಣರ ಮೇಲೆ ಎರಗಿ ಬಂದರು.

ಆಗ ಈ ಇಬ್ಬರು ಮಹಾ ಬಲಶಾಲಿಗಳು ಆ ರಾಕ್ಷಸ ಸೈನ್ಯವನ್ನೆಲ್ಲಾ ಸದೆ ಬಡಿದು, ಮುಂದೆ ಇದ್ದ ಮಲ್ಲಯುದ್ಧ ಮಂಟಪದ ಬಾಗಿಲಿಗೆ ಬಂದರು.

ತತ್ರ ಮೃತ್ಯುಮಿವ ಕ್ರುದ್ಧಂ ದಿದಧ್ಯ ತುರರಿಂದಮೌ।
ನಾಗಂ ಕುವಲಯಾಪೀಡಂ ನಿಹ್ನುವಾನ ಮಿವಾಂಬರಂ ॥ ॥೨೨॥

ಶತ್ರುಗಳನ್ನು ಅಡಗಿಸುವ ಅವರ್ಬ್ಬಿಬರೂ ಅಲ್ಲಿ ಆಕಾಶವೇ ಇಲ್ಲವೇನೋ ಎನ್ನುವ ರೀತಿಯಲ್ಲಿ ದೊಡ್ಡದಾಗಿ ರೋಷದೊಡನೆ ಕೂಡಿ ಯಮನಂತೆ ಕಾಣುತ್ತಿದ್ದ ಕುವಲಯಾಪೀಡವೆಂಬ ಆನೆಯನ್ನು ನೋಡಿದರು.


ಮಲ್ಲಯುದ್ಧ ಮಂಟಪದ ಬಾಗಿಲಿನಲ್ಲಿ "ಕುವಲಯಾಪೀಡ" ಎಂಬ ಬೃಹದಾಕಾರದ ಆನೆಯನ್ನು ನಿಲ್ಲಿಸಿದ್ದರು. ಅದು ನಿಂತಿರುವ ಜಾಗದಲ್ಲಿ ಆ ಆನೆಯು ಎಷ್ಟು ಎತ್ತರವಿತ್ತೆಂದರೆ ಆಕಾಶವೇ ಕಾಣುತ್ತಿರಲಿಲ್ಲ. ಅದನ್ನು ರಾಮಕೃಷ್ಣರನ್ನು ವಧಿಸಲೆಂದೇ ಕಂಸನು ಆ ಇಕ್ಕಟ್ಟಾದ ಜಾಗದಲ್ಲಿ ನಿಲ್ಲಿಸಿದ್ದನು.

ಅದನ್ನು ರಾಮಕೃಷ್ಣರನ್ನು ವಧಿಸಲೆಂದೇ ಕಂಸನು ಆ ಜಾಗದಲ್ಲಿ ನಿಲ್ಲಿಸಿದ್ದನು. ಅದನ್ನು ದಾಟಿಕೊಂಡೇ ಅವರು ಮಲ್ಲಯುದ್ಧ ಮಂಟಪದ ಒಳಗೆ ಪ್ರವೇಶಿಸಬೇಕಾಗಿತ್ತು. ಹೀಗಾಗಿ ಅದರೊಡನೆ ಸೆಣಸಾಟವು ಅನಿವಾರ್ಯವಾಗಿತ್ತು.

ತಮಾಸಾದ್ಯ ದ್ರುತಂ ಶೌರಿಸ್ತ್ರಾಸಿತಾ ತ್ರಿದರ್ಶದ್ವಿಪಂ।
ಪಂಚವಕ್ತ್ರ ಇವಾಕ್ರಮ್ಯ ಪಾತಯಾಮಾಸ ಭೂತಲೆ॥ ॥೨೩॥

ದೇವತೆಗಳ ಆನೆಯಾದ ಐರಾವತ ಮೊದಲಾದವುಗಳನ್ನು ಭಯಪಡಿಸುವ ರೀತಿ ಇದ್ದ ಆ ಆನೆಯನ್ನು ಧೈರ್ಯದಿಂದ ಎದುರಿಸಿದ ಶ್ರೀಕೃಷ್ಣನು ಸಿಂಹದಂತೆ ಅದರ ಮೇಲೆ ಎರಗಿ ಭೂಮಿಯಲ್ಲಿ ಕೆಡಹಿದನು.

ಆನೆಗಳಿಗೆ ಸಿಂಹವನ್ನು ಕಂಡರೆ ಪ್ರಾಣಭಯ. ಸ್ವಪ್ನದಲ್ಲಿಯೇ ಸಿಂಹವನ್ನು ಕಂಡರೆ ಆನೆಗಳು ಸಾಯುತ್ತವಂತೆ. ಆ ಕುವಲಯಾಪೀಡವೆಂಬ ಆನೆಗೆ ಸ್ವಾಮಿಯಾದ ಶ್ರೀಕೃಷ್ಣನು ಸಿಂಹದಂತೆ ತೋರಿದನು. ಅದರ ಮೇಲೆ ಶ್ರೀಕೃಷ್ಣನು ಬಿದ್ದು ಕ್ಷಣ ಮಾತ್ರದಲ್ಲಿ ಅದನ್ನು ನೆಲಕ್ಕೆ ಬೀಳಿಸಿ ಸಾಯಿಸಿದನು.



ತಸ್ಯದಂತೌ ಸಮುದ್ಧೃತ್ಯ ಶ್ವೇತಾದ್ರಿ ಶಿಖರೌಪಮೌ।
ವಿಧದಾತೆ ಯದುಶ್ರೇಷ್ಠೌ ಮಲ್ಲಯುದ್ಧ ಮಹಾಯುಧೆ ॥ ॥೨೪॥

ಕೈಲಾಸ ಪರ್ವತದಂತೆ ಇರುವ ಆ ಆನೆಯ ದಂತಗಳೆರಡನ್ನೂ ಕಿತ್ತು ಅಲ್ಲಿದ್ದ ಯದು ವೀರರುಗಳನ್ನು, ಮಲ್ಲರನ್ನೂ ಯುದ್ಧದಲ್ಲಿ ಎದುರಿಸಲು ಉಪಯೋಗವಾಗುವುದೆಂದು ಅದನ್ನು ಇಟ್ಟುಕೊಂಡರು.

ಆನೆಯು ಕೆಳಗೆ ಬಿದ್ದು ಸತ್ತ ಮೇಲೆ, ಅದರ ದಪ್ಪವಾದ, ಚೂಪಾದ ದಂತಗಳೆರಡನ್ನೂ ಕಿತ್ತು ಅವು ಮುಂದೆ ತಮ್ಮ ಮೇಲೆ ಯುದ್ಧಕ್ಕೆ ಬರುವ ಯದುವೀರರನ್ನು ನಿಗ್ರಹಿಸಲು ಉಪಯೋಗವಾಗುವುದೆಂದು ಆಯುಧಗಳನ್ನಾಗಿ ಬಳಸಲು ಇಟ್ಟುಕೊಂಡನು.

ಸಹ ಗೋಪೈರಧಿಷ್ಠಾಯ ರಂಗಮಧ್ಯ ಮರಿಂದಮೌ ।
ಬಲಿಜಿತ್ ಬಲಭದ್ರಶ್ಚ ಬಾಲವೃತ್ತೈರದೀವ್ಯತಾಂ॥ ॥೨೫॥

ಶತ್ರುಗಳನ್ನು ಅಡಗಿಸುವ ಬಲಜಿತ್, ಬಲಭದ್ರರೆಂಬ ಆ ಇಬ್ಬರೂ ಗೋಪಾಲಕರೊಡನೆ ರಂಗ ಮಂಟಪದಲ್ಲಿ ನಿಂತು ಅಲ್ಲಿಯ ಮಕ್ಕಳೊಡನೆ ಆಟವಾಡುತ್ತಾ ನಿಂತರು.

ಬಲಜಿತ್ ಎಂದರೆ ಬಲಿಷ್ಠರಾದ ಅಸುರರನ್ನು ಕೊಂದ ಕೃಷ್ಣನು ಎಂದರ್ಥ. ಕೃಷ್ಣನೂ, ಬಲರಾಮನೂ ಆ ರಂಗ ಮಂಟಪದ ಒಳಕ್ಕೆ ಆನೆಯನ್ನು ಕೊಂದ ಮೇಲೆ ನುಗ್ಗಿ ಅಲ್ಲಿ ಅವರನ್ನೇ ನೋಡುತ್ತಾ ನಿಂತಿದ್ದ ಗೋಪಾಲಕರ ಮಕ್ಕಳೊಡನೆ, ತಾವೂ ಮಕ್ಕಳಂತೆ ಆಟವಾಡುತ್ತಾ ಇದ್ದರು.

ಅವರಿಗೆ ಯಾವ ಹೆದರಿಕೆಯೂ ಇರಲಿಲ್ಲ. ಅತ್ಯಂತ ಸಹಜವಾಗಿಯೇ ಆ ಬಾಲಕರೊಡನೆ ಆಟವಾಡುತ್ತಾ ಇದ್ದವರನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡರು.

ನೃಪೊ ಪಹೃತ್ತೈ ರಥ ತೌ ವಿಹಾರೈಕ್ಯ ಮವಾಪತುಃ ।
ನರ್ಮಕಾರಕ ಜಲ್ಪಾಕ ನಟ ನರ್ತಕ ಗಾಯಕೈಃ॥ ॥೨೬॥

ಅರಸನಿಂದ ಕರೆಸಲ್ಪಟ್ಟು ಅಲ್ಲಿ ಪರಿಹಾಸವಾಗಿ ಮಾತನಾಡಿಸುವವರು, ವಾಚಾಳಿಗಳು. ರಸಗಳಿಗನುಸಾರವಾಗಿ ನಾಟ್ಯವನ್ನು ಮಾಡುವವರು, ಒಳಾರ್ಥವನ್ನು ಅಭಿನಯದಿಂದ ಪ್ರದರ್ಶಿಸುವವರು ಗಾಯಕರು ಎಂದು ಬಂದವರೆಲ್ಲರೊಡನೆ ಸೇರಿ ಅವರುಗಳಿಗೆ ತಕ್ಕ ಹಾಗೆ ವಿನೋದದಿಂದ ಅವರಿಬ್ಬರೂ ಆಟವಾಡಿದರು.

ರಾಮಕೃಷ್ಣರು ರಂಗಮಂಟಪದಲ್ಲಿರುವವರಿಗೆ ಅಂದರೆ ಸಾಧಾರಣ ಮನುಷ್ಯರಿಗೆ ನರಶ್ರೇಷ್ಠನಂತೆಯೂ, ಸ್ತ್ರೀಯರಿಗೆ ಮೂರ್ತಿವೆತ್ತ ಮನ್ಮಥನಂತೆಯೂ, ಗೋಪಾಲಕರಿಗೆ ಸ್ವಜನರಂತೆಯೂ, ದುಷ್ಟರಾಜನಿಗೆ ಶಿಕ್ಷಕನಂತೆಯೂ, ಹಿರಿಯರಿಗೆ ಮಗನಂತೆಯೂ, ಅಜ್ಞಾನಿಗಳಿಗೆ ವಿರಾಟ್ ಪುರುಷನಂತೆಯೂ, ಯೋಗಿಗಳಿಗೆ ಪರತತ್ವವಾಗಿಯೂ ಅವರವರ ಭಾವಕ್ಕನುಸಾರವಾಗಿ ಎಲ್ಲರೊಡನೆ ಬೆರೆಯುತ್ತಾ ಸಂತೋಷದಿಂದ ಇದ್ದರು.

ಈ ಪ್ರಸಂಗವನ್ನು ಶ್ರೀಮದ್ಭಾಗವತದಲ್ಲಿ ಹೀಗೆ ವರ್ಣಿಸಿದ್ದಾರೆ.

ಮಲ್ಲಾನಾಮಶನಿರ್ನೃಣಾಂ ನರವರಃ ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ ಶಾಸ್ತಾ ಸ್ವಪಿತ್ರೋಃ ಶಿಶುಃ।
ಮೃತ್ಯುರ್ಭೋಜಪತೇರ್ವಿರಾಡವಿದುಷಾಂ ತತ್ತ್ವಂಪರಂ ಯೋಗಿನಾಂ
ವೃಷ್ಣೀನಾಂ ಪರದೇವತೇತಿ ವಿದಿತೋ ರಂಗಂ ಗತಃ ಸಾಗ್ರಜಃ॥

ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ರಂಗಸ್ಥಳವನ್ನು ಪ್ರವೇಶಿಸುವಾಗ ಅವರು - ಜಟ್ಟಿಗಳಿಗೆ ಸಿಡಿಲಿನ ಸ್ವರೂಪದಿಂದಲೂ, ಸಾಧಾರಣ ಮನುಷ್ಯರಿಗೆ ನರಶ್ರೇಷ್ಠ ನಂತೆಯೂ, ಸ್ತ್ರೀಯರಿಗೆ ಮೂರ್ತಿವೆತ್ತ ಮನ್ಮಥನಂತೆಯೂ, ಗೋಪಾಲಕರಿಗೆ ಸ್ವಜನ ನಂತೆಯೂ, ದುಷ್ಟ ರಾಜರಿಗೆ ಶಿಕ್ಷಕನಂತೆಯೂ, ತಂದೆ ತಾಯಿಯರಂತಿದ್ದವರಿಗೆ ಮಗ ನಂತೆಯೂ, ಕಂಸನಿಗೆ ಮೃತ್ಯುವಿನಂತೆಯೂ, ಅಜ್ಞಾನಿಗಳಿಗೆ ವಿರಾಟಪುರುಷನಾಗಿಯೂ, ಯೋಗಿಗಳಿಗೆ ಪರತತ್ತ್ವವಾಗಿಯೂ, ಭಕ್ತಶಿರೋಮಣಿಗಳಾದ ವೃಷ್ಣಿವಂಶೀಯರಿಗೆ ತಮ್ಮ ಇಷ್ಟದೇವರಂತೆಯೂ ಕಂಡುಬಂದರು.

ಜನಸ್ಯ ಮಹತಸ್ತತ್ರ ಜನಯಾಮಾಸತು ಸ್ತದಾ।
ಮಹತಾ ಕಾಂತಿವರ್ಷೇಣ ದಿದೃಕ್ಷಾಂ ದೇವ ಮಾತೃಕಾಮ್॥ ॥೨೭॥

ಆ ಸಮಯದಲ್ಲಿ ಅಲ್ಲಿ ಸೇರಿರುವ ಕೂಟದಲ್ಲಿರುವವರಿಗೆ ಕಾಣಬೇಕೆಂಬ ತಮ್ಮ ಆಸೆ ಯನ್ನು ಪೂರೈಸಲು ತಮ್ಮ ಕಾಂತಿಯನ್ನು ವಿಶೇಷವಾಗಿ ಹೆಚ್ಚಿಸಿಕೊಂಡರು.

ಆ ದೊಡ್ಡ ಸಭೆಯಲ್ಲಿ ಇದ್ದ ಅನೇಕರಿಗೆ ಇವರಿಬ್ಬರನ್ನೂ ಸರಿಯಾಗಿ ನೋಡುವುದು ಸಾಧ್ಯವಾಗಲಿಲ್ಲ. ಅದನ್ನು ನೋಡಿ ಎಲ್ಲರೂ ತಮ್ಮನ್ನು ಚೆನ್ನಾಗಿ ನೋಡಲೆಂದು ತಮ್ಮ ಕಾಂತಿ ಯನ್ನು ತಾವೇ ಹೆಚ್ಚಿಸೊಂಡು, ಬೆಳಗಿದರು. ಎಲ್ಲರೂ ಅವರ ದಿವ್ಯ ಸೌಂದರ್ಯವನ್ನು ಚೆನ್ನಾಗಿ ಅನುಭವಿಸಿದರು.

ಉಪವೇದ ಮಧೀಯುರ್ಯೇ ರಣಾರ್ಥಂ ರಂಗದರ್ಶಿನಃ।
ತಮೇವ ತೇ ದ್ವಿಧಾಭೂತಂ ತಾವುಭಾವಭಿಮೇನಿರೆ॥ ॥೨೮॥

ರಂಗವನ್ನು ಕಾಣುವವರಲ್ಲಿ ಚೆನ್ನಾಗಿ ಧನುರ್ವೇದ ತಿಳಿದವರು ಆ ವೇದವೇ ಎರಡು ಭಾಗವಾಗಿ ಬಂದಿರುವುದಾಗಿ ಅವರಿಬ್ಬರನ್ನೂ ನೋಡಿ ಭಾವಿಸಿದರು.

ಇವರಿಬ್ಬರೂ ಸಂಪೂರ್ಣ ಧನುರ್ವೇದವೇ ಎರಡು ಭಾಗವಾಗಿ ಅವತಾರ ಪಡೆದು ಬಂದಿರುವುದಾಗಿ ಜ್ಞಾನಿಗಳಾದವರು ತಿಳಿದರು. ಇವರು ಧನುರ್ಭಂಗ ಮಾಡಿದುದು, ಕುವಲಯಾಪೀಡವನ್ನು ವಧಿಸಿದುದು ರಾಕ್ಷಸರನ್ನೆಲ್ಲಾ ಸದೆ ಬಡಿದಿರುವುದನ್ನು ನೋಡಿ, ಇವರು ಸಾಮಾನ್ಯ ಮನುಷ್ಯರಲ್ಲ. ವೇದದ ಅಂಗವಾದ ಧನುರ್ವೇದವೇ ಇವರ ರೂಪದಲ್ಲಿ ಬಂದಿದೆ ಎಂದು ಎಲ್ಲರೂ ಭಾವಿಸಿದರು. ಇವರು ಸಾಕ್ಷಾತ್ ಭಗವದಂಶವೇ ಸರಿ ಎಂದು ಎಲ್ಲರೂ ಮಾತಾಡಿಕೊಂಡರು.

ತದಾಲೋಕನ ಭಾವೇನ ಸಾಮಾಜಿಕ ಜನಸ್ತದಾ।
ಅನಿದಂ ಪೂರ್ವಮಾಹ್ಲಾದ ಮುಪವ್ಯಕ್ತ ಇವಾನ್ವಭೂತ್॥ ॥೧೯॥

ಸಭೆಗೆ ಸೇರಿದ ಒಬ್ಬೊಬ್ಬರೂ ಆವಾಗ ಅವರಿಬ್ಬರ ರೂಪವನ್ನು ನೋಡಿದಾಗ, ಇದಕ್ಕೆ ಮುಂಚೆ ಅನುಭವಿಸದ ಆನಂದವನ್ನು ಪಡೆದು ಮುಕ್ತಿಯನ್ನು ಹೊಂದಿದವರಂತಾದರು.

ಈ ಹಿಂದೆ ಅವರ್‍ಯಾರೂ ಈ ರೀತಿಯಾದ ದಿವ್ಯ ಮಂಗಳ ವಿಗ್ರಹದ ಅನುಭವವನ್ನು ಹೊಂದಿರಲಿಲ್ಲ. ಮೋಕ್ಷದಲ್ಲಿ ಕಾಣಬರುವ ಆ ರೂಪವನ್ನು ಇಲ್ಲಿ ರಂಗ ಮಂಟಪದಲ್ಲಿ ಕಾಣುತ್ತಿರುವುದು ತಮ್ಮ ಪೂರ್ವ ಜನ್ಮದ ಸುಕೃತ. ತಾವೇ ಧನ್ಯರು ಎಂದು ಪರಸ್ಪರ ಹೇಳಿ ಕೊಳ್ಳುತ್ತಾ ಅಪ್ರಾಕೃತವಾದ ಅವರಿಬ್ಬರ ರೂಪ ಸೌಂದರ್ಯವನ್ನು ಮನಸಾರೆ ಅನುಭವಿಸಿದರು.

ಬಿಂಬಿತಾ ಕೃತಯೋ ನಾರ್ಯಸ್ತದೇಹ ಮಣಿದರ್ಪಣೆ।
ತತ್ಪರಿಷ್ವಂಗ ನಿರ್ವೇಶ ಮಯತ್ನಾಮಿವ ಲೇಭಿರೇ॥ ॥೨೦॥

ಅವರಿಬ್ಬರ ದಿವ್ಯ ದೇಹಗಳಲ್ಲಿ ಕನ್ನಡಿಯಂತೆ ತಮ್ಮ ಬಿಂಬವು ಇದ್ದದ್ದರಿಂದ ಅಲ್ಲಿ ಬಂದಿದ್ದ ಹೆಣ್ಣುಮಕ್ಕಳು ಪ್ರಯತ್ನವಿಲ್ಲದೆಯೇ ಅವನನ್ನು ಹೊಂದಿದ ಆನಂದವನ್ನು ಅನುಭವಿಸಿದರು.

ಮಧುರಾ ನಗರಿಯ ಸ್ತ್ರೀಯರು ಅವರಿಬ್ಬರ ಸೌಂದರ್ಯವನ್ನು ನೋಡಿ ಅಲೌಕಿಕ ಆನಂದಾನುಭವವನ್ನು ಪಡೆದರು. ಅಪ್ರಯತ್ನವಾಗಿ, ಅವರಿಬ್ಬರೂ ಕೃಷ್ಣನೊಡನೆ ಮಾನಸಿಕ ಸಮಾಗಮವನ್ನು ಹೊಂದಿದರು. ಗೋಕುಲದ ಸ್ತ್ರೀಯರಿಗೆ ತಾವೇನೂ ಕಮ್ಮಿ ಇಲ್ಲವೆಂದು ಭಾವಿಸಿ, ಅವರೊಡನೆ (ರಾಮಕೃಷ್ಣರೊಡನೆ) ತಾವೂ ಎಲ್ಲಾ ಸುಖವನ್ನೂ ಅನುಭವಿಸುತ್ತಿರುವುದಾಗಿ (ಆಲಿಂಗನಾದಿ ಇತರ ಸೌಖ್ಯಗಳನ್ನು) ಭಾವಿಸಿ ರೋಮಾಂಚನಗೊಂಡರು.

ಗೀತ ಮಂಜುಗಿರಿ ಸ್ತತ್ರ ನೃತ್ತ ಸಂವಾದಿ ವಿಭ್ರಮಾಃ।
ಮಂಚೇಷು ಹರಿರದ್ರಾಕ್ಷಿತ್ ವರಸ್ತ್ರೀ ರ್ಮದಿರೇಕ್ಷಣಾಃ॥ ॥೨೧॥

ಅಲ್ಲಿ ಹಾಡುಗಳಂತೆ ಇಂಪಾದ ಮಾತುಗಳನ್ನು ಆಡುವವರೂ, ನಾಟ್ಯದಂತೆ ಕಾಣುವ ಅಂಗ ಚೇಷ್ಟೆಗಳನ್ನು ಉಳ್ಳವರೂ, ಮದ್ಯಪಾನ ಮಾಡಿದವರಂತೆ, ಕಡೆಗಣ್ಣ ನೋಟಗಳನ್ನು ಹೊಂದಿರುವ ಉತ್ತಮವಾದ ಸ್ತ್ರೀಯರನ್ನು ಉನ್ನತಾಸನಗಳಲ್ಲಿ ಶ್ರೀಕೃಷ್ಣನು ಕಂಡನು.

ಅಲ್ಲಿ ರಂಗಮಂಟಪದಲ್ಲಿ ನಾನಾ ಬಗೆಯ ಸ್ತ್ರೀಯರಿದ್ದರು. ಕೆಲವರು ಇಂಪಾದ ಧ್ವನಿಗಳಿಂದ ಗಾನ ಮಾಡುತ್ತಿದ್ದರು. ಕೆಲವರು ನಾಟ್ಯ ಭಂಗಿಗಳಿಂದ ಹಾವಭಾವ ವ್ಯಕ್ತಪಡಿಸುತ್ತಿದ್ದರು. ಕೆಲವರು ಮದ್ಯಪಾನ ಮಾಡಿದವರು ಕಣ್ಣಾಲೆಗಳನ್ನು ತಿರುಗಿಸುವಂತೆ ತಮ್ಮ ಕಣ್ಣುಗಳನ್ನು ಆಡಿಸುತ್ತಿದ್ದರು. ಎಲ್ಲರೂ ಉನ್ನತಾಸನಗಳಲ್ಲಿ ಕುಳಿತುಕೊಂಡು ಕೃಷ್ಣನನ್ನೇ ಎವೆಯಿಕ್ಕದೆ ನೋಡುತ್ತಿದ್ದರು.

ಧೃತಹೇತಿ ಪರಿಷ್ಕಾರಾನ್ ಧೀರೋದ್ಧತ ವಿಲೋಕಿತಾನ್।
ದದರ್ಶ ಪೃಥಿವೀ ಪಾಲಾನ್ ದೇವಾನಿವ ದಿವಚ್ಯುತಾನ್॥ ॥೨೨॥

ಆಯುಧಗಳನ್ನೂ, ಆಭರಣಗಳನ್ನೂ ಧರಿಸಿಕೊಂಡು ಗಂಭೀರವಾಗಿ ಗರ್ವದಿಂದ ಕಣ್ಣೋಟಗಳೊಡನೆ ಅಲ್ಲಿರುವ ಅರಸರುಗಳು ದೇವಲೋಕದಿಂದ ಇಳಿದ ದೇವತೆಗಳಂತೆ ಇರುವುದನ್ನು ಕಂಡರು.

ಆ ರಂಗಮಂಟಪದಲ್ಲಿ ಇದ್ದ ಅನೇಕ ಆಯುಧಗಳನ್ನು ಅವರು ಧರಿಸಿಕೊಂಡು, ಅಲ್ಲಿ ನೆರೆದಿದ್ದ ಗರ್ವಿಷ್ಠರಾದ ರಾಜರುಗಳನ್ನು ನೋಡುತ್ತಾ ಬಂದರು. ಆ ರಾಜರೆಲ್ಲರೂ ಪರಾಕ್ರಮಶಾಲಿಗಳಾಗಿದ್ದು ದೇವಲೋಕದ ದೇವತೆಗಳಂತೆ ಇವರಿಗೆ ಕಂಡರು.

ತಮಸಾಮಿವ ಸಂಘಾತಂ ಸಮಾಹಾರ ಮಿವೈನಸಾಂ।
ತುಂಗ ಮಂಚ ಗತಂ ಕಂಸಂ ತುಷ್ಟೋ ಹರಿರವೈಕ್ಷತ ॥ ॥೨೩॥

ಕತ್ತಲೆಯ ಉಂಡೆಯಂತೆಯೂ, ಪಾಪಗಳ ದೊಡ್ಡ ರಾಶಿಯಂತೆ ಇರುವ ಕಂಸನು ಉನ್ನತಾಸನದಲ್ಲಿ ಕುಳಿತಿರುವುದನ್ನು ಶ್ರೀಕೃಷ್ಣನು ಕಂಡನು.

ಅನೇಕ ಪಾಪಕೃತ್ಯಗಳನ್ನು ಮಾಡಿದ್ದ, ರಾಶಿ ರಾಶಿಯಾಗಿ, ದುಷ್ಕರ್ಮಗಳ ಫಲಗಳನ್ನು ಹೊತ್ತಿದ್ದ ಕಂಸನು ಕ್ರೋಧಾವಿಷ್ಟನಾಗಿ ಸಿಂಹಾಸನದಲ್ಲಿ ಕುಳಿತಿದ್ದುದನ್ನು ಸ್ವಾಮಿಯಾದ ಶ್ರೀಕೃಷ್ಣನು ನೋಡಿದನು. ಕಂಸನ ಅಂತ್ಯವು ಸನ್ನಿಹಿತವಾಯಿತೆಂದು ಶ್ರೀಕೃಷ್ಣನು ಭಾವಿಸಿ ಅವನು ಕುಳಿತಿದ್ದಲ್ಲಿಗೆ ಧಾವಿಸಿ ಬಂದನು.

ಲಲಿತಾ ರಂಭಯಾ ವೃತ್ತ್ಯಾ ರಂಗಭಾಜಾಂ ರಸಾವಹಾ।
ನರ ವೃತ್ತಾಂತ ವಿಹೃತಿ ರ್ವವೃಧೆ ರಾಮಕೃಷ್ಣಯೋಃ॥ ॥೨೪॥

ರಾಮನೂ, ಕೃಷ್ಣನೂ, ಉತ್ತಮವಾದ ಮನುಷ್ಯಾತಾರವೆಂಬ ಆಟವಾಡುತ್ತಾ ಮಲ್ಲರಂಗ ದಲ್ಲಿ ಇರುವವರಿಗೆ ಆನಂದವಾಗಿ ಕಾಣುವ ರಂಗಭೂಮಿಯ ಕೃತ್ಯಗಳನ್ನು ನಡೆಸುತ್ತಿದ್ದರು.

ಆಗ ಆ ರಂಗಮಂಟಪದಲ್ಲಿ ಭೂಮಿಯಲ್ಲಿ ಮನುಷ್ಯರಾಗಿ ಅವತರಿಸಿ, ಭೂಭಾರವನ್ನು ನೀಗಲು ಬಂದಿರುವ ಸಾಕ್ಷಾತ್ ನಾರಾಯಣನು, ಶೇಷನೊಡಗೂಡಿ ರಾಮ-ಕೃಷ್ಣರಾಗಿ ತೋರಿ ಅಲ್ಲಿರುವವರನ್ನು ತಮ್ಮ ದಿವ್ಯ ರೂಪದಿಂದ ಆನಂದಗೊಳಿಸುತ್ತಾ ಅನೇಕ ಕ್ರೀಡೆಗಳನ್ನು ನಡೆಸುತ್ತಾ ರಂಗಭೂಮಿಯಲ್ಲಿ ಯಥೇಚ್ಛವಾಗಿ ಓಡಿಯಾಡುತ್ತಾ, ಅಲ್ಲಿ ವೀರರು ನಡೆಸುವ ಕೃತ್ಯಗಳನ್ನು ಅವರೂ ಮಾಡಿ ತೋರಿಸುತ್ತಿದ್ದರು.

ವಿಧಥೆ ಸಿಂಹನಾದೇನ ತಾರೇಣ ಯದುಸಿಂಹಯೋಃ।
ಗರ್ಜಿತಂ ದೈತ್ಯ ಮಲ್ಲಾನಾಂ ಗೋಮಾಯು ಗಣವಾಶಿತಂ॥ ॥೨೫॥

ಯದು ವಂಶದಲ್ಲಿ ತೋರಿರುವ ಇಬ್ಬರೂ ಸಿಂಹಗಳ ಸಿಂಹನಾದದಿಂದ ಅಸುರ ಮಲ್ಲರುಗಳ ಗರ್ಜನೆಯು ಅಡಗಿ, ಗುಳ್ಳೆನರಿಗಳ ಕೂಟದಲ್ಲಿ ಮಾಡಿದ ಕೂಗಿದಂತಿತ್ತು.

ಮಲ್ಲಯುದ್ಧದ ಪ್ರಾರಂಭಕ್ಕೆ ಮುಂಚೆ ಇಬ್ಬರೂ ಪ್ರತ್ಯೇಕವಾಗಿ ಸಿಂಹನಾದ ಮಾಡಿದರು. ಆ ಅದ್ಭುತ ಗರ್ಜನೆಯ ಮುಂದೆ ಅಲ್ಲಿ ನೆರೆದಿದ್ದ ಅನೇಕ ಮಲ್ಲವೀರರುಗಳ ಗರ್ಜನೆಯು ಸಿಂಹದ ಮುಂದೆ ಗುಳ್ಳೆ ನರಿಯು ವಿಕಾರವಾಗಿ, ಭಯದಿಂದ ಕೂಗಿದ ಧ್ವನಿಯಂತಿತ್ತು. ಇವರ ಸಿಂಹನಾದವು ಅವರ ವೀರಾವೇಶದ ಕೂಗನ್ನೆಲ್ಲಾ ಅಡಗಿಸಿತು.

ತಾವುಭೌ ಡಿಂಭ ವಪುಷೌ ಖ್ಯಾತ ವೀರ್ಯ ಪರಾಕ್ರಮೌ।
ಚಾಣೂರೋ ಮುಷ್ಟಿಕಶ್ಚ ದ್ವೌ ನಿಯೋದ್ಧು ಮಭಿಜಗ್ಮತುಃ॥ ॥೨೬॥

ಚಿಕ್ಕ ವಯಸ್ಸಿನಲ್ಲಿಯೇ ಉತ್ತಮ ಶರೀರ ಸಂಪತ್ತುಳ್ಳ ಆ ಇಬ್ಬರಲ್ಲೂ ಕುಸ್ತಿ ಮಾಡಲು ವೀರ್ಯದಲ್ಲೂ, ಪರಾಕ್ರಮದಲ್ಲೂ ಹೆಸರು ಮಾಡಿದ್ದ ಚಾಣೂರ, ಮುಷ್ಟಿಕರೆಂಬ ಇಬ್ಬರು ಮಲ್ಲರು ಮುಂದೆ ಬಂದರು.

ಅವರು ಬಾಲಕರಾಗಿದ್ದರೂ ಅವರಿಗೆ ಸಮಾನರಾದ ಮಲ್ಲರು ಮುಂದೆ ಬರದೆ, ಮಹಾ ಬಲಿಷ್ಠರಾದ ದೊಡ್ಡ ದೇಹಗಳನ್ನು ಹೊಂದಿದ್ದ ಚಾಣೂರ, ಮುಷ್ಟಿಕರೆಂಬ ಇಬ್ಬರು ಮಲ್ಲವಿಶಾರದರು ಕಂಸನಿಂದ ಪೂರ್ವ ಯೋಜಿಸಿದವರಾದ್ದರಿಂದ ರಾಮಕೃಷ್ಣರೊಡನೆ ಮಲ್ಲಯುದ್ಧಮಾಡಲು ಮುಂದೆ ಬಂದರು. ಆ ಮಹಾ ಮಲ್ಲರು ಯಾವ ವಿಧದಲ್ಲಿಯೂ ರಾಮಕೃಷ್ಣರಿಗೆ ಸಮನಾಗಿರಲಿಲ್ಲ. ಅವರೋ ಎಳೆಯ ಬಾಲರು. ಇವರೋ ಬೃಹದಾಕಾರವಾದ ದೇಹವನ್ನುಳ್ಳ ಧಾಂಡಿಗರು.

ಅಹೋ ಮಹದುಪಕ್ರಾಂತ ಮತ್ಯಾಹಿತಮಿದಂ ಯತಃ।
ಅಶಿಕ್ಷಿತರಣೌ ಬಾಲೌ ಮಲ್ಲಯುದ್ಧೇ ನಿಯೋಜಿತೌ॥ ॥೨೭॥

ಅಯ್ಯೋ! ದೊಡ್ಡ ಪ್ರಾಣಾಪತ್ತಿನಲ್ಲಿ ಕೆಲಸವು ಆರಂಭವಾಗುವುದಲ್ಲಾ! ಮಲ್ಲಯುದ್ಧದಲ್ಲಿ ಶಿಕ್ಷೆ(ಶಿಕ್ಷಣ) ಹೊಂದದ ಚಿಕ್ಕವರುಗಳು ದೊಡ್ಡ ಮಲ್ಲರೊಡನೆ ಯುದ್ಧಕ್ಕೆ ಇಳಿಸಿದ್ದಾರಲ್ಲಾ!

ಈ ಪುಟ್ಟ ಬಾಲಕರು ಈ ದೈತ್ಯ ಮಲ್ಲರೊಡನೆ ಸೆಣಸಾಡುವುರಲ್ಲಾ ಇದೇನನ್ಯಾಯ ಇಲ್ಲಿ ಯಾರೂ ನ್ಯಾಯವನ್ನು ಹೇಳುವವರಿಲ್ಲವೇ ? ಇದು ಅಸಮಾನವಾದ ಯುದ್ಧವಾಗುವುದರಲ್ಲಿ ಎಂದೆಲ್ಲಾ ಮಾತನಾಡುತ್ತಿದ್ದರು. ರಂಗಭೂಮಿಯಲ್ಲಿದ್ದ ಜನ.

ಶಿರೀಷ ಲಲಿತೈರಂಗೈ ಶ್ಚೇಷ್ಟಿತೈರಪಿ ಪೇಶಲೈಃ।
ಅದ್ರಿ ಸಾರ ಕಠೋರಾಭ್ಯಾಂ ಕಥಂ ಯೋದ್ಧುಮಿಮೌ ಸ್ಥಿತೌ॥ ॥೨೮॥

ಕಾಡಿನ ಹೂವಿಗೆ ಈಡಾಗಿರುವ ಅಂಗಗಳನ್ನೂ ಹೊಂದಿರುವ ಮೃದುವಾದ ಕೆಲಸಗಳನ್ನು ಮಾಡುತ್ತಾ ಅಲ್ಲಿ (ಗೋಕುಲದಲ್ಲಿ) ಇದ್ದ ಈ ಇಬ್ಬರು ಬಾಲ ಘು ಬೆಟ್ಟದ ರುವ ಬಲಿಷ್ಠರಾದ ಮಲ್ಲರೊಡನೆ ಯಾವ ರೀತಿ ಹೋರಾಟ ಮಾಡುತ್ತಾರೆ?

ಮೇಲಿನ ಶ್ಲೋಕವನ್ನು ಸೇರಿಸಿ ಒಂದೇ ಅರ್ಥ. ಯ ವ ರೀತಿ ಈ ಕೋಮಲ ಬಾಲಕರು ಈ ದಾಂಢಿಗರೊಡನೆ ಜಟ್ಟಿ ಕಾಳಗ ನಡೆಸಬಲ್ಲರು ?

ಪಶ್ಯದ್ಭಿರವಶ್ಯೈರ್ನೂನಂ ಪೌರ ಜಾನ ಪದೈರ್ಜನೈಃ।
ಪಾಪಮೇತ ದನುಜ್ಞಾತಂ ಪರಪಿಂಡ ಪರಾಯಣೈಃ ॥ ॥೨೯॥

ನಗರ ವಾಸಿಗಳು ಇತರ ನಾಡಿನಿಂದ ಬಂದ ಜನಗಳೂ, ಇತರರ ಭಿಕ್ಷೆಯ ಮೇಲೆ ಜೀವನ ಸಾಗಿಸುವವರೂ, ಬಲಶಾಲಿಯಾದ ಕಂಸನಿಗೆ ಅಡಿಯಾಳಾಗಿರುವವರೂ ನೋಡುತ್ತಿದ್ದೂ, ಈ ಪಾಪ ಕಾರ್ಯಕ್ಕೆ ಅನುಮತಿ ನೀಡುತ್ತಿದ್ದಾರಲ್ಲಾ!

ಇಲ್ಲಿ ನೆರೆದಿರುವವರಲ್ಲಿ ಎಲ್ಲಾ ರೀತಿಯ ಜನಗಳೂ ಇದ್ದಾರೆ. ಯಾರಾದರೂ ಒಬ್ಬರಾದರೂ ಈ ಅನ್ಯಾಯವನ್ನು ಪ್ರತಿಭಟಿಸಬಾರದೇ? ಈ ಯುದ್ಧವನ್ನು ನಾವು ಕಣ್ಣಾರೆ ನೋಡಬಾರದು ಎಂದು ಅಲ್ಲಿ ನೆರೆದಿದ್ದ ಸ್ತ್ರೀಯರು ಮಾತನಾಡಿಕೊಳ್ಳುತ್ತಿದ್ದರು.

ಮಧು ಕೈಟಭ ದುರ್ದಾಂತೌ ಮಲ್ಲ ಬೃಂದಾರಕಾ ವಿಮೌ।
ಯದಿ ಜೇಷ್ಯತಿ ಯಃ ಕಶ್ಚಿತ್ ಸಕಿಂ ನ ಪುರುಷೋತ್ತಮಃ ॥ ॥೪೦॥
ಅಥವಾ ಪೂತನಾದೀನಾ ಮಪ್ರಯತ್ನೇನ ಘಾತುಕೌ।
ನಿಯುದ್ಧೇ ಮಲ್ಲಮುಖ್ಯೇಭ್ಯೋ ನಾಲಮೇತೌ ನವಾ ಕಥಂ॥ ॥೪೧॥

ಮಧು, ಕೈಟಭರು ಎಂಬ ಇಬ್ಬರಂತೆ ಇರುವ ಈ ಮಲ್ಲಶ್ರೇಷ್ಠರುಗಳನ್ನು ಇವರಿಬ್ಬರಲ್ಲಿ ಒಬ್ಬರು ಗೆಲ್ಲುವುದಾದರೆ, ಅವನು ಖಂಡಿತವಾಗಿಯೂ ಪುರುಷೋತ್ತಮನೇ ಸರಿ. (ವಿಷ್ಣುವೊಬ್ಬನೇ ಇವರನ್ನು ಗೆಲ್ಲಲು ಸಮರ್ಥನು).

ಹಿಂದೆ ವಿಷ್ಣುವು ಮಧು ಕೈಟಭರೆಂಬ ಇಬ್ಬರು ರಾಕ್ಷಸರನ್ನು ವಧಿಸಿದ್ದನು. ಅದೇ ರೀತಿ, ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಗೆಲ್ಲುವುದಾದರೆ ಅವನು ಖಂಡಿತವಾಗಿಯೂ ವಿಷ್ಣುವಿನ ಅವತಾರವೇ ಇದರಲ್ಲಿ ಸಂದೇಹವಿಲ್ಲ. ಅಥವಾ ಅನಾಯಾಸವಾಗಿಯೇ ಪೂತನಾದಿಗಳನ್ನು ಸಂಹರಿಸಿದ ಇವರು, ಈ ಮಲ್ಲಶ್ರೇಷ್ಠರುಗಳೊಡನೆ ಕೈ ಸೇರಿಸಿ, ಯುದ್ಧ ಮಾಡಿ ಅವರುಗಳನ್ನು ಸುಲಭವಾಗಿ ಗೆಲ್ಲುವರೇ?

ಆದರೆ ಗೋಕುಲದಲ್ಲಿ ಇವನು (ಶ್ರೀಕೃಷ್ಣನು) ಪೂತನೆ, ಶಕಟಾಸುರ, ಕೇಶಿ, ವತ್ಸಾಸುರ, ಅಘಾಸುರ ಇನ್ನೂ ಮುಂತಾದ (ಕಂಸನಿಂದ ಕಳಿಸಲ್ಪಟ್ಟ) ಅನೇಕ ರಾಕ್ಷಸರುಗಳನ್ನು ಸಂಹರಿಸಿದ್ದಾನೆ. ಆದ್ದರಿಂದ ಇವನಿಗೆ ಇವರನ್ನು ಜಯಿಸುವುದು ಕಷ್ಟವಾಗಲಾರದು. ಆದರೂ ಯುದ್ಧದಲ್ಲಿ ಜಯಾಪಜಯಗಳು ಅನಿಶ್ಚಿತ! ಏನಾಗುವುದೋ?

ಜನವಾದ ಮಿಮಂ ಶೃಣ್ವನ್ ಜಾತಹಾಸೋ ಜನಾರ್ದನಃ।
ಭುಜ ಮಾಸ್ಫೋಟಯಾಮಾಸ ಭೂಭಾರಹರಣೇ ಕ್ಷಮಂ ॥ ॥೪೨॥

ಭಗವಂತನು (ಶ್ರೀಕೃಷ್ಣನು) ಪ್ರಜೆಗಳ ಈ ಮಾತುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಾ ನಗುತ್ತಾ ಭೂಮಿಯ ಭಾರವನ್ನೆಲ್ಲಾ ಹೋಗಿಸಬಲ್ಲ ತನ್ನ ಭುಜವನ್ನು ತಟ್ಟಿದನು. ತೋಳನ್ನು ತಟ್ಟಿ ಯುದ್ಧಕ್ಕೆ ಸಿದ್ಧನಾದನು.

ಈ ರೀತಿ ರಂಗಭೂಮಿಯಲ್ಲಿ ಇರುವವರೆಲ್ಲಾ ತಮ ತಮಗೆ ತೋರಿದಂತೆ ಮಾತನಾಡು ತ್ತಿದ್ದಾಗ, ಅದನ್ನೆಲ್ಲಾ ಕೇಳಿಸಿಕೊಳ್ಳುತ್ತಾ ಮುಗುಳ್ನಗುತ್ತಾ ತಾನು ಭೂಭಾರ ಹರಣಾರ್ಥ ವಾಗಿಯೇ ಅವತಾರವೆತ್ತಿದವನೆಂದು ತಿಳಿಯಪಡಿಸುವುದಕ್ಕಾಗಿ ತನ್ನ ತೋಳನ್ನು ತಟ್ಟಿ (ಭುಜಾಸ್ಫಾಲನ ಮಾಡಿ) ಮಲ್ಲಯುದ್ಧಕ್ಕೆ ಸಿದ್ಧನಾದನು. ಜಟ್ಟಿ ಕಾಳಗಕ್ಕೆ ಮುಂಚೆ ತೋಳನ್ನು ತಟ್ಟುವುದು ವೀರರ ವಾಡಿಕೆ.

ತದಾ ಸ್ಫೋಟಿತ ಶಬ್ದೇನ ಸ್ಫುಟತ್ಕರ್ಣಸ್ಯ ಭೂಯಸಾ ।
ಕಂಸ ಮಲ್ಲ ಗಣಸ್ಯಾऽಸೀತ್ ಕಥಾ ಗೋಪಾಲಕಾಶ್ರಯಾ ॥ ॥೪೨॥

ಅದ್ಭುತವಾದ ಆ ಭುಜದ ಆಸ್ಫೋಟಕ್ಕೆ ಕಿವಿಗಳು ಕಿವುಡಾಗಿ, ಕಂಸನ ಕಡೆಯ ಮಲ್ಲರು ಗಳ ಸಮೂಹದಲ್ಲಿಯೂ, ಗೋಪರ ಸಮೂಹದಲ್ಲಿಯೂ ಮಾತುಕತೆ ಆರಂಭವಾಯಿತು.

ಆ ಭುಜಾಸ್ಫಾಲನ ಧ್ವನಿಯೇ ಎಲ್ಲರಲ್ಲಿಯೂ ರೋಮಾಂಚನವನ್ನು ಉಂಟು ಮಾಡಿತು. ಕಂಸನ ಕಡೆಯ ಮಲ್ಲರೆಲ್ಲರೂ ಗಾಭರಿಯಾದರು. ಗೋಪಾಲಕರೆಲ್ಲರೂ ಆನಂದಪಟ್ಟರು. ತಮ್ಮ ತಮ್ಮಲ್ಲೇ ಚರ್ಚೆಗೆ ಆರಂಭಿಸಿದರು. ಗೋಪರನ್ನು ಉದ್ದೇಶಿಸಿ ಮಲ್ಲರೂ, ಮಲ್ಲರನ್ನು ಉದ್ದೇಶಿಸಿ ಗೋಪರೂ ಪರಸ್ಪರ ಮಾತುಗಳನ್ನಾರಂಭಿಸಿದರು.

ಗೋಪ ಯುದ್ಧ ಧಿಯಾ ಜಿಹ್ವ ಚಾಣೂರಃ ಕೂಣಿ ತೇಕ್ಷಣಃ ।
ಪುಷ್ಪಪೇಶ ಮಿವೋತ್ಪಶ್ಯನ್ ಆದ್ರವತ್ ಪುಷ್ಕರೇಕ್ಷಣಂ ॥ ॥೪೪॥

ಚಾಣೂರನು ಗೋಪನೊಡನೆ ಯುದ್ಧಮಾಡುವುದೇ ಎಂದು ಗರ್ವ ಹೊಂದಿದವನಾಗಿ ಅಲಕ್ಷ್ಯದ ನೋಟದಿಂದ ಕೆಂದಾವರೆಯಂತೆ ಸುಂದರವಾದ ಕಣ್ಣುಗಳುಳ್ಳವನಾದ ಶ್ರೀಕೃಷ್ಣನನ್ನು ಕೊಲ್ಲುವುದು ಹೂವನ್ನು ಹೊಸಕಿ ಹಾಕುವಂತೆ ಎಂದು ತಿಳಿದು ಮುಂದೆ ಬಂದನು.

ಆ ಗೋಪ ಬಾಲಕರೊಡನೆ ಸೆಣಸುವುದು ತನಗೆ ಅತ್ಯಂತ ಸಣ್ಣ ಕೆಲಸ. ಅದನ್ನು ಕ್ಷಣ ಮಾತ್ರದಲ್ಲಿ ಮಾಡಿ, ಶ್ರೀಕೃಷ್ಣನನ್ನು ಆನೆಯು ಹೂವನ್ನು ಹೊಸಕಿ ಹಾಕುವಂತೆ ನಿರ್ನಾಮ ಮಾಡಿಬಿಡುತ್ತೇನೆ ಎಂದು ಗರ್ವದಿಂದ ಬೀರುತ್ತಾ, ಶ್ರೀಕೃಷ್ಣನ ಮುಂದೆ ಬಂದು ನಿಂತನು.

ಶ್ರೀಕೃಷ್ಣನು ತಾವರೆಯಂಥಾ ಕಣ್ಣುಳ್ಳವನು. ಅವನನ್ನು ಆನೆಯು ತಾವರೆ ಹೂವನ್ನು ಹೊಸಕಿ ಹಾಕುವಂತೆ ತುಳಿದು ಹಾಕಿಬಿಡುತ್ತೇನೆ ಎಂದು ಭಾವಾರ್ಥ.

ಯಥೋಚೇ ವಿಷಮಂ ತತ್ರ ನಿಯುದ್ಧಂ ಸ್ಥೂಲ ದೃಷ್ಟಿಭಿಃ ।
ತತ್ತ್ವ ದೃಷ್ಟಿ ಭಿರಪ್ಯೇವಂ ವಿಶ್ವಾಧಿಕ ಬಲೇ ಹರೌ ॥ ॥೪೫॥

ಮೇಲ್ನೋಟಕ್ಕೆ ನೋಡುವವರು ಅಲ್ಲಿ ನಡೆಯುವ ಮಲ್ಲಯುದ್ಧವು (ಬಾಹುಯುದ್ಧ)ವು ಸರಿಯಾದುದೇ (ಸಮನಾದುದೇ) ಎಂದು ಮಾತನಾಡಿದ ಹಾಗೆಯೇ ನಿಜಸ್ಥಿತಿಯನ್ನು ಅರಿತವರು ಎಲ್ಲರಿಗೂ ಮೇಲಾದ ಬಲಶಾಲಿಯಾದ ಭಗವಂತನನ್ನು ಅರಿತಿರುವುದರಿಂದ, ಈ ಮಲ್ಲಯುದ್ಧವು ಸಮನಾದುದಲ್ಲಾ ಎಂದೇ ಭಾವಿಸಿದರು.

ಶ್ರೀಕೃಷ್ಣನನ್ನು ಭಗವದವತಾರವೆಂದು ತಿಳಿದ ಜ್ಞಾನಿಗಳು ಈ ಮಲ್ಲಯುದ್ಧವು ಸಮನಾದುದಲ್ಲ ಅಂದರೆ ಸರ್ವೇಶ್ವರನಿಗೆ ಚಾಣೂರನು ಸಮನಲ್ಲಾ ಎಂದು ಭಾವಿಸಿದರೆ, ಶ್ರೀಕೃಷ್ಣನ ನಿಜ ಸ್ವರೂಪ ಅರಿಯದವರು ಅವನು ಬಾಲನಾದ್ದರಿಂದ ದೃಢಕಾಯನಾದ, ಭೀಮಕಾಯನಾದ ಚಾಣೂರನಿಗೆ ಸಮನಲ್ಲವೆಂದು ಭಾವಿಸಿದರು.

ನ್ಯೂನಾಧಿಕ ಸಮಾರಂಭೋ ವಿಭುಸ್ತತ್ರ ವಿಹಾರತಃ।
ವಿಷಾದ ಪ್ರೀತಿ ಸಂದೇಹಾನ್ ಸಭ್ಯಾನಾಂ ಸಮತಾನಯತ್॥ ॥೪೬॥

ಶ್ರೀಕೃಷ್ಣನೂ ತಾನು ಶಕ್ತಿಶಾಲಿಯಾಗಿದ್ದರೂ, ಅಲ್ಲಿ ಇರುವವರಿಗೆ ಅನುಸಾರವಾಗಿ, ಸಮನಾಗಿ ಕೃತ್ಯಗಳನ್ನು ವಿನೋದದಿಂದ ನಡೆಸುತ್ತಾ ಸಭೆಯಲ್ಲಿರುವವರಿಗೆ ಪ್ರೀತಿ, ಬೇಸರ ಸಂಶಯ ಭಯವನ್ನು ಉಂಟುಮಾಡುತ್ತಾ ಇದ್ದನು.

ಒಂದೇ ಬಾರಿಗೆ ಚಾಣೂರನನ್ನು ನಿಗ್ರಹಿಸಬಲ್ಲವನಾಗಿದ್ದರೂ ಸ್ವಾಮಿಯು ಹಾಗೆ ಮಾಡದೆ, ನೋಡುವವರ ಮನದಲ್ಲಿ ಕೆಲ ಬಾರಿ ಸಂಶಯ, ಬೇಸರ, ಭಯವನ್ನು ಮತ್ತೆ ಕೆಲವು ಬಾರಿ ಪ್ರೀತಿ ಇತ್ಯಾದಿ ಸಮ್ಮಿಶ್ರ ಭಾವನೆಗಳನ್ನು ಏರ್ಪಡಿಸುತ್ತಾ ವಿನೋದದಿಂದ ಆ ಚಾಣೂರನೊಡನೆ ಮಲ್ಲಯುದ್ಧ ಮಾಡಿದನು.

ಸ ಬಾಲಃ ಪ್ರಚಯಂ ಪ್ರಾಪ ಬಾಲಾತಪ ಇವ ಕ್ರಮಾತ್ ।
ನೀಹಾರ ಇವ ಚಾಣೂರಃ ಶನೈರಪಚಯಂ ಯಯೌ ॥ ॥೪೭॥

ಮೆಟ್ಟಿಲು, ಮೆಟ್ಟಿಲಾಗಿ ಮೇಲಕ್ಕೇರುವ ಎಳೆಯ ಬಿಸಿಲಿನಂತೆ, ಶ್ರೀಕೃಷ್ಣನು ವೃದ್ಧಿಯನ್ನು ಹೊಂದುತ್ತಾ, ಚಾಣೂರನು ಮೆಲ್ಲಗೆ ಇಬ್ಬನಿ ಕರಗುವಂತೆ ಕ್ಷೀಣಿಸಿದನು.

ಸ್ವಲ್ಪಕಾಲದಲ್ಲೇ ಚಾಣೂರನ ಶಕ್ತಿಯು ಕ್ಷೀಣಿಸಿತು. ಶ್ರೀಕೃಷ್ಣನ ಕೈ ಮೇಲಾಯಿತು. ಶ್ರೀಕೃಷ್ಣನ ಬಲಿಷ್ಠವಾದ ಅಂಗಗಳ ಪ್ರಹಾರದಿಂದ ಚಾಣೂರನು ಮೆತ್ತಗಾದನು. ಕೊನೆಯಲ್ಲಿ ಪ್ರಾಣ ನೀಗಿದನು.

ವಾರಿತೇಷ್ವಥ ವಾದ್ಯೇಷು ವಿಷಣ್ಣೇನ ಮಹೀಭೃತಾ।
ದಿವ್ಯ ದುಂದುಭಯೋ ನೇದುರ್ನಿಗಮಧ್ವಾನ ನಿರ್ಭರಾಃ ॥ ॥೪೮॥

ಮತ್ತೆ ಕಂಸನು ದುಃಖಿತನಾಗಿ ವಾದ್ಯ ಘೋಷಗಳನ್ನು ಮೊಳಗಿಸಿದಾಗ ಅದೇ ಸಮಯದಲ್ಲಿ ದೇವಲೋಕದ ದೇವರ್ಷಿಗಳ ವೇದಘೋಷಗಳೂ ಸೇರಿ, ದೊಡ್ಡ ಧ್ವನಿ ಉಂಟಾಯಿತು.

ಚಾಣೂರನ ಸಂಹಾರದಿಂದ ಕಂಸನು ದುಃಖತಪ್ತನಾದನು. ಆದರೆ ಯುದ್ಧವನ್ನು ನಿಲ್ಲಿಸಲು ಇಚ್ಛಿಸಲಿಲ್ಲ. ಮತ್ತೆ ಭೇರಿ ತಾಡನಗಳನ್ನು ನುಡಿಸಿ, ಮುಷ್ಟಿಕನನ್ನು ಬಲರಾಮನ ಮೇಲೆ ಪ್ರೇರೇಪಿಸಿದನು. ಅದೇ ಸಮಯದಲ್ಲಿ ಚಾಣೂರನ ಸಂಹಾರಕ್ಕಾಗಿ ದೇವತೆಗಳು ದೇವದುಂದುಭಿಗಳನ್ನು ಮೊಳಗಿಸಿದರು. ಬ್ರಹ್ಮರ್ಷಿಗಳು ವೇದಘೋಷ ಮಾಡಿದರು.

ವಲ್ಗತಾ ಬಲಭದ್ರೇಣ ಕೃಷ್ಣೇನ ಚ ವಸುಂಧರಾ ।
ವಾದಿತ್ರಮಿವ ದಧ್ವಾನ ಮಥುರೇಂದ್ರ ಭಯಾನಕಂ॥ ॥೪೯॥

ಬಲರಾಮನೂ, ಶ್ರೀಕೃಷ್ಣನೂ ಬಲದಿಂದ ದೃಢವಾಗಿ ನಿಲ್ಲಲು ಭೂಮಿಯು, ಕಂಸನು ಅಂಜುವ ಹಾಗೆ ನಗಾರಿಯಂತೆ ಅಲುಗಾಡಿತು.

ತಮ್ಮ ವಿಜಯವನ್ನು ಕಂಡು ರಾಮ – ಕೃಷ್ಣರಿಬ್ಬರೂ ನೆಲವನ್ನು ಉತ್ಸಾಹದಿಂದ ಕಾಲಿನಿಂದ ಗುದ್ದಿದರು. ಆ ಪಾದಾಘಾತಕ್ಕೆ ಸಮಗ್ರ ಭೂಮಂಡಲವೂ ನಡುಗಿತು. ಮತ್ತು ಕಂಸನ ಎದೆಯೂ ಸಹ ಜೋರಾಗಿ ಕಂಪಿಸಿತು. ಅವನು ಧೈರ್ಯವನ್ನು ಕಳೆದುಕೊಂಡನು.

ಭೀಮ ಕಾಲೀಯ ಭೋಗೀಂದ್ರ ಸ್ಫುಟಾರಂಗ ಮಹಾನಟಃ।
ಮಲ್ಲರಂಗ ನಟಂ ದೈತ್ಯಂ ಮಧುಮಾಥಂ ಮಮಾಥ ಸಃ॥ ॥೫೦॥

ಭಯಂಕರವಾದ ದೊಡ್ಡದಾದ ಕಾಳೀಯನೆಂಬ ಹಾವಿನ ಹೆಡೆಗಳ ಜೊತೆ ಹೋರಾಟ ನಡೆಸಿದ ಮಹಾಸ್ವಾಮಿಯು ಮಲ್ಲರಂಗದಲ್ಲಿ ನಾಟ್ಯವು ಆಡುವ ಅಸುರನಾದ ಚಾಣೂರ ನನ್ನು ಈ ಹಿಂದೆ ಮಧು ಎಂಬ ರಾಕ್ಷಸನನ್ನು ನಿಗ್ರಹಿಸಿದ ಹಾಗೆ ಹೊಡೆದು ಬಿಸಾಕಿದನು.

ಕಾಳೀಯನನ್ನು ಲೀಲಾಜಾಲವಾಗಿ ನಿಗ್ರಹಿಸಿದ್ದ ಸ್ವಾಮಿಯು ಈಗ ಚಾಣೂರನೆಂಬ ಮಹಾ ಮಲ್ಲನನ್ನು, ಇರುವೆಯನ್ನು ಹೊಸಕಿಹಾಕುವಂತೆ ತನ್ನ ಭುಜಬಲ ಪರಾಕ್ರಮದಿಂದ ಹೊಡೆದು ಕೆಳಗುರುಳಿಸಿದನು. ತಾನು ಸಾಕ್ಷಾತ್ ವಿಷ್ಣುವಿನ ಅವತಾರವೇ ಎಂಬುದನ್ನು ಪುನಃ ಸಾಬೀತುಪಡಿಸಿದನು.

ಮುಷ್ಟಿಘಾತೇನ ರಾಮಸ್ಯ ಮುಷ್ಟಿಕಶ್ಚ ನಿಪಾತಿತಃ।
ಭೋಜಾಧಿಪ ಮಹೋತ್ಪಾತಂ ಭೂಮಿ ಕಂಪ ಮವರ್ತಯತ್॥ ॥೫೧॥

ಬಲರಾಮನ ಮುಷ್ಟಿಯಿಂದ ಮುಷ್ಟೀಕನು ಹೊಡೆಯಲ್ಪಟ್ಟು ಭೋಜರಾಜನಾದ ಕಂಸನಿಗೆ ಅಪಾಯವನ್ನು ಸೂಚಿಸುವ ಹಾಗೆ ಭೂಕಂಪನವು ಉಂಟಾಯಿತು.

ಅದೇ ರೀತಿ ಬಲರಾಮನು ಮುಷ್ಟೀಕನನ್ನು ತನ್ನ ಒಂದೇ ಮುಷ್ಟಿ ಪ್ರಹಾರದಿಂದ ಸದೆಬಡಿದು ಕೊಂದು ಹಾಕಿದನು. ಕಂಸನಿಗೆ ಅಪಾಯ ಸೂಚನೆ ತಟ್ಟಿತು.

ರಾಮ ರಾಮಾನುಜಾಭ್ಯಾಂ ತೌ ರಾವಣೇಂದ್ರ ಜಿತಾಮಿವ ।
ನಮಯಾ ಮಾಸತುಃ ಪೃಥ್ವೀಂ ನಗಪಾತಂ ನಿಪಾತಿತೌ॥ ॥೫೨॥

ಆ ದಿವಸ ರಾಮನಿಂದಲೂ, ರಾಮಾನುಜನಿಂದಲೂ, ರಾವಣನು ಇಂದ್ರಜಿತ್ತೂ ವಧಿಸಲ್ಪಟ್ಟ ಹಾಗೆ, ಈ ದಿವಸ ಬಲರಾಮನಿಂದಲೂ, ಶ್ರೀಕೃಷ್ಣನಿಂದಲೂ (ರಾಮ, ರಾಮಾನುಜ ರಿಂದಲೂ) ಚಾಣೂರ ಮುಷ್ಟಿಕರುಗಳು ಬೆಟ್ಟಗಳಂತೆ ಬೀಳಿಸಲ್ಪಟ್ಟು ಭೂಮಿಯಲ್ಲಿ ಬಿದ್ದರು.

ಶ್ರೀರಾಮಾವತಾರ ಕಾಲದಲ್ಲಿ ಶ್ರೀರಾಮನಿಂದ ರಾವಣನು ವಧಿಸಲ್ಪಟ್ಟನು. ರಾಮಾನುಜನಾದ ಲಕ್ಷ್ಮಣನಿಂದ ರಾವಣನ ಮಗನಾದ ಇಂದ್ರಜಿತ್ತು ವಧಿಸಲ್ಪಟ್ಟನು. ಈಗ ಕೃಷ್ಣನಾಗಿ ಶ್ರೀರಾಮನೇ ಅವತಾರ ಮಾಡಿ ಬಂದಿರುವುದರಿಂದ, ಈ ಅವತಾರದಲ್ಲಿಯೂ, ರಾಮಾನುಜನಾದ (ಶ್ರೀಕೃಷ್ಣನಿಂದ) ಚಾಣೂರನೂ, ಬಲರಾಮನಿಂದ (ಕೃಷ್ಣನ ಅಣ್ಣ) ಮುಷ್ಟಿಕನು ವಧಿಸಲ್ಪಟ್ಟರು.

ಶಾಯಿತೌ ವೀರಶಯನೇ ದೃಷ್ಟ್ವಾ ಚಾಣೂರ ಮುಷ್ಟಿಕೌ।
ದ್ರುತ ಮಭ್ಯದ್ರವನ್ ಕೃಷ್ಣಂ ತತ್ರ ತೋಸ ಕಲಾದಯಃ॥ ॥೫೩॥

ಅಲ್ಲಿ ವೀರರುಗಳನ್ನು ಬೀಳಿಸುವ ಜಾಗದಲ್ಲಿ ಚಾಣೂರನೂ, ಮುಷ್ಟಿಕನೂ ಬೀಳಿಸಲ್ಪಟ್ಟಿರುವುದನ್ನು ನೋಡಿ ತೋಸಲನೇ ಮೊದಲಾದವರು ವೇಗದಿಂದ ಶ್ರೀಕೃಷ್ಣನನ್ನು ಎದುರಿಸಿದರು.

ಆ ರಂಗ ಮಂಟಪದಲ್ಲಿ ಇನ್ನೂ ಅನೇಕ ವೀರರಿದ್ದರು. ಯಾವಾಗ ಚಾಣೂರನೂ, ಮುಷ್ಟಿಕನೂ ಕೆಳಗೆ ಬಿದ್ದರೋ ಆವಾಗ ಆ ವೀರರೆಲ್ಲಾ ಕೆರಳಿ, ರಾಮಕೃಷ್ಣರ ಮೇಲೆ ಬಿದ್ದರು. ಅವರೆಲ್ಲರನ್ನೂ ಸಹ ಕೃಷ್ಣನು ಧೈರ್ಯದಿಂದ ಎದುರಿಸಿ, ಅವರೊಡನೆ ಸೆಣಸಿದನು.

ಸತಾನಪಿ ನಿಯುದ್ಧೇನ ವಸಾಧಾಯಾಂ ನ್ಯಪಾತಯತ್ ।
ಕಾಲೋ ಯುಗಪದುದ್‌ಭೂತಾನ್ ಕಲ್ಪಾಂತ ಮಿಹಾರಾನಿವ ॥ ॥೫೪॥

ಶ್ರೀಕೃಷ್ಣನು ಪ್ರಳಯ ಕಾಲವು ಜಗತ್ತಿನಲ್ಲೆಲ್ಲಾ ಉಂಟು ಮಾಡುವ ಆರೋಗನೇ ಮೊದಲಾದ ಸೂರ್ಯರುಗಳನ್ನೆಲ್ಲಾ ನಾಶ ಮಾಡುವ ಲೆಕ್ಕದಲ್ಲಿ ಅವರುಗಳನ್ನು ಮಲ್ಲಯುದ್ಧದಲ್ಲಿ ಬೀಳಿಸಿ ಕೊಂದನು.

ಸೂರ್ಯನು ಯಾವ ರೀತಿ ಕತ್ತಲೆಯನ್ನು ನಾಶ ಮಾಡುವನೋ ಅದೇ ರೀತಿ ರಾಮಕೃಷ್ಣರು ಆ ಮಲ್ಲರನ್ನೆಲ್ಲಾ ಎದುರಿಸಿ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಕೆಲವು ಬಾರಿ ಒಟ್ಟೊಟ್ಟಾಗಿ ಸದೆ ಬಡಿದು ಕೊಂದು ಹಾಕಿದರು.

ಗರುತ್ಮಾನಿವ ಭೂಭಾಗಾತ್ ಗಗನಾ ಭೋಗ ಮಾಯತಂ ।
ಕಂಸ ಮಂಚ ಮಪದ್ವಾರ ದುದ ಪ್ಲವತ ಕೇಶವಃ॥ ॥೫೫॥

ಗರುಡನು ಭೂಮಿಯಲ್ಲಿ ಒಂದು ಜಾಗದಲ್ಲಿ ನಿಂತು ಆಕಾಶಕ್ಕೆ ಹಾರುವ ಹಾಗೆ, ಶ್ರೀಕೃಷ್ಣನು ಕಂಸನು ಕುಳಿತಿದ್ದ ಸ್ಥಳಕ್ಕೆ ಎಲ್ಲರಿಗೂ ಇರುವ ದಾರಿಯನ್ನು ಬಿಟ್ಟು, ಬೇರೆ ದಾರಿಯಲ್ಲಿ ಬಂದು ಸೇರಿದನು.

ರಾಮಾಯಣದ ಸುಂದರ ಕಾಂಡದಲ್ಲಿ ಆಂಜನೇಯನು ಲಂಕೆಯನ್ನು ಪ್ರವೇಶಿಸುವಾಗ "ಅದ್ವಾರೇಣ ಮಹಾ ಬಾಹು ಪ್ರಾಕಾರಮಭಿಪುಪ್ಲುವೆ" ಎಂಬುದಾಗಿ ಹಿಂಬಾಗಿಲಿನಿಂದ ಪ್ರವೇಶಿಸಿದನು ಎಂದು ಹೇಳಿದೆ. ಶತ್ರುವಿನ ಮನೆಯನ್ನು ಮುಂಬಾಗಿಲಿನಿಂದ

ಪ್ರವೇಶಿಸಬಾರದು ಎಂಬ ಶಾಸ್ತ್ರವುಂಟು. ಕಂಸನು ತನಗೂ, ತನ್ನ ಭಕ್ತರಿಗೂ ಶತ್ರುವಾದ ಕಾರಣ, ನೇರವಾದ ದಾರಿಯನ್ನು ಬಿಟ್ಟು ಬೇರೆ ದಾರಿಯಲ್ಲಿ ಅವನಿರುವ ಸ್ಥಳಕ್ಕೆ ಹೋಗಿ ಸೇರಿದನು ಸ್ವಾಮಿ.

ಅದೇ ರೀತಿ ಜರಾಸಂಧ ವಧಾ ಪ್ರಕರಣದಲ್ಲಿಯೂ ಭೀಮಸೇನ, ಕೃಷ್ಣಾರ್ಜುನರು ಹಿಂದಿನ ಬಾಗಿಲಿನಿಂದ ಜರಾಸಂಧನ ಅರಮನೆಯನ್ನು ಪ್ರವೇಶಿಸಿದರು.

ಕಚ ಗ್ರಹೇಣ ವಿವಶಂ ಕಂಸಮಾಕೃಷ್ಯ ಪಾತಯನ್ ।
ಪತನ್ ವಕ್ಷಸ್ಥಲೇ ತಸ್ಯ ತತ್ ಸತ್ವ ಮುದಪಾಟಯತ್ ॥ ॥೫೬॥

ಕಂಸನನ್ನು ಯುದ್ಧದಲ್ಲಿ ಕೃಷ್ಣನು ಹಿಡಿದಾಗ, ಅವನೂ ಪರವಶಪಟ್ಟು ಸ್ವಾಮಿಯನ್ನು ಎಳೆದಾಡಿದಾಗ, ಕೆಳಗೆ ಬಿದ್ದು ತಳ್ಳಾಡಿಕೊಂಡು ಕಂಸನ ಎದೆಯ ಮೇಲೆ ಶ್ರೀಕೃಷ್ಣನು ಬಿದ್ದು ಅವನ ಪ್ರಾಣವನ್ನು ಸೆಳೆದುಬಿಟ್ಟನು.

ಕೃಷ್ಣ ಕಂಸರಿಬ್ಬರೂ ಸೆಣೆಸಲು ಆರಂಭಿಸಿದರು. ಕಂಸನ ಬಳಿ ಯಾವ ಆಯುಧವನ್ನೂ ಶ್ರೀಕೃಷ್ಣನು ಕೊಂಡೊಯ್ಯಲಿಲ್ಲ. ಅವನನ್ನು ಸಿಂಹಾಸನದಿಂದ ಕೆಳಕ್ಕೆ ಎಳೆದು ಬೀಳಿಸಿ, ಅವನ ಕಿರೀಟವನ್ನು ಕಿತ್ತು ಹಾಕಿದ. (ದುಷ್ಟಕಂಸನು ರಾಜನಾಗಿ ಸಾಯಬಾರದೆಂಬ ಸ್ವಾಮಿಯ ಸಂಕಲ್ಪವೇನೋ ಅಥವಾ ದೊರೆ ಯಾರಾದರಾಗಿರಲಿ ರಾಜ ಚಿಹ್ನೆಗೆ ಅಪಮಾನ ಮಾಡುವುದು ಬೇಡವೆಂದೋ!) ಕಂಸನ ಎದೆಯ ಮೇಲೆ ಕುಳಿತನು ಅಷ್ಟೆ! ಸಮಸ್ತ ಭೂಮಂಡಲವೇ ತನ್ನ ಮೇಲೆ ಬಿದ್ದಂತಾಗಿ ಕಂಸನ ಕಣ್ಣಾಲಿಗಳು ಗರಗರನೆ ತಿರುಗಿ ಆ ಭಾರವನ್ನು ಸಹಿಸಲಾರದೆ ಕಂಸನು ಗತಪ್ರಾಣನಾದನು.

ಅವನನ್ನು ಕೃಷ್ಣನು ಹೊಡೆಯಲಿಲ್ಲ. ಅವನು ಕೃಷ್ಣನ ಭಯದಿಂದಲೇ ಅರ್ಧ ಪ್ರಾಣ ಕಳೆದುಕೊಂಡಿದ್ದನು.



ಮಹಾಮೋಹ ಮಿವಾಕ್ರಮ್ಯ ಮಾತುಲಂ ಮಧುಸೂದನಃ ।
ವಿವೇಕ ಇವ ವೃತ್ತಸ್ಥ ಮುಗ್ರಸೇನ ಮಮೋಚಯತ್ ॥ ॥೫೭॥

ಮಧುಸೂದನನಾದ ಶ್ರೀಕೃಷ್ಣನು ವಿವೇಕವೆಂಬುದು ಮಹಾ ಮೋಹವನ್ನು ಎದುರಿಸಿ, ಜೀವಾತ್ಮನನ್ನು ಮೋಕ್ಷಕ್ಕೆ ಸೇರಿಸುವ ಹಾಗೆ ಸೋದರ ಮಾವನಾದ ಕಂಸನನ್ನು ಕೊಂದು ಸನ್ಮಾರ್ಗದಲ್ಲಿ ಇದ್ದ ಉಗ್ರಸೇನನೆಂಬ ಕಂಸನ ತಂದೆಯನ್ನು ಸೆರೆಯಿಂದ ಬಿಡಿಸಿದನು.

ಶ್ರೀಕೃಷ್ಣನು ದುರ್ಮಾರ್ಗಿಯಾಗಿದ್ದ ಕಂಸನನ್ನು ಹೀಗೆ ಲೀಲಾಜಾಲವಾಗಿ ಕೊಂದು ಹಾಕಿದ ಬಳಿಕ ಅವನು ಸೆರೆಯಲ್ಲಿಟ್ಟಿದ್ದ ತನ್ನ ತಾತನಾದ ಉಗ್ರಸೇನ ಮಹಾರಾಜನನ್ನು ಸೆರೆಯಿಂದ ವಿಮೋಚನಗೊಳಿಸಿದನು. ಕಂಸನನ್ನು ವಧಿಸಿದರೂ ಶ್ರೀಕೃಷ್ಣನು ಅವನಿಗೆ ಉತ್ತಮ ಲೋಕವನ್ನೇ ನೀಡಿದ್ದಾನೆ. ಇದೇ ಭಗವಂತನ ದಯಾಗುಣ. ಕಡೆಗಾಲದಲ್ಲಿ ಶ್ರೀಕೃಷ್ಣನು ನೋಡುತ್ತಾ ಪ್ರಾಣ ಬಿಟ್ಟಿದ್ದರಿಂದ ಅವನಿಗೆ ಮುಕ್ತಿಯೇ ದೊರಕಿತು.

ದದೌ ಚ ಕಂಸಭೃತ್ಯಾನಾಂ ದದತಾಂ ತತ್ರ ಜೀವಿತಂ।
ಉನ್ಮುಖ ತ್ರಿದಶಪ್ರೇಕ್ಷ್ಯಾ ಮೂರ್ಧ್ವಾಂ ಗತಿ ಮನುತ್ತಮಾಂ ॥ ॥೫೮॥

ಕಂಸನ ಅನುಚರರು ಅನೇಕರು ಪ್ರಾಣ ಒಪ್ಪಿಸಿ, ಅವನಿಗೆ ಸಹಾಯ ಮಾಡಲು ಬಂದ ಸಮಯದಲ್ಲಿ ಅವರುಗಳಿಗೆ ದೇವತೆಗಳು ಹೊಂದುವ ಉತ್ತಮ ಲೋಕಗಳನ್ನು ಶ್ರೀಕೃಷ್ಣನು ಅನುಗ್ರಹಿಸಿದನು.

ಕಂಸನ ಅನುಚರರು ಅನೇಕರು ರಾಜನಿಷ್ಠೆಯಿಂದ ಕಂಸನಿಗಾಗಿ ಪ್ರಾಣ ಒಪ್ಪಿಸಿದರು. ದಯಾಮಯಿಯಾದ ಸ್ವಾಮಿಯು ಅವರೆಲ್ಲರಿಗೂ ಸಹ ಮುಕ್ತಿಯನ್ನೇ ಕರುಣಿಸಿದನು. ನಾರದರು ಭಾಗವತದಲ್ಲಿ ಹೇಳಿರುವ ''ಭಕ್ತಿಯಿಂದಲಾಗಲೀ, ದ್ವೇಷದಿಂದಲಾಗಲೀ ಯಾವಾಗಲೂ ಭಗವಂತನ ಧ್ಯಾನ ಮಾಡುತ್ತಿದ್ದರೆ ಅವರಿಗೆ ಮೋಕ್ಷ ಶತಸ್ಸಿದ್ಧ' ವೆಂಬ ವಾಕ್ಯವು ಸತ್ಯವಾಯಿತು.

ಕಂಸ ಕರ್ಷಣ ಮಂಡಲ್ಯೋ ಗಂಭೀರಾಸ್ತತ್ರ ಚಕ್ರಿರೆ ।
ರಣಲಕ್ಷ್ಮೀ ನಿವಾಸಸ್ಯ ರಂಗಸ್ಯ ಪರಿಖಾ ಇವ ॥ ॥೫೯॥

ಶ್ರೀಕೃಷ್ಣನು ರಂಗಭೂಮಿಯಲ್ಲಿ ಕಂಸನನ್ನು ಬೆಟ್ಟದಂತೆ ಬಹಳ ಕಾಲ ಎಳೆದಾಡಿದ್ದರಿಂದ, ಉಂಟಾದ ಸುಂದರವಾದ ಗೆರೆಗಳು, ಯುದ್ಧ ಲಕ್ಷ್ಮಿ ವಾಸ ಮಾಡುವ ಆ ಜಾಗಕ್ಕೆ ರಂಗೋಲಿ ಇಟ್ಟಂತಿತ್ತು.

ಕಂಸನನ್ನು ಶ್ರೀಕೃಷ್ಣನು ಸಿಂಹಾಸನದಿಂದ ಕೆಳಕ್ಕೆ ಉರುಳಿಸಿ, ರಂಗಭೂಮಿಯಲ್ಲೆಲ್ಲಾ ಅವನ ದೇಹವನ್ನು ಎಳೆದಾಡಿದನು. ಅದರಿಂದ ಅವನು ತೊಟ್ಟಿದ್ದ ಆಭರಣಗಳೆಲ್ಲವೂ ಸಡಿಲಗೊಂಡು ಅವು ನೆಲದ ಮೇಲೆಲ್ಲಾ ರೇಖೆಗಳನ್ನು ಉಂಟು ಮಾಡಿದವು. ಅವು ಕೃಷ್ಣನ ವಿಜಯೋತ್ಸವವನ್ನು ಸಾರಲು ಇಟ್ಟ ರಂಗೋಲಿಯಂತೆ ತೋರುತ್ತಿತ್ತು.

ಸುದಾಮನಾಮ ಕಂಸಸ್ಯ ಸೋದರ ಸ್ತ್ವರಿತಃ ಕ್ರುಧಾ।
ಬಲೇನ ಗಮಿತಃ ಕ್ಷಿಪ್ರ ಮಗ್ರಜೇನ ಗತಾಂ ಗತಿಂ॥ ॥೬೦॥

ಕಂಸನ ತಮ್ಮನಾದ ಸುದಾಮನೆಂಬವನು ಶ್ರೀಕೃಷ್ಣನೆಡೆಗೆ ಕೋಪದಿಂದ ವೇಗವಾಗಿ ಬಂದಾಗ, ಬಲರಾಮನಿಂದ ವಧಿಸಲ್ಪಟ್ಟು ಅವನೂ ಸಹ ಅಣ್ಣನಾದ ಕಂಸನು ಸೇರಿದ ಸ್ಥಳಕ್ಕೆ ಹೋಗಿ ಸೇರಿದನು.

ಕಂಸನಿಗೆ ಸುದಾಮನೆಂಬ ತಮ್ಮನೊಬ್ಬನಿದ್ದನು. ಅವನು ಅಣ್ಣನ ವಧೆಯನ್ನು ಸಹಿಸಲಾರದೆ, ಶ್ರೀಕೃಷ್ಣನೆಡೆಗೆ ಕೋಪದಿಂದ ವೇಗವಾಗಿ ಬಂದಾಗ, ಬಲರಾಮನು ಪರಿಘವನ್ನೆತ್ತಿಕೊಂಡು ಸಿಂಹವು ಪಶುಗಳನ್ನು ಕೊಲ್ಲುವಂತೆ ಕೊಂದುಹಾಕಿದನು.

ಅನಾಯುಧ ಮಹಾಯುದ್ಧಂ ದೃಷ್ಟ್ವಾ ಹೃಷೀತ ರೋಮಭಿಃ।
ಪ್ರವಾತ ತದಲ ಪ್ರಖ್ಯೈಃ ಪ್ರಾಶ್ನಿಕೈರಭಿತಃ ಸ್ಥಿತಂ ॥ ॥೬೦॥

ಮಧ್ಯಸ್ಥರಾಗಿದ್ದವರೂ, ಆಯುಧವಿಲ್ಲದೆಯೇ ನಡೆದ ಈ ದೊಡ್ಡ ಹೋರಾಟ ವನ್ನು ನೋಡಿ ರೋಮಾಂಚನಗೊಂಡು, ಗಾಳಿಯಿಂದ ಅಲ್ಲಾಡಿಸಲ್ಪಟ್ಟ ಬಾಳೆ ಮರಗಳಂತೆ ಸುತ್ತುತ್ತಿದ್ದರು.

ಆ ಯುದ್ಧವನ್ನು ನೋಡಲು ಅನೇಕರು ಸೇರಿದ್ದರು. ಅವರೆಲ್ಲರೂ ಆ ಯುದ್ಧವು ಯಾವ ರೀತಿ ಪರ್ಯವಸಾನವಾಗುವುದೋ ಎಂಬ ಕುತೂಹಲದಲ್ಲಿದ್ದರು. ಇಲ್ಲಿ ಯಾವ ದೊಡ್ಡ ಆಯುಧಗಳಾಗಲೀ, ಅಸ್ತ್ರಪ್ರತ್ಯಸ್ತ್ರಗಳ ಬಳಕೆಯಾಗಲೀ ಆಗಲಿಲ್ಲ. ಇದು ಅವರಿಗೆ ಅತ್ಯಂತ ಆಶ್ಚರ್ಯವನ್ನುಂಟು ಮಾಡಿತು. ಇದನ್ನು ನೋಡಿ ತಲೆ ಸುತ್ತಿದಂತಾಗಿ ಅವರು ರಂಗಮಂಟಪ ದಲ್ಲಿ ತಿರುಗುತ್ತಿದ್ದರು.

ಕೃತಿನಸ್ತಾದೃಶಂ ಯುದ್ಧಂ ಕಿಲಿಕಿಂಜಿತ ಯಂತ್ರಿತಾಃ।
ಲೀನಾ ಇವ ಚ ಪಶ್ಯಂತೋ ಲಿಖಿತಾ ಇವ ಚಾಭವನ್ ॥ ॥೬೧॥

ಜ್ಞಾನಿಗಳಾಗಿದ್ದವರು ಈ ರೀತಿಯಾದ ಯುದ್ಧವನ್ನು ನೋಡುತ್ತಲೇ ಕಿಲಿಕಿಲ್ಬಿತ ಯಂತ್ರಗಳಂತೆ ಅಲ್ಲಾಡದೆ, (ಅಳು, ನಗು, ಆಶ್ಚರ್ಯ, ಭಯ, ನಡುಕ ಮುಂತಾದ ಅನೇಕ ಅವಸ್ಥೆಗಳು ಒಟ್ಟಿಗೇ ಸೇರಿರುವ ಹಾಗೆ) ಚಿತ್ರಗಳಂತೆ ಕುಳಿತಿದ್ದರು.

ಬ್ರಹ್ಮಜ್ಞಾನಿಗಳಾದರೂ ಈ ರೀತಿಯ ಶಾಂತಿ ಯುದ್ಧವನ್ನು ನೋಡಿ ಹಿಂದೆಂದೂ ನಡೆಯದ ಈ ಯುದ್ಧದ ಪ್ರಭಾವದಿಂದ ಅಚಲ ಯಂತ್ರಗಳಂತೆ ಸ್ತಬ್ಧರಾಗಿ ಕುಳಿತಿದ್ದರು. ಅವರ ಆಶ್ಚರ್ಯ ಎಲ್ಲೆ ಮೀರಿತ್ತು. ಭಯ ಮಿಶ್ರಿತ ಭಾವನೆಯಿಂದ ಕಿಲಿಕಿಲ್ಬಿತ ಯಂತ್ರಗಳಂತೆ ಇದ್ದರು.

ಸಿದ್ಧಾಶ್ಚ ದಿವಿ ತತ್ತಾದೃಕ್ ತಾಲ ಕಲ್ಪಿತ ತಾಂಡವಾಃ ।
ಹರ್ಷ ದುಗ್ಧಾಬ್ಧಿ ಕಲ್ಲೋಲಂ ಹಾಹಾಕಾರ ಮಕಲ್ಪಯನ್ ॥ ॥೬೨॥

ಆಕಾಶದಲ್ಲಿ ಸಿದ್ಧರೂ, ತಾಳವಾದ್ಯಗಳೊಡನೆ ನರ್ತನವನ್ನು ಮಾಡುತ್ತಾ ಸಂತೋಷ ದಿಂದ ಅಲೆಗಳೋಪಾದಿಯಲ್ಲಿ ಕೋಲಾಹಲವನ್ನುಂಟುಮಾಡಿದರು.

ಶ್ರೀಕೃಷ್ಣ ವಿಜಯೋತ್ಸವವನ್ನು ಎಲ್ಲರೂ ಕೊಂಡಾಡಿದರು. ಆಕಾಸದಲ್ಲಿ ದೇವತೆಗಳೂ, ಸಿದ್ಧರೂ ದುಂದುಭಿ ವಾದ್ಯಘೋಷಗಳೊಡನೆ ಪುಷ್ಪವೃಷ್ಟಿಸುರಿಸುತ್ತಾ ನರ್ತನ ಮಾಡಿದರು. ಬ್ರಾಹ್ಮಣರ, ದೇವತೆಗಳ ಕಂಸನ ವಧೆಯಿಂದ ಎಲ್ಲರೂ ಹರ್ಷಿತರಾದರು.

ಅಥ ತೌ ಭೀಮ ದೋರ್ದಂಡ ಕಂಡೂಕರ್ಷಣ ತೋಷಿತೌ।
ಪಿತೃಭ್ಯಾಂ ದೃಷ್ಟ ಜನ್ಯಾಭ್ಯಾ ಮುಪ ಸೃತ್ಯ ಪ್ರಣೇಮತುಃ॥ ॥೬೪॥

ಮತ್ತೆ ಶ್ರೀಕೃಷ್ಣನು ಬಲರಾಮನೂ ಶತ್ರುಗಳಿಗೆ ಭಯವನ್ನುಂಟು ಮಾಡುವ ಭುಜಗಳಿಗೆ ಏರ್ಪಟ್ಟ ಆಯಾಸವು ನೀಗಿದ ಮೇಲೆ ತೃಪ್ತಿ ಹೊಂದಿ, ಯುದ್ಧವನ್ನು ನೋಡಿ ಸಂತೋಷಿಸಿದ ಮಾತಾ ಪಿತೃಗಳ ಬಳಿ ಸಾರಿ ನಮಸ್ಕರಿಸಿದರು.

ತನ್ನ ದೇಹದ ಆಯಾಸವೆಲ್ಲವೂ ನೀಗಿದ ಮೇಲೆ ಮೊತ್ತ ಮೊದಲು, ತನ್ನ ಮಾತಾ ಪಿತೃಗಳಾದ, ತನ್ನ ದೆಸೆಯಿಂದ ಸೆರೆಮನೆ ವಾಸವನ್ನು ದೀರ್ಘ ಕಾಲ ಅನುಭವಿಸಿದ ವಸುದೇವ, ದೇವಕಿಯರ ಬಳಿ ಸಾರಿ, ಅವರಿಗೆ ಪ್ರಣಾಮ ಮಾಡಿ, ಅವರನ್ನು ಅನುನಯ ವಾಕ್ಯಗಳಿಂದ ಸಮಾಧಾನ ಪಡಿಸಿದನು.

ತೌಚ ತೌ ಮುದಿತಾ ರಾತಿ ರಕ್ತ ಚಂದನ ರಂಜಿತೌ।
ಅಶ್ರುಭಿಃ ಪ್ರೀತಿ ನಿಷ್ಪಂದೈಃ ಪಿತರಾ ವಭ್ಯಷಿಂಚಿತಾಂ॥ ॥೬೫॥

ತಾಯಿಯೂ, ತಂದೆಯೂ ಆದ ಇಬ್ಬರೂ (ದೇವಕಿ ವಸುದೇವರು) ಶತ್ರುಗಳನ್ನು ಸಂಹರಿಸಿ, ಅವರುಗಳು ರಕ್ತವನ್ನೇ ಚಂದನದಂತೆ ದೇಹದಲ್ಲಿ ಪೂಸಿಕೊಂಡಿದ್ದ ಮಕ್ಕಳನ್ನು ಕಂಡು ಪ್ರೀತಿಯಿಂದ ಆನಂದಭಾಷ್ಪದೊಡನೆ ಅವರಿಗೆ ಅಭಿಷೇಕ ಮಾಡಿದರು.

ಆ ಘನಘೋರ ಯುದ್ಧದಲ್ಲಿ ಗಾಯಗೊಂಡು, ಮೈಯೆಲೆಲ್ಲಾ ರಕ್ತ ಲೇಪನವಾಗಿದ್ದ ಅವರ ದಿವ್ಯ ಶರೀರಗಳನ್ನು ನೋಡಿ (ರಕ್ತವನ್ನೇ ಚಂದನವೆಂದು ಭಾವಿಸಿ), ಮನಸ್ಸಿನಲ್ಲಿ ದುಃಖವುಂಟಾಯಿತು. ವಿಜಯಶಾಲಿಗಳಾಗಿ ಬಂದ ರಾಮಕೃಷ್ಣರನ್ನು ಕಂಡು ವಸುದೇವ ದೇವಕಿಯರು ತಮ್ಮ ಆನಂದಭಾಷ್ಪದೊಡನೆ ಅವರಿಗೆ ಅಭಿಷೇಕ ಮಾಡಿದರು.

ವಿಭುಧತ್ವಮಿವ ಪ್ರಾಪ್ತೋ ವಸುದೇವಃ ಸುತೇಕ್ಷಣಾತ್ ।
ಸತತ್ವ ಪ್ರತಿಭೋಧೇನ ಸಾತ್ವತಾಂ ಪತಿಮಸ್ತುತ ॥ ॥೬೬॥

ವಸುದೇವನು ಮಕ್ಕಳನ್ನು ಕಂಡ ಒಡನೆಯೇ, ದೇವತ್ವವನ್ನು ಹೊಂದಿದವನಂತಾಗಿ, ತತ್ವವನ್ನು ಅರಿತು, ಸಾತ್ವತ ಪತಿಯಾದ ಭಗವಂತನನ್ನು ಆನಂದದಿಂದ ಸ್ತೋತ್ರ ಮಾಡುತ್ತಿದ್ದರು.

ಸಾತ್ವತವಾದುದು ಪಾಂಚರಾತ್ರವು. ಅವನ್ನು ಅನುಸರಿಸುವವರು ಸಾತ್ವತರು ಎಂದು ಕರೆಯಲ್ಪಡುವರು. ಅವರುಗಳಿಗೆ ಪತಿಯಾದವನು ಸಾತ್ವತಪತಿ.

ವಸುದೇವನು ನಾರದರಿಂದ ಶ್ರೀಕೃಷ್ಣನು ಭಗವದವತಾರವೆಂಬುದನ್ನು ಅರಿತಿದ್ದನು. ಅದನ್ನು ಈಗ ಸ್ಮರಿಸಿಕೊಂಡು, ಶ್ರೀಕೃಷ್ಣ ಸ್ತೋತ್ರವನ್ನು ಆರಂಭಿಸಿದನು. ಅವನು ತನ್ನಮಗ ಎಂಬುದನ್ನು ಮರೆತು, ಅವನೇ "ಸಾತ್ವತ ಪತಿ" ಎಂದು ಭಾವಿಸಿ, ಶ್ರೀಕೃಷ್ಣನನ್ನು ನಾನಾ ಪರಿಯಿಂದ ಸ್ತುತಿಸಿದನು.

ನಮಸ್ತೇ ನಾಭಿನಾಳೀಕ ರಜಸಾ ಸೃಷ್ಟ ವೇಧಸೇ ।
ಅಜಾಯ ಸರ್ವ ವೇದಾನಾಽಮೇಕ ವೇದ್ಯಾಯ ವಿಷ್ಣವೇ॥ ॥೬೭॥
ಅನನ್ಯಾಧಾರಮಾಧಾರ ಅನನ್ಯೇಶ್ವರಮೀಶ್ವರಂ।
ಅನುಶೃಣ್ವಂತಿ ಸಂತಸ್ತ್ವಾಮನನ್ಯಾಧಿಪತಿಂ ಪತಿಂ ॥ ॥೬೮॥

ತನ್ನ ನಾಭಿ ಕಮಲದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನನ್ನು ಹೊಂದಿರುವವನೂ, ಹುಟ್ಟದವನೂ, ಸರ್ವ ವೇದಗಳಿಂದಲೂ ಸ್ತುತಿಸಲ್ಪಡುವವನೂ ಆದ ವಿಷ್ಣುವಾದ ನಿನಗೆ ನನ್ನ ನಮಸ್ಕಾರವು.

ಹೇ ಪ್ರಭೋ! ನೀನು ಸ್ವಯಂಭೂ, ಚತುರ್ಮುಖ ಬ್ರಹ್ಮನಿಗೂ ತಂದೆ, ಸರ್ವ ವೇದಾಂತ ವೇದ್ಯನು. ಗೀತೆಯಲ್ಲಿ ಪರಮಾತ್ಮನೇ ಹೇಳಿದ್ದಾನೆ. "**ವೇದಾಂತ ಕೃತ್ ವೇದವಿರ್ದೇವ ಚಾಹಂ**" ಎಂದು. ಎಲ್ಲವನ್ನೂ ಅರಿತಿರುವ ಸರ್ವಜ್ಞನು ಕೃಷ್ಣನೇ. ಅಂತಹ ಸರ್ವೇಶ್ವರನಿಗೆ ನನ್ನ ನಮಸ್ಕಾರ.

ಬೇರಾವ ಆಧಾರವಿಲ್ಲದವನೂ, ತನಗೆ ಬೇರೊಬ್ಬ ಈಶ್ವರನಿಲ್ಲದವನೂ, ತಾನೇ ಸರ್ವೇಶ್ವರ ನಾಗಿರುವವನೂ, ಬ್ರಹ್ಮಜ್ಞಾನಿಗಳಾದ ವೇದಗಳಿಂದ ಸ್ತುತಿಸಲ್ಪಡುವವನೂ ಆಗಿದ್ದೀಯೆ.

ಅಭಂಗುರ ರಸಂ ಭೋಗ್ಯಂ ಮನಪಾಯಂ ರಸಾಯನಂ।
ಅಕ್ಷಯಂ ಧರ್ಮ ಸರ್ವಸ್ವಮವಿದುಸ್ತವ ಕೀರ್ತನಂ॥ ॥೬೯॥
ಅನುಗ್ರಹ ದಶಾದೀಪ್ತ ಮಶೇಷಾರ್ಥ ಪ್ರಕಾಶಕಂ।
ದಯಾ ಸಂಪ್ಲುತ ಮಾಹುಸ್ತ್ವಾಮ್ ದೀಪ ಮಂತಸ್ತಮೋಪಹಂ॥ ॥೭೦॥
ದೇವಕೀ ದನುಜಸ್ತೂಣಾ ದಿವ್ಯಂ ಧಾಮ ವ್ರಜಾಂಗಣಂ।
ರಮಾ ರಾಧಾ ದಯಶ್ಚೇತಿ ರಾಶಿ ಭೇದೈರ್ನ ಭಿದ್ಯಸೇ॥ ॥೭೧॥
ನಿಯಂತಾಂ ಸರ್ವಭೂತಾನಾಂ ನಿಯಂತವ್ಯೇ ನಿಯಮ್ಯಸೇ ।
ಪಿತಾಮಹಮುಖ್ಯೈಃ ಪುತ್ರ ಮಮ ಪುತ್ರೋಽಸಿ ಮಾಯಯಾ॥ ॥೭೨॥
ಮಹತಾ ತ್ವತ್ಪದೇನೈವ ಮಾರುತಿಂ ನ್ಯಾಯಮಾಶ್ರಿತಾ ।
ನಿಸ್ತರಂತ್ಯಚಿರಾತ್ ಸಂತೊ ದುಸ್ತರಂ ಭವ ಸಾಗರಂ॥ ॥೭೩॥
ಅಹಿತೋದನ್ವ ದೌರ್ವಾಗ್ನಿಮಶೇಷೋತ್ಕರ್ಷ ಮಾತರಂ।
ಭವ ಭೈಮರಥಿಂ ಭಕ್ತಿಂ ಭಜಂತಿ ತ್ವಯಿ ಸಾಧವಃ॥ ॥೭೪॥
ಭರನ್ಯಾಸಾಶ್ವ ಯುಕ್ತೇನ ಭಾವವೇಗ ಪ್ರಧಾವಿನಾ ।
ಮನೋರಥೇನ ಗಂತವ್ಯಃ ಸಾರಥಿಶ್ಚ ಭವಾನ್ ಸತಾಂ ॥ ॥೭೫॥

ಈ ಎಲ್ಲ ಶ್ಲೋಕಗಳನ್ನು ವಸುದೇವ ಕೃತ "ಶ್ರೀ ಕೃಷ್ಣಸ್ತುತಿ" ಎಂದು ಕರೆಯಬಹುದು. ಅವುಗಳ ಅರ್ಥ ಒಟ್ಟಾರೆಯಾಗಿ ಹೀಗಿದೆ.

ಭಗವಂತನು ಬೇರೆ ಬೇರೆ ಐಹಿಕ ಭೋಗ್ಯಗಳಂತಲ್ಲ. ಅವನಿಗೆ ಸಂಕೋಚ ವಿಕಾಸಗಳಿಲ್ಲ.

ಯಾವಾಗಲೂ ಕೊರೆಯಿಲ್ಲದ ರಸಾಯನದಂತೆ ಧರ್ಮಕ್ಕೆ ಪೂರ್ಣಫಲವಾಗಿ ಇರುವವನು. ಅವನು ಜಗತ್ತಿನ ಕತ್ತಲೆಯನ್ನೆಲ್ಲಾ ಹೋಗಲಾಡಿಸುವವನಾಗಿದ್ದಾನೆ. ಅವನು ದಯಾಮಯಿ.

ವೈಕುಂಠದಲ್ಲಿ ಲಕ್ಷ್ಮೀ, ಇಲ್ಲಿ ಗೋಕುಲದಲ್ಲಿ ರಾಧೆ, ಇತ್ಯಾದಿಗಳು. ದೇವಕಿ, ಸ್ತಂಭ, ವೈಕುಂಠ, ಗೋಕುಲ ಇವೇ ಅವನ ವಾಸಸ್ಥಾನಗಳು (ಜನ್ಮ ಸ್ಥಾನಗಳು). ಎಲ್ಲಾ ಪ್ರಾಣಿಗಳನ್ನೂ ನಿಯಮಿಸತಕ್ಕವನೂ ನೀನೇ. ಅವನು ಭಕ್ತ ಪರಾಧೀನನು. ಪಿತಾಮಹನಿಗೂ ಪಿತಾವಾದವನು ನೀನು. ನಿನ್ನ ನಾಮವನ್ನು ಜಪಿಸಿಕೊಂಡೇ ಆಂಜನೇಯನು ಸಮುದ್ರ ದಾಟಿದನು. ಅದೇ ನಾಮವೇ ದುಖಸಾಗರವನ್ನೂ ದಾಟಿಸುತ್ತದೆ. ಸತ್ಪುರುಷರು ಪ್ರಪತ್ತಿಯನ್ನು ಆಶ್ರಯಿಸಿ ನಿನ್ನನ್ನು ಬಹಳ ವೇಗವಾಗಿ ಸೇರುತ್ತಾರೆ.

ವಯಂತು ಭವತಾ ಗ್ರಾಹ್ಯಾ ವಾಸನಾ ದುರ್ಗ ಭೇದಿನಾ ।
ಮನಾಗಿವ ಸಮುದ್ಬೋಧ್ಯ ಮಾ ಪುನರ್ಮು ಮುಹ್ಯದ್ಭವಾನ್॥ ॥೭೬॥

ದುರ್ವಾಸ ಎಂಬ ದುರಿತಗಳನ್ನು ಹೋಗಲಾಡಿಸುವ ನೀನು ನಮ್ಮನ್ನು ಸ್ವೀಕರಿಸಬೇಕು. ನಮಗೆ ಜ್ಞಾನ ನೀಡಿ ಮತ್ತೆ ನಮ್ಮನ್ನು ಮೋಹಕ್ಕೆ ಸಿಲುಕಿಸಬೇಡ.

ದುರ್ವಾಸನೆಯೆಂದರೆ ಹಿಂದಿನ ಜನ್ಮಗಳಲ್ಲಿ ಮಾಡಿದ ದುಷ್ಫಲಗಳ ಪರಿಣಾಮ. ಅದು ನಮ್ಮನ್ನು ಈ ಜನ್ಮದಲ್ಲಿ ಬಾಧಿಸುತ್ತದೆ. ಭಗವಂತನ ಕೃಪೆ ಇದ್ದಲ್ಲಿ ನಮಗೆ ಈ ಜನ್ಮದಲ್ಲಿ ಜ್ಞಾನಪ್ರಾಪ್ತಿಯಾಗಿ, ನಮ್ಮ ಕಷ್ಟಗಳೆಲ್ಲಾ ಕಳೆದು ಕಡೆಯಲ್ಲಿ ಮುಕ್ತಿ ಸಿಗುತ್ತದೆ.

ಮಹತಾಮಪಿ ನಿಷ್ಕಂಪಾ ಮನುಷ್ಯತ್ವ ಮತಿಸ್ತ್ವಯಿ ।
ದೃಢ ಲಕ್ಷಿತ ಚಿಹ್ನಾನಾಂ ದಿಙ್ಮೋಹ ಇವ ದುರ್ದಮಃ॥ ॥೭೭॥

ಮನುಷ್ಯನಲ್ಲದವನು ಎನ್ನುವುದಕ್ಕೆ ಜ್ಞಾನವನ್ನು ಪಡೆದ ಮಹಾತ್ಮರುಗಳು ನೀಗಿಕೊಳ್ಳುವ ಮೋಹದಂತೆ ನಿನ್ನಲ್ಲಿ ಮನುಷ್ಯ ಎಂಬ ಬುದ್ಧಿಯನ್ನು ಬಿಡಲು ಸಾಧ್ಯವಿಲ್ಲವು.

ನೀನು ಎಷ್ಟೇ ಅಪ್ರಾಕೃತ, ಅಮಾನುಷ ಲೀಲೆಗಳನ್ನು ತೋರಿಸಿದರೂ, ನೀನು ನನ್ನ ಮಗ ಆದ್ದರಿಂದ ಮನುಷ್ಯನು ಎಂಬ ಮೋಹವನ್ನು ಬಿಡಲಾಗುತ್ತಿಲ್ಲ. ಆದರೂ ನೀನೇ ಆ ಅಜ್ಞಾನ ವನ್ನು ಹೋಗಲಾಡಿಸಿ, ನಿಜ ಜ್ಞಾನವನ್ನು ಕರುಣಿಸಬೇಕು.

ದುರಂತ ಸುಸ್ವಖ ದ್ಯೋತಂ ದುಃಖಾಂಧ ತಮಸಾವೃತಂ।
ನಿಜನೈವ ಪ್ರಕಾಶೇನ ನಿಶೀತ ಮುಪರುಂಧ್ಧಿನಃ ॥ ॥೭೮॥

ಕೆಟ್ಟದ್ದಾಗುತ್ತದೆಂದು ತಿಳಿದೂ, ಮಿಣುಕು ಹುಳುವು ಬೆಳಕಿನ ಹತ್ತಿರ ಹೋಗುವಂತೆ, ದುಃಖವೆಂಬ ಕತ್ತಲಿನಲ್ಲಿ ಇರುವ ನಮ್ಮ ಅಜ್ಞಾನದ ಕತ್ತಲನ್ನು ನಿನ್ನ ಜ್ಯೋತಿಯಿಂದ ಹೋಗಲಾಡಿಸಬೇಕು.

ದೀಪದ ಸಮೀಪಕ್ಕೆ ಹೋದರೆ, ತನಗೆ ಸಾವುಂಟಾಗುತ್ತದೆಂದು ತಿಳಿದಿದ್ದರೂ ಸಹ, ಪತಂಗ ಹುಳುವು ದೀಪದ ಬೆಳಕಿಗೆ ಆಕರ್ಷಕವಾಗುವಂತೆ ನಾವೂ ಸಹ, ಇದು ತಪ್ಪು ಮಾರ್ಗವೆಂದು ತಿಳಿದಿದ್ದರೂ ಪದೇ ಪದೇ ಅದನ್ನೇ ಮಾಡುತ್ತಿದ್ದೇವೆ. ನೀನೇ ನಮಗೆ ಜ್ಞಾನವನ್ನು ನೀಡಿ ಅಜ್ಞಾನದ ಕತ್ತಲಿನಿಂದ ಪಾರುಮಾಡಬೇಕು. ನಮ್ಮ ಪ್ರಯತ್ನದಿಂದ ಅದು ಸಾಧ್ಯವಿಲ್ಲ.

ಮಶಕಾನಿವ ಮಾತಂಗಃ ಕಂಸ ಮುಖ್ಯಾನ್ ಇಮಾನ್ ಕ್ಷಿಪನ್।
ಯದಿ ವಿಸ್ಮಯ ನೀಯಸ್ತ್ವಂ ವಿಸ್ಮಯೇ ಕಿಂ ನ ವಿಸ್ಮಯಃ ॥ ॥೭೯॥

ಆನೆಯಂತಿರುವ ನಿನಗೆ, ಈ ಕಂಸನೇ ಮೊದಲಾದವರು ಸೊಳ್ಳೆಯಂತಾದರು. ಇವರುಗಳನ್ನು ವಧಿಸಿದ್ದಕ್ಕೆ ದುಃಖಿಸುವವರನ್ನು ನೋಡಿ, ಅವರ ದುಃಖಕ್ಕೆ ನಾವು ದುಃಖಿಸಬೇಕು.

ಕಂಸನನ್ನು ಆನೆಯು ಸೊಳ್ಳೆಯನ್ನು ಹೊಸಕಿದಂತೆ ಹೊಸಕಿ ಹಾಕಿದೆ. ಆದರೆ ಅವನ ಸಾವಿಗೆ ದುಃಖಿಸುವವರೂ ಅನೇಕರಿದ್ದಾರೆ. ಅವರ ಅಜ್ಞಾನಕ್ಕೆ ಏನನ್ನೋಣ. ಒಬ್ಬ ದುಷ್ಟನು ನಾಶನಾದನೆಂದು ಅವರು ಭಾವಿಸುವುದಿಲ್ಲ. ಅವರನ್ನು ಇನ್ನೂ ಮೋಹ ಆವರಿಸಿಕೊಂಡಿದೆ. ಅವರ ಅಜ್ಞಾನವನ್ನು ಕಂಡು ನಗಬೇಕೋ, ಅಳಬೇಕೋ ತಿಳಿಯದಾಗಿದೆ.

ನ ಖಲೀಲಾ ವಿಧಾರ್ಯೇಷು ನಾಥೇಷು ವಿಭುಧ ದ್ವಿಷಾಂ।
ಪರಿಷ್ಕರಣ ಪರ್ಯಾಯಾಃ ಪಂಚಾಪಿ ತವ ಹೇತಯಃ ॥ ॥೮೦॥

ಅಸುರ ಶ್ರೇಷ್ಠರುಗಳನ್ನು ಉಗುರಿನಿಂದಲೇ ಲೀಲೆಯಿಂದ ಸೀಳಿಕೊಂದು ಹಾಕುವಾಗ ನಿನಗೆ ಐದು ಆಯುಧಗಳು (ಪಂಚಾಯುಧಗಳು) ಆಯುಧಗಳಲ್ಲ, ಅವು ಕೇವಲ ನಿನಗೆ ಆಭರಣಗಳಷ್ಟೆ.

"ಅಂಗುಲ್ಯೇಗ್ರೇಣ ತಾನ್ ಹನ್ಯನ್ ಇಚ್ಛನ್ ಹರಿಗಣೇಶ್ವರ" ಎಂದು ರಾಮಾವತಾರದಲ್ಲಿ ನೀನು ಹೇಳಿದಂತೆ ಎಲ್ಲರನ್ನೂ ನಿನ್ನ ಉಗುರಿನ ತುದಿಯಿಂದಲೇ ನಿಗ್ರಹಿಸಬಲ್ಲೆ. ಅಪಾರ ಶಕ್ತಿಯುಳ್ಳವನು ನೀನು. ನರಸಿಂಹಾವತಾರಗಳಲ್ಲಿ ಉಗುರುಗಳೇ ನಿನಗೆ ಆಯುಧಗಳಾದವು. ಹೀಗಿರುವಾಗ ಯಾವಾಗಲೂ ನಿನ್ನ ಜೊತೆಯಲ್ಲಿಯೇ ಇರುವ ಚಕ್ರ, ಖಡ್ಗ, ಕೌಮೋದಕಿ, ಶಾಂರ್ಙ್ಗ, ಶಂಖ ಎಂಬ ಪಂಚಾಯುಧಗಳು ಈಗ ಕೇವಲ ಆಭರಣಗಳಾಗಿವೆ.

ಕಾಲನೇಮಿ ವಿಕಾರೇಽಸ್ಮಿನ್ ಕಂಸೇ ವಿಮಥಿತೇ ತ್ವಯಾ।
ಇದೃಶಾ ಮಿತರೇಷಾಂ ಚ ದತ್ತ ಏವ ಜಲಾಂಜಲಿಃ॥ ॥೮೧॥

ಕಾಲನೇಮಿಯ ಮರು ಜನ್ಮವಾದ ಕಂಸನು ನಿನ್ನಿಂದ ವಧಿಸಲ್ಪಟ್ಟ ಮೇಲೆ ಇವನನ್ನು ಹೋಲುವ ಇತರರೆಲ್ಲರಿಗೂ ಕೂಡ ತರ್ಪಣ ಬಿಟ್ಟಂತಾಯಿತು.

ಕಂಸನಂತೆಯೇ ಇನ್ನೂ ಅನೇಕ ರಾಕ್ಷಸರಿದ್ದರು. ಕಂಸನು ಕಾಲನೇಮಿ ಎಂಬ ರಾಕ್ಷಸನ ಪುನರ್ಜನ್ಮ ಪಡೆದಿದ್ದನು. ಅದ್ದರಿಂದಲೇ ಅವನು ಅಷ್ಟು ದುಷ್ಟನಾಗಿದ್ದನು. ಯಾವಾಗ ಕಂಸನ ವಧೆಯಾಯಿತೋ ಅವನ ಅನುಚರರೆಲ್ಲರೂ ಅಲ್ಲಲ್ಲಿಯೇ ಅಡಗಿ ಹೋದರು.

ಕಂಸನ ಮರಣದಿಂದ ಅವರೆಲ್ಲರಿಗೂ ಒಟ್ಟಿಗೆಯೇ ಜಲ ತರ್ಪಣ ಬಿಟ್ಟಂತಾಗಿ ಅವರ ಕಾಟ ಸಂಪೂರ್ಣವಾಗಿ ನಿವಾರಣೆಯಾಯಿತು.

ನಮಿತಾಯತ ವಿಷ್ಕಂಭಾಃ ದಾನವ ಪ್ರಭವೈಃ ಕ್ಷಮಾ।
ಕಿಂಚಿ ದುತ್ತಂಭಿತೇ ವಾದ್ಯ ಕಂಸ ಭಾರಾಪ ಹಾರತಃ॥ ॥೮೨॥

ಅಸುರಾಂಶಗಳಾದ ಬಲಶಾಲಿಗಳಿಂದ ಕೂಡಿದ ಈ ವಿಸ್ತಾರವಾದ ಭೂಮಿಯು ಈಗ ಕಂಸನೆಂಬ ಭಾಧವನ್ನು ಕಳೆದು ಮುಕ್ತವಾಯಿತೆನ್ನಬಹುದು. (ಹಗುರವಾಯಿತು).

ಶ್ರೀಕೃಷ್ಣಾವತಾರವನ್ನು ಮಾಡಿದ್ದೇ ಭೂಭಾರ ಹರಣಾರ್ಥವಾಗಿ. ಭೂದೇವಿಯ ಪ್ರಾರ್ಥನೆಯ ಮೇರೆಗೆ ಕೃಷ್ಣನು ಅವತರಿಸಿದನು. ಈಗ ಕಂಸನ ಮತ್ತು ಅವನ ಅನುಚರರ ವಧೆಯಿಂದ, ಲೋಕದಲ್ಲಿ ದುಷ್ಟರು ಕಡಿಮೆಯಾಗಿ ಭೂದೇವಿಯು ಸ್ವಲ್ಪಮಟ್ಟಿಗೆ ಹಗುರ ಳಾದಳು. ಇನ್ನೂ ಮುಂದೆಯೂ ಇನ್ನೂ ಅನೇಕ ದುಷ್ಟರ ಸಂಹಾರವಾಗಬೇಕಾಗಿದೆ.

ನ ಖಲ್ವತಿಶಯಂ ಕಂಚಿದಿಯ ಮಾಧಾತು ಮರ್ಹತಿ।
ಸುಮಣಾವಜ್ಞಕ್ಲ್ಪ್ತೇವ ಸ್ತುತಿರಸ್ಮತ್ಕೃತಾ ತ್ವಯಿ॥ ॥೮೩॥

ಉತ್ತಮವಾದ ರತ್ನದ ಯೋಗ್ಯತೆಯನ್ನು ತಿಳಿಯದವನು ಅದನ್ನು ಹೊಗಳುವ ಹಾಗೆ ನಿನ್ನನ್ನು ನಾನು ಹೊಗಳುವುದು ನಿನಗೆ ಯಾವ ಹೆಮ್ಮೆಯನ್ನೂ ಉಂಟು ಮಾಡುವುದಿಲ್ಲ.

ನಿನ್ನನ್ನು ಹೊಗಳಲು, ಸ್ತುತಿಸಲು ನನಗೆ ಶಬ್ದಗಳು ಸಾಲದು. ನಾನು ಕವಿಯೂ ಅಲ್ಲ, ಜ್ಞಾನಿಯೂ ಅಲ್ಲ, ಆದರೂ ನಿನ್ನನ್ನು ಹೊಗಳದೆ ಇರಲು ಸಾಧ್ಯವಿಲ್ಲ. ನನಗೆ ತಿಳಿದಂತೆ ನಿನ್ನನ್ನು ಸ್ತುತಿಸಿದ್ದೇನೆ. ನನ್ನ ಸ್ತುತಿಯಿಂದ ನಿನಗೆ ಆಗಬೇಕಾದ್ದೇನೂ ಇಲ್ಲ, ಆದರೂ ನನ್ನ ಮನಃ ಸಮಾಧಾನಾರ್ಥವಾಗಿ ಕೆಲವು ತೊದಲು ನುಡಿಗಳನ್ನು ನಿನ್ನಲ್ಲಿ ಸಮರ್ಪಿಸಿ ಕೊಂಡಿದ್ದೇನೆ. ಕೃಪೆಯಿಂದ ಸ್ವೀಕರಿಸಬೇಕು.

ಇತಿ ವಿಜ್ಞಾಪಿತಸ್ತೇನ ವ್ರೀಡಾದಿವ ನತೋ ವಿಭುಃ।
ಬಾಲೋಪ ಲಾಲನಮಿದಂ ಭವ್ಯ ವೃತ್ತಿ ರಭಾವಯತ್ ॥ ॥೮೪॥

ಈ ರೀತಿ ವಸುದೇವನು ಪ್ರಾರ್ಥನೆ ಮಾಡಿದಾಗ, ಅದನ್ನು ಕೇಳಿ ವಿಭುವಾದ ಶ್ರೀಕೃಷ್ಣನು ನಾಚಿಕೆ ಹೊಂದಿದವನಂತೆ ತಲೆ ಬಾಗಿ ವಿಧೇನಾಗಿದ್ದುಕೊಂಡು, ಆ ಪ್ರಾರ್ಥನೆಯನ್ನು ಪ್ರೀತಿಯಿಂದ ತಂದೆಯಾದವನು ಮಗನನ್ನು ಹೊಗಳುವಂತೆ ಭಾವಿಸಿದನು.

ತಾನೇ ಸರ್ವೇಶ್ವರನಾಗಿದ್ದರೂ, ತಂದೆಯಾದ ವಸುದೇವನು ತನ ಬಗ್ಗೆ ಹೇಳಿದ ದಿವ್ಯ ಮಂಗಳ ಸ್ತುತಿಯನ್ನು ಕೇಳಿ, ನಾಚಿಕೆಯಿಂದ ವಿಧೇಯತೆಯಿಂದ ವಸುದೇವನಿಗೆ ನಮಸ್ಕಾರ ಮಾಡಿ, "ನಾನು ನಿನ್ನ ಪುತ್ರ. ನನ್ನನ್ನು ಅಷ್ಟೊಂದು ಹೊಗಳುವ ಅಗತ್ಯವಿಲ್ಲ. ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ' ಎಂದು ಆ ಹೊಗಳಿಕೆಯನ್ನು ಪುತ್ರ ವಾತ್ಸಲ್ಯದಿಂದ ಹೇಳಿದ ಮಾತುಗಳೆಂದು ಭಾವಿಸಿದನು.

ಸ ವಾಚಾ ಸಾಂತ್ವಯಾಮಾಸ ಪಿತರಂ ದೀನ ಚೇತಸಂ।
ಸ್ವವಕ್ತ್ರೇಂದು ವಿನಿಷ್ಯಂದಿ ಸುಧಾ ಪೂರಿತ ಕುಲ್ಯಯಾ॥ ॥೮೫॥

ತನ್ನ ಮಧುರವಾದ, ಗಂಭೀರವಾದ ಅದ್ಭುತ ಸಮುದ್ರದಂತೆ ಇದ್ದ ಮಾತುಗಳಿಂದ ದೀನ ಮನಸ್ಸಿನವನಾದ ವಸುದೇವನಿಗೆ ಶ್ರೀಕೃಷ್ಣನು ಸಮಾಧಾನ ಹೇಳಿದನು.

ಬಹಳವಾಗಿ ನೊಂದು ಇಷ್ಟು ದಿನವೂ ತನಗಾಗಿ ಸೆರೆ ಮನೆ ಮಾಡಿದ ವಸುದೇವ ದೇವಕಿಯರಿಗೆ ಅತ್ಯಂತ ಸಮಾಧಾನಕರವಾದ ಮಾತುಗಳನ್ನಾಡಿ ಇನ್ನು ಮುಂದೆ ಯಾವ ಕಷ್ಟವೂ ಬಾರದೆಂದು ಅವರಿಗೆ ಧೈರ್ಯ ಹೇಳಿ ಅವರನ್ನು ಸಂತೋಷಗೊಳಿಸಿದನು.

ಗಂಭೀರ ಮಧುರಾಂ ತಸ್ಯ ಗಿರಂ ನಿಗಮಗಂಧಿನಿಂ।
ಶ್ರುತ್ವಾ ಮುಕ್ತಿಸುಖೀಂ ಪ್ರಾಪ ಮುದಮಾನಕ ದುಂದುಭಿಃ॥ ॥೮೬॥

ಸುಂದರವಾದ, ಕಿವಿಗಿಂಪಾದ, ವೇದಗಳ ಗಾಳಿಯನ್ನು ಬೀಸುವ ಶ್ರೀಕೃಷ್ಣನ ಮಧುರವಾದ ವಾಕ್ಯಗಳನ್ನು ಕೇಳಿ, ವಸುದೇವನು ಪರಮ ಸಂತೋಷ ಹೊಂದಿದನು.

ಶ್ರೀಕೃಷ್ಣನ ಸಮಾಧಾನಕರವಾದ ವಾಕ್ಯಗಳು ವೇದ ವಾಕ್ಯಗಳಂತೆ ಇದ್ದವು. ಅವುಗಳನ್ನು ಕೇಳಿದ ಕೂಡಲೇ ಮುಕ್ತಿ ಸುಖ ಸಿಗುವುದರಲ್ಲಿ ಸಂದೇಹವಿಲ್ಲ. ವಸುದೇವನು ತಾನು ಈಗಾಗಲೇ ಮೋಕ್ಷಾನಂದವನ್ನು ಅನುಭವಿಸುತ್ತಿರುವುದಾಗಿ ಭಾವಿಸಿದನು. "ಮುಕ್ತಿ ದದಾತೀತಿ ಮುಕುಂದನಲ್ಲವೇ ನಮ್ಮ ಶ್ರೀಕೃಷ್ಣನು".

ದೇವಕೀ ಚ ಪರಿಷ್ವಜ್ಯ ಸುತಂ ವಾತ್ಸಲ್ಯ ನಿರ್ಭರಾ।
ನಂದಗೋಪ ವಧೂ ಲಬ್ಧಂ ನವಮಾನಂದ ಮನ್ವಭೂತ್॥ ॥೮೭॥

ದೇವಕಿಯೂ, ಪೂರ್ಣ ವಾತ್ಸಲ್ಯದೊಡನೆ ಮಗನನ್ನು ಆದರಿಸಿ (ಆಲಂಗಿಸಿ) ನಂದಗೋಪನ ಮಡದಿಯಾದ ಯಶೋದೆ ಹೊಂದಿದ ಆನಂದವನ್ನು ತಾನೂ ಹೊಂದಿದಳು.

ದೇವಕಿಯು ಶ್ರೀಕೃಷ್ಣನಿಗೆ ಜನ್ಮವಿತ್ತದ್ದು ಮಾತ್ರ. ಮಿಕ್ಕ ಎಲ್ಲಾ ಅವನ ಬಾಲ್ಯದ ಸೌಭಾಗ್ಯಗಳನ್ನು ಯಶೋದೆಯು ಹೊಂದಿದ್ದಳು. ದೇವಕಿಯು ಅವನ ಬಾಲಲೀಲೆಗಳಿಂದ ಸಂಪೂರ್ಣ ವಂಚಿತಳಾಗಿದ್ದಳು. ಆದರೆ ಈಗ ಕೃಷ್ಣನು ಬಂದು ಅವಳಿಗೆ ನಮಸ್ಕರಿಸಿದ ಮೇಲೆ ಅವನನ್ನು ಗಾಢವಾಗಿ ಆಲಂಗಿಸಿ, ಇಷ್ಟು ದಿನ ಪಡೆಯದ ಆ ಸೌಭಾಗ್ಯಗಳನ್ನೆಲ್ಲಾ ಒಮ್ಮೆಗೇ ಪಡೆದಳು. ಈಗ ತಾನೂ ಯಶೋದೆಗೆ ಸಮನೆಂದೇ ಭಾವಿಸಿದಳು.

ಭೂಯಃ ಪ್ರಾದೂರಭೂತ್ ತಸ್ಯ ಭುಜಯುಗ್ಮಂ ತಿರೋಹಿತಂ।
ತಥಾಪಿ ತಾದೃಶಂ ಮರ್ತ್ಯಂ ತಮಮನ್ಯಂತ ತಾಮಸಾಃ॥ ॥೮೮॥

ಅವತರಿಸುವಾಗ ತೋರಿ, ಮರೆಸಿಕೊಂಡ ಇತರ ಎರಡು ಭುಜಗಳು ಮತ್ತೆ ತೋರಿದವು. ಆದರೂ ತಾಮಸ ಜನಗಳು ಇವನು ನಾಲ್ಕು ಭುಜಗಳನ್ನು ಹೊಂದಿರುವ ಮನುಷ್ಯನೆಂದೇ ಭಾವಿಸಿದರು.

ಕೃಷ್ಣಾವತಾರ ಸಮಯದಲ್ಲಿ ಸ್ವಾಮಿಯು ನಾಲ್ಕು ಭುಜಗಳೊಡನೆ ಆವಿರ್ಭವಿಸಿದ್ದನು. ವಸುದೇವನ ಪ್ರಾರ್ಥನೆಯ ಮೇರೆಗೆ ಎರಡು ಭುಜಗಳನ್ನು ಮರೆಮಾಚಿದ್ದನು. ಈಗ ಅವು ಮತ್ತೆ ತೋರಿ ಸ್ವಾಮಿಯು ಚತುರ್ಭುಜನಾದನು. ಆದರೂ ಪ್ರಾಕೃತ ಜನರು ಅವನನ್ನು ಮನುಷ್ಯನೆಂದೇ ತಿಳಿದರು.

ಬಭೂವ ಬಲಭದ್ರಸ್ಯ ತೇನ ವಿಶ್ರಾಂತಿ ಶಾಯಿನಾ ।
ಶಿರಸಾ ವಿಧೃತಸ್ಯಾಪಿ ಕಿರೀಟಸ್ಯೇವ ಶೇಷತಾ ॥ ॥೮೯॥

ಜಗತ್ತಿನಲ್ಲೆಲ್ಲಾ ಮೇಲಾದವನಾದ ಶ್ರೀಕೃಷ್ಣನಿಂದ ತಲೆ ಬಾಗಿ ಕೊಂಡಾಡಲ್ಪಟ್ಟವನಾಗಿ ಬಲರಾಮನೂ, ಶಿರಸ್ಸಿನಲ್ಲಿ ಧರಿಸುವ ಕಿರೀಟದಂತೆ ಶೇಷ ಭಾವವನ್ನೇ ಹೊಂದಿದನು. ಅವನಿಗೆ ಶೇಷನೆಂಬ ಹೆಸರು ಸಹಜವಾಗಿಯೇ ಇದೆ. ತಲೆಯಲ್ಲಿ ಇಟ್ಟರೂ ಕಿರೀಟವು ತಲೆಗೆ ಶೇಷನು ತಾನೇ!

ಬಲರಾಮನು ಕೃಷ್ಣನಿಗೆ ಅಣ್ಣನಾದರೂ ಅವನು ಕೃಷ್ಣನಿಗೆ ವಿಧೇಯನೇ! ಎಂದೂ ಅವನಿಗೆ ವಿರೋಧವಾಗಿ ನಡೆದವನಲ್ಲ, ಅವನು ಎಂದೆಂದಿಗೂ ಶೇಷನೇನೇ. ಕಿರೀಟವು ತಲೆಯ ಮೇಲಿದ್ದರೂ ತಲೆಗೆ ಅಧೀನವಾಗಿಯೇ ಇರುತ್ತದೆ.

ಕ್ರಿಯಮಾಣ ಪರಿಷ್ಕಾರಃ ಕಿರೀಟಾದ್ಯೈಃ ಸ ಬಂಧುರೈಃ ।
ತಾನಿ ತಾನ್ಯೇವ ದಿವ್ಯಾನಿ ತತ್ತದಂಗೈರಭೂಷಯನ್ ॥ ॥೯೦॥

ಸುಂದರವಾದ ಕಿರೀಟವೇ ಮೊದಲಾದ ಆಭರಣಗಳನ್ನು ಹೊಂದಿ ತನ್ನನ್ನು ಕೃಷ್ಣನು ಅಲಂಕರಿಸಿಕೊಂಡರೂ, ಅವನು ಶರೀರದ ಅಂಗಗಳಿಂದಲೇ ಸೌಂದರ್ಯವನ್ನು ಹೊಂದಿದವ ನಂತಾದನು.

ಸ್ವಾಮಿಯಾದ ಶ್ರೀಕೃಷ್ಣನು ಸಹಜ ಸುಂದರನೇ. ಅವನಿಗೆ ಯಾವ ಆಭರಣಗಳೂ ಬೇಕಿಲ್ಲ. ಆದರೂ ಈಗ ರಾಜ ಯೋಗ್ಯತೆಗೆ ತಕ್ಕಂತೆ ಕಿರೀಟ ಇತ್ಯಾದಿ ಆಭರಣಗಳಿಂದ ಅಲಂಕೃತನಾದನು. ಅವನ ದಿವ್ಯ ಮಂಗಳ ವಿಗ್ರಹವೇ ಅದ್ಭುತವಾದದ್ದು.

ಅಶೋಭತ ಶುಭಂ ಛತ್ರಂ ತಸ್ಯ ರಾಜನ್ಯ ಲಕ್ಷಣಂ ।
ತನ್ನಾಭಿ ಪುಂಡರೀಕಸ್ಯ ರೂಪಾಂತರ ಮಿವೋದಿತಂ ॥ ॥೯೧॥

ರಾಜಲಕ್ಷಣವಾಗಿ ಅವನಿಗೆ ಸೇರಿದ ಶುಭವಾದ ಕೊಡೆಯಾದುದು ಅವನ ದಿವ್ಯ ನಾಭಿ ಕಮಲವು ಬೇರೊಂದು ರೂಪದಲ್ಲಿ ಬಂದಿದೆಯೇನೋ ಎನ್ನುವಂತಿತ್ತು.

ಅವನು ಸಿಂಹಾಸನದಲ್ಲಿ ಕುಳಿತಾಗ ಅವನಿಗೆ ರಾಜ ಲಕ್ಷಣಕ್ಕನುಸಾರವಾಗಿ ಶ್ವೇತ ಛತ್ರವನ್ನು ಹಿಡಿದರು. ಅವನು ತನ್ನ ನಿಜರೂಪದಿಂದ ವೈಕುಂಠದಲ್ಲಿ ಇದ್ದಾಗ, ಅವನ ನಾಭಿಯಿಂದ ತೋರುವ ಕಮಲದಂತೆ ಕಾಣುತ್ತಿತ್ತು.

ಚಾಮರ ದ್ವಿತಯಂ ಶೌರೇಃ ಸಮಯಾ ಮುಖ ಪಂಕಜಂ।
ಶುಶುಭೇ ಸಪ್ರತಿಚ್ಛಂದೋ ಹಂಸ ಮೂರ್ತಿರಿವ ಸ್ವಯಂ ॥ ॥೯೨॥

ಅವನ ದಿವ್ಯವಾದ ಮುಖಾರವಿಂದಕ್ಕೆ ಎರಡು ಪಕ್ಕದಲ್ಲೂ ಬೀಸುತ್ತಿದ್ದ ಚಾಮರಗಳು, ಹಂಸ ಮೂರ್ತಿಯಾಗಿರುವ ಅವನನ್ನು ತನ್ನ ಪ್ರತಿಬಿಂಬದೊಡನೆ ಸೇರಿ ಆ ತಾವರೆಗಳಾಗಿವೆಯೇನೋ ಎಂಬಂತಿತ್ತು.

ಅವನಿಗೆ ಪರಿಚಾರಕರು ಚಾಮರವನ್ನು ಎರಡು ಕಡೆಗಳಲ್ಲೂ ಬೀಸುತ್ತಿದ್ದರು. ಭಗವಂತನು ಹಂಸಾವತಾರವನ್ನು ಒಮ್ಮೆ ತಾಳಿದ್ದಾನೆ. ಆಗ ಅವನ ಅಕ್ಕ ಪಕ್ಕ ಕಮಲದ ಹೂವುಗಳು ಅರಳಿ, ಗಾಳಿಗೆ ಅಲ್ಲಾಡುತ್ತಾ ಚಾಮರ ಬೀಸುವಂತೆ ಇರುತ್ತದೆ. ಅದೇ ರೀತಿ ಶ್ರೀಕೃಷ್ಣನಿಗೆ ಚಾಮರ ಸೇವೆ ನಡೆಯಿತು.

ಸ ಚಂದ್ರ ಇವ ಸಂಪೂರ್ಣಃ ಪ್ರಥಮೋ ಯದುಭೂಭೃತಾಂ।
ಪುನರುನ್ನಿದ್ರಯಾಮಾಸ ಕೀರ್ತಿಂ ಕುಮುದಿನೀ ಮಿವ ॥ ॥೯೩॥

ಶ್ರೀಕೃಷ್ಣನು ಯದುವಂಶದ ಅರಸರುಗಳನ್ನು ಮೊದಲನೇ ಬಾರಿ ಸೇರಿ, ಆ ವಂಶದ ಮೂಲ ಪುರುಷನಾದ ಪೂರ್ಣಚಂದ್ರನ ಕೋಟಿ ಕಿರಣಗಳಂತೆ ಹೊಗಳಿಕೆಗೆ ಪಾತ್ರನಾದನು.

ಯದುವಂಶದಲ್ಲಿ ಹುಟ್ಟಿದ್ದರೂ ಶ್ರೀಕೃಷ್ಣನು ಹುಟ್ಟಿದ ತಕ್ಷಣ ಗೋಕುಲಕ್ಕೆ ಬಂದುಬಿಟ್ಟಿದ್ದರಿಂದ, ಅವನಿಗೆ ಯದುವೀರರ ಸಂಪರ್ಕವೇ ಇರಲಿಲ್ಲ. ಅವನ ಬಾಲ್ಯವೆಲ್ಲವೂ ಗೋಪಾಲಕರ ನಡುವೆ ಕಳೆಯಿತು. ಆದರೆ ಈಗ ಕಂಸನ ವಧೆಯ ನಂತರ ತನ್ನ ವಂಶಸ್ಥರಾದ ಯದು ವಂಶದ ಅರಸರ ಜೊತೆ ಸೇರಿದನು.

ಯದು ವಂಶದ ಮೂಲ ಪುರುಷ ಚಂದ್ರನು. ಆ ಚಂದ್ರನಂತೆಯೇ ಬೆಳೆಯುವ ಕೃಷ್ಣನು ತನ್ನ ಸ್ವಜನರನ್ನು ಕೂಡಿಕೊಂಡನು.

ಅಭಜಂತ ದ್ವಿಜೇಂದ್ರಾ, ಸ್ತಮತ ದ್ಭೋಗ ಪರಾಂಙ್ಮುಖಾಃ।
ಸರ್ಗಾಧಿಕಾರಾ ನಿರ್ವಿದ್ಯ ಶಾಂತಾ ಇವ ಪಿತಾಮಹಾಃ॥ ॥೯೪॥

ಬ್ರಾಹ್ಮಣ ಶ್ರೇಷ್ಠರುಗಳು ಅವನನ್ನು ಬಿಟ್ಟು ಬೇರಾವುದರಲ್ಲೂ ಆಸಕ್ತಿಯಿಲ್ಲದೆ ವಿರಕ್ತರುಗಳಾಗಿ, ಹೊಂದಬೇಕಾದ ಅಧಿಕಾರವನ್ನು ಬಿಟ್ಟು ವಿನಯದಿಂದ ಪಿತಾಮಹನಂತೆ ಶಾಂತರಾಗಿ ಅವನನ್ನು ಸೇವಿಸುತ್ತಿದ್ದರು.

ಕಂಸ ಸಂಹಾರ ಸಂದರ್ಭದಲ್ಲಿ ಪರಮೈಕಾಂತಿಗಳಾದ ಬ್ರಾಹ್ಮಣರು ಶ್ರೀಕೃಷ್ಣನಿಗೆ ವೇದೋಕ್ತವಾದ ಸ್ವಸ್ತಿ ವಾಚನಗಳನ್ನು ಮಾಡಿ ಆಶೀರ್ವದಿಸುತ್ತಿದ್ದರು.

ಅಹಾರ್ಯಾನ್ ಯದು ವಂಶಸ್ಯ ಸ ಭೋಗಾನ್ ಸಮಕಲ್ಪಯತ್।
ಸ್ವ ಪರ್ಯಂಕ ಭುಜಂಗಸ್ಯ ಫಣಾಮಣಿ ಗಣಾನಿವ॥ ॥೯೫॥

ಅವನು ತನ್ನ ಹಾಸಿಗೆಯಾದ ಶೇಷನ ಹೆಡೆಗಳಲ್ಲಿರುವ ಮಣಿಕೂಟ ಸಮೂಹಗಳನ್ನು ಇತರರು ಹೊಂದಲಾಗದಂತೆ ಹೊಂದಿ ಅನೇಕ ಭೋಗಗಳನ್ನು ಅನುಭವಿಸಿದನು.

ಹಾವಿನ ಹೆಡೆಯಲ್ಲಿರುವ ಮಣಿಗಳನ್ನು ಯಾರೂ ತೆಗೆದುಕೊಳ್ಳಲಾರರು. ಇನ್ನು ಶೇಷನ ಮೇಲೆ ಇರುವುದನ್ನು ಮುಟ್ಟಲು ಸಾಧ್ಯವೇ ? ಅದೇ ರೀತಿ ಕೃಷ್ಣನು ಈಗ ಪಡೆದ ಯದುವಂಶದ ಐಶ್ವರ್ಯವನ್ನು ಬೇರೆ ಯಾರೂ ಅಪಹರಿಸಲು ಸಾಧ್ಯವಿಲ್ಲ. ಅವನು ಮಧುರೆಯಲ್ಲಿ ಸಕಲ ಭೋಗಗಳನ್ನೂ ಅನುಭವಿಸಿದನು.

ಅಮರತ್ವಾಯ ಪರ್ಯಾಪ್ತಂ ತನ್ಮುಖೇಂದು ಸಮುದ್ಭವಂ।
ಸುಧೇವ ಪರಿವಾರೇಭ್ಯಃ ಸಸ್ವದೇ ಸೂನೃತಂ ವಚಃ॥ ॥೯೬॥

ಅವನು ಮುಖ ಚಂದ್ರನಿಂದ ಹೊರಸೂಸುವ ಪ್ರಿಯವಾಗಿಯೂ, ಸತ್ಯವಾಗಿಯೂ ಇರುವ ಮಾತುಗಳು ಅಮೃತದಂತೆ ಅವನ ಪ್ರಜೆಗಳಿಗೆ ಅಮರತ್ವವನ್ನು ನೀಡುವ ಹಾಗೆ ಭೋಗ್ಯವಾಗಿತ್ತು.

ಅವನು ತನ್ನ ಪ್ರಜೆಗಳನ್ನು ಉದ್ದೇಶಿಸಿ ಮಾತನಾಡಿದ ಸಮಾಧಾನಕರವಾದ ವಾಕ್ಯಗಲು ಅವರಿಗೆ ಅಮೃತ ಪಾನದಂತಿತ್ತು. ಅತ್ಯಂತ ಪ್ರಿಯವಾಗಿಯೂ, ಸತ್ಯವಾಗಿಯೂ ಇದ್ದ ಆ ಸ್ವಾಮಿಯ ಅಭಯ ವಾಕ್ಯಗಳು ಅವರಿಗೆ ಮೋಕ್ಷವನ್ನೇ ದೊರಕಿಸಿದಷ್ಟು ಆನಂದವನ್ನು ಕೊಟ್ಟಿತು. ''ಭಯಂ ತ್ಯಜತ ಭದ್ರಂ'' ಎಂಬುದಾಗಿ ಎಲ್ಲಾ ಅವತಾರಗಳಲ್ಲೂ ಹೇಳಿರುವ ವಾಕ್ಯಗಳನ್ನು ಸ್ವಾಮಿಯು ಅವರಿಗೆ ತಿಳಿಸಿದನು.

ಪ್ರಾರ್ಥಿತೋಽಪಿ ಸ ರಾಜ್ಯಾಯ ಪ್ರಭಾವಜ್ಞೈರ್ಯದೂತ್ತಮೈಃ।
ಅರೋಚಯತ ರಾಜಾನಾಂ ಉಗ್ರಸೇನಂ ವಯೋಧಿಕಂ ॥ ॥೯೭॥

ಶ್ರೀಕೃಷ್ಣನ ಪ್ರಭಾವವನ್ನು ತಿಳಿದ ಯದುವಂಶದ ಉತ್ತಮರುಗಳಿಂದ ತಾನೇ ರಾಜ್ಯವನ್ನು ಆಳುವ ಹಾಗೆ ಪ್ರಾರ್ಥಿಸಲ್ಪಟ್ಟಿದ್ದರೂ, ವಯಸ್ಸಾದ ಉಗ್ರಸೇನನಿಗೆ ರಾಜ್ಯವನ್ನು ನೀಡಲು ಬಯಸಿದನು.

ಕಂಸನನ್ನು ಜಯಿಸಿದವನು ಕೃಷ್ಣನಾದ್ದರಿಂದ ನ್ಯಾಯವಾಗಿ ಅವನೇ ರಾಜನಾಗಲು ಅರ್ಹನಾಗಿದ್ದವನು. ಆದರೆ ಪರಮ ವಿನಯಶಾಲಿಯಾದ ಶ್ರೀಕೃಷ್ಣನು ಹಾಗೆ ಮಾಡದೆ, ಯದು ವಂಶಕ್ಕೆ ಹಿರಿಯನಾದ, ಕಂಸನ ತಂದೆಯಾದ ಉಗ್ರಸೇನನಿಗೆ ರಾಜ್ಯಾಭಿಷೇಕ ಮಾಡಲು ನಿರ್ಧರಿಸಿದನು. ತಾನು ''ಭಕ್ತ ಪಾರತಂತ್ರ್ಯ''ನೆಂಬುದನ್ನು ತೋರಿಸಿದನು.

ನ್ಯಸ್ತರಕ್ಷಾ ರಾಜ್ಞಾ ಯೌವರಾಜ್ಯಮುಪಾಶ್ರಿತಃ।
ಶುಶುಭೇ ಪಾರತಂತ್ರ್ಯೇಣ ಸ್ವಾತಂತ್ರ್ಯ ವಶವರ್ತಿನಾ ॥ ॥೯೮॥

ಅರಸನಾದ ಉಗ್ರಸೇನನು ಬರಿದಾದ ಕಂಸನ ರಾಜ್ಯವನ್ನು ರಕ್ಷಿಸುವ ಭಾರವನ್ನು ಹೊರುವ ಹಾಗೆ ಅವನನ್ನು ಪಾರ್ಥಿಸಿ, ಭರನ್ಯಾಸ ಮಾಡಿದುದರಿಂದ ಯೌವ ರಾಜ್ಯವನ್ನು ಪಡೆದು, ತಾನು ಸ್ವತಂತ್ರನಾದುದರಿಂದ ರಾಜನೀತಿ ಅರಿತು, ಉಗ್ರಸೇನನಿಗೆ ಅಡಿಯಾಳಾಗಿ ಇರಲು ಸಂತೋಷದಿಂದ ಒಪ್ಪಿಕೊಂಡು ಎಲ್ಲರೂ ಕೊಂಡಾಡುವ ಹಾಗೆ ವಿಜೃಂಭಿಸಿದನು.

ಆದರೂ ಯೌವ ರಾಜ್ಯವನ್ನಾದರೂ ವಹಿಸಬೇಕೆಂದು ಎಲ್ಲರೂ ಪ್ರಾರ್ಥಿಸಿದುದರಿಂದ ತಾನು ಸರ್ವತಂತ್ರ ಸ್ವತಂತ್ರನಾದರೂ, ಅದಕ್ಕೆ ಒಪ್ಪಿ ಉಗ್ರಸೇನನಿಗೆ ವಿಧೇಯನಾಗಿ ಯುವರಾಜ ನಾದನು.

ತಸ್ಯ ಗೋಪಾಯತ ಪೃಥ್ವೀಂ ಗೋಪಾಲ ಕುಹನಾತ್ಯಜಃ।
ಪರ್ಯುಪಾಸ್ತ ಪದಂ ಧನ್ಯಾ ಪಾರ್ಥಿವ ಶ್ರೀರನುತ್ತಮಾ ॥ ॥೯೯॥

ಗೋಪನೆಂಬ ಹೆಸರು ಪಡೆದೂ, ಅದನ್ನು ಬಿಟ್ಟು ಮತ್ತೆ ಭೂಮಿಯನ್ನು ರಕ್ಷಿಸುವ ಅವನ ದಿವ್ಯ ಪಾದಾರವಂದಗಳನ್ನು ರಾಜ್ಯ ಲಕ್ಷ್ಮಿಯು ಭಾಗ್ಯದಿಂದ ಸಂತೋಷದಿಂದ ಹೊಂದಿ ಉಪಾಸಿಸುವಂತಾಯಿತು.

ಶ್ರೀಕೃಷ್ಣನಿಗೆ ಗೋಪನೆಂಬ ಹೆಸರೇ ಅತ್ಯಂತ ಪ್ರಿಯವಾದುದು. ಜಗತ್ತಿಗೆ ಗೋಪನಾದ ಅವನು. (ವಿಶ್ವಗೋಪ್ತಾ) ಈಗ ಯುವರಾಜನಾದುದರಿಂದ ರಾಜ್ಯ ಲಕ್ಷ್ಮಿಯು ಆನಂದದಿಂದ ಅವನ ಸೇವೆ ಮಾಡಲು ಸಿದ್ಧಳಾದಳು. ಅವನ ಪಾದಾರವಿಂದದ ಸ್ಪರ್ಶದಿಂದ ಭೂಮಿಯು ಧನ್ಯವಾಯಿತು.

ಕೃತ ವೀರಾಭಿಷೇಕಂ ತಂ ಕ್ಲೃಪ್ತ ಕಲ್ಯಾಣ ಕೌತುಕಂ।
ತುಷ್ಟುವುಃ ಸಮಯೇ ವೇದಾಃ ಸೌಸ್ನಾತಿಕ ಪುರಸ್ಕೃತಾಃ॥ ॥೧೦೦॥

ಕಂಸಾದಿಗಳನ್ನು ಕೊಂದು ವೀರನೆಂಬ ಅಭಿಷೇಕ ಹೊಂದಿ ಮಂಗಳಾಶಾಸನ ಮಾಡಿಸಿ ಕೊಂಡ ಶ್ರೀಕೃಷ್ಣನಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಬೇಕೆಂದು ಕೇಳುತ್ತಿರುವ ಅಧಿಕಾರಿ ಗಳಿಂದ (ಬ್ರಾಹ್ಮಣರಿಂದ) ಹೇಳಲ್ಪಟ್ಟ ವೇದಗಳು ತಾವಾಗಿಯೇ ಅವನನ್ನು ಸ್ತುತಿಸಿದವು.

ಅನಂತರದಲ್ಲಿ ಯುದ್ಧಮಾಡಿ ಬಳಲಿರುವ ರಾಮಕೃಷ್ಣರಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಲು ಅಮಾತ್ಯರು, ಬ್ರಾಹ್ಮಣರು ಎಲ್ಲರೂ ಸಿದ್ಧರಾದರು. ಆದರೆ ವೇದಗಳು ಸರ್ವ ಕಾಲದಲ್ಲಿಯೂ ಆ ಸರ್ವೇಶ್ವರನನ್ನೇ ಸ್ತುತಿಸುತ್ತಿರುತ್ತವೆ. ಅವನಿಗೆ ಪ್ರತ್ಯೇಕವಾಗಿ ಯಾರ ಸ್ತುತಿಯೂ ಅಗತ್ಯವಿಲ್ಲ. ಆದರೂ ಬ್ರಾಹ್ಮಣರು ಶಾಸ್ತ್ರೋಕ್ತವಾಗಿ ಅವನಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಿದರು.

ಶಕ್ತಿಭಿ ಸ್ತಿಸೃಭಿ ರ್ದಿಪ್ತೋ ವಿವಸ್ವಾನಿವ ದೀಪ್ತಿಭಿಃ।
ಸ್ವಪದಂ ಪೃಥಿವೀಂ ಚಕ್ರೆ ಸುಹೃದ್ಭಿಃ ಸೂರಿಭಿ ವೃತಃ ॥ ॥೧೦೧॥

ಸೂರ್ಯನು ಅಮೃತಾ, ಚಂದ್ರ, ಶುಕ್ರ ಎಂಬ ಮೂರು ಕಿರಣಗಳಿಂದ ಭೂಮಿಯನ್ನು ತನ್ನ ವಶಪಡಿಸಿಕೊಂಡಿರುವಂತೆ, ಶ್ರೀಕೃಷ್ಣನೂ ಮೂರು ಶಕ್ತಿಗಳಿಂದ ಕೂಡಿರುವ ಶ್ರೇಷ್ಠವಾದ ನಿತ್ಯಸೂರಿಗಳಿಂದ ಕೂಡಿದವನಾಗಿ, ಭೂಮಿಯನ್ನು ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡನು. (ತನ್ನ ಪರಮ ಪದಕ್ಕೆ ಸಮನಾಗಿಸಿದನು).

ಆ ಮಧುರೆಯಲ್ಲಿ ಯುವರಾಜನಾಗಿ ಅಧಿಷ್ಠಾಪಿತಗೊಂಡ ಶ್ರೀಕೃಷ್ಣನು ತನ್ನ ನಿಜಸ್ಥಾನವಾದ ವೈಕುಂಠದಂತೆಯೇ ಅದನ್ನು ಭಾವಿಸಿ, ಯದುವೀರರೆಲ್ಲರನ್ನೂ ನಿತ್ಯಸೂರಿಗಳಂತೆ ಭಾವಿಸಿ, ಸಂತೋಷದಿಂದ ರಾಜ್ಯವಾಳುತ್ತಿದ್ದನು.

ವಿಕ್ಲಿಪ್ತಂ ತಸ್ಯ ಬರ್ಹಾದ್ಯಂ ಹೇಮರತ್ನ ವಿಭೂಷಣೈಃ।
ವೈರೋಚನಿ ಹೃತಾನೀತಃ ಕಿರೀಟೋ ನ ವ್ಯಕಲ್ಪತ॥ ॥೧೦೨॥

ಇದಕ್ಕೆ ಮುಂಚೆ ನವಿಲು ಗರಿಯನ್ನು ಕಾಡಿನ ಹೂಮಾಲೆಯನ್ನು ಧರಿಸಿದವನಿಗೆ ಅವುಗಳಿಗೆ ಬದಲಾಗಿ, ಸುವರ್ಣ, ರತ್ನ ಪುಷ್ಪಗಳಿಂದ ಅಲಂಕರಿಸಿದರು. ಮಹಾಬಲಿಯಿಂದ ಸಮರ್ಪಿಸಲ್ಪಟ್ಟ ಕಿರೀಟ ಮಾತ್ರ ಬದಲಾಗಲಿಲ್ಲ. ಹಿಂದೆಯೂ, ಅದನ್ನೇ ಧರಿಸಿದ್ದನು.

ಗೋಕುಲದಲ್ಲಿ ನವಿಲು ಗರಿಗಳ ಮಾಲೆಯನ್ನು ಧರಿಸಿದ್ದ ಆ ಸ್ವಾಮಿಯು ಈಗ ರಾಜನಾದ ಮೇಲೆ ಸುವರ್ಣ ರತ್ನ ಖಚಿತ ಕಿರೀಟವನ್ನು ಧರಿಸಿ ಶೋಭಿಸಿದನು. ಉತ್ತಮ ಪುಷ್ಪಗಳ ಮಾಲೆಯನ್ನು ಹಾಕಿಕೊಂಡನು. ಆದರೆ ಅವನಿಗೆ ಈ ಹಿಂದೆ ಬಲಿ ಚಕ್ರವರ್ತಿಯಿಂದ ಸಮರ್ಪಿಸಲ್ಪಟ್ಟ, ಗರುಡನಿಂದ ತೊಡಿಸಲ್ಪಟ್ಟ ಕಿರೀಟವನ್ನೇ ಈಗಲೂ ಧರಿಸಿ, ತನಗೆ ಭಕ್ತರ ಮೇಲೆ ಇರುವ ವಾತ್ಸಲ್ಯವನ್ನು ಪ್ರಕಟಪಡಿಸಿದನು.

ಸಪ್ತಿಭಿಃ ಸೈನ್ಯ ಸುಗ್ರೀವ ಮೇಘ ಪುಷ್ಪವಲಾಹಕೈಃ।
ವ್ಯಕ್ತಿಮಂತೋ ಅಭವನ್ ವೇದಾ ಸ್ತ್ಯಜಂತೋ ಧೇನುಭೂಮಿಕಾಂ॥ ॥೧೦೩॥

ಹಿಂದೆ ಕರುಗಳಾಗಿ ಹುಟ್ಟಿ ಅವನಿಗೆ ಸಹಾಯ ಮಾಡಿದ ವೇದಗಳು ಆ ವೇಷವನ್ನು ಬಿಟ್ಟು ಸೈನ್ಯ, ಸುಗ್ರೀವ, ಮೇಘ ಪುಷ್ಪ, ವಲಾಹಕವೆಂಬ ಹೆಸರು ಪಡೆದ ರಥದ ಕುದುರೆಗಳಾಗಿ ಮಾರ್ಪಟ್ಟವು.

ಗೋಕುಲದಲ್ಲಿ ಶ್ರೀಕೃಷ್ಣನು ಕರುಗಳ ಜೊತೆ ಆಟವಾಡುತ್ತಿದ್ದನು. ಆಗ ವೇದಗಳೇ ಕರುಗಳಾಗಿ ಅವತಾರ ಮಾಡಿದ್ದವು. ಈಗ ಮಧುರೆಗೆ ಬಂದ ಮೇಲೆ ರಥದ ಮೇಲೆ ಕುಳಿತಿದ್ದರಿಂದ ಆ ರಥಕ್ಕೆ ನಾಲ್ಕು ಕುದುರೆಗಳನ್ನು ಕಟ್ಟಿದ್ದರು. ಶ್ರೀಕೃಷ್ಣನೇ ವೇದ ಪುರುಷನಾದ್ದರಿಂದ, ನಾಲ್ಕು ವೇದಗಳೇ ಸೈನ್ಯ, ಸುಗ್ರೀವ, ಮೇಘ ಪುಷ್ಪ, ವಲಾಹಕವೆಂಬ ಹೆಸರು ಪಡೆದ ಆ ನಾಲ್ಕು ಕುದುರೆಗಳಾಗಿ ಬಂದವು.

ಪದ್ಮಾ ಕಮಲ ದಾಯಾದಂ ಪದಂ ತಸ್ಯ ಸ್ವಮೌಲಿಭಿಃ।
ಶ್ರುತಯೋ ಧಾರಯಾಮಾಸುಃ ಪಾದ ಪೀಠೀ ಕೃತಾತ್ಮಭಿಃ ॥ ॥೧೦೪॥

ಪದ್ಮಾದೇವಿಯಿಂದ ತಾವರೆ ಹೂವಿಗೆ ಜತೆಯಾಗಿ ಪೂಜಿಸಲ್ಪಟ್ಟ ಅವನ ದಿವ್ಯ ಪಾದಾರವಿಂದಗಳನ್ನು ವೇದಗಳು ಪಾದಪೀಠಗಳಾಗಿ ಆಕಾರ ತಳೆದು ತಮ್ಮ ತಲೆಯಲ್ಲಿ ಧರಿಸಿದವು.

ಶ್ರೀಕೃಷ್ಣನ ದಿವ್ಯ ಚರಣಾರವಿಂದಗಳನ್ನು ಲಕ್ಷ್ಮೀದೇವಿಯು ತಾವರೆ ಹೂವಿನ ಜತೆಯಲ್ಲಿ ಪೂಜಿಸುತ್ತಿದ್ದಳು. ಆ ದಿವ್ಯ ಪಾದಗಳನ್ನು ಇಡುವ ಪಾದಪೀಠವೇ ವೇದಗಳು. ಅವು ಭಗವಂತನ ಪಾದಗಳನ್ನು ತಮ್ಮ ಶಿರಸ್ಸಿನಲ್ಲಿ ಧರಿಸಲು, ಈಗ ಅರಸನು ಇಟ್ಟುಕೊಳ್ಳುವ ಪಾದಪೀಠದ ರೂಪದಲ್ಲಿ ಮಧುರೆಯ ಅರಮನೆಯಲ್ಲಿವೆ. ಅವುಗಳ ಮೇಲೆ ಶ್ರೀಕೃಷ್ಣನು ತನ್ನ ಚರಣಾರವಿಂದಗಳನ್ನು ಇಡುತ್ತಾನೆ. (ಉತ್ತಮವಾದ ಉಪಮೆ).

ಸ ವೇಣುಃ ಶಂಖರೂಪೇಣ ಪ್ರಾಪ್ಯ ಪರಿಪಚೇಲಿಮಃ।
ಅ ಗೋಪೀ ಸಂವಿಭಾಗಾರ್ಹಂ ಪಪೌ ತಸ್ಯಾಧರಾಮೃತಂ॥ ॥೧೦೫॥

ಆ ಸ್ವಾಮಿಯ ಕೊಳಲಾದುದು ಈಗ ದಿವ್ಯವಾದ ಶಂಖ ರೂಪವನ್ನು ತಾಳಿ, ಅವನ ದಿವ್ಯ ಅಧರಾಮೃತವನ್ನು ಗೋಪಿಗಳೊಡನೆ ಹಂಚಿಕೊಳ್ಳುವ ಹಾಗೆ ಅವನಲ್ಲಿ ಸೇರಿಕೊಂಡು ಪಾನ ಮಾಡಿತು.

ಗೋಕುಲದಲ್ಲಿ ಗೋಪಿಗಳು ಕೊಳಲಿನೊಡನೆ ಅವನ ಅಧರಾಮೃತವನ್ನು ಪಾನ ಮಾಡಿದರು. ಅವನ ಪಂಚಾಯುಧಗಳಲ್ಲಿ ಒಂದಾದ ಪಾಂಚಜನ್ಯವೇ ಕೊಳಲಾಗಿ ಅವತಾರ ಮಾಡಿತ್ತು. ಈಗ ಮಧುರೆಯಲ್ಲಿ ಗೋಪಿಕಾ ಸ್ತ್ರೀಯರಿಲ್ಲದ್ದರಿಂದ, ಅವನ ಅಧರಾಮೃತ ಪಾನವನ್ನು ಹಂಚಿಕೊಳ್ಳಲು ಯಾರೂ ಇರಲಿಲ್ಲ. ಆದ್ದರಿಂದ ಆ ದಿವ್ಯವಾದ ಶಂಖವೇ ಪೂರ್ಣವಾಗಿ ತುಟಿಗಳ ಸಂಪರ್ಕವನ್ನು ಪಡೆಯುತ್ತಿತ್ತು.

ದಿದೇಶ ಸಾಂದೀಪನಯೇ ಧನುರ್ವೇದೋಪ ದೇಶಿನೇ।
ಸ್ವಪದಾರೂಢತನಯ ಪ್ರತ್ಯಾನಯನ ದಕ್ಷಿಣಾಂ॥ ॥೧೦೬॥

ಧನುರ್ವೇದವನ್ನು ಉಪದೇಶಿಸಿದ ಸಾಂದೀಪಿನಿ ಎಂಬ ಮಹರ್ಷಿಗೆ ಮರಣ ಹೊಂದಿ ತನ್ನ ಸ್ಥಾನವನ್ನು ಸೇರಿದ ಅವನ ಪುತ್ರನನ್ನು ಮತ್ತೆ ತಂದುಕೊಟ್ಟು ಗುರುದಕ್ಷಿಣೆಯಾಗಿ ಶ್ರೀಕೃಷ್ಣನು ಅರ್ಪಣೆ ಮಾಡಿದನು.

ಶ್ರೀಕೃಷ್ಣನಿಗೆ ಸಾಂದೀಪಿನಿ ಎಂಬ ಮಹರ್ಷಿಯು ಗುರುವಾಗಿ (ಸ್ವಯಂ ಕೃಷ್ಣನು ಸರ್ವಜ್ಞನಾಗಿದ್ದರೂ) ಎಲ್ಲವಿದ್ಯೆಗಳನ್ನೂ ಸಾಂಗವಾಗಿ ಲೋಕವಿಡಂಬನಾರ್ಥವಾಗಿ ಉಪದೇಶಿದನು. ಗುರುಗಳಿಗೆ ಗುರುದಕ್ಷಿಣೆಯ ರೂಪವಾಗಿ ಸ್ವಾಮಿಯು ಗುರುಪುತ್ರನು ಅಕಾಲ ಮರಣಕ್ಕೆ

ತುತ್ತಾಗಿದ್ದಾಗ ಗುರುಪತ್ನಿಯ ಅಭಿಲಾಷೆಯಂತೆ ಅವನನ್ನು ಬದುಕಿಸಿ, ಮತ್ತೆ ಗುರುವಿನ ಬಳಿ ಸೇರಿಸಿದನು.

ಪ್ರಹಿತಾಂ ಪುರುಹುತೇನ ಸ್ವಸಂಕಲ್ಪಾನುವರ್ತಿನಾ।
ಕಂಸಜಿತ್ ಕಂಸ ಪಿತರಂ ಸುಧರ್ಮಾ ಮಧ್ಯವಾಸಯತ್ ॥ ॥೧೦೭॥

ತನ್ನ ಮನೋರಥಕ್ಕೆ ಅನುಕೂಲವಾಗಿ ನಡೆಯುವ ದೇವೇಂದ್ರನಿಂದ ಕಳುಹಿಸಲ್ಪಟ್ಟ 'ಸುಧರ್ಮ' ಎಂಬ ಸಭಾ ಮಂಟಪದಲ್ಲಿ ಕಂಸನನ್ನು ಜಯಿಸಿದ ಶ್ರೀಕೃಷ್ಣನು ಅವನ (ಕಂಸನ) ತಂದೆಯನ್ನು ಅಧ್ಯಕ್ಷನನ್ನಾಗಿ ನೇಮಿಸಿದನು.

ವಸುದೇವನು ಸಹ ಕಂಸನಿಂದ ಅನೇಕ ತೊಂದರೆಗಳಿಗೆ ಒಳಗಾಗಿದ್ದನು. ಈಗ ಅವನಿಗೆ ಸಮಾಧಾನಪಡಿಸಲು ಅವನನ್ನು ತನ್ನ ರಾಜ ಸಭೆಗೆ ಅಧ್ಯಕ್ಷನನ್ನಾಗಿ ನಿಯಮಿಸಿದನು ಸ್ವಾಮಿ. ಇಂದ್ರನು ತನ್ನ ಕೃತಜ್ಞತೆಯನ್ನು ತೋರಲು 'ಸುಧರ್ಮ' ಎಂಬ ತನ್ನ ಸಭೆಯನ್ನೇ ಕೃಷ್ಣನ ಸಭೆಯನ್ನಾಗಿ ಮಾರ್ಪಡಿಸಿದನು. ವಸುದೇವನು ಆ ಸಭೆಯ ಮೇಲ್ವಿಚಾರಕನಾದನು.

ಅಶೇಷ ರತ್ನ ಚಿತ್ರಾಂ ತಾಮತೀತ ಸ್ತುತಿ ಗೋಚರಾಂ।
ಅದ್ವೈತಮಿವ ಸರ್ವೇಷಾಮ್ ಅದ್ಭುತಾನಾಂ ಮಮನ್ಯತ ॥ ॥೧೦೮॥

ರತ್ನಗಳಿಂದ ಎಲ್ಲಾ ಕಡೆಗಳಲ್ಲೂ ಬೆಳಗಲ್ಪಟ್ಟ ವಿಚಿತ್ರವಾಗಿರುವ ಪೂರ್ಣವಾಗಿ ಎಲ್ಲರಿಂದಲೂ ಪ್ರಶಂಸಿಸಲ್ಪಡುವ ಆ ಸಭಾ ಮಂಟಪವು ಎಲ್ಲಾ ಅದ್ಭುತಗಳಿಗೂ ಗುರುತಾಗಿ ಏರ್ಪಟ್ಟಿತ್ತು.

ಆ 'ಸುಧರ್ಮ'ವೆಂಬ ಸಭೆಯು ದೇವೇಂದ್ರನ ಸಭೆಗಿಂತಲೂ ಮಿಗಿಲಾಗಿತ್ತು. ಸರ್ವೇಶ್ವರನಾದ ಶ್ರೀಕೃಷ್ಣನಿಗೆ ಎಲ್ಲಾ ವಿಧದಲ್ಲೂ ತಕ್ಕುದಾಗಿತ್ತು. ಆ ಮಂಟಪ.

ಸ ಚ ತಸ್ಯಾನುಭಾವೇನ ನಿಧ್ಯಾತನಯ ಪದ್ಧತಿಃ।
ಪ್ರಜಾಪಾಲನ ಧರ್ಮಸ್ಯ ಪಾರದೃಶ್ವತಮೋಽಭವತ್ ॥ ॥೧೦೯॥

ಉಗ್ರಸೇನನೂ, ಶ್ರೀಕೃಷ್ಣನ ಪ್ರಭಾವದಿಂದ ನೀತಿ ಮಾರ್ಗವನ್ನು ಚೆನ್ನಾಗಿ ತಿಳಿದವನಾಗಿ ಪ್ರಜೆಗಳನ್ನು ಚೆನ್ನಾಗಿ ರಕ್ಷಿಸಬೇಕೆಂಬ ಧರ್ಮದಲ್ಲಿ ಅಕ್ಕರೆ ತಾಳಿದರು.

ಉಗ್ರಸೇನನೂ ಸಹ ಪಟ್ಟಾಭಿಷಿಕ್ತನಾಗಿ, ತಾನು ಉತ್ತಮ ರಾಜನೆಂಬ ಹೆಸರು ಪಡೆಯಬೇಕೆಂಬ ಉದ್ದೇಶದಿಂದ, ಕಂಸನಂತಲ್ಲದೆ, ಪ್ರಜೆಗಳನ್ನು ಧರ್ಮದಿಂದ ಕಾಪಾಡಿ, ಅವರ ಯೋಗಕ್ಷೇಮಗಳನ್ನು ಕಾಲಕಾಲಕ್ಕೆ ಪೂರೈಸುತ್ತಿದ್ದನು.

ಕೃಷ್ಣಪಕ್ಷಮಪಿ ಪ್ರಾಪ್ಯ ಸ ರಾಜಾ ವಿಶ್ವರಂಜಕಃ।
ಪ್ರಾಪದ್ಯತ ಪರಾಂ ವೃದ್ಧಿಂ ಸುಮನಃ ಸ್ವಾದನ ಕ್ಷಮಾಂ॥ ॥೧೧೦॥

ಅರಸನೆಂಬ ಚಂದ್ರನು ಚಂದ್ರನ ಕೃಷ್ಣಪಕ್ಷದಲ್ಲಿ ಸೇರಿದವನಾಗಿಯೂ ಎಲ್ಲರಿಗೂ ಪ್ರೀತಿಯನ್ನು ಉಂಟು ಮಾಡುವವನಾಗಿ, ಒಳ್ಳೆಯ ಮನಸ್ಸುಳ್ಳವರಿಗೆ ಆನಂದ ನೀಡುತ್ತಾ ವೃದ್ಧಿಯನ್ನು ಹೊಂದುತ್ತಾನೆ.

ಚಂದ್ರನು ಕೃಷ್ಣ ಪಕ್ಷದಲ್ಲಿ ಕ್ಷೀಣವಾಗಿದ್ದರೂ, ಶುಕ್ಲ ಪಕ್ಷದಲ್ಲಿ ವೃದ್ಧಿಯನ್ನು ಹೊಂದುತ್ತಾನೆ. ಆದರೆ ಉಗ್ರಸೇನನು ಶ್ರೀಕೃಷ್ಣನ ಪಕ್ಷವನ್ನು ಸೇರಿದವನಾದಿದರಿಂದ, ಯಾವಾಗಲೂ ವೃದ್ಧಿಯನ್ನೇ ಹೊಂದುತ್ತಾ ಎಲ್ಲರ ಪ್ರೀತಿಯನ್ನೂ ಗಳಿಸಿದನು.

ಮಲಿನೈಃ ಸತತಾ ಸಾರ್ಯೈರ್ಮಂತ್ರಿಭಿಶ್ಚಪಲಾನ್ವಿತೈಃ।
ವಿಮುಕ್ತಃ ಸ ಬಭೌ ಭಾಸ್ವಾನ್ ಮೇಘೈರಿವ ಜಡಾಶ್ರಯೈಃ॥ ॥೧೧೧॥

ಸೂರ್ಯನು ಮೇಘಗಳನ್ನು ಬಿಟ್ಟು ಬೆಳಗುವ ಹಾಗೆ ಕಂಸನ ಅಷ್ಟ ಮಂತ್ರಿಗಳನ್ನು ಬಿಟ್ಟು, ಉಗ್ರಸೇನನು ಬೆಳಗಿದನು. (ದುಷ್ಟರಾದ ಮಂತ್ರಿಗಳನ್ನು ತೊರೆದು).

ಕಂಸನ ಸುತ್ತ ಎಲ್ಲಾ ದುಷ್ಟರ ಕೂಟವೇ ಇತ್ತು. ಈಗ ಕಂಸನ ಮರಣಾ ನಂತರ ಎಲ್ಲರೂ ಒಳ್ಳೆಯವರಾದರು. ಉಗ್ರಸೇನನು ದುಷ್ಟರ ಕೂಟವನ್ನೆಲ್ಲಾ ತ್ಯಜಿಸಿ, ಒಳ್ಳೆಯ ಮಂತ್ರಿಗಳ ಸಹಾಯದಿಂದ ಧರ್ಮದಿಂದ ರಾಜ್ಯಪಾಲನೆ ಮಾಡದನು. ಶ್ರೀಕೃಷ್ಣನ ಪ್ರಭಾವವೂ ಹೆಚ್ಚಿತು.

ಪ್ರಚಿತಂ ಬಹುಭಿಃ ತೀರ್ಥೈ ತಸ್ಯ ಗೂಢಂ ಚಿಕೀರ್ಷಿತಂ।
ಸಾರಸ್ವತಮಿವ ಸ್ರೋತಃ ಸ್ಥಾನೇ ಸ್ಥಾನೇ ವ್ಯಜೃಂಭತಃ॥ ॥೧೧೨॥

ಅವನು ಮಾಡಬಯಸಿದುದೆಲ್ಲವನ್ನೂ ಮಾಡಿ, ಅನೇಕ ದೊರೆಗಳಿಂದ ವೃದ್ಧಿಹೊಂದಿ ಎಲ್ಲರೂ ನೋಡುವಂತಾಗಿ, ಸರಸ್ವತಿಯಿಂದ ಅನುಗ್ರಹಿಸಲ್ಪಟ್ಟವರಂತೆ ಆಯಾಯ ಸ್ಥಾನಗಳಲ್ಲಿ ಶ್ರೇಷ್ಠತೆಯನ್ನು ಹೊಂದಿದ್ದರು.

ಉಗ್ರಸೇನನು ಅನೇಕ ರಾಜರುಗಳ ಮೂಲಕ ಸತ್ಕಾರ್ಯಗಳನ್ನೆಲ್ಲಾ ಮಾಡಿಸಿದನು. ಎಲ್ಲರನ್ನೂ ಅವರವರ ಸ್ಥಾನದಲ್ಲಿ ಗೌರವಿಸಿ, ಎಲ್ಲರಿಗೂ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸಿದ್ದರು.

ಮಾನ ಸಂರಕ್ಷಕಸ್ತಸ್ಯ ಮಂತ್ರಸ್ತರ್ಕ ಇವಾ ನಯಃ।
ಅಂಗ ಪಂಚಕ ಸಂಪತ್ಯಾ ವಿಪಕ್ಷೇ ದಂಡತಾಂ ಯಯೌ॥ ॥೧೧೩॥

ಉಗ್ರಸೇನನ ಮಹಾರಾಜನ ಮಂತ್ರಾಲೋಚನೆಯಾದುದು, ತರ್ಕದಂತಿತ್ತು. ತರ್ಕ ವೆಂಬುದು, ತರ್ಕ ಶಾಸ್ತ್ರದಲ್ಲಿ ಹೇಳಲ್ಪಟ್ಟ ಊಹೆಗಳಾಗಿರುತ್ತವೆ.

ಅದು ಒಂದೇ ವಿಧವಾಗಿರುತ್ತದೆ. ಅದಕ್ಕೆ ಐದು ಅಂಗಗಳುಂಟು. ಆ ಊಹೆಯಾದುದು ತನ್ನ ಪಕ್ಷಕ್ಕೆ ವಿರೋಧವಾದ ಪಕ್ಷವನ್ನು ಗೌರವಿಸುವುದಿಲ್ಲ. ಆದ್ದರಿಂದ, ಅದಕ್ಕೆ ವಿಪಕ್ಷ ದಂಡವೆಂಬ ಹೆಸರಿದೆ. ಮಂತ್ರಾಲೋಚನೆಯೂ ಅದೇ ರೀತಿ ಇತ್ತು.

ಸ್ವತಃ ಶುದ್ಧಾಂ ಯಥಾಸ್ಥಾನಂ ರೋಮ ರಾಗವತಿಂ ಧಿಯಂ।
ಸದಧೆ ಯಮುನಾ ಶೋಣಾ ಶಬರಾಮಿವ ಜಾಹ್ನವೀಂ॥ ॥೧೧೪॥

ದೋಷವು (ದ್ವೇಷ ಅಸೂಯೆ ಮೊದಲಾದ) ಸಹಜವಾಗಿ ನಿರ್ಮಲವಾಗಿ ಆಯಾಯ ಸ್ಥಳಗಳಲ್ಲಿ ತೋರುವ, ಕೋಪ, ಪ್ರೀತಿಗಳನ್ನುಳ್ಳ ಬುದ್ಧಿಯನ್ನು ಅವನು ಹೊಂದಿದ್ದನು. ಆ ಬುದ್ಧಿಯು ಯಮುನೆಯೂ, ಶೋಣಾ ನದಿಯೂ ಸೇರಿದ ಗಂಗೆಯಂತಿತ್ತು. ಗಂಗೆಯು ಸ್ವಭಾವದಲ್ಲಿ ಶುದ್ಧವಾದುದು. ಯಮುನೆಯು ಸೇರುವ ಜಾಗಗಳಲ್ಲಿ ರಾಡಿಯಾಗುವುದರಿಂದ ರೋಷ ಹೊಂದುವಂತೆ ತೋರುತ್ತದೆ. ಶೋಣಾ ನದಿಯ ಸೇರುವ ಜಾಗದಲ್ಲಿ ಹೆಚ್ಚು ಪ್ರೀತಿಯಿಂದ ತೋರುತ್ತದೆ.

ಉಗ್ರಸೇನನ ಗುಣಗಳನ್ನು ವರ್ಣಿಸಲಾಗಿದೆ. ಅವನು ಸತ್ಪುರುಷರಿಗೆ ಸತ್ಪುರುಷನಾಗಿಯೂ, ದುಷ್ಟರಿಗೆ ದುಷ್ಟನಾಗಿಯೂ ಇದ್ದನು. ರಾಜನಾದವನಿಗೆ ಕರುಣೆಯು ಎಷ್ಟು ಮುಖ್ಯವೋ, ಅದೇ ರೀತಿ ತಪ್ಪಿತಸ್ಥರಿಗೆ ದಂಡನೆ ನೀಡುವುದು ಅಷ್ಟೇ ಮುಖ್ಯ. ರಾಜನು ನಿಷ್ಪಕ್ಷಪಾತಿಯಾಗಿರಬೇಕು. ಗಂಗೆಯಲ್ಲಿ ಯಮುನೆ, ಶೋಣಾ ಎರಡು ನದಿಗಳು ಸೇರಿದರು ಯಮುನೆಯು ಸೇರುವ ಕಡೆ ನದಿ ಸ್ವಲ್ಪ ಉಗ್ರವಾಗಿದೆ. ಆದರೆ ಶೋಣಾ ನದಿ ಸೇರುವ ಜಾಗ ಶಾಂತವಾಗಿದೆ.

ಸಪ್ತಭಿಃ ಸಾಮದಾನಾದ್ಯೈರುಪಾಯೈಃ ಸ್ಥಾನಪಾತಿಭಿಃ।
ದ್ಧೀನವ ದ್ವೀಪ ಸಂಭೂತಂ ರತ್ನ ಜಾತ ಮಜೀಹರತ್॥ ॥೧೧೫॥

ಸಮಾಧಾನ ಪಡಿಸುವುದು, ಅಗಲಿಕೆಯುಂಟು ಮಾಡುವುದು ಕೊಟ್ಟು ವಶಪಡಿಸಿ ಕೊಳ್ಳುವಿಕೆ, ಶಿಕ್ಷಿಸುವುದು, ಮಾಯೆಯನ್ನು ಮಾಡುವುದು ಉಪೇಕ್ಷೆಯಿಂದ ಇರುವುದು, ಇಂದ್ರಜಾಲ ಮಾಡುವುದೆಂಬ ಏಳು ಬಗೆಯಾದ ಉಪಾಯಗಳನ್ನು ಅನುಸರಿಸಿ, ಭೂಮಿಯಲ್ಲಿರುವ ಹದಿನೆಂಟು ದ್ವೀಪಗಳಲ್ಲಿರುವ ಉತ್ತಮ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡನು.

ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳಲ್ಲದೆ, ಇತರ ಇನ್ನೂ ಅನೇಕ ವಿಧವಾದ ಮರ್ಮಗಳಿಂದ, ಸಾಮಂತ ರಾಜರನ್ನು ಅಡಗಿಸಿ, ಎಲ್ಲರ ಸ್ನೇಹವನ್ನು ಸಂಪಾದಿಸಿ, ಸಮಸ್ತ ಭೂಮಿಗೆ ಒಡೆಯನಾದನು.

ಅನುಗಂತಾ ಸ್ವನೇತೃಣಾಮುದಯೆ ವಿಶ್ವರಂಜಕಃ।
ದೂರೀ ಕೃತತಮಾಃ ಸೋಽಭೂತ್ ದ್ವಿತೀಯ ಇವ ಭಾನುಮಾನ್ ॥ ॥೧೧೬॥

ಶ್ರೀಕೃಷ್ಣನು ತನ್ನನ್ನು ನಡೆಸುವ ಹಿರಿಯರುಗಳ ಮುಂದೆ ವಿನಮ್ರನಾಗಿ ಇದ್ದು ತನಗೆ ಒಳ್ಳೆಯದಾಗುವಾಗ, ಎಲ್ಲಾ ಕಡೆಗಳಲ್ಲೂ ಪ್ರೀತಿ ತೋರಿಸುವವನಾಗಿ, ತಮೋಗುಣವನ್ನು ಸಂಪೂರ್ಣ ನೀಗಿದವನಾಗಿ, ಎರಡನೇಯ ಸೂರ್ಯನಂತೆ ಬೆಳಗಿದನು. ಸೂರ್ಯನು

ಋಷಿಗಳು ತೋರುವ ದಾರಿಯನ್ನು ತೋರುವವನು. ಉದಯ ಕಾಲದಲ್ಲಿ ಕೆಂಪು ಬಣ್ಣವನ್ನು ಎಲ್ಲ ಕಡೆಯೂ ಪ್ರಸರಿಸುವನು. ಕತ್ತಲನ್ನು ನೀಗಿಸುವವನು.

ಶ್ರೀಕೃಷ್ಣನು ಜಗತ್ತಿನ ಕತ್ತಲೆಯನ್ನೇ ನೀಗುವವನು, ಎಲ್ಲರ ಹೃದಯದಲ್ಲಿರುವ ಅಜ್ಞಾನ ವೆಂಬ ಕತ್ತಲೆಯನ್ನೂ ನೀಗುತ್ತಾನೆ. ರವಿಯ ಬಗ್ಗೆ ಕೂರ್ಮ ಪುರಾಣದ ವಚನ ಹೀಗಿದೆ. ''ಗ್ರಾಮಣೀ ಯಕ್ಷ ಭೂತಾನಿ, ಕುರ್ವತೋ ಅಧೀಶು ಸಂಗ್ರಹಂ ವಾಲ ಖದ್ದಾಸ್ಯ ನಯಂತ್ಯೇವ ಪರಿವಾರ್ಯೋ ದಯಾದ್ರವಿಂ''

ಸಂಚಿತಸ್ಯ ಧನೌಘಸ್ಯ ಸ್ಥಾನ ಸಂಚಾರಣೇನ ಸಃ।
ತಟಾಕಸ್ಯೇವ ಪೂರ್ಣಸ್ಯ ಪರೀವಾಹ ಮಕಲ್ಪಯತ್ ॥ ॥೧೧೭॥

ತುಂಬಿದ ನೀರಿನ ಕೆರೆಗಳಲ್ಲಿ ಮೇಲೆ ಸರಿಯಾದ ದಾರಿಯನ್ನು ಮಾಡುವ ಹಾಗೆ ಶೇಖರಿಸಿದ ಸಂಪತ್ತಿನ ರಾಶಿಯನ್ನು ತಕ್ಕ ಸ್ಥಳಗಳಲ್ಲಿ ಇಟ್ಟು ಕಾಪಾಡಿದನು. (ಸತ್ಪಾತ್ರದಲ್ಲಿ ವಿನಿಯೋಗಿಸಲು ನಿರ್ಧರಿಸಿದನು.

ಶ್ರೀಕೃಷ್ಣ ಪರಮಾತ್ಮನು ತನಗೆ ಈಗ ಸೇರಿದ ಐಶ್ವರ್ಯವನ್ನು ಸತ್ಪಾತ್ರದಲ್ಲಿ ವಿನಿಯೋಗಿಸಿ, ಲೋಕ ಕಲ್ಯಾಣ ಮಾಡಬೇಕೆಂದು ನಿಶ್ಚಯಿಸಿದನು. ಹಣವನ್ನು ಸೇಖರಿಸಿದರೆ ಮಾತ್ರ ಸಾಲದು. ಅದನ್ನು ಸದ್ವಿನಿಯೋಗಿಸಿದಲ್ಲಿ ಮಾತ್ರ ಅದರ ಸಾರ್ಥಕತೆಯಾಗುವುದು.

''ದತ್ತ ಭುಕ್ತಂ ಫಲಂ ಧನಂ'' ಎಂದು ಹಣದ ಭೋಕ್ತೃತೆಯು ಅದರ ವಿನಿಯೋಗದಲ್ಲಿ ಇರುತ್ತದೆ.

ಆಸಾಗರಾಂತ ಮವ ಮತ್ತ ಮಹೀಪತೀಂದ್ರಾನ್
ಭೂಮ್ನಾ ನಿಜೇನ ಪರಿಗೃಹ್ಯಯಯಾತಿ ಶಾಪಂ।
ಅಜೋ ನಿರೋಧಕ ಮಿಲಾಶ್ರಯ ಉಗ್ರಸೇನಂ
ರಾಜಾನಮೇಕ ಮಕರೋ ಜಗದೇಕ ನಾಥಃ॥ ॥೧೧೮॥

ಸಮುದ್ರದ ಎಲ್ಲೆಯವರೆಗಿನ ತನಕ ಇರುವ ಗರ್ವಿಷ್ಠರಾದ ಅರಸರುಗಳನ್ನು ಸರ್ವಸ್ವಾಮಿಯಾದ ಶ್ರೀಕೃಷ್ಣನು ತನ್ನ ಪ್ರಭಾವದಿಂದ ಅಡಗಿಸಿ, ಯಯಾತಿಯ ಶಾಪವನ್ನು ನೀಗಿಸಿ, ಉಗ್ರಸೇನನೊಬ್ಬನೇ ಶತ್ರುಗಳ ಬಲವನ್ನು ಕುಗ್ಗಿಸುವವನೂ, ಭೂಮಿಗೆಲ್ಲಾ ಒಬ್ಬನೇ ಆಶ್ರಯನಾದ ಅರಸನೆಂದು ಅವನನ್ನು ಘೋಷಿಸಿದನು.

ತಾನು ಸರ್ವಶಕ್ತನಾಗಿ, ಸರ್ವೇಶ್ವರನಾಗಿದ್ದರೂ, ತನ್ನ ತಾತನಾದಿ ಉಗ್ರಸೇನನನ್ನೇ ಎಲ್ಲರೂ ರಾಜನನ್ನಾಗಿ ಗೌರವಿಸಬೇಕೆಂದು ಆಜ್ಞಾಪಿಸಿ, ತಾನೂ ಸಹ ಅವನಿಗೆ ವಿಧೇಯನಾಗಿದ್ದು, ದುಷ್ಟರನ್ನೆಲ್ಲಾ ಅಡಗಿಸಿದನು.

ಕ್ಷಿಪ್ತಾವದ್ಯಂ ಕ್ಷತ್ರಿಯವೃತ್ತ್ಯಾ ಬಹುಶಾಖಂ ಮಗ್ನಂ
ಶಾಪೋದನ್ವತಿ ಮಾನ್ಯಂ ಯದುವಂಶಂ।
ಇಚ್ಛಾಧೀನ ಸ್ವೇತರ ಸರ್ವಃ ಸ್ವಮಹಿಮ್ನಾ ರಕ್ಷಾಗೋಪೋ
ರಾಮಯವೀಯಾನ್ ಉದಹಾರ್ಷೀತ್ ॥೧೧೯॥

ತನ್ನ ಇಷ್ಟಕ್ಕೆ ಅಧೀನನಾಗಿ, ಎಲ್ಲಾ ಇರುವವರಂತೆ ಬೆಳಗುವವನಾಗಿ, ಲೋಕವನ್ನು ರಕ್ಷಿಸುವ ಗೋಪನಾಗಿ ತೋರಿದ ಶ್ರೀಕೃಷ್ಣನು ಬಲರಾಮನಿಗೆ ತಮ್ಮನಾಗಿ ವಿಧೇಯದಿಂದ ಹಿಂದೆ ದಶರಥ ಕುಮಾರನಾಗಿ ಕ್ಷತ್ರಿಯ ಧರ್ಮವನ್ನು ಪಾಲಿಸಿದಂತೆ, ದೋಷಗಳನ್ನು ನೀಗಿ, ಶಾಪದ ಸಮುದ್ರದಲ್ಲಿ ಮುಳುಗಿದ್ದ ಯದು ವಂಶವನ್ನು ಮತ್ತೆ ಅದರ ಕೀರ್ತಿ ಶಿಖರಕ್ಕೇರಿಸಿ ಉದ್ಧಾರ ಮಾಡಿದನು.

ಯಾಯಾತಿಯ ಶಾಪದಿಂದ ಯದು ವಂಶಕ್ಕೆ ಮಸುಕು ಕವಿದಿತ್ತು. ಶ್ರೀಮನ್ನಾರಾಯಣನು ಯದು ವಂಶದಲ್ಲಿ ಶ್ರೀಕೃಷ್ಣನಾಗಿ ಜನಿಸಿ, ಅಣ್ಣನಾದ ಬಲರಾಮನೊಡಗೂಡಿ, ಆ ವಂಶದ ಹಿರಿಮೆಯನ್ನು ಎತ್ತಿ ಹಿಡಿದು, ತನ್ನ ಗೀತಾವಾಕ್ಯಕ್ಕೆ ತಕ್ಕಂತೆ ಧರ್ಮ ಸಂಸ್ಥಾಪನೆ ಮಾಡಿ, ಲೋಕವನ್ನೆಲ್ಲಾ ಬೆಳಗಿದನು.

''ಕಂಸ ರಾಜ್ಯೋದ್ಧಾರ'ವೆಂಬ ಹತ್ತನೆಯ ಸರ್ಗವು ಮುಗಿದುದು

ಏಕಾದಶಃ ಸರ್ಗಃ - ದ್ವಾರಕಾಧಿಷ್ಠಾನ



ಈ ಸರ್ಗದಲ್ಲಿ 81 ಶ್ಲೋಕಗಳಿವೆ. ಶ್ರೀಕೃಷ್ಣನು ಜರಾಸಂಧನೇ ಮೊದಲಾದ ದುಷ್ಟ ಕ್ಷತ್ರಿಯರ ಬಾಧೆಯಿಂದ ತಪ್ಪಿಸಿಕೊಳ್ಳಲು ಮಧುರೆಯನ್ನು ತ್ಯಜಿಸಿ, ಪಶ್ಚಿಮ ಸಮುದ್ರ ಮಧ್ಯದಲ್ಲಿ ಅದ್ಭುತವಾದ ದ್ವಾರಕಾ ನಗರಿಯನ್ನು ನಿರ್ಮಿಸಿ, ಅಲ್ಲಿ ಸಮಸ್ತ ಯದುವಂಶೀಯ ಬಾಂಧವರೊಡನೆ ವಾಸ್ತವ್ಯ ಮಾಡುವುದೇ ಈ ಸರ್ಗದ ಕಥಾ ವಸ್ತು. ಈ ಸರ್ಗದ ಅನೇಕ ಶ್ಲೋಕಗಳಲ್ಲಿ ದ್ವಾರಕಾ ನಗರಿಯ ಸುಂದರವಾದ ವರ್ಣನೆಗಳಿವೆ.

ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 8	ಜರಾಸಂಧಾದಿಗಳಿಂದ ಮಧುರೆಯ ಮುತ್ತಿಗೆ. ಶ್ರೀಕೃಷ್ಣ - ಬಲರಾಮರು ಅವನನ್ನು ಸೋಲಿಸುವುದು.
9-15	ಶ್ರೀಕೃಷ್ಣನು ಮಧುರೆಯನ್ನು ತ್ಯಜಿಸಲು ನಿರ್ಧಾರ ಮಾಡುವುದು. ಮಧುರೆಯ ವರ್ಣನೆ.
16-20	ಪಶ್ಚಿಮ ಸಮುದ್ರ ತೀರಕ್ಕೆ ಪ್ರಯಾಣ.
21-38	ಸಮುದ್ರದ ಮಧ್ಯೆ ವಿಶ್ವಕರ್ಮನಿಂದ ದ್ವಾರಕಾ ನಗರಿಯ ನಿರ್ಮಾಣ.
39-42	ಶ್ರೀಕೃಷ್ಣನು ದ್ವಾರಕಾ ನಗರಿಯನ್ನು ಪ್ರವೇಶಿಸಿದುದು.
43-78	ದ್ವಾರಕಾ ನಗರಿಯ ವರ್ಣನೆ. ಶ್ರೀಕೃಷ್ಣನ ವಾಸ್ತವ್ಯ.
79-81	ಬಲರಾಮನು ಗೋಕುಲಕ್ಕೆ ಬಂದು ಗೋಪಿಯರೊಡನೆ ಕ್ರೀಡಿಸಿದುದು. ರೇವತಿಯೊಡನೆ ಬಲರಾಮನ ವಿವಾಹ.

ಏಕಾದಶಃ ಸರ್ಗಃ - ೧೧

ದ್ವಾರಕಾಧಿಷ್ಠಾನ

ತದದ್ಭುತಂ ಕ್ರೀಡಿತಕಂ ಕ್ರಮೇಣ ಶ್ರುತ್ವಾ ಹರೇ ರಪ್ರತಿಮಾನ ಶಕ್ತೇಃ।
ಮಹಾಬಲಾತ್ ಕಂಸ ವಧಾದಿ ಜನ್ಮಾ ಮನ್ಯುಃ ಪ್ರಪೇದೇ ಮಗಧೇಂದ್ರ ಮುಖ್ಯಾನ್॥೧॥

ಅಪಾರ ಶಕ್ತಿಯುಳ್ಳ ಭಗವಂತನ ಅದ್ಭುತವಾದ ಆಟಗಳನ್ನೆಲ್ಲಾ ಮೊದಲಿನಿಂದ ಕೇಳಿದ ಮಗಧ ರಾಜನಾದ ಜರಾಸಂಧನೇ ಮೊದಲಾದ ಇತರ ಬಲಶಾಲಿಗಳಾದ ಅರಸರುಗಳಿಗೆ ಕಂಸನನ್ನು ವಧಿಸಿದುದು ಅಸಾಧ್ಯ ಕೋಪವನ್ನುಂಟುಮಾಡಿತು.

ಜರಾಸಂಧಾದಿ ಅರಸರು, ಕಂಸನ ಸ್ನೇಹಿತರುಗಳು ಶ್ರೀಕೃಷ್ಣನು ಲೀಲಾಜಾಲವಾಗಿ, ಎಲ್ಲಾ ರಾಕ್ಷಸರುಗಳನ್ನು ಸಂಹರಿಸಿದ ವೃತ್ತಾಂತವನ್ನು ಕೇಳಿ, ಅವರುಗಳಿಗೆ ತಡೆಯಲಾರದ ಕ್ರೋಧವನ್ನುಂಟುಮಾಡಿತು. ಹೇಗಾದರೂ ಮಾಡಿ ಶ್ರೀಕೃಷ್ಣನನ್ನು ನಿಗ್ರಹಿಸಬೇಕೆಂದು ತಮ್ಮ ತಮ್ಮಲ್ಲೇ ಮಾತನಾಡಿ ಕೊಂಡರು. ಅದಕ್ಕಾಗಿ ಷಡ್ಯಂತ್ರವನ್ನೂ ರೂಪಿಸತೊಡಗಿದರು.

ಗೋಪಾಲ ಡಿಂಭೋ ನರಪಾಲ ಹಂತಾಕುಲೇ ಯದೋರಂಜಿತ ಮಾತಪತ್ರಂ।
ಅನ್ಯಚ್ಚಭೂಮ್ನಾ ಮಧರೋತ್ತರತ್ವಂ ಹಂತೇತಿ ವಾದಾನ್ ಪ್ರಭುರಭ್ಯನಂದತ್ ॥೨॥

ಗೋಪ ಬಾಲನಾದವನು. ಮಹಾರಾಜನನ್ನು ಕೊಂದನು. ಯದುಕುಲದಲ್ಲಿ ಬಿಳಿಕೊಡೆಯನ್ನು ಹಿಡಿಯುವಂತೆ ಮಾಡಿದನು. (ರಾಜ ಪಟ್ಟವನ್ನೂ ನೀಡಿದನು). ಅನೇಕ ವಿರುದ್ಧವಾದ ಕಾರ್ಯಗಳನ್ನು ಲೋಕದಲ್ಲಿ ನಡೆಸಿದನು. "ಆಹಾ ಇದೇನಿದು !" ಎಂದು ಉದ್ಗರಿಸುವ ಅವರುಗಳ ಮಾತುಗಳನ್ನು ಕೇಳಿ (ಭೂಭಾರಹರಣ ಸನ್ನಿಹಿತವಾಯಿತೆಂದು) ಶ್ರೀಕೃಷ್ಣನು ಮನಸ್ಸಿನಲ್ಲಿಯೇ ಆನಂದಪಟ್ಟನು.

ಅವರುಗಳ ಯುದ್ಧ ಪ್ರಯತ್ನವು ಶ್ರೀಕೃಷ್ಣನ ಕಿವಿಗೂ ಮುಟ್ಟಿತು. ಶ್ರೀಕೃಷ್ಣನು "ಅಘಟಿತ ಘಟನಾ ಸಮರ್ಥ"ನೆಂಬುದೂ, ಅವನ ವಯಸ್ಸಿಗೆ ಮೀರಿದ ಲೀಲೆಗಳಿಂದ, ಅವರಿಗೆ (ಜರಾಸಂಧಾದಿಗಳಿಗೆ) ಮನವರಿಕೆಯಾಯಿತು. ಅವರು ಅವನ ವಿರುದ್ಧ ಸೆಣಸಲು ನಿರ್ಧರಿಸಿದರು. ಶ್ರೀಕೃಷ್ಣನು ಈ ಅವಕಾಶಕ್ಕಾಗಿಯೇ ಕಾಯುತ್ತಿದ್ದನು.

ತಾನು ಅವತರಿಸಿರುವ ಕಾರ್ಯವು ಇನ್ನೂ ಪೂರ್ತಿಯಾಗಿಲ್ಲವಾದ್ದರಿಂದ, ಇತರ ದುಷ್ಟಕ್ಷತ್ರಿಯ ರಾಜರನ್ನು ನಿರ್ನಾಮಗೊಳಿಸುವ ಕಾರ್ಯವು ಹತ್ತಿರ ಬರುತ್ತಿದೆಯೆಂದು ಭಾವಿಸಿ, ಮನಸ್ಸಿನಲ್ಲಿಯೇ ಆನಂದಪಟ್ಟನು.

ಜರಾಸಂಧನು ಮನಸ್ಸಿನಲ್ಲಿಯೇ ಯೋಚಿಸದಿದ್ದ "ಯದು ವಂಶದ ಅರಸರಿಗೆ ರಾಜ್ಯ" ವೆಂಬುದು ಈಗ ಶ್ರೀಕೃಷ್ಣನಿಂದ ಪ್ರಾಪ್ತವಾಯಿತು.

ಹಲಾದಿಭಿರ್ಹೇತಿ ವರ್ರೈರ್ಯಥಾರ್ಹಂ ರಥಾಂಗ ಮುಖ್ಯೈರಪಿ ರಾಮಕೃಷ್ಣೌ ।
ಸ್ವವೃತ್ತಿಯೋಗ್ಯಾ ವಸರೋಪಯಾತೈಃ ಪ್ರಾಚೀಂ ಶ್ರಿಯಂ ಪ್ರಾದುರಭಾವಯೇತಾಂ॥೩॥

ತಮಗೆ ಹೋರಾಟ ಒದಗಿದ ಸಮಯದಲ್ಲಿ ತಾವಾಗಿಯೇ ಬಂದ ಗದೆ, ಹಲಾಯುಧ, ರಥ ಇತ್ಯಾದಿ ಆಯುಧಗಳನ್ನು ಬಲರಾಮನೂ, ಶಂಖ, ಚಕ್ರವೇ ಮುಂತಾದ ಆಯುಧ ಗಳನ್ನು ಶ್ರೀಕೃಷ್ಣನೂ ಹೊಂದಿ, ಅವತಾರದಲ್ಲೂ ತೋರಲ್ಪಟ್ಟ ತಮ್ಮ ಹಿರಿಮೆಯನ್ನು ಹೊಂದಿದವರಾದರು.

ಶ್ರೀರಾಮ ಕೃಷ್ಣರು ಮಥುರೆಗೆ ಬಂದ ಸಮಯದಲ್ಲಿ ಯಾವ ಆಯುಧಗಳನ್ನೂ ಹೊಂದಿರಲಿಲ್ಲ. ಆದರೆ ಈಗ ಕಂಸ ವಧೆಯಾದ ಮೇಲೆ ಅವರ ಸಹಜ ಆಯುಧಗಳಾದ ಅಂದರೆ, ಗದೆ, ಹಲಾಯುಧ ಇತ್ಯಾದಿಗಳೂ ಬಲರಾಮನನ್ನೂ ಶಂಖ, ಶಾಂರ್ಙ್ಗ ಇತ್ಯಾದಿ ಗಳೂ ಶ್ರೀಕೃಷ್ಣನನ್ನು ತಾವಾಗಿಯೇ ಬಂದು ಸೇರಿ, ಅವರು ನಿಜವಾಗಿಯೂ, ಭಗವಂತನ ಅವತಾರ ಪುರುಷರೇ ಎಂಬುದನ್ನೂ ಸಾದರಪಡಿಸಿದವು. ಇನ್ನು ಮುಂದೆ ಅವೆಲ್ಲವೂ ಅವರ ಉಪಯೋಗಕ್ಕೆ ಬರುತ್ತದೆಂಬ ಉದ್ದೇಶದಿಂದ ಆ ಆಯುಧಗಳು ಅವರಿಬ್ಬರನ್ನೂ ಸೇರಿ ಕೊಂಡವು.

ಸದೈತ್ಯಜಿತ್ ವಧ್ಯ ವರೂಥಿ ನೀನಾಂ ಸ ಪ್ರಾಪಕಂ ಸಾರಥಿ ಮಾತ್ರ ಶೇಷಂ।
ಪುನಃ ಪ್ರವೃತ್ತಾನುಶಯಂ ಪುರೀಂ ಸ್ವಾಂ ನಿನ್ಯೇ ಜರಾಸಂಧಂ ಅಹಾರ್ಯಸಂಧಃ ॥೪॥

ಅರಸರುಗಳನ್ನು ಗೆಲ್ಲುವ ಶ್ರೀಕೃಷ್ಣನು ಯಾರಿಂದಲೂ ಬದಲಾಯಿಸಲಾಗದ ಸಂಕಲ್ಪ ವುಳ್ಳವನಾಗಿ ಜರಾಸಂಧನನ್ನು ಕೊಲ್ಲಬೇಕೆಂದು, ಸೈನ್ಯವನ್ನು ತೆಗೆದುಕೊಂಡು ಬರುವವನಾಗಿ, ರಥದಲ್ಲಿ ಸಾರಥಿಯೊಡನೆ ಮಾತ್ರ ಹಿಂತಿರುಗುವಂತೆ ಮಾಡಿ "ಅಯ್ಯೋ ತಕ್ಕ ಸೈನ್ಯದೊಡನೆ ಬರಲಿಲ್ಲವಲ್ಲಾ ...! ಕೆಟ್ಟೆನಲ್ಲಾ...!!" ಎಂದು ಪರಿತಪಿಸುತ್ತಾ ದ್ವೇಷದಿಂದ ಅವನ ನಗರಿಗೆ ಅವನು ಮರಳಿ ಹೋಗುವ ಹಾಗೆ ಮಾಡಿದನು.

ಜರಾಸಂಧನು ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಭಾರಿ ಸೈನ್ಯವನ್ನು ತೆಗೆದುಕೊಂಡು ಬಂದನು. ಆದರೆ ಪ್ರತಿ ಬಾರಿಯೂ, ಅವನು ತರುವ ಸೈನ್ಯವು ಸಾಲದೇ ಹೋಗಿ ಸೋತು ಹೋಗುವವ ನಾಗಿದ್ದನು. ಶ್ರೀಕೃಷ್ಣನನ್ನು ಜಯಿಸುವುದು ಅಷ್ಟು ಸುಲಭವಲ್ಲಾ ಎಂದು ಭಾವಿಸಿ, ನಿರಾಶನಾಗಿ ಹಿಂತಿರುಗುವಂತೆ ಮಾಡಿದನು ಸ್ವಾಮಿ.

ಸಮಾಹೃತೈಃ ಸೈನ್ಯ ಮಹಾಸಮುದ್ರೈ ರಾಯಾತ ಅಷ್ಟಾದಶ ಸಾಂಪರಾಯಾನ್।
ದೇಹಾವಶೇಷಂ ಪ್ರಜಿಘಾಯ ದೀನಂ ದೇಹೇನ ಭೀಮೇನ ವಿಭೇತ್ತುಮಿಚ್ಛನ್ ॥೫॥

ಸ್ವದತ್ತ ಶಕ್ತ್ಯಾ ಮುಚುಕುಂದ ದೃಷ್ಟ್ಯಾ ಭಸ್ಮಾವಶೇಷೋ ಭವಿತಾ ದ್ರುತಂ ಯಃ।
ಕಲೇರಿವಾತ್ಮಾ ಮನಂತ ದೋಷಂ ಯಂ ಕಾಲಪೂರ್ವಂ ಯವನಂ ಪ್ರಚಖ್ಯುಃ ॥೬॥

ಬಲಸ್ಯ ಚ ಸ್ವಸ್ಯ ಚ ಬಾಹುಭೂಮ್ನಾ ಯದಾಹೃತಾಮ್ಲೇಚ್ಛ ಮೃಗಾಧಿಪಾನಾಂ।
ಸಹಸ್ರ ಕೋಟಿ ಗುಣಿತಂ ಸಹಸ್ರಂ ಪಂಚತ್ವ ಮಾಯಾಸ್ಯತಿ ಪಂಚಸಖ್ಯಂ ॥೭॥

ತದಾಗಮೇ ಯಾದವ ಪುಂಗವಾನಾಂ ವಿಪ್ರಾವಮಾನೋ ಪನತಂ ವಿಷಾದಂ।
ನಿವಾರಯಾಮಾಸ ನ ವಾಸುದೇವಃ ಪ್ರಖ್ಯಾಪಯನ್ ಬ್ರಾಹ್ಮಮೃಷೇ ಪ್ರಭಾವಂ ॥೮॥

ದೊಡ್ಡ ಸಮುದ್ರದಂತಿರುವ ಸೈನ್ಯಗಳನ್ನು ಕೂಡಿಕೊಂಡು ಬರುವ ಅವನನ್ನು ಹದಿನೆಂಟು ಬಾರಿ ಯುದ್ದದಲ್ಲಿ ಜಯಿಸಿ, ತನ್ನ ಅಪ್ರಾಕೃತವಾದ ದಿವ್ಯ ಮಂಗಳ ವಿಗ್ರಹದಲ್ಲಲ್ಲದೆ, ಭೀಮಸೇನ ನೆಂಬ ತನ್ನ ದೇಹದಿಂದ ಜರಾಸಂಧನು ವಂಧಿಸಲ್ಪಡಬೇಕೆಂದು ಸಂಕಲ್ಪಿಸಿದುದರಿಂದ ಅವನ ದೇಹವನ್ನು ಮಾತ್ರ ಬಿಟ್ಟುಬಿಟ್ಟನು.

ಹದಿನೆಂಟು ಬಾರಿ ಜರಾಸಂಧನು ಮಥುರಾ ಪಟ್ಟಣದ ಮೇಲೆ ಯುದ್ಧಕ್ಕೆ ಬಂದರೂ, ಅವನು ಕೃಷ್ಣನನ್ನು ಜಯಿಸಲಾಗಲಿಲ್ಲ. ಜರಾಸಂಧನ ವಧವು ಮುಂದೆ ತನ್ನ ಅಂಶಾವತಾರ ವಾದ ಭೀಮಸೇನನಿಂದ ನಡೆಯಬೇಕಾದ್ದರಿಂದ, ಅವನನ್ನು ಆಗ ಕೊಲ್ಲದೆ, ಜೀವದಾನ ಮಾಡಿ ಅಟ್ಟಿಬಿಟ್ಟನು.

ಈ ಪ್ರಸಂಗವನ್ನು ಶ್ರೀಮದ್ಭಾಗವತದ ದಶಮ ಸ್ಕಂಧದದಲ್ಲಿ ಹೀಗೆ ವರ್ಣಿಸಲಾಗಿದೆ.

ಪ್ರವರ್ತಿತಾ ಭೀರುಭಯಾವಹಾ ಮೃಧೇ ಮನಸ್ವಿನಾಂ ಹರ್ಷಕರೀಃ ಪರಸ್ಪರಮ್।
ವಿನಿಘ್ನತಾರೀನ್ ಮುಸಲೇನ ದುರ್ಮದಾನ್ ಸಙ್ಕರ್ಷಣೇನಾಪರಿಮೇಯತೇಜಸಾ ॥

ಊಹಿಸಲು ಅಸಾಧ್ಯವಾದ ಶಕ್ತಿ ಪರಾಕ್ರಮಗಳಿಂದ ಕೂಡಿದ್ದ ಬಲರಾಮನು ದುರ್ಮದ ರಾದ ಜರಾಸಂಧನ ಸೈನಿಕರನ್ನು ಮುಸಲಾಯುಧದಿಂದ ಸಂಹರಿಸುತ್ತಾ ಹೇಡಿಗಳಿಗೆ ಭಯವನ್ನೂ, ವೀರರಿಗೆ ಸಂತೋಷವನ್ನು ಉಂಟು ಮಾಡುವ ಅಂತಹ ನೂರಾರು ನದಿಗಳನ್ನು ರಣರಂಗದಲ್ಲಿ ಹರಿಸಿಬಿಟ್ಟನು. ಜರಾಸಂಧನ ಆ ಸೈನ್ಯವು ಸಮುದ್ರದಂತೆ ಅತಿದುರ್ಗಮ ವಾಗಿತ್ತು. ಭಯಂಕರವಾಗಿತ್ತು. ಸಾಮಾನ್ಯರಿಂದ ಜಯಿಸಲು ಅಸಾಧ್ಯವಾಗಿತ್ತು. ಆದರೆ ಜಗದೀಶ್ವರರಾದ ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮನು ಅತ್ಯಂತ ಪ್ರಬಲವಾದ ಆ ಸೈನ್ಯವನ್ನು ನಾಶಮಾಡಿಬಿಟ್ಟರು. ಅವರಿಗೆ ಇದೊಂದು ಆಟವೇ ಆಗಿತ್ತು.

ತನ್ನ ಮೂಲಕವಾಗಿ ಹೊಂದಲ್ಪಟ್ಟ ಶಕ್ತಿಯನ್ನು ಹೊಂದಿದ ಮುಚುಕುಂದ ಮಹಾರಾಜನು ಶ್ರೀಕೃಷ್ಣನಿಂದ ಯುದ್ಧದಲ್ಲಿ ಭಸ್ಮವಾಗಿ ಹೋದವನು ಯಾವನೋ, ಯದು ಕಲಿಯನ್ನು ಕಪ್ಪಾದ ಮ್ಲೇಚ್ಛನಾಗಿ, ಕಾಲಯವನನೆಂಬ ಹೆಸರು ಪಡೆದಿದ್ದನೋ.

ಕಾಲಯವನನೆಂಬ ರಾಕ್ಷಸನನ್ನು ಮುಚುಕುಂದ ಮಹಾರಾಜನ ಮೂಲಕ ಸುಟ್ಟುಹಾಕಿದನು ಸ್ವಾಮಿ. ಈ ಪ್ರಸಂಗವು ಶ್ರೀ ಭಾಗವತದ ದಶಮ ಸ್ಕಂಧದದಲ್ಲಿ ಹೀಗೆ ವರ್ಣಿಸಲ್ಪಟ್ಟಿದೆ.

ಸ ಇಕ್ಷ್ವಾಕು ಕುಲೇ ಜಾತೋ ಮಾನ್ಧಾತೃ ತನಯೋ ಮಹಾನ್ ।
ಮುಚುಕುಂದ ಇತಿ ಖ್ಯಾತೋ ಬ್ರಹ್ಮಣ್ಯಃ ಸತ್ಯಸಙ್ಗರಃ ॥
ಸ ಯಾಚಿತಃ ಸುರಗಣೈರಿಂದ್ರಾದ್ಯೈರಾತ್ಮರಕ್ಷಣೇ ।
ಅಸುರೇಭ್ಯಃ ಪರಿತ್ರಸ್ತೈ ಸ್ತದ್ರಕ್ಷಾಂ ಸೋಽಕರೋಚ್ಚಿರಮ್ ॥

ಇಕ್ಷ್ವಾಕುವಂಶದ ಮಾಂಧಾತ ಮಹಾರಾಜನ ಪುತ್ರನಾದ ಮುಚುಕುಂದ ರಾಜನು. ಬ್ರಾಹ್ಮಣಪ್ರಿಯನೂ, ಸತ್ಯನಿಷ್ಠನೂ, ಸಂಗ್ರಾಮ ವಿಜಯಿಯೂ ಆಗಿದ್ದನು. ಇಂದ್ರಾದಿ ದೇವತೆಗಳು ಒಮ್ಮೆ ಅಸುರರಿಂದ ಭಯಗೊಂಡಿದ್ದಾಗ ಅವರು ತಮ್ಮ ರಕ್ಷಣೆಗಾಗಿ ಮುಚುಕುಂದ ರಾಜನನ್ನು ಪ್ರಾರ್ಥಿಸಿಕೊಂಡರು. ಅವನು ಬಹಳ ದಿನಗಳವರೆಗೆ ದೇವತೆಗಳನ್ನು ರಾಕ್ಷಸರಿಂದ ರಕ್ಷಿಸಿದನು.

ಯಾರು ತರುವ ಮ್ಲೇಚ್ಛ ದೇಶ ಸಿಂಹಗಳು ಸಾವಿರ, ಕೋಟಿ ಸಾವಿರ ಜನರು ಬಲರಾಮನೊಡನೆ ಸೇರಿ ತನ್ನ ಭುಜಬಲದಿಂದ ನಾಶಪಡಿಸಿದನೋ?

ಜರಾಸಂಧನಿಂದ ಕಳುಹಿಸಲ್ಪಟ್ಟ ಅನೇಕ ಕೋಟಿ ಕೋಟಿ ವೀರರುಗಳನ್ನೆಲ್ಲಾ ಬಲರಾಮ ಕೃಷ್ಣರು ಕ್ಷಣ ಮಾತ್ರದಲ್ಲಿ ತಮ್ಮ ಭುಜಬಲದಿಂದ ಸಡೆಬಡಿದರು.

ಆ ದುಷ್ಟನು (ಜರಾಸಂಧನಿಂದ ಕಳಿಸಲ್ಪಟ್ಟು) ಮಧುರೆಯನ್ನು ಎದುರಿಸಿ ಬರುವಾಗ, ಯಾದವರುಗಳಿಗೆ ಬರುವ ಅಪಕೀರ್ತಿಯನ್ನು ಗಾರ್ಗ್ಯನೆಂಬ ಪುರೋಹಿತನ ಶಾಪದ ಫಲವೆಂದು ತಿಳಿದಿದ್ದುದರಿಂದ ಋಷಿಯ ತಪಸ್ಸಿನ ಪ್ರಭಾವವನ್ನು ನಿವಾರಣೆ ಮಾಡಲು ಇಚ್ಛಿಸದೆ ತಟಸ್ಥನಾಗಿ ಇದ್ದನು.

ಈ ಹಿಂದೆ ಗಾರ್ಗ್ಯರೆಂಬ ಪುರೋಹಿತರು ಯಾದವರುಗಳಿಗೆ ಕೊಟ್ಟಿದ್ದ ಶಾಪದಿಂದ (ಅವರಿಗೆ ಯಾದವರು ಅಪಮಾನ ಮಾಡಿದ್ದರಿಂದ ಅವರು ಯಾದವರನ್ನು ಶಪಿಸಿದ್ದರು). ಈಗ ಜರಾಸಂಧನಿಂದ ಉಪಟಳ ಉಂಟಾಗುತ್ತಿದೆಯೆಂದು ಶ್ರೀಕೃಷ್ಣನು ಅರಿತಿದ್ದನು. ಆದುದರಿಂದ ಜರಾಸಂಧನನ್ನು ಸಂಪೂರ್ಣವಾಗಿ ನಿಗ್ರಹಿಸಲು ಇಚ್ಛೆಪಡದೆ, ತಟಸ್ಥರಾಗಿಯೇ ಇದ್ದು, ಋಷಿ ವಾಕ್ಯವನ್ನು ಗೌರವಿಸಿದನು.

ನಿಸರ್ಗ ನಿಧ್ಯೈಯ ಪರಾವರಃ ಸಂ ಮಂತ್ರ್ಯ ಸಾರ್ಧಂ ಯದುವಂಶ ವೃದ್ಧೈಃ।
ವಿಹಾತುಮಿಚ್ಛನ್ ಮಧುರಾಂ ಶುಭಂಯುಃ ಸಂಕಲ್ಪಯಾಮಾಸ ಪುರಿಂ ತದನ್ಯಾಂ॥೯॥

ಸಹಜವಾಗಿ ಮುಂದೆ ಹಿಂದೆ, ಮೇಲೆ ಕೆಳಗೆ, ಎಲ್ಲಾ ಅರಿತಿರುವ ಭಗವಂತನು ಶುಭವನ್ನೇ ಉಂಟು ಮಾಡುವವನಾಗಿ, ಯದುವಂಶದ ಹಿರಿಯರುಗಳೊಡನೆ, ಆಲೋಚಿಸಿ, ಮಧುರೆಯನ್ನು ಬಿಟ್ಟು ಬಿಡಬೇಕೆಂದು ಮನಸ್ಸನ್ನು ಮಾಡಿ ಬೇರೆ ನಗರಿಯನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿದನು.

ಪದೇ ಪದೇ ಜರಾಸಂಧಾದಿ ಮಗಧ ವೀರರಿಂದ ಮಧುರೆಗೆ ಉಂಟಾಗುತ್ತಿರುವ ಬಾಧೆಯ ಬಗ್ಗೆ ಚಿಂತಿಸಿ, ಮಧುರೆಯನ್ನು ಬಿಟ್ಟು ಬೇರೆಲ್ಲಾದರೂ ಯಾದವರೆಲ್ಲರೂ ವಲಸೆ ಹೋಗುವುದು ಅವರಿಗೆ ಕ್ಷೇಮಕರವೆಂದು ಭಾವಿಸಿ, ಇದರ ಬಗ್ಗೆ ಮಧುರೆಯಲ್ಲಿದ್ದ ಹಿರಿಯರೆಲ್ಲರೊಡನೆ ಮಂತ್ರಾಲೋಚನೆ ನಡೆಸಿದನು. ಸರ್ವಸ್ಮಾತ್ ಪರನಾದ ಸ್ವಾಮಿಯು.

ಸ್ವಯಂ ಪ್ರವೃತ್ತೈರಪಿ ವೃಷ್ಣಿವೀರೈ ಸ್ತ್ರಾತುಂ ಕ್ಷಮಾಂ ತ್ರಾಸಿತ ದೈತ್ಯಲೋಕಃ।
ಅನನ್ಯ ಸಾಧಾರಣ ಶಕ್ತಿರನ್ಯಾಂ ಸಂಕಲ್ಪಯಾಮಾಸ ಪುರೀಂ ಮಪೂರ್ವಾಂ ॥೧೦॥

ಅಸುರ ಸಮೂಹಗಳನ್ನು ಅಡಗಿಸುವವನೂ, ಬೇರಾರು ಸಮರಿಲ್ಲದ ಬಲ ಹೊಂದಿದವನಾದ ಶ್ರೀಕೃಷ್ಣನು ಯದುವೀರರು, ತಾವುಗಳೇ ತಮ್ಮನ್ನು ಅನಾಯಾಸವಾಗಿ ಕಾಪಾಡಿಕೊಳ್ಳುವ ಹಾಗೆ, ಅಪೂರ್ವವಾದ ಒಂದು ನಗರವನ್ನು ಕಟ್ಟಲು ಯೋಚಿಸಿದನು.

ಇದಕ್ಕಾಗಿ ಯದು ವೀರರಿಗೆ ಬೇರೆ ಯಾರಿಂದಲೂ ತೊಂದರೆ ಬಾರದ ಹಾಗೆ ಹಾಗೂ ತಮ್ಮನ್ನು ತಾವೇ ಎಲ್ಲಾ ಕಾಲದಲ್ಲೂ ರಕ್ಷಿಸಿಕೊಳ್ಳಬಹುದಾದಂತಹ ಸುಭದ್ರವಾದ ನಗರವನ್ನು ಬಹಳ ಅಪೂರ್ವವಾಗಿಯೂ ಇರಬೇಕೆಂಬ ತನ್ನ ಯೋಜನೆಯನ್ನು ಅವರೆಲ್ಲರ ಮುಂದೆ ಇಟ್ಟನು.

ಜಹೌ ಧರಿತ್ರೀಮಿವ ಜಾಮದಗ್ನ್ಯಃ ಕೌಲೀ ಮಯೋಧ್ಯಾಮಿವ ಕೋಸಲೇಂದ್ರಃ।
ಅಚಿಂತ್ಯವೃತ್ತಿರ್ಮಧುರಾ ಮನಿಂದ್ಯಾಂ ತಜ್ಜನ್ಮ ಜಾತೋ ಮಹಿಮಾ ತು ನೈನಾಂ॥೧೧॥

ತದ ನಂತರ, ಪರಶುರಾಮನು ಕ್ಷತ್ರಿಯರುಗಳನ್ನೆಲ್ಲಾ ಕೊಂದು ರಕ್ಷಿಸಿದ ಭೂಮಿಯನ್ನು ತಾನೇ ಬಿಟ್ಟು ಕೊಟ್ಟ ಹಾಗೆ, ಕೋಸಲೇಶ್ವರನಾದ ಚಕ್ರವರ್ತಿ ಕುಮಾರನಾದ (ಶ್ರೀರಾಮನು) ತನಗೆ ಬಂದ ರಾಜ್ಯವನ್ನು ತಾನೇ ತಮ್ಮನಿಗೆ ಬಿಟ್ಟುಕೊಟ್ಟ ಹಾಗೆ, ಕೊಂಡಾಡಲ್ಪಡುವ ಮಧುರೆಯನ್ನು ಯಾರಿಂದಲೂ ಅರಿಯಲಾಗದ ಮಾರ್ಗಗಳನ್ನನುಸರಿಸುವ ಶ್ರೀಕೃಷ್ಣನು ಬಿಟ್ಟು ಬಿಟ್ಟನು. ಆದರೂ ಅವನು ಅವತರಿಸಿದ ಸ್ಥಳವೆಂದು ಅದಕ್ಕೆ (ಮಧುರೆಗೆ) ಏರ್ಪಟ್ಟಿರುವ ಹಿರಿಮೆ ಎಂದಿಗೂ ಕಡಿಮೆಯಾಗದು.

ಭೂಮಿಯನ್ನು ವಶಪಡಿಸಿಕೊಂಡ ಅನೇಕ ಮಹನೀಯರು ತಾವಾಗಿಯೇ ಅದನ್ನು ಇತರರಿಗೆ ಬಿಟ್ಟುಕೊಟ್ಟಿದ್ದಾರೆ. ಅದೇ ರೀತಿ ಶ್ರೀಕೃಷ್ಣನು ತನ್ನ ಜನ್ಮ ಸ್ಥಳವಾದ ಮಧುರೆಯನ್ನು ತ್ಯಜಿಸಿಹೋದನು. ಆದರೆ ಇಂದಿಗೂ "ಮಧುರೆಯ" ಪ್ರಸಿದ್ಧಿ ಕಡಿಮೆಯಾಗಿಲ್ಲ. ತೀರ್ಥಯಾತ್ರೆಗೆಂದು ಉತ್ತರ ಭಾರತದಲ್ಲಿ ಪ್ರವಾಸ ಮಾಡುವವರೆಲ್ಲಾ ಮಧುರೆಯಲ್ಲಿ "ಶ್ರೀಕೃಷ್ಣಜನ್ಮಭೂಮಿ"ಯೆಂಬ ಪವಿತ್ರ ಸ್ಥಳವನ್ನು ಸಂದರ್ಶಿಸಿ, ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

ಪರಿತ್ಯಜನ್ನಪ್ಯಭಿಮತ್ಯ ತಿಷ್ಠನ್ ವ್ಯಾಪ್ತಃ ಶುಭಂ ವ್ಯಕ್ತಿಪದಂ ತದಗ್ರ್ಯಂ।
ಅನನ್ಯಭಾಜಾಮಭಜತ್ ಸ ದೇವ ಸ್ತಸ್ಮಿನ್ ಸತಾಂ ಪ್ರಾಗಿವ ಸಂನಿಧಾನಂ ॥೧೨॥

ತಾನು ಅವತರಿಸುವುದಕ್ಕೆ ಮುಂಚೆಯೇ ಬಹಳ ಕಾಲದಿಂದ ಸಪ್ತಮೋಕ್ಷ ಪುರಿಗಳಲ್ಲಿ ಒಂದೆಂದು ಪ್ರಸಿದ್ಧವಾದ ಉತ್ತಮವಾದ ಮಧುರೆಯನ್ನು ಬಿಟ್ಟರೂ, ಅದನ್ನು ಅಭಿಮಾನಿಸಿ, ಮನಸ್ಸಿನಿಂದ ಅಲ್ಲೇ ಇದ್ದು ಒಂದೇ ಮನಸ್ಸಿನಿಂದ ತನ್ನನ್ನು ಭಜಿಸುವವರ ಸತ್ಪುರುಷರುಗಳಿಗೆಲ್ಲಾ ಅಲ್ಲಿಯೇ ತನ್ನ ಸನ್ನಿಧಾನವನ್ನು ಕೊಡುವವನಾಗಿಯೇ ಇದ್ದಾನೆ.

ಇವತ್ತಿಗೂ ಮಧುರೆಯನ್ನು ಸಂದರ್ಶಿಸುವವರೆಲ್ಲಾ ಪುಣ್ಯಶಾಲಿಗಳೇ ಸರಿ. ಏಕೆಂದರೆ ಅಲ್ಲಿ ಶ್ರೀಕೃಷ್ಣನು ನಿತ್ಯ ಸನ್ನಿಹಿತನಾಗಿದ್ದಾನೆ. ಮಧುರೆಯನ್ನು ಎಲ್ಲರೂ ಜೀವನದಲ್ಲಿ ಒಂದು ಬಾರಿ ಸಂದರ್ಶಿಸಲೇಬೇಕು.

ಅಹಂ ಸ ಪದ್ಮಾಮಿವ ವಾಹೀನಿಂ ತಾಂ ವೀತೇಂದು ತಾರಾಮಿವ ವಾಸತೇಯಿಂ।
ಸಮಾಪ್ತ ಕಾರ್ಯಾಮಿವ ಸತ್ರ ಶಾಲಾಂ ಶೂನ್ಯಾಂ ಪುರೀಂ ಪ್ರೇಕ್ಷ್ಯ ಜಗಾಮ ಶೌರಿಃ ॥೧೩॥

ಶೂನ್ಯವಾಗಿ ಪಕ್ಷಿಗಳನ್ನೂ ತಾವರೆಗಳನ್ನೂ ಬಿಟ್ಟ ನದಿಗಳಂತೆ ಚಂದ್ರನನ್ನೂ, ನಕ್ಷತ್ರಗಳನ್ನೂ ಕಳೆದುಕೊಂಡ ರಾತ್ರಿಯಂತೆಯೂ, ಕಾರ್ಯವೆಲ್ಲವೂ ಮುಗಿದುಹೋದ ಯಾಗ ಭೂಮಿ ಯಂತೆ, ಇರುವ ಪಟ್ಟಣವನ್ನು ವೀಕ್ಷಿಸಿ, ಶ್ರೀಕೃಷ್ಣನು ಹೊರಟುಬಿಟ್ಟನು.

ಎಂಥಹವರಿಗಾದರೂ, ತಾನು ಜನಿಸಿದ ಸ್ಥಳವನ್ನು ತ್ಯಜಸುವುದು ಸ್ವಲ್ಪ ಕಷ್ಟಕರವಾದ ಸಂಗತಿಯೇ. ಆದರೆ ಅನಿವಾರ್ಯ ಕಾರಣಗಳಿಂದಾಗಿ ಶ್ರೀಕೃಷ್ಣನು ಮಧುರೆಯನ್ನು ತ್ಯಜಿಸ ಬೇಕಾಯಿತು. ಯಾದವರೆಲ್ಲರೂ ತೊರೆದ ನಗರಿಯನ್ನು ಕಡೆಯಬಾರಿಗೆ ವೀಕ್ಷಿಸಿ, ಸ್ವಾಮಿಯು ಹೊಸ ನಗರಿಯತ್ತ ಹೊರಟನು. ಶ್ರೀಕೃಷ್ಣನಿಲ್ಲದ ಮಧುರೆಯು ಶೋಭೆಯನ್ನು ಕಳೆದು ಕೊಂಡಿತು.

ಚಿತ್ರಾವಶೇಷ ದ್ವಿರದಾಶ್ವಯೋಧಾ ಶುಕಾದಿ ಸಂಭಾಷಣ ಶೇಷ ಸೂಕ್ತಾ।
ಮಣಿ ಪ್ರಭಾ ಶೇಷಿತ ದೀಪಿಕಾ ಸಾ ನಾಮ್ನೈವ ಮಾಧುರ್ಯವತೀ ತದಾಽಽಸೀತ್ ॥೧೪॥

ಆ ನಗರಿಯಲ್ಲಿ ಆನೆ, ಕುದುರೆ, ಕಾಲಾಳುಗಳು ಎಂಬ ಸೈನ್ಯಗಳು ಚಿತ್ರಗಳಲ್ಲಿ ಬರೆದಂತೆ ನಿಂತಿದ್ದವು. ಒಳ್ಳೆಯ ಮಾತುಗಳು ಎನ್ನುವುದು ಗಿಣಿ ಮೊದಲಾದುವುಗಳ ಮಾತಿನಲ್ಲಿ ಮಾತ್ರ ನಿಂತಿತು. ದೀಪಗಳೆನ್ನುವುದು ರಥಗಳ ಮಣಿಕಾಂತಿಯಾಗಿ ಮಾತ್ರ ಇದ್ದವು. ಆದ್ದರಿಂದ ಎಲ್ಲರೂ ಹೊರಟು ನಿಂತಿದ್ದರಿಂದ ಹೆಸರಿಗೆ ಮಾತ್ರ ಮಧುರೆಯಾಯಿತು. (ಹೆಸರಿನಲ್ಲಿ ಮಾತ್ರ ಮಾಧುರ್ಯ ಪದವಿತ್ತು). ಆ ನಗರದಲ್ಲಿ ಮಾಧುರ್ಯ ಕಳೆದುಹೋಯಿತು.

ಮಧುರೆಯ ನಂತರದ ಸ್ಥಿತಿಯನ್ನು ವರ್ಣಿಸಿದ್ದಾರೆ. ಮಧುರ ಎಂಬ ಪದದಲ್ಲಿ ಮಾಧುರ್ಯವಿದ್ದರೂ ಅದು ಈಗ ಕೇವಲ ಮಾತಿನಲ್ಲಿ ಮಾತ್ರ ಉಳಿಯಿತು. ಅದರ ಸರ್ವ

ವೈಭವವೂ ಶ್ರೀಕೃಷ್ಣನ ಹಾಗೆಯೇ ಹೊರಟುಹೋಯಿತು. ಯಾವ ರೀತಿ ಜನಾನುರಾಗಿಯಾಗಿದ್ದ ರಾಜನಿಲ್ಲದ ಊರು ಬರಡಾಗುವುದೋ ಅದೇ ರೀತಿ ಸಕಲ ಮನುಜರ ನಯನಗಳಿಗೂ ಆನಂದದಾಯಕನಾಗಿದ್ದ ಶ್ರೀಕೃಷ್ಣನಿಲ್ಲದ ಮಧುರೆ ಬರಡಾಗಿ ಸತ್ವವನ್ನು ಕಳೆದುಕೊಂಡಿತು. ಒಂದು ರೀತಿ ನಿರ್ಜನ ಪ್ರದೇಶವೇ ಆಯಿತು.

ಪ್ರಾಚೀ ಮನಾಧೃತ್ಯ ನಿವಾಸ ಭೂಮಿಂ ಪ್ರತ್ಯಂಙ್ಮುಖೀ ಪದ್ಧತಿ ಮಾದದಾನಾ ।
ಸ್ಥಿರಂ ಪದಂ ಪ್ರಾಪ್ತುಮಿಯೇಷ ಸೇನಾ ಸತ್ವಾಧಿಕಾಧೀರಿವ ಸಾತ್ವತಾನಾಂ ॥೧೫॥

ಶ್ರೀಕೃಷ್ಣನ ಸೇವ್ಯವಾದುದು, ಸಾತ್ವತವೆಂಬ ಪಾಂಚರಾತ್ರದಲ್ಲಿ ಆಸಕ್ತಿಹೊಂದಿದ ಭಾಗವತಬುದ್ಧಿಯಂತೆ ಸತ್ವವು ಅಧಿಕವಾಗಿ, ಅಲ್ಪಬುದ್ಧಿಗಳನ್ನು ಬಿಟ್ಟು ಉತ್ತಮವಾದ ಮಾರ್ಗವನ್ನು ಹಿಡಿದು ಸ್ಥಿರವಾದ ಜಾಗವನ್ನು ಸೇರಲು ಬಯಸಿದಂತಿತ್ತು.

(ಕೆಳಗೆ ಇರುವ ಮಧುರೆಯನ್ನು ಬಿಟ್ಟು, ಮೇಲೆ ಇರುವ ದ್ವಾರಕೆಯನ್ನು ಸೇರುವುದಕ್ಕಾಗಿ ಮೇಲುಮಾರ್ಗವಾಗಿ ನಡೆದುಬಂದಿತು).

ಮಧುರೆಯಲ್ಲಿ ಸ್ವಲ್ಪ ಮಟ್ಟಿಗೆ ತಾಮಸ ಗುಣವುಳ್ಳ ಕಂಸಾದಿಗಳ ಪ್ರಾಬಲ್ಯ ಇತ್ತು. ಶ್ರೀಕೃಷ್ಣನು ಆ ಊರನ್ನು ತೊರೆದು, ಇನ್ನೂ ಉತ್ತಮ ನಗರವನ್ನು ಅರಸಿಕೊಂಡು ಹೊರಟಿದ್ದು ಸತ್ವಗುಣ ಉಳ್ಳವರು, ತಾಮಸ ಗುಣವನ್ನು ತ್ಯಜಿಸಿ, ಕೇವಲ ಸಾತ್ವತ ಗುಣ ಸ್ವಭಾವದಿಂದ ಕೂಡಿದವರನ್ನು ಸೇರಲು ತವಕದಿಂದ ಇರುವಂತೆ ಇತ್ತು. 'ಭಗವಚ್ಛಾಸ್ತ್ರ ಎಂಬ ಪಾಂಚರಾತ್ರವನ್ನು ಅನುಸರಿಸುವವರನ್ನೂ ಸಾತ್ವತ'ರೆನ್ನುತ್ತಾರೆ. ಈಗ ಮಧುರೆಯಲ್ಲಿ ಇರುವವರೆಲ್ಲರೂ ಶ್ರೀಕೃಷ್ಣನ ಹಿಂದೆ ಹೊರಟಿದ್ದರಿಂದ, ಅವರೆಲ್ಲರೂ ಸಾತ್ವತರೆನಿಸಿದರು.

ಉತ್ಸಾರಯನ್ ಧೂಲಿಮಿವಾಗ್ರಯಾಯಿ ವಿನಿರ್ದಿಶನ್ ವಾಸ ಮಿವಾತಿದೂರಾತ್ ।
ಪ್ರತ್ಯುದ್ಗಮಾಯ ತ್ವರಯನ್ನಿವಾಬ್ಧಿಂ ಮರುದ್‌ವವೌ ಮಂದ ವಿಧೂತ ಕೇತುಃ ॥೧೬॥

ಮಂದಮಾರುತವಾದುದು ಧ್ವಜಪಟವನ್ನು ಅಲ್ಲಾಡಿಸಿಕೊಂಡು, ಹಿಂದಿನಿಂದ ಮುಂದಕ್ಕೆ ಬೀಸಿತು. ಅದು ಮುಂದೆ ಹೋಗುವುದು ಧೂಳನ್ನು ಎಬ್ಬಿಸಲೋ, ಬಹಳ ದೂರದಲ್ಲಿರುವ (ದ್ವಾರಕೆಯೆಂಬ) ವಾಸ ಸ್ಥಾನವನ್ನು ತೋರಿಸಲೋ ಬರುವ ಸೈನ್ಯವನ್ನೂ ಎದುರುಕೊಂಡು ನಾಶಪಡಿಸಲು ಉತ್ತರ ಸಮುದ್ರವನ್ನು ಕ್ಷೋಭೆಗೊಳಿಸಲೋ ಎಂದು ಊಹಿಸುವಂತಿತ್ತು.

ಮಧುರೆಯಿಂದ ದೂರದಲ್ಲಿರುವ ದ್ವಾರಕೆಗೂ ಬರಲು ಶ್ರೀಕೃಷ್ಣನು ನಿರ್ಧರಿಸಿ, ಆ ದಿಕ್ಕಿನಲ್ಲಿ ಸೈನ್ಯವನ್ನು ನಡೆಸಿಕೊಂಡು ಬಂದನು. ದಾರಿಯು ದುರ್ಗಮವಾಗಿತ್ತು. ಅವನ ಅಪಾರವಾದ ಸೈನ್ಯವು ಮತ್ತೊಂದು ಸಮುದ್ರವೆಂಬಂತೆ ತೋರುತ್ತಾ ದ್ವಾರಕೆಯನ್ನು ಸುತ್ತುವರೆದಿರುವ ಉತ್ತಮ ಸಮುದ್ರಕ್ಕೆ ಪೈಪೋಟಿಯನ್ನು ನಡೆಸುವಂತಿತ್ತು.

ಪ್ರಭೂತ ಭೀಮೋನ್ನತ ನಾಗ ನಕ್ರಾ ಪಾರಿಪ್ಲವೈರೂರ್ಮಿಮತಿ ತುರಂಗೈಃ ।
ಅಪೂರ್ವವಾರಾನಿಧಿ ಮಾವ್ರಜಂತಿ ಸ್ವಯಂ ತಥಾ ಶೌರಿ ಚಮೂರಭೂತ್ಸಾ ॥೧೭॥

ಉತ್ತರ ಸಮುದ್ರವನ್ನು ಸೇರಲು ಆ ಶ್ರೀಕೃಷ್ಣನ ಸೈನ್ಯವಾದುದು ತಾನು ಒಂದು ಸಮುದ್ರವಂಬಂತೆ ಇತ್ತು. ಸಮುದ್ರದಲ್ಲಿ ಮೊಸಳೆಗಳೂ ತುಂಬಿರುತ್ತವೆ. ಅಲ್ಲಿ ಭಯಂಕರವಾದ ದೊಡ್ಡದಾದ ಆನೆಗಳೂ, ಮೊಸಳೆಗಳಂತೆ ಎಲ್ಲೆಲ್ಲೂ ತಿರುಗುತ್ತವೆ. ಕುಮಿದಾಡುವ ಕುದುರೆಗಳೂ ಆನೆಗಳಂತೆ ಇರುತ್ತವೆ. ಆ ಸಮುದ್ರದ ಹಾಗೆ ಇದೂ ಸಹ ಅಪೂರ್ವವಾಗಿತ್ತು.

ಆ ಬೃಹತ್ ಸೈನ್ಯವನ್ನು ಸ್ವಾಮಿ ದೇಶಿಕರು ಸಮುದ್ರಕ್ಕೆ ಹೋಲಿಸಿದ್ದಾರೆ. ಸಮುದ್ರದಲ್ಲಿ ಮೊಸಳೆಗಳೂ, ದೊಡ್ಡ ದೊಡ್ಡ ಆನೆಗಳೂ ಭಯಂಕರವಾಗಿರುತ್ತವೆ. ಅದೇ ರೀತಿ ಶ್ರೀಕೃಷ್ಣನ ಯದು ವಂಶದ ಸೈನ್ಯದಲ್ಲೂ ದೊಡ್ಡ ದೊಡ್ಡ ಕುದುರೆಗಳೂ, ಆನೆಗಳೂ ಇದ್ದು, ದ್ವಿತೀಯ ಸಾಗರದಂತೆ ಭಾಸವಾಗುತ್ತಿತ್ತು. ಪಶ್ಚಿಮ ಸಮುದ್ರದಲ್ಲಿ ದ್ವಾರಕೆಯು ಇದೆ. ಸಮುದ್ರದಲ್ಲಿಯೇ ನಗರ ನಿರ್ಮಿಸಲು ಸ್ವಾಮಿಯು ಬಯಸಿದನು.

ಸಮೇತಿ ಮಾಂ ಸಾತ್ವತ ವಾಹಿನೀಯಂ ಸಿಷ್ಣಾಸಯಾ ಹಂತ ಜಿಗೀಷಯಾ ವಾ ।
ಇತಿ ಪ್ರಭೂತಾದ್ಭುತ ವೈಭವಾಂ ತಾಮುಪೇಂದ್ರನಾಥಾ ಮುದಧೀಃ ಶಶಂಕೇ ॥೧೮॥

ಸತ್ವತ ವಂಶವೆಂಬ ಯದುವಂಶಕ್ಕೆ ಸೇರಿದ ಈ ವಾಹಿನಿಯು ಇದು ನದಿಯಲ್ಲ, ಇದು ಬರುವುದು ನಮ್ಮಲ್ಲಿ ಸ್ನಾನ ಮಾಡುವ ಉದ್ದೇಶದಿಂದಲೋ ಅಥವಾ ಗೆಲ್ಲಲೋ ಎಂದು ಅದರ ಹಿರಿಮೆಯನ್ನು ಕಂಡು ಸಮುದ್ರವು ಕಲಕಿಹೋಯಿತು.

ಆ ಮಹತ್ತಾದ ಸೈನ್ಯವನ್ನು ನೋಡಿ, ಪಶ್ಚಿಮ ಸಮುದ್ರವು ಗಾಭರಿಗೊಂಡಿತು. ಎಲ್ಲರೂ ಸಮುದ್ರದಲ್ಲಿ ಸ್ನಾನ ಮಾಡಿ ಪಾವನರಾಗಲು ಬರುತ್ತಾರೆ. ಸಮುದ್ರ ಸ್ನಾನ ಶ್ರೇಷ್ಠ. ಆದರೆ ಈ ಸೈನ್ಯವು ಸಮುದ್ರವನ್ನೇ ಗೆಲ್ಲಲು ಬರುವಂತಿದೆ. ಸಮುದ್ರಕ್ಕೆ ಭಯ ಉಂಟಾದರೂ, ಶ್ರೀಕೃಷ್ಣನೇ ಅದರ ನೇತಾವೆಂದರಿತು, ಆ ಸೈನ್ಯವನ್ನು ಗೌರವದಿಂದ ಕಂಡಿತು.

ಗತಾಗತೈರ್ಯೋರ್ಽದ್ಧಮಿವ ಪ್ರವೃತ್ತೈರಾಸೀದತಾಂ ಅದ್ಭುತ ಭೀಮ ವೇಗೌ ।
ಮಿಥಃ ಪ್ರತಿಚ್ಛಂದ ತಯಾ ಪ್ರತೀಕ್ಶ್ಯೌ ವೇಲಾವನೆ ಸೈನ್ಯ ಮಹಾ ಸಮುದ್ರೌ ॥೧೯॥

ಕಡಲ ತೀರದ ಕಾಡಿನಲ್ಲಿ ಸೇನೆ ಸೇರಿದ ಹೊತ್ತು. ಸಮುದ್ರವು, ಸೈನ್ಯವು ಒಂದಕ್ಕೊಂದು ಸಮನಾಗಿ, ಸೇನೆಯು ಕಡಲ ತೀರದಲ್ಲಿ ವೇಗವಾಗಿ ನಡೆದಾಗ, ಸಮುದ್ರವು ಅಲೆಗಳನ್ನು ತೀರಕ್ಕೆ ಅಪ್ಪಳಿಸಿದಾಗ, ಭಯಂಕರವಾದ, ಯುದ್ಧವು ಅವುಗಳಿಗೆ ನಡೆಯುವಂತೆ ತೋರಿತು.

ಸಮುದ್ರದಲ್ಲಿ ಅಲೆಗಳು ದಡಕ್ಕೆ ಅಪ್ಪಳಿಸುತ್ತವೆ. ಯಾದವ ಸೈನ್ಯವು ಸಮುದ್ರ ತೀರದಲ್ಲಿ ನಡೆದು ಬರುವಾಗ, ಆ ಸೈನ್ಯದ ಪದಾಘಾತವೂ ಸಹ ತೀರದಲ್ಲಿ ಅಪ್ಪಳಿಸುವಂತೆ ಇತ್ತು. ಎರಡಕ್ಕೂ ಸ್ಪರ್ಧೆ ನಡೆಯುತ್ತಿದೆಯೇನೋ ಎನ್ನುವಂತಿತ್ತು.

ಮಹೀಯಸಾ ಸೈನ್ಯರವೇಣ ಸದ್ಯಃ ಪಯೋಧಿರಂತರ್ಹಿತ ತೀವ್ರಘೋಷಃ।
ಪ್ರಕಂಪಮಾನೋ ಭೃಶಮಾವಭಾಸೇ ಭಯೇನ ತೂಷ್ಣೀಮಿವ ಭವ್ಯಮಾನಃ॥೨೦॥

ಮತ್ತೆ ಅಧಿಕವಾದ ಸೇನೆಯಿಂದ ಉಂಟಾದ ಕಲರವ ಶಬ್ದವು ಸಮುದ್ರದ ಅಲೆಗಳ ಶಬ್ದವನ್ನು ಅಡಗಿಸುವಂತೆ ಇದ್ದು, ಆಶ್ಚರ್ಯದಿಂದಲೂ ಸಮುದ್ರವು ನಡುಗಿ ಮಾತಾಡದೆ ಇರುವಂತೆ ಇತ್ತು.

ಪುನಃ ಸಮುದ್ರದ ಅಲೆಗಳಿಗೂ, ಸೈನ್ಯದ ಕಲರವ ಶಬ್ದಕ್ಕೂ ನಡೆಯುವ ಪೈಪೋಟಿಯನ್ನು ವರ್ಣಿಸುತ್ತಾರೆ. ಸೈನ್ಯದ ಗದ್ದಲವೇ ಜೋರಾಗಿದ್ದು, ಅಲೆಗಳ ಶಬ್ದವು ಅದರಲ್ಲಿ ಅಡಗಿಹೋದಂತಿತ್ತು. ವಿಧವಿಧವಾಗಿ ಉಪಮಾನಗಳನ್ನು ಕೊಡುವುದರಲ್ಲಿ ಆಚಾರ್ಯರು ನಿಸ್ಸೀಮರು.

ಪ್ರತೀಕ್ಷ್ಯ ಸೇನಾ ಮುಪಧಾವ ಮಾನಾಂ ಪತ್ಯಾ ನದೀನಾಂ ಪ್ರಣಿಧೀಯಮಾನಃ।
ಪ್ರಕಾಶಯನ್ ಸರ್ವ ಜನಾನುಕೂಲ್ಯಂ ಸಮೀರಣೋ ಮಂದತರಂ ಚಚಾರ॥೨೧॥

ಅಲ್ಲಿ ಅನುಕೂಲವಾಗಿ ಮಂದಮಾರುತವು ಬೀಸುತ್ತಿತ್ತು. ಅದು ತನ್ನನ್ನು ಎದುರಿಸಿ ಬರುತ್ತಿರುವ ಸೇನೆಯನ್ನು ನೋಡಿ ನದಿಗಳಿಗೆಲ್ಲಾ ನಾಯಕನಾದ ಸಮುದ್ರರಾಜನು ಕಳುಹಿಸಿರುವ ಚಾರನು ಎಲ್ಲಾ ಜನಗಳಿಗೂ ಅನುಕೂಲನಾಗಿರುವ ತನ್ನನ್ನು ಪರಿಚಯಿಸುವ ರೀತಿಯಲ್ಲಿ ವಿಜೃಂಭಿಸುತ್ತಿತ್ತು.

ಆ ಸಮುದ್ರದ ತೀರದಲ್ಲಿ ಮಂದ ಮಾರುತವು ಹಿತವಾಗಿ ಬೀಸುತ್ತಿತ್ತು. ಅದು ಆ ಅಗಾಧವಾದ ಸೈನ್ಯವನ್ನು ನೋಡಿ, ತನ್ನನ್ನು ತಾನೇ ಅವರೆಲ್ಲರನ್ನೂ ಪರಿಚಯ ಮಾಡಿಕೊಳ್ಳಬೇಕಾದ ಚಾರನೆಂದೂ, ಸಮುದ್ರ ರಾಜನಿಂದ ಅವರೆಲ್ಲರನ್ನೂ ಸ್ವಾಗತಿಸಲು ಕಳುಹಿಸಲ್ಪಟ್ಟವನೆಂದೂ ಭಾವಿಸಿ, ಹಿತವಾಗಿ ಬೀಸಿ, ಎಲ್ಲರಿಗೂ ಸಂತೋಷವನ್ನುಂಟು ಮಾಡುತ್ತಿತ್ತು.

ವದನ್ನಿವ ಸ್ವಾಗತ ಮಾಗತೇಭ್ಯಃ ಪ್ರಭೂತ ಸಂತೋಷ ಭವೈಃ ಪ್ರಣಾದೈಃ।
ತರಂಗಹಸ್ತಪ್ರಹಿತೈಃ ಸರಸ್ವಾನ್ ಅಭ್ಯರ್ಚಯಾಮಾಸ ಯದೂನ್ ಪಯೋಭಿಃ ॥೨೨॥

ಅತ್ಯಂತ ಸಂತೋಷದಿಂದ ದೊಡ್ಡ ಗರ್ಜನೆ ಮಾಡಿಕೊಂಡು ಬಂದವರಿಗೆ ಸುಸ್ವಾಗತವನ್ನು ಕೋರುವ ರೀತಿ ಸಮುದ್ರವಾದುದು ಅಲೆಗಳ ಮೂಲಕ, ಅರ್ಘ್ಯ ಪಾದ್ಯಾದಿಗಳನ್ನು ನೀಡಿ ಯದು ವಂಶೀಯರನ್ನು ಅರ್ಚನೆ ಮಾಡಿದಂತಿತ್ತು.

ಸಾಕ್ಷಾತ್ ಸರ್ವೇಶ್ವರನೇ ತನ್ನ ಬಳಿಗೆ ಬಂದಿರುವಾಗ, ಅವನನ್ನು ವಿಧಿವತ್ತಾಗಿ ಸ್ವಾಗತಿಸಬೇಕೆಂದು ಭಾವಿಸಿ, ಸಮುದ್ರರಾಜನು ಅಲೆಗಳ ಶಬ್ದದಿಂದ ಸ್ವಾಗತ ಕೋರಿ, ಅಲೆಗಳ ಮೂಲಕ ಅರ್ಘ್ಯ ಪಾದ್ಯಾದಿಗಳನ್ನು ಸಮರ್ಪಿಸಿದನು. ಮನೆಗೆ ಬಂದವರನ್ನು ಕುಶಲ ಪ್ರಶ್ನೆಗಳಿಂದ ವಿಚಾರಿಸಿ, ಅವರಿಗೆ ಅತಿಥಿ ಸತ್ಕಾರ ಮಾಡುವಂತೆ ಸಮುದ್ರ ರಾಜನು ತನ್ನ ಅಲೆಗಳ ಘರ್ಜನೆಯಿಂದ ಶ್ರೀಕೃಷ್ಣನನ್ನು ಪೂಜಿಸಿದನು.

ಚಿರ ಪ್ರಯಾತಂ ಪರಿಹೃತ್ಯ ಶಯ್ಯಾಂ ಅಭ್ಯಾಗತಂ ವಾರಿಧಿರಾದರೇಣ।
ಮಿಥಃ ಸಮಯೋಜಿತ ವೀಚಿ ಹಸ್ತಃ ಪ್ರಾಯಃ ಪ್ರಭುಂ ಪ್ರಾರ್ಥಯತ ಪ್ರಸಾದಂ ॥೨೩॥

ಸಮುದ್ರವಾದುದು ಮಲಗಿದ್ದ ತನ್ನನ್ನು ಬಿಟ್ಟು ಅನೇಕ ಕಾಲ ಹೊರಗೆ ಹೋಗಿ ಮತ್ತೆ ಬಂದ ಸ್ವಾಮಿಯನ್ನು ಪ್ರೀತಿಯಿಂದ ತನ್ನ ಅಲೆಯ ಕೈಗಳನ್ನು ಒಂದುಗೂಡಿಸಿ, ಅಂಜಲಿ ಮಾಡಿ ಕೃಪೆ ಮಾಡಬೇಕೆಂದು ಪ್ರಾರ್ಥಿಸುವಂತಿತ್ತು.

ಕ್ಷೀರ ಸಾಗರಶಾಯಿಯಾದ ಶ್ರೀಮನ್ನಾರಾಯಣನು ತನ್ನನ್ನು ಬಿಟ್ಟು ಮಧುರೆಯಲ್ಲಿ ವತಾರ ಮಾಡಿ ಮತ್ತೆ ತನ್ನಲ್ಲಿಗೆ ಬಂದಿದ್ದಾನೆಂದು ಅಂಜಲಿಹಸ್ತನಾಗಿ ಸಮುದ್ರರಾಜನು ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದನು. ಅಲೆಗಳಿಂದ. **"ಏಷ ನಾರಾಯಣ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ ನಾಗ ಪರ್ಯಂಕ ಉತ್ಸೃಜ್ಯ ಹ್ಯಾಗತೋ ಮಧುರಾಂ ಪುರಿ"** ಎಂಬ ಶ್ಲೋಕವು ಅನುಸಂಧೇಯವು.

ನಿವೇಶ್ಯ ಸೇನಾ ಮುದಧೇಃ ಸಮೀಪೇ ತಾಲಾಂಗ ಸಂಭಾವಿತ ರಾಜತಾಲೇ।
ದಯಾರ್ದ್ರ ಮೇಘೋಪಮ ದೇಹ ಭೂಮಾ ವಿಶ್ವಂಭರೋ ವಿಶ್ವಮಯಾಂಚಕಾರ॥೨೪॥

ಕರುಣೆ ತುಂಬಿ ಮೇಘದಂತೆ ದಿವ್ಯದೇಹವುಳ್ಳವನೂ, ಜಗತ್ತನ್ನೆಲ್ಲಾ ಪೋಷಿಸುವವನೂ ಆದ ಶ್ರೀಕೃಷ್ಣನು ಬನ್ನಿಮರವನ್ನು ಧ್ವಜವಾಗಿ ಉಳ್ಳ ಬಲರಾಮನಿಂದ ಗೌರವಿಸಲ್ಪಟ್ಟ ಉತ್ತಮ ವಾದ ಬನ್ನಿಮರಗಳ ನೆರಳಿನಲ್ಲಿ ಸಮುದ್ರದ ತೀರದಲ್ಲಿ ಸೇನೆಯನ್ನು ತಂಗಲು ಬಿಟ್ಟು ವಿಶ್ರಮಿಸಿದನು.

ಸಮುದ್ರದ ತೀರಕ್ಕೆ ಮಧುರೆಯಿಂದ ಹೊರಟ ಸೈನ್ಯ ಬಂದಿಳಿಯಿತು. ಸಮುದ್ರ ತೀರದಲ್ಲಿ ಬನ್ನಿಮರಗಳು ಸಾಲಾಗಿದ್ದವು. ಸೇನೆಯನ್ನು ಅವುಗಳ ನೆರಳಿನಲ್ಲಿ ತಂಗಲು ಬೀಡು ಬಿಡಿಸಿ, ಸ್ವಾಮಿಯೂ, ಬಲರಾಮನೊಡಗೂಡಿ ವಿಶ್ರಾಂತಿ ಪಡೆದನು. ಬಲರಾಮನು ತನ್ನ ಧ್ವಜದಲ್ಲಿ ಬನ್ನಿಮರವನ್ನು ಚಿಹ್ನೆಯಾಗಿ ಇಟ್ಟುಕೊಂಡಿದ್ದಾನೆ. ಬನ್ನಿಮರವು ರಾಜರ ಸಂಕೇತದ ಮರ.

ಕದಾಚಿದಾತ್ಮಾನ ಮವಾಪ್ತರತ್ನಂ ಕಪಾಲಿನಂ ಚಂದ್ರಕಲಾ ವತಂಸಂ।
ಕ್ಷಮಂ ಸುಭಿಕ್ಷಾಂ ಚ ದಿವಂ ವಿಧಾತುಂ ಧ್ಯಾತಾಗತಂ ಸಿಂಧು ಮಥಾದಿದೇಶ॥೨೫॥

ನಂತರ ಕೃಷ್ಣನು ಒಂದೊಂದು ಸಮಯದಲ್ಲೂ ತನ್ನನ್ನು ಸೇವಿಸುವ ರತ್ನಗಳಿಂದ ಕೂಡಿ ರುದ್ರನು ಚಂದ್ರನನ್ನು ಮುಡಿದವನಾಗಿ, ಸ್ವರ್ಗಲೋಕದಲ್ಲಿ ಒಳ್ಳೆಯ ಆಹಾರವನ್ನು ಹೊಂದಿ ದವರಾಗಿ, ಸ್ನೇಹಿತನಂತೆ ಇದ್ದ ಸಮುದ್ರರಾಜನನ್ನು ಸ್ಮರಿಸಿದಾಗ, ಅವನೂ ಒಡನೆ ಬಂದು ನಿಂತಾಗ ಅವನಿಗೆ ಆಜ್ಞೆ ಮಾಡಿದನು.

ಸಮಸ್ತ ಜಗತ್ತನ್ನೂ ನಿಯಮಿಸುವ ಸ್ವಾಮಿಗೆ ಸಮುದ್ರರಾಜನಿಗೆ ಆಜ್ಞಾಪಿಸುವುದು ಕಷ್ಟಕರವಾದ ಕೆಲಸವಲ್ಲ. ಆದರೂ ಲೋಕ ಮಾರ್ಯಾದೆಯನ್ನು ಮೀರಲು ಇಚ್ಛಿಸದೆ, ಸಮುದ್ರ ರಾಜನನ್ನು ಕರೆದು ಅವನು ಮಾಡಬೇಕಾದ ಕೆಲಸವನ್ನು ತಿಳಿಸಿದನು.

ಅನಾರತ ಪ್ರಾಪ್ತ ಜಯೋದ್ಯಮಾನಾಂ ಧರ್ಮೇ ನಿಜಂ ಧಾರಯತಾಂ ಯದೂನಾಂ
ಅಪತ್ಯ ರಕ್ಷೋಚಿತ ಮಂತರೀಪಂ ದಿವ್ಯೋಪಮಂ ದೇಯಮಿಹ ತ್ವಯೇತಿ ॥೨೬॥

ವಿಶ್ರಾಂತಿಯಿಲ್ಲದೆ ಎಲ್ಲರನ್ನೂ ಗೆಲ್ಲುವುದರಲ್ಲಿ ಪ್ರಯತ್ನಪಟ್ಟು ಬರುವವರು, ತಮ್ಮ ಧರ್ಮವನ್ನು ಕಾಪಾಡುವವರಾದ, ಯದುವಂಶದವರಿಗೆ ತಮ್ಮ ಪ್ರಜೆಗಳನ್ನು ಕಾಪಾಡುವುದಕ್ಕಾಗಿ ದೇವಲೋಕದಂತಹ ಒಂದು ದ್ವೀಪವನ್ನು ಕಟ್ಟಿಕೊಡಬೇಕೆಂದನು.

ಯದುವಂಶದ ವೀರರು, ಈಗ ತಮ್ಮ ರಾಜಧಾನಿಯಾದ ಮಧುರೆಯನ್ನು ಬಿಟ್ಟು ಸಮುದ್ರ ತೀರಕ್ಕೆ ಬಂದಿದ್ದಾರೆ. ಅವರು ತಮ್ಮ ಮುಂದಿನ ಜೀವನವನ್ನು ಆನಂದವಾಗಿ ಕಳೆಯಲು ಒಂದು ಸುಂದರ ನಗರ ಅವಶ್ಯವಿದೆ. ಅದು ದುರ್ಗಮವಾದ ದ್ವೀಪವಾಗಿರಬೇಕು. ಅಂತಹ ಒಂದು ನಗರವನ್ನು ನಿರ್ಮಿಸಬೇಕೆಂದು ಆಜ್ಞಾಪಿಸಿದನು.

ಸ ತಸ್ಯ ದಿಕ್ಪಾಲ ನಿವಾಸ ಕಲ್ಪಾಂ ವಿಧಿತ್ಸತೋ ವೃಷ್ಣಿಪುರೀಂ ವಿಶಾಲಾಂ।
ಅಗಾಧ ಪಾಥಃ ಪರಿಖಾಭಿ ಗುಪ್ತಂ ದ್ವೀಪಂ ದದೌ ದುರ್ಗವಿಧಾನ ಯೋಗ್ಯಂ ॥೨೭॥

ಸಮುದ್ರ ರಾಜನೂ, ಇಂದ್ರಾದಿ ದಿಕ್ಪಾಲಕರುಗಳ ನಗರಿಗಳಿಗೆ ಸಮನಾದ ವಿಶಾಲವಾದ ಯದು ನಗರಿಯನ್ನು ನಿರ್ಮಾಣ ಮಾಡಲು ಆಜ್ಞಾಪಿಸಿದ ಶ್ರೀಕೃಷ್ಣನಿಗೆ ಎಲ್ಲಾ ಅನುಕೂಲಗಳನ್ನು ಹೊಂದಿದ್ದ, ಅನೇಕ ದುರ್ಗಗಳನ್ನು ಹೊಂದಿ, ಸುಭದ್ರವಾಗಿದ್ದ ಒಂದು ಪುರವನ್ನು ನಿರ್ಮಿಸಿ ಸ್ವಾಮಿಗೆ ಅರ್ಪಣೆ ಮಾಡಿದನು. (ಸಮುದ್ರ ಮಧ್ಯದಲ್ಲಿ ದ್ವೀಪವನ್ನು)

ಆ ಕೂಡಲೇ ಸಮುದ್ರ ರಾಜನು ಶ್ರೀಕೃಷ್ಣನ ಆಜ್ಞೆಯನ್ನು ಶಿರಸಾವಹಿಸಿ, ಸಮುದ್ರ ಮಧ್ಯದಲ್ಲಿ ಯಾರಿಂದಲೂ ಆಕ್ರಮಣ ಮಾಡಲು ಸಾಧ್ಯವಾಗದಂತಹ ಸಕಲ ಸೌಭಾಗ್ಯಗಳನ್ನು ಹೊಂದಿದ್ದ ಒಂದು ಸುಂದರ ದ್ವೀಪವನ್ನು ಯಾದವರಿಗಾಗಿ ನಿರ್ಮಿಸಿ, ಸ್ವಾಮಿಗೆ ಸಮರ್ಪಿಸಿದನು. ಆ ದ್ವೀಪವು ದೇವತೆಗಳ ನಗರಿಗಳಿಗಿಂತ ಉತ್ಕೃಷ್ಟವಾಗಿತ್ತು.

ಬಲೋತ್ತರಾಣಾಮಪಿ ಬಹ್ವಮಿತ್ರಂ ಸ್ಫೀತಂ ಯದೂನಾಂ ಕುಲಮೀಕ್ಷಮಾಣಃ।
ಅವಂಧ್ಯಯನ್ ವಿಶ್ವವಿತ್ ಅರ್ಥಶಾಸ್ತ್ರಂ ದುರಾಕ್ರಮಂ ದುರ್ಗಮಿಯೇಷಕರ್ತುಂ॥೨೮॥

ಅತ್ಯಂತ ಬಲಶಾಲಿಗಳಾಗಿದ್ದ ಯದುಗಳ ದೊಡ್ಡ ಕುಲವು ಹಗೆಗಳಾಗಿ ಅನೇಕರನ್ನು ಹೊಂದಿದ್ದನ್ನು ಕಂಡಿದ್ದ ಶ್ರೀಕೃಷ್ಣನು ಎಲ್ಲವನ್ನೂ ತಿಳಿದ ಸರ್ವಜ್ಞನಾದ್ದರಿಂದ ಇತರರು ಪ್ರವೇಶಿಸದ ಹಾಗೆ, (ಶಾಸ್ತ್ರ ನಿಯಮಗಳ ಪ್ರಕಾರ ಯಾರಿಂದಲೂ ಆಕ್ರಮಣ ಮಾಡಲು ಸಾಧ್ಯವಾಗದಂತಹ) ದುರ್ಗಗಳನ್ನು ನಿರ್ಮಿಸಲು ಇಚ್ಛಿಸಿದನು.

ಆ ದ್ವೀಪದ ಒಳಗೆಯೂ ಸಹ, ದುರ್ಗಮವಾದ ಕೋಟೆಗಳನ್ನು ನಿರ್ಮಿಸಿ, ಶಾಸ್ತ್ರದ ಪ್ರಕಾರ ಗೃಹಗಳನ್ನು ಕಟ್ಟಿದನು. ಇಲ್ಲಿ ಅರ್ಥಶಾಸ್ತ್ರವೆಂದರೆ ನೀತಿಶಾಸ್ತ್ರವೆಂದರ್ಥ. ಕೋಟೆ ಕೊತ್ತಲುಗಳನ್ನು ಕಟ್ಟುವಾಗ ಕೆಲವು ನಿಯಮಗಳನ್ನು ಅನುಸರಿಸಬೇಕು. ಅದೆಲ್ಲವನ್ನೂ ಸ್ವಾಮಿಯು ಅನುಸರಿಸಿದನು. ('ಏಕಃ ಶತಂ ಶೋಧಯತಿ ಪ್ರಾಕಾರಸ್ಥೋ ಧನುರ್ಧರಃ ಶತಂ ಶತ ಸಹಸ್ರಂ ವಾ ತಸ್ಮಾತ್ ದುರ್ಗಂ ವಿಧೀಯತೇ' ಎಂದು ನೀತಿಶಾಸ್ತ್ರವಾಕ್ಯವಿದೆ.)

ಸ ಶಾಸಿತಾ ಶಾಸ್ತ್ರಮನುಪ್ರತಸ್ಥೆ ಕರ್ಮಾऽऽದಧೇ ಕರ್ಮಫಲ ಪ್ರಧಾತಾ
ಪ್ರಭುಃ ಸ್ವಬುದ್ಧ್ಯೈವ ಜಗಂತಿ ಗೋಪ್ತುಂ ಕುರ್ವೀತ ಬಾಹ್ಯೈರಪಿ ಕಿಂ ನ ಗುಪ್ತಿಂ ॥೨೯॥

ತಾನೇ ಶಾಸ್ತ್ರಗಳನ್ನು ಪ್ರಜೆಗಳಿಗಾಗಿ ಏರ್ಪಡಿಸಿ, ಕರ್ಮವಶನಾಗದೇ ಇದ್ದರೂ ಶಾಸ್ತ್ರಾನುಸಾರವಾಗಿ ನಡೆಯುತ್ತಿದ್ದನು. ಎಲ್ಲರ ಕರ್ಮಗಳಿಗೂ ತಾನೇ ಫಲ ನೀಡುವವ ನಾಗಿದ್ದರೂ ಸಹ ತಾನೇ ಸತ್ಕರ್ಮಗಳನ್ನು ನಡೆಸುತ್ತಾ ಬಂದನು.

ಗೀತೆಯಲ್ಲಿ ಭಗವಂತನು "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೇ ಜನಾಃ" ಎಂಬುದಾಗಿ ಹಿರಿಯರು ಅನುಸರಿಸುವ ಮಾರ್ಗವನ್ನು ಇತರರು ಅನುಸರಿಸುತ್ತಾರೆ ಎಂದಿದ್ದಾನೆ. ಅದೇ ರೀತಿ, ತಾನು ಏರ್ಪಡಿಸಿದ ಶಾಸ್ತ್ರವನ್ನು ತಾನೇ ಅನುಸರಿಸಿ, ಲೋಕಕ್ಕೆ ಮಾದರಿ ಯಾಗಿದ್ದಾನೆ ಸ್ವಾಮಿ. ಶಾಸ್ತ್ರವಿಧಿಗಳಿಗನುಸಾರವಾಗಿ ನಗರವು ನಿರ್ಮಾಣವಾಯಿತು.

ಪ್ರಭೂತ ರತ್ನದ್ಯುತಿ ಕೇಸರಂ ತತ್ ಪ್ರವಾಲ ಪತ್ರೌಘ ಪರೀತ ಪಾರ್ಶ್ವಂ।
ಸ್ಥಾನಂ ಹರೇರಿಷ್ಟತಮಂ ತದಾಸೀತ್ ಸಂಭೂತಿರಾಜೀವ ಮಿವೇಂದಿರಾಯಾಃ ॥೨೦॥

ಆ ದ್ವೀಪವಾದುದು, ಮಹಾಲಕ್ಷ್ಮಿ ಉದಯಿಸಿದ ತಾವರೆ ಹೂವಿನಂತೆ ಶೋಭಿಸು ತ್ತಿತ್ತು. ಉತ್ತಮವಾದ ರತ್ನದ ಕಾಂತಿಗಳೆಲ್ಲವೂ ಒಟ್ಟಾಗಿ ಸೇರಿದಂತೆಯೂ, ಎಲ್ಲಾ ಪಕ್ಕ ಗಳಲ್ಲೂ ಪವಳಗಳು ಹೊಳೆಯುವ ಹಾಗೆ ಜ್ವಲಿಸುತ್ತಿದ್ದು ಶ್ರೀಕೃಷ್ಣನಿಗೆ ಆ ದ್ವೀಪವು ಅತ್ಯಂತ ಪ್ರಿಯವಾಗಿತ್ತು.

ಆ ದ್ವಾರಾವತಿಯು, ಬಹು ಸುಂದರವಾದ ದ್ವೀಪವಾಗಿ ರೂಪುಗೊಂಡು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯವಾಯಿತು.

ಪ್ರಚೋದಿತಸ್ತಸ್ಯ ಚ ವಿಶ್ವಕರ್ಮಾ ನಾಥ ಪ್ರಸತ್ತ್ಯಾ ನಲಿನಾಸನಾದ್ಯೈಃ।
ರಥ್ಯಾದಿ ವೈಚಿತ್ರ್ಯವತೀಂ ವಿತೇನೇ ರಾಶಿಂ ಗುಣಾನಾಮಿವ ರಾಜಧಾನೀಂ ॥೨೧॥
ಸ ಶಿಲ್ಪವಿದ್ಯಾಂ ವಿಧಿನೋಪದಿಷ್ಟಾಂ ಮಶೇಷತೋ ನೂನ ಮಧೀತ್ಯ ದಾಕ್ಷ್ಯಾತ್।
ಶುಭಾನಿ ತಸ್ಯಾಂ ಭವನಾನಿ ಕರ್ತುಂ ಸೌಧೇಷು ದಿವ್ಯೇಷು ಚಕಾರ ಯೋಗ್ಯಾಂ॥೨೨॥

ಬ್ರಹ್ಮನೇ ಮೊದಲಾದ ದೇವತೆಗಳಿಂದ ಪ್ರೇರೇಪಿಸಲ್ಪಟ್ಟು ದೇವಶಿಲ್ಪಿಯಾದ ವಿಶ್ವಕರ್ಮನು ಸ್ವಾಮಿಯಾದ ಶ್ರೀಕೃಷ್ಣನ ಅನುಗ್ರಹವನ್ನು ಹೊಂದಿ, ರಸ್ತೆಗಳು ಉತ್ತಮವಾದ ಗೋಪುರಗಳು

ಎಲ್ಲವನ್ನೂ ಹೊಂದಿದ್ದ ವಿಚಿತ್ರವಾದ (ರಥಗಳು) ಗುಣಗಳಿಂದ ಕೂಡಿದ್ದ, ರಾಜಧಾನಿಯನ್ನು ನಿರ್ಮಿಸಿದನು.

ಆ ದ್ವಾರಕೆಯು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದರಿಂದ ಸರ್ವಗುಣಗಳಿಂದಲೂ ಶೋಭಿಸುತ್ತಿತ್ತು. ಒಂದು ಆದರ್ಶ ನಗರವು ಯಾವ ರೀತಿ ಇರಬೇಕೋ ಆ ರೀತಿ ಇತ್ತು ಆ ನಗರ.

ಆ ವಿಶ್ವಕರ್ಮನು ಬ್ರಹ್ಮನಿಂದ ಉಪದೇಶಿಸಲ್ಪಟ್ಟಿದ್ದ ಶಿಲ್ಪವಿದ್ಯೆಯನ್ನು ಪೂರ್ಣವಾಗಿ ಕಲಿತು, ಶುಭವಾದ ಭವನಗಳನ್ನೂ, ದ್ವಾರಕೆಯಲ್ಲಿ ಕಟ್ಟುವುದಕ್ಕೆ ಬೇಕಾಗುವ ಎಲ್ಲವನ್ನೂ ಹೊಂದಿ, ದೇವಲೋಕದಲ್ಲಿ ಇರುವ ಸೌಧಗಳಿಗೆ ಸಮಾನವಾದ ಸೌಧಗಳನ್ನು ನಿರ್ಮಾಣ ಮಾಡಿದನು.

ಗತಾ ಗತಾರ್ಥಂ ಹರಿವಾಹಿನೀನಾಂ ಸೇತುಂ ಚ ಯೋಗೇನ ಬಬಂಧ ಸಿಂಧೌ।
ಚಕಾರ ದಿಗ್ಭಾಗ ವಿಮೂಢತಾಂ ಯಃ ಪ್ರತ್ಯರ್ಥಿನಾಂ ಚಕ್ರಧರ ಪ್ರಭಾವಾತ್ ॥೭೩॥

ಆ ದ್ವೀಪಕ್ಕೂ ಇತರ ಭೂಮಿಗೂ ಸೇನೆಗಳು ಹೋಗಲು ಬರಲು ಸೂಕ್ತವಾದ ಒಂದು ಸೇತುವೆಯನ್ನು ತನ್ನ ಯೋಗಶಕ್ತಿಯಿಂದ ಸಮುದ್ರದಲ್ಲಿ ಕಟ್ಟಿದನು. ಚಕ್ರಧರನು ಅದ್ಭುತವಾದ ಶಕ್ತಿಯಿಂದ ಈ ಸೇತುವೆಯಾದುದು ಅಲ್ಲಿಗೆ ಬಂದ ಶತ್ರುಗಳಿಗೆ, ಇದು ಈ ದಿಕ್ಕಿನಲ್ಲಿದೆ ಎಂಬುದು ತಿಳಿಯದಂತೆ ನಿರ್ಮಿಸಲ್ಪಟ್ಟಿತು.

ದ್ವಾರಕೆಯು ಸಮುದ್ರ ಮಧ್ಯದಲ್ಲಿ ಇದ್ದ ದ್ವೀಪವಾಗಿದ್ದರಿಂದ ಸಮುದ್ರದಾಚೆ ಇರುವ ಭೂ ಪ್ರದೇಶಕ್ಕೆ ಹೋಗಿ ಬರುವ ಒಂದು ಸಂಪರ್ಕವನ್ನು ಶ್ರೀಕೃಷ್ಣನು ತನ್ನ ಯೋಗಶಕ್ತಿಯಿಂದ ನಿರ್ಮಿಸಿದನು. ಆ ಸೇತುವೆ ಅಲ್ಲಿ ಇದೆಯೆಂದು ಯಾರಿಗೂ ತಿಳಿಯದ ರೀತಿ ಅದು ಇತ್ತು ಭಗವಂತನು ಸರ್ವಶಕ್ತನಲ್ಲವೇ?

ನಲೇನ ಪೂರ್ವಂ ಸ್ವಸುತೇನ ದೃಷ್ಟಾತ್ ನವೀನ ಮನ್ಯೂನ ತರಂ ಸ್ವಕ್ಲ್ಪ್ತಂ।
ಸಮೀಕ್ಷ್ಯ ತುಷ್ಯನ್ನಪಿ ವಿಶ್ವಕರ್ಮಾ ನಾಥಾಯ ರೋಚೇತ ನ ವೇತ್ಯತಾಮ್ಯತ್॥೭೪॥

ಇಲ್ಲಿ ಯಾವ ಕೊರೆಯೂ ಇರಬಾರದೆಂದು ಯೋಚಿಸಿ, ತನ್ನ ಮಗನಾದ (ಶ್ರೀರಾಮಾವತಾರದಲ್ಲಿ) ನಳನ ಮುಖಾಂತರ, ಕಟ್ಟಿದ ಸೇತುವೆಗೆ ಮೇಲ್ಪಟ್ಟದ ಸೇತುವೆಯನ್ನು ಕಟ್ಟಿ ವಿಶ್ವಕರ್ಮನು ಇದು ನಾಥನಾದ ಶ್ರೀಕೃಷ್ಣನಿಗೆ ಹಿಡಿಸುವುದೋ ಇಲ್ಲವೋ ಎಂದು ಚಿಂತಿಸಿದನು.

ಶ್ರೀರಾಮಾವತಾರದಲ್ಲಿ ಲಂಕೆಗೆ ಹೋಗಲು ಸಮುದ್ರಕ್ಕೆ ವಿಶ್ವಕರ್ಮನ ಮಗನಾದ ನಳನು ಒಂದು ಅದ್ಭುತವಾದ ಸೇತುವೆಯನ್ನು ಕಟ್ಟಿದ್ದನು. ಈಗ ಸಾಕ್ಷಾತ್ ವಿಶ್ವಕರ್ಮನೇ ನಿರ್ಮಿಸಿದ ಈ ದ್ವಾರಕೆಯ ಸೇತುವೆಯು ತ್ರೇತಾಯುಗದ ಸೇತುವೆಗಳಿಗಿಂತ ಮೇಲಾದ ಸೇತುವೆಯಾಗಿದ್ದಿತು.

ಸ ಸೇತುರಾಸ್ಕಂದಿತ ಕೂಲಯುಗ್ಮಃ ಸಂಕಲ್ಪಿತೋ ವಾಸವ ಲೋಕತಕ್ಷ್ಣಾ।
ಮಹಾಪುರಿಂ ತಾಂಚ ಮಹೀಂ ಚ ಮಾತುಂ
ಮಧ್ಯೇ ತುಲಾದಂಡ ಇವಾರ್ಪಿತೋಽಭೂತ್ ॥೨೫॥

ಇಂದ್ರಲೋಕಕ್ಕೆ ಶಿಲ್ಪಿಯಾದ ವಿಶ್ವಕರ್ಮನಿಂದ ಸಂಕಲ್ಪಿಸಿಲ್ಪಟ್ಟ ಎರಡು ತೀರಗಳನ್ನೂ ಸೇರಿಸಿದ ಸೇತುವೆಯಾದುದು, ಭೂಮಿಯನ್ನೂ ದ್ವಾರಕೆಯನ್ನೂ ಮಧ್ಯದಲ್ಲಿ ಅಳೆಯುವುದಕ್ಕೋಸ್ಕರ ಇಟ್ಟ ಒಂದು ತುಲಾದಂಡ (ಅಳತೆಯ ಕೋಲಿನಂತೆ)ದಂತೆ ಬೆಳಗಿತು.

ಸಮುದ್ರ ಮಧ್ಯದಲ್ಲಿರುವ ದ್ವಾರಕೆಗೂ ಭೂಮಿಗೂ ಎಷ್ಟು ದೂರವಿದೆ ಎನ್ನುವುದನ್ನು ಆ ಸೇತುವೆ ಅಳೆದು ತೋರಿಸುತ್ತಿತ್ತು. ಅದು ಅಳತೆಗೋಲಾಯಿತು.

ನಿವೇದಿತಾಂ ನಿರ್ಜರ ಶಿಲ್ಪಿನೈವ ಸ್ವಯಂ ಚಮತ್ಕಾರವತಾ ಸುಕ್ಲ್ಪಾಂ।
ಅದೃಷ್ಟ ಪೂರ್ವಾಮಿವ ವಿಶ್ವದರ್ಶೀಂ ದೃಷ್ಟಿಃ ಸತಾಂ ದ್ರುಷ್ಟುಮಿಯೇಷನಾಥಃ॥೨೬॥

ದೇವಶಿಲ್ಪಿಯು ತನ್ನ ಸಾಮರ್ಥ್ಯವನ್ನೆಲ್ಲಾ ಇಟ್ಟು ನಿರ್ಮಿಸಿ ಅದನ್ನು ಸ್ವಾಮಿಗೆ ನಿವೇದನ ಮಾಡಿದಾಗ, ಎಲ್ಲವನ್ನೂ ಯಾವಾಗಲೂ ನೋಡುವವನಾದ, ಎಲ್ಲರಿಗೂ ಕಣ್ಣಾಗಿ ಇರುವ ಶ್ರೀ ಕೃಷ್ಣನು ಕಾಣದುದನ್ನು ಕಂಡವನಂತೆ ಆಶ್ಚರ್ಯದಿಂದ ನೋಡಿದನು.

ತಾನು ಕಟ್ಟಿದ ಸೇತುವೆಯನ್ನು ವಿಶ್ವಕರ್ಮನು ದ್ವಾರಕೆಗೂ ಶ್ರೀಕೃಷ್ಣನಿಗೆ ಭಕ್ತಿ ಪುರಸ್ಸರವಾಗಿ ಸಮರ್ಪಿಸಿದನು. ಸರ್ವಜ್ಞನಾದ ಸ್ವಾಮಿಯು ಆ ದಿವ್ಯ ಸೇತುವೆಯನ್ನು ನೋಡಿ, ಆಶ್ಚರ್ಯಗೊಂಡು ವಿಶ್ವಕರ್ಮನನ್ನು ಶ್ಲಾಘಿಸಿದನು.

ನಿಜ ಪ್ರತಿಚ್ಛಂದ ನಿದರ್ಶನೀಯಾಂ ಮೃಗ್ಯೋಪಮಾನಾಂತರ ಮೃಷ್ಟಕಾಂತಿಂ।
ಉದನ್ವತಾ ದತ್ತ ಕರೇಣ ದೇವಃ ಪ್ರದರ್ಶಿತಾಂ ಪೂರ್ವ ಮವೈಕ್ಷತೈನಾಂ ॥೨೭॥

ಸಮುದ್ರದಲ್ಲಿ ಬಿದ್ದ ತನ್ನ ನೆರಳನ್ನು ತನಗೆ ಸಮನಾಗಿ ಭಾವಿಸಿ, ಬೇರೆ ಯಾವ ಅಭಿಮಾನವೂ ಇಲ್ಲದ ಕಾಂತಿಯಿಂದ ಕೂಡಿದ್ದ ಆ ರಾಜಧಾನಿಯನ್ನು ಶ್ರೀಕೃಷ್ಣನು ತನ್ನನ್ನು ಕೈಮುಗಿದು ಬರಮಾಡಿಕೊಳ್ಳುವ ಸಮುದ್ರರಾಜನ ಮುಂದೆ ಪ್ರದರ್ಶಿಸಿದನು.

ಆ ದ್ವಾರಕೆಯು ಶ್ರೀಕೃಷ್ಣನ ಪ್ರತಿಬಿಂಬದಂತೆ ಇತ್ತು. ಶ್ರೀಕೃಷ್ಣನೇ ನಗರ ರೂಪದಲ್ಲಿ ಬಂದಿರುವನೇನೋ ಎಂಬಂತಿತ್ತು. ಸಮುದ್ರಕ್ಕೆ ಸಮಾನವಾಗಿದ್ದ ಆ ನಗರವನ್ನು ಸ್ವಾಮಿಯು ಸಮುದ್ರರಾಜನಿಗೆ ತೋರಿಸಿದನು.

ಅನನ್ಯ ದೃಷ್ಟಿಂ ನಗರೀ ನವೀನಾ ವಿಸ್ಮೇರತಾಂ ವಿಶ್ವಪತಿಂ ನಿನಾಯ ।
ಸ್ವಯಂ ಪ್ರಭೈಃ ಸೌಧ ಭರೈರುದಾರೈ ಸ್ತುಂಗೈಃ ಸುಮೇರೋರಿವ ರತ್ನಶೃಂಗೈಃ ॥೨೮॥

ಬೇರೆ ಎಲ್ಲಿಯೂ, ತನ್ನ ಕಣ್ಣನ್ನು ಇಡದೆ, ಅದನ್ನೇ ನೋಡುತ್ತಿರುವ ಶ್ರೀಕೃಷ್ಣನಿಗೆ ಆ ನಗರಿಯು ಮೇರು ಪರ್ವತದ ಮಣಿಮಯವಾದ ಶಿಖರಗಳಂತೆ ಕಾಂತಿ ಸೂಸುವ ಸುಂದರವಾದ ಉಪ್ಪರಿಗೆಗಳನ್ನು ಹೊಂದಿ ವಿಸ್ಮಯವಾಗುವ ಹಾಗೆ ಇತ್ತು. ದ್ವಾರಕೆಯ ಸೌಂದರ್ಯ ಅದ್ಭುತವಾಗಿತ್ತು.

ತಾಮದ್ಭುತಾಂ ತಾರಕಿತಾಗ್ರ ಸೌಧಾಂ ಧರ್ಮಸ್ಯ ಪೂರ್ಣಾಮಿವ ಯೋಗಸಿದ್ಧಿಂ।
ಸ ಪೌರಭೃತ್ಯ ಸಮಯಾನ್ವವೇಕ್ಷಿ ವಿವೇಶ ವೃಷ್ಣ್ಯಂಧಕ ಯೂಥನಾಥಃ ॥೩೯॥

ಉಪ್ಪರಿಗೆಗಳ ತುದಿಯಲ್ಲಿ ನಕ್ಷತ್ರಗಳು (ದೀಪಗಳಂತೆ) ಬೆಳಗುತ್ತಿದ್ದು, ಯೋಗದ ಮೂಲಕ ಧರ್ಮವು ಪೂರ್ಣವಾಗಿ ಫಲ ನೀಡಿದಂತೆ ಪಂಚಾಂಗದಲ್ಲಿ ಒಳ್ಳೆಯ ದಿನ ನೋಡಿ, ನಗರದ ಜನಗಳು ಎಲ್ಲರೊಡನೆಯೂ ವೃಷ್ಣಿ, ಅಂಧಕರು ಎಂಬ ಯದುವಂಶದ ಮುಖ್ಯಸ್ಥರೊಡನೆ ನಾಥನಾದ ಶ್ರೀಕೃಷ್ಣನು ನಗರ ಪ್ರವೇಶ ಮಾಡಿದನು.

ಗೃಹ ಪ್ರವೇಶ ಮಾಡಲು ಒಳ್ಳೆಯ ದಿನವನ್ನು ನೋಡುವಂತೆ, ನಗರ ಪ್ರವೇಶಕ್ಕೂ ತಿಥಿ, ವಾರ, ನಕ್ಷತ್ರ, ಇತ್ಯಾದಿಗಳನ್ನು ಹಿರಿಯರೊಡನೆ, ವೈದಿಕರೊಡನೆ ಚರ್ಚೆ ಮಾಡಿ, ಒಂದು ಶುಭ ಮುಹೂರ್ತದಲ್ಲಿ ದ್ವಾರಕಾನಗರಿಯನ್ನು ಎಲ್ಲರೊಡನೆ ಶ್ರೀಕೃಷ್ಣನು ಪ್ರವೇಶ ಮಾಡಿದನು. ಶಾಸ್ತ್ರ ಪ್ರಕಾರ ವಾಸ್ತು ಶಮನಗಳನ್ನೂ ಸಹ ಮಾಡಿದನು.

ಪರೇಣ ನಾಕಂ ಪ್ರಲಯಾನಭಿಜ್ಞಾಮಧೀಯತೇ ಯಸ್ಯ ಪುರೀಂ ಅಚಿಂತ್ಯಾಂ।
ಸ ಲೋಕನಾಥೋ ವಿಧಧೇ ಸನಾಥಾಂ ದುರಾಧಿಕಾಂ ದ್ವಾರವತಿಂ ದಿವ್ರೋಪಿ॥೪೦॥

ಸ್ವರ್ಗಾದಿ ಲೋಕಗಳಿಗೆಲ್ಲಾ (ಪ್ರಕೃತಿಗೆ) ಮೇಲಾದ, ಪ್ರಳಯಕ್ಕೆ ಸ್ಥಳವಿಲ್ಲದ, ಬುದ್ಧಿಗೆ ನಿಲುಕದ ವೈಕುಂಠ ನಗರವು ಯಾವನಿಂದ ಸೇವಿಸಲ್ಪಡುವುದೋ, ಆ ಲೋಕನಾಥನಾದ ಸ್ವಾಮಿಯೇ ಅದಕ್ಕೂ ಮೇಲಾದ (ವೈಕುಂಠಕ್ಕೂ ಮಿಗಿಲಾದ) ದ್ವಾರಕೆಯನ್ನು ತನ್ನಿಂದ ನಾಥನನ್ನಾಗಿ ಪಡೆಯುವಂತೆ ಮಾಡಿದನು. (ದ್ವಾರಕೆಗೆ ನಾಥನಾದನು).

ಅದುವರೆಗೂ ಮಥುರಾನಾಥನೆಂದು ಹೆಸರು ಪಡೆದಿದ್ದ ಶ್ರೀಕೃಷ್ಣನು ಅಂದಿನಿಂದ ದ್ವಾರಕಾಧೀಶನೆನಿಸಿಕೊಂಡನು. ದ್ವಾರಕಾ ನಗರಿಯೂ ಸಹ ಸಪ್ತ ಮುಕ್ತಿ ಕ್ಷೇತ್ರಗಳಲ್ಲಿ ಒಂದು. ''ಪುರೀ ದ್ವಾರವತೀ ಚೈವ ಸಪ್ತೈತೇ ಮೋಕ್ಷದಾಯಿಕಾ'' ಎಂಬ ವಾಕ್ಯವಿದೆ. ಆ ಶ್ರೀಕೃಷ್ಣ ನಿರ್ಮಿತ ದ್ವಾರಕೆಯು ವೈಕುಂಠಕ್ಕಿಂತ ಮಿಗಿಲಾಗಿತ್ತು.

ಇದನ್ನು ಶ್ರೀಮದ್ಭಾಗವತದ ದಶಮ ಸ್ಕಂಧದಲ್ಲಿ ಹೀಗೆ ವರ್ಣಿಸಲಾಗಿದೆ.

ದೃಶ್ಯತೇ ಯತ್ರ ಹಿ ತ್ವಾಷ್ಟ್ರಂ ವಿಜ್ಞಾನಂ ಶಿಲ್ಪನೈಪುಣಮ್ ।
ರಥ್ಯಾಚತ್ವರವೀಥೀಭಿರ್ಯಥಾವಾಸ್ತು ವಿನಿರ್ಮಿತಮ್ ॥
ಸುರದ್ರುಮಲತೋದ್ಯಾನ ವಿಚಿತ್ರೋಪವನಾನ್ವಿತಮ್ ।
ಹೇಮಶೃಂಗೈರ್ದಿವಿಸ್ಪೃಗ್ಭಿಃ ಸ್ಫಾಟಿಕಾಟ್ಟಾಲಗೋಪುರೈಃ ॥
ರಾಜತಾರಕುಟೈಃ ಕೋಷ್ಠೈರ್ಹೇಮಕುಂಭೈರಲಕೃತೈಃ ।
ರತ್ನಕೂಟೈರ್ಗೃಹೈರ್ಹೈಮ್ಯೈ ರ್ಮಹಾಮರಕತಸ್ಥಲೈಃ

ಆ ನಗರದ ಒಂದೊಂದು ವಸ್ತುಗಳಲ್ಲೂ ವಿಶ್ವಕರ್ಮನ ವಾಸ್ತುವಿಜ್ಞಾನವು ಹಾಗೂ ಶಿಲ್ಪಕಲೆಯ ನೈಪುಣ್ಯವು ಪ್ರಕಟವಾಗಿತ್ತು. ಅದರಲ್ಲಿ ವಾಸ್ತು ಶಾಸ್ತ್ರಾನುಸಾರವಾಗಿ ದೊಡ್ಡ-ದೊಡ್ಡ

ರಾಜಬೀದಿಗಳೂ, ವೃತ್ತಗಳೂ, ಇತರ ಮಾರ್ಗಗಳೂ ಯಥಾಸ್ಥಾನಗಳಲ್ಲಿ ವಿಭಾಜಿಸಲ್ಪಟ್ಟಿತ್ತು. ಪಾರಿಜಾತವೇ ಮೊದಲಾದ ದೇವತಾವೃಕ್ಷಗಳಿಂದಲೂ, ಲತೆಗಳಿಂದಲೂ ಸಂಪನ್ನವಾಗಿದ್ದ ಸುಂದರವಾದ ಉದ್ಯಾನವನಗಳೂ ಮತ್ತು ಚಿತ್ರ- ವಿಚಿತ್ರವಾದ ಉಪವನಗಳೂ ಇದ್ದವು. ಅಲ್ಲಿ ಆಕಾಶವನ್ನು ಮುಟ್ಟುತ್ತಿದ್ದ ಸ್ವರ್ಣಗೋಪುರಗಳಿಂದಲೂ, ಸ್ಫಟಿಕಮಯವಾದ ಉಪ್ಪರಿಗೆ ಗಳಿಂದಲೂ, ಬಹಿರ್ದ್ವಾರಗಳಿಂದಲೂ ಅತ್ಯಂತ ಸುಂದರವಾಗಿ ಕಾಣುತ್ತಿತ್ತು. ಬೆಳ್ಳಿ ಮತ್ತು ಹಿತ್ತಾಳೆಗಳಿಂದ ನಿರ್ಮಿಸಿದ ಅನೇಕ ಧಾನ್ಯ ಭಂಡಾರಗಳಿದ್ದವು. ಕುಸುರಿ ಕೆಲಸಗಳಿಂದ ಕೂಡಿದ ಚಿನ್ನದ ಕಲಶಗಳಿಂದ ಅಲಂಕೃತವಾದ ಮಹಾ ಮಹಾ ಸೌಧಗಳಿದ್ದು, ಮರಕತಮಯವಾಗಿದ್ದ ಅದರ ನೆಲಗಳಿಂದ ಆ ದ್ವಾರಕಾ ಪಟ್ಟಣವು ಸುಂದರವಾಗಿ ಶೋಭಿಸುತ್ತಿತ್ತು.

ವಿಧಾಯ ತಸ್ಯಾ ವಿದಿತೈಃ ಸ್ವಚಿಹ್ನೈ ಯದೂನ್ ಯಥಾಸ್ಥಾನ ನಿವೇಶತುಷ್ಟಾನ್।
ತಾಮೇವ ನಾಥ ಸ್ತ್ರಿದಶಾಭಿನಂದ್ಯಾಂ ತ್ಯಕ್ತಾಮಯೋಧ್ಯಾಂ ಮಧುರಾಂ ಚ ಮೇನೇ ॥೪೧॥

ನಗರದಲ್ಲಿ ಯದುಗಳನ್ನು ಅವರವರಿಗೆ ಪ್ರಸಿದ್ಧವಾದ ಚಿಹ್ನೆಗಳೊಡನೆ ಹಿಂದೆ ಮಧುರೆ ಯಲ್ಲಿ ಇದ್ದ ಹಾಗೆ ಸ್ಥಾನಗಳನ್ನು ನೀಡಿ, ಅವರುಗಳನ್ನು ಅಲ್ಲಿ ಸ್ಥಾಪಿಸಿ, ದೇವತೆಗಳು ಹೊಗಳುವ ನಗರವನ್ನು ಸ್ವಾಮಿಯು ತಾನು ಹಿಂದೆ ಇದ್ದ ಅಯೋಧ್ಯೆ ಮತ್ತು ಮಧುರೆ ಗಳಂತೆಯೇ ಭಾವಿಸಿದನು.

ಮಧುರೆಯಿಂದ ದ್ವಾರಕೆಗೆ ವಲಸೆ ಬಂದ ಎಲ್ಲಾ ಯದು ವೀರರಿಗೂ ಸ್ವಾಮಿಯಾದ ಶ್ರೀಕೃಷ್ಣನು ಅವರವರ ಸ್ಥಾನಗಳನ್ನು ಪುನರ್ ನಿರ್ಮಿಸಿ, ಎಲ್ಲರಿಗೂ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸಿ, ತಾನು ಒಬ್ಬ ಉತ್ತಮ ಆಡಳಿತಗಾರನೆಂದೂ ತೋರಿಸಿದನು.

"ದೇವಾನಾಂ ಪೂರಯೋಧ್ಯಾ" ಎಂಬ ಶ್ರುತಿ ವಾಕ್ಯದಂತೆ ದ್ವಾರಕೆಯೂ, ಅಯೋಧ್ಯೆ ಸ ಮಧುರಾ ಮತ್ತು ಪರಮಪದಗಳಿಗೆ ಸಮಾನವಾಯಿತು.

ಉದನ್ವತಿ ವ್ಯೋಮತಲೇ ಚ ಲಗ್ನಾಂ ದೃಷ್ಟೋಭಯಾಃ ದರ್ಪಣ ದರ್ಶನೀಯೆ।
ಯಾಮದ್ಭುತಾಮಾತ್ಮ ಪುರೀಂ ಚ ದೇವಾಬ್ಬಾಯಾ
ಮಮನ್ಯಂತ ಮಿಥಃ ಸಮೀಕ್ಷ್ಯಾಂ ॥೪೨॥

ಕನ್ನಡಿಯಂತೆ ಕಾಣುವ ಸಮುದ್ರದಲ್ಲಿ ನಗರವನ್ನು ಕಂಡು, ಆಕಾಶದಲ್ಲಿ ತಮ್ಮ ನಗರಿಗಳು ಒಂದಕ್ಕೊಂದು ಎದುರಿನಲ್ಲಿ ನೋಡಿ ಒಂದರ ಬಿಂಬವು ಮತ್ತೊಂದೇನೋ ಎಂದು ದೇವತೆಗಳು ಭಾವಿಸಿದರು.

ಆ ದ್ವಾರಕೆಯನ್ನು ಸಮುದ್ರದಲ್ಲಿ ನೋಡಿ, ತಮ್ಮ ತಮ್ಮ ದಿವ್ಯವಾದ ನಗರಗಳ ಪ್ರತಿಬಿಂಬವೋ ಈ ನಗರಿ ಎಂಬುದಾಗಿ ದೇವತೆಗಳು ಮಾತಾಡಿಕೊಳ್ಳತೊಡಗಿದರು. ಅಷ್ಟು ಅದ್ಭುತವಾಗಿತ್ತು ಆ ದ್ವಾರಕಾ ನಗರ.

ಪ್ರಾಕಾರ ಚಕ್ರಂ ಪ್ರಥುಭಿಃ ಸ್ತರಂಗೈಃ ರಾಸ್ಫೋಲಯನ್ ಅಂಬುಧಿರಾತ್ತವೇಗಃ।
ಅಮರ್ತ್ಯ ಮುಖ್ಯೈರಪಿ ಜಾತಕೋಪೈ ರಕ್ಷೋಭ್ಯತಾಂ ವ್ಯಾಕುರತೇವ ಯಸ್ಯಾಃ ॥೪೩॥

ಆ ನಗರವನ್ನು ಸುತ್ತುವರಿರುವ ಸಮುದ್ರದ ದೊಡ್ಡದೊಡ್ಡ ಅಲೆಗಳು ಅಪ್ಪಳಿಸು ವಾಗ, ಅದನ್ನು ಕಂಡು ಅಸೂಯೆ ಹೊಂದಿದ ದೇವನಾಯಕರುಗಳಿಂದಲೂ ತಾಳಲಾಗ ದಂತಗಹ ಮೇಲ್ಮೆಯನ್ನು ಆ ನಗರವು ಹೊಂದಿತ್ತು.

ಆ ನಗರವನ್ನು ನೋಡಿ ಅನೇಕ ದೇವನಾಯಕರುಗಳು ಅಸೂಯೆ ಪಟ್ಟರು. ನಗರವನ್ನು ಸುತ್ತುವರೆದಿದ್ದ ಸಮುದ್ರವು ಸಹ ಬಹುವಾಗಿ ಹೆಮ್ಮೆಪಟ್ಟಿತು.

ಯತ್ಸೌಧ ಪರ್ಯಂಕಜುಷಾಂ ವಧೂನಾಂ ಸಂಗೃಹ್ಯ ವಿಶ್ವಾಸ ಗುಣಂ ಸಮೀರಃ।
ಪದ್ಮೇಷು ನೂನಂ ಪ್ರದಿಶನ್ ಪ್ರಭಾತೆ ಗತಾಗತಂ ಯಾತಿ ಗವಾಕ್ಷವರ್ತ್ಮಾ ॥೪೪॥

ನಗರದ ಉಪ್ಪರಿಗೆಗಳಲ್ಲಿ ಮಂಚಗಳಲ್ಲಿರುವ ಹೆಣ್ಣುಮಕ್ಕಳು ಉಸಿರಿನ ಸೌರಭವನ್ನು ಶೇಖರಿಸಿಕೊಂಡು ಅರಳುವ ಕಾಲದಲ್ಲಿ ತಾವರೆ ಹೂವುಗಳಲ್ಲಿ ಸೇರಿಸುವುದಕ್ಕಾಗಿಯೇ, ಗಾಳಿಯಾದುದು, ಗವಾಕ್ಷದ ಮೂಲಕ ಹೋಗಿ ಬರುವ ಹಾಗೆ ಇತ್ತು.

ನಗರದಲ್ಲಿ ಬೀಸುವ ಗಾಳಿಯು ಸುವಾಸನೆಯನ್ನು ಬೀಸುತ್ತಿತ್ತು. ಆ ಸುವಾಸನೆಯು ಯಾವುದೆಂದರೆ, ದ್ವಾರಕಾ ನಗರಿಯ ಉಪ್ಪರಿಗೆಗಳಲ್ಲಿ ಆನಂದದಿಂದ ಮಲಗಿರುವ ಸುಂದರ ಸ್ತ್ರೀಯರ ಉಸಿರಿನ ಗಾಳಿಯಿಂದ ಹೊರಸೂಸುವ ಸುವಾಸನೆಯು ಗವಾಕ್ಷ ಮೂಲಕ ಹೊರಬಂದು ವಾತಾವರಣದಲ್ಲಿ ಸೇರಿ ಎಲ್ಲಾ ಕಡೆಯೂ ಸುವಾಸನೆಯನ್ನು ಬೀರುತ್ತಿತ್ತು.

ಜಾಲಾನಿ ಯತ್ರಾ ಗುರು ಧೂಮ ಜಾಲೈಃ ಸಂದಿಗ್ಧ ಪಾರಾವತ ಸಂನಿಧಾನೈಃ।
ಅವಾಸಯನ್ ನೂನ ಮಹಾರ್ಹ ಗಂಧಾನ್
ಆಸೇದುಷಾಂ ನಾಕಸಥಾಂ ವಿಮಾನಾನ್ ॥೪೫॥

ನಗರದಲ್ಲಿ ಉಂಟಾದ ಅಗುರು ಹೊಗೆಯು ರಾಶಿಯು ದಟ್ಟವಾಗಿ ಮೇಲಕ್ಕೆದ್ದು ಅಲ್ಲಲ್ಲಿ ಸುತ್ತಾಡುವ ದೇವವಿಮಾನಗಳ ಸಂಚಾರಕ್ಕೆ ತಡೆಯುಂಟುಮಾಡುವಂತಿತ್ತು.

ದೇವತೆಗಳು ವಿಮಾನದಲ್ಲಿ ಸಂಚರಿಸುವಾಗ ಅವರ ವಿಮಾನಗಳಿಗೆ ಏನೋ ತಡೆ ಯುಂಟಾಗುತ್ತಿತ್ತು. ಅದೇನೆಂದರೆ ನಗರದ ಗೃಹಗಳಲ್ಲಿ ಹಾಕುವ (ಸುಗಂಧ ದ್ರವ್ಯಗಳ) ಧೂಪಗಳ ಹೊಗೆಯು ದಟ್ಟವಾಗಿ ಮೇಲಕ್ಕೆದ್ದು ಆಕಾಶವನ್ನೆಲ್ಲಾ ಆವರಿಸಿ, ಅವರ ವಿಮಾನ ಗಳಿಗೆ ತಡೆಯುಂಟಾಯಿತೆಂದು ಕವಿ ಸಮಯದ ಕಲ್ಪನೆ.

ಪರಾರ್ಥ್ಯ ರತ್ನ ಪ್ರಚಿತಾತ್ತ್ಮ ಭಿರ್ಯಾ ಪ್ರಾಸಾದ ಮಾಲಾಭಿರಲಂಕೃತಾಂಗೀಂ।
ನಾಥೋಪ ಭೋಗಾನುಗುಣಾಂ ಪಯೋಧೌಃ ನನಂದ ದೃಷ್ಟ್ವೇವ ನಿಜಾಮಭಿಖ್ಯಾಂ॥೪೬॥

ಅತ್ಯುತ್ತಮವಾದ ಮಣಿಗಳಿಂದ ಅಲಂಕರಿಸಲ್ಪಟ್ಟ ಉನ್ನತವಾದ ಉಪ್ಪರಿಗೆಗಳಲ್ಲಿ ಅಲಂಕರಿಸಲ್ಪಟ್ಟಿರುವ ನಗರವಾದುದು ನಾಥನಾದ ಶ್ರೀಕೃಷ್ಣನಿಗೆ ತಾನು ಭೋಗ್ಯಕ್ಕೆ ತಕ್ಕುದಾಗಿ ಇರುವುದಾಗಿ ತನ್ನನ್ನು ಸಮುದ್ರದಲ್ಲಿ ಕಂಡು ಸಂತೋಷದಿಂದ ನವ ವಧುವಿನಂತೆ ಕಂಗೊಳಿಸಿತು.

ದ್ವಾರಕಾ ನಗರಿಯೇ ತಾನು ಜಗದ್ರಕ್ಷಾಕನಾದ ಶ್ರೀಕೃಷ್ಣನಿಗೆ ಮೀಸಲಾಗಿರುವ ನಗರಿಯೆಂದು ಭಾವಿಸಿ, ಹೊಸದಾಗಿ ಮದುವೆಯಾದ ನವವಧುವು ತನ್ನ ಗಂಡನ ಸರ್ವವಿಧ ಸೇವೆಗಾಗಿ ಸಿದ್ಧವಾಗಿ ನಿಂತಿರುವ ಹಾಗೆ ಶೋಭಿಸುತ್ತಿತ್ತು. ತನ್ನ ರೂಪವನ್ನು ಸಮುಪ್ರದಲ್ಲಿ ಕಂಡು ಅತ್ಯಂತ ಸಂತೋಷಪಟ್ಟಿತು ಆ ದಿವ್ಯನಗರಿ.

ಮಣಿ ಪ್ರದೀಪ ಪ್ರಶಮ ಪ್ರಯುಕ್ತೇ ವಿಹಾರ ಚೂರ್ಣೇ ವಿಫಲೇ ವಧೂನಾಂ।
ಅಪತ್ರಪಾಯಾಃ ಸಮಯೇಽಪಿ ಯಸ್ಯಾಂ ಅಭೂದ ನಾಸ್ಥಾ ಪರಮಾರ್ಥದೀಪೇ॥೪೭॥

ನಗರದಲ್ಲಿ ಸ್ತ್ರೀ ಪುರುಷರುಗಳು ಇರುವ ಮನೆಗಳಲ್ಲಿ ಮಣಿಮಯವಾದ ದೀಪಗಳೂ, ನಿಜವಾದ ದೀಪಗಳೂ ಇರುವ ಜಾಗದಲ್ಲಿ ಚಿಕ್ಕ ಹೆಣ್ಣುಮಕ್ಕಳು ನಾಚಿಕೆ ಹೊಂದಿ ಅನೇಕ ಬತ್ತಿಗಳು ಉರಿಯುವಾಗ, ಅವು ಮಣಿದೀಪಗಳಾಗಿದ್ದು ನಂದಿಹೋಗುವುದಿಲ್ಲವಾದ್ದರಿಂದ, ನಿಜವಾದ ದೀಪಗಳನ್ನು ಆರಿಸಿ ಪ್ರಯೋಜನವೇನು? ಎಂದು ಉದಾಸೀನರಾಗಿದ್ದರು.

ರತ್ನಗಳ ಕಾಂತಿಯೇ ದೀಪಗಳಂತೆ ಬೆಳಗುವಾಗ ಎಣ್ಣೆಯ ದೀಪಗಳನ್ನು ಹಚ್ಚುವ ಅವಶ್ಯಕತೆ ಇಲ್ಲ ಎಂಬುದು ಭಾವ. ಪ್ರೇಮಿಗಳು ರಾತ್ರಿಯ ಹೊತ್ತು ದೀಪವನ್ನು ಆರಿಸುತ್ತಾರೆ. ಆದರೆ ಇಲ್ಲಿ ಯಾವಾಗಲೂ ರತ್ನಗಳ ಕಾಂತಿ ದೀಪದಂತೆ ಇದ್ದೇ ಇರುತ್ತವೆ.

ಪ್ರಾಯೇಣ ಯತ್ರ ಪ್ರಮದಾ ಜನಾನಾಂ ನಿತ್ಯಂ ಗುಣೈರಪ್ರತಿಮೈರ್ನಿರುದ್ಧಾಃ।
ಸಂಸ್ಕಾರ ಯೋಗಾದಪಿ ಲಬ್ಧ ಸತ್ವಾ ಶ್ಚಿತ್ರಾರ್ಪಿತಾ ನಾಕ ಸದೋ ನಚೇಲುಃ ॥೪೮॥

ನಗರದಲ್ಲಿ ಸ್ತ್ರೀಯರ ಉತ್ತಮವಾದ ಗುಣಗಳನ್ನು ನೋಡಿ ನಿತ್ಯವಾಗಿರುವುದಾಗಿ ದೇವತೆಗಳು ಚಿತ್ರದಲ್ಲಿ ಬರೆಯಲ್ಪಟ್ಟ ಪ್ರಾಣಾದಿಗಳ ಸಂಚಾರಕ್ಕೆ ಬೇಕಾಗುವ ಸಂಸ್ಕಾರ ಹೊಂದಿದವರಾಗಿ, ಅಲ್ಲಾಡದೆ ಇದ್ದರು.

ನಗರದಲ್ಲಿ ಹೆಣ್ಣು ಮಕ್ಕಳ ಶ್ರೇಷ್ಠವಾದ ಗುಣಗಳನ್ನು ಕಂಡು ಆಶ್ಚರ್ಯಗೊಂಡು ಸ್ತಬ್ಧರಾಗಿ ನಿಂತವರಂತೆ ದೇವತೆಗಳು ಚಿತ್ರದಲ್ಲಿ ಬರೆಯಲ್ಪಟ್ಟು ಪ್ರಾಣಾದಿಗಳಿಂದ ಸಂಚಾರಕ್ಕೆ ಬೇಕಾಗುವ ಸಂಸ್ಕಾರ ಮಾಡಲ್ಪಟ್ಟವರಾಗಿ ಅಲ್ಲಾಡದೆ ಇದ್ದರು. (ಚೇತನರು ಅಚೇತನರಂತೆ ನಿಂತಿದ್ದರು).

ಯದಂತರೆ ಯಾಮಿಕ ವಾರಣಾನಾಂ ಮಾಸೇದುಪಾರಂಬು ನಿಧೇರಭಿಖ್ಯಾಂ।
ಕರಾಭಿಮರ್ಶೇಷು ಪುನಶ್ಚಕಾಸುಃ ಕಲ್ಲೋಲ ಲಗ್ನಾ ಇವ ಕರ್ಣಶಂಕಾಃ ॥೪೯॥

ನಗರದ ಮಧ್ಯ ಸ್ಥಳಗಳಲ್ಲಿ ಒಂದೊಂದು ಜಾಮದಲ್ಲೂ ಕಾವಲಾಗಿರುವವ ಆನೆಗಳು ಸಮುದ್ರದಂತೆ ಕಾಣುತ್ತಿದ್ದು ಅವುಗಳ ದೊಡ್ಡದಾದ ಕಿವಿಯಲ್ಲಿ ಅಲಂಕಾರವಾಗಿ, ಬರೆಯಲ್ಪಟ್ಟ ಶಂಖ ರೇಖೆಗಳು ನಿಜವಾದ ಶಂಖಗಳಂತೆ ಕಾಣುತ್ತಿದ್ದವು.

ನಗರ ರಕ್ಷಣೆಗಾಗಿ ಸಮುದ್ರ ಮಧ್ಯದಲ್ಲಿ ದೊಡ್ಡ ದೊಡ್ಡ ಆನೆಗಳನ್ನು ಬಿಡಲಾಗಿತ್ತು. ಅವೂ ಸಹ ಸಮುದ್ರದಂತೆ ತೋರುತ್ತಿದ್ದವು. ಅವುಗಳ ಕಿವಿಗಳು ಮೊರದಂತೆ ಅಗಲವಾಗಿದ್ದು ಅಲಂಕಾರ ಪ್ರಾಯವಾಗಿ, ಅಲ್ಲಿ ಶಂಖ ಚಕ್ರಗಳ ಚಿತ್ರಗಳನ್ನು ಬಿಡಿಸಿದ್ದರು. ಅವು ಎಷ್ಟು ನೈಜವಾಗಿತ್ತೆಂದರೆ ಅವು ನಿಜವಾದ ಶಂಖ ಚಕ್ರಗಳೇನೋ ಎಂಬಂತೆ ಭಾಸವಾಗುತ್ತಿತ್ತು.

ಸೌಧೇಷು ಯಸ್ಯಾಂ ಯುವ ಸೇವಿತೇಷು ತ್ರಿವಿಷ್ಟಪಾದಪ್ಯಧಿಕೋನ್ನತೇಷು।
ವ್ರೀಲಾತಿ ಭಾರಾನ್ನಮಿತಾ ಇವಾಽಽಸನ್ ವೈಮಾನಿಕೈರಧ್ಯುಷಿತಾ ವಿಮಾನಾಃ ॥೫೦॥

ಹರೆಯದ ಸ್ತ್ರೀ ಪುರುಷರು ವಾಸಿಸುವ ನಗರದ ಉಪ್ಪರಿಗೆಗಳು ಸ್ವರ್ಗಲೋಕಕ್ಕೂ ಮೇಲಾಗಿ ಇದ್ದುದರಿಂದ, ದೇವ ವಿಮಾನಗಳು ಕೆಳಗೆ ಇದ್ದು ನಾಚಿಕೆಯಿಂದ, ನಮಸ್ಕರಿಸು ವಂತಿದ್ದವು.

ಉಪ್ಪರಿಗೆಗಳನ್ನು ಅದ್ಭುತವಾಗಿ ಬಹಳ ಸುಂದರವಾಗಿ ಶೋಭಾಯಮಾನವಾಗಿ ನಿರ್ಮಿಸಲಾಗಿತ್ತು. ಅವುಗಳನ್ನು ನೋಡಿ ದೇವತೆಗಳ ವಿಮಾನಗಳು ನಾಚಿಕೆಯಿಂದ ತಲೆಬಾಗಿ ನಮಸ್ಕರಿಸುವಂತೆ ಇದ್ದವು. ತಮಗಿಂತ ಉಪ್ಪರಿಗೆಗಳು ಚೆನ್ನಾಗಿವೆ ಎಂಬ ಭಾವ.

ನ ಷಡ್ಭಿರಾಸನ್ ವ್ಯಸನಾನಿ ಪುಂಸಾಂ ಯದ್ವಾಸಿನಾಮಿತಿಭಿರುರ್ಮಿಭಿರ್ವಾ।
ಅಯೋಗ ಯತ್ನೇನ ವಿನೈವ ಚಾಂತೆ ಜಜ್ಞೇ ಜಗದ್ಧಾತರಿ ಬುದ್ಧಿರೇಕಾ ॥೫೧॥

ನಗರದಲ್ಲಿ ವಾಸಿಸುವ ಜನಗಳಿಗೆ ಆರು ಇತಿ ಬಾಧೆಗಳಿಂದಲೂ, ಆರು ಅಲೆಗಳಿಂದಲೂ, ಯಾವ ವ್ಯಸನವೂ ಉಂಟಾಗಲಿಲ್ಲ. ಯೋಗ ಮಾಡಲು ಬೇಕಿರುವ ಪ್ರಯತ್ನ ಇಲ್ಲದೆಯೇ ವ್ಯಸನವೂ ಏರ್ಪಡಲಿಲ್ಲ. ಅದು ಇಲ್ಲದೆಯೇ ಆ ಕ್ಷೇತ್ರದಲ್ಲಿ ಆಯುಸ್ಸು ಮುಗಿಯುವುದರಲ್ಲಿ ಜಗತ್ತಿಗೆ ನಾಥನಾದ ಭಗವಂತನಲ್ಲಿ ಬುದ್ಧಿಯು ತಾನಾಗಿಯೇ ಪ್ರವರ್ತಿಸುತ್ತಿತ್ತು.

ಆ ದ್ವಾರಕೆಯ ನಿವಾಸಿಗಳೆಲ್ಲರೂ ಸಾತ್ವಿಕರಾಗಿದ್ದರು. ಅವರನ್ನು ಇತರರನ್ನು ಕಾಡುವ ಯಾವ ಇತಿ ಬಾಧೆಗಳು ಕಾಡುತ್ತಿರಲಿಲ್ಲ. ಅಂತ್ಯದಲ್ಲಿ ಎಲ್ಲರೂ ಮೋಕ್ಷವನ್ನು ಹೊಂದು ತ್ತಿದ್ದರು.

ಅದೇಶ ಕಾಲ ಪ್ರವಿಭಾಗ ಭಾಜಾ ಭೂಮ್ನಾ ಜಗದ್ಧಾತುರಚಿಂತ್ಯ ಭೂಮ್ನಃ।
ಯಸ್ಯಾಂ ವಿಹಾರೋಪ ವನಾನ್ಯ ಭೂವನ್ ಸಮಾಧಿ ಯೋಗ್ಯಾನಿ ತಪೋವನಾನಿ॥೫೨॥

ಬುದ್ಧಿಗೂ ಎಟುಕದ, ಮಹಿಮೆಗಳನ್ನು ಹೊಂದಿರುವವನೂ, ಜಗತ್ತನ್ನೇ ಸೃಷ್ಟಿಸುವವನೂ ಆದ ಶ್ರೀಕೃಷ್ಣನು ದೇಶ, ಕಾಲಗಳಿಂದ ಅಳೆಯಲು ಸಾಧ್ಯವಿಲ್ಲದ ಮೇಲ್ಮೈಯಿಂದ ಕೂಡಿದ ನಗರದಲ್ಲಿ ಆಟವಾಡುವ ಉದ್ಯಾನಗಳು, ಯೋಗವನ್ನು ಅಭ್ಯಾಸ ಮಾಡುವವರಿಗೂ ತಪೋವನದಂತಿದ್ದವು.

ದ್ವಾರಕೆಯಲ್ಲಿ ಶ್ರೀಕೃಷ್ಣನು ಸ್ತ್ರೀಯರೊಡನೆ ವಿಹರಿಸುವ ಉದ್ಯಾನವನಗಳು, ಯೋಗಿಗಳಿಗೂ ಪ್ರಿಯವಾದ ಸ್ಥಾನಗಳಾಗಿದ್ದು ಅಲ್ಲಿ ಅವರು ತಪಸ್ಸನ್ನಾಚರಿಸುತ್ತಿದ್ದರು. ಏಕಂದರೆ ಅದು ಸರ್ವೇಶ್ವರನು ವಿಹರಿಸುವ ಜಾಗ. ಅಲ್ಲಿ ಅವರ ಮನಸ್ಸು ಯಾವಾಗಲೂ ಕೃಷ್ಣನನ್ನೇ ಧ್ಯಾನಿಸುತ್ತಿರುತ್ತದೆ. ನಾರಾಯಣನ ವಿಹಾರ ಸ್ಥಾನವೂ ವೈಕುಂಠಕ್ಕೆ ಸಮಾನವಾದುದು.

ಅನಂ ಹಸಾ ಮಧ್ವರದೀಕ್ಷಿತಾನಾಮ್ ಮಾಹಾತ್ಮಾನತಃ ಪ್ರಾಗಪಿ ಸಂನಿಧಾನಾತ್।
ಅಭುಂಕ್ತ ಕೃತ್ಸ್ನಾನಿ ಹವೀಂಷಿ ನಿತ್ಯಂ ಯತ್ರ ಸ್ವಯಂ ಯಜ್ಞತನುಃ ಸ ದೇವಃ ॥೫೩॥

ಯಜ್ಞಗಳನ್ನು ತನಗೆ ಮೂರ್ತಿಯಾಗಿ ಹೊಂದಿರುವ ಆ ಕೃಷ್ಣಮೂರ್ತಿಯು ಯಾಗಗಳನ್ನು ಮಾಡುವ ದೀಕ್ಷೆಕೊಂಡು, ಪರಿಶುದ್ಧರಾದ ಮಹಾತ್ಮರು ಅಲ್ಲಿಗೆ ಬರುವ ಮುಂಚೆಯೇ ತಾನೇ ಸನ್ನಿಧಾನವನ್ನು ಮಾಡುವವನಾಗಿ, ದೇವತೆಗಳಿಗೆ ನೀಡುವ ಹವಿಸ್ಸುಗಳನ್ನೆಲ್ಲಾ ಸಾಂಗವಾಗಿ ಏರ್ಪಡಿಸುತ್ತಿದ್ದನು.

ಶ್ರೀಕೃಷ್ಣನು ಸಾಂಗವಾಗಿ ಯಜ್ಞಯಾಗಾದಿಗಳನ್ನು ಲೋಕಕ್ಷೇಮಾರ್ಥವಾಗಿ ನಡೆಸುತ್ತಿದ್ದನು. ಅವನ ಸಾನ್ನಿಧ್ಯವೇ ಸಕಲ ತೀರ್ಥಗಳ, ಮಹಾತ್ಮರ ಸಾನ್ನಿಧ್ಯಕ್ಕಿಂತಲೂ ಹೆಚ್ಚಿನದು. ಅವನು ಇದ್ದಮೇಲೆ ಬೇರೆ ಯಾರ ಸಾನ್ನಿಧ್ಯವೂ ಅವಶ್ಯಕತೆ ಇಲ್ಲ.

ರತಿ ಪ್ರಸೂತಾ ಇವ ರಾಜಕನ್ಯಾ ರಸೋದಧೇ ರೂರ್ಮಿ ಪದಂ ಭಜಂತ್ಯಃ।
ವಿರಕ್ತ ಭಾವ್ಯಂ ತಮವಾಪ್ಯ ಯಸ್ಯಾಂ ರಾಗೋಪಪನ್ನಾ ರಮಯಾಂ ಬಭೂವುಃ ॥೫೪॥

ಮನ್ಮಥನ ಹೆಂಡತಿಯಾದ ರತಿದೇವಿಯ ಮಕ್ಕಳೋ ಎಂಬಂತೆ ಆನಂದದ ಸಮುದ್ರದಲ್ಲಿ ಅಲೆಗಳಂತಿರುವ ರಾಜಕುಮಾರಿಯರು ವೈರಾಗ್ಯ ಹೊಂದಿದವರಿಂದ, ಅನುಭವಿಸಲ್ಪಡುವವನನ್ನು ಅನುರಾಗವೇ ತುಂಬಿ ನಗರದಲ್ಲಿ ಇರುವ ಶ್ರೀಕೃಷ್ಣನನ್ನು ಆನಂದಪಡಿಸಿದರು.

ದ್ವಾರಕೆಯಲ್ಲಿ ಇರುವ ರಾಜಕುಮಾರಿಯರು ಶ್ರೀಕೃಷ್ಣನನ್ನು ತುಂಬು ಕಣ್ಣುಗಳಿಂದ ಕಂಡು ಆನಂದಿಸಿದರು. ಅವನನ್ನೂ ಆನಂದಪಡಿಸಿದರು.

ಪ್ರವಾಲ ಚಿತ್ರೀಕೃತ ಜಾಲಕಶ್ರೀಃ ಸಾಲಾವೃತಾ ಸಂಭೃತ ಪತ್ರ ಜಾಲಾ ।
ಪರಿಷ್ಕೃತಾ ಭದ್ರ ಮೃಗಾದಿಭಿರ್ಯಾ ಬಭೌ ಸ್ಮರಸ್ಯೇವ ವಿಹಾರವನ್ಯಾಃ ॥೫೫॥

ಗರುಡನು ಭೂಮಿಯಲ್ಲಿ ಒಂದು ಕಡೆಯಲ್ಲಿ ನಿಂತು ಆಕಾಶವಕಾಶಕ್ಕೆ ಆಕ್ರಮಿಸುವ ಹಾಗೆ, ಶ್ರೀಕೃಷ್ಣನು ಕಂಸನ ಮನೆಯಿರುವ ಸ್ಥಳಕ್ಕೆ ಎಲ್ಲರಿಗೂ ಇರುವ ದಾರಿಯನ್ನು ಬಿಟ್ಟು ಬೇರೆ ದಾರಿಯಲ್ಲಿ ಬಂದು ಸೇರಿದನು.

ನಗರವಾದುದು ಮನ್ಮಥನಿಗೆ ಆಟವಾಡಲು ಸಿದ್ಧ ಮಾಡಲ್ಪಟ್ಟ ಸಾಲಾದ ವನಗಳಂತೆ ಬೆಳಗುತ್ತಿತ್ತು. ನಗರಕ್ಕೂ, ಕಾಡಿಗೂ ಏನು ಸ್ವಾಮ್ಯವೆಂದರೆ ಪ್ರವಾಳ, ಜಾಲಕ, ಸಾಲ, ಪತ್ರ, ಭದ್ರ, ಮೃಗ ಎಲ್ಲಾ ಎರಡೂ ಹೊಂದಿರುತ್ತವೆ.

ದ್ವಾರಕೆಯಾದುದು ಇವೆಲ್ಲಾ ವನಸಂಪತ್ತನ್ನು ಹೊಂದಿತ್ತು.

ಧ್ವಜಾಗ್ರ ಭಿನ್ನಾತ್ ತುಹಿನಾಂಶು ಬಿಂಬಾತ್ ದನುಕ್ಷರಂತ್ಯಾ ಸುಧಯಾಽನುಲಿಪ್ತೈಃ ।
ಚಿರ ಪ್ರಕ್ಲ್ಪೈರಪಿ ಯತ್ನ ಸೌಧೈರ್ನಿತ್ಯಂ ನವೀನೈರಿವ ನಿರ್ಬಭಾಸೆ ॥೫೬॥

ಆಕಾಶದಲ್ಲಿ ಚಂದ್ರನನ್ನು ಧ್ವಜಗಳ ತುದಿಯಲ್ಲಿ ಹೊಂದಿರುವುದರಿಂದ ಅದರಿಂದ ಉಂಟಾದ ಪ್ರಭೆಯೇ ಎಲ್ಲೆಲ್ಲೂ ಹರಡಿ ಉಪ್ಪರಿಗೆಗಳೆಲ್ಲವೂ ಯಾವಾಗಲೂ ಬೆಳಕನ್ನು ಬೀರುತ್ತಿದ್ದವು.

ಆ ದ್ವಾರಕೆಯ ಉಪ್ಪರಿಗೆಗಳೆಲ್ಲವೂ ಯಾವಾಗಲೂ ಬೆಳಕಿನಿಂದ ಕೂಡಿರುತ್ತಿತ್ತು.

ಸ್ವವೈಭವೈರ ಪ್ರತಿರೂಪ ಶೋಭೈಃ ವ್ಯಕತ್ರಿಯೋ ವಾಙ್ಮನಸಾನಿ ವೃತ್ತೈಃ ।
ತಿರೋಧ ಧುರ್ಯತ್ರ ನರೇಂದ್ರವಾಸಾಃ ಸ್ವಯಂ ಪ್ರಭಾಂ ದೇವಸಭಾಂ ಸುಧರ್ಮಾಂ ॥೫೭॥

ವಾಕ್ಕಿಗೂ, ಮನಸ್ಸಿಗೂ, ಯಾವಾಗಲೂ ನಿಲುಕದ ಅದ್ಭುತವಾದ ತನ್ನ ವೈಭವಗಳಿಂದ ನಗರದಲ್ಲಿದ್ದ ರಾಜಗೃಹಗಳ ಶೋಭೆಯನ್ನು ಮೀರಿಸುವ, ''ಸುಧರ್ಮ'ವೆಂಬ ದೇವಸಭೆಯನ್ನೂ ಕೃಷ್ಣನು ಪ್ರಕಾಶಗೊಳಿಸಿದನು.

''ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬುದಾಗಿ ವೇದಗಳಿಗೂ ನಿಲುಕದವನು ಪರಮಾತ್ಮ. ಅವನು ಈಗ ಶ್ರೀಕೃಷ್ಣನಾಗಿ ಅವತರಿಸಿ, ದ್ವಾರಕಾ ನಗರಿಯಲ್ಲಿ ವಾಸವಾಗಿದ್ದಾನೆ. ದ್ವಾರಕೆಯಲ್ಲಿ ಅವನ ರಾಜ ಸಭೆಯು ದೇವೇಂದ್ರನ ರಾಜ ಸಭೆಯಾದ ''ಸುಧರ್ಮ'ವೆಂಬ ದೇವಸಭೆಯನ್ನೂ ಮೀರಿಸುವಂತಿತ್ತು.

ವಿಭೂತಿ ಭೇದೈರನುಪಪ್ಲವೈರ್ಯಾ ಭೋಗಾರ್ಥಿನಾಂ ಭೂಮಿಗುತಾಽಪ್ಯಭೌಮೈಃ ।
ನಿವಾರಯಾಮಾಸ ತಪೋಧನಾನಾಂ ವಾಸಾದರಂ ವಾಸವ ರಾಜಧಾನ್ಯಾಂ ॥೫೮॥

ನಗರ ಭೂಮಿ ಪ್ರದೇಶದಲ್ಲಿರುವುದೂ, ಭೂಲೋಕದಲ್ಲಿ ಅನುಭವಿಸಲ್ಪಡುವುದೂ, ಅದ್ಭುತವಾದ ವಸ್ತುಗಳನ್ನು ಹೊಂದಿರುವುದರಿಂದ ಭೋಗಗಳನ್ನು ಅನುಭವಿಸಲು ಆಶಿಸಿ ತಪಸ್ಸುಗಳನ್ನು ಮಾಡುವವರಿಗೂ ಇಂದ್ರಲೋಕದಲ್ಲಿ ವಾಸಿಸುವ ಆಸೆಯನ್ನೂ ನೀಗಿತು.

ಎಲ್ಲರೂ ಸ್ವರ್ಗಲೋಕವನ್ನೂ ಹೊಂದಲು ಆಸೆ ಪಡುತ್ತಾರೆ. ಅದಕ್ಕಾಗಿ ಅನೇಕ ಯಜ್ಞಯಾಗಾದಿಗಳನ್ನು ನಡೆಸುತ್ತಾರೆ. ಆದರೆ ದ್ವಾರಕೆಯಲ್ಲಿರುವವರಿಗೆ ಶ್ರೀಕೃಷ್ಣನು ವಾಸಿಸುವ ತಮ್ಮ ನಗರವು ಸ್ವರ್ಗಕ್ಕಿಂತ ವೈಭೋಗವಾಗಿರುವುದರಿಂದ ಅವರೆಲ್ಲರೂ ಸ್ವರ್ಗದ ಆಸೆಯನ್ನು ತ್ಯಜಿಸಿದರು.

ಯತ್ಸೌಧ ರತ್ನ ಪ್ರಕರೇಷು ವಿಷ್ವಕ್ ಪ್ರಸಾರಿತೈ ರನ್ವಹ ಮೈಕ ಮುಖ್ಯಾತ್।
ಕರೈಃ ಸಹಸ್ರೇಣ ಗೃಹೀತ ದೀಪ್ತಿಃ ಪ್ರದ್ಯೋತನೇ ನೂನಮತೀವ ಭಾಸ್ವಾನ್ ॥೫೯॥

ಸೂರ್ಯನು ಉದಯಿಸಿದ ಬಳಿಕ, ಮೇಲೆ ಮೇಲೆ ವೃದ್ಧಿಯನ್ನು ಹೊಂದುವುದು ಯಾವುದರ ಮೂಲಕ ಎಂದರೆ, ನಗರದಲ್ಲಿ ಇರುವ ಉಪ್ಪರಿಗೆಗಳಲ್ಲಿರುವ ರತ್ನಗಳ ಕಾಂತಿ ಯಿಂದ ಒಂದೇ ರೀತಿಯಾಗಿ ದಿನ ಪೂರ್ತಿ ಸಾವಿರ ಕಿರಣಗಳನ್ನು ಎಲ್ಲಾ ದಿಕ್ಕುಗಳಿಗೂ ಹರಡಿ ಆ ರತ್ನಗಳ ಕಿರಣಗಳನ್ನು ತಾನು ಹೊಂದಿ ಬರುತ್ತಿದ್ದನು.

ಸೂರ್ಯನು ತನ್ನ ಸಹಜವಾದ ಕಿರಣಗಳಿಗಿಂತ ಹೆಚ್ಚಾಗಿ ದ್ವಾರಕೆಯ ಉಪ್ಪರಿಗೆ ಗಳಲ್ಲಿರುವ ರತ್ನದ ಕಾಂತಿಯು ಅವನ ಮೇಲೆ ಪ್ರತಿಫಲಿಸಿ, ಅವನು ಅದರಿಂದ ಹೆಚ್ಚು ಕಾಂತಿಯುಕ್ತನಾಗಿ ತೋರುತ್ತಿದ್ದನು. (ಉತ್ಪ್ರೇಕ್ಷಾಲಂಕಾರ).

ಯಚ್ಚಂದ್ರ ಸಾಲಾಸು ನಿಷೇದುಷೀಣಾಂ ಮೃಗೀ ದೃಶಾಂ ಹಾರಮಣಿ ಪ್ರಕಾಶೈಃ।
ತಿರಸ್ಕೃಯಾಂ ಪ್ರಾಪ್ಯ ವಿಲಜ್ಯಮಾನಾ ಸ್ತಾರಾಗಣಾ ನೂನ ಮಧಶ್ಚರಂತಿ ॥೬೦॥

ನಗರದಲ್ಲಿನ ಮೇಲಿನ ಮಹಡಿಗಳಲ್ಲಿ ಕೆಳಗೆ ನಕ್ಷತ್ರಗಳು ಸಂಚರಿಸುತ್ತಿದ್ದವು. ಏಕೆಂದರೆ, ನಗರದ ಮೇಲುಗಡೆಗಳಲ್ಲಿ ಇರುವ ಜಿಂಕೆಯ ಕಣ್ಣುಳ್ಳವರ ಮುತ್ತುಗಳ ಹಾರದಂತಿರುವ ಮಣಿಗಳ ಪ್ರಕಾಶವನ್ನು ಕಂಡು ನಾಚಿಕೆ ಪಟ್ಟು ಕೆಳಗಡೆಯೇ ಇದ್ದವು.

ನಕ್ಷತ್ರಗಳ ಕಾಂತಿಯೂ ಸಹ ನಗರದ ಅತ್ಯುನ್ನತ ಮಹಡಿಗಳಲ್ಲಿರುವ ಸ್ತ್ರೀಯರು ಧರಿಸಿರುವ ಮುತ್ತಿನ ಹಾರದ ಪ್ರಕಾಶದ ಎದುರಿಗೆ ಕಳಾಹೀನವಾಗಿ ತೋರಿ ಅವು ನಾಚಿಕೆ ಯಿಂದ ತಲೆಬಾಗಿಯೇ ಇದ್ದವು.

ಆ ನಗರದ ಮನೆಗಳ ಪ್ರತಿಯೊಂದು ಭಾಗವು ರತ್ನಮಯವಾಗಿದ್ದು ಎಲ್ಲವೂ ಅದ್ಭುತವಾಗಿ ಕನ್ನಡಿಯಂತೆ ಹೊಳೆಯುತ್ತಿದ್ದವು. ಸ್ತ್ರೀಯರು ತಮ್ಮ ರೂಪಾಲಂಕಾರವನ್ನು ನೋಡಿಕೊಳ್ಳಲು ಆಗಾಗ್ಗೆ ಕನ್ನಡಿಯನ್ನು ಬಳಸುತ್ತಾರೆ. ಆದರೆ ಇಲ್ಲಿ ಅವರಿಗೆ ಕನ್ನಡಿಯ ಅವಶ್ಯಕತೆ ಇಲ್ಲದೆ, ರತ್ನಗಳ ಕಾಂತಿಯಲ್ಲೇ ತಮ್ಮ ಮುಖಗಳನ್ನು ನೋಡಿಕೊಳ್ಳುತ್ತಿದ್ದರು. ಗಾಜಿನ ಕನ್ನಡಿಯನ್ನು ಕೇವಲ ಸಾಂಪ್ರದಾಯಿಕವಾಗಿ ಹಿಡಿದಿದ್ದರು.

ಗೃಹೇಷು ಯಸ್ಯಾಂ ಮಣಿಭಿತ್ತಿ ಭಾಗೇ ಪ್ರತಿಕ್ಷಣಂ ದೃಷ್ಟ ಮುಖೇಂದು ಬಿಂಬಃ।
ವಧೂಜನಃ ಕೇವಲಮಗ್ರಹಸ್ತೈರಾದತ್ತ ಮಂಗಲ್ಯತಯಾऽऽತ್ಮದರ್ಶಂ ॥೬೦॥

ನಗರದಲ್ಲಿ ರತ್ನಮಯವಾದ ಸ್ವರ್ಗಗಳ ಭಾಗಗಳಲ್ಲಿ ಒಂದೊಂದು ಕ್ಷಣವೂ ತಮ್ಮ ಚಂದ್ರನಂತಿರುವ ಮುಖಬಿಂಬಗಳನ್ನು ಕಂಡು, ಬರುವ ಸ್ತ್ರೀಗಳು ತಮ್ಮ ಮುಖ ನೋಡಲು ಕನ್ನಡಿ ಅಗತ್ಯವಿಲ್ಲವೆಂದು ಭಾವಿಸಿ, ಮಂಗಳಾರ್ಥವಾಗಿ ಮಾತ್ರ ಸಾಂಪ್ರದಾಯಿಕವಾಗಿ ಕನ್ನಡಿಯನ್ನು ಹಿಡಿದವರಾಗಿದ್ದರು.

ಆ ನಗರದ ಮನೆಗಳ ಪ್ರತಿಯೊಂದು ಭಾಗವು ರತ್ನಮಯವಾಗಿದ್ದು ಎಲ್ಲವೂ ಅದ್ಭುತವಾಗಿ ಕನ್ನಡಿಯಂತೆ ಹೊಳೆಯುತ್ತಿದ್ದವು. ಸ್ತ್ರೀಯರು ತಮ್ಮ ರೂಪಾಲಂಕಾರವನ್ನು ನೋಡಿಕೊಳ್ಳಲು ಆಗಾಗ್ಗೆ ಕನ್ನಡಿಯನ್ನು ಬಳಸುತ್ತಾರೆ. ಆದರೆ ಇಲ್ಲಿ ಅವರಿಗೆ ಕನ್ನಡಿಯ ಅವಶ್ಯಕತೆ ಇಲ್ಲದೆ, ಆ ಕಾಂತಿಯಲ್ಲೇ ತಮ್ಮ ಮುಖಗಳನ್ನು ನೋಡಿಕೊಳ್ಳುತ್ತಿದ್ದರು. ಗಾಜಿನ ಕನ್ನಡಿಯನ್ನು, ಕೇವಲ ಸಾಂಪ್ರದಾಯಿಕವಾಗಿ ಹಿಡಿದಿದ್ದರು.

ಅನಂತ ಚಿತ್ರ ಪ್ರತಿಮಾಭಿರಾಮೈ ರಜಸ್ರಮಾಕ್ರಾಂತ ದಿಶಾವಕಾಶೈಃ।
ಅಭಾವಯನ್ ಗೋಪುರ ವೈಭವೈರ್ಯಾ ವಿಶ್ವಪ್ರಸೂತೇರಿವ ವೈಶ್ವರೂಪ್ಯಂ ॥೬೧॥

ನಗರದಲ್ಲಿ ಗೋಪುರಗಳು ಅಳತೆಗೆ ಮೀರಿ ವಿಚಿತ್ರ ವಿಚಿತ್ರವಾಗಿ 'ಮಧುಮೇಖಲ' ಎಂಬಂತೆ ನಾಲ್ಕು ದಿಕ್ಕುಗಳಲ್ಲೂ ಹರಡಿರುವುದರಿಂದ ಅಷ್ಟು ಗೋಪುರಗಳನ್ನು ಹೊಂದಿರುವ ಆ ನಗರವು ಲೋಕವನ್ನೆಲ್ಲಾ ವ್ಯಾಪಿಸುವ ಪರಮಾತ್ಮನ ವಿಶ್ವ ರೂಪವನ್ನು ಹೋಲುತ್ತಿತ್ತು. (ವಿಶ್ವ ರೂಪದಲ್ಲಿ ಕಾಣುವ ವೈಭವವನ್ನೆಲ್ಲಾ ಆ ಗೋಪುರಗಳಲ್ಲಿ ಕಾಣಬಹುದಿತ್ತು).

ಆ ನಗರದ ಗೋಪುರಗಳಲ್ಲಿ ಎಲ್ಲವನ್ನೂ ಕಾಣಬಹುದಿತ್ತು. ಅಷ್ಟು ಸುಂದರವಾಗಿ ಕೆತ್ತನೆಯ ಕೆಲಸಗಳು ಮಾಡಲ್ಪಟ್ಟು, ಭಗವಂತನ ವಿಶ್ವರೂಪದಲ್ಲಿ ಕಾಣಬಹುದಾದ ಎಲ್ಲ ರೂಪಗಳನ್ನು ಆ ಗೋಪುರಗಳಲ್ಲಿ ಅಳವಡಿಸಿದ್ದರು. ಗೀತೆಯ ವಿಶ್ವರೂಪಾಧ್ಯಾಯದಲ್ಲಿ ವರ್ಣಿಸಿರುವಂತೆ ಗೋಪುರಗಳ ವಿನ್ಯಾಸವು ಇತ್ತು.

ಸರೋಭಿರುಲ್ಲಾಸಿತ ಪುಷ್ಕರಶ್ರೀಃ ಸಂಕೋಂಜಿತೈಃ ಸಂಗಮಿತ ಪ್ರಯಾಗಾ।
ಪ್ರಭಾಸಿತಾ ರತ್ನಗಣಾಂಶು ಭಿರ್ಯಾ ಧರ್ಮಾಶ್ರಯಾಣಾಮಿವ ಸಂ ಪ ದಾಸೀತ್ ॥೬೨॥

ಸರೋವರಗಳು ಅನೇಕವಾಗಿ ಇರುವುದರಿಂದ, ಪುಷ್ಕರ ಶೋಭೆಯನ್ನು ನಗರದಲ್ಲಿ ವಿಶೇಷವಾಗಿ ಕಾಣಬಹುದಿತ್ತು. ಕರ್ಮಫಲ ಸಂಗರಹಿತರು, ಪ್ರಯಾಗ ಸಂಬಂಧವನ್ನು ಹೊಂದಿದ್ದರು. ಧರ್ಮ ಕಾರ್ಯ ನಿರತರು ಪ್ರಭಾಸ ಕ್ಷೇತ್ರವೆಂದು ಭಾವಿಸಿದರು. ನಗರವೇ ಧರ್ಮ ಕ್ಷೇತ್ರದಂತಿತ್ತು.

ಪುಷ್ಕರ ಸರೋವರವು ಸರೋವರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದುದು. ಆದರೆ

ದ್ವಾರಕೆಯಲ್ಲಿರುವ ಎಲ್ಲಾ ಸರೋವರಗಳು ಪುಷ್ಕರಕ್ಕೆ ಸಮಾನವಾದುದಾಗಿ ಇತ್ತು. ಅಷ್ಟೇ ಅಲ್ಲ ತಪೋನಿರತರು ತಮ್ಮ ಎಲ್ಲಾ ಅನುಷ್ಠಾನಗಳಲ್ಲೂ ಆ ಸರೋವರಗಳಲ್ಲಿ ಪ್ರಯಾಗ ಕ್ಷೇತ್ರ ಅಥವಾ ಪ್ರಭಾಸ ಕ್ಷೇತ್ರಗಳಲ್ಲಿ ನಡೆಸುವಂತೆ ನಡೆಸಿ ಕೃತಾರ್ಥರಾದರು.

ಹಸದ್ಭಿರುಚ್ಚೈಃ ಶ್ರವಸಂ ಹಯಾಗ್ರ್ಯೈ ರೈರಾವತಂ ದಂತಿವರೈಶ್ಚ ದೃಪ್ತೈಃ।
ನರೋತ್ತಮೈರ್ನಾಕ ಸದಶ್ಚಯಾಽಭೂತ್ ಸುಭ್ರೂಭಿ ರಪ್ಸರಸಃ ಸ್ವಯಂ ದ್ಯೌಃ॥೬೪॥

'ಉಚ್ಚೈಃಶ್ರವಸ್ಸು' ಎಂಬ ಇಂದ್ರನ ಕುದುರೆಯನ್ನು ಗೇಲಿ ಮಾಡುವ ಕುದುರೆಗಳು, ಐರಾವತವನ್ನು ಅವಮತಿಸುವ ರೀತಿ ಆನೆಗಳೂ, ದೇವತೆಗಳನ್ನೂ ಅಪಹಾಸ್ಯ ಮಾಡುವ ರೀತಿ ಮನುಷ್ಯರೂ, ಅಪ್ಸರಸೆಯರನ್ನೂ ಅಲಕ್ಷ್ಯ ಮಾಡುವ ಸುಂದರ ಸ್ತ್ರೀಯರೂ, ಬೆಳಗುತ್ತಿದ್ದ ಆ ನಗರಿಯು ಉತ್ತಮವಾದ ಸ್ವರ್ಗದಂತಿತ್ತು.

ಆ ದ್ವಾರಕೆಯಲ್ಲಿ ಇದ್ದ ಎಲ್ಲಾ ವಸ್ತುಗಳು ಸರ್ವೋತ್ಕೃಷ್ಟವಾಗಿದ್ದವು. ಇದುವರೆಗೂ, ಅತ್ಯಂತಶ್ರೇಷ್ಠವಾದವು, ಎನಿಸಿಕೊಂಡಿದ್ದ, 'ಉಚ್ಚೈಃಶ್ರವಸ್ಸು' ಐರಾವತ, ಅಪ್ಸರೆಯರು ಎಲ್ಲರೂ ದ್ವಾರಕೆಯಲ್ಲಿರುವ ಕುದುರೆಗಳೂ, ಆನೆಗಳೂ, ಸ್ತ್ರೀಯರ ಮುಂದೆ ಅಲ್ಪವಾದದ್ದಾಗಿ ಕಂಡಿತು.

ವಪ್ರೇಷು ಯಸ್ಯಾಃ ಸ್ಫಟಿಕ ಪ್ರದೇಶಾನ್ ದ್ವಾರಾಭಿಮಾನಾತ್ ದ್ರುತಮಾಪತಂತಃ।
ಅವಾಪುರಾ ಗಂತುಜನಾಃ ಸಲೀಲೈ ರಂತಸ್ಸ್ಮಿತೈರ್ನಾಗರಕೈ ನಿರೋಧಂ ॥೬೫॥

ಬೇರೆ ಊರಿನ ಜನರು, ಆ ನಗರಿಯನ್ನು ಕೊಂಡಾಡುವವರಾಗಿ, ಅಲ್ಲಿ ಸ್ಫಟಿಕದಂತಿರುವ ಸ್ವಚ್ಛ ಸ್ಥಳಗಳನ್ನೂ ನೋಡಿ, ನಿರ್ಮಲವಾದ ನಗರವನ್ನು ಪ್ರವೇಶಿಸುವ ದ್ವಾರಗಳೆಂದು ತಪ್ಪಾಗಿ ಭಾವಿಸಿ, ವೇಗವಾಗಿ ಧಾವಿಸುವ ಸಮಯದಲ್ಲಿ ಅಲ್ಲಿರುವ ನಗರ ವಾಸಿಗಳು, ಅಡಗಿಸಲಾರದ ನಗೆಯೊಡನೆ 'ನಿಲ್ಲಿ' ಇದು ಬಾಗಿಲಲ್ಲ ಎಂದು ಅವರನ್ನು ನಿಲ್ಲಿಸಿದರು.

ದುರ್ಯೋಧನನು ಮಯ ನಿರ್ಮಿತವಾದ ಧರ್ಮರಾಜನ ರಾಜ ಸಭೆಯನ್ನು ನೋಡಿ, ಭ್ರಮೆಪಟ್ಟಂತೆ ದ್ವಾರಕಾ ನಗರಕ್ಕೆ ಹೊರಗಿನಿಂದ ಬರುವ ಪ್ರಯಾಣಿಕರು ಬಹಳ ಜಾಗರೂಕತೆಯಿಂದ ಓಡಿಯಾಡಬೇಕಿತ್ತು. ನೀರಿಲ್ಲದ ಕಡೆ ನೀರೆಂದೂ, ನೀರಿರುವ ಕಡೆ ನೆಲವೆಂದು ಭಾವಿಸಿ, ಜಾಗರೂಕತೆಯಿಂದ ತಿರುಗಾಡಬೇಕಿತ್ತು. ಅಷ್ಟು ಸ್ವಚ್ಛವಾಗಿತ್ತು ಆ ನಗರ.

ಪಯೋಭಿರಚ್ಛ ಸ್ಫಟಿಕ ದ್ರವಾಭೈಃ ದವೀಯಸಾಂ ದರ್ಶನ ಮಾದಧಾನೈಃ।
ಸುಧಾಧಿಕ ಸ್ವಾದುರಸೈರವಿಂದನ್ ಸ್ವಾಂತೋಪಮಾಂ ಯತ್ರ ಸತಾಂ ಸರಸ್ಯಃ ॥೬೬॥

ನಗರದಲ್ಲಿ ತಟಾಕಗಳು ಶುಭ್ರವಾಗಿ ಸ್ಫಟಿಕದಂತಿರುವುದನ್ನು ನೋಡಿ ಬಹಳದೂರದಲ್ಲಿ ಉಳ್ಳವರನ್ನೂ ತೋರಿಸುವಂತಿರುವ, ಅಮೃತಕ್ಕೂ ಮೇಲಾದ ಸಿಹಿಯಾದ ತೀರ್ಥಗಳು ಇದ್ದು, ಸತ್ಪುರುಷರ ಮನಸ್ಸನ್ನು ಸಂತೋಷಪಡಿಸುವಂತಿತ್ತು.

ಆ ದ್ವಾರಕೆಯಲ್ಲಿ ವಿಶ್ವಕರ್ಮನಿಂದ ನಿರ್ಮಿತವಾದ ತಟಾಕಗಳು ಅತ್ಯಂತ ಶುಭ್ರವಾಗಿ ನಿರ್ಮಲವಾಗಿದ್ದು, ''ರಮಣೀಯ ಪ್ರಸನ್ನಾಂಬು ಸನ್ಮನುಷ್ಯ ಮನೋ ಯಥಾ'' ಎಂಬಂತೆ ಸತ್ಪುರುಷರ ಮನಸ್ಸಿನಂತೆ ತಿಳಿಯಾಗಿ, ಅಲ್ಲಿಯ ನೀರು ಸಹ ಅತ್ಯಂತ ಸಿಹಿಯಾಗಿತ್ತು.

ಯಾಮೇಕ ಚಿತ್ತಃ ಪ್ರಸಮೀಕ್ಷ್ಯ ತುಷ್ಯನ್ ಯಾದೋ ನಿಧೇರಾಹಿತ ದಿಷ್ಟಿವೃದ್ಧಿಂ।
ಲಜ್ಜಾಮಯಾಸೀದಿವ ವಿಶ್ವಕರ್ಮಾ ಲಂಕಾದಿ ನಿರ್ಮಾಣ ಕಥಾ ಪ್ರಸಂಗೇ ॥೬೭॥

ವಿಶ್ವಕರ್ಮನಾದವನು, ಸಮುದ್ರದಲ್ಲಿ ನಿರ್ಮಿಸಿದ, ಸಮುದ್ರಕ್ಕೆ ಸಮಾನವಾಗಿ ಸಿದ್ಧಮಾಡಿದ ನಗರವನ್ನು ಒಂದೇ ಮನಸ್ಸಿನಿಂದ ಚೆನ್ನಾಗಿ ನೋಡಿ ಸಂತೋಷಗೊಂಡವನಾಗಿ ತನ್ನನ್ನು ಲಂಕೆ ಮೊದಲಾದ ಮಹಾ ನಗರಗಳನ್ನು ನಿರ್ಮಿಸಿದವನೆಂದು ಯಾರಾದರೂ ಹೊಗಳಿ ಮಾತಾಡಿದರೆ, ಈ ನಗರವನ್ನು ನಿರ್ಮಿಸಿದವನೆಂದು ಹೊಗಳಿ ಮಾತಾಡಿದರೆ, ಅದಕ್ಕೆ ನಾಚಿಕೆಪಟ್ಟವನಂತಾಗುತ್ತಿದ್ದನು. (ಲಂಕೆಯೂ ಸಮುದ್ರ ಮಧ್ಯದಲ್ಲಿತ್ತು. ಆದರೆ ದ್ವಾರಕೆಯು ಲಂಕೆಗಿಂತ ನೂರು ಪಟ್ಟು ಶ್ರೇಷ್ಠವಾದ ನಗರವಾಗಿತ್ತು. ಲಂಕೆಯ ಬಗ್ಗೆ ಯಾರಾದರೂ ಹೊಗಳಿದರೆ ಅವನಿಗೆ ಈಗ ನಾಚಿಕೆಯಾಗುತ್ತಿತ್ತು).

ವಿಶ್ವಕರ್ಮನು ಈ ಹಿಂದೆ ಅನೇಕ ನಗರಗಳನ್ನು ದೇವತೆಗಳಿಗಾಗಿ ನಿರ್ಮಿಸಿದ್ದನು. ಲಂಕೆಯನ್ನು ಕುಬೇರನಿಗಾಗಿ ಕಟ್ಟಿಕೊಟ್ಟಿದ್ದನು. ಆದರೆ ಆ ದ್ವಾರಕಾ ನಗರಿಯ ನಿರ್ಮಾಣವಾದ ಮೇಲೆ, ಈ ಹಿಂದೆ ತನ್ನಿಂದ ನಿರ್ಮಿಸಲ್ಪಟ್ಟ ನಗರಗಳು ನಾಚಿಕೆಯಿಂದ ತಲೆಬಾಗಿಸುವಂತಿದ್ದು ಅವನೂ ಸಹ ನಾಚಿಕೆಪಡುವಂತಾಯಿತು. ಲಂಕೆ ಇತ್ಯಾದಿಗಳನ್ನೇ ಜನರು ಹೊಗಳುತ್ತಿದ್ದರು. ಆದರೆ ಈಗ ದ್ವಾರಕೆಯು ಎಲ್ಲಕ್ಕಿಂತ ಮೇಲಾಯಿತು.

ಸಮಗ್ರ ರತ್ನೌಘ ಶುಭಾಕೃತಿಂ ಯಾಂ ಸನಾಯಕಾಂ ಮಧ್ಯಜುಷಾ ತ್ರಿಧಾಮ್ನಾ।
ಹೃದ್ಯಾಮಜಸ್ರಂ ಹೃದಯೇನ ಭೂಷಾಂ ರತ್ನಾಕರೋ ನೂನ ಮಧತ್ತ ರಮ್ಯಾಂ॥೬೮॥

ನಗರದ ಕಟ್ಟಡಗಳೆಲ್ಲವೂ, ಉತ್ತಮವಾದ ರತ್ನಗಳಿಂದ ಪ್ರಕಾಶಿಸುತ್ತಿದ್ದವು. ಭಗವಂತನು ನಡು ನಾಯಕನಾಗಿ ಬೆಳಗಿದನು. ಆಗ ನೋಡುವವರಿಗೆ, ಇಂತಹ ಅದ್ಭುತ ನಗರವನ್ನು ಸುಂದರವಾದ ರತ್ನಮಾಲೆಯಂತೆ ತೆಗೆದುಕೊಂಡು, ರತ್ನಾಕರವಾದ ಸಮುದ್ರದಿಂದ ಹೆಕ್ಕಿ ಕೃಷ್ಣನು ತನ್ನ ಹೃದಯದಲ್ಲಿ ಇಟ್ಟುಕೊಂಡಂತಿತ್ತು.

ಸಮುದ್ರದಲ್ಲಿ ಅತ್ಯುತ್ತಮ ರತ್ನಗಳಿವೆ. ಅವೆಲ್ಲವನ್ನೂ ಹೆಕ್ಕಿ ತೆಗೆದು ವಿಶ್ವಕರ್ಮನು ದ್ವಾರಕೆಯಲ್ಲೆಲ್ಲಾ ಮಾಲೆಗಳಂತೆ ಕಟ್ಟಿ ನಗರದ ಕಾಂತಿಯನ್ನು ದ್ವಿಗುಣಗೊಳಿಸಿದರು. ಶ್ರೀಕೃಷ್ಣನೇ ನಾಯಕ ಮಣಿ. ಉತ್ತಮ ರತ್ನಗಳೂ ಸೇರಿ ಅಪೂರ್ವವಾದ ಕಾಂತಿಯಿಂದ ಶೋಭಿಸುತ್ತಿತ್ತು ದ್ವಾರಕೆ.

ಅಭಿನ್ನಸತ್ವಾನ್ನಭಸಃ ಪರಸ್ಮಾತ್ ಕ್ಷೀರೋದಧೇ ರಂಶುಮತಶ್ಚ ಬಿಂಬಾತ್।
ರಮಾಸಖಸ್ಯ ಪ್ರಣಿಧಾನ ಭಾಜಾಂ ಯಾऽಭೂತ್ ಪ್ರಿಯಂ ವ್ಯಕ್ತಿಪದಂ ಪೃಥಿವ್ಯಾಂ ॥೬೯॥

ಸ್ವಾಮಿಯನ್ನು ಧ್ಯಾನಮಾಡುವವರಿಗೆ, ರಜೋಗುಣ, ತಮೋಗುಣ ಸೇರದ ಸತ್ವಗುಣ ದಿಂದ ಕೂಡಿದ ದಿವ್ಯವಾದ ವೈಕುಂಠದ ಕ್ಷೀರ ಸಮುದ್ರ, ಸೂರ್ಯ ಬಿಂಬ ಇವುಗಳಿಗಿಂತ ಉತ್ತಮವಾದ ಸ್ಥಳವಾಗಿ ಈ ಭೂಮಿಯು ಕಂಡಿತು ದ್ವಾರಕಾ ನಗರಿ.

ಆ ದ್ವಾರಕಾ ನಗರಿಯು ಭಗವಂತನ ಇತರ ಆವಾಸ ಸ್ಥಾನಗಳಾದ ವೈಕುಂಠ, ಕ್ಷೀರಸಮುದ್ರ, ಸೂರ್ಯ ಮಂಡಲ ಇವುಗಳಿಗಿಂತ ಮೇಲಾಗಿತ್ತು. ಇಲ್ಲಿ ಶ್ರೀಕೃಷ್ಣನು ನೆಲೆಸಿ, ಭಕ್ತರುಗಳಿಗೆ ಸುಲಭವಾಗಿ ದರ್ಶನ ನೀಡುತ್ತಿದ್ದನು. ಇತರ ಕಡೆಗಳಲ್ಲಿ ಭಗವಂತನ ದರ್ಶನ ದುಸ್ಸಾಧ್ಯವಾದುದು.

ಯತ್ಸೌಧ ಭಾಜೋ ನಿಶಿ ಸುಂದರೀಣಾಂ ಮುಖೇಂದುಭಿಶ್ಚೂಷಿತ ಕಾಂತಿಮಿಂದುಂ।
ಸದ್ಯಃ ಸ್ವನಿಷ್ಯಂದ ಸುಧಾ ಪ್ರವಾಹೈಃ ರಾಪ್ಯಾಯಯಾಮಾಸುರಿವೇಂದು ಕಾಂತಾಃ ॥೭೦॥

ನಗರದಲ್ಲಿ ಮಹಡಿಗಳಲ್ಲಿ ರಾತ್ರಿಗಳಲ್ಲಿ ಇರುವ ನಾರೀಮಣಿಗಳ ಮುಖಚಂದ್ರ ಗಳಿಂದ ಪರಿಭವ ಹೊಂದಿ ಕಾಂತಿಹೀನವಾದ ಚಂದ್ರಮಂಡಲವನ್ನು ನಗರದಲ್ಲಿ ಇರುವ ಚಂದ್ರಕಾಂತ ಶಿಲೆಗಳು, ಅಮೃತವನ್ನು ಸುರಿಸಿ, ಪುಷ್ಟಿಯನ್ನುಂಟುಮಾಡಿದವು.

ನಗರ ಸ್ತ್ರೀಯರ ಚಂದ್ರಮುಖ ಮಂಡಲದ ಎದುರಿಗೆ ನಿಜವಾದ ಚಂದ್ರನ ಕಾಂತಿಯು ತೇಜೋಹೀನವಾಗಿ ಪರಿಭವ ಹೊಂದಿದಂತೆ ಇತ್ತು. ಅದನ್ನು ಹೋಗಲಾಡಿಸಲು ಆ ನಗರ ದಲ್ಲಿ ಇದ್ದ ಚಂದ್ರಕಾಂತ ಶಿಲೆಗಳು ಸಹಾಯ ಮಾಡಿದವು.

ಉದ್ವೇಲ ಚಂಚೂತ್ತರ ಗೋರ್ಮಿಮಾಲಾ ಮುದ್ಘೋಷಿತಾ ಮುತ್ಸವ ತೂರ್ಯಘೋಷೈಃ।
ಪ್ರಭೂತ ರತ್ನೌಘ ನಿಧಿಂ ಪಯೋಧಿರ್ಯಾಮದ್ಭುತಾಂ ಯಾಚ ತಮನ್ವಕಾರ್ಷೀತ್॥೭೧॥

ಎಲ್ಲೆಲ್ಲೂ ಕೆನೆದು ನೆಗೆಯುವ ಕುದುರೆಗಳು ಅಲೆಗಳಂತೆ ಘರ್ಜಿಸುತ್ತಿದ್ದವು. ಕಡಲ ಅಲೆಗಳಂತೆ ಅಗಾಧವಾಗಿದ್ದವು. ದೊಡ್ಡ ದೊಡ್ಡ ರತ್ನಗಳು ಗುಡ್ಡೆ ಗುಡ್ಡೆಯಾಗಿ ಇರುತ್ತಿದ್ದವು. ಆದ್ದರಿಂದ ನಗರವು ಸಮುದ್ರದಂತೆ ಸಮುದ್ರ ನಗರದಂತಾಗಿ ಎರಡೂ ಪರಸ್ಪರ ಪೂರಕ ವಾಗಿದ್ದವು.

ಸಮುದ್ರ ಮಧ್ಯದಲ್ಲಿ ಇದ್ದ ಆ ದ್ವಾರಕಾ ನಗರಿಯು ಮತ್ತೊಂದು ಸಮುದ್ರದಂತೆಯೇ ಇದ್ದು ಒಂದಕ್ಕೊಂದು ಪೂರಕ ವಾಗಿದ್ದವು. ಉತ್ತಮ ಕುದುರೆಗಳು ರಾಜ ವೈಭವದ ಚಿಹ್ನೆ, ಅದರಂತೆ ದ್ವಾರಕಾ ನಗರಿಯಲ್ಲಿ ಶ್ರೇಷ್ಠ ಜಾತಿಯ ಕುದುರೆಗಳು ಹೇರಳವಾಗಿದ್ದವು.

ಯದ್ವ ಪ್ರಶೈಲೇಷು ದಿವಾಽಪಿ ಸಿಂಧೋ ರಾಸ್ಫಾಲನಾದುತ್ಪತಿತೈಃ ಪೃಷದ್ಭಿಃ।
ಉಕ್ಷಿಪ್ತಮುಕ್ತಾಫಲ ದರ್ಶನೀಯೈ ರಾಲಕ್ಷ್ಯತಾರಾಧಮಭೂತ್ ವಿಹಾಯಃ ॥೭೨॥

ಗಿರಿಯಂತೆ ಇರುವ ನಗರದ ಪ್ರಾಕಾರಗಳಲ್ಲಿ ಸಮುದ್ರವು ಅಪ್ಪಳಿಸುವುದರಿಂದ ದಡಕ್ಕೆ ಎಸೆಯಲ್ಪಟ್ಟು ಮುತ್ತುಗಳಂತೆ ತೋರುವ ನೀರಿನ ಹನಿಗಳು ಆಕಾಶವು ಪೂರ್ತಿ ಹರಡಿರುವುದರಿಂದ, ಹಗಲಲ್ಲಿಯೂ ನಕ್ಷತ್ರಗಳು ಹೊಳೆಯುತ್ತಿವೆಯೇನೋ ಎಂಬಂತೆ ಆಕಾಶವು ಬೆಳಗುತ್ತಿತ್ತು.

ದ್ವಾರಕಾ ನಗರದ ಕೋಟೆಯ ಗೋಡೆಗಳಿಗೆ ಅಪ್ಪಳಿಸುವ ಸಮುದ್ರದ ಅಲೆಗಳು ಆಕಾಶದೆತ್ತರಕ್ಕೆ ಚಿಮ್ಮಿ, ಆಕಾಶದಲ್ಲೆಲ್ಲಾ ಹನಿಗಳು ಹರಡಿ, ನಕ್ಷತ್ರಗಳಂತೆ ಪ್ರತಿಫಲಿಸುತ್ತಿತ್ತು. (ಉತ್ಪ್ರೇಕ್ಷಾಲಂಕಾರ).

ಕಲತ್ರ ಪುತ್ರಾದಿ ಜುಷಾಮಜಸ್ರಂ ದೀರ್ಘಾಯುಷಾಂ ಯತ್ರ ಸತಾಂ ಜನಾನಾಂ।
ಧರ್ಮೈರ್ಕ ಭಾಜಾ ಮಿತರೇ ಪುಮರ್ಥಾಃ ಪ್ರಾಯಃ ಸ್ವಯಂ ಸಂನಿಧಧುಃ ಸ್ವಭೃತ್ಯೈ ॥೭೩॥

ಹೆಂಡತಿ ಮಕ್ಕಳೊಡನೆ ಕೂಡಿ ಐಶ್ವರ್ಯವನ್ನು ಹೊಂದಿ, ದೀರ್ಘಾಯುಸ್ಸನ್ನು ಹೊಂದಿರುವ ನಗರದಲ್ಲಿ ಇರುವ ಪ್ರಜೆಗಳು ತಾವು ಧರ್ಮವೊಂದನ್ನೇ ಮುಖ್ಯವಾಗಿ ಹೊಂದಿರುವುದರಿಂದ ಅರ್ಥ, ಕಾಮವೆಂಬ ಇತರ ಪುರುಷಾರ್ಥಗಳು ತಾವಾಗಿಯೇ ಬಂದು ಸೇರುವುದೆಂದು ಭಾವಿಸಿದರು.

ಧರ್ಮ ಮಾರ್ಗದಲ್ಲಿ ನಡೆಯುವವರಿಗೆ ಇತರ ಪುರುಷಾರ್ಥಗಳು (ಅರ್ಥ, ಕಾಮ) ಗಳು ತಾವಾಗಿಯೇ ಬಂದು ಸೇರುತ್ತವೆ. ಅವರು ಅದಕ್ಕಾಗಿ ಭಗವಂತನನ್ನು ಪ್ರಾರ್ಥಿಸ ಬೇಕಾಗಿಲ್ಲ. ಆ ರೀತಿ ಧರ್ಮವೊಂದನ್ನೇ ಗುರಿಯಾಗಿ ಹೊಂದಿದ್ದ ದ್ವಾರಕೆಯ ಪ್ರಜೆಗಳು ಚತುರ್ವಿಧ ಪುರುಷಾರ್ಥಗಳನ್ನು ಪಡೆದು ಸಂತೃಪ್ತರಾಗಿದ್ದರು.

ರರಾಜ ಸಾ ರಾಮ ಜನಾರ್ದನಾಭ್ಯಾಂ ಪ್ರಾಪ್ತಪ್ರಕಾಶಾಽಪಿ ಯದು ಪ್ರವೀರೈಃ।
ಸತ್ಯೇವ ತಾರಾನಿಕರೇ ತ್ರಿಲೋಕೀ ಚಕ್ಷುಷ್ಮತಿ ಚಂದ್ರ ದಿವಾಕರಾಭ್ಯಾಂ ॥೭೪॥

ಈ ರೀತಿ ಎಲ್ಲಾ ಹಿರಿಮೆಗಳನ್ನು ಹೊಂದಿ, ಅನೇಕ ಯದು ವೀರರು ಸೇರಿ ಚೆನ್ನಾಗಿ ಶೋಭಿಸುವ ಆ ನಗರವಾದುದು, ಎಷ್ಟೋ ನಕ್ಷತ್ರಗಳು ಇದ್ದೂ, ಚಂದ್ರನು, ಸೂರ್ಯನು ಎಂಬ ಇಬ್ಬರಿಂದಲೇ ಮೂರು ಜಗತ್ತು ಬೆಳಗುವ ಹಾಗೆ, ಬಲರಾಮನು, ಕೃಷ್ಣನು ಎಂಬ ಇವರಿಬ್ಬರಿಂದಲೇ ನಿಜವಾಗಿ ಪೂರ್ಣವಾಗಿ ಶೋಭಿಸುತ್ತಿತ್ತು.

"ಏಕಶ್ಚಂದ್ರ ತಮೋ ಹಂತಿ ನತು ತಾರಾಗಣ ಕ್ವಚಿತ್" ಎಂಬಂತೆ ಆಕಾಶದಲ್ಲಿ ಎಷ್ಟು ನಕ್ಷತ್ರಗಳಿದ್ದರೂ, ಚಂದ್ರನಿದ್ದರೆ ಮಾತ್ರ ಚೆನ್ನಾಗಿ ಬೆಳದಿಂಗಳು ಪ್ರಸರಿಸುವಂತೆ ಚಂದ್ರಸೂರ್ಯರಂತಿದ್ದ ಆ ಬಲರಾಮ ಕೃಷ್ಣರ ಇರುವಿಕೆಯಿಂದಲೇ ದ್ವಾರಕೆಯು ಶೋಭಿಸುತ್ತಿತ್ತು. ಸರ್ವೋತ್ಕೃಷ್ಟವಾಗಿದ್ದ ಆ ದ್ವಾರಕಾ ನಗರಕ್ಕೆ ರಾಮ ಕೃಷ್ಣರು ತಿಲಕಪ್ರಾಯವಾಗಿದ್ದರು.

ಪ್ರಭುಣಾ ಸಹಸ್ರ ವದನೇನ ವರ್ಣ್ಯತಾಂ ದ್ವಿಗುಣೈರಮುಷ್ಯ ನಯನೈರವೇಕ್ಷ್ಯತಾಂ।
ಶ್ರುತಿಭಿಶ್ಚತಸ್ಯ ಬಹುಧಾ ನಿಶಮ್ಯ ತಾಮಾಧಿಕಾಂ ಕತಃ ಶ್ರಿಯಮವಾಪ ಸಾಪುರಿ॥೭೫॥

ಸಾವಿರ ಮುಖಗಳುಳ್ಳ ಆದಿಶೇಷನೋ, ಆದಿ ಮೂರ್ತಿಯೋ ಇದನ್ನು ವರ್ಣಿಸಲು ಸಾಧ್ಯ. ಸಾವಿರಕ್ಕೆ ಎರಡು ಪಟ್ಟು ಹೆಚ್ಚು ಕಣ್ಣುಗಳಿದ್ದರೂ ಸಾಲದು. ಸಹಸ್ರಾರು ಕಿವಿಗಳಿದ್ದರೂ ದ್ವಾರಕೆಯ ಮಹಿಮೆ ಕೇಳಲು ಸಾಧ್ಯವಾಗದು. ಅಂತಹ ಹಿರಿಮೆಯುಳ್ಳದು ಆ ದ್ವಾರಕಾ ಪಟ್ಟಣವು.

ದ್ವಾರಕೆಯ ಹಿರಿಮೆಯನ್ನು ವರ್ಣಿಸಲು ದ್ವಾರಕಾಧೀಶನಾದ ಭಗವಂತನೊಬ್ಬನಿಗೇ ಸಾಧ್ಯ. ಸಹಸ್ರಾಕ್ಷನಾದ ಇಂದ್ರನೂ ಸಹ ದ್ವಾರಕೆಯ ಸೌಂದರ್ಯವನ್ನು ಪೂರ್ಣವಾಗಿ ಅನುಭವಿಸಲಾರ.

ಸ್ವಯಮಜನಿ ಕಿಮತ್ರ ಶ್ವೇತ ಮೇವಾಂತರೀಪಂ ಪರಿಣತ ಮುತ ಕಿಂಚಿದ್ ಭಾಗದೇಯಂ ಪೃಥಿವ್ಯಾಃ।
ವರುಣ ನಗರ ಮನ್ಯತ್ ವಾರಿಧೇರುತ್ಥಿತಂ ವಾ ಕಿಮಿದಮಿತಿ ಪುರಂ ತತ್ಕೀರ್ತಯಂತಿ ಸ್ಮಪೌರಾಃ ॥೭೬॥

ನಗರದ ಪ್ರಜೆಗಳು ಅದನ್ನು ನೋಡಿ ಚಕಿತರಾಗಿ, ಏನು! ಕ್ಷೀರ ಸಮುದ್ರದಲ್ಲಿ ಬೆಳಗುವ ಶ್ವೇತ ದ್ವೀಪವೇ ಇಲ್ಲಿ ತೋರುತ್ತಿದೆಯೇನೋ! ಭೂಮಿಗೆ ಈ ಭಾಗವು ದೊರಕಲಿಲ್ಲವೇ!

ಜಲಾಭಿಮಾನಿ ದೇವತೆಯಾದ ವರಣನ ನಗರವೇ ನೀರಿನ ಮೇಲಕ್ಕೆ ನಿಂತಿದೆಯೋ! ಇದೇನಾಶ್ಚರ್ಯ!! ಎಂಬುದಾಗೆಲ್ಲಾ ಚರ್ಚೆ ಮಾಡುತ್ತಿದ್ದರು.

ಆ ದ್ವಾರಕೆಯ ಸೊಬಗನ್ನು ಕೊಂಡಾಡದವರೇ ಇರಲಿಲ್ಲ. ಇದುವರೆಗೂ ಭೂಮಿ ಯಲ್ಲಿ ಇಂತಹ ನಗರವು ನಿರ್ಮಿತವಾಗಿರಲಿಲ್ಲ ಎಂದು ಎಲ್ಲರೂ ಆಶ್ಚರ್ಯಪಡುವಂತೆ ಇತ್ತು ಆ ದ್ವಾರಕಾಪುರಿ.

ಪಾತಾಳ ಲೋಕದಲ್ಲಿರುವ ವರುಣನ ನಗರಿಯೇ ಮೇಲಕ್ಕೆ ಬಂದಿದೆಯೇನೋ! ಎಂದು ಅತ್ಯಾಶ್ಚರ್ಯ ಪಡುತ್ತಿದ್ದರು.

ರಾಮಪ್ರಷ್ಟೈ ರಧಿ ವಸತಿ ಸಾ ರಾಜಧಾನಿ ಜಗಾಹೆ ಲೋಕಾಧೀಶೇ
ಸಹ ಬಹುಮತೈರ್ಲೋಕಪಾಲೈರಿವಾನ್ಯೈಃ।
ಆಶ್ಚರ್ಯಾಣಾಂ ಪ್ರಕೃತಿರಿಯಮಿತ್ಯದ್ಭುತಾ ವೇಶಯೋಗ್ಯಾಂ ಅಗ್ರಪ್ರತ್ಯೂಹಾ ಮನಿತರ ತುಲಾ
ರೋಹಿಣೀಯಾಮಭಿಖ್ಯಾಂ ॥೭೭॥

ಆ ರಾಜಧಾನಿಯಾದುದು ಸರ್ವೇಶ್ವರನಾದ ಶ್ರೀಕೃಷ್ಣನು ದಿಕ್ಪಾಲಕರುಗಳಂತೆ ಗೌರವಿಸಲ್ಪಟ್ಟ ಬಲರಾಮನು ಮದಲಾದವರೊಡನೆ ಬಾಳುವೆ ನಡೆಸುತ್ತಾ, ಆಶ್ಚರ್ಯಗಳಿಗೆ ಅದೇ ಜನ್ಮಸ್ಥಳ ವಾಗಿ ಎಲ್ಲರಿಗೂ ಅದ್ಭುತ ರಸವನ್ನು ಕೊಡುವವನಾಗಿ ಪಡೆಯಲು ಬೇರೇನೂ ಇಲ್ಲದಂತಹ ಪ್ರಸಿದ್ಧಿಯನ್ನು ಹೊಂದಿತು.

ಶ್ರೀಕೃಷ್ಣ ಬಲರಾಮರ ಸಾನ್ನಿಧ್ಯ ಆ ದ್ವಾರಕೆಗೆ ಎಲ್ಲಿಲ್ಲದ ಗೌರವವನ್ನೂ ಕೀರ್ತಿಯನ್ನು ತಂದುಕೊಟ್ಟಿತು. ಭಗವಂತನು ಎಲ್ಲಾ ರಸಗಳಿಗೂ ನಾಯಕನಾದವನು. ಅವನೇ ಆ ನಗರದಲ್ಲಿ ಇಷ್ಟಪಟ್ಟು ತಂಗಿದ್ದಾನೆಂದ ಮೇಲೆ ಆ ನಗರದ ಭಾಗ್ಯವನ್ನು ವರ್ಣಿಸಲು ಸಾಧ್ಯವಿಲ್ಲ. ತ್ರೈಲೋಕ್ಯ ಪ್ರಸಿದ್ಧಿಯನ್ನು ಆ ನಗರ ಹೊಂದಿತು.

(ಭಾರತದ ಪುರಾತತ್ವ ಇಲಾಖೆಯವರು ಸಮುದ್ರ ಮಧ್ಯದಲ್ಲಿ ಮುಳುಗಿ ಹೋಗಿದ್ದ ದ್ವಾರಕೆಯು ಅವಶೇಷಗಳನ್ನು ಉತ್ಖನನ ಮಾಡಿ, ದ್ವಾರಕೆಯ ವೈಭೋಗದ ಬಗ್ಗೆ ಉಲ್ಲೇಖಿಸಿ, ಅತ್ಯುತ್ತಮ ಲೇಖನಗಳನ್ನು ಸಿದ್ದಪಡಿಸಿ, ದ್ವಾರಕೆಯ ಅಸ್ತಿತ್ವವನ್ನು ಖಚಿತಪಡಿಸಿದ್ದಾರೆ).

ತನ್ಮಧ್ಯೇ ವಿರಚಿತ ಶಿಲ್ಪಮೇರುಕಲ್ಪಂ ವೈಚಿತ್ರ್ಯಾದಪಹೃತ ವೈಜಯಂತ ಗರ್ವಂ।
ಪ್ರಸ್ಪಷ್ಟಂ ನಿಜಮಿವ ಪಾರಮೇಷ್ಠ್ಯಮುರ್ವ್ಯಾಂ ಪ್ರಾಸಾದಂ
ಪ್ರಭುರಧಿ ವಾಸಯಾಂ ಚಕಾರ ॥೭೮॥

ಆ ನಗರದ ನಡುವಿನಲ್ಲಿ ಶಿಲ್ಪ ಕೆಲಸಗಳನ್ನು ಸರಿಯಾಗಿ ಮಾಡಿ ಕೆತ್ತಲ್ಪಟ್ಟ ಮೇರು ಶಿಖರದ ಹಾಗೆ ಅದ್ಭುತವಾಗಿದ್ದ ಅಮರ ಪತಿಯಾದ ಇಂದ್ರನ ಮಾಳಿಗೆಯ ಮದವನ್ನು ಇಳಿಸುವಂತಿದ್ದು ಪರಮಪದದಲ್ಲಿ ತನಗೇನೇ ಇರುವ ಸ್ಥಾನವನ್ನು ಎಲ್ಲರೂ ನೋಡುವಂತೆ ಇರುವುದಾಗಿದ್ದು ಒಂದು ದೊಡ್ಡ ಗೃಹವನ್ನು ಶ್ರೀಕೃಷ್ಣನು ತನ್ನ ದಿವ್ಯ ಅರಮನೆಯನ್ನಾಗಿ ಮಾಡಿಕೊಂಡನು.

ಆ ನಗರದ ಕೇಂದ್ರ ಸ್ಥಾನದಲ್ಲಿ ಶ್ರೀಕೃಷ್ಣನು ತನಗಾಗಿ ಮತ್ತು ಮುಂದೆ ಬರುವ ತನ್ನ ಮಡದಿಯರಿಗಾಗಿ, ಸಕಲ ಅನುಕೂಲಗಳನ್ನು ಸಕಲ ವೈಭೋಗಗಳನ್ನು ಹೊಂದಿದ್ದ ಒಂದು ದಿವ್ಯವಾದ ಅರಮನೆಯನ್ನು ನಿರ್ಮಿಸಿಕೊಂಡು ಅವರಲ್ಲಿ ವಿರಾಜಮಾನನಾದನು. ಶ್ರೀಮದ್ಭಾಗವತದಲ್ಲಿ ದ್ವಾರಕಾ ನಗರಿಯ ವೈಭವವನ್ನು ಶ್ರೀ ಶುಕಾಚಾರ್ಯರು ಬಹುವಾಗಿ ವರ್ಣಿಸಿದ್ದಾರೆ.

ರಾಮಃ ಪುನರ್ವ್ರಜ ಮುಪೇತ್ಯ ವಿಹಾರಭೇದೈ ರಾಶ್ವಾಸಯನ್ ಸಹಚರೈಃ ಸುಹೃದಶ್ಚ ಸರ್ವಾನ್।
ವಿಶ್ರಾಣಿತಾಂ ದುಹಿತರಂ ವರುಣೇನ ವಿಂದನ್ ಸೀರಾವ ಕೃಷ್ಟ
ಯಮುನಾ ಸ್ನಪಿತೋ ವಿಜಹ್ರೇ ॥೭೯॥

ಬಲರಾಮನು ಮಾತ್ರ ಮತ್ತೆ ಗೋಕುಲಕ್ಕೆ ಹೋಗಿ, ಸ್ನೇಹಿತರುಗಳೊಡನೆ ಸೇರಿ ಅನೇಕ ಕ್ರೀಡೆಗಳನ್ನಾಡಿ ಎಲ್ಲಾ ಸ್ನೇಹಿತರುಗಳನ್ನು ಸಮಾಧಾನ ಪಡಿಸುತ್ತಾ ಅಲ್ಲಿ ವರುಣನಿಂದ ತನ್ನ ಸ್ತ್ರೀಯಾಗಿ ಗೌರವಿಸಲ್ಪಟ್ಟ ವಾರುಣಿಯನ್ನು ಕಳಿಸಿದಾಗ, ಅದರಿಂದ ಅವಳು ನೀಡಿದ ಮದ್ಯವನ್ನು ಹೊಂದಿದನು. ಯಮುನೆಯನ್ನು ತನ್ನ ಜಾಗಕ್ಕೆ ಪ್ರವಾಹವಾಗಿ ಹರಿಯಬೇಕೆಂದು ಹೇಳಿದಾಗ, ಅವಳು ಬರಲಿಲ್ಲವಾದ್ದರಿಂದ, ತಾನೇ ನೇಗಿಲಿನಿಂದ ಅವಳನ್ನು ತನ್ನ ಸ್ಥಳಕ್ಕೆ ಎಳೆದು ಸ್ನಾನ, ಜಲಕ್ರೀಡೆ ಎಲ್ಲವನ್ನೂ ನಡೆಸಿದನು.

ಶ್ರೀಕೃಷ್ಣನು ಮತ್ತೆ ಗೋಕುಲಕ್ಕೆ ಹಿಂತಿರುಗಲಿಲ್ಲ. ತನ್ನ ಪರವಾಗಿ ಬಲರಾಮನನ್ನು ಕಳುಹಿಸಿ, ಗೋಪಿಯರನ್ನೆಲ್ಲಾ ಸಮಾಧಾನಪಡಿಸಿದನು. ಬಲರಾಮನು ವೃಂದಾವನದಲ್ಲಿ ಗೋಪಿಕೆಯರೊಡನೆ ಯಮುನಾ ನದಿಯಲ್ಲಿ ವಿಹರಿಸುತ್ತಾ ಇನ್ನೂ ಅನೇಕ ಕಾರ್ಯಗಳನ್ನು ನಡೆಸಿದನು.

ಪ್ರತ್ಯಂಚ ಮಬ್ಧಿ ಮವಧೂತವತೋ ಅತಿದೂರಂ ದಗುದ್ಧಚ್ಚಕೂಲಮಿವ ದಕ್ಷಿಣಮಸ್ತ್ರಭೂಮ್ನಾ
ಆಕರ್ಷತಶ್ಚ ಸರಿತಂ ಸವಿತೃಪ್ರಸೂತಾಂ ರಾಮಸ್ಯ ತಸ್ಯ ಶುಶುಭೇ ರಸಿಕಸ್ಯಲೀಲಾ ॥೮೦॥

ಬಲರಾಮನು ಕ್ರೀಡೆಗಳು ಮೂರು ರಾಮಾವತಾರದಲ್ಲೂ ವಿನೋದವಾಗಿದ್ದವು. ಪರಶುನಾಮನಾಗಿದ್ದಾಗ, ತಪಸ್ಸನ್ನು ಮಾಡಲು ಉತ್ತರ ದಿಕ್ಕಿನಲ್ಲಿ ಸಮುದ್ರವನ್ನು ಬಹಳ ದೂರಕ್ಕೆ ತಳ್ಳಿದನು.

ದಶರಥ ರಾಮನಾಗಿದ್ದಾಗ, ಸಮುದ್ರವನ್ನು ದಾಟಲು, ದಕ್ಷಿಣ ಸಮುದ್ರವನ್ನು ತನ್ನ ಬಾಣಗಳಿಂದ ಅಡಗಿಸಿದನು. ಬಲರಾಮಾವತಾರದಲ್ಲಿ ಸೂರ್ಯ ಕುಮಾರಿಯಾದ ಯಮುನೆಯನ್ನು, ನೇಗಿಲನ್ನು ಬಹಳ ದೂರಕ್ಕೆ ಎಸೆದು ಎಳೆದುಕೊಂಡನು. ರಸೋತ್ಪತ್ತಿ ಉಂಟು ಮಾಡುವ ಈ ಅದ್ಭುತ ಕಾರ್ಯಗಳು ರಸಿಕನಾದ ರಾಮನ ಮಹಾ ಲೀಲೆಗಳೇ ಸರಿ.

ಪರಶುರಾಮ, ದಶರಥ ರಾಮ, ಬಲರಾಮ, ಇವು ಮೂರು ರಾಮಾವತಾರಗಳಲ್ಲಿ ಶ್ರೀಮನ್ನಾರಾಯಣನು ಅನೇಕ ಅದ್ಭುತ ಲೀಲೆಗಳನ್ನು ನಡೆಸಿದ್ದಾನೆ. ಅವುಗಳಲ್ಲಿ ಕೆಲವನ್ನು ಈ ಶ್ಲೋಕಗಳಲ್ಲಿ ಉದಾಹರಿಸಿದ್ದಾರೆ.

ಸ್ವಾಮಿ ವೇದಾಂತ ದೇಶಿಕರು ದಶಾವತಾರ ಸ್ತೋತ್ರದಲ್ಲಿ ಬಲರಾಮನ ಹಾಗೂ ಶ್ರೀಕೃಷ್ಣನ ಲೀಲೆಗಳು ಹಾಲು, ಸಕ್ಕರೆ ಸೇರಿದಂತೆ ಅತ್ಯಂತ ಸ್ವಾದುವಾಗಿ ಎಲ್ಲರ ಮನಸ್ಸಿಗೂ ರಂಜನೆಯನ್ನು ಉಂಟು ಮಾಡಿತು ಎಂದಿದ್ದಾರೆ.

ಪದ್ಮಯೋನಿ ವಚನಾ ದುಪನೀತಾಂ ಪ್ರಾಕ್ತನೀಂ ಪ್ರಿಯ ತಮಾಮಿವ ಕಾಂತಿಂ
ರೇವತಸ್ಯ ತನಯಾ ಅನುರೂಪಾಂ ರೇವತೀಂ ಚ ಪರಿಣೀಯ ಸ ರೇಮೇ ॥೮೧॥

ಮತ್ತೆ ಬಲರಾಮನು ತಾನು ಆದಿಶೇಷನಾಗಿದ್ದ ಕಾಲದಲ್ಲೇ ಪ್ರೀತಿಯ ಮಡದಿಯಾಗಿದ್ದ ಕಾಂತಿ ಎಂಬುವಳನ್ನು ಹೊಂದಿ, ಈಗ ರೇವತ ಮಹಾರಾಜನ ಮಗಳಾಗಿ ತನಗೆ ತಕ್ಕವಳಾದ ರೇವತಿ ಎಂಬುವವಳನ್ನು ಬ್ರಹ್ಮನು ರೇವತನಿಗೆ ಮಾಡಿದ ಉಪದೇಶ ಪ್ರಕಾರ ಮಡದಿಯನ್ನಾಗಿ ಸ್ವೀಕರಿಸಿದನು.

ಬಲರಾಮನು ರೇವತ ರಾಜನ ಮಗಳಾದ ರೇವತಿ ಎಂಬುವಳನ್ನು ಹೆಂಡತಿಯಾಗಿ ಸ್ವೀಕರಿಸಿದನು.

ಇದಕ್ಕೆ ಸಂಬಂಧ ಪಟ್ಟ ಪುರಾಣ ಕತೆ ಹೀಗಿದೆ.

ರೇವತನು ತನ್ನ ಮಗಳಿಗೆ ಅನುರೂಪನಾದ ತಕ್ಕ ವರ ಯಾರು? ಎಂದು ತಿಳಿಯಲು ಬ್ರಹ್ಮಲೋಕಕ್ಕೆ ಹೋದಾಗ ಅಲ್ಲಿ ದೇವಗಾನ ನಡೆಯುತ್ತಿತ್ತು. ಅದು ಮುಗಿಯುವವರೆಗೂ ಕಾದಿದ್ದು, ನಂತರ ಬ್ರಹ್ಮನನ್ನು ಕೇಳಿದಾಗ, ಬ್ರಹ್ಮನು ನಕ್ಕು ಈಗ ಅನೇಕ ಯುಗಗಳು ಕಳೆದುಹೋದವು. ಆದರೂ ಚಿಂತೆಯಿಲ್ಲ. ಈಗ ಭೂಲೋಕದಲ್ಲಿ ನಾರಾಯಣನ ಅಂಶಾವತಾರವಾಗಿ ಶೇಷನು ಬಲರಾಮನಾಗಿ ಜನಿಸಿದ್ದಾನೆ. ಅವನಿಗೆ ನಿನ್ನ ಮಗಳಾದ ರೇವತಿಯನ್ನು ಮದುವೆ ಮಾಡಿಕೊಡು' ಎಂದು ಹೇಳಿದಾಗ ಅದೇ ರೀತಿ ಭೂಲೋಕಕ್ಕೆ ಬಂದು ಬಲರಾಮನಿಗೆ ರೇವತಿಯನ್ನು ವಿವಾಹ ಮಾಡಿಕೊಟ್ಟನು.

'ದ್ವಾರಕಾಧಿಷ್ಠಾನ'ವೆಂಬ ಹನ್ನೊಂದನೆಯ ಸರ್ಗವು ಮುಗಿದುದು

ದ್ವಾದಶಃ ಸರ್ಗಃ - ೧೨

ರುಕ್ಮಿಣೀ ಅಭ್ಯುದಯ



ಹನ್ನೆರಡನೆಯ ಸರ್ಗವನ್ನು "ರುಕ್ಮಿಣೀ ಅಭ್ಯುದಯ ಸರ್ಗ" ವೆಂದು ಕರೆಯಲಾಗಿದೆ. ಇದರಲ್ಲಿ 93 ಶ್ಲೋಕಗಳಿವೆ. ನಾರಾಯಣನು ಶ್ರೀಕೃಷ್ಣನಾಗಿ ಅವತಾರ ಮಾಡಿದಾಗ, ಮಹಾಲಕ್ಷ್ಮಿಯು ರುಕ್ಮಿಣಿಯಾಗಿ ಅವತಾರ ಮಾಡುತ್ತಾಳೆ. ಕುಂಡಿನ ನಗರದಲ್ಲಿ ಭೀಷ್ಮಕ ರಾಜನ ಮಗಳಾಗಿ ಜನಿಸಿ, ಶ್ರೀಕೃಷ್ಣನಿಗೆ ಮಡದಿಯಾಗುತ್ತಾಳೆ. ಭೀಷ್ಮಕ ರಾಜನಿಗೆ ಅನುಪಮ ರೂಪವತಿಯಾದ ಇವಳನ್ನು ಶಿಶುಪಾಲನಿಗೆ ಕೊಡುವ ಆಸೆ. ಅವಳ ಅಣ್ಣನಾದ ರುಕ್ಮಿಗೂ ಸಹ ಅದೇ ಆಸೆ. ಆದರೆ ಶ್ರೀಕೃಷ್ಣನ ಲೋಕ ಕಲ್ಯಾಣ ಗುಣಗಳನ್ನು ಕೇಳಿದ ರುಕ್ಮಿಣಿಯು ಅವನನ್ನು ಆಸೆ ಪಡುತ್ತಾಳೆ. ರಾಜನು ರುಕ್ಮಿಣಿಯ ಸ್ವಯಂವರ ಏರ್ಪಡಿಸುತ್ತಾನೆ.

ಈ ಸರ್ಗದಲ್ಲಿ ರುಕ್ಮಿಣಿಯ ಜನನ, ಅವಳ ಬಾಲ್ಯ, ಯೌವನ ಇವುಗಳನ್ನು ಸುಂದರ ವಾಗಿ ಅನೇಕ ಉಪಮೆಗಳನ್ನು ನೀಡಿ, ಆಚಾರ್ಯರು ವರ್ಣಿಸಿದ್ದಾರೆ. ಪ್ರಾರಂಭದ ಕೆಲವು ಶ್ಲೋಕಗಳನ್ನು ಹೊರತು ಪಡಿಸಿ ಅನೇಕ ಶ್ಲೋಕಗಳು ರುಕ್ಮಿಣಿಯ ವಿವಿಧ ಅಂಗಗಳ ವರ್ಣನೆಯಿಂದ ಕೂಡಿದೆ.

ಶ್ರೀ ದೇಶಿಕರ ಕಾವ್ಯ ರಸಿಕತೆಗೆ, ಭಾಷಾ ಪ್ರೌಢಿಮೆಗೆ ಈ ಶ್ಲೋಕಗಳು ಸಾಕ್ಷಿಯಾಗಿವೆ. ರುಕ್ಮಿಣಿಯು ಸ್ವಯಂವರಕ್ಕೆ ಮೊದಲು ಕುಲ ದೇವತಾ ಮಂದಿರಕ್ಕೆ ಹೋಗುವವರೆಗೆ ಈ ಸರ್ಗದಲ್ಲಿ ಕಥಾಭಾಗವಿದೆ.

ಈ ಸರ್ಗದಲ್ಲಿ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1- 10 ರುಕ್ಮಿಣಿಯ ಪ್ರಾದುರ್ಭಾವ.

11-21 ರುಕ್ಮಿಣಿಯ ಸೌಂದರ್ಯ ವರ್ಣನೆ ಹಾಗೂ ಬಾಲ್ಯ.

22-28 ರುಕ್ಮಿಣಿಯು ಯೌವನಕ್ಕೆ ಕಾಲಿಟ್ಟಿದುದು.

29-65 ರುಕ್ಮಿಣಿಯ ಅಂಗಾಂಗ ವರ್ಣನೆ.

66-82 ರುಕ್ಮಿಣಿ ಧರಿಸಿರುವ ಆಭರಣಗಳ ವರ್ಣನೆ.

83-92 ರುಕ್ಮಿಣಿಯು ಸ್ವಯಂವರಕ್ಕೆ ಮುನ್ನ ಕುಲದೇವತಾ ಮಂದಿರಕ್ಕೆ ಭೇಟಿ ನೀಡುವುದು.

93 ರುಕ್ಮಿಣಿಗೆ ಶುಭ ಶಕುನಗಳು.



ದ್ವಾದಶಃ ಸರ್ಗಃ - ೧೨

ರುಕ್ಮಿಣೀ ಅಭ್ಯುದಯ

ತಥಾ ವಿಧಾನಂದ ಮಹಾಪಯೋಧೇ ಸ್ತರಂಗ ವೃತ್ತ್ಯಾ ಭಜತೋ ಅವತಾರಾನ್।
ಅಶೇಷ ರೂಪೇಷ್ವನುರೂಪರೂಪಾ ದೇವಿ ಜಗನ್ನೇತು ರನು ಪ್ರಜಜ್ಞೆ ॥೧॥

ಉಪನಿಷತ್ತುಗಳಲ್ಲಿ ಬಹುವಾಗಿ ಅನೇಕ ವಾಕ್ಯಗಳಲ್ಲಿ ಹೇಳಲ್ಪಟ್ಟಿರುವ ಮಹದಾನಂದ ಸಮುದ್ರವಾದ ಸ್ವಾಮಿಯು, ಆ ಸಮುದ್ರದ ಅಲೆಗಳಂತಿರುವ ಅವತಾರಗಳನ್ನು ಎತ್ತುತ್ತಾನೆ. ಜಗತ್ತಿನ ನಿರ್ವಾಹಕನಾದ ಅವನಿಗೆ ಎಲ್ಲಾ ಅವತಾರ ರೂಪಗಳಲ್ಲೂ ಅವನಂತೆಯೇ ತಕ್ಕುದಾದ ರೂಪಗಳನ್ನು ಧರಿಸಿ ಅವತರಿಸುವ ಲಕ್ಷ್ಮೀದೇವಿಯು ಶ್ರೀಕೃಷ್ಣನಾದ ಭಗವಂತನಿಗೆ ಹೆಣ್ಣಾಗಿ ತೋರಿಬಂದಳು.

''ರಾಘವತ್ವೆ ಭವೇತ್ಸತಾ ರುಕ್ಮಿಣಿ ಕೃಷ್ಣ ಜನ್ಮನಿ ಅನ್ಯೇಷು ಚಾವತಾರೇಷು ವಿಷ್ಣೋ ಶ್ರೀರನಪಾಯಿನಿ'' ಎಂಬಂತೆ ಭಗವಂತನಾದ ನಾರಾಯಣನು ಅವತರಿಸುವಾಗಲೆಲ್ಲಾ, ಮಹಾಲಕ್ಷ್ಮಿಯು ಅವನ ಜೊತೆಯಲ್ಲಿಯೇ ಅವತಾರ ಮಾಡಿ ಅವನ ಮಡದಿಯಾಗಿ ಬರುತ್ತಾಳೆ.

ರಾಮನಾದಾಗ, ಸೀತೆಯಾಗಿ, ವರಾಹನಾದಾಗ ಭೂಮಿಯಾಗಿ, ನರಸಿಂಹನಾದಾಗ ಲಕ್ಷ್ಮಿಯಾಗಿ, ಈಗ ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿ ಅವತಾರವನ್ನೆತ್ತಿದ್ದಾಳೆ.

ಈ ಸರ್ಗದಲ್ಲಿ ರುಕ್ಮಿಣಿಯ ಅವತಾರದ ವಿಷಯ ಮತ್ತು ಅವಳ ಅನುಪಮ ಸೌಂದರ್ಯದ ವರ್ಣನೆ ಇದೆ.

ಸಾ ತಸ್ಯ ನಿತ್ಯೋದಿತ ದಿವ್ಯಧಾಮ್ನಃ ಪತ್ಯುಃ ಪ್ರಿಯಾ ಭಾನುಮತಃ ಪ್ರಮೇವ।
ಅಧ್ಯಾಸಿತುದ್ವಾರವತೀ ಮದೂರಾತ್ ವ್ಯಕ್ತಿಂ ಶುಭಾಂ ಪ್ರಾಪ ವಿದರ್ಭದೇಶೇ ॥೨॥

ನಿತ್ಯವಾದ ಪರಮಪದದಲ್ಲಿ ನಿತ್ಯವಾಗಿ ತೋರುವ ಅಪ್ರಾಕೃತ ಪರರೂಪ ಹೊಂದಿರುವ ತನ್ನ ಸ್ವಾಮಿಗೆ ಪ್ರಿಯವಾದವಳಾಗಿ, ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳ ಅವನಿಗಾಗಿ ಅವತರಿಸುವ ದೇವಿಯು, ದ್ವಾರಕೆಯಲ್ಲಿ ವಾಸ ಮಾಡುವವನಿಗೆ, ಸಮೀಪದಲ್ಲಿರುವ ವಿದರ್ಭ ದೇಶದಲ್ಲಿ ಜಗತ್ತಿಗೆ ಕ್ಷೇಮಕರವಾದ ಜನ್ಮವನ್ನು ಪಡೆದಳು.

ವಿದರ್ಭ ದೇಶವು ದ್ವಾರಕೆಗೆ ಸಮೀಪದಲ್ಲಿದೆ. ಅಲ್ಲಿಯ ರಾಜನ ಹೆಸರು ಭೀಷ್ಮಕನೆಂಬುದಾಗಿ. ಸಕಲ ಲೋಕ ಜನನಿಯಾದ, ವೈಕುಂಠದಲ್ಲಿ ನಿತ್ಯ ವಾಸ ಮಾಡುವ, ಅವನ ಹೃದಯದಲ್ಲೇ ಯಾವಾಗಲೂ ನೆಲೆಸಿರುವಳಾದ, ಕ್ಷೀರಸಾಗರ ಕನ್ಯೆಯಾದ ಮಹಾಲಕ್ಷ್ಮಿಯು, ಶ್ರೀಕೃಷ್ಣನಿಗೆ ಪ್ರಿಯಪತ್ನಿಯಾಗಲು ಜಗತ್ತಿಗೆ ಕ್ಷೇಮವನ್ನುಂಟು ಮಾಡಲು ಆ ಮಹಾರಾಜನ ಮಗಳಾಗಿ ಜನ್ಮತಾಳಿದಳು.

ಶಿಖಂಡಕಂ ನಿಷ್ಪ್ರತಿಮಂ ಶ್ರುತಿನಾಂ ಶೃಂಗಾರ ಲೀಲೋಪಮ ವಿಶ್ವಕೃತ್ಯಂ।
ಅಧೀಯತೆ ತನ್ಮಿಥುನಂ ಸ್ವಭಾವಾದನ್ಯೋನ್ಯ ಜೀವಾತು ಅನನ್ಯ ಭೋಗ್ಯಂ ॥೩॥

ವೇದಗಳಿಗೆ ಅಲಂಕಾರಪ್ರಾಯವಾದ ಶಿರೋಭೂಷಣವಾದ ಜಗತ್ತಿನ ಸರ್ವ ವ್ಯಾಪಾರಗಳನ್ನು ತಮ್ಮ ಶೃಂಗಾರ ಲೀಲೆಯಾಗಿ, ನಡೆಸಿಕೊಂಡು ಬರುವವರಾಗಿ, ಸಹಜವಾಗಿಯೇ ಒಬ್ಬರಿಗೊಬ್ಬರು ಬಾಳುವುದಕ್ಕಾಗಿ ಔಷಧದಂತೆಯೂ ಇರುವ ಬೇರೆ ಆಸೆಯಿಲ್ಲದ ಪರಮೈಕಾಂತಿಗಳಿಗೆ ಪ್ರಾಪ್ಯವಾಗಿಯೂ ಇರುವ ಆ ದಿವ್ಯ ದಂಪತಿಗಳನ್ನು ಎಲ್ಲರೂ ಆರಾಧಿಸಿದರು.

ಲಕ್ಷ್ಮಿ ನಾರಾಯಣರಿಬ್ಬರೂ ಜಗತ್ತಿನ ಕ್ಷೇಮಾರ್ಥವಾಗಿ, ಲೀಲಾವಿಭೂತಿಯಾದ ಈ ಜಗತ್ತಿನಲ್ಲಿ ಒಟ್ಟಿಗೆ ಅವತಾರ ಮಾಡಿ ದಂಪತಿಗಳಾಗಿಯೇ ಬಾಳಿ, ಜಗತ್ತಿಗೆ ಮಾರ್ಗದರ್ಶನ ಮಾಡುತ್ತಾರೆ. ''ತುಲ್ಯಶೀಲ ವಯೋವೃತ್ತಾಂ ತುಲ್ಯಾಭಿ ಜನ ಲಕ್ಷಣಾಂ'' ಎಂಬಂತೆ ಒಬ್ಬರಿಗೊಬ್ಬರು ಅನುರೂಪರಾಗಿ ಜಗತ್ತಿನ ಕಷ್ಟನಷ್ಟಗಳಲ್ಲಿ ತಾವು ಪಾಲ್ಗೊಂಡು, ಎಲ್ಲರಿಗೂ ಮೋಕ್ಷ ನೀಡುತ್ತಾರೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣರುಕ್ಮಿಣಿಯರಾಗಿ ಅವತರಿಸಿರುವ ದಿವ್ಯ ದಂಪತಿಗಳನ್ನು ಎಲ್ಲರೂ ಸ್ವಾಗತಿಸಿದರು.

ದಯೇವ ನಿತ್ಯಂ ದಯಿತಾ ತ್ರಿಧಾಮ್ನಃ ಸರ್ವೇಷು ಭಾವೇಷು ಸಮಾನ ಭಾವಾ।
ಪರಾವರಾಣಾಂ ಜನನೀ ಪ್ರಜಾನಾಂ ಆಸೀತ್ ವಿದರ್ಭಾದಿಪತೇರಪತ್ಯಂ ॥೪॥

ವೈಕುಂಠವು ಸೂರ್ಯ ಮಂಡಲ, ಕ್ಷೀರ ಸಮುದ್ರಎಂಬ ಅನೇಕ ಸ್ಥಳಗಳಲ್ಲಿ ತೋರುವ ಅವನಿಗೆ 'ದಯೆ' ಎಂಬ ಗುಣವು ಯಾವಾಗಲೂ ಅವನಿಗೆ ಪ್ರಿಯವಾಗಿ ಅವನ ಎಲ್ಲಾ ಅವಸ್ಥೆಗಳಿಗೂ ಸಹಕಾರಿಯಾಗಿರುವ ಉತ್ತಮ ಗುಣವಾಗಿ ಉತ್ತಮರು, ಅಧಮರು ಎಂಬ ಎಲ್ಲಾ ಪ್ರಜೆಗಳಿಗೂ (ತಾಯಿಯಂತೆ) ಕ್ಷೇಮವನ್ನುಂಟು ಮಾಡುವವಳಾಗಿ, ವಿದರ್ಭ ರಾಜನಿಗೆ ಮಗಳಾಗಿ ಜನಿಸಿದಳು.

ಸ್ವಾಮಿ ದೇಶಿಕರು 'ದಯಾ ಶತಕ' ಎಂಬ ತಮ್ಮ ಅದ್ಭುತವಾದ ಸ್ತೋತ್ರದಲ್ಲಿ ಶ್ರೀನಿವಾಸನ ದಯೆ ಎಂಬ ಗುಣವೇ ಅವನಿಗೆ ಮಡದಿಯಾಗಿ ಲೋಕವನ್ನೆಲ್ಲಾ ಕಾಪಾಡುತ್ತದೆ. ಅವನು ಜೀವಾತ್ಮರುಗಳನ್ನು ನಿಗ್ರಹಿಸಲಿಚ್ಛಿಸಿದರೂ, ದಯೆಯು ಅವನನ್ನು ಒಲಿಸಿ, ಎಲ್ಲರನ್ನೂ ಅನುಗ್ರಹಿಸುತ್ತಾಳೆ ಎಂದು ಹೇಳಿದ್ದಾರೆ. ಇಲ್ಲಿ ಆ ದಯಾದೇವಿಯೇ ರುಕ್ಮಿಣಿಯಾಗಿ ಅವತರಿಸಿ,

ಅಪರಾಧ ಮಾಡಿದ್ದರೂ, ಅವರು ಶರಣಾಗತರಾದಲ್ಲಿ ಅವರನ್ನು ರಕ್ಷಿಸುವ ಹೊಣೆ ಹೊರುತ್ತಾಳೆ ಎಂದು ಉಲ್ಲೇಖಿಸಿದ್ದಾರೆ. ದಯೆ ಎಂಬ ಗುಣ ಇಲ್ಲದಿದ್ದಲ್ಲಿ ಅವನ ಇತರ ಎಲ್ಲಾ ಕಲ್ಯಾಣ ಗುಣಗಳೂ ವ್ಯರ್ಥ. ಆ ದಯೆಯೆ ರುಕ್ಮಿಣಿಯಾಗಿ ವಿದರ್ಭ ರಾಜ್ಯದಲ್ಲಿ ಹುಟ್ಟಿದ್ದಾಳೆ.

ಮಹೀತಲಾನ್ ಮೈಥಿಲಿ ಸೀರಕೃಷ್ಟಾತ್ ಕ್ಷೀರೋದಧೇ ರಾಹಿತ ಮಂಥಶೈಲಾತ್।
ಭೃಗೂದ್ವಹಾತ್ ಖ್ಯಾತಿ ಮತಶ್ಚಯಾಽಬೂತ್ ಸಾ ಭೀಷ್ಮಕಾದಭ್ಯುದಿಯಾಯಭೂಯಃ॥೫॥

ಜನಕ ಮಹಾರಾಜನಿಂದ ನೇಗಿಲಿನಿಂದ ಉಳಲ್ಪಟ್ಟ ಭೂಮಿಯಲ್ಲಿ ಉತ್ಪತ್ತಿಯಾದವಳೂ, ಅದಕ್ಕೆ ಮುಂಚೆ ಮಂದರ ಪರ್ವತವನ್ನು ಕಡೆಗೋಲನ್ನಾಗಿ ಮಾಡಿ ಕಡೆದ ಕ್ಷೀರ ಸಮುದ್ರದ ದಲ್ಲಿ ತೋರಿದವಳೂ, ಅದಕ್ಕೆ ಮುಂಚೆ ಖ್ಯಾತಿ ಎಂಬ ಮಡದಿಯನ್ನು ಹೊಂದಿದ್ದ ಭೃಗು ಮಹರ್ಷಿಯ ಬಳಿ ತೋರಿದವಳೂ, ಆದ ದೇವಿಯು, ಮತ್ತೆ ಭೀಷ್ಮಕ ಮಹಾರಾಜನಿಗೆ ಪುತ್ರಿಯಾಗಿ (ತಾಯಿ ತಂದೆಗಳನ್ನು ಹೊಂದಿ) ಜನಿಸಿದಳು.

ಆಚಾರ್ಯರು ರುಕ್ಮಿಣಿಯ ಈ ಹಿಂದಿನ ಅವತಾರಗಳನ್ನು ನಿರೂಪಿಸಿದ್ದಾರೆ. ಜನಕ ಮಹಾರಾಜನಿಗೆ ಭೂಮಿಯಲ್ಲಿ ಸೀತೆಯಾಗಿ ಜನಿಸಿ 'ಅವನಿಜಾ' ಎನಿಸಿಕೊಂಡಳು. ಕ್ಷೀರ ಸಮುದ್ರವನ್ನು ದೇವಾಸುರರೆಲ್ಲರೂ ಮಂದರ ಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು ಕಡೆದಾಗ ಸಮುದ್ರ ಮಧ್ಯದಲ್ಲಿ ಉದ್ಭವಿಸಿ ''ಕ್ಷೀರ ಸಾಗರ ತನಯಾ'' ಎನಿಸಿಕೊಂಡಳು. ಅದಕ್ಕೂ ಹಿಂದೆ ಭೃಗುಮಹರ್ಷಿಯ ಮಗಳಾಗಿ 'ಖ್ಯಾತಿ' ಎಂಬ ಹೆಸರಿನಿಂದ ಕರೆಯಲ್ಪಟ್ಟು 'ಭಾರ್ಗವಿ' ಎಂದು ವಿಖ್ಯಾತಳಾದಳು. ಈಗ ವಿದರ್ಭರಾಜನ ಮಗಳಾಗಿ ''ವೈದರ್ಭಿ'' ಎಂದು ಕರೆಯಲ್ಪಟ್ಟಿದ್ದಾಳೆ.

ಅಮನ್ಯತೈನಾಂ ತನಯಾಂಸ ರಾಜಾ ರುಕ್ಮೀ ಚ ಮೋಹಾದನುಜಾಮಜನ್ಯಾಂ।
ಯಾಮೇಕ ಪತ್ನೀ ಮನಘಸ್ಯ ಪುಂಸಃ ಪ್ರಜಾಸೃಜಾಂ ಮಾತರ ಮಾಮನಂತಿ ॥೬॥

ಪುಣ್ಯಪಾಪಗಳಿಗೆ ಸಿಲುಕದ ಪರಮ ಪುರುಷನಿಗೆ ಪ್ರಧಾನ ಮಹಿಷಿಯಾಗಿ, ಬ್ರಹ್ಮಾದಿಗಳು ಎಲ್ಲರಿಗೂ ತಾಯಿಯಾದ ಅವಳನ್ನು ಆ ರಾಜನು ತನ್ನ ಮಗಳಾಗಿಯೇ ಅಜ್ಞಾನದಿಂದ ತಿಳಿದನು. (ಅವಳು ಅವತಾರ ಪುರುಷಳೆಂದು ತಿಳಿಯದೆ), ಅಲ್ಲದೆ, ತನಗೆ ಒಡಹುಟ್ಟಿ ದವಳೆಂದು ರುಕ್ಮಿಯು (ಭೀಷ್ಮಕನ ಮಗ) ಸಹ ತಿಳಿದನು.

ಭೀಷ್ಮಕನು ಒಬ್ಬ ಸಾಧಾರಣ ರಾಜ. ಅವನಿಗೆ ಭಗವಂತನ ಅವತಾರ ರಹಸ್ಯಗಳೆಲ್ಲಾ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದಲೇ ತನ್ನ ಗರ್ಭದಲ್ಲಿ ಜನಿಸಿದ ಲೋಕಮಾತೆಯಾದ ರುಕ್ಮಿಣಿಯನ್ನು ಸಾಧಾರಣ ಮನುಷ್ಯಳಂತೆಯೇ ಭಾವಿಸಿ, ಅವಳಲ್ಲಿ ಪ್ರೇಮಾದರಗಳನ್ನು ಪ್ರಾಕೃತ ಜನರಂತೆಯೇ ತೋರಿದನು. ಭೀಷ್ಮಕನಿಗೆ ರುಕ್ಮಿ ಎಂಬ ಪುತ್ರನು ಮೊದಲೇ ಜನಿಸಿದ್ದನು. ಆ ರುಕ್ಮಿಯು ಅತ್ಯಂತ ಬಲಶಾಲಿ. ತನ್ನ ಒಡಹುಟ್ಟಿದವಳಾದ ಅಪ್ರತಿಮ ಸುಂದರಿಯಾದ ರುಕ್ಮಿಣಿಯನ್ನು ಸಾಧಾರಣ ಹುಡುಗಿಯಂತೆಯೇ ಭಾವಿಸಿ, ಅವಳಲ್ಲಿ ಅತೀವ ಪ್ರೀತಿಯನ್ನು ಇಟ್ಟಿದ್ದನು.

ತ್ಯಕ್ತ್ವಾಪರಾಃ ಸ್ತ್ರೀರ್ಗುಣ ರಾಶಿರೇನಾಂ ಶರಣ್ಯ ಭೂತಾಂ ಶರಣಂ ಪ್ರಪೇದೇ।
ಪ್ರಾಯೇಣ ದೋಷೈರವಿವಿಕ್ತವಾಸಾದ್ಭೀತಃ ಸ್ವಯಂ ಭೀಷ್ಮಕ ರಾಜ ಕನ್ಯಾಂ ॥೭॥

ಗುಣಗಳ ರಾಶಿಯು ಸೇರಿ ಬೇರೆ ಸ್ತ್ರೀಯರುಗಳನ್ನು ಬಿಟ್ಟು ಇವಳನ್ನೇ ಶರಣಾಗತಿ ಹೊಂದಿದವು. ಇವಳು ತಾನೇ ಶರಣ್ಯಳೆಂದು ತಿಳಿಯುವವಳು. ಆ ಗುಣಗಳು ದೋಷಗಳೊಡನೆ ಸೇರಿರಲು ಅಂಜಿಯೇ ಬೇರೆಲ್ಲೂ ಸೇರದೆ, ಭೀಷ್ಮಕ ರಾಜನ ಮಗಳಲ್ಲಿಯೇ ಸೇರಿಕೊಂಡವು.

ರುಕ್ಮಿಣಿಯು ಸಕಲ ಕಲ್ಯಾಣ ಗುಣಗಳನ್ನು ಹೊಂದಿದ್ದಳು. ಬೇರೆ ಯಾರಲ್ಲೂ ಇರದ ಅತ್ಯುತ್ತಮ ಗುಣಗಳು ಇವಳಲ್ಲಿ ಮನೆ ಮಾಡಿದ್ದವು. ಅವಳ ಸಕಲ ಕಲ್ಯಾಣ ಗುಣಗಳ ಮತ್ತು ಸೌಂದರ್ಯದ ವರ್ಣನೆ ಶ್ರೀಮದ್ಭಾಗವತದಲ್ಲಿ ಹೀಗೆ ವರ್ಣಿಸಲಾಗಿದೆ.

"ರುಕ್ಮಿಣಿಯ ತುಟಿಗಳಲ್ಲಿ ಮನೋಹರವಾದ ಮುಗುಳ್ನಗೆ ಇತ್ತು, ತೊಂಡೆಹಣ್ಣಿನಂತಿದ್ದ ಅವಳ ತುಟಿಯ ಕೆಂಪಿನಿಂದ ಮಲ್ಲಿಗೆ ಮೊಗ್ಗುಗಳಂತಿದ್ದ ಆಕೆಯ ಹಲ್ಲುಗಳು ಸ್ವಲ್ಪ ಕೆಂಪಾಗಿ ಕಾಣುತ್ತಿದ್ದವು. ಝುಣ-ಝುಣಿಸುತ್ತಿದ್ದ ಕಾಲಂದುಗೆಗಳ ಕಾಂತಿಯಿಂದ ಮನೋಹರ ವಾಗಿ ಕಾಣುತ್ತಿದ್ದ ಕೋಮಲವಾದ ಕಾಲುಗಳಿಂದ ರಾಜಹಂಸದಂತೆ ನಡೆಯುತ್ತಿದ್ದಳು. ರುಕ್ಮಿಣಿಯ ಅಂತಹ ಅನುಪಮವಾದ ಅಂಗಕಾಂತಿಯನ್ನು ನೋಡಿ, ದೊಡ್ಡ-ದೊಡ್ಡ ವೀರಾಧಿವೀರರುಗಳೆಲ್ಲರೂ ಮೋಹಿತರಾದರು".

ಆರಬ್ಧ ದೇಹಾಮಿವ ಭಾಗಧೇಯೈ ರಕ್ಷೀಣ ಲಕ್ಷ್ಮ್ಯಂತರತೋ ನಿಯಂತ್ರೀಂ।
ಸುತಾಮಿಮಾಂ ಪ್ರಾಪ್ಯ ಸುಧಾಮಿನಾಸ್ಯಾ ಮಮರ್ತ್ಯ ಕಲ್ಪಾ ಪಿತರಾವ ಭೂತಾಂ ॥೮॥

ಜಗತ್ತಿನುಳ್ಳ ಭಾಗ್ಯಗಳೇ ಜನ್ಮತಾಳಿದಂತೆ ಇರುವವಳೂ, ನೋಡುವವರ ಕಣ್ನೋಟ ಗಳನ್ನು ಎಲ್ಲ ಕಡೆಯಿಂದಲೂ ಆಕರ್ಷಿಸುವ ಹೆಣ್ಣನ್ನು ಪಡೆದುದ್ದರಿಂದ ತಾಯಿ ತಂದೆಯರು ಇವಳನ್ನು ಅಮೃತದಂತೆ ಕಂಡು, ದೇವತೆಗಳಿಗೆ ಸಮರ್ಪಿಸಿದರು.

ರುಕ್ಮಿಣಿಯ ಅಲೌಕಿಕ ಸೌಂದರ್ಯವನ್ನು ಕಂಡು ತಂದೆ ತಾಯಿಗಳು ಇವಳು ದೇವತೆಗಳಿಗೆ ಯೋಗ್ಯಳಾದವಳೆಂದು ಭಾವಿಸಿದರು. ಎಲ್ಲಾ ಸಾಮುದ್ರಿಕಾ ಲಕ್ಷಣಗಳನ್ನು ಪೂರ್ಣವಾಗಿ ಹೊಂದಿದ್ದಳು. ಅಮೃತವನ್ನು ಕೇವಲ ದೇವತೆಗಳು ಮಾತ್ರ ಅನುಭವಿಸುವ ರೀತಿ ಇವಳು ದೇವಯೋಗ್ಯಳೇ ಎಂದು ನಿರ್ಧರಿಸಿದರು.

ಅನನ್ಯ ವೃತ್ತ್ಯಾಘನತಾ ಮುಪೇತ್ಯೈ ರಪ್ರೌಢ ಸೂರ್ಯೇಂದು ಮಯೂಖ ಜಾಲೈಃ।
ಸುವರ್ಣ ರತ್ನೈ ರಥವಾ ಪ್ರಕ್ಲೃಪ್ತಾಂ ಸುತಾಂ ಸುಜಾತಾಕೃತಿ ಮನ್ವಭೂತಾಂ ॥೯॥

ಅತ್ಯಂತ ಸುಂದರಳಾಗಿದ್ದ, ಕಾಂತಿಯಿಂದ ಕೂಡಿದ್ದ ಆ ಹೆಣ್ಣನ್ನು ತಂದೆ ತಾಯಿ ಯರಿಬ್ಬರೂ, ಉಗ್ರನಲ್ಲದ, ಅನುಕೂಲನಾದ ಸೂರ್ಯ ಚಂದ್ರ ಕಿರಣಗಳನ್ನು ಬೇರೆ ಯಾವುದರಲ್ಲೂ ಸೇರಿಸದೆ, ಗಟ್ಟಿಯಾಗಿ ಮಾರ್ಪಟ್ಟು ಈ ರೀತಿ ತೋರಿದಯೋ ಎಂಬಂತೆ,

ಅಲ್ಲದೆ, ಚಿನ್ನವು ಮಣಿಗಳೂ ಒಂದಾಗಿ ಸೇರಿ ಹೆಣೆಯಲ್ಪಟ್ಟಿವೆಯೋ ಎಂದೆಲ್ಲಾ ಬೇರೆಯಾಗಿಯೇ ಅವಳ ಬಗ್ಗೆ ಚಿಂತಿಸಿ, (ಈಕೆಯು ಸಾಧಾರಣ ಹೆಣ್ಣಲ್ಲವೆಂಬುದಾಗಿ). ಸಂತೋಷಿಸಿದರು.

ಈಕೆಯ ಸೌಂದರ್ಯಕ್ಕೆ ಅನೇಕ ಉಪಮೆಗಳನ್ನು ನೀಡಿದ್ದಾರೆ. "ಸೂರ್ಯನಿಂದ ತಾಪವೂ, ಚಂದ್ರನಿಂದ ತಂಪೂ ಬರುವಂತೆ" ಇವಳಲ್ಲಿ ಎಲ್ಲಾ ಗುಣಗಳೂ ಇವೆ. ಚ್ನಿನದ ಸೌಂದರ್ಯ, ಮಣಿಯ ಸೌಂದರ್ಯ ಎರಡೂ ಒಟ್ಟಿಗೆ ಸೇರಿದರೆ ಯಾವ ರೀತಿ ಅಮೋಘವಾಗಿ ತೋರುತ್ತದೆ ಅದರಂತೆ ಇವಳಲ್ಲಿ ಸೌಂದರ್ಯ, ಮೈಮಾಟ ಎಲ್ಲವೂ ಅದ್ಭುತವಾಗಿ ಮೇಳೈಸಿದೆ. ಇವಳು ದೇವಲೋಕದಿಂದ ಇಳಿದು ಬಂದವಳೇನೋ ಎಂದು ನೋಡಿದವರೆಲ್ಲರೂ ಭಾವಿಸುತ್ತಿದ್ದರು.

ಮಹೀಯಸೀ ಮಂಗಲ ದೀಪಮಾಲಾಂ ವಿದ್ಯುತ್ಪ್ರಕಾಶಾ ವಿದಧೇ ಕುಮಾರಿ।
ಆಕಲ್ಪರತ್ನಾಂಶು ತಿರಸ್ಕರಣ್ಯಾ ದೀಪ್ಯಾರ್ರಜನ್ಯಾಮಪಿ ದೀನಭಾಸಂ ॥೧೦॥
ಕಲಾಮಿ ವಾರ್ಧಾಮ ಕರೋದಧಾಮ್ನಃ ಪುಣ್ಯೋದಯಾನಾಮಿವ ಪೂರ್ವಚರ್ಯಾಂ।
ಪ್ರರೋಹ ವೇಲಾಮಿವ ಕಾಂತಿ ವಲ್ಲಯಾಃ ಪೈಕ್ಷಂತ ಶುದ್ಧಾಂತ ಮೃಗೀದೃಶಸ್ತಾಂ॥೧೧॥

ಮಿಂಚಿನಂತೆ, ಮಿಂಚಿನ ದೇಹವುಳ್ಳ ಆ ಕನ್ಯೆಯು ಆಭರಣಳಾಗಿ, ರತ್ನಗಳನ್ನು ತನ್ನಲ್ಲಿ ಅಡಗಿಸಿದಾಗ, ಹೊರ ಸೂಸಿದ ಕಾಂತಿಯಿಂದ ರಾತ್ರಿಯಲ್ಲಿ ಪ್ರಕಾಶಮಾನವಾಗಿ ಹತ್ತಿಸಲ್ಪಟ್ಟ ಮಂಗಳ ದೀಪಗಳಂತೆ ಕಾಣುತ್ತಿತ್ತು. ರುಕ್ಮಿಣಿಯ ಸೌಂದರ್ಯ ವರ್ಣನೆ ಮುಂದುವರೆದಿದೆ.

ತಂಪಾದ ಕಿರಣಗಳನ್ನು ಹೊಂದಿರುವ ಚಂದ್ರನ ಚಿಕ್ಕ ಬಿಂಬವೋ, ಪುಣ್ಯಗಳ ಸಮೃದ್ಧಿಗಾಗಿ ಮಂತ್ರಸಿದ್ದಿಗೆ ಮುಂಚೆ ಮಾಡುವ ಪೂರಕ ಕರ್ಮಗಳೋ, ಕಾಂತಿಗಳ ಧ್ವಜಗಳ ತುದಿಯ ಬೆಳವಣಿಗೆಯೋ ಎಂದು ಇವಳ ದೇಹಕಾಂತಿಯನ್ನು ಅಂತಃಪುರ ಸ್ತ್ರೀಯರು ಬಗೆಬಗೆಯಾಗಿ ಚರ್ಚಿಸುತ್ತಿದ್ದರು.

ರುಕ್ಮಿಣಿಯ ಮೈಕಾಂತಿಯನ್ನು ನೋಡಿ ಆಕೆಯ ಅಂತಃಪುರ ಸ್ತ್ರೀಯರು ಬಗೆಬಗೆಯಾಗಿ ಮಾತನಾಡಿಕೊಳ್ಳುತ್ತಿದ್ದರು. ಅವಳ ವರ್ಣನೆಗೆ ಸರಿಯಾದ ಪದಗಳು ಅವರಿಗೆ ಸಿಗುತ್ತಿರಲಿಲ್ಲ. ಎಲ್ಲಾ ವರ್ಣನೆಗಳು ಅವಳಲ್ಲಿ ಅಪೂರ್ಣವಾಗಿಯೇ ಇರುತ್ತಿತ್ತು.

ಆತ್ಮಾಧಿಕಾರಾ ದಧಿಕಾಮ ವಸ್ತಾಮಯತ್ನತೋ ನೂನ ಮಪಾಪುಕಾಮಾ।
ವಾರ್ತಾನಭಿಜ್ಞೆ ವಯಸಿ ಸ್ಥಿತಾಂ ತಾಂ ವಾಗ್ದೇವತಾ ವಂದಿ ಮುಖೇ ವವಂದೆ ॥೧೨॥

ಸರಸ್ವತೀ ದೇವಿಯು ತಾನು ಹಿಂದೆ ಹೊಂದಿದ್ದ ಅಧಿಕಾರಕ್ಕಿಂತ ಮೇಲಿನ ಪದವಿ ಒಂದನ್ನು ಪ್ರಯಾಸದಿಂದ ಹೊಂದಬೇಕೆಂದು ಆಶಿಸಿದಂತೆ, ಈ ಹೆಣ್ಣು ಮಾತನಾಡಲು ಗೊತ್ತಿಲ್ಲದಿದ್ದರೂ, ಪ್ರಾಯದಲ್ಲಿಯೇ ಅನೇಕ ವಂದಿಗಳ ಮುಖಾಂತರ ಹೇಳುತ್ತಾ ಇದ್ದಳು.

ರುಕ್ಮಿಣಿಯು ಮಾತನಾಡಲು ಪ್ರಾರಂಭಿಸಿದಳು. ತನ್ನ ಮುದ್ದು ಮಾತುಗಳಿಂದ, ತೊದಲು ನುಡಿಗಳಿಂದ ಎಲ್ಲರನ್ನೂ ರಂಜಿಸುತ್ತಿದ್ದಳು. "ಅಮೃತಂ ಬಾಲಭಾಷಿತಂ" ಎಂಬಂತೆ ಯಾರು ಏನು ಹೇಳಿದರೂ, ಅದನ್ನು ತಕ್ಷಣ ತನ್ನ ಭಾಷೆಯಲ್ಲಿ ಪುನಃ ಉಚ್ಚರಿಸುತ್ತಿದ್ದಳು. ಇದು ಸರ್ವವನ್ನೂ ತಿಳಿದ ವಾಗ್ದೇವಿಯು (ಸರಸ್ವತೀ ದೇವಿಯು) ತನಗೆ ತಿಳಿಯದ್ದನ್ನು ಈ ಬಾಲೆಯು ಉಚ್ಚರಿಸುತ್ತಾಳಲ್ಲಾ ಎಂದು ಆಶ್ಚರ್ಯಪಡುವಂತಿತ್ತು.

ಪ್ರದಿತ್ಸಮಾನೇನ ಹರೇರಭಿಷ್ಟಂ ಕಾಮೇನ ಸಾ ಕಲ್ಪಲತೇವ ಸೃಷ್ಟ।
ಪಿತ್ರೋರಿವಾನನ್ಯದೃಶಾಂ ಪ್ರಜಾನಾಮ್ ಆಶಂಸಯಾ ಸಾರ್ಧಮವಾಪ ವೃದ್ಧಿಂ॥೧೩॥

ಅವಳು ಶ್ರೀಕೃಷ್ಣನಿಗೆ ಇಷ್ಟಪಟ್ಟವಳೆಂದು, ಕಾಮನು ಪಡೆದ ಕಲ್ಪವೃಕ್ಷದಂತೆ, ಬೆಳಗಿದವ ಳಾಗಿ, ತಾಯಿ ತಂದೆಗಳು ಮತ್ತು ಪ್ರಜೆಗಳು ತನ್ನಲ್ಲಿಯೇ ಯಾವಾಗಲೂ ಅಸಕ್ತಿಯುಳ್ಳವ ರಾಗಿದ್ದುದರಿಂದ ಅವರುಗಳ ಆಸೆಗೆ ತಕ್ಕಂತೆ ಬೆಳೆಯುತ್ತಾ ಬಂದಳು.

ಅವಳು ಬಾಲ್ಯದಿಂದಲೂ ತಾನು ಶ್ರೀಕೃಷ್ಣನಿಗೆ ಮೀಸಲಾದವಳೆಂಬ ಭಾವನೆಯಿಂದಲೇ ಇದ್ದಳು. ಮನ್ಮಥನು ಬಹಳ ಜತನದಿಂದ ಅವಳಲ್ಲಿ ತನ್ನೆಲ್ಲಾ ಸೌಂದರ್ಯವನ್ನು ತುಂಬಿದಂತಿದ್ದಳು. ಅವಳ ತಂದೆ ತಾಯಿಗಳು ಹಾಗೂ ದೇಶದ ಪ್ರಜೆಗಳು ಯಾವಾಗಲೂ ಅವಳ ಅಭ್ಯುದಯ ವನ್ನೇ ಬಯಸಿ, ಅವಳ ಬೆಳವಣಿಗೆಯನ್ನು ಅಪಾರ ಆಸಕ್ತಿಯಿಂದ ಗಮನಿಸುತ್ತಿದ್ದರು. ಅದಕ್ಕನುಸಾರವಾಗಿ ಅವಳೂ ಸಹ ವೃದ್ಧಿ ಹೊಂದುತ್ತಿದ್ದಳು.

ಪದ್ಮಾದಿ ರೇಖಾ ಪ್ರಥಮಾನಭೂಮಾ ನಿರ್ಧಾರ್ಯಮಾಣಾ ನಿಗಮೈರಭಿಜ್ಞೈಃ।
ತದಂಘ್ರಿ ವಿನ್ಯಾಸಮಿಷೇಣ ಜಜ್ಞೇ ಭೂಮೇಸ್ತದಾ ಭೂಷಣಪಂಕ್ತಿರಗ್ರ್ಯಾ ॥೧೪॥

ಅವಳು ನಡೆಯುವಾಗ, ಸಾಲು ಸಾಲಾಗಿ ಇಡುವ ಹೆಜ್ಜೆಗಳು ಭೂಮಿಗೆ ಆಭರಣ ದಂತಿದ್ದವು. ಒಂದೊಂದರಲ್ಲೂ ತಾವರೆ, ಧ್ವಜ, ಕಲಶ ಮುಂತಾದ ರೇಖೆಗಳು ಇದ್ದು, ಅವಳ ಹಿರಿಮೆಯನ್ನು ಸಾರುತ್ತಿತ್ತು. ಜ್ಞಾನಿಗಳು ವೇದಗಳನ್ನು ನೋಡಿ ಅವುಗಳನ್ನು ತಿಳಿಯುತ್ತಿದ್ದರು.

"ವೇದಾಂತಾ ಸ್ತ್ವ ತ್ವ ಚಿಂತಾ ಯತ್ಪಾದ ಚಿಹ್ನೆ ಸ್ತರಂತಿ" ಎಂದು ಶ್ರೀ ಪರಾಶರ ಭಟ್ಟರು ಶ್ರೀಗುಣರತ್ನಕೋಶದಲ್ಲಿ ಹೇಳಿರುವಂತೆ ಲಕ್ಷ್ಮಿಯ ಪಾದರೇಖೆಗಳನ್ನು ನೋಡಿಯೇ ಜ್ಞಾನಿಗಳು ವೇದಾಂತಾರ್ಥವನ್ನೂ ನಿರ್ಣಯಿಸುತ್ತಿದ್ದರು ಎಂಬಂತೆ ಲಕ್ಷ್ಮಿಯ ಅವತಾರವಾದ ರುಕ್ಮಿಣಿಯ ಪಾದರೇಖೆಗಳು ವೇದಾಂತಾರ್ಥವನ್ನೇ ಸಾರುತ್ತಿತ್ತು.

ಅದೃಶ್ಯಭೇದೈ ರತಿಸೂಕ್ಷ್ಮಭಾವ ಜಜ್ಞೇ ಜಗನ್ಮಂಗಲತಾಂ ದಧಾನೈಃ।
ವಿಹಾರಲೌಲ್ಯಾತ್ ವಿಷಮೇಷು ತಸ್ಯಾ ಗತೇಷು ವಾಕ್ಯೇಷು ಚ ನೃತ್ತಗೀತೈಃ ॥೧೫॥

ಜಗತ್ತಿಗೆ ಮಂಗಳಗಳನ್ನು ಉಂಟುಮಾಡುವ ಒಂದಕ್ಕೊಂದು ಬಹಳ ಸೂಕ್ಷ್ಮವಾಗಿ ತಿಳಿಯದ ಆಟಪಾಟಗಳನ್ನು ಆಡುವವಳಾಗಿ, ಅವನ್ನೆಲ್ಲಾ ಆಸಕ್ತಿಯಿಂದ ಆಡಿ, ವಿಚಿತ್ರವಾದ ನಡೆಗಳಿಂದ, ಮಾತುಗಳಿಂದ ಎಲ್ಲರನ್ನೂ ರಂಜಿಸುತ್ತಿದ್ದಳು.

ಅವಳ ಬಾಲ್ಯದ ಆಟಪಾಟಗಳು ಎಲ್ಲರನ್ನೂ ರಂಜಿಸುತ್ತಿತ್ತು. "ನಾರಾಯಣೈಕ ನಿಷ್ಠಸ್ಯ ಯಾಯಾ ವೃತ್ತಿ ಸ್ತದರ್ಚನಂ" ಎನ್ನುವಂತೆ ಅವಳ ಸಕಲ ಕ್ರೀಡೆಗಳೂ, ಮಾತುಗಳೂ ಲೋಕ ಕ್ಷೇಮಾರ್ಥವಾಗಿ ಮಾಡುವಂತೆಯೇ ಇದ್ದವು.

ಯದಪ್ಸರಃ ಪಾಣಿ ಸರೋಜಮುಕ್ತಂ ಪ್ರಸೂನವರ್ಷಂ ನಿಪಪಾತ ತಸ್ಯಾಂ।
ಅಪೂರಿ ತಸ್ಯೈವ ರಜೋಭಿರಗ್ಯೈ ರಪಾಂಸುಲಾ ಪಾಂಸು ವಿಹಾರ ವಾಂಛಾಂ ॥೧೬॥

ಪತಿವ್ರತಾ ಶಿರೋಮಣಿಯಾದ ಆ ಹುಡುಗಿಯ ಉದ್ಯಾನಗಳಲ್ಲಿ ಆಟವಾಡುತ್ತಿದ್ದ ಚಿಕ್ಕ ಪ್ರಾಯದಲ್ಲಿ ಅವಳಲ್ಲಿ ಪ್ರೀತಿಯಿಂದ ಅಪ್ಸರಸ್ಸುಗಳು ತಮ್ಮ ತಾವರೆಯಂತಹ ಕೈಗಳಿಂದ, ಕಟ್ಟಿಕೊಂಡು ಬಂದ ಹೂವಿನ ವರ್ಷಗಳೊಡನೆ, ತಮ್ಮ ಆಸೆಯನ್ನು ಈಡೇರಿಸಿಕೊಂಡರು. (ಅವಳ ಮೇಲೆ ಹೂಮಳೆ ಸುರಿಸಿದರು.)

ದೇವಲೋಕದ ಅಪ್ಸರ ಸುಂದರಿಯರಿಗಂತಲೂ ಹೆಚ್ಚು ಸುಂದರಿಯಾಗಿದ್ದ ರುಕ್ಮಿಣಿಯನ್ನು ಕಂಡು ಅವರೂ ಆಶ್ಚರ್ಯದಿಂದ ಅವಳಲ್ಲಿ ಪ್ರೀತಿ ವ್ಯಕ್ತಪಡಿಸಿ ಅವಳನ್ನು ಆರಾಧಿಸುತ್ತಿದ್ದರು.

ಯದೃಚ್ಛಯಾ ತತ್ರ ಪರಾಗಜಾಲೈರ್ಯಾನೇವ ಸಾ ಕೇಲಿಗೃಹಾನ್ ಅಕಾರ್ಷೀತ್ ।
ತತಃ ಪರಂ ತ್ವಷ್ಟುರಮೀ ಸಮೀಚೇ ಮಹೇಂದ್ರ ಶಾಲಾ ವಿಧಿ ಮಾತೃಕಾಽಭೂತ್ ॥೧೭॥

ಅವಳು ಮನಸ್ಸಿಗೆ ತೋರಿದ ಹಾಗೆ ಚೆಂಡನ್ನು ಎತ್ತಿಕೊಂಡು ಆಟವಾಡುತ್ತಾ ಆಡಿದ ಕ್ರೀಡೆಗಳನ್ನು ನೋಡುವಾಗ ಹಿಂದೆ ವಿಶ್ವಕರ್ಮ, ಇಂದ್ರನೇ ಮೊದಲಾದವರ ಅರಮನೆ ಗಳಲ್ಲಿ ಇದ್ದ ಒಳ್ಳೆಯ ಮಾದರೀ ಕ್ರೀಡೆಯಂತೆ ಇತ್ತು.

ಅವಳು ಉದ್ಯಾನ ವನಗಳಲ್ಲಿ ಸಂತೋಷದಿಂದ ಕ್ರೀಡಿಸುತ್ತಿದ್ದಳು. ಅವಳ ಚೆಂಡಿನ ಆಟವು ಇತರರಿಗೆ ಮಾದರಿಯಂತೆ ಇತ್ತು.

ಚತುರ್ದಶೈತಾನಿ ಜಗಂತಿ ಯಸ್ಯಾಃ ಕ್ಷೇಮಾಶ್ರಿತಂ ಕ್ರೀಡನಕಂ ಬಭೂವ।
ಪರ್ಯಾಪ್ತ ಲೀಲಾ ಮುಮುದೇ ತದೈಷಾ ಪಾಂಚಾಲಿಕಾ ಪಂಜರ ಶಾರಿಕಾದ್ಯೈಃ ॥೧೮॥

ಈ ಹದಿನಾಲ್ಕು ಲೋಕಗಳೂ ಅವಳಿಂದ ರಕ್ಷಿಸಲ್ಪಟ್ಟು ಕ್ಷೇಮವನ್ನು ಹೊಂದಿ, ಆಟವಾಡುವ ಕ್ರೀಡಾಂಗಣವಾಗಿ, ಅವಳಿಗೆ ಒದಗಿರಲಾಗಿ, ಈಗ, ಅವತಾರ ದಶೆಯಲ್ಲಿ ಪಂಜರದ ಗಿಳಿಯಂತೆ ಪರಿಮಿತವಾದ ಕ್ರೀಡಾಂಗಣವನ್ನು ಹೊಂದಿ ಸಂತೋಷಿಸಿದಳು.

ಲೋಕ ಜನನಿಯಾದ ಲಕ್ಷ್ಮೀ ದೇವಿಯು ಈ ಹಿಂದೆ ಮೂರು ಲೋಕವನ್ನೇ ತನ್ನ ಕ್ರೀಡಾಂಗಣವಾಗಿ ಭಾವಿಸಿ, ಜಗತ್ತಿನ ಕ್ಷೇಮಕ್ಕಾಗಿ ಆಟವಾಡಿದ್ದಳು. ಆದರೆ ಈಗ ರುಕ್ಮಿಣಿಯಾಗಿ ಬಂದಿರುವುದರಿಂದ, ಅವಳ ಕ್ರೀಡಾಂಗಣ ಪರಿಮಿತದ್ದಾಗಿ (ಇದು ಕೇವಲ ಭೀಷ್ಮಕ ರಾಜನ ರಾಜೋದ್ಯಾನ ವನವಾಗಿತ್ತು) ಅದರಲ್ಲೇ ಅವಳು ಸಂತೋಷಿಸಬೇಕಾಯಿತು.

ಆಸ್ವಾದನೀಯಾನ್ಯಧಿಕಂ ಶ್ರುತಿನಾಂ ಮುಗ್ಧಾಭಿಜಾತಾನಿ ವಚಾಂಸಿ ತಸ್ಯಾಃ।
ಪ್ರಾಯೇಣ ಲೌಲ್ಯಾದಧಿಕೃತ್ಯ ಖಿನ್ನಾ ವಿಧಿ ಪ್ರಿಯಾ ವ್ಯಾಹರಂತಾನ್ಯ ಭಾಷಾಃ ॥೧೯॥

ವೇದಗಳು ತಾವೇ ಆಸ್ವಾದಿಸುವಂತಹ ಅವಳ ಸುಮಧುರವಾದ ಮಾತುಗಳನ್ನು ಆಸೆಯಿಂದ ಕಲಿತು ಬರಲಾಗಿ, ಸರಸ್ವತಿಯಾದವಳು ಬೇರೆ ಭಾಷೆಗಳನ್ನು ಮಾತನಾಡುವ ಹಾಗೆ ಆಯಿತು. (ಸಂಸ್ಕೃತ ಬಿಟ್ಟು ಪ್ರಾಕೃತ ಮುಂತಾದ ಭಾಷೆಗಳನ್ನು)

ಅವಳ ಮಾತುಗಳೆಲ್ಲವೂ ವೇದಕ್ಕೂ ಹೆಚ್ಚಿನದ್ದಾಗಿದ್ದಿತು. ಅವಳು ಸಂಸ್ಕೃತವಲ್ಲದೆ, ರಾಜ ಕುಲದ ಸ್ತ್ರೀಯರು, ಮಾತನಾಡುವ ಇತರ ಭಾಷೆಗಳಲ್ಲೂ ಸರಾಗವಾಗಿ ಸಂಭಾಷಿಸುತ್ತಿದ್ದಳು. ಸರಸ್ವತಿಯೇ ಅವಳ ನಾಲಿಗೆಯಲ್ಲಿ ಇದ್ದುದರಿಂದ ಸರಸ್ವತಿಯೂ ಸಹ ಇತರ ಭಾಷೆಗಳನ್ನು ಕಲಿಯಬೇಕಾಯಿತು. (ಉತ್ಪ್ರೇಕ್ಷಾಲಂಕಾರ).

ಅವಿಪ್ಲುತ ವ್ಯಾಕರಣಾನಿ ತಸ್ಯಾಃ ಕ್ರಮೇಣ ಶಿಕ್ಷಾನಿಯತಾಕ್ಷರಾಣಿ।
ಅನು ಶ್ರವಾಣಾ ಮನಘ ಪ್ರವೃತ್ತೆರಾದೇಶದಾಯೀನಿ ವಚಾಂಸ್ಯಭೂವನ್ ॥೨೦॥

ವ್ಯಾಕರಣ ಬದ್ಧವಾಗಿ ಶಿಕ್ಷಾ ಶಾಸ್ತ್ರದಂತೆ, ಅಕ್ಷರವನ್ನು ಉಚ್ಚರಿಸಲು ಪ್ರಾರಂಭಿಸಿದ ಅವಳ ಮಾತುಗಳು ವೇದಗಳಲ್ಲಿ ಕಡಿಮೆ ಪ್ರಚಾರ ಇರುವ ವಾಕ್ಯಗಳಾಗಿ ಪ್ರಚಾರ ಮಾಡುವಂತಿತ್ತು.

ಕೆಲವು ವೇದ ವಾಕ್ಯಗಳು ಅಷ್ಟು ಪ್ರಮುಖವಾಗಿಲ್ಲದೆ ಹೆಚ್ಚಿನ ಪ್ರಚಾರ ಪಡೆದಿಲ್ಲ. ಆದರೆ ರುಕ್ಮಿಣಿಯ ಮಾತುಗಳು, ಅಲ್ಪ ಪ್ರಮಾಣದಲ್ಲಿ ಪ್ರಚಾರ ಇರುವ ವಾಕ್ಯಗಳು ಹೆಚ್ಚು ಪ್ರಚಾರ ಪಡೆಯುವ ಮಾತುಗಳಾಗಿದ್ದು ಅದರಿಂದಾಗಿ ವೇದವಿತ್ತುಗಳು ಅವುಗಳನ್ನೂ ಸಹ ವಾಕ್ಯಾರ್ಥ ಮಾಡಲು ಆರಂಭಿಸುವಂತಾಯಿತು. ಅವಳು ಸಾಕ್ಷಾತ್ ಸರಸ್ವತಿಯ ಅವತಾರವಾದ್ದರಿಂದ, ಅವಳ ಮಾತುಗಳು ವೇದ ವಾಕ್ಯಗಳನ್ನೇ ಪ್ರತಿಬಿಂಬಿಸುತ್ತಿದ್ದು ಅವು ವ್ಯಾಕರಣ ಬದ್ಧವಾಗಿ, ವ್ಯಾಕರಣ ಪಂಡಿತರು ಅವಳ ಉಚ್ಚಾರಣೆಯನ್ನು ನೋಡಿ ತಾವೂ ಕಲಿಯುವಂತಿತ್ತು.

ವಿಭೂತಯಸ್ತತ್ರ ವಿಶಾಂ ಪತೀನಾಮಾತ್ಮೀಯಯಾ ದೇವ ತಯಾಽವತೀರ್ಣಾಃ।
ಸ್ವಚಿಹ್ನ ಬೇಧಾನ್ ಪರಿವರ್ಜಯಂತ್ಯಃ ಪ್ರಪೇದಿರೆ ತತ್ಪರಿವಾರ ಭಾವಂ ॥೨೧॥

ದಿಕ್ಪಾಲಕರುಗಳಾದ ಇಂದ್ರಾದಿಗಳ ಸಂಪತ್ತು ವಿಭವಗಳೆಲ್ಲವೂ ಸೇರಿ ವಿರಾಜಿಸುವ ಆ ನಗರದಲ್ಲಿ ತೋರಿ ಆ ವೈಭವಗಳಿಗೆ ಚಿಹ್ನೆಗಳಾದ ಕೊಡೆ, ಚಾಮರ ಮೊದಲಾದ ವಸ್ತುಗಳನ್ನು ಕೊಂಡು ಆ ರುಕ್ಮಿಣಿಯು ವಿಭೂತಿಯನ್ನು ಹೊಂದಿದಳು. (ದೇವತ್ವವನ್ನು ಪಡೆದಳು).

ರುಕ್ಮಿಣಿಯು ಭೀಷ್ಮಕ ರಾಜನ ಮಗಳಾಗಿ ಕುಂಡಿನ ನಗರದಲ್ಲಿ ಜನಿಸಿದ್ದು, ಆ ನಗರಕ್ಕೆ ಒಂದು ಶೋಭೆಯನ್ನು ಉಂಟು ಮಾಡಿತು. ಅವಳು ತನ್ನ ಲೋಕದಲ್ಲಿ ಯಾವ ಯಾವ

ಚಿಹ್ನೆಗಳನ್ನು ಹೊಂದಿದ್ದಳೋ ಅದೆಲ್ಲವನ್ನೂ ಈ ಜನ್ಮದಲ್ಲಿಯೂ ಹೊಂದಿ, ತಾನು ಲಕ್ಷ್ಮಿಯ ಅವತಾರವೆಂಬುದನ್ನು ದೃಢಪಡಿಸಿದಳು. ದೇವತೆಗಳೆಲ್ಲರೂ ಅವಳನ್ನು ಸೇವಿಸಬಯಸಿದರು.

ವೇದಾಲವಾಲೇ ವಿಹಿತ ಸ್ಥಿತಿಂ ತಾಂ ರಮ್ಯ ಪ್ರತಾನಾಮಿವ ರತ್ನವಲ್ಲಿಂ।
ಸ್ತನಾದಿ ಲಕ್ಷ್ಮ್ಯ ಸ್ತಬಕಾದಿ ಚಿಹ್ನೈ ರಾವಿಷ್ಕೃತಂ ಯೌವನ ಮಾವಿವೇಶ ॥೨೨॥

ವೇದಗಳಾಗಿರುವ ಪಾತಿಗಳ ಮಧ್ಯದಲ್ಲಿ ಸುಂದರವಾಗಿ ಬೆಳೆಯುವ ಪೈರುಗಳೊಡನೆ ಬೆಳೆಯುವ ಆ ರುಕ್ಮಿಣಿಯು ತಣ್ಣಗಿನ ಲತೆಯಲ್ಲಿ ಹೂವನ್ನರಸಿ ಬರುವ ದುಂಬಿಗಳು, ಸಮೂಹವಾಗಿ ಬರುವುದು ಸ್ತನಗಳ ರೋಮಗಳಂತೆ ಕಾಣುತ್ತಾ ಅವಳಲ್ಲಿ ಯೌವನವು ಪ್ರಾಪ್ತವಾಯಿತು ಎಂದು ಸೂಚಿಸಿದವು.

ಬಾಲ್ಯಾವಸ್ಥೆಯನ್ನು ಕಳೆದು ರುಕ್ಮಿಣಿಯು ಯೌವನಕ್ಕೆ ಕಾಲಿಟ್ಟಳು. ಆಗ ಸ್ತ್ರೀಯರಲ್ಲಿ ಕಾಣಬರುವ ಎಲ್ಲಾ ಯೌವನ ಲಕ್ಷಣಗಳೂ ಅವಳಲ್ಲಿ ಕಂಡು ಬಂದವು. ಸ್ತನಗಳು ಉಬ್ಬಲು ಆರಂಭಿಸಿ, ಅವಳ ಯೌವನವನ್ನು ಹೊರಸೂಸುತ್ತಿತ್ತು.

ತದೀಯ ಸರ್ವಾಂಗ ಜುಷೋರಗಾಧಂ ಸೌಂದರ್ಯ ಲಾವಣ್ಯ ಸುಧಾಸ್ತ್ರವಂತ್ಯೋಃ।
ಮಮಜ್ಜುರಾಪತ್ಯ ದೃಶಃ ಸಖೀನಾಂ ಮನ್ಯೋನ್ಯ ಸಂಭೇದ ಮಪೂರ್ವತೀರ್ಥಂ ॥೨೩॥

ಅವಳ ಅಂಗಗಳು ಎಲ್ಲೆಲ್ಲೂ ಪ್ರತಿಫಲಿಸಿ, ಮಣಿಮಯವಾಗಿ ಎರಡು ಬಗೆಯ ಅಮೃತ ಪ್ರವಾಹಗಳು ಒಂದರಲ್ಲಿ ಒಂದು ಸೇರಿ ಪ್ರಸಿದ್ಧಿ ಹೊಂದಿದ, ಅನೇಕ ತೀರ್ಥಗಳಿಗೆ ಮೇಲಾದ ತೀರ್ಥದಂತೆ ಬೆಳಗುತ್ತಾ, ಅಲ್ಲಿ ಅವಳ ಸ್ನೇಹಿತರ ಕಣ್ಣುಗಳನ್ನು ಹೊಕ್ಕು ಮುಳುಗಿ ಇದ್ದವು.

ರುಕ್ಮಿಣಿಯು ತುಂಬು ಯೌವನಕ್ಕೆ ಹಂತ ಹಂತವಾಗಿ ಕಾಲಿಡುವುದು ಅವಳ ಎಲ್ಲಾ ಅಂಗಗಳಲ್ಲೂ ಪ್ರತಿಫಲಿಸಿ, ಅನೇಕ ನದಿಗಳು ಒಂದುಗೂಡಿ ದಿವ್ಯ ತೀರ್ಥವಾಗುವಂತೆ, ಎಲ್ಲರ ಕಣ್ಣುಗಳನ್ನೂ ಅವಳ ಯೌವನವು ಸೆಳೆಯುತ್ತಿತ್ತು.

ನಿಶೇವ ಚಂದ್ರೇಣ ಘನವ್ಯಪಾಯೇ ನೈಸರ್ಗಿಕೀ ಬುದ್ಧಿರಿವ ಶ್ರುತೇನ।
ಫಲೇನ ಸಾ ನೀತಿ ರಿವಾ ಪ್ರಮಾದಾ ಯುಕ್ತಾ ಬಭೌ ನೂತನ ಯೌವನೇನ ॥೨೪॥

ಮೇಘಗಳು ಶರತ್ಕಾಲದಲ್ಲಿ ಇರುವ ಹಾಗೆ ಚಂದ್ರನೊಡನೆ, ಸೇರಿದ ರಾತ್ರಿಯಂತೆ ಸಹಜವಾಗಿಯೇ ಇರುವ ಸದ್ಬುದ್ಧಿಯು ಶಾಸ್ತ್ರದೊಡನೆ ಸೇರಿರುವ ಹಾಗೆ, ಚ್ಯುತಿಯಿಲ್ಲದೆ ಏರ್ಪಡುವ ಫಲದೊಡನೆ ಸೇರಿದ ನೀತಿಯಂತೆ ಅವಳ ಯೌವನದೊಡನೆ ಲಜ್ಜೆಯು ಸೇರಿ ಬೆಳಗುತ್ತಿತ್ತು.

ಅವಳ ಯೌವನದ ಸೊಬಗನ್ನು ಆಚಾರ್ಯರು ಅನೇಕ ಉಪಮೆಗಳನ್ನು ಕೊಟ್ಟು ವರ್ಣಿಸಿದ್ದಾರೆ. ಶರತ್ಕಾಲದಲ್ಲಿ ಮೇಘಗಳು ಅದ್ಭುತವಾಗಿ ಬೆಳಗುತ್ತವೆ. ಎಷ್ಟೇ ನಕ್ಷತ್ರಗಳಿದ್ದರೂ

ಚಂದ್ರನಿದ್ದರೆ ರಾತ್ರಿಗೆ ಶೋಭೆ. ಶಾಸ್ತ್ರವನ್ನರಿತು ನಡೆಯುವ ಸದ್ಬುದ್ಧಿ ಹಾಗೆ ಯಾವ ಸತ್ಕಾರ್ಯಕ್ಕೂ ಸತ್ಫಲವೇರ್ಪಟ್ಟರೇ ಅದರ ಸಾರ್ಥಕತೆ.

ಆಲಕ್ಷ್ಯ ಸಂಲಾಪ ರವೈರ ಪಾಂಗೈ ರಂಗೈರನಂಗೋ ದಯ ಪೂರ್ವ ರಂಗೈಃ।
ವಿಯಾತ ಮುಗ್ಧೈರಪಿ ವಿಭ್ರಮೈಃ ಸಾ ವಿಲಕ್ಷಯಾಮಾಸ ವಿಭೂಷಣಾನಿ ॥೨೫॥

ಪುಟ್ಟಪುಟ್ಟ ಮಾತುಗಳಿಂದ ಮಾತಾಡುವ ಉದ್ದೇಶವುಳ್ಳವಳಾಗಿ ನೇರವಾಗಿಯೂ, ಮನ್ಮಥನ ನಾಟ್ಯವಾಡುವುದಕ್ಕೆಂದೇ ರಂಗಭೂಮಿಯಂತೆ ದೇಹರಚನೆಯುಳ್ಳವಳಾದ, ಹಿರಿಮೆ, ಮುಗ್ಧತೆ ಎರಡಕ್ಕೂ ಬೇಕಾದ ವಿಲಾಸಗಳಿಂದ ಬೇರೆ ಆಭರಣಗಳು ಅವಶ್ಯವಿಲ್ಲದಂತಿದ್ದಳು.

ಅವಳ ಸೌಂದರ್ಯ, ಅವಳ ಗುಣಗಳೇ ಅವಳಿಗೆ ಆಭರಣಗಳು. ಸಹಜ ಸುಂದರಿಯಾದ ಅವಳಿಗೆ ಬೇರೆ ಹೊರಗಿನ ಆಭರಣಗಳ ಅವಶ್ಯಕತೆಯಿರಲಿಲ್ಲ.

ಅಮುಕ್ತ ಕೌಮಾರ ಯುವತ್ವಸೀಮ್ನಾ ಕಾಂತ್ಯಾ ಬಭೌ ಕಲ್ಪಿತ ರಾಗ ಭೂಮ್ನಾ
ಜರತ್ ಫಲಾಶ ಪ್ರಸವಾನುಷಕ್ತಾ ಪ್ರತಾನಿನಿ ಪಲ್ಲವ ಸಂಪದೇವ ॥೨೬॥

ಕೌಮಾರವನ್ನು ಬಿಡದ ಯೌವನದ ಪ್ರವೇಶವು ಕಾಂತಿಯಿಂದ ಪ್ರಜ್ವಲಿಸುವ ದಿವ್ಯ ದೇಹದೊಡನೆ ಎಲೆಗಳು ಉದುರಿ ಚಿಗುರಿ, ಯೌವನ ಹೊಂದಿದ ನೂತನ ಗಿಡಗಳಂತೆ ಶೋಭಿಸುತ್ತಿದ್ದಳು.

ಚೈತ್ರಮಾಸದ ವಸಂತ ಕಾಲದಲ್ಲಿ ಯಾವ ರೀತಿ ಮರದಲ್ಲಿರುವ ಹಳೆಯ ಎಲೆಗಳು ಉದುರಿ ಹೊಸದಾಗಿ ಚಿಗುರೊಡೆದು ಮರವು ನಳನಳಿಸುವಂತೆ ಇರುತ್ತದೆಯೋ ಅದೇ ರೀತಿ ರುಕ್ಮಿಣಿಯು ಕೌಮಾರಾವಸ್ಥೆಯನ್ನು ದಾಟಿ, ಯೌವನಕ್ಕೆ ಕಾಲಿಟ್ಟಾಗ, ಚಿಗುರೊಡೆದ ಅಂಗಾಂಗಗಳಿಂದ ಶೋಭಿಸುತ್ತಾ ಅವಳ ಸೌಂದರ್ಯ ಇಮ್ಮಡಿಸಿತು.

ಪ್ರಸಾದನಾನಾಂ ಪರಿಕರ್ಮ ದಿವ್ಯಂ ವಿಜೃಂಬಣಂ ವಿಭ್ರಮ ಜಾಲಕಾನಾಂ।
ವಯಃ ಶುಭಂ ವಾಮದೃಶಶ್ಚಕಾಶೇ ಪಶ್ಯದೃಶಾಂ ಭಾಗ್ಯಮನನ್ಯ ಭೋಗ್ಯಂ ॥೨೭॥

ಸುಂದರವಾದ ಕಣ್ಣೋಟಗಳಿಂದ ಕೂಡಿದ ರುಕ್ಮಿಣೀ ದೇವಿಯ ಆ ವಯಸ್ಸಾದುದು ಆಭರಣಗಳಿಗೆಲ್ಲಾ ದಿವ್ಯವಾದ ಆಭರಣವಾಗಿ, ವಿಲಾಸಗಳ ಬಗೆಗಳನ್ನು ಮೇಲೆ ತೋರ್ಪಡಿಸುವುದಾಗಿ ಕಾಣುವ ಕಣ್ಣುಗಳಿಗೆ ವಿಜೃಂಭಣೆಯಿಂದ ''ಇದಕ್ಕೆ ಮೇಲ್ಪಟ್ಟ ಭೋಗ್ಯವಿಲ್ಲ, ಭಗವಂತನಿಗೆ ಎಷ್ಟು ಚೆನ್ನಾಗಿ ಮಂಗಳಕರವಾಗಿ ಹೊಂದಾಣಿಕೆಯಾಗುತ್ತಾಳೆ'' ಎನ್ನುವಂತಿತ್ತು.

ರುಕ್ಮಿಣಿಯನ್ನು ಆ ಕಾಲದಲ್ಲಿ ನೋಡಿದವರೆಲ್ಲಾ ಇವಳು ಕೃಷ್ಣನಿಗೆ ಸರಿಯಾದ ಜೋಡಿ ಎಂದು ಕೊಂಡಾಡುತ್ತಿದ್ದರು.

''ತುಲ್ಯಶೀಲಂ ವಯೋ ವೃತ್ತಾಂ ತುಲ್ಯಾಭಿ ಜನ ಲಕ್ಷಣೋ।
ರಾಘವೋರ್ಹತಿ ವೈದೇಹಿಂ ತಂ ಚೇಯ ಮಸಿತೇಕ್ಷಣಾ''

ಎಂದು ಸೀತಾರಾಮರ ಜೋಡಿಯನ್ನು ನೋಡಿ ಸ್ವಾಮಿ ಆಂಜನೇಯನು ಕೊಂಡಾಡಿದ ಹಾಗೆ, ವಿದರ್ಭ ದೇಶದ ಜನರೆಲ್ಲಾ ಮುಂದೆ ಆಗುವ ಶ್ರೀಕೃಷ್ಣರುಕ್ಮಿಣಿಯರ ಜೋಡಿಯನ್ನು ಊಹಿಸಿಕೊಂಡು ಆಶ್ಚರ್ಯಪಡುತ್ತಿದ್ದರು.

ಅವಾಪ್ಯ ಸಾ ಮುಗ್ಧದಶಾಮಪೂರ್ವಾ ಮವ್ಯಾಜಲೀಲಾ ಗತಿರಾವಭಾಸೇ।
ರಮ್ಯಾ ರಮೋತ್ಪತ್ತಿ ದಶಾ ವಿಶೇಷಾತ್ ಜಾಂಬೂನದೀ ಜಂಗಮ ಪದ್ಮಿನೀವ ॥೨೮॥

ಅದ್ಭುತವಾದ ಸುಂದರವಾಗಿರುವ ಮುಗ್ಧತೆಯನ್ನು ಹೊಂದಿ ಸಹಜವಾದ ವಿಲಾಸ ಗಳಿಂದ ನಡೆಯುವ ಅವಳು, ಲಕ್ಷ್ಮೀದೇವಿಯು ಆವಿರ್ಭವಿಸುವ ತರುಣದಲ್ಲಿ ತೋರುವ ಹೊನ್ನಿನ ಬಣ್ಣದ ತಾವರೆ ಹೂವಿನ ನಡಿಗೆಯಂತೆ ನಡೆಯುತ್ತಿದ್ದಳು.

ಶ್ಲೋಕ 28ರಿಂದ 65ರ ವರೆಗೆ ರುಕ್ಮಿಣೀ ದೇವಿಯ ಒಂದೊಂದು ಅಂಗದ ವರ್ಣನೆ ಇದೆ. ಅವಳಿಗೆ ಸಮಾನವಾದ ರೂಪವುಳ್ಳ ಬೇರೆ ಯಾವ ಸ್ತ್ರೀಯೂ ಇರಲಿಲ್ಲ ಎಂಬ ಭಾವದಲ್ಲಿ ಕವಿಸಿಂಹರಾದ ಸ್ವಾಮಿ ದೇಶಿಕರು ವಿವಿಧ ಉಪಮಾನಗಳನ್ನು ಕೊಟ್ಟು ವರ್ಣಿಸಿ ದ್ದಾರೆ. ಪ್ರತಿಯೊಂದು ಅಂಗದ ವರ್ಣನೆಯನ್ನೂ ಅದ್ಭುತವಾಗಿ ಮಾಡಿ ತಾವು ಶೃಂಗಾರ ರಸಿಕ ಕವಿ ಎಂಬುದನ್ನೂ ನಿರೂಪಿಸಿದ್ದಾರೆ. ಶ್ಲೋಕಗಳ ತಾತ್ಪರ್ಯಗಳು ಸ್ಪಷ್ಟವಾಗಿದ್ದು ಹೆಚ್ಚು ವಿವರಣೆಗಳ ಅಗತ್ಯವಿಲ್ಲ.

ತಸ್ಯಾಸ್ತನುಂ ವರ್ಣಯತೋ ಮಮೈವಂ ಹೀನೋಪಮಾ ದೋಷಪದಂ ನ ವಿಂದೇತ್।
ನಿದರ್ಶನಂ ತೈರಪಿ ನಿತ್ಯದೃಷ್ಟಂ ಯೇಷಾಂ ನಿಕರ್ಷೋಽಪಿ ಗುಣೋಃ ಯತಃಸ್ಯಾತ್॥೨೯॥

ಸ್ವಾಮಿ ದೇಶಿಕರು ಅವಳ ದಿವ್ಯ ಶರೀರವನ್ನು ವರ್ಣಿಸಲು ಹೊರಟಿದ್ದಾರೆ. ಈ ರೀತಿ ಕೆಳಗೆ ಮೇಲೆ ಇರುವ ದೋಷವಾದ ಉಪಮೆಗಳನ್ನೇ ಹೇಳಬೇಕು. ಏಕೆಂದರೆ ಯಾವುದನ್ನೂ ನೋಡಿದರೂ ಹೀನವಾದ ಉಪಮಾನವನ್ನೇ ತೋರಿಸಿ, ಅವಳ ಬಗ್ಗೆ ಹೇಳಬೇಕು. ಅವಳಿಗೆ ಮೇಲ್ಪಟ್ಟುದು ಯಾವುದೂ ಇಲ್ಲ.

ತಾರೇಣ ತಸ್ಯಾಶ್ಚಿಕುರಾಂಧಕಾರೇ ತಾರಯಿತುಂ ಮೌಕ್ತಿಕ ಜಾಲಕೇನ।
ಪ್ರಾಯೇಣ ಯೋಽಸೌ ಪ್ರಲಯಾವಸಾನೆ ನಿಶೀಥ ಸೃಷ್ಟೇ ರಭವನ್ನಿದಾನಂ॥೩೦॥

ಇದುವರೆಗೂ ಅವಳ ದೇಹದ ವರ್ಣನೆ ಮಾಡಿಯಾಯಿತು. ಇನ್ನು ಅವಳ ಕೂದಲು ಮುಂತಾದ (ನಖಗಳು) ಕಾಲಿನ ರೇಖೆಗಳವರೆಗಿನ ಅಂಗಗಳು ವರ್ಣಿಸಲ್ಪಡುವುದು.

ಅವಳ ನೀಳವಾದ ? ತಲೆ ಕೂದಲು ರಾತ್ರಿಯಲ್ಲಿ ನಿರ್ಮಲವಾದ ಮುತ್ತುಗಳಿಂದ ಕೂಡಿ, ನಕ್ಷತ್ರಗಳಂತೆ ಹೊಳೆಯುತ್ತಿತ್ತು. ಆ ಕತ್ತಲಾದುದು ಪ್ರಳಯದ ಕೊನೆಯಲ್ಲಿ ಎಲ್ಲಾ ಹೊಂದುವ ಹಾಗೆ ಅರ್ಧ ರಾತ್ರಿಯಲ್ಲಿ ಸೃಷ್ಟಿಸುವ ಕಾರಣವಾಗಿದ್ದ ಕತ್ತಲಿನಂತಿತ್ತು. (ಕೂದಲಿನ ಕಪ್ಪು ಬಣ್ಣದ ವರ್ಣನೆ).

ದ್ಯುತಿಂ ಶಿಖಾರತ್ನ ಸಹಸ್ರರಶ್ಮೇ ಜ್ಯೋತ್ಸ್ನಾಂ ಚ ಮುಕ್ತಾಫಲ ಜಾಲಜಾತಾಂ।
ತತ್ಕುಂತಲ ಶ್ರೇಣಿಮಯಿಂ ಸಮಿತ್ರ ಮೈತ್ರಿಂ ದಧೌ ಮನ್ಮಥ ಚಾಪ ಮೌರ್ವೀಂ ॥೨೦॥

ಮನ್ಮಥನ ಬಿಲ್ಲಿನ ನಾಣಾದ ದುಂಬಿಗಳು ಆಶಿಸಿ ಬರುವ ಕಪ್ಪಾದ ಕೂದಲಾದುದು ಚೂಡಾ ಮಣಿಯಂತೆ ಸೂರ್ಯನ ಕಾಂತಿಯನ್ನು ಮುತ್ತು ಮಾಲೆಯ ಪ್ರಕಾರವೆಂಬಂತೆ ಬೆಳದಿಂಗಳನ್ನು ಕತ್ತಲೆಯಲ್ಲಿ ಹರಡುತ್ತಾ ಒಂದೇ ಸಮಯದಲ್ಲಿ ಸೇರಿ ಅದ್ಭುತವಾಗಿ ತೋರುತ್ತಿತ್ತು.

ಮುಖಾಬ್ಜ ಸೌಂದರ್ಯ ಮಧು ದ್ವಿರೇಫಾಃ ಕಾಂತ್ಯಾ ಪರಾಶೈವಲ ಪುಂಜಕಲ್ಪಾಃ।
ಶೋಣೇನ ಚೂಡಾಮಣಿನಾ ಸ ಸಂಧ್ಯಾಂ ತಮೀಮ ಪುಷ್ಯನ್ ಅಲಕಾಸ್ತದೀಯಾಃ॥೨೧॥

ದಿವ್ಯವಾದ ಮುಖಾರವಿಂದದಿಂದ ಸೂಸುವ ಸಿಹಿಯಾದ ಜೇನನ್ನು ಸೇವಿಸಲು ದುಂಬಿಗಳಾಗಿಯೂ, ಕಾಂತಿ ನದಿಯಲ್ಲಿ ಕಟ್ಟಿದ ಪಾಚಿಯ ರಾಶಿಯಂತೆ, ಅವಳ ತಲೆಯ ಕೂದಲು ಗಳಲ್ಲಿ ಸುಂದರವಾದ ಚೂಡಾಮಣಿಗಳು ಸೇರಿದ ರಾತ್ರಿಯಂತಿತ್ತು.

ಶರತ್ ಪ್ರಸನ್ನೇಂದು ಕಲಾಭಿರಾಮಾ ಲಲಾಟ ರೇಖಾ ಸುದೃಶೋ ರರಾಜ।
ಕಾಮೇನ ತತ್ಕಾಂತಿ ಲತಾ ಸಮೃದ್ಧ್ಯೈಃ ಸ್ವಯಂ ಪ್ರಕ್ಲ್ಪ್ತೇವ ಸುಧಾಸ್ರವಂತಿ ॥೨೨॥

ಶರತ್ಕಾಲದಲ್ಲಿ ತೋರುವ ತಂಪಾದ ಚಂದ್ರನಂತೆ ಸುಂದರವಾದ ಆ ಸುಂದರಿಯ ಕಣ್ಣಿನ ನೆತ್ತಿಯ ಹುಬ್ಬಾದುದು ಅವಳ ಕಾಂತಿಯ ರಾಶಿಯನ್ನು ತೋರ್ಪಡಿಸಲು ಮನ್ಮಥನು ತಾನೇ ಅಮೃತ ನದಿಯಾಗಿ ಬಂದು ಪ್ರಕಾಶ ಬೀರಿದಂತಿತ್ತು.

ಕಸ್ತೂರಿಕಾ ಕ್ಲ್ಪ್ತ ವಿಶೇಷಕಂ ತತ್ ಪಶ್ಯನ್ ಮೃಗಾಂಗೋ ವದನಂ ಮೃಗಾಕ್ಷ್ಯಾಃ।
ವಿಭಾವ್ಯತಾದೃಕ್ ಪರಭಾಗ ಶೋಭಾಂ ಕಲಂಕಯುಕ್ತೋಽಪಿ ಜಹೌ ವಿಷಾದಂ॥೨೪॥

ಆ ಜಿಂಕೆಯ ಕಣ್ಣುಳ್ಳ ಮುಖವನ್ನು ಜಿಂಕೆಯೆಂಬ ಬಿಂಬ ಹೊಂದಿದ ಚಂದ್ರನು ಕಸ್ತೂರಿ ತಿಲಕದೊಡನೆ ಕಂಡು, ಅದರಿಂದ ಉಂಟಾದ ಸೌಂದರ್ಯದ ಪ್ರಭೆಯನ್ನು ಉದ್ದೇಶಿಸಿ, ತನಗೆ ಕಳಂಕವಿದೆಯೆಲ್ಲಾ ಎಂದು ದುಃಖವನ್ನು ಬಿಟ್ಟುಬಿಟ್ಟನು. (ತನಗಿರುವ ಕಳಂಕವು ಅವಳ ತಿಲಕದಂತಿದೆ ಎಂದು ಚಂದ್ರನು ಭಾವಿಸಿದನು).

ತಾರುಣ್ಯ ನದ್ಯಾಸ್ತನು ವೀಚಿಕಲ್ಪೇ ತದ್ಭ್ರೂಲತೆ ಶಾಂರ್ಙ್ಗ ನಿದಾನ ದೃಶ್ಯೆ।
ಅನಂಗ ವೇದ ಪ್ರವಣಸ್ಯ ರತ್ಯಾ ಲೇಖಾಕ್ಷರಂ ನ್ಯಸ್ತ ಮಸೂ ಚ ಯೇ ತಾಂ ॥೨೫॥

ಯೌವನವೆಂಬ ಪ್ರವಾಹದಲ್ಲಿ ಚಿಕ್ಕ ಅಲೆಗಳಂತೆ ಇರುವ ಶಾಂರ್ಙ್ಗವೆಂಬ ಬಿಲ್ಲಿಗೆ ಆದಿ ಕಾರಣದಂತಿರುವ ಅವಳ ಹುಬ್ಬುಗಳು ಮನ್ಮಥ ವೇದಕ್ಕೆ ಮುಂಚೆ ಪ್ರಣವವೆಂಬ ಓಂಕಾರಕ್ಕೆ ನದೀ ದೇವಿಯಿಂದ ಬರೆಯಲ್ಪಟ್ಟ ರೇಖೆಗಳಂತೆ ಇದ್ದವು.

ಪ್ರಸೂತ ಪದ್ಮೋತ್ಪಲ ಕಾನನಶ್ರೀಃ ಪ್ರಾರಬ್ಧ ವೀಚೀ ವಿಭವಾ ವಿಲಾಸೈಃ।
ದೃಷ್ಟಿಸ್ತದೀಯಾ ದದೃಶೇ ದಯಾರ್ದ್ರದ್ರಾಘೀಯಸೀ ಮನ್ಮಥ ದೀರ್ಘಿಕೇವ ॥೨೬॥

ಅವಳ ಕಣ್ಣೋಟವು ಕರುಣೆಯಿಂದ ಕೂಡಿ, ತಂಪಾಗಿ ಎಳೆಯ ತಾವರೆ ಹೂವಿನಂತಹ ಸೌಂದರ್ಯವನ್ನು ಹೊಂದಿ, ವಿಲಾಸಗಳಿಂದ ಕೂಡಿರುವ ಅಲೆಗಳಿಂದ ಬೀಸಲ್ಪಟ್ಟು ಮನ್ಮಥನು ನಡೆದಾಡುವ ಸರೋವರದಂತೆ ತೋರುತ್ತಿತ್ತು.

ತದೃಷ್ಟಿರಾಯಾಮವತೀ ಸುಜಾತಾ ಶ್ಯಾಮೋಜ್ವಲಾ ಚಾರು ವಿಶಾಲ ಮಧ್ಯಾ।
ಮನ್ಯೇ ಸಮೇಷ್ಯನ್ ಮಧುವೈರಿಲಕ್ಷ್ಯಾ ಚೇತೋಭುವಃ
ಶಕ್ತಿರಭೂದಮೋಘಾ ॥೨೭॥

ಅವಳ ಕಣ್ಣೋಟದ ಜೊತೆಯಲ್ಲಿ ಹುಟ್ಟುವ ಶೋಭೆ, ಕಾಂತಿ ಎಲ್ಲವನ್ನೂ ಹೊಂದಿರುವ ಶಕ್ತಿಯು ಮನ್ಮಥಾಯುಧದಂತೆ ಭಾವಿಸಲ್ಪಡುತ್ತದೆ. ಶಕ್ತಿ ಎಂಬುದು ಒಂದು ಗುರಿಯನ್ನು ಹೊಂದುವುದಾಗಿರುತ್ತದೆ. ಇವಳ ದೃಷ್ಟಿಯು ಕೃಷ್ಣನೆಂಬ ಗುರಿಯೊಂದನ್ನೇ ಹೊಂದಿತ್ತು.

ನಿಗೃಹ್ಣತಿ ರತ್ನತಿಲ ಪ್ರಸೂನಂ ನಾಸಾ ತದೀಯಾ ನಯನಾಬ್ಧಿ ಸೇತುಃ।
ಅಭೋಧಿ ನಿಶ್ವಾಸ ಸಮೀರ ಗಂಧೈರಂತರ್ಗತಾನ್ ವೇದಗಣಾನ್ ವಮಂತಿ ॥೨೮॥

ಅವಳ ದಿವ್ಯವಾದ ನಾಸಿಕವಾದುದು ಉದ್ದವಾಗಿರುವುದರಿಂದ ಸಮುದ್ರದಂತೆ ಇರುವ ಕಣ್ಣುಗಳ ನಡುವೆ ಇರುವ ಅಣೆಕಟ್ಟಿನಂತೆ ರತ್ನದಿಂದುಂಟಾದ ಎಳ್ಳಿನ ಪುಷ್ಪಗಳ ಕಾಂತಿಗಳಿಗೆ ಮೇಲಾದ ಸುಂದರವಾದ ಕಾಂತಿಯನ್ನು ಹೊಂದಿದ್ದಾಗಿ ತನ್ನ ಉಸಿರಿನ ಗಾಳಿಯ ಉಚ್ಛ್ವಾಸ ನಿಶ್ವಾಸಗಳನ್ನು ಕೊಂಡು, ವೇದಗಳೆಲ್ಲವನ್ನೂ ಪ್ರಕಾಶಪಡಿಸುತ್ತಿರುವಳೇನೋ ಎಂಬಂತಿತ್ತು.

ನವೇಂದು ಸಂಧ್ಯಾ ಪ್ರಭೃತೀನಿ ಲೋಕೇ ನಿರ್ವಣ್ಯಮಾನಾನಿ ನಿದರ್ಶನಾನಿ।
ನ ಖಲ್ವವಿಂದನ್ ಕಲಯಾಪಿ ತಸ್ಯಾಃ ಸ್ಮಿತಾಧರಸ್ಯಾಪ್ತಿ ಕೃತಾಮಭಿಖ್ಯಾಂ ॥೨೯॥

ಬೆಳದಿಂಗಳೊಳಗೆ ಸೇರಿದ ವಸ್ತುಗಳು ಅನೇಕ ಉದಾಹರಣೆಗಳಿಂದ ಜಗತ್ತಿನಲ್ಲಿ ವರ್ಣಿಸಲ್ಪಟ್ಟಿವೆ. ಆದರೆ ಅವಳ ಮುಗುಳ್ನಗೆಯೊಡನೆ ಸೇರುವ ಮನ್ಮಥಾಯುಧಗಳನ್ನು ಸರಿಯಾಗಿ ವರ್ಣಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ.

ಅಹೇತು ರಜ್ಯನ್ ಅಧರ ಸ್ತದೀಯಃ ಪ್ರಸೂನ ಮುಕ್ತಾಯಿತ ಮುಗ್ಧಹಾಸಃ।
ಲಕ್ಷ್ಮೀ ಲತಾ ಯಾಃ ಲಲಿತೋದಧೇಶ್ಚ ಪ್ರವಾಳಯೋಗಂ ಪ್ರಥಯಾಂ ಬಭೂವ ॥೩೦॥

ಬೇರೆ ಉತ್ತಮ ವಸ್ತುವಿನ ಸೇರುವಿಕೆ ಮೊದಲಾದ ಕಾರಣಗಳಿಲ್ಲದೆ ಸಹಜವಾಗಿಯೇ ಕೆಂಪಾದ ದಿವ್ಯ ಅಧರಗಳು ಹೂವು ಮುತ್ತುಗಳು ಸೇರಿ ಅವಳ ವಿಲಾಸ ಸಮುದ್ರದ ಶ್ರೇಷ್ಠವಾದ ಹವಳಗಳ ಕಾಂತಿಯ ರಾಶಿಯಂತೆ ಲತೆಗಳಂತೆ ಬೆಳಗಿದವು.

ಮುಖಂ ತದೀಯಂ ವಿರರಾಜ ಮುಗ್ಧಂ ಸೌರಭ್ಯ ಲಾವಣ್ಯ ಸಮುಚ್ಚಯೇನ ।
ವ್ಯವಸ್ಥಿತಾನ್ಯೋನ್ಯ ವಿಶೇಷ ಲೋಭಾ ದೇಕತ್ವಮಾಪನ್ನ ಮಿವೇಂದು ಪದ್ಮಂ ॥೪೧॥

ಸೌರಭವು ಲಾವಣ್ಯವೂ ಸೇರಿ ಮನೋಹರವಾದ ಅವಳ ದಿವ್ಯ ಮುಖಾರವಿಂದವು ಒಂದರ ಕಾಂತಿಯನ್ನು ಮತ್ತೊಂದು ಹೊಂದಬೇಕೆಂದು ದುರಾಶೆಯಿಂದ ಒಂದಾಗಿ ಸೇರಿ ಚಂದ್ರನೂ, ಕಮಲವೂ ಸೇರಿ ಬೆಳಗುವಂತಿತ್ತು.

ವರ್ಣಾನು ಪೂರ್ವಿ ಸುಭಗೇನ ಕಾಲೇ ಭವ್ಯಾಂ ಶ್ರುತಿಂ ಭಾವಯತಾ ಯಥಾವತ್ ।
ತಾರಸ್ಯ ಸಂಸ್ಥಾನ ನಿವಾಸ್ವ ಕಾರ್ಷೀತ್ ಕಂಠೇನಸಾ ಕಾಂಚನ ಕಂಬು ಭಾಸಾ ॥೪೨॥

ಹೊರಗೆ ಕಸ್ತೂರಿ, ಕರ್ಪೂರ ಮುಂತಾದ ವರ್ಣರಂಜಿತ ಲೇಪನಗಳನ್ನು ಹೊಂದಿ, ಒಳಗೆ ಅಗರವೇ ಮೊದಲಾದ ಇತರ ವರ್ಣಗಳು ಕಡಿಮೆಯಾಗಿ ತೋರುವುದರಿಂದ ಅವಳ ಕಂಠಭಾಗವು ವೇದಗಳನ್ನು ಹೇಳುವ ಚಿನ್ನದ ಶಂಖದಿಂದ ಬರುವ ಪ್ರಣವಾಕ್ಷರ ದಂತಿತ್ತು.

ಮಧುದ್ವಿಷಃ ಕಂಠ ಪರಿಷ್ಕ್ರಿಯಾರ್ಥಂ ಕಾಮಾತ್ಮನಾಮಾಲ್ಯ ಕೃತೇವ ಕ್ಲೃಪ್ತೆ।
ಬಭೂವತು ರ್ಬಾಹುಲತೆ ತದೀಯೇ ಶಂಪಾತ್ವಿಷೌ ಚಂಪಕ ಮಾಲಿಕೇ ದ್ವೇ ॥೪೩॥

ಶ್ರೀಕೃಷ್ಣನ ಕತ್ತಿಗೆ ಅಲಂಕಾರವಾಗಿ ಕಾಮವೆಂಬ ಮಾಲೆಯನ್ನು ಕಟ್ಟುವವನು ಮಾಡಿ ಕೊಡುವ ಎರಡು ಚಂಪಕ ಹೂಮಾಲೆಗಳನ್ನು ಧರಿಸಿರುವ ಅವಳ ಮಿಂಚಿನಂತೆ ಹೊಳೆಯುವ ಭುಜಗಳು ಅದ್ಭುತವಾಗಿ ಬೆಳಗುತ್ತಿದ್ದವು. (ಅವಳ ಭುಜಗಳು ಮುಂದೆ ಶ್ರೀಕೃಷ್ಣನ ಕತ್ತನ್ನು ಆಲಂಗಿಸಿಕೊಳ್ಳುತ್ತವೆ).

ಆಸೀದಧಿಷ್ಠಾನ ವಿಶೇಷ ಸೀಮಾ ವಕ್ಷೋಜಯೋರಂಕುರ ತೋರಮುಷ್ಯಾಃ।
ಮುಕುಂದ ವಕ್ಷಸ್ಥಲ ಮುದ್ರಣಾರ್ಹಾಂ ಭವ್ಯಾಮವಸ್ಥಾಮಿವ ಭಾವಯಂತಿ ॥೪೪॥

ಅವಳಿಗೆ ಎದೆಯಲ್ಲಿ ಒತ್ತಾಗಿ ಸೇರಿ ಬರುವ ಸ್ತನಗಳ ಅಡಿಯ ಸ್ಥಳವು ಶ್ರೀಕೃಷ್ಣನ ಎದೆಗೆ (ಚಂದನಾದಿಗಳನ್ನು ಪೂಸಿ) ಮುದ್ರೆಯಿಡುವುದಕ್ಕೆ ತಕ್ಕ ಜಾಗವು ಇದೇ ಎನ್ನುವಂತೆ ಇತ್ತು.

ಸಮಾವೃತೌ ಹಾರಮಯೂಖ ಸೂತ್ರೈ ಸ್ತಸ್ಯಾಃ ಸ್ತನೌ ಚಾರು ತರಾವ ಭೂತಾಂ।
ಜಿಗೀಷತ ಸ್ತತ್ ಪ್ರಿಯ ಚಿತ್ತವೃತ್ತಿಂ ಮನೋಭುವೋ ಮಂಗಲಪೂರ್ಣಕುಂಭೌ॥೪೫॥

ನೂಲಿನ ಕಂಬಿಯಂತಹ ಮುತ್ತು ಮಾಲೆಗಳ ಕಾಂತಿಗಳು, ಅವಳ ಒತ್ತಾದ ಸ್ತನದ್ವಯ ಗಳು ಅವಳಿಗೆ ಪ್ರೇಮಿಯಾದ ಶ್ರೀಕೃಷ್ಣನ ಮನಸ್ಸನ್ನು ಗೆಲ್ಲುವ ಹಾಗೆ ಮನ್ಮಥನಿಗೆ ಮಂಗಳ ವಾಗಿ ಮುಂದೆ ತೋರಲ್ಪಟ್ಟು ದಾರ ಸುತ್ತಿದ್ದ ಪೂರ್ಣಕುಂಭಗಳಂತೆ ತೋರುತ್ತಿದ್ದವು.

ತಸ್ಯಾಸ್ತದಾ ತದ್ವದಲಕ್ಷ್ಯಮಧ್ಯಂ ತಸ್ಯಾಃ ಸ್ತನದ್ವಂದ್ವಮವಾಪವೃದ್ಧಿಂ।
ಕಾಲೇ ಯಥಾ ತತ್ಪ್ರಥಿಮ ಪ್ರಭೂತಂ ಕೃಚ್ಛ್ರಾದಭೂತ್ ಕೃಷ್ಣಭುಜಾಂತರಾಲಂ॥೪೬॥

ಅವಳ ಸ್ತನಗಳು ಅವಳಿಗೆ ಸೊಂಟ ತೋರದೆ ಇರುವಂತೆ ಇರುವುದರಿಂದ ತಮ್ಮ ಮಧ್ಯದಲ್ಲಿ ಏನೂ ತೋರದಂತೆ ವಿರಾಜಿಸುತ್ತಿದ್ದವು. ಸ್ವಲ್ಪ ಕಾಲ ಕಳೆದೊಡನೆ ಅವಳನ್ನು ಹೊಂದುವ ಶ್ರೀಕೃಷ್ಣನ ದಿವ್ಯ ಎದೆಯಾದುದು ಈ ಉಬ್ಬಿದ ಸ್ತನಗಳಿಗೆ ಆಶ್ರಯ ನೀಡುತ್ತದೆಂಬುದು ಸತ್ಯವಾದ ವಿಷಯವಾಗಿತ್ತು.

ಮಧ್ಯಂ ಕೃಶೀಮ್ನಾ ವಿರರಾಜ ತಸ್ಯಾ ನಾಭಿ ಹ್ರದಾನ್ನಾಲಮಿವ ಪ್ರರುದ್ಧಂ।
ಪ್ರಿಯಾಗಮೋದರ್ಕಮಭೂತ್ ಯದಗ್ರೇ ಕುಚಾತ್ಮನಾ ಕಾಂಚನ ಪದ್ಮಯುಗ್ಮಂ ॥೪೭॥

ಅವಳ ಮಧ್ಯ ಭಾಗವು ಅತ್ಯಂತ ಸುಂದರವಾದ, ಸರೋವರದ ಮಧ್ಯದಿಂದ ಎದ್ದು ಬಂದ ಲತೆಯಂತೆ ಸಣ್ಣಗೆ ಶೋಭಿಸುತ್ತಿತ್ತು. ಆ ಲತೆಯ ತುದಿಯಲ್ಲಿ ಪ್ರೇಮಿಯ ಬರುವಿಕೆಗೆ ಕಾರಣವಾದ ಎರಡು ಶಾಖೆಗಳು ಇದ್ದು ಅವು ಅವಳ ಸ್ತನಗಳನ್ನು ಬಿಂಬಿಸುತ್ತಿತ್ತು.

ಸ್ತೋಕಾನತಾಂಗೀ ಸ್ತನ ಭಾರ ಭೂಮ್ನಾ ಮುಗ್ಧಾ ಬಭೌ ಮುಷ್ಟಿಮಿತಾವಲಗ್ನಾ।
ಭೃಂಗಾಭಿ ನಂದ್ಯೇನ ಗುಣೇನ ಯುಕ್ತಾ ಕಾಮಸ್ಯ ಸಾ ಕಾಽಪಿ ಧನುರ್ಲತೇವ॥೪೮॥

ಸ್ತನಗಳ ಭಾರದಿಂದ ಬಗ್ಗಿದ ನಡುವುಳ್ಳವಳಾಗಿ, ಮುಷ್ಠಿಯಲ್ಲಿ ಹಿಡಿಯಬಹುದಾದ ಸೊಂಟ ಹೊಂದಿರುವ ಆ ಸುಂದರಿಯಾದ ರುಕ್ಮಿಣಿಯು ತನ್ನ ದಿವ್ಯದೇಹವನ್ನು ಸುತ್ತಿ ಬರುವ ದುಂಬಿಗಳ ಸಮೂಹದಿಂದ ಕೂಡಿ, ಅಲ್ಲದೆ ದುಂಬಿಗಳಂತಹ ರೋಮಾವಳಿಯಂತೆ ನಾಣನ್ನು ಕಟ್ಟಿ ಹೆದೆಯೇರಿಸಿದ ಮನ್ಮಥನ ಬಿಲ್ಲಿನಂತೆ ತೋರುತ್ತಿದ್ದಳು.

ರರಾಜ ಲಾವಣ್ಯ ತರಂಗ ರಮ್ಯಾ ವಲೀ ತ್ರಯೀ ಮಧ್ಯಗತಾ ಮೃಗಾಕ್ಷ್ಯಾಃ।
ಅಂತಸ್ಥಿತಾ ನಾಮಿವ ದರ್ಶಯಂತಿ ನಿವೇಶ ಸೀಮಂತ ಮನುಶ್ರವಾಣಾಂ ॥೪೯॥

ಇವಳ ಸೊಂಟದ ಸೌಂದರ್ಯ ಪ್ರವಾಹದಲ್ಲಿ ಅಲೆಯ ಸಮೂಹದಂತೆ ಕಾಣುವ ಮೂರು ತ್ರಿವಳಿಗಳು ದಿವ್ಯ ಉದರದಲ್ಲಿ ತೋರುವ ನಾಲ್ಕು ವೇದಗಳಿಗೆ ಅವುಗಳ ಎಲ್ಲೆಗಳನ್ನು ತೋರಿಸುವ ಸೀಮಾರೇಖೆಗಳಂತೆ (ಸೀಮಂತ ರೇಖೆಗಳಂತೆ) ಕಾಣುತ್ತಿತ್ತು.

ಮಧ್ಯೈವ ಲಗ್ನಂ ಸುದೃಶೋ ವಿಲಗ್ನಾ ರೋಮಾವಲೀ ಕಾಮಧನುರ್ಗುಣಭಾ।
ಜಿಗಾಯ ನಾಭೀ ಸರಸಃ ಸುಜಾತಾ ಮುಲ್ಲಾಸಿನೀ ಮುತ್ಪಲ ರೇಣುಪಂಕ್ತಿಂ ॥೫೦॥

ಮನ್ಮಥನ ಬಿಲ್ಲಿನ ನಾಣಿನಂತೆ ಬೆಳಗುವ ರೋಮಾವಳಿಯಾದುದು ನಾಭಿಯೆಂಬ ಸರಸ್ಸಿನಲ್ಲಿ ಜನಿಸಿದ ರೇಣುಗಳಂತೆ ಮಧ್ಯದಲ್ಲಿ ಸುತ್ತಲೂ ಶೋಭಿಸುತ್ತಿತ್ತು.

ಅನುಪ್ರಯಾತಃ ಸ್ವವಶಾಮಭಿಖ್ಯಾಂ ಯುಥೋಂಜಿತೋ ಯೌವನ ಗಂಧಹಸ್ತಿ।
ತದ್ರೋಮ ರಾಜೀ ವ್ಯಪದೇಶ ದೃಶ್ಯಾಂ ನೂನಂ ದಧೌ ನೂತನ ದಾನರೇಖಾಂ॥೫೦॥

ತನ್ನ ಸಖಿಯರೊಡನೆ ಕೂಡಿ ಇದ್ದ ಗಜ ಒಂದು. ಅವುಗಳನ್ನು ಬಿಟ್ಟು ತನ್ನ ಹೊಸ ಮದವನ್ನು ಹೊಂದುವಂತೆ, ದೇಹವನ್ನೆಲ್ಲಾ ಪ್ರಸರಿಸಿದ ಯೌವನವು ತನಗೆ ಸಮಾನವಾದ ರೋಮಾವಳಿಯನ್ನು ಹೊಂದಿತ್ತು.

ಪ್ರಕಾಶಿತಾ ವರ್ತರುಚಿಃ ಪ್ರಭಾಬ್ಧೌ ನಾಭಿಃ ಸುವೃತ್ತಾ ರುರುಚೇ ನತಾಂಘ್ರ್ಯಾಃ।
ರೋಮಾವಲೀ ರತ್ನಲತಾನುರೂಪಂ ರುಕ್ಮೇಣ ನಿಷ್ಪನ್ನಮಿವಾಲವಾಲಂ ॥೫೧॥

ಎಳೆಯ ಯೌವನದ ದೇಹದ ಅವಳ ಕಾಂತಿಯ ಸಮುದ್ರದಲ್ಲಿ ಬೆಟ್ಟದಂತೆ ಬೆಳಗುವ ನಾಭಿಯಾದುದು ರೋಮಾವಳಿಯೆಂಬ ರತ್ನರಾಶಿಯನ್ನು ನಿರ್ಮಿಸಲು ಕಟ್ಟಲ್ಪಟ್ಟ ಚಿನ್ನದ ಪಾತಿಯಂತೆ ತೋರುತ್ತಿತ್ತು.

ಪೃಥ್ವಿ ಚಕಾಶೆ ಸ್ತನ ಸಂಪದಸ್ಯಾ ಲಾವಣ್ಯಮಂಬೋ ನಿಯತಂ ಚ ತೇಜಃ।
ಶ್ವಾಸೋದಯೋ ಗಂಧವಹಃ ಶುಭಾಂಗ್ಯಾಃ ನಾಭಿಶ್ಚಮಧ್ಯಂ ಚ ನಭೋ ವಿಭಕ್ತಂ ॥೫೨॥

ಮಹಾಭೂತಗಳು ಅವಳ ಅಂಗಗಳಾಗಿ ಮಾರ್ಪಟ್ಟಿದ್ದವು. ಭೂಮಿಯು ಅವಳಿಗೆ ಸ್ತನಗಳಾಗಿ ಬೆಳೆದಿದ್ದವು. ತಣ್ಣೀರು ಸೌಂದರ್ಯ ಪ್ರವಾಹವಾಗಿತ್ತು. ತೇಜಸ್ಸು ಅವಳ ದೇಹ ವಾಗಿತ್ತು. ಗಾಳಿಯು ಸುವಾಸನೆಯಾದ ಉಸಿರಾಗಿತ್ತು. ಆಕಾಶವು ನಾಭಿ ಮತ್ತು ಮಧ್ಯಭಾಗ ಎಂದು ಎರಡಾಗಿ ವಿಭಾಗಿಸಲ್ಪಟ್ಟಿತ್ತು.

ಗಜೇಂದ್ರ ಹಸ್ತಾದಿಷು ತತ್ಸಮತ್ವೇ ದೂರೆ ಸತಾಂ ದೋಷ ಗುಣಾವಮರ್ಶಃ।
ಭವಿಷ್ಯತಃ ಶಾಂರ್ಙ್ಗ ಮೃತ ಸ್ತದೂರು ಲೀಲೋಪಧಾನೇ ಕಿಮತೋಽಧಿಕೇನ ॥೫೪॥

ಆನೆಯ ಸೊಂಡಿಲಿನಂತೆ, ಅವಳ ಕಿವಿಯೋಲೆಗಳು ಅವಳಿಗೆ ಹೊಂದುತ್ತವೆಯೋ ಎಂಬ ಗುಣದೋಷ ವಿಮರ್ಶನವು ಜ್ಞಾನಿಗಳಿಗೆ ಬಹಳ ದೂರವಾದುದು. (ವಿಮರ್ಶನಕ್ಕೆ ಸ್ಥಳವಿಲ್ಲ). ಸಾರಂಗಪಾಣಿಗೆ ಅವಳ ಕಿವಿಯೋಲೆಗಳು ಮಲಗಿರುವಾಗ ವಿನೋದವಾಗಿ ತಲೆದಿಂಬಿನಂತೆ ಕಾಣುತ್ತವೆ. ಅದಕ್ಕೆ ಮೇಲೆ ಏನೂ ಹೇಳಬೇಕಿಲ್ಲ ಅದರ ಗುಣಗಳ ಬಗ್ಗೆ.

ಮನೋಜ್ಞವೃತ್ತಂ ಮಧು ಬುದ್ಬುದಾಭಂ ಚಕ್ಷುಷ್ಮತಾಂ ಸಾದರ ದರ್ಶನೀಯಂ।
ಸ್ವದೇಹಕಾಂತೇಃ ಸವಿಶೇಷ ದೃಷ್ಟ್ಯೈ ಜಾನುದ್ವಯಂ ದರ್ಪಣ ತಾಮ ಯಾಸೀತ್ ॥೫೫॥

ಅವಳ ಮೊಣಕಾಲುಗಳು ಎರಡು, ಕನ್ನಡಿ ಎನ್ನುವುದು ನಿಜ. ಮನಸ್ಸಿಗೆ ಆನಂದ ವಾಗಿ, ಜೇನಿನ ರಾಶಿಯಂತೆ ಇರುವ, ನೋಡುವವರಿಗೆ ಸಂತೋಷದಿಂದ (ಆಸೆಯಿಂದ) ಹಾಡಲ್ಪಡುವಂತೆ ಇರುವುದೂ ಆಗಿ ಅವಳಿಗೇ ತನ್ನ ದೇಹ ಸೌಂದರ್ಯವನ್ನು ಚೆನ್ನಾಗಿ ಕಾಣಲು ಸಹಾಯ ಮಾಡುವ ಹಾಗೆ ಒಂದೊಂದು ಇದ್ದವು.

ಉದೇಷ್ಯತಃ ಪಂಚ ಶರಸ್ಯ ತಸ್ಯಾ ಮುತ್ಪಾದಯಿಷ್ಯನ್ ಉಚಿತಂ ನಿಷಂಗಂ।
ವಿಧಿಸ್ಸ್ವಯಂ ಮಾತೃಕಯಾ ಕಿಲಾರ್ಥೀ ಜಂಘಾಯುಗಂ ವೀಕ್ಷ್ಯ ಜಹರ್ಷ ತಸ್ಯಾಃ॥೫೬॥

ಅವಳ ಹತ್ತಿರ ತೋರುವ ಮಂಡಿಗಳಿಗೆ ಕಣ್ಣುಗಳನ್ನು ಇಟ್ಟುಕೊಳ್ಳಲು ಪ್ರಯತ್ನಪಟ್ಟ ಬ್ರಹ್ಮನು ಅದಕ್ಕೆ ಮಾತೃಕೆ (ಮಾದರಿ) ಒಂದು ಹುಡುಕುತ್ತಾ, ಅವಳ ಮೊಣಕಾಲುಗಳನ್ನು ನೋಡಿ (ಒಂದಕ್ಕೆ ಎರಡು ಮಾದರಿಗಳು ಸಿಕ್ಕಿತಲ್ಲಾ ಎಂದು) ಸಂತೋಷಿಸಿದನು.

ಕಲಾಚಿಕಾಂ ಕಾಂಚನ ಸಾರಕ್‌ಪ್ತಾಂ ಕಾಂತೇಃ ಶುಭಾಂ ಕಾಮಪಿ ಕಾಹಲೀಂ ಚ।
ಶಶಾಂಕಿರೇ ಅನನ್ಯ ಸಮೀಕ್ಷ್ಯ ಶೋಭಾಂ ಜಗಂತಿ ಜಂಗಾ ಮವಲೋಕ್ಯ ತಸ್ಯಾಃ ॥೫೭॥

ಕಾಣಲಾಗದ ಕಾಂತಿಯನ್ನು ಹೊಂದಿದ ಅವಳ ಮೊಣಕಾಲುಗಳನ್ನು ಕಂಡ ಜಗತ್ತಿನಲ್ಲಿರುವವರೆಲ್ಲರೂ, ಕಾಂತಿಯನ್ನು ಹುದುಗಿಸಿಟ್ಟ ಆಭರಣ ಮಾಡಲ್ಪಟ್ಟ ಸುಂದರವಾದ ಪಾತ್ರೆಗಳಂತೆ ಮತ್ತು ಕಹಳೆ ಎಂಬ ವಾದ್ಯದಂತೆಯೂ ಭಾವಿಸಿದರು.

ಅಲಕ್ತ ಕಾದಪ್ಯಧಿಕಾತ್ಮರಾಗಾ ಪದದ್ವಯೀ ಪದ್ಮ ದೃಶ ಶ್ಚಕಾಶೇ।
ಪ್ರಾಚೀನ ಜನ್ಮ ಪ್ರಣಯಾನುರೋಧಾತ್ ಸಂಭಾವ್ಯಮಾನೇವ ಸರೋಜ ಲಕ್ಷ್ಮ್ಯಾ॥೫೮॥

ಕೆಂದಾವರೆಯಂಥ ಕಣ್ಣುಳ್ಳ ಅವಳ ಎರಡು ದಿವ್ಯ ಪಾದಾರವಿಂದಗಳು ಚಂಪಕ ಪುಷ್ಪಕ್ಕೂ ಮೇಲಾದ ಕೆಂಪುಬಣ್ಣವನ್ನು ಹೊಂದಿ ಹಿಂದೆ ತನ್ನ ಜಾಗದಲ್ಲಿ ತೋರಿದ್ದಳು (ಲಕ್ಷ್ಮೀ ಪದ್ಮ ಸಂಭವೇ) ಎಂಬ ಸ್ನೇಹದಿಂದ ತಾವರೆ ಹೂವಿನ ಸೌಂದರ್ಯದಿಂದ ತಂಗಿವೆಯೇನೋ ಎಂಬಂತಿತ್ತು.

ಪಾದಾಂಭುಜೇ ದತ್ತ ಮಧುಪ್ರಸಕ್ತ್ಯಾ ನಿರ್ಣೇಜಯಾಮಾಸ ನಖೇಂದು ಕಾಂತ್ಯಾ।
ಪ್ರಾಯೇಣ ಸಾ ಸತ್ಪಥ ಮಾಶ್ರಯಂತಿ ಪಂಖಾನ್ ಅಸತ್ಸಂಗ ಭವಾನ್ ಪೃಥಿವ್ಯಾಃ॥೫೯॥

ದಿವ್ಯ ಪಾದಾರವಿಂದದ ನಖಗಳು ಬೆಳದಿಂಗಳ ಪ್ರಭೆಯಾದುದು, ಇದು ತಾವರೆ ಹೂವಿನ ದಳವಾದದ್ದರಿಂದ ಇದರಲ್ಲಿ ಜೇನು ಇರಬೇಕೆಂದು ಬುದ್ಧಿಯು ತೋರುತ್ತಿತ್ತು. ಸನ್ಮಾರ್ಗದಲ್ಲಿ ಉದ್ದೇಶವುಳ್ಳ ಅವಳು ಅಸತ್ತುಗಳಿಂದ ಸೇರುವಿಕೆಯಿಂದ ಭೂಮಿಗೆ ಏರ್ಪಟ್ಟ ಕೊಳೆಯನ್ನು ಬೆಳದಿಂಗಳ ಪ್ರವಾಹದಿಂದ ತೊಳೆದು ಶುಭ್ರಗೊಳಿಸಿದಳು.

ತಸ್ಯಾಃ ಪದಾಂಭೋಜ ಮೃಣಾಲ ಭಾಸಾ ಪ್ರಕಾಶ ಭೂಮ್ನಾ ನಖಮೌಕ್ತಿಕಾನಾಂ।
ಪ್ರಕೀರ್ಣ ಪುಷ್ಪಾಃ ಸುಧಯಾಽವಸಿಕ್ತಾಃ ವಿಹಾರ ಭೂಮ್ಯೋಃಯುಗ ಪದ್‌ಬಭೂವುಃ॥೬೦॥

ತಾವರೆಯಂಥಾ ದಿವ್ಯ ಪಾದಾರವಿಂದದ ನಖಗಳ ಕಾಂತಿಯಿಂದ ಹರಡಿದ ಬೆಳದಿಂಗಳಾದುದು, ಅವಳು ಸಂಚಾರ ಮಾಡುವ ಸ್ಥಳಗಳಲ್ಲಿ ಹೂವುಗಳನ್ನು ಎರಚಿ ಹೂಜೇನುಗಳೇನೋ ಎಂಬಂತೆ ತೋರುತ್ತಿತ್ತು.

ತಸ್ಯಾ ಶ್ರುತಿ ಶ್ರೇಣಿ ಶಿಖಾಮಣೀನಾಂ ಸಕೇಸರಾ ದೀಧಿತಿಭಿರ್ನಖಾನಾಂ।
ಪ್ರಸಾಧಿಕಾಲೋಚನ ಭೃಂಗ ಲೌಲ್ಯಂ ಪದ್ಮದ್ವಯಿ ಪಾದಮಯಿ ನಿರಾಸಾ ॥೬೧॥

ವೇದರಾಶಿಗಳಲ್ಲಿ ತುದಿಗಳಲ್ಲಿ ಮಣಿಗಳಾಗಿ ಬೆಳಗುವ ನಖಿಗಳ ಕಾಂತಿಯಿಂದ ಧಾತುಗಳಿಗೂ ಮೇಲಾದ ಅವಳ ದಿವ್ಯ ಪಾದಾರವಿಂದಗಳು ಆಭರಣಗಳನ್ನು ಧರಿಸುವ ಸ್ತ್ರೀಗಳ ಕಣ್ಣುಗಳಂತೆ ಇರುವ ದುಂಬಿಗಳಿಗೆ ಬೇರೆ ಕಡೆಗೆ ಹೋಗುವ ಆಸೆಯೇ ಇರಲಿಲ್ಲ

ಮುಖೇಂದು ನಿಶ್ಯಂದ ನಿಬ್ಭೈರಮುಶ್ಯಾಃ ಮಂದಸ್ಮಿತೈರಿಂದು ರಿವಾಪ್ತಮಾಂದ್ಯಃ।
ಪ್ರಾಯಃ ಪ್ರಭೂತಾದ್ಭುತ ಕಾಂತಿಲೋಭಾತ್ ನಖಾತ್ಮನಾ ತತ್ಪದಮೇವ ಭೇಜೇ ॥೬೨॥

ಅವಳ ಮುಖದ ಚಂದ್ರನಿಂದ ಅಮೃತ ಸೂಸುವ ಮುಗುಳ್ನಗೆಗಳಿಂದ ಕಾಂತಿ ಪಡೆದ ಚಂದ್ರನು ಇನ್ನೂ ಅಧಿಕವಾಗಿ ಅದ್ಭುತವಾದ ಪ್ರಭೆಯನ್ನು ತಾನು ಹೊಂದುವುದಕ್ಕಾಗಿ ನಖವೆಂಬ ವಸ್ತು ಇರುವ ಅವಳ ದಿವ್ಯ ಪಾದಾರವಿಂದವನ್ನು ಆಶ್ರಯಿಸಿದ್ದಾನೆ ಎನ್ನಬಹುದು.

ಅಲಕ್ಷಿ ದೈವೈ ಅವತಾರ ಲಕ್ಷ್ಮ್ಯಾ ಸ್ತಸ್ಯಾಃ ಶುಭ ಪಾದ ನಖೇಂದು ಪಂಖಿಃ।
ಆಗಾಮಿ ಕಲ್ಪೇಷ್ವಧಿಕಾರ ಲೋಭಾತ್ ತಾರಾವಲಿಃ ತತ್ಪದ ಮಾಶ್ರಿತೇನ ॥೬೩॥

ಶುಭಗಳನ್ನು ನೀಡುವ ಅವಳ ದಿವ್ಯಪಾದಾರವಿಂದಗಳ ಹೊಳೆಯುವ ನಖಗಳ ಸಾಲಾದುದು, ಅವಳು ಮಹಾಲಕ್ಷ್ಮಿಯ ಅವತಾರವಾದುದರಿಂದ, ಮುಂದೆ ಬರುವ ಕಲ್ಪಗಳಲ್ಲಿ ಒಳ್ಳೆಯ ಅಧಿಕಾರಗಳನ್ನು ಹೊಂದುವುದಕ್ಕಾಗಿ ಅವಳ ಪಾದಾರವಿಂದಗಳನ್ನು ಆಶ್ರಯಿಸಿರುವ ನಕ್ಷತ್ರ ಮಾಲೆಯಂತೆ ದೇವತೆಗಳಿಗೆ ತೋರಿತು.

ಯಾತೇನ ಮಂಜೀರ ರವೇಶ್ಚ ತಸ್ಯಾಃ ಪ್ರಾಯಃ ಪರಾಭೂತ ಗತಿ ಪ್ರಸಾದಃ
ಶಿಕ್ಷಾ ವಿಶೇಷಾರ್ಥಮಿವಾಧಿಚಕ್ರುಃ ಪಾದಾನುವೃತ್ತಿಂ ಪ್ರಣಯೀನ ಹಂಸಾಃ ॥೬೪॥

ಅವಳ ನಡೆಯ ಸೌಂದರ್ಯವು ಲಾಸ್ಯದಿಂದ ಕೂಡಿದ್ದು ತಮ್ಮ ನಡಿಗೆಯ ಸೌಂದರ್ಯವು ಅವಳ ನಡಿಗೆಯು ಸೌಂದರ್ಯವನ್ನು ನೋಡಿ ಕಲಿಯಬೇಕೆಂದು ಹಂಸ ಪಕ್ಷಿಗಳು ಆಶಿಸಿದವು.

'ಹಂಸ ನಡೆ' ಎಂದು ಹಂಸಪಕ್ಷಿಗಳ ನಡೆಯನ್ನು ಕೊಂಡಾಡುವುದುಂಟು. ಅವರೆ ರುಕ್ಮಿಣಿಯ ನಡೆಯು ಹಂಸಪಕ್ಷಿಗಳ ನಡೆಯನ್ನೂ ಮೀರಿಸುವಂತಿತ್ತು. ಹಂಸ ಪಕ್ಷಿಗಳು ತಾವು ಅವಳ ನಡೆಯನ್ನು ನೋಡಿ, ತಮ್ಮ ನಡೆಯನ್ನು ಇನ್ನೂ ತಿದ್ದಿಕೊಳ್ಳಬೇಕು ಎಂದು ಆಶಿಸಿದವು ಎಂದು ಚಮತ್ಕಾರವಾಗಿ ಹೇಳಿದ್ದಾರೆ.

ರರಾಜ ದಿವ್ಯೈರಧಿರಾಜ ಜಿಹ್ವೈಃ ಶ್ಲಾಘಾಪದಂ ತತ್ಪದ ಮಾಗಮಾನಾಂ।
ಅಶ್ಮಾನ ಮಾಸ್ಥಾಪಯತಾ ಪರಸ್ತಾತ್ ಯತ್ ಪಾಣಿನಾಂ ವಿಶ್ವಪತೇ ರವಾಪ್ಯಂ ॥೬೫॥

ವೇದಗಳು ವಿಶೇಷವಾಗಿ ಕೊಂಡಾಡುವ ಅವಳ ದಿವ್ಯ ಚರಣಾರವಿಂದಗಳು ಅದ್ಭುತ ವಾಗಿ ತಾವರೆ, ಕಲಶವೇ ಮೊದಲಾದ ರಾಜಲಕ್ಷಣಗಳನ್ನು ಹೊಂದಿ ಬೆಳಗುತ್ತಿದ್ದವು. ಮುಂದೆ

ವಿವಾಹವು ನಡೆಯುವ ಕಾಲದಲ್ಲಿ ಅಮ್ಮಿ ಕಲ್ಲನ್ನು ತುಳಿಯುವ ಪಾದಾರವಿಂದಗಳನ್ನು ಸರ್ವೇಶ್ವರನು ತನ್ನ ದಿವ್ಯ ಹಸ್ತದಿಂದ ಹಿಡಿಯುತ್ತಾನೆ ಎಂಬುದನ್ನೂ ಸೂಚಿಸುವಂತಿತ್ತು.

ಅವಳ ದಿವ್ಯ ಚರಣಾರವಿಂದಗಳು ಎಲ್ಲಾ ರಾಜ ಲಕ್ಷಣಗಳನ್ನೂ ಹೊಂದಿ ಸಾಮುದ್ರಿಕಾ ಶಾಸ್ತ್ರದಲ್ಲಿ ಹೇಳಿದಂತಿತ್ತು. ವಿವಾಹ ಸಂದರ್ಭದಲ್ಲಿ ಗಂಡನಾದವನು ಹೆಣ್ಣಿನ ಪಾದ ವನ್ನು ಹಿಡಿದು 'ಅಮಿ' ಎಂಬ ಕಲ್ಲಿನ ಮೇಲೆ ಏಳು ಹೆಜ್ಜೆ ನಡೆಯಬೇಕು. ಇವಳ ಪಾದವನ್ನು ಭಗವಂತನೇ ವಿವಾಹ ಸಮಯದಲ್ಲಿ ಹಿಡಿಯುತ್ತಾನೆ ಎಂದು ರಸಿಕ ಭಾವ ದಲ್ಲಿ ಹೇಳಿದ್ದಾರೆ.

ಅತೀತ್ಯ ಕೃಶ್ಚಾತ್ ಸಮುದಾಯ ಶೋಭಾಂ ಪ್ರತ್ಯಂಗ ಸೌಂದರ್ಯ ಪರಾಧಿ ದೃಕ್ಷ್ಯಾ।
ಪರ್ಯಭ್ರಮತ್ ಪ್ರಾಪ್ತ ವಿಹಾರ ಡೋಲ ಪುಷ್ಪೇಶು ಭೃಂಗೀವ ಮುಹುಃ ಸಖೀನಾಂ॥೬೬॥

ಸ್ನೇಹಿತರುಗಳಿಗೆ ಅವಳ ಸಂಪೂರ್ಣ ದೇಹ ಸೌಂದರ್ಯದ ಅನುಭವವನ್ನು ಬಿಡದೆ ಬಿಟ್ಟು ಒಂದೊಂದು ಅಂಗಗಳ ಸೌಂದರ್ಯವು ಅನುಭವಿಸಲು ಆಸೆ ಉಂಟಾಗಿ, ಅನೇಕ ಪುಷ್ಪಗಳು ಇರುವ ಜಾಗದಲ್ಲಿ ದುಂಬಿಗಳು ಎಲ್ಲಿಯೂ ಹೋಗದೆ ಅಲ್ಲಿಯೇ ಇರುವಂತೆ ಅವಳ ಅಂಗಗಳಲ್ಲೇ ಅಲೆದಾಡುವಂತಾಯಿತು.

ದ್ರೌಪತಿಯ ಸೌಂದರ್ಯವನ್ನು ಏಕಾಂತದಲ್ಲಿ ನೋಡಿದ ಅವಳ ಸಖಿಯರು ಪುರುಷರ ಮನಸ್ಸನ್ನು ಹೊಂದಿ ಅವಳನ್ನು ಅನುಭವಿಸಿದರು ಎಂದು ಮಹಾಭಾರತದಲ್ಲಿ ಹೇಳಿದೆ.

ಅದೇ ರೀತಿ ರುಕ್ಮಿಣಿಯ ಸಖಿಯರ ಕಣ್ಣುಗಳೂ ಸಹ ಅವಳ ಸೌಂದರ್ಯದಲ್ಲಿಯೇ ಯಾವಾಗಲೂ ನೆಟ್ಟಿರುತ್ತಿತ್ತು.

ಶೃಂಗಾರ ಯೋನೇರಿವ ಶಿಲ್ಪವಿದ್ಯಾಂ ದಿವ್ಯಾಂ ತ್ರಿಲೋಕ್ಯಾ ಇವ ದಿಷ್ಟ ವೃದ್ಧಿಮ್।
ಸೀಮಾಂತರೇಖಾಮಿವ ಸಂಪದಸ್ತಾಂ ಜಗುಃ ಸ್ತ್ರಿಯೋ ಜಂಗಮ ರತ್ನ ಸೃಷ್ಟಿಮ್ ॥೬೭॥

ಶೃಂಗಾರಕ್ಕೆ ಕಾರಣವೂ, ಕಾರ್ಯವೂ ಆದ, ಮನ್ಮಥನ ಶಿಲ್ಪ ವಿದ್ಯೆಯಂತಿರುವ ಮೂರು ಜಗತ್ತಿನ ಉತ್ತಮ ಭಾಗ್ಯ ಸಮೃದ್ಧಿ ಪಡೆದವಳಾಗಿ, ಐಶ್ವರ್ಯದಿಂದ ಸೀಮಂತ ರೇಖೆಯಂತೆ ಸಂಚಾರ ಮಾಡುವವಳಾದ ರತ್ನದಂತೆ ಇದ್ದ ಅವಳನ್ನು ಸ್ತ್ರೀಯರು ನೋಡಿ ಮಾತನಾಡಿ ಕೊಳ್ಳುತ್ತಿದ್ದರು.

ಅವಳ ಸೌಂದರ್ಯದ ವರ್ಣನೆ ಎಲ್ಲರ ಮನೆ ಮಾತಾಯಿತು. ಮನ್ಮಥನು ತನ್ನೆಲ್ಲಾ ಬುದ್ಧಿಯನ್ನು ಉಪಯೋಗಿಸಿ, ಅವಳ ಅಂಗಗಳಲ್ಲಿ ರೂಪವನ್ನು ತುಂಬಿದ್ದಾನೇನೋ ಎನಿಸು ವಂತಿದ್ದಳು. ಇತರ ಸ್ತ್ರೀಯರು ಅಸೂಯೆಯೂ ಪಡುವಂತಾಯಿತು.

ವಯಸ್ಯಯಾsಭೀಷ್ಟವಾರಾನುಯೋಗೇ ಸಾsಪಶ್ಯದಾ ಆತ್ಮಾನ ಮಮಂದ ಲಜ್ಜಾ।
ಅಸೂಚಯನ್ ನೂನ ಮನೇನ ತಸ್ಯಾಃ ಸ್ವಲಕ್ಷಣಂ ಶೌರಿ ಮನನ್ಯ ಲಕ್ಷ್ಯಂ ॥೬೮॥

ಈ ಸ್ಥಿತಿಯನ್ನು ಹೊಂದಿದವಳು, ತನ್ನ ಸ್ನೇಹಿತೆಯು, ನಿನಗೆ ಇಷ್ಟವಾದ ವರನು ಯಾರೆಂದು ಪ್ರತ್ಯೇಕವಾಗಿ ಕೇಳಿದಾಗ, ನಾಚಿಕೆಯಿಂದ ತಲೆ ಬಾಗಿ, ತನ್ನನ್ನೇ ಮರೆತವಳಾದಳು. ಅದರಿಂದ, ಆ ಸ್ನೇಹಿತೆಗೆ ಅವಳು ಬೇರೆ ವಿಧವಾಗಿ ಚಿಂತಿಸದೆ, ತನ್ನಂತೆ ಲಕ್ಷಣವಾಗಿರುವ ಶ್ರೀಕೃಷ್ಣನನ್ನೇ ಪತಿಯನ್ನಾಗಿ ಬಯಸುತ್ತಿದ್ದಾಳೆ ಎಂದೂ ಅಂತರ್ಯಾಮಿಯಾಗಿ ಇರುವವನೇ ಪತಿಯಾಗ ಬೇಕೆಂದು ಇಚ್ಛಿಸುತ್ತಿದ್ದಾಳೆ ಎಂದೂ ತಿಳಿದರು.

ಅವಳನ್ನು ಏಕಾಂತವಾಗಿ ಅವಳ ಪತಿಯಾಗಿ ಬರುವವನು ಹೇಗಿರಬೇಕೆಂದು ಪ್ರಶ್ನಿಸಿದಾಗ ಶ್ರೀಕೃಷ್ಣನ ಹೊರತು ಬೇರೆ ಯಾರನ್ನೂ ವರಿಸಲು ಇಚ್ಛಿಸುವುದಿಲ್ಲವೆಂದು ಸಖಿಗೆ ಸೂಚ್ಯವಾಗಿ ರುಕ್ಮಿಣಿಯು ತಿಳಿಸಿದಳು.

ಅಲಿಪ್ಸತ ಶ್ವೈವ ಹವಿಸ್ತದೈನಾಂ ದೈತ್ಯ ಸ್ವಭಾವೋ ದಮಘೋಷ ಜನ್ಮಾ।
ತಸ್ಮೈ ಚ ಕೃಷ್ಣೈಕಮನೋರಥಾಂ ತಾಂ ರೂಪಾಧಿಕಂ ದಾತುಮಿಯೇಷ ರುಕ್ಮೀ॥೬೯॥

ಶ್ರೀಕೃಷ್ಣನಲ್ಲಿ ಪ್ರೇಮಿಯಾದ ಇವಳನ್ನು ದಮಘೋಷನ ಮಗನಾದ ಶಿಶುಪಾಲನೆಂಬ ಒಬ್ಬ ಅಸುರ ಸ್ವಭಾವದವನು ವಿವಾಹವಾಗಲು ಆಶಿಸಿದನು. ಯಾಗದಲ್ಲಿ ದೇವತೆಗಳಿಗೆ ಇಡುವ ಹವಿಸ್ಸನ್ನು ನಾಯಿಯು ಆಶಿಸುವಂತೆ ಇದು ಇತ್ತು. ರೂಪದಲ್ಲೂ, ಗುಣದಲ್ಲೂ ಶ್ರೇಷ್ಠಳಾದ ಇವಳನ್ನು ಆಕೆಯ ಅಣ್ಣನಾದ ರುಕ್ಮಿಯು ಶಿಶುಪಾಲನಿಗೆ ಕೊಡಲು ಇಚ್ಛಿಸಿದನು.

ಇವಳ ಇಚ್ಛೆ ಹೀಗೆ ಇರುವಾಗ, ಜರಾಸಂಧನ ಸ್ನೇಹಿತನಾದ ಶಿಶುಪಾಲನು ಇವಳನ್ನು ಮದುವೆಯಾಗಲು ಬಯಸಿದ್ದನು. ಅದಕ್ಕೆ ರುಕ್ಮಿಣಿಯ ಅಣ್ಣನಾದ ರುಕ್ಮಿಯ ಒಪ್ಪಿಗೆಯೂ ಇತ್ತು. ಜರಾಸಂಧನ ಬೆಂಬಲವೂ ಇತ್ತು. ಆದರೆ ಯಾಗದಲ್ಲಿ ದೇವತೆಗಳಿಗೆ ಅರ್ಪಿಸುವ ಪವಿತ್ರವಾದ ಹವಿಸ್ಸನ್ನು ನಾಯಿಯು ಬಯಸುವಂತೆ ಇತ್ತು ಅವನ ಆಸೆ.

ಪರಸ್ಪರಂ ಭೂಷಯತಃ ಪ್ರತೀಕಾನ್ ಔಧ್ವಾಹಿಕಂ ಮಂಗಲ ಮುದ್ವಹಂತ್ಯಾ।
ಪ್ರಾಯಃ ಸ್ವದೀಪ್ತೇರತಿರೋಧಿಮಿಚ್ಛನ್ ತ್ಯಾವಾರಯನ್ ಆಭರಣಾನಿ ತಸ್ಯಾಃ ॥೭೦॥

ಅವಳಿಗೆ ವಿವಾಹಕ್ಕೆ ಬೇಕಾಗುವ ಅಲಂಕಾರಗಳನ್ನೆಲ್ಲಾ ಮಾಡಿದರು. ಅವಳ ಅಂಗಾಂಗ ಗಳು ಆಭರಣಗಳಂತೆ ತಾವೇ ಒಂದಕ್ಕೊಂದು ಆಭರಣಗಳಾಗಿ ಬೆಳಗಿದವು. ಧರಿಸಿದ ಆಭರಣಗಳು ಅವಳ ದೇಹವನ್ನು ಮರೆ ಮಾಚಿ ತಮ್ಮ ಕಾಂತಿಯನ್ನು ಅವಳ ದೇಹದ ಭಾಗಗಳು ಕಡಿಮೆ ಮಾಡುವುದು ಬೇಡ ಎಂಬಂತೆ ಇದ್ದವು.

ಅವಳನ್ನು ಅವಳ ಸಖಿಯರು ಮದುವಣಗಿತ್ತಿಯಂತೆ ಅಲಂಕರಿಸಿದರು. ಹಿಂದೆಯೇ ಹೇಳಿರುವಂತೆ ಅವಳಿಗೆ ಯಾವ ಆಭರಣಗಳ ಅವಶ್ಯಕತೆಯೂ ಇರಲಿಲ್ಲ. ಆದರೂ ಸಾಂಪ್ರದಾಯಿಕವಾಗಿ ಅವಳನ್ನು ಸ್ವಯಂವರಕ್ಕೆ ಸಿದ್ಧಪಡಿಸಿದರು.

ಲಾವಣ್ಯ ಕಲ್ಪದ್ರುಮ ಮಂಜರೀಂ ತಾಂ ಶೃಂಗಾರ ದಿಗ್ವಾರಣ ವೈಜಯಂತೀಂ।
ಸೌಂದರ್ಯ ದುಗ್ಧೋದ ಸುಧಾ ಪ್ರಸೂತಿಂ ಸೈರಂಧ್ರಿಕಾಃ ಪ್ರೇಕ್ಷ್ಯಮಿಥಃ ಶಶಂಸುಃ॥೭೦॥

ಆಭರಣಗಳನ್ನು ಇವಳಿಗೆ ತೊಡಿಸಿದ ಅರಮನೆಯ ಸಖಿಯರು ಅವಳನ್ನು ನೋಡಿ ಪರಸ್ಪರ ಪ್ರಶಂಸೆ ಮಾಡಿ ಮಾತನಾಡುತ್ತಾ, ಇವಳ ರೂಪವೆಂಬ ಕಲ್ಪವೃಕ್ಷದ ರಾಶಿಯು ಶೃಂಗಾರವೆಂಬ ದಿಗ್ಗಜಕ್ಕೆ ಅಲಂಕಾರವಾದ ಧ್ವಜದಂತೆ ಮತ್ತು ಕ್ಷೀರ ಸಮುದ್ರದ ಅಮೃತಕ್ಕೆ ಸಮಾನವೆಂದೂ ಭಾವಿಸಿದರು.

ಆ ರುಕ್ಮಿಣಿಯ ಸಖಿಯರಿಗೆ ಅವಳ ರೂಪವನ್ನು ಎಷ್ಟು ಕೊಂಡಾಡಿದರೂ ಸಾಲದು. ಅವಳ ರೂಪಕ್ಕೆ ಸಾಮ್ಯವನ್ನು ಕೊಡಲು ಅವರಿಂದ ಸಾಧ್ಯವಾಗಲಿಲ್ಲ. ಯಾವ ಉಪಮಾನ ಹೇಳಿದರೂ ಅದು ಕಡಿಮೆಯೇ ಆಗುತ್ತಿತ್ತು. ಅವಳಿಗೆ ಅವಳೇ ಸಾಟಿಯಾಗಿದ್ದಳು.

ಸ್ವಭಾವಜಾ ದಭ್ಯಧಿಕಂ ತದಂಗೇ ಷ್ವಾಸಾಧಿತಂ ಸೌರಭ ಮಂಗರಾಗೈಃ।
ಸ ಸರ್ವ ಗಂಧೋಽಪಿ ಯದನ್ವಯೇನ ಪ್ರಭೂತ ಮಾಮೋದ ವಿಶೇಷ ಮೃಚ್ಛೇತ್॥೭೧॥

ಸಹಜವಾಗಿಯೇ ಇವಳ ದಿವ್ಯ ದೇಹದಲ್ಲಿ ಅನೇಕ ಶ್ರೇಷ್ಠತೆಗಳಿವೆ. ವಾಸನೆಯ ಹೂವುಗಳಿಂದ ಇವು ಇನ್ನೂ ಹೆಚ್ಚು ಮಾಡಲ್ಪಟ್ಟಿತು. ಒಂದು ವಾಸನೆಗೂ ಒಳಪಡಿಸದವನಾದ ಸರ್ವಗಂಧನೆಂಬ ಹೆಸರು ಪಡೆದ ಪರಮ ಪುರುಷನೂ ಕೂಡ ಇವಳ ಸೇರುವಿಕೆಯಿಂದ ಸುವಾಸನೆಯನ್ನು ಹೊಂದುತ್ತಾನೆ. ಇದು ಸತ್ಯವು.

ಪರಮಾತ್ಮನಾದ ಶ್ರೀಕೃಷ್ಣನು ಇವಳನ್ನು ಸೇರುವುದರಿಂದ, ಇವಳ ಶರೀರದ ಸುವಾಸನೆಯು ಅವನಲ್ಲಿ, ಸರ್ವಗಂಧನೆಂಬ ಹೆಸರು ಪಡೆದಿದ್ದರೂ, ಅವನು ಇನ್ನೂ ಹೆಚ್ಚು ವಾಸನೆಯುಳ್ಳವನಾಗುತ್ತಾನೆ. 'ಸರ್ವಗಂಧಃ' 'ಸರ್ವರಸಃ' ಎಂಬುದು ಉಪನಿಷದ್ವಾಕ್ಯ. ಜಗತ್ತಿನಲ್ಲಿರುವ ಎಲ್ಲಾ ವಾಸನೆಗಳಿಗೂ ಅವನೇ ಮೂಲ. ಇವಳ ಸಂಪರ್ಕದಿಂದ ಅವನು ಸೌರಭಾತಿಶಯವನ್ನು ಹೊಂದುತ್ತಾನೆ ಎನ್ನುವುದು ಭಾವಾರ್ಥ.

ವ್ಯಾಮಾತಿರಿಕ್ತ ಸ್ತನಕುಂಭ ಭೂಮ್ನಾ ವ್ಯಾಪ್ತಾಕೃತಿಂ ಯೌವನ ಕುಂಜರೇಣ।
ಪ್ರಸಾಧಯಂತ್ಯಃ ಪತಿದೇವ ತಾಸ್ತಾಂ ನಾಥೋಚಿತಾಂ ಪ್ರೇಕ್ಷ್ಯನ ತೃಪ್ತಿಮಾಪುಃ॥೭೨॥

ಯೌವನವೆಂಬ ಆನೆಗೆ ಕುಂಭಸ್ಥಳವೆಂಬ ತಲೆಯ ನೆತ್ತಿಯಂತೆ ಇವಳ ಸ್ತನಗಳು ಶೋಭಿಸುತ್ತಿದ್ದವು. ಎರಡು ಭುಜಗಳನ್ನೂ ಅವು ತನ್ನ ಪಕ್ಕದಲ್ಲಿ ನೀಡಿದಲ್ಲಿ ಅಗಲಕ್ಕೆ ಮೇಲಾದ ಆ ಸ್ತನಗಳು ಎಂದು ಕವಿಗಳು ವರ್ಣಿಸುತ್ತಾರೆ. ಆ ರೀತಿ ರುಕ್ಮಿಣಿಗೆ ಅಲಂಕಾರ ಮಾಡುವ ಪತಿವ್ರತೆಯರು ಶ್ರೀಕೃಷ್ಣನಿಗೆ ಇವಳು ತಕ್ಕವಳೆಂದು ತಿಳಿದು ನೋಡಿಯೂ ತೃಪಿತ ಹೊಂದಲಿಲ್ಲ. (ಅವಳನ್ನು ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ).

ಅವಳ ದೇಹದ ಸೌಂದರ್ಯ ಸರ್ವ ವಿಧದಲ್ಲೂ ಶ್ರೀಕೃಷ್ಣನಿಗೆ ತಕ್ಕುದಾಗಿತ್ತು. ಅವನು

ಆಜಾನುಬಾಹುವಾಗಿ, ವಿಶಾಲವಾದ ಎದೆಯುಳ್ಳವನಾಗಿದ್ದರಿಂದ, ಇವಳು ದಪ್ಪವಾದ ಸ್ತನಗಳನ್ನು ಹೊಂದಿ, ನೀಳವಾದ ಭುಜಗಳನ್ನೂ ಹೊಂದಿ, ಅವನ ಭೋಗಕ್ಕೆ ತಕ್ಕವಳಾಗಿದ್ದಳು.

ಅವಳ ಸಖಿಯರು ಅವಳನ್ನು ಎಷ್ಟು ನೋಡಿದರೂ ತೃಪ್ತಿ ಹೊಂದಲಿಲ್ಲ. 'ನ ತೃಪ್ತಿ ರಭಿಜಗ್ಮತುಃ' ಎನ್ನುವಂತೆ ಸ್ತ್ರೀಯರ ಪಾಡೇ ಹೀಗಾದ ಮೇಲೆ, ಇನ್ನು ಪುರುಷ ಸಿಂಹನಾದ ಶ್ರೀಕೃಷ್ಣನ ಮನಃಸ್ಥಿತಿಯನ್ನು ಹೇಳಲೇಬೇಕಾಗಿಲ್ಲ. ಅವನಿಗೆ ರುಕ್ಮಿಣಿಯ ಸೌಂದರ್ಯ ಮತ್ತು ಬರಿಸುವಂತಿತ್ತು.

ಮೌಲೌ ಸು ಕೇಶ್ಯಾಃ ಸ್ಫುಟರಶ್ಮಿಜಾಲಂ ಮುಕ್ತಾಮಯಂ ಜಾಲಕಮಾ ಬಬಂಧುಃ।
ಕ್ರೀಡೋಚಿತಂ ಕೃಷ್ಣಮೃಗಂ ಗೃಹೀತುಂ ತೇನ ಸ್ಮರೋ ವಾಗುರೀಕ ಸ್ತದಾऽಭೂತ್॥೭೪॥

ಸುಂದರವಾದ ಕೂದಲು ಹೊಂದಿದ ಇವಳ ತಲೆಯ ಮುಡಿಯಲ್ಲಿ ಒಂದು ಕಾಂತಿಯುಕ್ತ ವಾದ ಮುತ್ತಿನ ಮಣಿಯನ್ನು (ಬಲೆಯನ್ನು) ತೊಡಿಸಿದ್ದರು. ಅದನ್ನು ನೋಡಿ ಮನ್ಮಥನು ಆಟಕ್ಕಾಗಿ ತಾನು ಶ್ರೀಕೃಷ್ಣನೆಂಬ ಜಿಂಕೆಯನ್ನು ಹಿಡಿಯಲು ಇದು ತಕ್ಕ ಬಲೆ ಎಂದು ಭಾವಿಸಿದನು.

ಜಿಂಕೆಗಳನ್ನು ಹಿಡಿಯಲು ಬೇಡರು ಬಲೆಯನ್ನು ಬೀಸುತ್ತಾರೆ. ಇಲ್ಲಿ ರುಕ್ಮಿಣಿಯ ಮುಡಿಗೆ, ಮಣಿಯ ಬಲೆಯನ್ನು ತೊಡಿಸಿದ್ದರು. ಅದು ಎಷ್ಟು ಮೋಹಕವಾಗಿತ್ತೆಂದರೆ ಶ್ರೀಕೃಷ್ಣನು ಸುಲಭವಾಗಿ ಆ ಬಲೆಯಲ್ಲಿ ಬಿದ್ದು ಬಿಡುತ್ತಾನೆ ಎಂದು ಸಖಿಯರು ಭಾವಿಸಿದರು. ಜಿಂಕೆಗಳಲ್ಲಿ 'ಕೃಷ್ಣಸಾರ' ಎಂಬ ಜಾತಿಯ ಜಿಂಕೆ ಬಹಳ ಶ್ರೇಷ್ಠವಾದದ್ದು.

ಇಲ್ಲಿ ಸರ್ವೇಶ್ವರನಾದ 'ಕೃಷ್ಣ' ಎಂಬ ಹೆಸರಿನ ಜಿಂಕೆಯನ್ನು ರುಕ್ಮಿಣಿಯು ತಲೆಯ ಮುಡಿಯಲ್ಲಿ ಧರಿಸಿರುವ ಮುತ್ತಿನ ಬಲೆಯಲ್ಲಿ ಕೆಡವಿಕೊಂಡಳು ಎಂದು ಭಾವ.

ಮುಖೇಂದು ಲಾವಣ್ಯ ಸುಧಾ ಪ್ರವಾಹೇ ಮುಹುಃ ಪ್ರತೀಪ ಪ್ಲವ ನೋದ್ಯತೇನ।
ತತ್ಕರ್ಣ ಭೂಷಾ ಮಕರೇಣ ಮನ್ಯೇ ಮಂದೀಕೃತಾ ಮನ್ಮಥ ಲಾಂಛನ ಶ್ರೀಃ॥೭೫॥

ಅವಳ ಕಿವಿಗೆ ಇಟ್ಟಿದ್ದ ಮೀನಾಕಾರದ ಆಭರಣವಾದುದು, ಅವಳ ಮುಖಚಂದ್ರದ ರೂಪ ಪ್ರವಾಹದಲ್ಲಿ ಎದುರು ಈಜಿ, ಬರುವ ಹಾಗೆ ಮನ್ಮಥನಿಗೆ ಗುರುತಾದ ಮೀನಿನ ಚಿಹ್ನೆಯನ್ನು ಹೋಲುತ್ತಿತ್ತು.

ರುಕ್ಮಿಣಿಯ ಕಿವಿಗೆ ಮಕರ ಕುಂಡಲಗಳನ್ನು ಹಾಕಿದ್ದರು. 'ಮಕರ' ಎಂದರೆ ಮೀನು. ಮನ್ಮಥನ ಚಿಹ್ನೆ. 'ಮಕರ'ವು ಇಲ್ಲಿ ರುಕ್ಮಿಣಿಯ ಕಿವಿಯ ಮಕರ ಕುಂಡಲಗಳು ಶ್ರೀಕೃಷ್ಣನನ್ನು ಅನಾಯಾಸವಾಗಿ ಮನ್ಮಥನ ಪಾಶದಲ್ಲಿ ಸಿಲುಕಿಸಿಬಿಟ್ಟವು.

ಅನನ್ಯ ದೃಷ್ಟಿಂ ಬಿತತಾನ ತಾಮಪ್ಯಾ ದರ್ಶ ಸಂಕ್ರಾಂತಿ ವಿಶೇಷದೃಶ್ಯಂ।
ಪ್ರಸಾಧನೈಃ ಪ್ರಾಪ್ತಗುಣೈಃ ಪ್ರತೀಕ್ಷ್ಯಂ ತಸ್ಯಾ ಮುಖಂ ತಾಮ ರಸಾಯತಾಕ್ಷಂ॥೭೬॥

ಉತ್ತಮವಾದ ಆಭರಣಗಳನ್ನು ಧರಿಸಿದ್ದ ಅವಳ ದಿವ್ಯ ಮುಖಾರವಿಂದವು ಕೆಂದಾವರೆಯಂಥಾ ಕಣ್ಣುಗಳನ್ನು ಹೊಂದಿದ್ದು, ಕನ್ನಡಿಯಲ್ಲಿ ಚೆನ್ನಾಗಿ ಪ್ರತಿಬಿಂಬಿಸಲ್ಪಟ್ಟು ರುಕ್ಮಿಣಿಯನ್ನು ಬೇರೆ ಕಡೆ ನೋಡದಂತೆ ತನ್ನನ್ನೇ ನೋಡಿ ಆನಂದಿಸುವಂತೆಯೂ ಮಾಡಿತು.

ಕನ್ನಡಿಯಲ್ಲಿ ರುಕ್ಮಿಣಿಯ ಪ್ರತಿಬಿಂಬವು ಅವಳ ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡಾಗ, ತನ್ನ ರೂಪವನ್ನು ಅವಳೇ ಆಶ್ಚರ್ಯಪಟ್ಟು ನೋಡುವಂತೆ, ಇದ್ದು ಅವಳು ಬೇರೆ ಎಲ್ಲೂ ತಿರುಗಿ ನೋಡದೆ ತದೇಕ ಚಿತ್ತದಿಂದ ತನ್ನ ಸೌಂದರ್ಯವನ್ನು ಆಸ್ವಾದಿಸುವಂತಿತ್ತು.

ಮನುಷ್ಯತಾ ಕಂಚುಕಿ ತಾತ್ಮಭೂಮ್ನಃ ಕಾಲೇ ಚ ಕಾಶೆ ಕುಚ ಕಂಚುಕ ಶ್ರೀಃ।
ರತ್ನಾಚಲೇ ಭೋಗಿ ಶಯ ಪ್ರಿಯಾಯಾಃ ಸ್ವತಲ್ಪ ನಿರ್ಮೋಕ ಇವಾವಲೀನಃ॥೭೭॥

ಅವಳು ಸ್ತನಗಳಲ್ಲಿ ಕಟ್ಟಿದ್ದ ಕಂಚುಕವು ಈವಾಗ ಮನುಷ್ಯ ಭಾವನೆಯಲ್ಲಿ ಮರೆಮಾಚಿಕೊಂಡಿರುವ ಇವಳು ಹಿಂದೆ ಶೇಷ ಶಾಯಿಯೊಡನೆ ಮಲಗುವ ಕಾಲದಲ್ಲಿ ಹಾಸಿಗೆಯಾಗಿದ್ದ ಶೇಷನ ಹೊನ್ನಿನ ಬೆಟ್ಟದ ಮೇಲೆ ಹಾಕಿದ ಹೊದಿಕೆಯಂತಿತ್ತು.

ಅವಳ ಎದೆಯ ಮೇಲೆ ಹೊದೆದಿದ್ದ ಕಂಚುಕವು, ಅವಳ ಉಬ್ಬಿದ ಸ್ತನಗಳನ್ನು ಮುಚ್ಚಿದ್ದು ವೈಕುಂಠದಲ್ಲಿ ಅವಳು ನಾರಾಯಣನೊಡನೆ ಶೇಷಶಾಯಿಯಾಗಿ ಮಲಗಿದ್ದಾಗ ಶೇಷನ ಮೇಲೆ ಹಾಕಿದ ಹೊದಿಕೆಯಂತಿತ್ತು. ಅದು ಈಗ ಅವಳ ಸ್ತನಗಳ ಮೇಲಿನ ಕಂಚುಕದ ಬಟ್ಟೆಯಾಗಿದೆ ಎಂದು ವರ್ಣಿಸಿದ್ದಾರೆ.

ಅಂಸಾವಲಿಂಬಿನ್ಯ ಸಿತೇಕ್ಷಣಾಯಾಃ ಕಂಪೋಜ್ವಲಾ ಕಾಚನ ರತ್ನಮಾಲಾ।
ಅಲಕ್ಷ್ಯತೋಲ್ಲಾಸಿತ ರಮ್ಯರಶ್ಮಿಃ ಕಾಮಾರ್ಪಿತಾ ಕಾಂತಿ ವಿಹಾರ ಡೋಲಾ ॥೭೮॥

ಕಪ್ಪು ಕಣ್ಣುಳ್ಳವಳಾದ ಅವಳ ಕತ್ತಿನಲ್ಲಿ ತೂಗುತ್ತಿರುವ ರತ್ನಮಾಲೆಯ ಅಲ್ಲಲ್ಲಿ ಅಲ್ಲಾಡು (ಈ ಕಡೆ, ಆ ಕಡೆ)ತ್ತಾ ಸುಂದರವಾಗಿ ಉಜ್ವಲ ಕಾಂತಿಯನ್ನು ಹರಡುವುದಾಗಿದ್ದು, ಕಾಮದೇವನು ಅವಳ ಎದೆಗೆ ಸೇರಿದ ಕಾಂತಿ ಎಂಬುವಳೊಡನೆ ಆಟವಾಡಲು ಇಟ್ಟುಕೊಂಡ ಉಯ್ಯಾಲೆಯಂತೆ ಕಾಣುತ್ತಿತ್ತು.

ಅವಳ ಕೊರಳಲ್ಲಿ ತೂಗಲ್ಪಟ್ಟ ರತ್ನಹಾರವು ಅವಳು ಓಡಿಯಾಡುವಾಗಲೆಲ್ಲಾ, ಅತ್ತ ಇತ್ತ ಅಲುಗಾಡುತ್ತಾ ಇರುತ್ತಿತ್ತು. ಅದು ಮನ್ಮಥನು ರತಿಯೊಡನೆ ಸೇರಿ ಉಯ್ಯಾಲೆಯನ್ನು ಆಡುವಂತಿದ್ದು ನೋಡುವವರನ್ನು ಆಕರ್ಷಿಸುತ್ತಿತ್ತು.

ಪ್ರಭಾ ಪ್ರವಾಹೋದಿತ ಸೈಕತಾಭೆ ಸ್ತನದ್ವಯೇ ತಾಮ ರಸೇಕ್ಷಣಾಯಾಃ
ತತ್ಕಂಧರಾಶಂಕ ಮತಲ್ಲಿಕಾಯಾಃ ಪ್ರಸೂತಿರಾಶಂಕ್ಯತ ಹಾರ ವೃತ್ಯಾ ॥೭೯॥

ಕೆಂದಾವರೆಯಂಥ ಕಣ್ಣುಳ್ಳವಳ ಸ್ತನಗಳ ಮೇಲಿರುವ ಮುತ್ತಿನ ಮಾಲೆಯನ್ನು ನೋಡುತ್ತಿದ್ದ ಹಾಗೆ ಪ್ರವಾಹ ಹೊಂದಿರುವ ಮಣ್ಣಿನ ದಿಬ್ಬದ ಮೇಲೆ ಶಂಖದಿಂದ ಹೊರ ಬಂದ ಮುತ್ತುಗಳೋ ಎಂಬಂತಿತ್ತು.

ಅವಳ ಎದೆಯ ಮೇಲಿನ ಮುತ್ತಿನ ಮಾಲೆಯು ಆಗ ತಾನೆ ಶಂಖದಿಂದ ಹೊರಬಂದ ಮುತ್ತುಗಳಿಂದ ಪೋಣಿಸಲ್ಪಟ್ಟ ಮಾಲೆಯಂತೆ ಕಣ್ಣಿಗೆ ಆಹ್ಲಾದಕರವಾಗಿತ್ತು.

ಆಭಾಸತಾಽಽತ್ಮಸ್ಮಿತ ಸೌಮ್ಯಭಾಸಾ ಹಾರೇಣ ಹೃದ್ಯೇನ ಜಗತ್ ಪ್ರತೀಕ್ಷ್ಯಾ ।
ಪ್ರಿಯಸ್ಯಚಂದ್ರಂ ಹೃದಯಾದ್ಧಿಧಾತುಃ ಪ್ರಾಪ್ತಾನುಸಾರೇವ ನಿಸರ್ಗಶುದ್ಧಂ ॥೮೦॥

ಜಗತ್ತೆಲ್ಲವೂ ಕೊಂಡಾಡುವ ಅವಳು ಜಗತ್ತಿನಿಂದ ತರ್ಜನ ಮಾಡಲ್ಪಡುವವಳಾಗಿ, ತನ್ನ ಮುಗುಳ್ನಗೆಯೊಡನೆ, ಕಾಂತಿಯನ್ನು ಸೂಸುವ ಮುತ್ತಿನ ಮಾಲೆಯನ್ನು ಎದೆಯಲ್ಲಿ ಧರಿಸಿದವಳಾಗಿ, ಸಹಜವಾಗಿಯೇ ಶುದ್ಧವಾದ ಚಂದ್ರನನ್ನು ಮನಸ್ಸಿನಿಂದ ಪಡೆದ ತನ್ನ ಪ್ರಿಯನಾದ ಪರಮ ಪುರುಷನಿಗೆ ತಾನೂ ಹೊಂದಿಕೊಂಡು ನಡೆಯುವವಳಂತೆ ಭಾವಿಸಿಕೊಂಡಳು.

ಅವಳನ್ನು ತನ್ನನ್ನು ತಾನೇ ಶ್ರೀಕೃಷ್ಣನ ಪತ್ನಿಯಾಗಿ ಭಾವಿಸಿಕೊಂಡು ಅವನಿಗೆ ತಾನು ಅನುರೂಪಳಾಗಿ ನಡೆಯಬೇಕೆಂದು ನಿರ್ಧರಿಸಿದಳು. **'ಸಹಧರ್ಮಚರೀತವ'** ಎಂಬಂತೆ ಅವನ ಎಲ್ಲಾ ಕಾರ್ಯಗಳಲ್ಲೂ ಸಹಚಾರಿಯಾಗಿ, ಪತಿವ್ರತಾ ಶಿರೋಮಣಿ ಎನಿಸಿಕೊಳ್ಳ ಬೇಕೆಂದು ಆಶಿಸಿದಳು. ಚಂದ್ರನನ್ನು ಮನಸ್ಸಿನಿಂದ ಪಡೆದ ಸ್ವಾಮಿ ಶ್ರೀಕೃಷ್ಣನು ಚಂದ್ರನಿಗಿಂತಲೂ ಸುಂದರನಾದವನು.

ರರಾಜ ಮುಕ್ತಾಭಿ ರವಾಪ್ತ ಫೇನಂ ರತ್ನಾಂಗದಂ ಪ್ರಾಪ್ತಗುಣಂ ತದಂಗೇ
ಪ್ರವಾಹ ವೃತ್ತೇಃ ಪರಿವೃತ್ತಿ ಭೇದಾತ್ ಮಹೀಯಸೀ ಮಂಡಲಿತೇವ ಕಾಂತಿಃ ॥೮೧॥

ಮುತ್ತುಗಳು ಪೋಣಿಸಿರುವುದರಿಂದ ನೊರೆಗಳು, ನೊರೆಗಳಂತೆ ಅವಳ ದಿವ್ಯ ದೇಹವನ್ನು ನೋಡಿ ಹರಡಿ, ರತ್ನಮಯವಾಗಿರುವ ತೋಳ್ಬಳೆಯಾದುದು, ಅವಳ ಕಾಂತಿ ಪ್ರವಾಹವನ್ನು ಎದಿರಿಸುವಾಗ ದೊಡ್ಡ ಬೆಟ್ಟವಾಗಿ ಕಾಂತಿಯ ಹೆಜ್ಜೆಯಂತೆ ತೋರುತ್ತಿತ್ತು.

ಅವಳ ದೇಹವನ್ನು ಅಲಂಕರಿಸಿರುವ ಆಭರಣದ ವರ್ಣನೆ ಮುಂದುವರೆದಿದೆ. ಅವಳ ತೋಳನ್ನು ತೋಳ್ಬಳೆಯ ಅತ್ಯಂತ ಕಾಂತಿಯುಕ್ತವಾಗಿ ಬೆಳಗುತ್ತಿತ್ತು.

ಪ್ರತಿಕ್ರಿಯಾಮಾತ್ಮಾಮ ತಿರಸ್ಕ್ರಿಯಾಯಃ ಪ್ರಾಯಃ ಸ್ವಯಂ ವ್ಯಾಪೃತಯಾ ವಿಧಾತುಂ।
ತದಗಂ ಯೋಗೋಜ್ವಲ ರತ್ನಧಾಮ್ನಾಂ ಸಂಚಾದಿತಂ ಮೇಖಲಯಾಂತರೀಯಂ॥೮೨॥

ತನಗೆ ನೇರಾಗಿ, ದಿವ್ಯ ದೇಹ ಸಂಪರ್ಕಕ್ಕೆ ತಡೆಯುಂಟುಮಾಡುವ ಸೀರೆಗೆ ಪ್ರತಿಯಾಗಿ ಪ್ರತೀಕಾರ ತೆಗೆಯಲು ಏನಾದರೂ ಮಾಡಬೇಕೆಂದು ಒಡ್ಯಾಣವಾದುದು ತನ್ನ ರತ್ನಗಳಿಗೆ ಅವನ ದಿವ್ಯ ದೇಹದಲ್ಲಿ ಸೇರಿಕೊಂಡಿರುವ ಪ್ರಭೆಯನ್ನು ಸೇರಿಸಿ ಸೀರೆಯ ಸೊಬಗನ್ನು ಮರೆಮಾಡಿತು.

ಒಡ್ಯಾಣವನ್ನು ಸೀರೆಯ ಮೇಲೆ ಕಟ್ಟಿಕೊಳ್ಳುತ್ತಾರೆ. ಇದರಿಂದಾಗಿ, ಸೀರೆಗೆ ದೇಹದ ನೇರಸಂಪರ್ಕವೇ ವಿನಃ ಒಡ್ಯಾಣಕ್ಕೆ ನೇರಸಂಪರ್ಕವಿಲ್ಲ, ಇದು ಒಡ್ಯಾಣಕ್ಕೆ ಅಸಹನೆಯಾಗಿ, ಅದಕ್ಕೆ ಪ್ರತೀಕಾರವಾಗಿ, ಸೀರೆಯ ಸೊಬಗನ್ನು ಕಡಿಮೆ ಮಾಡಲು, ತನ್ನಲ್ಲಿದ್ದ ಹುದುಗಿಸಿದ್ದ ರತ್ನಗಳ ಕಾಂತಿಯು ಸೀರೆಯ ಕಾಂತಿಗಿಂತ ಹೆಚ್ಚಾಗುವಂತೆ ಮಾಡಿತು. ಅವಳ ನೇರ ದೇಹ ಸಂಪರ್ಕಕ್ಕೆ ಎಲ್ಲಾ ಆಭರಣಗಳೂ ಅಪೇಕ್ಷಿಸುತ್ತಿದ್ದವು.

ಶಿಖಂಡಕಾನಿ ಶೃತಿ ಸುಂದರೀಣಾಂ ಚಾರೂಣಿ ಪಾದಾ ಭರಣಾನಿ ತಸ್ಯಾಃ।
ಪದೇಶು ಸಂಘರ್ಷ ವಶಾದಿವಾಸನ್ ಮಿಥಃ ಪುರೋಭಾಗೀ ಪದಾಸ್ಪದಾನಿ ॥೮೩॥

ಶ್ರುತಿಗಳೆಂಬ ಸುಂದರಿಗಳಿಗೆ ಶಿರೋಭೂಷಣಗಳಾಗಿರುವ ಅವಳ ಪಾದಾರವಿಂದ ಗಳ ಕೋಮಲವಾದ ಹೆಜ್ಜೆಗಳು ಒಂದಕ್ಕೊಂದು ಜಗಳವಾಡುವ ಹಾಗೆ ಹೆಜ್ಜೆಗಳನ್ನು ಇಡುವವರಲ್ಲಿ ತಾವು ಪುರೋಭಾಗಿಗಳು ಎಂದು ತಿಳಿಸುವಂತೆ ಇತ್ತು.

ಅವಳ ನಡೆಯು ನಡೆಯುವಾಗ, ಹೆಜ್ಜೆಗಳು ಒಂದಕ್ಕೊಂದು ಜಗಳವಾಡುತ್ತಾ ನಾ ಮುಂದು, ತಾ ಮುಂದು ಎಂದು ಪೈಪೋಟಿ ಆಡುವಂತಿತ್ತು. ಪೈಪೋಟಿ ಯಾತಕ್ಕೆಂದರೆ, ಈ ಜಗತ್ತನ್ನು ರಕ್ಷಿಸುವ ಕಾರ್ಯ ನನಗಿರಲಿ ನನಗಿರಲಿ ಎಂದು ಎರಡು ಹೆಜ್ಜೆಗಳು ಕಲಹ ಮಾಡುವಂತಿತ್ತು. ಇದೇ ಭಾವವನ್ನು ಪಾದುಕಾ ಸಹಸ್ರದಲ್ಲಿಯೂ, ಆಚಾರ್ಯರು ಎರಡು ಪಾದುಕೆಗಳ ಬಗ್ಗೆ ವ್ಯಕ್ತಪಡಿಸಿದ್ದಾರೆ. ಅವಳ ನಡೆಯು ಶ್ರುತಿಗಳಿಗೆ ಶಿರೋಭೂಷಣವಾಗಿದೆ. ಎಂದರೆ ಶ್ರುತಿಗಳ ಶಿರಸ್ಸು ಉಪನಿಷತ್ತುಗಳು ಉಪನಿಷದರ್ಥವನ್ನು ಅವಳ ನಡೆಯು ಸೂಚಿಸುತ್ತದೆ.

ಅನುಕ್ಷಣಂ ಬಂಧುಜನೈರಮಾಮುಚ್ಯ ಮಾನೇಷು ವಿಭೂಷಣೇಷು।
ಅಯತ್ನತಸ್ತಾನಿ ತದಂತ ರಾಲೇ ಕೃತಾಸ್ಪದಾ ಕೇವಲ ತಾಽ ತ್ಯಶೇತ್ ॥೮೪॥

ಬಂಧುಗಳು ಇವಳಿಗೆ, ಪ್ರತಿಕ್ಷಣವು ಬೇರೆ ಬೇರೆ ಹೆಜ್ಜೆಗಳನ್ನು ಇಡುವಾಗ, ಮಧ್ಯೆ ಮಧ್ಯೆ ಪ್ರವೇಶಿಸಿ, ಅವಳ ಪೂರ್ಣ ದೇಹದಲ್ಲಿ ಸೌಂದರ್ಯವು ಚೆನ್ನಾಗಿ ತೋರಲು ಸಹಕರಿಸುತ್ತಿದ್ದರು.

ಇವಳು ಮಾರ್ಗದಲ್ಲಿ ನಡೆಯುವಾಗ ಬಂಧುಗಳು ಇವಳಿಗೆ ಸಹಾಯ ಮಾಡುತ್ತಿದ್ದರು. ಅಂದರೆ, ಇವಳಿಗೆ ಆಯಾಸವಾಗದ ಮಧ್ಯೆ ಮಧ್ಯೆ ಅವಳನ್ನು ರಂಜಿಸುತ್ತಾ, ಅದರಿಂದ ಅವಳ ಉತ್ಸಾಹ ಇಮ್ಮಡಿಯಾಗಿ ಇನ್ನೂ ಹೆಚ್ಚು ಸುಂದರಿಯಾಗಿ ಕಾಣುತ್ತಿದ್ದಳು.

ಅಭಿನ್ನರೂಪಾ ಮನುವೇಲಾ ಭಿನ್ನಾತ್ ಪ್ರಸಾಧನಾಭ್ಯಧಿಕಾಂ ಪ್ರಸತ್ತಿಂ।
ವಿಲೋಕಯಂತಿ ಜನತಾ ತದೀಯಾಂ ವ್ಯಾವರ್ತಯಾಮಾಸ ತತೋ ನ ದೃಷ್ಟಿಂ॥೮೫॥

ಅಲಂಕಾರ ಮಾಡುವವರು, ಒಂದೊಂದು ವಿಧವಾಗಿ ಬದಲಾಯಿಸಿ ಆಭರಣಗಳನ್ನು ತೊಡಿಸಿದರೂ, ಯಾವಾಗಲೂ, ಒಂದೇ ವಿಧವಾಗಿರುವ ಅಲಂಕಾರಕ್ಕೆ ಮೇಲಾಗಿರುವ ಅವಳ ರೂಪವನ್ನು ಪ್ರಜೆಗಳು ಆಶ್ಚರ್ಯದಿಂದ ಕಂಡು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು.

ಅವಳ ಎಲ್ಲಾ ಅಲಂಕಾರಗಳಲ್ಲಿಯೂ ಅಪ್ರತಿಮಳಾಗಿಯೇ ತೋರುತ್ತಿದ್ದಳು. ಅವಳನ್ನು ನೋಡುತ್ತಿದ್ದರೆ, ಕಣ್ಣುಗಳನ್ನು ಅಲ್ಲಿಂದ ಕೀಳಲು ಮನಸ್ಸೇ ಬರುತ್ತಿರಲಿಲ್ಲ.

"ಯದ್ಯದ್ ಪಶ್ಯಾಮಿ ತೇ ಗಾತ್ರಂ ಶೀತಾಂಶು ಸದೃಶಾನನೇ, ತಸ್ಮಿನ್ ತಸ್ಮಿನ್ ಪೃಥುಶ್ರೋಣಿ ಚಕ್ಷುರ್ಮಮ ನಿಭದ್ಯತೇ" ಎಂಬುದಾಗಿ ಸೀತೆಯನ್ನು ಕುರಿತಾಗಿ ರಾಮಾಯಣ ವಾಕ್ಯವಿದೆ.

ಆದರ್ಶ ಬಿಂಬೇನ ತದಂಗ ಕಾಂತೇ ರಕ್ಷಾಮ್ಯತಾ ನಿಷ್ಪ್ರತಿಮತ್ವವಾದಂ।
ಪ್ರತಿ ಪ್ರವೃತ್ತಿಂ ಪ್ರತಿಮಾಂ ವಿಧಾಯ ಪ್ರಖ್ಯಾಪಿತಾ ವೃತ್ತ ವತಾ ಮಪೀರ್ಷ್ಯಾ ॥೮೬॥

ಅವಳ ದಿವ್ಯ ದೇಹದ ಕಾಂತಿಗೆ ಸಮಾನವಿಲ್ಲದ ಕಾರಣ. ಅಸೂಯೆಯಿಂದ ಕನ್ನಡಿಯಾದುದು ಅವಳಿಗೆ ಪ್ರತಿಯಾಗಿಯಂತೆ ಇತ್ತು. (ಅದರಿಂದ ಒಳ್ಳೆಯ ನಡತೆಯುಳ್ಳವರಿಗೂ ಅಸೂಯೆಯು ಏರ್ಪಟ್ಟಿತು).

ಅವಳ ಸೌಂದರ್ಯವನ್ನು ನೋಡಿದವರಿಗೆ ಅದರಲ್ಲೂ ಮುಖ್ಯವಾಗಿ ಸ್ತ್ರೀಯರಿಗೆ ಅಸೂಯೆ ಉಂಟಾಗುತ್ತಿತ್ತು. ಕನ್ನಡಿಯೇ ತನ್ನಲ್ಲಿ ಪ್ರತಿಬಿಂಬಿತವಾಗುವ ಅವಳ ರೂಪವನ್ನು ನೋಡಿ ಅಸೂಯೆ ಪಡುತ್ತಿತ್ತು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ನಿಜವಾದ ರುಕ್ಮಿಣಿಯನ್ನು ತನ್ನ ಪ್ರತಿಸ್ಪರ್ಧಿಯಾಗಿ ಭಾವಿಸಿತು ಎಂದು ಉತ್ಪ್ರೇಕ್ಷೆ ಮಾಡಿದ್ದಾರೆ. ಆ ರೀತಿಯಾದ ಸೌಂದರ್ಯ ರುಕ್ಮಿಣಿಯದು.

ನಿನೀಷಿತಾಂ ದೇವಗೃಹಂ ಯಯೈತಾ ಮಾಕಲ್ಪ ಲಕ್ಷ್ಮೀಃ ಸಮಯೋಜಯಂತ।
ಮುಕುಂದ ಸಂಸ್ಪರ್ಶ ಮವಾಪ್ತು ಮರ್ಹ ಸ್ಸೈವ ಸ್ಥಿರಾ ಧನ್ಯ ತಮಾ ಬಭೂವ ॥೮೭॥

ಇಂದ್ರನ ದೇವಸ್ಥಾನಕ್ಕೆ ಇವಳನ್ನು ಕರೆದುಕೊಂಡು ಹೋಗಲು ಇಚ್ಛಿಸಿ, ಅವಳಿಗೆ ಮಾಡಿದ ಅಲಂಕಾರವೆಲ್ಲವೂ, ಶ್ರೀಕೃಷ್ಣನಿಗೆ ಸರಿಯಾದ ಜೊತೆ ಇವಳು ಎಂದು ಭಾವಿಸಿ ತಾವೇ ಹೆಮ್ಮೆಪಟ್ಟುಕೊಂಡವು. ಶ್ರೀಕೃಷ್ಣನ ಸ್ಪರ್ಶ ತಮಗೂ ದೊರೆಯುತ್ತದೆ ಎಂದು ಹರ್ಷಿಸಿದವು.

ಅವಳನ್ನು ಊರ ಹೊರಗಿನ ದೇವಸ್ಥಾನಕ್ಕೆ ಮದುವೆಗೆ ಮುಂಚಿ ಸಂಪ್ರದಾಯದಂತೆ ಕರೆದೊಯ್ಯಲು ನಿಶ್ಚಯಿಸಿದಾಗ, ಅವಳನ್ನು ಅಲಂಕರಿಸಿದ್ದ ಆಭರಣಗಳೆಲ್ಲವೂ ಶ್ರೀಕೃಷ್ಣನು ಇವಳನ್ನು ವರಿಸಿ ಆಲಂಗಿಸಿಕೊಳ್ಳುವುದರಿಂದ, ತಮಗೂ ಶ್ರೀಕೃಷ್ಣನ ಸ್ಪರ್ಶ ದೊರೆಯುತ್ತದೆ ಎಂದು ಆನಂದಪಟ್ಟವು.

ಪ್ರತಿವೃತಾಃ ಪಾರ್ಥಿವ ಯೋಷಿತಸ್ತಾಂ ಪ್ರತ್ಯಂಗ ಸೌಂದರ್ಯ ನಿಮಗ್ನ ಭಾವಾಃ।
ಕೃತಾಶಿಷಃ ಕೃಷ್ಣಮನೋರಥ ಸ್ತಾಮಾರೋಪ್ಯ ಕರ್ಣಿರಥ ಮನ್ವಗಚ್ಛನ್ ॥೮೮॥

ಇವಳು ಶ್ರೀಕೃಷ್ಣನನ್ನು ಹೊಂದಬೇಕೆಂದು, ಮನೋರಥ ಉಳ್ಳವಳಾಗಿದ್ದಳು. ಪತಿವ್ರತೆಯರಾದ ರಾಜಸ್ತ್ರೀಗಳು ಇವಳಿಗೆ 'ನೀನು ಪತಿಯೊಡನೆ ಸೇರಿ ಚಿಂತೆಯಿಲ್ಲದೆ ಚೆನ್ನಾಗಿ ಬಾಳುವೆ' ಎಂದು ಆಶೀರ್ವಾದ ಮಾಡಿದರು. ಮತ್ತು ದೇವಸ್ಥಾನಕ್ಕೆ ಹೋಗಲು ಇವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟರು.

ಅವಳು ದೇವಸ್ಥಾನಕ್ಕೆ ಹೊರಟಾಗ, ಪತಿವ್ರತೆಯರಾದ ವೃದ್ಧ ಸ್ತ್ರೀಯರು ಅವಳಿಗೆ "ನಿನ್ನ ಅಭಿಷ್ಟವು ನೆರವೇರಲಿ" ಎಂದು ಆಶೀರ್ವಾದವನ್ನು ಮಾಡಿದರು. ಪತಿವ್ರತಾ ಸ್ತ್ರೀಯರ ಆಶೀರ್ವಾದವು ಎಂದಿಗೂ ವಿಫಲವಾಗುವುದಿಲ್ಲ.

ಮಂಗಲ್ಯ ಸಂಗೀತ ಸಮೇತ ಯಾತ್ರಾ ಮನುಷ್ಯ ದೇವಿಭಿ ರನುದ್ಧೃತಾಸಾ।
ನಿನಂ ಸಿತೈಷಾ ಸ್ವಯ ಮೇವದೇವೀ ನಾನ್ಯೇತಿ ಸದ್ಭಿರ್ನಿರಣಾಯಿ ನಾಥಾ ॥೮೯॥

ರಾಜ ದೇವಿಯರೆಲ್ಲರೂ ಹಿಂದೆ ಬರುತ್ತಿರಲು, ಮಂಗಳ ವಾದ್ಯಗಳನ್ನೆಲ್ಲಾ ಬಾರಿಸುತ್ತಾ ದೇವಸ್ಥಾನದ ಒಂದು ದೇವತೆಯನ್ನು ನಮಸ್ಕರಿಸಲು ನಡೆಸಿಕೊಂಡು ಬರುತ್ತಿರುವ ಅವಳನ್ನು ಸತ್ಪುರುಷರೆಲ್ಲರೂ ನೋಡಿ ಇವಳೇ ಎಲ್ಲರೂ ನಮಸ್ಕರಿಸುವ ನಾಥೆಯಾದ ದೇವಿ (ಲಕ್ಷ್ಮಿ) ಎಂದು ನಿರ್ಣಯಿಸಿದರು.

ದೇವಸ್ಥಾನಕ್ಕೆ ಹೋಗುವ, ಮಾರ್ಗದಲ್ಲಿ ಅವಳನ್ನು ನೋಡಿದ ವಿದರ್ಭ ದೇಶದ ಜನರೆಲ್ಲರೂ (ಹಿರಿಯರೆಲ್ಲರೂ) ಇವಳು ಮಹಾಲಕ್ಷ್ಮಿಯ ಅವತಾರವೇ ಸರಿ. ಇವಳೇ ಸರ್ವಲೋಕ ನಮಸ್ಕೃತಳು ಎಂದು ನಿರ್ಧರಿಸಿ, ಮನಸ್ಸಿನಲ್ಲಿಯೂ ಅವಳಿಗೆ ನಮಸ್ಕರಿಸಿದರು. ಇವಳೇ 'ಲೋಕಮಾತೆ' ಎಂದು ಭಾವಿಸಿದರು.

ಭಾವಾಂತರೇಷು ಪ್ರತಿಪನ್ನ ಲೀಲಾ ಪೈತಾ ಮಹಾಧೀನಿ ಪದಾನಿ ದಾತುಂ।
ಸ್ವದತ್ತ ಶಕ್ತೇಃ ಕುಹನಾ ಮನುಷ್ಯ ಕುತಶ್ಚಿ ದಿಷ್ಟಂ ಸ್ವಯ ಮಾಶಸಂಸೇ ॥೯೦॥

ಅನೇಕ ಅವತಾರಗಳಲ್ಲಿ ಬ್ರಹ್ಮನೇ ಮೊದಲಾದ ಪದವಿಗಳನ್ನು ವಿನೋದವಾಗಿ ಧರಿಸಿ ಬರುವ ದೇವಿಯು (ಲಕ್ಷ್ಮಿಯು) ಈಗ ತನ್ನನ್ನು ಮಾನುಷ ದೇಹದಲ್ಲಿ ಮರೆ ಮಾಚಿಕೊಂಡು

ತಾನು ನೀಡಿರುವ ಶಕ್ತಿಯನ್ನು ಹೊಂದಿ ವರವನ್ನು ಕೊಡುವ ಒಬ್ಬ ದೇವತೆಯ ಬಳಿ ತನಗೆ ಬೇಕಾದ ಫಲವನ್ನು ಕೇಳುತ್ತಿದ್ದಾಳೆ.

ಎಲ್ಲಾ ದೇವತೆಗಳಿಗೂ, ಅದರಲ್ಲೂ ಮುಖ್ಯವಾಗಿ ಸ್ತ್ರೀದೇವತೆಗಳಿಗೆ ಶಕ್ತಿಯನ್ನು ನೀಡುವವಳು ಮಹಾಲಕ್ಷ್ಮಿ. ಈಗ ಭೂಮಿಯಲ್ಲಿ ರುಕ್ಮಿಣಿಯಾಗಿ ಮನುಷ್ಯಳಾಗಿ ತೋರಿರುವಳು. ವಿಡಂಬನಾರ್ಥವಾಗಿ ತಾನೂ ಸಾಧಾರಣ ಮನುಷ್ಯಳಂತೆ ಕುಲದೇವತೆಯ ಮಂದಿರಕ್ಕೆ ಹೋಗಿ ಅವಳ ಅನುಗ್ರಹವನ್ನು ಬೇಡುತ್ತಿದ್ದಾಳೆ.

ಪಣಮ್ಯಮೂರ್ಧ್ನಾ ನಿಹಿತೋಪಹಾರಾ ಮುತ್ತಸ್ಥುಷಿ ಮುತ್ಸವ ದೇವತೈನಾಮ್।
ಅವ್ರೋಚ ದಾರಾದಶರೀರಿವಾಚ ಪರ್ಯೈರಜಯ್ಯಂ ಪತಿಮಾಪ್ನುಹೀತಿ ॥೯೧॥

ತಲೆ ಬಾಗಿ ಪಾದಕ್ಕೆ ವಂದಿಸಿ, ನೈವೇದ್ಯ ಅರ್ಪಿಸಿ ಎದ್ದ ಆ ರುಕ್ಮಿಣಿಯನ್ನು ಕುರಿತು "ಇತರರಿಂದ ಜಯಿಸಲ್ಪಡದ ಪತಿಯನ್ನು ಹೊಂದುತ್ತೀಯೇ" ಎಂದು ಆಕಾಶವಾಣಿಯ ಮೂಲಕ ಈ ವಿವಾಹ ದೇವತೆಯು ತಿಳಿಸಿದಳು.

ಅವಳು ಶಾಸ್ತ್ರೋಕ್ತವಾಗಿ ಪೂಜಿಸಿದ ನಂತರ, ಅಶರೀರವಾಣಿಯೊಂದು ನುಡಿದು, ನೀನು ಅಜೇಯನಾದಂತಹ ಶ್ರೀಕೃಷ್ಣನನ್ನೇ ಪತಿಯಾಗಿ ಹೊಂದುವೆ ಎಂದು ಅವಳಿಗೆ ಅಭಯವನ್ನು ನೀಡಿತು. ಅವಳು ವಂದಿಸಿದ ಆ ಕುಲದೇವತೆಯೇ ಆ ರೀತಿ ನುಡಿದು ರುಕ್ಮಿಣಿಯನ್ನು ಆಶೀರ್ವದಿಸಿದಳು.

ಪತ್ಯಾನಿಜೇನ ಪರಿಣೀತ ಮವಾಪ್ತುಕಾಮಾ ಲಬ್ಧ್ವಾ ವರಂ ಲಲಿತಮುತ್ಸವದೇವತಾಯಾಃ।
ತೇನೈವ ಸಾ ಸಮ ಸಮೀಹಿತ ಸಿದ್ಧಿರಾಸೀತ್
ಮಾನಾಧಿಕಾ ಜಗತಿ ಮನ್ಮಥಮನ್ಮಥೇನ ॥೯೨॥

ತನಗೆ ಯಾವಾಗಲೂ ಭರ್ತಾವಾದ ಭಗವಂತನೊಡನೆ ವಿವಾಹವು ನೆರವೇರಬೇಕೆಂದು ಇದ್ದವಳು ವಿವಾಹ ದೇವತೆಯಾದ ಇಂದ್ರಾಣಿಯಲ್ಲಿ ಆ ವರನನ್ನು ಪಡೆಯಬೇಕೆಂದು ಪ್ರಾರ್ಥಿಸಿ, ಸಾಕ್ಷಾತ್ ಮನ್ಮಥನಿಗೆ ಮನ್ಮಥನಾದ ಆ ವರನಾದ ಶ್ರೀಕೃಷ್ಣನೊಡನೆ ಸೇರಿದುದಾಗಿ ತಿಳಿದು ವಿಶೇಷವಾಗಿ ಸಂತೋಷಿಸಿದಳು.

ಆ ಅಶರೀರ ವಾಣಿಯನ್ನು ಕೇಳಿದ ರುಕ್ಮಿಣಿಯು, ತನ್ನ ಮನೋರಥವಾದಂತಹ ಶ್ರೀಕೃಷ್ಣನ ಸೇರುವಿಕೆಯು ಖಂಡಿತಾ ನೆರವೇರುವದೆಂಬ ಭರವಸೆಯನ್ನು ಹೊಂದಿ, ಮನಸ್ಸಿನಲ್ಲಿ ಅತ್ಯಂತ ಸಂತೋಷವನ್ನು ಹೊಂದಿ, ಮಾನಸಿಕವಾಗಿ ಶ್ರೀಕೃಷ್ಣಸಂಶ್ಲೇಷವನ್ನು ಅನುಭವಿಸಿದಳು. ಸಾಕ್ಷಾತ್ ಮನ್ಮಥನಿಗೂ ಮನ್ಮಥನಾದ ಆ ಸರ್ವೇಶ್ವರನನ್ನು ಜಗನ್ಮಾತೆಯಾದ ಲಕ್ಷ್ಮಿಯು ವಿವಾಹ ಮಾಡಿಕೊಳ್ಳುವುದು ಲೋಕಕಲ್ಯಾಣಕ್ಕಾಗಿಯೇ.

ಊರುಃ ಸವ್ಯೋ ನಯನ ಕಮಲಂ ಭ್ರೂಲತಾ ಚಾಪಿ ತಸ್ಯಾಃ
ಪ್ರಾವೇ ಪಂತ ಪ್ರಿಯಮುಪಗತಂ ಸೂಚಯಂತಿ ಸ್ವವೃತ್ಯಾ।
ಆರೋದಾಸೀ ದಲಘು ತುಲಸೀ ಗಂಧಸೌಮ್ಯಃ ಸಮೀರಃ ಪ್ರತ್ಯಾಸನ್ನಂ
ಮುಹೃದಚರತ್ ಪಾಂಚಜನ್ಯ ಪ್ರಣಾದಃ ॥೯೨॥

ಇವಳಿಗೆ ಎಡ ತೊಡೆಯೂ, ತಾವರೆಯಂತಿರುವ ಎಡದ ಕಣ್ಣೂ, ಎಡದ ಹುಬ್ಬೂ ಪ್ರಿಯಕರನ ಸಮಾಗಮವನ್ನು ಸೂಚಿಸುವಂತೆ ಅದುರಿದವು ಒಡನೆಯೇ ತುಳಸಿಯ ಮೇಲಿನ ದಿವ್ಯವಾದ ಗಾಳಿಯು ಬೀಸಿತು. ಪಾಂಚಜನ್ಯವೆಂಬ ಸ್ವಾಮಿಯ ಶಂಖವು ಸಹ ಮೇಲೆ ಮೇಲೆ ಕಿವಿಗೆ ಆಪ್ಯಾಯಮಾನ ಉಂಟುಮಾಡಿತು.

ರಾಮಾಯಣದಲ್ಲಿ ಈ ಶ್ಲೋಕವಿದೆ "ಸೀತಾ ಕಪಿಂದ್ರ ಕ್ಷಣದಾಚರಾಣಾಂ, ರಾಜೀವ ಹೇಮ ಜ್ವಲನೋಪಮಾದಿ ಸುಗ್ರೀವ ರಾಮ ಪ್ರಣಯ ಪ್ರಸಂಗೇ ವಾಮಾನಿ ನೇತ್ರಾಣಿ ಸಮಾಸ್ಫುರಂತಿ" "ಸೀತೆ, ವಾಲಿ, ರಾವಣ ಇವರ ಮೂವರ ಎಡಗಣ್ಣುಗಳೂ, ಶ್ರೀರಾಮ ಸುಗ್ರೀವರ ಸ್ನೇಹದ ಸಮಯದಲ್ಲಿ ಏಕ ಕಾಲಕ್ಕೆ ಅದುರಿದವು.

ಅದೇ ರೀತಿ ಆ ಕುಲದೇವತೆಯ ಅಶರೀರ ವಾಣಿಯ ಸಮಯದಲ್ಲಿ ರುಕ್ಮಿಣಿಗೆ ಶುಭ ಸೂಚಕವಾಗಿ, ಅವಳಿಗೆ ಎಡತೊಡೆ, ಎಡದ ಕಣ್ಣು ಎಡದ ಹುಬ್ಬು ಅದುರಿತು. ಅಲ್ಲದೇ ಇನ್ನೂ ಅನೇಕ ಶುಭ ನಿಮಿತ್ತ(ಶಕುನ)ಗಳು ತೋರಿದವು.

ಅದೇ ಸಮಯದಲ್ಲಿ ಕುಂಡಿನಿ ನಗರಕ್ಕೆ ಆಗಮಿಸಿದ್ದ ಶ್ರೀಕೃಷ್ಣನ ಪಾಂಚಜನ್ಯ ಶಂಖದ ಧ್ವನಿಯು ಮೇಲೆ ಮೇಲೆ ಅವಳ ಕಿವಿಗೆ ಬಿದ್ದು, ಅವಳಿಗೆ 'ಹೆದರಬೇಡ'ವೆಂಬ ಆಶ್ವಾಸನೆಯನ್ನು ನೀಡಿತು.

"ರುಕ್ಮಿಣೀಯ ಅಭ್ಯುದಯ"ವೆಂಬ ಹನ್ನೆರಡನೆಯ ಸರ್ಗವು ಮುಗಿದುದು.



೧೩ನೇ ಸರ್ಗಃ - ರುಕ್ಮಿಣೀ ಪರಿಣಯ



೧೩ನೇ ಸರ್ಗ - ರುಕ್ಮಿಣೀ ಪರಿಣಯ ಸರ್ಗ

ಈ ಸರ್ಗದಲ್ಲಿ 109 ಶ್ಲೋಕಗಳಿವೆ. ಶ್ರೀಕೃಷ್ಣನು ರುಕ್ಮಿಣಿಯನ್ನು ನೋಡಿ, ಅಪಹರಿಸಲು ನಿರ್ಧರಿಸಿ, ಅದಕ್ಕಾಗಿ ಸಮಯ ಕಾಯುತ್ತಿದ್ದು, ನಂತರ ಅವಳ ಸಮೀಪಕ್ಕೆ ಬಂದು, ಅವಳು ಮಂದಿರದಿಂದ ಹೊರ ಬರುತ್ತಿದ್ದಾಗ, ಅವಳನ್ನು ಎತ್ತಿಕೊಂಡು ರಥದಲ್ಲಿ ಕುಳ್ಳಿರಿಸಿಕೊಂಡು, ದ್ವಾರಕೆಯತ್ತ ರಥವನ್ನು ಓಡಿಸಿದುದು, ರುಕ್ಮಿಣಿ - ಕೃಷ್ಣರ ಪರಸ್ಪರಾವಲೋಕನ, ಇಬ್ಬರ ಆನಂದ. ಅವರನ್ನು ಬೆನ್ನಟ್ಟಿ ಅನೇಕ ರಾಜರು ಬಂದರೂ ಎಲ್ಲರೂ ಸೋತು ಹಿಂತಿರುಗಿದುದು. ಶ್ರೀಕೃಷ್ಣನು ರುಕ್ಮಿಣಿ ಸಮೇತ ದ್ವಾರಕೆಗೆ ಸೇರಿದುದು.

ದ್ವಾರಕೆಯಲ್ಲಿ ಅವರಿಗೆ ಪುರ ಜನರ ಸ್ವಾಗತ. ಉಪಚಾರ ಅವರನ್ನು ನೋಡುವಾಗ ದ್ವಾರಕೆಯ ಸ್ತ್ರೀಯರ ಅತಿಯಾದ ಸಂತೋಷ. ಅವರ ವಿವಿಧ ಅವಸ್ಥೆಗಳು, ಅವರಿಬ್ಬರ ವಿವಾಹಕ್ಕೆ ಸರ್ವ ಸಿದ್ಧತೆ, ವಿವಾಹದ ವೈಭವಗಳ ವರ್ಣನೆ, ವಿವಾಹದ ವಿಧಿಗಳು, ನೂತನ ದಂಪತಿಗಳಿಗೆ ಮಹರ್ಷಿಗಳಿಂದ ಮತ್ತು ಹಿರಿಯರ ಆಶೀರ್ವಾದ. ಲಕ್ಷ್ಮೀನಾರಾಯಣರ ಅವತಾರವಾದ ಅವರಿಬ್ಬರ ಹಿರಿಮೆ ಇತ್ಯಾದಿಗಳನ್ನು ವಿವರಿಸಲಾಗಿದೆ.

ಈ ಸರ್ಗದ ಶ್ಲೋಕಗಳ ವಿಷಯಾನುಕ್ರಮಣಿಕೆ ಹೀಗಿದೆ.

1-27 ಶ್ರೀಕೃಷ್ಣ - ರುಕ್ಮಿಣಿಯರ ಪರಸ್ಪರಾವಲೋಕನ.

28-31 ರುಕ್ಮಿಣಿಯನ್ನು ಅಪಹರಿಸಿ, ಅವರನ್ನು ರಥದಲ್ಲಿ ಕರೆದುಕೊಂಡು ದ್ವಾರಕೆಗೆ ಹೊರಟುದು.

32-40 ಶಿಶುಪಾಲ, ರುಕ್ಮಿಯೇ ಮೊದಲಾದವರ ಕೋಪ, ಅವರ ಪರಾಭವ, ಶ್ರೀಕೃಷ್ಣನು ರುಕ್ಮಿಣಿಯೊಡನೆ ದ್ವಾರಕೆಗೆ ಬಂದು ಸೇರಿದುದು.

41-44 ಪುರಜನರ ಸ್ವಾಗತ, ಸಂತೋಷ.

45-72 ಅವರಿಬ್ಬರನ್ನೂ ನೋಡಿ ಪುರಜನ ಸ್ತ್ರೀಯರ ಅತೀವ ಸಂತೋಷ. ಅವರ ವಿವಿಧ ಅವಸ್ಥೆಗಳು, ರುಕ್ಮಿಣೀ-ಕೃಷ್ಣರ ವರಸಾಮ್ಯತೆ.

73-83 ವಿವಾಹದ ಸಿದ್ಧತೆಗಳು, ಬಂದವರೆಲ್ಲರಿಗೂ ಸತ್ಕಾರ ಇತ್ಯಾದಿ.

84-94 ಶಾಸ್ತ್ರದ ಪ್ರಕಾರ ವಿವಾಹ ವಿಧಿಗಳ ಆಚರಣೆ.

95-98 ಶ್ರೀಕೃಷ್ಣ- ರುಕ್ಮಿಣಿಯರ ಪರಸ್ಪರ ಸಂತೋಷ, ಮಹರ್ಷಿಗಳ ಆಶೀರ್ವಾದ.

99-108 ದ್ವಾರಕೆಯಲ್ಲಿ ಆ ದಿವ್ಯ ದಂಪತಿಗಳ ಒಡನಾಟ, ಎಲ್ಲರ ಸಂತೋಷ.

109 ರುಕ್ಮಿಣಿಯ ಹಿರಿಮೆ.

೧೩ನೇ ಸರ್ಗ - ರುಕ್ಮಿಣೀ ಪರಿಣಯ ಸರ್ಗ

ಪ್ರಸಾದ ಭಾಜಃ ಪ್ರತಿನಿರ್ಗತಾಂ ತಾಂ ಪ್ರಾಸಾದತೋ ವಾಸವ ವಲ್ಲಭಾಯಾಃ।
ಸಮಗ್ರಶಕ್ತಿಃ ಸಮಯೋಪಯಾತಃ ಪ್ರಾಣೇಶ್ವರೀಂ ಪ್ರಾಪ್ತುಮಿಯೇಷ ಶೌರಿಃ ॥೧॥

ಅನುಗ್ರಹ ಪಡೆದು ಇಂದ್ರಾಣಿಯ ದೇವಸ್ಥಾನದಿಂದ ಹಿಂತಿರುಗಿ ಬರುವಾಗ ಪ್ರಾಣೇಶ್ವರಿಯಾದ ರುಕ್ಮಿಣಿಯನ್ನು ಪೂರ್ಣ ಶಕ್ತಿಯಿಂದ ಸಮಯ ನೋಡಿ ಕರೆದೊಯ್ಯಲು ಶ್ರೀಕೃಷ್ಣನು ಇಚ್ಛಿಸಿದನು.

ರುಕ್ಮಿಣಿಯು ಕುಲದೇವತೆಯ ಪೂಜೆಯನ್ನು ಊರ ಹೊರ ವಲಯದಲ್ಲಿ ಇರುವ ಮಂದಿರದಲ್ಲಿ ಮುಗಿಸಿ, ಅರಮನೆಗೆ ಹಿಂತಿರುಗುವ ಸಮಯದಲ್ಲಿ, ಅವಳು ಅರಮನೆಯನ್ನು ಸೇರುವ ಮೊದಲೇ, ಮಾರ್ಗ ಮಧ್ಯದಲ್ಲಿಯೇ ಅಪಹರಿಸಿ ತನ್ನವಳನ್ನಾಗಿ ಮಾಡಿಕೊಳ್ಳಲು ಸ್ವಾಮಿಯಾದ ಶ್ರೀಕೃಷ್ಣನು ನಿರ್ಧರಿಸಿದನು. ಅವನು ರುಕ್ಮಿಣಿಯನ್ನು ತನ್ನ ಪ್ರಾಣಪ್ರಿಯಳೆಂದು ಭಾವಿಸಿದ್ದನು.

ತಾಮದ್ಭುತಾಂ ಸಿದ್ಧಿ ಮಿವಾದ್ಭುತಾನಾಂ ಸೌಭಾಗ್ಯ ವಿದ್ಯಾಮಿವ ಸದ್ಗುಣಾನಾಂ।
ಸತ್ತ್ವಾಮನನ್ಯಾಮಿವ ಸದ್‍ಗಣಾನಾಂ ಯಥಾಶ್ರುತಂ ಪ್ರೈಕ್ಷತ ಯಾದವೇಂದ್ರಃ॥೨॥

ಶ್ರೀಕೃಷ್ಣನು ಅವಳನ್ನು ತನ್ನ ಕಿವಿಯಿಂದ ಕೇಳಿದಂತೆಯೇ ಆಶ್ಚರ್ಯಗಳಾದ ಫಲಗಳಿಗೆಲ್ಲಾ ಒಂದು ಆಶ್ಚರ್ಯವಾದ ಫಲವೆಂಬಂತೆ ಅತ್ಯುತ್ತಮ ಗುಣಗಳೆಲ್ಲಾ ಮೇಲಾಗಿರುವ ವಿದ್ಯೆಯಂತೆ, ಶ್ರೀಕೃಷ್ಣನನ್ನು ಬಿಟ್ಟು ಬೇರೆಯವರಲ್ಲಿ ಮನಸ್ಸಿಲ್ಲದವಳಾದ ಅವಳನ್ನು ಸತ್ಪುರುಷರ ಸಾಕಾರ ಮೂರ್ತಿಯಾಗಿ ಭಾವಿಸಿದನು.

ಶ್ರೀಕೃಷ್ಣನು ರುಕ್ಮಿಣಿಯ ಸದ್ಗುಣಗಳನ್ನು ಅವರಿವರ ಬಾಯಿಯಿಂದ ಕೇಳಿದ್ದನೇ ವಿನಃ ಅವಳನ್ನು ಸಾಕ್ಷಾತ್ತಾಗಿ ನೋಡಿರಲಿಲ್ಲ. ಅದ್ಭುತಗಳಿಗೆಲ್ಲಾ ಅದ್ಭುತಳಾದ ಅವಳನ್ನು ಎಲ್ಲಾ ಗುಣಗಳಲ್ಲಿಯೂ ಮೇಲಾದವಳೆಂದೂ, ಸತ್ಪುರುಷರಿಂದ ಗೌರವಿಸಲ್ಪಡುವ ಸ್ತ್ರೀಯೆಂದು ತಿಳಿದು ಅವಳನ್ನು ಹೇಗಾದರೂ ಮಾಡಿ ಹೊಂದಬೇಕೆಂದು ಇಚ್ಛಿಸಿದನು.

ಅಂಗೈರವಜ್ಞಾತ ಕದಂಬಗೋಲೈ ರಸ್ಪಂದ ಮಂದೇನ ವಿಲೋಚನೇನ।
ಲೀಲೋಪಶಾಂತ್ಯಾ ಲಿಖಿತೇವ ಸಾऽಭೂತ್ ದಾಮೋದರೇ ದೃಷ್ಟಿಪಥಂ ಪ್ರಯಾತೇ ॥೩॥

ಸೌಲಭ್ಯವು ತುಂಬಿರುವ ಶ್ರೀಕೃಷ್ಣನು ಕಣ್ಣಿಗೆ ಕಂಡೊಡನೆಯೇ ರುಕ್ಮಿಣಿಯು ಕಟ್ಟುಪಾಡುಗಳನ್ನು ಅತಿಕ್ರಮಿಸಿ ತೋರ್ಪಡುವ ಅಂಗಗಳನ್ನು ಅಲ್ಲಾಡದೆ (ನಾಚಿಕೆಯಿಂದ) ಪೂರ್ತಿಯಾದ ನೋಟದಿಂದ ಶ್ರೀಕೃಷ್ಣನನ್ನು ನೋಡುವವಳಾಗಿ ವಿಲಾಸಗಳನ್ನೆಲ್ಲಾ ಬಿಟ್ಟು ಚಿತ್ರದಲ್ಲಿ ಬರೆದಿರುವ ಗೊಂಬೆಯಂತಾದಳು.

ಶ್ರೀಕೃಷ್ಣನನ್ನು ದೂರದಿಂದ ನೋಡಿದೊಡನೆಯೇ ರುಕ್ಮಿಣಿಯು, ಅತ್ಯಂತ ನಾಚಿಕೆಯಿಂದ ಕೂಡಿಯೂ, ಸಾಕ್ಷಾತ್ ಮನ್ಮಥಮನ್ಮಥನಾದ ಅವನನ್ನು ಕಣ್ತುಂಬಾ ನೋಡಬೇಕೆಂದು ಇಚ್ಛಿಸಿದಳು. ಅವನಲ್ಲೇ ನೆಟ್ಟ ದೃಷ್ಟಿಯುಳ್ಳವಳಾಗಿ, ಬೊಂಬೆಯಂತೆ ಯಾವ ಅಂಗಚಲನೆಯೂ ಇಲ್ಲದೆ ನಿಂತಿದ್ದಳು.

ಪದ್ಮಾಕರಾಣಾಂ ಪರಿಷನ್ನಿವೇಶೇ ಪರ್ಯಾಪ್ತ ಚಂದ್ರಾಯುತ ಕಾಂತಿಪೂರೇ।
ಅನನ್ಯಲಭ್ಯಾಂ ಲಭತೇ ಸ್ಮ ತೃಪ್ತಿಂ ತಸ್ಯಾಮುಖೇ ದೃಷ್ಟಿರತೀವ ಶೌರೇಃ ॥೪॥

ಶ್ರೀಕೃಷ್ಣನ ದಿವ್ಯವಾದ ನೇತ್ರವು ತಾವರೆ ಹೂವಿನ ಸಮೂಹವನ್ನು ತನ್ನಲ್ಲಿ ಅಡಗಿಸಿ, ಹದಿನಾರು ಸಹಸ್ರ ಪೂರ್ಣಚಂದ್ರರ ಕಾಂತಿಯ ಸಾರವಾದ ಅವಳ ಮುಖದಲ್ಲಿ ಬಿದ್ದು ಬೇರೆ ಯಾವುದರಲ್ಲೂ ಸಿಗದ ತೃಪ್ತಿಯನ್ನು ವಿಶೇಷವಾಗಿ ಹೊಂದಿತು.

ಶ್ರೀಕೃಷ್ಣನೂ ಸಹ ತನ್ನ ಕಮಲದಂತಹ ಕಣ್ಣುಗಳಿಂದ ಅವಳನ್ನು ವೀಕ್ಷಿಸಿ, ಅಲೌಕಿಕವಾದ ಆನಂದವನ್ನು ಅನುಭವಿಸಿದನು. ರುಕ್ಮಿಣಿಯ ದಿವ್ಯವಾದ ವದನಾರವಿಂದವು ಅದ್ಭುತವಾದ ಕಾಂತಿಯನ್ನು ಸೂಸುತ್ತಿತ್ತು.

ವಾಚಸ್ಪತಿತ್ವಂ ಚ ವನಸ್ಪತೀನಾಂ ದಿವ್ಯೇತರೇಷಾಂ ಚ ದಿವಸ್ಪತಿತ್ವಂ।
ದಾತುಂ ಕ್ಷಮಾಯಾ ದಯಿತೇ ತದಾನೀ ಆಜ್ಞಾಪಕೋ ನೂನ ಮಭೂದನಂಗಃ॥೫॥

ವನಸ್ಪತಿಗಳನ್ನು ಮಹಾ ಬೃಹಸ್ಪತಿಯಾಗಿ ಮಾಡಿ, ಮನುಷ್ಯರಂತಿರುವವರನ್ನೂ, ಮಹಾ ದೇವನಂತೆ ಮಾಡಲು ಬಲ್ಲವಳಾದ ಅವಳನ್ನು ಮನ್ಮಥನು ಅವಳಿಗೆ ಪ್ರಿಯನಾದ ಶ್ರೀಕೃಷ್ಣನ ವಿಷಯದಲ್ಲಿ ಆಜ್ಞೆ ಮಾಡುವವನಂತಾದನು.

ಮನ್ಮಥನು ರುಕ್ಮಿಣಿಯ ಮನಸ್ಸು ಸಂಪೂರ್ಣವಾಗಿ ಶ್ರೀಕೃಷ್ಣನಲ್ಲೇ ಸೇರುವಂತೆ ಉದ್ರೇಕಗೊಳಿಸಿ, ಬೃಹಸ್ಪತಿಯಂತೆ ಬುದ್ಧಿವಂತಳಾದ ಅವಳೂ ಸಹ ಶ್ರೀಕೃಷ್ಣನನ್ನೇ ಮೋಹಿಸು ವಂತೆ ನಿಯಮನ ಮಾಡಿದನು. ಸ್ತ್ರೀಪುರುಷ ಸಂಬಂಧಕ್ಕೆ ಮನ್ಮಥನ ಪ್ರಚೋದನೆ ಅತ್ಯಗತ್ಯ.

ತಸ್ಮಿನ್ ದ್ವಿತೀಯಾಮಿವ ವೈಜಯಂತಿ ಸಾ ಚ ಪ್ರಿಯೇ ಸಾಚಿ ವಿಶೇಷರಮ್ಯಾಂ।
ಕಟಾಕ್ಷಮಾಲಾಂ ನಿಬಬಂಧ ಕೃಷ್ಣೇ ಕಾಮಾಧಿಕೇ ಕೌತುಕ ಮೇದುರಾಕ್ಷಿ ॥೬॥

ರುಕ್ಮಿಣಿಯು ಆಸೆಯಿಂದ ಅರಳಿದ ಕಣ್ಣುಗಳುಳ್ಳವಳಾಗಿ ತನ್ನಲ್ಲಿ ನಾಚಿಕೆ ಬಿಟ್ಟವನೂ, ಮನ್ಮಥನಿಗೆ ಮೇಲಾದವನಾದ ಭಗವಾನ್ ಶ್ರೀಕೃಷ್ಣನ ಮೇಲೆ ಸರಿಸಿದ ದೃಷ್ಟಿಯುಳ್ಳವಳಾಗಿ, ತನ್ನ ಸುಂದರವಾದ ಕಟಾಕ್ಷ ಮಾಲೆಯನ್ನು ಎರಡನೇಯ ವನಮಾಲೆಯಂತೆ ಅವನಿಗೆ ತೊಡಿಸಿದವಳಾದಳು.

ಅವಳು ಶ್ರೀಕೃಷ್ಣನನ್ನು ತನ್ನ ಆಸೆತುಂಬಿದ ಕಣ್ಣುಗಳಿಂದ ಕಟಾಕ್ಷಿಸುತ್ತಿದ್ದಳು. ಶ್ರೀಕೃಷ್ಣನೂ ಸಹ ನಾಚಿಕೆಯನ್ನು ಬಿಟ್ಟು ಅವಳನ್ನೇ ನೋಡುತ್ತಿದ್ದನು.

ಹೀಗೆ ಪರಸ್ಪರಾವಲೋಕನದಿಂದ ಆನಂದ ಪಡುತ್ತಿದ್ದ ಅವರಿಗೆ ಅವರ ಪರಸ್ಪರ ಈಕ್ಷಣವೇ ಮಾಲೆಗಳಾಗಿ ಪರಿವರ್ತನೆ ಹೊಂದಿದವು. ಸ್ವಯಂವರ ಸಮಯದಲ್ಲಿ ವಧುವು ತಾನು ಇಷ್ಟಪಟ್ಟ ವರನಿಗೆ ಹೂಮಾಲೆ ಹಾಕುತ್ತಾಳೆ. ಇಲ್ಲಿ ರುಕ್ಮಿಣಿಯು ಹೂಮಾಲೆಯ ಬದಲು ತನ್ನ ಕಟಾಕ್ಷವೆಂಬ ಮಾಲೆಯನ್ನೇ ಅವನಿಗೆ ತೊಡಿಸಿಬಿಟ್ಟಳು. ಶ್ರೀಕೃಷ್ಣನು ಮೊದಲೇ ವನಮಾಲಿಯಾಗಿದ್ದನು.

ಅಲಕ್ಷ್ಯ ಭೇದ ತ್ರಿವಿಧಾಂಬುಜಾಭೈ ರಾಲಕ್ಷ್ಯ ಶೃಂಗಾರ ಗುಣಾನುಬಂಧೈಃ।
ಸ್ವಯಂವರ ಸ್ರಗ್ಭಿರಭಾವಿತಸ್ಯಾಃ ಕಾಲೋದಿತೇ ಕಂಸರಿಪೌ ಕಟಾಕ್ಷೈಃ ॥೭॥

ಕೆನ್ನೈದಿಲೆ, ತಾವರೆ, (ಕುಮುದಿನಿ) ಚೆನ್ನೈದಿಲೆ ಎಂಬ ಮೂರು ವಿಧದ ಹೂವುಗಳು ಒಂದಕ್ಕೊಂದು ಅಗಲದೆ, ಒಟ್ಟಿಗೆ ಸೇರುವ ಹಾಗೆ, ಶೃಂಗಾರ ರಸಕ್ಕೆ ಬೇಕಾಗುವ ಗುಣಗಳನ್ನು ತಡೆಯಿಲ್ಲದೆ ಪ್ರದರ್ಶಿಸುವ ಅವಳ ಕಟಾಕ್ಷಗಳು ಅವಳು ಎದುರು ನೋಡಿದ ಕಾಲದಲ್ಲಿ ತೋರಿದ ಕಂಸನ ಸಂಹಾರಿಯಾದ ಶ್ರೀಕೃಷ್ಣನಲ್ಲಿ ಸ್ವಯಂವರ ಮಾಲೆಗಳಾಗಿ ಮಾರ್ಪಟ್ಟವು.

ರುಕ್ಮಿಣಿಯ ಕಟಾಕ್ಷಗಳೇ ಮೂರು ವಿಧವಾದ ಉತ್ತಮ ಪುಷ್ಪಗಳ ಮಾಲೆಗಳಾಗಿ ಅವನ ಕಂಠವನ್ನು ಅಲಂಕರಿಸಿದವು. ಅವಳ ಕಟಾಕ್ಷಗಳು ಶ್ರೀಕೃಷ್ಣನ ಮೇಲೆ ಶೃಂಗಾರ ರಸವನ್ನೇ ಸುರಿಸಿದವು.

ಸ ವೈಜಯಂತ್ಯಾದಿ ವಿಭಾವಶಾಲೀ ನಿರ್ವ್ಯಾಜ ನಿಷ್ಪನ್ನ ನಿಜಾನುಭಾವಃ।
ಶೃಂಗಾರ ವೀರಾದ್ಭುತ ಚಿತ್ರಿತಾತ್ಮಾ ರಮ್ಯಸ್ತಯಾ ನಿರ್ವಿವಿಶೇ ರಸೋಽನ್ಯಃ ॥೮॥

ಭಗವಂತನನ್ನು "ರಸೋ ವೈ ಸಃ" ಎಂದು ರಸವಾಗಿಯೂ, ಸರ್ವ ರಸವಾಗಿಯೂ, ವೇದಗಳು ಹೇಳುತ್ತವೆ. ಅವನು ಕೃಷ್ಣನಾಗಿ ಶೃಂಗಾರ, ವೀರ, ಅದ್ಭುತ ಎಂಬ ಮೂರು ರಸಗಳು ಸೇರಿದ ಚಿತ್ರರಸನಾಗಿದ್ದಾನೆ. ಈ ರಸಾನುಭವಕ್ಕೆ ಮಾಲೆ ಮುಂತಾದ ವಿಭವಗಳೂ ಸಹಜವಾಗಿಯೇ ಇರುವ ಪ್ರಭಾವ ಔದಾರ್ಯಗಳೇ ಅನುಭವವಾಗಿವೆ. ಈ ರೀತಿಯ ಸಹಜ ರಸಾನುಭಾವವನ್ನು ಅವಳು ಹೊಂದಿದಳು.

ಅವಳೂ ಸಹ ಅವನ ಅದ್ಭುತ ಕಟಾಕ್ಷ ಸೇಚನದಿಂದ ರಸಾನುಭವವನ್ನು ಹೊಂದಿದಳು. "ರಸೋ ವೈ ಸಃ" ಎಂದು ವೇದಗಳು ಅವನನ್ನು 'ರಸ'ವಾಗಿ ವರ್ಣಿಸುತ್ತವೆ.

ಆ ಕೇಕರಾಣಾಂ ಮನಘಸ್ತದಾನೀಂ ಮೇಕಕ್ಷಣಂ ಲಕ್ಷ್ಯಮಭೂತ್ ಬಹೂನಾಂ।
ತಸ್ಯಾಃ ಸ್ಥಿರಾನಂದ ಪರಿಪ್ಲುತಾನಾಮರ್ಧ ಸ್ಪೃಶಾಮರ್ಧ ವಿಲೋಕಿತಾನಾಂ ॥೯॥

ಅವಳ ಓರೆಗಣ್ಣಿನ ನೋಟದ ದೃಷ್ಟಿಯು ತಡೆದು ತಡೆದು ಅವನ ಮೇಲೆ ಬಿದ್ದು ಅವಳ ಅರ್ಧ ತೆರೆದ ಕಣ್ಣುಗಳ ಕಟಾಕ್ಷವೂ ಆನಂದ ತುಂಬಿ ಏನೋ ಮಾತನಾಡುವಂತೆ ತೋರಿ ಶ್ರೀಕೃಷ್ಣನ ಮೇಲೆ ಬಿದ್ದು, ಅದಕ್ಕೆ ಒಂದು ನಿಮಿಷ ನಿಂತು ಪಾತ್ರನಾದನು.

ಅವಳ ಕಟಾಕ್ಷವು ಅವನ ಮೇಲೆ ಬಿದ್ದಾಗಲೆಲ್ಲಾ ಅವಳು ಕಣ್ಣುಗಳಿಂದಲೇ ಏನೋ

ಸಂದೇಶವನ್ನು ಶ್ರೀಕೃಷ್ಣನಿಗೆ ತಿಳಿಸುವಂತಿತ್ತು. ಕೃಷ್ಣನು ಅವಳ ಓರೆನೋಟದ ದೃಷ್ಟಿಗೆ ಪಾತ್ರನಾಗಿ, ಆನಂದದಿಂದ ಸ್ತಬ್ಧನಾಗಿ ಕೆಲವು ಕಾಲ ನಿಂತಿದ್ದನು. ನೇರನೋಟಕ್ಕಿಂತ ಓರೆಗಣ್ಣಿನ ನೋಟವು ಆಪ್ಯಾಯಮಾನವೆಂದು ಶೃಂಗಾರ ಶಾಸ್ತ್ರ ಹೇಳುತ್ತದೆ.

ತಸ್ಯಾಶ್ಚಿರಾಕಾಂಕ್ಷಿತ ಲಾಭ ಧನ್ಯೈರಪತ್ರ ಪಾಮಂಥರಿತೈರಪಾಂಗೈಃ।
ಬಭಾರ ಭೂಯೋ ಬಹುಮಾನಪೂರ್ವಂ ಬಾಲ್ಯೇಧೃತಾಂ ಬರ್ಹಿಕಲಾಪ ಭೂಷಾಂ॥೧೦॥

ಬಹಳ ದಿನಗಳಿಂದ ನೋಡದೇ ಇದ್ದು ಹೋದದ್ದರಿಂದ ಈಗ ಭಾಗ್ಯ ಪೂರ್ತಿ ಪಡೆದವನೂ ಇತರರು ನೋಡುತ್ತಾರೆ ಎಂದು ನಾಚಿಕೆಯಿಂದ ಮೃದುವಾಗಿ ಹರಡುತ್ತಿರುವ ಅವಳ ಕಟಾಕ್ಷಗಳನ್ನು ಹೊಂದಿದ ಶ್ರೀಕೃಷ್ಣನು ತನ್ನ ಚಿಕ್ಕವಯಸ್ಸಿನಲ್ಲಿ ಹೊಂದಿದ್ದ ನವಿಲುಗರಿಯ ಆಭರಣಗಳನ್ನು ಈಗ ಮತ್ತೆ ಹೊಂದಿದಂತಾದನು. (ಅವಳ ಕಟಾಕ್ಷಗಳು ಅವನಿಗೆ ಪ್ರಿಯವಾದ ನವಿಲುಗರಿಗಳಂತಿದ್ದವು).

ಶ್ರೀಕೃಷ್ಣನು ಗೋಕುಲದಲ್ಲಿರುವಾಗ ಯಾವಾಗಲೂ, ನವಿಲುಗರಿಯ ಕಿರೀಟವನ್ನೇ ಧರಿಸುತ್ತಿದ್ದನು. ಮಥುರೆಗೆ ಬಂದ ಮೇಲೆ ಅದನ್ನು ಧರಿಸುತ್ತಿರಲಿಲ್ಲ. ಆದರೆ ಈಗ ರುಕ್ಮಿಣಿಯ ಶೃಂಗಾರಪೂರಿತ ಆ ಕಣ್ಣಿನ ಕಟಾಕ್ಷಗಳೇ ಅವನಿಗೆ ಮತ್ತೆ ತಾನು ಬಾಲ್ಯದಲ್ಲಿ ಗೋಕುಲದಲ್ಲಿ ಧರಿಸುತ್ತಿದ್ದ ನವಿಲುಗರಿಯ ಕಿರೀಟದಂತೆ ಸಂತೋಷವನ್ನು ಉಂಟುಮಾಡಿತು. ಅದನ್ನು ಅವಳು ನೀಡಿದ ಬಹುಮಾನವೆಂದು ಅವನು ಭಾವಿಸಿದನು.

ಸಂತಾನ ಸೌಭಾಗ್ಯ ಘನೇನ ಯೂನಾ ಸಿಕ್ತಾ ಸುಧಾಸಾರ ನಿಭೈರಪಾಂಗೈಃ।
ಉದ್ಭಿನ್ನರೋಮಾಂಚ ತತಿರ್ಬಭಾಸೇ ಕಾಂತ ಪ್ರರೋಹಾ ಕಲಮಸ್ಥಲೀವ ॥೧೧॥

ಸಂತಾನವೆಂಬ ಕಲ್ಪವೃಕ್ಷದ ಹಿರಿಮೆಯನ್ನು ಹೊಂದಿರುವ ಅವನ ಕಟಾಕ್ಷಗಳು ಬಿದ್ದಿದ್ದರಿಂದಲೇ ರೋಮಾಂಚನ ಹೊಂದಿದವಳಾಗಿ ಎಲ್ಲೆಲ್ಲೂ ಹರಡಿ ಸುಂದರವಾದ ಮೇಘದ ಅಮೃತದ ರೀತಿ ಇರುವ ನೀರಿನ ಪ್ರವಾಹದಲ್ಲಿ ಮೊಳೆತ ಶಂಬಾ ಪೈರುಗಳಂತೆ ಬೆಳಗುತ್ತಿದ್ದವು.

ಸಂತಾನವೆಂಬ ಕಲ್ಪವೃಕ್ಷವು ಅಪಾರಮಹಿಮೆಯನ್ನು ಹೊಂದಿದೆ ಶ್ರೀಕೃಷ್ಣನ ಕಟಾಕ್ಷವು ಅದಕ್ಕೆ ಸಮಾನವಾದುದು. ಆ ದಿವ್ಯ ಕಟಾಕ್ಷವು ಅವಳ ಮೇಲೆ ಬಿದ್ದು, ಅವಳು ರೋಮಾಂಚನಗೊಂಡಳು. ಅವಳ ದಿವ್ಯದೇಹದ ಪ್ರಭೆಯು ಎಲ್ಲೆಲ್ಲೂ ಹರಡಿತು. ಉತ್ತಮ ಪೈರುಗಳು ಶೋಭಿಸುವಂತೆ ಅವಳು ಶೋಭಿಸಿದಳು.

ಸ್ವಕಾಂತಿ ಸಾಮ್ಯಾದಿವ ಜಾತಸಂಗೈಃ ಶೌರಿಸ್ತದಾ ಸ್ವಾಗತ ಸೂಕ್ತಿಗರ್ಭೈಃ।
ಪ್ರಿಯಾ ಸಖೀನಾಮಭಜತ್ ಪ್ರಹೃಷ್ಟೈರುದಿಕ್ಷಣೈರುತ್ಪಲ ಪುಷ್ಪವೃಷ್ಟಿಂ ॥೧೨॥

ಶ್ರೀಕೃಷ್ಣನು ಕಾಂತಿಯಲ್ಲಿ ತನಗೆ ಸಮಾನನಾಗಿರುವುದರಿಂದ, ತನ್ನಲ್ಲಿ ಆಸೆಯಿಂದ ಸೇರುತ್ತಾನೆ ಎಂಬ ಸದುದ್ದೇಶಕ್ಕೆ ಪೂರಕವಾಗಿ ರುಕ್ಮಿಣಿಯ ಗೆಳತಿಯರ ಅರಳಿ ಮೇಲಕ್ಕೆದ್ದಿದ್ದ ಕಟಾಕ್ಷಗಳಿಂದ ಕನ್ನೈದಿಲೆ ಹೂಗಳ ವೃಷ್ಟಿಯನ್ನು ಹೊಂದಿದವನಂತಾದನು.

ಶ್ರೀಕೃಷ್ಣನು ಕಾಂತಿಯಲ್ಲಿ ರುಕ್ಮಿಣಿಯ ಕಾಂತಿಗೆ ಸರಿ ಸಮಾನನಾದವನು. ಅವಳ ಸಖಿಯರು ಇವರಿಬ್ಬರ ಅನುರೂಪವಾದ ಜೋಡಿಯನ್ನು ಬಹುವಾಗಿ ಕೊಂಡಾಡಿದರು. ಇಬ್ಬರ ದೃಷ್ಟಿಗಳೂ ಪರಸ್ಪರ ಒಬ್ಬರನ್ನೊಬ್ಬರು ಸ್ವಾಗತಿಸುತ್ತಾ ಕುಶಲಪ್ರಶ್ನೆ ಮಾಡುವಂತಿತ್ತು.

ಸ ರುಕ್ಮಿಣಿ ನೇತ್ರ ಚಕೋರ ಚಂದ್ರಃ ಸಾ ತತ್ಪ್ರಹರ್ಷಾಂಭುಜ ಪೂರ್ವಸಂಧ್ಯಾ ।
ತದದ್ಭುತ ದ್ವಂದ್ವಮವೇಕ್ಷ್ಯ ಸದ್ಯೋೞಯಯುತ್ಸು ಲಾಮಪ್ಸರಸಾಮನೂನಾಮ್॥೧೨॥

ಶ್ರೀಕೃಷ್ಣನು ರುಕ್ಮಿಣಿಯ ಕಣ್ಣುಗಳ ಚಕೋರ ಪಕ್ಷಿಗಳಿಗೆ ಚಂದ್ರನಾಗಿಯೂ, ಅವಳೂ ಅವನ ಪರಮಾನಂದಕರವಾದ ತಾವರೆ ಹೂವಿಗೆ ಆದಿ ಸಂಧ್ಯಾ ವೇಳೆಯಂತೆ ಇದ್ದು, ಆ ಪರಮಾಶ್ಚರ್ಯಕರವಾದ ಸಂಗತಿಯನ್ನು ಕಂಡೊಡನೇ ಗೆಳತಿಯರು ಅಪ್ಸರಸ್ಸುಗಳ ರೂಪವನ್ನು ಕಡಿಮೆಯಾಗಿ ಭಾವಿಸಿದರು.

ಚಕೋರ ಪಕ್ಷಿಗಳಿಗೆ ಚಂದ್ರನನ್ನು ಕಂಡು ಸಂತೋಷಿಸುತ್ತವೆ. ಅವಳ ಕಣ್ಣುಗಳೆಂಬ ಚಕೋರ ಪಕ್ಷಿಗೆ ಶ್ರೀಕೃಷ್ಣನು ಚಂದ್ರನಂತೆ ಕಂಡನು. ಅವನ ಕಣ್ಣುಗಳಿಗೆ ಅವಳೂ ತಾವರೆ ಹೂವಿನಂತೆ ಕಂಡಳು, ಇವಳ ಸೌಂದರ್ಯ ಅಪ್ಸರಸೆಯರ ಸೌಂದರ್ಯವನ್ನು ಮೀರಿಸುತ್ತದೆ ಎಂದು ಸಖಿಯರು ತಿಳಿಸಿದರು.

ತಯ್ಯೈವ ತಾದಾತ್ಮ್ಯಮಿವಾಽಽಗತಾನಾಂ ತಸ್ಯಾಃ ಸಖೀನಾಂ ಸಮಮಾವಿರಾಸನ್ ।
ಪರಸ್ಯ ವೀಕ್ಷಾಂ ಪ್ರತಿ ಸಲ್ಲಪಂತೋ ವಕ್ರೋಕ್ತಿಗರ್ಭಾ ಇವ ಮಂದಹಾಸಾಃ ॥೧೪॥

ಅವಳ ಸ್ನೇಹಿತೆಯರು ಅವಳೊಡನೆ ಐಶ್ವರ್ಯವನ್ನು ಹೊಂದಿದ ಹಾಗೆ ಆ ಶ್ರೀಕೃಷ್ಣನ ಕಣ್ಣೋಟಗಳಿಗೆ ಚತುರವಾಗಿ ಪ್ರತಿ ನೋಟದಿಂದ ಬೀರುವಂತೆ ಮುಗುಳ್ನಗೆಗಳನ್ನು ಒಂದೇ ಸಮಯದಲ್ಲಿ ಬೀರಿದರು.

ಅವಳು ಶ್ರೀಕೃಷ್ಣನಲ್ಲಿ ಐಕ್ಯವನ್ನು ಹೊಂದುವುದರಿಂದ, ಸಖಿಯರೂ ಸಹ ತಾವೂ ಸಹ ಭುವನಸುಂದರನಾದ ಶ್ರೀಕೃಷ್ಣನಲ್ಲಿ ಮಾನಸಿಕ ಸಂಶ್ಲೇಷವನ್ನು ಅನುಭವಿಸಬೇಕೆಂದು ಆಶಿಸಿ ಅವನೆಡೆಗೆ ತಮ್ಮ ಮೆಚ್ಚುಗೆಯ ನೋಟವನ್ನು ಬೀರಿದರು.

ಸ ಕೌಸ್ತುಭಾಭ್ಯರ್ಣ ನಿವೇಶ ಯೋಗ್ಯಂ ಕನ್ಯಾಮಯಂ ಕಾಮ ಪಯೋಧಿರತ್ನಂ ।
ಪರೀತಮಾರಾತ್ ಪ್ರತಿಹಾರ ಪಾಲೈಃ ಪಶ್ಯನ್ ಕ್ಷಣಂ ಪಾಂಥ ಇವಾವತಸ್ಥೇ ॥೧೫॥

ಶ್ರೀಕೃಷ್ಣನು ಆವಾಗ ಸಮುದ್ರದಲ್ಲಿ ತೋರುವ ಕೌಸ್ತುಭ ರತ್ನದ ಕಾಂತಿಯನ್ನು ಎದೆಯಲ್ಲಿ ಧರಿಸಿ, ಕಾಮದ ಸಮುದ್ರದಲ್ಲಿ ತೋರಿದ ಕನ್ಯಾರತ್ನವಾದ ಅವಳನ್ನು ಹಿಂಬಾಲಿಸಿ ಅಂತಃಪುರ ದ್ವಾರಪಾಲಕರು ಕಾವಲು ಕಾಯುತ್ತಿರುವುದನ್ನು ನೋಡಿಕೊಂಡೇ ಜಾಗವನ್ನು ಮಾಡಿಕೊಂಡು ಅವಳನ್ನು ಸ್ವಲ್ಪಕಾಲ ನೋಡಿದನು.

ಅವಳನ್ನು ರಕ್ಷಕ ದಳದವರು ಕಾಯುತ್ತಿದ್ದರು. ಆದರೂ ಅವರ ನಡುವೆಯೇ ದಾರಿ ಮಾಡಿಕೊಂಡು ಶ್ರೀಕೃಷ್ಣನು ಅವಳನ್ನು ಕಣ್ತುಂಬಾ ನೋಡಿದನು.

ಅವನ ಎದೆಯಲ್ಲಿ ಯಾವಾಗಲೂ ಕೌಸ್ತುಭ ಮಣಿಯು ಇರುತ್ತದೆ. ಈಗ ರುಕ್ಮಿಣಿಯೆಂಬ ಮತ್ತೊಂದು ದಿವ್ಯ ಮಣಿಯು ಅವನನ್ನು ಸೇರಿ, ಅವನು ಇನ್ನೂ ಶೋಭಾಯಮಾನವಾಗಿ ತೋರುತ್ತಾನೆ

ತಂ ಮಾಲ್ಯಭೂಷಾ ಪರಿಕರ್ಮಿತಾಂಗಂ ಧಾರಾ ತಟಿತ್ವಂತ ಮಿವಾಂಬುವಾಹಂ।
ಸಮೀಕ್ಷ್ಯ ಬಾಲಾ ತದನನ್ಯ ದೃಷ್ಟಿ ಶ್ಚರ್ಯಾ ಮವಾಲಂಬತ ಚಾತಕಾನಾಂ ॥೧೬॥

ಆಭರಣಗಳೂ, ಮಾಲೆಗಳೂ ಇತ್ಯಾದಿ ಅನೇಕ ಆಭರಣಗಳನ್ನು ಹೊಂದಿ ಮಳೆ, ಮಿಂಚುಗಳಿಂದ ಕೂಡಿದ ಮೇಘದಂತಿರುವ ಅವನನ್ನು ಬೇರೆ ಉದ್ದೇಶದಿಂದ ನೋಡದ ಆ ನಾರೀ ಮಣಿಯು ಜಾತಕ ಪಕ್ಷಿಗಳ ಕಾರ್ಯವನ್ನು ಮಾಡಿದಳು. (ಶ್ರೀಕೃಷ್ಣನನ್ನೇ ಕಾಯುತ್ತಿರುವ ಕಾರ್ಯ) ಅದನ್ನು ಅವನಿಗೆ ತಿಳಿಸಲಿಚ್ಛಿಸಿದಳು.

ಜಾತಕ ಪಕ್ಷಿಗಳು ಮಳೆಗಾಗಿ ಕಾಯುತ್ತಾ ಬೇರೆ ನೀರನ್ನು ಕುಡಿಯುವುದಿಲ್ಲ. ಅದೇ ರೀತಿ ರುಕ್ಮಿಣಿಯು ಬೇರೆ ಯಾರನ್ನೂ ಬಯಸದೆ, ಶ್ರೀಕೃಷ್ಣನೊಬ್ಬನನ್ನೇ ಆಶಿಸಿ ಅದನ್ನು ಹೇಗಾದರೂ ಅವನಿಗೆ ತಿಳಿಸಲಿಚ್ಛಿಸಿದಳು.

ತಲೋದರೀಂ ತಾಲ ಫಲಸ್ತನೀಂ ತಾಂ ತಾಮ್ರಾಧರಾಂ ಚಾರು ನವೋತ್ಪಲಾಕ್ಷೀಂ।
ಕಿಂ ನಾಮ ಭಾವೀತಿ ವಿಭಾವಯಂತೀ ಕೃಷ್ಣಸ್ತದಾ ಕಿಂಚಿ ದಿವಾऽऽಸಸಾದ ॥೧೭॥

ಕತ್ತಿಯ ಹಿಡಿಯಂತೆ ಸೊಂಟವೂ, ತಾಮ್ರ ಫಲದಂತೆ ಇರುವ ಸ್ತನಗಳನ್ನು ಹೊಂದಿರುವ, ಉತ್ತಮವಾದ ಕೆಂಪಾದ ಅಧರಗಳೂ, ಸುಂದರವಾದ ನೈದಿಲೆ ಹೂವಿನಂತಿರುವ ಕಣ್ಣುಗಳು, ಏನಾಗುವುದೋ ಏನೋ ? ಎಂದು ಭಯಪಡುತ್ತಿರುವ ಅವಳನ್ನು ನೋಡಿ ಶ್ರೀಕೃಷ್ಣನು ಅವಳ ಸನಿಹಕ್ಕೆ ಬಂದನು.

ನಾನೇನೋ ಶ್ರೀಕೃಷ್ಣನನ್ನು ಬಯಸಿದ್ದೇನೆ. ಆದರೆ ಅವನ ಅಭಿಪ್ರಾಯವೇನೋ ! ಎಂದು ಗಾಭರಿಯಾಗಿದ್ದ ಸರ್ವಾಂಗ ಸುಂದರಿಯಾದ ಅವಳನ್ನು ಸಮಾಧಾನಪಡಿಸುವಂತೆ ಶ್ರೀಕೃಷ್ಣನು ಅವಳ ಸಮೀಪಕ್ಕೆ ಬಂದನು. ಅವಳ ಅಲೌಕಿಕವಾದ ಸೌಂದರ್ಯವು ಅವನನ್ನು ಸಂಪೂರ್ಣವಾಗಿ ಆಕರ್ಷಿಸಿತ್ತು.

ದುರ್ದರ್ಶಮಧ್ಯಾಂ ದ್ವಿರದೇಂದ್ರಯಾತಾಂ ವ್ಯೂಹ ಕ್ರಮ ವ್ಯಕ್ತ ವಿಚಿತ್ರಗಾತ್ರೀಂ।
ಪರ್ರೈರಭೇದ್ಯಾಂ ಪ್ರತಿಜಗ್ಮುಷೀಂ ತಾಂ ಕಾಂತಾತ್ಮಿಕಾಂ ಕಾಮಚಮೂಂ ಸಮೇನೇ॥೧೮॥

ಆನೆ ಮೊದಲಾದುವನ್ನು ಹೊಂದಿದ ಸೈನ್ಯವು ಅನೇಕ ವಿಧವಾಗಿ ಇರುತ್ತವೆ. ಆ ರೀತಿ ಇದ್ದ ಸೈನ್ಯವಾದುದು ಇವಳಂತೆಯೇ ಮಧ್ಯ ಭಾಗದಲ್ಲಿ ಕಂಡು ಬರುತ್ತಿದ್ದು ಆನೆಯ ನಡೆಯಂತೆಯೂ ಒಂದರ ಮೇಲೊಂದು ಅಂಗಗಳನ್ನು ಒಪ್ಪವಾಗಿ ಇಟ್ಟಿದ್ದರಿಂದ ಅದ್ಭುತ ವಾದ ಸೇನೆಯ ಪಡೆಯಂತೆ ಕಾಣುತ್ತಿತ್ತು. ಇವಳನ್ನು ಹೀಗೆ ಮಾಡಿ ಮನ್ಮಥನು ತನ್ನನ್ನು ಜಯಿಸಲು ಸಫಲನಾದನು ಎಂದು ಶ್ರೀಕೃಷ್ಣನು ಭಾವಿಸಿದನು.

ಅವಳ ನಡಿಗೆಯು ಬಹಳ ಲಯಬದ್ಧವಾಗಿ ಇದ್ದು ಎಲ್ಲರನ್ನೂ ಆಕರ್ಷಿಸುತ್ತಿತ್ತು. ಇಷ್ಟು ಸುಂದರಿಯಾಗಿರುವುದರಿಂದಲೇ ಇವಳಿಗೆ ನಾನು ವಶನಾಗಿದ್ದೇನೆ. ಈಗ ನಾನು ಮನ್ಮಥನಿಗೆ ಸೋತಿದ್ದೇನೆ ಎಂದು ಸಾಕ್ಷಾತ್ ಮನ್ಮಥಮನ್ಮಥನಾದ ಸ್ವಾಮಿಯು ಭಾವಿಸಿ, ಒಳಗೊಳಗೇ ಆನಂದಿಸಿದನು.

ಸೇನೆಯ ನಡೆಯು ಕ್ರಮಬದ್ಧವಾಗಿರುತ್ತದೆ. ಅದೇ ರೀತಿ ಇವಳ ನಡೆಯೂ ಸಹ. ಅವಳ ಆ ನಡೆಯೇ ಶ್ರೀಕೃಷ್ಣನನ್ನು ಆಕರ್ಷಿಸಿತು.

ಸ ಚಂದ್ರಿಕಾಂ ಚಂದ್ರ ಇವಾಭಿಯಾತಾಶ್ಚಂದ್ರಾನನಾಂ ಯಾದವ ವಂಶಚಂದ್ರಃ।
ನಿರ್ವೇಶನೀಯಃ ಸ ವಿಶೇಷಮಾಸೀತ್ ನೆದೀಯಸಾಂ ನೇತ್ರಚಕೋರ ವೃಂದೈಃ ॥೧೯॥

ಯದು ವಂಶ ಚಂದ್ರನಾದ ಶ್ರೀಕೃಷ್ಣನು ಚಂದ್ರಮುಖಿಯಾದ ರುಕ್ಮಿಣಿಯನ್ನು ನೋಡಿ ಚಂದ್ರನು ಬೆಳದಿಂಗಳ ಬಣ್ಣವನ್ನು ಹೊಂದಿರುವ ಸಮಯದಲ್ಲಿ ಚಕೋರ ಪಕ್ಷಿಗಳು ಸಮೂಹ ಸಮೂಹವಾಗಿ ಚಂದ್ರನನ್ನು ನೋಡಿ ಸಂತೋಷಿಸುವಂತೆ ವಿಶೇಷವಾಗಿ ಆನಂದದಿಂದ ಅನುಭವಿಸುತ್ತಿದ್ದನು.

ರುಕ್ಮಿಣಿಯನ್ನು ಎಷ್ಟು ನೋಡಿದರೂ ಭಕ್ತರಿಗೆ ತೃಪ್ತಿಯಿಲ್ಲ. ಭಗವಂತನಿಗೆ ''ಆರಾವಮುದನ್'' ಎಂದು ಹೆಸರು. ಅವನನ್ನು ಎಷ್ಟು ನೋಡಿದರೂ ಶ್ರೀಕೃಷ್ಣನಿಗೆ ತೃಪ್ತಿಯಾಗುವುದಿಲ್ಲ. ಅದೇ ರೀತಿ ರುಕ್ಮಿಣಿಯ ಸೌಂದರ್ಯವನ್ನು ಎಷ್ಟು ಆಸ್ವಾದಿಸಿದರೂ ಆ ಕಾಮಿಯಾದ ಶ್ರೀಕೃಷ್ಣನಿಗೆ ತೃಪ್ತಿಯಿಲ್ಲ. ಅವಳನ್ನು ಯಾವಾಗ ಸೇರುವೆನೋ ಎಂದು ಕಾತುರದಿಂದ ಕಾಯುತ್ತಿದ್ದನು. ಇಬ್ಬರೂ ಚಂದ್ರಮುಖಿಗಳು.

ಅಹಂ ತ್ವಯಾ ದೂತ ಮುಖೇನ ದೂರಾತ್ ಸಾಧ್ವ್ಯಾ ಸಮಾಹೂತ ಇಹೋಪಯಾತಃ।
ಮಾತೇ ಭಯಂ ಭೂದಿತಿ ಮಂಜುಭಾಷಿ ತಾಮಗ್ರಹೀ ದಗ್ರಕರೇ ಮುಕುಂದಃ ॥೨೦॥

ಮುಕುಂದನು ತನ್ನ ಕೈಯ್ಯಲ್ಲಿ ಅವಳನ್ನು, ಪತಿವ್ರತೆಯಾದ ನೀನು ದೂತರುಗಳ ಮೂಲಕ, ದೂರದಲ್ಲಿ ನಿಂತು ತನ್ನನ್ನು ಕರೆದಿದ್ದಕ್ಕೆ ಈಗ ಇಲ್ಲಿಗೆ ಬಂದು ಸೇರಿದ್ದೇನೆ. ನಿನಗೆ ಆಶ್ಚರ್ಯ ಬೇಡ ಎಂದು ಮಧುರವಾಗಿ ಮಾತನಾಡಿಕೊಂಡೇ ಹಿಡಿದುಕೊಂಡನು.

ರುಕ್ಮಿಣಿಯ ದೂತರ ಮೂಲಕ ಪತ್ರ ಕಳುಹಿಸಿ, ''ನೀನು ಬಂದು ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಬೇಕು'' ಎಂದು ಸಮಾಚಾರ ಕಳಿಸಿದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ಇಲ್ಲಿ ನೀನೇನೂ ಭಯಪಡಬೇಕಿಲ್ಲ ಎಂದು ಅವಳಿಗೆ ಅಭಯ ನೀಡುವಂತೆ ಅವಳ ಮೃದುವಾದ ಕೈಗಳನ್ನು ಹಿಡಿದುಕೊಂಡನು ಸ್ವಾಮಿ.

ಪ್ರಿಯೇಣ ಸಾ ತೇನ ಗೃಹೀತ ಹಸ್ತಾ ತದ್ವಕ್ತ್ರ ದಿವ್ಯಾಂಬುಜ ಷಟ್ಪದೇನ।
ವಿಲೋಚನೇನ ವ್ಯವ್ಯಣೋತ್ ಸಖೀಭ್ಯಃ ಕೃತಾರ್ಥತಾಂ ಕ್ಷೀಬ ದಶೋಲ್ಬಣೇನ॥೨೦॥

ಅವಳ ದಿವ್ಯವಾದ ವದನಾರವಿಂದಕ್ಕೆ ಒಂದು ದುಂಬಿಯಂತೆ ಇರುವ ಆ ಪ್ರೇಮಿಯು ಕೈ ಹಿಡಿಯಲು, ಅವಳೂ ಅವನ ಮುಖಾರವಿಂದಕ್ಕೆ ಒಂದು ದುಂಬಿಯಾಗಿ ಆನಂದ ಮದ ವನ್ನು ಹೊಂದಿರುವ ತನ್ನ ಕಣ್ಣಿನಿಂದ ಸ್ನೇಹಿತೆಯರೊಡನೆ ತನ್ನ ಮನೋರಥವು ಪೂರ್ಣ ವಾಯಿತೆಂದು ತಿಳಿಸಿದಳು.

ಅವರಿಬ್ಬರೂ ಪರಸ್ಪರಾವಲೋಕನದಿಂದ ತಮ್ಮ ತಮ್ಮ ಮನದ ಇಂಗಿತಗಳನ್ನು ವ್ಯಕ್ತಪಡಿಸಿದರು. ಇವಳ ಮುಖಕ್ಕೆ ಅವನು ದುಂಬಿಯಂತೆ, ಅವನ ಮುಖಕ್ಕೆ ಇವಳು ದುಂಬಿಯಂತೆ (ಇಬ್ಬರ ಮುಖವೂ ಕಮಲದಂತೆ ಇರುವುದರಿಂದ) ಪರಸ್ಪರ ಮಧುವನ್ನು ಆಘ್ರಾಣಿಸಿದರು.

ಪ್ರಾಚೋಽವತಾರಾನ್ ಅತಿಶಯ್ಯ ಭೂಮ್ನಾ ಸಾ ರುಕ್ಮಿಣೀ ತೇನ ವೃತಾ ಚಕಾಶೇ।
ತಸ್ಯೈವ ರೂಪಾಂತರ ದೂರವೃತ್ತಿಃ ಕಂದರ್ಪ ಜನ್ಮಾನುಗುಣೇವ ಕಾಂತಿಃ ॥೨೨॥

ಶ್ರೀಕೃಷ್ಣನಿಂದ ವರಿಸಲ್ಪಟ್ಟ ರುಕ್ಮಿಣಿಯು ಹಿರಿಮೆಯಿಂದ ಇದಕ್ಕೆ ಮುಂಚಿನ ಅವತಾರ ಗಳಿಗಿಂತ ಇನ್ನೂ ಮೇಲಾಗಿ ಬೆಳಗಿದಳು. ಅದಕ್ಕೆ ಅವಳ ದೇಹ ಕಾಂತಿಯೇ ದೃಷ್ಟಾಂತವು. ಅದು ಹಿಂದಿನ ಅವತಾರಗಳಲ್ಲಿ ಹೊಂದಲು ಸಾಧ್ಯವಾಗಿ ಮನ್ಮಥನ ಜನ್ಮಕ್ಕೆ ಕಾರಣವಾಗಿತ್ತು.

ಈಗ ರುಕ್ಮಿಣಿಯಾಗಿ ಅವತರಿಸಿರುವ ಲಕ್ಷ್ಮಿಯು ಹಿಂದಿನ ಇತರ ಅವತಾರಗಳಿಗಿಂತ ಹೆಚ್ಚಾಗಿ ಶೋಭಿಸಿದಳು. ಇದನ್ನು ಅವಳ ದೇಹಕಾಂತಿ ನೋಡಿಯೇ ತಿಳಿಯಬಹುದಿತ್ತು. ಈ ಜನ್ಮದಲ್ಲಿ ಮನ್ಮಥನೇ ಅವಳಲ್ಲಿ ಆವಿರ್ಭವಿಸಿದಂತಿತ್ತು.

ಮಲ್ಲೀ ವಿಕಾಸೋಜ್ವಲ ಮಂದಹಾಸಾ ರೋಮೋದ್ಗಮೈರಾಹಿತ ಕೋರಕ ಶ್ರೀಃ।
ಸಮೇಯುಷೀ ಸಂ ದದೃಶೇ ತದಾಸಾ ವಸಂತ ಲಕ್ಷ್ಮೀರಿವ ಮಾಧವೇನ ॥೨೩॥

ಅವಳ ಮುಗುಳ್ನಗೆಯು ಮಲ್ಲಿಗೆ ಹೂವಿನ ಅರಳುವಿಕೆಯಂತೆ ಇತ್ತು. ದೇಹದಲ್ಲಿ ಕೂದಲಿನ ಕುಚ್ಚುಗಳು ಚಿಕ್ಕಚಿಕ್ಕದಾಗಿ ಸುಂದರವಾಗಿದ್ದವು. ಮಾಧವನೊಡನೆ ಸೇರಿ ಒಂದಾದವಳು ಮಾಧವನೆಂಬ ವೈಶಾಖ ಮಾಸದಲ್ಲೂ ಸೇರಿದ ವಸಂತ ಋತುವಿನ ಲಕ್ಷ್ಮಿಯಂತೆ ಇದ್ದಳು.

ಅವಳ ಮತ್ತು ಶ್ರೀಕೃಷ್ಣನ ಪರಸ್ಪರ ಹೊಂದಾಣಿಕೆಯನ್ನು ಮತ್ತೆಯೂ ವರ್ಣಿಸಲಾಗಿದೆ. ವೈಶಾಖ ಮಾಸದಲ್ಲಿ ಯಾವ ರೀತಿ ವಸಂತ ಋತು ಸೇರಿದರೆ, ಆಹ್ಲಾದಕರವಾಗಿರುತ್ತದೆಯೋ ಆದರಂತೆ ಅವರಿಬ್ಬರ ಜೋಡಿ ಇತ್ತು.

ಅಧರ್ಮಜ ಸ್ವೇದ ಕಣಾವಕೀರ್ಣಾ ಮಭೀತಿಜಂ ವೇಪಥು ಮುದ್ವಹಂತೀಂ।
ಅನುಷ್ಣಬಾಷ್ಪೋದಯ ಮಂಥರಾಕ್ಷೀ ವಿಲೋಕ್ಯ ದೇವೀಂ ವಿಭುರಭ್ಯನಂದತ್ ॥೨೪॥

ಕೊಡೆಯೆಂಬ ಕಾರಣವನ್ನಿಟ್ಟು ಸೇರಿದ ಬೆವರು ಹನಿಯ ಬೊಟ್ಟುಗಳು ಆಶ್ಚರ್ಯದಿಂದ ಏರ್ಪಟ್ಟ ನಡುಕವೂ, ಉಷ್ಣವಾಗದೆ ತಣ್ಣಗಿನ ನೀರು ತುಂಬಿದ ಕಣ್ಣುಗಳನ್ನೂ ಹೊಂದಿರುವ ಅವಳನ್ನು ನೋಡಿ ಇದಕ್ಕೆ ತನ್ನ ಸೇರುವಿಕೆಯಿಂದ ಆಗಿರುವ ಸಂತೋಷವೇ ಕಾರಣವೆಂದು ಶ್ರೀಕೃಷ್ಣನು ಭಾವಿಸಿದನು.

ರುಕ್ಮಿಣಿಯ ಆನಂದ ಭಾಷ್ಪ ತುಂಬಿದ ಕಣ್ಣುಗಳನ್ನು ಶ್ರೀಕೃಷ್ಣನು ನೋಡಿ ತನ್ನ ಸಹವಾಸ ವನ್ನು ಅವಳು ಹೊಂದುತ್ತಿರುವುದೇ ಇದಕ್ಕೆ ಕಾರಣವೆಂದು ನಿಶ್ಚಯಿಸಿದನು.

ಹರಿಪ್ರಿಯಾಂ ಕೇಸರಿಣೀಮಿವೈನಾಂ ದೂರಾಸದಾಮನ್ಯ ನೃಪ ದ್ವಿಪೇಂದ್ರೈಃ।
ಸಖೀಜನಃ ಪ್ರೀತಮನಾ ನಿಧದ್ಯೌ ಯಯೌ ಚ ಖೇದಂ ನಿಜವಿಪ್ರಯೋಗಾತ್॥೨೫॥

ರುಕ್ಮಿಣಿಯು ಹರಿಪ್ರಿಯೆಯಾದುದರಿಂದ ಒಂದು ಹೆಣ್ಣು ಸಿಂಹವು (ಹರಿಯೆಂಬ ಗಂಡು ಸಿಂಹಕ್ಕೆ ಪ್ರಿಯವಾದ) ಆದ್ದರಿಂದ ಮದ ಹೊಂದಿದ ಆನೆಗಳಂತೆ ಇದ್ದ ಅರಸರುಗಳು ಹೊಂದಲಾರದವಳು ಎಂಬುದನ್ನು ಕಂಡು ಸ್ನೇಹಿತೆಯರು ಸಂತೋಷದಿಂದಿದ್ದರು. ತಮಗೆ ಅವಳನ್ನು ಬಿಟ್ಟಿರುವುದರಿಂದ ಉಂಟಾಗುವ ದುಃಖವು ಯಾವ ರೀತಿಯುಳ್ಳದ್ದು ಎಂದು ಒಡನೆಯೇ ಚಿಂತಿಸುತ್ತಿದ್ದರು.

ಶ್ರೀಕೃಷ್ಣನು ಗಂಡು ಸಿಂಹವಾಗಿ, ರುಕ್ಮಿಣಿ ಎಂಬ ಹೆಣ್ಣು ಸಿಂಹವನ್ನು ಪಡೆದಿದ್ದಾನೆ. ಅಲ್ಲಿ ನೆರೆದಿರುವ ಇತರ ಅರಸರೆಲ್ಲರೂ ಆನೆಗಳಂತಿದ್ದರೂ, ಆನೆಗಳು ಹೇಗೆ ಸಿಂಹವನ್ನು ಕಂಡರೆ ಭಯಪಡುವವೋ ಅದೇ ರೀತಿ ಆ ಅರಸರೆಲ್ಲರೂ ಶ್ರೀಕೃಷ್ಣನು ರುಕ್ಮಿಣಿಯನ್ನು ಕರೆದೊಯ್ಯುವುದನ್ನು ನೋಡುತ್ತಾ ಸುಮ್ಮನಿದ್ದರು. ಸಖಿಯರೆಲ್ಲರೂ ಇನ್ನು ಮೇಲೆ ರುಕ್ಮಿಣಿಯು ತಮ್ಮ ಬಳಿ ಇರುವುದಿಲ್ಲವಲ್ಲ ಎಂದು ದುಃಖಪಟ್ಟರು.

ಮಿಥೋ ಗುಣೈಸ್ತನ್ಮಿಥುನಂ ನಿಬದ್ಧಂ ವಿಯೋಗ ವೈದೇಶಿಕ ಸಂಪ್ರಯೋಗಂ
ಅಜಾಯತಾನ್ಯೋನ್ಯ ನಿಲೀನ ಭಾವಂ ಸಖೀ ದೃಶಾಂ ಸಾದರ ದರ್ಶನೀಯಂ॥೨೬॥

ಆ ಮಿಥುನವು ಕಲ್ಯಾಣ ಗುಣಗಳು ಎಂಬ ಹಗ್ಗಗಳಿಂದ ಒಂದರಲ್ಲಿ ಒಂದು ಅಗಲುವಿಕೆ ಎಂಬ ವಸ್ತುವು ತಮ್ಮ ದೇಶದಲ್ಲಿಯೇ ಇಲ್ಲವೆಂಬುವ ಹಾಗೆ ಕಟ್ಟಲ್ಪಟ್ಟು ಮನಸ್ಸು ಬೇರೆ ವಿಷಯದೆಡೆಗೆ ಹೋಗದೆ, ಪರಸ್ಪರ ಲಯ ಹೊಂದಿರುವುದರಿಂದ ಅವರುಗಳ ಸ್ನೇಹಿತೆಯರು ತಮ್ಮ ಉತ್ಸಾಹಪೂರಿತ ಕಣ್ಣುಗಳಿಂದ ನೋಡಿದವರಾದರು.

ಶ್ರೀಕೃಷ್ಣ ರುಕ್ಮಿಣಿಯರ ಮಿಲನವು ಎಂದೆಂದಿಗೂ ಬೇರ್ಪಡದೆ ಇರುವಂಥದ್ದು. ಇಬ್ಬರೂ ಪರಸ್ಪರ ಸೌಂದರ್ಯಾದಿ ಸಕಲ ಕಲ್ಯಾಣ ಗುಣಗಳಿಂದ ಬಂಧಿತರಾದವರು. ಅವರ

ಮನಸ್ಸುಗಳು ಒಬ್ಬರನ್ನೊಬ್ಬರು ಬಿಟ್ಟು ಇರದೆ, ಬೇರೆ ವಿಷಯಗಳ ಬಗ್ಗೆ ಚಿಂತಿಸುತ್ತಲೇ ಇರಲಿಲ್ಲ. ಆ ಒಂದು ಅಪೂರ್ವ ಮಿಲನವನ್ನು ರುಕ್ಮಿಣಿಯ ಸ್ನೇಹಿತೆಯರೆಲ್ಲರೂ ಆನಂದೋತ್ಸಾಹಗಳಿಂದ ಕಂಡು ಆನಂದಿಸಿದರು.

ಜಗತ್ರಯಾರ್ಥಿ ಪ್ರಶಮಾಯ ಜಾತಾಂ ವಿಹಾರ ಸಂಕ್ಷೋಭಿತ ವೈರಿ ಸಿಂಧುಃ।
ದೇವೇಷು ಪಶ್ಯಸ್ಸ್ವಿಹ ಪೂರ್ವಮೇನಾಂ ಜಗ್ರಾಹ ತಾಂ ಜಾಗ್ರತಿ ರಾಜಲೋಕೇ॥೨೭॥

ಮೂರು ಜಗತ್ತೂ ಮಂದರಪರ್ವತವನ್ನು ಇಟ್ಟು ಸಮುದ್ರವನ್ನು ಕಡೆದಾಗ, ಮಹಾಲಕ್ಷ್ಮಿಯನ್ನು ಈ ಹಿಂದೆ ದೇವತೆಗಳೆಲ್ಲರೂ ನೋಡಿರುವಾಗ ಶ್ರೀಕೃಷ್ಣನು ತಾನೇ ಹೊಂದಿದ ಹಾಗೆ ಇಲ್ಲಿ ವಿನೋದವಾಗಿಯೇ ಶತ್ರು ಸೇನೆಯೆಂಬ ಸಮುದ್ರವನ್ನು ಕಲಕಿ, ಮೂರು ಲೋಕದಲ್ಲೂ ಮೇಲಾದ ಇವಳನ್ನು ಇತರ ಅರಸರೆಲ್ಲರೂ ನೋಡುತ್ತಿರುವ ಹಾಗೆ ವಶಮಾಡಿಕೊಂಡನು.

ಹಿಂದೆ ಸಮುದ್ರ ಮಥನ ಕಾಲದಲ್ಲಿ ಉದ್ಭವಿಸಿದ ಮಹಾಲಕ್ಷ್ಮಿಯನ್ನು ಯಾವ ರೀತಿ ಶ್ರೀಮನ್ಮಹಾವಿಷ್ಣುವು ಹೊಂದಿದನೋ ಅದೇ ರೀತಿ ಶತ್ರುಗಳ ಸೈನ್ಯವೆಂಬ ಸಮುದ್ರವನ್ನು ಮಥಿಸಿ, ಈಗ (ಲಕ್ಷ್ಮಿಯ ಅವತಾರವಾದ) ರುಕ್ಮಿಣಿಯನ್ನು ಶ್ರೀಮನ್ಮಹಾವಿಷ್ಣುವಿನ ಅವತಾರವಾದ ಶ್ರೀಕೃಷ್ಣನು ಸುಲಭವಾಗಿ ವಶಪಡಿಸಿಕೊಂಡನು.

ಸ ಪುಷ್ಪಕಂ ರಾಮ ಇವ ಪ್ರಿಯಾಂ ಸ್ವಾಮುತ್ತಾರಿತಾಂ ಶತ್ರು ಭಯಾದುದೀರ್ಣಾತ್।
ಮನೋಜವಂ ಸತ್ಯ ಮನೋರಥಸ್ತಾಮಾರೋಪಯಾಮಾಸ ರಥಂ ರಥಾಂಗೀ ॥೨೮॥

ಶ್ರೀರಾಮಚಂದ್ರನು ರಾವಣನ ಮೂಲಕವಾಗಿ, ಸೆರೆಯಲ್ಲಿದ್ದ ಸೀತಾ ದೇವಿಯನ್ನು ಬಿಡಿಸಿ, ಮನೋರಥ ಪೂರ್ತಿಯಾಗಿ ಅವಳನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಬಂದ ಹಾಗೆ, ಶಿಶುಪಾಲನೇ ಮೊದಲಾದ ಶತ್ರುಗಳ ಬಳಿಯಿಂದ ಯಾವ ಅಂಜಿಕೆಯೂ ಇಲ್ಲದೆ, ರುಕ್ಮಿಣಿ ದೇವಿಯನ್ನು ತನ್ನ ರಥದ ಮೇಲೆ ಚಕ್ರಧರನಾದ ಶ್ರೀಕೃಷ್ಣನು ಏರಿಸಿಕೊಂಡನು.

ಈ ಹಿಂದಿನ ಅವತಾರದಲ್ಲಿ ಶ್ರೀರಾಮನಾಗಿದ್ದಾಗ ರಾವಣನನ್ನು ಜಯಿಸಿ, ಸೀತೆಯನ್ನು ಸೆರೆಯಿಂದ ಬಿಡಿಸಿ, ಅವಳನ್ನು ತನ್ನ ಬಳಿಗೆ ಕರೆದುಕೊಂಡ ಹಾಗೆ ಈಗ ಶ್ರೀಕೃಷ್ಣನಾಗಿ ಬಂದು ಶತ್ರುಗಳ ಮಧ್ಯದಿಂದ ರುಕ್ಮಿಣಿಯನ್ನು ಬಿಡಿಸಿಕೊಂಡು, ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ದ್ವಾರಕಾ ನಗರಿಯತ್ತ ದೌಡಾಯಿಸಿದನು.

ಸಾ ಚಾಮರೌಘೈ ರುಪಚರ್ಯಮಾಣಾ ವಾತಾವಧೂತೈರಿವ ಕಾಶಜಾಲೈಃ
ರರಾಜ ನಾಥೇನ ರಥೋದಯಾದ್ರೌ ಚಂದ್ರೇಣ ಪೂರ್ಣೇನ ಶರನ್ನಿಶೇವ ॥೨೯॥

ರುಕ್ಮಿಣಿಯಾದವಳು, ರಥದಲ್ಲಿ ನಾಥನೊಡನೆ ಸೇರಿ, ದಾಸಿಗಳಿಂದ ಚಾಮರ ಸೇವೆ ಪಡೆದಳು. ಶರತ್ಕಾಲದ ಹೂಗಳ ಮೇಲಿನ ಗಾಳಿಯ ಬೀಸುವಿಕೆಯಿಂದ, ಪೂರ್ಣಚಂದ್ರನೊಡನೆ ಸೇರಿರುವ ಶರತ್ಕಾಲದ ರಾತ್ರಿಯಂತೆ ಅಪೂರ್ವವಾಗಿ ಬೆಳಗಿದಳು.

ರುಕ್ಮಿಣಿಯು ತನ್ನ ಮನದಾಸೆಯಾದ ಶ್ರೀಕೃಷ್ಣನ ಸೇರುವಿಕೆ ಎಂಬುದನ್ನು ಪಡೆದು, ಆ ಶ್ರೀಕೃಷ್ಣನ ಮೇಲೆ ಅಪೂರ್ವವಾದ ಕಾಂತಿಯಿಂದ ಚಂದ್ರನೊಡನೆ ಸೇರಿದ ಶರತ್ಕಾಲದ ರಾತ್ರಿಯಂತೆ ಶೋಭಿಸಿದಳು. ಅವಳನ್ನು ಅವಳ ಸಖೀ ಜನರು ಉಪಚರಿಸಿದರು.

ಪರಸ್ಪರ ಪ್ರಾಪ್ತ ಗುಣೇನ ಭಾಸಾ ಬರ್ಹಾವೃತಂ ವ್ಯೋಮ ವಿಭಾವಯಂತೌ।
ವಿರೇಜತುಸ್ತುಂಗ ರಥಾಶ್ರಯೌ ತೌ ವಿದ್ಯುತ್ಪಯೋದಾವಿವ ಮಂದರಸ್ಥೌ ॥೩೦॥

ಒಂದರ ಹಿಂದೆ ಮತ್ತೊಂದು ಪರಸ್ಪರ ಸೇರಿರುವ ಕಾಂತಿಗಳಿಂದ ಆಕಾರವನ್ನು ತುಂಬಿರುವ ನವಿಲುಗರಿಗಳಿಂದ ಕೂಡಿರುವ, ಅವರಿಬ್ಬರೂ ಉತ್ತಮವಾದ ರಥದಲ್ಲಿ ಕುಳಿತು ಮಂಥರ ಬೆಟ್ಟದಲ್ಲಿ ಹೊಳೆಯುವ ಮಿಂಚುಗಳು ಮೇಘಗಳಂತೆ ಕಾಣುತ್ತಿದ್ದರು.

ಅವರಿಬ್ಬರೂ ಉತ್ತಮವಾದ ರಥದಲ್ಲಿ ಕುಳಿತಿರುವುದನ್ನು ನೋಡುವುದೇ ಒಂದು ಆನಂದಮಯವಾದ ದೃಶ್ಯವಾಗಿತ್ತು. ವಿದರ್ಭ ದೇಶದ ಜನರು ಆ ಜೋಡಿಯನ್ನು ನೋಡಿ ತಮ್ಮ ಜೀವನ ಸಾರ್ಥಕವಾಯಿತೆಂದು ಭಾವಿಸಿದರು.

ಪ್ರಭೇವ ದೇವೇನ ತಮೋಪಹೇನ ಪ್ರತ್ಯಗ್ ದಿಶಂ ತೇನ ಸಹ ಪ್ರಯಾಂತಿ।
ನಿತ್ಯಾನಪಾಯಿತ್ವಮಜಾನತೀನಾಂ ಸತ್ಯಾಪಯಾಮಾಸ ನಿಜಂ ಪ್ರಜಾನಾಂ ॥೩೧॥

ಕತ್ತಲನ್ನು ಕಳೆಯುವ ಸೂರ್ಯನಿಗೆ ಕಾಂತಿಯಂತೆ, ಅಜ್ಞಾನವನ್ನು ಹೋಗಲಾಡಿಸುವ ಅಚ್ಯುತನನ್ನು ಬಿಡದೆ, ಉತ್ತರ ದಿಕ್ಕಿಗೆ ಅವನೊಡನೆ ಹೋಗುವವಳಾಗಿ, ವಿಷ್ಣುವನ್ನು ಬಿಟ್ಟು ಹೋಗದಿರುವ ತನ್ನ ಮಹಿಮೆಯನ್ನು ಅರಿಯದ ಪ್ರಜೆಗಳಿಗೆ ಅದನ್ನು ತಿಳಿಸಿದವಳಾದಳು. ಶ್ರೀಕೃಷ್ಣನು ಕುಂಡಿನಪುರದಿಂದ ಉತ್ತರದಲ್ಲಿರುವ ದ್ವಾರಕೆಗೆ ಅವಳನ್ನು ಕರೆದುಕೊಂಡು ಹೊರಟನು.

ಶ್ರೀಕೃಷ್ಣನು ರುಕ್ಮಿಣಿಯನ್ನು ಅಪಹರಿಸಿ ರಥದಲ್ಲಿ ಕರೆದುಕೊಂಡು ಕುಂಡಿನ ಪುರಕ್ಕೆ ಉತ್ತರದಲ್ಲಿರುವ ದ್ವಾರಕೆಗೆ ಹೋದನು. ಲಕ್ಷ್ಮಿಯು ಯಾವಾಗಲೂ ವಿಷ್ಣುವನ್ನು ಬಿಟ್ಟಿರುವುದಿಲ್ಲ. ಅದೇ ರೀತಿ ರುಕ್ಮಿಣಿಯೂ ಶ್ರೀಕೃಷ್ಣನನ್ನು ಅನುಸರಿಸಿ ತನ್ನವರೆಲ್ಲರನ್ನೂ ಬಿಟ್ಟು ದ್ವಾರಕೆಗೆ ಹೊರಟಳು.

ತಾಮುದ್ವಹಂ ಸ್ತಾಮರಸಾಯತಾಕ್ಷೋ ರತ್ನೌಘ ದೀಪ್ತೇನ ರಥೇನ ದೇವೀಂ।
ಆತ್ಮಾನ ಮೇವಾರ್ಯ ಮಮಂಡಲಸ್ಥಂ ವಿದ್ಯಾಸಖಂ ವ್ಯಂಜಯತಿ ಸ್ಮವೀರಃ ॥೩೨॥

ಕೆಂದಾವರೆಯಂಥ ಕಣ್ಣುಗಳುಳ್ಳ ಶ್ರೀಕೃಷ್ಣನು ರತ್ನಗಳ ಕಾಂತಿಯನ್ನು ಪ್ರಸರಿಸುವ ರಥದಲ್ಲಿ ಅವಳನ್ನು ಕುಳ್ಳಿರಿಸಿಕೊಂಡು ಹೋಗುವವನಾಗಿ, ಸೂರ್ಯಮಂಡಲದಲ್ಲಿ ವೇದ ವಿದ್ಯೆಯೊಡನೆ ಸೇರಿ, ಬೆಳಗುವ ತನ್ನನ್ನೇ ಪ್ರಕಾಶಪಡಿಸಿದನು. ರಥವು ರತ್ನಗಳಿಂದ ಸೂರ್ಯ ಮಂಡಲದ ಹಾಗೆ ತೇಜೋಮಯವಾಗಿತ್ತು.

ಅವರು ಹೋಗುತ್ತಿದ್ದ ರಥವು ಅದ್ಭುತವಾಗಿ ಪ್ರಕಾಶಿಸುತ್ತಿತ್ತು. "ಯ ಏಷೋಽಂತರಾದಿತ್ಯೇ ಮೇವ ಅಕ್ಷಿಣಿ, ಪುರುಷೋ ದೃಶ್ಯತೆ, ಹಿರಣ್ಯ ಶ್ಮಶ್ರು, ಹಿರಣ್ಯ ಕೇಶಃ" ಎಂಬ ಉಪನಿಷದ್ವಾಕ್ಯದಂತೆ ಶ್ರೀಕೃಷ್ಣನು ಆ ದಿವ್ಯವಾದ ರಥದಲ್ಲಿ ಸೂರ್ಯನಂತೆ ಬೆಳಗುತ್ತಾ ಲೋಕವನ್ನೆಲ್ಲಾ ಬೆಳಗಿದನು. ರಥದ ಮಧ್ಯದಲ್ಲಿದಲ್ಲಿದ್ದ ಶ್ರೀಕೃಷ್ಣನ ದಿವ್ಯ ಮಂಗಳ ವಿಗ್ರಹವು ಸೂರ್ಯಮಂಡಲದ ಮಧ್ಯೆ ಇರುವವನೂ ಪರಮಾತ್ಮನೇ ಎಂದು ತೋರುತ್ತಿತ್ತು.

ಅತೀತ ದರ್ಶಾಮಿವ ಚಂದ್ರಲೇಖಾಂ ಶಾಂತೋಪರಾಧಾಮಿವ ಶಾರದೀಂ ದ್ಯಾಂ।
ಅಮಂಸ್ತ ನಿರ್ವಿಘ್ನ ಫಲಾಮಿವೇಚ್ಛಾಂ ಶೋಕತ್ಯಜಂ ಶೂರ ಕುಲೇಶ್ವರಸ್ತಾಂ ॥೨೩॥

ಶಿಶುಪಾಲನಿಗೆ ತನ್ನನ್ನು ಕೊಡಲು ಪಾಡುಪಡುತ್ತಿರುವವರು ಎಂದು ಶೋಕದಲ್ಲಿ ಮುಳುಗಿದ ರುಕ್ಮಿಣಿಯು ಆ ಶೋಕದಿಂದ ಬಿಡಲ್ಪಟ್ಟವಳಾಗಿ ಅಮಾವಾಸ್ಯೆಯನ್ನು ದಾಟಿದ ಚಂದ್ರಕಲೆಯಂತೆ ಆದಳು. ಮೇಘದ ಮುಸುಕಿನಿಂದ ಹೊರ ಬಂದು ಸ್ವಚ್ಛವಾದ ಆಕಾಶ ದಂತೆಯೂ ತಡೆಯಿಲ್ಲದ ಫಲ ಹೊಂದಿದ ಆಸೆಯಂತೆಯೂ ಅವಳನ್ನು ಶ್ರೀಕೃಷ್ಣನು ಭಾವಿಸಿದನು.

ತನ್ನ ತಂದೆ, ಅಣ್ಣ ಇವರೆಲ್ಲರೂ ತನ್ನನ್ನು ದುಷ್ಟನಾದ ಶಿಶುಪಾಲನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿದಾಗ, ಅತ್ಯಂತ ಖಿನ್ನಳಾಗಿದ್ದ ರುಕ್ಮಿಣಿಯು ಈಗ ಶ್ರೀಕೃಷ್ಣನು ಬಂದು ತನ್ನ ಮನದಾಸೆಯಂತೆ ಅವಳನ್ನು ಕರೆದುಕೊಂಡು ಹೋಗುತ್ತಿದ್ದಾಗ ಅಮಾವಾಸ್ಯೆ ಕಳೆದ ಚಂದ್ರನಂತೆ ಆ ಚಂದ್ರಮುಖಿ ಪ್ರಕಾಶಿಸಿದಳು.

ಸಮೇತ್ಯ ಸಿಂಹೀಮಿವ ತಾಮನನ್ಯಾಂ ಯಾನೋದ್ಯತಂ ಯಾದವ ಪಂಚವಕ್ತ್ರಂ।
ಆಘುಷ್ಯ ಗೋಮಾಯುರಿವಾಮಿಷಾರ್ಥೀ
ಚೈದ್ಯಃ ಕ್ರುಧಾ ದೀಪ್ತ ಮುಖೋಽನ್ವಧಾವತ್ ॥೨೪॥

ಹೆಣ್ಣು ಸಿಂಹದಂತೆ ಬೇರೆ ಉದ್ದೇಶವಿಲ್ಲದೆ ಇರುವವರನ್ನು ಹೊಂದಿ ಹೊರಟ ಯಾದವ ಸಿಂಹವನ್ನು ನೋಡಿ ನರಿಯಂತೆ ಶಿಶುಪಾಲನು ಕ್ರೋಧಾಗ್ನಿ ಸೂಸುವ ಮುಖ ದೊಡನೆ ಕೂಗುತ್ತಾ ಹಿಂದೆ ಓಡುತ್ತಾ ಬಂದನು. (ನರಿಯು ಸಿಂಹವನ್ನು ಹಿಂಬಾಲಿಸುವುದು ಮಾಂಸದ ಆಸೆಗಾಗಿ)

ನರಿಯು ಮಾಂಸದ ಆಸೆಗಾಗಿ ಸಿಂಹದ ಹಿಂದೆ ಓಡಿ ಬರುವಂತೆ ರುಕ್ಮಿಣಿಯು ತನ್ನ ಕೈತಪ್ಪಿ ಹೋದುದಕ್ಕೆ ಕೋಪಗೊಂಡ ಶಿಶುಪಾಲನು ಶ್ರೀಕೃಷ್ಣನ ಹಿಂದೆ "ನಿಲ್ಲು ನಿಲ್ಲು" ಎಂದು ಕೂಗುತ್ತಾ ಓಡಿ ಬಂದನು.

ರುಕ್ಮೀ ಚ ತೂರ್ಣಂ ಪ್ರತಿಪನ್ನರೋಷಃ ಪುರೋಭವನ್ ಭೂಮಿ ಭೃತಾಂ ಸಖೀನಾಂ।
ಪರಾಭವಸ್ಯ ಪ್ರತಿಕಾರಮಿಚ್ಛನ್ ಜಗ್ರಾಹ ಪಾರ್ಷ್ಣಿಂ ಜಗದೇಕ ನೇತುಃ ॥೨೫॥

ರುಕ್ಮಿಯೆಂಬವನು ತನ್ನ ಇಷ್ಟಕ್ಕೆ ಭಂಗ ಬಂದದ್ದರಿಂದ ರೋಷ ಹೊಂದಿದವನಾಗಿ ತನ್ನಸ್ನೇಹಿತರುಗಳಾದ ಶಿಶುಪಾಲ, ಜರಾಸಂಧಾದಿಗಳಿಗೆ ಮುಂಚೆಯೇ ಪ್ರತಿಕಾರ ಮಾಡಲು ಬಯಸಿ, ಜಗತ್ತನ್ನೇ ನಿಯಮಿಸುವ ಭಗವಂತನನ್ನು ಹಿಡಿಯಲು ಪ್ರಯತ್ನಿಸಿದನು.

ರುಕ್ಮಿಣಿಯ ಅಣ್ಣನಾದ ರುಕ್ಮಿಯು, ತಂಗಿಯನ್ನು ಶಿಶುಪಾಲನಿಗೆ ಕೊಡಲು ಇಚ್ಛಿಸಿದನು. ಆದರೆ ಈಗ ಅದು ನೆರವೇರಲಿಲ್ಲವಾದ್ದರಿಂದ ಶ್ರೀಕೃಷ್ಣನನ್ನು ಶಿಕ್ಷಿಸಲು, ಎಲ್ಲರಿಗಿಂತ ತಾನೇ ಮುಂದು ಹೋಗಲು ಬಯಸಿ, ವೇಗವಾಗಿ ಶ್ರೀಕೃಷ್ಣನ ಹಿಂದೆ ಅಟ್ಟಿಸಿಕೊಂಡು ಬಂದನು. 'ಸರ್ವ ನಿಯಾಮಕನಾದ ಶ್ರೀಕೃಷ್ಣನನ್ನು ಯಾರೂ ಹಿಡಿಯಲು ಸಾಧ್ಯವಿಲ್ಲ' ಎಂದು ಅವನಿಗೆ ತಿಳಿಯದು.

ಜಿಘಾಂಸಿತೆ ಭ್ರಾತರಿ ಜಾತ ಖೇದೈಃ ಕಾಂತಾಭಿಲಾಷೈಃ ಕತಕೈರಿವಾಂಭಃ।
ಮನಃ ಪ್ರಪೇದೇ ಸಹಜಾಂ ಪ್ರಸತ್ತಿಂ ಸತ್ವಾಧಿಕಂ ಸಾತ್ವತ ವಂಶಗೋಪ್ತುಃ ॥೨೬॥

ಸಾತ್ವತ ವಂಶವೆಂಬ ಯದು ವಂಶದ ನಾಯಕನಾದ ಶ್ರೀಕೃಷ್ಣನ ಮನಸ್ಸು ಸತ್ವಗುಣ ತುಂಬಿರುವುದರಿಂದ, ಮೊದಲಲ್ಲಿ ಕೊಲ್ಲಬೇಕೆಂದು ಭಾವಿಸಿದ್ದರೂ, ಒಡಹುಟ್ಟಿದವರನ್ನು ಕೊಲ್ಲಲು ರುಕ್ಮಿಣಿಯು ದುಃಖವನ್ನು ತೋರ್ಪಡಿಸಿದ್ದರಿಂದ ತನ್ನ ಪ್ರೇಮಿಯ ಬಳಿ, ಕತಕ ಬೀಜದಿಂದ ತಿಳಿಯಾದ ಮನಸ್ಸಿನಂತೆ, ಶಾಂತಿಯನ್ನು ಹೊಂದಿತು.

ರುಕ್ಮಿಯನ್ನು ಕೊಲ್ಲಬೇಕೆಂದು ಶ್ರೀಕೃಷ್ಣನು ನಿಶ್ಚಯಿಸಿದ್ದನು. ಆದರೆ ರುಕ್ಮಿಣಿಯು, ತನ್ನ ಸಲುವಾಗಿ ತನ್ನಣ್ಣನನ್ನು ಕೊಲ್ಲಬಾರದೆಂದು ಪ್ರಾರ್ಥಿಸಿದ್ದರಿಂದ ಅವಳ ಪ್ರಾರ್ಥನೆಯನ್ನು ಮನ್ನಿಸಿ, ತನ್ನ ಮನಸ್ಸನ್ನು ಶಾಂತಗೊಳಿಸಿ, ಸುಮ್ಮನಾದನು ಸ್ವಾಮಿ.

ಸ ವೀಕ್ಷಮಾಣಃ ಸವಿಲಾಸ ನೇತ್ರಂ ವಲ್ಗುಸ್ಮಿತಂ ವಾಮದೃಶೋ ಮುಖಾಬ್ಜಂ।
ತದುಕ್ತಿಭಿಃ ಸ್ವಾದು ತಮಾಭಿರಾಸೀತ್ ಆಪ್ಯಾಯಿತೋ ನೂನ ಮನಾವಿಲಾಭಿಃ ॥೨೭॥

ಶ್ರೀಕೃಷ್ಣನು, ಕಣ್ಣಿನ ಸೌಂದರ್ಯದಿಂದ ಕೂಡಿದವಳಾದ ಆ ರುಕ್ಮಿಣಿಯ ಕಣ್ಣೋಟಗಳ ಬಗೆಯನ್ನೂ, ಮುಗುಳ್ನಗೆಯು ಸೇರಿದ ಅರಳಿದ ಮುಖವನ್ನು ನೋಡಿದವನಾಗಿ, ಅವಳ ಮಧುರವಾದ ಮಾತುಗಳಿಂದ ದೇಹದಲ್ಲಿ ಪುಷ್ಟಿಯನ್ನು ಪಡೆದನು.

ಅವನು ಅವಳ ಸರ್ವಾವಯವ ಸೌಂದರ್ಯದಿಂದಲೂ, ಅವಳ ಮಧುರವಾದ ಮಾತು ಗಳಿಂದಲೂ (ಮಧುರಾ ಮಧುರಾಲಾಪ) ಇನ್ನೂ ಹೆಚ್ಚಿನ ಯೌವನ ಪಡೆದವನಾಗಿ, ಪುಳಕಿತ ಗಾತ್ರನಾದನು. ಅವಳ ಕಣ್ಣೋಟಗಳೇ ಅವನಿಗೆ ಚೈತನ್ಯ ನೀಡುವ ಔಷಧದಂತಿತ್ತು.

ಅನುದ್ಧೃತಾಂ ವೈರಿ ಚಮೂಂ ಸ ವೀರೋ ಬಲೇನ ರುದ್ಧಾ ನಿಜಬಾಹುನೈವ।
ವಿನಿರ್ದಿಶನ್ ಮಾರ್ಗಭವಾನ್ ವಿಶೇಷಾನ್ ವಿಶ್ವಾಸಯಾಮಾಸ ವಿದರ್ಭಕನ್ಯಾಂ॥೩೮॥

ಆ ವೀರನು, ಹಿಂದೆ ಬಂದ ದೊಡ್ಡ ಸೈನ್ಯವನ್ನು ತನ್ನ ಕೈಯಿಂದಲೇ ನಿಗ್ರಹಿಸಿ, ಅಲ್ಲದೆ, ತನ್ನ ಸಹಾಯಕನಾದ ಬಲರಾಮನ ಮೇಲೂ ಯುದ್ಧಕ್ಕೆ ಬರದಂತೆ ದೂರ ಅಟ್ಟಿ, ವಿನೋದದಿಂದ ದಾರಿಯಲ್ಲಿ ದಾರಿಯಲ್ಲಿ ಕಾಣುವ ವಿಶೇಷಗಳನ್ನೆಲ್ಲಾ ವೈದರ್ಭಿಯಾದ ರುಕ್ಮಿಣಿಗೆ ತೋರಿಸುತ್ತಾ, ವಿವರಿಸುವವನಾಗಿ (ತನಗೆ ಇನ್ನು ಕೋಪವಿಲ್ಲವೆಂದು), ತನ್ನಲ್ಲಿ ವಿಶ್ವಾಸವನ್ನು ಹೊಂದುವಂತೆ ಮಾಡಿದನು.

ತನ್ನನ್ನು ಬೆನ್ನಟ್ಟಿ ಬಂದ ಆ ರಾಜನ ಸೈನ್ಯವನ್ನೆಲ್ಲಾ ತಾನೇ ನಿವಾರಿಸಿ, ಬಲರಾಮನಿಗೆ ಯಾವ ಶ್ರಮವನ್ನೂ ನೀಡದೆ, ಶ್ರೀರಾಮಚಂದ್ರನು ಅಂಕೆಯಿಂದ ಹಿಂತಿರುಗಿ ಪುಷ್ಪಕ ವಿಮಾನದಲ್ಲಿ ಬರುವಾಗ ಸೀತಾದೇವಿಗೆ ತನ್ನ ಪರಾಕ್ರಮದ ವಿವರಗಳನ್ನು ತಿಳಿಸಿದ ಹಾಗೆ, ರುಕ್ಮಿಣಿಯನ್ನು ದ್ವಾರಕೆಗೆ ಕರೆತರುವಾಗ, ದಾರಿಯಲ್ಲಿ ಕಂಡು ಬಂದ ಉತ್ತಮ ಸ್ಥಳಗಳನ್ನೆಲ್ಲಾ ಅವಳಿಗೆ ವಿವರಿಸುತ್ತಾ, ಈಗ ತನಗೆ ರುಕ್ಮಿಯ ಮೇಲಾಗಲಿ, ಇತರರ ಮೇಲಾಗಲಿ ಕೋಪವಿಲ್ಲವೆಂದು ಅವಳಿಗೆ ದೃಢಪಡಿಸಿದನು.

ಪ್ರಿಯಾ ಸಹಾಯಃ ಪದವಿಂ ಸ ಗಚ್ಛನ್ ದ್ರಾಘೀಯಸೀಂ ದಾರುಕ ಸಾರಥಿಸ್ತಾಂ।
ಉದಗ್ರ ವೇಗಾನ್ ಉದಧೇರನೂಪೇ ವೀತೀನ್ ಕ್ಷಣಂ ವಿಶ್ರಮಯಾಂ ಬಭೂವ॥೩೯॥

ಒಬ್ಬಳೇ ಬರುವ ಪ್ರೇಮಿಗೆ ತಾನು ಜತೆಯಾಗಿಯೇ ದಾರಿ ಪೂರ್ತಿ ಇದ್ದು, ಬಹಳ ವೇಗವಾಗಿ ಬಂದ ಕುದುರೆಗಳಿಗಾಗಿ, ಸಾರಥಿಯಾದ ದಾರುಕನನ್ನು ಕರೆದುಕೊಂಡು, ಸಮುದ್ರದ ದಡದಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದನು.

ಆ ದುಷ್ಟರಿಂದ ತಪ್ಪಿಸಿಕೊಂಡು ಶೀಘ್ರವಾಗಿ ದ್ವಾರಕೆಯನ್ನು ಸೇರಲು ವೇಗವಾಗಿ ರಥವನ್ನು ಓಡಿಸುವಂತೆ ಸಾರಥಿಯಾದ ದಾರುಕನಿಗೆ ಸೂಚಿಸಲು, ಅವನು ಅದರಂತೆ ಅತಿ ಶೀಘ್ರವಾಗಿ ಸಮುದ್ರದ ದಂಡೆಗೆ ಬಂದು ಸೇರಿದನು. ಆಗ ಅವನಿಗೂ, ಕುದುರೆಗಳಿಗೂ ವಿಶ್ರಾಂತಿ ನೀಡಲು ಸ್ವಲ್ಪ ಕಾಲ ಸಮುದ್ರದ ದಡದಲ್ಲಿ ತಂಗಿದನು. ರುಕ್ಮಿಣಿಯು ತನ್ನವರೆಲ್ಲರನ್ನೂ ಬಿಟ್ಟು ಬಂದಿರುವ ದುಃಖವನ್ನು ನಿವಾರಿಸಲು ಅವಳ ಜತೆಯಲ್ಲಿಯೇ ಇದ್ದನು.

ಭಯಾರ್ಣವಾ ದುದ್ಧೃತಯಾ ಸ್ವಯಾಸೌ ಶ್ರಿಯೇವ ಸಾಕ್ಷಾದನುಭೂಯಮಾನಃ।
ಪಯೋಧಿರೂಪಾಂ ಪರಿಘಾಂ ವಿಲಂಘ್ಯ ದ್ಯುಸಂಮಿತಾಂ ದ್ವಾರವತೀ ಮಯಾಸೀತ್॥೪೦॥

ಶ್ರೀಕೃಷ್ಣನನ್ನು ಹೊಂದಿ ಬಾಳುವುದಕ್ಕೂ ಅದೃಷ್ಟವಿರಬೇಕಲ್ಲಾ ಎಂಬ ಭಯದಿಂದ ಸಮುದ್ರದ ದಡವನ್ನು ಸೇರಿದ, ಲಕ್ಷ್ಮಿಯಂತಿದ್ದ ರುಕ್ಮಿಣಿಯಿಂದ ಚೆನ್ನಾಗಿ ಅನುಭವಿಸಲ್ಪಡುವವನಾಗಿ, ಸಮುದ್ರದ ಮಧ್ಯೆ ಸ್ವರ್ಗದಂತಿರುವ ದ್ವಾರಕೆಯನ್ನು ಸೇರಿದನು.

ರುಕ್ಮಿಣಿಗೆ ಅವಳ ಆಸೆ ನೆರವೇರಿದ ಆನಂದ ಉಂಟಾಯಿತು. ಲಕ್ಷ್ಮಿಯ ಅವತಾರವಾದ ಅವಳನ್ನು, ಜತನದಿಂದ ಕಾಪಾಡಿಕೊಂಡು ಸಮುದ್ರ ಮಧ್ಯದಲ್ಲಿದ್ದ ತನ್ನ ರಾಜಧಾನಿಯಾದ ದ್ವಾರಕೆಗೆ ದ್ವಾರಕಾಧೀಶನು ಬಂದು ಸೇರಿದನು.

ಪರಿಷ್ಕೃತಾಂ ಕಾಂಚನ ತೋರಣೈಸ್ತಾಂ ವಲ್ಗುಧ್ವಜಾಂ ವಂದನ ದಾಮಚಿತ್ರಾಂ।
ರಾಮಾ ಸಹಾಯಃ ಪ್ರಸಮೀಕ್ಷ್ಯರೇಮೇ ರಮ್ಯ ಪ್ರಸೂನಾಂಜಿತ ರಾಜವೀಧಿಂ॥೪೧॥

ಚಿನ್ನದಂತಹ ತೋರಣಗಳಿಂದ ಅಲಂಕರಿಸಲ್ಪಟ್ಟದ್ದು, ಸುಂದರವಾದ ಧ್ವಜಗಳನ್ನು ಹೊಂದಿರುವುದೂ, ಅಲ್ಲಲ್ಲಿ ತೂಗು ಹಾಕಿರುವ ಮಾಲೆಗಳಿಂದ ಶೋಭಿತವಾಗಿ, ವಿಚಿತ್ರವಾದ ಮನೋಹರವಾದ ಹೂಗಳಿಂದ ಅಲಂಕರಿಸಲ್ಪಟ್ಟಿದ್ದ ರಾಜಬೀದಿಯನ್ನು ತನ್ನ ರಮಣಿಯೊಡನೆ, ನೋಡಿ ಸಂತೋಷಿಸಿದನು.

ಅವನು ರುಕ್ಮಿಣಿಯೊಡನೆ ಬರುವುದನ್ನು ಮುಂದಾಗಿ ತಿಳಿದ ಯಾದವ ವೀರರು, ದ್ವಾರಕೆಯ ಪುರ ಜನರು, ದ್ವಾರಕೆಯ ಬೀದಿಗಳನ್ನು ವಿಶೇಷವಾಗಿ ಅಲಂಕರಿಸಿ, ಅವರಿಗೆ ಸ್ವಾಗತ ಕೋರಿದರು. ಅದರಿಂದ ರುಕ್ಮಿಣಿಯ ಮನಸ್ಸು ಪ್ರಫುಲ್ಲವಾದುದನ್ನು ಕಂಡು ಸ್ವಾಮಿಯೂ ಸಹ ಸಂತೋಷಿದನು. ತಳಿರು ತೋರಣಗಳಿಂದ ರಾಜಬೀದಿಯು ಶೋಭಿಸುತ್ತಿತ್ತು.

ಮಹೀಯಸಾಂ ಮಂಗಳ ದುಂದುಭಿನಾಂ ನಾದೇರವಜ್ಞಾತ ಪಯೋಧಿತಬ್ದಾ।
ಶ್ರುತೋತ್ಸವಾನಾಂ ವಿಧಧೇ ಪುರೀಸಾ ಸ್ವರ್ಗೌಕಸಾಂ ಶ್ರೋತ್ರ ಸುಧಾಮಪೂರ್ವಾಂ॥೪೨॥

ದೊಡ್ಡ ದೊಡ್ಡ ಮಂಗಳ ಭೇರಿ ವಾದ್ಯಗಳಿಂದ ಹೊರಡುವ ಶಬ್ದಗಳು ಸಮುದ್ರದ ಅಲೆಗಳ ಶಬ್ದವನ್ನು ಅವಮತಿಸುವಂತಿದ್ದು, ಅದನ್ನು ಕೇಳಿದವರೂ, ಸ್ವರ್ಗವಾಸಿಗಳೂ ಹಿಂದೆ ಅನುಭವಿಸದ ಕರ್ಣ ಸುಖವನ್ನು ಅನುಭವಿಸಿದರು.

ಆ ನೂತನ ದಂಪತಿಗಳಿಗೆ ಸ್ವಾಗತ ಕೋರಲು ದ್ವಾರಕೆಯಲ್ಲಿ ಮಾಡಿದ ಭೇರಿ ತಾಡನ ಮುಂತಾದವುಗಳ ಧ್ವನಿಗಳು, ಸಮುದ್ರದ ಅಲೆಗಳ ಅಬ್ಬರದ ಶಬ್ದವನ್ನು ಹಿಮ್ಮೆಟ್ಟಿಸುವಂತಿತ್ತು. ಆ ಆ ವಾಕ್ಯಗಳ ಅಮೋಘ ಶಬ್ದವು ಕೇಳಿದವರ ಕಿವಿಗೆ ಕರ್ಣಾನಂದವಾಗಿತ್ತು.

ಪ್ರತ್ಯೈಯುಷಾಂ ಕಂಸ ರಿಪುರ್ಯದೂನಾಂ ದೇವದ್ರುಮಾಣಾಮಿವ ಜಂಗಮಾನಾಂ।
ಅನರ್ಘ ರತ್ನಾಭರಣ ಪ್ರಧಾನಾನ್ ಆದತ್ತ ದಿವ್ಯಾನ್ ಉಪದಾ ವಿಶೇಷಾನ್ ॥೪೩॥

ಕಂಸನನ್ನು ಕೊಂದು ಭಗವಂತನು ನಡೆಯುವ ಕಲ್ಪವೃಕ್ಷಗಳಂತೆ, ತನ್ನನ್ನು ಎದುರುಗೊಂಡ ಯದುವೀರರು ಅರ್ಪಣೆ ಮಾಡಿದ ಬೆಲೆ ಕಟ್ಟಲಾಗದ ಆಭರಣಗಳನ್ನು ಸ್ವೀಕರಿಸಿ, ಉತ್ತಮ ಆಹಾರಗಳನ್ನು ಸೇವಿಸಿದನು.

ಕಂಸ ಸಂಹಾರಿಯಾದ ಆ ಸರ್ವೇಶ್ವರನಾದ ಶ್ರೀಕೃಷ್ಣನಿಗೆ ದ್ವಾರಕೆಯಲ್ಲಿದ್ದ ಯದುವೀರರೆಲ್ಲರೂ, ಷೋಡಶೋಪಚಾರಗಳನ್ನು ನಡೆಸಿ, ಅನರ್ಘ್ಯವಾದ ಉಡುಗೊರೆಗಳನ್ನು ನೀಡಿದಾಗ ಅದನ್ನೆಲ್ಲಾ ಸಂತೋಷದಿಂದ ಸ್ವಾಮಿಯು ಸಂತೋಷದಿಂದ ಸ್ವೀಕರಿಸಿದನು.

ತಸ್ಮಿನ್ ಮಹಾನೀಲಮಣಿ ಪ್ರಕಾಶೇ ತಾಂ ರುಕ್ಮಿಣೀ ಮಾಹಿತ ರುಕ್ಮಕಾಂತಿಂ।
ಪುರಾಂಗನಾಃ ಪ್ರೇಕ್ಷಿತು ಮೀಹಮಾನಾಃ ಸ್ವರ್ಗಾಧಿಕಾನ್
ಆರುರುಹುಃ ಸ್ವಸೌಧಾನ್ ॥೪೪॥

ಶ್ರೇಷ್ಠವಾದ ಮಣಿಗಳಿಂದ ಭೂಷಿತವಾದ ಶ್ರೀಕೃಷ್ಣನಲ್ಲಿ ಪೂರ್ಣವಾಗಿ ಅನುರಕ್ತಳಾದ ಆ ರುಕ್ಮಿಣಿಯನ್ನು ನೋಡಲು ಅತ್ಯಂತ ಉತ್ಸುಕರಾಗಿ ನಗರದ ನಾರೀ ಮಣಿಗಳು ಸ್ವರ್ಗಕ್ಕೆ ಮೇಲಾದ ತಮ್ಮ ಮಹಡಿಗಳಿಗೆ ಏರಿದರು.

ಅಪೂರ್ವ ಸುಂದರಿಯಾದ ರುಕ್ಮಿಣಿಯನ್ನು ನೋಡಿ ಆನಂದಿಸಲು ಊರಿನಲ್ಲಿದ್ದ ಹೆಂಗಳೆಯಲ್ಲರೂ, ತಮ್ಮ ತಮ್ಮ ಮನೆಗಳ ಮಹಡಿಯನ್ನೇರಿ ಕುತೂಹಲದಿಂದ ನಿಂತಿದ್ದರು. ಅವರ ಮಹಲುಗಳು ಸ್ವರ್ಗಕ್ಕಿಂತ ಮಿಗಿಲಾದ ಮನೆಗಳಾಗಿದ್ದವು.

ಕಲಕ್ವಣ ನೂಪುರ ಚಾರುವಾದ್ಯಂ ಕರ್ಣಾವತಂ ಸೋದಿತ ಭೃಂಗಗೀತಂ।
ಕಸ್ಯಾಶ್ಚಿದನ್ವಾಗತ ನಾಟ್ಯವೇದಂ ಲೀಲಾಗತಂ ಲಾಸ್ಯ ಮಭೂದಪೂರ್ವಂ ॥೪೫॥

ಒಬ್ಬ ಹೆಣ್ಣು ಮಗಳು ವಿನೋದವಾಗಿ ಸೇರಿ ಅದ್ಭುತವಾಗಿ ನಾಟ್ಯವಾಡಿದಳು. ಹೆಜ್ಜೆಗಳ ಶಬ್ದವು ಕಿವಿಗಿಂಪಾದ ವಾದ್ಯದ ಧ್ವನಿಯಂತಿತ್ತು. ಕಿವಿಗಳ ಹೂವಿನಲ್ಲಿ ಸುತ್ತಾಡುವ ದುಂಬಿಯ ಝೇಂಕಾರವು ಉತ್ತಮ ಗೀತವಾಗಿತ್ತು. ನಾಟ್ಯ ವೇದಕ್ಕೆ ಪೂರಕವಾಗಿ ಆ ನಡೆ ಇತ್ತು.

ಆ ಹೆಂಗಸರ ಸಂಭ್ರಮ ಹೇಳತೀರದು. ಕೆಲವರು ಸಂತೋಷದಿಂದ ನಾಟ್ಯವಾಡಲು ಪ್ರಾರಂಭಿಸಿದರು. ಆ ನಾಟ್ಯವು ನೋಡಲು ನೇತ್ರಾನಂದಕರವಾಗಿ ಅವರುಗಳು ಧರಿಸಿದ್ದ ಹೂಗಳನ್ನು ಅರಸಿ ಬಂದ ದುಂಬಿಗಳ ಝೇಂಕಾರವು ಕರ್ಣಾನಂದಕರವಾಗಿತ್ತು. ಒಟ್ಟಿನಲ್ಲಿ ಅವರ ಸಂಭ್ರಮದ ನಡೆನುಡಿಗಳು ಬಹು ರಮ್ಯವಾಗಿತ್ತು.

ಪರಿಚ್ಯುತಂ ಕಿಂಚಿ ದವಾಂತರೀಯಂ ಕಾಚಿತ್ ಸಮಾಲಂಬ್ಯ ಸಹೈವ ಕಾಂತ್ಯಾ।
ಕ್ಷಿಪ್ತೇವ ತೀವ್ರೇಣ ಕುತೂಹಲೇನ ಕ್ಷಣೇನ ವಾತಾಯನ ಮಾಸಸಾದ ॥೪೬॥

ಒಬ್ಬಳು ಮಧ್ಯದಲ್ಲಿ ಬಿಚ್ಚಿಕೊಂಡ ಸೀರೆಯನ್ನು ಒಡ್ಯಾಣದೊಡನೆ ಸೇರಿಸಿ ಹಿಡಿದು ಕೊಂಡೆ, ಉತ್ಸಾಹದಿಂದ ಬಿಲ್ಲಿನಿಂದ ಬಿಡಲ್ಪಟ್ಟ ಬಾಣದಂತೆ ಒಂದು ನೃತ್ಯವನ್ನು ನಟಿಸಿದಳು.

ಆ ಸಂಭ್ರಮದಲ್ಲಿ ಅವರಿಗೆ ಮೈಮೇಲೆ ಪರಿವೆಯೇ ಇರಲಿಲ್ಲ. ಒಬ್ಬಳಿಗೆ ಅವಳ ನಾಟ್ಯದ ಸಂಭ್ರಮದಲ್ಲಿ ಸೀರೆ ಜಾರಿದ್ದು ತಿಳಿಯದೆ, ಒಡ್ಯಾಣದೊಡನೆ ಸೀರೆಯನ್ನು ಸೇರಿಸಿ, ಹಿಡಿದುಕೊಂಡೇ ವೇಗವಾಗಿ ನಾಟ್ಯ ಮಾಡಿದಳು.

ಆಮುಚ್ಯ ತಾಟಂಕ ಮನಂಗ ಚಕ್ರಂ ಸವ್ಯೇತರೇ ಸತ್ವರಮಾವ್ರಜಂತಿ।
ಅನ್ಯೇನ ಕಾಚಿದ್ ಭೃಶ ಮಾವಭಾಸೆ ಕರ್ಣೇನ ಕೈವಲ್ಯ ವಿಭೂಷಣೇನ ॥೪೭॥

ಮತ್ತೊಬ್ಬಳು ವೇಗದಲ್ಲಿ ಬಲಕಿವಿಯಲ್ಲಿ ಮನ್ಮಥನ ಚಕ್ರಾಯುಧವೋ ಎನ್ನುವಂಥಾ ದೊಡ್ಡದಾದ ತಾಟಂಗವನ್ನು ಧರಿಸಿ, ಮತ್ತೊಂದು ಕಿವಿಗೆ ಏನನ್ನೂ ಧರಿಸದೆ, ಧರಿಸಿರುವೆನೆಂದು ತಿಳಿದು, ಬರುವಾಗ ಆಭರಣ ಧರಿಸದೆ ಇದ್ದ ಕಿವಿಯು ಇನ್ನೂ ಸುಂದರವಾಗಿ ಕಾಣುತ್ತಿತ್ತು.

ಶ್ರೀಕೃಷ್ಣ ರುಕ್ಮಿಣಿಯರನ್ನು ನೋಡುವ ಸಂಭ್ರಮದಲ್ಲಿ ಅವರಿಗೆ ಮೈಮೇಲಿನ ಪರಿವೆಯೇ ಇದ್ದಂತಿರಲಿಲ್ಲ. ಒಬ್ಬಳು ಒಂದೇ ಕಿವಿಗೆ ಆಭರಣ ಹಾಕಿಕೊಂಡು, ಮತ್ತೊಂದು ಕಿವಿಯನ್ನು ಹಾಗೆಯೇ ಬಿಟ್ಟಿದ್ದಾಗ್ಯೂ, ಆ ಕಿವಿಗೂ ಆಭರಣ ಇದೆ ಎಂಬಂತೆ ವರ್ತಿಸಿದಳು. ನಿರಾಭರಣ ವಾದ ಆ ಕಿವಿಯು ಇನ್ನೂ ಸುಂದರವಾಗಿಯೇ ತೋರುತ್ತಿತ್ತು.

ಉದಂಚಿತಾ ಬಾಹುಲತೇ ತರಸ್ಯಾ ಮೌಲಿ ಸ್ರಜಾ ಹಸ್ತಗೃಹೀತಯಾಽಽಸೀತ್।
ಜಗಜ್ಜಿಗೀಷೋರ್ಮದನಸ್ಯ ಜೈತ್ರೀ ಪತಾಕಯೇ ವಾದ್ಭುತ ಕೇತುಯಷ್ಟಿಃ ॥೪೮॥

ಕೂದಲಿನಿಂದ ಬೀಳುವ ಹೂಮಾಲೆಯನ್ನು ಕೈಯ್ಯಲ್ಲಿ ಎತ್ತಿ ಮೇಲೆದ್ದು ಬರುವ ಮತ್ತೊಬ್ಬಳ ಭುಜವಾದುದು ಜಗತ್ತನ್ನೇ ಗೆಲ್ಲಲು ಆಶಿಸುವ ಮನ್ಮಥನ ಶ್ರೇಷ್ಠವಾದ ಬಿಲ್ಲಿನ ಧ್ವಜದಂತೆ ಇತ್ತು.

ರುಕ್ಮಿಣಿಯನ್ನು ನೋಡಲು ಉಪ್ಪರಿಗೆಗಳಲ್ಲಿ ನೆರೆದಿದ್ದ ಸ್ತ್ರೀಯರ ಹಾವಭಾವ ಗಳನ್ನು ಅವರ ವಿವಿಧ ಅವಸ್ಥೆಗಳನ್ನು ಈ ಮುಂದಿನ ಕೆಲವು ಶ್ಲೋಕಗಳಲ್ಲಿ ವಿವರಿಸಿದ್ದಾರೆ. ಶ್ಲೋಕಗಳ ಅರ್ಥವು ಸುಸ್ಪಷ್ಟವಾಗಿವೆ.

ಪ್ರಕೋಷ್ಠಭಾಜಃ ಪ್ರಿಯ ಶಾರಿಕಾಯಾಃ ಪಯಃ ಸ್ವಯಂ ಸಾದರಮರ್ಪಯಂತಿ।
ಗವಾಕ್ಷಮಾಗಮ್ಯ ಗಜೇಂದ್ರಯಾತಾ ಕಾಚಿತ್ ಪ್ರಸಸ್ಮಾರ ಕೃತಾವಶೇಷಂ ॥೪೯॥

ಕೈಯ ಮಣಿಕಟ್ಟಿನಲ್ಲಿ ಇಟ್ಟು ಒಂದು ಪ್ರಿಯವಾದ ಪಕ್ಷಿಯ ಬಾಯಿ ಬಿಡಿಸಿ, ತಾನು ಹಾಲು ಉಣಿಸುವ ಒಬ್ಬಳು, ಅದಕ್ಕೆ ಹಾಲು ಕುಡಿಸುವುದನ್ನು ಮರೆತು, ಅದು ಗವಾಕ್ಷಿಯ ಮೂಲಕ ಹೊರಹೋಗಲು ಅನುವು ಮಾಡಿಕೊಟ್ಟಳು.

ಇಲ್ಲಿ ಒಬ್ಬಳು ತಾನು ದಿನವೂ ಮಾಡುವ ಕೆಲಸವನ್ನು ಮರೆತು ರುಕ್ಮಿಣಿಯನ್ನೇ ನೋಡುತ್ತಿದ್ದಾಳೆ.

ಪ್ರಚಾರ ವೇಗಾತ್ ತೃಟಿತೇನ ಚಕ್ರೇ ಹಾರೇಣ ಮುಕ್ತಾಫಲ ವರ್ಷಿಣಾಽನ್ಯಾ।
ಅದೂರತಃ ಸನ್ನಿಹಿತಸ್ಯ ಶೌರೇ ರಾಚಾರಲಾಜಾಂಜಲಿ ಪೂರ್ವರಂಗಂ ॥೫೦॥

ಬರುವಾಗ ಮಧ್ಯದಲ್ಲಿ ಮುತ್ತುಮಾಲೆ ಕಿತ್ತು ಹೋಗಿ, ಮುತ್ತುಗಳು ಎರಚುವ ಹಾಗೆ ಮಾಡಿದವಳಾಗಿ, ಮತ್ತೊಬ್ಬಳು ಗಂಭೀರವಾಗಿ ಬರುವ ಶ್ರೀಕೃಷ್ಣನಿಗೆ ಮಂಗಳಕರವಾದ ಅರಳನ್ನು ಎರಚಿ ಉಪಚಾರವನ್ನು ಮಾಡುವವಳಾದ ಹಾಗೆ ಕಾಣುತ್ತಿದ್ದಳು.

ದೊಡ್ಡವರನ್ನು ಸ್ವಾಗತಿಸಲು ಹೂವನ್ನು ಎರಚುವುದು, ಅರಳನ್ನು ಎರಚುವುದು ಪದ್ಧತಿ. ಇಲ್ಲಿ ತನ್ನ ಮುತ್ತಿನ ಮಾಲೆಯು ಕಿತ್ತು ಹೋಗಿರುವುದು ತಿಳಿಯದೆ, ಅದು ಚೆಲ್ಲಾಪಿಲ್ಲಿಯಾಗಿ ಹರಡಿದಾಗ, ಅದು ಶ್ರೀಕೃಷ್ಣನ ಸ್ವಾಗತಕ್ಕೆ ಅರಳನ್ನು ಎರಚಿದಂತಿತ್ತು.

ಸ್ತನಾಂ ಶುಕಂ ಸ್ರಸ್ತಮಬುಧ್ಯಮಾನಾ ಸಖೀಜನೇ ಸಸ್ಮಿತಮೀಕ್ಷಮಾಣೇ।
ಪರಾಮೃಶಂತೀಂ ವಿತತಾನ ಕಾಚಿತ್ ಪ್ರತಿಕ್ರಿಯಾಂ ಪಾಣಿ ನಖಾಂಶುಜಾಲೈಃ ॥೫೧॥

ಮತ್ತೊಬ್ಬಳು, ಸ್ತನದ ಮೇಲಿದ್ದ ಬಟ್ಟೆ ಜಾರಿದುದನ್ನು ತಿಳಿಯದೆ ಇದ್ದಾಗ, ಸ್ನೇಹಿತೆಯರು ಹಿಂದೆ ನಗುತ್ತಾ, ಬರುವುದನ್ನು ನೋಡಿ ತಬ್ಬಿಬ್ಬಾದಳು. ಆವಾಗ, ಅವಳ ಕೈಯಿನ ನಖಗಳ ಕಾಂತಿಯ ಬಲೆಯಂತೆ ಪ್ರಸರಿಸಿತು. ಅದರಿಂದ ಬಟ್ಟೆ ಜಾರಿದುದನ್ನು ಮುಚ್ಚಿಕೊಂಡಳು.

ಶ್ರೀಕೃಷ್ಣ ರುಕ್ಮಿಣಿಯರನ್ನು ನೋಡುವ ಸಂಭ್ರಮದಲ್ಲಿ ಅವಳ ಎದೆಯ ಮೇಲಿನ ಬಟ್ಟೆ ಜಾರಿದುದು ತಿಳಿಯಲಿಲ್ಲ. ಅವಳ ಉಗುರುಗಳ ಕಾಂತಿಯು ಅವಳು ಎದೆಯ ಮೇಲೆ ಕೈಯ್ಯಿಟ್ಟಾಗ, ಬಟ್ಟೆಯಂತೆ ಎದೆಯನ್ನು ಮುಚ್ಚಿತು.

ಸಖೀ ಧೃತೈ ಶ್ಚಾಮರ ತಾಲವೃಂತೈ ರಾಶ್ಯಾನತಾಂ ಪ್ರಾಪಿತ ಮಂಗರಾಗಂ।
ವಿಲೋಕಿತೇ ಶಾರ್ಙ್ಗಿಣಿ ವಿಹ್ವಲಾನ್ಯಾ ಶ್ವಾಸಾನಿಲೈಃ ಶೋಷ ಮಿವಾನಿನೀಷತ್॥೫೨॥

ಸ್ನೇಹಿತೆಯರು ಬೀಸುವ ಚಾಮರಗಳಿಂದ, ಬೀಸಣಿಗೆಗಳಿಂದ ಅವರು ಪೂಸಿಕೊಂಡಿರುವ ಚಂದನ ಲೇಪನದ ಸುವಾಸನೆಯು ಬೀರಿತು. ಬಿಲ್ಲು ಹಿಡಿದಿದ್ದ ಶ್ರೀಕೃಷ್ಣನನ್ನು ಕಂಡೊಡನೆ, ಅದನ್ನು ಎಸೆದು ದೊಡ್ಡದಾಗಿ ಉಸಿರು ಬಿಡುವುದನ್ನು ನೋಡಿ ಆ ಸುವಾಸನೆಯು ಚೆನ್ನಾಗಿ ಪ್ರಸರಿಸಲಿ ಎಂಬುದಕ್ಕೇನೋ ಎಂಬಂತಿತ್ತು.

ಶ್ರೀಕೃಷ್ಣನನ್ನು ನೋಡಿ ಉದ್ವೇಗದಿಂದ ಉಸಿರು ಬಿಡುತ್ತಿದ್ದ ಅವರ ಉಸಿರಿನ ಗಾಳಿಯು ಅವರು ಪೂಸಿಕೊಂಡಿದ್ದ ಸುವಾಸನೆಯನ್ನು ಎಲ್ಲ ಕಡೆಗೂ ಬೀರುತ್ತಿತ್ತು.

ಪ್ರಸಾಧಯಂತಿ ಮವಧೀರ್ಯ ಧಾತ್ರಿ ಮಂಘೈರಸಂಭಾವಿತ ಭೂಷಣಾಽನ್ಯಾ।
ಸಮೀಕ್ಷ್ಯ ಕೃಷ್ಣಂ ಸಹಜೋಪಜಾತೈಃ ಪರಿಷ್ಕ್ರಿಯಾಮಾದ್ರಿಯತೇವ ಭಾವೈಃ ॥೫೩॥

ಅಲಂಕಾರ ಮಾಡುವವರನ್ನು ಬಿಟ್ಟು, ತನ್ನ ಅಂಗಗಳಿಂದ, ಆಭರಣಗಳಿಗೆ ಶೋಭೆಯನ್ನು ನೀಡುವುದನ್ನು ಬಿಟ್ಟ ಮತ್ತೊಬ್ಬಳು ಶ್ರೀಕೃಷ್ಣನನ್ನು ಕಂಡೊಡನೆ. ಸಾತ್ವಿಕ ಭಾವಗಳೊಡನೆ ದೇಹಕ್ಕೆ ಅಲಂಕಾರವನ್ನು ಮಾಡಿಕೊಳ್ಳಲು ಆರಂಭಿಸಿದಳು.

ತನ್ನ ದೇಹಕ್ಕೆ ಅಲಂಕಾರ ಮಾಡುವವಳನ್ನು ದೂರ ಸರಿಸಿ, ಶ್ರೀಕೃಷ್ಣನನ್ನು ನೋಡು ವುದರಲ್ಲಿ ನಿರತಳಾಗಿದ್ದ ಒಬ್ಬಳು, ಆ ಕೃಷ್ಣನನ್ನು ಕಂಡೊಡನೆ, ಅವನ ಮನಸ್ಸನ್ನು ಸಂತೋಷ ಪಡಿಸಲು ಸಾತ್ವಿಕ ಉದ್ದೇಶದಿಂದ ಸಖಿಯನ್ನು ಕರೆದು ಅಲಂಕಾರ ಮಾಡಿಸಿಕೊಳ್ಳ ತೊಡಗಿದಳು.

ಭ್ರುವಾ ಸ್ಫುರಂತ್ಯಾ ಮದನಸ್ಯ ಮೌರ್ವಿ ಜ್ಯಾಘಾತ ರೇಖಾಮಭಿ ದರ್ಶಯಂತಿ।
ಅನ್ಯಾನುಷಕ್ತೇsಪಿ ಹರೌ ವಿಯತಾಂ ಪ್ರಾಯುಂಕ್ತ ದೂತೀಮಿವ ದೃಷ್ಟಿಮನ್ಯಾ ॥೫೪॥

ಒಬ್ಬಳು ತನ್ನ ಹುಬ್ಬಿನ ರೇಖೆಯನ್ನು ಇಟ್ಟುಕೊಂಡು, ಮನ್ಮಥನ ಬಿಲ್ಲಿನ ನಾಣನ್ನು ಗುರಿ ಇಡುವವಳಾಗಿ, ಶ್ರೀಕೃಷ್ಣನಲ್ಲಿ ಕಣ್ಣೋಟವನ್ನು ಸೇರಿಸಿ, ಅದು ಬೇರೆಡೆಗೆ ಹೋಗ ದಂತಾಗಿ ಮನ್ಮಥನ ಬಾಣಕ್ಕೆ ಸಿಲುಕಿದಂತವಳಾದಳು.

ಶ್ರೀಕೃಷ್ಣನ ಕಣ್ಣಲ್ಲಿ ತನ್ನ ಕಣ್ಣೋಟವನ್ನು ಒಬ್ಬಳು ಸೇರಿಸುವವಳಾಗಿ, ಮನ್ಮಥನ ಬಾಣಕ್ಕೆ ಸಿಲುಕಿದಳು.

ಸಮೇಯುಷಿ ಮಪ್ರತಿಮೇನ ಯೂನಾ ತಾಂ ರುಕ್ಮಿಣೀಂ ವೀಕ್ಷ್ಯ ವಿಲೀನಭಾವಾ।
ಭಾಗ್ಯಂ ಕಿಮಸ್ಯಾ ಇತಿ ಭಾವಯಂತಿ ತದಾತ್ಮತಾಂ ನೂನ ಮಲಿಪ್ಸತಾನ್ಯಾ ॥೫೫॥

ಯಾರೂ ಸಮರಿಲ್ಲದ ಕೃಷ್ಣನಂಥಾ ಯುವಕನೊಡನೆ ಸೇರಿರುವ ರುಕ್ಮಿಣಿಯನ್ನು ನೋಡಿ ಮನಸ್ಸು ಕರಗಿದವಳಾಗಿ ಒಬ್ಬಳು ಇವಳಿಗೆ ಎಂಥಾ ಭಾಗ್ಯವೋ ಎಂದು ನೆನೆಯುವವಳಾಗಿ ರುಕ್ಮಿಣಿಯ ನಿಲುವನ್ನು ತಾನೇ ಹೊಂದಿದಳು.

ರುಕ್ಮಿಣಿಯ ಸೌಭಾಗ್ಯವನ್ನು ನೆನೆದು ಮತ್ತೊಬ್ಬಳು, ತನಗೆ ಆ ಭಾಗ್ಯವಿಲ್ಲವಲ್ಲಾ ಎಂದು ಮತ್ಸರಪಟ್ಟು, ತಾನು ಮಾನಸಿಕವಾಗಿ ರುಕ್ಮಿಣಿಯ ಭಾವವನ್ನು ಹೊಂದಿ, ಶ್ರೀಕೃಷ್ಣ ಸಂಶ್ಲೇಷವನ್ನು ಹೊಂದಿದಳು.

ತದೀಕ್ಷಣೆ ಭರ್ತುರಿವ ಸ್ಮರಂತ್ಯಾ ಕನ್ಯಾದಶಾಂ ಕಾಮವಾಶಾದ್ಭಜಂತ್ಯಾ।
ಸ್ವಯಂ ವರಾರ್ಹೇ ಸ್ವಯಮೇವ ತಸ್ಮಿನ್ ಕಯಾಚಿದಾದಾಯಿ ಕಟಾಕ್ಷಮಾಲಾ ॥೫೬॥

ಶ್ರೀಕೃಷ್ಣನನ್ನು ಕಂಡೊಡನೇ, ತನ್ನ ಭರ್ತಾರವಾಗಿ ನೆನೆದು ಪ್ರೇಮ ಉದಯಿಸಲು, ತಾನು ಅವನನ್ನು ಹೊಂದಲು ತನ್ನ ಒಬ್ಬ ಕನ್ನಿಕೆಯಾದ ಕಾಲದಲ್ಲಿ ನಿಂತು ಒಬ್ಬಳು ಸ್ವಯಂವರ ಮಾಲೆಯಾಗಿ ತನ್ನ ಕಟಾಕ್ಷವನ್ನು ಅವನ ಮೇಲೆ ತಾನೇ ಅರ್ಪಣ ಮಾಡಿಕೊಂಡಳು.

ತನ್ನ ಕಟಾಕ್ಷ ಎಂಬ ಮಾಲೆಯನ್ನು ಶ್ರೀಕೃಷ್ಣನಿಗೆ ತೊಡಿಸಿ ಮತ್ತೊಬ್ಬಳು ತಾನು ಸ್ವಯಂವರ ಮಂಟಪದಲ್ಲಿ ನಿಂತಿರುವ ಹಾಗೆ ಭಾವಿಸಿಕೊಂಡಳು.

ಕಕ್ಷ್ಯಾ ನಿಬಂಧ ಚ್ಯವನೇ ಸಲೀಲಂ ಸ್ತನಾಹಿತ ಸ್ವಸ್ತಿಕ ಬಾಹುಬಂಧಾ।
ಜಗತ್ಪತೌ ಪಶ್ಯತಿ ಜಾತಭೀಷಾ ಪ್ರಾಯಸ್ತದಾಲಿಂಗನ ಮಭ್ಯನೈಷೀತ್ ॥೫೭॥

ಇನ್ನೊಬ್ಬಳು, ತನ್ನ ಕಂಚುಕದ ಗಂಟು ಬಿಚ್ಚಿಹೋದದ್ದರಿಂದ ಸ್ತನಗಳು ಶ್ರೀಕೃಷ್ಣನಿಗೆ ಕಾಣುತ್ತವೆಯಲ್ಲಾ ಎಂದು ಭಯಗೊಂಡವಳಾಗಿ, ವಿನೋದವಾಗಿ, ಎರಡು ಭುಜಗಳನ್ನೂ ಸ್ವಸ್ತಿಕವಾಗಿ ಬಳಸಿ ಎರಡು ಸ್ತನಗಳ ಮೇಲೂ ಇಟ್ಟುಕೊಂಡಿದ್ದಳು. ಇದು ತಾನು ನೋಡಿದ ಶ್ರೀಕೃಷ್ಣನನ್ನು ಕಟ್ಟಿಕೊಂಡಿರುವಂತೆ ಭಾಸವಾಗುತ್ತಿತ್ತು.

ತನ್ನ ಅಂಗಾಂಗಗಳನ್ನು ಶ್ರೀಕೃಷ್ಣನು ನೋಡಿ ಬಿಡುವನಲ್ಲಾ ಎಂಬ ಭಯದಿಂದ, ನಾಚಿಕೆ ಯಿಂದ ಮತ್ತೊಬ್ಬಳು ತನ್ನ ಕೈಗಳಿಂದ ಎದೆಯನ್ನು ಮುಚ್ಚಿಕೊಂಡು, ಶ್ರೀಕೃಷ್ಣನ ಆಲಿಂಗನ ಸೌಖ್ಯವನ್ನು ಮನಸ್ಸಿನಲ್ಲೇ ಅನುಭವಿಸಿದಳು.

ರಥೇನ ತಂ ರಾಜಪಥೇ ಪ್ರಯಾತಂ ನಿರ್ವ್ಯಾಜ ಸಂಗೇನ ನಿಶಾಮಯಂತಿ।
ತ್ಯಕ್ತಾನಿಮೇಷೈರ ಪರಾನ್ವಕಾರ್ಷೀತ್ ಚಿತ್ರಾಂಗನಾನಾಂ ಸುರಯೋಷಿತಾಂ ಚ ॥೫೮॥

ರಾಜ ಬೀದಿಯಲ್ಲಿ ರಥದಲ್ಲಿ ಸಾಗುವವನನ್ನು ಬೇರೆ ವ್ಯಾಜದಿಂದ ನೋಡಲಿಚ್ಛಿಸಿದ ಮತ್ತೊಬ್ಬಳು, ಕಣ್ಣು ರೆಪ್ಪೆಯನ್ನು ಅಲ್ಲಾಡಿಸದೆ ಅವನನ್ನೇ ನೋಡುತ್ತಾ ಚಿತ್ರದಲ್ಲಿ ಬರೆದಿರುವ ಸ್ತ್ರೀಯಂತೆಯೇ, ದೇವತಾ ಸ್ತ್ರೀಯಂತೆಯೇ ತೋರುತ್ತಿದ್ದಳು.

ತದೇಕ ಚಿತ್ತದಿಂದ ಮತ್ತೊಬ್ಬಳು ಶ್ರೀಕೃಷ್ಣನನ್ನೇ ನೋಡುತ್ತಾ, ಗೊಂಬೆಯಂತೆ ನಿಂತು ಬಿಟ್ಟಳು.

ಸಮೀಕ್ಷಿತಸ್ಯಾಪಿ ಸಹತ್ವ ಸಂಗಾತ್ ದುಷ್ಪ್ರಾಪ ಲೋಭಾದಪಿ ದೂಯಮಾನಾ।
ಗಲದ್ಭಿರನ್ಯಾ ಬಲಯ ಪ್ರಸೂನೈ ರಭ್ಯರ್ಚನಾಮಾ ತನುತೇವ ಶೌರೇಃ ॥೫೯॥

ನೋಡುತ್ತಿದ್ದ ಕಾಲದಲ್ಲೂ ಸೇರದೆ ಕಾರಣವಾಗಿ, ಬೇರ್ಪಡದೆ ಇರುವ ಅತ್ಯಾಶೆ ಯಿಂದಲೂ ಬಾಧಿಸಲ್ಪಟ್ಟು ಒಬ್ಬಳು. ಬಳೆಗಳು, ಪುಷ್ಪಗಳನ್ನು ದೇಹದಿಂದ ಬೀಳಿಸುತ್ತಿದ್ದಳು. ಅದನ್ನು ನೋಡಿದರೆ ಅವಳು ಅವನನ್ನು ಆರಾಧಿಸುತ್ತಿರುವಳೇನೋ ಎಂಬಂತಿತ್ತು.

ಮತ್ತೋರ್ವಳು ಶ್ರೀಕೃಷ್ಣನನ್ನು ಕಂಡು, ಮನಸ್ಸಿನಲ್ಲಿ ಅತಿಯಾದ ಆಸೆ ಹೊಂದಿ, ತನ್ನ ಮೇಲೆ ಹಾಕಿಕೊಂಡಿದ್ದ ಪುಷ್ಪಗಳು, ಬಳೆಗಳನ್ನು ಬೀಳಿಸುತ್ತಾ ಅವುಗಳಿಂದ ಸ್ವಾಮಿಗೆ ಅರ್ಚನೆ ಮಾಡುವಂತೆ ತೋರುತ್ತಿದ್ದಳು.

ಸಮಾನ ಕಾಂತ್ಯಾ ಪ್ರಿಯಯಾ ಸಮೇತೇ ದೃಷ್ಟೇ ಜಗದ್ಧಾತರಿ ಜಾತರಾಗಾ।
ಪ್ರಣಾಮಯೋಗ್ಯೇಯ ಮಿತೀವಮತ್ವಾ ಪ್ರಾಪ್ತಂಪದಂ ಮೇಖಲಯಾಪರಸ್ಯಾಃ॥೬೦॥

ಜಗತ್ತಿಗೆ ಕಾರಣನಾದ ಪುರುಷನು ತನಗೆ ಸಮನಾದ ರೂಪ ಹೊಂದಿದವಳಾಗಿ ಪ್ರೀತಿಗೆ ಪಾತ್ರಳಾದವಳೊಡನೆ, ಸೇರಿರುವುದನ್ನು ಕಂಡು, ಪ್ರೇಮವುಳ್ಳವಳಾದ ಇವಳು ನಮಸ್ಕಾರ ಮಾಡಲು ತಕ್ಕವಳೆಂದು ತಿಳಿದು, ತನ್ನಂತೆಯೇ ಭಾವಿಸಿದಾಗ ಅವಳ ಒಡ್ಯಾಣವು ಕಳಚಿ ಇವಳ ಪಾದದ ಅಡಿಯಲ್ಲಿ ಬಿದ್ದಿತು. (ಅದು ಕಳಚಿ ಬೀಳುವಂತೆ ಮೈ ಸಡಿಲಿಸಿದಳು).

ರುಕ್ಮಿಣಿಯನ್ನು ಕಂಡು ಇವಳು ಶ್ರೀಕೃಷ್ಣನಿಗೆ ತಕ್ಕವಳೆಂದು ಭಾವಿಸಿದ ಮತ್ತೊಬ್ಬಳು, ತನಗೆ ಅಂತಹ ಸರ್ವೋತ್ತಮನಾದ ಪತಿಯು ಸಿಗಲಿಲ್ಲವಲ್ಲಾ ಎಂಬ ಅಸೂಯೆಯಿಂದ, ಅವನೊಡನೆ ಸೇರಿರುವುದಾಗಿ ಮಾನಸಿಕವಾಗಿ ಭಾವಿಸಿ, ತನ್ನ ಒಡ್ಯಾಣವನ್ನು ಸಡಿಲಿಸಿ ಕೊಂಡಳು.

"ಚಂಚಚ್ಚಂದ್ರ ಕರಸ್ಪರ್ಶ ಹರ್ಷೋನ್ಮಿಳಿತ ತಾರಕಾ, ಅಹೋ ರಾಗವತಿ ಸಂಧ್ಯಾ ಜಗಾತಿ ಸ್ವಯಮಂಬರಂ"ಎಂಬ ರಾಮಾಯಣ ವಾಕ್ಯವು ಇಲ್ಲಿ ಅನುಸಂಧೇಯ,

ಪ್ರೇಮಿಯನ್ನು ಸೇರಲು ತವಕಿಸುವ ಸ್ತ್ರೀಯು (ಶೃಂಗಾರಭಾವದಲ್ಲಿ) ತಾನಾಗಿಯೇ ತನ್ನ ಸೀರೆಯನ್ನು ಸಡಿಲಿಸಿಕೊಳ್ಳುತ್ತಾಳೆ.

ತಾಸಾಂ ತದೇಕೋತ್ಸುಕ ದರ್ಶನಾನಾಂ ಸಮಾಧಿ ಭಾಜಾಮಿವ ಶೇಮುಷೀಣಾಂ।
ಅಲಂ ಪ್ರಭುಸ್ಸೋಪಿ ನ ಮಾತು ಮಾಸೀದಪಾರ ಹರ್ಷಾದನಘಾ ಮವಸ್ಥಾಂ ॥೬೧॥

ಶ್ರೀಕೃಷ್ಣನನ್ನು ನೋಡುವುದರಲ್ಲಿ ಉದ್ದೇಶ ಹೊಂದಿದವರಾಗಿ, ಯೋಗದಲ್ಲಿ ಸಮಾಧಿ ಎಂಬ ಉನ್ನತ ನೆಲೆಯಲ್ಲಿ ನಿಂತ ಜ್ಞಾನಿಗಳಂತಿರುವ ಆ ಸ್ತ್ರೀಯರಿಗೆ ಉಂಟಾದ ಸ್ಥಿತಿಯನ್ನು ನೋಡುತ್ತಿದ್ದ ಅವನೂ ಸಹ ಅದೇ ರೀತಿ ಆಗದೇ ಇರಲು ಸಾಧ್ಯವಾಗಲಿಲ್ಲ.

ಶ್ರೀಕೃಷ್ಣನು ತಾನು ಸುಲಭನಾಗಿದ್ದೇ ಅವರಿಗೆಲ್ಲಾ ದರ್ಶನವನ್ನು ನೀಡಬೇಕೆಂದು ಉದ್ದೇಶಿಸಿ, ಅವರ ಮಾನಸಿಕ ಸ್ಥಿತಿಯು ಉನ್ನತ ಮಟ್ಟದ್ದಾಗಿದ್ದರೂ, ತನ್ನನ್ನು ಕಣ್ತುಂಬಾ ನೋಡುವುದರಲ್ಲಿ ಆಸಕ್ತರಾಗಿದ್ದ ಅವರಿಗೆ, ಸುಂದರ ಪುರುಷನಾಗಿಯೇ ಕಾಣಿಸಿಕೊಂಡನು.

ಅವಾರುಣೀ ಸಂಭವ ಸೌರಭ್ಯೈಸ್ಸ್ವೈರನನ್ಯ ಸಾಧ್ಯಾಧರ ಬಿಂಬರಾಗೈಃ ।
ನಿರಂಜನೋಪಸ್ಥಿತ ನೇತ್ರಶೋಭೈಃ ಸ ಪಿ ಪ್ರಿಯೆ ಪೌರ ವಧೂಮುಖಾಬ್ಜೈಃ॥೬೨॥

ಮದ್ಯವನ್ನು ಸೇವಿಸದೆಯೇ ಹೊಂದಿದ ಮನಸ್ಸುಳ್ಳ ವಿಧದಲ್ಲಿ ಕೆಂಪಾದ ದ್ರವ್ಯದ ಬಣ್ಣವುಳ್ಳ ಉತ್ತಮ ಹವಳವು ಕಾಡಿಗೆಯನ್ನು ಇಡದೆಯೇ ಹಿರಿಮೆ ಹೊಂದಿರುವ ಕಣ್ಣಿನ ಸೌಂದರ್ಯವನ್ನು ಹೊಂದಿರುವ ನಗರ ನಾರೀಮಣಿಗಳ ಶ್ರೇಷ್ಠ ಮುಖ ಕಮಲಗಳನ್ನು ನೋಡಿ ಶ್ರೀಕೃಷ್ಣನು ಸಂತೋಷಿಸಿದನು.

ಮದ್ಯವನ್ನು ಸೇವಿಸದಿದ್ದಾಗ್ಯೂ ಅವರ ಕಣ್ಣುಗಳು ಶ್ರೀಕೃಷ್ಣನೆಂಬ ವಾರುಣಿಯನ್ನು ಮನಸ್ಸಿನಲ್ಲಿ ಸೇವಿಸಿದ್ದರಿಂದ ಕೆಂಪಾದವು. ಮತ್ತು ಕಣ್ಣಿಗೆ ಅಲಂಕಾರವಾದ ಕಾಡಿಗೆಯನ್ನು ಇಡದೆಯೇ ಪವಳದಂತೆ ಶೋಭಿಸಿದವು. ಶ್ರೀಕೃಷ್ಣನು ಅದರಿಂದ ಸಂತೋಷಗೊಂಡನು.

ಸ ಪೌರ ಕನ್ಯಾಕರ ವಿಪ್ರ ಕೀರ್ಣಾನ್ ಪ್ರಾಯಃ ಪ್ರತೀಚ್ಛನ್ ಉಪಚಾರಲಾಜಾನ್।
ಅಚೀಚರತ್ ಸ್ಯಂದನ ಮಬ್ಜನೇತ್ರಃ ಸವ್ಯಾಪಸವ್ಯೇನ ಗತೇನ ವೀಥೀಂ ॥೬೩॥

ನಗರ ಕನ್ನಿಕೆಯರು ಕೈಗಳಲ್ಲಿ ಇಟ್ಟು, ಉಪಚಾರವಾಗಿ ಮಾಡುವ ಸೇವೆಗಳನ್ನು ಹೆಮ್ಮೆಯಿಂದ ಸ್ವೀಕರಿಸಲು ಕೆಂದಾವರೆಯಂಥ ಕಣ್ಣುಳ್ಳವನು ಗಮನಿಸಿ ಎಡಬಲಗಳಲ್ಲಿ ನೋಡುತ್ತಾ ಬೀದಿಯಲ್ಲಿ ರಥವನ್ನು ನಡೆಸಿದನು.

ನಗರದ ಬೀದಿಗಳಲ್ಲಿ (ಇಕ್ಕೆಲಗಳಲ್ಲಿ ನಿಂತಿದ್ದ) ನೆರೆದಿದ್ದ ಆ ನಾರೀಮಣಿಗಳನ್ನು ನೋಡುತ್ತಾ, ಅವರ ಸೇವೆಗಳನ್ನು ಹೆಮ್ಮೆಯಿಂದ ಸ್ವೀಕರಿಸುತ್ತಾ ದ್ವಾರಕೆಯ ಬೀದಿಗಳಲ್ಲಿ ರುಕ್ಮಿಣೀ ಸಮೇತ ರಥವನ್ನು ಓಡಿಸಿದನು.

ಕಹಾರ ಪದ್ಮೋತ್ಪಲ ಕಾಂತಿ ಚೋರೈಃ ಕಟಾಕ್ಷಣೈಃ ಪೌರ ವಧೂ ಜನಾನಾಂ।
ಮುಗ್ಧೇಂದುಹಾಸೋ ಮುಮುದೇ ಮುಕುಂದಃ
ಪಶ್ಯನ್ ಪ್ರಿಯಾಂ ಪ್ರಾಪಿತ ಪುಷ್ಪವೃಷ್ಟಿಂ ॥೬೪॥

ಆ ನಗರ ಸ್ತ್ರೀಯರ ಶಂಖ, ತಾವರೆ, ಕನ್ನೈದಿಲೆ ಎಂಬ ಮೂರು ವಿಧ ಹೂವುಗಳಿಂದ ಸೂಸುವ ಕಾಂತಿಯನ್ನು ಕೊಳ್ಳೆ ಹೊಡೆಯುವ ಕಟಾಕ್ಷಗಳು ರುಕ್ಮಿಣಿಯ ಮೇಲೆ ಪುಷ್ಪ ವೃಷ್ಟಿಯಾಗಿ ಸುರಿದುದನ್ನು ನೋಡಿ ಶ್ರೀಕೃಷ್ಣನು ಸುಂದರವಾದ ಮುಗುಳ್ನಗೆಯೊಡನೆ ಆನಂದಪಡುತ್ತಿದ್ದನು.

ಆ ನಗರದ ಸ್ತ್ರೀಯರು ರುಕ್ಮಿಣಿಯ ಮೇಲೆ ತಮ್ಮ ಸುಂದರ ಕಟಾಕ್ಷಗಳನ್ನು ಬೀರುತ್ತಿದ್ದರು. ಅದರಿಂದ ರುಕ್ಮಿಣಿಯ ಸೌಂದರ್ಯವು ಮತ್ತಷ್ಟು ಹೆಚ್ಚಿತು. ಅವಳ ಮೇಲೆ ಪುಷ್ಪವೃಷ್ಟಿ ಸುರಿದಂತಾಯಿತು. ಅದನ್ನು ನೋಡಿ ಶ್ರೀಕೃಷ್ಣನಿಗೂ ಅತೀವ ಆನಂದವುಂಟಾಯಿತು.

ಕೃಷ್ಣಸ್ಯ ತಾಂ ಸ್ಕಂಧ ಮುಪಘ್ನಯಂತೀ ಸುರದ್ರುಮಸ್ಯೇವ ಸುವರ್ಣವಲ್ಲಿಂ ।
ಅವೇಕ್ಷ್ಯ ನೂನಂ ಚತುರಃ ಪುಮರ್ಥಾನ್ ಅನನ್ಯ ಲಭ್ಯಾಮಲಭಂತಪೌರಾಃ ॥೬೫॥

ಶ್ರೀಕೃಷ್ಣನ ಭುಜಗಳನ್ನು ಸೇರಿ, ಕಲ್ಪವೃಕ್ಷದ ಅಡಿಭಾಗಕ್ಕೆ ಸುತ್ತಿಕೊಳ್ಳುವ ಲತಾಬಳ್ಳಿಯಂತೆ ಇದ್ದ ರುಕ್ಮಿಣಿಯನ್ನು ನೋಡಿದ ನಗರವಾಸಿಗಳು ಎಲ್ಲರೂ ನಿಜವಾಗಿಯೇ ನಾಲ್ಕು ಬಗೆಯಾದ ಪುರುಷಾರ್ಥಗಳನ್ನು ಹೊಂದಿದವರಂತಾದರು.

(ದಿವ್ಯ ತೃಪ್ತಿ, ದರ್ಶನದಲ್ಲಿ ಮೋಕ್ಷಾನಂದ, ವಿವಾಹ ಬಂಧನದಲ್ಲಿ ನೋಡಿದ್ದರಿಂದ ಕಾಮ ಪುರುಷಾರ್ಥ, ಲಕ್ಷ್ಮೀ ಸಂಬಂಧದಿಂದ ಅರ್ಥ. ನ್ಯಾಯವಾದ ನಡವಳಿಕೆಗಳಿಂದ ಧರ್ಮವು ಸಿದ್ಧಿಸುತ್ತದೆ).

ಧರ್ಮ, ಅರ್ಥ, ಕಾಮ, ಮೋಕ್ಷ ಇವು ನಾಲ್ಕು ಪುರುಷಾರ್ಥಗಳನ್ನು ಬೇರೆ ಯಾವ ಯಜ್ಞ ಯಾಗಾದಿಗಳನ್ನು ಮಾಡದೆ ಕೇವಲ ಅವರಿಬ್ಬರ ದರ್ಶನ ಮಾತ್ರದಿಂದಲೇ ಆ ದ್ವಾರಕೆಯ ಪುರವಾಸಿಗಳು ಪಡೆದರು. ಯೋಗಿಗಳು ಯಾವುದಕ್ಕಾಗಿ ಕಷ್ಟಪಡುವರೋ ಅದನ್ನು ಅನಾಯಾಸವಾಗಿ ಆ ದಿವ್ಯ ದಂಪತಿಗಳನ್ನು ನೋಡುವುದರಿಂದ ಮಾತ್ರವೇ ಎಲ್ಲರೂ ಹೊಂದಿದರು.

ವಕ್ತ್ರೈಃ ಸುಧಾ ಸೋದರ ಕಾಂತಿಪೂರ್ಣೈಃ ಕಸ್ತೂರಿಕಾ ಪತ್ರ ಕಲಂಕ ದೃಶ್ಯೈಃ।
ಅಲಕ್ಷ್ಯದೇಹಃ ವಿದಧು ಮೃಗಾಕ್ಷ್ಯಃ ಪ್ರತ್ಯುಪ್ತಪೂರ್ಣೇಂದು ಶತಾನ್ ಗವಾಕ್ಷಾನ್ ॥೬೬॥

ಶ್ರೀಕೃಷ್ಣನ ಅಮೃತದಂತಿರುವ ಕಾಂತಿ ಸೂಸುವ ಕಸ್ತೂರಿ ತಿಲಕಗಳಿಂದ ಶೋಭಿಸುವ ಮುಖಗಳನ್ನು ಜಾಲಕಗಳಲ್ಲಿ ಸಮೂಹ ಸಮೂಹವಾಗಿ ಇಟ್ಟು, ತಮ್ಮ ದೇಹವು ಕಾಣದಂತೆ ಒಳಗಿರುವ ಹೆಣ್ಣುಮಕ್ಕಳು ಕಿಟಕಿಗಳಲ್ಲಿ ಪೂರ್ಣ ಚಂದ್ರನು ಅನೇಕ ಬಾರಿ ಇರುವಂತೆ ತೋರಿದರು.

ತಮ್ಮ ತಮ್ಮ ಮನೆಗಳ ಕಿಟಕಿಗಳಿಂದ ಸ್ತ್ರೀಯರು ಆ ದಿವ್ಯ ದಂಪತಿಗಳ ಮೆರವಣಿಗೆಯನ್ನು ನೋಡಿ ಆನಂದಿಸುತ್ತಿದ್ದರು. ಕೇವಲ ಮುಖಗಳನ್ನು ಮಾತ್ರ ಕಿಟಕಿಗಳಲ್ಲಿ ಇಟ್ಟು ದೇಹವನ್ನು ಮರೆಸಿಕೊಂಡು ನೋಡುತ್ತಿದ್ದರು. ಅನೇಕ ಗೃಹಗಳಿಂದ ಒಟ್ಟಿಗೆ ಎಲ್ಲರೂ ನೋಡುತ್ತಿದ್ದುದರಿಂದ ಚಂದ್ರಮುಖಿಯರಾದ ಅವರೆಲ್ಲರೂ ಚಂದ್ರನು ಒಟ್ಟಿಗೆ ತೋರುತ್ತಿರುವಂತೆ ಕಾಣುತ್ತಿದ್ದರು.

ಶುಚಿಸ್ಮಿತಾಃ ಸೌಧ ತಲಾಂತರಸ್ಥಾಃ ಪದ್ಮೇಕ್ಷಣಂ ಪ್ರೇಕ್ಷ್ಯ ಪರಿಸ್ಫುರಂತ್ಯಃ।
ಶರತ್ ಪಯೋದೋದರ ಸಂಶ್ರಿತಾನಾಂ ಕ್ಷಣದ್ಯುತೀನಾಂ ದ್ಯುತಿಮನ್ವವಿಂದನ್॥೬೭॥

ಉಪ್ಪರಿಗೆಗಳಲ್ಲಿ ಇದ್ದುಕೊಂಡು ಶ್ರೀಕೃಷ್ಣನನ್ನು ನೋಡಿ ಶುದ್ಧವಾದ ಮುಗುಳ್ನಗೆಯೊಡನೆ ಬೆಳಗುವ ಸ್ತ್ರೀಯರು, ಶರತ್ಕಾಲದ ಮೇಘಗಳಲ್ಲಿ ಉಂಟಾದ ಮಿಂಚುಗಳಂತೆ ಶೋಭಿಸಿದರು.

ಶ್ರೀಕೃಷ್ಣನ ಮುಖಾರವಿಂದವನ್ನು ನೋಡುತ್ತಿದ್ದ ಆ ಉಪ್ಪರಿಗೆಗಳಲ್ಲಿ ನಿಂತಿದ್ದ ಸ್ತ್ರೀಯರು ಸಹ ಅದ್ಭುತವಾದ ಕಾಂತಿಯಿಂದ ಬೆಳಗುತ್ತಿದ್ದರು. ಶ್ರೀಕೃಷ್ಣನನ್ನು ನೋಡಿದರೆ ಎಲ್ಲರೂ ಪ್ರಫುಲ್ಲರಾಗುತ್ತಾರೆ.

ಅಪಂಗಜಾಲೈ ರಸಿತೋತ್ಪಲಾಭೈಃ ಕೃಷ್ಣಾತ್ಮಕಂ ಭಾವ ಮಿಮೋದ್ಗಮಂತ್ಯಃ।
ವಿತೇನಿರೇ ರಾಜಪಥೇ ಮೃಗಾಕ್ಷ್ಯ ತದಾದೃತಾಂ ಬರ್ಹ ವಿತಾನ ಶೋಭಾಂ ॥೬೮॥

ಹೆಣ್ಣು ಮಕ್ಕಳು, ಕರುಣೆ ತುಂಬಿದ ಕಟಾಕ್ಷಗಳನ್ನು ಹರಡುವವರಾಗಿ ಶ್ರೀಕೃಷ್ಣನಾಗಿಯೇ ರೂಪುಗೊಂಡ ಮನಸ್ಸನ್ನು ತೋರ್ಪಡಿಸುವವರಾಗಿ, ರಾಜಬೀದಿಯಲ್ಲಿ ಆ ಶ್ರೀಕೃಷ್ಣನಿಗೆ ಪ್ರಿಯವಾದ ನವಿಲುಗರಿಗಳ ಮೇಲು ಕಟ್ಟಿನ ಪ್ರಕಾಶವನ್ನು ಹರಡಿದರು.

ತಮ್ಮ ಮನಸ್ಸಿನ ತುಂಬಾ ಕೃಷ್ಣನನ್ನೇ ತುಂಬಿಕೊಂಡಿರುವ ಆ ಸ್ತ್ರೀಯರು ಶ್ರೀಕೃಷ್ಣನಿಗೆ ಪ್ರಿಯವಾದ ಅಲಂಕಾರಗಳನ್ನು ತಾವೂ ಮಾಡಿಕೊಂಡು, ದ್ವಾರಕೆಯ ಬೀದಿಗಳಲ್ಲಿ ಕಂಗೊಳಿಸಿದರು. ಎಲ್ಲರೂ ನವಿಲುಗರಿಯಿಂದ ಶೃಂಗರಿಸಿಕೊಂಡಿದ್ದರು.

ಹರೇರಭಿಖ್ಯಾ ಮನುಪಾಧಿರಮ್ಯಾಂ ವಿಲೋಚನೈರ್ವಿತ ನಿಮೇಷ ವಿಘ್ನೈಃ।
ಆಸ್ವಾದಯಂತ್ಯಃ ಸುದೃಶಸ್ತದಾನಿಂ ಅಯತ್ನನಿಷ್ಪೀತ ಸುಧಾ ಇವಾಽಽಸನ್ ॥೬೯॥

ಅವ್ಯಾಜ ಮನೋಹರವಾದ, ಅಚ್ಯುತನ ಸೌಂದರ್ಯವನ್ನು ಎಡೆಬಿಡದೆ ತಡೆಯಿಲ್ಲದ ಕಣ್ಣುಗಳಿಂದ ಅನುಭವಿಸುವವರಾದ ಸ್ತ್ರೀಯರು ಪ್ರಯತ್ನವಿಲ್ಲದೆಯೇ ಅಮೃತವನ್ನು ಉಂಡವರಾದರು.

ಅಮೃತವನ್ನು ಪಡೆಯಲು ಹಿಂದೆ ದೇವತೆಗಳು ಬಹಳ ಪ್ರಯಾಸಪಡಬೇಕಾಯಿತು. ಆದರೆ ಈಗ ದ್ವಾರಕೆಯ ಸ್ತ್ರೀಯರೆಲ್ಲರೂ ಶ್ರೀಕೃಷ್ಣನೆಂಬ ಅಮೃತ ಸಾಗರವನ್ನು, ಪ್ರಯಾಸವಿಲ್ಲದೆ ನೋಡಿ, ತಾವೂ ಕೂಡ ಅಮೃತವನ್ನು ತಿಂದಷ್ಟೇ ಸಂತೋಷಿಸಿದರು.

'ಶ್ರೀವೈಕುಂಠ ಗದ್ಯ'ದ ಕೊನೆಯಲ್ಲಿ ಭಗವದ್ ರಾಮಾನುಜರು ಭಗವಂತನನ್ನು ಹೊಂದಿದವರು **''ಅಮೃತ ಸಾಗರಮಸ್ತಿ ಸರ್ವಾಯವಯವ ಸುಖಮಾಸೀತ್''** ಎಂದು ಸರ್ವಾವಯವಗಳು ಅಮೃತಪಾನ ಮಾಡಿದಂತೆ ಸಂತೋಷಿಸುತ್ತಾರೆ ಎಂದಿದ್ದಾರೆ. ಅದೇ ರೀತಿ ದ್ವಾರಕೆಯ ಸ್ತ್ರೀಯರು ಆನಂದಿಸಿದರು.

ಅಂಬೋರುಹಾಣಾ ಮವಲೇಪ ಸೀಮಾಂ ಕರ್ಣೋತ್ಪಲಾನಾಮಪಿ ಕಾಂತಿಕಕ್ಷ್ಯಾಂ।
ವಿಲಂಘ್ಯಯಂತಃ ಸುದೃಶಾಂ ಕಟಾಕ್ಷಾ ವಿಲಿಲ್ಯಿರೇ ಕೃಷ್ಣ ಮವಾಪ್ಯಲಕ್ಷ್ಯಂ ॥೭೦॥

ತಾವರೆ ಹೂವುಗಳ ಗರ್ವವನ್ನು ಎಲ್ಲೆಯನ್ನು, ಕೆಂಪು ಹೂಗಳಾದ ಕನ್ನೈದಿಲೆಗಳ ಕಾಂತಿಯನ್ನು ಮೀರಿಸುವ ಅವರ ಕಟಾಕ್ಷಗಳು ಶ್ರೀಕೃಷ್ಣನೆಂಬ ನಿರ್ದಿಷ್ಟ ಜಾಗವನ್ನು ಬಿಟ್ಟು ಬೇರೆಡೆಗೆ ಹೋಗದಂತೆ ನೆಟ್ಟಿದ್ದವು.

ಆ ಸ್ತ್ರೀಯರೆಲ್ಲರೂ ಶ್ರೀಕೃಷ್ಣನನ್ನು ನೆಟ್ಟ ದೃಷ್ಟಿಯಿಂದ ನೋಡುವಾಗ, ಅವರ ಆ ಕಣ್ಣೋಟಗಳು ತಾವರೆ ಹೂಗಳ ಕಾಂತಿಯನ್ನು ಮೀರಿಸುತ್ತಿದ್ದವು. ತಮ್ಮ ಕಣ್ಣಿನ ದೃಷ್ಟಿಯನ್ನು ಅವರು ಶ್ರೀಕೃಷ್ಣನಿಂದ ಕೀಳಲಿಲ್ಲ. (ತೆಗೆಯಲಿಲ್ಲ)

ತಮಾತ್ಮವಂತಂ ಪರವಿದ್ಯಯೇವ ಪರಾಕ್ರಮಂ ತತ್ಪರಯೇವ ಲಕ್ಷ್ಮ್ಯಾ।
ತಮೇವ ದೇವಂ ದಯಯೇವ ಜುಷ್ಟಂ ಸಂಮೇನಿರೇ ತತ್ವವಿದಃ ಸಭಾರ್ಯಂ॥೭೧॥

ತತ್ವವನ್ನರಿತವರು, ಭೂಮಿ ದೇವಿಯೊಡನೆ, ಸೇರಿದ ಶ್ರೀಕೃಷ್ಣನನ್ನು ಬ್ರಹ್ಮವಿದ್ಯೆಯೊಡನೆ ಸೇರಿದ ಮನೋಜಯ ಹೊಂದಿದ ಯೋಗಿಯಂತೆ, ಪರಾಕ್ರಮದಿಂದ ಕೂಡಿದ ವೀರನ ಹಿಂದೆಯೇ ಬರುವ ಜಯಲಕ್ಷ್ಮಿಯೊಡನೆ ಸೇರಿದ ದೇವ ದೇವನಂತೆ ಭಾವಿಸಿ ಗೌರವಿಸಿದರು.

ಶ್ರೀಕೃಷ್ಣ ರುಕ್ಮಿಣಿಯರನ್ನು ನೋಡಿದವರೆಲ್ಲರೂ ಅವರನ್ನು ಗೌರವಿಸುವವರಾಗಿ, ವೈಕುಂಠದಲ್ಲಿರುವ ದಿವ್ಯ ದಂಪತಿಗಳೇ ಇವರು ಎಂದು ಭಾವಿಸಿ, ಪೂಜಿಸಿ ನಮಸ್ಕರಿಸಿದರು. ಆತ್ಮಜ್ಞಾನಿಗಳು, ಪರಬ್ರಹ್ಮವನ್ನು ಸೇರುವಂತೆ ಈ ಶ್ರೀಕೃಷ್ಣ ರುಕ್ಮಿಣಿಯರ ದಾಂಪತ್ಯ ಎಂದು ಭಾವಿಸಿದರು.

ತಾಂ ಪ್ರಾಪ್ಯ ಚಿತ್ರಾಮಿವ ತಾರಕೇಶಃ ಸ್ತವ್ಯೈಃ ಸ್ತುತೋ ವಂದಿಗಣೈರಭೌಮೈಃ।
ವಿವೇಶಧಾಮಾ ಸ್ವಮುದೀರ್ಣಧಾಮಾ ವೈವಾಹಿಕೀಂ ಸಂಪದ ಮಾಪ್ತುಮಿಚ್ಛನ್॥೭೨॥

ಚಿತ್ರಾ ನಕ್ಷತ್ರವನ್ನು ಚಂದ್ರನು ಸೇರುವಂತೆ ಶ್ರೀಕೃಷ್ಣನು ರುಕ್ಮಿಣಿಯನ್ನು ಹೊಂದಿ ಇತರರಿಂದ, ಹೊಗಳಲ್ಪಡುವ ದೇವಲೋಕದ ಸ್ತುತಿ ಪಾಠಕರುಗಳಿಂದ ಪೂಣವಾಗಿ ಸ್ತುತಿಸಲ್ಪಡುವನಾಗಿ, ಉತ್ತಮ ಕಾಂತಿಯೊಡನೆ, ವಿವಾಹಕ್ಕೆ ಬೇಕಾದ ಮಂಗಳ ಸಮೃದ್ಧಿಗಳನ್ನು ಪಡೆಯಲು ತನ್ನ ಅರಮನೆಯನ್ನು ಪ್ರವೇಶಿಸಿದನು.

ಇನ್ನು ಮುಂದೆ ವಿವಾಹಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಶ್ರೀಕೃಷ್ಣನು ದ್ವಾರಕೆಯಲ್ಲಿ ತನ್ನ ಅರಮನೆಯನ್ನು ಪ್ರವೇಶಿಸಿದನು. ಚೈತ್ರ ಮಾಸದಲ್ಲಿ ಚಂದ್ರನು ಚಿತ್ರಾ ನಕ್ಷತ್ರವನ್ನು ಸೇರುತ್ತಾನೆ. ಅಲ್ಲಿಂದ ಚೈತ್ರ ಮಾಸ ಆರಂಭವಾಗಿ ಎಲ್ಲೆಡೆ ಉತ್ಸಾಹ ಪ್ರಾಪ್ತಿಯಾಗುತ್ತದೆ. ಅದೇ ರೀತಿ ಶ್ರೀಕೃಷ್ಣನು ರುಕ್ಮಿಣಿಯೊಡನೆ ಸೇರಿದಾಗ, ದ್ವಾರಕೆಯ ನಿವಾಸಿಗಳೆಲ್ಲರೂ ನವ ಉತ್ಸಾಹದಿಂದ ವಿವಾಹ ಸಿದ್ಧತೆಗಳನ್ನು ಆರಂಭಿಸಿದರು.

ವಿಹಾರ ಯೋಗೇನ ವಿಭಜ್ಯ ಯುಕ್ತಂ ಮಿಥೋ ಅನುರೂಪಂ ಮಿಥುನಂ ತದಾದ್ಯಂ।
ಉಪಾಚರನ್ ವ್ಯೋಮಚರಾ ಯಥಾರ್ಹಂ ಸಂಪ್ರೀಣನೈರುತ್ಸವ ಸಂವಿಧಾನೈಃ॥೭೩॥

ಕ್ರೀಡೆಯಂತೆ ಅಗಲಿ, ಸೇರಿದವರಂತೆ ಇಬ್ಬರೂ ಒಬ್ಬರಿಗೊಬ್ಬರು ಹೊಂದಾಣಿಕೆಯಾಗಿ ಇದ್ದ ಆ ಆದಿ ದಂಪತಿಗಳನ್ನು ನೋಡಿ ಆಕಾಶದಲ್ಲಿ ಸಂಚರಿಸುವ ದೇವತೆಗಳು ವಿಶೇಷ ಪ್ರೀತಿಯನ್ನು ತೋರ್ಪಡಿಸುವ ಮಹೋತ್ಸವ ಏರ್ಪಾಡುಗಳನ್ನು ಮಾಡಿ ಅವರನ್ನು ಉಪಚರಿಸಿದರು.

ಶ್ರೀಕೃಷ್ಣನ ರುಕ್ಮಿಣಿಯರ ವಿವಾಹ ಮಹೋತ್ಸವದಲ್ಲಿ ದೇವತೆಗಳೂ ಪಾಲ್ಗೊಳ್ಳಲು ಇಚ್ಛಿಸಿ, ತಾವೂ ಸಹ ಆ ಮದುವೆಯ ಏರ್ಪಾಡುಗಳಲ್ಲಿ ಸೇರಿಕೊಂಡು ಸಹಾಯ ಮಾಡಲು ಬಯಸಿದರು. ಅವರಿಬ್ಬರಿಗೆ ಉಪಚಾರ ಮಾಡಲು ತೊಡಗಿದರು.

ಸದಾಭಿಗಮ್ಯೈ ರಭಿಗಮ್ಯಮಾನಂ ವಿಶ್ರಾಣನೆ ವೈಶ್ರವಣಾತ್ ಪ್ರಭೂತಂ।
ತಂ ಶಂಖಪದ್ಮ ಪ್ರಮುಖಾ ಮಹಾಂತಃ ಸಿಷೇವಿರೇ ಶೇವಧಯಃ ಸಮೇತಾಃ॥೭೪॥

ಯಾವಾಗಲೂ ಸೇವಿಸಲ್ಪಡುವವರಾದ ಮಹಾತ್ಮರುಗಳಿಂದ ಸೇವಿಸಲ್ಪಡುವವರಾಗಿ ಐಶ್ವರ್ಯದಲ್ಲಿ ಕುಬೇರನಿಗೆ ಮೇಲ್ಪಟ್ಟದವನಾದ ಶ್ರೀಕೃಷ್ಣನಲ್ಲಿ ಶಂಖ, ಪದ್ಮ ಎಂಬ ನಿಧಿಗಳೆಲ್ಲಾ ತಾವೇ ಬಂದು ಸೇರಿ ಸೇವೆ ಮಾಡಿದವು.

ಶ್ರೀಕೃಷ್ಣನ ವಿವಾಹಕ್ಕೆ ಎಲ್ಲರೂ ತಾವಾಗಿಯೇ ಬಂದು ಸೇವೆ ಮಾಡಲು ಇಚ್ಛಿಸಿದರು. ಅದರಿಂದ ತಮ್ಮ ಜನ್ಮಸಾರ್ಥಕವಾಗುವುದೆಂದು ಭಾವಿಸಿದರು. ಅಷ್ಟೈಶ್ವರ್ಯಗಳು ತಾವಾಗಿಯೇ ಬಂದು ಸೇರಿ ಅವನ ಕೈಂಕರ್ಯ ಮಾಡಿದವು. ಶಂಖ, ಪದ್ಮಗಳೆಂಬ ನಿಧಿಗಳು ಅತ್ಯಂತ ಶ್ರೇಷ್ಠವಾದ ನಿಧಿಗಳು.

ಅಕೃತ್ಸ್ನ ಸಂವೇದಿನಿ ಜೀವಲೋಕೇ ಸಂಗ್ರಾಹಯನ್ ಧರ್ಮಮಥಾತ್ಮವೃತ್ತ್ಯಾ।
ಪ್ರತ್ಯರ್ಚಯಾಮಾಸ ಮುನೀನ್ ಉಪೇತಾನ್
ಪ್ರಭುಃ ಸ್ವಯಂ ಪ್ರೇಷ್ಯ ಇವೋಪಚಾರೈಃ ॥೭೫॥

ಯಾವುದನ್ನೂ ಪೂರ್ಣವಾಗಿ ತಿಳಿಯದ ಜೀವರುಗಳಿಗೆ ತನ್ನ ಆಚರಣೆಯನ್ನು ನೋಡಿ, ಪೂರ್ಣವಾಗಿ ಅನುಷ್ಠಿಸುವ ಜ್ಞಾನಿಯಂತಾಗಿ, ತಾನು ಪ್ರಭುವಾಗಿದ್ದೂ ಅಲ್ಲಿ ಬಂದಿರುವ ಮುನಿವರುಗಳೆಲ್ಲರಿಗೂ ವಿಧೇಯನಾಗಿದ್ದು ಉಪಚಾರಗಳನ್ನು ಮಾಡಿ, ಯೋಗ್ಯತಾನುಸಾರ ಸಂಭಾವನೆಗಳನ್ನು ನೀಡಿದನು.

ಶ್ರೀಕೃಷ್ಣನು ತನ್ನಮದುವೆಗೆ ಬಂದಿದ್ದ ದೇವ ಶ್ರೇಷ್ಠರುಗಳು, ಮುನಿ ಶ್ರೇಷ್ಠರು, ಪುರಜನ ವರಿಷ್ಠರು ಎಲ್ಲರಿಗೂ, ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ತಾನೇ ಸ್ವಯಂ ಆದರೋಪಚಾರ ಗಳನ್ನು ಮಾಡಿ ಎಲ್ಲರ ಯೋಗಕ್ಷೇಮವನ್ನೂ ವಿಚಾರಿಸಿದನು. ತಾನು ಸರ್ವೇಶ್ವರನಾಗಿದ್ದೂ ಸಾಮಾನ್ಯ ರಾಜನಂತೆ, ವಿವಾಹ ಮಂಟಪದಲ್ಲಿ ಸಂಭ್ರಮದಿಂದ ಓಡಿಯಾಡಿದನು.

ಅಪತ್ರಪಾವಿಪ್ಲುತ ಚೇತಸೋ ಯೇ ತ್ಯಕ್ತ್ವಾ ವಿಪಕ್ಷಂ ತರಸೋಪ ಸೇದುಃ।
ಯಥಾ ಕ್ರಮಂ ಸಾತ್ಯಕಿ ರುತ್ಸವಾದೌ ಸಂಭಾವಯಾಮಾಸ ಸಭಾ ಸದಸ್ತಾನ್ ॥೭೬॥

ಕೆಲವರು ಶುಕ್ಲಪಕ್ಷಕ್ಕೆ ಸೇರಿದವರಾಗಿದ್ದು ಅದನ್ನು ನಾಚಿಕೆ, ಕುಗ್ಗಿದ ಮನಸ್ಸುಳ್ಳವರಾಗಿ, ಬರದೆ ಇದ್ದದ್ದನ್ನು ನೋಡಿ, ಸಾತ್ಯಕಿ ಎಂಬುವನು ಅವರುಗಳನ್ನು ಉತ್ಸವದಲ್ಲಿ ಪ್ರಾರಂಭ ದಲ್ಲಿಯೇ ಸಭೆಯಲ್ಲಿ ಇರಬೇಕೆಂದು ಒತ್ತಾಯಪಡಿಸಿ, ತಕ್ಕುದಾಗಿ ಗೌರವಿಸಿದನು.

ಕೆಲವರು ಶಿಶುಪಾಲನ ಪಕ್ಷಕ್ಕೆ ಸೇರಿದ್ದರೂ, ಆ ಶ್ರೀಕೃಷ್ಣನ ವಿವಾಹ ನೋಡಬೇಕೆಂಬ ಆಸೆಯಿಂದಿದ್ದರು. ಅವರನ್ನು ನಿರಾಶೆಗೊಳಿಸದೆ ಕೃಷ್ಣನ ಸ್ನೇಹಿತನಾದ ಸಾತ್ಯಕಿಯು ಎಲ್ಲರನ್ನೂ ಸ್ವಾಗತಿಸಿ ಅವರವರ ಯೋಗ್ಯತಾನುಸಾರ ಗೌರವಿಸಿ ಆದರಿಸಿದನು. ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಒಂದೇ.

ಶುಭಂ ಯವಃ ಸ್ವಾಮಿ ಮಹೋತ್ಸವೇನ ಸ್ವರಾಜ್ಯಮಕ್ಲ್ಯಯ್ಯ ಮಿವಾಪ್ತವಂತಃ।
ದತ್ತೋಪಚಾರಾ ವಸುದೇವದಾರೈಃ ಪುಣ್ಯಾಶಯಾಃ ಪೌರಜನಾಃ ಜಹರ್ಷುಃ॥೭೭॥

ಭಾಗ್ಯಶಾಲಿಗಳಾಗಿ ಪ್ರಭುವಿನ ವಿವಾಹ ಉತ್ಸವದಲ್ಲಿ ಉತ್ತಮವಾದ ಸ್ವರ್ಗ ಹೊಂದಿ ದವರಂತೆ, ವಸುದೇವನ ಮಡದಿಯರಿಂದ ಮಾಡಲ್ಪಟ್ಟ ಉಪಚಾರಗಳನ್ನು ಸ್ವೀಕರಿಸಿ, ಶುದ್ಧವಾದ ಮನಸ್ಸಿನಿಂದ ಪುಣ್ಯಶಾಲಿಗಳಾದ ನಗರವಾಸಿಗಳು ಎಲ್ಲರೂ ಅತ್ಯಂತ ಆನಂದಭರಿತರಾದರು.

ವಿವಾಹವೇ ದೊಡ್ಡ ನಗರ ಹಬ್ಬದಂತೆ ಕೊಡಾಡಲ್ಪಟ್ಟಿತು. ವಸುದೇವನ ಮಡದಿಯರೆಲ್ಲರೂ ದ್ವಾರಕೆಯ ನಗರದ ಎಲ್ಲಾ ಸ್ತ್ರೀಯರಿಗೂ ಸಕಲ ಉಪಚಾರಗಳನ್ನು ಮಾಡಿ ಅವರೂ ಕೃತಕೃತ್ಯರಾದರು.

ಸಹೋದರನ್ಯಸ್ತ ಭರಸ್ತದಾತ್ಮಾ ರುಕ್ಮಾಣಿ ರತ್ನಾನಿ ಚ ರೌಹಿಣೇಯಃ।
ಅದತ್ತ ಸಂತೋಷ ವಶಾದ ಭೀಕ್ಷ್ಣಂ ವಾಂಛಾಧಿಕಂ ವಂದಿ ವನೀಪಕಾನಾಂ॥೭೮॥

ಜತೆಯಲ್ಲಿ ಹುಟ್ಟಿದ ಶ್ರೀಕೃಷ್ಣನು ತನ್ನಲ್ಲಿ ಗೌರವವನ್ನು ಇಟ್ಟಿದ್ದರಿಂದ, ಎಲ್ಲಾ ನಿರ್ವಾಹವನ್ನೂ ನಡೆಸಿಕೊಂಡು ಬಂದ ಬಲರಾಮನು, ಶ್ರೀಕೃಷ್ಣನ ಬಳಿ ಸೇರಿದ ಮನಸ್ಸುಳ್ಳವನಾಗಿ, ಸ್ತುತಿಪಾಠಕರುಗಳಿಗೂ, ಯಾಚಿಸುವವರಿಗೂ, ಎಲ್ಲರಿಗೂ ಮುತ್ತು, ರತ್ನ ಹೊನ್ನು ಇತ್ಯಾದಿ ಹಲವು ಬಗೆಯ ವಸ್ತುಗಳನ್ನು ಅವರವರ ಯೋಗ್ಯತಾನುಸಾರ ಅವರ ಅಪೇಕ್ಷೆಗೂ ಮೇಲ್ಪಟ್ಟು ಸಂತೋಷವಾಗಿ ಮೇಲಿಂದ ಮೇಲೆ ನೀಡುತ್ತಿದ್ದನು.

ಮದುವೆಗೆ ಆಮಂತ್ರಿತರಾಗಿ ಬಂದಿದ್ದ ಎಲ್ಲರಿಗೂ ಉಡುಗೊರೆಗಳನ್ನು ಕೊಟ್ಟು ಸತ್ಕರಿಸುವ ಜವಾಬ್ದಾರಿಯನ್ನು ಹೊತ್ತಿದ್ದ ಬಲರಾಮನು ಯಾವುದಕ್ಕೂ ಕಡಿಮೆಯಿಲ್ಲದಂತೆ ಸ್ವಲ್ಪವೂ ಕೃಪಣತನವನ್ನು ತೋರಿಸದೆ, ಮದುವೆಗೆ ಬಂದಿದ್ದ ಎಲ್ಲರನ್ನೂ ಸಂತೋಷಗೊಳಿಸಿದನು.

ಅನನ್ಯ ಭಕ್ತೈರನುಭಾವ್ಯಭೂಮ್ನಾ ದತ್ತೇಕ್ಷಣೋ ದಾನಪತಿ ಸ್ತ್ರಿಧಾಮ್ನಾ।
ಸಮಾಹಿತೈಃ ಸಂಮತ ಮುದ್ಧವಾದ್ಯೈಃ ಪುರೋಧಸಾಂ ಪೂಜನ ಮಾಚಚಾರ॥೭೯॥

ದಾನಪತಿ ಎಂಬ ಅಕ್ರೂರನೂ, ಪರಮೈಕಾಂತಿಗಳಾದ ಭಕ್ತರುಗಳಿಂದ ಅನುಭವಿಸಲ್ಪಡುವ ಹಿರಿಮೆ ಹೊಂದಿರುವ ಶ್ರೀಕೃಷ್ಣನ ಕಟಾಕ್ಷ ಹೊಂದಿದವನಾಗಿ, ಎಲ್ಲಾ ಗಮನವನ್ನೂ ಇಟ್ಟು ಕಾರ್ಯಗಳನ್ನು ಮಾಡುತ್ತಾ ಉದ್ಧವರೇ ಮೊದಲಾದವರ ಸಮ್ಮತಿ ಪಡೆದು ಪುರೋಹಿತರುಗಳನ್ನು ಸತ್ಕರಿಸಿದನು.

ಅಕ್ರೂರನು ಬ್ರಾಹ್ಮಣ ಗೋಷ್ಠಿಯ, ಮೇಲ್ವಿಚಾರಣೆಯನ್ನು ವಹಿಸಿಕೊಂಡು, ವೇದ ಪ್ರವಾಠಕರು, ಪುರೋಹಿತರು ಎಲ್ಲರಿಗೂ ಉಥೇಚ್ಛವಾಗಿ ದಕ್ಷಿಣೆ, ತಾಂಬೂಲಾದಿಗಳನ್ನು ನೀಡಿ, ಸಂತೋಷದಿಂದ ಸತ್ಕರಿಸಿದನು. ಯಾವುದೇ ಸಮಾರಂಭದಲ್ಲಿ ಬ್ರಾಹ್ಮಣರ ಪೂಜೆ ಅತ್ಯಗತ್ಯ.

ಸಾಮಾನ್ಯ ಜನರು ವಿವಾಹದ ಸಂದರ್ಭದಲ್ಲಿ ಅನುಸರಿಸುವ ಸಂಪ್ರದಾಯಗಳನ್ನು ಲೋಕದಂಪತಿಗಳೂ ಅನುಸರಿಸಿದರು. ಸಪ್ತಪದಿ ಮುಂತಾದವುಗಳನ್ನು ಮಾಡಿ ಅಗ್ನಿಪ್ರದಕ್ಷಿಣೆ ಮಾಡಿದರು.

ಅನ್ವೇತು ವಿಷ್ಣುಃ ಸ್ವಯಮಿತ್ಯುದೀರ್ಯ ಪ್ರಿಯಾಂ ಪರಾಧೀನ ಇವಾನುಗಚ್ಛನ್।
ಜಾಯಾಪತೀನಾಂ ಜಗದುದ್ಭವಾನಾಂ ಭವ್ಯಾಂ ದಶಾಂ ಭಾವಯತಿಸ್ಮ ನಾಥಃ ॥೬೦॥

"ವಿಷ್ಣು ನಿನ್ನ ಹಿಂದೆ ಎಡೆಬಿಡದೆ ಬರುವೆನು" ಎಂಬ ಮಂತ್ರವನ್ನು ವಿಷ್ಣುವಾದ ತಾನೇ ಹೇಳಿಕೊಂಡು ಪ್ರಿಯೆಯ ಹಿಂದೆ ಹೋಗುವವನಾಗಿ ಜಗತ್ತಿನಲ್ಲಿ ಅಗ್ನಿಪರಿಕ್ರಮಣ ಮಾಡುವ ಎಲ್ಲಾ ಭರ್ತಾ ಗಳಂತೆ (ಗಂಡಂದಿರಂತೆ) ನಡೆದುಕೊಂಡನು.

ಅಗ್ನಿ ಪ್ರದಕ್ಷಿಣೆ ಮಾಡುವಾಗ ಹೇಳುವ "ಏಕಮಿಷೆ ವಿಷ್ಣುಸ್ತ್ವಾ ಸ್ವೇತು" ಎಂಬ ಮಂತ್ರಗಳನ್ನು ಸ್ವಯಂ ವಿಷ್ಣುವಿನ ಅವತಾರವಾದ ಶ್ರೀಕೃಷ್ಣನು ಹೇಳುತ್ತಾ ಎಲ್ಲರಂತೆಯೇ ಕರ್ಮಗಳನ್ನು ನಡೆಸಿದನು. ಮನುಷ್ಯನಾಗಿ ಹುಟ್ಟಿದ ಮೇಲೆ ಮನುಷ್ಯನಂತೆಯೇ ನಡೆಯ ಬೇಕಲ್ಲವೇ?

ಆತ್ಮಾನಮೇವ ಸ್ವಯಮಗ್ನಿರೂಪಂ ಪರಿಕ್ರಮ್ಯೈಃ ಪರ್ಯಚರತ್ ಸ ದೇವಃ।
ವಿಶ್ವಸ್ಯ ಬಾಹ್ಯಾಂತರ ನಿತ್ಯವೃತ್ತ್ಯಾ ನ ಕರ್ಮ ಕರ್ತಾ ಚ ಯ ಏವ ಯೇಷಾಂ ॥೬೧॥

ಜಗತ್ತಿನಲ್ಲಿ ಒಳಗೆ ಹೊರಗೆ ಎಲ್ಲೆಲ್ಲೂ ತಾನು ಯಾವಾಗಲೂ ಇರುವುದರಿಂದ, ಪ್ರದಕ್ಷಿಣ ಎಂಬ ವ್ಯಾಪಾರಗಳಿಗೆ ಯಾರು ಅರ್ಥವನ್ನು ಹೇಳಬಲ್ಲರು? ಆ ದೇವದೇವನು ಅಗ್ನಿರೂಪವಾದ ತನ್ನನ್ನು ತಾನೇ ಪ್ರದಕ್ಷಿಣೆ ಮಾಡಿಕೊಂಡಂತಾಯಿತು.

"ಅಂತರ್ ಬಹಿಶ್ಚ ತತ್ಸರ್ವಂ ವ್ಯಾಪ್ತ ನಾರಾಯಣ ಸ್ಥಿತಃ" ಎಂಬಂತೆ ಎಲ್ಲಾ ಚರಾಚರ ವಸ್ತುಗಳಲ್ಲಿ ತಾನಿದ್ದರೂ ಸಹ, ಲೋಕ ವಿಡಂಬನಾರ್ಥವಾಗಿ, ಅಗ್ನಿ ಸ್ವರೂಪನಾದ ತನ್ನನ್ನು ತಾನೇ ವಿವಾಹದಲ್ಲಿ ಪ್ರದಕ್ಷಿಣೆ ಮಾಡಿಕೊಂಡನು ಸ್ವಾಮಿ. ಕರ್ಮಗಳಿಗೆ ವಶನಲ್ಲದಿದ್ದರೂ, ಕರ್ಮವಶ್ಯನಂತೆ ನಟಿಸಿದನು.

ಪ್ರದಕ್ಷಿಣೇನ ಕ್ರಮಣೇನ ತಾಭ್ಯಾಂ ದತ್ತಾರ್ಚನೋ ದಿವ್ಯ ವಧೂವರಾಭ್ಯಾಂ।
ನೂನಂ ತಥಾऽऽನರ್ಚ ವಿಘೂರ್ಣನೇನ ಸ್ವಾಂತಃ ಸ್ಥಿತೌ ವಹ್ನಿರಪಿ ಸ್ವಯಂ ತೌ ॥೬೨॥

ಪರಮಪದ ವಾಸಿಯಾದ ಲಕ್ಷ್ಮೀದೇವಿಯಿಂದಲೂ, ಪರಮ ಪುರುಷನಿಂದಲೂ, ಅಪ್ರಾಕೃತ ದೇಹ ಹೊಂದಿ ಬಲಗಡೆ ಬಂದು ಆರಾಧಿಸಲ್ಪಡುವ ಅಗ್ನಿಯನ್ನು ಪ್ರದಕ್ಷಿಣೆಯಾಗಿ ಸುತ್ತಿ ಜ್ವಾಲೆಯನ್ನು ಬೆಳಗಿಸಿದನು. ತನ್ನಲ್ಲಿ ಬೇರೆ. ಅಪ್ರಾಕೃತ ರೂಪ ಹೊಂದಿರುವ ಅವರುಗಳನ್ನು ತಾನೂ ಪ್ರದಕ್ಷಿಣೆ ಮಾಡಿ ಆರಾಧಿಸಿದನು.

ಆಹನ್ಯಮಾನಾ ಧೃತಹೇಮಕೋಣೈಃ ಗಂಧರ್ವ ಮುಖ್ಯೈರಿವ ಗಾಢವಿದ್ಯೈಃ।
ಜಾತಾನುನಾದಾ ಜಗತಾಂ ತ್ರಯಾಣಾಂ ದೋಷಚ್ಛಿದೋ
ದುಂದುಭಯ ! ಪ್ರಣೇದುಃ ॥೮೦॥

ಕೈಯ್ಯಲ್ಲಿ ಚಿನ್ನದ ಕೊಂಬು ಹಿಡಿದು ಉತ್ತಮವಾದ ಗಂಧರ್ವರುಗಳಂತೆ ವಿದ್ಯೆಯನ್ನು ಕಲಿತಿರುವವರುಗಳಿಂದ, ನುಡಿಸಲ್ಪಟ್ಟು ತಮ್ಮ ವಾದ್ಯದಿಂದ ಮೂರು ಜಗತ್ತಿನ ದೋಷಗಳನ್ನು ಹೋಗಲಾಡಿಸುವಂತೆ ಭೇರಿವಾದ್ಯಗಳು ಮೊಳಗಿದವು.

ಆ ವಿವಾಹ ಸಂದರ್ಭದಲ್ಲಿ ಬಾರಿಸಿದ ಭೇರಿ ತಾಡನಗಳೂ, ಊದಿದ ಶಂಖ ಕಹಳೆಗಳ ಧ್ವನಿಗಳೂ, ಜಗತ್ತಿನ ಎಲ್ಲಾ ಪಾಪಗಳನ್ನು ನಿವಾರಣೆ ಮಾಡುವ ರೀತಿಯಲ್ಲಿ ಇದ್ದು ಅದನ್ನು ಕೇಳಿದವರೆಲ್ಲರೂ ಪರಮಾನಂದಭರಿತರಾದರು.

ವಿಭಾವಿತಂ ಶಿಕ್ಷಿತ ನಾಟ್ಯ ವೇದೈ ರುದ್ದಾ ಹಂಸಗೀತ ಮುದಾರ ಕ್ಲ್ಪಪ್ತಂ।
ಪ್ರಸಾದನಂ ದೃಷ್ಟಿ ಮನಶ್ರುತಿನಾಮಾ ದಿವ್ಯಮಾಸ್ಕಂದಿತ ದಿವ್ಯಮಾಸೀತ್ ॥೮೧॥

ನಾಟ್ಯ ವೇದದಲ್ಲಿ ದೀಕ್ಷೆ ಹೊಂದಿದವರನ್ನು ಇಟ್ಟುಕೊಂಡು ನಡೆಸುವ ಸುಂದರವಾದ ವಿವಾಹದಲ್ಲಿ ಮಂಗಳಕವಾದ ಸಂಗೀತವು ಭೂಮಿಯಲ್ಲಿ ಉಂಟಾದುದಾದರೂ ಕಣ್ಣು ಮನ ಮತ್ತು ಕಿವಿಗಳಿಗೆ ತೃಪ್ತಿಕರವಾಗಿ ದೇವಲೋಕದ ಸಂಗೀತಕ್ಕಿಂತಲೂ ಮೇಲ್ಪಟ್ಟದ್ದಾಗಿತ್ತು.

''**ಗೀತಂ ವಾದ್ಯಂ ತಥಾ ನೃತ್ತಂ ತ್ರಯಂ ಸಂಗೀತ ಮುಚ್ಯತೇ**'' ಎಂಬಂತೆ ಆ ವಿವಾಹದ ಸಂದರ್ಭದಲ್ಲಿ ನಾಟ್ಯಶಾಸ್ತ್ರ ಪ್ರವೀಣರೂ, ಸಂಗೀತದಲ್ಲಿ ಪ್ರಾವೀಣ್ಯ ಪಡೆದವರೂ, ತಮ್ಮ ತಮ್ಮ ಪ್ರತಿಭೆ ತೋರಿಸುವವರಾಗಿ, ಎಲ್ಲರ ಕಣ್ಣನ, ಕಿವಿಗಳಿಗೆ, ಆಪ್ಯಾಯಮಾನವಾಗಿದ್ದು ದೇವಲೋಕದ ಗಾನದಂತೆ ಇತ್ತು. ಅಥವಾ ಅದಕ್ಕೂ ಹೆಚ್ಚಿನ ಮೇಲ್ಮಟ್ಟದಲ್ಲಿ ಇತ್ತು.

ಲಾವಣ್ಯಪೂರಂ ಲಲಿತಾಂಗಯಷ್ಟೇಃ ಕಾತ್ಸ್ನೇನ ನಿರ್ವೇಷ್ಟು ಮಪಾರಯಂತ್ಯಃ।
ಅಂಗಾನಿ ವದ್ವಾಃ ಕುಲವೃದ್ಧನಾರ್ಯಃ ಪ್ರಸಾಧನೈರಂತರಯಾಂ ಬಭೂವುಃ ॥೮೨॥

ಉತ್ತಮ ಕುಲಸ್ತ್ರೀಯರು ಕೂಡಿ, ಭೂಮಾ ದೇವಿಯ ಮಗಳಾದ ರುಕ್ಮಿಣಿಗೆ ಅಲಂಕಾರ ಗಳನ್ನು ಮಾಡಿದರು. ಅದನ್ನು ನೋಡಿದಾಗ ದಿವ್ಯವಾದ ದೇಹದಿಂದ ಲಾವಣ್ಯ ಪ್ರವಾಹದಲ್ಲಿ ಮುಳುಗಿ, ದಡ ಸೇರಲು ಇಚ್ಛೆಯಿಲ್ಲದೆ, ಅಲ್ಲೇ ಅನುಭವ ಹೊಂದಬೇಕೆಂದು ಚಿಂತಿಸಿ, ಕೆಲ ಅಂಗಗಳನ್ನು ಆಭರಣಗಳನ್ನಾಗಿ ಮಾಡಿ ಮರೆ ಮಾಚಿದರೇನೋ ಎನ್ನುವಂತಿತ್ತು.

ರುಕ್ಮಿಣೀ ದೇವಿಗೆ ಅವಳ ಸಖಿಯರು ವಿವಾಹಕ್ಕೆ ಯೋಗ್ಯವಾದ ಅಲಂಕಾರಗಳನ್ನು ಮಾಡಿದರು. ರುಕ್ಮಿಣಿಯ ಅಂಗಗಳು ಸಹಜವಾಗಿ ಸುಂದರವಾಗಿ ಅವುಗಳಿಗೆ ಆಭರಣಗಳ ಅವಶ್ಯಕತೆ ಇಲ್ಲವೇನೋ ಎಂದು ತೋರುತ್ತಿತ್ತು.

ಪ್ರಯುಜ್ಯಮಾನಾನಿ ತಯೋರ್ಯಥಾರ್ಹಂ ಮಂಗಲ್ಯಮಾಲ್ಯಾಭರಣಾಕ್ಷತಾನಿ।
ಪ್ರಾಯೇಣ ಲೋಕಾಭ್ಯುದಯಂ ಪ್ರದಾತುಂ ತತ್ಸಂಗಮಾತ್
ತಾದೃಶ ತಾಮ ಕಾಂಕ್ಷನ್ ॥೮೩॥

ಅವರಿಬ್ಬರಿಗೂ ಉಚಿತವಾಗಿ ಅರ್ಪಣ ಮಾಡಲು, ಮಂಗಳಕರವಾದ ಹೂ ಮಾಲೆಗಳು, ಆಭರಣಗಳು, ಶೋಭನಾಕ್ಷತೆ ಇವೆಲ್ಲವನ್ನೂ ತಾವು ಲೋಕಕ್ಷೇಮ ಮಾಡುವುದಕ್ಕಾಗಿ ಅವುಗಳೊಡನೆ ಸೇರಿ ಮಂಗಳವಾದ ತನ್ಮೈಯನ್ನು ತಾವು ಹೊಂದಲು ಇಚ್ಛಿಸಿದವು.

ಅವರ ದಿವ್ಯ ದೇಹಗಳನ್ನು ಅಲಂಕರಿಸಲು ಪುಷ್ಪ ಮಾಲೆಗಳು, ಆಭರಣಗಳು, ಇಚ್ಛಿಸಿ ಆ ಕೈಂಕರ್ಯದಿಂದ ತಾವು ಆ ದಿವ್ಯ ದಂಪತಿಗಳ ಜಗತ್ತಿನ ಯೋಗಕ್ಷೇಮ ಕಾರ್ಯದಲ್ಲಿ ಭಾಗಿಯಾಗಲು ಅವಕಾಶ ದೊರೆತಿದ್ದು ಅದು ತಮ್ಮ ಭಾಗ್ಯವೆಂದು ಭಾವಿಸಿದವು.

ಅರಾತಿ ಪಕ್ಷಾರ್ಣವ ಮಂದರಾಭೆ ಹಸ್ತೆ ಹರೇರ್ಯತ್ತದ ಬಂಧಿಸೂತ್ರಂ।
ತದಾದಧೇ ಸ್ಥಾನ ವಶಾದಭಿಖ್ಯಾಂ ಸಂವೀತ ನಾಗೇಂದ್ರ ನಿದರ್ಶನೀಯಾಂ॥೮೪॥

ಸಮುದ್ರದಂತೆ ಇದ್ದ ಶತ್ರುಗಳ ಪಕ್ಷವನ್ನು ತಡೆಯಲು, ಮಂದರ ಪರ್ವತದಂತಿರುವ ಶ್ರೀಕೃಷ್ಣನ ದಿವ್ಯ ಹಸ್ತದಲ್ಲಿ ಕಟ್ಟಲ್ಪಟ್ಟ ಮಂಗಳವಾದ ವಿವಾಹ ಕಂಕಣ ಸೂತ್ರವು ಆ ದಿವ್ಯ ಹಸ್ತದ ಸೇರುವಿಕೆಯಿಂದ ಮಂದರ ಪರ್ವತಕ್ಕೆ ಸುತ್ತಲ್ಪಟ್ಟ ವಾಸುಕಿಯೇನೋ ಎಂಬಂತೆ ತೋರುತ್ತಿತ್ತು.

ವಿವಾಹಕ್ಕೆ ಮುನ್ನ ವಧೂವರರ ಕೈಯ್ಯಲ್ಲಿ ಮಂಗಳಕರವಾದ ಕಂಕಣ ಕಟ್ಟುವುದು ವಾಡಿಕೆ. ಇಲ್ಲಿ ಶ್ರೀಕೃಷ್ಣನ ಬಲದ ಕೈಯ್ಯಲ್ಲಿ ಕಟ್ಟಿದ್ದ ಕಂಕಣವು, ಸಮುದ್ರಮಂಥನ ಕಾಲದಲ್ಲಿ ಮಂದರ ಪರ್ವತಕ್ಕೆ ಸುತ್ತಲ್ಪಟ್ಟ ವಾಸುಕಿ ಸರ್ಪವೇನೋ ಎಂಬಂತೆ ತೋರುತ್ತಿತ್ತು. ಆ ಶ್ರೀಕೃಷ್ಣನ ಹಸ್ತವು ಶತ್ರುಗಳ ಸಮೂಹವೆಂಬ ಸಮುದ್ರವನ್ನು ಕಡೆದ ಕೈಯ್ಯಾಗಿತ್ತು.

ಸಮೇಧಿತಸ್ತಸ್ಯ ವಿವಾಹ ವಹ್ನಿಃ ಪುರೋಧಸಾ ಪುಣ್ಯ ಕೃದಗ್ರಿಮೇಣ।
ಪ್ರದಕ್ಷಿಣಾ ವೃತ್ತ ಶಿಖಾಕಲಾಪಃ ಪ್ರಾಯೇಣ ನಿರಾಜನ ಮಾತತಾನ ॥೮೫॥

ಪುಣ್ಯ ಮಾಡುವವರ ಮುಂದೆ ನಿಲ್ಲುವವರಾದ ಪುರೋಹಿತರುಗಳಿಂದ ಶಾಸ್ತ್ರಪ್ರಕಾರ ಹುತ ಮಾಡಲ್ಪಟ್ಟ ವಿವಾಹಾಗ್ನಿಯಾದುದು ಪ್ರತಿಕ್ಷಣವೂ ಪ್ರಜ್ವಲಿಸುತ್ತಾ, ವಧೂವರರಿಬ್ಬರಿಗೂ ಮಂಗಳಾರತಿ ಮಾಡುವಂತಿತ್ತು.

ವಿವಾಹ ಕಾಲದಲ್ಲಿ ಅಗ್ನಿ ಕಾರ್ಯಗಳು ನಡೆದವು. ಆ ಅಗ್ನಿವೇದಿಕೆಯಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯು ಅವರಿಬ್ಬರೂ ಮಂಗಳಾರತಿ ಎತ್ತುತ್ತಿತ್ತು. ಅಗ್ನಿ ಕಾರ್ಯಗಳನ್ನು ಶ್ರೇಷ್ಠವಾದ ಪುರೋಹಿತರುಗಳು ನಡೆಸಿದರು.

ಆಶಾಸ್ಯ ಲಾಜಾಂಜಲಿ ಹೋಮ ಭಾಜಾ ಕ್ಷೇಮಾಶಿಷಾ ಕಿಂಚಿದಶೇಷಹೃದ್ಯಂ।
ಅನ್ಯೋನ್ಯ ಮಾಕೇಕರ ಸಸ್ಮಿತಾಕ್ಷ್ಯಾ ವಪಶ್ಯತಾ ಮಾದಿಮ ದಂಪತೀ ತೌ ॥೮೬॥

ಕಡೆಯಲು ಮಂದರ ಪರ್ವತವನ್ನು ಇಟ್ಟುಕೊಂಡು ಎಲ್ಲರಿಗೂ ಇಷ್ಟವಾದುದನ್ನು ಕೇಳಿಕೊಂಡು ನೀಡಿ ಮೊದಲಿನವರಾದ ಅವರಿಬ್ಬರೂ ಒಬ್ಬರಿಗೊಬ್ಬರು ಮುಗುಳ್ನಗೆಯಿಂದ ಪ್ರೇಮದ ಸೋಲಿನ ನೋಟದಿಂದ ನೋಡುತ್ತಾ ಇದ್ದರು.

ಇವಳು ಅವನಿಗೆ ಸೋತಳು. ಅವನು ಇವಳಿಗೆ ಸೋತನು. ಹೀಗೆ ಪರಸ್ಪರ ಸೋಲನ್ನು ಸಂತೋಷದಿಂದ ಅನುಭವಿಸುತ್ತಾ ಇಬ್ಬರೂ ವಿವಾಹ ಕಾರ್ಯಗಳಲ್ಲಿ ಪಾಲ್ಗೊಂಡರು.

ವೈಲಕ್ಷ್ಯಡೋಲಾಮಿವ ಸಂಶ್ರಿತಾನಾಂ ವಿಲೋಚನಾನಾಂ ವವೃಧೇ ವಿಹಾರೈಃ।
ತಯೋರನನ್ಯಾದೃಶ ವೈಭವಾನಾಂ ಅನ್ಯೋನ್ಯ ರಾಜೀವ ಮಧುವ್ರತಾನಾಂ ॥೮೭॥

ಬೇರೆಲ್ಲೂ ಕಾಣದ ವೈಭವ ಹೊಂದಿರುವವನೂ, ಒಬ್ಬೊಬ್ಬರು ತಾವರೆ ಹೂವಿನಂತೆ ಬೆಳಗಿ ಆ ಹೂವಿನಂತೆ ಬೆಳಗಿ ಆ ಹೂವನ್ನು ಅನುಭವಿಸುವ ದುಂಬಿಗಳಂತೆ ನೋಟವನ್ನು ಅವರಿಬ್ಬರಿಗೂ ನಾಚಿಕೆಯಾಗಿ ಉಯ್ಯಾಲೆಯೇರಿ, ಅಲ್ಲಿ ಸುತ್ತುತ್ತಾ ಇದ್ದು, ವಿಶೇಷವಾಗಿ ಮೇಲ್ಮೆಯನ್ನು ಹೊಂದಿದವು. ?

ಅವರಿಬ್ಬರ ಮುಖ ಕಮಲಗಳು, ಆಗತಾನೇ ಅರಳಿದ ತಾವರೆ ಹೂವಿನಂತೆ ಬೆಳಗುತ್ತಿದ್ದವು. ಆ ಹೂವುಗಳಿಗೆ ಮುತ್ತಿಕೊಂಡಿದ್ದ ದುಂಬಿಗಳು ಅವರಿಬ್ಬರೂ ಕುಳಿತಿದ್ದ ಉಯ್ಯಾಲೆಯನ್ನು ಸುತ್ತುತ್ತಾ ಅವರಂತೆಯೇ ತಾವೂ ಸಹ ಮೇಲ್ಮೆಯನ್ನು ಹೊಂದುದಾಗಿ ಭಾವಿಸಿದವು.

ಪರಸ್ಪರಂ ಪಾಣಿಸೋಜ ಯೋಗಾತ್ ಬಭೂವತುಸ್ತೌ ಪುಲಕಾಂಚಿ ತಾಂಗೌ।
ಅಸ್ವಿದ್ಯತಾಂ ಚ ಜ್ವಲನಸ್ತು ಮಂದೈ ರಸೂತ ಧೂಮೈ ರಧಿವಾಸ ಮಾತ್ರಂ ॥೮೮॥

ಇಬ್ಬರೂ ಒಬ್ಬರಿಗೊಬ್ಬರು ತಾವರೆಯಂಥಾ ಹಸ್ತಗಳನ್ನು ಹಿಡಿದುಕೊಂಡ ಸಮಯದಲ್ಲಿ ದೇಹ ಪೂರ್ತಿ ರೋಮಾಂಚನಗೊಂಡರು. ಬೆವರಿದರು. ಆ ಬೆವರಿನ ಸ್ಪರ್ಶದಿಂದ ಸುರಿದ ಆ ಅಗ್ನಿಯ ತುಪ್ಪವು, ಅರಳು ಸೇರಿದ ಧೂಪದಿಂದ ಬಂದ ಸುವಾಸನೆ ಬೀರಲು ಕಾರಣ ವಾಯಿತು.

ಅವರ ಪಾಣಿಗ್ರಹಣ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಪುಳಕಿತಗಾತ್ರರಾಗಿ ಕೈಯ್ಯಿಂದ ಸುರಿದ ಬೆವರು, ಅಗ್ನಿಗೆ ತುಪ್ಪ ಸುರಿದಂತಾಗಿ ಅಗ್ನಿಯಿಂದ ಸುವಾಸನೆ ಹೊರಟಿತು.

ಸಮಂತ್ರಕಂ ಸಾಕ್ಷಿಣಿ ಹವ್ಯವಾಹೆ ಸಖ್ಯೋಚಿತಾಂ ಸಪ್ತಪದಿಂ ಭಜಂತೌ।
ಸ್ವಶಾಸನೇನ ಸ್ವಯಮನ್ವಯಾತಾಮ್ ಆಚಾರ ಮಾಗಂತುಕ ದಂಪತೀನಾಂ ॥೮೯॥

ಇಬ್ಬರೂ ಅಗ್ನಿಯನ್ನು ಸಾಕ್ಷಿಯಾಗಿ ಇಟ್ಟು ಮಂತ್ರಪೂರ್ವಕವಾಗಿ ಏಳು ಅಡಿ ಇಟ್ಟರು. ಇದು ತಮ್ಮ ಆಜ್ಞೆಗೆ ತಾವೇ ಒಳಪಟ್ಟವರಂತೆ, ಇದಕ್ಕೆ ಮುಂಚೆ ಸೇರದೆ, ಹೊಸದಾಗಿ ದಂಪತಿಗಳಾಗುವವರು ನಡೆಸುವ ಆಚಾರವನ್ನು ತಾವೂ ಅನುಸರಿಸಿದರು.

ವಿವಾಹದ ಎಲ್ಲಾ ಪ್ರಕ್ರಿಯೆಗಳನ್ನೂ ವಿಧಿವತ್ತಾಗಿ ನೆರವೇರಿಸಿದನು. ಅಪ್ರಾಕೃತ ದೇಹವುಳ್ಳವರಾದರೂ, ಪ್ರಾಕೃತ ದೇಹ ಪಡೆದಿರುವಂತೆ, ಆಯಾಯ ದೇವತೆಗಳನ್ನು ಶಾಸ್ತ್ರೋಕ್ತವಾಗಿ ಪೂಜಿಸಿದನು.

ತಸ್ಯಾಃ ಸಲೀಲಂ ಚರಣಾರವಿಂದಂ ಕಾಮೀ ಗೃಹೀತ್ವಾ ಕರಪಂಕಜಾಭ್ಯಾಂ।
ಆಸ್ಥಾಪಯತ್ ಯಾಂ ದೃಷದಂ ಮುಕುಂದಃ ಸಾಭೂತ್
ಸ್ವಯಂ ಮೌಲಿಮಣಿಃ ಶ್ರುತಿನಾಂ ॥೯೩॥

ಶ್ರೀಕೃಷ್ಣನು ಕಾಮಿಯಾದುದರಿಂದ ವಿನೋದವಾಗಿ ಅವಳ ದಿವ್ಯಪಾದಾರವಿಂದಗಳನ್ನು ತನ್ನ ಎರಡು ಕೈಗಳಿಂದ ಹಿಡಿದು ಎತ್ತಿ ಯಾವ ಅಮ್ಮಿ ಕಲ್ಲಿನ ಮೇಲೆ ಇಟ್ಟಿದ್ದನೋ, ಅದು ವೇದ ಶಿರಸ್ಸುಗಳಲ್ಲಿ ಬೆಳಗುವ ಮಣಿಯಂತಿತ್ತು. (ವೇದ ಇಡುವ ಕಲ್ಲಾಗಿತ್ತು).

ಮದುವೆಯ ಸಂದರ್ಭದಲ್ಲಿ ಮಡದಿಯ ಕಾಲನ್ನು 'ಅಮಿ' ಎಂಬ ಕಲ್ಲಿನ ಮೇಲೆ ಗಂಡನಾದವನು ಎತ್ತಿ ಇಟ್ಟು ಕಾಲುಂಗುರ ತೊಡಿಸಬೇಕು. ಅದೇ ರೀತಿ ಕೃಷ್ಣನು ಲೋಕಮಾತೆಯಾದ ರುಕ್ಮಿಣಿಯ ಪಾದವನ್ನು ಅಮೀ ಕಲ್ಲಿನ ಮೇಲೆ ಇಟ್ಟನು. ಆ ಕಲ್ಲು ವೇದಗಳ ಶಿರಸ್ಸಿನಂತೆ ಇದ್ದು ಅವಳ ಪಾದವು ಅಲ್ಲಿ ದಿವ್ಯ ಮಣಿಯಂತೆ ಶೋಭಿಸಿತು. ಗೋಪಾಲ ವಿಂಶತಿಯಲ್ಲೂ ಶ್ರೀಕೃಷ್ಣನನ್ನು ಆಚಾರ್ಯರು 'ಕಾಮೀ' ಎಂದು ಕರೆದಿದ್ದಾರೆ.

ಯದತ್ರ ಕರ್ಮಣ್ಯ ಯಥಾಕೃತಂ ತತ್ ಸ್ವಿಷ್ಟಂ ಕ್ರಿಯಾದಗ್ನಿರಿತಿ ಬ್ರುವಾಣಃ।
ಸ್ವತೇಜಸಾ ಭಾವಿತ ವಿಶ್ವತೇಜಾಃ ಸ್ವಾಹಾ ಸಖಂ ದೇವ ಮುಪಾಸ್ತ ದೇವಃ ॥೯೪॥

ಅಂತ್ಯದಲ್ಲಿ ಸ್ವಿಷ್ಟ ಕೃತ್ಯಾಗವನ್ನು ಮಾಡಿದನು. ಈ ವಿವಾಹ ಶುಭ ಕಾರ್ಯದಲ್ಲಿ ಯಾವುದೋ ಮೇಲೆ ಕೆಳಗೆ ಕ್ರಮ ತಪ್ಪಿ ಮಾಡಲ್ಪಟ್ಟದ್ದಾಗಿ ಇರಲಿಲ್ಲ. ಅಗ್ನಿಕಾರ್ಯವನ್ನು ಶಾಸ್ತ್ರರೀತ್ಯ ಮಾಡಿದುದರಿಂದ, ಎಲ್ಲವೂ ಸಾಂಗವಾಗಿ ನಡೆದು, ತನ್ನನ್ನು ತಾನೇ ಆರಾಧಿಸಿಕೊಂಡಂತಾಯಿತು.

ಎಲ್ಲ ಶಾಸ್ತ್ರವಿಧಿಗಳು ಚಾಚೂ ತಪ್ಪದೆ ಕ್ರಮವಾಗಿ ನಡೆದವು. ಇದರಿಂದಾಗಿ ಸರ್ವೇಶ್ವರನು ತನ್ನನ್ನು ತಾನೇ ಆರಾಧಿಸಿಕೊಂಡನು. ಅವನಿಗೆ ಯಾರ ಆರಾಧನೆಯೂ ಅಗತ್ಯವಿಲ್ಲ. ಆದರೂ ಈಗ ವಸುದೇವ ಪುತ್ರನಾಗಿ ಹುಟ್ಟಿರುವುದರಿಂದ, ತಾನೂ ಸಾಮಾನ್ಯ ಮನುಷ್ಯನಂತೆಯೇ ನಡೆದುಕೊಂಡನು.

ರಾಮಸ್ಯ ಸೀತೇವ ರಮೇವ ವಿಷ್ಣೋರಮುಷ್ಯ ಭೂಯಾಸ್ತ್ವಮಿಹೈಕ ಪತ್ನಿ।
ಇತ್ಯುಚಿಷೋ ಯಾದವ ಬದ್ಧದಾರಾನ್ ಪ್ರಿತಾಶಯಾ ಪೈಕ್ಷತ ಸಾ ಸನಾಥಾ ॥೯೫॥

ಶ್ರೀರಾಮನಿಗೆ ಸೀತೆಯಂತೆ ವಿಷ್ಣುವಿಗೆ ಲಕ್ಷ್ಮಿಯಂತೆ ಇವನಿಗೆ ನೀನು ಏಕಪತ್ನಿಯಾಗಿ ಇರುವೆ ಎಂದು ಯದುವಂಶದ ಹಿರಿಯರುಗಳ ಹೆಂಡತಿಯರು ಆಶೀರ್ವದಿಸಿದಾಗ, ಅವರುಗಳನ್ನು ರುಕ್ಮಿಣಿಯು ನಾಥನೊಡನೆ ಸೇರಿ ಸಂತೋಷದಿಂದ ನೋಡಿದಳು.

ಆ ದ್ವಾರಕೆಯಲ್ಲಿ ಇದ್ದ ಯದುವಂಶದ ಪತಿವ್ರತಾ ಸ್ತ್ರೀಯರು ಅವಳನ್ನು "ನೀನು ಕೃಷ್ಣನಿಗೆ ಏಕಪತ್ನಿಯಾಗಿ, ಪ್ರಿಯಪತ್ನಿಯಾಗಿ ಇರುವೆ ಎಂದು ಅವಳನ್ನು ಆಶೀರ್ವದಿಸಿದರು. ಅದರಿಂದ ಅವಳು ಮನಸ್ಸಿನಲ್ಲಿ ಅತ್ಯಂತ ಸಂತೋಷಪಟ್ಟಳು. ಅವರಿಗೆ ಕೃತಜ್ಞತೆ ಸಲ್ಲಿಸಿದಳು.

ವರೇಣ ವಂದ್ಯೇನ ಸುರಾಸುರಾಣಾಂ ಮಂಗಲ್ಯ ಸೀಮಾಂತ ಭುವಾ ಚ ವದ್ವಾ।
ಸಮೀಕ್ಷಿತಾ ಬ್ರಹ್ಮ ಸುತಸ್ಯ ಪತ್ನಿ ಸರ್ವೈರಭೂತ್ ಸಾದರ ದರ್ಶನೀಯಾ ॥೯೬॥

ದೇವತೆಗಳು, ಅಸುರರು, ಎಲ್ಲರಿಂದಲೂ ನಮಸ್ಕರಿಸಲ್ಪಡುವ ವರನಾದ ಶ್ರೀಕೃಷ್ಣನಿಂದ ಮಂಗಳಕರ ಉನ್ನತಿಗೆ ಸೀಮೆ ಇಲ್ಲದ ಭೂಮಿಯ ಮಗಳೊಡನೆಯೂ, ಚೆನ್ನಾಗಿ ನೋಡಲ್ಪಟ್ಟದ್ದರಿಂದ, ವಸಿಷ್ಠರ ಪತ್ನಿಯಾದ ಅರುಂಧತಿ ಆದವಳು ಮಾತ್ರ ಎಲ್ಲರಿಂದಲೂ ಗೌರವದಿಂದ ನೋಡಲ್ಪಡುವವಳಾದಳು.

ಶ್ರೀಕೃಷ್ಣ ರುಕ್ಮಿಣಿಯರೂ ಸಹ, ವಿವಾಹದ ಸಂದರ್ಭದಲ್ಲಿ ಎಲ್ಲಾ ನೂತನ ದಂಪತಿಗಳು ನೋಡುವ ಹಾಗೆ ಆಕಾಶದಲ್ಲಿ ಅರುಂಧತಿ ನಕ್ಷತ್ರವನ್ನು ನೋಡಿದರು. ಆ ನಕ್ಷತ್ರವನ್ನು ನೋಡುವುದರಿಂದ ಮುಂದೆ ಎಲ್ಲಾ ಶುಭವಾಗುತ್ತದೆ ಎಂಬ ನಂಬಿಕೆ ಇದೆ. ಇಲ್ಲಿ ರುಕ್ಮಿಣಿಯೂ ಅರುಂಧತಿ ನಕ್ಷತ್ರವನ್ನು ನೋಡಿದ್ದರಿಂದ, ಮುಂದೆ ಬರುವ ಎಲ್ಲಾ ನೂತನ ವಿವಾಹಿತ ಸ್ತ್ರೀಯರು ಅರುಂಧತಿ ನಕ್ಷತ್ರವನ್ನು ನೋಡುವವರಾಗಿ, ಆ ನಕ್ಷತ್ರದ ಹಿರಿಮೆ ಹೆಚ್ಚಿತು.

ತದೇಕ ಭಾವಾ ತಮನನ್ಯಭಾವಂ ನಾಥ ಪ್ರಿಯಾ ನಾಥ ಮನುವ್ರಜಂತಿ।
ಅಭೀಷ್ಟಸಿದ್ಧಿರಧಿದೇವತೇಯಂ ಯದ್ವಾ ಸವಿತ್ರೀತಿ ಯಥಾರ್ಥ ಮೂಚೇ ॥೯೭॥

ಅವನ ಬಳಿಯೇ ಮನಸ್ಸನ್ನು ಇಟ್ಟ ಅವಳು, ಅವನೂ ಸಹ ಅವಳನ್ನು ಬಿಟ್ಟು ಬೇರೆ ಕಡೆ ಮನಸ್ಸಿಡದವನು, ಅವನಿಗೆ ಪ್ರಿಯಳಾದವಳು, ನಾಥನನ್ನು ಎಡೆಬಿಡದೆ ಹಿಂಬಾಲಿಸುವವಳು. ಇವಳ ಮನೋರಥ ಸಿದ್ಧಿಗೆ ಅಧಿಷ್ಠಾನ ದೇವತೆಯೇ ಅಥವಾ ಆ ಸಿದ್ಧಿಯ ಜನ್ಮಕ್ಕೆ ಇವಳು ಕಾರಣವೋ ಎಂಬಂತೆ ಎಲ್ಲರೂ ಮಾತಾಡಿಕೊಂಡರು. ಇದು ಸತ್ಯವು. ಊಹೆಯಲ್ಲ.

ಅವರಿಬ್ಬರ ಅನುರೂಪವಾದ ಜೋಡಿಯನ್ನು ನೋಡಿ ಕೊಂಡಾಡದವರಿಲ್ಲ. ಎಲ್ಲಿ ದೃಷ್ಟಿ ತಗಲುವುದೋ ಎಂಬಂತಿದ್ದರು. ಒಬ್ಬರ ಮನಸ್ಸನ್ನು ಮತ್ತೊಬ್ಬರು ಪರಸ್ಪರ ಅರಿತಿದ್ದರು. "ಮನೋನುಸಾರಿಣಿ" ಎಂಬ ವಾಕ್ಯಕ್ಕನುಗುಣವಾಗಿ ಅವನ ಮನಸ್ಸಿನಂತೆಯೇ ರುಕ್ಮಿಣಿ ನಡೆಯುತ್ತಿದ್ದಳು. ಹಾಲು ಸಕ್ಕರೆ ಸೇರಿದಂತೆ ಅವರ ಮನಸ್ಸು ಆನಂದವಾಗಿ ಮಿಲನಗೊಂಡಿತ್ತು.

ಮನುಷ್ಯತಾಂ ಮಾನಯತೋ ವಿಹಾರೈಃ ಸ್ತ್ವಾಮೇವ ದೇವಿ ಮುಪಯಚ್ಛತಸ್ತೇ।
ಸಮೇಧತಾಂ ಮಂಗಲ ಮಿತ್ಯುಶಂತಃ ಸತ್ಯಾಶಿಷಸ್ತಂ ಮುನಯಃ ಶಶಂಸುಃ ॥೯೮॥

ಮಹರ್ಷಿಗಳು ವ್ಯರ್ಥವಾಗದ ಆಶೀರ್ವಾದವನ್ನು ಮಾಡುವವರಾಗಿ, ಸತ್ಯವನ್ನು ಹೇಳಿ, ಕ್ರೀಡೆಗಳನ್ನು ಮಾಡುವ ನೀನು ರಾಜ್ಯದಲ್ಲಿ ಆಸಕ್ತಿ ಹೊಂದಿ, ಈಗ ಹಿಂದೆಯೇ ಪತ್ನಿ

ಯಾಗಿದ್ದವಳನ್ನು ಮದುವೆ ಮಾಡಿಕೊಂಡಿದ್ದೀಯೇ. ಮಂಗಳ ಪರಂಪರೆ ಬರಲಿ' ಎಂದು ಶುಭ ಹಾರೈಸಿದರು.

ಋಷಿಗಳ ವಾಣಿ ಎಂದಿಗೂ ಹುಸಿಯಾಗುವುದಿಲ್ಲ. ಅದೇ ರೀತಿ ಶ್ರೀಕೃಷ್ಣ ರುಕ್ಮಿಣಿಯರಿಗೆ ಮಾಡಿದ ಋಷಿಗಳ ಆಶೀರ್ವಾದಗಳು ಎಂದಿಗೂ ವಿಫಲವಾಗುವುದಿಲ್ಲ. ಲೋಕ ದಂಪತಿಗಳಾದ ಅವರಿಗೆ ಯಾರ ಆಶೀರ್ವಾದವೂ ಅಗತ್ಯವಿಲ್ಲ. ಆದರೂ ವಿಡಂಬನಾರ್ಥವಾಗಿ ಋಷಿಗಳು ಹಿರಿಯರ ಆಶೀರ್ವಾದವನ್ನು ಆ ನವ ದಂಪತಿಗಳು ಪಡೆದರು. ಎಲ್ಲಾ ಅವತಾರಗಳಲ್ಲೂ ಅವನಿಗೆ ರುಕ್ಮಿಣಿಯೇ ಮಡದಿ. ಋಷಿಗಳು ಅವರಿಗೆ ಮಂಗಳ ಪರಂಪರೆಯನ್ನು ಕೋರಿದರು.

ಕೃತಾಶಿಷಂ ಕೃಷ್ಣ ಗೃಹೇಶ್ವರೀಂ ತಾಂ ಪುರೋಧಸಾ ಪುಣ್ಯ ಮನೋರಥೇನ।
ಸ ಕೌತುಕಾಂ ಕೌತುಕಿನಃ ಸುರತ್ನೈರಭ್ಯರ್ಚಯಾಮಾಸುರಮಾತ್ಯವೃದ್ಧಾಃ ॥೯೯॥

ಮುನಿವರರುಗಳ ಆಶೀರ್ವಾದದಿಂದ ಮನೋರಥ ಈಡೇರಿದವರಾಗಿ, ಪುರೋಹಿತರು ಶ್ರೀಕೃಷ್ಣನ ಮಹಿಷಿಯನ್ನು ಆಶೀರ್ವಾದ ಮಾಡಿದ ನಂತರ ಕಂಕಣ ಕಟ್ಟಿಕೊಂಡಿರುವ ಅವಳಿಗೆ ಆಮಾತ್ಯರುಗಳಲ್ಲಿ ಹಿರಿಯರಾದವರು ಅತ್ಯಂತ ಬೆಲೆ ಬಾಳುವ ರತ್ನಗಳನ್ನು ಪ್ರೀತಿಯಿಂದ ಸಮರ್ಪಿಸಿದರು.

ಋಷಿಗಳ ವೇದೋಕ್ತ ಮಂತ್ರದ ಆಶೀರ್ವಚನದ ನಂತರ, ಊರಿನ ಹಿರಿಯರು, ಯಾದವ ವೀರರು, ರುಕ್ಮಿಣಿಗೆ ರಾಜೋಚಿತವಾದ ಬಹು ಬೆಲೆ ಬಾಳುವ ರತ್ನಗಳನ್ನು ಸಮರ್ಪಿಸಿದರು.

ಪ್ರದಾಯ ತಾಭ್ಯಾಮುಪಸಾಃ ಸಮೀಚೀಃ ಪ್ರತ್ಯಾಗತಾಃ ಸ್ವಾನಿ ಗೃಹಾಣಿ ಪೌರಾಃ।
ಆಶಾಪತೀನಾಂ ವಿಭವಾದ ನೂನಾಂ ತತ್ರೈವ ತೇ ಸಂಪದ ಮನ್ವಭೂವನ್ ॥೧೦೦॥

ನಗರ ಪ್ರಜೆಗಳು ಅವರಿಬ್ಬರಿಗೂ, ಶ್ರೇಷ್ಠವಾದ ಉಪಹಾರಗಳನ್ನು ಸಮರ್ಪಿಸಿ, ತಮ್ಮ ಮನೆಗಳಿಗೆ ಮರಳಿ ಬಂದಾಗ, ಅಲ್ಲಿ ದಿಕ್ಪಾಲಕರುಗಳಿಂದ ಇಂದ್ರಾದಿ ದೇವತೆಗಳು ವೈಭವಕ್ಕೆ ಮೇಲಾದ ವೈಭವವನ್ನು ಅನುಭವಿಸಿ ಆನಂದಿಸಿದರು.

ಎಲ್ಲಾ ಕಾರ್ಯ ಕಲಾಪಗಳು ಮುಗಿದ ಮೇಲೆ, ಪುರ ಜನರು, ಮಂತ್ರಿಗಳೆಲ್ಲರೂ, ತಮ್ಮ ತಮ್ಮ ನಿವಾಸಗಳಿಗೆ ಹಿಂತಿರುಗಿದರು. ಆಗ ಅವರ ಸೌಧಗಳು ವಿಶೇಷ ಅಲಂಕಾರಗಳಿಂದ ಕೂಡಿದ್ದವು. ಇಂದ್ರಾದಿಗಳಿಗೂ ಮಿಗಿಲಾದ ಸೌಂದರ್ಯದಿಂದ ಕೂಡಿದ್ದವು ಅವರ ನಿವಾಸಗಳು.

ಸ್ತ್ರೀ ಪುಂಸನಾಮ್ನಾ ಬಹುಧಾ ವಿಭಕ್ತಂ ವಿಶ್ವಂ ಯಯೋರೇವ ವಿಭೂತಿ ಮಾಹುಃ।
ನಯೋಜಹೌ ದ್ವಾರವತೀಂ ನ ತಾಭ್ಯಾಂಮಂಗೀಕೃತಾಮಾದಿಮದಂಪತೀಭ್ಯಾಂ॥೧೦೧॥

ಜಗತ್ತಿನಲ್ಲಿರುವ ಗಂಡು, ಹೆಣ್ಣು ಎಂಬ ಜನ್ಮ ಹೊಂದುವ ಪ್ರಾಣಿ ವರ್ಗವೆಲ್ಲವೂ ಭಗವಂತನಿಗೂ, ಮಹಾಲಕ್ಷ್ಮಿಗೂ ಅಭಿಮಾನವಾಗಿಯೇ ಹೇಳಲ್ಪಡುವುದು. (ವಿಷ್ಣುಪುರಾಣ

ವಚನ). ಆ ರೀತಿ ಇರುವ ಆ ಇಬ್ಬರು ಕಾರಣ ಮೂರ್ತಿಗಳು ದ್ವಾರಕೆಯನ್ನು ಆದರಿಸಿದ್ದರಿಂದ, ಆ ನಗರಿಯಲ್ಲಿ ನ್ಯಾಯವೆಂಬುದು ಯಾವಾಗಲೂ ಸ್ಥಿರವಾಗಿತ್ತು.

ಶ್ರೀಕೃಷ್ಣರುಕ್ಮಿಣಿಯರ ಕಾಲದಲ್ಲಿ, ದ್ವಾರಕೆಯಲ್ಲಿ ಎಲ್ಲವೂ ನ್ಯಾಯಯುತವಾಗಿಯೇ ನಡೆಯುತ್ತಿತ್ತು. ಜಗತ್ತಿನ ಮಾತಾಪಿತೃಗಳಾದ ಅವರು, ಎಲ್ಲರನ್ನೂ ವಿಶ್ವಾಸದಿಂದ ಕಾಣುತ್ತಾ, ಎಲ್ಲರ ಆದರಗಳನ್ನೂ ಗಳಿಸಿದ್ದರು. ಯಾರೂ ಸಹ ನೀತಿ ಮಾರ್ಗ ಬಿಟ್ಟು ನಡೆಯುತ್ತಿರಲಿಲ್ಲ.

ವಧೂಸಖೇ ತತ್ರ ಜಗನ್ನಿವಾಸೇ ವಸತ್ಯಮರ್ಯಾದ ಗುಣಾನುಭಾವೇ।
ತಸ್ಮಿನ್ನಿವಾಽಽಸೀದನಪಾಯ ಭಾವಾ ತಸ್ಯಾಂ ನಗರ್ಯಾಮಪಿ ರುಕ್ಮಿಣೀ ಶ್ರೀಃ ॥೧೦೨॥

ಈ ಭೂದೇವಿಯ ಮಗಳಿಗೆ ಸ್ನೇಹಿತನಾಗಿ ಇದ್ದು ಎಣಿಸಲಾಗದ ಕಲ್ಯಾಣ ಗುಣ ವೈಭವಗಳಿಂದ ಕೂಡಿ ಜಗತ್ತಿಗೆಲ್ಲಾ ವಾಸಸ್ಥಾನವಾಗಿರುವವನೂ, ಅಲ್ಲಿ ವಾಸ ಮಾಡುವ ಕಾಲದಲ್ಲಿ ರುಕ್ಮಿಣಿ ಎಂಬ ಲಕ್ಷ್ಮಿಯು ಸಹ ಅವನ ಜೊತೆಯಲ್ಲಿಯೇ ಆ ನಗರದಲ್ಲಿ ಅಳಿಯದ ವಿಶ್ವಾಸವನ್ನು ಹೊಂದಿದ್ದಳು.

ಭೂದೇವಿಯ ಮಗಳಾದ ರುಕ್ಮಿಣಿಯೂ ಅವನಿಗೆ ಅನುರೂಪಳಾಗಿಯೇ ಇದ್ದು ಎಲ್ಲ ರೀತಿಯಲ್ಲಿಯೂ ಅವನಿಗೆ ಸಹಕರಿಸುತ್ತಿದ್ದಳು. ದ್ವಾರಕೆಯನ್ನು ಕಂಡರೆ ಅವಳಿಗೆ ವಿಶೇಷ ಪ್ರೀತಿ ಇತ್ತು. ಲಕ್ಷ್ಮಿಯೇ ರುಕ್ಮಿಣಿಯಾಗಿ ಬಂದಿದ್ದಳು.

ತಸ್ಯಾಃ ಕಟಾಕ್ಷೈರ್ವಿಹಿತಾಭಿಷೇಕಃ ತದ್ಬಾಹುನಾ ಕಲ್ಪಿತ ಕಂಠಮಾಲ್ಯಃ।
ಅವಾಪ ಶೋಭಾಮಧಿಕಾಂ ಮುಕುಂದಃ ಸೌಭಾಗ್ಯ ಸಿಂಹಾಸನ ಸಾರ್ವಭೌಮೀಂ॥೧೦೩॥

ಮುಕುಂದನು ಅವಳ ಕಟಾಕ್ಷಗಳಿಂದ ಅಭಿಷೇಕ ಮಾಡಲ್ಪಟ್ಟು ಮಾಲೆಯಂತಿರುವ ಅವಳ ಭುಜದಿಂದ ಕಂಠದಲ್ಲಿ ಆಲಂಗಿಸಲ್ಪಟ್ಟು ಭಾಗ್ಯ ಸಿಂಹಾಸನದಲ್ಲಿ ಸಾರ್ವಭೌಮನಾಗಿ ಬೆಳಗುವ ಮೇಲ್ಮೈಯನ್ನು ಹೊಂದಿದವನಾದನು.

ಮುಕ್ತಿಯನ್ನು ಕೊಡುವ ಮುಕುಂದನು, ರುಕ್ಮಿಣಿಯ ಪೂರ್ಣ ಕಟಾಕ್ಷಕ್ಕೆ ಪಾತ್ರನಾಗಿ, ತಾನು ಸಾರ್ವಭೌಮನೆಂದು ಹೆಮ್ಮೆಪಟ್ಟುಕೊಂಡನು.

ಕದಂಬ ಗೋಲಶ್ರಿಯಮಾಕ್ಷಿಪಂತಂ ಕಂದರ್ಪ ರೂಪೋದಯ ಪೂರ್ವರೂಪಂ।
ಪ್ರಿಯಾ ಪರಿಷ್ವಂಗ ರಸೇನ ಧನ್ಯಂ ಪ್ರೀತಾಶಯೋ ಬಹ್ವಮತಾಽಽತ್ಮದೇಹಂ ॥೧೦೪॥

ತನ್ನ ಪ್ರಿಯೆಯು ಆಸೆಯಿಂದ ಆಲಿಂಗಿಸಿಕೊಳ್ಳುವಾಗ ತಾನು ಕಲ್ಪವೃಕ್ಷಕ್ಕೆ ಮೇಲಾಗಿ ಎಲ್ಲೆಲ್ಲೂ ಚಿಗುರೊಡೆದು ಮನ್ಮಥನು ಉದಯಿಸುವ ಹಿಂದಿನ ರೂಪವನ್ನು ಹೊಂದಿ ತನ್ನ ದಿವ್ಯ ದೇಹವು ಭಾಗ್ಯ ಪಡೆದುದಾಗಿ ಭಾವಿಸಿಕೊಂಡನು.

ಅವಳ ಆಲಿಂಗನ ಸೌಖ್ಯದಲ್ಲಿ ಎಲ್ಲವನ್ನೂ ಹೊಂದಿದ ಹಾಗೆ ಆ ಲೋಕಸ್ವಾಮಿಯು ಭಾವಿಸಿ, ಅಮಿತವಾದ ಮಾನಸಿಕ ಸೌಖ್ಯವನ್ನು ಪಡೆದನು. ತಾನು ಮನ್ಮಥನಿಗೂ ಮೇಲಾದವನೆಂದು ತಿಳಿದುಕೊಂಡನು. ಅವಳ ಆಲಿಂಗನ ಅವನಲ್ಲಿ ನವ ಚೈತನ್ಯ ಉಂಟು ಮಾಡಿತು.

ತಾಂ ಪ್ರಾಪ್ಯ ಕೃಷ್ಣಃ ಪ್ರಭೂತಾಮಿವ ಸ್ವಾಂ ಮನಃ ಪ್ರಸೂತೇರಿವ ಮಂತ್ರಸಿದ್ಧಿಂ।
ಆಸೀದಭೀತೈಃ ಸಹಸಾಽಽಭಿಗಮ್ಯೋ ಮಿತ್ರೈ ರಮಿತ್ರೈರಪಿ ಸಾಪರಾಧೈಃ ॥೧೦೫॥

ತನ್ನ ಪ್ರಭುತ್ವ ಶಕ್ತಿಯಂತೆ ಮನ್ಮಥನ ಮಂತ್ರದಿಂದ ಫಲಪ್ರಾಪ್ತಿ ಹೊಂದುವಂತೆ, ಅವಳನ್ನು ಹೊಂದಿದ ಶ್ರೀಕೃಷ್ಣನು ತನ್ನ ವಿವಾಹ ಸಂದರ್ಭದಲ್ಲಿ ತಪ್ಪು ಮಾಡಿರುವವರನ್ನೂ ತನ್ನ ಸ್ನೇಹಿತರುಗಳಂತೆ ಭಾವಿಸಿ, ನಿರ್ಭಯವಾಗಿ ಇರಲು ಅವಕಾಶ ಮಾಡಿಕೊಟ್ಟನು.

ಎಲ್ಲರನ್ನೂ ಕ್ಷಮಿಸುವ ಸ್ವಭಾವವುಳ್ಳವನಾದ ಶ್ರೀಕೃಷ್ಣನು, ತನ್ನಲ್ಲಿ ತಪ್ಪು ಮಾಡಿದವರಿಗೂ ಯಾವ ಶಿಕ್ಷೆಯನ್ನು ನೀಡದೆ, ಅವರನ್ನು ಸ್ನೇಹಿತರಂತೆ ನಡೆಸಿಕೊಂಡನು. ಎಷ್ಟಾದರೂ ಅವನು 'ರಿಪೂಣಾಮಪಿ ವತ್ಸಲ'ನಲ್ಲವೇ ?

ಶ್ರೀವತ್ಸ ಸಂಸ್ಥಾನ ಜುಷಾ ಪ್ರಕೃತ್ಯಾ ಸ್ಥಾನೇನ ಚಿಹ್ನೇನ ಚ ಲಕ್ಷಣೀಯೌ।
ದೃಷ್ಟಾವಭೀಷ್ಟಂ ಭಜತಾಂ ದದಾತೇ ಜಗತ್ಪತೀ ತಾವಿಹ ದಂಪತಿ ದ್ವೌ ॥೧೦೬॥

ದಂಪತಿಗಳಾದ ಅವರಿಬ್ಬರೂ ಜಗತ್ತಿಗೆ ಸ್ವಾಮಿಗಳಾದ್ದರಿಂದ, ಎಲ್ಲಾ ಇಷ್ಟಗಳನ್ನೂ ಜಗತ್ತಿಗೆ ನೀಡಿದರು. ಲಕ್ಷ್ಮಿಯೂ, ನಾರಾಯಣನೂ ಆದ ಅವರುಗಳು ಸ್ವಾಮಿಗಳು ಎಂಬುದು ಶ್ರೀವತ್ಸವೆಂಬ ಚಿಹ್ನೆಯನ್ನು ನೋಡಿಯೇ ತಿಳಿಯಬಹುದು. ಆ ಚಿಹ್ನೆಯು (ಮಚ್ಚೆಯು) ನಾರಾಯಣನೊಬ್ಬನಿಗೇ ಮೀಸಲಾದ್ದರಿಂದ, ಶ್ರೀಕೃಷ್ಣನು ನಾರಾಯಣನೇ ಎಂದು ನಿರ್ಧರಿಸಬಹುದು.

ಶ್ರೀಕೃಷ್ಣನ ಎದೆಯಲ್ಲಿದ್ದಂತಹ ಅಸಾಧಾರಣ ಚಿಹ್ನೆಯಾದ 'ಶ್ರೀವತ್ಸ' ಮಚ್ಚೆಯನ್ನು ನೋಡಿಯೇ ಅವನು ನಾರಾಯಣನೆಂದು ನಿಶ್ಚಯಿಸಬಹುದು. ಈ ಚಿಹ್ನೆಯು ಬೇರಾರಿಗೂ ಇಲ್ಲ, ನಾರಾಯಣನೊಬ್ಬನಿಗೇನೇ ಅಸಾಧಾರಣವಾದುದು. ಅದು ಶ್ರೀಕೃಷ್ಣನ ಎದೆಯಲ್ಲಿ ಇದ್ದದ್ದರಿಂದ ಅವನು ನಾರಾಯಣನೇ.

ನ ತೇ ಮನುಷ್ಯಾ ನ ಚ ದೇವತಾಸ್ತೇ ಪ್ರಾಯೇಣ ತಾವೇವ ತಥಾ ಭವಂತೌ।
ಯೇರ್ರೈವಮನ್ಯೋನ್ಯ ವಿಭೂಷಿತಂ ತತ್ ದ್ವಂದ್ವಾತಿಗಂ ದ್ವಂದ್ವಮವೈಕ್ಷಿ ಧನ್ಯೈಃ॥೧೦೭॥

ಒಬ್ಬರಿಗೊಬ್ಬರು ಅಲಂಕಾರವಾಗಿ ಶೀತೋಷ್ಣ ಸುಖ-ದುಃಖ ಎಂಬ ದ್ವಂದ್ವಗಳಿಗೆ ಸ್ಥಳವಿಲ್ಲದ ಆ ಇಬ್ಬರನ್ನು ನೋಡಿ, ಧನ್ಯರಾದವರು ಮಾನವರಾಗಲೀ, ದೇವತೆಗಳಾಗಲೀ ಆಗಿರಲಿಲ್ಲ, ಅವರಿಬ್ಬರೂ ತಮ್ಮನ್ನು ತಾವೇ ನೋಡಲು ಅನೇಕ ಪ್ರಜೆಗಳಾಗಿ ಭೂಲೋಕಕ್ಕೆ ಬಂದರು ಎನ್ನಬಹುದು.

ದ್ವಂದ್ವಾತೀತರಾದ ಅವರಿಬ್ಬರನ್ನೂ ನೋಡಿದಾಗ, ಲಕ್ಷ್ಮೀನಾರಾಯಣರೇ ಅನೇಕ ರೂಪಗಳನ್ನು ಧರಿಸಿ, ತಮ್ಮನ್ನು ತಾವೇ ನೋಡಲು ಧರೆಗೆ ಇಳಿದು ಬಂದಿದ್ದಾರೇನೋ ಎಂಬಂತಿತ್ತು. ಅವರಿಬ್ಬರ ಸೌಂದರ್ಯವನ್ನು ನೋಡಲು ದಿವ್ಯ ಚಕ್ಷುಸ್ಸುಗಳು ಅಗತ್ಯವೇನೋ ಎಂದು ಅನಿಸುತ್ತಿತ್ತು.

ಅಥ ಸಮುದಿತ ಹರ್ಷೈರಾದೃತೋ ಮಂತ್ರಿವೃದ್ಧೈಃ
ಸುರಪತಿ ದಯಿತಾಭಿಃ ಸ್ತೂಯಮಾನಾಪದಾನಃ ।
ರುಚಿಮಿವ ನಿರಪಾಯಾಂ ರುಕ್ಮಿಣೀಂ ಪ್ರಾಪ್ಯಹೃಷ್ಯನ್
ಯದುಪತಿರಧಿಚಕ್ರೆಯಾಯ ಜೂಕಾಧಿಕಾರಂ ॥೧೦೮॥

ವಿವಾಹ ಮಹೋತ್ಸವವನ್ನು ಅನುಭವಿಸಿ ವಿಶೇಷ ಆನಂದ ಪಡೆದ ಮಂತ್ರಿ ಶ್ರೇಷ್ಠರುಗಳಿಂದ ಕೊಂಡಾಡಲ್ಪಟ್ಟು ದೇವಸ್ತ್ರೀಗಳಾದ ಅಪ್ಸರಸ್ಸುಗಳಿಂದ ತನ್ನ ಪರಾಕ್ರಮ ವಿಷಯವನ್ನು ವಿಶೇಷವಾದ ಆಸೆಯಿಂದ ಹಾಡಲ್ಪಡುವವನಾದ, ಶ್ರೀಕೃಷ್ಣನು ತನ್ನ ಮನೋರಥವು ಮೂರ್ತೀಭವಿಸಿ ಬಂದಿರುವ ರುಕ್ಮಿಣಿಯನ್ನು ಸ್ವೀಕರಿಸಿ, ಭೋಗಿಸಿ, ಯಾಗ ಮಾಡಲು ಬೇಕಾದ ಅಧಿಕಾರವನ್ನೂ, ಯೋಗ್ಯತೆಯನ್ನೂ ಹೊಂದಿದವನಾದನು. (ಅಗ್ನಿಕಾರ್ಯಗಳನ್ನು ಮಾಡಲು ದಂಪತಿ ಸಮೇತನಾದನು).

ವಿವಾಹದ ನಂತರ ರಾಜಕಾರ್ಯಗಳಲ್ಲಿ ತೊಡಗಿಸಿಕೊಡಲು ರಾಜರುಗಳು ನಡೆಸುವ ಅನೇಕ ಯಜ್ಞಯಾಗಾದಿಗಳನ್ನು ಸಾಂಗವಾಗಿ ದಂಪತಿ ಸಮೇತ ನಡೆಸುತ್ತಾ, ದ್ವಾರಕಾವಾಸಿಗಳೆಲ್ಲರನ್ನೂ ಬಹುವಾಗಿ ಸಂತೋಷಪಡಿಸಿದನು ಸ್ವಾಮಿ. ಯಜ್ಞಯಾಗಾದಿಗಳನ್ನು ನಡೆಸುವುದರಿಂದ ದೇವತೆಗಳೂ ಸಂತೋಷಿಸುತ್ತಾರೆ.

ಈ ರೀತಿ ವೇದವಿಹಿತ ಕರ್ಮಗಳನ್ನು ಅಕರ್ಮ ವಶ್ಯನಾಗಿದ್ದರೂ ಲೋಕಸಂಗ್ರಹಕ್ಕಾಗಿ ಆ ದಿವ್ಯ ದಂಪತಿಗಳು ನಡೆಸಿದರು.

ಸುಭಗ ಮುಫಲ ಬಿಂಬೇ ಶಾಂತ ಕುಂಭೇಪಿ ರತ್ನಂ
ಕನತಿ ವಿಪಿನ ಭಾಗೇ ಕಾಲಕಂಠೇಽಪಿ ಗಂಗಾ ।
ವಶಿಕ ನೃಪಗೃಹೇ ಸಾ ವಾಸುದೇವೇಽಪ್ಯದೀವ್ಯತ್
ನಹಿ ಭವತಿ ವಿಶೇಷಃ ಕ್ವಾಪಿ ನಿತ್ಯೋನ್ನತಾನಾಂ॥೧೦೯॥

ರತ್ನವೆಂಬುದು ಭೂ ಗರ್ಭದಲ್ಲಿ ಇರುವಾಗಲೂ, ಸುವರ್ಣ ಬಿಂಬದ ಪಕ್ಕದಲ್ಲಿ ಇರುವಾಗಲೂ ತನ್ನ ಕಾಂತಿಯನ್ನು ಕಳೆದುಕೊಳ್ಳುವುದಿಲ್ಲ. ಗಂಗೆಯು ಕಾಡಿನಲ್ಲಿಯೂ, ನೀಲಕಂಠನ ಶಿರಸ್ಸಿನಲ್ಲಿಯೂ ಸಹ ಬೆಳಗುತ್ತದೆ. ಅದೇ ರೀತಿ ನೀಚನಾದ ಭೀಷ್ಮಕ ರಾಜನ ಗೃಹದಲ್ಲಿಯೂ ರುಕ್ಮಿಣಿಯು ಬೆಳಗುತ್ತಿದ್ದಳು. ಮತ್ತು ಈಗ ವಾಸುದೇವನ ಅರಮನೆ

ಯಲ್ಲೂ ಶೋಭಿಸುತ್ತಿದ್ದಾಳೆ. ಯಾವಾಗಲೂ ಶ್ರೇಷ್ಠರಾದವರುಗಳಿಗೆ ಕೊರತೆ ಎಂಬುದು ಇಲ್ಲವೇ ಇಲ್ಲ. ರುಕ್ಮಿಣಿಯ ಸಂಬಂಧದಿಂದ ಎಲ್ಲರಿಗೂ ಮೇಲ್ಮೈಯೇ.

ರುಕ್ಮಿಣಿಯು ಒಂದು ಅನರ್ಘ್ಯ ರತ್ನ. ಅವಳು ಎಲ್ಲಿ ಇದ್ದರೂ ಬೆಳಗುತ್ತಾಳೆ. ಆದರೆ ಭೀಷ್ಮಕ ರಾಜನ ಅರಮನೆಯಲ್ಲಿ ಇದ್ದುದಕ್ಕಿಂತಲೂ ಶ್ರೀಕೃಷ್ಣನ ಸಾಮೀಪ್ಯದಲ್ಲಿ ಇನ್ನೂ ಹೆಚ್ಚು ಪ್ರಕಾಶಿಸಿದಳು. ರುಕ್ಮಿಣಿಯ ಸಂಬಂಧವೇ ಶ್ರೀಕೃಷ್ಣನಿಗೂ, ಲೋಕದ ಸಮಸ್ತ ಜನರಿಗೂ ಶ್ರೇಯಸ್ಕರವಾದುದು. ಮಹಾತ್ಮರು ಎಂದೂ ಕೊರೆಯನ್ನು ಅನುಭವಿಸುವುದಿಲ್ಲ. ಇದು ಸಾರ್ವಕಾಲಿಕ ಸತ್ಯ.

--0--

ಇಲ್ಲಿಗೆ "ರುಕ್ಮಿಣಿ ಪರಿಣಯ"ವೆಂಬ ಹದಿಮೂರನೆಯ ಸರ್ಗವು ಮುಗಿದುದು

ಇಲ್ಲಿಗೆ ಪ್ರಥಮ ಸಂಪುಟವು ಮುಗಿದುದು

॥ ಶ್ರೀಮತೇ ವೇದಾಂತ ದೇಶಿಕಾಯ ನಮಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀ ವೇದಾಂತ ದೇಶಿಕರ

"ಯಾದವಾಭ್ಯುದಯ"

ದ್ವಿತೀಯ ಸಂಪುಟ

(14ರಿಂದ 24ನೇ ಸರ್ಗ ಪರ್ಯಂತ)

ಶ್ರೀ ರಾಮಾನುಜ ದಯಾಪಾತ್ರಂ ಜ್ಞಾನ ವೈರಾಗ್ಯ ಭೂಷಣಂ ।
ಶ್ರೀಮದ್ವೇಂಕಟನಾಥಾರ್ಯಂ ವಂದೇ ವೇದಾಂತ ದೇಶಿಕಂ ॥
ಶ್ರೀಮಾನ್ ವೇಂಕಟನಾಥಾರ್ಯ ಕವಿತಾರ್ಕಿಕ ಕೇಸರಿ
ವೇದಾಂತಾಚಾರ್ಯವರ್ಯೋಮೇ ಸನ್ನಿಧತ್ತಾಂ ಸದಾಹೃದಿ ।
ಕವಿತಾರ್ಕಿಕ ಸಿಂಹಾಯ ಕಲ್ಯಾಣ ಗುಣಶಾಲಿನೇ ॥
ಶ್ರೀಮತೇ ವೇಂಕಟೇಶಾಯ ವೇದಾಂತ ಗುರುವೇ ನಮಃ ॥

ಇದೇ ಲೇಖಕರ ಇತರ ಪ್ರಕಾಶನಗಳು

1. **108 ಶ್ರೀವೈಷ್ಣವ ದಿವ್ಯದೇಶಗಳು ಮತ್ತು ಆಳ್ವಾರರ ಹಾಡುಗಳು**
   ಶ್ರೀವೈಷ್ಣವ ಆಳ್ವಾರರು ಹಾಡಿರುವ ಭಾರತದ ಎಲ್ಲೆಡೆ ಇರುವ 108 ದಿವ್ಯಕ್ಷೇತ್ರಗಳ ಅರ್ಚಾ ಮೂರ್ತಿಗಳ ವರ್ಣ ಚಿತ್ರ ಸಮೇತ ವಿಸ್ತಾರವಾದ ಪರಿಚಯ ಮತ್ತು ಆಳ್ವಾರರುಗಳ ಹಾಡುಗಳನ್ನು ಒಳಗೊಂಡಿರುವ ಪುಸ್ತಕ. (ಎರಡು ಮುದ್ರಣ ಕಂಡಿದೆ)

2. **ಶ್ರೀ ವೇದಾಂತ ದೇಶಿಕರು - ಜೀವನ ಮತ್ತು ಕೃತಿಗಳು**
   ಸ್ವಾಮಿ ವೇದಾಂತ ದೇಶಿಕರ 100ಕ್ಕೂ ಹೆಚ್ಚು ಕೃತಿಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವ ಕೃತಿ. ಈ ಪುಸ್ತಕಕ್ಕೆ 'ಅತ್ತಿಮಬ್ಬೆ ಪ್ರತಿಷ್ಠಾನ'ದ ಪ್ರಶಸ್ತಿ ದೊರೆತಿದೆ.

3. **ಶ್ರೀ ಯಾಮುನಾಚಾರ್ಯರು - ಜೀವನ ಮತ್ತು ಕೃತಿಗಳು**
   ಶ್ರೀ ರಾಮಾನುಜರ ಗುರುಗಳಾದ ಶ್ರೀ ಯಾಮುನಾಚಾರ್ಯರ (ಆಳವಂದಾರ್)ರವರ ಎಂಟು ಕೃತಿಗಳ ಸಾಧಾರಣ ಪರಿಚಯ ಹಾಗೂ ಅವರ ಸ್ತೋತ್ರಗಳ ಅರ್ಥ, ತಾತ್ಪರ್ಯ ಮತ್ತು ಅವರ ಅಪರೂಪ ಕೃತಿಯಾದ 'ಆಗಮ ಪ್ರಾಮಾಣ್ಯ'ದ ಪೂರ್ಣ ಪಾಠ ವನ್ನೊಳಗೊಂಡಿರುವ ಪುಸ್ತಕ

4. **108 ಶ್ರೀವೈಷ್ಣವ ದಿವ್ಯದೇಶಗಳು ಮತ್ತು ಶ್ರೀವೈಷ್ಣವ ಅಭಿಮಾನ ಕ್ಷೇತ್ರಗಳು**

5. **ಶ್ರೀ ದೇಶಿಕರ ಇತರ ಸ್ತೋತ್ರಗಳು** (ಕನ್ನಡದಲ್ಲಿ ಅರ್ಥ ತಾತ್ಪರ್ಯಗಳು)
   1. ಶ್ರೀ ಹಯಗ್ರೀವ ಸ್ತೋತ್ರ
   2. ಶ್ರೀ ವರದರಾಜ ಪಂಚಾಶತ್
   3. ದಶಾವತಾರ ಸ್ತೋತ್ರ
   4. ಸುದರ್ಶನಾಷ್ಟಕ
   5. ಷೋಡಶಾಯುಧ ಸ್ತುತಿ

   } ಮದ್ರಾಸಿನ ಶ್ರೀ ವೇದಾಂತ ದೇಶಿಕ ರಿಸರ್ಚ್ ಸೆಂಟರ್‌ನಿಂದ ಪ್ರಕಾಶಿಸಲ್ಪಟ್ಟಿದೆ.

6. **ಶ್ರೀ ವೇದಾಂತ ದೇಶಿಕರ ಅಪರೂಪದ ಚಿಕ್ಕ ಚಿಕ್ಕ ಸ್ತೋತ್ರಗಳು**
   (ಕನ್ನಡದಲ್ಲಿ ಅರ್ಥ ತಾತ್ಪರ್ಯಗಳು)

7. **ಶ್ರೀ ವೇದಾಂತ ದೇಶಿಕರ ''ಸುಭಾಷಿತ ನೀವಿ''** ಎಂಬ ನೀತಿ ವಚನಗಳು

8. **''ಶತಕ ದ್ವಯ''** (ದಯಾಶತಕ ಮತ್ತು ಅಚ್ಯುತ ಶತಕ)

9. **ಶ್ರೀ ವೇದಾಂತ ದೇಶಿಕರ ''ಪಂಚಾಶತ್ ತ್ರಯ''**
   (ವರದರಾಜ ಪಂಚಾಶತ್, ದೇವನಾಯಕ ಪಂಚಾಶತ್, ಗರುಡ ಪಂಚಾಶತ್)

10. **ನಮ್ಮ ಮುಂದಿನ ಪ್ರಕಟಣೆ**
    ಶ್ರೀ ವೇದಾಂತ ದೇಶಿಕರ ''ಯಾದವಾಭ್ಯುದಯ''
    ದ್ವಿತೀಯ ಸಂಪುಟ (14ರಿಂದ 24ನೇ ಸರ್ಗ ಪರ್ಯಂತ)





ಶ್ರೀಕೃಷ್ಣ ರುಕ್ಮಿಣಿ



ರಾಸ ಕ್ರೀಡೆ